ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ ೨೩

ಕಾವ್ಯ ಸಾಹಿತ್ಯ : ಭಾಗ-೫



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ-೨೩ : ಕಾವ್ಯ ಸಾಹಿತ್ಯ : ಭಾಗ-೫

❖

- ತಗರ ಪವಾಡ • ಸಿದ್ಧಮಂಕ ಚರಿತೆ • ಗುಂಡಬಸವೇಶ್ವರ ಚರಿತ್ರೆ
- ಕೊಡೇಕಲ್ಲ ವಚನ ವಾಕ್ಯ

❖

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ಸಂಪಾದಕರು

ಡಾ. ಎಫ್. ಟಿ. ಹಳ್ಳಿಕೇರಿ

ಹಂಪಿ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೧೯

COMPLETE WORK OF DR. M.M.KALBURGI
VOLUME - 23 : KAVYA SAHITY : BHAGA :V
Edited by : Dr. F.T. Hallikeri, Hampi

Published by : Dr. P.G. Halakatti Research Centre
B.L.D.E. Association, Vijayapur, Karnatak

First Edition : 2019
Pages : xxxvi + 740=776

Copies: 1000
Price: Rs: 390/-

❖❖

Cover page design : K.K. Makali, Hampi.
Type set : Dr. Hanumanth Melinamani, Dr. Saraswatidevi Bhagawati, Dharwad.
Printer : **The Print Point,** No. 9/8 6th Cross, 4th Main, Rajajinagar, Industrial Town, Bangalore-560044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರಕಾರ

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೨೩–ಕಾವ್ಯ ಸಾಹಿತ್ಯ : ಭಾಗ–೫

ಸಂಪಾದಕರು : ಡಾ. ಎಫ್.ಟಿ.ಹಳ್ಳಿಕೇರಿ, ಹಂಪಿ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ
ಪ್ರಥಮ ಮುದ್ರಣ: ೨೦೧೯
ಪುಟಗಳು: xxxvi + ೭೪೦=೭೭೬

ಪ್ರತಿಗಳು: ಒಂದು ಸಾವಿರ
ಬೆಲೆ ರೂ: ೩೯೦/–

❖❖

ಮುಖಪುಟ ವಿನ್ಯಾಸ: ಕೆ.ಕೆ. ಮಕಾಳಿ, ಹಂಪಿ

ಅಕ್ಷರ ಸಂಯೋಜನೆ: ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಧಾರವಾಡ

ಮುದ್ರಣ: **ಪ್ರಿಂಟ್ ಪಾಯಿಂಟ್**, ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ, ಇಂಡಸ್ಟ್ರಿಯಲ್ ಟೌನ್, ಬೆಂಗಳೂರು–೫೬೦೦೪೪. ದೂ : ೯೭೩೯೦ ೬೭೩೫೯

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಲಹಾ ಸಮಿತಿ

❖

ಗೌರವಾಧ್ಯಕ್ಷರು

ಡಾ. ಎಂ. ಬಿ. ಪಾಟೀಲ, ವಿಜಯಪುರ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ ಮತ್ತು ಗೃಹ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷರು

ಶ್ರೀ ಜಿ. ಕೆ. ಪಾಟೀಲ, ವಿಜಯಪುರ

ಕಾರ್ಯದರ್ಶಿಗಳು

ಡಾ. ಎಂ. ಎಸ್. ಮದಭಾವಿ, ವಿಜಯಪುರ

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ, ಧಾರವಾಡ

ಯೋಜನಾ ಸಂಯೋಜಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

❖

ಸಲಹಾ ಸದಸ್ಯರು

ಡಾ. ಗುರುಲಿಂಗ ಕಾಪಸೆ, ಧಾರವಾಡ

ಶ್ರೀ ಶ್ರೀವಿಜಯ ಕಲಬುರ್ಗಿ, ಧಾರವಾಡ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳು

❖❖

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಂಪಾದಕ ಸದಸ್ಯರು

❖

❖❖

*

ಪ್ರಧಾನ ಸಂಪಾದಕರ ಮಾತು

ಡಾ. ವೀರಣ್ಣ ರಾಜೂರ

ಮಾರ್ಗಕ್ಕೆ ಕೊನೆಯಿಲ್ಲ.....

ಡಾ. ಎಂ. ಎಂ. ಕಲಬುರ್ಗಿ ಅವರು ಕನ್ನಡ ಸಂಶೋಧನ ಮಹಾಮಾರ್ಗದ ಮಹಾಶಿಲ್ಪಿ; ಕನ್ನಡ ವಿದ್ವತ್ ಪರಂಪರೆಯ ಪ್ರಥಮ ಶ್ರೇಣಿಯ ಗಟ್ಟಿ ವಿದ್ವಾಂಸರು; ಕನ್ನಡ ಭಾಷೆ-ಸಾಹಿತ್ಯ-ಸಂಸ್ಕೃತಿಗಳ ಬಹುಶಿಸ್ತೀಯ ಅಧ್ಯಯನದ ಸವ್ಯಸಾಚಿ ಸತ್ಯಶೋಧಕರು. ಅವರ ಘನವ್ಯಕ್ತಿತ್ವ, ಕರ್ತೃತ್ವಶಕ್ತಿ, ಕಾರ್ಯಕ್ಷಮತೆ, ನಾಡು-ನುಡಿ-ಸಂಸ್ಕೃತಿ ಪ್ರೀತಿ, ಸಾಮಾಜಿಕ ಕಳಕಳಿ, ಶೈಕ್ಷಣಿಕ ಶಿಸ್ತು, ಸಾಹಿತ್ಯಿಕ-ಸಾಧನೆ, ಸಂಶೋಧನ ಸಿದ್ಧಿ, ಆಡಳಿತ ದಕ್ಷತೆ ಹಾಗೂ ಮಾನವೀಯ ಮೌಲ್ಯಗಳ ಅನುಷ್ಠಾನ ಅಪೂರ್ವ-ಅದ್ವಿತೀಯ-ಅನುಕರಣೀಯ.

ಡಾ. ಎಂ. ಎಂ. ಕಲಬುರ್ಗಿ ಅವರದು ಬಹುಮುಖ ವ್ಯಕ್ತಿತ್ವ; ಬಹುಮುಖ ಪ್ರತಿಭೆ-ಪಾಂಡಿತ್ಯ-ಪ್ರಭುತ್ವ; ಬಹುಮುಖ ಕಾರ್ಯ ಯೋಜನೆ, ಕಾರ್ಯಸಾಧನೆ, ಕಾರ್ಯಸಿದ್ಧಿ. ಕನ್ನಡದ ಶ್ರೇಷ್ಠ ಪ್ರಾಧ್ಯಾಪಕರಾಗಿ, ಪ್ರಥಮ ಶ್ರೇಣಿಯ ಸಂಶೋಧಕರಾಗಿ, ಸಮರ್ಥ ಸಂಶೋಧನ ಮಾರ್ಗದರ್ಶಕರಾಗಿ, ವಿಭಾಗದ ದಕ್ಷ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯದ ಮಾದರಿಯ ಕುಲಪತಿಗಳಾಗಿ, ಉನ್ನತ ಶಿಕ್ಷಣ ತಜ್ಞರಾಗಿ, ಅನೇಕ ವಿನೂತನ ಯೋಜನೆಗಳ ಯೋಜಕರಾಗಿ, ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಘಸಂಸ್ಥೆಗಳ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯ, ಕೊಟ್ಟ ಕೊಡುಗೆ ಅಚ್ಚರಿ ಮೂಡಿಸುವಂತಹವು; ಅಭಿಮಾನ ಉಕ್ಕಿಸುವಂತಹವು.

ಜೀವನ-ಸಾಧನೆ :

ಡಾ. ಎಂ. ಎಂ. ಕಲಬುರ್ಗಿ (ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ) ಅವರು ೧೯೩೮ ನವ್ಹಂಬರ್ ೨೮ ರಂದು ತಾಯಿಯ ತವರೂರು ಗುಬ್ಬೇವಾಡ(ತಾ. ಸಿಂದಗಿ, ಜಿ: ವಿಜಯಪುರ)ದಲ್ಲಿ ಜನಿಸಿದರು. ತಂದೆ ಮಡಿವಾಳಪ್ಪ; ತಾಯಿ ಗುರಮ್ಮ. ಶ್ರಮಸಂಸ್ಕೃತಿಯ ಒಕ್ಕಲುತನ ಮನೆತನ. ಮಧ್ಯಮವರ್ಗದ ಸುಸಂಸ್ಕೃತ-ಅವಿಭಕ್ತ ಕುಟುಂಬ. ಇಂಥ ಪರಿಸರದಲ್ಲಿ ಬೆಳೆದ ಕಲಬುರ್ಗಿ ಅವರಿಗೆ ಶ್ರಮಗೌರವ ಹಾಗೂ ಸಹಬಾಳ್ವೆಯ ಪಾಠ ಬಾಲ್ಯದಿಂದಲೇ ಬಳುವಳಿಯಾಗಿ ದೊರೆಯಿತು.

ಕಲಬುರ್ಗಿ ಅವರ ಪ್ರಾಥಮಿಕ ಶಿಕ್ಷಣ (ಮುಲ್ಕೀ ಪರೀಕ್ಷೆಯವರೆಗೆ) ತಂದೆಯವರ ಊರಾದ ಯರಗಲ್ಲ (ತಾ. ಸಿಂದಗಿ, ಜಿ. ವಿಜಯಪುರ)ದಲ್ಲಿ ನಡೆಯಿತು. ಮಾಧ್ಯಮಿಕ ವ್ಯಾಸಂಗವನ್ನು ಸಿಂದಗಿಯ ಎಚ್.ಜಿ. ಬಾಡ ಹೈಸ್ಕೂಲಿನಲ್ಲಿ ಪೂರೈಸಿದರು. ೧೯೫೬ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಉಚ್ಚಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

ಕಲಬುರ್ಗಿ ಅವರ ಉನ್ನತವ್ಯಾಸಂಗ ವಿಜಯಪುರ ಮತ್ತು ಧಾರವಾಡದಲ್ಲಿ ನೆರವೇರಿತು. ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಿಜಯ ಕಾಲೇಜಿನಿಂದ ಬಿ.ಎ. ಪದವಿಯನ್ನು (೧೯೬೦) ಪ್ರಥಮಶ್ರೇಣಿಯಲ್ಲಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಎಂ.ಎ. ಪದವಿಯನ್ನು (೧೯೬೨) ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಗಳಿಸಿಕೊಂಡರು. ಮೊದಲಿನಿಂದಲೂ ಪ್ರತಿಭೆ-ಪರಿಶ್ರಮಗಳ ಸಂಗಮವೆನಿಸಿದ್ದ ಕಲಬುರ್ಗಿ ಅವರಿಗೆ ಕಾಲೇಜಿನಲ್ಲಿ ಪ್ರೊ. ಬಿ.ಟಿ. ಸಾಸನೂರ ಅವರು, ವಿಶ್ವವಿದ್ಯಾಲಯದಲ್ಲಿ ಡಾ. ಆರ್.ಸಿ. ಹಿರೇಮಠ ಅವರು ಪ್ರೀತಿಯ ಗುರುಗಳಾಗಿ ದೊರೆತು ತಮ್ಮ ವಿದ್ವತ್ತಿನ ಜ್ಞಾನಾಮೃತವನ್ನು ನೆಚ್ಚಿನ ವಿದ್ಯಾರ್ಥಿಗೆ ಧಾರಾಳವಾಗಿ ಧಾರೆಯೆರೆದರು. ಗುರುಗಳ ಸಮರ್ಥ ಮಾರ್ಗದರ್ಶನ, ಕಲಬುರ್ಗಿ ಅವರ ಪ್ರತಿಭೆ-ಪರಿಶ್ರಮ-ಪ್ರಯತ್ನಗಳಿಂದ ಮುಪ್ಪುರಿಗೊಂಡ ಸ್ವಸಾಮರ್ಥ್ಯದ ಬಲದಿಂದ ಅವರೊಬ್ಬ ಸಶಕ್ತ-ಮಾದರಿಯ-ಆದರ್ಶ ವಿದ್ಯಾರ್ಥಿಯಾಗಿ ರೂಪುಗೊಂಡರು.

ಎಂ. ಎ. ಅಧ್ಯಯನ ಮುಗಿಯುತ್ತಲೆ ಕಲಬುರ್ಗಿ ಅವರಿಗೆ ಕಲಿತ ವಿಶ್ವವಿದ್ಯಾಲಯದಲ್ಲಿಯೇ ಕೆಲಸ ದೊರೆಯಿತು. ಕನ್ನಡ ವಿಭಾಗದಲ್ಲಿ ಆಗ ತಾನೆ ಆರಂಭವಾಗಿದ್ದ 'ಸಮಗ್ರ ವಚನ ವಾಙ್ಮಯ ಸಂಶೋಧನ ಸಂಸ್ಕರಣ ಪ್ರಕಟಣ ಯೋಜನೆ'ಯಲ್ಲಿ ಸಹಾಯಕ ಸಂಶೋಧಕರಾಗಿ ವೃತ್ತಿಜೀವನ(೧೯೬೨) ಆರಂಭಿಸಿದರು. ಕೆಲವೇ ದಿವಸಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಕಾಲೇಜು ಎನಿಸಿದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸ್ಥಾನ ಪಡೆದರು. ತಮ್ಮ ಸತತಾಭ್ಯಾಸ ಪ್ರವೃತ್ತಿ, ವ್ಯವಸ್ಥಿತ ಅಚ್ಚುಕಟ್ಟಾದ ಪ್ರಭಾವಶಾಲಿ ಪಾಠಬೋಧನೆ, ಶಿಸ್ತಿನ ನಡೆ-ನುಡಿಗಳಿಂದ ವಿದ್ಯಾರ್ಥಿಗಳ-ಸಹೋದ್ಯೋಗಿಗಳ ವಿಶೇಷ ಪ್ರೀತಿ-ವಿಶ್ವಾಸ-ಗೌರವಗಳಿಗೆ ಪಾತ್ರರಾದರು.

ಪಾಠಬೋಧನೆಯ ಜೊತೆಗೆ ಕಲಬುರ್ಗಿ ಅವರು ತಮ್ಮ ನೆಚ್ಚಿನ ಗುರುಗಳಾಗಿದ್ದ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯದ ಮೇಲೆ ಪಿಎಚ್.ಡಿ. ಸಂಶೋಧನೆಯನ್ನೂ ಕೈಕೊಂಡರು. ಆ ಸಮಯದಲ್ಲಿ ಕರ್ನಾಟಕ ಕಾಲೇಜಿನ ಗ್ರಂಥಾಲಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ತಮ್ಮ ವಿಭಿನ್ನ ಆಸಕ್ತಿಯ ಜ್ಞಾನ ಕ್ಷೇತ್ರಗಳನ್ನು ಫಲಭರಿತಗೊಳಿಸಿಕೊಂಡರು. ೧೯೬೮ ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

ನಾಲ್ಕು ವರ್ಷ (೧೯೬೨-೬೬) ಕರ್ನಾಟಕ ಕಾಲೇಜಿನಲ್ಲಿ ಯಶಸ್ವಿಯಾಗಿ ಸೇವೆ ಪೂರೈಸಿದ ನಂತರ ಕಲಬುರ್ಗಿ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ತನ್ನತ್ತ ಕರೆದುಕೊಂಡಿತು. ಅಲ್ಲಿ ಅವರು ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಅಧ್ಯಕ್ಷರಾಗಿ, ಬಸವಪೀಠದ ಪ್ರಾಧ್ಯಾಪಕರಾಗಿ ಅಖಂಡ ೩೨ ವರ್ಷ (೧೯೬೬-೯೮) ಅದ್ವಿತೀಯವಾದ ಶೈಕ್ಷಣಿಕ ಸೇವೆ ಸಲ್ಲಿಸಿದರು. 'ಕನ್ನಡ ವಿಭಾಗ' ಅನೇಕ ಅಧ್ಯಯನ ಶಾಖೆಗಳನ್ನು ಹೊಂದಿ, 'ಕನ್ನಡ

ಅಧ್ಯಯನಪೀಠ'ವೆಂಬ ಮಹಾವೃಕ್ಷವಾಗಿ ಬೆಳೆದು ನಿಲ್ಲುವಲ್ಲಿ ಕಲಬುರ್ಗಿ ಅವರು ಪಟ್ಟ ಶ್ರಮದ ಪಾಲು ಅತ್ಯಧಿಕವಾಗಿದೆ. ಬಸವೇಶ್ವರಪೀಠವನ್ನು ಕಟ್ಟಿ ಬೆಳೆಸುವಲ್ಲಿ ಅವರು ತೋರಿದ ನಿಷ್ಠೆ ನಿಬ್ಬೆರಗು ಹುಟ್ಟಿಸುವಂತಿದೆ.

ವಿಶ್ವವಿದ್ಯಾಲಯದ ಸೇವೆಯಲ್ಲಿದ್ದಾಗ ಕಲಬುರ್ಗಿ ಅವರು ನಿರ್ವಹಿಸಿದ ಹುದ್ದೆಗಳು ಹಲವಾರು. ಕಲಾನಿಕಾಯದ ಡೀನರಾಗಿ, ವಿದ್ಯಾವಿಷಯಕ ಮಂಡಳಿ, ಪರೀಕ್ಷಾ ಮಂಡಳಿ, ಅಭ್ಯಾಸ ಮಂಡಳಿಗಳ ಅಧ್ಯಕ್ಷರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕನ್ನಡ ಸಂಶೋಧನ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ, ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಅಧ್ಯಕ್ಷರಾಗಿ, ಅನೇಕ ಶೈಕ್ಷಣಿಕ ಸಲಹಾ ಮಂಡಳಿಗಳ ಸದಸ್ಯರಾಗಿ ಅವರು ಮಾಡಿದ ಕಾರ್ಯ, ನೀಡಿದ ಮಾರ್ಗದರ್ಶನ, ಕಾರ್ಯರೂಪಕ್ಕೆ ತಂದ ನೀತಿ-ನಿಯಮಾವಳಿಗಳು ಮೌಲಿಕವಾಗಿದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ವಿಶೇಷ ನೆರವು ನೀಡಿವೆ.

ಡಾ. ಎಂ. ಎಂ. ಕಲಬುರ್ಗಿ ಅವರು ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿದರು. ಅಷ್ಟರಲ್ಲಿ ಅವರಿಗೆ ಮತ್ತೊಂದು ಉನ್ನತ ಅವಕಾಶದ ಬಾಗಿಲು ತೆರೆದುಕೊಂಡಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡರು. ಅದು ಅವರ ಅನೇಕ ನೂತನ ಯೋಜನೆಗಳಿಗೆ ಕಾರ್ಯರಂಗವೆನಿಸಿತು. ತಾವು ಕಂಡ ಕನಸುಗಳನ್ನೆಲ್ಲ ಅಲ್ಲಿ ನನಸುಗೊಳಿಸಲು ತಕ್ಷಣದಲ್ಲಿಯೇ ಕಾರ್ಯ ಪ್ರವೃತ್ತರಾದರು. ಹಿಂದೆ ಇದ್ದ ಕೆಲವು ಶಾಖೆಗಳ ಜೊತೆಗೆ ಮತ್ತೆ ಹಲವು ನೂತನ ಶಾಖೆಗಳನ್ನು ಆರಂಭಿಸಿ, ಎಲ್ಲ ಶಾಖೆಗಳಿಗೂ ಸಮಾನಸ್ಥಾನ-ಮಾನ, ಆರ್ಥಿಕ ಸಹಾಯ, ಮಾನವ ಸಂಪನ್ಮೂಲಗಳನ್ನು ಒದಗಿಸಿ, ಎಲ್ಲರೂ ಶಿಸ್ತುಬದ್ಧವಾಗಿ, ಸಮಯ ನಿಷ್ಠವಾಗಿ ಕೆಲಸ ಮಾಡಲು ತೊಡಗುವಂತೆ ಮಾಡಿದರು. ಅದರಿಂದಾಗಿ ಎಲ್ಲರಲ್ಲಿ ನವಚೈತನ್ಯ ತುಂಬಿಕೊಂಡಿತು. ಸಾಂಘಿಕ, ವೈಯಕ್ತಿಕ ಸಂಶೋಧನ ಯೋಜನೆಗಳಿಂದಾಗಿ ಅನೇಕ ಹೊಸ ಕ್ಷೇತ್ರಗಳಿಗೆ ಸಂಬಂಧಿಸಿದ ಅಪೂರ್ವ ಗ್ರಂಥಗಳು ಪ್ರಕಟವಾದವು. ಅದರಿಂದಾಗಿ ಕನ್ನಡ ವಿಶ್ವವಿದ್ಯಾಲಯದ ಕೀರ್ತಿ ಇಮ್ಮಡಿಗೊಂಡಿತು. ಹಗಲಿರುಳೆನ್ನದೆ ತಾವೂ ದುಡಿದು, ಇತರೆಲ್ಲರನ್ನೂ ದುಡಿಸಿ-ಶ್ರಮಸಂಸ್ಕೃತಿಯನ್ನು ಅಲ್ಲಿ ಗಟ್ಟಿಗೊಳಿಸಿ ಮೂರು ವರ್ಷಗಳಲ್ಲಿ ಅದನ್ನೊಂದು ಮಾದರಿಯ ವಿಶ್ವವಿದ್ಯಾಲಯವನ್ನಾಗಿಸಿ-೨೦೦೧ ರಲ್ಲಿ ನಿವೃತ್ತಿ ಹೊಂದಿದರು. ಹಿಂದಿನವರಂತೆ ಕಲಬುರ್ಗಿಯವರ ಸೇವೆಯನ್ನೂ ಇನ್ನೂ ಮೂರು ವರ್ಷ ವಿಸ್ತರಿಸಿದ್ದರೆ, ಕನ್ನಡ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಒಂದು ಮಹಾಸಂಸ್ಥೆಯನ್ನಾಗಿ ಬೆಳೆಸಿ ನಿಲ್ಲಿಸುತ್ತಿದ್ದರು.

ನಿವೃತ್ತಿಯ ನಂತರ ಡಾ. ಕಲಬುರ್ಗಿ ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತಾರಗೊಂಡಿತು. ಮುಕ್ತವಾಗಿ ಅವರು ಸಾಹಿತ್ಯ-ಸಂಶೋಧನೆ-ಸಮಾಜಸೇವೆ-ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅನೇಕ ಸಂಘ-ಸಂಸ್ಥೆಗಳಿಗೆ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮಾರ್ಗದರ್ಶನ ನೀಡುತ್ತ, ಭಾಷಣ-ಬರಹಗಳ ಮೂಲಕ ಅಸತ್ಯ, ಅನ್ಯಾಯ, ಮೂಢಾಚಾರಗಳನ್ನು ಖಂಡಿಸುತ್ತ, ಶರಣರು ಕಂಡ ಸಮಾನತೆಯ-ಸದಾಚಾರದ-ಸ್ವಸ್ಥ ಸಮಾಜ ನಿರ್ಮಾಣವಾಗಬೇಕೆಂದು ಸಾಮಾಜಿಕರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಸ್ಥಾವರಗೊಂಡ ವ್ಯವಸ್ಥೆಯನ್ನು ಚಲನಶೀಲಗೊಳಿಸಬೇಕು, ಜಂಗಮಗೊಳಿಸಬೇಕು ಎಂದು ನಿರಂತರ ಸಮಾಜ ಶುದ್ಧಿಯ ಕಾರ್ಯದಲ್ಲಿ ನಿರತರಾಗಿದ್ದರು. ಅವರ ಪ್ರಖರ ವಿಚಾರಗಳು, ವೈಚಾರಿಕ ನಿಲವುಗಳು, ನಿಷ್ಠುರ ಸತ್ಯಗಳು ಪಟ್ಟ

ಭದ್ರ ಹಿತಾಸಕ್ತಿಗಳಿಗೆ, ಸಂಕುಚಿತ ಭಾವದ ಸನಾತನಿಗಳಿಗೆ ರುಚಿಸಲಿಲ್ಲ; ಅಪಥ್ಯವೆನಿಸಿದವು. ಹೀಗಾಗಿ ಸತ್ಯ ಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರು ದುಷ್ಟಶಕ್ತಿಗಳ ಗುಂಡೇಟಿಗೆ ಬಲಿಯಾಗಬೇಕಾಯಿತು. ೩೦-೦೮-೨೦೧೫ ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳದಿನ. ಸಾಂಸ್ಕೃತಿಕ ಶ್ರೀಮಂತ ನಗರವೆನಿಸಿದ ಧಾರವಾಡದಲ್ಲಿ ಹಾಡುಹಗಲೇ ವಿದ್ಯಾರ್ಥಿ ವೇಷದಲ್ಲಿ ಮನೆಯೊಳಗೆ ನುಗ್ಗಿ ಸಾತ್ವಿಕ ಶರಣ, ಸ್ವತಂತ್ರ ವಿಚಾರವಾದಿ, ನ್ಯಾಯ ನಿಷ್ಠುರಿಯ ಅಮಾನುಷ ಹತ್ಯೆ ಮಾಡಲಾಯಿತು. ಇದು ಸತ್ಯದ ಕೊಲೆ; ಅಭಿವ್ಯಕ್ತಿ ಸ್ವಾತಂತ್ರ್ಯದ ಕಗ್ಗೊಲೆ. ಇದರಿಂದ ನಾಡು ಒಬ್ಬ ಅಪ್ರತಿಮ ವಿಚಾರವಾದಿಯನ್ನು ಕಳೆದುಕೊಂಡು ಬಡವಾಯಿತು. ಲಿಂಗಾಯತ ಸಮಾಜ ಒಬ್ಬ ತತ್ವನಿಷ್ಠ ಚಿಂತಕನ ಅಗಲಿಕೆಯಿಂದ ಅನಾಥವಾಯಿತು. ವಿದ್ವತ್‌ಲೋಕ ಒಬ್ಬ ಸತ್ಯನಿಷ್ಠ ಸಂಶೋಧಕನನ್ನು ಕಳೆದುಕೊಂಡು ಭರಿಸಲಾರದ ಹಾನಿಗೊಳಗಾಯಿತು.

* * * *

ಡಾ. ಎಂ. ಎಂ. ಕಲಬುರ್ಗಿ ಅವರ ಬೋಧಕೇತರ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳ ಕಾರ್ಯವ್ಯಾಪ್ತಿ ಬಹು ದೊಡ್ಡದು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ; ಯುಜಿಸಿ ಭಾರತೀಯ ಭಾಷೆಗಳ ಸಲಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ರಚನಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ; ದ.ರಾ.ಬೇಂದ್ರೆ ಟ್ರಸ್ಟ್, ಬಸವರಾಜ ಕಟ್ಟಿಮನಿ ಪ್ರತಿಷ್ಠಾನ, ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆಯ ಅಧ್ಯಕ್ಷರಾಗಿ; ಗದಗ ಲಿಂಗಾಯತ ಅಧ್ಯಯನ ಸಂಸ್ಥೆ, ಬೆಳಗಾವಿ ಲಿಂಗಾಯತ ಅಧ್ಯಯನ ಅಕಾಡೆಮಿ, ನಿಡಸೋಸಿ ಶರಣ ಸಂಸ್ಕೃತಿ ಅಕಾಡೆಮಿ, ಕೊಡೆಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಮೈಸೂರು ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟಣ ಮಾಲೆ, ಶಿವಮೊಗ್ಗ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಗಳ ನಿರ್ದೇಶಕರಾಗಿ; ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಅಪ್ರಕಟಿತ ಕನ್ನಡ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಗದ್ಯ ಸಾಹಿತ್ಯ ಪ್ರಕಟಣ ಯೋಜನೆ, ವಚನ ಬಹುಭಾಷಾ ಭಾಷಾಂತರ ಯೋಜನೆ, ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಬಸವರಾಜ ಕಟ್ಟಿಮನಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಗಳಗನಾಥ ಸಮಗ್ರ ಕಾದಂಬರಿ ಪ್ರಕಟಣ ಯೋಜನೆ, ಕೆರೂರ ವಾಸುದೇವಾಚಾರ್ಯ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆಗಳ ಪ್ರಧಾನ ಸಂಪಾದಕರಾಗಿ ಅವರು ಮಾಡಿದ ಕಾರ್ಯಗಳು ಚಿರಸ್ಮರಣೀಯವೆನಿಸಿವೆ.

ಡಾ. ಕಲಬುರ್ಗಿ ಅವರ ಈ ಬಹುಮುಖ-ಮೌಲಿಕ ಸಾಹಿತ್ಯ-ಸಂಶೋಧನ ಕಾರ್ಯ ಸಾಧನೆಗಾಗಿ ಸಾಹಿತ್ಯ ಅಕಾಡೆಮಿ, ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಉನ್ನತ-ಪ್ರತಿಷ್ಠಿತ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವರಿಗೆ ದೊರೆತ ೨೫ ಕ್ಕೂ ಹೆಚ್ಚು ಪ್ರಶಸ್ತಿಗಳಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಗ್ರಂಥ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪ್ರಮುಖವಾದವು.

ಸಾಹಿತ್ಯ ರಾಶಿ :

ಡಾ. ಎಂ. ಎಂ. ಕಲಬುರ್ಗಿ ಅವರ ಆಸಕ್ತಿ ಕ್ಷೇತ್ರಗಳ ಹರಹು ಬಲು ದೊಡ್ಡದು; ಬರವಣಿಗೆಯ

ವ್ಯಾಪ್ತಿ ಬಹು ವಿಸ್ತಾರ. ಸೃಜನ-ಸೃಜನೇತರ ಉಭಯ ಕ್ಷೇತ್ರಗಳಲ್ಲಿ ಸಮರ್ಥ ಕೃಷಿ. ಅದರಲ್ಲಿಯೇ ಸಂಶೋಧನ ಕ್ಷೇತ್ರದ ಬೆಳೆ ತುಂಬ ಹುಲುಸು; ಫಲಭರಿತ. ಅದಕ್ಕೆ ಗರಿಷ್ಠ ಬೆಲೆ-ಬೇಡಿಕೆ.

ಕನ್ನಡ ಸಂಶೋಧನ ಕ್ಷೇತ್ರವನ್ನು ಸಂಪದ್ಭರಿತಗೊಳಿಸಿ, ಅದಕ್ಕೊಂದು ನೂತನ ಆಯಾಮ ಆವಿಷ್ಕಾರವನ್ನು ನೀಡಿದ ಕಲಬುರ್ಗಿ ಅವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಗಳ ವೈವಿಧ್ಯತೆ ಬೆರಗುಗೊಳಿಸುತ್ತದೆ: ಶಾಸನ, ಹಳಗನ್ನಡ-ನಡುಗನ್ನಡ-ಹೊಸಗನ್ನಡ ಸಾಹಿತ್ಯ, ಚರಿತ್ರೆ, ಜಾನಪದ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಪ್ರಾಚ್ಯವಸ್ತುಶಾಸ್ತ್ರ, ಸಂಶೋಧನೆ, ವಿಮರ್ಶೆ, ನಾಡು-ನುಡಿ-ಸಂಸ್ಕೃತಿ-ಹೀಗೆ ಅದು ಅನಂತಮುಖಿಯಾಗಿದೆ.

ಡಾ. ಕಲಬುರ್ಗಿ ಅವರು ತಮ್ಮ ಆಸಕ್ತಿಯ ಕ್ಷೇತ್ರಗಳು, ಅಧ್ಯಯನದ ಸ್ವರೂಪ-ವ್ಯಾಪ್ತಿ ಮತ್ತು ವಿಧಾನ ಕುರಿತು ಬೇರೆ ಬೇರೆ ಕೃತಿಗಳ ಅರಿಕೆ, ಲೇಖಕರ ನುಡಿ, ಮಾರ್ಗಕ್ಕೆ ಮೊದಲು ಇತ್ಯಾದಿ ಬರಹಗಳಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ನನ್ನದು ಬಹುಮುಖಿ ಅಧ್ಯಯನ. ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೈ-ಮನಸ್ಸುಗಳನ್ನು ಅಭ್ಯಸಿಸುತ್ತಲೇ ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ಶಾಸ್ತ್ರಗಳನ್ನು ತೆಕ್ಕೆಗೆ ಅಳವಡಿಸಿಕೊಂಡ ಬಳಿಕ, ನಾನು ಪ್ರವೇಶಿಸಿದ ಹೊಸ ಕ್ಷೇತ್ರ ಶಾಸನ. ಆಮೇಲೆ ಆಧುನಿಕ ಶೈಕ್ಷಣಿಕ ಶಿಸ್ತುಗಳೆನಿಸಿದ ಜಾನಪದ, ನಾಮವಿಜ್ಞಾನ, ಗ್ರಂಥಸಂಪಾದನೆ ಇತ್ಯಾದಿಗಳತ್ತ ನನ್ನ ಒಲವು ಬೆಳೆಯಿತು. ಹೀಗಾಗಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕ, ಲೇಖನ ಬರವಣಿಗೆ ನನ್ನಿಂದ ಸಾಧ್ಯವಾಯಿತು. ಈ ಎಲ್ಲ ಬರವಣಿಗೆಯ ಹಿಂದೆ ಸಂಶೋಧನೆಯ ಸಶಬ್ದ ಶ್ರುತಿ, ಕೆಲವೊಮ್ಮೆ ನಿಃಶಬ್ದ ಶ್ರುತಿ ಕೆಲಸಮಾಡಿದೆ."

"ಸಾಹಿತ್ಯವನ್ನು ಘಟಿತವಸ್ತು (Fact) ಕೇಂದ್ರಿತ ಮತ್ತು ಕಲ್ಪಿತವಸ್ತು (Fiction) ಕೇಂದ್ರಿತವೆಂದು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಸಂಭವಿಸಿದ ಜೀವನವನ್ನು, ಜೀವನ ಮೌಲ್ಯಗಳನ್ನು ನಮ್ಮ ಮುಂದೆ ಕಲಾತ್ಮಕವಾಗಿ ಸ್ಥಾಪಿಸುವ ಘಟಿತವಸ್ತು ಸಾಹಿತ್ಯವೇ ಸಮಾಜಕ್ಕೆ ಹೆಚ್ಚು ಮಾರ್ಗದರ್ಶಕ, ಹೆಚ್ಚು ಪ್ರಯೋಜಕವೆಂದು ನನ್ನ ಭಾವನೆ. ಹೀಗಾಗಿ ನನಗೆ ಸಂಭವನೀಯ ವಸ್ತುವನ್ನೊಳಗೊಂಡ ಕಥೆ, ಕಾದಂಬರಿ ಸಾಹಿತ್ಯಕ್ಕಿಂತ, ಸಂಭವಿಸಿದ ವಸ್ತುವನ್ನೊಳಗೊಂಡ ಆತ್ಮಚರಿತ್ರೆ, ಜೀವನ ಚರಿತ್ರೆ, ಸಾಹಿತ್ಯ ಹೆಚ್ಚು ಪ್ರಿಯವಾದುದು. ಈ ಕಾರಣದಿಂದಾಗಿ ನಾನು ಕಲ್ಪಿತ ಸಾಹಿತ್ಯದ ಜೊತೆಗೆ ಘಟಿತ ಸಾಹಿತ್ಯದತ್ತ ವಿಶೇಷ ಒಲವು ಬೆಳೆಸಿಕೊಂಡಿದ್ದೇನೆ"(ಕನ್ನಡ ಶಾಸನ ಸಾಹಿತ್ಯ-ಲೇಖಕರ ಮಾತು).

"ಕನ್ನಡ ಸೃಜನ ಸಾಹಿತ್ಯ ನವೋದಯ, ನವ್ಯ, ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ, ಕನ್ನಡ ಸಂಶೋಧನ ಸಾಹಿತ್ಯವೂ ರೂಪಿಸಿಕೊಳ್ಳುತ್ತ ಬಂದ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮಗ್ರಿವ್ಯಾಖ್ಯಾನ ನಿಷ್ಠ ಘಟ್ಟಗಳಲ್ಲಿ ನಾನು ದುಡಿಯುತ್ತ ಬಂದಿದ್ದೇನೆ. ಇದೇ ರೀತಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸ ಹೊಸ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಂಡಿದ್ದೇನೆ. ಹೀಗೆ ಈ ಮೂರು ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ 'ಮಹಾಮಾರ್ಗ'ದಲ್ಲಿ ನಡೆದು ಬಂದವನಾದುದರಿಂದ ನನ್ನ (ಸಂಪ್ರಬಂಧಗಳ ಸಂಕಲನ) ಕೃತಿಗಳಿಗೆ 'ಮಾರ್ಗ' ಎಂದು ಹೆಸರಿಟ್ಟಿದ್ದೇನೆ. ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಈ ಪ್ರಬಂಧಗಳು ಪ್ರತಿನಿಧಿಸುತ್ತವೆ ಎಂದು ಸೂಚಿಸಬಯಸುತ್ತೇನೆ."

“ಸಂಶೋಧನೆ ಎನ್ನುವುದು ಅಲ್ಪ ವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.‘ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ’ ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. ‘ಜನಮೆಚ್ಚೆ ನಡಕೊಂಡರೇನುಂಟು ಲೋಕದಿ ಮನಮೆಚ್ಚೆ ನಡಕೊಂಬುದೇ ಚೆಂದವು’ ಎಂಬುದಂತೂ ನನ್ನನ್ನು ಸದಾ ಎಚ್ಚರಿಸುತ್ತಲಿರುತ್ತದೆ”(ಮಾರ್ಗ-೧, ೨ ಅರಿಕೆ).

“೨೦ನೆಯ ಶತಮಾನದ ಉತ್ತರಾರ್ಧದಲ್ಲಿ ‘ಚಾರಿತ್ರಿಕ ಶೋಧ’ದೊಂದಿಗೆ ‘ಸಾಂಸ್ಕೃತಿಕ ಶೋಧ’ ಹೆಸರಿನ ಹೊಸಬಗೆಯ ‘ಸಾಮಾಜಿಕ ಪ್ರಕ್ರಿಯಾ ಶೋಧ’ ಕರ್ನಾಟಕದ ತುಂಬ ಕಣ್ಣು ತೆರೆಯಿತು. ಕಾಲಗತಿಸಿದಂತೆ ಇದರ ಹಿಂದಿರುವ ‘ಸಾಮಾಜಿಕ ಕಾರಣ ಶೋಧ’ದ ಮೇಲೆ ಹೆಚ್ಚು ಒತ್ತು ಬಿದ್ದಿತು. ಹೀಗಾಗಿ ಇಂದು ಕರ್ನಾಟಕದಲ್ಲಿ ಆಕರಶೋಧ, ಚಾರಿತ್ರಿಕ ಶೋಧ, ಸಾಮಾಜಿಕ ಶೋಧ, ಸಾಮಾಜಿಕ ಪ್ರಕ್ರಿಯಾ ಶೋಧ ಮತ್ತು ಸಾಮಾಜಿಕ ಕಾರಣಶೋಧಗಳೆಂಬ ಐದು ಆಯಾಮಗಳು ನಮ್ಮ ಸಂಶೋಧನೆಯಲ್ಲಿ ಕಾಣಿಸಿಕೊಂಡಿವೆ. ನಾನು ಈ ಐದೂ ಆಯಾಮಗಳಲ್ಲಿ ಬಿಚ್ಚಿಕೊಂಡುದರ ಫಲಿತಗಳನ್ನು ‘ಮಾರ್ಗ’ ಹೆಸರಿನ ನನ್ನ ಮೂರು ಸಂಪುಟಗಳಲ್ಲಿ, ಅದೇ ರೀತಿ ಈ ನಾಲ್ಕನೆಯ ಸಂಪುಟದಲ್ಲಿ ಕಾಣಬಹುದು”.

“ಇತ್ತೀಚೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ, ರಾಜಕೀಯ-ಧಾರ್ಮಿಕ-ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ, ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ. ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಎತ್ತಿಕೊಂಡುದಲ್ಲದೆ, ಶಿಷ್ಟ ಆಕರಗಳೊಂದಿಗೆ ಪರಿಶಿಷ್ಟ ಆಕರಗಳನ್ನೂ ಬಳಸಿಕೊಂಡ ಕಾರಣ, ಇವು ಒಂದಿಷ್ಟು ಸಾಮಾಜಿಕ ಹೊಳಪನ್ನು ಒಳಗೊಂಡಿವೆ”(ಮಾರ್ಗ-೪, ಅರಿಕೆ).

ಈ ಮೇಲಿನ ಉದ್ಧರಣೆಗಳು ಡಾ. ಎಂ. ಎಂ. ಕಲಬುರ್ಗಿ ಅವರ ಒಟ್ಟು ಸಂಶೋಧನೆಯ ಸ್ವರೂಪ-ವ್ಯಾಪ್ತಿ-ವಿಧಾನ-ದೃಷ್ಟಿ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಅವರು ಆಕರಮುಖಿ ಶೋಧದ ಮೂಲಕ ಹೊರಟು, ವಿಶ್ಲೇಷಣಮುಖಿ ಶೋಧದಲ್ಲಿ ಮುಂದುವರೆದು ವ್ಯಾಖ್ಯಾನಮುಖಿ ಶೋಧವನ್ನು ತಲುಪಿದ ರೀತಿಯನ್ನು; ವಸ್ತುನಿಷ್ಠ ಸಂಶೋಧನೆಯಿಂದ ತೊಡಗಿ, ಸಂಸ್ಕೃತಿನಿಷ್ಠ ಸಂಶೋಧನೆಯಲ್ಲಿ ಸಾಗಿ, ಕೊನೆಗೆ ಸಮಾಜನಿಷ್ಠ ಸಂಶೋಧನೆಯಲ್ಲಿ ನೆಲೆನಿಂತ ನಿಲವನ್ನು ನಿಚ್ಚಳವಾಗಿ ನಿರ್ವಚಿಸುತ್ತವೆ.

* * * *

ಡಾ. ಕಲಬುರ್ಗಿ ಅವರ ಸಾಹಿತ್ಯ ಸೃಷ್ಟಿ ಎರಡು ಬಗೆಯಾಗಿ ನಡೆದಿದೆ. ಒಂದು ಇಡಿಯಾದ ಗ್ರಂಥ ರೂಪದಲ್ಲಿ; ಮತ್ತೊಂದು–ಬಿಡಿಯಾದ ಸಂಪ್ರಬಂಧ ಸ್ವರೂಪದಲ್ಲಿ. ಅವರು ತಮ್ಮ ಎಪ್ಪತ್ತೇಳು ವರ್ಷದ ಜೀವಿತಾವಧಿಯಲ್ಲಿ–ಸು. ೫೦ ವರ್ಷ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ೧೯೬೭ ರಲ್ಲಿ ಪ್ರಕಟವಾದ 'ಬಸವಣ್ಣನವರ ಜೀವನ ಚರಿತ್ರೆ' ಅವರ ಮೊದಲ ಲೇಖನವೆನಿಸಿದರೆ, ೧೯೬೮ ರಲ್ಲಿ ಹೊರ ಬಂದ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬುದು ಮೊದಲ ಕೃತಿಯಾಗಿದೆ. ಹಾಗೆಯೇ 'ನಾಲ್ಕು ಜಾತಿವಿಡಿದು ಬಂದ ಜಂಗಮವೆ ಶ್ರೇಷ್ಠ?' ಎಂಬುದು ಅವರ ಕೊನೆಯ ಲೇಖನ; 'ವಚನ ವರ್ಷ' ಎಂಬುದು ಕೊನೆಯ ಕೃತಿ. ಈ ಮಧ್ಯದ ಅವಧಿಯಲ್ಲಿ ಅವರು ಒಟ್ಟು ೧೧೧೬ ಕೃತಿಗಳನ್ನು ಮತ್ತು ೮೯೩ ಲೇಖನಗಳನ್ನು ಪ್ರಕಟಿಸಿದ್ದಾರೆ.

ಡಾ. ಕಲಬುರ್ಗಿ ಅವರ ಒಟ್ಟು ಕೃತಿಗಳನ್ನು ಸೃಜನ ಮತ್ತು ಸೃಜನೇತರ ಎಂದು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಸೃಜನ ಸಾಹಿತ್ಯದಲ್ಲಿ ಅವರ ಕಾವ್ಯ ಮತ್ತು ನಾಟಕ ಕೃತಿಗಳು ಸೇರುತ್ತವೆ. ಸೃಜನೇತರದಲ್ಲಿ ಸ್ವತಂತ್ರ ಕೃತಿಗಳು, ಸಂಪಾದಿತ ಕೃತಿಗಳು ಎಂದು; ಸಂಪಾದಿತ ಕೃತಿಗಳಲ್ಲಿ ಪ್ರಾಚೀನ–ಆಧುನಿಕ ಎಂದು ಮತ್ತೆ ಎರಡೆರಡು ವಿಭಾಗಗಳನ್ನು ಮಾಡಬಹುದು. ಸ್ವತಂತ್ರ ಕೃತಿಗಳಲ್ಲಿ ಶಾಸನ, ಶಾಸ್ತ್ರ, ಸಂಶೋಧನೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕೃತಿಗಳು ಸೇರಿದರೆ, ಪ್ರಾಚೀನ ಸಂಪಾದಿತ ಕೃತಿಗಳಲ್ಲಿ ಶಾಸನ, ಕಾವ್ಯ, ವಚನ, ದಾಖಲು ಸಾಹಿತ್ಯ ಕೃತಿಗಳು ಮತ್ತು ಆಧುನಿಕ ಸಂಪಾದಿತ ಕೃತಿಗಳಲ್ಲಿ ಲೇಖನ ಸಂಗ್ರಹ, ಜೀವನ ಚರಿತ್ರೆ ಮತ್ತು ಅಭಿನಂದನ ಗ್ರಂಥಗಳು ಸೇರುತ್ತವೆ. ಅವುಗಳ ವಿವರ ಹೀಗಿದೆ :

ಸೃಜನ ಸಾಹಿತ್ಯ

೧. ನೀರು ನೀರಡಿಸಿತ್ತು (ಕವನ), ೨. ನೀರಾಗ ನಿಂತೀನಿ ನೀರಡಿಸಿ (ಕವನ), ೩. ಕೆಟ್ಟಿತ್ತು ಕಲ್ಯಾಣ (ನಾಟಕ), ೪. ಖರೇ ಖರೇ ಸಂಗ್ಯಾ ಬಾಳ್ಯಾ (ನಾಟಕ), ೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ).

ಸೃಜನೇತರ ಸಾಹಿತ್ಯ (ಸ್ವತಂತ್ರ ಕೃತಿಗಳು) :

ಶಾಸನ ಸಾಹಿತ್ಯ

೬. ಬಸವಣ್ಣನವರನ್ನು ಕುರಿತ ಶಾಸನಗಳು, ೭. ಶಾಸನಗಳಲ್ಲಿ ಶಿವಶರಣರು, ೮. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು, ೯. ಮಹಾರಾಷ್ಟ್ರದ ಕನ್ನಡ ಶಾಸನಗಳು.

ಶಾಸ್ತ್ರ ಸಾಹಿತ್ಯ

೧೦. ಕನ್ನಡ ಗ್ರಂಥಸಂಪಾದನಶಾಸ್ತ್ರ, ೧೧. ಪ್ರತಿಬಿಂಬ, ೧೨. ಸಾಹಿತ್ಯ ಸಂಪಾದನೆ, ೧೩. ಕನ್ನಡ ನಾಮವಿಜ್ಞಾನ, ೧೪. ಕನ್ನಡ ಸಂಶೋಧನಶಾಸ್ತ್ರ, ೧೫. ಕನ್ನಡ ಹಸ್ತಪ್ರತಿಶಾಸ್ತ್ರ.

ಸಂಶೋಧನ ಸಾಹಿತ್ಯ

೧೬. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ೧೭. ಶಾಸನ ವ್ಯಾಸಂಗ–೧, ೧೮. ಶಾಸನ ವ್ಯಾಸಂಗ–೨, ೧೯. ಕನ್ನಡ ಶಾಸನ ಸಾಹಿತ್ಯ, ೨೦. ಐತಿಹಾಸಿಕ, ೨೧. ವೀರಶೈವ : ಇತಿಹಾಸ ಭೂಗೋಳ, ೨೨. ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ೨೩. ಪರಿಕಲ್ಪನೆ,

೨೪. ಪಂಚಾಚಾರ್ಯರ ನಿಜಸ್ವರೂಪ, ೨೫. ಸಂಸ್ಕೃತಿ–ವಿಕೃತಿ, ೨೬. ಕನ್ನಡ ಅರಸರ ಅಕನ್ನಡ ಪ್ರಜ್ಞೆ, ೨೭. ನಿರ್ವಚನ.

ಜಾನಪದ ಸಾಹಿತ್ಯ

೨೮. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ, ೨೯. ಜನಪದ ಮಾರ್ಗ.

ಲೇಖನ ಸಂಪುಟ

೩೦. ಮಾರ್ಗ–೧, ೩೧. ಮಾರ್ಗ–೨, ೩೨. ಮಾರ್ಗ–೩, ೩೩. ಮಾರ್ಗ–೪, ೩೪. ಮಾರ್ಗ–೫, ೩೫. ಮಾರ್ಗ–೬, ೩೬. ಮಾರ್ಗ–೭, ೩೭. ಮಾರ್ಗ–೮.

ಸೃಜನೇತರ ಸಾಹಿತ್ಯ (ಪ್ರಾಚೀನ ಸಂಪಾದಿತ ಕೃತಿಗಳು):

ಶಾಸನ ಸಾಹಿತ್ಯ

೩೮. ಶಾಸನ ಸಂಪದ, ೩೯. ಧಾರವಾಡ ಜಿಲ್ಲೆಯ ಶಾಸನ ಸೂಚಿ, ೪೦. ವಿಜಾಪುರ ಜಿಲ್ಲೆಯ ಶಾಸನ ಸೂಚಿ, ೪೧. ಧಾರವಾಡ ತಾಲೂಕಿನ ಶಾಸನಗಳು, ೪೨. ಶಾಸನ ಸೂಕ್ತಿಸುಧಾರ್ಣವ.

ದಾಖಲು ಸಾಹಿತ್ಯ

೪೩. ಕರ್ನಾಟಕದ ಕೈಫಿಯತ್ತುಗಳು, ೪೪. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿ ಹಸ್ತಪ್ರತಿಸೂಚಿ, ೪೫. ವಚನ ಸಾಹಿತ್ಯ ಆಕರ ಕೋಶ, ೪೬. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧.

ವಚನ ಸಾಹಿತ್ಯ

೪೭. ಬಸವಸ್ತೋತ್ರದ ವಚನಗಳು, ೪೮. ಬಸವಣ್ಣನವರ ಟೀಕಿನ ವಚನಗಳು ಭಾಗ–೧, ೪೯. ಬಸವಣ್ಣನವರ ಟೀಕಿನ ವಚನಗಳು ಭಾಗ–೨, ೫೦. ವಚನ ಸಂಕಲನ ಸಂಪುಟ–೪, ೫೧. ವಚನ ಸಂಕಲನ ಸಂಪುಟ–೬, ೫೨. ಬಸವಣ್ಣನವರ ವಚನ ಸಂಪುಟ, ೫೩. ಸಂಕೀರ್ಣ ವಚನ ಸಂಪುಟ, ೫೪. ಚೆನ್ನಬಸವಣ್ಣನವರ ವಚನ ಮಹಾಸಂಪುಟ, ೫೫. ಸಿದ್ಧರಾಮಯ್ಯದೇವರ ವಚನಗಳು, ೫೬. ಪರಮಾನಂದ ಸುಧೆ, ೫೭. ವಚನ, ೫೮. ಏಕೋತ್ತರಶತಸ್ಥಲ, ೫೯. ಶೂನ್ಯಸಂಪಾದನೆ, ೬೦. ವಚನ ವರ್ಷ, ೬೧. ವಚನಶಾಸ್ತ್ರಸಾರ(ಸಂಪುಟ–೧), ೬೨ ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫.

ಕಾವ್ಯ ಸಾಹಿತ್ಯ

೬೩. ಮಲ್ಲಿನಾಥ ಪುರಾಣ ಸಂಗ್ರಹ, ೬೪. ಶಬ್ದಮಣಿದರ್ಪಣ ಸಂಗ್ರಹ, ೬೫. ಶಿವಯೋಗ ಪ್ರದೀಪಿಕಾ, ೬೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೬೭. ಕೊಂಡಗುಳಿ ಕೇಶಿರಾಜನ ಕೃತಿಗಳು, ೬೮. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ, ೬೯. ಆದಯ್ಯನ ಲಘುಕೃತಿಗಳು, ೭೦. ನಿಂಬಸಾಮಂತ ಚರಿತೆ, ೭೧. ಸಿರುಮಣ ನಾಯಕನ ಸಾಂಗತ್ಯ, ೭೨. ಸಿರುಮನ ಚರಿತೆ,

೭೩. ಗೊಲ್ಲ ಸಿರುಮನ ಚರಿತೆ, ೭೪. ಷಟ್‌ಸ್ಥಲ ಶಿವಾಯಣ, ೭೫. ಹರಿಹರನ ರಗಳೆಗಳು, ೭೬. ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ೭೭. ಹೊಸಕುಮಾರರಾಮನ ಸಾಂಗತ್ಯ, ೭೮. ಕೊಮಾರ ರಾಮಯ್ಯನ ಚರಿತ್ರೆ, ೭೯. ಬಾಲರಾಮಯ್ಯನ ಸಾಂಗತ್ಯ, ೮೦. ಹಳೆಯಕುಮಾರ ರಾಮನ ಸಾಂಗತ್ಯ, ೮೧. ಸಿದ್ಧಮಂಕ ಚರಿತೆ, ೮೨. ತಗರ ಪವಾಡ, ೮೩. ಗುಂಡಬಸವೇಶ್ವರ ಪುರಾಣ, ೮೪. ಕೊಡೆಕಲ್ಲ ವಚನ ವಾಕ್ಯ, ೮೫. ಕಿತ್ತೂರ ಸಂಸ್ಥಾನ ಸಾಹಿತ್ಯ–೧, ೮೬. ಕಿತ್ತೂರ ಸಂಸ್ಥಾನ ಸಾಹಿತ್ಯ–೨, ೮೭. ಕಿತ್ತೂರ ಸಂಸ್ಥಾನ ಸಾಹಿತ್ಯ–೩.

ಸೃಜನೇತರ ಸಾಹಿತ್ಯ (ಆಧುನಿಕ ಸಂಪಾದಿತ ಕೃತಿಗಳು):

ಲೇಖನ ಸಂಗ್ರಹಗಳು :

೮೮. ದಿಗಂಬರ(ಕವನ ಸಂಗ್ರಹ), ೮೯. ಬಸವ ಮಾರ್ಗ–೧(ಲೇಖನ ಸಂಗ್ರಹ), ೯೦. ಬಸವ ಮಾರ್ಗ–೨, ೯೧. ಬಸವ ಮಾರ್ಗ–೩, ೯೨. ವಚನಸಾಹಿತ್ಯದ ಪ್ರಕಟಣೆಯ ಇತಿಹಾಸ, ೯೩. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ೯೪. ಕೆಳದಿ ಸಂಸ್ಥಾನ : ಸಮಗ್ರ ಅಧ್ಯಯನ, ೯೫. ಮಾನಸೋಲ್ಲಾಸ ಪರಿಚಯ, ೯೬. ಮಾನಸೋಲ್ಲಾಸ ಸಂಪುಟ ೧–೨, ೯೭. ಸ್ವಾದಿ ಅರಸು ಮನೆತನ, ೯೮. ಬೀಳಗಿ ಅರಸು ಮನೆತನ, ೯೯. ಸ್ವರವಚನ ವಿಚಾರ ಸಂಕಿರಣ ಸಂಪುಟ, ೧೦೦. ಭಾರತಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ : ಲಿಂಗಾಯತರ ಪಾತ್ರ, ೧೦೧. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.

ಜೀವನ ಚರಿತ್ರೆಗಳು

೧೦೨. ಅರಟಾಳ ರುದ್ರಗೌಡರ ಚರಿತ್ರೆ, ೧೦೩. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ–೨, ೧೦೪. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ, ೧೦೫. ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ, ೧೦೬. ಮಡಿವಾಳಪ್ಪ ಸಾಸನೂರ ಬದುಕು–ಬರೆಹ, ೧೦೭. ಶಿವಾನುಭವ ಪತ್ರಿಕೆ.

ಅಭಿನಂದನ ಗ್ರಂಥಗಳು

೧೦೮. ಬೆಳ್ವೊಲ, ೧೦೯. ಸಾರಂಗಶ್ರೀ, ೧೧೦. ವಜ್ರಕುಸುಮ, ೧೧೧. ಲಿಂಗಾಯತ, ೧೧೨. ಕಲ್ಯಾಣದೀಪ್ತಿ, ೧೧೩. ಶರಣಶ್ರೀ.

ಇತರೆ

೧೧೪. ನನ್ನ ಜೀವನ ಚರಿತ್ರೆ(ಷಣ್ಮುಖಪ್ಪ ಅಂಗಡಿಯವರ ಆತ್ಮಚರಿತ್ರೆ), 115. My Autobiography, 116. Heaven of Equality.

ಇವುಗಳಲ್ಲಿ ಸಂಶೋಧನ ಸಾಹಿತ್ಯ ವಿಭಾಗಕ್ಕೆ ಸೇರಿರುವ ಶಾಸನ ವ್ಯಾಸಂಗ ೧,೨, ಕನ್ನಡ ಶಾಸನ ಸಾಹಿತ್ಯ, ಐತಿಹಾಸಿಕ, ವೀರಶೈವದ ಇತಿಹಾಸ ಭೂಗೋಳ, ಶುದ್ಧಶೈವ ಮತ್ತು ಗೊಳಕಿಮಠ ಸಂಪ್ರದಾಯ, ಪರಿಕಲ್ಪನೆ, ಪಂಚಾಚಾರ್ಯರ ನಿಜಸ್ವರೂಪ, ಸಂಸ್ಕೃತಿ–ವಿಕೃತಿ, ಕನ್ನಡ ಅರಸರ ಅಕನ್ನಡ ಪ್ರಜ್ಞೆ, ನಿರ್ವಚನ ಎಂಬ ೧೧ ಕೃತಿಗಳು ಮಾರ್ಗ ಸಂಪುಟಗಳಲ್ಲಿನ ಲೇಖನಗಳನ್ನು ಆಯ್ದು ಸಂಗ್ರಹಿಸಿದ ಸಂಕಲನಗಳಾಗಿರುವುದರಿಂದ ಅವು ಸ್ವತಂತ್ರ ಕೃತಿಗಳಲ್ಲ; ಹಾಗೆಯೇ ವಚನ

ಸಾಹಿತ್ಯ ಸಂಪಾದನೆಗಳಲ್ಲಿ ಸೇರಿದ ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫ ಅದೇ ಭಾಗಕ್ಕೆ ಸೇರಿದ ವಚನಶಾಸ್ತ್ರಸಾರದ ಪುನರ್ ಮುದ್ರಣವಾಗಿದೆ. ಕಾವ್ಯ ಸಂಪಾದನೆಗಳಲ್ಲಿ ಸೇರಿದ 'ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು' ಹರಿಹರನ ರಗಳೆಗಳು ಗ್ರಂಥದಿಂದ ಆಯ್ದ ಸಂಗ್ರಹರೂಪದ ಕೃತಿಯಾಗಿದೆ. ಜೀವನ ಚರಿತ್ರೆ ಭಾಗದಲ್ಲಿ ಸೇರಿದ 'ಶಿವಾನುಭವ ಪತ್ರಿಕೆ' ಎಂಬುದನ್ನು 'ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ'ಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ೧೪ ಕೃತಿಗಳನ್ನು ಕೈಬಿಟ್ಟರೆ ಕಲಬುರ್ಗಿ ಅವರ ಒಟ್ಟು ಕೃತಿಗಳ ಸಂಖ್ಯೆ ೧೦೨ ಆಗುತ್ತದೆ.

ಡಾ. ಎಂ. ಎಂ. ಕಲಬುರ್ಗಿ ಅವರು ತಮ್ಮ ಬಿಡಿ ಬರಹ (ಸಂಪ್ರಬಂಧ-ಲೇಖನ)ಗಳನ್ನು 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ (ಇವುಗಳಲ್ಲಿ ೭ ಮತ್ತು ೮ ಎರಡು ಸಂಪುಟಗಳು ಮರಣೋತ್ತರ ಪ್ರಕಟಿಸಿದವು) ಪ್ರಕಟಿಸಿದ್ದಾರೆ. ಅವುಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂಪ್ರಬಂಧಗಳು, ಸಂಪಾದಿತ ಕೃತಿಗಳಿಗೆ ಬರೆದ ಪ್ರಸ್ತಾವನೆ, ಅರಿಕೆ, ಇತರರ ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ವ್ಯಕ್ತಿಚಿತ್ರ, ಭಾಷಣ, ಸಂದರ್ಶನ, ಸಂಪಾದಕೀಯ, ಕೃತಿ ವಿಮರ್ಶೆ, ಇತ್ಯಾದಿ ಸಮಾವೇಶಗೊಂಡಿವೆ. ಇವುಗಳನ್ನು ಆಧರಿಸಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಆಯ್ಕೆ ಮಾಡಿ ಕೆಲವು ಪ್ರತ್ಯೇಕ ಕೃತಿಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ಸ್ವತಃ ಕಲಬುರ್ಗಿಯವರೇ ಮಾಡುತ್ತ ಬಂದಿದ್ದಾರೆ. ಮೇಲೆ ಹೆಸರಿಸಿದ ೧೧ ಕೃತಿಗಳು ಆ ಮಾದರಿಯವು. ಅಲ್ಲದೆ ಇತರರಿಗೂ ಅಂಥ ಆಯ್ದ ಲೇಖನಗಳ ಸಂಗ್ರಹಗಳನ್ನು ಸಿದ್ಧಪಡಿಸಲು ಅವರು ಪ್ರೇರಣೆ ನೀಡಿದ್ದಾರೆ. ಹಾಗೆ ರೂಪಿತವಾದ ೧೬ ಕೃತಿಗಳು ಈ ಕೆಳಗಿನಂತಿವೆ :

ಜಂಗಮದಿಂದ ಸ್ಥಾವರಕ್ಕೆ (ಡಾ. ಮೃತ್ಯುಂಜಯ ರುಮಾಲೆ), ಹಾಲುಮತ ಅಧ್ಯಯನಗಳು (ಡಾ. ಎಫ್.ಟಿ. ಹಳ್ಳಿಕೇರಿ), ನಾಟಕದ ನೆಲೆಗಳು (ಡಾ. ರಾಮಕೃಷ್ಣ ಮರಾಠೆ), ಪಂಪನ ಅಧ್ಯಯನಗಳು (ಡಾ. ಎನ್. ಎಸ್. ತಾರಾನಾಥ), ಕನ್ನಡ ಭಾಷಾವಲೋಕನ (ಡಾ. ಎಸ್. ಎಸ್. ಅಂಗಡಿ), ಛಂದಸ್ಸಿನ ಅಧ್ಯಯನದ ನೆಲೆಗಳು (ಡಾ. ಎಸ್. ಎಸ್. ಅಂಗಡಿ), ಬಸವಣ್ಣ ಮತ್ತು... (ಡಾ. ನಂದೀಶ ಹಂಚೆ), ಸಿದ್ಧರಾಮ ಮತ್ತು...(ಡಾ. ಎಸ್.ಕೆ. ಕೊಪ್ಪ), ರೇವಣಸಿದ್ಧ ಮತ್ತು... (ಡಾ. ಕೆ. ರವೀಂದ್ರನಾಥ), ಶರಣರು ಮತ್ತು...(ಡಾ. ವಿ.ಎಸ್. ಮಾಳಿ), ಗ್ರಂಥಸಂಪಾದನ ವ್ಯಾಸಂಗ (ಡಾ. ವಾಯ್.ಸಿ. ಭಾನುಮತಿ), ಜೈನ ಅಧ್ಯಯನಗಳು (ಡಾ. ಶಾಂತಿನಾಥ ದಿಬ್ಬದ), ನಾಮವ್ಯಾಸಂಗ (ಡಾ. ಎಚ್. ಶಶಿಕಲಾ), ಮಹಾಮರಣ(ಡಾ. ಜೆ. ಎಂ. ನಾಗಯ್ಯ), ಇತಿಹಾಸ ಮತ್ತು... (ಡಾ. ಎನ್.ಎಸ್. ಮಹಾಂತೇಶ), ಸಂಘರ್ಷದ ನೆಲೆಗಳು (ಡಾ. ಪಿ.ಕೆ. ರಾಠೋಡ).

ಇವುಗಳನ್ನು ಗಮನಿಸಿದರೆ ಡಾ. ಕಲಬುರ್ಗಿ ಅವರ ಅಧ್ಯಯನದ ವ್ಯಾಪ್ತಿ, ಬರವಣಿಗೆಯ ಹರಹು, ಅದಕ್ಕಾಗಿ ಅವರು ತೋರಿದ ನಿಷ್ಠೆ, ಪಟ್ಟ ಪರಿಶ್ರಮ, ವಹಿಸಿದ ತಾಳ್ಮೆ, ತನ್ಮೂಲಕ ಈ ಕ್ಷೇತ್ರದಲ್ಲಿ ಅವರು ಏರಿದ ಎತ್ತರ, ಪಡೆದ ಪ್ರಸಿದ್ಧಿ, ನೀಡಿದ ಕೊಡುಗೆ ಎಲ್ಲವೂ ಏಕಕಾಲಕ್ಕೆ ಕಣ್ಣ ಮುಂದೆ ಬಂದು ನಿಲ್ಲುತ್ತವೆ.

ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ :

ಡಾ. ಎಂ. ಎಂ. ಕಲಬುರ್ಗಿ ಅವರ ಈ ಸಮೃದ್ಧ ಸಾಹಿತ್ಯವನ್ನು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯೊಂದನ್ನು ವಿಜಯಪುರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ-

ಕರ್ನಾಟಕ ಸರ್ಕಾರದ ಧನ ಸಹಾಯದಿಂದ–ಕೈಗೆತ್ತಿಕೊಂಡಿತು. ಯೋಜನೆಯ ವ್ಯವಸ್ಥಿತ ಪೂರೈಕೆಗಾಗಿ ಎಂಟು ಜನರ ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಶ್ರೀ ಎಂ.ಬಿ. ಪಾಟೀಲ ಅವರನ್ನು ಗೌರವಾಧ್ಯಕ್ಷರೆಂದು, ಶ್ರೀ ಜಿ.ಕೆ.ಪಾಟೀಲ ಅವರನ್ನು ಅಧ್ಯಕ್ಷರೆಂದು, ಡಾ. ಎಂ.ಎಸ್. ಮದಭಾವಿ ಅವರನ್ನು ಕಾರ್ಯದರ್ಶಿಯೆಂದು, ಡಾ. ವೀರಣ್ಣ ರಾಜೂರ ಅವರನ್ನು ಪ್ರಧಾನ ಸಂಪಾದಕರೆಂದು, ಡಾ. ಕೃಷ್ಣಕೊಲ್ಹಾರ ಕುಲಕರ್ಣಿ ಅವರನ್ನು ಯೋಜನಾ ಸಂಯೋಜಕರೆಂದು, ಡಾ. ಗುರುಲಿಂಗ ಕಾಪಸೆ, ಶ್ರೀ ವಿಜಯ ಕಲಬುರ್ಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಸದಸ್ಯರೆಂದು ಗುರುತಿಸಲಾಯಿತು.

ಸಲಹಾ ಸಮಿತಿ ೧೪–೭–೨೦೧೭ ರಂದು ತನ್ನ ಮೊದಲ ಸಭೆ ಕರೆಯಿತು. ಅದರಲ್ಲಿ ಭಾಗವಹಿಸಲು ನಾಡಿನ ಹಲವು ವಿದ್ವಾಂಸರನ್ನು ಆಹ್ವಾನಿಸಿತು. ಅವರೆಲ್ಲರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣೆಯ ರೂಪ–ರೇಷೆ, ಸಂಪುಟಗಳ ಸ್ವರೂಪ, ಸಂಪಾದಕರ ಆಯ್ಕೆ ಕುರಿತು ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿತು. ಅದನ್ನು ಪ್ರಧಾನ ಸಂಪಾದಕರಿಗೆ ಒಪ್ಪಿಸಿ, ಅಂತಿಮ ಸ್ವರೂಪ ಕೊಡಲು ತಿಳಿಸಿತು.

೨೩–೯–೨೦೧೭ ರಂದು ಪ್ರಧಾನ ಸಂಪಾದಕರು ಎರಡನೆಯ ಸಭೆ ಕರೆದರು, ಯೋಜನೆಯ ಒಟ್ಟು ಸ್ವರೂಪವನ್ನು ೫ ಅಂಶಗಳಲ್ಲಿ ಅಳವಡಿಸಿ ಕೆಳಗಿನಂತೆ ನಿರೂಪಿಸಿದರು.

೧. ಡಾ. ಕಲಬುರ್ಗಿ ಅವರ ಒಟ್ಟು ಸಾಹಿತ್ಯವನ್ನು (ಪ್ರಕಟಿತ–ಅಪ್ರಕಟಿತ)೪೦ ಸಂಪುಟಗಳಲ್ಲಿ ಪ್ರಕಟಿಸುವುದು. ಅವುಗಳ ಸಂಪಾದನ ಕಾರ್ಯವನ್ನು ಒಟ್ಟು ೧೬ ಜನ ವಿದ್ವಾಂಸರಿಗೆ ವಹಿಸುವುದು.

೨. ಒಟ್ಟು ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸುವುದು.

೩. ಸ್ವತಂತ್ರ ಮತ್ತು ಪ್ರಾಚೀನ ಗ್ರಂಥ ಸಂಪಾದನ ಕೃತಿಗಳನ್ನು ಮಾತ್ರ ಪ್ರಕಟಣೆಗೆ ಆಯ್ದುಕೊಳ್ಳುವುದು. ಆಧುನಿಕ ಸಂಪಾದಿತ ಕೃತಿಗಳನ್ನು (ವಿಚಾರ ಸಂಕಿರಣಗಳಲ್ಲಿ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಗ್ರಹ), ಅಭಿನಂದನ ಗ್ರಂಥಗಳನ್ನು ಕೈಬಿಡುವುದು.

೪. ಒಂದೊಂದು ಸಂಪುಟದ ವ್ಯಾಪ್ತಿಯನ್ನು ೫೦೦ ಪುಟಗಳಿಗೆ ಮಿತಿಗೊಳಿಸುವುದು.

೫. ಎರಡು ವರ್ಷಗಳ ಕಾಲಾವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ೨೦೧೯ ನವ್ಹೆಂಬರ್ ೨೮ ರಂದು ಎಲ್ಲ ಸಂಪುಟಗಳನ್ನು ಏಕಕಾಲಕ್ಕೆ ಬಿಡುಗಡೆಗೊಳಿಸುವುದು.

ಒಟ್ಟು ಸಂಪುಟಗಳ ವಿಸ್ತೃತ ಸ್ವರೂಪ ಹೀಗಿದೆ :

ನಾಲ್ವತ್ತು ಸಂಪುಟಗಳನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಸ್ವತಂತ್ರ ಕೃತಿ ಸಂಪುಟಗಳು, ಸಂಪಾದಿತ ಕೃತಿ ಸಂಪುಟಗಳು, ಲೇಖನ ಸಾಹಿತ್ಯ ಸಂಪುಟಗಳು ಮತ್ತು ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಮತ್ತೆ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಸಂಶೋಧನ ಸಾಹಿತ್ಯ, ಜನಪದ ಸಾಹಿತ್ಯ ಮತ್ತು ಸೃಜನ ಸಾಹಿತ್ಯ ಎಂದು ನಾಲ್ಕು ವಿಭಾಗಗಳನ್ನು ಕಲ್ಪಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂಪಾದಿತ ಕೃತಿಗಳನ್ನು ಶಾಸನ ಸಾಹಿತ್ಯ, ದಾಖಲು ಸಾಹಿತ್ಯ, ವಚನ ಸಾಹಿತ್ಯ, ಕಾವ್ಯ ಸಾಹಿತ್ಯ ಮತ್ತು ಜೀವನ ಚರಿತ್ರ ಸಾಹಿತ್ಯ ಎಂದು ವಿಭಜಿಸಲಾಗಿದೆ. ಮೂರನೆಯದಾದ ಲೇಖನ ಸಂಪುಟಗಳಲ್ಲಿ ಶಾಸನ ಸಾಹಿತ್ಯ,

ಶಾಸ್ತ್ರ ಸಾಹಿತ್ಯ, ವಚನಸಾಹಿತ್ಯ, ಕಾವ್ಯಸಾಹಿತ್ಯ ಮತ್ತು ವ್ಯಕ್ತಿಚಿತ್ರಣ, ಮುನ್ನುಡಿ, ಬೆನ್ನುಡಿ, ಅರಿಕೆ, ಭಾಷಣ, ಸಂದರ್ಶನ ಎಂದು ಐದು ಭಾಗಗಳನ್ನು ಮಾಡಲಾಗಿದೆ. ಕೊನೆಯದಾದ ಪ್ರಾತ್ಯಕ್ಷಿಕೆ ಸಂಪುಟಗಳಲ್ಲಿ ಚಿತ್ರ, ಪತ್ರ-ವರದಿಗಳು, ಆಡಿಯೋ-ವಿಡಿಯೋ ಎಂದು ಮೂರು ಭಾಗಗಳನ್ನು ಯೋಜಿಸಲಾಗಿದೆ.

ಸಂಪುಟಗಳು, ಅದರಲ್ಲಿ ಅಳವಟ್ಟ ಕೃತಿಗಳು ಮತ್ತು ಸಂಪಾಕರ ವಿವರ ಕೆಳಗಿನಂತಿದೆ:

I. ಸ್ವತಂತ್ರ ಕೃತಿ ಸಂಪುಟಗಳು

ಸಂಪುಟ ೧ : ಶಾಸನ ಸಾಹಿತ್ಯ **–ಸಂ. ಡಾ. ಎಸ್.ಕೆ. ಕೊಪ್ಪಾ**

೧. ಬಸವಣ್ಣನವರನ್ನು ಕುರಿತ ಶಾಸನಗಳು
೨. ಶಾಸನಗಳಲ್ಲಿ ಶಿವಶರಣರು
೩. ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು
೪. ಮಹಾರಾಷ್ಟ್ರದ ಕನ್ನಡ ಶಾಸನಗಳು

ಸಂಪುಟ ೨ : ಶಾಸ್ತ್ರ ಸಾಹಿತ್ಯ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಕನ್ನಡ ಗ್ರಂಥಸಂಪಾದನಶಾಸ್ತ್ರ
೨. ಪ್ರತಿಬಿಂಬ
೩. ಸಾಹಿತ್ಯ ಸಂಪಾದನೆ
೪. ಕನ್ನಡ ನಾಮವಿಜ್ಞಾನ
೫. ಕನ್ನಡ ಸಂಶೋಧನಶಾಸ್ತ್ರ
೬. ಕನ್ನಡ ಹಸ್ತಪ್ರತಿಶಾಸ್ತ್ರ

ಸಂಪುಟ ೩ : ಸಂಶೋಧನ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ

ಸಂಪುಟ : ೪ ಜನಪದ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ
೨. ಜನಪದ ಮಾರ್ಗ

ಸಂಪುಟ : ೫ ಸೃಜನ ಸಾಹಿತ್ಯ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ನೀರು ನೀರಡಿಸಿತ್ತು (ಕವನ ಸಂಕಲನ)
೨. ನೀರಾಗ ನಿಂತೀನಿ ನೀರಡಿಸಿ (ಕವನ ಸಂಕಲನ)
೩. ಕೆಟ್ಟಿತ್ತು ಕಲ್ಯಾಣ (ನಾಟಕ)
೪. ಖರೇ ಖರೇ ಸಂಗ್ಯಾಬಾಳ್ಯಾ (ನಾಟಕ)
೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ)

II. ಸಂಪಾದಿತ ಕೃತಿ ಸಂಪುಟಗಳು

ಸಂಪುಟ ೬ : ಶಾಸನ ಸಾಹಿತ್ಯ **–ಸಂ. ಡಾ. ಎಸ್. ಕೆ. ಕೊಪ್ಪಾ**

೧. ಶಾಸನ ಸಂಪದ
೨. ಧಾರವಾಡ ಜಿಲ್ಲೆಯ ಶಾಸನ ಸೂಚಿ
೩. ವಿಜಾಪುರ ಜಿಲ್ಲೆಯ ಶಾಸನ ಸೂಚಿ
೪. ಧಾರವಾಡ ತಾಲೂಕಿನ ಶಾಸನಗಳು
೫. ಶಾಸನ ಸೂಕ್ತಿಸುಧಾರ್ಣವ

ಸಂಪುಟ : ೭ ದಾಖಲು ಸಾಹಿತ್ಯ : ಭಾಗ–೧ **–ಸಂ. ಡಾ. ಪಂಡಿತ ರಾಠೋಡ**

೧. ಕರ್ನಾಟಕದ ಕೈಫಿಯತ್ತುಗಳು

ಸಂಪುಟ : ೮ ದಾಖಲು ಸಾಹಿತ್ಯ : ಭಾಗ– ೨ **–ಸಂ. ಡಾ. ಪಂಡಿತ ರಾಠೋಡ**

೧. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ
ಜೈನ ಬಸದಿ ಹಸ್ತಪ್ರತಿಸೂಚಿ
೨. ವಚನ ಸಾಹಿತ್ಯ ಆಕರ ಕೋಶ
೩. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧

ಸಂಪುಟ : ೯ ವಚನ ಸಾಹಿತ್ಯ : ಭಾಗ–೧ **–ಸಂ. ಡಾ. ವೀರಣ್ಣ ರಾಜೂರ**

೧. ಬಸವಸ್ತೋತ್ರದ ವಚನಗಳು
೨. ಬಸವಣ್ಣನವರ ವಚನ ಸಂಪುಟ

ಸಂಪುಟ : ೧೦ ವಚನ ಸಾಹಿತ್ಯ : ಭಾಗ–೨ **–ಸಂ. ಡಾ. ಗುರುಲಿಂಗ ಕಾಪಸೆ**

೧. ಚೆನ್ನಬಸವಣ್ಣನವರ ವಚನ ಮಹಾಸಂಪುಟ
೨. ಸಿದ್ಧರಾಮಯ್ಯದೇವರ ವಚನಗಳು

ಸಂಪುಟ : ೧೧ ವಚನ ಸಾಹಿತ್ಯ : ಭಾಗ–೩ **–ಸಂ. ಡಾ. ವೀರಣ್ಣ ರಾಜೂರ**

೧. ಸಂಕೀರ್ಣ ವಚನ ಸಂಪುಟ

ಸಂಪುಟ : ೧೨ ವಚನ ಸಾಹಿತ್ಯ : ಭಾಗ–೪ **–ಸಂ. ಡಾ. ವೀರಣ್ಣ ರಾಜೂರ**

೧. ವಚನ

ಸಂಪುಟ : ೧೩ ವಚನ ಸಾಹಿತ್ಯ : ಭಾಗ–೫ **–ಸಂ. ಡಾ. ವೀರಣ್ಣ ರಾಜೂರ**

೧. ಶೂನ್ಯಸಂಪಾದನೆ

ಸಂಪುಟ : ೧೪ ವಚನ ಸಾಹಿತ್ಯ : ಭಾಗ–೬ **–ಸಂ. ಡಾ. ವೀರಣ್ಣ ರಾಜೂರ**

೧. ಪರಮಾನಂದ ಸುಧೆ

೨. ಏಕೋತ್ತರಶತಸ್ಥಲ

ಸಂಪುಟ : ೧೫ ವಚನ ಸಾಹಿತ್ಯ : ಭಾಗ–೭ **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೧

ಸಂಪುಟ : ೧೬ ವಚನ ಸಾಹಿತ್ಯ : ಭಾಗ–೮ **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೨

ಸಂಪುಟ : ೧೭ ವಚನ ಸಾಹಿತ್ಯ : ಭಾಗ–೯ **–ಸಂ. ಶಶಿಧರ ತೋಡ್ಕರ**

೧. ವಚನ ಸಂಕಲನ–೪

೨. ವಚನ ಸಂಕಲನ–೬

೩. ವಚನ ವರ್ಷ

ಸಂಪುಟ : ೧೮ ವಚನ ಸಾಹಿತ್ಯ : ಭಾಗ–೧೦ **–ಸಂ. ಡಾ. ವೀರಣ್ಣ ರಾಜೂರ**

೧. ವಚನಶಾಸ್ತ್ರಸಾರ(ಸಂಪುಟ–೧)

ಸಂಪುಟ : ೧೯ ಕಾವ್ಯ ಸಾಹಿತ್ಯ : ಭಾಗ–೧ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೧

ಸಂಪುಟ : ೨೦ ಕಾವ್ಯ ಸಾಹಿತ್ಯ : ಭಾಗ–೨ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೨

ಸಂಪುಟ: ೨೧ ಕಾವ್ಯ ಸಾಹಿತ್ಯ : ಭಾಗ–೩ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಮಲ್ಲಿನಾಥ ಪುರಾಣ ಸಂಗ್ರಹ

೨. ಶಬ್ದಮಣಿದರ್ಪಣ ಸಂಗ್ರಹ

೩. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ

೪. ಆದಯ್ಯನ ಲಘುಕೃತಿಗಳು

೫. ಕೊಂಡಗುಳಿ ಕೇಶಿರಾಜನ ಕೃತಿಗಳು

ಸಂಪುಟ: ೨೨ ಕಾವ್ಯ ಸಾಹಿತ್ಯ : ಭಾಗ–೪ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ಷಟ್‌ಸ್ಥಲ ಶಿವಾಯಣ
೨. ಶಿವಯೋಗ ಪ್ರದೀಪಿಕಾ

ಸಂಪುಟ: ೨೩ ಕಾವ್ಯ ಸಾಹಿತ್ಯ : ಭಾಗ–೫ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ತಗರ ಪವಾಡ
೨. ಸಿದ್ಧಮಂಕ ಚರಿತೆ
೩. ಗುಂಡಬಸವೇಶ್ವರ ಪುರಾಣ
೪. ಕೊಡೆಕಲ್ಲ ವಚನ ವಾಕ್ಯ

ಸಂಪುಟ: ೨೪ ಕಾವ್ಯ ಸಾಹಿತ್ಯ : ಭಾಗ–೬ **–ಸಂ. ಡಾ. ಹನುಮಂತ ಮೇಲಿನಮನಿ**

೧. ಹೊಸಕುಮಾರರಾಮನ ಸಾಂಗತ್ಯ
೨. ಹಳೆಯಕುಮಾರ ರಾಮನ ಸಾಂಗತ್ಯ

ಸಂಪುಟ: ೨೫ ಕಾವ್ಯ ಸಾಹಿತ್ಯ : ಭಾಗ–೭ **–ಸಂ. ಡಾ. ಹನುಮಂತ ಮೇಲಿನಮನಿ**

೧. ಕೊಮಾರ ರಾಮಯ್ಯನ ಚರಿತ್ರೆ
೨. ಬಾಲರಾಮಯ್ಯನ ಸಾಂಗತ್ಯ

ಸಂಪುಟ: ೨೬ ಕಾವ್ಯ ಸಾಹಿತ್ಯ : ಭಾಗ–೮ **–ಸಂ. ಡಾ. ಸರಸ್ವತಿದೇವಿ ಭಗವತಿ**

೧. ಸಿರುಮಣ ನಾಯಕನ ಸಾಂಗತ್ಯ
೨. ಸಿರುಮನ ಚರಿತೆ
೩. ಗೊಲ್ಲ ಸಿರುಮನ ಚರಿತೆ

ಸಂಪುಟ: ೨೭ ಕಾವ್ಯ ಸಾಹಿತ್ಯ : ಭಾಗ–೯ **–ಸಂ. ಡಾ. ಸರಸ್ವತಿದೇವಿ ಭಗವತಿ**

೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ
೨. ನಿಂಬಸಾಮಂತ ಚರಿತೆ

ಸಂಪುಟ: ೨೮ ಕಾವ್ಯ ಸಾಹಿತ್ಯ : ಭಾಗ–೧೦ **–ಸಂ. ಡಾ. ಎಂ ಎಸ್. ಮದಭಾವಿ**

೧. ಕಿತ್ತೂರ ಸಂಸ್ಥಾನ ಸಾಹಿತ್ಯ–೧
೨. ಕಿತ್ತೂರ ಸಂಸ್ಥಾನ ಸಾಹಿತ್ಯ–೨
೩. ಕಿತ್ತೂರ ಸಂಸ್ಥಾನ ಸಾಹಿತ್ಯ–೩

ಸಂಪುಟ: ೨೯ ಜೀವನ ಚರಿತ್ರೆ ಸಾಹಿತ್ಯ : ಭಾಗ–೧ **–ಸಂ. ಡಾ. ಎಂ ಎಸ್. ಮದಭಾವಿ**

೧. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ
೨. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ
೩. ಮಡಿವಾಳಪ್ಪ ಸಾಸನೂರ ಬದುಕು–ಬರಹ

ಸಂಪುಟ: ೩೦ ಜೀವನ ಚರಿತ್ರೆ ಸಾಹಿತ್ಯ : ಭಾಗ-೨ **-ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ**

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೧

ಸಂಪುಟ: ೩೧ ಜೀವನ ಚರಿತ್ರೆ ಸಾಹಿತ್ಯ : ಭಾಗ-೩ **-ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ**

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೨

ಸಂಪುಟ: ೩೨ ಜೀವನ ಚರಿತ್ರೆ ಸಾಹಿತ್ಯ : ಭಾಗ-೪ **-ಸಂ. ಡಾ. ವಿ.ಎಸ್. ಮಾಳಿ**

೧. ಅರಟಾಳ ರುದ್ರಗೌಡರ ಚರಿತ್ರೆ

III. ಲೇಖನ ಸಾಹಿತ್ಯ ಸಂಪುಟಗಳು(ಮಾರ್ಗ ಸಂಪುಟಗಳು)

ಸಂಪುಟ: ೩೩. ಲೇಖನ ಸಾಹಿತ್ಯ : ಭಾಗ-೧ **-ಸಂ. ಡಾ. ಕೆ. ರವೀಂದ್ರನಾಥ**

ಶಾಸನ ಸಾಹಿತ್ಯ

ಸಂಪುಟ: ೩೪. ಲೇಖನ ಸಾಹಿತ್ಯ : ಭಾಗ-೨ **-ಸಂ. ಡಾ. ಕೆ. ರವೀಂದ್ರನಾಥ**

ಶಾಸ್ತ್ರ ಸಾಹಿತ್ಯ

ಸಂಪುಟ: ೩೫. ಲೇಖನ ಸಾಹಿತ್ಯ : ಭಾಗ-೩ **-ಸಂ. ಡಾ. ಕೆ. ರವೀಂದ್ರನಾಥ**

ವಚನ ಸಾಹಿತ್ಯ

ಸಂಪುಟ: ೩೬. ಲೇಖನ ಸಾಹಿತ್ಯ : ಭಾಗ-೪ **-ಸಂ. ಡಾ. ಕೆ. ರವೀಂದ್ರನಾಥ**

ಕಾವ್ಯ ಸಾಹಿತ್ಯ

ಸಂಪುಟ: ೩೭. ಲೇಖನ ಸಾಹಿತ್ಯ : ಭಾಗ-೫ **-ಸಂ. ಡಾ. ಕೆ. ರವೀಂದ್ರನಾಥ**

ವ್ಯಕ್ತಿಚಿತ್ರಣ-ಮುನ್ನುಡಿ-ಬೆನ್ನುಡಿ
ಅರಿಕೆ-ಭಾಷಣ-ಸಂದರ್ಶನ

IV. ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು

ಸಂಪುಟ : ೩೮-ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ-೧ **-ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**

ಚಿತ್ರ **-ಡಾ. ವಿ.ಡಿ. ಐಹೊಳ್ಳಿ**

ಸಂಪುಟ : ೩೯–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೨ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಪತ್ರ–ವರದಿಗಳು **–ಡಾ. ವಿ.ಡಿ. ಐಹೊಳ್ಳಿ**

ಸಂಪುಟ : ೪೦–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೩ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಆಡಿಯೋ–ವಿಡಿಯೋ **–ಡಾ. ವಿ.ಡಿ. ಐಹೊಳ್ಳಿ**

ಹೀಗೆ ೪೦ ಸಂಪುಟಗಳಲ್ಲಿ ೭೯ ಕೃತಿಗಳನ್ನು ಅಳವಡಿಸಲಾಗಿದೆ. ಮಾರ್ಗ ಸಂಪುಟದಿಂದಾಯ್ದು ಡಾ. ಕಲಬುರ್ಗಿಯವರೇ ಸಿದ್ಧಪಡಿಸಿದ ೧೧ ಸಂಕಲನ ಕೃತಿಗಳನ್ನು, ಹರಿಹರನ ರಗಳೆ ಸಂಪುಟದಿಂದಾಯ್ದು ಸಿದ್ಧಪಡಿಸಿದ 'ಕನ್ನಡ ಶರಣರ ಕಥೆಗಳು' ಎಂಬ ಕೃತಿಯನ್ನು, ವಚನ ಶಾಸ್ತ್ರಸಾರದ ಪುನರ್ ಮುದ್ರಣವಾದ 'ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ–೫'ನ್ನು; 'ಶಿವಾನುಭವ ಪತ್ರಿಕೆ'ಯನ್ನು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ವಿವಿಧ ವಿದ್ವಾಂಸರ ಪ್ರಬಂಧಗಳ ಸಂಕಲನಗಳೆನಿಸಿದ ಆಧುನಿಕ ಸಂಪಾದಿತ ೧೪ ಕೃತಿಗಳನ್ನು ಮತ್ತು ೬ ಅಭಿನಂದನಗ್ರಂಥ, ಎರಡು ಇಂಗ್ಲಿಷ್‌ಗ್ರಂಥ ಹೀಗೆ ಒಟ್ಟು ೩೫ ಗ್ರಂಥಗಳನ್ನು–ಪುನರುಕ್ತಿಕಾರಣವಾಗಿ– ಈ ಸಂಪುಟಗಳಲ್ಲಿ ಸೇರಿಸದೆ ಕೈಬಿಡಲಾಗಿದೆ.

ಸಂಪುಟಗಳ ಸಂಯೋಜನೆಯಲ್ಲಿ ಈ ಕೆಳಗಿನ ಕ್ರಮವನ್ನು ಅನುಸರಿಸಲಾಗಿದೆ:

ಒಂದು ಕೃತಿ ೫೦೦ ಪುಟ ವ್ಯಾಪ್ತಿಯನ್ನು ಹೊಂದಿದ್ದರೆ ಅದನ್ನು ಒಂದು ಸ್ವತಂತ್ರ ಸಂಪುಟವೆಂದು ಪರಿಗಣಿಸಲಾಗಿದೆ(ಉದಾ: ಶೂನ್ಯಸಂಪಾದನೆ, ವಚನ). ಪುಟ ಸಂಖ್ಯೆ ಕಡಿಮೆ ಇದ್ದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಸೇರಿಸಿ ೫೦೦ ಪುಟಕ್ಕೆ ಹೊಂದುವಂತೆ ಜೋಡಿಸಲಾಗಿದೆ(ಉದಾ: ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರಾಮನ ಸಾಂಗತ್ಯ). ಹಾಗೆ ಜೋಡಿಸುವಲ್ಲಿ ವಿಷಯದ ಏಕತೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಒಂದು ಕೃತಿ ಸಾವಿರ ಅಥವಾ ಅದಕ್ಕಿಂತ ಹೆಚ್ಚು ಪುಟ ವ್ಯಾಪ್ತಿಯನ್ನು ಪಡೆದಿದ್ದರೆ, ಅದನ್ನು ಎರಡು ಭಾಗಗಳಾಗಿ ವಿಭಜಿಸಿ ಪ್ರತ್ಯೇಕ ಸಂಪುಟವೆಂದು ಗಣಿಸಲಾಗಿದೆ(ಉದಾ: ಬಸವಣ್ಣನವರ ಟೀಕಿನ ವಚನಗಳು, ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರು).

ಡಾ. ಕಲಬುರ್ಗಿ ಅವರ ಬಿಡಿ ಲೇಖನಗಳು (ಸಂಪ್ರಬಂಧಗಳು) ಮೂಲದಲ್ಲಿ 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ ಪ್ರಕಟವಾಗಿವೆ. ಕಾಲಕಾಲಕ್ಕೆ ಪ್ರಕಟವಾದ ಅವುಗಳಲ್ಲಿ ಒಂದೇ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಬೇರೆಬೇರೆ ಸಂಪುಟಗಳಲ್ಲಿ ಹಂಚಿ ಹೋಗಿವೆ. ಅವುಗಳನ್ನು ಒಂದೆಡೆ ತರುವ ಉದ್ದೇಶದಿಂದ ಎಲ್ಲ ಲೇಖನಗಳನ್ನು ವಿಷಯಾನುಗುಣವಾಗಿ ಮರುವರ್ಗೀಕರಣ ಮಾಡಿ ೫ ಸಂಪುಟಗಳಲ್ಲಿ ಅಳವಡಿಸಲಾಗಿದೆ. ಹಾಗೆ ಮಾಡುವಲ್ಲಿ ಮೂಲ ಮಾರ್ಗ ಸಂಪುಟ ೫ ರಲ್ಲಿ ಅಳವಡಿಸಿದ್ದ ಪ್ರಾಚೀನ ಸಂಪಾದಿತ ಕೃತಿಗಳ ಪ್ರಸ್ತಾವನೆಗಳನ್ನು–ಅವು ಅಯಾ ಕೃತಿಗಳಲ್ಲಿ ಅಲ್ಲಲ್ಲಿಯೇ ಪ್ರಕಟವಾಗುವುದರಿಂದ–ಕೈಬಿಡಲಾಗಿದೆ. ಆಧುನಿಕ ಸಂಪಾದಿತ ಕೃತಿಗಳು ಈ ಯೋಜನೆಯಿಂದ ಹೊರಗುಳಿದಿರುವುದರಿಂದ ಅವುಗಳ ಅರಿಕೆ, ಸಂಪಾದಕರ ಮಾತು, ಪ್ರಧಾನ ಸಂಪಾದಕರ ಮಾತು–ಇವುಗಳನ್ನು ಮಾತ್ರ ಹಾಗೇ ಉಳಿಸಿಕೊಳ್ಳಲಾಗಿದೆ. ಮರು ಹೊಂದಾಣಿಕೆ ಮಾಡಿದ ಲೇಖನಗಳ ಮೂಲ ಆಕರಗಳನ್ನು ಆಯಾ ಲೇಖನದ ಕೆಳಗೆ ನಮೂದಿಸಲಾಗಿದೆ.

ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳಲ್ಲಿ ಒಂದು–ಡಾ. ಕಲಬುರ್ಗಿಯವರಿಗೆ ಸಂಬಂಧಿಸಿದ ಚಿತ್ರ ಸಂಪುಟವಾಗಿದೆ. ಇದರಲ್ಲಿ ಅವರ ವೈಯಕ್ತಿಕ ಬದುಕು ಮತ್ತು ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಆಯ್ದ ಭಾವ ಚಿತ್ರಗಳನ್ನು ಅಳವಡಿಸಲಾಗಿದೆ. ಎರಡನೆಯದಾದ ಪತ್ರ–ವರದಿ ಸಂಪುಟದಲ್ಲಿ ಕಲಬುರ್ಗಿ ಅವರು ಇತರರಿಗೆ ಬರೆದ, ಇತರರು ಕಲಬುರ್ಗಿಯವರಿಗೆ ಬರೆದ ಮಹತ್ವದ ಪತ್ರಗಳನ್ನು ಮತ್ತು ಕಲಬುರ್ಗಿಯವರು ಭಾಗವಹಿಸಿದ ಕಾರ್ಯಕ್ರಮಗಳ ಪತ್ರಿಕಾ ವರದಿಗಳನ್ನು ಸಂಗ್ರಹಿಸಲಾಗಿದೆ. ಮೂರನೆಯ ಸಂಪುಟದಲ್ಲಿ ಕಲಬುರ್ಗಿ ಅವರನ್ನು ಕುರಿತ ಸಾಕ್ಷ್ಯಚಿತ್ರ, ದೂರದರ್ಶನ ಸಂದರ್ಶನ ಮತ್ತು ಭಾಷಣಗಳು; ಅವರ ನಾಟಕಗಳ ಪ್ರದರ್ಶನದ ಚಿತ್ರೀಕರಣ ಮಾಡಿದ ಆಡಿಯೋ–ವಿಡಿಯೋಗಳನ್ನು ಒಂದುಗೂಡಿಸಲಾಗಿದೆ.

ಡಾ. ಕಲಬುರ್ಗಿ ಅವರ ಕೃತಿಗಳಲ್ಲಿ ಕೆಲವು ಒಂದೇ ಮುದ್ರಣ ಕಂಡಿದ್ದರೆ, ಮತ್ತೆ ಕೆಲವು ಒಂದಕ್ಕಿಂತ ಹೆಚ್ಚು ಮುದ್ರಣ ಹೊಂದಿವೆ. ಹೀಗಾಗಿ ಈ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಎಲ್ಲ ಆವೃತ್ತಿಗಳನ್ನೂ ಅವಲೋಕಿಸಿ, ಕೊನೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಒಂದು ಕೃತಿಯಲ್ಲಿ ಒಪ್ಪೋಲೆ ಇದ್ದರೆ ಮೊದಲು ಅದನ್ನು ಸರಿಪಡಿಸಿಕೊಳ್ಳುವುದು. ಕೃತಿಯ ಅಥವಾ ಲೇಖನದ ಒಳಗೆ ಕೆಲವು ಭಾಗ ಅಥವಾ ಪುಟ ಅಥವಾ ಪದ–ವಾಕ್ಯ ಬಿಟ್ಟುಹೋಗಿದ್ದರೆ ಮೂಲ ಆವೃತ್ತಿಯನ್ನು ನೋಡಿ ಸೇರಿಸಿಕೊಳ್ಳುವುದು. ಅಕ್ಷರ ದೋಷಗಳನ್ನು ತಿದ್ದುಪಡಿಮಾಡುವುದು. ಅಡಿಟಿಪ್ಪಣಿ, ಅನುಬಂಧಗಳಲ್ಲಿ ವ್ಯತ್ಯಾಸಗಳಾಗಿದ್ದರೆ ಹೊಂದಾಣಿಕೆ ಮಾಡುವುದು. ಆಕರಗಳು ಬಿಟ್ಟು ಹೋಗಿದ್ದರೆ ಬೇರೆ ಮೂಲಗಳಿಂದ ಹುಡುಕಿ ಅಳವಡಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಆಯಾ ಸಂಪುಟಗಳ ಸಂಪಾದಕರು ತಮ್ಮ ತಮ್ಮ ಸಂಪುಟಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಶುದ್ಧರೂಪದಲ್ಲಿ ಸಿದ್ಧಪಡಿಸುವುದು. ಅನಂತರ ಆ ಸಂಪುಟದ ಸ್ವರೂಪ–ವಿಶೇಷತೆ ಕುರಿತು ನಾಲ್ಕಾರು ಪುಟದ ಸಂಪಾದಕರ ಮಾತು ಬರೆದು ಜೋಡಿಸುವುದು–ಇದು ಈ ಸಂಪುಟಗಳನ್ನು ರೂಪಿಸುವಲ್ಲಿ ಅನುಸರಿಸಿದ ವಿಧಾನ.

ಗ್ರಂಥ ವಿನ್ಯಾಸ ಕುರಿತಂತೆ–ಕೃತಿಯ ಆರಂಭದ ಪುಟಗಳು (ಪ್ರಿಲಿಮ್ಸ್) ಮುಗಿದು ಮೂಲ ಗ್ರಂಥ ಆರಂಭವಾಗುವಲ್ಲಿ ಮೊದಲ ಆವೃತ್ತಿಯ ಮೊದಲ ಪುಟವನ್ನು (ಕೃತಿಯ ಹೆಸರು, ಲೇಖಕರು/ಸಂಪಾದಕರು, ಪ್ರಕಾಶಕರು, ಪ್ರಕಟಣ ವರ್ಷಗಳನ್ನೊಳಗೊಂಡಂತೆ) ಹಾಗೆಯೇ ಇಟ್ಟುಕೊಳ್ಳಲಾಗಿದೆ. ಮೂಲದಲ್ಲಿನ ಪ್ರಕಾಶಕರ ಮಾತು, ಮುನ್ನುಡಿಗಳನ್ನು ತೆಗೆದುಹಾಕಿ ಲೇಖಕರ ಮಾತು, ಪ್ರಸ್ತಾವನೆಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಒಂದು ಸಂಪುಟದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಒಂದೊಂದು ಕೃತಿಯ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಪುಟ ಸಂಖ್ಯೆಯನ್ನು ಮಾತ್ರ ಮೊದಲಿನಿಂದ ಕೊನೆಯವರೆಗೆ ಬೆಳೆಸಲಾಗಿದೆ. ಪರಿವಿಡಿಯಲ್ಲಿ ಎಲ್ಲ ಕೃತಿಗಳ ವಿವರವನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಅಚ್ಚುಕಟ್ಟಾದ ವಿನ್ಯಾಸ, ಅರ್ಥಪೂರ್ಣ–ಆಕರ್ಷಕ ಮುಖಪುಟ, ದೋಷರಹಿತ ಸುಂದರ ಮುದ್ರಣ, ಭಾರವೆನಿಸದ ಗಾತ್ರ ಮತ್ತು ಸುಲಭವಾದ ಬೆಲೆಯಲ್ಲಿ ಡಾ. ಕಲಬುರ್ಗಿ ಅವರ ಅಮೂಲ್ಯವಾದ ಸಮಗ್ರ ಸಾಹಿತ್ಯ ಒಂದೆಡೆ ಎಲ್ಲರಿಗೂ ದೊರಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಅದನ್ನು ಬಹುಮಟ್ಟಿಗೆ ಈಡೇರಿಸಿದ್ದೇವೆ ಎಂಬ ತೃಪ್ತಿ ನಮ್ಮದಾಗಿದೆ.

ಕೃತಜ್ಞತೆಗಳು :

'ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ' ಕನ್ನಡದ ಒಂದು ಮಹತ್ವಾಕಾಂಕ್ಷೆಯ ಪ್ರತಿಷ್ಠಿತ ಗ್ರಂಥಪ್ರಕಟಣ ಯೋಜನೆ. ಇದನ್ನು ಯಶಸ್ವಿಯಾಗಿ ಪೂರೈಸುವಲ್ಲಿ ಹಲವಾರು ವ್ಯಕ್ತಿಗಳು ನೆರವಾಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ನೆನೆಯುವುದು ನನ್ನ ಪರಮ ಕರ್ತವ್ಯವೆಂದು ಭಾವಿಸಿದ್ದೇನೆ.

ಈ ಯೋಜನೆಗೆ ಅನುಮೋದನೆ ನೀಡಿ, ಧನ ಸಹಾಯ ಮಾಡಿದವರು ಕರ್ನಾಟಕ ಸರ್ಕಾರದ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ಧರಾಮಯ್ಯನವರು. ಅದಕ್ಕೆ ಪೂರ್ವಭಾವಿಯಾಗಿ ಸಹಾಯ ಮಾಡಿದವರು ಕನ್ನಡ ಮತ್ತು ಸಂಸ್ಕೃತಿ ಖಾತೆಯ ಸಚಿವರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು. ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರಲು ಮುಖ್ಯಮಂತ್ರಿಗಳ ಮನ ಒಲಿಸಿ ಹಣ ಬಿಡುಗಡೆ ಮಾಡಿಸುವುದರ ಜೊತೆಗೆ ತಮ್ಮ ಬಿಎಲ್‌ಡಿಇ ಸಂಸ್ಥೆಯ ಅಡಿಯಲ್ಲಿರುವ 'ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ'ದ ಮೂಲಕ ಇದು ಸಾಕಾರಗೊಳ್ಳಲು ಕಾರಣರಾದವರು ಕರ್ನಾಟಕ ಸರ್ಕಾರದ ಪ್ರಭಾವೀ ಗೃಹಸಚಿವರೂ, ಉತ್ಕಟ ಬಸವತತ್ವಾಭಿಮಾನಿಗಳೂ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ಹೋರಾಟದ ಮುಂಚೂಣಿ ನಾಯಕರೂ ಆದ ಮಾನ್ಯ ಶ್ರೀ ಎಂ.ಬಿ. ಪಾಟೀಲ ಅವರು. ಡಾ. ಎಂ. ಎಂ. ಕಲಬುರ್ಗಿ ಅವರ ಬಗೆಗೆ ಪಾಟೀಲರಿಗೆ ಅನನ್ಯವಾದ ಪ್ರೀತಿ–ವಿಶ್ವಾಸ–ಗೌರವ. ಅವರ ಮಾರ್ಗದರ್ಶನದಲ್ಲಿ ತಮ್ಮ ಬಿ.ಎಲ್.ಡಿ.ಇ. ಸಂಸ್ಥೆಯಿಂದ 'ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ', 'ಆದಿಲ್‌ಶಾಹಿ ಸಮಗ್ರ ಸಾಹಿತ್ಯ' ಪ್ರಕಟಿಸಿದ ಕೀರ್ತಿ ಅವರದು. ಈಗ ಕಲಬುರ್ಗಿ ಅವರ ಸಮಗ್ರ ಸಾಹಿತ್ಯ ಪ್ರಕಟಿಸುವ ಮೂಲಕ ಅವರಿಗೆ ತಮ್ಮ ಕೃತಜ್ಞತಾಪೂರ್ವಕ ಗೌರವ ಸಲ್ಲಿಸುತ್ತಿರುವುದು ಅಪೇಕ್ಷಣೀಯ ಉಪಕ್ರಮವೆನಿಸಿದೆ. ಶ್ರೀ ಎಂ.ಬಿ. ಪಾಟೀಲ ಅವರ ಈ ಕಾರ್ಯಕ್ಷಮತೆಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆ ನಿಗದಿತ ವೇಳೆಯಲ್ಲಿ ಸಮಯಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಪೂರ್ಣಗೊಳ್ಳಲು ಅರ್ಪಣಾಭಾವದಿಂದ ನಿರಂತರ ಶ್ರಮಿಸಿದವರು ಹಳಕಟ್ಟಿ ಸಂಶೋಧನ ಕೇಂದ್ರದ ಹಾಗೂ ಈ ಯೋಜನೆಯ ಕಾರ್ಯದರ್ಶಿಗಳಾದ ಡಾ. ಎಂ. ಎಸ್. ಮದಭಾವಿ ಮತ್ತು ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಹಾಗೂ ಸಂಶೋಧನ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗ. ಅವರ ಅವಿರತ ಪರಿಶ್ರಮಕ್ಕೆ ಅನಂತ ವಂದನೆಗಳು.

ಈ ಯೋಜನೆಗೆ ಬೇಕಾದ ಆಕರ ಸಾಮಗ್ರಿಯನ್ನು, ಅಂದರೆ ಗ್ರಂಥಗಳನ್ನು ಒದಗಿಸಿದವರು ಡಾ. ಎಂ. ಎಂ. ಕಲಬುರ್ಗಿ ಅವರ ಕುಟುಂಬವರ್ಗದವರು. ಈ ಸಂದರ್ಭದಲ್ಲಿ ಶ್ರೀಮತಿ ಉಮಾದೇವಿ ಕಲಬುರ್ಗಿ, ಶ್ರೀ ವಿಜಯ ಕಲಬುರ್ಗಿ ಮತ್ತು ರೂಪಾ ಕಲಬುರ್ಗಿ ಅವರು ಅನೇಕ ವಿಧದಲ್ಲಿ ಸಹಾಯ–ಸಹಕಾರ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಾವು ಚಿರಋಣಿಯಾಗಿದ್ದೇವೆ.

ಒಂದು ಯೋಜನೆ ನಿರೀಕ್ಷಿತ ಮಟ್ಟದಲ್ಲಿ ತೃಪ್ತಿಕರವಾಗಿ ಕೈಗೂಡಬೇಕಾದರೆ ಬದ್ಧತೆಯುಳ್ಳ ವಿದ್ವಾಂಸರ ನಿಶ್ಚಿತ ನೆರವು ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ. ಅಂಥ ೧೬ ಜನ ವಿದ್ವಾಂಸರು ನಮಗೆ ಸಂಪಾದಕರಾಗಿ ದೊರೆತುದು ಈ ಯೋಜನೆ ಸುಗಮವಾಗಿ ಪೂರ್ಣಗೊಳ್ಳಲು ಸಹಕಾರಿಯಾಗಿದೆ. ಅವರೆಲ್ಲರ ವಿದ್ವತ್ ಪ್ರೀತಿಗೆ, ಕಲಬುರ್ಗಿ ಸರ್ ಮೇಲಿನ ಅಭಿಮಾನಕ್ಕೆ ತುಂಬು ಹೃದಯದ ಅಭಿನಂದನೆಗಳು.

ಸಂಪುಟಗಳು ಸುಂದರವಾಗಿ-ಬಂಧುರವಾಗಿ ಹೊರಬರಲು ಕಾರಣರಾದವರು ಛಾಯಾಕ್ಷರ ಜೋಡಿಸಿ, ಗ್ರಂಥವಿನ್ಯಾಸಗೊಳಿಸಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಮುಖಪುಟ ರೂಪಿಸಿದ ಕೆ.ಕೆ. ಮಕಾಳಿ ಮತ್ತು ಮುದ್ರಣಗೊಳಿಸಿದ ಪ್ರಿಂಟ್‌ಪಾಯಿಂಟ್ ಮಾಲಿಕರಾದ ಬಸವರಾಜ ಪಾಟೀಲ(ಹೆಬ್ಬಾಳ) ಅವರು. ಇವರೆಲ್ಲರಿಗೆ ಅನಂತ ಕೃತಜ್ಞತೆಗಳು.

ಡಾ. ಕಲಬುರ್ಗಿ ಅವರು ಅನೇಕ ಯೋಜನೆಗಳ ಮಹಾಯೋಜಕರು. ಅವರು ನೆರವೇರಿಸಿದ ಹಲವಾರು ಯೋಜನೆಗಳಲ್ಲಿ ಜೊತೆಗೂಡಿ ಕೆಲಸ ಮಾಡುವ ಅವಕಾಶ ದೊರಕಿಸಿಕೊಂಡ ನನಗೆ ಈಗ ಅವರ ಸಮಗ್ರಸಾಹಿತ್ಯ ಪ್ರಕಟಣ ಯೋಜನೆಯ ಪ್ರಧಾನ ಸಂಪಾದಕನಾಗಿ ಕಾರ್ಯ ಮಾಡುವ ಯೋಗ ಒದಗಿ ಬಂದುದು ನನ್ನ ಬದುಕಿನ ಮಹಾಭಾಗ್ಯವೆಂದು ಭಾವಿಸಿದ್ದೇನೆ. ಈ ಕಾರ್ಯಗೌರವವನ್ನು ಆ ಗುರುವಿನ ದಿವ್ಯಚೇತನಕ್ಕೆ ವಿನಮ್ರವಾಗಿ ಅರ್ಪಿಸುತ್ತೇನೆ.

❖❖

*

ಸಂಯೋಜಕರ ನುಡಿ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಅಮೂಲ್ಯ ಸಾಹಿತ್ಯದ ಮೂಲಕ ನಾಡು, ನುಡಿ ಸೇವೆಗೈದು ದೇಶ–ವಿದೇಶದಲ್ಲಿ ದಟ್ಟವಾದ ಪ್ರಭಾವವನ್ನು ಬೀರಿದ ವ್ಯಕ್ತಿ. ೨೦ನೆಯ ಶತಮಾನದ ಉತ್ತರಾರ್ಧ ಹಾಗೂ ೨೧ನೆಯ ಶತಮಾನದ ಪೂರ್ವಾರ್ಧದ ಹೊಸ್ತಿಲಲ್ಲಿ ನಿಂತು ಸಾಹಿತ್ಯ ವಾರಸುದಾರರಿಗೆ ಮಾರ್ಗ ತೋರಿದ ಮಹಾನ್ ವಿದ್ವಾಂಸ, ಸಂಶೋಧಕ, ವಿಮರ್ಶಕ, ಚಿಂತಕ ಹಾಗೂ ಸಾಹಿತ್ಯದ ಆರಾಧಕರವರು.

ಇಂಥ ಅಪರೂಪದ ವ್ಯಕ್ತಿಯ ವ್ಯಕ್ತಿತ್ವದ ಬಹುಮುಖಗಳನ್ನು ಒಂದೆಡೆ ಸೇರಿಸಿ ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅಕ್ಷರ ಮಾಧ್ಯಮದಲ್ಲಿ ಬಂದ ಅವರ ಸಮಗ್ರ ಸಾಹಿತ್ಯವನ್ನು ವಿಷಯವಾರು ವಿಂಗಡಿಸಿ ೪೦ ಸಂಪುಟಗಳಲ್ಲಿ ಪ್ರಕಟಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

- ❖ ಅವರು ನುಡಿದ ಮಾತುಗಳು(ದೃಶ್ಯ ಮತ್ತು ಧ್ವನಿ) ರೇಡಿಯೊ, ದೂರದರ್ಶನದಲ್ಲಿ ಅಲ್ಲದೆ ಹಲವಾರು ಮಹತ್ವದ ಕಾರ್ಯಕ್ರಮಗಳಲ್ಲೂ ದಾಖಲಾಗಿವೆ. ಅವುಗಳನ್ನು ಇದ್ದ ರೀತಿಯಲ್ಲೆ ಸಂಗ್ರಹಿಸುವುದರ ಜೊತೆಗೆ, ಅವುಗಳನ್ನು ಅಕ್ಷರ ಮಾಧ್ಯಮಕ್ಕೆ ತಂದು ಸಂಪುಟ ರೂಪದಲ್ಲಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರ ವಿಪುಲವಾದ ಅಪ್ರಕಟಿತ ಸಾಹಿತ್ಯವು ಆತ್ಮಚರಿತ್ರೆಯ ರೂಪದ ದಿನಚರಿಯ ಪುಟಗಳಲ್ಲಿ ಲಭ್ಯವಿವೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಅದನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸುವುದು.
- ❖ ಐದು ದಶಕಗಳ ಕಾಲದಿಂದಲೂ ದಿನಪತ್ರಿಕೆಯಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅವರ ಲೇಖನಗಳನ್ನು ಮತ್ತು ಸಭೆ, ಸಮಾರಂಭಗಳಲ್ಲಿ ನೀಡಿರುವ ವಿದ್ವತ್ಪೂರ್ಣವಾದ ಮಾತುಗಳನ್ನು ಪತ್ರಿಕೆಯವರು ಪ್ರಕಟಿಸಿರುವುದುಂಟು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಸಾವಿರಾರು ವಿದ್ಯಾರ್ಥಿಗಳಿಗೆ, ಸಹೋದ್ಯೋಗಿ ಬಂಧುಗಳಿಗೆ, ವಿದ್ವಾಂಸರುಗಳಿಗೆ, ಗುರುಗಳಿಗೆ, ಮಠಮಾನ್ಯಗಳಿಗೆ ಅವರು ಹಲವಾರು ಪತ್ರಗಳನ್ನು ಬರೆದವರಾಗಿದ್ದಾರೆ. ಅವುಗಳೆಲ್ಲವನ್ನು ಒಂದೆಡೆ ಸೇರಿಸಿ ಪತ್ರ ಸಂಪುಟಗಳನ್ನು ಪ್ರಕಟಿಸುವುದು.

❖ ಸರಕಾರ ಮತ್ತು ಸರಕಾರೇತರ ಪ್ರತಿಷ್ಠಾನಗಳು, ಸಂಘ–ಸಂಸ್ಥೆಗಳು, ವಿಶ್ವವಿದ್ಯಾಲಯ ಇವುಗಳಲ್ಲಿ ಹಲವಾರು ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳು ಕನ್ನಡ ನಾಡು ಮತ್ತು ಹೊರನಾಡುಗಳಲ್ಲಿ ಚದುರಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಡಾ. ಕಲಬುರ್ಗಿಯವರ ಹಲವಾರು ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಸಂಶೋಧನಾತ್ಮಕ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಭಾಷಣಗಳು, ಉಪನ್ಯಾಸಗಳು, ಹಲವಾರು ವಿಚಾರಸಂಕಿರಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸಂಗ್ರಹಿಸುವುದಲ್ಲದೆ, ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಅವರ ಸಾವಿರಾರು ಶಿಷ್ಯವರ್ಗದ ಗ್ರಂಥಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಮಾರ್ಗದರ್ಶಕ ಟಿಪ್ಪಣಿಗಳು, ಪ್ರಸ್ತಾವನೆಗಳು ಮತ್ತು ಸಂಪಾದಕ ನುಡಿಗಳು ಇವುಗಳೆಲ್ಲವನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಡಾ. ಕಲಬುರ್ಗಿಯವರು ಜಾನಪದ ಸಾಹಿತ್ಯದಲ್ಲೂ ಅಪರೂಪದ ಕೆಲಸ ಮಾಡಿದ್ದಾರೆ. ಹಲವಾರು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ, ಪ್ರಕಟಿಸುವುದು.

❖ ಐದು ದಶಕಗಳ ಅವರ ನಿರಂತರ ಕಾರ್ಯಚಟುವಟಿಕೆಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಪುಟಗಳನ್ನು ಪ್ರಕಟಿಸುವುದು.

❖ ಅವರು ಬರೆದ, ರಂಗಪ್ರದರ್ಶನ ಕಂಡ ನಾಟಕಗಳನ್ನು ಪುನರ್ ಪ್ರದರ್ಶಿಸಿ ದೃಶ್ಯಮಾಧ್ಯಮದಲ್ಲಿ ಸೆರೆಹಿಡಿದು ಪ್ರಕಟಿಸುವುದು.

❖ ಮುಂದುವರೆದ ಈ ತಾಂತ್ರಿಕ ಯುಗದಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಅಂತರ್ಜಾಲಕ್ಕೆ ರವಾನಿಸುವುದು.

ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ಸುಮಾರು ೨ ದಶಕಗಳ ಸಂಶೋಧನ ಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಆದಿಲಶಾಹಿ ಕಾಲದ ಸಾಹಿತ್ಯವನ್ನು ೧೮ ಸಂಪುಟಗಳಲ್ಲಿ ಅನುವಾದಿಸಿ ಪ್ರಕಟಿಸಿದೆ. ೯ ವಿದ್ಯಾರ್ಥಿಗಳು ವಿವಿಧ ವಿಷಯದಲ್ಲಿ ಪಿಎಚ್.ಡಿ.ಪದವಿಯನ್ನು ಪಡೆದಿದ್ದಾರೆ. ಇನ್ನು ಕೆಲವರು ಪದವಿಯನ್ನು ಪಡೆಯುವ ದಾರಿಯಲ್ಲಿ ಇದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಈ ಯೋಜನೆಯ ಕರಡು ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿತು. ಈ ಯೋಜನೆಗೆ ಅನುದಾನ ನೀಡುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಅಧಿಕಾರಿಗಳು. ಇವರಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಯೋಜನೆಯಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರು, ನಾಡಿನ ಹಿರಿಯ ರಾಜಕಾರಣಿಗಳು ಆದ ಡಾ.ಎಂ.ಬಿ.ಪಾಟೀಲ ಗೌರವ ಅಧ್ಯಕ್ಷರಾಗಿ, ಶ್ರೀ ಜಿ.ಕೆ.ಪಾಟೀಲರು ಅಧ್ಯಕ್ಷರಾಗಿ,

ಡಾ. ಎಂ.ಎಸ್. ಮದಭಾವಿ ಕಾರ್ಯದರ್ಶಿಗಳಾಗಿ, ಡಾ. ವೀರಣ್ಣ ರಾಜೂರ ಪ್ರಧಾನ ಸಂಪಾದಕರಾಗಿ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಸಂಯೋಜಕರಾಗಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇವೆ.

ಪ್ರಸ್ತುತ ಸಂಪುಟದ ಸಂಪಾದಕರಾದ ಡಾ.ಎಫ್.ಟಿ.ಹಳ್ಳಿಕೇರಿ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಮತ್ತು ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟಿನ ಶ್ರೀ ಬಿ.ಸಿ.ಪಾಟೀಲ(ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಗೆ ಕೃತಜ್ಞತೆಗಳು.

❖❖

ಸಂಪಾದಕರ ನುಡಿ

ಡಾ. ಎಫ್.ಟಿ.ಹಳ್ಳಿಕೇರಿ

ಕನ್ನಡದ ಹತ್ತುಹಲವು ಅಧ್ಯಯನ ಶಿಸ್ತುಗಳಲ್ಲಿ "ಗ್ರಂಥಸಂಪಾದನೆ"ಯೂ ಒಂದು. ಆಧುನಿಕವಾಗಿ ಹತ್ತೊಂಬತ್ತನೆಯ ಶತಮಾನದ ನಡುಗಾಲದಲ್ಲಿ ಜನ್ಮ ತಳೆದ ಇದು ಇಂದು ಶಾಸ್ತ್ರಶುದ್ಧವಾಗಿ ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡು ಬೆಳೆದು ನಿಂತಿದೆ. ಮಿಷನರಿಗಳು ಬ್ರಿಟಿಷ ಅಧಿಕಾರಿಗಳು, ದೇಶಿ ಪಂಡಿತರು, ವಿದ್ವಾಂಸರು, ಸಂಶೋಧಕರ ಗ್ರಂಥಸಂಪಾದನೆಯ ಮೇಲಿನ ಆಸಕ್ತಿ, ವಿಸ್ತಾರವಾದ ಓದು ಕಾರಣವಾಗಿ ಭಾರತೀಯ ನೆಲೆಯಲ್ಲಿ ಕನ್ನಡ ಗ್ರಂಥಸಂಪಾದನೆಗೆ ವಿಶೇಷತೆ ಪ್ರಾಪ್ತವಾಗಿದೆ. ಹರ್ಮನ್ ಮೋಗ್ಲಿಂಗ್, ಬಿ.ಎಲ್.ರೈಸ್, ಎಫ್.ಕಿಟೆಲ್, ಎಸ್.ಜಿ.ನರಸಿಂಹಾಚಾರ್, ಫ.ಗು.ಹಳಕಟ್ಟಿ, ಡಿ.ಎಲ್. ನರಸಿಂಹಾಚಾರ್, ಎಂ.ಎಂ.ಕಲಬುರ್ಗಿ, ಬಿ.ಎಸ್.ಸಣ್ಣಯ್ಯ, ವೀರಣ್ಣ ರಾಜೂರ, ವೈ.ಸಿ.ಭಾನುಮತಿ ಮೊದಲಾದ ವಿದ್ವಾಂಸರು ಕನ್ನಡ ಗ್ರಂಥಸಂಪಾದನೆಯಲ್ಲಿ ಕೃಷಿ ಮಾಡಿದ್ದಾರೆ. ಆ ಮೂಲಕ ಕನ್ನಡ ಗ್ರಂಥಸಂಪಾದನೆ ಕ್ಷೇತ್ರದ ಕ್ಷಿತಿಜದ ವೈವಿಧ್ಯತೆಗೆ–ವಿಸ್ತಾರಕ್ಕೆ ಕಾರಣರಾಗಿದ್ದಾರೆ.

ಎಂ.ಎಂ.ಕಲಬುರ್ಗಿ, ಕನ್ನಡ ಗ್ರಂಥಸಂಪಾದನಶಾಸ್ತ್ರದಲ್ಲಿ ಬಹು ದೊಡ್ಡ ಹೆಸರು. ಕನ್ನಡ ಭಾಷೆ–ಸಾಹಿತ್ಯ–ಸಮಾಜ–ಸಂಸ್ಕೃತಿ–ಇತಿಹಾಸ ಮೊದಲಾದ ಕ್ಷೇತ್ರಗಳಲ್ಲಿ ಅಧ್ಯಯನ ಕೈಕೊಂಡು ಅನೇಕ ಹೊಸ ಹೊಸ ಸಂಗತಿಗಳನ್ನು ಶೋಧಿಸಿದವರು. ಆ ಮೂಲಕ ಕನ್ನಡ–ಕನ್ನಡಿಗ–ಕರ್ನಾಟಕತ್ವದ ಮಹತ್ವವನ್ನು ಜಗತ್ತಿಗೆ ತೋರಿಸಿಕೊಟ್ಟ ಮಹಾನ್ ಸಂಶೋಧಕ. ಕಳೆದ ಐವತ್ತು ವರ್ಷಗಳಲ್ಲಿ ಅವರು ಕೈಕೊಂಡ ಸಂಶೋಧನೆಯ ವ್ಯಾಪ್ತಿ ವಿಶಿಷ್ಟವಾದುದು. ಗ್ರಂಥಸಂಪಾದನೆ, ಕಲಬುರ್ಗಿಯವರಿಗೆ ಪ್ರಥಮ ಆದ್ಯತೆ. ಗ್ರಂಥಸಂಪಾದನ ವಿಧಾನಗಳನ್ವಯ ಪ್ರಾಚೀನ ಕಾವ್ಯ–ಪುರಾಣಗಳ ಪರಿಷ್ಕರಣೆ, ವಿಶೇಷವಾಗಿ ಸ್ಥಳೀಯ ಚರಿತ್ರೆಯನ್ನು ನಿರೂಪಿಸುವಂಥ ಕೃತಿ(ಕುಮಾರರಾಮನ ಸಾಂಗತ್ಯಗಳು, ಸಿರುಮನ ಚರಿತೆಗಳು)ಗಳನ್ನು ಶೋಧಿಸಿ ಪರಿಷ್ಕರಿಸಿರುವುದು, ಕನ್ನಡ ಗ್ರಂಥಸಂಪಾದನೆಯನ್ನು ಶಾಸ್ತ್ರೀಯ ನೆಲೆ(ಕನ್ನಡ ಗ್ರಂಥಸಂಪಾದನಶಾಸ್ತ್ರ)ಯಲ್ಲಿ ರಚನೆ ಮಾಡಿರುವುದು ಕಲಬುರ್ಗಿಯವರ ವಿಶೇಷತೆಯಾಗಿದೆ.

ಕಲಬುರ್ಗಿಯವರ ಒಟ್ಟು ಕೃತಿಗಳ ಸಂಖ್ಯೆ ನೂರನ್ನು ದಾಟಿದೆ. ಈ ನೂರರಲ್ಲಿ ನಾಲ್ವತ್ತು ಪ್ರಾಚೀನ ಕಾವ್ಯ–ಪುರಾಣಗಳು ಗ್ರಂಥಸಂಪಾದನೆಗೆ ಸಂಬಂಧಿಸಿವೆ. ಈ ಸಂಖ್ಯೆಯನ್ನು ಗಮನಿಸಿದರೆ ಕಲಬುರ್ಗಿಯವರಿಗೆ ಗ್ರಂಥಸಂಪಾದನಶಾಸ್ತ್ರದತ್ತ ಹೆಚ್ಚು ಒಲವಿತ್ತು ಎಂಬುದು ಮೇಲ್ನೋಟಕ್ಕೆ

ವೇದ್ಯವಾಗುತ್ತದೆ. ಇವು ಚಂಪೂ–ವಚನ–ದೇಶಿ–ಚಾರಿತ್ರಿಕ–ಕುರುಬ ಸಮುದಾಯ–ಸ್ಥಳೀಯ ಇತಿಹಾಸವನ್ನು ನಿರೂಪಿಸುವ ಕೃತಿಗಳಾಗಿವೆ.

ಈ ಎಲ್ಲ ಕೃತಿಗಳು ಒಂದೆಡೆ ಲಭ್ಯವಾಗಬೇಕೆನ್ನುವ ಉದ್ದೇಶದಿಂದ ವಿಜಯಪುರದ ಬಿ.ಎಲ್.ಡಿ.ಇ. ಸಂಸ್ಥೆಯ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರವು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅನುದಾನದಲ್ಲಿ ಡಾ.ವೀರಣ್ಣ ರಾಜೂರ ಅವರ ಪ್ರಧಾನ ಸಂಪಾದಕತ್ವದಲ್ಲಿ "ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ"ಯನ್ನು ಅನುಷ್ಠಾನಗೊಳಿಸಿದೆ. ಈ ಯೋಜನೆಯನ್ವಯ ಸಂಪುಟ–೧೦, ಕಾವ್ಯ ಸಾಹಿತ್ಯ : ಭಾಗ–ಮೂರನ್ನು ಸಂಪಾದಿಸಿ ಸಿದ್ಧಪಡಿಸಿಕೊಡುವ ಜವಾಬ್ದಾರಿ ನನ್ನದಾಗಿದೆ. ಈ ಸಂಪುಟವು ಗುಂಡ ಬಸವೇಶ್ವರ ಪುರಾಣ, ಕೊಡೆಕಲ್ಲ ವಚನ ವಾಕ್ಯ, ಸಿದ್ಧಮಂಕ ಚರಿತೆ, ತಗರ ಪವಾಡ –ಹೀಗೆ ನಾಲ್ಕು ಕೃತಿಗಳನ್ನು ಒಳಗೊಂಡಿದೆ. ಉಪೇಕ್ಷಿತ ಮತ್ತು ಅಪ್ರಕಟಿತ ಕಾವ್ಯಪುರಾಣಗಳ ಶೋಧ, ಪರಿಷ್ಕರಣೆ ಮತ್ತು ಪ್ರಕಟಣೆಯಲ್ಲಿ ಕಲಬುರ್ಗಿಯವರಿಗೆ ತುಂಬ ಆಸಕ್ತಿ ಮತ್ತು ಕುತೂಹಲ. ಅದರಲ್ಲಿಯೂ ಸ್ಥಳೀಯ ಇತಿಹಾಸ, ಸಮುದಾಯ ಸಂಸ್ಕೃತಿಯನ್ನು ವಿವರಿಸುವಂಥ ಕೃತಿಗಳೆಂದರೆ ಕಲಬುರ್ಗಿಯವರಿಗೆ ಎಲ್ಲಿಲ್ಲದ ಉತ್ಸಾಹ. ಹೀಗಾಗಿ ಕುಮಾರರಾಮ, ಸಿರುಮ, ಇಮ್ಮಡಿ ಚಿಕ್ಕಭೂಪಾಲ, ನಿಂಬಸಾಮಂತ, ಕೊಡೇಕಲ್ ಬಸವಣ್ಣ, ಗುಂಡಬಸವಣ್ಣ ಮೊದಲಾದ ಚಾರಿತ್ರಿಕ ವ್ಯಕ್ತಿಗಳ ಕುರಿತು ರಚನೆಗೊಂಡಿರುವ ಕಾವ್ಯಗಳು ಕಾಲನ ಗರ್ಭದಲ್ಲಿ ಅಡಗಿಕುಳಿತಿದ್ದವು. ಅಂಥ ಕೃತಿಗಳತ್ತ ಪಂಡಿತರಾಗಲಿ, ವಿದ್ವಾಂಸರಾಗಲಿ ಯಾರೊಬ್ಬರೂ ಗಮನಹರಿಸಿರಲಿಲ್ಲ. ಆದರೆ ಕಲಬುರ್ಗಿಯವರಿಗೆ ಮಾತ್ರ ಇಂಥ ಮಹತ್ವದ ಕೃತಿಗಳನ್ನು ಶೋಧಿಸಿ ಪರಿಷ್ಕರಿಸಲು ಸಾಧ್ಯವಾಗಿದೆ ಎಂಬುದು ಇಲ್ಲಿ ಬಹುಮುಖ್ಯವಾಗುತ್ತದೆ. ಈಗ ಈ ನಾಲ್ಕು ಕೃತಿಗಳ ಕುರಿತು ಕೆಲವು ಸಂಗತಿಗಳನ್ನು ತಿಳಿದುಕೊಳ್ಳೋಣ.

೧. ತಗರ ಪವಾಡ :

ತಗರ ಪವಾಡ, ಕುರುಬ ಸಮುದಾಯದ ಸಂಸ್ಕೃತಿಯನ್ನು ಅನಾವರಣಗೊಳಿಸುವ ಮತ್ತೊಂದು ಕಾವ್ಯ. ೮ ಸಂಧಿ ೬೪೯ ಸಾಂಗತ್ಯ ಪದ್ಯಗಳನೊಳಗೊಂಡ ಈ ಕಾವ್ಯವು ಕುರುಬರ ಗುರುಪರಂಪರೆಯಲ್ಲಿ ಒಂದಾದ ರೇವಣಸಿದ್ಧ ಸಂಪ್ರದಾಯದ ಶಾಂತಮುತ್ತಯ್ಯನ ಚರಿತ್ರೆಯನ್ನು ತಿಳಿಸಿಕೊಡುತ್ತದೆ. ಶಾಂತಮುತ್ತಯ್ಯನಿಗೆ ಲಿಂಗದೀಕ್ಷೆಯನ್ನು ನೀಡಿದ್ದು, ಆತ ಸತ್ತ ಕುರಿಯನ್ನು ಬದುಕಿಸಿದ್ದು, ಕಲ್ಯಾಣದಿಂದ ಹೊರಹಾಕಲ್ಪಟ್ಟಿದ್ದ ಕುರುಬರನ್ನು ಒಳಗೆ ಕರೆದುಕೊಂಡದ್ದು, ಬಸವಣ್ಣನು ಕುರುಬರಿಗೆ ಶಾಂತಮುತ್ತಯ್ಯನು ಗುರು ಎಂದು ನೇಮಕಮಾಡಿದ್ದು, ಗುರುತನದ ಕುರುಹಾಗಿ ಮೂರೇಣಿನ ಕಂಥೆಯನ್ನು ನೀಡಿದ್ದು–ಈ ಎಲ್ಲ ಸಂಗತಿಗಳನ್ನು ತಗರ ಪವಾಡ ಕೃತಿಯು ಸ್ಥೂಲವಾಗಿ ನಿರೂಪಿಸುತ್ತದೆ.

ಸಿದ್ಧಮಂಕ ಚರಿತೆ ಮತ್ತು ತಗರ ಪವಾಡ ಕೃತಿಗಳ ವಿಷಯ ಒಂದೇ ಆಗಿದ್ದರೂ ಕುರುಬ ಸಮುದಾಯದ ಎರಡು ಭಿನ್ನ ಗುರುಪರಂಪರೆಗಳ ಚರಿತ್ರೆ ಈ ಎರಡೂ ಕಾವ್ಯಗಳಲ್ಲಿ ಅಡಗಿದೆ. ತಗರ ಪವಾಡದಲ್ಲಿ ಶಾಂತಮುತ್ತಯ್ಯ, ಸಿದ್ಧಮಂಕ ಚರಿತ್ರೆಯಲ್ಲಿ ಸಿದ್ಧಮಂಕ ಮುಖ್ಯ ನಾಯಕರಾಗಿ ಕಾಣಿಸಿಕೊಳ್ಳುತ್ತಾರೆ. ಈಗಲೂ ಸಹ ಕುರುಬ ಸಮುದಾಯದಲ್ಲಿ ಈ ಎರಡೂ ಸಂಪ್ರದಾಯಗಳು ಅಸ್ತಿತ್ವದಲ್ಲಿರುವುದನ್ನು ನಾವು ಕಾಣಬಹುದು. ಈ ಎರಡೂ ಕಾವ್ಯಗಳ ಮುಖ್ಯ ಕೇಂದ್ರ ಸರೂರ. ಇದು ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಒಂದು ಗ್ರಾಮ. ಈ ಗ್ರಾಮದಲ್ಲಿ ಎರಡೂ ಸಂಪ್ರದಾಯಗಳ ಗುರುಪರಂಪರೆ ಈಗಲೂ ಇದೆ. ಹೀಗಾಗಿ ಮಂಕೊಡೆಯರು(ಸಿದ್ಧರಾಮ),

ಶಾಂತೊಡೆಯರು(ರೇವಣಸಿದ್ಧ) ಕುರುಬರಿಗೆ ಗುರುಸ್ಥಾನದಲ್ಲಿದ್ದಾರೆ. ಈ ಸಂಪ್ರದಾಯದ ಮುಂದುವರಿಕೆಯಾಗಿ ಒಡೆಯರು(ಗುರುವಿನವರು) ಕುರುಬರಿಗೆ ಗುರುಗಳಾಗಿ ಧಾರ್ಮಿಕ–ಸಾಮಾಜಿಕ ಕಾರ್ಯಗಳನ್ನು ನಡೆಸಿಕೊಡುತ್ತಾರೆ. ಇಂಥ ಎಲ್ಲ ವಿವರಗಳು ಈ ಎರಡೂ ಕಾವ್ಯಗಳಿಂದ ಗೊತ್ತಾಗುತ್ತದೆ. ತಗರ ಪವಾಡ ಕಾವ್ಯವನ್ನು ಎಂ.ಎಂ.ಕಲಬುರ್ಗಿ, ಸಿ.ಕೆ. ಪರಶುರಾಮಯ್ಯ, ಎಫ್.ಟಿ.ಹಳ್ಳಿಕೇರಿ ಅವರು ಮೂರು ಹಸ್ತಪ್ರತಿಗಳ ನೆರವಿನಿಂದ ಪರಿಷ್ಕರಿಸಿದ್ದಾರೆ. ಪ್ರಸ್ತಾವನೆಯಲ್ಲಿ ಕೃತಿಯ ಕಥಾಸಾರ, ಕಾವ್ಯದ ಚಾರಿತ್ರಿಕ ಮಹತ್ವವನ್ನು ಚರ್ಚೆ ಮಾಡಲಾಗಿದೆ. ಅನುಬಂಧದಲ್ಲಿರುವ ಶಾಸನಗಳು ತಗರ ಪವಾಡ ಕಥಾವಸ್ತುವಿಗೆ ಪೂರಕವಾದ ಮಾಹಿತಿಗಳನ್ನು ಒದಗಿಸುತ್ತವೆ.

೨. ಸಿದ್ಧಮಂಕ ಚರಿತೆ :

ಕುರುಬ ಸಮುದಾಯದ ಗುರುಪರಂಪರೆಯಲ್ಲಿ ಬಹುಮುಖ್ಯವಾಗಿ ರೇವಣಸಿದ್ಧ–ಸಿದ್ಧರಾಮ–ಅಮೋಘಸಿದ್ಧ ಸಂಪ್ರದಾಯಗಳಿವೆ. ಈ ಸಂಪ್ರದಾಯಗಳನ್ನು ಕುರಿತಂತೆ ಕನ್ನಡದಲ್ಲಿ ಕಾವ್ಯಪುರಾಣಗಳು ರಚನೆಗೊಂಡಿವೆ. ಜನಪದ ಹಾಲುಮತ ಮಹಾಕಾವ್ಯ, ತಗರ ಪವಾಡ, ಸಿದ್ಧಮಂಕ ಚರಿತೆ, ಮರುಳಸಿದ್ಧನ ಕಾವ್ಯ, ಹಾಲುಮತೋತ್ತೇಜಕ ಪುರಾಣ, ಮಾಳಿಂಗರಾಯನ ಕಾವ್ಯ ಮೊದಲಾದ ಕಾವ್ಯ–ಪುರಾಣಗಳು ರಚನೆಗೊಂಡಿವೆ. ಹೀಗಿದ್ದೂ ಇವು ಪ್ರಕಟಗೊಳ್ಳುತ್ತ ಬಂದಿರುವುದು ಇತ್ತೀಚಿನ ದಶಕಗಳಿಂದ.

ಸಿದ್ಧರಾಮ ಸಂಪ್ರದಾಯದ ಗುರುಪರಂಪರೆಯನ್ನು ತಿಳಿಸುವ ಆಕರಗಳಲ್ಲಿ ಸಿದ್ಧಮಂಕ ಚರಿತೆಗೆ ವಿಶೇಷ ಮಹತ್ವವಿದೆ. ನಾಲ್ಕು ಸಂಧಿ ೬೨೬ ಸಾಂಗತ್ಯ ಪದ್ಯಗಳನ್ನು ಒಳಗೊಂಡಿದೆ. ಸಿದ್ಧರಾಮನ ಸೊಲ್ಲಾಪುರ, ಬಸವಣ್ಣನ ಕಲ್ಯಾಣ, ಮಂಕಸಿದ್ಧನ ಸರೂರು ಕ್ಷೇತ್ರಗಳಲ್ಲಿ ಈ ಕಾವ್ಯದ ಕಥೆ ವ್ಯಾಪಿಸಿಕೊಂಡಿದೆ. ಕಥಾನಾಯಕನಾದ ಮಂಕಸಿದ್ಧ ಅಥವಾ ಸಿದ್ಧಮಂಕನು ಸೊಲ್ಲಾಪುರ ಸಿದ್ಧರಾಮನ ಪರಮ ಶಿಷ್ಯನು. ಈ ಶಿಷ್ಯನ ಗುರುಭಕ್ತಿ, ಸಮಾಜ ಪ್ರೇಮವನ್ನು ಈ ಕಾವ್ಯ ವಿವರಿಸುತ್ತದೆ. ಕುರುಬರಿಗೆ ಗುರು ಯಾರು ಎಂಬ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಈ ಕಾವ್ಯ ಮುನ್ನಡೆಯುತ್ತದೆ. ಸೊಲ್ಲಾಪುರದ ಸಿದ್ಧರಾಮ, ಆತನ ಶಿಷ್ಯ ಸಿದ್ಧಮಂಕ, ಆತನ ಅನುಯಾಯಿಗಳಾದ ಮಂಕೊಡೆಯರು ಈ ಪರಂಪರೆಯ ವಾರಸುದಾರರು ಎಂಬುದನ್ನು ಎಳೆಎಳೆಯಾಗಿ ಈ ಕಾವ್ಯ ನಮ್ಮ ಮುಂದೆ ಬಿಚ್ಚಿಡುತ್ತದೆ.

ಕನ್ನಡದ ಪ್ರಸಿದ್ಧ ವಿದ್ವಾಂಸರಾಗಿದ್ದ ಡಿ.ಎಲ್.ನರಸಿಂಹಾಚಾರ್ ಅವರು ಸಿದ್ಧರಾಮ ಚಾರಿತ್ರದ ಪೀಠಿಕೆಯಲ್ಲಿ ಇನ್ನೊಂದು ಸಿದ್ಧರಾಮ ಚರಿತ್ರೆಯ ಬಗ್ಗೆ ಉಲ್ಲೇಖಿಸಿದ್ದರು. ಆ ಉಲ್ಲೇಖವನ್ನು ಗಮನಿಸಿ ಎಂ.ಎಂ. ಕಲಬುರ್ಗಿಯವರು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಭಂಡಾರದ ಏಕೈಕ ಹಸ್ತಪ್ರತಿಯ ಸಹಾಯದಿಂದ ಸಿದ್ಧಮಂಕ ಚರಿತೆ ಕಾವ್ಯವನ್ನು ವೈ.ಸಿ.ಭಾನುಮತಿ ಅವರೊಂದಿಗೆ ಪರಿಷ್ಕರಿಸಿ ಪ್ರಕಟಿಸಿದ್ದಾರೆ(೨೦೦೪). ಪ್ರಸ್ತಾವನೆಯಲ್ಲಿ ಕವಿಯ ಇತಿವೃತ್ತ, ಕೃತಿಯ ಕಥಾಸಾರ, ಕೃತಿಯಲ್ಲಿರುವ ಚಾರಿತ್ರಿಕ ಸಾಮಾಜಿಕ ಧಾರ್ಮಿಕ ವಿಚಾರಗಳನ್ನು ಚರ್ಚೆ ಮಾಡಿದ್ದಾರೆ. ಶಾಸನ–ಸನದುಗಳಲ್ಲಿರುವ ಸಂಗತಿಗಳನ್ನು ಬಳಸಿಕೊಂಡು ಸಿದ್ಧರಾಮ ಸಂಪ್ರದಾಯದ ವಿಶೇಷತೆಯನ್ನು ಗುರುತಿಸಲಾಗಿದೆ. ಅನುಬಂಧದಲ್ಲಿ ಕೊಟ್ಟಿರುವ ಟಗರ ಪವಾಡ ಹೆಸರಿನ ದಾಖಲೆ(ಸನದು)ಯು ಕೃತಿಯ ಕಥೆಗೆ ಪೂರಕವಾಗಿದೆ.

೩. ಗುಂಡ ಬಸವೇಶ್ವರ ಚರಿತ್ರೆ :

ಧರ್ಮಕಲ್ಯಾಣದ ಸ್ಥಾಪಕನಾದ ಗುಂಡಬಸವಣ್ಣನ ಚರಿತ್ರೆಯನ್ನು ಗುಂಡಬಸವೇಶ್ವರ ಪುರಾಣ ನಿರೂಪಿಸುತ್ತದೆ. ಏಳು ಸಂಧಿ ೭೯೩ ಕಂದಪದ್ಯಗಳಲ್ಲಿ ಗುಂಡಬಸವಣ್ಣನು ಶಿವಸನ್ನಿಧಿಯಲ್ಲಿದ್ದುದು, ಅಲ್ಲಿಂದ ಭೂಲೋಕಕ್ಕೆ ಬಂದುದು, ಶಿವನ ಅವತಾರವಾಗಿ ಗುಂಡಬಸವ ಹುಟ್ಟಿದುದು, ಮನಸ್ಸಿಲ್ಲದ ಮನಸ್ಸಿನಿಂದ ಮದುವೆಯಾಗಿ ಸಂಸಾರ ನಡೆಸುತ್ತ ಕದಳಿಯಲ್ಲಿ ತಪಸ್ಸು ಮಾಡಿ ಮರಳಿ ಗ್ರಾಮಕ್ಕೆ ಬಂದುದು, ಮುಂದಿನ ದಿನಗಳಲ್ಲಿ ಕೇಡು ಬರುವುದನ್ನು ಸಾರುತ್ತ ಪವಾಡ ಮೆರೆಯುತ್ತ ದೀಕ್ಷೆ ನೀಡಲು ಕರ್ತೃರೂಪದಲ್ಲಿ ಬಂದುದು. ಊರ ಹೊರಗೆ ಮಠವನ್ನು ಕಟ್ಟಿ ಅದಕ್ಕೆ ಧರ್ಮಕಲ್ಯಾಣ ಎಂದು ಹೆಸರಿಟ್ಟು ಭಕ್ತಾದಿಗಳಿಗೆ ಬೋಧಿಸುತ್ತ ಅಂತರಂಗ ಬಹಿರಂಗ ಪೂಜೆ ಮಾಡುತ್ತ ಡಂಗುರ ಸಾರುತ್ತ ತಪಸ್ಸು ಮಾಡಿದ ಕಥನಗಳನ್ನು ವಿವರವಾಗಿ ಕವಿ ಹೇಳುತ್ತ ಹೋಗುತ್ತಾನೆ, ಮರ್ತ್ಯದಲ್ಲಿದ್ದದ್ದು ಸಾಕು ಮರಳಿ ಬಾ ಎಂದು ಶಿವನು ಆದೇಶ ನೀಡುತ್ತಾನೆ. ಆ ಆದೇಶದಂತೆ ಗುಂಡ ಬಸವೇಶ ಹೆಂಡಂದಿರು ಮಕ್ಕಳನ್ನು ಕರೆದು ಬುದ್ಧಿವಾದ ಹೇಳಿ ಲಿಂಗದೊಳಗೆ ಐಕ್ಯನಾದನು. ಗುಂಡಯ್ಯನ ಗದ್ದುಗೆ ವರ ನೀಡುವ ತಾಣವಾಯಿತು. ಒಟ್ಟಿನಲ್ಲಿ ಪ್ರಾದೇಶಿಕ ಚರಿತ್ರೆಯನ್ನು ನಿರೂಪಿಸುವ ಈ ಕೃತಿಯು ಭೌಗೋಲಿಕ–ಸಾಂಸ್ಕೃತಿಕ ಮತ್ತು ಧಾರ್ಮಿಕ ದೃಷ್ಟಿಯಿಂದ ಮಹತ್ವವನ್ನು ಪಡೆದುಕೊಂಡಿದೆ. ಇಂಥ ವಿಶಿಷ್ಟ ಕೃತಿಯನ್ನು ಏಕೈಕ ಕಾಗದ ಹಸ್ತಪ್ರತಿಯಿಂದ ಕಲಬುರ್ಗಿಯವರು ಮತ್ತು ಸಂಗಪ್ಪಯ್ಯನವರು ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಪ್ರಸ್ತಾವನೆಯಲ್ಲಿ ಗುಂಡಬಸವೇಶ್ವರ ಕಾವ್ಯದ ವಿಶೇಷತೆಯನ್ನು ಸ್ಥೂಲವಾಗಿ ಚರ್ಚಿಸಿದ ಸಂಪಾದಕರು, ಈ ಕುರಿತು ಕೈಕೊಳ್ಳಬಹುದಾದ ಅಧ್ಯಯನದ ಸಾಧ್ಯತೆಗಳ ಬಗ್ಗೆಯೂ ಸೂಚನೆ ಕೊಟ್ಟಿದ್ದಾರೆ.

೪. ಕೊಡೇಕಲ್ಲ ವಚನ ವಾಕ್ಯ (ಸಂಪುಟ:೪):

ಕಡೆಯ ಕಲ್ಯಾಣದ ನಾಯಕನದ ಕೊಡೆಕಲ್ಲ ಬಸವಣ್ಣನ ಕುರಿತು ಈವರೆಗೆ ಕೊಡೇಕಲ್ಲ ಸಂಪ್ರದಾಯ(ಪಿಎಚ್.ಡಿ.ಮಹಾಪ್ರಬಂಧ), ಕೊಡೇಕಲ್ಲ ವಚನ ವಾಕ್ಯ ಸಂಪುಟ:೧(ಬಸವಲಿಂಗ ಸೊಪ್ಪಿಮಠ), ಕೊಡೇಕಲ್ಲ ವಚನ ವಾಕ್ಯ ಸಂಪುಟ:೨ ಮತ್ತು ೩(ಶಿವಾನಂದ ವಿರಕ್ತಮಠ) ಪ್ರಕಟವಾಗಿದ್ದವು. ಅವುಗಳ ಮುಂದುವರಿಕೆಯಾಗಿ ಕೊಡೇಕಲ್ಲ ವಚನವಾಕ್ಯ(ಸಂಪುಟ:೪) ಕೃತಿಯನ್ನು ಎಂ.ಎಂ. ಕಲಬುರ್ಗಿಯವರು ಸಂಗಪ್ಪಯ್ಯನವರೊಂದಿಗೆ ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಇದು ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿಯ ಸ್ವರವಚನಗಳು ಹಾಗೂ ಶಹಪೂರ ಹಸ್ತಪ್ರತಿಯ ಸ್ವರವಚನಗಳು ಎಂಬ ಎರಡು ಭಾಗಗಳನ್ನು ಒಳಗೊಂಡಿದೆ. ಮೊದಲನೆಯ ಭಾಗದಲ್ಲಿ ೬೩, ಎರಡನೆಯ ಭಾಗದಲ್ಲಿ ೬೨ ಹೀಗೆ ೧೨೫ ಸ್ವರವಚನಗಳ ಸಂಪುಟ ಇದಾಗಿದೆ. ಈ ಸ್ವರವಚನಗಳಲ್ಲಿ ನೀತಿ ತತ್ವ ಕಾಲಜ್ಞಾನ ಹಾಗೂ ಚಾರಿತ್ರಿಕ ವಿಷಯಗಳ ನಿರೂಪಣೆಯಿದೆ. ಪ್ರಸ್ತಾವನೆಯಲ್ಲಿ ಕಡೆಯ ಕಲ್ಯಾಣ ಅಥವಾ ಕೊಡೇಕಲ್ ಸಂಪ್ರದಾಯದ ಬಗ್ಗೆ ಸ್ಥೂಲವಾಗಿ ವಿವರಿಸುತ್ತ, ಇಲ್ಲಿ ಉಕ್ತವಾಗಿರುವ ಸ್ವರವಚನಗಳ ವಿಶೇಷತೆಯನ್ನು, ಬಳಸಿಕೊಂಡ ಹಸ್ತಪ್ರತಿಗಳನ್ನು ಕುರಿತು ಸಂಪಾದಕರು ಚರ್ಚಿಸಿದ್ದಾರೆ.

ಕೃತಜ್ಞತೆ :

ಕನ್ನಡ ಸಾಹಿತ್ಯ ಸಂಸ್ಕೃತಿಯ ಸಂಶೋಧನೆಯನ್ನು ಮುಖ್ಯವಾಗಿಟ್ಟುಕೊಂಡು ವಿಜಯಪುರದ ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರವು ಸ್ಥಾಪನೆಯಾಗಿದೆ. ಈಗಾಗಲೇ ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣೆ ಹಾಗೂ ಆದಿಲಶಾಹಿ ಸಾಹಿತ್ಯ ಪ್ರಕಟಣ ಯೋಜನೆಗಳನ್ನು

ಯಶಸ್ವಿಯಾಗಿ ಕೈಕೊಂಡ ಈ ಕೇಂದ್ರವು ಈಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅನುದಾನದಿಂದ "ಡಾ. ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ"ಯನ್ನು ರೂಪಿಸಿದೆ. ಈ ಯೋಜನೆಯಲ್ಲಿ ೨೩ನೆಯ ಸಂಪುಟ(ಕಾವ್ಯ ಸಾಹಿತ್ಯ-ಭಾಗ:೫)ವಾಗಿ ಗುರುಗಳಾದ ಎಂ.ಎಂ. ಕಲಬುರ್ಗಿಯವರು ಪರಿಷ್ಕರಿಸಿದ ತಗರ ಪವಾಡ, ಸಿದ್ಧಮಂಕ ಚರಿತೆ, ಗುಂಡ ಬಸವೇಶ್ವರ ಪುರಾಣ ಹಾಗೂ ಕೊಡೆಕಲ್ಲ ವಚನ ವಾಕ್ಯ ಕೃತಿಗಳನ್ನು ಇಲ್ಲಿ ಸಂಪಾದಿಸಿಕೊಟ್ಟಿದ್ದೇನೆ. ಈ ಯೋಜನೆಯಲ್ಲಿ ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಟ್ಟ ನನ್ನ ಗುರುಗಳು ಹಾಗೂ ಈ ಯೋಜನೆಯ ಪ್ರಧಾನ ಸಂಪಾದಕರಾದ ಡಾ. ವೀರಣ್ಣ ರಾಜೂರ ಅವರಿಗೆ ಗೌರವಪೂರ್ವಕ ನಮನಗಳು. ಸಂಪಾದನೆಯ ಸಂದರ್ಭದಲ್ಲಿ ಸೂಕ್ತ ಸಲಹೆ-ಸಹಕಾರ ನೀಡಿದ ಮಾತೋಶ್ರೀ ಉಮಾದೇವಿ ಎಂ. ಕಲಬುರ್ಗಿ ಹಾಗೂ ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಕಾರ್ಯದರ್ಶಿಗಳಾದ ಡಾ. ಎಂ.ಎಸ್.ಮದಭಾವಿ ಅವರಿಗೆ ಕೃತಜ್ಞತೆಗಳು.

❖❖

*

ಪರಿವಿಡಿ

ತಗರ ಪವಾಡ

ಸಂಪಾದಕರು
ಎಂ. ಎಂ. ಕಲಬುರ್ಗಿ
ಸಿ. ಕೆ. ಪರಶುರಾಮಯ್ಯ
ಎಫ್. ಟಿ. ಹಳ್ಳಿಕೇರಿ

೨೦೦೪

ಪ್ರಕಾಶಕರು
ವಿದ್ಯಾನಿಧಿ ಪ್ರಕಾಶನ, ಗದಗ

*

ಪ್ರಸ್ತಾವನೆ

ಕರ್ನಾಟಕದಲ್ಲಿ ಕುರುಬರದು ದೊಡ್ಡ ಸಮಾಜ; ದೊಡ್ಡ ಪರಂಪರೆ. ಹೀಗಿದ್ದೂ ಈ ಸಮಾಜಕ್ಕೆ ನೇರವಾಗಿ ಸಂಬಂಧಪಟ್ಟ ಒಂದೂ ಪ್ರಾಚೀನ ಕೃತಿ ಇವರೆಗೆ ಬೆಳಕು ಕಂಡಿರಲಿಲ್ಲ. ನಮ್ಮ ಸಂಸ್ಕೃತಿಯ ಸುದೈವವೆಂಬಂತೆ ಈ ವರ್ಷ (೨೦೦೪) ಗದುಗಿನ ಶ್ರೀ ತೋಂಟದಾರ್ಯಮಠದ ಮೂಲಕ 'ಸಿದ್ಧಮಂಕ ಚರಿತೆ' ಪ್ರಕಟವಾಯಿತು. ಅದರ ಬೆನ್ನ ಹಿಂದೆಯೇ ಈ 'ತಗರ ಪವಾಡ' ಪ್ರಕಟವಾಗುತ್ತಲಿದೆ. ಸ್ಥಳೀಯ ಚರಿತ್ರೆ (Subaltern Study)ಯ ಅಧ್ಯಯನಕ್ಕೆ ಇಂಥವು ತುಂಬ ಮಹತ್ವದ ಆಕರವೆನಿಸುತ್ತವೆ.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಪುರಾಣ ವಿಪುಲ, ಚರಿತ್ರೆ ವಿರಳ. ಈ ಚರಿತ್ರೆ ವಲಯದಲ್ಲಿಯೇ ಪುರಾಣದ ಚರಿತ್ರೀಕರಣ (ಪಂಪಭಾರತ), ಚರಿತ್ರೆಯ ಪುರಾಣೀಕರಣ (ಸಿದ್ಧರಾಮ ಚಾರಿತ್ರ) ಎಂಬ ಇನ್ನೆರಡು ಪ್ರಕಾರಗಳು ನಮ್ಮಲ್ಲಿ ಹುಟ್ಟಿಕೊಂಡಿವೆ. ಪ್ರಸ್ತುತ 'ತಗರ ಪವಾಡ'ವು ಚರಿತ್ರೆಯ ಪುರಾಣೀಕರಣ ವರ್ಗಕ್ಕೆ ಸೇರುವ ಕೃತಿಯಾಗಿದೆ. ಇಂಥ ಕೃತಿಗಳ ಅಧ್ಯಯನವೆಂದರೆ ಸಾಹಿತ್ಯದಲ್ಲಿ ಇತಿಹಾಸವನ್ನು, ಆ ಇತಿಹಾಸದಲ್ಲಿ ಸಂಸ್ಕೃತಿಯನ್ನು ಹುಡುಕುವುದೇ ಆಗಿದೆ. ಈ ಮೇರೆಗೆ ಈ ಕೃತಿಯಲ್ಲಿ ಕುರುಬರ ಗುರು ಶಾಂತಮುತ್ತಯ್ಯನ ಚರಿತ್ರೆಯನ್ನು, ಈ ಚರಿತ್ರೆಯಲ್ಲಿ ಸೇರಿಕೊಂಡಿರುವ ಕುರುಬರ ಸಂಸ್ಕೃತಿಯನ್ನು ಅಭ್ಯಸಿಸುವುದೇ ಇಲ್ಲಿ ಮುಖ್ಯವೆನಿಸುತ್ತದೆ.

ಕುರುಬರು ಕಲ್ಯಾಣದಲ್ಲಿ ಸತ್ತ ಕುರಿಯನ್ನು ಹಾಲಿನ ಕಂಬಿಯ ಮೇಲೆ ಹೊತ್ತು ತಂದ ವಿಷಯವನ್ನಾಧರಿಸಿ ಕನ್ನಡದಲ್ಲಿ 'ಸಿದ್ಧಮಂಕ ಚರಿತೆ' ಮತ್ತು 'ತಗರ ಪವಾಡ' ಎಂಬ ಎರಡು ಸಾಂಗತ್ಯ ಕೃತಿಗಳು ಹುಟ್ಟಿಕೊಂಡಿವೆ. ಹೀಗೆ ವಿಷಯ ಒಂದೇ ಆಗಿದ್ದರೂ, ಇದನ್ನು ಆಧರಿಸಿ ಕುರುಬ ಸಮಾಜದ ಎರಡು ಭಿನ್ನ ಸಂಪ್ರದಾಯಗಳ ಚರಿತ್ರೆ ಇಲ್ಲಿ ಆಕಾರ ಪಡೆದಿದೆ. ಇವುಗಳಲ್ಲಿ 'ತಗರ ಪವಾಡ' ಶಾಂತಮುತ್ತಯ್ಯನ ಸಂಪ್ರದಾಯದ ಸುತ್ತ ಬೆಳೆದ ಕೃತಿಯಾಗಿದೆ.

ಕೃತಿನಾಮ

ಮಾರ್ಗಸಾಹಿತ್ಯ ಕೃತಿಗಳಿಗೆ ನಿರ್ದಿಷ್ಟ ನಾಮವಿರುತ್ತದೆ. ದೇಶೀ ಸಾಹಿತ್ಯಕೃತಿ, ಅದರಲ್ಲಿಯೂ ಸಾಮಾನ್ಯ ಸಮಾಜದ ಸಾಂಸ್ಕೃತಿಕ ನಾಯಕರನ್ನು ಕುರಿತ ಕೃತಿಯು, ಲಿಖಿತದಿಂದ ಮೌಖಿಕಕ್ಕೆ, ಮೌಖಿಕದಿಂದ ಲಿಖಿತಕ್ಕೆ ಚಲಿಸುತ್ತಿರುವ ಕಾರಣ ಅದಕ್ಕೆ ಅನೇಕ ಹೆಸರುಗಳು ರೂಢಿಯಲ್ಲಿರುತ್ತವೆ.

ಇಂಥ ಸಂಪ್ರದಾಯಕ್ಕೆ ಸೇರಿದೆ, ಈ ಕೃತಿ. ನಮಗೆ ಲಭ್ಯವಾಗಿರುವ ಮೂರು ಹಸ್ತಪ್ರತಿಗಳಲ್ಲಿ (ಅ, ಆ, ಇ) 'ಅ' ಪ್ರತಿಯ ಆರಂಭದ ಸಾಲು ಹರಿದುಹೋಗಿರುವುದರಿಂದ, ಶೀರ್ಷಿಕೆ ಗೊತ್ತಾಗುವುದಿಲ್ಲ. ಅಂತ್ಯದಲ್ಲಿ ಮಾತ್ರ "ರೇವಣಸಿದ್ಧೇಶ್ವರನ ಮಹಾತ್ಮೆ" ಎಂದು ಕರೆಯಲಾಗಿದೆ. 'ಆ' ಪ್ರತಿಯು "ಗಣಾಧಿಪತೆಯೇ ನಮಃ" ಎಂದು ನಮಸ್ಕಾರ ಸೂಚಿಸುತ್ತಲೇ ಪಠ್ಯವನ್ನು ಆರಂಭಿಸುವುದರಿಂದ ಕೃತಿನಾಮ ಇಲ್ಲಿಯೂ ಲಭ್ಯವಾಗುವುದಿಲ್ಲ. ಅಂತ್ಯದಲ್ಲಿ "ತಗರ ಪವಾಡ" ಎಂದು ಕರೆಯಲಾಗಿದೆ. 'ಇ' ಪ್ರತಿಯಲ್ಲಿ ದೇವತಾಸ್ತುತಿ ಮುಗಿಯುತ್ತಲೇ ಪಠ್ಯ ಆರಂಭವಾಗುವುದರಿಂದ, ಕೃತಿನಾಮ ಇಲ್ಲಿಯೂ ಕಂಡುಬರುವುದಿಲ್ಲ. ಅಂತ್ಯದಲ್ಲಿ "ರೇವಣ ಸಾಂಗತ್ಯ ತಗರ ಪವಾಡವು" ಎಂಬ ಬರೆಹವಿದೆ. ಹೀಗೆ ಕೃತಿನಾಮ ಸಂದೇಹ ಹುಟ್ಟಿಸುತ್ತಿದ್ದು, ತಗರ ಬದುಕಿಸಿದ ಪವಾಡವು ಕೃತಿಯ ಕೇಂದ್ರ ವಸ್ತುವಾಗಿರುವುದರಿಂದಲೂ, ಎಲ್ಲ ಜನರೂ ಸಾಮಾನ್ಯವಾಗಿ ಈ ಕಾವ್ಯವನ್ನು ತಗರಪವಾಡವೆಂದು ಕರೆಯುವುದರಿಂದಲೂ, ನಾವು 'ತಗರ ಪವಾಡ' ಎಂಬುದನ್ನೇ ಶೀರ್ಷಿಕೆಯಾಗಿ ಇಟ್ಟುಕೊಂಡಿದ್ದೇವೆ.

ಕವಿನಾಮ

ಈ ಸಾಂಗತ್ಯಕೃತಿಯನ್ನು ಒಬ್ಬ ನಿರ್ದಿಷ್ಟ ಕವಿ ಬರೆದಿದ್ದರೂ ಲಿಖಿತ ಮತ್ತು ಮೌಖಿಕ ಸಂವಹನ ಪ್ರಕ್ರಿಯೆಗೆ ಸಿಕ್ಕು ಕವಿಯ ಹೆಸರು ಕೈಬಿಟ್ಟು ಹೋಗಿರುವಂತಿದೆ. ಎರಡನೆಯ ಸಂಧಿಯ ಮೊದಲ ಪದ್ಯದಲ್ಲಿ "ವಿವರಿಸಿ ಪೇಳ್ದ ಸಿದ್ದೇಶ" ಎಂಬ ಒಂದೇ ಒಂದು ಸೂಚನೆ ಯಿರುವುದರಿಂದ ಸಿದ್ಧೇಶನೆಂಬವನೇ ಇದರ ಕರ್ತೃವಾಗಿರಬಹುದು. ಆದರೆ ಈ ಸಿದ್ಧೇಶ ಯಾರು? ಇವನ ಚರಿತ್ರೆ ಏನು? ಇತ್ಯಾದಿಗಳು ತಿಳಿದುಬರುವುದಿಲ್ಲ. ಮೇಲೆ ಉಲ್ಲೇಖಿಸಿದ ಸಿದ್ಧಮಂಕ ಚರಿತ್ರೆಯನ್ನು ಬರೆದವನು ಬಹುಶಃ ಕಾದೋಡಿ ಒಡೆಯ ಸಿದ್ಧ. ಅಂದರೆ ಕಾದೋಡಿ ಗ್ರಾಮದ ಒಡೆಯರ ಮನೆತನದ ಸಿದ್ಧನಾಗಿದ್ದಾನೆ. ಇಬ್ಬರೂ ಭಿನ್ನವಾಗಿರುವುದು ಸಹಜ. ಇಲ್ಲಿ ಬರುವ ಕೆಂಪೇಗೌಡ, ಸಿದ್ದೇಗೌಡ ಇತ್ಯಾದಿ ಹೆಸರುಗಳನ್ನು ನೋಡಿದರೆ ಈ ಕವಿ ಮೈಸೂರು ಪ್ರದೇಶದವನಿರಬಹುದೆನಿಸುತ್ತದೆ. ಇಷ್ಟನ್ನು ಬಿಟ್ಟರೆ ಹೆಚ್ಚಿಗೆ ಏನೂ ಹೇಳುವಂತಿಲ್ಲ.

ಕಥೆ

ಸಂಧಿ-ಒಂದು : ಸಂಗನಬಸವರಾಜ ಅಲ್ಲಮ ಸಿದ್ಧರಾಮ ರುದ್ರಮುನಿ ಚೆನ್ನಬಸವ ವೀರಮಡಿವಾಳರಿಗೆ ನಮಿಸುತ್ತೇನೆ. ಗಿರಿಜಾರಮಣನಾದ ರೇವಣಸಿದ್ಧನೇ ರಕ್ಷಿಸು. ಪರಶಿವನಾದ ರೇವಣಸಿದ್ಧನೇ ನನ್ನ ಹೃದಯದಲ್ಲಿ ನಿಂತು ನಿನ್ನ ಮಹಾತ್ಮೆಯನ್ನು ಹೇಳು. ಪೊಡವಿಗೆ ಅಯ್ಯನೆನಿಸಿದ ಕರಿಯಸಿದ್ಧೇಶನನ್ನು ಸ್ತುತಿಸುತ್ತೇನೆ. ಶಿವ, ಗಣಪತಿ, ಸರಸ್ವತಿ, ವೀರಭದ್ರರಿಗೆ ಶರಣು (೧-೮). ಶರಣರ ಬಂಟನಾದ ನಾನು ಹೇಳುವ ಈ ಕಾವ್ಯವನ್ನು ಕೇಳಿರಿ (೯-೧೨). ಕೈಲಾಸದ ಒಡ್ಡೋಲಗದಲ್ಲಿದ್ದ ಶಿವನಲ್ಲಿಗೆ ಬಂದ ನಾರದನು, "ಕೊಲ್ಲಾಪುರದಲ್ಲಿ ಮಾಯೆಯನ್ನು ಮೋಹಿಸಲು ಹೋಗಿ, ಅವಳು ಕೊಡುವ ವಿಷಕುಡಿದೂ ಬದುಕಿದ ನವಕೋಟಿಸಿದ್ಧರು ಅವಳ ಮನೆಗೆ ನೀರು ಹೊರುವ ಸೇವಕರಾಗಿದ್ದಾರೆ" ಎಂದು ಹೇಳಿದ. ಇದನ್ನು ಕೇಳಿದ ಶಿವನು ರೇವಣಸಿದ್ಧ ಹೆಸರಿನಿಂದ ಕೊಲ್ಲಾಪುರಕ್ಕೆ ಬಂದ. ಮಾಯೆ ನೀಡಿದ ಅನೇಕ ಕೊಡ ವಿಷ ಕುಡಿದ. ಸೋತ ಮಾಯೆಯ

ಮೂಗ ಕೊಯ್ದು ಹೊರಗೆ ಅಟ್ಟಿ, ಅವಳ ಸೇವಕರಾಗಿದ್ದ ಸಿದ್ಧರನ್ನು ಕುರಿಗಳನ್ನಾಗಿ ಮಾಡಿದ. (೧೩–೨೬).

ರೇವಣ್ಣ ಕುರಿಗಳನ್ನು ಕರೆದು, "ದೇವರ ಹರಕೆಗೆ ಬಲಿಪಶುವಾಗಿರಿ"ಯೆಂದು ಶಾಪವಿತ್ತು, ಗಿರಿಗಳಲ್ಲಿ ಬದುಕಲು ಆಜ್ಞೆಮಾಡಿ, ಕುರಿಕಾಯಲು ಅಷ್ಟದೇವತೆಗಳಿಗೆ ಆದೇಶನೀಡಿ, ಕಲಶ ಹೆಸರಿನ ದೇಶದ ಉತ್ತರಕ್ಕೆ ನಡೆದ. ಐವತ್ತಾರು ದೇಶಗಳನ್ನು ಸಂಚರಿಸಿ ತಿರುಗಿ ಬರಲು "ನಮ್ಮಿಂದ ಈ ಕುರಿ ಕಾಯಲು ಸಾಧ್ಯವಿಲ್ಲ"ವೆಂದು ಅಷ್ಟದೇವತೆಗಳು ಬಿನ್ನವಿಸಲು, ರೇವಣ್ಣ (ಶಿವ) ತಾನೇ ಕುರಿ ಕಾಯುತ್ತ ನಡೆದ. ಒಬ್ಬ ಒಕ್ಕಲಿಗನಿಗೆ ಇವುಗಳನ್ನು ವಶಮಾಡಲು ನಿಶ್ಚಯಿಸಿದ, ಅವನ ಇಚ್ಛೆಯಂತೆ, (ತೊಗರಸೆ ಗ್ರಾಮದ) ಆದಿಗೊಂಡನೆಂಬವನ ಉದರದಲ್ಲಿ ೭ ಜನ ಮಕ್ಕಳು ಜನಿಸಿದರು. ಈ ಆದಿಗೊಂಡನ ಹೊಲದ ಹುತ್ತದಲ್ಲಿ ಎಲ್ಲ ಕುರಿ ಹೊಗಿಸಿ, ವೀರಭದ್ರನನ್ನು ಕಾವಲಿಟ್ಟು ಕೈಲಾಸಕ್ಕೆ ಶಿವ ಮರಳಿದ (೨೭–೭೬).

ಸಂಧಿ ಎರಡು : ಆದಿಗೊಂಡನ ಏಳು ಜನ ಮಕ್ಕಳಲ್ಲಿ ಕೊನೆಯವ ಪದುಮಣ್ಣ. ಉಂಡಾಡಿಯಾಗಿ ಕಾಲಕಳೆಯುತ್ತಲಿದ್ದ ಇವನಿಗೆ ತಾಯಿ ಮಲ್ಲಮ್ಮ ಬುದ್ಧಿ ಹೇಳಿ ಹೊಲಕ್ಕೆ ಕಳಿಸಿದಳು. ಪದುಮಣ್ಣ ಹೊಲದಲ್ಲಿ ಬೆಳೆದ ಮುತ್ತುಗವನ್ನು ಕಡಿಯಲು, ಕೆಳಗಿನ ಹುತ್ತಿನಿಂದ ಅಗಣಿತ ಕುರಿಗಳು ಹೊರಬಂದವು. ಕುರಿಗಳ ಧ್ವನಿ ಕೇಳಿ ಶಿವನು ಭೂಲೋಕಕ್ಕೆ ಬಂದು, ಇವುಗಳ ಒಡೆಯನಾಗಲು ಪದುಮಣ್ಣನಿಗೆ ಒಪ್ಪಿಸಿದ. ಇಷ್ಟು ಕುರಿ ಕಾಯಲು ನಾನು ಅಸಮರ್ಥನೆನ್ನಲು, ಭೀಕರನಾದ ವೀರಬೀರಯ್ಯನನ್ನು ಜೊತೆಮಾಡಿ ಶಿವ ಕೈಲಾಸಕ್ಕೆ ಹಿಂದುರಿಗಿದ. (೧–೪೦).

ಇಬ್ಬರೂ ಕುರಿ ಕಾಯುತ್ತ ಮುನ್ನಡೆದರು. ಅಡವಿಯಲ್ಲಿ ಕುರಿ ತಿನ್ನಲು ಏರಿ ಬಂದ ಬಕಾಸುರನನ್ನು ಬೀರಯ್ಯ ಸೀಳಿಹಾಕಿದನು. ಅವನ ಮಗಳು ಸಿರಿವಂತೆ ಗೋಳಿಡಲು, "ನೀನು ಪದುಮಣ್ಣನಿಗೆ ಮಡದಿಯಾಗಿರು" ಎಂದು ಬೀರಯ್ಯ ಹೇಳಿದ ಮೇರೆಗೆ ಅವರು, ದಂಪತಿಗಳಾದರು. ಮುಂದೆ ಶಿವನು ಪದುಮಣ್ಣನಿಗೆ "ನಿನ್ನ ಹಿರಿಯ ಹೆಂಡತಿ ಲಿಂಗಮ್ಮನ ೧೩ ಮಂದಿ ಮಕ್ಕಳು ಹತ್ತಿ ಕಂಕಣದವರು, ಈ ಚಿಕ್ಕ ಹೆಂಡತಿ ಸಿರಿವಂತೆಯ ೩ ಮಂದಿ ಮಕ್ಕಳು ಉಣ್ಣೆ ಕಂಕಣದವರು, ನೀನು ಕುರಿಗೌಡನಾಗಿ, ಬೀರಯ್ಯನು ನಿನ್ನ ಕುಲದೈವವೆಂದು ಭಾವಿಸಿ, ನಿನ್ನ ಗುರು ಸರೂರು ಶಾಂತಮುತ್ತಯ್ಯನಿಗೆ ಒಕ್ಕಲು ಆಗಿ, ರೇವಣಸಿದ್ಧನಿಗೆ ಮಗನಾಗಿ ಬದುಕು ಮಾಡು" ಎಂದು ಬುದ್ಧಿ ಹೇಳಿ, ಕೈಲಾಸಕ್ಕೆ ಹೋದನು (೪೨–೬೧).

ಇತ್ತ ತಾಯಿ ಮಲ್ಲಮ್ಮ ಕನಸಿನಲ್ಲಿ ಮಗ ಪದುಮಗೊಂಡನನ್ನು ಕಂಡು ಗೋಳಿಟ್ಟಳು. ಮೊಮ್ಮಗ ಶಾಂತನನ್ನು ಮುದ್ದಾಡಿ ಅತ್ತಳು. ಅಷ್ಟರಲ್ಲಿ ಬಂದ ಶರಣನೊಬ್ಬ ಕನಸು ಶುಭಕರವಾದುದಾಗಿದೆ. ನಿನ್ನ ಮಗ ಬರುತ್ತಾನೆ. ಮೊಮ್ಮಗ ಶಾಂತಯ್ಯನಿಗೆ ಮದುವೆ ಮಾಡಿ ಸುಖದಿಂದ ಬಾಳು ಎಂದು ಹೇಳಿ ಹೋದನು. ಆ ಪ್ರಕಾರ ಪರವಿಗೊಂಡನ ಮೊಮ್ಮಗಳು ದೇವಮ್ಮನೊಂದಿಗೆ ಮದುವೆ ಮಾಡಿದರು (೬೨–೮೭).

ಪದುಮಣ್ಣ ಕುರಿ ಹಿಂಡಿನೊಂದಿಗೆ ತೊಗರಸಿ ಗ್ರಾಮಕ್ಕೆ ಬಂದು, ತಮ್ಮ ಹೊಲದಲ್ಲಿ ಹೊಗಿಸಿದನು. ೯ ಕೋಟಿ ಕುರಿಗಳಿಂದ ಹಾಳಾಗುತ್ತಲಿದ್ದ ಹೊಲವನ್ನು ಕಂಡು ಅಣ್ಣ ಮಲ್ಲಣ್ಣನು

ಊರ ಜನರಿಗೆ ದೂರು ಹೇಳಿದ. ಅವರೆಲ್ಲ ಬಂದು ಪದುಮಣ್ಣ ಬೀರಯ್ಯರ ಎದುರು ಸೋತು ಹಿಂದುರಿಗಿದರು. ಆಗ ಆದಿಗೊಂಡ ಮಲ್ಲಮ್ಮ ಬಂದು "ನೀವು ಯಾರು? ಎಲ್ಲಿಂದ ಬಂದಿರಿ?" ಎಂದು ಕೇಳಲು "ನಾವು ಗಂಗಾಪುರದಿಂದ ಬಂದೆವು" ಎಂದು ಸುಳ್ಳು ಹೇಳಿದರು. ತಂದೆ ತಾಯಿಗಳ ಗುರುತು ಹಿಡಿದು ಪದುಮಣ್ಣ ಕಣ್ಣಲ್ಲಿ ನೀರು ತಂದ. ತಂದೆತಾಯಿ ಮಗನನ್ನು ಮನೆಗೆ ಕರೆದುಕೊಂಡು ಹೋದರು (೮೭-೧೦೧).

ಸಂಧಿ ಮೂರು : ಪದುಮಣ್ಣ ಗೃಹಪ್ರವೇಶ ಮಾಡಿ ಪತ್ನಿ ಲಿಂಗಾಜಿಯನ್ನು ಕಂಡ. ಎಲ್ಲರೂ ಊಟೋಪಚಾರ ಮುಗಿಸಿದರು. ಮರುದಿನ ಪದುಮಣ್ಣ ಹೆಂಡತಿ ಲಿಂಗಾಜಿ, ಮಗ ಶಾಂತಯ್ಯನೊಂದಿಗೆ ಪ್ರಯಾಣ ಬೆಳೆಸಿದ (೧-೩೦). ದಿನಗಳೆದಂತೆ ತಂದೆ ರಕ್ಕಸಿಯೊಡನೆ ಬದುಕು ಮಾಡುವುದನ್ನು ಕಂಡು ಶಾಂತಯ್ಯ ಬೇಸರಪಟ್ಟ. ನಾಲ್ಕು ಹಿಂಡು ಕುರಿ ತೆಗೆದುಕೊಂಡು ಹೆಂಡತಿಯೊಂದಿಗೆ ಬೇರೆ ಹೊರಟುಹೋದ. ಶಾಂತಯ್ಯನ ಭಕ್ತಿ ಪರೀಕ್ಷೆಗಾಗಿ ಶಿವ ಲಕ್ಷೋಪಲಕ್ಷ ಜಂಗಮರೊಂದಿಗೆ ಬಂದನು. ಶಾಂತಯ್ಯ ದಂಪತಿಗಳು ಒಂದು ಕರಗ ಅಂಬಲಿ ಯಿಂದ ಎಲ್ಲರನ್ನು ತಣಿಸಿದರು (೩೦-೫೫).

ಶಾಂತಯ್ಯ ತನ್ನ ಹಿಂಡುಗಳೊಂದಿಗೆ ಚಕೋರ ಹೊಳೆಗೆ ಹೋದ. ಶಿವಪೂಜೆಯಲ್ಲಿ ಮಗ್ನನಾದ. ಹರಿದು ಬಂದ ಬಂಡಿಗಳು ಶಾಂತಯ್ಯನ ನೋಟದಿಂದ ತುಂಡುತುಂಡಾಗಲು. ಬಂಡಿಕಾರರು ಅಂಜಿದರು. ಶಾಂತಯ್ಯನು ಅವರಿಗೆ ಶಿವಸಿದ್ಧಯ್ಯನ ಗುಡಿಕಟ್ಟಲು ಹೇಳಿದ. ಅವರು ಒಪ್ಪಿಕೊಳ್ಳಲು ಬಂಡಿ ಮೊದಲಿನಂತಾದವು. ಬಂಡಿಕಾರರು ಕಟ್ಟಿಸಿದ ಗುಡಿಯಲ್ಲಿ ಶಿವ ನೆಲೆಸಿದ. ಶಾಂತಯ್ಯನ ಭಕ್ತಿಗೆ ಶಿವನು ಮೆಚ್ಚಿ "ವರವನ್ನು ಕೇಳು" ಎಂದು ಹೇಳಿದ. ಶಾಂತಯ್ಯ "ದೀಕ್ಷೆ ನೀಡಿರಿ ಎಂದು ಬೇಡಿಕೊಂಡ". ಪಂಡಿತಾರಾಧ್ಯ, ರೇವಣಾರಧ್ಯ, ಏಕೋರಾಮ, ಮರುಳಸಿದ್ಧ ಹೆಸರಿನ ನಾಲ್ಕು ಕಳಸ ಹೂಡಿ ದೀಕ್ಷೆಗೆ ಅಣಿಮಾಡಲಾಯಿತು. ಶಿವನನ್ನು ಪೂಜಿಸಲು ಕರಿಯ ಮಲ್ಲಿಗೆ ಬೇಕೆಂದು ಶಾಂತಯ್ಯ ಕೊರಳಿಗೆ ಖಡ್ಗ ಹೂಡಿಕೊಳ್ಳುವಲ್ಲಿ, ಶಿವ ಮೆಚ್ಚಿ ಕರಿಯ ಮಲ್ಲಿಗೆ ಸುರಿಸಿದ. ಈ ಸ್ಥಳ ಸರವೂರು ಎಂದು ಪ್ರಸಿದ್ಧಿ ಪಡೆಯಿತು. ಶಾಂತಯ್ಯನಿಗೆ ಮಂತ್ರಪೂರ್ವಕ ದೀಕ್ಷೆ ನೀಡಲಾಯಿತು. ಆಗ ಶಿವನು ಶಾಂತಯ್ಯನಿಗೆ "ಇಂದು ನೀನು ಲಿಂಗಾಂಗಿಯಾದೆ. ಮುಂದೆ ಜರುಗಲಿರುವ ಪವಾಡ ಪ್ರಸಂಗದಲ್ಲಿ ಜಯಶಾಲಿಯಾಗು, ತಂದೆ ಪದುಮಣ್ಣನ ಮಕ್ಕಳು ನಿನ್ನಲ್ಲಿಗೆ ಬಂದು, ಕರುಣೆ ಪಡೆದು ಉಣ್ಣೆಯ ಕಂಕಣದವರೆನಿಸುವರು, ನಿನ್ನ ಸಂತತಿಯವರು ಹತ್ತಿಯ ಕಂಕಣದವರೆನಿಸುವರು" ಎಂದು ಹೇಳಿ ಬಯಲಾದನು (೫೬-೯೧).

ಸಂಧಿ ನಾಲ್ಕು : ಕಲ್ಯಾಣದಲ್ಲಿ ಕಿನ್ನರಯ್ಯನೆಂಬ ಶರಣ ಅಕ್ಕಸಾಲಿ ಕೆಲಸ ಮಾಡುತ್ತಿದ್ದನು. ಬಿಜ್ಜಳನ ರಾಣಿಯ ಆಭರಣ ಮಾಡಿಕೊಡುವ ವಿಷಯದಲ್ಲಿ ರಾಜನಿಗೂ ಇವನಿಗೂ ಮನಸ್ತಾಪ ಹುಟ್ಟಲು, ಕಿನ್ನರಯ್ಯ ಆ ವೃತ್ತಿ ಬಿಟ್ಟು, ಕೈಯಲ್ಲಿ ಕಿನ್ನರಿ ಹಿಡಿದ. ತ್ರಿಪುರಾಂತ ಕೇಶನಿಂದ ದಿನಾಲು ಹನ್ನೊಂದು ಹಣ ಪಡೆದು ಜೀವನ ಸಾಗಿಸುತ್ತಿದ್ದ (೧-೧೫). ನಗರದ ವೇಶ್ಯೆ ಚೆನ್ನೆ ಎಂಬವಳಿಗಾಗಿ ವಿಟನಾದ ಬೊಪ್ಪಯ್ಯ ಖರೀದಿಸಿಕೊಂಡು ಹೊರಟ ತಗರು ತಪ್ಪಿಸಿಕೊಂಡು, ತ್ರಿಪುರಾಂತಕ ದೇವಾಲಯ ಹೊಕ್ಕಿತು. ಬೆನ್ನಟ್ಟಿ ಬಂದ ಬೊಪ್ಪಯ್ಯನಿಗೆ ಎರಡುಪಟ್ಟು, ಹಣಕೊಟ್ಟು ಬ್ರಹ್ಮಯ್ಯ ಅದನ್ನು ಬಿಡಿಸಿಕೊಂಡು, ಲಿಂಗಮುದ್ರೆ ಒತ್ತಿದ.

ವೇಶ್ಯೆ ಚೆನ್ನೆ ಹಣವನ್ನು ಮುಟ್ಟದೆ, ಆ ತಗರನ್ನೆ ತರಲು ಹೇಳಿದಳು. ಬೊಪ್ಪಯ್ಯ ದೇವಾಲಯಕ್ಕೆ ಹೋಗಿ ಕಿನ್ನರಯ್ಯನಿಗೆ ತಗರ ಕೊಡಲು ಕೇಳಿದ. ಕಿನ್ನರಯ್ಯ ನಿರಾಕರಿಸಿದ. ಆಗ ಚೆನ್ನೆ ಸಿಟ್ಟಿಗೆದ್ದು, ತಗರ ತರಲು ತಮ್ಮಂದಿರೊಂದಿಗೆ ಬೊಪ್ಪಯ್ಯನನ್ನು ಕಳಿಸಿದಳು. ಜಗಳ ಏರ್ಪಟ್ಟು ಕಿನ್ನರಯ್ಯನ ಕೈಯಲ್ಲಿ ಚೆನ್ನೆಯ ತಮ್ಮಂದಿರು ಮಡಿದರು. ಆಕೆ ದೂರು ನೀಡಲು ಸಿಟ್ಟಿಗೆದ್ದ ಬಿಜ್ಜಳನ ಸೈನ್ಯ ತ್ರಿಪುರಾಂತಕ ದೇವಾಲಯವನ್ನು ಮುತ್ತಿತು. ಬ್ರಹ್ಮಯ್ಯ ಸೈನ್ಯವನ್ನು ಸಂಹರಿಸಿದ. ದೂತರು ಓಡಿ ಬಂದು, ಈ ಸುದ್ದಿಯನ್ನು ಬಿಜ್ಜಳನಿಗೆ ಹೇಳಿದರು (೧೬-೮೫).

ಸಂಧಿ-ಐದು : ಸೈನ್ಯ ಹಾಳಾದ ಸುದ್ದಿಯನ್ನು ಕೇಳಿ ಕುಪಿತನಾದ ಬಿಜ್ಜಳ ಬಸವಣ್ಣನನ್ನು ಕರೆದು "ನಿನ್ನ ಶರಣರಿಂದ ತೊಂದರೆಯಾಗುತ್ತಿದೆ" ಎಂದು ಎಲ್ಲವನ್ನು ವಿವರಿಸಿದ. ಬಸವಣ್ಣ ಶರಣ ಕಿನ್ನರಯ್ಯನನ್ನು ಸಮರ್ಥಿಸಿ ನುಡಿದ. ನಿಜ ಸಂಗತಿ ತಿಳಿದುಕೊಳ್ಳಲು, ಬಿಜ್ಜಳನು ಕೊಂಡೆಯ ಮಂಚಣ್ಣನನ್ನು ಕಿನ್ನರಯ್ಯನಲ್ಲಿಗೆ ಕಳಿಸಿದ. ಕಿನ್ನರಯ್ಯನಿಂದ ಎಲ್ಲ ವಿವರ ಕೇಳಿದ ಮಂಚಣ್ಣ ತಿರುಗಿ ಬಂದು "ಕಿನ್ನರಯ್ಯನು ತಗರನ್ನು ಖರೀದಿಸಿದ್ದು, ಇದಕ್ಕೆ ಶಿವನಿಂದ ಸಾಕ್ಷಿ ಹೇಳಿಸುವುದಾಗಿ ತಿಳಿಸಿದ" ಎಂದು ಬಿಜ್ಜಳನಿಗೆ ಹೇಳಿದ. ಬಿಜ್ಜಳ ತನ್ನ ಅಧಿಕಾರಿಗಳೊಂದಿಗೆ ತ್ರಿಪುರಾಂತಕ ದೇವಾಲಯಕ್ಕೆ ನಡೆದ. ಸಭೆ ಸೇರಿತು. ಕಿನ್ನರಯ್ಯನ ಬಿನ್ನಹ ಕೇಳಿ, ನಡೆದ ಸಂಗತಿಯನ್ನು ಶಿವ ಹೇಳಿದ. ಬೆರಗಾದ ಬಿಜ್ಜಳ "ನಿಮ್ಮ ಶರಣರು ಮಹಿಮಾಶಾಲಿಗಳು" ಎಂದು ಬಸವಣ್ಣನಿಗೆ ನುಡಿದು, ಕಿನ್ನರಯ್ಯನಿಗೆ ಕೈಮುಗಿದು ಅರಮನೆಗೆ ಮರಳಿದ (೧-೩೯). ಎಲ್ಲರೂ ತಗರನ್ನು ಅಲಂಕರಿಸಿ 'ಶಂಭು' ಹೆಸರಿಟ್ಟು ಕರೆಯತೊಡಗಿತು. ಅದು ಮನೆಮನೆ ಹೊಕ್ಕು ಮೇದು ಕೊಬ್ಬಿ ಬೆಳೆಯಿತು. ಕಂಡವರಿಗೆ ಇರಿಯತೊಡಗಿತು. ತ್ರಿಪುರಾಂತಕದೇವರ ಪೂಜೆ ಕೆಡಿಸತೊಡಗಿತು. ಇದು ಈ ಭವಿಗಳ ನಡುವೆ ಇಲ್ಲಿರಬಾರದು. ಶರಣರ ಕುರಿಯ ಹಿಂಡಿನಲ್ಲಿ ಬಿಡಬೇಕೆಂದು ವಿಚಾರಿಸಿದ. ಭಕ್ತನಾದ ಸರವೂರ ಶಾಂತಯ್ಯನಲ್ಲಿ ಬಿಟ್ಟು ಬಂದ (೪೦-೬೦).

ಸಂಧಿ ಆರು : ಕಲ್ಯಾಣದಲ್ಲಿ ರಟ್ಟಮತ (ಕುರುಬ) ದವರು ಹಾಲು ಮೊಸರು ಮಾರುವ ಶೆಟ್ಟಿತನ ಕೈಕೊಂಡಿದ್ದರು. ಆಗ ಇವರ ಭಕ್ತಿ ಪರೀಕ್ಷೆಗಾಗಿ ಶಿವನು ಮಲ್ಲಶೆಟ್ಟಿ ಸಿದ್ದಶೆಟ್ಟಿ ಹೆಸರಿನಿಂದ ಕಲ್ಯಾಣದಲ್ಲಿ ವ್ಯಾಪಾರ ಮಾಡತೊಡಗಿದನು. ಸ್ಥಳೀಯ ವ್ಯಾಪಾರಿ ಗಂಗಿಶೆಟ್ಟಿ ಯೆಂಬುವನು ಬಂದು ಇವರನ್ನು ವಿಚಾರಿಸಲು, "ನಾವು ಕಡವಾಡದಿಂದ ಇಲ್ಲಿಗೆ ವ್ಯಾಪಾರಕ್ಕಾಗಿ ಬಂದಿದ್ದೇವೆ" ಎಂದು ಹೇಳಿ, ತಮ್ಮ ಉದ್ಯೋಗ ಮುಂದುವರೆಸಿದರು (೧-೧೭).

ಒಂದು ದಿನ ಕುರುಬರು ಸತ್ತಕುರಿ ಮಾರುವುದರತ್ತ ಮಲ್ಲಿಶೆಟ್ಟಿ, ಸಿದ್ಧಶೆಟ್ಟಿಯರು ಎಲ್ಲ ಸಹವರ್ತಕರ ಗಮನ ಸೆಳೆದು, ಕುರುಬರನ್ನು ಕಲ್ಯಾಣದಿಂದ ಹೊರಹಾಕಿಸಿದರು. ಕುರುಬರು ದೂರದ ಅಡವಿಯಲ್ಲಿ ಬಾಳತೊಡಗಿದರು. ೧೨ ವರ್ಷದ ಬಳಿಕ ಬೇರೊಬ್ಬ ವ್ಯಾಪಾರಿ ವೇಷದಿಂದ ಕುರುಬರಲ್ಲಿಗೆ ಬಂದ ಸಿದ್ಧಶೆಟ್ಟಿಗೆ ಕುರುಬರ ಮಲ್ಲಿಗೌಡ "ಅಡವಿಯಲ್ಲಿ ನಮಗೆ ಯಾರೂ ದಿಕ್ಕಿಲ್ಲ, ಗುರುವಿಲ್ಲ" ಎಂದು ದುಃಖದಿಂದ ಹೇಳಿದನು. "ಸರವೂರಿನಲ್ಲಿ ಶಾಂತಯ್ಯ ಹೆಸರಿನ ಗುರುವಿದ್ದಾನೆ. ಅವನನ್ನು ಕಂಡು ಈ ಕಷ್ಟ ಪರಿಹರಿಸಿಕೊಳ್ಳಿರಿ" ಎಂದು ಸಿದ್ಧಶೆಟ್ಟಿ ತಿಳಿಸಿದ. ಕುರುಬಗೌಡರೆಲ್ಲ ಸರೂರಿಗೆ ಹೋಗಿ ತಮ್ಮನ್ನು ಕಲ್ಯಾಣದಿಂದ ಹೊರಗೆ ಹಾಕಿ ೧೨ ವರ್ಷವಾಯಿತು ಎಂದು ಅಳಲು ತೋಡಿಕೊಂಡರು. ಅಷ್ಟರಲ್ಲಿ ಕಿನ್ನರಿ ಬ್ರಹ್ಮಯ್ಯನು ತಂದು ಬಿಟ್ಟಿದ್ದ ತಗರು ಸತ್ತ ಸುದ್ದಿಯನ್ನು

ಕುರಿಕಾಯುತ್ತಿದ್ದ ಚಿಕ್ಕ ಹೇಳಿದ. ಗುರು ಸೂಚಿಸಿದ ಪವಾಡ ಪ್ರಸಂಗ ಒದಗಿ ಬಂದಿತೆಂದು ಶಾಂತಯ್ಯ ಭಾವಿಸಿ, ಸತ್ತ ತಗರನ್ನು ಸಿಂಗರಿಸಿ ಮೆರವಣಿಗೆಯಲ್ಲಿ ಕಲ್ಯಾಣ ಪ್ರವೇಶಿಸಿದನು. ಮಲ್ಲಿಶೆಟ್ಟಿ ಮೊದಲಾದ ಶರಣರು ಇದನ್ನು ತಡೆದರು. ಶಾಂತಯ್ಯ ಸಿಟ್ಟಿಗೆದ್ದು "ಬಸವ ಹುಟ್ಟಲು ತೀರ್ಥಪ್ರಸಾದವಾದವು. ತಗರನ್ನು ಮತ್ತೆ ಹುಟ್ಟಿಸಿ ಪವಾಡ ಮೆರೆಯುವೆ" ಎಂದು ಹೇಳಿದ (೧೭-೬೯).

ಎಲ್ಲರೂ ತಗರಿನೊಂದಿಗೆ ತ್ರಿಪುರಾಂತಕ ದೇವಾಲಯಕ್ಕೆ ಬಂದರು. ಸುದ್ದಿ ತಿಳಿದ ಬಸವಣ್ಣ ಎಲ್ಲ ಭಕ್ತರಿಗೂ ಪವಾಡ ನೋಡಲು ಬರಬೇಕೆಂದು ಡಂಗುರ ಹೊಡೆಯಿಸಿದ. ಚೆನ್ನಬಸವಣ್ಣ, ಕಿನ್ನರಿ ಬೊಮ್ಮಯ್ಯ, ಸೊನ್ನಲಿಗೆ ಸಿದ್ಧರಾಮ, ಚೆನ್ನಯ್ಯ, ಹೊನ್ನಯ್ಯ, ಕನ್ನದ ಮಾರಯ್ಯ, ಕಕ್ಕಯ್ಯ, ಕಲಕೇತ ಬ್ರಹ್ಮಯ್ಯ, ಒಕ್ಕಲಿಗ ಮುದ್ದಗೌಡ, ನುಲಿಯ ಚಂದಯ್ಯ, ಗುಂಡ ಬ್ರಹ್ಮಯ್ಯ, ಕೊಂಡಗುಳಿ ಕೇಶಿರಾಜ ಮೊದಲಾದವರು ಬಸವಣ್ಣನೊಂದಿಗೆ ಬಂದರು. ಬೇರೆ ಬೇರೆ ಕಂತೆಯ ಜಂಗಮರು ಅಲ್ಲಿ ನೆರೆದರು (೭೦-೮೯).

ಸಂಧಿ-ಏಳು : ಈ ಪವಾಡ ವಿಫಲವಾಗುವುದೆಂದು ಬಿಜ್ಜಳ ಕೊಂಡೆ ಮಂಚಣ್ಣ ಮೊದಲಾದವರು ನುಡಿಯುವುದನ್ನು ಕೇಳಿ, ಶರಣರು ಚಿಂತೆ ತಾಳಿದರು. ಈ ಪವಾಡ ಗೆದೆಯುವಂತೆ ಮಾಡಬೇಕೆಂದು ಬಸವಣ್ಣನಿಗೆ ಬಿನ್ನವಿಸಿಕೊಂಡರು. "ಶಿವಭಕ್ತ ಶಾಂತಯ್ಯನಿಂದ ಮಾತ್ರ ಇದು ಸಾಧ್ಯ"ವೆಂದು ಬಸವಣ್ಣ ಹೇಳಲು, ಎಲ್ಲರೂ ಶಾಂತಯ್ಯನನ್ನು ಬೇಡಿಕೊಂಡರು. ಬಸವಣ್ಣ ಶಾಂತಯ್ಯನ ಹಣೆಗೆ ಭಸಿತವನ್ನಿಟ್ಟು, ಶಾಂತಯ್ಯನು ರೇವಣಸಿದ್ಧ(ಶಿವ)ನ ಕರುಣೆಯಿಂದ ಎದ್ದುಬಂದು ತಗರಿಗೆ ಭಸಿತವಿಟ್ಟು, ತೀರ್ಥಪ್ರಸಾದ ಮೈಮೇಲೆ ಸಿಂಪಡಿಸಲು, ತಗರು ಎದ್ದು ನಿಂತಿತು. ಶರಣರು ಶಾಂತಯ್ಯನನ್ನು ಹೊಗಳಿದರು. ಬಸವಣ್ಣ ಶಾಂತಯ್ಯನನ್ನು ಮುದ್ದಾಡಿ "ಬೇಕಾದುದನ್ನು ಕೇಳು" ಎಂದನು. ಆಗ ಶಾಂತಯ್ಯ, "ನನಗೆ ಏನೂ ಬೇಡ, ಊರಿಗೆ ಎರವಾಗಿರುವ ಕುರುಬ ಸಮಾಜದವರ ಕುಲವನುದ್ಧರಿಸು" ಎಂದು ಕೇಳಿದ. ಶಾಂತಯ್ಯನ ನಿರಪೇಕ್ಷ ಭಕ್ತಿಗೆ ಎಲ್ಲರೂ ಬೆರಗಾದರು. ದೇಶದೇಶದ ಕುರುಬರೆಲ್ಲ ಕಲ್ಯಾಣಕ್ಕೆ ಆಗಮಿಸಿದರು. ಬಸವಣ್ಣ ಅವರೆಲ್ಲರಿಗೆ ಮನ್ನಿಸಿ "ನೀವೆಲ್ಲ ಹಾಲುಮತದವರೆನಿಸಿ ಬಾಳಿರಿ, ಶಾಂತಯ್ಯನ ಭಕ್ತರಾಗಿ ಮೆರೆಯಿರಿ" ಎಂದು ಹೇಳಿದ (೧-೪೦). ಎಲ್ಲರೂ ಹಾಲೋಕುಳಿ ಆಡಿದರು. ಶಾಂತಯ್ಯನೇ ತಮ್ಮ ಗುರುವೆಂದು, ಕುರುಬರೆಲ್ಲ ಅವನಿಗೆ ನಮಸ್ಕರಿಸಿದರು. ಆಗ ಶಾಂತಯ್ಯನು ಬಸವಣ್ಣನನ್ನು ಕುರಿತು "ಹಾಲುಮತಕ್ಕೆ ನನ್ನನ್ನು ಗುರುವನ್ನಾಗಿ ಮಾಡಿದೆ. ಇದಕ್ಕೆ ಕುರುಹು ಯಾವುದು?" ಎಂದು ಕೇಳಿದ. "ಮೂರು ಲೋಕಕ್ಕೆ ಪ್ರಜ್ವಲಿಸುವ ಕುಲ ನಿಮ್ಮದು. ನಿನಗೆ ಮೂರೇಣಿನ ಕಂಥೆಯೇ ಕುರುಹು" ಎಂದು ಬಸವಣ್ಣ ಹೇಳಿದ. ಎಲ್ಲ ಶರಣರೂ ಸಂತೋಷಪಟ್ಟು ಶಾಂತಯ್ಯನನ್ನು ಕಲ್ಯಾಣದಲ್ಲಿ ಮೆರೆಸಿದರು. ಕಲ್ಯಾಣದಲ್ಲಿ ಈ ಪವಾಡದ ಗುರುತು ಇರಲೆಂದು ಕಲಕೇತಯ್ಯ ತಗರಿನ ಕೋಡು ಹಿಡಿದು, ವಜ್ರದ ಕಂಬವನ್ನು ತಿವಿದನು. ಕೂಡಲೇ ಕಂಬದಿಂದ ಬಂಗಾರದ ಮಳೆ ಸುರಿಯಿತು. ಬಿಜ್ಜಳ ಮೊದಲಾದವರು ಹೊಗಳಿದರು. ಬಳಿಕ ಶಾಂತಯ್ಯ ಬಿಜ್ಜಳನ ಅರಮನೆಯಲ್ಲಿ ಗೌರವ ಪಡೆದು ಕಲ್ಯಾಣದಿಂದ ಹೊರಟನು (೪೧-೮೯).

ಸಂಧಿ–ಎಂಟು : ಕಲ್ಯಾಣದಿಂದ ಹೊರಟು ಹಾಲುಮತದವರೊಂದಿಗೆ ಶಾಂತಯ್ಯ ಸರವೂರ ಸಮೀಪ ಬಂದನು (೧–೧೩). ಈ ವಾರ್ತೆ ಕೇಳಿ ಸಂಗಮ್ಮಾಜಿ ಸಂಭ್ರಮದಿಂದ ಬಳಗದೊಂದಿಗೆ ಬರಮಾಡಿಕೊಂಡಳು. ಸಿಂಗರಿಸಿದ ಸರವೂರನ್ನು ನೋಡುತ್ತ ಬಂದು, ರೇವಣಸಿದ್ಧನಿಗೆ ವಂದಿಸಿ ದೇವಾಲಯದಲ್ಲಿ ಕುಳಿತರು. ಸಂಗಮ್ಮ ಎಲ್ಲ ಶರಣರ ಪಾದಪೂಜೆ ಮಾಡಿದಳು. ಬಸವಣ್ಣ ಮೊದಲಾದ ಜಂಗಮರು ಲಿಂಗಪೂಜೆ ಮುಗಿಸಿ, ಊಟ ಮಾಡಿದರು. "ಹಾಲುಕುಲದವರಿಗೆ ಒಡೆಯನಾಗು" ಎಂದು ಬಸವರಾಜ ಹರಸಿ ಕಲ್ಯಾಣಕ್ಕೆ ನಡೆದನು (೧೪–೬೦).

ಚಿಕ್ಕಶಾಂತಯ್ಯ ಸಂಗಮ್ಮ ನಮುರ್ದಪ್ಪುತ
ವರ ಶಾಂತಮುತ್ತಯ್ಯನ ಕೊಟ್ಟು
ಕ್ಷೀರ ಕುಲದೋರ್ಗೆಲ್ಲ ಒಡೆಯನೆ ನೀನೆಂದು
ಹರಸಿಯಿಟ್ಟಳು ಭಸಿತವನು*

ಬಳಿಕ ರೇವಣಸಿದ್ಧ(ಶಿವ)ನು ಶಾಂತಯ್ಯಗೆ ಸಾಲೋಕ್ಯ ಪದವಿಯನ್ನಿತ್ತನು. ದೀಪ ಕರ್ಪುರ ಬೆರೆದಂತೆ ಕರಿಕಂಠನಂಘ್ರಿಯಲ್ಲಿ ಎರಕವಾದ ಶಾಂತಯ್ಯನ ಮೇಲೆ ಪುಷ್ಪವೃಷ್ಟಿ ಮಾಡಿ, ಎಲ್ಲ ಗಣಂಗಳು ಕಲ್ಯಾಣಕ್ಕೆ ಹೊರಟರು. ಬೇರೆ ಬೇರೆ ಊರುಗಳಿಂದ ಬಂದಿದ್ದ ಕುರುಬಗೌಡರು ಹಿಂದಿರುಗಿದರು. ಸರವೂರಲ್ಲಿ ರೇವಣಸಿದ್ಧ(ಶಿವ) ಒಪ್ಪಿ ಎಲ್ಲರಿಗೂ ಲೇಸನ್ನುಂಟು ಮಾಡುತ್ತಲಿರುವನು (೬೧–೬೮).

ಸಮಸ್ಯೆಗಳು

ಈವರೆಗೆ ಕುರುಬ ಸಮಾಜವನ್ನು ಕುರಿತು ಸಿದ್ಧಮಂಕ ಚರಿತೆ ಮತ್ತು ತಗರ ಪವಾಡ (ಶಾಂತಮುತ್ತಯ್ಯನ ಚರಿತೆಯೆಂದೂ ಕರೆಯಬಹುದು). ಹೀಗೆ ಎರಡು ಕೃತಿಗಳು ಲಭ್ಯವಾಗಿವೆ. ಸತ್ತ ಕುರಿಯನ್ನು ಕಲ್ಯಾಣದೊಳಗೆ ತಂದ ತಪ್ಪಿಗಾಗಿ ರಾಜಧಾನಿಯಿಂದ ಹೊರಹಾಕಿಸಿಕೊಂಡ ಕುರುಬರು, ೧೨ ವರ್ಷಗಳ ಬಳಿಕ ತಮ್ಮ ಧಾರ್ಮಿಕ ನಾಯಕನ ಕೃಪೆಯಿಂದ ಕಲ್ಯಾಣ ಪ್ರವೇಶಿಸಿದುದೇ ಎರಡೂ ಕೃತಿಗಳ ಕೇಂದ್ರವಸ್ತು.

---

* 'ಇ' ಪ್ರತಿಯಲ್ಲಿ ಈ ಪದ್ಯ ಹೀಗಿದೆ:

ಚಿಕ್ಕಶಾಂತಯ್ಯನ ಧರ್ಮಪತ್ನಿ ಸಂಗಮ್ಮನ ವರಪುತ್ರ
ವರಗುರು ಶಾಂತಯ್ಯನು ಕೊಟ್ಟ
ಕ್ಷೀರಕುಲಕೆ ನೀನು ಒಡೆಯನಾಗೆಂದು
ಹರಸಿ ಇಟ್ಟರು ಭಸಿತವನು

ಇಲ್ಲಿ ಶಾಂತ(ಮುತ್ತ)ಯ್ಯ ಮತ್ತು ಚಿಕ್ಕಶಾಂತಯ್ಯಗಳ ಸಂಬಂಧ, ಇವರೊಂದಿಗಿನ ಸಂಗಮ್ಮನ ಸಂಬಂಧ ಅಸ್ಪಷ್ಟವಾಗಿದೆ. ಈ ಹಿಂದೆ ಚಿಕ್ಕಶಾಂತಯ್ಯ ಎಂಬ ಹೆಸರೂ, ಸಂಗಮ್ಮನ ಹೆಸರೂ ಹಲವು ಸಲ ಬಂದಿದೆ. ಈ ಪರಸ್ಪರ ಸಂಬಂಧಗಳನ್ನು ಸ್ಪಷ್ಟಪಡಿಸಬೇಕಾಗಿದೆ.

ಕುರುಬ ಸಮಾಜದಲ್ಲಿ ಶಾಂತಮುತ್ತಯ್ಯನ ಸಂಪ್ರದಾಯ, ಸಿದ್ಧಮಂಕನ ಸಂಪ್ರದಾಯ ಎಂಬ ಎರಡು ಕವಲುಗಳಿವೆ. ಶಾಂತಮುತ್ತಯ್ಯನ ಕಥೆಯಲ್ಲಿ ರೇವಣಸಿದ್ಧನಿಗೆ ಪ್ರಾಧಾನ್ಯ, ಸಿದ್ಧಮಂಕನ ಕಥೆಯಲ್ಲಿ ಸಿದ್ಧರಾಮನಿಗೆ ಪ್ರಾಧಾನ್ಯವೆಂದು ಈ ಕೃತಿಗಳಿಂದ ತಿಳಿದುಬರುತ್ತದೆ. ಕೆಲವೊಮ್ಮೆ ಈ ಸಂಪ್ರದಾಯುಗಳಲ್ಲಿ ಘರ್ಷಣೆಯೂ ಏರ್ಪಟ್ಟಂತಿದೆ. ಇತ್ತೀಚೆ ಸಿಕ್ಕ ತುರುವೇಕೆರೆ ತಾಮ್ರಪತ್ರ(ಅನುಬಂಧದಲ್ಲಿ ತಾಮ್ರಪತ್ರ-೧ ನೋಡಿರಿ)ದಲ್ಲಿಯೂ ಇದನ್ನು ಬೆಂಬಲಿಸುವ ವಿಷಯವಿದೆ; ಈ ಎರಡೂ ಸಂಪ್ರದಾಯವನ್ನು ಬೆಂಬಲಿಸುವಂತೆ ಸರೂರಿನಲ್ಲಿ ಕುರುಬ ಕುಟುಂಬಗಳಿವೆ. ಇದಲ್ಲದೆ ಚಿಕ್ಕನಾಯಕನಹಳ್ಳಿಯಲ್ಲಿ ಕುರುಬರ ಮೂರು ಮಠಗಳಿದ್ದು, ಇವುಗಳಲ್ಲಿ ಎರಡು ಮಠಗಳಿಗೆ ಕುರುಬರು ಒಡೆಯರು. ಒಂದು ಮಠಕ್ಕೆ ಮಂಕ ಒಡೆಯರು ಅಧಿಕಾರಿಗಳು. ಮಂಕ ಒಡೆಯರು ಲಿಂಗಾಯತರಾಗಿರುವುದು ಗಮನಿಸಬೇಕಾದ ಅಂಶವಾಗಿದೆ. ಒಟ್ಟಾರೆ ಈ ಎರಡೂ ಸಂಪ್ರದಾಯಗಳ ಇತಿಹಾಸ, ಲಕ್ಷಣಗಳ ಅಧ್ಯಯನ ಇಂದು ನಡೆಯಬೇಕಾಗಿದೆ.

ಎರಡನೆಯದಾಗಿ, ಸತ್ತ ಕುರಿ ಸಂಬಂಧವಾಗಿ ಕಲ್ಯಾಣದಿಂದ ಹೊರಗೆ ಹೋದ ಕುರುಬರು ಒಳಗೆ ಪ್ರವೇಶಿಸುವಂತೆ ಪ್ರಯತ್ನಿಸಿದವ, ಅಂದರೆ ತಗರ ಪವಾಡ ಮೆರೆದವ ಸಿದ್ಧಮಂಕನೋ? ಶಾಂತಮುತ್ತಯ್ಯನೋ? ಎಂಬ ಪ್ರಶ್ನೆಯನ್ನು ಬಿಡಿಸಬೇಕಿದೆ.

ಈ ಮುಖ್ಯ ಸಮಸ್ಯೆಗಳಲ್ಲದೆ ಈ ಕೃತಿಯಲ್ಲಿ ಇನ್ನೂ ಕೆಲವು ಸಮಸ್ಯೆಗಳಿವೆ. ಇಲ್ಲಿ ರೇವಣಸಿದ್ಧನ ಹೆಸರು ಪದೇ ಪದೇ ಕಂಡುಬರುತ್ತದೆ. ಆದರೆ ಈತನು ವ್ಯಕ್ತಿ ರೇವಣಸಿದ್ದನೋ, ಶಿವನನ್ನೇ ರೇವಣಸಿದ್ಧ ಹೆಸರಿನಿಂದ ಕರೆಯಲಾಗಿದೆಯೋ, ವ್ಯಕ್ತಿ ರೇವಣಸಿದ್ಧನೋ, ಶಿವನನ್ನೇ ರೇವಣಸಿದ್ಧ ಹೆಸರಿನಿಂದ ಕರೆಯಲಾಗಿದೆಯೋ, ವ್ಯಕ್ತಿ ರೇವಣಸಿದ್ಧನಾಗಿದ್ದರೆ ಶಾಂತಯ್ಯನು ರೇವಣಸಿದ್ಧನ ನೇರ ಶಿಷ್ಯನೋ, ದೂರದ ಕಾಲದವನಾಗಿ ಶಾಂತಮುತ್ಯಯ್ಯ ಕೇವಲ ನೆನೆದಿರುವನೋ –ಎಂಬ ಸಂದೇಹ ಇಲ್ಲಿ ಆಗಾಗ ಎದುರಾಗುತ್ತದೆ.

"ಕಂದ ನೀ ಕುಡಿವೊಕ್ಕಲಿಗ ಕುರಿಗೂಡಿದ ಕಾರಣದಿಂದ ಕುರುಬಗೌಡನಾದೆ" (೨-೫೮) ಎಂಬ ಉಲ್ಲೇಖ ಕುರುಬರಿಗೂ ಕುಡಿವೊಕ್ಕಲಿಗರಿಗೂ ಇರಬಹುದಾದ ಸಂಬಂಧವನ್ನು ಧ್ವನಿ ಸುತ್ತಿದ್ದು, ಇದನ್ನು ಸ್ಪಷ್ಟಪಡಿಸುವುದು ಅವಶ್ಯವಿದೆ (ಸಿದ್ಧಮಂಕ ಚರಿತೆಯಲ್ಲಿಯೂ ಇಂಥ ಉಲ್ಲೇಖವಿದೆ (೨-೧೧).

ಶಾಂತಮುತ್ತಯ್ಯನ ಹೆಂಡತಿ ದೇವಮ್ಮ (೨-೮೭). ಆದರೆ ಕಲ್ಯಾಣದಿಂದ ಬಂದ ಶಾಂತಮುತ್ತಯ್ಯನಿಗೆ ಸಂಗಮ್ಮ ಹೆಸರಿನವಳು ಎದುರುಗೊಳ್ಳುತ್ತಾಳೆ (೮-೧೪). 'ಇ' ಪ್ರತಿಯಲ್ಲಿ "ಚಿಕ್ಕಶಾಂತಯ್ಯನ ಧರ್ಮಪತ್ನಿ ಸಂಗಮ್ಮ" (೮-೬೧ ಅ.ಟಿ.) ಎಂದು ಹೇಳಲಾಗಿದೆ. ಈ ಗೊಂದಲವನ್ನು ಬಿಡಿಸಿಕೊಳ್ಳಬೇಕಾಗಿದೆ. ತಂದೆ ಪದ್ಮಗೊಂಡನಿಂದ ಬೇರ್ಪಟ್ಟು ಹೆಂಡತಿ ಲಿಂಗಾಜಿಯೊಂದಿಗೆ ದೂರ ಹೋದ ಶಾಂತಯ್ಯ ಜಂಗಮಾರೋಗಣೆ ಪವಾಡ ಮೆರೆದ ಸಂದರ್ಭದಲ್ಲಿ "ಚಿಕ್ಕಶಾಂತಯ್ಯನು ಕಾಣುತ ಮನದೊಳು ಉಕ್ಕುವ ನದಿಯಂತುಬ್ಬದನು" (೩-೪೯), "ಬಾಲಶಾಂತನು ಎರಗಿದನು" (೩-೫೪) ಎಂದು ಹೇಳಲಾಗಿದ್ದು ಒಮ್ಮೆಲೆ 'ಚಿಕ್ಕ' 'ಬಾಲ' ವಿಶೇಷಣಗಳೇಕೆ ಎಂಬ ಸಂದೇಹ ಮೂಡುತ್ತದೆ. ಕಾವ್ಯದ ಕೊನೆಯಲ್ಲಿಯೂ (೮-೬೧) ಈ ಪದ ಮತ್ತೆ ಬರುತ್ತದೆ. ಈ ಶಾಂತಯ್ಯ, ಚಿಕ್ಕಶಾಂತಯ್ಯ ಹೆಸರುಗಳು ದಿಕ್ಕು ತಪ್ಪಿಸುತ್ತವೆ. ಬೇರೊಂದೆಡೆಯ "ಇಂಡೆಯ

ಶಾಂತಯ್ಯ" (೩-೮೨) ಎಂಬುದು ಸರೂರ ಶಾಂತಯ್ಯನಿಂದ ಭಿನ್ನವ್ಯಕ್ತಿಯೋ ಅಭಿನ್ನವ್ಯಕ್ತಿಯೋ ಸ್ಪಷ್ಟವಾಗುವುದಿಲ್ಲ. ಕಥೆ ಬೆಳೆಯುತ್ತಿದ್ದಂತೆಯೇ ತಟ್ಟನೇ ಅಂತ್ಯದಲ್ಲಿ ಶಾಂತಯ್ಯನ ನಿಧನ ಸೂಚನೆ ಬರುತ್ತದೆ. ಈ ತೊಡಕುಗಳಿಂದಾಗಿ ಓದುಗ ಗಲಿಬಿಲಿಗೊಳ್ಳುತ್ತಾನೆ. ಉತ್ತಮ ಪ್ರತಿ ಸಿಕ್ಕರೆ ಮಾತ್ರ ಈ ತೊಂದರೆಗಳು ನಿವಾರಣೆಯಾಗಬಹುದು.

ಚಾರಿತ್ರಿಕ

ಮೇಲೆ ಹೇಳಿದಂತೆ ಇದು ಚರಿತ್ರೆಯ ಪುರಾಣೀಕೃತ ಕೃತಿಯಾಗಿದ್ದು, ಈ ಪುರಾಣದ ಒಡಲಿನಲ್ಲಿ ಚರಿತ್ರೆ ಹೀಗೆ ತುಂಬಿಕೊಂಡಿದೆ.

ಕೊಲ್ಲಾಪುರ, ತೊಗರಸೆ, ಕಲಸೆನಾಡು, ಸರೂರು, ಕಲ್ಯಾಣ ಈ ಪ್ರದೇಶಗಳಲ್ಲಿ ಈ ಕಥೆಯ ಘಟನೆಗಳು ಜರುಗಿವೆ. ರೇವಣಸಿದ್ಧನು ಕೊಲ್ಲಾಪುರ ಮಾಯೆಯನ್ನು ಸೋಲಿಸಿದನೆಂಬ ಇಲ್ಲಿಯ ಘಟನೆ ವೀರಶೈವ ಬೇರೆ ಕಾವ್ಯಗಳಲ್ಲಿ ಮತ್ತೆ ಮತ್ತೆ ಬಂದಿದೆ. ಶಾಂತಯ್ಯನ ತಂದೆ ಪದುಮಣ್ಣ, ಅಜ್ಜ ಆದಿಗೊಂಡ ಇವರ ಊರು ತೊಗರಸೆಯೆಂದು ಈ ಕೃತಿ ಹೇಳುತ್ತದೆ. ಇದು ಶಿವಮೊಗ್ಗ ಜಿಲ್ಲೆಯ ತೊಗರ್ಸಿ ಆಗಿರಬಹುದು. ರೇವಣಸಿದ್ಧ ಕುರಿಹಿಂಡನ್ನು ಕಾಯಲು ಅಷ್ಟದೇವತೆಗಳಿಗೆ ಒಪ್ಪಿಸಿ "ಕಲಶವುಯೆಂಬೊ ದೇಶದೊಳುತ್ತರಕಾಗಿ ನಡೆದನು" (೧-೩೯) ಎಂದು ಹೇಳಲಾಗಿದೆ. ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಇಂದಿನ ನಾಡಕಲಸಿ ಗ್ರಾಮವನ್ನು ರಾಜಧಾನಿ ಮಾಡಿಕೊಂಡ "ಕಲಸೆನಾಡು" ಹೆಸರಿನ ಸಣ್ಣ ರಾಜ್ಯವೊಂದು ಅಸ್ತಿತ್ವದಲ್ಲಿತ್ತೆಂದು ಶಾಸನಗಳು ತಿಳಿಸುತ್ತವೆ. ೧೩ನೆಯ ಶತಮಾನದಲ್ಲಿ ಹೊಯ್ಸಳರ ಮಾಂಡಳಿಕನಾಗಿ ಬೀರದೇವರಸನು ಇದನ್ನು ಆಳುತ್ತಲಿದ್ದ. ಈ ಹೆಸರು ಕುರುಬರ ದೈವತ ಬೀರಪ್ಪನನ್ನು ನೆನಪಿಸುತ್ತದೆ. ಇಲ್ಲಿ ಮಲ್ಲಿಕಾರ್ಜುನ ದೇವಾಲಯವಿದೆ. ಸರೂರಿನದು ಮಲ್ಲಿಕಾರ್ಜುನ ದೇವಾಲಯವೆಂಬುದನ್ನು ಇಲ್ಲಿ ಸ್ಮರಿಸಬಹುದು.

ತಂದೆ ಪದುಮಣ್ಣನಿಂದ ಬೇರೆಯಾಗಿ, ಹೆಂಡತಿಯೊಂದಿಗೆ ಕುರಿಹಿಂಡು ಸಹಿತ ಹೊರಟ ಶಾಂತಯ್ಯನಿಗೆ ಭಕ್ತಿಕಾಣಿಕೆಯಾಗಿ ಚಕೋರಿ ಹೊಳೆಯ ತೀರದಲ್ಲಿ ದೇವಾಲಯ ನಿರ್ಮಿಸಲಾಯಿತೆಂದೂ, ಇಲ್ಲಿ ಶಿವನಿಂದ ಶಾಂತಯ್ಯ ದೀಕ್ಷೆ ಪ್ರಾಪ್ತವಾಯಿತೆಂದೂ, ಆಗ ದೇವಲೋಕದಿಂದ ಸುರಿದ ಕರಿಯ ಮಲ್ಲಿಗೆಯಿಂದಾಗಿ ಸರೂರು ಎಂಬ ಗ್ರಾಮ ನಿರ್ಮಾಣವಾಯಿತೆಂದೂ ಹೇಳಲಾಗಿದೆ. ಇದು ಇಂದಿನ ಮುದ್ದೇಬಿಹಾಳ ತಾಲೂಕಿನ ಸರೂರು ಗ್ರಾಮವೆಂದು ಖಚಿತವಾಗಿದೆ. ಹೀಗೆ ಶಾಂತಯ್ಯನ ಗ್ರಾಮವಾಗಿರುವುದರಿಂದ, ಕಾವ್ಯದ ತುಂಬ ಇದು ಮುಖ್ಯ ಪಾತ್ರವಹಿಸಿದೆ. ಈ ಗ್ರಾಮದ ಶಾಸನಗಳಲ್ಲಿ ಮೂರ್‍ನಾಲ್ಕು ಕಡೆಗೆ ಮಂಕಯ್ಯ ಎಂಬ ಹೆಸರು ಕಾಣುವುದೇ ಹೊರತು ಶಾಂತಮುತ್ತಯ್ಯನ ಹೆಸರು ಕಾಣುವುದಿಲ್ಲವೆಂಬುದು ಗಮನಿಸಬೇಕಾದ ಸಂಗತಿಯಾಗಿದೆ. ಇವನನ್ನು ಬಿಟ್ಟರೆ ಶಾಂತಯ್ಯನ ಅಜ್ಜ ಆದಿಗೊಂಡ, ಅಜ್ಜಿ ಮಲ್ಲಮ್ಮ, ತಂದೆ ಪದುಮಗೊಂಡ, ತಾಯಿ ಲಿಂಗಾಜಮ್ಮ, ಲಿಂಗಾಜಮ್ಮನ ತಂದೆ ಬಾದಾವಿ ಬಪ್ಪನಿಗೌಡ (೨-೧೦), ಹೆಂಡತಿ ಪರವಿಗೊಂಡನ ಮೊಮ್ಮಗಳು ದೇವಮ್ಮ ಇತ್ಯಾದಿ ಹೆಸರುಗಳು ಇಲ್ಲಿ ಎಡೆಪಡೆದಿವೆ. ಕಲ್ಯಾಣಕ್ಕೆ ಬಂದ ಸಿದ್ಧಶೆಟ್ಟಿ ಮಲ್ಲಶೆಟ್ಟಿಗಳು ತಾವು ಕಡವಾಡದವರೆಂದು ಹೇಳುತ್ತಾರೆ. ಇದು ಇಂದಿನ ಕಾರವಾರವಾಗಿದೆ. ಇಲ್ಲಿ ಗಮನಿಸಬೇಕಾದ ಇತರ ಅಂಶಗಳೆಂದರೆ ಶಾಂತಯ್ಯನ ಹತ್ತಿರ ಬಂದ ಗೌಡರು ಮತ್ತು ಅವರ ಊರುಗಳು. ದಡ್ಡೋಡಿನ ಹೆಗ್ಗೊಂಡಗೌಡ, ಉದುಗಿರಿಯ

ಕೇತಗೌಡ, ಚೆನ್ನವಾಡದ ಹೆಗ್ಗೊಂಡಗೌಡ, ಸೊನ್ನಲಿಗೆ ಕೆಂಪೆಗೌಡ, ಮಳೆಯಖೇಡದ ಸಿದ್ಧೇಗೌಡ, ಹೇಮಾವತಿಯ ಚಿಗದೇವಗೌಡ, ಸೊನ್ನಲಪುರದ ಸಿರಿಗೌಡ, ಕಾಮನಹಳ್ಳಿಯ ಕರಿಯ ತಿಮ್ಮೇಗೌಡ, ಅಂಕವಳ್ಳಿಯ ಆದಿಗೊಂಡ, ಬಂಕಾಪುರದ ಭದ್ರಗೌಡ, ಶಂಕರಪುರದ ರಾಮಣ್ಣಗೌಡ (೬-೩೮ ರಿಂದ ೪೨). ಇವುಗಳಲ್ಲಿ ಕೆಲವಾದರೂ ಐತಿಹಾಸಿಕ ಹೆಸರುಗಳಾಗಿರಬಹುದು.

ವ್ಯಕ್ತಿಗಳಲ್ಲಿ ಬಸವ, ಬಿಜ್ಜಳ, ಕಿನ್ನರಿ ಬ್ರಹ್ಮಯ್ಯ ಮೊದಲಾದವರು ಪ್ರಸಿದ್ಧರೇ ಆಗಿದ್ದಾರೆ. ಕಿನ್ನರಿ ಬ್ರಹ್ಮಯ್ಯ ಮೊದಲು ಅಕ್ಕಸಾಲಿಯಾಗಿದ್ದು, ಆಮೇಲೆ ಕಿನ್ನರಿ ನುಡಿಸುವ ಕಾಯಕದವನೆಂಬುದೂ, ಅವನಿಗೆ ತ್ರಿಪುರಾಂತಕೇಶ್ವರ ದಿನಾಲೂ ೧೧ ಹಣ ಕೊಡುತ್ತಿದ್ದನೆಂಬುದೂ, ಲಿಂಗಮುದ್ರೆ ಒತ್ತಿದ್ದ ತಗರ ಸಾಕಿದ್ದನೆಂಬುದೂ ಹೊಸ ಅಂಶಗಳಾಗಿವೆ.

"ಮುದ್ದು ಬಸವನಿಪ್ಪ ಕಲ್ಯಾಣ (೬-೩೯), "ಬಸವ ಹುಟ್ಟಲು ತೀರ್ಥಪ್ರಸಾದವಾದವು" (೬-೭೦), "ಶಶಿಧರನಂದದಿ ಇರುತಿರ್ಪ ಬಸವೇಶ" (೬-೭೪), "ಭಕ್ತಶಿರೋಮಣಿ ಬಸವಯ್ಯ" (೬-೭೭) ಎಂದು ಮುಂತಾಗಿ ಇಲ್ಲಿ ಬಸವಣ್ಣನ ಬಗ್ಗೆ ಭಕ್ತಿ-ಗೌರವ ತೋರಲಾಗಿದೆ. ಈ ಕೃತಿಯಲ್ಲಿ ಶಾಂತಯ್ಯನನ್ನು ಬಿಟ್ಟರೆ ಎದ್ದು ಕಾಣುವ ಬಸವಣ್ಣ, ಶಾಂತಯ್ಯನ ಜೀವನದ ಮುಖ್ಯ ಘಟನೆ ತಗರ ಪವಾಡ. ಅವನು ಈ ಪವಾಡ ಮೆರೆಯಲು ನೈತಿಕಬಲ ನೀಡುವ ವ್ಯಕ್ತಿಯಂತೆ ಬಸವಣ್ಣ ಇಲ್ಲಿ ಕಾಣಿಸಿಕೊಳ್ಳುತ್ತಾನೆ. ಪವಾಡದ ಆರಂಭದಲ್ಲಿ ಎಲ್ಲ ಶರಣರು, ಸತ್ತ "ತಗರನು ನಡೆಸಿರಿ ನಿಮ್ಮ ದಮ್ಮಯ್ಯ" (೭-೭) ಎಂದು ಬೇಡಿಕೊಳ್ಳುವಲ್ಲಿ, ಅವರು ಬಸವಣ್ಣನ ಶಕ್ತಿಯ ಮೇಲಿಟ್ಟ ಭರವಸೆ ಎದ್ದು ಕಾಣುತ್ತದೆ. ಇದಕ್ಕೆ ಅಷ್ಟೇ ವಿನಯದಿಂದ ಬಸವಣ್ಣ "ತಗರಿಗೆ ನಿಮ್ಮಯ ಕರುಣ ಕಟಾಕ್ಷವಾದರೆ ಈಗ ಘಮ್ಮನೇಳುವುದು" (೭-೯) ಎಂದೂ, ಈ ಪವಾಡ ವಿಜಯ "ಚಿತ್ತಜಾರಿಯ ಭಕ್ತ ಶಾಂತಯ್ಯ ಹೊರತಾಗಿ ಮತ್ತೋರ್ವ ರಿಂದ ಆಗುವುದೇ" (೭-೧೦) ಎಂದೂ ನುಡಿಯುತ್ತಾನೆ ಮತ್ತು ಶಾಂತಯ್ಯನ ಹಣೆಗೆ ವಿಭೂತಿ ಹಚ್ಚಿ ಪವಾಡ ವಿಜಯವನ್ನು ಹಾರೈಸುತ್ತಾನೆ. ಪವಾಡ ಯಶಸ್ಸು ಪಡೆಯುತ್ತಲೇ ಶಾಂತಯ್ಯ "ಎತ್ತಿದ ತಗರ ಪವಾಡ" (೭-೨೩) ಎಂದು ಬಸವಣ್ಣನೇ ನಿರ್ಣಾಯಕನಂತೆ ಮೊದಲು ಘೋಷಿಸುತ್ತಾನೆ. ಶಾಂತಯ್ಯನನ್ನು ಎತ್ತಿ ಮುದ್ದಾಡಿ, ಅವನ ಅಪೇಕ್ಷೆಯಂತೆ ಕಲ್ಯಾಣದಿಂದ ಹೊರಗಾಗಿದ್ದ ಕುರುಬರನೆಲ್ಲ ಒಳಗೆ ಬರುವಂತೆ ಆಮಂತ್ರಿಸಿ, "ಭಸಿತವನಿಟ್ಟು ಸುಖದಿಂದ ಇರಿ ಹಾಲುಮತದವರೆನಿಸಿ" (೫-೩೭) ಎಂದೂ, ಶಾಂತಯ್ಯನಿಗೆ "ಕ್ಷೀರಕುಲಕೆ ನೀನು ಒಡೆಯನಾಗು" (೭-೩೯) ಎಂದೂ ಹೇಳುತ್ತಾನೆ. ಹಾಲುಮತದವರೆಲ್ಲ "ಗುರುವೀತ ನಮಗೆ ಶಾಂತಯ್ಯ" (೭-೪೨) ಎಂದು ಒಪ್ಪಿಕೊಳ್ಳುತ್ತಾರೆ. ಆಗ ಬಸವಣ್ಣ "ಮೂರೇಣಿನ ಕಂಥೆ ಅಧಿಕವೆಂದು ಬಸವೇಶ ಕ್ಷೀರಕುಲದ ಗೌಡರ್ಗಿತ್ತ" ಎಂಬುದು ಆ ಕುಲಕ್ಕೆ ಬಸವಣ್ಣ ನೀಡಿದ ಸಾಮಾಜಿಕ ಘನತೆಯ ದ್ಯೋತಕವಾಗಿದೆ. ಇಲ್ಲೆಲ್ಲ ಸಾಮಾಜಿಕ ಅನ್ಯಾಯಕ್ಕೆ ಒಳಗಾದವರ ಬಗ್ಗೆ ಬಸವಣ್ಣನ ಅಂತಃಕರಣ ಎದ್ದು ಕಾಣುತ್ತದೆ.

ಈ ಕೃತಿಯ ಕೇಂದ್ರವ್ಯಕ್ತಿ ಶಾಂತಯ್ಯ. ಎಂಟು ಸಂಧಿಗಳ ಈ ಕಾವ್ಯದಲ್ಲಿ ಪೂರ್ವಜರ ಜೀವನ ಕಥನವನ್ನು ಬಿಟ್ಟರೆ ಶಾಂತಯ್ಯನ ಜೀವನ ಮೂರನೆಯ ಸಂಧಿಯ ಉತ್ತರಾರ್ಧದಿಂದ ಆರಂಭವಾಗುತ್ತದೆ(೩-೩೧). ಅವನ ಮುಂದಿನ ಜೀವನದಲ್ಲಿ ಎರಡು ಮುಖ್ಯ ಘಟನೆಗಳು

ಜರುಗುತ್ತವೆ. ಒಂದು: ಶಿವ(ರೇವಣಸಿದ್ಧ)ನಿಂದ ಸರೂರಿನಲ್ಲಿ ಲಿಂಗದೀಕ್ಷೆ, ಇನ್ನೊಂದು: ಕಲ್ಯಾಣದಲ್ಲಿ ತಗರ ಪವಾಡ ವಿಜಯ.

ತಂದೆಯಿಂದ ಬೇರ್ಪಟ್ಟು ಶಿವಪೂಜೆ, ಶಿವಧ್ಯಾನದಲ್ಲಿದ್ದ ಶಾಂತಯ್ಯ, ಜಂಗಮವೇಷದಲ್ಲಿ ಬಂದ ಶಿವನಿಗೆ – ಅಗಣಿತ ಜಂಗಮಪರಿವಾರಕ್ಕೆ "ಒಂದು ಕರಗ ಅಂಬಲಿ" (೩–೫೫)ಯಿಂದ ತೃಪ್ತಿಪಡಿಸುತ್ತಾನೆ. ಮತ್ತು ಚಕೋರ ಹೊಳೆಯ ತೀರದ (ಸರೂರಿ)ಲ್ಲಿ ಶಿವ(ರೇವಣಸಿದ್ಧ)ನಿಗಾಗಿ ದೇವಾಲಯ ನಿರ್ಮಾಣವಾಗಲು ಕಾರಣೀಭೂತನಾಗುತ್ತಾನೆ. ಇದರಿಂದ ಸುಪ್ರೀತನಾದ ಜಂಗಮರೂಪಿ ಶಿವನಿಗೆ ನನ್ನನ್ನು "ಕರಜಾತನನ ಮಾಡು" (೩–೬೫) ಎಂದು ಬೇಡಿಕೊಳ್ಳುತ್ತಾನೆ. ಆಗ ಶಿವನು ಪಂಡಿತಾರಾಧ್ಯ, ರೇವಣಾರಾಧ್ಯ, ಏಕೋರಾಮಾರಾಧ್ಯ, ಮರುಳಾರಾಧ್ಯ – ಹೀಗೆ ನಾಲ್ಕು ಕಲಶಪೂರ್ವಕ ಮಧ್ಯದಲ್ಲಿ ಗುರುಕಲಶ ಹೂಡಿ (ಇದೆಲ್ಲ ಕವಿಯ ಕಾಲವಾಗಿರುವ ೧೭ನೆಯ ಶತಮಾನದ ಕಲ್ಪನೆ) ದೀಕ್ಷೆ ಆರಂಭಿಸುತ್ತಾನೆ. ಈ ಸಂದರ್ಭದಲ್ಲಿ ಸುರಿದ ಕರಿಯ ಮಲ್ಲಿಗೆಯಿಂದಾಗಿ ಆ ಸ್ಥಳಕ್ಕೆ ಸರವೂರು ಹೆಸರು ಪ್ರಾಪ್ತವಾಯಿತು. ಬಳಿಕ ಗುರುವು ವಿಭೂತಿ ಲೇಪಿಸಿ, ಕಿವಿಯಲ್ಲಿ ಮಂತ್ರ ಹೇಳಿ, ಲಿಂಗದೀಕ್ಷೆ ನೀಡಿದ. ಮುಂದೆ ನಿನ್ನಿಂದ ಪವಾಡ ಜರುಗಲಿದೆ ಎಂದು ಆದೇಶ ನೀಡಿದ.

ಶಾಂತಯ್ಯನ ಜೀವನದ ಇಂಥ ಇನ್ನೊಂದು ಘಟನೆ, ತಗರ ಪವಾಡ. ಕಲ್ಯಾಣದಲ್ಲಿ ಕಿನ್ನರಿ ಬೊಮ್ಮಯ್ಯನ ಲಿಂಗಮುದ್ರೆ ಒತ್ತಿದ ತಗರು ದಿನಗಳೆದಂತೆ ಮದವೇರಿ ಜನರಿಗೆ ಇರಿಯಲು, ಲಿಂಗದ ಪೂಜೆಯನ್ನು ಕೆಡಿಸಲು ಆರಂಭಿಸುತ್ತದೆ. ಕಿನ್ನರಯ್ಯ ಇದನ್ನು ಸರೂರಿನ ಶಾಂತಯ್ಯನ ಕುರಿಹಿಂಡಿನಲ್ಲಿ ಬಿಡುತ್ತಾನೆ. ಒಮ್ಮೆ ಕಲ್ಯಾಣದ ಕುರುಬರು ಸತ್ತ ಕುರಿಯನ್ನು ಪೇಟೆಯಲ್ಲಿ ತಂದ ಪ್ರಮಾದ ಕಾರಣವಾಗಿ ರಾಜಧಾನಿಯಿಂದ ಹೊರಹಾಕಿಸಿಕೊಳ್ಳುತ್ತಾರೆ. ೧೨ ವರ್ಷಗಳ ಹೊರಗಿದ್ದ ಅವರು ಸರೂರಿಗೆ ಬಂದು, ತಮಗೆ ಕಲ್ಯಾಣ ಪ್ರವೇಶ ಏರ್ಪಡಿಸಬೇಕೆಂದು ಬಿನ್ನವಿಸುವಷ್ಟರಲ್ಲಿ ಕಿನ್ನರಯ್ಯ ಬಿಟ್ಟುಹೋಗಿದ್ದ ಕುರಿ ಸಾಯುತ್ತದೆ. ಅದನ್ನು ಶಾಂತಯ್ಯ ತೆಗೆದುಕೊಂಡು ಬಂದು ಕಲ್ಯಾಣ ಪ್ರವೇಶಿಸಲು, ಪ್ರಜೆಗಳು ತಡೆದು, ಇದನ್ನು ಬದುಕಿಸುವ ಆಹ್ವಾನ ಒಡ್ಡುತ್ತಾರೆ. ಈ ಸುದ್ದಿ ತಿಳಿದ ಬಿಜ್ಜಳ–ಪ್ರಜೆಗಳು, ಬಸವಣ್ಣ–ಶರಣರು ನೆರೆಯುತ್ತಾರೆ.

ಇಲ್ಲಿ ಬಸವಾದಿ ಪ್ರಮಥರು ಮತ್ತು ಶಾಂತಯ್ಯ ಪರಸ್ಪರ ತೋರುವ ಗೌರವ, ಭಕ್ತಿ, ದೃಶ್ಯವಾಗಿ ಮೂಡಿನಿಂತಿದೆ. ಬಸವಣ್ಣ ಶಾಂತಯ್ಯನ ಹಣೆಗೆ ವಿಭೂತಿ ಲೇಪಿಸಿ "ಮೇಷ ಪವಾಡದ ಮೆರೆಸಬೇಕು" ಎಂದು ನೈತಿಕ ಬೆಂಬಲ ನೀಡುತ್ತಾನೆ. ಶಾಂತಯ್ಯ ಭಸಿತವಿಟ್ಟು, ಪಾದೋದಕ ಸಿಂಪಡಿಸಲು ತಗರ ಜೀವ ಪಡೆಯುತ್ತದೆ. ಶರಣರ ಉತ್ಸಾಹ ಉಕ್ಕೇರುತ್ತದೆ. "ಬೇಕಾದುದನ್ನು ಬೇಡು" ಎಂದು ಬಸವಣ್ಣ ಕೇಳಲು "ನನಗೆ ಎಲ್ಲ ಭಾಗ್ಯವೂ ಇದೆ. ಈ ರಟ್ಟಕುಲದವರನ್ನು ಉದ್ಧರಿಸು" (೭–೩೩) ಎಂದು ಬಿನ್ನವಿಸಿಕೊಳ್ಳುತ್ತಾನೆ. ಬಸವಣ್ಣ ಕಲ್ಯಾಣದೊಳಗೆ ಕುರುಬರನ್ನು ಬರಮಾಡಿಕೊಂಡು ದಿಕ್ಕುದಿಕ್ಕಿನ ಕುರುಬರಿಗೆ ಉಡುಗೊರೆ ನೀಡಿ, ಭಸಿತವಿಟ್ಟು, "ಸುಖದಿಂದ ಇರಿ ಹಾಲುಮತದವರೆನಿಸಿ" ಎಂದು ಹರಸುತ್ತಾನೆ. "ಹಾಲು ಮತದ ಕುಲದವರ್ಗೆಲ್ಲ ಶಾಂತಯ್ಯ....... ನೀನೆ ಗುರುವಾಗು" ಎಂದು ಘೋಷಿಸುತ್ತಾನೆ. ಮತ್ತು ಗುರುತನದ ಕುರುಹಾಗಿ "ಮೂರೇಣಿನ ಕಂಥೆ" (೭–೪೫) ನೀಡುತ್ತಾನೆ. ಈ ಘಟನೆ ಕುರುಬ ಸಮಾಜದ ಸಂಕ್ರಮಣ ಸಂದರ್ಭವನ್ನು ಸೂಚಿಸುತ್ತದೆ.

ಮಂಟೇಸ್ವಾಮಿ ಸತ್ತ ಕರುವನ್ನು ಹೊತ್ತುಕೊಂಡು, ಶಾಂತಮುತ್ತಯ್ಯ ಸತ್ತ ಕುರಿ ತೆಗೆದುಕೊಂಡು ಕಲ್ಯಾಣ ಪ್ರವೇಶಿಸುವುದು ಸಂಕೇತಗಳೋ, ಸತ್ಯಗಳೋ ವಿಚಾರಿಸಬೇಕು. ಸಂಕೇತಗಳಾಗಿದ್ದರೆ ಸರಿಯಾಗಿ ವ್ಯಾಖ್ಯಾನಿಸಬೇಕು.

ಹಿಂದೆ ಹೇಳಿದ ದೀಕ್ಷಾ ಘಟನೆ ಕುರುಬ ವ್ಯಕ್ತಿಯ ವ್ಯಷ್ಟಿಕಲ್ಯಾಣವನ್ನು ಸೂಚಿಸಿದರೆ, ಈ ಪವಾಡ ಘಟನೆ ಕುರುಬ ಸಮಾಜದ ಸಮಷ್ಟಿಕಲ್ಯಾಣವನ್ನು ಧ್ವನಿಸುತ್ತದೆ. ಪವಾಡವನ್ನು ಸರಿಸಿ ನೋಡಿದರೆ, ಇದು ಕಾಡುವಾಸಿಯಾಗಿದ್ದ ಕುರುಬರು ಕಲ್ಯಾಣ ಪ್ರವೇಶದ ಮೂಲಕ ನಾಡಪ್ರಜೆಗಳಾದ ಘಟನೆಯೆನಿಸುತ್ತದೆ. ಬಿಜ್ಜಳನೆಂಬ ರಾಜವ್ಯಕ್ತಿ ಒಂದು ಕಡೆ, ಕುರುಬರೆಂಬ ಪ್ರಜಾಸಮುದಾಯ ಇನ್ನೊಂದೆಡೆ ನಿಂತ ಸಂದರ್ಭದಲ್ಲಿ, ಬಸವಾದಿ ಶರಣರು ಪ್ರಜಾಸಮುದಾಯವನ್ನು ಬೆಂಬಲಿಸಿದ, ಅವರಿಗೆ ನೈತಿಕ ಬೆಂಬಲ ನೀಡಿದ ಚಿತ್ರ ಗಮನಾರ್ಹವೆನಿಸುತ್ತದೆ. (ಹೆಚ್ಚಿನ ವಿವರಗಳಿಗಾಗಿ ನೋಡಿ: ಕುರುಬರ ಗುರು ಶಾಂತಮುತ್ತಯ್ಯ – ಮಾರ್ಗ:೪, ಪುಟ ೩೭೭)

ಸಮಾಜೋಧಾರ್ಮಿಕ

ಭಾರತದಲ್ಲಿ ಸಮಾಜ ಮತ್ತು ಧರ್ಮಗಳದು ಬಿಡಿಸಲಾರದ ಸಂಬಂಧ. ಈ ಸಮಾಜೋಧಾರ್ಮಿಕ ವ್ಯವಸ್ಥೆಯನ್ನೇ ಸಂಸ್ಕೃತಿಯೆನ್ನುವುದು. ಈ ಕೃತಿಯಲ್ಲಿ ಇಂಥ ಸಂಸ್ಕೃತಿಯ ಕೆಲವು ಆಕೃತಿಗಳು ಕಂಡುಬರುತ್ತವೆ.

ಈ ಮೊದಲು ಪ್ರಕಟವಾದ ಸಿದ್ಧಮಂಕ ಚರಿತೆಯಲ್ಲಿ ಸಿದ್ಧರಾಮನಿಗೆ ಪ್ರಾಶಸ್ತ್ಯ. ಈ ತಗರ ಪವಾಡದಲ್ಲಿ ರೇವಣಸಿದ್ಧನಿಗೆ ಪ್ರಾಶಸ್ತ್ಯ. ಆದುದರಿಂದ ಇವೆರಡೂ ರೇವಣಸಿದ್ಧ ಸಂಪ್ರದಾಯ, ಸಿದ್ಧರಾಮ ಸಂಪ್ರದಾಯಗಳ ಕವಲಾಗಿರಬಹುದೆನಿಸುತ್ತದೆ. ಶೈವ ನಾಥಪಂಥೀಯನಾದ ರೇವಣಸಿದ್ಧ ಬಸವಪಂಥದ ಲಿಂಗಾಯತನಾದುದು ಸಂದೇಹ. ಶೈವ ನಾಥಪಂಥೀಯ ಸಿದ್ಧರಾಮ ಲಿಂಗಾಯತನಾದುದು ಸ್ಪಷ್ಟ. ಈ ಸೂಕ್ಷ್ಮ ವ್ಯತ್ಯಾಸವು ರೇವಣಸಿದ್ಧ ಪರಂಪರೆಯ ಶಾಂತಮುತ್ತಯ್ಯ, ಸಿದ್ಧರಾಮ ಪರಂಪರೆಯ ಮಂಕಸಿದ್ಧರಲ್ಲಿರುವಂತೆ ಕಾಣುತ್ತದೆ. ಹೀಗಿದ್ದೂ ಈ ಕಾವ್ಯದಲ್ಲಿ ಶಾಂತಮುತ್ತಯ್ಯ ಮತ್ತು ಬಸವಣ್ಣ ಪರಸ್ಪರ ಗೌರವಿಸಿದುದನ್ನು ನೋಡಿದರೆ, ರೇವಣಸಿದ್ಧ ತಲೆಮಾರಿನಲ್ಲಿ ಲಿಂಗಾಯತವಾಗದ ಈ ಸಮಾಜ ಶಾಂತಮುತ್ತಯ್ಯನ ತಲೆಮಾರಿನಲ್ಲಿ ಆಗಿರುವ ಸಾಧ್ಯತೆಯಿದೆ.

ಲಿಂಗದೀಕ್ಷೆ ಪ್ರಸಂಗದಲ್ಲಿ ರೇವಣಸಿದ್ಧ(ಶಿವ) – ಶಾಂತಮುತ್ತಯ್ಯ ಸಂಬಂಧ, ತಗರ ಪವಾಡ ಸಂದರ್ಭದಲ್ಲಿ ಬಸವಣ್ಣ–ಶಾಂತಮುತ್ತಯ್ಯ ಸಂಬಂಧ ಎದ್ದು ಕಾಣುತ್ತದೆ. ಇದು ಕುರುಬ ಸಮಾಜ ಮತ್ತು ಶರಣ ಸಮಾಜಗಳ ಸಾಮರಸ್ಯವನ್ನು ಸಂಕೇತಿಸುತ್ತದೆ. ಇದಕ್ಕೆ ನಿದರ್ಶನವೆಂಬಂತೆ ರೇವಣಸಿದ್ಧನೂ ಕುರುಬರಿಗೂ, ಲಿಂಗಾಯತರಿಗೂ ಪೂಜ್ಯ. ಸಿದ್ಧರಾಮ, ಆಮುಗಿ ಸಿದ್ಧ, ಗೊಲ್ಲಾಳ ಮೊದಲಾದವರು ಎರಡೂ ಸಮಾಜಗಳಲ್ಲಿ ತುಂಬ ಮುಖ್ಯರೆನಿಸಿದ್ದಾರೆ. ಹಂಡೆಕುರುಬರು ಲಿಂಗಾಯತರಾಗಿಯೇ ಬೆಳೆದಿದ್ದಾರೆ. ಅನುಬಂಧ ೨ರ ತಾಮ್ರಶಾಸನ ದೇವಲೋಕದ ಅಸಂಖ್ಯಾತ ಮಹಾಗಣಂಗಳ(ಸಾಲು ೧–೩೩), ಸಿದ್ಧಗಣಂಗಳ (೩೩–೪೭), ಶಿವಭಕ್ತರಾದ ಹಲರ ವ್ಯಾಪಾರಿಗಳ ಬಿರುದಾವಳಿ (೪೭–೯೧), ಕಲ್ಯಾಣದ ಮಹಾತ್ಮೆ (೯೧–೧೭೨), ರೇವಣಸಿದ್ಧದೇವರ ಮಹಾತ್ಮೆ (೧೭೨–೨೦೭)ಗಳನ್ನು ಹೇಳುವಲ್ಲಿ ತೋರುವ ಉತ್ಸಾಹ, ಅವರ ಲಿಂಗಾಯತ ಸಮ್ಮುಖತ್ವವನ್ನು

ಇನ್ನೂ ಸ್ಪಷ್ಟಪಡಿಸುತ್ತದೆ. ಮೂರನೆಯ ತಾಮ್ರಪತ್ರ ಒಂದಿಷ್ಟು ಮುಂದುವರಿದ ಇತಿಹಾಸ ಹೇಳುತ್ತದೆ. ಒಟ್ಟಾರೆ ಮೂರು ತಾಮ್ರಶಾಸನಗಳ ಸಮಗ್ರ ಅಧ್ಯಯನ ಕೈಗೆತ್ತಿಕೊಳ್ಳಬೇಕಾಗಿದೆ.

ಈ ಧಾರ್ಮಿಕ ಸಂದರ್ಭಗಳನ್ನು ಬಿಟ್ಟರೆ ಕೆಲವು ಧಾರ್ಮಿಕ ಆಚರಣೆಗಳು ಇಲ್ಲಿ ಕಾಣುತ್ತವೆ. ಇವುಗಳಲ್ಲಿ ಶಾಂತಯ್ಯನಿಗೆ ಶಿವ(ರೇವಣಸಿದ್ಧ) ನೀಡಿದ ಲಿಂಗದೀಕ್ಷೆಯು ಇಂದು ಪ್ರಚಲಿತದಲ್ಲಿರುವ ಕಳಸ ಹೂಡುವುದು, ಈ ಕಳಸಗಳು ಅಚಾರ್ಯರನ್ನು ಸಂಕೇತಿಸುವುದು ಇತ್ಯಾದಿಗಳನ್ನು ನೆನಪಿಸುತ್ತದೆ. "ಈಶಗರ್ಪಿಸಿ ಗುರುವುಂಡು ಮಿಕ್ಕಿದ ಸುಪ್ರಸಾದ (೩-೪೦) ಎಂಬ ಮಾತು, ದೀಕ್ಷಾಪ್ರಸಂಗದ ವಿಭೂತಿಧಾರಣೆ, ಮಂತ್ರಬೋಧನೆ, ಲಿಂಗಾಂಗಿ ಶಬ್ದ ಬಳಕೆಗಳು ಮತಾಂತರದ ಇಲ್ಲವೆ ಗುರುಕರುಣೆಯ ಸೂಚನೆಗಳಾಗಿವೆ. ತಗರ ಪವಾಡ ಸಂದರ್ಭದಲ್ಲಿಯೂ ಇಂಥ ಪಾರಿಭಾಷಿಕ ಪದಗಳು ಬಳಕೆಯಾಗಿವೆ. "ಚಿನ್ನ ಬೆಳ್ಳಿಯ ತಾಮ್ರ ಲೋಹ ರುದ್ರಾಕ್ಷೆಯ ವರ್ಣವರ್ಣದ ಕಂತೆಯ ಜಂಗಮ"ರು, "ಹಂಚು ಕಂತೆಯ ಲಿಂಗ ಮಿಂಚುಳ್ಳ ಸುಲಿಪಲ್ಲ ಪಂಚಶಿಖಿಯ ಮುಖಭಸಿತದ ಜಂಗಮ"ರು ಇಲ್ಲಿ ಕಂಡು ಬರುತ್ತಾರೆ. ಶಾಂತಯ್ಯನಿಗೆ ಬಸವಣ್ಣ ದಯಪಾಲಿಸುವ "ಮೂರೇಣಿನ ಕಂಥೆ"ಯ ವಿಶೇಷ ಉಲ್ಲೇಖವಿಲ್ಲಿದೆ.

ನೇರವಾಗಿ ಕುರುಬರಿಗೆ ಸಂಬಂಧಿಸಿದ ಸಂಪ್ರದಾಯಗಳೂ ಇಲ್ಲಿ ಎಡೆಪಡೆದಿವೆ. ಪದ್ಮಗೊಂಡನ ರಾಕ್ಷಸಿ ಹೆಂಡತಿಯ ಮಕ್ಕಳು ಉಣ್ಣಿಕಂಕಣದವರು, ಲಿಂಗಮ್ಮನ ಮಕ್ಕಳು ಹತ್ತಿಕಂಕಣದವರೆಂದು ಹೇಳುವಲ್ಲಿ ಹತ್ತಿಕಂಕಣದ ಶ್ರೇಷ್ಠತೆಯ ಸೂಚನೆಯಿದೆ. ಯಾವುದೇ ಕಂಕಣದವರಿರಲಿ, ಅವರ ಗುರು ಶಾಂತಮುತ್ತಯ್ಯನಿಗೆ ಬಸವಣ್ಣ ನೀಡಿದ "ಮೂರೇಣಿನ ಕಂಥೆ" ಗೌರವಕ್ಕೆ ಈ ಸಮಾಜದಲ್ಲಿ ಈಗಲೂ ತುಂಬ ಪೂಜ್ಯತೆಯಿದೆ. ದೇವರಿಗೆ ಅರ್ಪಿಸುವ ಈ ಕಂಬಳಿಯನ್ನು ಪವಿತ್ರ ವಿಧಿವಿಧಾನಗಳಿಂದ ಕುರುಬರು ಈಗಲೂ ಸಿದ್ಧಪಡಿಸುತ್ತಾರೆ. ಕುರಿಯ ಹಿಂಡಿನಿಂದ ಅಚ್ಚಕರಿಯ ಸುಲಕ್ಷಣದ ಮರಿಯನ್ನು ಆಯ್ದುಕೊಂಡು, ಅದನ್ನು "ಕಂತೆಯ ಮರಿ" ಎಂದು ಕರೆದು, ಪತ್ರೆ ಪುಷ್ಪ ವಿಭೂತಿಯಿಂದ ಪೂಜಿಸುತ್ತಾರೆ. ಮರಿಯ ಮೈಮೇಲೆ ಉಣ್ಣೆ ಸಮೃದ್ಧವಾಗಿ ಬೆಳೆಯಲು ಒಡೆಯರು ಅದನ್ನು ಕತ್ತರಿಸಿ ತಂದು, ಮಡಿಯಿಂದ ನೂಲು ತೆಗೆದು ನೇಯುತ್ತಾರೆ. ಅದನ್ನು ಉತ್ಸವದೊಂದಿಗೆ ದೇವರಿಗೆ ಅರ್ಪಿಸುತ್ತಾರೆ. ಇಂಥ ಒಂದು ಮಹತ್ವದ ವಿಷಯ ಇಲ್ಲಿ ಎಡೆಪಡೆದಿದೆ (ಸಿದ್ಧಮಂಕನ ಚರಿತೆಯಲ್ಲಿಯೂ ಈ ಕಂಥೆಯ ಪ್ರಸ್ತಾಪವಿದೆ). ಕೈಯಲ್ಲಿ ಕರೆವ ಗಡಿಗೆ ಕಲ್ಲಿ ಕಾಗಡಿ, ಮೈಯೆಲ್ಲ ಜಿಡ್ಡು - ಇದು ಇಲ್ಲಿ ಬರುವ ಕುರುಬವ್ಯಕ್ತಿಯ ಚಿತ್ರ. ರಾಜಾನ್ನದಕ್ಕಿಯೋಗರ, ಪಳಿದ್ಯ, ಘೃತ, ಕಜ್ಜಾಯ, ಪಂಚಭಕ್ಷ ಪರಮಾನ್ನ, ಹಾಲುಬೋನ, ಅಂಬಲಿ, ಹೇರೀಳೆ, ನಿಂಬೆ, ಗೆಣಸು, ಮಾಗಾಯಿ, ನೆಲ್ಲಿಯ ಹಿಂಡಿ, ಬೆಲ್ಲವತ್ತದ ಹಣ್ಣು, ಬದನೆ ಬಜ್ಜಿ, ಹಾಗಲು ಕೋಡಬಳೆ, ನುಗ್ಗಿಹೀರೆಯ ಶಾಕ, ಸಂಡಿಗೆ, ಹಪ್ಪಳ, ಸಾಂಬಾರ, ಕಡಲೆಯ ಉಂಡೆ, ಎಳ್ಳುಂಡೆ, ಚಕ್ಕುಲಿ, ಮಂಡಿಗೆ, ಬೀಸೂರಿಗೆ, ಉದ್ದಿನೊಡೆ, ಸುಖಿನುಂಡೆ, ಸಣ್ಣಕ್ಕಿವಾಗರ, ಬೆಣ್ಣೆಕಾಸಿದ ತುಪ್ಪ, ಬಣ್ಣದೋರುವ ತೋಯ, ಅಣ್ಣಿಹಾಲಿನ ಗಟ್ಟಿ ಪಾಯಸ ಇತ್ಯಾದಿ ಊಟದ ಸಾಮಗ್ರಿಗಳನ್ನು ಇಲ್ಲಿ ಹೆಸರಿಸಲಾಗಿದೆ. ಹಾಲೋಕುಳಿ ಆಟದ ಪ್ರಸ್ತಾಪವೂ ಇಲ್ಲಿದೆ. ಹೀಗೆ ಒಂದು ಮಿತಿಯಲ್ಲಿ ಆ ಕಾಲದ ಸಾಂಸ್ಕೃತಿಕ ಚಿತ್ರ ಇಲ್ಲಿ ಮೂಡಿನಿಂತಿದೆ.

ಒಟ್ಟಾರೆ ಕವಿತ್ವ ದೃಷ್ಟಿಯಿಂದ ಸಾಮಾನ್ಯವಾಗಿದ್ದರೂ ಸಾಮಾಜಿಕ ಏಕೀಕರಣ, ಸಂಸ್ಕೃತಿಯ ಪ್ರತಿಪಾದನೆ ದೃಷ್ಟಿಯಿಂದ ಇಂಥ ಕೃತಿಗಳು ಮುಖ್ಯವೆನಿಸುತ್ತವೆ.

ಪರಿಷ್ಕರಣ

ಸಾಹಿತ್ಯದಲ್ಲಿ ಮಾರ್ಗ, ದೇಸಿ, ಜಾನಪದವೆಂಬ ಮೂರು ಶಾಖೆಗಳು ಒಡೆದು ಕಾಣುತ್ತವೆ. ಚಾಮರಸ ಲಕ್ಷ್ಮೀಶ ಮೊದಲಾದವರ ರಚನೆಗಳು ದೇಸಿಯೆಂದು ಬೇರೆ ಹೇಳಬೇಕಿಲ್ಲ. ದೇಶೀ ಸಾಹಿತ್ಯವೇ ಆಗಿದ್ದರೂ ಸಿದ್ಧಮಂಕ ಚರಿತೆ, ತಗರ ಪವಾಡಗಳು ಒಂದಿಷ್ಟು ಜನಪದ ಸಾಹಿತ್ಯದ ಲಕ್ಷಣ ಹೊಂದಿವೆ. ಅಂದರೆ ಲಿಖಿತ ಪರಂಪರೆಯಲಿ ಹುಟ್ಟಿ ಮೌಖಿಕ ಪರಂಪರೆಯಲ್ಲಿ ಬೆಳೆದಿವೆ. ಇದರಿಂದಾಗಿ ಇವುಗಳ ಪಾಠ ಸಿವುಡು ಬಿಚ್ಚಿದ ಸಸಿಯಂತಾಗಿ ಮೂಲ ಪಾಠನಿರ್ಣಯ ತುಂಬ ಕಷ್ಟಕರವೆನಿಸುತ್ತದೆ. ಪಾಠಾಂತರ ಗುರುತಿಸಲು ಬಾರದಷ್ಟು ಪ್ರತಿಯಿಂದ ಪ್ರತಿಗೆ ಪಾಠ ಚೆಲ್ಲಾಪಿಲ್ಲೆಯಾಗಿದೆ. ಹೀಗಾಗಿ ಒಂದು ಪ್ರತಿಯನ್ನು ಆಧಾರವಾಗಿಟ್ಟುಕೊಂಡು, ಸಂದೇಹ ಬಂದಲ್ಲಿ ಇನ್ನೊಂದರ ಭಿನ್ನಪಾಠವನ್ನು ಸ್ವೀಕರಿಸಿ, ನೇರ ಸ್ವೀಕಾರ ಸಾಧ್ಯವಾಗದಿದ್ದರೆ ಛಂದಸ್ಸಿಗೆ ಅನುಕೂಲವಾಗುವಂತೆ ಪರಿಷ್ಕರಿಸಿ, ಸಾಧ್ಯವಿದ್ದಲ್ಲಿ ಮಾತ್ರ ಪರಿಷ್ಕಾರಕ್ಕೆ ಚೌಕಕಂಸ ಬಳಸಿ ಇಲ್ಲಿ ಪಠ್ಯವನ್ನು ರಚಿಸಲಾಗಿದೆ. ಇದು ಅನಿವಾರ್ಯವೂ ಹೌದು. ಈ ಕೆಲಸಕ್ಕೆ ನಾವು ಬಳಸಿದ ಪ್ರತಿಗಳು ಮೂರು.

'ಅ' ಪ್ರತಿ : ಹಳೆಯ ಕಾಗದ ಪ್ರತಿ. ೧೧''x''೮. ಪಾನು ೧-೨೫. ಅಕ್ಷರ ಚೆನ್ನಾಗಿವೆ. ಸುಮಾರು ೨೦೦ ವರ್ಷಗಳ ಹಿಂದಿನದು. ಮೊದಲ ಪಾನಿನ ಮೇಲ್ಭಾಗ, ಮೊದಲ ಮತ್ತು ಎರಡನೆಯ ಪಾನುಗಳ ಕೆಳಭಾಗ ಅಲ್ಲಲ್ಲಿ ಹರಿದಿದೆ. ಪೂರ್ಣ ಪ್ರತಿ. ಇದನ್ನು ಆಧಾರ ಪ್ರತಿಯನ್ನಾಗಿಟ್ಟುಕೊಳ್ಳಲಾಗಿದೆ. ಗುಬ್ಬಿ ತಾಲೂಕು ಹಾಗಲವಾಡಿಯ ಕುರುಬ ಸಮಾಜದ ಶ್ರೀ ಗಂಗೇಸಿದ್ಧಯ್ಯ ಅವರ ಮನೆಯ ಪ್ರತಿ. ೪೦ ವರ್ಷಗಳ ಹಿಂದೆ ಶ್ರೀ ಸಿ.ಕೆ.ಪರಶುರಾಮಯ್ಯ ದೊರಕಿಸಿಕೊಂಡು, ಪ್ರಬುದ್ಧ ಕರ್ನಾಟಕ ಪತ್ರಿಕೆಯಲ್ಲಿ ಈ ಬಗ್ಗೆ ಲೇಖನವನ್ನು ಬರೆದಿದ್ದಾರೆ.

"xxxಮಹಾತ್ಮೆಯನ್ನು ಬರೆxxxxಯುರಾರೋಗ್ಯxxxxxಸಿದ್ಧಿರಸ್ತು ॥ವೃತ್ತಾ॥ xxx ಸಂಗನಬಸವರಾಜನxxx" ಎಂದು ಆರಂಭವಾಗಿ, "ಈ ಶರಣನ ಸಾಂಗತ್ಯವನೆಲ್ಲ ಕೇಳ್ದಗೆ xxxನಾಶ ಹರಿವದೊಂಬದ್ದಿನಕೆ ಲೇಸಕೊಡುವ ಗಿರಿಜೇಶನೆಂಬಲ್ಲಿಗೆ ಕೈಲಾಸದ ಸಂಧಿ ಆಯ್ತು ॥೬೭॥ ಅಂತು ಸಂಧಿ ೮ಕ್ಕಂ ಪದನು ೯೫೫ಕ್ಕಂ ಮಂಗಳ ಮಹಾಶ್ರೀಶ್ರೀಶ್ರೀ ಕ್ರೋಧನ ಸಂ॥ ಮಾಘ ಶುದ್ಧ ೮ ಬುಧವಾರ ರೇವಣಸಿದ್ಧೇಶ್ವರನ ಮಹಾತ್ಮೆ ಸಂಪೂರ್ಣ ಮಂಗಳಮಹಾ ಶ್ರೀ ಶ್ರೀ" ಎಂದು ಮುಗಿಯುತ್ತದೆ. ಇನ್ನೂ ಕೊನೆಗೆ ರೇವಣಸಿದ್ಧನನ್ನು ಕುರಿತ ಒಂದು ಆರತಿ ಪದವಿದೆ.

'ಆ' ಪ್ರತಿ : ಆಧುನಿಕ ಕಾಗದ ಪ್ರತಿ. "೮.೫ x ೬.೫". ಪಾನು ೧-೮೬. ಸುಮಾರು ೧೦೦ ವರ್ಷಗಳ ಹಿಂದೆ 'ಅ' ಪ್ರತಿಯಿಂದ ನಕಲು ಮಾಡಲಾಗಿದೆ. ಹೀಗಿದ್ದೂ ಉದ್ದೇಶಪೂರ್ವಕ ಭಿನ್ನಪಾಠಗಳು ಅಲ್ಲಲ್ಲಿ ಕಂಡು ಬರುತ್ತವೆ. ಸಂಪೂರ್ಣ ಸುಸ್ಥಿತಿಯಲ್ಲಿದೆ. ಅಕ್ಷರ ಚೆನ್ನಾಗಿವೆ. ಚಿಕ್ಕನಾಯಕನಹಳ್ಳಿಯ ರೇವಣಸಿದ್ಧೇಶ್ವರ ಮಠದ ಶ್ರೀ ರೇವಪ್ಪಯ್ಯ ಒಡೆಯರ್ ಪ್ರತಿಯಿದು. ಮೂಲತಃ ಹೊಸದುರ್ಗ ತಾಲೂಕಿನ ಗೂಳಿಹಳ್ಳಿಗೆ ಸಂಬಂಧಿಸಿದುದು.

"ಶ್ರೀ ಗಣಾಧಿಪತಯೇ॥ ನಮಃ ನಾಡಿಗೆ ಕನ್ನಡಿಯೆಂದೆನಿಸುವ................" ಎಂದು ಆರಂಭವಾಗಿ, "ಈ ಶರಣನ ಸಾಂಗತ್ಯವ ಕೇಳ್ದರ್ಗೆ ನಾಶವಹುದು ದಿವಸದಲಿ ಲೇಸಕೊಡುವ ಗಿರಿಜೇಶನೆಂಬಲ್ಲಿಗೆ । ಕೈಲಾಸ ಸಂಧಿ ಸಂಪೂರ್ಣ ॥೬೮॥. ಅಂತು ಸಂಧಿ ಲಕ್ಕಂ ಪದನು ೬೩೮ಲಕ್ಕಂ ಮಂಗಳಮಹಾ. ತಗರ ಪವಾಡ ಸಂಪೂರ್ಣ ಮಂಗಳ ಮಹಃ ಶ್ರೀ" ಎಂದು ಮುಕ್ತಾಯಗೊಳ್ಳುತ್ತದೆ. ಇನ್ನೂ ಕೊನೆಯಲ್ಲಿ ರೇವಣಸಿದ್ಧನನ್ನು ಕುರಿತ ಮಂಗಳಾರತಿ ಪದವಿದೆ (ಅನುಬಂಧ ೨ ನೋಡಿ). ಇದು 'ಅ' ಪ್ರತಿಯ ಕೊನೆಯಲ್ಲಿಯ ಪದವಾಗಿದ್ದರೂ ಒಂದೆರಡು ಪದ್ಯಗಳಲ್ಲಿ ವ್ಯತ್ಯಾಸವಿದೆ. ಬಳಿಕ ಶಿವನನ್ನು ಕುರಿತ ಆರತಿ ಪದವಿದೆ.

'ಇ' ಪ್ರತಿ : ಇನ್ನೂ ಆಧುನಿಕ ಕಾಗದ ಪ್ರತಿ. ೮." x ೬.೫". ಪಾನು ೧–೫೬. ಸುಸ್ಥಿತಿಯಲ್ಲಿದೆ. ಇದು 'ಆ' ಪ್ರತಿಯ ಸಂಗ್ರಹ ಪ್ರತಿ. ತನಗೆ ತಿಳಿದಂತೆ ಸಂಗ್ರಹ, ಪಾಠಾಂತರಗಳನ್ನು ಲಿಪಿಕಾರ ಮಾಡಿದ್ದಾನೆ. ಇದನ್ನು ತೀರ ಕ್ವಚಿತ್ತಾಗಿ ಬಳಸಲಾಗಿದೆ. ಅಕ್ಷರ ಆಧುನಿಕ. ತುಂಬಾ ಅಶುದ್ಧ.

"ಓಂ. ಶ್ರೀಸಾಂಗತ್ಯ ಶ್ರೀ (ಒಂದನೆಯ ಅಧ್ಯಾಯ ಪ್ರಾರಂಭ) ಗುರು ರೇವಣಸಿದ್ಧೇಶ್ವರ ಸ್ವಾಮಿ ಪ್ರಸನ್ನ" ಎಂದು ಬರೆದು "ಅಗಜಾನನ ಪದ್ಮಾರ್ಕ.............ಶ್ಲೋಕ ಬರೆದು, ಪಠ್ಯವನ್ನು ಆರಂಭಿಸಲಾಗಿದೆ. ಕೊನೆಯಲ್ಲಿ, ರೇವಣ ಸಾಂಗತ್ಯ ಟಗರ ಪವಾಡವು ಸಂಪೂರ್ಣಂ. ತಾ.೧೪.೩.೮೮ ನೇ ಭಾನುವಾರ ಬರೆದು ಮುಕ್ತಾಯವಾಗಿರುತ್ತದೆ" ಎಂಬ ಪಾಠವಿದೆ. ಇನ್ನೂ ಕೊನೆಗೆ ಮೇಲೆ ಹೇಳಿದ ರೇವಣಸಿದ್ಧನ ಮಂಗಳಾರತಿ ಪದವಿದೆ.

ಕೃತಜ್ಞತೆ

ನಲ್ವತ್ತು ವರ್ಷಗಳ ಹಿಂದೆ ಸಿ.ಕೆ.ಪರಶುರಾಮಯ್ಯ ಅವರು ಶೋಧಿಸಿ, ಪ್ರಬುದ್ಧ ಕರ್ನಾಟಕ ಪತ್ರಿಕೆಯ ಮೂಲಕ ಪರಿಚಯ ಪ್ರಕಟಿಸಿದ್ದರೂ, ಈ ತಗರ ಪವಾಡ ಕೃತಿ ಪರಿಷ್ಕರಣೆಗೊಂಡು ಪ್ರಕಟವಾಗಿರಲಿಲ್ಲ. ಈಗ ಇದು ಬೆಳಕಿಗೆ ಬರುತ್ತಲಿರುವ ಸಂದರ್ಭದಲ್ಲಿ ನೆರವಾದವರನ್ನು ನೆನೆಯುವುದು ನಮ್ಮ ಕರ್ತವ್ಯ. ಸಮಾಜ, ಸಂಸ್ಕೃತಿ, ಸಾಹಿತ್ಯದ ಮೇಲಿನ ಪ್ರೀತಿಯಿಂದ ತಲೆ ತಲಾಂತರದಿಂದ ತಗರ ಪವಾಡದ ಹಸ್ತಪ್ರತಿಗಳನ್ನು ಸಂರಕ್ಷಿಸಿಕೊಂಡು ಬಂದಿದ್ದವರು, ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನ ಹಾಗಲವಾಡಿಯ ಶ್ರೀ ಗಂಗೇಸಿದ್ಧಯ್ಯ, ಚಿಕ್ಕ ನಾಯಕನಹಳ್ಳಿಯ ರೇವಣಸಿದ್ಧೇಶ್ವರ ಮಠದ ಶ್ರೀ ರೇವಪ್ಪಯ್ಯ ಒಡೆಯರ್ ಮತ್ತು ಮಕ್ಕಳು ಶ್ರೀ ಕರಿಸಿದ್ದಯ್ಯ ಒಡೆಯರ್, ಶ್ರೀ ಗುರುಸಿದ್ಧಯ್ಯ ಒಡೆಯರ್ ಅವರು. ಈ ಕೃತಿ ಇಂದು ಪ್ರಕಟಗೊಳ್ಳಲು ಮೂಲ ಕಾರಣಕರ್ತರಾದ ಅವರಿಗೂ, ಪದ್ಯಗಳ ಅಕಾರಾದಿ ಹಾಗೂ ನಾಮಸೂಚಿ ಸಿದ್ಧತೆಯಲ್ಲಿ ನೆರವಾದ ಡಾ. ಜಾಜಿ ದೇವೇಂದ್ರಪ್ಪ ಅವರಿಗೂ, ಒಳಪುಟ ವಿನ್ಯಾಸಗೊಳಿಸಿದ ಗಣೇಶ ಯಾಜಿ, ಮುಖಪುಟ ವಿನ್ಯಾಸ ಮಾಡಿದ ಕೆ. ಕೆ. ಮಕಾಳಿ ಅವರಿಗೂ, ತಮ್ಮ ವಿದ್ಯಾನಿಧಿ ಪ್ರಕಾಶನದ ಮೂಕ ಪ್ರಕಟಿಸುತ್ತಿರುವ ಗದುಗಿನ ಜಯದೇವ ಮೈ. ಮೆಣಸಗಿ ಹಾಗೂ ನಾಗರಾಜ ಮೈ. ಮೆಣಸಗಿ ಅವರಿಗೂ ನಾವು ತುಂಬ ಕೃತಜ್ಞರಾಗಿದ್ದೇವೆ.

–ಸಂಪಾದಕರು

❖❖

[illegible]

[illegible]

*

ಪರಿವಿಡಿ

ಸಂಧಿ : ಒಂದು

ವೃತ್ತ

.........ಸಂಗನ ಬಸವರಾಜನ.........ಲ್ಲಮನಂಘ್ರಿಗಂ
ಶ್ರೀಗುರು ಸೊನ್ನ..........ದ್ಧರಾಮನಡಿಗಂ ಶ್ರೀ ರುದ್ರಮುನಿಯಂಘ್ರಿಗಂ
ಶ್ರೀಗುರು ಚೆನ್ನಬಸವಣ್ಣನಂಘ್ರಿ.....ಶ್ರೀ ವೀರಮಡಿವಾಳಗಂ
ಈಗಂ ಈಶಗಣಗಳಂಘ್ರಿಗೆರಗಿ ನಾಂ ಸ್ತುತಿಮಾ..ನಿನ್ನ ಪಾದಂ ॥೧॥

ಕಂದ

ಶ್ರೀಮದ್ಗುರು ಗಿರಜಾಧವ
ಹೇಮಾದ್ರಿಯವಾಸ ಈ....ಕಳೆಯುಳ್ಳವನೆ
ಪ್ರೇಮದಿ ಸಾರ್ವಕಾಲದಿ
ಸ್ವಾಮಿಯೆ ರಕ್ಷಿಪುದು ಎನ್ನ ರೇವಣಸಿದ್ಧಂ ॥೨॥

ಕರಮುಗಿವೆ ನಿಮ್ಮ ಚರಣಕೆ
ಕರುಣದಿ ದಯವಿತ್ತು ನಿಂದು ಎನ್ನಯ ಹೃದಯದಿ
ವರವದು ನಿಮ್ಮ ಮಹಾತ್ಮೆಯ
ಪರಶಿವ ಪೇಳ್ದುದೈ ರೇವಣಸಿದ್ಧಂ ॥೩॥

ಸಾಂಗತ್ಯ

ನಾಡಿಗೆ ಕಲಶ ಕನ್ನಡಿ ಎಂದೆನಿಸುವ
ಪೊಡವಿಗಯ್ಯೆನೆ ನೆಲಸಿ[ಹನು]
ಕಾಡೊಳಗಾಡುವ ಕರಿಯಸಿದ್ಧೇಶನ
ಪಾಡುವೆ ನಾನು ನೇಮದಲಿ ॥೪॥

---

* ಆರಂಭದ ಮೂರು ಪದ್ಯಗಳು 'ಅ' ಪತ್ರಿಯಲ್ಲಿ ಮಾತ್ರ ಕಂಡುಬರುತ್ತದೆ.

ಅಕ್ಷಿ ಲಂಗಜರೂಪ ಭಕ್ಷಿಸಿ ಬ್ರಹ್ಮನ
ಶಿಕ್ಷಿಸಿ ಜಗವು ಕಾಣ್ವಂತೆ
ಅಕ್ಷಿ ಮೂರುಳ್ಳನೆ ಕುಕ್ಷಿಭುವನದಯ್ಯ
ರಕ್ಷಿಸಿಕೊಡುವುದು ಮತಿಯ ॥೫॥

ಅಂಬಿಕೆ ಪುತ್ರನೆ ಅಮರವಂದಿತ ಪಾದ
ಲಂಬೋದರ ಗಜಮುಖನೆ
ಕುಂಭಿನಿ ಜನಕೆ ಮತಿಯನಿತ್ತು ಸಲಹೊ ಹೇ
ರಂಬ ಕೊಡೆನಗೆ ಸನ್ಮತಿಯ ॥೬॥

ಆಣಿ ಸ್ತ್ರೀಕುಲಕೆ ಕಟ್ಟಾಣಿಯೆನಿಪ ಫಣಿ
ವೇಣಿ ಪಂಕಜದಳನೇತ್ರೆ
ರಾಣಿಬ್ರಹ್ಮನ ವೀಣಾಪಾಣಿಯೆಂದೆನಿಸುವ
ವಾಣಿ ಕೊಡೆನಗೆ ಸನ್ಮತಿಯ ॥೭॥

ಏರಿದ ರೋಮ ಕೆಮ್ಮೀಸೆ ಕೆಂಗರಗಣ್ಣು
ಮಾರಿಮಸಣಿ ಭೂತಗಳಿಂ
ತೂರ್ಯಾದಿ ಪೂಜೆಯಗೊಂಡು ನಿಂದಿರುತಿಹ
ವೀರಭದ್ರೇಶಗೆ ಶರಣು ॥೮॥

ಬಡವನು ಧನವನ್ನು ಎಡಹಿ ಕಂಡಂದದಿ
ತಡೆದಿರ್ದ ಮಳೆ ಫಲಗಳಿಗೆ
ಒಡನೆ ಬಂದಂತೆ ರಚಿಸುವೆ ಕೃತಿಯನೀಗ
ಕಡು ಜಾಣರೊಲಿದು ಲಾಲಿಪುದು ॥೯॥

ನಾಲಗಿಲ್ಲದ ಗಂಟೆಯಂತೆ ನಾ ನುಡಿಸಿದೆ
ಎಲ್ಲ ಮಹಿಮರ ಬಂಟ
ನಾನಾ ವಿಕಾರವ ತೆಗದೆನ್ನ ಆತ್ಮಕೆ
ಸಾರಾಮೃತವನುಣಿ[ಸಿರ]ಯ್ಯ ॥೧೦॥

ಕಂದ[ನು] ಸುಖವು ಬಂದುದದಿ ಕೃತಿಯನು
[ರೇ]ಂದಿಸುವೆನು ಹರುಷದಲಿ

ಅಂದವನರಿತವನಲ್ಲ ಬಲ್ಲರು ನಿಮ್ಮ
ಕಂದನೆಂದೊಲಿದು ತಿರ್ದುವುದು ॥೧೧॥

ಜಾಣನ ಮೆಚ್ಚುತ ಅರಿಯದಜ್ಞಾನಿಗೆ
ಕಾಣಬಹುದು ಬಹು ಹುಚ್ಚು
ರೇಣು ಮಾತ್ರವು ತಪ್ಪಿದರೆ ತಿದ್ದುವುದೆಂದು
ಕ್ಷೋಣಿಯೊಳು ಮೈಯನಿಕ್ಕಿ[ದೆ]ನು ॥೧೨॥

ಒಂದಿನದಲಿ ಶಿವ ಕೈಲಾಸಪುರದಲಿ
ನಂದಿಭೃಂಗೀಶ ಪ್ರಮಥರ
ಸಂದಣಿಯಿಂದ ಒಡ್ಡೋಲಗದೊಳಗಿರೆ
ಬಂದನಲ್ಲಿಗೆ ನಾರದನು ॥೧೩॥

ನೀರಜೋದ್ಭವಸುತ ಬರಲಾಗ ಕಾಣುತ
ಮಾರಹರನು ನಸುನಗುತ
ಆರಾರ ಸುದ್ಧಿಯನರುಹ ಬಂದಿರಿಯೆಂದು
ಬಾರಯ್ಯ ಕುಳಿತುಕೊ ಎಂದ ॥೧೪॥

ಏನೆಂಬೆ ಶಿವ ಕೇಳು ನರಲೋಕದೊಳಗೋರ್ವ
ಮಾನಿನಿಯಳ ರೂಪಿನೊಳಗೆ
ತಾನಿಹಳಾ ಕೊಲ್ಲಪುರಿ ಮಾಯೆಯೆನಿ[ಯೆ]
ದಾವನ ಮಾನವರ ಲೆಕ್ಕಿಸದೆ ॥೧೫॥

ಆಕೆಯ ರೂಪುಲಾವಣ್ಯ ವಿಭ್ರಮಗಳ
ನೇಕವ ಕಂಡು ಕೆಲಬರು
ಕಾಕುತನದಿ ಪೋಗಿ ಕೂಡುವೆವೆಂದವಿ
ವೇಕದಿ ಬಿದ್ದುಕೊಂಡಿಹರು ॥೧೬॥

ಜಡೆಮಕುಟವು ಕಂತೆ ದೃಢ ಚಿತ್ತದೊಳಗಿಹ
ಕಡುಗಲಿ ಸಿದ್ಧಯತಿಗಳು
ಬಿಡದೆ ಆಕೆಯ ಕೂಡಬೇಕೆಂದು ಪೋಗಲು
ಕೊಡುವಳು ವಿಷವನುಣ್ಣೆನುತ ॥೧೭॥

ವಿಷವ ಸೇವಿಸಿ ಜೀವಿಸಿದರೆ ಆವನು ಈಗ
ದೆಸೆಯುಳ್ಳ ಸಿದ್ದನೆಂದೆನಲು
ಬಸವಳಿದವರು ತಲೆಯ ಬಾಗಿಸಿದರೆ ಕಂಡು
ಶಶಿಮುಖಿಯಳು ಪೇಳ್ದಳಾಗ ॥೧೮॥

ಮೂಗಿಗೆ ಕವಡೆಯ ಕಟಿ ಬಿಂದಿಗೆಗೊಟ್ಟು
ಬೇಗ ನೀರನು ಹೊತ್ತು ತನ್ನಿ
ಪೋಗೆಂದು ಸೆರೆಮನೆಯೊಳು ನೂಕಿಕೊಂಡಿಹ
ಯೋಗಸಿದ್ಧರು ನವಕೋಟಿ ॥೧೯॥

ಇಂತಿಹ ಪರಿಯ ವಿಚಾರಿಸದಿಹರೆ ಕಾ
ಲಾಂತಕನೆನೆ ಹರ ನಗುತ
ಚಿಂತಾಯಕ ನಾರದನ ಬೀಳ್ಕೊಟ್ಟಾಗ
ಮುಂತೊಂದು ರೂಪ ತಾಳಿದನು ॥೨೦॥

ಕಂತೆ ಕಾಷಾಂಬರದಂತೆ ಚರ್ಮವ ಪೊದ್ದು
ಯಂತ್ರವಾಹಕ ರೇವಣ್ಣ
ಸಂತೋಷದಿ ನರಲೋಕಕ್ಕೆ ಇಳಿ[ದಾ]ಗ
ನಿಂತ ಕೊಲ್ಲಾಪುರದೊಳಗೆ ॥೨೧॥

ಮಾಯೆ ಎಲ್ಲಿಹಳೆಂದು ಕಾಯಜಹರ ಕೇಳೆ
ಬಾಯೆಂದು ಕರೆಯೆ ಕಾಣುತಲಿ
[ಹೋ]ಯೆಂದು ಹೂಂಕಾರವಿಡಿಯೆ ಪುರಜನರೆಲ್ಲ
ಭಯದಿ ಬಿಟ್ಟರು ಬಾ[ಯಿ]ಯನು ॥೨೨॥

ಎಂದಿನ ಸಿದ್ಧರಂತಿವನಲ್ಲವೆನುತಲಿ
ಬಂದು ಮಾಯೆಯು ವಿಷಕೊಡನ
ಮುಂದಿಳುಹಲು ನೋಡಿ ರೇವಣ್ಣ, ಭುಗಿಭುಗಿ
ಲೆಂದು ಸೇವಿಸೆ ವಿಷ[ಗೊಡನ] ॥೨೩॥

ಮತ್ತೆ ತಂದಳು ಮಾಯೆ ಹತ್ತೆಂಟು ಕೊಡಗಳ
ಎತ್ತಿ ರೇವಣಸಿದ್ಧ ಕುಡಿಯೆ

ಹೊತ್ತಡಕುತಲಿರೆ ಇತ್ತ ರೇವಣಸಿದ್ಧ
ಅರ್ತಿಯಿಂ ಸಲಿಸಿ ನಿಂದಿಹನು ॥೨೪॥

ಕಂಡಳು ಮಾಯೆ ಮಾಯಾತೀತನಿವನೆಂದು
ದಿಂಡುರುಳಿದೊ ಚರಣದಲಿ
ಖಂಡೆಯವನು ಕಿತ್ತು ನಾಸಿಕವನು ಕೊಯ್ದು
ರಂದೆ ಪೋಗೆಂದು ಗರ್ಜಿಸಿದ ॥೨೫॥

ಕಾಳಿಯ ಮೂಗನು ಭಾಳಾಕ್ಷನರಿದನು
ಹಾಳು ಮಾಡಿದ ಕೊಲ್ಲಾಪುರವ
ಕಾಳಕೂಟದ ವಿಷವನುಂಡಿದ್ದ ಸಿದ್ಧರ
ಮೇಳದ ಕುರಿಯ ಮಾಡಿದನು ॥೨೬॥

ವೇದವಿದ್ಯಾತ್ಮರ ವಾಲ್ಮೀಕ ವಚನದ
[ಹಾದಿ]ಯ ತಿಳಿದ ಶರಣರ
ಪಾದಾಂಬುಜ ಮಂಡೆಯೊಳಗಿಟ್ಟು ನಾ ಮುನ್ನ
[ವೇದಿ]ಸುವೆನು ಭಕ್ತಿಯೊಳಗೆ ॥೨೭॥

ಭೃಂಗಿಯೊಡನೆ ಮೈಯ ಲಂಘಿಸುವೆನುಯೆಂದು
ಹಿಂಗದೆ ಪುರದೊಳು ಜನಿಸಿ
ಮಂಗಳ ಮಹಿಮಗೆ ವಿಷವಿ[ತ್ತ] ಕುರಿಯಾದ
ಸಾಂಗತ್ಯವನುಸುರುವೆನು ॥೨೮॥

ಗುರುಗಳನರಿಯದ ಗುರುದ್ರೋಹಿಗಳನೆಲ್ಲ
ಹರಕೆಯ ಕುರಿಯಾ[ಗಿರೆ]ಂದು
ಪರದೈವಕೆಯಾಹುತಿಯಾಗಬೇಕೆಂದು ಸ
ದ್ಗುರುವು ರೇವಣ್ಣ ಬಾಯೆಂದ ॥೨೯॥

ಎಂದ ಮಾತನು ಕೇಳಿ ನೊಂದು ಹಮ್ಮನೆ ಹಾರಿ
ಚಂದ್ರನ ಗ್ರಹಣಕೊಂಡಂತೆ
ಮುಂದರಿಯದೆ ಇಷ್ಟಕ್ಕೊಳಗಾದೆವೆನುತಲಿ
ಬಂದು ಬಿದ್ದರು ಚರಣದಲಿ ॥೩೦॥

ಗಜಾಸುರನ ಕೊಂದು ಗಟ್ಟಿ ಚರ್ಮವ ಪೊದ್ದೆ
ಭುಜಗಭೂಷಣ ನೀನಹುದೊ
ತ್ರಿಜಗವಂದಿಪರು ಸಲಹೊ ಶಂಕರಯೆಂದು ಅ
ಬುಜನಂಘ್ರಿಯೊಳೆರಗಲು ॥೩೧॥

ಕಂಗಳಿಂದಲಿ ನೋಡಿ ಮುಗುಳ್ನಗೆ ನಗುತಲಿ
[ತಿ]ಂಗಳ ಸೂಡಿದ ರೇವಣ್ಣ
ಮಂಗಳಮಹಿಮನು ಕರುಣಾಮೃತವನಿತ್ತು
ಹಿಂಗದೆ ಪಿಡಿದು ಎತ್ತಿದನು ॥೩೨॥

ಒಡೆಯರ ಭಕ್ತರ ಜಡೆಮಕುಟದ ಫಲ
ಪೊಡವಿರಾಜಗೆ ಸಿಂಹಾಸನವು
ಸಡಗರದಲಿ ಪರ್ವತದ ಗಿರಿಯಲ್ಲಿ ಕ
ರಡಿ ಪೂಜಿಪ ಫಲವಹುದು ॥೩೩॥

ಹೋಮಕೆ ಮೇಷನ ರೋಮ ಪವಿತ್ರವು
ಭೂಮಿಯೊಳಗೆ ನಿರ್ಮಾಗಮವು
ಸ್ವಾಮಿ ಮಲ್ಲೆಶನ [ಗಿಳಿಗಳಲಿರಿ]ಯೆಂದು
ಪ್ರೇಮದ ನುಡಿಯ ಪಾಲಿಸಿದ ॥೩೪॥

ಸಿದ್ಧಸ್ಥಲದ ಗಿರಿ ಸಿದ್ಧರಸ[ದ] ಗಿರಿ
ಭದ್ರವುಳ್ಳಂದದ ಗಿರಿ[ಯು[
ಮಜಭಾಪುರೆ ಗಿರಿ ಮರಾರಿಹ ಗಿರಿ
ಸಜ್ಜನಂಗಳ ಶ್ರೀಗಿರಿ[ಯು] ॥೩೫॥

ಜಲಗಿರಿ ನೆಲಗಿರಿ ಘನದಲ್ಲಿರುವ ಗಿರಿ ಹ
ಗಲ ಪಂಜಿನ ಗಿರಿ ಹ[ರ]ಗಿರಿ[ಯು]
ಹರಣವಳಿದರೆ ಪ್ರಸನ್ನವಾಗುವ ಗಿರಿ
ಪರಶಿವನಿರುವಂಥ ಗಿರಿಯು ॥೩೬॥

ಖಂಡೇಂದು[ಶೇಖ]ರ ಕಮಲಧರಾಧಾರ [ಕ]
ಮಂಡಲಧರ ಮತ್ತೆ ನುಡಿದ

ಖಂಡೆಯ ಹರಿ[ಗೆ]ಯ ಕರೆದು ಕೊಟ್ಟ ಕುರಿ
ಹಿಂಡದಿ ರೇವಣಸಿದ್ಧ ನಡೆದ ॥೩೭॥

ನವಕೋಟಿ ಸಿದ್ಧರು ನಾನಾ ವರ್ಣಗಳಿಂದ
ಶಿವನ ಶಾಪದಿ ಕುರಿಯಾಗಿ
ಕವಿದು ನಿಂತವು ಸುತ್ತ ಭೋರ್ಗರೆಯುತಲಿ
ಭುವನವೆಲ್ಲವು ನಡುನಡುಗ ॥೩೮॥

ಅಷ್ಟದೇವತೆಯರಿಗಿತ್ತನು ಕುರಿಗಳ
ಅರ್ತಿಯಿಂದಲಿ [ಊ]ಡಲೆಂದು
ಮರ್ತ್ಯಲೋಕಕೆ ಕಲಶವುಯೆಂಬೊ ದೇಶದೊ
ಉತ್ತರಕಾಗಿ ನಡೆದನು ॥೩೯॥

ಅರಳಿ ಆಲದ ತರಗೆಲೆಗಳ ತಿನ್ನುತ
[ಪ]ರವಶವಾದೆವೆಂದೆನುತ
ಪ್ರಳಯ ಕಾಲದಿ ಶಿವ[ನ] ಅರಿಯದಾದೆವುಯಂದೆ
ಮರುಗುತಿರ್ದವು ಮನದೊಳಗೆ ॥೪೦॥

ಮೊಳೆಹುಲ್ಲು ಎಳೆಹುಲ್ಲು ಮೇಲೆ ಕರಿಕೆಹುಲ್ಲು
ತಳಿರಡಿ ಹುಲ್ಲ ಮೇವುತಲಿ
ತಿಳಿನೀರುಗಳನುಂಡು ಹರುಷದಿಂದಲಿ ಕುರಿ ತೆ
ರಳಿತು ತೊಗರಸಿಗಾಗಿ ॥೪೧॥

ಇತ್ತಲು ಕುರಿಗಳು ಅರ್ತಿಯಿಂದಾಡಲು
ಅತ್ತ ರೇವಣಸಿದ್ಧೇಶನು
ಮರ್ತ್ಯದೊಳಿಹ ಐವತ್ತಾರು ದೇಶಂಗಳ
ಅರ್ತಿಯೊಳ್ ಸಂಚರಿಸಿದನು ॥೪೨॥

ಚಪ್ಪನ್ನ ದೇಶದೊಳೊಪ್ಪುವ ಶರಣರ
ಸರ್ಪಭೂಷಣ ನೋಡಿ ಬರುತ
ಮುಪ್ಪುರಗಳನು ನೋ[ಟದಿ] ಉರುಹಿದ ದೇವ ಕಂ
ದರ್ಪರಿಪು ನಡೆತಂದ ॥೪೩॥

ಬಂದು ರೇವಣಸಿದ್ಧ ನಿಂದು ತುರುವಿನೊಳು
ಅಂದದಿ ಬಳಸಿ ನೋಡಿದನು
ಕಂದುಗೊರಳ ಮುಕುಂದಪೂಜಿತಪಾದ ಬಂದ
ನೆಂದು ಬಿದ್ದರು ಚರಣದಲಿ ॥೪೪॥

ಅಷ್ಟದಿಕ್ಕಿನ ಆ ದೇವತೆಗಳೆಲ್ಲರು ಕೂಡಿ
ಕಟ್ಟೊಡೆಯನು ಬಂದನೆಂದು
ಕೆಟ್ಟವು ಕುರಿಗಳ ಕಾಯಲಾರೆವುಯೆಂದು
ಬಿಟ್ಟು ಬಾಯನು ಶೂಲಿಯೊಡನೆ ॥೪೫॥

ಶ್ರೀಮಹದೇವನೆನ್ನುವರು ಮೂಜಗವೆಲ್ಲ
ಆ ಮಹಾ ಕುರಿಗನು ಕಾಯಲಾರೆವುಯೆಂದು
ನಮಿಸಲು ಆ ದೇವತೆಯರು ॥೪೬॥

ಎಂದ ಮಾತನು ಕೇಳಿ ಚಂದ್ರಶೇಖರ ನಕ್ಕು
ಅಂದು ಒಪ್ಪಿಸಿಕೊಂಡ ಕುರಿಯ
ನಂದಿಶಿವನು ಗಂಗೆ ಪಾರ್ವತಿ ಕುರಿ ಸಹ
ಮುಂದಕ್ಕೆ ತಾನಡಿಯಿಟ್ಟ ॥೪೭॥

ಅಡಿಯಿಟ್ಟು ಬರಲಿತ್ತ ದಿಕ್ಕಿನ ದೊರೆಗಳು
ಒಡೆಯನ ಕಾಣ್ಬ ಸಂತಸದಿ
ಒಡೆಯನಪ್ಪಣೆ ಎಡೆವುಡುಗುವಂದದಿ ಕಂಜ
ನಡಿಗೆರಗಿದರು ಆಕ್ಷಣದಿ ॥೪೮॥

ಚಪ್ಪನ್ನ ದೇಶದ ನಾರಿಯರೆಲ್ಲ
ಸುಘಣಿ ಪೊತ್ತಡಿಯಿಟ್ಟು ಬಂದಂತೆ
ಮೃತ್ಯುಂಜಯನ ಪಾದವ ಪೂಜಿಪೆವೆಂದು
ಉತ್ತಮ ಕಂಗೊಪ್ಪಿ.......... ॥೪೯॥

ಅಲ್ಲಿಂದ ಮುಂದಕ್ಕೆ ನಡೆದರು ಕುರಿ ಸಹ
ನಿಲ್ಲದೆ ಕಾನನದೊಳಗೆ
ಬಲ್ಲಿದ ತುಂಗಭದ್ರೆಯ ತಡಿಯೊಳು ನಿಂದು
ಉಲ್ಲಾಸವನು ನೋಡುತಿರಲು ॥೫೦॥

ಬಳಲಿ ಬಂದಯ್ಯಗೆ ತಳಿರು ಗದ್ದುಗೆ ಹಾಕಿ
ಸುಳಿಗಾಳಿಯೆಂಬ ಚಾಮರದಿ
ಘಳಿಲನೆ ಬೀಸಿ ಶಾಂತಿಯನು ತೋರುವೆನೆಂದು
ಎಳೆಮಾವು ಬನದೊಳೊಪ್ಪಿಹವು ॥೫೧॥

ಅಂಗನೆಯರು ಉದಕ್ ತಹ ಸಮಯಕ್ಕೆ
ಹಿಂಗದೆ ಘಮಘಮಿಸುತಲಿ
ಮಂಗಳಾತ್ಮಕನ ಪಾದವ ಪೂಜಿಪೆನೆಂದು
ಚೆಂಗಣಗಿಲು ಒಪ್ಪಿಯಿಹುದು ॥೫೨॥

ಪಾದರಿ ಜಾಜಿ ಸಂಪಗೆ ಮೊಲ್ಲೆಮಲ್ಲಿಗೆ
ಸಾರಸುಗಂಧ ಪುಷ್ಪಗಳು
ಮಾರಹರನ ಪಾದಾಂಬುಜವ ಪೂಜಿಪೆವೆಂದು
ಬಿಲ್ವದ ಬನ ಒಪ್ಪುತಿಹುದು ॥೫೩॥

ಕಳಾಜೂಟನ ಪಾದಾಂಬುಜವ ಪೂಜಿವೆನೆಂದು
ಕಾಮಕಸ್ತೂರಿ ಒಪ್ಪುತಿಹುದು
ಪಂಚಮುಖನ ಪಾದವನು ಪೂಜೆಪೆನೆಂದು
ಪಂಚಪತ್ರೆಯು ಒಪ್ಪುತಿಹುದು ॥೫೪॥

ಭಾಳಲೋಚನ ಪಾದಾಂಬುಜವ ಪೂಜೆಪೆನೆಂದು
ಬಿಲ್ವಪತ್ರೆಯು ಒಪ್ಪುತಿಹುದು
ಗುರುವು ರೇವಣ್ಣನ ಪಾದಪೂಜಿಪೆನೆಂದು
ಮರುಗಮಲ್ಲಿಗೆ ಒಪ್ಪುತಿಹುದು ॥೫೫॥

ಘನಗುರು ರೇವಣ್ಣನಡಿಯ ಪೂಜಿಪೆನೆಂದು
ಸುರಗಿ ಸಂಪಗೆ ಒಪ್ಪುತಿಹವು
ಅಷ್ಟ ಶಿವನ ಪಾದವನು ಪೂಜೆಪೆನೆಂದು
ಅಡಿಕೆ ಹೊಂಬಾಳೆ ಒಪ್ಪಿಹವು ॥೫೬॥

ಇತ್ತರದಲಿ ಕೊಳನೊತ್ತಿಲಿ ಬೆಳೆದಿಹ
ಉತ್ತಮ ಮೊಲ್ಲೆಮಲ್ಲಿಗೆಯು

ಚಿತ್ತಜಾರಿಯ ಪಾದಾಂಬುಜವ ಪೂಜಿಪೆನೆಂದು
ಕಸ್ತೂರಿ ವನದೊಳಗಿಹುದು ॥೫೭॥

ಭಾಳಲೋಚನ ಶಿವ ಬಳಲಿ ಬಂದನುಯೆಂದು
ದಾಳಿಂಬ ದ್ರಾಕ್ಷಿ ಖರ್ಜೂರ
ಕೆಂಡಗಣ್ಣಯ್ಯನು ಬಳಲಿ ಬಂದನುಯೆಂದು
ತೆಂಗು ಪಲಸು ಒಪ್ಪುತಿಹವು ॥೫೮॥

ಕಳಾಜೂಟ ಶಿವನಿಗೆ ಅರ್ಪಿಸುವೆನುಯೆಂದು
ಕಡಲೆಕಬ್ಬುಗಳೊಪ್ಪುತಿಹವು
ಭಾಳಲೋಚನಗೆ ಅರ್ಪಿತವ ಮಾಡುವೆನೆಂದು
ಹಾಲುತುಪ್ಪಗಳೊಪ್ಪುತಿಹವು ॥೫೯॥

ಬಾಲಾರ್ಕ ಶಿವಗೆ ಅರ್ಪಿತವ ಮಾಡುವೆನೆಂದು
ಬೆಲ್ಲ ಸಕ್ಕರೆ ಒಪ್ಪುತಿಹುದು ॥೬೦॥

[ನಾ]ವು ಮಾಡಿದ ಫಲ ನಮ್ಮ ಕೈಸೇರಿತುಯೆಂದು
ನೀವಿನ್ನು ಸಲಿಸ ಬಾಯೆನುತ
ಭಾವಜಹರ ಭಕ್ತವತ್ಸಲ ಬಾರೆಂದು
ಬಾ[ಳೆ] ಕೈಮುಗಿದೊಪ್ಪುತಿಹುದು ॥೬೧॥

ಬಳಲಿ ಬಂದಯ್ಯಗೆ ತಳಿರು ಗದ್ದುಗೆ ಹಾಕಿ
ಥಳಿಲನೆ ಎಡೆಯ ಮಾಡುತಲಿ
ಕಳಶ[ವೋಲಿಹ] ಕುಚ ಅಲುಗುವಂದದಿ
ಎಳೆವಾಳೆಗಳೊಪ್ಪುತಿಹವು ॥೬೨॥

ಬಡನಡು ಕಲಶಕುಚ್ [ಮೃದು] ಕದಪಿನ
ಕುಡಿತೆಗಂಗಳ ಭೃಂಗಗುರುಳ
ಅಡಿಯಿಟ್ಟು ಹರುಷದಿ ಬಂದು ಕಾರ್ಮುಕವನು
ಕೊಡು[ವಂತೆ ಎಲೆ] ಒಪ್ಪಿಹುದು ॥೬೩॥

ಇಳೆಯೊಳೆನ್ನಯ್ಯನು ಬಳಲಿ ಬಂದನುಯೆಂದು
ನಳಿನಾಕ್ಷಿ ತನ್ನ ಅಂಬರವ

ಕಳೆಜೂಟ ಶಿವನಿಗೆ ಅರ್ಪಿಸುವೆನುಯೆಂದು
ಎಳೆನಾಗವಲ್ಲಿ ಒಪ್ಪಿದವು ॥೧೪॥

ಕೊಳನ ಸುತ್ತಲು ಬೆಳೆದಿಹ ನಾಗವಲ್ಲಿಯ
ಬಳಸಿಬಳಸಿ ಆಡುತಿಹವು
ತಿಳಿಯ ನೀರುಗಳುಂಡು ಹರುಷದಿಂದಲಿ ಕುರಿ
ತೆರಳಿತು ತೊಗರಿಸಿಗಾಗಿ ॥೧೫॥

[ನಾ]ವು ಮಾಡಿದ ಫಲ ನಮಗೆ ಕೈಸೇರಿತು
ನೀವಿನ್ನು ಸಲಿಸ ಬಾಯೆನುತ
ಭಾವಜಹರ ಭಕ್ತವತ್ಸಲ ಬಾರೆಂದು
ಬಾಲೆರು ಕೈಮುಗಿದಿಹರು ॥೧೬॥

ಲಿಂಗಪೂಜೆಯ ಮಾಡಿ ಮಂಗಳಾರತಿಯೆತ್ತಿ
ಜಂಗಮಲಿಂಗ ಸಲಿಸೆ
ಮಂಗಳಮಹಿಮನು ಕರುಣಾಮೃತವನಿತ್ತು
ಮುಂದಕ್ಕೆ ತೆರಳಿದನಾಗ ॥೧೭॥

ಕಿಕ್ಕಿ ಕಿಕ್ಕಿ[ರೆನು]ವನು ಚುಕ್ಕ ಹೋ ಎಂಬನು
ಅಕ್ಕರದಲಿ ಹಾ ಎನುವನು
ಒಕ್ಕಲಿಗಗೆ ಇವ ಕಕ್ಕು ಮಾಡುವನೆಂದು
ಮುಕ್ಕಣ್ಣ ನಿಂತು ಧ್ಯಾನಿಸಿದ ॥೧೮॥

ಮುಡಿಯ ಸೂಡಿದ ದೇವ ಮದನಸಂಹಾರನೆ
ಚದುರ ರೇವಣಸಿದ್ಧೇಶ
ಉದ್ಧರಿಸಬೇಕು ಇದಕೆ ಒಬ್ಬನಯೆಂದು
ಚದುರ ರೇವಣನು ನೇಮಿಸಿದ ॥೧೯॥

ಒಕ್ಕಲಿಗನ ಆದಿಗೊಂಡನ ಉದರದಿ
ಚಿಕ್ಕವ ಸಹ ಏಳುಮಂದಿ
ಒಕ್ಕಲಿಗನ ಇದಕೆ ಒಕ್ಕಲಿಕ್ಕಬೇಕೆಂದು
ಮುಕ್ಕಣ್ಣ ತಾನು ಧ್ಯಾನಿಸಿದ ॥೨೦॥

ನೀರಜನಾಭ[ನ] ದೇವದೇವೇಶನು
ನೀ[ರೆ] ಮೈಯನಾಂತವನು
[ನೇ]ರಮೂಗನು ಮ[ನ] ಮಾಡಿದಾಕ್ಷಣದೊಳು
ಭಾರಿಯ ತುರುವ ಕೂಡಿದನು ॥೭೧॥

ಕರಿಗೊರೆಳಯ್ಯನು ತುರುಗಳ ಕೂಡುತ
ಸ್ವರವ ನಿಲ್ಲಿಸಿ ಜನರಿಗೆಲ್ಲ
ಆದಿಗೊಂಡನ ಕೊಡಗಿಯ ಹೊಲ ಮೂಲೆಯೊಳ್
ಸಾಧಿಸಿ ತುರುವನಿಂಬಿಟ್ಟು ॥೭೨॥

ಹುತ್ತದ ಮೇಲೆ ಹಸ್ತವನೂರಿ ಗುರುರಾಯ
ಮುತ್ತುಗಮರ ಹುಟ್ಟಲೆಂದು
ಪದ್ಮಣ್ಣನಲ್ಲದೆ ಮತ್ತೋರ್ವ ಬಂದರೆ
ಭೂತವು ಹೆದರಿಸಲೆಂದ ॥೭೩॥

ಭೂತಗಳಿಗೆ ಕಟ್ಟುಮಾಡಿಸಿ ತಿರುಗಿದ
ಭೂತಳಪ್ರಿಯ ರೇವಣ್ಣ ಪಾ
ರ್ವತಿ ಸಹವಾಗಿ ಸಂತೋಷದಿಂದಲಿ
ಅತ್ತ ಹೇಮಾದ್ರಿಗೆ ತೆರಳೆ ॥೭೪॥

ಊರ್ವಿಗೊಡೆಯ ವೀರೇಶನ ಕಾವಲನಿಟ್ಟು
ಆರು ಅರಿಯದಂತೆ ಇರಿಸಿ
ಅಘಹರ ರೇವಣ್ಣ ಕಪ್ಪಿನ ಕಂತೆಯ
ಮುಗುಳಾಂಬರ ರೂಪ ಧರಿಸಿ ॥೭೫॥

ಅಘಹರ ರೇವಣ್ಣ ಕಪ್ಪಿನ ಕಂತೆಯ
ತೆಗೆದಿಕ್ಕಿ ಗಮಿಸಲಾಗ
ಗಗನಮಣಿಯು ಅಡಗಿರುವಂಥ ಸಮಯಕ್ಕೆ
ಮುಗಿದುದಿಲ್ಲಿಗೇಕ ಸಂಧಿ ॥೭೬॥

ಅಂತು ಸಂಧಿ ೧ ಕ್ಕಂ ಪದನು ೭೬ಕ್ಕಂ ಮಂಗಳಮಹಾ ಶ್ರೀ ಶ್ರೀ ಶ್ರೀ

❖❖

ಸಂಧಿ : ಎರಡು

*ಶಿವಭೂಷ ಶಿವ[ತನು] ಶಿವಪಂಚಮುಖವುಳ್ಳ
ಶಿವನ ಪಾದಾಂಬುಜವ
ಭವಭವದಲಿ [ಹೊಂದೆ] ಕರ್ಮ ಹಿಂಗುವುದೆಂದು
ವಿವರಿಸಿ ಪೇಳ್ದ ಸಿದ್ಧೇಶ ||೧||

ಕಂಜಶೇಖರ ಕಡಲೊಳಡಗಿದನೆಂದು
ಕಂಜರಾಂಬಕ ತೆರಳಿದನು
ಮಂಜುಗತ್ತಲೆಗವಿದುದು ಮೂರು ಜಗಕೆಲ್ಲ
ಸಂಜೆವೆಣ್ಣೊಲಿದು ರಾಜಿಸಿತು ||೨||

ಬೆ[ಳಗೆರೆ]ಯನು ಬಹ ಸಮಯಕ್ಕೆ ತಂಗಾಳಿ
ಮೊಳೆದೋರಿ ಮುಗಿಲ ಮುಸುಕಲು
ಕಳೆಯೇರಿ ನೈದಿಲ ಸಖ ಬರೆ ಹರುಷದಿ
ಉಲಿವುತಿರ್ದವು ಚಕೋರಿಗಳು ||೩||

ಕಾವಳ ಹರಿದು ತಂಗಾಳಿ ರಾಜಿಸುತಿರೆ
ದ್ಯುಮಣಿಯ ಕಿರಣ ರಾಜಿಸಲು
ಕಮಲಗಳರಳೆ ಕಾಂತಿಯು ಪಸರಿಸಲಾಗಿ
ಭ್ರಮರ ಝೇಂಕರಿಸೆ ಸಂತಸದಿ ||೪||

ಭ್ರಮರ ಝೇಂಕರಿಸೆ ಸೇವಂತಿಗೆ ಜಾಜಿಯ
ಕಮಲ ಕುಸುಮವ ಸೇವಿಸುತ

---

* ಆದಿಗೊಂಡನ ಕಥೆ

ನಗುತಲಿ ಕಮಲಕುಸುಮ ಬಾಯಿ ತೆರೆಯಲು
ಕುಮುದ ಮಂಡಿತ ಹರುಷದಲಿ ॥೫॥

ಮುಂದಣ ಸಂಧಿ ಸೂಚನೆ ಇದು ರೇವಣ್ಣ
ಬಂಧಿಸಿ ತುರುವ ಕೂಡಿದನು
ಕುಂದದ ಕುಡಿ ಒಕ್ಕಲಿಗನು ಕೂಡಿ ಹೋಗುವ
ಅಂದವನೇನ ಬಣ್ಣಿಸುವೆ ॥೬॥

ಒಕ್ಕಲಿಗನ ಆದಿಗೊಂಡ ಉದರದಿ
ಚಿಕ್ಕವ ಸಹ ಏಳುಮಂದಿ
ಹೊಕ್ಕು ಆರಂಬವ ಮಾಡಲೊಲ್ಲನುಯೆಂದು
ಮಲ್ಲಮ್ಮ ಬುದ್ಧಿ ಹೇಳಿದಳು ॥೭॥

ಉಂಡಾಡಿ ಪದುಮಣ್ಣನೆಂಬರು ಕೆಲ
ಪುಂಡಗಾರನುಯೆಂಬರ್ಕೆಲರು
ಕಂಡಕಂಡವರೆಲ್ಲ ಈ ಪರಿಯಾಡಲು
ಬಂದು ಬುದ್ಧಿಯ ಪೇಳ್ದೊ ತಾಯಿ ॥೮॥

ಎಲ್ಲರು ಬುದ್ಧಿ ಹೇಳಿದ ಮಾತ ಕೇಳದೆ
ಕಲ್ಲು ಆಗುವರೇನೊ ಮಗನೆ
ಎಲ್ಲಿ ತರುವೆ ನಿನ್ನ ರಮಣೀ ಮಕ್ಕಳಿಗೀಗ
ಹುಲ್ಲು ನೀರುಂಡು ಬಾಳುವರೆ ॥೯॥

ನಿಮ್ಮ ಮಾವನು ಬಾದಾವಿ ಬಸವಿಗೊಂಡ
ಉಮ್ಮಳಗೊಳುತಿಹನಿದಕೆ
ಧರ್ಮವಲ್ಲವು ತಂದೆ ತಾಯ ಮಾತನು ಮೀ[ರೆ]
ಕರ್ಮಿಯವನುಯೆಂಬರ್ಕೆಲರು ॥೧೦॥

ಹೊಕ್ಕು ವ್ಯವಸಾಯವ ಮಾಡಲು ಶಿವಮೆಚ್ಚಿ
ಗಕ್ಕನೆ ಕೊಡುವ ಭಾಗ್ಯವನು
ಚಿಕ್ಕ ಬುದ್ಧಿಯ ಬಿಟ್ಟು ಊಟವ ಮಾಡೀಗ
ಗಕ್ಕನೆ ಹೊಲಕೆ ಪೋಗೆನಲು ॥೧೧॥

ಜನನಿಯ ನುಡಿಗೇಳಿ ಇನಕುಲ ಪದ್ಮನು
ಘನ ಹರುಷದಿ ಮುಖನೋಡಿ
ಮನದಿ ದುಗುಡ ತಾಳಿ ಕ್ರೋಧ ಮಾಡಿರುವಳ
ಮಮತೆಯ ಕೂಡೆ ಪೇಳಿದನು ॥೧೨॥

ಯಾಕಮ್ಮ ಇಷ್ಟು ಎನ್ನೊಳು ಕೋಪ ನಿನಗೀಗ
ಬೇಕಾದರೆ ಮಾಳ್ಪೆ ಬದುಕ
ನಾಲ್ಕು ಕಡೆಯ ಜನ ಹೇಳೆ ಕೇಳುವನಲ್ಲ
ಲೋಕಮೂರುತಿ ಆಣೆ ನಾನು ॥೧೩॥

ಕೋಟಲೆ ಮಾಡದೆ ಊಟವ ಬಯ[ಸುವ]ರೆ
ಮೋಟಕತನವು ಬ್ಯಾಡ ಮಗನೆ
ಊಟವ ಮಾಡಿ ನೀ ಹೊಲಕೆ ಹೋಗೆನುತಲಿ
ನಿಟ್ಟಿಸಿ ಮಗನ ಕರೆದಳು ॥೧೪॥

ನಾನು ಬರುವುದಿಲ್ಲ ಹೊಲಕೆ ಹೋಗುವುದಿಲ
ಏನ ಅಂದರು ಅನ್ನು ತಾಯಿ
ನನ್ನ ಪಣೆಯೊಳಜ ಬರೆದ ಬರಹವನು
ಇನ್ನು ತಿಳಿವರಾರು ಅಮ್ಮ ॥೧೫॥

ಎಂದ ಮಾತನು ಕೇಳಿ [ಅ]ಂದಳು ಮಲ್ಲಮ್ಮ
ಕಂದ[ಗ್ಹಾಳ್ಬೆ]ಣ್ಣೆ[ಲ್ಲಿ] ತರಲೀ
ತಂದು ಕೊಡಯ್ಯ ನಿನ್ನ ರಾಣಿಗಂಗೊಸ್ತ್ರವ
ಛಂದವಾಯಿತು ನಿನ್ನ ಮಾತು ॥೧೬॥

ಮನಸಿಗೆ ಬಂದಂತೆ ಮಾತನಾಡ್ವಿರಿ ನೀವು
ಘನಕೋಪವ್ಯಾಕೆ ಎನ್ನೊಡನೆ
ಅನುನಯದಿಂದಲಿ ವಿನಯ ಮಾತಾಡುತ
ಮನೆಗೆ ಕರೆದು ತಂದಳಾಗ ॥೧೭॥

ತಂದೆ ತಾಯಿಗಳು ಅಣ್ಣಂದಿರು ಸಹವಾಗಿ
ಒಂದಾಗಿ ಭೋಜನವ ಮಾಡಿ

ಚಂದ್ರಾಯುಧವ ತೆಕ್ಕೊಂಡು ಪದ್ಮಣ್ಣನು
ಬಂದನು ಹೊಲದೊಬ್ಬೆಗಾಗಿ ॥೧೮॥

ಅಡಿಯಿಟ್ಟು ಬರಲಿತ್ತ ಗಿಡಗಳು ನಡುಗುತ
ಕಡು ದುಃಖವನು ಮಾಡುತಿರಲು
ಒಡೆಯ ಕಟ್ಟೋಲೆಯ ಬರೆದು ಕಳುಹಿದನೆಂದು
ಒಡನೆ ಚಿಂತಿಸುತ ನೋಡಿದವು ॥೧೯॥

ಬಂದನು ಪದ್ಮನು ನಿಂದನು ಹೊಲದೊಳು
ಒಂದೊಂದ ನೋಡಿ [ತರಿ]ದನು
ಅಂದವಾಗಿಹ ಕೈ ನೊಂ[ದಾವು]ಯೆನುತಲಿ
ತಂದೆಯು ಮುಖವ ನೋಡಿದನು ॥೨೦॥

ಸುತ್ತ ನೋಡಲು ಕಂಡು ಪಿತಮಾತೆ ಪೇಳ್ದರು
ಅತಿ ಹಿತವುಳ್ಳ ಮಗನಿಗೆ
ಮುತ್ತುಕ ಕಡಿಬ್ಯಾಡ ಹುತ್ತವೊಡೆಯಬ್ಯಾಡ
ಮತ್ತಿರ್ಪ ಗಿಡವ ನೀ ತರಿಯೊ ॥೨೧॥

ಮುತ್ತುಕ ಕಡಿದರೆ ಹುತ್ತವನೊಡೆದರೆ
ಚಿತ್ರಗುಪ್ತರು ಬೆನ್ನಬಿಡರು
ಎಂದು ಬುದ್ದಿಯ ಹೇಳಿ ಕಂದನ ಮುದ್ದಾಡಿ
ಅಂದು ಮನೆಗೆ ಹೋದ ತಂದೆ ॥೨೨॥

ಮುತ್ತುಕ ಕಡಿದನು ಹುತ್ತವನೊಡೆದನು
ಮತ್ತಿರ್ಪ ತುರುಗಳ ಕಂಡ
[ನೇರಮೂ]ಗನು ಮಾಡಿದ ಮೊನೆಯೊಳಗಿರ್ದ
ತುರುವು ಭೋರೆನುತ ಬಾಯ್ದೆರೆಯೆ ॥೨೩॥

ವೀರಭದ್ರನು ಸಹ ಅಡಿಯಿಟ್ಟು ಬರಲತ್ತ
ಧಾರುಣಿ ನಡುಗಿತೇನೆಂಬೆ
ಪುಂಡರೀಕದ ಬಿಲ್ಲು ಪಿಡಿದೆದ್ದು ಕುರಿಗಳು
ಬಂದವು ಭೋರ್ಗರೆವುತಲಿ ॥೨೪॥

ತಂಡತಂಡದಿ ಭುಗಿಲಿಡುತ ನಡೆದವಾಗ
ಮಂಡಲ ಬಹಳ ಕಂಪಿಸಿತು
ಕಂಡನು ಪದ್ಮನು ಹಮ್ಮೈಸುತಲಿ ಎದ್ದು
ನೊಂದು ಚಿಂತೆಯನು ಮಾಡಿದನು ॥೨೫॥

ಕರಿದು ಬಿಳಿದು ಕೆಂದ ಉರುಗ ಕಪಿಲವರ್ಣ
ಅರೆಬಿಳಿದಿನ ಹಂಡ ಹಸುರ
ಎರಳೆಯು ಸಾರಂಗ ನರಿಯ ವರ್ಣಂಗಳು
ಕುರಿಯ ಹಿಂಡುಗಳೆದ್ದವಾಗ ॥೨೬॥

ಗೂಡಿನೊಳಗೆ ತುರು ಉಗ್ಗಡಿಸುತೇಳಲು
ಪೊಡವಿ ಆಕಾಶ ನಡುಗೆ
ಅಡಿಯಲಿದ್ದ ಹೆಡೆ ಉಡುಗೆ ಕೈಲಾಸದ
ಒಡೆಯನು ಶಿರವದೂಗಿದನು ॥೨೭॥

ತಂದೆ ಹೇಳಿದ ಮಾತನಂದು ಕೇಳಲೆಯಿಲ್ಲ
ಮುಂದೆ ಬಾಹದ ತಿಳಿಯಲಿಲ್ಲ
ಒಂದನರಿಯೆ ದೊಡ್ಡ ಬಂಧನಕ್ಕೊಳಗಾದೆ
ಮುಂದಕ್ಕೆ ತುರು ಸಹ ನಡೆದ ॥೨೮॥

ಭಾಳಾಕ್ಷ ಹರ ತಾನು ಕೇಳಿದ ಧ್ವನಿಯನು
ಏಳೊ ನಾರದನೆ ನೋಡುವರೆ
ಮೇಗಣ ಗಂಗೆ ಪಾರ್ವತಿಯು ಭೃಂಗೀಶನು
ಭೂವಳಯಕೆ ಬಂದರಾಗ ॥೨೯॥

ಒಂದ ಮಾಡಿದರೆ ಮತ್ತೊಂದು ಆಯಿತು ಶಿವ
ಮುಂದೆ ಬಾಹದನು ನಾನರಿಯೆ
ಬಂಧನಕ್ಕೊಳಗಾದೆನಯ್ಯ ಅಕ್ಕಟಯೆಂದು
ವೊಂದಿಲಿ ನಡೆದ ಪದ್ಮಣ್ಣ ॥೩೦॥

ಕುರಿಗಳ ಬೊಬ್ಬೆ ಅಬ್ಬರಕೆ ಮೂಜಗವೆಲ್ಲ
ನೆರೆದುದು ಕೈಲಾಸದಿಂದ

ಗಿರಿಜೆ ಸಹಿತ ರುದ್ರ ಪ್ರಮಥರು ಸಹವಾಗಿ
ಧರೆಗೆ ನಾರದ ಕೂಡಿ ಬಂದ ॥೩೧॥

ನಂದಿವಾಹನವೇರಿ ಬಂದನು ಶಿವ ತಾನು
ಮುಂದಣ ತುರುವ ನೋಡುತಲಿ
ಕಂದ ನೀ ಕುರಿಗಳ ತಂದದ್ದು ಹ್ಯಾಗೆ[ನೆ]
ಹಿಂದಣ ಕಥೆಯ ಕೇಳಿದನು ॥೩೨॥

ಏನ ಪೇಳಲಿ ನಮ್ಮ ಹೊಲದೊಳಗಿರುತಿಹ
ನಾನು ಮುತ್ತುಕವ ತರಿದೆನು
ಮಾನನಿಧಿಯೆ ಹುತ್ತದೊಳಗಿಂದ ಬಂದವು
ಹೇಂಗೆ ಇದ್ದವೋ ಅಲ್ಲಿ ದೇವಾ ॥೩೩॥

ಕಂದ ಬಗೆಯು ಚೆನ್ನವಾಯಿತು ಬಾರೆಂದು
ಕಂದನ ನೋಡಿ ಮನ್ನಿಸಿದ
ಮುಂದೆ ನೀನಿವಕೆಲ್ಲ ಒಡೆಯನಾಗಿರುಯೆಂದು ಮು
ಕುಂದಪೂಜಿತ ಪಾದ ನುಡಿದ ॥೩೪॥

ನುಡಿದ ಮಾತನು ಕೇಳಿ ಅಡಿಗೆ ಎರಗಿ ಎನ್ನ
ಒಡೆಯ ನಾ ಬದುಕಿದೆನೆಂದ
ನನ್ನೊಬ್ಬನ ಕೂಡೆ ಸಾಗದು ಮಹದೇವ
ನನ್ನ ಕೂಡೊಬ್ಬನ ಕಳುಹು ॥೩೫॥

ಕಡುಗಲಿ ವೀರಬೀರಯ್ಯನ ನಿನ್ನೊಶ ಮಾಡಿ
ಕೊಡುವೆನುಯೆಂದು ಪೇಳಿದನು
ಪೊಡವಿಗೀಶ್ವರ ತಾನು ಒಡನೆ ನಂಬುಗೆಯಿತ್ತು
ದೃಢದಿಂದ ಪೇಳ್ದ ಪದ್ಮನಿಗೆ ॥೩೬॥

ತಂದೆ ಹೇಳಿದ ಮಾತ ಹಿಂದುಗಳೆದು
ಬಂದೆ ತರಿದೆ ಮುತ್ತಕ ಹುತ್ತವನು
ಕುಂದದೆ ಕುರಿಹಿಂಡು ಹೊರಟು ಬರಲು ಕಂಡು
ಹೊಂದಿ ಬಂದೆನು ಇವರೊಡನೆ ॥೩೭॥

ಒಡೆಯನಾಗಲಿಬೇಕು ಕುರಿಯ ಕಾಯ್ಮೇ[ಕೆಂದು]
ಪಡೆದ ಈಶ್ವರ ತನ್ನ ಮಗನ
ಕುಡಿಮೀಸೆ ಕಿಡಿಗಣ್ಣು ನಡೆಯಲಬ್ಬರದಿಂದ
ಹೆಡೆಯುಡುಗಿದ ಫಣಿರಾಜ ॥೩೮॥

ಬೆಟ್ಟಕ್ಕೆ ಕೈಕಾಲು ಹುಟ್ಟುವಂದದಿ ಆಗ
ನೆಟ್ಟನೆ ಆಕಾಶದುದ್ದ
ಸೃಷ್ಟೀಗೀಶ್ವರ ಕರುಣದಿ ವೀರವೀರಯ್ಯ ಎಂದು
ಇಟ್ಟ ರೇವಣಸಿದ್ಧ ಪೆಸರ ॥೩೯॥

ಕಿರುನಗೆ ನಗುತಲಿ ತೆರಬಾಯಿ ಬಿಡುತಲಿ
ಮರಗೈಯ ಬೀಸಿ ಬರುತಲಿ
ಹೊರಡಲು ಬಿರಿಗಣ್ಣು ಮರಗಿವಿ ಬೀರಯ್ಯ
ಗುರುವಿಗೆ ಬಂದೆರಗಿದನು ॥೪೦॥

ಎರಗಿದ ಕಂದನ ಶಿರವಿಡಿದು ಎತ್ತಿ ಶಿವ
ಧರಿಸಿದ ತಾನು ಭಸಿತವನು
ಕುಂದದೆ ಪದ್ಮಗೆ ಒಡೆಯನಾಗಿರುಯೆಂದು
ನಂದಿಯನೇರಿದ ಶಿವನು ॥೪೧॥

ಅತ್ತಲು ಶಿವನು ಹೇಮಾದ್ರಿಗೆ ತೆರಳಲು
ಇತ್ತ ಬೀರಯ್ಯ ಪದ್ಮರಾಯ
ಅರ್ತಿಯಿಂದಲಿ ಕುರಿಗಾಯ್ವ ಸಮಯದೊಳು
ರಕ್ಷಸಿಯನು ಕಂಡರವರು ॥೪೨॥

ನಡೆದು ಬರುವ ತುರುವಿನ ರಭಸಕ್ಕೆ ಉ
ರುಡಲು ಭೂಮಿಗುಂಡುಗಳು
ಕಡುಗಲಿ ವೀರ ಬೀರಯ್ಯನು ಧೈರ್ಯದಿ
ಅಡಿಯಿಟ್ಟನು ಮಲೆಯೊಳಗೆ ॥೪೩॥

ಹೊಕ್ಕು ತುರುಗಳೆಲ್ಲ ಸಿಕ್ಕಿದ ಮೆಳೆಹುಲ್ಲ
ಅಕ್ಕರಿಂದಲಿ ಮೆಯ್ಯುತಿರಲು

ರಕ್ಕಸ ಬಕನುಯೆಂಬವ ಕಂಡು ತುರುಗಳ
ಕುಕ್ಕಿ ತಿನ್ನುವೆನೆಂದು ಬಂದ ॥೪೪॥

ನರಬಲಿ ಕುರಿಬಲಿ ಹೊಸಗವಲೆನು[ತಿರೆ]
ಕುರಿಹಿಂಡು ಬೆದರಿ ಓಡಿದವು
ಅರಿತನು ತನ್ನ ಮನದೊಳಾಗ ಬೀರಯ್ಯ
ಧುರಗಲಿ ನಡೆದ ಕಾಳಗಕೆ ॥೪೫॥

ಕುಡಿಮೀಸೆ ಕುಣಿದು ಕೌರೇಳಲು ಕೋಪದಿ
ಘುಡಿಘುಡಿ ಉರಿಯ ಮುಕ್ಕುಳಿಸೆ
ಹೊಡೆದನು ಮರದಿ ಮುಡದಿ ನಿಂದ ದೈತ್ಯನ
ನಿಡಿಗರುಳುಗಳು ಕುಪ್ಪಳಿಸೆ ॥೪೬॥

ಸೀಳಿದನೆರಡು ಪಾಲಿಂಗೆ ದೈತ್ಯನ ಕೊಂದು
ತಾಳಿದ ಹರುಷವನಾಗ
ಘೋಳಿಟ್ಟವನ ಸುತೆ ಸಿರಿವಂತೆ ಅಳುತಲಿ ಆಗ
ಹೇಳಿದೊ ತನ್ನ ವಾರ್ತೆಯನು ॥೪೭॥

ನಾರಿ ನೀನಾರು ಈ ಘೋರಾರಣ್ಯದೊಳಗೆ
ಸೇರಿದ ಕಾರಣವೇನು
ಆರ ಮಗಳುಯೆಂದು ಪದುಮಣ್ಣ ಕೇಳಲು
ನೀರೆ ನುಡಿದಳವನೊಡನೆ ॥೪೮॥

ಇವನ ಕೊಂದಯ್ಯ ನಮ್ಮಯ್ಯ ಬಕಾಸುರ
ಭಾವಜಹರ ವಿರೂಪಾಕ್ಷ
ದೇವನ ವರದಿಂದ ಜನಿಸಿದೆ ಆತನ
ನೀವು ಕೊಲ್ಲವು ಬಂದೆ ನಾನು ॥೪೯॥

ಎನಗಾರು ಗತಿಯೊ ಈ ಘೋರಾರಣ್ಯದೊಳಿರ್ದ
ಜನಕನ ಕೊಂದಿರಿ ನೀವು
ವಿನಯ ವಚನದಿಂದ ವೀರಬೀರಯ್ಯನ ಚ
ರಣಕ್ಕೆ ನೊಸಲ ಚಾಚಿದಳು ॥೫೦॥

ಪಿಡಿದೆತ್ತಿ ಹರುಷದಿ ವೀರಬೀರಯ್ಯನು
ಕಡುಗಲಿ ಪದ್ಮರಾಯನಿಗೆ
ಮಡದಿಯಾಗಿರುಯೆಂದು ಹರಸಿ ವಿಭೂತಿಯ
ನಿಡಲವಳೊಲಿದಳವಂಗೆ ॥೫೧॥

ಏನೋ ನಿಮಿತ್ತ ಇಲ್ಲಿಗೆ ಶಿವನೆಳೆತಂದ
ಮಾನುನಿ ದೊರಕಿದಳೆಂದು
ಕಾನನವನು ದಾಂಟಿ ಕುರಿ ಸಹ ಪದ್ಮಣ್ಣ
ತಾ ಬಂದನುತ್ಸವದೊಳಗೆ ॥೫೨॥

ಕಡಗೋಲು ಬಿಸಗೆ ಕರೆವ ಗಡಿಗೆಯು ಸಹ
ಹೆಡಿಗೆಯೊಳಿಟ್ಟು ಸಿಂಬೆಯನು
ಮಡದಿ ಶಿರೋಮಣಿ ಸಿರಿವಂತೆ ಹೊತ್ತಿಗೆ
ಅಡಿಯಿಟ್ಟು ತುರು ಸಹ ತೆರಳೆ ॥೫೩॥

ಶಿವನೆ ಗತಿಯುಯೆಂದು ರಾಕ್ಷಸನನು ಕೊಂದೆ
ಆತನ ಮಗಳು ಸಿರಿವಂತೆ
ಕಂದ ನಿನಗೆ ಈಕೆ ಚಿಕ್ಕಹೆಂಡತಿಯೆಂದು
ಮಂದರಧರನು ಹೇಳಿದನು ॥೫೪॥

ಮುಂದಣಾಗಮವನು ಒಂದನರಿತೋನಲ್ಲ
ಚಂದಿರಧರ ಬಲ್ಲನೆಂದು
ಎಂದ ಮಾತನು ಕೇಳಿ ಶಿವ ಮೆಚ್ಚಿ ಪದ್ಮಗೆ
ಛಂದದೊಳ್ಬುದ್ದಿ ಹೇಳಿದನು ॥೫೫॥

*ಕಂದಯ್ಯ ನಿನ್ನ ಹಿರಿಹೆಂಡತಿ ಲಿಂಗಮ್ಮಗೆ
ಕಂದರು ಹದಿಮೂರು ಮಂದಿ
ಚೆಂದದಿ ಹತ್ತಿಕಂಕಂದ ಕುರುಬರೆಂದು
ನಿಂದು ಶಿವನು ನಿರೂಪಿಸಿದ ॥೫೬॥

ಈ ಎರಡು ನಕ್ಷತ್ರಗಳ ನಡುವಿನ ಪಠ್ಯ(ಪದ್ಯ ೫೬–೬೦) 'ಆ' ಪ್ರತಿಯಲ್ಲಿ 'ವಚನ'ವೆಂದು ಕರೆಯಲಾಗಿದೆ. ಮತ್ತು ಅದು ಗದ್ಯ ರೂಪದಲ್ಲಿದೆ. ಈ ಗದ್ಯಕ್ಕೆ ೫೬–೫೭ ಸೇರಿ ಒಂದು ಭಾಗ, ೫೮–೬೦ ಇನ್ನೊಂದು ಭಾಗವೆಂದು ವಿಂಗಡಿಸಿ ಅಲ್ಲಿ ೫೩, ೫೪ ಎಂದು ಕ್ರಮಸಂಖ್ಯೆ ಕೊಡಲಾಗಿದೆ.

ಕಂದಯ್ಯ ನಿನ್ನ ಚಿಕ್ಕ ಹೆಂಡತಿ ಸಿರಿವಂತೆ
ಗಂಡುಮಕ್ಕಳು ಮೂರುಮಂದಿ
ಉಣ್ಣಿಕಂಕಣದ ಕುರುಬರೆಂದು ಶಿವ ಪೇಳಿ
ಮುಂದಣ ಕುರುಹ ಪೇಳಿದನು ॥೫೭॥

ಕಂದ ನೀ ಕುಡಿವೊಕ್ಕಲಿಗ ಕುರಗೂಡಿದ ಕಾರಣ
ದಿಂದೆ ಕುರುಬಗೌಡನಾಗಿ
ನಿನ್ನಯ ಕುಲದೈವ ವೀರಬೀರಯ್ಯಗೆ
ಮುಂದೆ ಒಕ್ಕಲು ಆಗಿ ಬದುಕು ॥೫೮॥

ನಿನ್ನಯ ಗುರು ಸರವೂರ ಶಾಂತಮುತ್ತೈಯಗೆ
ನೀನು ಒಕ್ಕಲು ಆಗಿ ಬದುಕು
ಮುಂದೆ ರೇವಣಸಿದ್ಧೇಶಗೆ ಮಗನಾಗಿ
ಚಿರಂಜೀವಿಯಾಗಿ ಸಂತಸದಿ ॥೫೯॥

ಸೌಭಾಗ್ಯ ಸಂಪನ್ನನಾಗಿ ನೀ ಬದುಕೆಂದು
ಹರಸಿ ಭಸಿತವಿಟ್ಟ ಶಿವನು* ॥೬೦॥

ಅತ್ತಲು ಶಿವನು ಹೇಮಾದ್ರಿಗೆ ತೆರಳಲು
ಇತ್ತ ಬೀರಯ್ಯ ಪದ್ಮಯ್ಯ
ಅರ್ತಿಯೊಳಗೆ ತುರುಗಾಯ್ವ ಸಮಯದೊಳು
ಹೆತ್ತ ಮಲ್ಲಮ್ಮ ಪೇಳಿದಳು ॥೬೧॥

ಇಂದಿನ ಸ್ವಪ್ನದಿ ಕಂದ ಬಾಹದ ಕಂಡೆ
ಇಂದ್ರನ ನಾಡು ಬಪ್ಪಂತೆ
ಇಂದಿನ [ಹ]ಗಲು ಕಂ[ಡ] ಪದ್ಮರಾಯ
ಒಂದೊಂದು ರೂಪಿನೊಳಿಹನು ॥೬೨॥

ಮಕ್ಕಳಾಡುವ ಮುತ್ತುರತ್ನವೆಂದೆನಿಸುವ
ಚಿಕ್ಕಮಗನು ಪದ್ಮರಾಯ
ಬಕ್ಕಟ ಬಯಲಾದ ಹೊಲದಿಂದ ಬರಲಿಲ್ಲ
ಸಿಕ್ಕಿದನ್ಯಾರಿಗೆ ಕಾಣೆ ॥೬೩॥

ಪಾಪಿ ಶಿವನೆ ಎನ್ನ ಉದರದಿ ಹುಟ್ಟಿಸಿ
ರೂಪಿನಲಿ ಮನ್ಮಥನಂತೆ
ಕಾಪಾಲಧರ ಕಂದ ಎನ್ನ ಸಲಹದೆ ಹೋದ ಪ್ರ
ಳಾಪಿಸಿದಳು ಮನದೊಳಗೆ ॥೬೪॥

ರೂಪ ಕಂಡೆನು ನಾನು ಎನ್ನುತಕಟಯೆಂದು
ಬಾಲೆಯು ಹಲುಬೆ ಮಲ್ಲಮ್ಮ
ಸಾವಿಲ್ಲ ಮಗನಿಗೆ ಕೋವಿದನೊಳು ಸಹ
ಭಾವಜ ರೂಪಿನೊಳಹನೆ ॥೬೫॥

ಎಲ್ಲಿ ನೋಡಿದರಿಲ್ಲಯ್ಯ ಅಯ್ಯೊ ಶಿವನೆ
ಚೆಲ್ವ ಮಗನ ಯಾಕೆ ಕೊಟ್ಟೆ
ನಿಲ್ಲಲಾರದು ದುಃಖ ಚೆಲ್ವಮುಖವದೋರೊ
ಗಲ್ಲವ ಪಿಡಿದಲುಗುವೆನು ॥೬೬॥

ತನ್ನ ಮಕ್ಕಳ ಬಿಟ್ಟು ಕೂಡಿದ್ದೆಂಡತಿ ಬಿಟ್ಟು
ಇನ್ನೆಲ್ಲಿ ಹೋದನೊ ಶಿವನೆ
ಎನ್ನಯ ಪಣೆಯೊಳುಯಂತೆ ಬರೆದ ಬ್ರಹ್ಮ
ಇನ್ನು ತೋರಿರಿ ಎನ್ನ ಮಗನ ॥೬೭॥

ಅನ್ನ ಇಡುವರಾರೊ ವಸ್ತ್ರ ಕೊಡುವರಾರೊ
ಕಷ್ಟ ಪಡುವನೆನೊ ಶಿವನೆ
ಏನೇನ ಮಾಡಲಿ ಎನ್ನ ಮಗನ ತೋರೆ
ಪುಣ್ಯಾತ್ಮರನು ಕಾಣಲಿಲ್ಲ ॥೬೮॥

ಪಟ್ಟಣದೊಳಗಿಲ್ಲ ಪೇಟೆಕೋಟೆಯೊಳಿಲ್ಲ
ದೃಷ್ಟಮೂರುತಿ ಶಿವಬಲ್ಲ
ಪಟ್ಟದರಸಿ ಎನ್ನ ಮಗನ ತೋರಿಸುಯೆಂದು
ಇಟ್ಟಳು ಹಣೆಯ ಗಂಡನೊಳು ॥೬೯॥

ನಾನೆಲ್ಲಿ ತೋರಲೆ ನಿನ್ನಯ ಕುವರನ
ಮಾನುನಿಯ ನೋಡಿ ದುಃಖಿಸುತ

ನಾನು ಪಡೆದ ಪುಣ್ಯ ಆರಿಗೆ ಹೇಳಲಿ
ಮಾನುನಿ ದುಃಖಿಸಬೇಡ ॥೭೦॥

ಹೋದ ಮಗನ ಬಿಟ್ಟು ಇರುವ ಮಕ್ಕಳ ನೋಡಿ
ಆ[ದರಣೆ]ಯ ಮಾಡು ನೀನು
ಈ ಧರೆಯೊಳು ಅಂಥ ಮಗನು ಪುಟ್ಟುವರುಂಟೆ
ಈಗ ಅವನ ಹಂಬಲ್ಯಾಕೆ ॥೭೧॥*

ಕರೆವ ಗಡಿಗೆ ಕೈಯ ಕುರುಬ ವೇಷವ ತಾಳಿ
ಎರಗುವ ನಿಮ್ಮ ಚರಣಕೆ
ಕರಿಯಗೊರಳ ಶ್ರೀಕಂಠನೆ ಬಲ್ಲನೆಂದು
ಮರುಗತಲಿದ್ದೊ ಮಲ್ಲಮ್ಮ ॥೭೨॥

ಧರೆಯೊಳು ಶ್ರೀಗಿರಿ ಮಲ್ಲಿಕಾರ್ಜುನಲಿಂಗ
ನೊರದಿಂದ ಪಡೆದ ನಾ ಮಗನ
ವಿರಸವ ಮಾಡಿಕೊಂಡೊಯ್ಯಬಹುದೆಯೆಂದು
ತರುಣಿಯು ಚಿಂತೆ ಮಾಡುತಲಿ ॥೭೩॥

ಮರುಗುವ ಸತಿಯನು ನೆರೆ ನೋಡಿ ಆದಪ್ಪ
ತರುಣಿಯ ಕರೆದು ಮನ್ನಿಸುತ
ಹೊರಹೊರಟ ಮಗನಿಗೆ ಮರುಗಿ ಮಾಡುವದೇನು
ಆರುವಿಲ್ಲ ಶ್ರೀಕಂಠ ಬಲ್ಲ ॥೭೪॥

ಕನಸ ಕೇಳಿರೆಯಕ್ಕ ತನಯ ಪದ್ಮಣ್ಣನ
ಮನಸಿಜಾರಿಯ ಕೃಪೆಯಿಂದ
ಘನವಾದ ಕೋರೆ ಕೆಮ್ಮೀಸೆಯವನು ತಾನು
ವಿನಯದಿ ಬರುವ ಕಾಣಮ್ಮ ॥೭೫॥

ಕೈಯಲ್ಲಿ ಕರೆವ ಗಡಿಗೆ ಕಲ್ಲಿ ಕಾಗಡಿ
ಮೈಯೆಲ್ಲ ಜಿಡ್ಡು ನಾರುತಲಿ

---

* ಪದ್ಯ ೬೬–೭೧ ಎರಡೂ ಒಳಗೊಂಡಂತೆ 'ಆ' ಪ್ರತಿಯಲ್ಲಿ ಬೇರೆ ಪದ್ಯಗಳಿವೆ.

ತಮ್ಮಯ್ಯನ ಕೂಡಿಕೊಂಡು ಬರುವನೆಂದು
ಸುಯ್ಯಲಿಟ್ಟಳು ಚಿಂತೆಯೊಳು ತಾ ॥೭೬॥

ಮತ್ತೋರ್ವ ಕಾಳರಕ್ಕಸನ ಹೊಡೆದು ಚೆಲ್ವ
ಕಕ್ಕಸ ಕುಚದ ಕಾಮಿನಿಯ
ದಕ್ಕಿಸಿಕೊಂಡು ಬಂದವನಿಗೆ ಹೆದರಿ ಕಣ್ಬಿಟ್ಟು
ನೋಡಿದೆನು ಕೇಳಮ್ಮ ॥೭೭॥

ಎನ್ನ ಮಗನು ಹೋಗಿ ಹನ್ನೊಂದು ವರುಷವು
ಇನ್ನೆಲ್ಲಿ ಕಾಂಬೆ ಎಂದೆನುತ
ತನ್ನ ತಾನೇ ಕೇಡ ಮಾಡಿದೆ ಮಗನಿಗೆ
ಎನ್ನ ಬದುಕ ಮಾಡಹೇಳಿ ॥೭೮॥

ಉಂಡಾಡಿ ಪದ್ಮಣ್ಣ ಕುಳಿತಿರ್ದ ಮಗನನು
ಕಂಡಕಂಡವರೆಲ್ಲ ಜರಿಯೆ
ಭಂಡಾಟಿಕೆ ಮಗ ಹೊರಟು ಹೋದನು ತನ್ನ
ಹೆಂಡತಿ ಮಕ್ಕಳ ಬಿಟ್ಟು ॥೭೯॥

ಅಯ್ಯಯ್ಯೊ ಪಾಪಿ ವಿಧಿಯೆ ಪದ್ಮಣ್ಣನ
ಕೈಯಾರೆ ಸಾಕಿ ಕಮರಿಯ
ಬೀಳ್ವಂತೆ ಮಾಡಿದೆಯಕಟೆಂದು ಮಲ್ಲಮ್ಮ
ಹಾಯ್ವಳು ಕಂಬಕಂಬಗಳ ॥೮೦॥

ಆಕೆಯ ದುಃಖವ ಕಂಡಾದಿಗೊಂಡನು
ಶೋಕ ಮಾಡುತ ಮನೆಯವರು
ಕಾಕು ಮಾಡಿಯೆ ಹೋದ ಮೊಮ್ಮಗ ಶಾಂತನ ಬಿಟ್ಟು
ಲೋಕವ ತಿರುಗುವನೆಂತೊ ॥೮೧॥

ಮೊಮ್ಮಗ ಶಾಂತನ ಕರೆದು ಮುದ್ದಾಡುತ
ನನ್ನ ಮಗನೆ ಅಳಬ್ಯಾಡ
ನಿಮ್ಮ ಅಜ್ಜನು ಆದಿಗೊಂಡ ತಾನಿರಲಾಗಿ
ಎಮ್ಮ ದಿಟ್ಟಿಸಿ ನೋಳ್ಪರುಂಟೆ ॥೮೨॥

ಎಂದು ತಮ್ಮೊಳು ತಾವು ಚಿಂತಿಸುತಿರಲಾಗಿ
ಬಂದನಲ್ಲಿಗೆ ಒಬ್ಬ ಶರಣ
ಕಂದ ಪದ್ಮಣ್ಣನು ಸುಖದಲ್ಲಿ ಬರುವನು
ಸಂದೇಹ ಬ್ಯಾಡಿರಿ ನಿಮಗೆ ॥೮೩॥

ಕರೆವ ಗಡಿಗೆ ಕೈಯ ಕುರುಬ ವೇಷವ ತಾಳಿ
ಬಂದ ಸ್ವಪ್ನವು ಲೇಸು ತಾಯಿ
ಗುರು ಮಲ್ಲಿಕಾರ್ಜುನ ವರ ಪಿಂಡ ಪದ್ಮಣ್ಣ
ಬರುವ ಸ್ವಪ್ನವ ಕಂಡೆ[ಯ]ಮ್ಮಾ ॥೮೪॥

ಮಗನಿಂದ ಅಧಿಕ ಮೊಮ್ಮಗನು ಶಾಂತಯ್ಯಗೆ
ಸುಗುಣೆ ಮದುವೆಯನು ಮಾಡಿ
ಮಿಗೆ ಹರುಷವ ಹೇಳಿ ಸುಮ್ಮನಿರಿಯೆಂದು
ಅಘಹರ ಶರಣನೈದಿದನು ॥೮೫॥

ಶರಣರಾಡಿದ ಮಾತು ಸ್ಥಿರವೆಂದು ಶಾಂತಯ್ಯಗೆ
ಪರಿವಿಗೊಂಡನ ಮೊಮ್ಮಗಳ
ಹರಸಿ ಸೇಸೆಯನಿಟ್ಟು ಚಿರಂಜೀವಿಯಾಗೆಂದು
ಹರುಷದಿ ಮದುವೆ ಮಾಡಿದರು ॥೮೬॥

ಪರಿವಿಗೊಂಡನ ಮೊಮ್ಮಗಳು ದೇವಮ್ಮನ
ಕರೆತಂದು ಚರಣಕ್ಕೆ ನಮಿಸೆ
ಹರಸಿದರಾಗ ಮಲ್ಲಮ್ಮ ಲಿಂಗಾಜಿ
ಗುರುಭಕ್ತಿಯಾಗಿರಿಯೆಂದು ॥೮೭॥

ಮೊಮ್ಮಗನಿಗೆ ಒಂದು ಕನ್ನಿಕೆಯನು ಮಾಡಿ
ಉಮ್ಮಳ[ವಿರೆ] ಹರುಷದಲಿ
ಮೊಮ್ಮಗನ ತಂದೆಯ ತುರುಗಳು ತಮ್ಮ
ಭೂಮಿಗೆ ತಾವು ತಿರುಗಿದವು ॥೮೮॥

ತಿರುಗಿದ ತುರುಗಳು ನೊರೆಹುಲ್ಲ ಮೇವುತ
ಭರವಸದೊಳು ಮುಂದೆ ನಡೆಯೆ

ದುರಧೀರ ಪದ್ಮಣ್ಣ ದೂರ ಮಾಡುವೆನೆಂದು
ಎರೆಯ ಹೊಲಕೆ ಬಿಟ್ಟ ತುರುವ ॥೮೯॥

ನಡೆದ ಭಾರಕೆ ಭೂಮಿ ಧಡಧಡಿಸುತಲಿರೆ
ಕಡುಬೇಗದಿಂದ ತುರುವನು
ಹೊಡೆದನು ತನ್ನೂರ ಹೊಲಕಾಗಿ ಕೆಂಧೂಳು
ಪೊಡವಿಯಾಕಾಶ ಮುಟ್ಟದುದು ॥೯೦॥

ನವಕೋಟಿ ತುರುಗಳು ಗವರಿಸಿ ಮೇಯಲು
ಹೊಲದೊಳು ಹೊಕ್ಕು ಆರ್ಭಟಿಸೆ
ಕಡುಗೋಪದಿಂದಲಿ ಕಡಿವೆವುಯೆನುತಲಿ
ಗಡಬಡಿಸುತ ಬರತಿರಲು ॥೯೧॥

ಬಂದಾಗ ತುರುಗಳು ಹೊಂದಿದ ಹೊಲದೊಳು
ಅಂದವಳಿದು ತುಳಿತುಳಿದು
ಕೆಂದೂಳುಯೆದ್ದಾಗ ಗಗನಕ್ಕೆ ಮುಸುಕಲು
ನೊಂದು ಹಮ್ಮನೆ ಹಾರಿಬರುತ ॥೯೨॥

ಧೂಳಕಾಣುತಲೆದ್ದು ಹಿರಿಯ ಮಲ್ಲಣ್ಣನು
ತನ್ನ ಬಂಧುವು ಸಹವಾಗಿ
ಹೇಳಿದ ದೂರ ಎಲ್ಲವ ಪ್ರಜೆ ಗೌಡರ್ಗೆ
ಹಾಳುಮಾಡಿದರೆನ್ನ ಹೊಲವ ॥೯೩॥

ಬೊಬ್ಬೆಯಬ್ಬರ ಕೇರಿಕೇರಿಯ ಮುಸುಕಲು
ತಬ್ಬಿಬ್ಬುಗೊಂಬುತ ಜನರು
ಅಬ್ಬರಸುವ ಮಿಗೆಯಾಗಿಸುವ ಕೋಪ ಗಡಣದಿ
ಉಬ್ಬಿ ನಡೆದರೊಕ್ಕಲಿಗರು ॥೯೪॥

ಹೊಲದೊಳು ತುರುವ ಬಿಟ್ಟವನಾರೊ ಹಿಡಿತಂದು
ತಲೆಯ ಹೊಡೆದು ಚಂಡನಾಡಿ
ಮಲೆತವರನ್ನು ಸಂಕೋಲೊ ಹಾಕುವೆವೆಂದು

ಮಲೆತು ನಿಂದರು ಗೌಡ ಪ್ರಜೆಯು ॥೯೫॥
ಮಿಗೆ ಹರುಷದಿ ತೊಗರಿಸೆ ಗ್ರಾಮಪ್ರಜೆಯೆಲ್ಲ
ಅಗಣಿತ ಮಾತನಾಡುತಲಿ
ಗಗನಮಣಿಯು ನಮಗಿದಿರಿಲ್ಲ ಮಿಕ್ಕಿನ
ಬಗೆಗೊಂಬೆವೆ ಮನುಜರನು ॥೯೬॥

ಕೋಳು ಮಾಡಿದ ಪ್ರಜೆ ದಾಳಿ ಬಾಹದ ಕಂಡು
ಭಾಳಾಕ್ಷಹರ ನಗುತಿರ್ದ
ಹಾಳಾದನು ಪದ್ಮ ವೀರಾಧಿವೀರನು
ಬೀಳಹೊಯ್ವರೆಂದೆನುತ ॥೯೭॥

ಬಿತ್ತಿದ ಹೊಲಕೆ ತುರುವ ಬಿಟ್ಯಯೆನುತಲಿ
ಮತ್ತೆ ದೂರದೊಳು ಗರ್ಜಿಸಲು
[ಎತ್ತಿ] ಡೊಣ್ಣೆಯ ಪಾಡು ಮಾಡಲು ಪದ್ಮಣ್ಣ
ಧಾತ್ರಿಯು ನಡುಗಿತೇನೆಂಬೆ ॥೯೮॥

ನಡುಗಲು ಒಕ್ಕಲಿಗರು ಕಂಡು ಭಯಪಟ್ಟು
ಬಿಡದೆ ಓಡಿದರು ನೋಡುತಲಿ
ಕಡುನೊಂದು ಮನಗೊಳು ತೊಗರಿಸೆ ಪ್ರಜೆಯಿಲ್ಲ
ಬಿಡದೆ ಓಡಿದರು ಆ ಕ್ಷಣದಿ ॥೯೯॥

ಆದಿಗೊಂಡನ ಮಗ ಹಿರಿಯ ಮಲ್ಲಣ್ಣನು
ತನ್ನ ಬಂಧುಗಳ ಸಹವಾಗಿ
ಇಂದು ಬಂದೆವು ನಿಮ್ಮ ಬಸುರೊಳಗೆನುತಲಿ
ತಂದೆಯ ಚರಣಕ್ಕೆರಗಿದ ॥೧೦೦॥

ಎರಗಿದ ಕಂದನ ನೆರೆ ನೋಡಿ ಆದಪ್ಪ
ಅರಿದನು ತನ್ನ ಮನದೊಳು
ಕರಿಯಗೊರಳ ಶಿವ ತಾನೆ ಬಲ್ಲನು ಎಂದು
ಕರೆದನು ಸಕಲರನೆಲ್ಲ ॥೧೦೧॥

ಎಂದ ಮಾತನು ಕೇಳಿ ಬಂದು ಮಲ್ಲಮ್ಮನು
ನಿಂದು ಬಿನ್ನಹವ ಮಾಡಿದಳು

ನಿಮ್ಮ ಕಂದನ ತುರುವು ಅಲ್ಲದೆ ಭೂಮಿಗೆ
ಇನ್ನಾರು ಬರುವವರುಂಟೆ ॥೧೦೨॥

ನಲ್ಲಳಾಡಿದ ಮಾತ ಕೇಳಿ ಆದಪ್ಪನು
ಮೆಲ್ಲಡಿಯಿಡುತಲಿ ಬರಲು
ಮಲ್ಲಿಕಾರ್ಜುನ ಶಿವ ತಾ ಬಲ್ಲನೆನುತಲಿ
ಮಲ್ಲಮ್ಮ ಸಹ ತೆರಳಿದರು ॥೧೦೩॥

ಬರುತ ಕಂಡರು ಮಹಾ ತುರುವಿನೊಳಿಪ್ಪನ
ಒರೆದು ನೋಡಿದ ಪದ್ಮರಾಯ
ಅರೆವರೆಯೊಳಗಿದ್ದ ಮಗನ ಮುಖವ ನೋಡಿ
ಗರುವೆ ಮಲ್ಲಮ್ಮ ನುಡಿದಳು ॥೧೦೪॥

ಕಂದನೆ ನೀನಾವ ದೇಶದಿಂದಲಿ ಬಂದೆ
ಹೊಂದಿದೆ ಈ ಭೂಮಿಯೆನಲು
ಅಂದವುಳ್ಳ ತನುಜನ ತನುಜಯೆಂದು
ನೊಂದಳು ತನ್ನ ಮನದೊಳು ॥೧೦೫॥

ದೇಶದೊಳಗೆ ಅತಿ ದೇಶವು ಇರುವುದು
ಈಶನ ಮಗನು ದೇಶಿಕನು
ಭೂಸುರರಿರುತಿಹ ಗಂಗಾಪುರಿಯೆಂಬ
ದೇಶದಿಂದಲಿ ಬಂದೆನಮ್ಮ ॥೧೦೬॥

ತನುಜನಾಡಿದ ಮಾತ ಕೇಳಿ ಆದಪ್ಪನು
ಘನಹರುಷದಿ ಮನದೊಳಗೆ
ಮನಕೆ ಮನವ ತಾಳಿ ಮಮತೆಯಿಂದಿರ್ವರು
ತನುಜನಡಿಗೆ ಎರಗಿದರು ॥೧೦೭॥

ಎರಗಿದ ಜನನಿಯ ನೆರೆ ನೋಡಿ ಪದ್ಮಣ್ಣ
ಕರವ ಪಿಡಿದು ನೆಗವುತಲಿ
ವರಮಾತೆ ಪಿತರು ಇವರೆ ಅಹುದೆನ್ನುತ
ಸುರಿದವು ನಯನ ಬಿಂದುಗಳು ॥೧೦೮॥

ಅಲ್ಲಿಹೊ ಅಹುದೊ ಎಂಬರು ಜನರುಗಳೊಳು
ಮಲ್ಲಿನಾಥನ ಕರುಣದಲಿ
ಮೆಲ್ಲಡಿಯಿಡುತ ತುರುಗೂಡಿ ಹೋದನುಯೆಂದು
ಬಲ್ಲವರರಿತು ಹೇಳಿದರು ॥೧೦೯॥

ತಂದೆಯಾಡಿದ ನುಡಿಗೇಳಿ ಪದ್ಮರಾಯ
ನೊಂದುಕೊಂಡನು ಮನದೊಳಗೆ
ತಂದೆ ನಾ ನಿಮಗೆ ನೊಂದಿಸಿದೆನೆನುತಲಿ
ಬಂದು ಬಿದ್ದನು ಚರಣದಲಿ ॥೧೧೦॥

ಬಳಲಿದೆ ಮಗನೆ ಹೋಗುವ ಏಳುಏಳೆಂದು
ಫಳಿಲನೆ ಶಿರವ ಎತ್ತಿದರು
ವ್ಯಾಳೆ ಆಯಿತು ಏಳು ಹೋಗುವಾ ಎಂಬೊ ಸಮಯಕ್ಕೆ
ಇಳಿದನು ರವಿಯು ಪಶ್ಚಿಮಕೆ ॥೧೧೧॥

ಬರುತಲಿತ್ತಲು ಇರ್ದ ತುರುಗಳ ಹೊಡಕೊಂಡು
ಕರುವುಗಲ್ಲಿನ ಬಳಿ ನಿಲಿಸಿ
ಸರಸಿಜಮುಖಿ ಸಿರಿವಂತೆಯಲ್ಲಿರುಯೆಂದು
ತೆರಳಲಲಿಗೆರಡು ಸಂಧಿ ॥೧೧೨॥

ಅಂತು ಸಂಧಿ ೨ಕ್ಕಂ ಪದನು ೧೮೭ಕ್ಕಂ ಮಂಗಳಮಹಾ ಶ್ರೀ. ಶ್ರೀ ಶ್ರೀ

❖❖

ಸಂಧಿ : ಮೂರು

ಕೈಲಾಸವಾಸನೆ ಕಾಮಾಂಗದಹನನೆ
ಐಮುಖದ ಅಜನ ಕಪಾಲ
ಕೈಯೊಳಗಾಂತ ಕರುಣಮೂರ್ತಿ ರೇವಣ್ಣ
ಈವುದು ಮತಿಗೆ ಮಂಗಳವ ॥೧॥

ಶ್ರೀವರನಣುಗ ದಹನ ಗಿರಿಜೇಶನೆ
ಶ್ರೀಕಮಲಾಕ್ಷ ಪೂಜಿತನೆ
ಶ್ರೀವರಗೊಲಿದು ಭಾಗ್ಯವನಿತ್ತ ದೇವನೆ
ಶ್ರೀಗಿರಿಜೇಶ ರಕ್ಷಿಸುವುದು ॥೨॥

ಚಿಂತಿಸಿ ಮನದೊಳು ಎಂತು ಹೋಗುವೆನೆಂದು
ಯಂತ್ರವಾಹಕ ಗತಿಯೆನುತ
ಸಂತೋಷದಿಂದಲಿ ಪಿತಮಾತೆಸುತ ಸಹ
ಕಂತುರೂಪನು ನಡೆತಂದ ॥೩॥

ಕುಂದದೆ ದ್ವಾರವಟ್ಟವನೊಳ ಪೊಕ್ಕು
ಚಂದ್ರಧರನೆ ಗತಿಯೆಂದು
ಇಂದುವದನೆಯು ಲಿಂಗಾಲಿಯು ಕಾಣುತ
ಚೆಂದವನೇನ ಬಣ್ಣಿಸುವೆ ॥೪॥

ಹೊಂಬಣ್ಣ ಹಾರದ ಸೀರೆ ಮೇಲ್ಮುಸುಕಿಕ್ಕಿ
ಕುಂಭಕುಚವು ಅಲುಗುತಲಿ
ತುಂಬಿದ ಗಿಂಡೀಲಿ ಉದಕವ ಪಿಡಿಕೊಂಡು
ಬಂದಾಗ ಪಾದಕ್ಕೆ ಎರೆಯೆ ॥೫॥

ಬಂದ ಗಂಡನಿಗೆ ಗದ್ದುಗೆ ಮಾಡಿ ಹರುಷದಿ
ಚಂದನಗಂಧಿ ಸಂತಸದಿ
ಅಂದು ಸಂಭ್ರಮದಿಂದ ಎಡೆಯನು ಮಾಡುತ
ಸಿಂಧೂರಗಮನೆ ಲಿಂಗರಸಿ ॥೬॥

ಪಂಕ್ತಿಯ ಸಾಗಿಸಿ ನಿಂತಿರ್ದ ಲಲನೇರು
ಮುಂದಿರಿಸಿದರು ದೀವಿಗೆಯ
ಸಂತಸದಲಿ ಬಡಿಸಿದರು ಉಪ್ಪಿನಕಾಯಿ
ಮುಂತಾದ ಮೇಲೋಗರಗಳ ॥೭॥

ರಾಜಾನ್ನದಕ್ಕಿಯೋಗರವು ಪಳಿದ್ಯವು
ರಾಜಿಪ ಘೃತವು ಕಜ್ಜಾಯ
ಸೊಬಗಿನಿಂದಲಿ ಬಡಿಸಲು ನಂಟರು ಸಹ
ಭೋಜನಗಳ ಮಾಡಿದರು ॥೮॥

ಅರ್ತಿಯಿಂದಲಿ ಆರೋಗಣೆಯನು ಮಾಡಿದ
ಚಿತ್ತಜ ಸಮರೂಪ[ನಿಗೆ]
ಕತ್ತಿರಿಸಿದ ಹೋಳು ಬಿಳಿಯೆಲೆ ಕೆನೆಸುಣ್ಣ
ಇತ್ತಳು ಬಹು ಹರುಷದಲಿ ॥೯॥

ಊಟವ ಮಾಡಿ ಕೈ ತೊಳೆಯಲು ಕರ್ಪೂರ
ಕೋಟ ತಾಂಬೂಲಗಳ ಸವಿದು
ಕೋಟಲೆಗೊಂಡು ಬಂದುದ ಪೇಳುತಿರಲಾಗಿ
ದಾಟಿದ ರವಿಯು ಪಶ್ಚಿಮಕೆ ॥೧೦॥

ಅಂಬುಜಸಖ ಶರಧಿಯೊಳ್ಪೋಗೆ ಕತ್ತಲೆ
ತುಂಬಿತು ಬ್ರಹ್ಮಾಂಡ ಜಗಕೆ
ಮುಂಬರಿದವು ದೆಸೆದೆಸೆಗೆ ತಾರಕಿಗಳು
ಸಂಭ್ರಮಿಸಿದವು ಖೇಚರದಿ ॥೧೧॥

ಜನನಿ ಜನಕರೊಳು ಮಾತಾಡಿ ಪದ್ಮಣ್ಣ
ಇನಿಯಳ ಸಜ್ಜಾಗೃಹದೊಳು

ಘನಹರುಷದಿ ಪವಡಿಸಿಕೊಂಡು ಇರಲಾಗಿ
ದಿನನಾಥನುದ್ಭವಿಸಿದನು ॥೧೨॥

ಅರುಣೋದಯ ಪಸರಿಸಲು ಪದ್ಮಣ್ಣನು
ಕರಚರಣಂಗಳ ತೊಳೆದು
ಗರುವೆ ಮಲ್ಲಮ್ಮಗೆರಗಿ ಪೋಪೆನೆಂದೆನೆ
ಮರಳೊಂದು ಮಾತನಾಡಿದಳು ॥೧೩॥

ತನುಜನೂಟವ ಮಾಡಿ ಜನನಿಯ ಕರೆ
ದನು ಹರುಷದಿ ಮನದೊಳಗೆ
ಇನಕುಲ ಪದ್ಮಣ್ಣ ಇನ್ನು ಹೋಗುವೆನೆಂದು
ಚೆನ್ನೆ ಮಲ್ಲಾಜಿಗೆ ಎರಗೆ ॥೧೪॥

ನಿನ್ನ ಹೆಂಡರು ಮಕ್ಕಳನು ಬಿಟ್ಟು ಪೋಪುದು
ಚೆನ್ನವೆ ಮಗನೆ ಹೇಳೆನಲು
ನಿನ್ನಯ ಸತಿಸುತರನ್ನು ನೀ ಕರಕೊಂಡು
ಇನ್ನು ಹೋಗೊ ಪದ್ಮರಾಯ ॥೧೫॥

ಕಂದಯ್ಯ ತನ್ನ ಸತಿಸುತರನೆಲ್ಲರ ಬಿಟ್ಟು
ಹೋದನೆಂಬುದು ಧರ್ಮವಲ್ಲ
ಚಂದಿರವದನೆ ಲಿಂಗರಸಿಯು ಸುತ ಸಹ
ಬಂದು ಬಿದ್ದರು ಚರಣದಲಿ ॥೧೬॥

ಪುರುಷ ನೀನಲ್ಲದೆ ಪರಪುರಷಗೆ ಎನ್ನ
ಸೆರಗೆ ಕೊಟ್ಟೆನೆ ಕೇಳೊ ಕಾಂತ
ಪರಶಿವ ನಮ್ಮಿಬ್ಬರರಿಸಿ ಶಾಸೆಯನಿಟ್ಟ
ಇರುವಳೆ ನಿಮ್ಮನು ಬಿಟ್ಟು ॥೧೭॥

ಸತಿಯಳಾಡಿದ ಮಾತ ಪತಿಯು ಲಾಲಿಸಿ ಕೇಳಿ
ಪತಿವ್ರತೆಯಹು[ದು] ಲಿಂಗರಸಿ
ಪಿತನ ಅರ್ಧಾಂಗಿ ಮಲ್ಲಮ್ಮಗೆ ಹೇಳಿ
ಸುತರನು ಕರಕೊಂಡು ಬಾರೆ ॥೧೮॥

ಎಂದ ಮಾತಿಗೆ ನಡೆತಂದು ಗೃಹದೊಳಿರ್ದ
ಹೊಂದಿದ್ದ ದ್ವಾರವಟ್ಟವನು
ಇಂದುವದನೆಯು ಮಲ್ಲಮ್ಮನ ಮುಖ ನೋಡಿ
ಬಂದು ಬಿದ್ದಳು ಚರಣದಲಿ ॥೧೯॥

ಚಿರಂಜೀವಿಯಾಗಿರು ಎಂದು ಕಿರಿಯಾಕೆಯ
ಶಿರವನು ಎತ್ತಿದಳಾಗ
ತರಳೆ ನೀ ಬಂದ ಕಾರಣವೇನು ಪೇಳೆಂದು
ಕರವ ಮುಗಿದು ಬಿನ್ನೈಸಿದಳು ॥೨೦॥

ಎನ್ನರಸನು ಎನ್ನ ತನುಜನು ಸಹವಾಗಿ
ಇನ್ನು ಹೋಗುವೆನು ಅತ್ತೆಮ್ಮ
ಕನ್ನಡಿವದನೆ ಹೋಗುವೆನೆಂದು ನಿಮಗೆ ನಾ
ಬಿನ್ನವಿಸಲು ಬಂದೆನಮ್ಮಾ ॥೨೧॥

ಹೊನ್ನು ಚಿನ್ನಗಳು ಹನ್ನೆರಡು ಸಾವಿರವಿದೆ
ಇನ್ನು ಭಾಗವ ಮಾಡಿಕೊಂಡು
ಕನ್ನಡಿವದನೆ ಲಿಂಗರಸಿ ನೀ ಹೋಗೆಂದು
ಬಿನ್ನವಿಸಲು ಪತಿಯೊಡನೆ ॥೨೨।

ಎಂದ ಮಾತಿಗೆ ಲಿಂಗರಸಿ ತಮ್ಮತ್ತೆಗೆ
ವಂದಿಸೆ ಪೋಪೆ[ನೆ] ನಿಮ್ಮ
ತಂದೆಯ ದಿವ್ಯಪಾ[ಲ] ತೆಕ್ಕೊಳ್ಳದೆ
ಮುಂದೆ ಹೋಗುವರೇನೊ ಮಗನೆ ॥೨೩॥

ಎನ್ನೊಡೆಯನು ರೇವಣ್ಣನ ದಯದಿಂದ
ಹೊನ್ನು ಹಣಕೆ ಬಂದದ್ದೇನು
ಇನ್ನಾರು ಮಂದಿ ಮಕ್ಕಳು ಸುಖದಲ್ಲಿದ್ದರೆ
ಎನ್ನದಲ್ಲವೆ ಕೇಳೆ ತಾಯೆ ॥೨೪॥

ಕುಕ್ಕುಟ ಧ್ವನಿಯನು ಕೇಳುತ ಗ್ರಾಮದಿ
ಎದ್ದರು ಪುರಜನರುಗಳು

[ಚೊ]ಕ್ಕಟದಿಂದಲಿ ಎದ್ದು ಕೈದೊಳೆದರು
ಮುದ್ದಾಗಿ ಕುಳಿತರಾಕ್ಷಣದಿ ॥೨೫॥

ಮೊರೆವುತ ಪದ್ಮ[ದೆಸಳ] ಬಿಟ್ಟು ಮರಿದುಂಬಿ
ಕರುಣರಸವನುಂಡು ಬೇಗ
ಪರಿತಂದು ಕೊಳ[ವ] ಬಳಸಿ ನೋಡುತಿರೆ ಕಂಡು
ಆಗ ಉದಯ ಪಸರಿಸಿತು ॥೨೬॥

ಕತ್ತಲೆ ಹರಿಯಲು ಉತ್ತಮ ಪುತ್ರನು
ಹೆತ್ತ ಮಲ್ಲಮ್ಮಗೆರಗಿದ
ಉತ್ತಮ ಸತಿಸುತರೊಂದಾಗಿ ಹೊರಡಲು
ಹೆತ್ತ ಮಲ್ಲಮ್ಮ ಮರುಗಿದಳು ॥೨೭॥

ಹರುಷದಿ ತಂದೆತಾಯಿಗಳ ಪಾದಕೆ ಬೀಳೆ
ಹರಸಿ ಸೇಸೆಯನಿಟ್ಟು ಮಗನೆ
ಚಿರಂಜೀವಿಯಾಗಿ ಲಿಂಗಾಜಿಯೊಡನೆ ನೀನು
ಸುಖದೊಳಗಿರು ಪದ್ಮರಾಯ ॥೨೮॥

ಪುರಜನರೆಲ್ಲ ಪದ್ಮಣ್ಣ ಲಿಂಗಾಜಿಯ
ಹರಸೆ ಸುಖದಿ ಬಾಳಿರೆಂದು
ಕರುಣದಿ ಬೀಳ್ಕೊಂಡು ತೆರಳಿದ ಹರುಷದಿ
ಗುರುರಾಯ ಗತಿಯೆಂದು ನಡೆದ ॥೨೯॥

ತುರುಗಳೆದ್ದವು ಆಗ ಶಾಂತಯ್ಯನ ನೋಡುತ
ಗುರುವೆ ಗತಿಯು ನಮಗೆನುತ
ಸಿರಿವಂತೆ ಸಹವಾಗಿ ತೆರಳಿದ ಪದ್ಮಣ್ಣ
ಭರದಿಂದ ಉತ್ತರಕೆ ನಡೆದ ॥೩೦॥

ಒಂದೊಂದು ಬಳಿಯ ತುರುವ ಮೇಯಿಸುತ್ತಲೈ
ತಂದು ನೀರ್ಗುಡಿಸಿದ ಪದ್ಮ
ಕುಂದದೆ ಸಿರಿವಂತೆ ಸಹವಾಗಿ ಉಣುತಿರೆ
ನೊಂದನು ಬಹಳ ಶಾಂತಣ್ಣ ॥೩೧॥

ರಕ್ಕಸಿ ಕುಲದವಳೊಡನೆ ಭೋಜನ ಮಾಡೆ
ದಕ್ಕೂದೆ ತಿಂಬುವ ಅನ್ನ
ಅತ್ತಲು ಗುರು ನೀನೆ ಗತಿಯೆನುತಲಿ ಆಗ
ಚಿಕ್ಕಶಾಂತನು ಕಡೆಗಾದ ॥೩೨॥

ತೊಲಗುವೆ ಇವನೊಳು ಇರಸಲ್ಲದೆನುತಲಿ
ಕುಲಹೀನ ಸತಿಯೊಳು ಬೆರೆದ
ಹೊಲೆಗೇಡಿ ನೀಚನೊಳಿರಲುಬಾರದುಯೆಂದು
ಹೊಲಬನರಿಯದಿವ ಕೆಟ್ಟ ॥೩೩॥

ನುಡಿದಡಿಯಿಡಲತ್ತ ಮೃಡ ನೀನೆ ಗತಿಯೆಂದು
ಕಡುಗಲಿ ವೀರಶಾಂತಯ್ಯ
ಕಡುನೊಂದು ಪದ್ಮನು ಮಗನ ಮಾತನು ಕೇಳಿ
ಮಡದಿ ಸಹಿತ ಮರುಗಿದನು ॥೩೪॥

ಇಂತು ಜರೆದು ತಂದೆತಾಯಿ ಬೀಳ್ಕೊಟ್ಟಾಗ
ಚಿಂತಾಯಕನೆ ಗತಿಯೆನುತ
ಪಂಥದೊಳಿರಲಾಗಿ ಪದ್ಮಣ ಸತಿಸಹ
ಚಿಂತಿಸಿದರು ಮರುಗುತಲಿ ॥೩೫॥

ತಂದೆತಾಯಿಗಳನು ಜರೆದು ಶಾಂತಯ್ಯನು
ಹೊಂದದೆ ಅನ್ನ ಉದಕವ
ಚೆಂದದಿ ತನ್ನ ಹಸ್ತದಿ ತಾನೆ ಮಾಡಿಕೊಂಡು
ಮುಂದಕ್ಕೆ ನಡೆದ ಸಂತಸದಿ ॥೩೬॥

ಶತಪತ್ರಸಖನ ಪೋಲುವ ಶಾಂತಯ್ಯನು
ಪಿತನ ಜರೆದು ಅಡಿಯಿಡುತ
ಕ್ಷಿತಿಯೊಳು ಧರ್ಮದ ನೆಲೆಯರಿದವರಿಗೆ
ಅಡಿಶಯದೊಳಗೀಶನೊಲಿವ ॥೩೭॥

ಮೇಲಾದ ಕುಲವನು ಕೀಳು ಮಾಳ್ಪೆನೆಯೆಂದು
ನಾಲ್ಕು ಕುರಿಯ ಹಿಂಡುಗಳ

ಲೀಲೆಯಿಂದಲಿ ಶಾಂತನ ವಶವಮಾಡೆ
ಹಾಲು ಹಣ್ಣಾಗಿರುತಿರ್ದ ॥೩೮॥

ಫಲಪದವಿಯ ಕೊಟ್ಟು ಸಲಹುವ[ಹ]ರನು
ಅತಿಶಯದೊಳು ಗತಿ ನಮಗೆ
ಹಾಲು ಅನ್ನವನು ಅರ್ಪಿತ ಮಾಡಿ ಲಿಂಗಕ್ಕೆ
ಭಕ್ತಿಯಿಂದಲಿ ಇರುತಿರಲು ॥೩೯॥

ಮೀಸಲು ಸೂಸಲು ಮಾಡುವ ಸತಿಸಹ
ಬೇಸರಿಲ್ಲದೆ ಭಕ್ತಜನಕೆ
ಈಶಗರ್ಪಿಸಿ ಗುರುವುಂಡು ಮಿಕ್ಕಿದ್ದ ಸು
ಪ್ರಸಾದವೆಂದೆನುತ ಉಂಬುವನು ॥೪೦॥

ಗಂಡಹೆಂಡತಿ ಸಹ ಘನಶೀಲದಲ್ಲಿರೆ
ಕಂಡು ರೇವಣಸಿದ್ದನಾಗ
ಉಂಡು ಬರುವ ಶಾಂತಯ್ಯನ ಭಕ್ತಿಯೊಳೆಂದು
ಮಂಢಲಕಿಳಿದನಾ ಕ್ಷಣದಿ ॥೪೧॥

ಮುಟ್ಟಿ ಪೂಜೆಯ ಮಾಡೆ ಶಿವನ ಶಾಂತಯ್ಯನು
ಗುಟ್ಟುನಿಂದಲಿ ನೆನೆಸುತಲಿ
ಖಟ್ವಾಂಗಧರ ಭಕ್ತಿಯ ನೋಡುವೆನೆಂದು
ಸೃಷ್ಟಿಗಿಳಿದು ನಡೆತಂದ ॥೪೨॥

ಹಿಡಿದ ತ್ರಿಶೂಲ ಕಪ್ಪರ ಕಂಥೆ ಭಸಿತವು
ಜಡಿದ ರುದ್ರಾಕ್ಷಿ ಪಾವುಗೆಯು
ಕುಡಿಮೀಸೆ ಕಿಡಿಗಣ್ಣು ನಡೆವ ರೌದ್ರಾಕಾರ
ಒಡೆಯ ತಾ ಬಂದು ನಿಂದಿರಲು ॥೪೩॥

ಹಾಲು ಬೋನವ[ನುಂಡು] ಸೊರಗಿದೆವೆನುತಲಿ
ಕೋಲನು ಊರಿ ನಿಂತುಕೊಂಡ
ಮೂಲೋಕದೊಡೆಯನ ಕಂಡು ಶಾಂತಯ್ಯನು
ಪಾದಕ್ಕೆ ಬಂದೆರಗಿದನು ॥೪೪॥

ಒಡೆಯನ ಚರಣಕ್ಕೆ ಎರಗೆ ಶಾಂತಯ್ಯನು
ಮಡದಿ ಪನ್ನಿರ ತಂದಿತ್ತು
ಬಿಡದೆ ಪಾದವ ತೊಳೆದೊಳಗೆ ಬಂದಾಗ
ಒಡನೆ ಗದ್ದುಗೆಯ ಮಾಡಿದರು ॥೪೫॥

ಮಡದಿ ಸಹಿತ ಶಾಂತನೊಡೆಯನ ಪಾದಕ್ಕೆ
ಬಿಡದೆರಗಲು ಪಿಡಿದೆತ್ತಿ
ಕಡುಹರುಷದಿ ಭಸಿತವನಿಟ್ಟು ಹರುಷದಿ
ಅಡುಗೆ ಮಾಡೆಂದು ಹೇಳಿದರು ॥೪೬॥

ಬೇಡಿದ ಪಂಚಭಕ್ಷ್ಯವು ಪರಮಾನ್ನವ
ನೀಡುವೆ ಒಡೆಯ ಏಳೆನಲು
ನೋಡುವೆಯಿವನ ಭಕ್ತಿಯನೆ[ಂದು] ಶಿವ ತಾನು
ಕೂಡಿಸಿದನು ಜಂಗಮವ ॥೪೭॥

ಕಂದನ ಭಕ್ತಿಯ ಎಂದು ನೋಡುವೆನೆಂದು
ಬಂದಿತು ಮಹಮಹ ಘನವು
ಚಂದಚಂದದ ಚರಲಿಂಗ ಜಂಗಮವಾಗ
ಬಂದರು ಶಾಂತನ ಮನೆಗೆ ॥೪೮॥

ಲಕ್ಷಸಂಖ್ಯೆಯ ವಿರಕ್ತ ಜಂಗಮರಾಗ
ಇಕ್ಕೆಲದೊಳು ಬರುತಿರಲು
ಚಿಕ್ಕಶಾಂತಯ್ಯ ಕಾಣುತ ಮನದೊಳು
ಉಕ್ಕುವ ನದಿಯಂತುಬ್ಬಿದನು ॥೪೯॥

ಹರಹರ ರೇವಣ್ಣ ಗುರುವೆ ನಿನ್ನಾಟವ
ಪರಮಭಕ್ತರು ಬಲ್ಲರೈಸೆ
ನೊರಜು ನಾನೇನ ಬಲ್ಲೆನುಯೆಂದು ಶಾಂತಯ್ಯ
ಬರುವರ ಪಾದಕ್ಕೆ ಎರಗೆ ॥೫೦॥

ಗದ್ದುಗೆಯನು ಹಾಕಿ ಕುಳ್ಳಿರಿಯೆನುತಲಿ
ಮುದ್ದು ಶಾಂತಯ್ಯ ಹೇಳಿದನು

ಸದ್ದಾಗದಂತೆ ಪನ್ನೀರು ವಿಭೂತಿಯ
ಇದ್ದ ಬಳಿಗೆ ತಂದು ಇರಿಸಿ ॥೫೧॥

ಮುತ್ತಿನ ಝಲ್ಲ ಗದ್ದುಗೆಯನು ಹಾಕಲು
ಚಿತ್ತಜಹರ ಕುಲುತಿರಲು
ಉತ್ತಮ ಚರವು ವಿರಕ್ತ ರೇವಣ್ಣನ
ಸುತ್ತ ಕುಳ್ಳಿರ್ದರರ್ತಿಯಲಿ ॥೫೨॥

ಸಾಮಾರ್ಜನೆ ಮಾಡಿ ಎಡರಯ ಮಾಡಿದ[ಳಾ]ಗ
ಕಾಮಿನಿಯ[ಳು] ತಂದು ಬಡಿಸೆ
ಪ್ರೇಮದಿ ಪಂಚಭಕ್ಷ್ಯವು ಪರಮಾನ್ನವ
ಸೋಮಶೇಖರಗೆಡೆ ಮಾಡಿ ॥೫೩॥

ಹಾಲು ಬೋನವ ನೀಡಿ ಬಾಲೆ ಸಹಿತ ಬಂದು
ಮೇಲು ಗದ್ದುಗೆ ಮೇಲೆ ಇಹಗೆ
ಮೂಲೋಕದೊಡೆಯನೆ ಸಲಿಸು ನೀವೆನುತಲಿ
ಬಾಲಶಾಂತನು ಎರಗಿದನು ॥೫೪॥

ಕಂದ ಮಾಡಿದ ಭಕ್ತಿಯನು ಕೈಕೊಂಡಾಗ
ಒಂದಾರು ಭುಜವಾಗಿ ಹಿಗ್ಗಿ
ಒಂದು ಕರಗ ಅಂಬಲಿಗೆ ಒಂಬತ್ತು ಲಕ್ಷ ನೀ
ಡೆಂದು ಭಸಿತವ ಧರಿಸಿ ॥೫೫॥

ಕಂದನ ಭಕ್ತಿಗೆ ಅಂದು ಶಿವನು ಮೆಚ್ಚಿ
ಒಂದಾರು ಭುಜವಾಗಿ ಹಿಗ್ಗಿ
ಆಡುತ್ತ ತುರುಗಳ ನೋಡುತ್ತ ಶಾಂತಯ್ಯ
ನಡೆದನು ಚಕೋರ ಹೊಳೆಗೆ ॥೫೬॥

ಹೊಳೆಯೊಳು ನಿಂದು ಮಾರಹರ ಗತಿಯೆಂದು
ಶಿವನ ಪೂಜೆಯ ಮಾಡುತಿರಲು
ದಳದುಳಿಯಲಿ ಬಂಡಿ ನಡೆದು ಬರಲು ಕಂಡು
ತಾಳಿದ ಕೋಪವನಾಗ ॥೫೭॥

ಬಂಡಿಕಾರರು ಕಂಡು ಏಳು ಎಂದೆನುತಲಿ
ಕಂಡು ಶಾಂತಯ್ಯನ ಗರ್ಜಿಸಲು
ಕೆಂಡಗಣ್ಣನ ಧ್ಯಾನದಿಂದ ಜಪಿಸುತಿರೆ
ಮಂಡಲವೆಲ್ಲ ನಡುಗಿತು ॥೫೮॥

ಹರಿದು ಬರಲು ಬಂಡಿ ತುಂಡು ತುಂಡಾಗಲು
ಹರಿದೋಡಿ ಹೋಗೆ ಶಾಂತಯ್ಯನ
ವರಿಗೆ ನಮ್ಮಯ್ಯ ಶಿವ ಸಿದ್ದಯ್ಯನಿಗೆ
ದೇಗುಲ ಕಟ್ಟಿ ಹೇಳಿದನು ।೫೯॥

ಶಾಂತಯ್ಯನು ತಾನು ಕರುಣ ದೃಷ್ಟಿಯಲ್ಲಿ
ಬಂಡಿಗಳನು ನೋಡಲಾಗ
ಮುರಿದು ಬಂಡಿಗಳು ಸುಗಮವಾಗಲು ಆಗ
ದೇಗುಲ ಕಟ್ಟಲೊಪ್ಪಿದರು ॥೬೦॥

ದೇಶದೇಶದೊಳಿರ್ಪ ಶಿಲ್ಪಕಾರರು ಬಂದು
ಕುಶಲದಿ ಕಲ್ಲುಗಳನಿಳುಹೆ
ಶಾಂತಯ್ಯ ಭಕ್ತಿಗೆ ಮೆಚ್ಚಿ ರೇವಣಸಿದ್ಧ
ನೆಲಸಿದನಾ ಮಠದೊಳಗೆ ॥೬೧॥

ಮಗನ ಭಕ್ತಿಗೆ ಮೆಚ್ಚಿ ಅಘಹರ ಜಂಗಮ
ಮಿಗೆ ಹರುಷದಿ ವಿಭೂತಿಯನು
ತೆಗೆದಿಟ್ಟು ನಿನಗೆ ಬೇಕಾದುದ ಕೇಳೆಂದು
ನಗುತಲಿ ನುಡಿಯೆ ಶರಣರು ॥೬೨॥

ಏನ ಬೇಡಲಿ ಸ್ವಾಮಿ ನೀನಿತ್ತ ಭಾಗ್ಯವು
ಏನು ಕಡಿಮೆ ಇಲ್ಲ ಎನಗೆ
ನೀ ಬಂದು ಕೃಪೆಯಾ[ದಿ] ದೀಕ್ಷೆಮೋಕ್ಷಗಳಿಲ್ಲ
[ದಾ]ನಿರುವದು ಸಮ್ಮತವೇ ॥೬೩॥

ಮೇದಿನಿಯೊಳು ಆದಿಕೊಂಡ ದೇವರಿಗೆಲ್ಲ
ಚೋದ್ಯದಿ ಗಣಪದವಿತ್ತು

ಆದಿಗೊಂಡನೆಂಬ ನಾಮವ ತಾಳಿ ನೀನೀಗ
ಒಲಿದ ಶರಣರಿಗೆ ಲೆಕ್ಕವಿಲ್ಲ ॥೬೪॥

ಧರೆಯೊಳು ಬೇಡಿದವರ್ಗೆ ಭಾಗ್ಯವನಿತ್ತೆ
ಕರುಗಾಯ್ದೆ ಭಕ್ತಿಗೆ ಮೆಚ್ಚಿ
ನೀರಜನಾಭಗ ಮೆಚ್ಚಿ ಮೈದೋರಿದೆ
ಕರಜಾತನನು ಮಾಡುಯೆನ್ನ ॥೬೫॥

ಧರೆಯೊಳು ನಿನಗೆಣೆವುಂಟೆನೊ ಮಹದೇವ
ಕರುಣಿಸು ಎನಗೊಂದು ವರವ
ಕರುಣಾಳು ರೇವಣ್ಣ ದೀಕ್ಷೆಮೋಕ್ಷವನಿತ್ತು
ಗುರುವಾಗಬೇಕೆಂದ ಶಾಂತ ॥೬೬॥

ವರವ ಬೇಡಲು ಮೆಚ್ಚಿ ನಗುತಲಿ ಶಿವ ತಾನು
ತರಿಸಿದ ಕಡಲೆ ಕಬ್ಬುಗಳ
ತರಿಸಿದ ನಾಣ್ಯಗಳನು ಗುಡಿ ತೋರಣ
ಇರದೆ ರಚಿಸಿದನೇನೆಂಬೆ ॥೬೭॥

ಆಡಿದ ನುಡಿಗೇಳಿ ಮೆಚ್ಚಿ ರೇವಣಸಿದ್ಧ
ನಾಡೊಳಗಿರುವ ಪಣ್ಫಲವ
ಜೋಡಣೇಗೈದು ತಂದರು ಪುಷ್ಪಪರಿಮಳ
ಬೇಡಿದ ಹಣಹೊನ್ನುಗಳನು ॥೬೮॥

ಗುಡಿತೋರಣಗಟ್ಟಿ ಹಸೆಯು ಹಂದರವಿಕ್ಕಿ
ಒಡೆಯರು ಭಕ್ತರುಘ್ಘಡಿಸೆ
ನಡೆ ಮಡಿ ವಾದ್ಯ ಶೋಭನದಿಂದ ದೀಕ್ಷೆಯ
ಮೃಡನೊಲಿದಿತ್ತ ಶಾಂತನಿಗೆ ॥೬೯॥

ತರಿಸಿದ ಕಲಶಕ್ಕೆ ಗಿಂಡಿ ನಾಲ್ಕೈದನು
ತರಿಸಿದ ಕಡಲೆ ಕಬ್ಬುಗಳ
[ಹೊ]ರೆವಂ[ಥ] ಭಸಿತ ಗಂಧಾಕ್ಷತೆ ವೀಳ್ಯವ
ತರಿಸಿದ ಎಳದಳಿರುಗಳ ॥೭೦॥

ನಾಲ್ಕು ಕಲಶ ನಾಲ್ಕು ದಿಕ್ಕನೊಳಿಟ್ಟಾಗ
ಬೇಕೆಂಬ ಗುರುಕಲಶವನು
ಜೋಕೆಯೊ[ಳಂದು] ಮಧ್ಯದೊಳಿಟ್ಟು
ಪೂಜೆ ಹರುಷದಿ ಮಾಡಿದರು ॥೭೧॥

ಪಂಡಿತಾರಾಧ್ಯ ರೇವಣಾರಾಧ್ಯ ಏಕೋರಾಮ
ದಂಡಾಗ್ರ ಮರುಳಸಿದ್ಧಯ್ಯ
ಕಂಡರು ನಾಲ್ಕು ದಿಕ್ಕಿನ ಕಲಶವನೆತ್ತಿ
ಕೊಂಡಾಡಿ ಗುರುವ ಕೀರ್ತಿಸುತ ॥೭೨॥

ಕಂದನೆ ನಿನಗೆ ಮತ್ತೊಂದು ನೇಮ[ವದು]ಂಟು
ಇಂದುಧರನ ಪುರದೊಳಗೆ
ಕುಂದದೆ ಕರಿಯಮಲ್ಲಿಗೆ ಪುಷ್ಪವ ತಂದು
ವಂದಿಸು ಶಿವನ ಚರಣಕೆ ॥೭೩॥

ಅಯ್ಯಾ ಹಸಾದವೆಂದೆನುತ ಶಾಂತಯ್ಯನು
ಮೈಯನಿಕ್ಕಿದ ಹರುಷದಲಿ
ಅಯ್ಯಾ ವಿಭೂತಿಯ ಧರಿಸುವೆಂದುದ ಕೇಳಿ
ಐಗೋಲರಿಪು ಆಗ ಧರಿಸೆ ॥೭೪॥

ನಿಮ್ಮ ಕರುಣದಿಂದ ನಮ್ಮ ಭೂಲೋಕಕ್ಕೆ
ಘಮ್ಮೆಂಬ ಕರಿಯ ಮಲ್ಲಿಗೆಯ
ನಿರ್ಮಿಸಿ ನಿಮ್ಮ ಕೀರ್ತಿಯ ಮಾಡೆ ಲೋಕದಿ
ನಿಮ್ಮಯ ಮಹಿಮೆ ಮೆರೆಯಲಿ ॥೭೫॥

ಇಟ್ಟ ವಿಭೂತಿಯ ಧರಿಸುಯೆಂಬುದ ಕೇಳಿ
ಖಟ್ವಾಂಗಧರ ನೊಸಲಲ್ಲಿಟ್ಟು
ಸೃಷ್ಟಗೀಶ್ವರನು ಕೊಂಡಾಡಿ ಕಳುಹಲು
ಕೊಟ್ಟು ಕಳುಹುವೆವೆಂದು ಪೋಗೆ ॥೭೬॥

ಕಮಲಶಿರವು ಕರಕಮಲದಿ ತಾಳಲು
ಕಮಲಶಿರವು ಬಾಯಿದೆರೆಯೆ
ಕಮಲಲೋಚನನ ಕಾಣುತ ಈ ಕ್ಷಣದಲ್ಲಿ
ಕಮಲಶಿರಕೆ ದಯವಾದ ॥೭೭॥

ಕಮಲಶೇಖರ ರೂಪ ಮಂಡೆಯೊಳಗೆ ಇಟ್ಟು
ಕಮಲಭಾಗ್ಯದ ಪದವಿಯನ
ಕಮಲನೆಂಬವನ ಕ[ಣ್ಣನ] ಪುತ್ರನುರುಹಿದ
ಕಮಲಶಿರಕೆ ದಯವಾಗೊ ॥೭೮॥

ಎಂದು ಶಾಂತಯ್ಯನು ನಿಂದು ಹಾ ಹಾಯೆಂದು
ಚಂದ್ರಾಯುಧವನು ತೆಕ್ಕೊಂಡು
ವಂದಿಸಿ ಶಿರವನರಿವೆನೆಂದು ಕೇಳಲು
ದುಂದುಭಿಗಳು ಮೊಳಗಿದವು ॥೭೯॥

ಕೊರಳಿಗೆ ಖಡ್ಗವನೊತ್ತಿ ಅರಿವುತಿರೆ
ಸುರಿದವು ಕರಿಯಮಲ್ಲಿಗೆಯು
ಸರಸರಗಳು ಸಾಲುಗೊಳಿಸಿ ಬೀಳಲು ಕಂಡು
ಹರಹರ ಜಯವೆಂದರಾಗ ॥೮೦॥

ಹರನ ಪುರದಲಿಂದ ಕರಿಯಮಲ್ಲಿಗೆ ಹೂವು
ಗುರುವು ರೇವಣ್ಣನಂಘ್ರಿಯೊಳು
ಶರಣ ಶಾಂತನ ಮೇಲೆ ಬೀಳಲು ಜನಮೆಚ್ಚಿ
ಸರವೂರುಯೆಂಬರಾ ಪುರವ ॥೮೧॥

ಇಂಡೆಯ ಶಾಂತಯ್ಯ ಕೊಂಡಾಡಿ ಬೇಡಲು
ಮಂಡಲವೆಲ್ಲವು ನಡುಗೆ
ಖಂಡೆಂದುಶೇಖರ ಜಯಜಯವೆಂದು
ಕೊಂಡಾಡಿ ಪ್ರಮಥರೊಗ್ಗಿನಲಿ ॥೮೨॥

ಕಂದ ನೀ ಬಾಯೆಂದು ಕರೆದು ವಿಭೂತಿಯ
ವೊಂದಿಸಿ ಸ್ಥಾನಸ್ಥಾನದಲಿ
ಬಂಧಿಸಿ ಕರ್ಣಾದಿ ಮಂತ್ರ ಬೋಧೆಯ ತುಂಬಿ
ಹಿಂದಣ ಭವ ಹಿಂಗಿತೆಂದ ॥೮೩॥

ಲಿಂಗವ ಧರಿಸಿ ಶಾಂತಯ್ಯಗೆ ಉಪದೇ
ಶಂಗಳ ಮಾಡಿ ಉತ್ಸವದಿ

ಮಂಗಳಮಹಿಮೆ ರೇವಣಸಿದ್ಧ ಪ್ರಮಥ ಗ
ಣಂಗಳು ಕೊಂಡಾಡಲಾಗಿ ॥೮೪॥

ಇಂದುಧರನು ವಿಭೂತಿಯನಿಟ್ಟು ಶಾಂತಗೆ
ಮುಂದಾಗೊ ಕಾರಣಾರ್ಥಿಗಳ
ಚೆಂದದೊಳೊ[ರೆ]ದ ಗಣಂಗಳ ಪವಾಡವು ನಿ
ಮ್ಮಿಂದ ಅಗಬೇಕೆಂದ ॥೮೫॥

ಒಕ್ಕಲಿಗನು ಆದಿಗೊಂಡನ ಕುಲಕೆಲ್ಲ
ಹೆಚ್ಚಳವನು ತಂದೆ ಕುರಿಯ
ಹೊಕ್ಕು ಗುರುವ ಕಂಡು ಲಿಂಗಾಂಗಿಯು ಆದೆ
ಚೊಕ್ಕಟ ಶರಣನೆಂದೆನಿಪೆ ॥೮೬॥

ಬಂಗ ಗಣಂಗಳ ಪಾದಕ್ಕೆ ದೇವಮ್ಮ
ವಂದಿಸೆ ಸುಖದೊಳಿರೆಂದು
ಲಿಂಗದೊಳೆರಕವಾಗಿರುಯೆಂದು ರೇವಣ್ಣ
ಇಂದು ಅಪ್ಪಣೆ ಕೊಟ್ಟನಾಗ ॥೮೭॥

ನಿಮ್ಮಯ ತಂದೆ ಪದ್ಮಣ್ಣ ರಕ್ಕಸಿಯನು
ಉಮ್ಮಳದಲಿ ಕೂಡಿಕೊಂಡ
ಕರ್ಮಹೀನನು ಆದ ಅವಳ ಮಕ್ಕಳಮಡಿ
ತಮ್ಮ ರಕ್ಷಿಸುಯೆಂದು ಬಹರು ॥೮೮॥

ಬಂದು ನಿನ್ನನು ಕಂಡು ಮುಕ್ತಿಪಡೆದು ತಾವು
ಮುಂದೆ ಉಣ್ಣೇಯ ಕಂಕಣದ
ಕಂದಗಳೆನಿಸಿ ಬಾಳುವರು ರಕ್ಕಸಿಯೊಡ
ಲಿಂದ ಜನಿಸಿದ ಕಾರಣದಿ ॥೮೯॥

ನಿನ್ನ ಸಂತತಿಯವರುಗಳೆಲ್ಲರು ಚೊಕ್ಕ
ಚಿನ್ನ ಹತ್ತಿಯ ಕಂಕಣದ
ಬಿನ್ನಾಣಕಾರರೆನಿಸಿ ಬಾಳುವರು ಚೊಕ್ಕ
ಚಿನ್ನಕ್ಕೆ ಸಮನಾಗಿ ಮಗನೆ ॥೯೦॥

ಎಂದು ಬುದ್ಧಿಯನು ಶಾಂತಯ್ಯಗೆ ಪೇಳುತ
ಚಂದ್ರಧರನು ಲಿಂಗದೊಳಗೆ
ಕುಂದದೆ ಬಯಲಾದ ಪ್ರಮಥರೆಲ್ಲರು ಉಘೇ
ಯೆನಲಲ್ಲಿಗೆ ಮೂರು ಸಂಧಿ ॥೯೧॥

ಅಂತು ಸಂಧಿ ೩ಕ್ಕಂ ಪದನು ೨೭೮ಕ್ಕಂ ಮಂಗಳಮಹಾ ಶ್ರೀ ಶ್ರೀ ಶ್ರೀ

ಸಂಧಿ : ನಾಲ್ಕು

ಅಂಬಿಕೆ ರಮಣ ಅನಾಥ ರಕ್ಷಕಪಾಲ
ನಂಬಿದವರ ಕಾಯ್ವ ದೇವ
ಕುಂಭಿನಿರಕ್ಷ ಕುಂಜರದೈತ್ಯಮರ್ದನ
ಶಂಭು ರೇವಣಸಿದ್ದ ಶರಣು ॥೧॥

ಇತ್ತ ಶಾಂತಯ್ಯನು ಗುರುವಿನ ಪಾದಕ್ಕೆ
ಭೃತ್ಯನಾಗಿಹ ಸುಖದಿಂದ
ಅತ್ತ ಕಲ್ಯಣದಿ ತಗರ ಪವಾಡವ
ಎತ್ತುವ ಕೃತಿಯ ಪೇಳುವೆನು ॥೨॥

ಪನ್ನಂಗಧರನ ಪೂಜೆಯ ಮಾಡಿ ಶಾಂತಯ್ಯ
ಉನ್ನತ ಹರುಷದೊಳಿರಲು
ಉನ್ನತ ಗುರುವು ರೇವಣ್ಣನೆ ಗತಿಯೆಂದು
ಬಿನ್ನೈಸಿ[ದ]ನು ಭಕ್ತಿಯೊಳಗೆ ॥೩॥

ಪೇಳುವರಿಗೆ ಜೀವ ದಣಿಯದೀ ಕೃತಿಯನು
ಕೇಳುವರಿಗೆ ಕರ್ಣಾಮೃತವು
ಭಾಳಲೋಚನ ಭಕ್ತಿ ಮಹಿಮೆಯ ಕೇಳ್ದಗೆ
ಸಾಯುಜ್ಯ ಮುಕ್ತಿಯಾಗುವುದು ॥೪॥

ಉನ್ನತ ಕಲ್ಯಾಣದೊಳಗೊಬ್ಬ ಶರಣನು
ಕಿನ್ನರಯ್ಯನು ಇರುತಿರಲು
ಹೊನ್ನು ಹಣವನಿತ್ತು ಬಿಜ್ಜಳ ಮಡದಿಗೆ
ಚಿನ್ನವ ಮಾಡಿಕೊಡೆನಲು ॥೫॥

ಪಂಚಾಳ ಕುಲರತ್ನ ಕಿನ್ನರಿ ಬ್ರಹ್ಮಯ್ಯ
ವಂಚನೆಯಿಲ್ಲದೆ ಮಾಡುತಿರಲು
ಚಂಚಲಾಕ್ಷಿಯು ಬಿಜ್ಜಳನ ಮಡದಿಗಾಗ
ತೂಗದೆ ಕೊಟ್ಟ ಬಂಗಾರವನು ॥೬॥

ದೊರೆ ಬಿಜ್ಜಳನು ಸತಿಯ ಬಂಗಾರವ
ತರಿಸಿ ನೋಡಿದನು ಚಿನ್ನವನು
ಒರಸಿ ನೋಡದೆ ತೂಗದೆ ಕೊಟ್ಟು ಕಳ್ಳನ
ಕರಸೆಂದು ಅಪ್ಪಣೆ ಕೊಟ್ಟ ॥೭॥

ಹರಿದಾಗಲೋಡಿ ಬಂದಾಗ ಕಿನ್ನರಿ ಬ್ರಹ್ಮೇ
ಶ್ವರ [ಕರೆದ]ಬಾರೊ ಬಿಜ್ಜಳನು
ಭರದಿಂದ ಬಂದಾಯ ಬ್ರಹ್ಮಯ್ಯ ನಿಲ್ಲಲು
ಒರೆದು ತೂಗೆಂದ ಚಿನ್ನವನು ॥೮॥

ಬಣ್ಣ ತೂಕವು ಸರಿಯಾಗಿ ಇರಲಾಗಿ
ನಿನ್ನ ಗುಣವ ಕಂಡೆನೆಂದು
ಎನ್ನ ಕಂಡರೆ ಕೈಯ ಮುಗಿವುದಿಲ್ಲೇಕೆಂ[ದ]
ಕಿನ್ನರಯ್ಯನು ಕೋಪಿಸಿದ ॥೯॥

ಕುಲದ ಕಾಯಕದಿಂದ ಊಣಾಯ ಬರುತಿದೆ
ಛಲದಿ ಕಾಯಕ ಮಾಳ್ಪೆನೆನುತ
ಕಲಿತ ವಿದ್ಯವನು ಕೈಯೊಳಗಾಂತು ಬ್ರಹ್ಮಯ್ಯ
ಬರುತ ಕಿನ್ನರಿ ಕೈಯೊಳ್ಹಿಡಿದು ॥೧೦॥

ಬಂದು ಬ್ರಹ್ಮಯ್ಯನು ತ್ರಿಪುರಾಂತಕ ಲಿಂಗಕ್ಕೆ
ವಂದಿಸಿ ಸಾಷ್ಟಾಂಗವೆರಗಿ
ತಂದೆ ಎನ್ನನು ಕಾಯೊ ನಿನಗೆ ಎ[ತ್ತಿದ] ಕೈಯ
ಎತ್ತುವನಲ್ಲ ಮತ್ತೊಬ್ಬರಿಗೆ ॥೧೧॥

ತ್ರಾಹಿ ಭುವನರಕ್ಷ ತ್ರಾಹಿ ಶಂಕರಲಿಂಗ
ತ್ರಾಹಿ ಉದ್ಭವಬೀಜ ದಹನ

ತ್ರಾಹಿ ತ್ರಿಯಂಬಕ ತ್ರಾಹಿ ಮಾರಾಂತಕ
ತ್ರಾಹಿ ಎನ್ನನು ರಕ್ಷಿಸೆಂದ ॥೧೨॥

ರಕ್ಷಿಸೊ ಎನ್ನನು ರಜತಾದ್ರಿ ನಿಲಯನೆ
ರಕ್ಷಿಸೆನ್ನನು ತ್ರಿಯಂಬಕನೆ
ರಕ್ಷಿಸೆನ್ನನು ಪರಮಾತ್ಮ ಪಾವನಮೂರ್ತಿ
ರಕ್ಷಿಸೆಂದೆರಗಿದನಾಗ ॥೧೩॥

ಕಿನ್ನರಿ ಬ್ರಹ್ಮಯ್ಯ ಕೊಂಡಾಡೆ ಶಿವಮೆಚ್ಚಿ
ಹನ್ನೊಂದು ಹಣ ಹಾಗವನ್ನು
ನಿರ್ಣಯವಿತ್ತನು ದಿನದೊಳೀವೆನುಯೆಂದು
ಮನ್ನಿಸಿದನು ಮಮತೆಯಲಿ ॥೧೪॥

ನಿತ್ಯ ಪೂಜೆಯ ಮಾಡಿ ಮೆಚ್ಚಿಸಿ ಶಿವನಿಂದ
ವೆಚ್ಚಕ್ಕೆ ಹನ್ನೊಂದು ಹಣ ಹಾಗ
ನೆಚ್ಚಿದಂದದಿ ತಂದು ಜಂಗಮಾರ್ಚನೆಗೈದು
ಉತ್ಸಾಹದಿಂದಿರುತಿರಲು ॥೧೫॥

ಮತ್ತೋರ್ವ ವಿಟಗಾರ ಬೊಪ್ಪಯ್ಯನೆಂಬವ
ಅರ್ತಿಯೊಳು ಲೇಸಿ ಚೆನ್ನೆಯೊಳು
ಮಿತ್ರತ್ವವಾಗಿರೆ ನುಡಿದಳವಳು ಬೇಗ
ಇತ್ತು ಮನ್ನಿಸೊ ಬಯಕೆಯನು ॥೧೬॥

ಹಬ್ಬವ ಮಾಡಿಸೊ ಕುರಿಯೊಂದ ತಂದಿತ್ತು
ಉಬ್ಬಿ ನಿನ್ನೊಳು ಸುಖಲೀಲೆ
ನಿಬ್ಬರದಲಿ ಹೋಗು ಎನಲಾಗ ಬೊಪ್ಪಯ್ಯ
ಒಬ್ಬನೆಯ್ತಂದ ಸಂತಸದಿ ॥೧೭॥

ಆ ಸಮಯದಿ ವಿಟಗಾರ ಬೊಪ್ಪಯ್ಯಗೆ
ಲೇಸ ಚೆನ್ನೆಯು ಅಂದ ಮಾತು
ಆಸೆಯಾಯಿತು ಕಾಣೊ ಲೇಸೀಗ ನನಗೊಂದು
ಲೇಸಿನ ನುಡಿಯ ನುಡಿದಾಳು ॥೧೮॥

ಕಂಡನು ಕುರಿಯ ಹಿಂಡಿನೊಳೊರ್ವ ಮೇಯಿಸೋನ
ಕೊಂಡು ಕ್ರಯವನಿತ್ತು ಬೇಗ
ಚಂಡವಿಕ್ರಮ ಹೆಗಲೊಳಗಾಂತು ತಂದನು
ದ್ದಂಡ ಬೊಪ್ಪಯ್ಯ ಬೇಗದೊಳು ॥೧೯॥

ಬರುತ ಬೊಪ್ಪಯ್ಯನು ಬಯಲಲ್ಲಿ ಮೇಷನ
ಭರದಿಂದ ಇಳುಹಿ ಕುಳ್ಳಿರಲು
ಹರ ತ್ರಿಪುರಾಂತಕ ಲಿಂಗನ ಗುಡಿ ಹೊಕ್ಕು
ಗುರುವೆ ರಕ್ಷಿಸು ರಕ್ಷಿಸೆಂದು ॥೨೦॥

ಎಂದು ಆ ಕ್ಷಣದೊಳು ಬಂದು ಬೊಪ್ಪಯ್ಯನು
ಅಂದು ಮೇಷನ ತರುತಿರಲು
ಕಂದ ಮುರಿಯಲೊದ್ದು ಕಡೆಗೆ ಲಂಘಿಸುತಿರೆ
ಕಂದರ್ಪ ಪಾದಕ್ಕೆರಗಿತು ॥೨೧॥

ತಲೆಯ ನೆಲಕೆ ಊರಿ ತಗರು ಕೊಂಡಾಡುತ
ಎಲೆ ದೇವ ಎನ್ನ ಹರಣವನು
ಒಲಿದು ರಕ್ಷಿಸಿ ಕಾಯಬೇಕೆಂದು ನುಡುಗೇಳಿ
ನೋಡಿ ಬ್ರಹ್ಮನು ನಗುತಿರಲು ॥೨೨॥

ಎರಗಿದ ಮೇಷನು ಏನೆಂದು ನುಡಿಯಿತು
ಕರಿಗೊರಳನೆ ನಿಮ್ಮಂತ್ರಿಯನು
ಕರುಣರಸವನಿತ್ತು ಕಡೆಗಾಣಿಸೆನ್ನಯ್ಯ
ಹರಣವನುಳುಹೋ ದಮ್ಮಯ್ಯ ॥೨೩॥

ಪ್ರಾಣವನುಳುಹೊ ಎನ್ನಯ್ಯನೆನುತಲಿ ಮೇಷ
ಕ್ಷೋಣಿಗೆ ಮೈಯನಿಕ್ಕಿರಲು
ಕಾಣಬಾರದು ಕರುಣರಸವ ಎನುತಲಿ
ಜಾಣ ಬ್ರಹ್ಮನು ಕಂಡು ನುಡಿದ ॥೨೪॥

ಪರಿಚಾರಕನಂತೆ ನಡೆದು ಬಂದನು ಬೊಪ್ಪ
ಹರಣವುಳಿಯಿತು ಇಂದಿನಲಿ

ಬಿರಿದಿನ ಮೇಷನ ಭರದಿಂದ ಹಿಡಿಯಲು
ಶರಣ ಬ್ರಹ್ಮನು ಕಂಡು ನುಡಿದ ॥೨೫॥

ಏನು ಕಾರಣಕೆ ತಂದಯ್ಯ ಇದನುಯೆಂದು
ಭಾನುಜೂಟನ ಭಕ್ತ ನುಡಿದ
ಮಾನಿನಿಯಳ ಮನದಿಚ್ಚೆಗೆ ನಾ ತಂದೆ ದೇ
ವನ ಪುರಕೆಯ್ತಂದು ॥೨೬॥

ಹೊಕ್ಕಿದ್ದ ಕಾಯಬೇಕಲ್ಲದೆ ಕೊಂದರೆ
ಎತ್ತಲ ನರಕವು ಬಿಡದು
ಚಿಕ್ಕಮಗನು ನೀನು ಅರಿಯೆಯೆಂದೆನುತಲಿ
ಮುಕ್ಕಣ್ಣ ಭಕ್ತ ಪೇಳಿದನು ॥೨೭॥

ಏನು ಕಾರಣಕಿದು ಬಂದುದಿಲ್ಲಿಗೆಯೆಂದು
ಜ್ಞಾನಿ ಬ್ರಹ್ಮಯ್ಯ ಕೇಳಿದನು
ತಾನು ಬೊಪ್ಪಯ್ಯ ತಗರ ಪಿಡಿದೆಳೆಯಲು
ಮೌನದಿ ಮಿಸುಗಾಡದಿರಲು ॥೨೮॥

ಮಂಡಿಯ ಹೂಡಿ ತಗರ ಎಳೆದಿರಲಾಗಿ
ಕಂಡು ಬ್ರಹ್ಮನು ಕೇಳಿದಾಗ
ಕೊಂಡು ತಂದೆಯೊ ಇದನಾರು ಕೊಟ್ಟರೊಯೆಂದು
ಖಂಡಣೆಯೊಳಗ್ದೇಳು ಎನಲು ॥೨೯॥

ಆಸೆಯಿಂದಲಿ ಮೇಷ ಗುಡಿಯನು ಹೊಕ್ಕಿತು
ಆಸೆಯಿನ್ನ್ಯಾತಕೆ ನಿನಗೆ
ಏಸು ಹಣವಿಗೆ ಇದ ತಂದೆ ನೀ ಹೇಳೆಂದು
ಈಶ ಬ್ರಹ್ಮಯ್ಯ ಕೇಳಿದನು ॥೩೦॥

ಚೆನ್ನೆಯನೊಲಿಸೊರೆ ಹೊನ್ನಿಗೆ ನಾ ತಂದೆ
ಪನ್ನಂಗಧರ ಬಲ್ಲಯೆನುತ
ಹೊನ್ನಿಗೆ ಹೊನ್ನನು ಎರಡೊಂದ ಕೊಟ್ಟರೆ
ಪನ್ನಂಗಧರಗೆ ಕೊಡುವೆನು ॥೩೧॥

ನುಡಿದ ಮಾತನು ಕೇಳಿ ಹಿಡಿ ಹೊನ್ನನೆಂದನು
ಕಡುಗಲಿ ವೀರಬ್ರಹ್ಮಯ್ಯ
ಮೃಡ ನೀನು ಸಾಕ್ಷಿಯಾಗಿರು ಎನುತಲಿ
ಹೊಡೆದನು ಲಿಂಗಮುದ್ರೆಯನು ॥೩೨॥

ಹಣವಿಗೆ ಹಣವಿತ್ತು ಮೇಷನ ಬಿಡಿಸಿದೆ
ತ್ರಿಣಯನೆ ಸಾಕ್ಷಿ ಹೋಗೆಂದ
ಬಣಗನು ಮರಳಿ ಬಂದರೆ ನುಡಿದುಳುಹೆಂದು
ಗುಣನಿಧಿ ಬ್ರಹ್ಮಯ್ಯ ನುಡಿದ ॥೩೩॥

ನುಡಿದ ವಾಕ್ಯವ ಕೇಳಿ ಹಿಡಿ ಹೊನ್ನನೆಂದನು
ಕಡುಗಲಿ ವೀರಬ್ರಹ್ಮಯ್ಯ
ಮೃಡ ನೀನು ಸಾಕ್ಷಿಯಾಗಿರಬೇಕುಯೆನುತಲಿ
ಹೊಡೆದನು ಲಿಂಗಮುದ್ರೆಯ ॥೩೪॥

ಇನ್ನು ಬಾರನು ಎನ್ನ ಇನಿಯನೆಂದೆನುತಲಿ
ಚೆನ್ನರಸಿಯು ನೋಡುತಿರಲು
ಹೊನ್ನಿಗೆ ಹೊನ್ನನು ಎರಡ್ಹೊನ್ನ ತೆಕ್ಕೊಂಡು
ಚೆನ್ನೆಯ ಮನಿಗೆ ತಾ ಬಂದ ॥೩೫॥

ಕಟ್ಟಿದ ಹೊನ್ನನು ಬಿಚ್ಚಿಕೊಡುವುದ ಕಂಡು
ಹಟ್ಟಿಯೊಳು ನಿಂತಿ ನೋಡಿದಳು
ಸೃಷ್ಟಿಗೀಶ್ವರನ ಕರುಣವುಳ್ಳ ಬ್ರಹ್ಮಯ್ಯ

ಕೊಟ್ಟನು ಹೊನ್ನಿಗ್ಹೊನ್ನುಗಳ ॥೩೬॥
ಇತ್ತ ಬೊಪ್ಪಯ್ಯನು ಹೊನ್ನುಗಳೆರಡನು
ಮತ್ತೆ ಚೆನ್ನೆಗೆ ಕೊಡುತಿರಲು
ಎತ್ತಣ ಹೊನ್ನಿದು ಮೇಷನು ಎಲ್ಲೆಂದು
ಒತ್ತಿ ಗರ್ಜಿಸುತ ಕೇಳಿದಳು ॥೩೭॥

ನೀ ಕೊಟ್ಟ ಹೊನ್ನಿಗೆ ಮೇಷನ ತರುತಿರ್ದೆ
ಲೋಕದೊಡೆಯ ತ್ರಿಯಂಬಕನ

ನೀ ಕಾಯಿ ಎನ್ನ ಎಂದೆನುತ ಗುಡಿಯ ಪೊಕ್ಕು
ತಾ ಕೈಯ ಮುಗಿಯಿತೇನೆಂಬೆ ॥೩೮॥

ಕಿನ್ನರಿ ಬ್ರಹ್ಮಯ್ಯ ಕಂಡಾಗ ಮೇಷನ
ಹೊನ್ನಿಗೆ ಹೊನ್ನ ತಾಯೆಂದೆ
ನನ್ನ ಕೈಯಲಿ ಹಾಕಿ ಮೇಷನ ತೆಕ್ಕೊಂಡ
ನಿನ್ನ ಹಣವು ಬಂದಿತೆಂದ ॥೩೯॥

ಎಂದ ಮಾತನು ಕೇಳಿ ಚೆನ್ನಾಜಿ ಕೋಪದಿ
ಒಂದು ಹೊನ್ನಿಗೆ ನೂರು ಹೊನ್ನ
ತಂದರೊಲ್ಲೆನು ಎನ್ನ ತಗರ ತಾರೆಂದು
ಒಂದು ವಾಕ್ಯವನು ಪೇಳೆ ॥೪೦॥

ಉಕ್ಕ ಉರುಗ ಬುಡ್ಡ ಬೆಳುಕಾಯ ಹೂಬಾಲ
ಕೊಟ್ಟನು ಮಲಿದೇವಗೌಡ
ಕೆಟ್ಟ ಮೋರೆಯ ಟಗರು ಅಟ್ಯಾಡಿ ಹಾಯಲು
ಕೊಟ್ಟೆನು ಕಿನ್ನರಯ್ಯನಿಗೆ ॥೪೧॥

ಟಗರನು ತರಬೇಕು ಅಲ್ಲದೆ ನಮಗಿನ್ನು
ಮಿಗೆ ಹೊನ್ನಿನಾಸೆಗಳುಂಟೆ
ಟಗರ ತಂದಲ್ಲದೆ ನಿಳಯುವ ಪೊಗದಿರು
ಹೊರಡೊ ಹೊರಡೊ ಸೂಳೆ ಮಗನೆ ॥೪೨॥

ಎಂದ ಮಾತನು ಕೇಳಿ ಬಂದು ಬೊಪ್ಪಯ್ಯನು
ವಂದನೆಗೈದ ಬ್ರಹ್ಮನಿಗೆ
ಚಂದ್ರಧರನ ಸುತನಂಘ್ರಿಗೆ ಬಂದು ಬೇಡಲು
ಹೊಂದಲೀಸಳು ಮಂದಿರವನು ॥೪೩॥

ಹೇಳಿದ ಬೆಲೆ ಹೊನ್ನ ಕೊಟ್ಟು ಮೇಷನ ಕೊಂಡೆ
ಭಾಳಾಕ್ಷ ಹರ ಸಾಕ್ಷಿಯಾಗಿ
ಕೇಳ್ದರುಂಟೇನೊ ಮರಳಿ ಬಂದೆನುತಲಿ
ಬೇಳ್ದೋದ ಮಾತನಾಡಿದನು ॥೪೪॥

ನುಡಿದ ಮಾತನು ಕೇಳಿ ಹಿಡಿ ಹೊನ್ನನೆಂದನು
ಕಡುನೊಂದು ತನ್ನ ಮನದೊಳು
ಮಡದಿಯ ಕೂಡೆ ಹೇಳಿದನಾಗ ಬೊಪ್ಪಯ್ಯ
ಕಡು ತವಕದಲಿ ಇಂತೆಂದು ॥೪೫॥

ಎಂದ ಮಾತನು ಕೇಳಿ ನೊಂದುಕೊಳ್ಳುತ ಚೆನ್ನೆ
ಬಂದ ಬೊಪ್ಪನ ಬೇಗ ಕರೆದು
ಕೊಂದು ಅವರ ಕುರಿ ತರಹೋಗುಯೆನುತಲಿ
ಇಂದುವದನೆ ಪೇಳ್ದಳಾಗ ॥೪೬॥

ಒಬ್ಬನ ಕಳುಹಲು ಬೇಡವು ಎನ್ನೊಳು
ಇಬ್ಬರಾದರೆ ಉತ್ತಮವು
ನಿಬ್ಬರದಿಂದಲಿ ಹೋದ ಗಳಿಗೆಯೊಳು
ಕೊಬ್ಬ ಮುರಿದು ತರುತಿಹೆವು ॥೪೭॥

ತಗರಿನಿಂದಲಿ ತಮ್ಮ ತಲೆ ಹೋದರ್ಹೋಗಲಿ
ಮೊಗ ನೋಡಿದಳು ತಮ್ಮಂದಿರನು
ಬಗೆದು ಬ್ರಹ್ಮಯ್ಯನ ಕೊಂದು ತಗರ ತನ್ನಿ
ಗಳಿಗೆಯೊಳಗೆ ಬಾರೋ ತಮ್ಮ ॥೪೮॥

ಕರೆದಳು ಮೊನೆಗಾರ ಮಲ್ಲನೆಂದೆಂಬೋನ
ಕರೆದಳು ಗಿಡ್ಡ ಚೆನ್ನಯ್ಯನ
ಕರೆದಳು ಚಿಕ್ಕ ತಮ್ಮನ ನೀಲನಾಯ್ಕನ
ಭರದಿಂದ ಹೊರಟರಾಕ್ಷಣದಿ ॥೪೯॥

ನೆರೆಹೊರೆಯೊಳಗಿರ್ದ ಲೇಸಿಯರೆಲ್ಲರು
ಹುರುಡಿನಿಂದಲಿ ತಮ್ಮ ವಿ[ಟ]ರ
ಕರೆದು ಬೇಗದಿ ಹೋಗಿ ತಗರನು ಕೊಡದಿರೆ
ತರಿದು ತರಿದು ತನ್ನಿ ತಗರ ॥೫೦॥

ಎಂಟ್ಹತ್ತು ಮಂದಿ ಲೇಸಿಯರ ಮಿಂಡರುಯೆಲ್ಲ
ತುಂಟರು ಬೊಪ್ಪನ ಕೂಡೆ

ಕೊಟ್ಟರೆ ಕೊಡಲು ಕೊಡದೆಯಿರೆ ಬ್ರಹ್ಮನ
ಕುಟ್ಟುವೆ ಅವನ ತಲೆಯನು ॥೫೧॥

ತಂಗೆರ ಕೈಯೊಳು ಕಳುಹಿಸಿ ಕೊಳುತಲಿ
ಲಿಂಗನ ಗುಡಿಗಾಗಿ ಬಂದು
ಹಿಂಗದೆ ಹಿಂಗಾಲ ಹಿಡೆದೆಳೆಯಲು ಕಂಡು
ಸಂಗಯ್ಯನ ಶರಣ ತಾ ನುಡಿದ ॥೫೨॥

ಬೊಪ್ಪಯ್ಯ ಬಂದು ಕೇಳಿದನು ಬ್ರಹ್ಮಯ್ಯಗೆ
ಒಪ್ಪಲಿಲ್ಲವು ನಿನ್ನೀ ಹಣವ
ತಪ್ಪದೆ ನಾ ತಂದ ತಗರನೆ ಬಿಡುಯೀಗ
ತಪ್ಪು ಕಾಯಲಿಬೇಕು ದೇವ ॥೫೩॥

ಬಂದದ್ದು ಬರಲಿನ್ನು ಹಿಂದಾಗುವನಲ್ಲ
ಚಂದ್ರಧರನೆ ಸಾಕ್ಷಿಯಿದಕೆ
ಒಂದು ಹೊನ್ನಿಗೆ ಮತ್ತೊಂದು ಹೊನ್ನನು ಕೊಟ್ಟು
ತಂದರೊಪ್ಪುವರೆ ಯಾರಾದರೆಯು ॥೫೪॥

ಅವನೊಳು ಮಾತೇನು ತಗರ ತಾಯೆನುತಲಿ
ಕವಿದು ತಗರ ಕಾಲಹಿಡಿದು ಭ
ಯವುಯಿಲ್ಲದೆ ಹಿಡಿದೆಳೆಯಲು ಬ್ರಹ್ಮಯ್ಯ
ಶಿವಶಿವಯೆನುತ ಕೋಪಿಸಿದ ॥೫೫॥

ದೊಂಬಿ ಮಾಳ್ಪುದ ಕಂಡು ಕೊಡಲಿಯ ತೆಕ್ಕೊಂಡು
ಶಂಭುಭಕ್ತನು ಸಾರಿ ಆಗ
ಒಂದಾಗಿ ಕೈತಪ್ಪು ಬಾಯ್ತಪ್ಪು ಮನ್ನಿಸಿ
ಎಂಬಷ್ಟರೊಳು ಹೊಕ್ಕು ಕಡಿಯೆ ॥೫೬॥

ಕೊಡು ಮ್ಮ ತಗರನು ಬಿಡುವುದಿಲ್ಲೆನುತಲಿ
ನುಡಿದರು ಖಂಡಿತದ ಮಾತ
ನುಡಿದ ಮಾತನು ಕೇಳಿ ಕೊಡಲಿಯ ಪಿಡಿಕೊಂಡು
ನಡೆದಾನು ಕಿನ್ನರಿ ಬ್ರಹ್ಮ ॥೫೭॥

ಆಳ್ಕೆಯ ಹೊಯ್ಕೊಂಡು ಓಡಿ ಬಂದಾಕ್ಷಣ
ಮೇಳದ ಚೆನ್ನೆಯ ಕೂಡೆ
ಪೇಳಿದ ಬೊಪ್ಪನು ನಿನ್ನವರ ತಲೆಗಳು
ಕೋಳು ಹೋದವುಯೆಂದು ಪೇಳೆ ॥೫೮॥

ಅಣ್ಣಗಳಳಿದ ವಾರ್ತೆಯ ಕೇಳಿ ನೊಂದಳು
ಕಣ್ಣ ನೀರುಗಳ ಸುರಿಯುತಲಿ
ಮಣ್ಣ ಹೊಯ್ದಲ್ಲೊ ಭಾಯೊಳಗೆ ಶಿವನೆಯೆಂದು
ಕ್ಷೋಣಿಯಪತಿಗೆ ಪೇಳುವೆನು ॥೫೯॥

ಪಟ್ಟಣಕಾರು ದಿಕ್ಕಿಲ್ಲವೆನುತ ಚೆನ್ನಿ
ಕುಟ್ಟಿಕೊಳುತ ಪೇಟೆಯೊಳಗೆ
ನೆಟ್ಟನೆ ಬಂದಡ್ಡಬಿದ್ದು ಹೇಳಿದಳಾಗ
ಸೃಷ್ಟಿಯನಾಳ್ವ ಬಿಜ್ಜಳಗೆ ॥೬೦॥

ಕೇಳಯ್ಯ ಬಿಜ್ಜಳ ಹಾಳಾತ್ತು ಪಟ್ಟಣ
ಹೇಳಿಕೇಳುವರಾರುಯಿಲ್ಲ
ಮೇಳದ ಚೆನ್ನಿ ನಾ ಕೋಳ್ಕೊಟ್ಟೆ ತಮ್ಮನಾ
ಆಳುವ ದೊರೆ ಸತ್ತ ಕಾಣೊ ॥೬೧॥

ಯಾರಮ್ಮ ನಿನ್ನ ತಮ್ಮನ ಹೊಡದವರೀಗ
ತೋರಿಸೀಕ್ಷಣ ಹೊಡೆಸುವೆನು
ಬಳಲ ಬ್ಯಾಡವು ನೀನು ತೊಡೆವೆನವನ ವಂಶ
ಕನಲಿ ಕಂಪಿಸಬ್ಯಾಡ ಚೆನ್ನಿ ॥೬೨॥

ಅರಿರಾಯರೆದೆಯದಲ್ಲಣ ಚಲದಂಕನೆ
ಪರಬಲ ಮಸ್ತಕಶೂಲ
ಕುರಿಯನು ತರುತಿರೆ ಲೂಟಿಸಿ ಹೊಡೆದಾನು
ಪುರದ ಗುಡಿಯೊಳಿರ್ಪನಂತೆ ॥೬೩॥

ಮೊರೆಯ ಕೇಳುತ ರಾಯ ಕರೆಸಿದ ಬಲವನು
ತುರಿತದಿ ಹೋಗಿ ಬ್ರಹ್ಮಯ್ಯನ

ಕರೆಸಿದನೀಕ್ಷಣ ಹೇಳಿದ ಚರರಿಗೆ
ತ್ವರಿತದಿ ಹೇಳಿದಾಕ್ಷಣದಿ ॥೬೪॥

ಗಿರಿತಮ್ಮನಾಯ್ಕ ಶಂಕರನಾಯ್ದ ಬಾಲ್ನಾಯ್ಕ
ವೀರ್ನಾಯ್ಕ ಕರಿಯಣ್ಣನಾಯ್ದ
ಬಿರಿದಿನ ಮೇದಾರ ಬೊಮ್ಮಣ್ಣನಾಯ್ಕನು
ತರತರದೊಳು ನಿಂತರಾಗ ॥೬೫॥

ಯಲ್ಲರಾವುತ ಮಲ್ಲರಾವುತ ಬಿರಿದಿನ
ಝುಲ್ಲಿಯ ಸಿದ್ಧರಾವುತರು
ಕಲ್ಲರಾವುತ ಖಾನಖಾನರೆಲ್ಲು
ಬಿಲ್ಲರಾವುತರೈದಿದರು ॥೬೬॥

ಊರೊಳು ಬಡವಬಗ್ಗರು ಇರಬಾರದೆಂ
ದೋರುಂಟೆ ಬೆಳಗು ಬೆಳಗಿಗೆ
ಮಾರಹರನ ಗಣಂಗಳುಯೆಂದು ಬರಿ ಸುಳ್ಳು
ಊರೊಳು ಮುಂಡನಾಡುವರು ॥೬೭॥

ಆವನಾಗಲಿ ಮಾತಿಗೆ ಮಾತನಾಡದೆ
ಪ್ರಾಣಗಳನು ಕೊಂದೊರುಂಟೆ
ದೇವನಾಗಲಿ ತಲೆ ಹೊಡದು ತಾಹೆವುಯೆಂದು
ಕುದುರೆ ರಾವುತರೆಲ್ಲ ನುಡಿಯೆ ॥೬೮॥

ನಡೆಯಿತು ಆನೆಕುದುರೆ ಪರಿವಾರವು
ಮೃಡನಿರ್ಪ ದೇವಾಲಯದೆಡೆಗೆ
ಹಿಡಿಯೊಳಗೆ ಹಿಡಿದೆವು ಅವನಾಯೆಂದು
ಕಡುಗಲಿ ಬಂಟರೈದಿದರು ॥೬೯॥

ಬರುವ ದಂಡನು ಕಂಡ ಶರಣ ಬ್ರಹ್ಮಯ್ಯನು
ಪುರಹರ ಗತಿ ನನಗೆನುತ
ಚರಣಕ್ಕೆ ಪೊಡಮಟ್ಟು ಗುರುಯೆನ್ನ ಖಡ್ಗಕ್ಕೆ
ಕರುಣವ ಪಾಲಿಸೊ ಎಂದ ॥೭೦॥

ತ್ರಾಹಿ ಮಾರಾಂತಕ ತ್ರಾಹಿ ತ್ರಿಪುರಾಂತಕ
ತ್ರಾಹಿ ಮೂರ್ಲೋಕ ವಂದಿತನೆ
ತ್ರಾಹಿ ಶರಣಾಗತ ವಜ್ರಪಂಜರ ಶಿವ
ತ್ರಾಹಿ ಪರಾಕು ನೋಡೆಂದ ||೭೧||

ಘುಡಿಘುಡಿಸುತ ರುದ್ರ ಕಿಡಿಗಣ್ಣ ತೆರೆಯುತ
ಹಿಡಿಹಿಡಿ ಬೆಸನಯೆಂದೆನುತ
ಪೊಡವಿಪತಿಯ ದಂಡನೆಲ್ಲ ಭೇದಿಸುಯೆಂದು
ಮೃಡನಿತ್ತ ವಜ್ರಖಂಡೆಯವ ||೭೨||

ಮೃಡನಿಗೊಂದನೆ ಮಾಡಿ ಕಿನ್ನರಿ ಬ್ರಹ್ಮನು
ಪಿಡಿದನಾಕ್ಷಣ ಚಂದ್ರಾಯುಧವ
ಖಂಡೇಂದು ಶಂಕರ ಜಯಜಯಯೆನುತಲಿ
ದಂಡಿಗೆ ಎದುರಾಗಿ ನಡೆದ ||೭೩||

ಮೃಡನಿತ್ತ ಖಂಡೆಯವನು ಕಿತ್ತು ಬ್ರಹ್ಮಯ್ಯ
ನಡೆದ ದಂಡಿಗೆ ಎದುರಾಗಿ
ಕಡಿಯಿರೊ ಬಿಡದಿರೊ ಸಿಕ್ಕಿದನಿವನೆಂದು
ನಡೆದರು ಮುಂಚೂಣಿಯವರು ||೭೪||

ಅಡಿಯಿಟ್ಟು ಬರಲತ್ತ ಕಣ್ಣಿಟ್ಟು ಪಡೆಯೆಲ್ಲ
ಕಡಿದಾಡಿದರು ತಮ್ಮೊಳಗೆ
ಕಡುಗಲಿಯವರು ತಮ್ಮೊಡೆಯನೆಂದರಿಯದೆ
ಕಡಿದಾಡಿದರು ಅವರಾಗ ||೭೫||

ಈಟಿ ವಂಕುಡಿ ಖಡ್ಗ ಪಿಂಡಿವಾಳವು ಸಹ
ಘಟ್ಟಿವಾಳರು ಮುಂದುವರಿಯೆ
ಕುಟ್ಟಿದ ಕದಳಿಯ ವನವನ್ನು ಹೊಕ್ಕಂತೆ
ದಿಟ್ಟ ಕಿನ್ನರಿ ಬ್ರಹ್ಮನಾಗ ||೭೬||

ಎಡದಳಿರುವ ಕಾಲಾಳ ನುಗ್ಗೆಬ್ಬಿಸಿ
ಹೊಡದ ರಾವುತರ ಖಂಡೆಯವ

ಕಡಿದು ಸವರಿದ ಮದಗಜ ಹಿಂಡನು
ಮೃಡನು ನಾಟ್ಯವನಾಡಿದಂತೆ ॥೭೭॥

ಒಡೆಯ ಬಂಟನ ತಾವು ಅರಿಯದೆ ತಮ್ಮೊಳು
ಕಡಿದಾಡಿ ಕೆಡೆದರೇನೆಂಬೆ
ಪಡೆ ಮುರಿದೋಡಿ ಬಾಯ್‌ಬಿಡುತ ತಮ್ಮೊಡೆಯಗೆ
ನಡುಗುತ ಪೇಳ್ದರಾಕ್ಷಣದಿ ॥೭೮॥

ಕೊರಳು ಹರಿದು ಮುಂಡ ಉರುಳಿತು ಪರಿವಾರ
ಹೊರಳುತ ಹಲ್ಲಗಿರಿಯುತಲಿ
ಕರುಳ ಕತ್ತರಿಸಿ ಕೈಕಾಲ ಬೆರಳ್ಗಳ ಕಡಿದು
ಉರುಳಿ ಬಿದ್ದವು ರಣದೊಳಗೆ ॥೭೯॥

ಊರಗಲಕೆ ಹೆಣ ರಣಮಯವಾಯಿತು
ಮಾರಹರನ ಭಕ್ತ ಬಂದು
ಸೇರಿದ ತ್ರಿಪುರಾಂತಕ ಲಿಂಗ ಗುಡಿಗಾಗ
ಹೋದನುಯೆಂದು ಪೇಳಿದರು ॥೮೦॥

ಒಡೆಯ ಕೇಳೆಂದು ಚೋದ್ಯವು ನಮ್ಮ ಕಣ್ಣಿಗೆ
ಕಡುಗಲಿಗಳ ಕೋಟಿಗೊಂದು
ಕಡಿದು ಹೊಡೆದ ಹಾಂಗೆ ಕಾಣ್ಬುದು ರಾಯನ
ಎಡೆಯೊಳಿರ್ದವರು ಪೇಳಿದರು ॥೮೧॥

ಎಕ್ಕಟಿಗರು ಕಾದಿ ಹೊಡೆದಾಡಿ ಮಡಿದಾರು
ಮುಕ್ಕಣ್ಣ ನೋಡಿ ನಗುತಲಿ
ಮಿಕ್ಕಿನ ಬಂಟರೆಲ್ಲರು ಬಂದು ರಾಯನ
ಇಕ್ಕೆಲದೊಳಗೆ ಹೇಳಿದರು ॥೮೨॥

ಮಿಕ್ಕವರು ಎಲ್ಲಾ ಕೆಟ್ಟರು ಛಲದಂಕ
ವಿಕ್ರಮ ಕೇಳು ಬಿನ್ನಪವ
ವ್ಯರ್ಥವಾಯಿತು ಕೊಟ್ಟ ಸಂಬಳ ರಾಯನೆ
ಸತ್ತು ಹೋದರು ಎಲ್ಲ ಜನರು ॥೮೩॥

ಆನೆ ಕುದುರೆ ಸೇನೆ ಮಾರ್ಬಲಗಳು ಸಹ
ಗೊಡವೆ ಒಂದಿಲ್ಲ ಕೇಳು
ಭಾನುಜೂಟನ ಶರಣರ ಕೂಡೆ ಕಾಳಗ
ಏನು ಕೊಟ್ಟರು ಬ್ಯಾಡ ದೊರೆಯೆ ॥೮೪॥

ಎಂದ ಮಾತನು ಕೇಳಿ ಬಿಜ್ಜಳರಾಯನು
ನೊಂದಾಗ ಶಿರವ ತೂಗಿದನು
ಎಂದನಾ ಬಸವದಂಡೇಶನ್ನ ಕರೆಯೆಂಬೊ
ವ್ಯಾಳ್ಯೆಗಾಯಿತು ನಾಲ್ಕು ಸಂಧಿ ॥೮೫॥

ಅಂತು ಸಂಧಿ ೪ಕ್ಕಂ ಪದನು ೩೬೩ಕ್ಕಂ ಮಂಗಳಮಹಾ ಶ್ರೀ ಶ್ರೀ ಶ್ರೀ

❖❖

ಸಂಧಿ : ಐದು

ಶ್ರೀವರನಣುಗುನ ಶಿರವ ಕರದೊಳಗಾಂತ
ಶ್ರೀವರನಿಗೆ ಸಖನಾದ
ಶ್ರೀವುಮೆಯರಸ ಶ್ರೀಗಿರಿ ಚೆನ್ನಮಲ್ಲೇಶ
ಶ್ರೀಗುರು ರೇವಣ ಶರಣು ॥೧॥

ಕರೆಕರೆ ಬಸವನಯೆಂದು ಬಿಜ್ಜಳ ಪೇಳೆ
ಹರಿದು ಬಂದರು ಬೇಗ ಚರರು
ಬರಹೇಳಿದನು ದೇವರಾಯ ಬಿಜ್ಜಳರಾಯ
ನೆನೆ ಕೇಳ್ದು ಬಸವನು ಹೊರಟ ॥೨॥

ಬಂದು ಬಸವರಾಜ ಕುಳ್ಳಿರಲು ರಾಯನು
ಎಂದನು ನಿಮ್ಮಯ ಶರಣ
ಕೊಂದು ಕೆಡಹಿದರೆಮ್ಮ ಮಂದಿಯನು
ವೊಂದು ನಿಂತೆಮ್ಮ ಲೆಕ್ಕಿಸದೆ ॥೩॥

ನಾನೇನು ಸದರವು ನಿಮ್ಮಯ ಶರಣರಿಗೆ
ಜೀವದೊಡನೆ ಹಿಡಿತರಿಸಿ
ತಿವಿಸಿ ಖಂಡವ ಕೊಯ್ದು ತಿನಿಸುವೆನೆನುತ
ಅವಿವೇಕ ನುಡಿಯ ನುಡಿದನು ॥೪॥

ಪೊಡವಿರಾಯರೆದೆದಲ್ಲಣ ಛಲದಂಕ
ತಡವು ಮಾಡದೆ ಆ ಶರಣನ
ಕಡುಗಲಿ ಬಸವಯ್ಯ[ನ] ನೋಡುತ ರಾಯಗೆ
ನುಡಿದನು ಕೊಂಡಿಯಾ ಮಂಚಾ ॥೫॥

ಕೇಳೋ ಬಸವರಾಜ ನಿಮ್ಮಯ ಶರಣರು
ಬೀಳಹೊಯ್ದರು ಎಮ್ಮ ಬಲವ
ಹೇಳಲಳವೆ ನಿಮ್ಮ ಕಣ್ಣಿಗೆಯೆಂದು
ಇಳೆಗೊಡೆಯನು ಎದ್ದು ನುಡಿದ ॥೬॥

ಭೂಪತಿ ಕೇಳಿಷ್ಟು ಕೋಪವ್ಯಾತಕೆ ಈಗ
ಕಾಪಾಲಧರನ ಶರಣರು
ತಪ್ಪುಗಳಿಲ್ಲದೆ ಹೊಡೆಯರೆಂದೆನುತಲಿ
ಮುಪ್ಪುರವೈರಿ ತಾ ನುಡಿದ ॥೭॥

ಕಿನ್ನರಿ ಬ್ರಹ್ಮಯ್ಯ ಶರಣನೊಬ್ಬನ ಮೇಲೆ
ನಿನ್ನ ಬಲವನೆಲ್ಲ ಕಳುಹಿ
ಇನ್ನರೆ ದೊರೆಗಳೊಳಪಕೀರ್ತಿಯಾಯಿತು
ಇನ್ನಾದರೂ ತಿಳಿಯೆಂದ ॥೮॥

ನುಡಿದ ಮಾತನು ಕೇಳಿ ಘುಡಿಘುಡಿಸುತ ಕೋಪ
ನಡೆನಡೆ ಹೋಗುವಯೆನುತ
ಪೊಡವಿಪತಿಯ ಕೇಳು ಪಡಿಯಿಲ್ಲ ನಿನಗೆಂದು
ನುಡಿದನು ರಾಯ ಕೊಂಡೆಯನು ॥೯॥

ಎಂದ ಮಾತನು ಕೇಳಿ ಕೊಂಡಿಯ ಮಂಚಣ್ಣ
ನಿಂದು ನುಡಿದನೊಂದು ಮಾತ
ತಂದೆಯು ಬಸವ ಹೇಳಿದ ಮಾತು ತಪ್ಪದು
ಸಂಧಾನವನು ಮಾಡಬೇಕು ॥೧೦॥

ಬುದ್ಧಿವಂತನನಟ್ಟಿ ಬ್ರಹ್ಮಯ್ಯನಾಡುವ
ಸುದ್ದಿಯ ತರಿಸಿ ನೀವೀಗ
ಬುದ್ಧಿಗೆ ತಿಳಿದ ಕಾರ್ಯವ ಕಾಣ್ಬುದೆನುತಲಿ
ನಿರ್ಧರಿಸಿದನು ಬಿಜ್ಜಳನು ॥೧೧॥

ನಿನ್ನಿಂದ ಬಲ್ಲವರುಂಟೆ ಮಂಚಣ್ಣನೆ
ಈಸರನಾದರೂ ಕಳುಹು

ಬಂದೆನಗುಸುರೆಂದು ರಾಯ ಪೇಳಿದನಾಗ
ಕೊಂಡಿ ಮಂಚಣ್ಣ ನಡೆದ ॥೧೨॥

ಬಂದು ಮಂಚಣ್ಣನು ಶರಣ ಬ್ರಹ್ಮಯ್ಯಗೆ
ವಂದಿಸಿ ಕರಗಳ ಮುಗಿದು
ಮುಂದರಿಯದೆ ಬಂದ ಆನೆಕುದುರೆ ಮಂದಿ
ಒಂದುಳಿಯದೆ ಕೊಂದೊರುಂಟೆ ॥೧೩॥

ವೇಶಿಯ ಮಾತಿಗೆ ಬಿಜ್ಜಳರಾಯನು ಆಲೋ
ಚಿಸಿ ನೋಡದೆ ತಾನು
ಮೇಳೈಸಿ ತನ್ನಯ ಬಲದೊಳು ಎನ್ನನು
ಸೀಳಿರಿಯೆಂದು ಪೇಳುವರೆ ॥೧೪॥

ಬೊಪ್ಪಯ್ಯ ಹೇಳಿದ ಹಣವಿಗಿಮ್ಮಡಿ ಕೊಟ್ಟು
ಒಪ್ಪಿಸಿಕೊಂಡೆ ಈ ತಗರ
ಸರ್ಪಭೂಷಣನ ಸಾಕ್ಷಿಯ ಮಾಡಿ ಮುದ್ರೆಯಿ
ತ್ತೊಪ್ಪಿಸಿದೆ ತ್ರಿಯಂಬಕಗೆ ॥೧೫॥

ಹರಸಾಕ್ಷಿಯಾಗಿ ಮುಗಿದು ಕೊಟ್ಟ ತಗರಿಗೆ
ತರಲೆಕಾತಿಯು ಇಷ್ಟು ಹಣ್ಣೆ
ಶಿರಕೆ ತಂದಳು ನಮ್ಮ ಗುರುಕೃಪೆಯಿಂದಲಿ
ಕೊಡಿಸಿದ ಶಿವ ನಮ್ಮ ಕುರಿಯ ॥೧೬॥

ಅವಳ ವಾಕ್ಯವ ಕೇಳಿ ಭುವನೇಶನೆಂಬವ
ವಿವರಗಳ ತಿಳಿಯದೆ ಮೊರೆದು
ಆರ್ಭಟಿಸಿ ಮಂದಿಯಂತಾ[ಳ್ವ] ಇದ್ದೊರುಂಟೆ
ಅವಿವೇಕ ದೊರೆ ಕಾಣ್ಬುದೆಮಗೆ ॥೧೭॥

ಒಬ್ಬನ ಹರಣವ ಕೊಲ್ಲಬೇಕೆನುತಲಿ
ಸರ್ಬದಳವನೆಲ್ಲ ಕಳುಹೆ
ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರವ ಬಿಡುವಂತೆ
ಉಬ್ಬಿ ರಾಯ ತಿಳಿಯದೆ ॥೧೮॥

ಲೇಸನಾಡಿದೆ ಮಾತ ಸಾಕ್ಷಿಯಾರಿದಕೆ[ನೆ]
ಈಶನ ಭಕ್ತನು ನುಡಿದ
ದೇಶಾಧಿಪತಿಯು ಬಿಜ್ಜಳ ಬಂದು ಕೇಳ್ದರೆ
ಈಶನ ಸಾಕ್ಷಿಯ ನುಡಿವೆ ॥೧೯॥

ಮೃಡನಿಗೆ ಸಾಕ್ಷಿಯ ನುಡಿಸಿದುಂಟಾದರೆ
ಹೊಡೆದುದೆಲ್ಲವು ದಕ್ಕು ನಮಗೆ
ಪೊಡವೀಶ ಬಿಜ್ಜಳ ಕರವನು ಮುಗಿ[ವ]ನು
ಅಡಿಗೆರಗುತ್ತೊರಹೊಂಟ ॥೨೦॥

ಕಡು ತವಕದಿ ಬಂದಾಕ್ಷಣ ಮಂಚಣ್ಣ
ಒಡೆಯಂಗೆ ಬಿನ್ನ ಮಾಡಿದನು
ಮೃಡ ತ್ರಿಪುರಾಂತಕ ಲಿಂಗಯ್ಯನ ಸಾಕ್ಷಿಯ
ನುಡಿಸುವೆನೆಂದ ಬ್ರಹ್ಮಯ್ಯ ॥೨೧॥

ಕಡೆಯ ಮಾತನು ಪರಾಕೆಂದು ಕೊಂಡಾಡಿ
ಭಳರೆ ಭೂಪಾಲ ಕೇಳೀಗ
ಉಡುಪತಿಧರ ಸಾಕ್ಷ ನುಡಿದುದುಂಟಾದರೆ
ಮೃಡ ಪರಮೇಶನೆ ಇವನು ॥೨೨॥

ಕೊಂಡಿ ಮಂಚಣ್ಣನು ನುಡಿದ ವಾಕ್ಯವ ಕೇಳಿ
ಮಂಡಲಪತಿ ಒಳಿತೆಂದ
ಬಂದಾಗ ಬಸವಯ್ಯ ಒಳುಪೋಗುವೆನೆಂದು
ದಂಡೆಲ್ಲ ಸಹ ತೆರಳಿದನು ॥೨೩॥

ಬಂದು ಬಿಜ್ಜಳರಾಯ ದಂಡು ಮಂಚಣ್ಣ ಸಹ
ಕಂದರ್ಪಹರ ದೇವಾಲಯದಿ
ಇಂದಿರುವನ ನೋಡಿ ದೊರೆ ಕೊಂಡಿ ಮಂಚಣ್ಣ
ಇಂದುಧರನ ಸಾಕ್ಷಿ ನುಡಿಸೊ ॥೨೪॥

ಹಣವಿಗ ಹಣವಿತ್ತು ತಗರ ಕೊಂಡೆನು ನಾನು
ಬಣಗಯಿಲ್ಲೆಂದು ಕೂಗುವರೆ

ತ್ರಿಣಯನು ಸಾಕ್ಷಿಯ ನುಡಿದುದುಂಟಾದರೆ
ಮಣಿವೆವೆಲ್ಲರು ನಿಮ್ಮ ಅಡಿಗೆ ॥೨೫॥

ಎಂದ ನುಡಿಯ ಕೇಳಿ ಬ್ರಹ್ಮಯ್ಯ ಕೋಪಿಸಿ
ಕಂದರ್ಪಹರಗೆ ವಂದಿಸುತ
ನಿಂದಕ ಜನರ ಬಾಯ್ಬಡಿಯುವಂದದಿ ಶಿವ
ಒಂದು ವಾಕ್ಯವ ಪಾಲಿಸೆಂದ ॥೨೬॥

ಗಂಗಾಧರನೆ ಧವಳಾಂಗ ಮಹೇಶನೆ
ಮಂಗಳಾತ್ಮಕ ಮಹಾಮಹಿಮ
ಅಂಗಜವೈರಿಯೆ ಅಣುರೇಣುವಿನೊಳಗಿರ್ಪ
ಲಿಂಗ ನೀ ನುಡಿದುಳುಹೆಂದ ॥೨೭॥

ನನಗಿಲ್ಲ ಕೀರ್ತಿ ಅಪಕೀರ್ತಿ ನಿಮ್ಮದುಯೆಂದು
ಚಿನ್ಮಯ ಶರಣಾವತಾರ
ನೆನವಿನೊಳಿಹ ಪರಮಾತ್ಮ ನೀನುಳಿಸೆ[ನ್ನ]
ವಿನಯದ ನುಡಿಯ ಪಾಲಿಪುದು ॥೨೮॥

ಶರಣನ ಸ್ತುತಿಗೇಳಿ ಶೇಷಭೂಷಣ ಮೆಚ್ಚಿ
ಕರುಣದಿ ಮಾತನಾಡಿದನು
ನಿರುತವಹುದು ಮೇಷನ ಕೊಂಡದ್ದುಂಟೆಂದು
ಹೇಳಿದನೆಂಟು ವಾಕ್ಯವನು ॥೨೯॥

ಕಂಠಾಭರಣನೆ ಕಾರುಣ್ಯ ಮಹಿಮನೆ
ಉಂಟೇನೊ ಅಯ್ಯಾ ನೀ ಸಾಕ್ಷಿ
ಎಂಟೆಂಟು ಬಾರಿಗೆ ಉಂಟುಂಟು ಎನುತಲಿ
ಎಂಟ ಸರ್ತಿಯೊಳು ಪೇಳಿದನು ॥೩೦॥

ಐದು ಮುಖವು ಹದಿನೈದು ಕಂಗಳುಯಿಹ
ಈರೈದು ಭುಜಗಳ ಶಿವನೆ
ಮೈಯನಿಕ್ಕಿದನು ಬಿಜ್ಜಳ ಮಹದೇವಂಗೆ
ಕರವ ಮುದಿಗು ಮುಂದೆ ನಿಂದ ॥೩೧॥

ಶರಣರ ಘನವ ನೋಡಲು ಶಕ್ಯವಿಲ್ಲೆಂದು
ಕರವ ಮುಗಿದು ಬೇಡಿಕೊಂಡ
ಹರಣವ ಪಾಲಿಸು ಮಂದಿ ಮಾರ್ಬಲವನು
ಕರುಣದಿ ಪಾಲಿಸೊ ದೇವಾ ॥೩೨॥

ಶಿವನ ಪ್ರಸಾದ ತೀರ್ಥವ ಕೊಂಡು ಬ್ರಹ್ಮಯ್ಯ
ಭುವನದ ಜನ ನೋಡುತಿರಲು
ಹವಣಿಸಿ ತೀರ್ಥಪ್ರಸಾದವ ತಳಿಯಲು
ಎವೆ ಎವೆ ಹೊಯ್ಯುತೆದ್ದರಾಗ ॥೩೩॥

ಹರಣವಳಿದವರ ನೋಡಿ ಬ್ರಹ್ಮಯ್ಯನು
ಕರುಣ ದೃಷ್ಟಿಯೊಳು ನೋಡುತಲಿ
ಮರಣವಾದವರು ಎದ್ದರು ಎಂಬೊ ವಾರ್ತೆಯ
ಕೇಳಿ ಬಿಜ್ಜಳ ಕೈಯ ಮುಗಿದ ॥೩೪॥

ಮಂದಿ ಕುದುರೆ ಆನೆ ಸೇನೆ ಮಾರ್ಬಲಕೆಲ್ಲ
ಬಂದುದು ಜೀವ ಸಂತಸದಿ
ಧಿಂಧಿಮಿ ಧಿಮಿಯೆಂದು ಮೊಳಗಲು ವಾದ್ಯವು
ಬಂದೆರಗಿದ ಈಶನೆಡೆಗೆ ॥೩೫॥

ಮಂದಿ ಕುದುರೆ ಆನೆ ಅಂದನ ಸಹಿತಲಿ
ನಂದೀಶ ನಿಮ್ಮಮ ಕರುಣದಿ
ಎಂದೆನುತಲಿ ಮಹಾದೇವಂಗೆ ಬಿಜ್ಜಳ
ಬಂದೆರಗಿದನು ಸಂತಸದಿ ॥೩೬॥

ಕೇಳು ಬಸವರಾಜ ನಿಮ್ಮಯ ಶರಣರ
ಘನ ಮಹಿಮೆಯನೆಷ್ಟು ಹೇಳ್ವೆ
ಹೇಳುವರಿಗೆ ಅಳವಲ್ಲವು ಮಹಿಮೆಯ
ಕೇಳುವರಿಗೆ ಕರ್ಮಹರವು ॥೩೭॥

ಬಲಗೂಡಿ ಬಿಜ್ಜಳ ಬಸವದಂಡೇಶಗೆ
ನಲವಿಂದ ಕರಗಳ ಮುಗಿದು
ಗೆಲುವಿಂದ ಮುತ್ತಿನಂದಣವೇರಿ ಬಿಜ್ಜಳ
ಬರಲು ನೋಡುತ ಪುರಜನರು ॥೩೮॥

ಬಂದು ಬಿಜ್ಜಳರಾಯನರಮನೆಯನು ಹೊಕ್ಕು
ಮಂದಿ ಮಾರ್ಬಲವನು ಕಳುಹಿ
ನಂದೀಶನರಮನೆ ಬಂದಾಗ ಒಳ ಹೊಕ್ಕು
ಮಂದಿರದೊಳು ಸುಖವಿರಲು ॥೩೯॥

ಇತ್ತ ಮೇಷಗೆ ಬ್ರಹ್ಮಯ್ಯ ಪುರಜನ
ಅರ್ತಿಯಿಂದಲಿ ಅಲಂಕರಿಸಿ
ಮುತ್ತು ಮಾಣಿಕರತ್ನ ಕೆತ್ತಿದ ಹೊಂಗೆಜ್ಜೆ
ಜೊತ್ತಿಸಿ ಕೊರಳಿಗೆ ಹಾಕಿ ॥೪೦॥

ಕೋಡಿಗೆ ಹೊನ್ನಣಸಿನ ಗಿಲಿಕೆಯ ಹಾಕಿ
ಎಡದ ಕಾಲಿಗೆ ಗಗ್ಗರಗಳ
ಜೋಡಣೆಗೈದ ಹಲ್ಲಣ ಮುಖರಂಬವು
ನೋಡೊ ಜನರಿಗೆ ಚೋದ್ಯವಾಗ ॥೪೧॥

ಒಂಬತ್ತು ಹುರಿಯ ಚಿನ್ನದ ಮುಖವಾಡವು
ಕೊಂಬುಕೊಂಬಿಗೆ ಕೋಡಣಸು
ತುಂಬಿದ ಕೊರಳ ಪದಕದಿಂದ ಮೇಷನು
ಶಂಭುಯೆನಿಸಿ ಕೊಂಡಿಹುದು ॥೪೨॥

ಹರನ ಮೋಹದ ಮೇಷನ ಕಂಡವರೆಲ್ಲ
ನೊರೆವಾಲು ಕಣಿಕ ಸಕ್ಕರೆಯು
ಕರೆಕರೆದೀಯಲು ಕಲ್ಯಾಣಪುರದೊಳು
ಮೆರೆವುತಿರ್ದುದು ಮೇಷ ಸುಖದಿ ॥೪೩॥

ಮನೆಮನೆಗಳ ಹೊಕ್ಕು ಮೇದು ಮೈಗೊಬ್ಬಿಲಿ
ಕೊನರಿ ಕಂಡವರನು ಹಾಯ್ದು
ಮನಸಿಜವೈರಿ ತ್ರಿಪುರಾಂತಕಾಲಯ ಹೊಕ್ಕು
ಘನಪೂಜೆಯನೆಲ್ಲ ಕೆದರಿ ॥೪೪॥

ಮುಂಗಾಲ ಕೆದರುತ ಲಿಂಗವ ಹಾಯಲು
ಸಂಗನ ಶರಣ ಬ್ರಹ್ಮಯ್ಯ

ಅಂಗಗೆಟ್ಟಿತು ಮೇಷ ಇಲ್ಲರಬಾರದೆಂದು
ವಿಂಗಡ ಮಾಡಬೇಕೆಂದ ॥೪೫॥

ಪನ್ನಂಗಧರನ ಪೂಜೆಯ ಮೇಷನು ಬಂದು
ಕೊಬ್ಬಿ ಹಾಯಲು ಅದ ಕಂಡು
ಕಿನ್ನರಿ ಬ್ರಹ್ಮಯ್ಯ ಮೇಷನ ನೋಡುತ
ಇನ್ನು ಇಲ್ಲರಬಾರದೆನುತ ॥೪೬॥

ರವಿಶಶಿಗ[ಳು] ಸಮು[ದ್ರೆಯ] ಪೊತ್ತ ಮೇಷನ
ಭವಿಯೊಳು ಬಿಡಬಾರದಿದನು
ಶಿವಶರಣರ ತುರುವಿನಲಿ ಬಿಡಬೇಕೆಂದು
ವಿವರಿಸಿ ನುಡಿದ ಬ್ರಹ್ಮಯ್ಯ ॥೪೭॥

ತುರುವನಾಳುವರೆಲ್ಲ ಹರಿಯ ಭಕ್ತರುಯೆಂದು
ಹರಶರಣರು ನೋಡಿ ನುಡಿಯೆ
ಭರವಶದಿಂದ ಮೇಷನ ಕೊಂಡುಬಂದರು
ಸರವೂರ ಪುರಕೆ ಆಕ್ಷಣದಿ ॥೪೮॥

ಕಾರಣಿಕದ ಮೇಷ ಕರಿಗೊರಳಗೆ ಪ್ರೀತಿ
ವಾರಣದಲಿಯಿರಬೇಕು
ಮಾರಹರನ ಭಕ್ತರಲ್ಲದೆ ಭವಿಗಳ
ಸೇರಿಸಬಾರದೆಂದೆನುತ ॥೪೯॥

ಉತ್ತಮ ಶಿವಶರಣರಿಗಿದನೊಪ್ಪಿಸಿ
ಮತ್ತೆ ಬಾರೆಂದು ಪೇಳಿದರೆ
ಎತ್ತ ನೋಡಲು ಹರಿಭಕ್ತರಲ್ಲದೆ ಶಿವ
ಭಕ್ತರ ಕಾಣೆವೆಂದೆನಲು ॥೫೦॥

ಇರದೆ ಧ್ಯಾನಿಸಿದನು ಕಿನ್ನರಿ ಬ್ರಹ್ಮಯ್ಯ
ಸರವೂರು ಎಂಬ ಗ್ರಾಮದಲಿ
ಇರುವ ಶರಣರು [ಶಿವ]ಭಕ್ತರುಯೆಲ್ಲ
ಶಿವಭಕ್ತಿಯತ್ತ ಕ್ರೀಯುತರು ॥೫೧॥

ಎಲ್ಲರು ಗುರುಲಿಂಗಜಂಗಮ ಪೂಜೆಯ
ಅಲ್ಲಿ ಮಾಡುವರು ಭಕ್ತಿಯೊಳು
ಅವರಿಗಾರಾಧ್ಯರು ರೇವಣಸಿದ್ಧನ
ಮೋಹದ ಶಿಷ್ಯ ಶಾಂತಯ್ಯ ॥೫೨॥

ದೇವ ಆತನ ಬಳಿಬಿಡಬೇಕುಯೆನುತಲಿ
ಭಾವಜಹರ ಭಕ್ತ ನುಡಿದ
ನುಡಿದ ವಾಕ್ಯವ ಕೇಳಿ ಬ್ರಹ್ಮಯ್ಯ ನುಡಿದನು
ಮೃಡಭಕ್ತರಿಹ ಸರವೂರು ॥೫೩॥

ಅಲ್ಲಿಹರೆಲ್ಲರು ಶಿವಶೀಲವಂತರು
ಮಲ್ಲಿಕಾರ್ಜುನನ ಜಂಗಮಕೆ
ನಿಲ್ಲದೆ ತೃಪ್ತಿಪಡಿಸುವರು ರೇವಣಸಿದ್ಧ
ನಲ್ಲದೆ ಅನ್ಯತ್ರರಿಲ್ಲ ॥೫೪॥

ಶಿವಶರಣರ ಸಂಗ ಶಿವನೆನಹಿನ ಜ್ಞಾನ
ಶಿವಭಕ್ತಿ ಶಿವಲಾಂಛನಗಳು
ಅವರೊಳೊಪ್ಪಿಹ ಶಾಂತ ರೇವಣಸಿದ್ಧಗೆ
ತವರು ಮನೆಯೆನಿಸಿಹುದು ॥೫೫॥

ಆತನ ದೇವ ಕಂಪಳದೊಳು ಮೇಷನ
ಪ್ರೀತಿಯಿಂದಲಿ ಬಿಡಿಯೆನಲು
ಮಾತಾಡಿ ಜಂಗಮವನು ಕೂಡಿ ಬ್ರಹ್ಮಯ್ಯ
ತಾ ತೆರಳಿದನು ಅರ್ತಿಯೊಳು ॥೫೬॥

ಇತ್ತರದಲಿ ಭುಗಿಲೆಂಬ ವಾದ್ಯದ ರವ
ಮತ್ತೆ ಕರಡಿಯು ಕೈತಾಳ
ಎತ್ತೊ ಆರತಿ ಲೆಕ್ಕವಿಲ್ಲದೆ ಪೊರಮಟ್ಟು
ಮತ್ತೆ ತಂದರು ಮೇಷನನ್ನು ॥೫೭॥

ಭರದಿ ಬಂದರು ಸರವೂರಿಗೆ ಶಾಂತನ
ಕುರುಹಿನೊಳದ ಕೂಡಿ ನಮಿಸಿ

ಒರೆದರು ಬುದ್ಧಿಯ ಇದರಿಂದ ಮುಂದಕ್ಕೆ
ಇಹ ಪರಗತಿ ನಿಮಗುಂಟು ॥೫೮॥

ಹರಸಿ ಜಂಗಮರೆಲ್ಲವೆರಸಿ ಆ ಮೇಷಗೆ
ಹರ ಪವಾಡವ ಗೆಲ್ಲುಯೆಂದು
ಶರಣ ಶಾಂತಯ್ಯಗೆ ಒಪ್ಪಿಸಿ ಬಂದರು
ಭರದಿಂದ ಕಲ್ಯಾಣಪುರಕೆ ॥೫೯॥

ಎಲ್ಲ ಜಂಗಮಕೆರಗಿಯೆ ಬೇಗ ಬೀಳ್ಕೊಟ್ಟು
ಬಲ್ಲಿದ ಶಾಂತಯ್ಯನಿತ್ತ
ಮಲ್ಲಿಕಾರ್ಜುನನ ಪ್ರೇಮದಿ ಮೇಷ ಸುಖವಿರ
ಲಲ್ಲಿಗಾಯಿತು ಐದು ಸಂಧಿ ।೬೦॥

ಅಂತು ಸಂಧಿ ೫ಕ್ಕಂ ಪದನು ೪೨೫ಕ್ಕಂ ಮಂಗಳಮಹಾ ಶ್ರೀ ಶ್ರೀ ಶ್ರೀ

❖❖

ಸಂಧಿ : ಆರು

*ಬೊ[ಮ್ಮ]ಯ್ಯ ತಗರನು ತರಲಾಗಿ ಬೇಗದಿ
ಹೊಕ್ಕಿತು ಪುರಜನವೆರಸಿ
ಗೊತ್ತಾಗಿ ಪ್ರಾಣದಾನವ ಪಡೆದ ಬ್ರಹ್ಮಯ್ಯ
ಎತ್ತಿದನಾ ಪವಾಡವನು ॥೧॥

ಶಂಕರ ಪರಮೇಶ್ವರ ಘೋರದುರಿತ ಭ
ಯಂಕರ ಭವನಾಶ ಈಶ
ಕಿಂಕರ ಕೃತಿಯ ಕಿವಿಯೊಳಗಿತ್ತು ಕೇಳ್ವಕ
ಳಂಕ ರೇವಣಸಿದ್ಧ ಶರಣು ॥೨॥

ಹರಿಣಾಂಬರವುಟ್ಟು ಹರಿಯ ಕರ್ಣಿಕೆಯಿಟ್ಟು
ಹರಿಯ ಸುತನ ಸುಟ್ಟ ದೇವಾ
ಹರಿಹರರಿಬ್ಬರ ಶಿರದೊಳಗಿಂಬಿಟ್ಟು
ಹರಿಪೂಜಿತ ಪಾದ ಶರಣು ॥೩॥

ಪೊಡವಿಯೊಳಗೆ ಪವಾಡದ ಗೆಲ್ಲಬೇಕೆಂದು
ಒಡೆಯ ರೇವಣ್ಣ ಅರಸುತಲಿ ॥೪॥

ಹರಶರಣರು ಇಹ ಪುರಕಾಗ ನಡೆಯಲು
ಹರನ ಶರಣನು ಶಾಂತಯ್ಯ
ಹರಭಕ್ತ ಶರಣನು ಊರೊಳಗಿರುತಿರೆ
ಒರೆವೆನು ಮುಂದಣ ಕಥೆಯ ॥೫॥

* ಕಿನ್ನರಿ ಬ್ರಹ್ಮಯ್ಯ ಕುರಿಯನ್ನು ಸರವೂರ ಶಾಂತಯ್ಯನವರಲ್ಲಿ ಬಿಟ್ಟು ಅಲ್ಲಿ ಸತ್ತ ಕಾರಣ ಪಟ್ಟಣದ ತ್ರಿಪುರಾಂತಕನ ಮುಂದೆ ಜೀವವ ಪಡೆದ ಸಂಧಿ(ಅ)

ಹಟ್ಟಿ ಕೊಟ್ಟದ ರಟ್ಟ ಮತದ ಕುಲದೋರು
ಕಟ್ಟಾಣೆಯಿಲ್ಲ ಕಂಬಿಯೊಳು
ಪಟ್ಟಣದೊಳು ಗಟ್ಟಿಮೊಸರು ಕ್ಷೀರವ ಮಾರಿ
ಶೆಟ್ಟಿವರ್ತಕರೊಪ್ಪುತಿರಲು ॥೬॥

ಇಂತೊಪ್ಪುತಿರೆ ಕೇಳಿ ಕಂತುಮರ್ದನ ಶಿವ
ಇಂತಿಹ ನೋಡಬೇಕೆನುತ
ಕಾಂತೆ ಪಾರ್ವತಿಯೊಳು ಪೇಳಿ ಆಕ್ಷಣದೊಳು
ಸಂತೋಷದಿ ತಾನು ಹೊರಟ ॥೭॥

ಈ ಪರಿ ಬೇಹಾರ ಪಸರಂಗಳನು ಇಟ್ಟು
ಹರಶರಣರು ಒಪ್ಪುತಿರಲು
ಒರೆದು ನೋಡಲಿಬೇಕು ಇವರ ಭೇದವನೆಂದು
ಹರ ಬಂದ ಕೈಲಾಸದಿಂದ ॥೮॥

ಶಿವನು ತಾನೆರಡು ರೂಪಾಗಿ ನಡೆಯಲಾಗ
ಹವಣಿಸಿ ಪಸರ ಕಂಟಳೆಯ
ಭುವನದೊಳಗೆ ಇಲ್ಲದ ಅಪರೂಪದ
ದಿನಸನು ಮಾಡಿದಾಕ್ಷಣದಿ ॥೯॥

ಸಂತೋಷದೊಳು ಬಂದು ಪುರದ ಗ್ರಾಮದಿ ನಿಂದು
ಕಂತುಹರನು ಪಸರವಿಕ್ಕೆ
ಕಲ್ಯಾಣವನು ಹೊಕ್ಕು ಎಲ್ಲ ಗುಣಂಗಳು
ಬಲ್ಲಂಥ ಪಸರವಿಕ್ಕಿದರು ॥೧೦॥

ಮಲ್ಲಶೇಟ್ಟಿ ಸಿದ್ಧಶೆಟ್ಟಿ ತಾವೀರ್ವರು
ಫುಲ್ಲಶರನ ವೈರಿಗಳು
ಬಲ್ಲಿದ ಪೆಸರಾಂತು ನಿಲ್ಲದೆ ನಡೆತಂದು
ಕಲ್ಯಾಣಪುರ ಪೇಟೆಯೊಳು ॥೧೧॥

ಹರಶರಣರ ಪಸರಂಗಳ ಮಧ್ಯದಿ
ಭರದಿಂದ ಪಸರವನಿಟ್ಟು

ಪರಿಪರಿ ಬೇಹಾರಂಗಳ ಮಾರುತಿರ್ದರು
ಇರವ ತೋರದೆ ನೋಟಕರಿಗೆ ॥೧೨॥

ಹಟ್ಟಿಕಾರರು ಹಳ್ಳಿಕಾರರು ಅರಿವಿನ
ಹುಟ್ಟು ಅರಿಯದ ಕುರುಬರು
ರಟ್ಟಮತವ ಮಾಡಿದ ಕುಲದವರು ಕಂಬಿ
ಕಟ್ಟಿ ಮಾರಿದರು ಪಾಲ್ಮೊಸರ ॥೧೩॥

ಬಗೆಬಗೆ ಕುಲದವರು ಬೇಹಾರಗಳನಿಟ್ಟು
ಮುಖಮುಖಗಳನು ನೋಡುತಲಿ
ಅಘಹರ ರೂಪಿಲಿ ಇರುವರ ನೋಡುತ
ಬಗೆಬಗೆಯೊಳು ನುತಿಸಿದರು ॥೧೪॥

ಶಶಿಧರರಿಬ್ಬರು ಪಸರವನಿಕ್ಕಲು
ಮಿಸುನಿಯ ಚೀನಿ ಚೀನಾಂಬರವ
ಹೊಸಹೊಸ ಬದುಕ ಕಲ್ಯಾಣದಿ ಮಾರಲು
ಶಿಶು ಗಂಗಿಶೆಟ್ಟಿ ಕೇಳಿದನು ॥೧೫॥

ಆವ ದೇಶದೊಳಿಂದ ಬಂದಿರಿಯಿಲ್ಲಿಗೆ
ಆವ ನಾಮವು ನಿಮ್ಮದೆಂದ
ಭಾವಜಹರನ ಭಕ್ತರು ನೀವು ಹೇಳೆಂದು
ಭಾವಿಸಿ ನುಡಿದ ಗಂಗಯ್ಯ ॥೧೬॥

ಕಡವಾಡ ಯೆಂಬ ಪಟ್ಟಣವು ತಾವಿರ್ಪುದು
ನೋಡುವ ದೇಶ ಮಧ್ಯಗಳ
ರೂಢಿಯೊಳಧಿಕ ಕಲ್ಯಾಣವು ಪೊಸತೆನೆ
ನೋಡಲು ಬಂದೆ[ವೆಂದರು] ॥೧೭॥

ನೋಡಿದ ಹಣಹೊನ್ನ ತ್ರಾಸಿನೊಳ್ ತೂಗುತ
ಸರಿ ನೋಡಿದ ಸಿದ್ಧಶೆಟ್ಟಿ
ಇಂದುಧರನು ಪಸರವನಿಟ್ಟು ಮಾರಲು
ನಂದೀಶ ಶರಣರು ನುಡಿದರು ॥೧೮॥

ಎಂದು ಮಾತಾಡುತಲಿರೆ ಕಂಬಿ ತವಕದಿ
ಇಂದು ಪಾಲೊಸರು ಬೆಣ್ಣೆಗಳ
ಒಂದು ದಿವಸ ಸತ್ತ ಕುರಿಯ ಪಾದರಕ್ಷೆಯ
ನಂದು ಕಂಡನು ಮಲ್ಲಿಶೆಟ್ಟಿ ॥೧೯॥

ಒಪ್ಪಿತವೇ ನಿಮಗೀಗ ಶರಣರು ನೀವೆಲ್ಲ
ತುಪ್ಪ ಹಾಲನು ಕೊಳಬಹುದೆ
ಒಪ್ಪಿತವೇ ನಿಮಗೆ ಅಪ್ರತಿಮರು ಕೇಳಿರಿ
ಸರ್ಪಭೂಷಣನಿರ್ಪ ಪುರದಿ ॥೨೦॥

ತುಪ್ಪ ಮೊಸರು ಮಧು ಕೂಡೆ ಮಾರುವದೊಂದು
ಒಪ್ಪಿತವೇ ನಿಮಗೆನುತ
ಸಿದ್ಧಶೆಟ್ಟಿಯು ಮಾತನಾಡೆ ಕೈಲಾಸಕ್ಕೆ
ಬುದ್ಧಿಯಹುದು ಎಂದರವರು ॥೨೧॥

ಭಕ್ತಿಯಾಚಾರಕ್ಕೆ ಮೆರೆ[ವೆ]ವೆಂದೆನುತಲಿ
ತುಪ್ಪವು ಮೊಸರ ನೀಡುವರ
ಉತ್ತಮರೊತ್ತಿಲಿ ಇರಬಾರದಿವರನು
ಕತ್ತ ಹಿಡಿದು ನೂಕುಯೆಂದಾ ॥೨೨॥

ಸಿದ್ಧಶೆಟ್ಟಿ ಮಲ್ಲಶೆಟ್ಟಿಯಾಡಿದ ಮಾತಿಗೆ
ಬುದ್ಧಿ ಬಂದಿತು ಶರಣರಿಗೆ ನಾ
ವಿದ್ದ ಬಳಿ ಇವನಿರಬಾರದೆನುತಲಿ
ರುದ್ರಗಣಂಗಳಾಡಿದರು ॥೨೩॥

ಮಧು ಮಾಂಸ ಒಂದಾಗಿ ಮಾರೊಂಟೆ
ಸಾಧು ಸದ್ಭಕ್ತ ಶೀಲರಿಗೆ
ಮುದದಿಂದಲಿವನು ಮೂಢಾತ್ಮ ಪಾತಕನೆಂದು
ಸದೆಬಡಿದರು ಮಹಾತ್ಮನನು ॥೨೪॥

ಕುರುಬರು ಮೂರು ಲೋಕಕ್ಕೆ ಹೊರಗುಯೆಂದು
ಸಾರಿ ಡಂಗುರವ ಹೊಯ್ಸಿದರು

ಹೊರಗಾಗಿ ಹನ್ನೆರಡೊರುಷವಾಗಿರಲಾಗಿ
ಶ್ರೀಗುರು ರೇವಣಸಿದ್ಧ ॥೨೫॥

ಕಲ್ಯಾಣಕೊಂಡು ಯೋಜನ ಅಡವಿಯಲ್ಲಿ
ಎಲ್ಲ ಕುರುಬರೊಂದುಗೂಡಿ
ನಿಲ್ಲದೆ ಮನೆಮಠಗಳ ಮಾಡಿಕೊಂಡವ
ರೆಲ್ಲ ಕಾಲವ ಕಳೆಯುತರಲಿ ॥೨೬॥

ಎಂದು ಕುರುಬರೆಲ್ಲ ಹೊರಗುಯೆಂದೆನುತಲಿ
ಕಂತುಹರನ ಕಲ್ಯಾಣದಲಿ
ಡಂಗುರವನು ಸಾರಿ ಊರೊಳಗಿರ್ದರ
ಮುಂತಾಗಿ ಬಡಿದು ನೂಕಿದರು ॥೨೭॥

ಹರಕು ಕಂಬಳಿ ಕಂಚು ಕಡು ಬೇಹಾರಂಗಳ
ಹೊರಕೇರಿಯೊಳು ಮಾರುತಿರಲು
ಹರದೆರೆಲ್ಲರು ಕೇಳಿ ಹರುಷದೊಳೋಲಾಡೆ
ಇರುತಿ[ರೆ] ಕೇರಿಕೇರಿಯಲಿ ॥೨೮॥

ಗುರುವಿನ ಪಾದವ ಅರಿಯದೆ ಕುರುಬರು
ಪರಿಪರಿ ಕಷ್ಟಟದೊಳಿಹರು
ಅರಿವು ತೋರುವೆನೆಂದು ಸಿದ್ದಶೆಟ್ಟಿಯು ತಾನು
ವ್ಯವಹಾರಿಕನಾಗಿ ಬಂದ ॥೨೯॥

ಹೊರಕೇರಿಗೆ ಬಂದು ಪಸರವನಿಕ್ಕಲು
ಕುರುಬರ ಮಲ್ಲಿದೇವ ನುಡಿದ
ಪರಮದ್ರೋಹಿಗಳಿಪ್ಪ ಟಾವಿಗೆ ನೀವೀಗ
ಬರುವರೆ ಪಸರವಿಕ್ಕುವರೆ ॥೩೦॥

ಎಂದ ಮಾತಿಗೆ ಮುಕುಂದಪೂಜಿತ ಪಾದ
ಎಂದನಾ ಮಲ್ಲಿಗೌಡನೊಡನೆ
ಹಿಂದೆ ಮಾಡಿದ ಕರ್ಮಗಳನು ನೀ ಹೇಳೆಂದು
ಇಂದು ಸಿದ್ದಯ್ಯಶೆಟ್ಟಿ ನುಡಿದ ॥೩೧॥

ಎಂದ ಮಾತಿಗೆ ಸಿದ್ದಶೆಟ್ಟಿ ನುಡಿದನಾಗ
ಹಿಂದಣ ಭವನಾಶವೆಂದು
ಮುಂದುಗಾಣದೆ ತಿರುಗುವಿರಿನ್ನು ಗುರುಕೃಪೆ
ಯಿಂದ ಬಲ್ಲಿದರಾಗಿಯೆಂದ ॥೩೨॥

ಒಡೆಯನೆಂಬವರಿಲ್ಲ ಹಿಡಿವರೆ ಕೊಂಬಿಲ್ಲ
ಪೊಡವಿಯೊಳೆಮಗಾರುಯಿಲ್ಲ
ಕಡುಪಾಪಿಗಳಾಗಿ ತಿರುಗುತಿಹೆವುಯೆಂದು
ನುಡಿದನು ಸಿದ್ದಶೆಟ್ಟಿಯೊಡನೆ ॥೩೩॥

ಗೌಡನಾಡಿದ ಮಾತ ಕೇಳಿ ಸಿದ್ದಶೆಟ್ಟಿ
ವಿವರವ ಪೇಳ್ವೆ ಕೇಳೆಂದ
ಭವಗಳು ಹರಿಯಬೇಕಾದರೆ ನೀವೀಗ
ಹವಣಿಸಿಕೊಂಡೇಳಿಯೆಂದ ॥೩೪॥

ನಿಮಗೊಡೆಯನುವುಂಟು ನಿಮ್ಮ ಕುಲವನೆಲ್ಲ
ಭವಹರಶುದ್ಧಿ ಮಾಡುವನು
ನಿಮಗೆಣೆಯಿಲ್ಲವೆಂದೆನಿಸುವಿರಲ್ಲಿಗೆ
ಮಮತೆಯಿಂದಲಿ ತೆರಳೆಂದ ॥೩೫॥

ನುಡಿದ ವಾಕ್ಯವ ಕೇಳಿ ಕುರುಬಗೌಡಗಳೆಲ್ಲ
ಅಡಿಗೆರಗಿದರುತ ಕಾಯೆನುತ
ಒಡೆಯನೆಲ್ಲಿಹ ಹೇಳಿ ಹೊರಗೆಂಬ ಪಾಪವು
ಪರಿಹಾರವಾದರೆ ಸಾಕು ॥೩೬॥

ಕಲ್ಯಾಣಪುರಕೆ ಹನ್ನೆರಡು ಯೋಜನದೊಳು
ಅಲ್ಲಿರ್ಪ ಸರವೂರಿನೊಳಗೆ
ಬಲ್ಲಿದ ಶಾಂತಯ್ಯನಿರುವ ಶರಣ ನಿ
ಮ್ಮೆಲ್ಲರಿಗೊಡೆಯ ಹೋಗೆಂದ. ॥೩೭॥

ಎಂದ ಮಾತನು ಕೇಳಿ ಗೌಡಪ್ರಜೆಗಳೆಲ್ಲ
ಒಂದಾಗಿ ಕೂಡಿ ಮಾತಾಡಿ

ಹೊಂದಿದ ಕರ್ಮವ ಕಳೆಯಬೇಕೆನುತಲಿ
ಎಂದರು ಮಲ್ಲಿದೇವನೊಡನೆ ॥೩೮॥

ಎಂದನು ದಡ್ಡೋಡಿನ ಹೆಗ್ಗೊಂಡ ಗೌಡನು
ಉದುಗಿರಿಯ ಕೇ[ತ] ಗೌಡ ॥೩೯॥

ಮುದ್ದು ಬಸವನಿಪ್ಪ ಕಲ್ಯಾಣದೊಳಗಿರ್ದ
ಬುದ್ಧಿವಂತರು ತೆರಳಿದರು
ನಿರ್ದರುಶನವ ಮಾಡುವೆವೆಂದು ಗೌಡರು
ಸದ್ದು ಮಾಡದೆ ಎದ್ದರಾಗ ॥೪೦॥

ಚನ್ನವಾರದ ನಾಡ ಹೆಗ್ಗೊಂಡಗೌಡನು
ಸೊನ್ನಲಿಗೆಯ ಕೆಂಪೆಗೌಡ
ಉನ್ನತ ಮಳೆಯ [ಖೇಡ]ದ ಸಿದ್ದೇಗೌಡನು
ಕನ್ನೆಯರ್ ಸಹ ಬಂದರಾಗ ॥೪೧॥

ಹೇಮಾವತಿಯೊಳಿಹ ಚಿಗದೇವಗೌಡನು
ಸೊನ್ನಲಪುರದ ಸಿರಿಗೌಡ
ಕಾಮನಹಳ್ಳಿಯ ಕರಿಯ ತಿಮ್ಮೇಗೌಡ
ರಾಮೆಗೌಡನು ಲಕ್ಕೆಗೌಡ ॥೪೨॥

ಅಂಕನಳ್ಳಿಯ ಆದಿಗೊಂಡ ರೇವಣ್ಣನು
ಬಂಕಾಪುರ ಭದ್ರಗೌಡ
ಶಂಕರಪುರದ ರಾಮಣ್ಣಗೌಡನು ಸಹ
ಒಂದಾಗಿ ನಡೆದರೊಗ್ಗಿನಲಿ ॥೪೩॥

ದಿಕ್ಕುದಿಕ್ಕಿಲಿಯಿದ್ದ ಕುರುಬ ಗೌಡರಿಗೆಲ್ಲ
ಆಕ್ಷಣ ವಾಲೆಯ ಬರಿ
ಗಕ್ಕನೆ ಹಿಂದೆ ಗೌಡಗಳೆಲ್ಲ ತೆರಳಲು
ಸರವೂರ ಶಾಂತಯ್ಯ ಬಳಿಗೆ ॥೪೪॥

ಒಡೆಯನ ಪಾದವ ಕಾಣ್ಬ ತವಕದಿಂದ
ಕಡುಬೇಗ ಸರವೂರ ಹೊಳೆಯ

ಮೃಡಭಕ್ತ ಶಾಂತಮುತ್ತಯ್ಯನ ಕಾಣುತ
ಅಡಿಗೆರಗಿದನು ಆಕ್ಷಣದಿ ||೪೫||

ಮುಪ್ಪುರವನು ಸುಟ್ಟ ಶಿವನ ಶರಣ ನೀನು
ಕರಿಗೊರಳನ ಕರಜಾತ
ಹೊರಗ್ಹಾಕಿ ಹನ್ನೆರಡೊರುಷವಾಯಿತು ಎಮ್ಮ
ಮೊರೆಯನು ಕೇಳ್ಗುರುರಾಯ ||೪೬||

ಅಡಿಗೆರಗಲು ಶಾಂತ ಶಿವನಿಗೆಂದೆನುತಲಿ
ಪಿಡಿದೆತ್ತಿ ತಕ್ಕೈಯಿಸಿಕೊಂಡು
ಕಡುದೂರದಿ ಬಂದಿರಿ ಬಳಲಿದಿರೆಂದು
ಒಡೆಯ ಕೇಳಿದ ಬಂದ ಕಾರ್ಯ ||೪೭||

ಬಂದ ಕಾರಣವೇನು ಬನ್ನಿ ಪ್ರಭುಗಳೆಂದು
ಚಂದದಿಂ ಕೇಳಿ ಶಾಂತಯ್ಯ
ಮುಂದರಿಯದೆ ಮಧು ಘೃತವ ಕಲ್ಯಾಣದಿ
ತಂದು ಮಾರುವರು ನಮ್ಮವರು ||೪೮||

ಒಂದು ದಿನದಿ ಸತ್ತ ಕುರಿಯ ಕಂಬಿಯ ಮೇಲೆ
ಬಂಧಿಸಿ ತಂದರೆಮ್ಮವರು
ತಂದು ಮೊಸರ ಮಾರುತಿರಲು ನಮ್ಮವರೆಲ್ಲ
ಬಂದಿತು ಕೇಡು ಕೇಳೊಡೆಯ ||೪೯||

ಕುರುಬರಾದವರೆಲ್ಲ ಕುಲಕೆ ಹೊರಗುಯೆಂದು
ಹೊರಡಿಸಿ ಹನ್ನೆರಡೊರುಷ
ಹೊರಗೆ ಕಾಲವ ಕಳೆಯಲು ಒಬ್ಬ ಶರಣನು
ಗುರುತ ಕೊಟ್ಟನು ನಿಮ್ಮ ಬಳಿಗೆ ||೫೦||

ಬಂದೆವು ನಿಮ್ಮ ಪಾದವೆ ಗತಿಯೆನುತಲಿ
ನಂದಿವಾಹನ ತಾನೆ ಬಲ್ಲ
ಮುಂದೆ ನಿಮಗೆ ಕೀರ್ತಿ ಬರಬೇಕೆನುತಲಿ
ಬಂದು ಬಿದ್ದರು ಚರಣದಲಿ ||೫೧||

ಕೆಟ್ಟ ಕುಲವನೊಳಗೂಡಿಸು ಎನುತಲಿ ಬಾ
ಯ್ಬಿಟ್ಟು ಹೇಳಿದರ್ಶಾಂತನೊಡನೆ
ತಾಯ್ಮಾರಿ ತೊತ್ತ ಕೊಂಬುವರುಂಟೆ ಜಗದೊಳು
ನ್ಯಾಯವಿಲ್ಲದೆ ಮಾತಾಡುವರೆ ॥೫೨॥

ಭೂಮಿ ಸೀಮೆಯುಳ್ಳ ದಿನದಲ್ಲಿ ಸಮಯವ
ನಡೆಸೆಂದು ಗುರುರಾಯ ನುಡಿದ
ಮಾನಮಾನದಲಳಕೊಳ್ಳಿ ಹೊನ್ನನುಯೆಂದು
ಜ್ಞಾನಿ ಶಾಂತಯ್ಯ ಹೇಳಿದನು ॥೫೩॥

ಏನ ಬೇಡಿದರೂ ಈವೆವು ದೊಡ್ಡಿತಲ್ಲವು
ಮಾನವ ಕಾಯೆನ್ನ ಗುರುವೆ
ನಾನಾ ಬಗಯೊಳಿಂದ ಗೌಡರು ಹೇಳಲು
ಕೇಳಲು ಶಿವ ಗತಿಯೆಂದ ॥೫೪॥

ಕಟ್ಟಿದ ಬಂಡಿ ಆವಿನ ಹಿಂಡು ಕರು ಸಹ
ಇಟ್ಟ ಬಂಗಾರವೆಲ್ಲವನು
ಕೊಟ್ಟೇವು ನಮ್ಮ ಕುಲವನುಂಟು ಮಾಡಯ್ಯ
ಸೃಷ್ಟಿಯೊಳಗೆ ಕೀರ್ತಿಬಹುದು ॥೫೫॥

ಹಣಹೊನ್ನು ಧನ ಕರುವಿಂಗೆ ಕಡಿಮೆಯಿಲ್ಲ
ತ್ರಿಣಯ ಸಿದ್ಧನ ಕೃಪೆಯಿಂದ
ಅಣಕವಾಡುವರು ಲೋಕದೊಳು ದುರ್ಜನರೆಲ್ಲ
ಎಣಿಕೆ ಬ್ಯಾಡವು ಎನ್ನ ಗುರುವೆ ॥೫೬॥

ಶರಣ ಶಾಂತಯ್ಯ ಗೌಡರ ಕೂಡ ಮಾತಾಡು
ತಿರುವ ಸಮಯದೊಳಗಾಗ
ಕರುಣಿ ಬ್ರಹ್ಮಯ್ಯ ಬಿಟ್ಟ ಮೇಷ ಸತ್ತಿತುಯೆಂದು
ಕುರಿಗಾಯ್ವ ಚಿಕ್ಕ ಹೇಳಿದನು ॥೫೭॥

ತುರುವ ಕಾವವನೊಬ್ಬ ಹರಿದೋಡಿ ಬಂದನು
ಕರವ ಮುಗಿದು ಬಂದು ನಿಂದ

ಗುರುವು ಹೇಳಿದ ಪವಾಡವು ಆಗಿ ಬಂತೆಂದು
ಕರೆದನು ಸೋಮನಗೌಡನನು ॥೫೮॥

ಕಪ್ಪುಗೊರಳನ್ನರಕೆಯ ಮೇಷನಳಿದುದು
ಸರ್ಪಭೂಷಣನಿರ್ಪ ಪುರಕೆ
ಒಪ್ಪದೊಳೆಯ್ದು ಪ್ರಾಣವ ಪಡೆಯಬೇಕೆಂದು
ಪುಷ್ಪಕವನು ರಚಿಸಿದರು. ॥೫೯॥

ಚೀನಿಯು ಚೀನಾಂಬರ ಪಟ್ಟೆ ಪಟ್ಟಾವಳಿ
ನಾನಾ ಬಣ್ಣದ ವಸ್ತ್ರದಿಂದ
ಏನೆಂಬೆ ಮೇಷನ ಪುಷ್ಪಕದೊಳಗಿಟ್ಟು
ಕಾಳೆ ವಾದ್ಯಗಳು ಭೋರ್ಗರೆಯೆ ॥೬೦॥

ಸುರಗಿ ಶಾವಂತಿಗೆ ಮರುಗ ಮಲ್ಲಿಗೆ ಜಾಜಿ
ಸರಗಳ ತಂದು ಕಟ್ಟಿದರು
ಪರಿಮಣ ಗಂಧ ಕಸ್ತೂರಿಯ ಮೇಷನ ಮೈಗೆ
ಭರದಿಂದ ತಂದು ತೀಡಿದರು ॥೬೧॥

ಗುಗ್ಗುಳ ಲೋಬಾನ ಧೂಪದ ವಾಸನೆ
ಉಬ್ಬಿ ಆಕಾಶಕ್ಕೆ ಮುಟ್ಟೆ
ಭರ್ಗ ಮೇಷನ ತಂದು ಪುಸ್ಪಕದೊಳಗಿಟ್ಟು
ಹೆಗ್ಗಾಳೆ ವಾದ್ಯ ಭೋರ್ಗರೆಯೆ ॥೬೨॥

ಒಪ್ಪವ ಮಾಡಿ ಮೇಷನ ತೆರಳಿಸಿ ಆಗ
ಸರ್ಪಭೂಷಣನ ಕಲ್ಯಾಣಕೆ
ಹಿಡಿವ ಕಹಳೆ ಶಂಖ ಕರಡಿ ಸಮ್ಮಾಳವು
ಬುರುಗನು ಪೂರಿ ಹೆಗ್ಗಾಳೆ ॥೬೩॥

ಪುಷ್ಪಕವನು ತೆರಳಿಸಿಕೊಂಡ ಬಂದರು
ತಪ್ಪದೆ ಉಘೆಉಘೆಯೆನುತ
ಸರ್ಪಭೂಷಣನಿಪ್ಪ ಕಲ್ಯಾಣ ಪುರಕಾಗ
ಬರ್ಪ ಸಂಭ್ರಮವನೇನೆಂಬೆ ॥೬೪॥

ಎಪ್ಪತ್ತ ಏಳ್ನೂರು ಅಮರಗಣಂಗಳು
ತಪ್ಪದೆ ಹಾದಿ ಅರಸುತಲಿ
ಕಲ್ಯಾಣದ ರಾಜವೀಧಿಯೊಳ್ ಬರುತಿರೆ
ಮಲ್ಲಿಶೆಟ್ಟಿಗಳು ತಡೆದರು ॥೬೫॥

ಬಂದು ಕಲ್ಯಾಣವ ಹೊಗಲು ಶರಣರು ಕಂಡು
ನಿಲ್ಲಿಸಿ ಅಲ್ಲಿ ತಗರನು
ತಂದದ್ದು ಏನಯ್ಯ ನಿರ್ಜೀವಿಯಿದನೆಂದು
ಒಂದು ಯೋಚನೆಯ ಮಾಡಿದರು ॥೬೬॥

ಮಲ್ಲಿಶೆಟ್ಟಿಯು ಸಿದ್ಧಶೆಟ್ಟಿ ಗಂಗಣ್ಣಶೆಟ್ಟಿ
ಎಲ್ಲ ಶೆಟ್ಟಿಗಳು ತಡೆದರು
ಇಲ್ಲಿಗೆ ಸತ್ತ ತಗರ ನೀವು ಎಳೆತಂದು
ಎಲ್ಲರಿಗಪಕೀರ್ತಿ ತಹರೇ ॥೬೭॥

ಸತ್ತ ಮೇಷನ ಹೊತ್ತು ಕೊಂಡೂರ ಹೊರಗೆ
ಹೊತ್ತುಕೊಂಡ್ಹೋಗೋದು ಸಹಜ
ಸತ್ತ ಕುರಿಯ ಹೊತ್ತುಕೊಂಡು ಪೇಟೆಯೊಳಗ
ಹೊತ್ತು ತರುವರೇನೆ ಹೇಳಿ ॥೬೮॥

ನಿಂದಕ ಜನರು ಅನೇಕವುಂಟೂರೊಳು
ಮುಂದೆ ಎಚ್ಚರ ನಿಮಗಿರಲಿ
ಎಂದ ವಾಕ್ಯವ ಕೇಳಿ ಶಾಂತಯ್ಯ ಭುಗಿಭುಗಿ
ಲೆಂದು ನುಡಿದನೊಂದು ಮಾತ ॥೬೯॥

ಎಮ್ಮ ಒಡೆಯ ರೇವಣಸಿದ್ಧನರಿಕೆಯು
ಚೆನ್ನ ತಗರ ಪವಾಡವನು
ನಿರ್ಣಯಿಸದಿರೆ ನಿಮ್ಮ ಚರಣ ಸೇವಕನಲ್ಲ
ಇನ್ನು ಛೇದಿಸುವೆನು ಶಿರವ ॥೭೦॥

ಬಸವ ಹುಟ್ಟಲು ತೀರ್ಥಪ್ರಸಾದವಾದವು
ಶಶಿಧರ ಕಲ್ಯಾಣಪುರದಿ

ಮೇಷ ಹುಟ್ಟ[ಸಿ] ಲೋಕಕೆ ತೋರುವೆನೆನುತಲಿ
ಈಶನ ಭಕ್ತನು ಪೇಳ್ದ ॥೭೧॥

ಎಂದಾಗ ಪೇಳಿ ಸಾಗಿಸಿಕೊಂಡು ಬಂದನು
ದಿಂಧಿಮಿಯೆನಲು ಅಂಬರದಿ
ಮುಂದಿಹ ತ್ರಿಪುರಾಂತಕ ದೇವಾಲ್ಲ್ಯಕೆ
ತಂದರು ಉಘೇ ಉಘೇಯೇನುತ ॥೭೨॥

ಶೆಟ್ಟಿ ಸಮಸ್ತರಿಗೊಡಂಬಡಿಕೆಯ ಮಾಡಿ
ಕೊಟ್ಟ ಶಾಂತಯ್ಯನುತ್ಸವದಿ
ಖಟ್ವಾಂಗಧರ ಚಂದ್ರಸಾಲೆಯೊಳ್ ತಗರನು
ಇಟ್ಟರು ಪುಷ್ಪಕವೆರಸಿ ॥೭೩॥

ಭಸಿತವ ಧರಿಸುತ ಪುಷ್ಪವ ಮುಡಿಸುತ
ಶಶಿಧರ ಗತಿಯು ಎಂದೆನುತ
ಅಸಮಾಕ್ಷನ ಭಕ್ತ ಶಾಂತಯ್ಯನಿರಲಾಗಿ
ಉಸುರಿದರಾ ಬಸವನಿಗೆ ॥೭೪॥

ಶಶಿಧರನಂದದಿ ಇರುತಿರ್ಪ ಬಸವೇಶ
ವಸುಧೆಯೊಳಿದು ಚೋದ್ಯವೆನುತ
ಪೊಸಬಗೆಯಲಿಯಿರ್ಪ ತಂದಿರ್ದ ತಗರನು
ಎಸೆದು ಬಂದಿದೆ ಪವಾಡಕ್ಕೆ ॥೭೫॥

ಕೇಳುತ ಬಸವ ಬಿಜ್ಜಳನ ಓಲಗದೊಳು
ಭಾಳಾಕ್ಷಹರ ಗತಿಯೆನುತ
ಏಳುತ ಶರಣರ ಕರೆಕರೆಯೆನುತಲಿ
ಹೇಳಿದ ಉತ್ತಣ್ಣನೊಡನೆ ॥೭೬॥

ಕಟ್ಟಿಗೆ ಉತ್ತಣ್ಣ ಕರೆದು ಸಮಸ್ತರ
ಪಟ್ಟಣದ ಕೇರಿಕೇರಿಯೊಳು
ಕಟ್ಟೊಡೆಯನು ನಿಮ್ಮ ಕರೆಯ ಹೇಳಿದನೆಂದು
ಮುಟ್ಟಿ ಬಿನ್ನಹವ ಮಾಡಿದನು ॥೭೭॥

ಭಕ್ತಶಿರೋಮಣಿ ಬಸಯ್ಯ ಕರೆಸಲು
ಉತ್ತಮ ಶೆಟ್ಟಿಶರಣರು
ಕಿತ್ತು ನಡೆಯಿತು ಕಲ್ಯಾಣಪುರದೊಳಿರ್ದ
ಸತ್ಯವಂತರು ತಮತಮಗೆ ॥೭೮॥

ಮುತ್ತಿನಂದಣದೊಳು ಇರುತಿಹ ತಗರನು
ಇತ್ತರದೊಳಗೆ ಭೋರಿಡುತ
ಅರ್ತಿಯಿಂದಲಿ ಬಹ ಶರಣರುಗ್ಗಡಣೆಯ
ಮತ್ತೆ ವರ್ಣಿಸಲಳವಲ್ಲ ॥೭೯॥

ಚೆನ್ನಬಸವರಾಜ ಕಿನ್ನರಿ ಬ್ರಹ್ಮಯ್ಯ
ಸೊನ್ನಲಿಗೆಯ ಸಿದ್ಧರಾಮ
ಚೆನ್ನಯ್ಯ ಹೊನ್ನಯ್ಯ ಕನ್ನದ ಮಾರಯ್ಯ
ಉನ್ನತ ಶರಣರೈದಿದರು ॥೮೦॥

ಕಕ್ಕಯ್ಯ ಕನ್ನಯ್ಯ ಕಲಕೇತ ಬ್ರಹ್ಮಯ್ಯ
ಒಕ್ಕಲಿಗರ ಮುದ್ದಗೌಡ
ಅಕ್ಕಿಗಳಾಯ್ದಯ್ಯ ನುಲಿಯ ಚಂದಯ್ಯನು
ಮುಕ್ಕಣ್ಣನೆಡೆಗೈದಿದರು ॥೮೧॥

ಗುಂಡಬ್ರಹ್ಮಯ್ಯನು ಗುರುಭಕ್ತ ಚೌಡಯ್ಯ
ಕೊಂಡಗುಳಿಯ ಕೇಶಿರಾಜ
ಕೊಂಡಾಡುತ ಶರಣರು ಎಲ್ಲ ಬಂದರು
ಭಂಡಾರಿ ಬಸವನು ಸಹಿತ ॥೮೨॥

ಹರಳಯ್ಯ ಮಧುವಯ್ಯ ಜಗದೇವಯ್ಯನು
ಬಳ್ಳದ ಬಂಕಣ್ಣ ಸಹಿತ
ಮೋಳಿಗೆ ಮಾರಯ್ಯ ಮುಗ್ಧಸಂಗಯ್ಯನು
ಭಾಳಾಕ್ಷನೆಡೆಗೈದಿದರು ॥೮೩॥

ಹಡಪದಪ್ಪಣ್ಣನು ಪಡಿಹಾರಿ ಉತ್ತಣ್ಣ
ಕಡುಧೀರ ಶರಣ ಮಾಚಯ್ಯ

ದೃಢಗಲಿ ನಿಜಲಿಂಗ ಚಿಕ್ಕರಾಮಯ್ಯನು
ಮೃಡನ ಓಲಗಕೆ ಬಂದರಾಗ ॥೮೪॥

ಅಂಕದ ಶಾಂತಯ್ಯ ಆಯ್ದಕ್ಕಿ ಮಾರಯ್ಯ
ಶಂಕರದಾಸಿಮಯ್ಯಗಳು
ಲೆಂಕ ಮಂಚಣ್ಣನು ಢಕ್ಕೆಯ ಮಾರಯ್ಯ
ವಂಚನಿಲ್ಲದೆ ತೆರಳಿದರು ॥೮೫॥

ಲಕ್ಷದ ಮೇಲೆ ತೊಂಬತ್ತಾರು ಸಾವಿರ
ಮುಕ್ಕಣ್ಣ ಶಿವನ ಜಂಗಮವು
ಮಿಕ್ಕ ಗಣಂಗಳ ಎಣಿಸುವರಳವಲ್ಲ
ಲೆಕ್ಕ ಪೇಳ್ವರೆಯಸಾಧ್ಯ ॥೮೬॥

ಚಿನ್ನ ಬೆಳ್ಳಿಯು ತಾಮ್ರ ಲೋಹ ರುದ್ರಾಕ್ಷೆಯ
ವರ್ಣವರ್ಣದ ಕಂತೆಯವರು
ಚೆನ್ನಿಗ ಬಸವನ ಭಕ್ತಿಯ ಜಂಗಮ
ಮುನ್ನ ನೋಡುವರೈದಿದರು ॥೮೭॥

ಹಂಚು ಕಂತೆಯ ಲಿಂಗ ಮಿಂಚುಳ್ಳ ಸುಲಿಪಲ್ಲು
ಪಂಚಶಿಖಿಯು ಮುಖಭಸಿತ
ಪಂಚವಾದ್ಯಗಳಿಂದ ಮೊರೆವುತ ಬಂದರು
ಅಂಚೆ ಅಂಚೆಯ ಮೇಲೆ ಗಣರು ॥೮೮॥

ಬಂದ ಗಣಂಗಳು ತ್ರಿಪುರಾಂತಕಲಿಂಗದ
ಅಂದವ ನೋಡಿ ಸಂತಸದಿ
ಸಿಂಧುರನ ಸೀಳ್ದ ಮಹಿಮನೆ ಗತಿಯೆಂದು
ಹೊಂದಿ ಕುಳಿತಿರ್ದರರ್ತಿಯೊಳು ॥೮೯॥

ಕಡುಗಲಿ ಶರಣರು ತಗರನು ನೋಡುತ
ಒಡೆಯರು ಭಕ್ತರಿಕ್ಕೆಲದಿ
ಪೊಡವಿಯೊಳ್ ತಗರೀಗ [ಪ]ಡೆಯಬೇಕೆನುತಲಿ
ಒಡೆಯ ಬಸವಗೆ ಹೇಳಿದರು ॥೯೦॥

ಕಲ್ಯಾಣಪುರದೊಳಗುಳ್ಳ ಶರಣರೆಲ್ಲ
ಎಲ್ಲರು ಉಳಿಯದೆ ಕುಳಿತು
ಕುಳ್ಳಿರೆ ತಗರು ಏಳಲಿಯೆಂಬೊ ಸಮಯಕ್ಕೆ
ಅಲ್ಲಿಗಾದುದು ಆರು ಸಂಧಿ ॥೯೧॥

ಅಂತು ಸಂಧಿ ೬ಕ್ಕಂ ಪದನು ೫೧೪ಕ್ಕಂ ಮಂಗಳಮಹಾ ಶ್ರೀ ಶ್ರೀ ಶ್ರೀ

❖❖

ಸಂಧಿ : ಏಳು

*ಹರಿಯ ಮೈದುನಗೆ ಮೆಚ್ಚಿಯೆ ಪಾಶುಪತವಿತ್ತೆ
ಹರಿಭೂಷ ಹರಿಯ ಸೂಡಿದನೆ
ಹರಿಯ ಸುತನನುರುಪಿದ ಹರಿನಯನನೆ
ಗುರು ರೇವಣಸಿದ್ಧ ಶರಣು ॥೧॥

ಹಿಂದೆ ನಾಲ್ಕೆಂಟು ಪವಾಡವನೆಬ್ಬಿಸಿ
[ಸ]ಂದ ಮಹಾತ್ಮ ರಂತಿರ[ಲಿ]
ಇಂದೆಮ್ಮನೆಬ್ಬಿಸಿ ಹೇಳುವುದೇನೆಂದು
ನಿಂದು ಜಂಗಮವೆಲ್ಲ ನುಡಿಯೆ ॥೨॥

ಒಬ್ಬರ ಮುಖವ ಒಬ್ಬರು ನೋಡಿಕೊಳುತಿರೆ
ಉಬ್ಬಿ ಕೊಂಡೆಯ ಮಂಚ ನುಡಿದ
ಎಬ್ಬಿಸಲಾರರು ಇವರಿಂದೇನಾಗೋದು
ಕಬ್ಬು ಕಡಲೆ ತಿನ್ನ ಬನ್ನಿ ॥೩॥

ಸತ್ತ ಮೇಷನ ಪವಾಡವನೆಬ್ಬಿಸುವನೆಂದು
ಮರ್ತ್ಯದ ಜನರೆಲ್ಲ ಕೂಡಿ
ಇತ್ತರಡಲಿ ನಿಂದು ನೋಡುತಲಿರುವರು
ವ್ಯರ್ಥವಾಯ್ತೆಂದು ಬಿಜ್ಜಳನು ॥೪॥

* ತ್ರಿಪುರಾಂತಕನಲ್ಲಿ ಪವಾಡ ಎಬ್ಬಿಸಿ ಕಲ್ಯಾಣದಲ್ಲಿ ಮೆರವಣಿಗೆಯಾಗಿ ಬಸವಣ್ಣ ಸಹ ಸರವೂರಿಗೆ ಬಂದದ್ದು(ಅ)

ಬಂದಬಂದವರೆಲ್ಲ ಶರಣುಯೆಂದೆನುತಲಿ
ಬಂದು ಕುಳ್ಳಿಹ ಅಯ್ಯಗಳೆಲ್ಲ
ಇಂದಿದನೆಬ್ಬಿಸದಿರೆ ನಿಮ್ಮ ನಾನೀಗ
ಮುಂದೆ ಗಾಣದಿ ಅರೆಸುವೆನು ॥೫॥

ಎಂದ ಬಿಜ್ಜಳನ ಮಾತು ಕೇಳಿ ಶರಣರು
ನೊಂದುಕೊಂಡರು ಚಿಂತೆಯೊಳಗೆ
ಚೆಂದವೆ ಮಂಚಣ್ಣನಾಡಿದ ಮಾತಿಗೆ
ಇಂದು ಈ ಮಾತನಾಡುವರೆ ॥೬॥

ಗುಡಿಗಟ್ಟಿ ಶರಣರು ಕಿಡಿಯ ಮುಕ್ಕಳಿಸುತ
ಮೃಡನ ಪಾದವೆ ಗತಿಯೆನುತ
ನುಡಿದರು ಬಸವದಂಡೇಶಗೆ ತಗರನು
ನಡೆಸಿರಿ ನಿಮ್ಮ ದಮ್ಮಯ್ಯ ॥೭॥

ಹಾಸ್ಯದ ನುಡಿಯೆ ನಮ್ಮೊಳುಯೆಂದು ಶರಣರು
ರೋಷದಿ ಮುಂಗಯ್ಯ ಕಡಿದು
ಸೂಸಿ ನೆತ್ತರ ಕರುಳ್ಗಳ ಕೀಳಿಸುವೆವೆನೆ
ಬಸವನಿಂತೆಂದ ಭಕ್ತರಿಗೆ ॥೮॥

ನಿಮ್ಮಯ ಮಹಿಮೆಯ ನೋಡಬಲ್ಲವರಾರು
ತಮ್ಮ ಅಪ್ಪಣೆಯು ತಗರಿಗೆ
ನಿಮ್ಮಯ ಕರುಣ ಕಟಾಕ್ಷವಾದರೆ ಈಗ
ಘಮ್ಮನೇಳುವದೆಂದ ಬಸವ ॥೯॥

ಹೆತ್ತವರ್ಹೆಸರಿಡುವುದು ಸಹಜವು
ಪುತ್ರಗನ್ಯರ ಹೆಸರಿಡರು
ಚಿತ್ತಜಾರಿಯ ಭಕ್ತ ಶಾಂತಯ್ಯ ಹೊರತಾಗಿ
ಮತ್ತೋರ್ವರಿಂದ ಆಗುವುದೆ ॥೧೦॥

ದಂಡೇಶ ನುಡಿದ ನುಡಿಗೆ ಪ್ರಮಥರೆಲ್ಲ
ಕೊಂಡಾಡಿ ಶಾಂತಯ್ಯನನು

ಖಂಡಪರಶು ಭಕ್ತ ಈ ಪವಾಡವನೀಗ
ಕೊಂಡು ಕೀರ್ತಿಯ ಪಡೆಯೆಂದ ॥೧೧॥

ಈಶನ ವರಪುತ್ರ ಲೇಸುಳ್ಳ ಶಾಂತಯ್ಯ
ದೇಶದೇಶಕೆ ಪೆಸರಾದೆ
ಮೇಷ ಪವಾಡವ ಮೆರೆಸಬೇಕೆನುತಲಿ
ಈಶ ಬಸವ ಭಸಿತವನಿ[ತ್ತ] ॥೧೨॥

ಎಂದನು ಶಾಂತಯ್ಯ ಬಸವಾದಿ ಪ್ರಮಥರ್ಗೆ
ಬಂದು ಪಾದಕೆ ವಂದಿಸುತಲಿ
ಮುದ್ದು ಬಸವರಾಜ ಧರಿಸೆ ವಿಭೂತಿಯ
ಇದ್ದ ಶರಣರೆಲ್ಲ ಧರಿಸೆ ॥೧೩॥

ಗುರುವು ರೇವಣಸಿದ್ಧ ಕರುಣದಿ ತಗರನ
ಹರಣವ ಪಡೆದು ಎಬ್ಬಿಸಲು
ತರಣಿಚಂದ್ರಮರುವುಳ್ಳನಕ ಸತ್ಕೀರ್ತಿಯು
ಬರುವುದು ಕಾಯವಸ್ಥಿರವು ॥೧೪॥

ಎಂದು ಬಸವ ಶರಣರು ಪೇಳ್ದಮಾತಿಗೆ
ವಂದಿಸಿ ನಿಂದಿನಾಕ್ಷಣದಿ
ದಂಧಣಧಣಿರೆಂದು ವಾದ್ಯ ಮೊಳಗುತಿರೆ
ನಿಂದು ನೋಡಲು ಮೇಷದೊಳಗೆ ॥೧೫॥

ಬಂದು ಖೇಚರದಿ ಪುಷ್ಪಕದಿ ರೇವಣಸಿದ್ಧ
ನಿಂದು ನೋಡುತಲಿರೆ ಶಾಂತ
ಚಂದ್ರಜೂಟನು ತ್ರಿಪುರಂತಕಗೆರಗುತ
ತಂದೆಯೆನ್ನನು ರಕ್ಷಿಸೆಂದ ॥೧೬॥

ತ್ರಾಹಿ ಗಂಗಾಧರ ತ್ರಾಹಿ ಮಹೇಶ್ವರ
ತ್ರಾಹಿ ಅನಾಥರ ಪೋಷಾ
ತ್ರಾಹಿ ತ್ರಿಶೂಲ ಪನ್ನಗಭೂಷ ಸರ್ವೇಶ
ತ್ರಾಹಿ ರೇವಣಸಿದ್ಧ ಶರಣು ॥೧೭॥

ನಿನ್ನ ಮಹಿಮೆಯಿಂದ ತಗರುವುದ್ಭವಿಸಿತು
ಕಿನ್ನರಿ ಬ್ರಹ್ಮಯ್ಯನಿಂದ
ತನ್ನಾಟವ ತೋರಿ ತಾನು ಅಳಿದುದೀಗ
ಎನ್ನ ಬಿನ್ನಪವ ಲಾಲಿಪುದು ॥೧೮॥

ಸೃಷ್ಟಿಗೆ ಕೈಲಾಸ ಕಲ್ಯಾಣಪುರದಲ್ಲಿ
ಕೆಟ್ಟ ಜನರು ಕೆಲರಿಹರು
ಬಿಟ್ಟಾಡುವುದೇನು ಕೊಟ್ಟು ವರವ ದಯ
ವಿಟ್ಟು ತಗರನೆಬ್ಬಿಸೆಂದ ॥೧೯॥

ಎಂದು ಕೊಂಡಾಡೊ ಶಾಂತನ ವಾಕ್ಯಕೆ ಮೆಚ್ಚಿ
ನಂದೀಶ ಕೃಪೆ ಪಾಲಿಸೆನಲು
ಬಂದು ಶಾಂತಯ್ಯ ಮೇಷಗೆ ಭಸಿತವನಿಟ್ಟು
ಚೆಂದದಿ ಮೈದಡಹಿದನು ॥೨೦॥

ರೇವಣಸಿದ್ಧನ ನಿಜಭಕ್ತಿ ಶಾಂತಯ್ಯ
ದೇವನಂಘ್ರಿಯ ನೆನೆನೆನೆದು
ತೀವಿ ಪ್ರಸಾದ ತೀರ್ಥವ ಚೆಲ್ಲಲೆದ್ದಿತು
ಜೀವಕಳೆಯು ತುಂಬಿಕೊಂಡು ॥೨೧॥

ಎಡಬಲವನು ನೋಡಿ ಘುಡಿಘುಡಿಸುತ ಮೇಷ
ವಡನೊಜ್ರ ಕಂಬವ ಹಾಯ್ದು
ಒಡೆಯಲು ಬಿಜ್ಜಳ ನೋಡಿ ನಡುಗತಿರೆ
ಪೊಡವಿ ತಲ್ಲಣಿಸಿತೇನೆಂಬೆ ॥೨೨॥

ಇತ್ತರದಲಿ ನಿಂದು ನೋಡುವ ಶರಣರು
ಅರ್ತಿಗೊಂಡರು ತಮತಮಗೆ
ಎತ್ತಿದ ತಗರ ಪವಾಡವ ಎನುತಲಿ
ಕರ್ತು ಬಸವರಾಜ ನುಡಿದ ॥೨೩॥

ನಡುಗಲು ಭೂಮಿಯು ಸಿಡಿಯಲಾಕಾಶವು
[ಪೆ]ಡೆಯ ನಾಲಗೆ ಉಡುಗಿದುದು

ಕಡುಭಕ್ತಿ ಶಾಂತಯ್ಯನ ದೃಢತೆ ಕಲ್ಯಾಣದ
ದೊಡೆಯ ಭಕ್ತರು ಪೊಗಳಿದರು ॥೨೪॥

ಕಿಚ್ಚುಗಣ್ಣಿನ ಪವಾಡವು ಏಳಲು ಕಂಡು
ಅಚ್ಚರಿಗೊಂಡ ಬಿಜ್ಜಳನು
ಹೆಚ್ಚಿನ ಮಹಿಮೆಯ ಕಾಣದಾಡಿದೆನೆಂದು
ಹುಚ್ಚು ಆದನು ಮನದೊಳಗೆ ॥೨೫॥

ಉತ್ಸಹವಾದರು ಊರೊಳಿರುವ ಜನ
ಮೆಚ್ಚಿ ಶಾಂತನ ಕೊಂಡಾಡಿದರು
ತುಚ್ಚಿತ ಜನರ ಗಂಡನು ನೀನೆ ಅಹುದೆಂದು
ಮೆಚ್ಚಿ ಬಸವರಾಜ ನುಡಿದ ॥೨೬॥

ಪರಸಮಯಕೆ ಪ್ರಳಯಾಂತಕನಹುದೆಂದು
ಶರಣರೆಲ್ಲರು ಹೊಗಳುತಲಿ
ಪರಿಪರಿ ಉಡುಗೊರೆಗಳ ಪೊದ್ದಿಸಿದರಾಗ
ಇತ್ತರ ಬೆಟ್ಟದಂದಲಿ ॥೨೭॥

ಊರೊಳಗಣ ಪ್ರಜೆಯೆಲ್ಲರು ಹರುಷದಿ
ಆರತಿಗಳ ಪಿಡಿಕೊಂಡು
ಕಾರುಣ್ಯನಿಧಿ ತ್ರಿಪುರಾಂತಕನಲ್ಲಿಹ
ಧೀರ ಶಾಂತನಿಗೆ ಎತ್ತಿದರು ॥೨೮॥

ಸತ್ಯವುಳ್ಳವನೆಂದು ಬಸವೇಶ ಶಾಂತಯ್ಯನ
ಎತ್ತಿ ಮುದ್ದಾಡಿ ಪಣೆಯೊಳು
ಮತ್ತೆ ಭಸಿತವಿಟ್ಟು ಮಗನೆ ಬೇಕಾದುದ
ನಿತ್ತಪೆ ಕೇಳುಕೇಳೆನುತ ॥೨೯॥

ಏನ ಕೇಳಲಿ ದೇವಾ ನಿಮ್ಮ ಕಟಾಕ್ಷದಿ
ನಾನಾ ಭಾಗ್ಯ ಸಂಪದವು
ತಾನೆ ಬರುತಲಿದೆ ತನಗೆ ತ್ರೈಭುವನದೊ
ಳೇನು ಇಲ್ಲ[ದು]ದ ಈ[ಯೆ]ಂದಾ ॥೩೦॥

ಕೊಟ್ಟುದ ಬೇಡಯೆಂಬುವರೆ ಮೂಜಗವೆಲ್ಲ
ಸೃಷ್ಟಿಯೊಳಧಿಕ ಶಾಂತಯ್ಯ[ನ್ಯ]
ಕೊಟ್ಟ ಮುಕ್ತಿಯನೀ[ಗ] ಖಟ್ವಾಂಗದರಭಕ್ತ
ರಟ್ಟುಮತವ ಪಾಲಿಸೆನಗೆ ॥೩೧॥

ಉತ್ತಮ ಶರಣರು ಶಾಂತಯ್ಯನ ಭಕ್ತಿಗೆ
ಮೆಚ್ಚಿ ಹರುಷವ ತಾಳಿದರು
ಮತ್ತೇನ ಬೇಡಿದೆ ಮಝುತೆ ಭಾಪುರೆಯೆಂದು
ಚಿತ್ತಜಾರಿಯ ಭಕ್ತ ನುಡಿದ ॥೩೨॥

ಲೋಕೋಪಕಾರಣ[ರೆ]ಂದೆನಿಸುವ
ಬೇಕೆಂಬ ರಟ್ಟ ಭಕ್ತರನು
ನೀ ಕರುಣಿಸಿ ರಟ್ಟಮತದವರೆನಿಸೆನ್ನ
ಈ ಕುಲದವರನುದ್ಧರಿಸು ॥೩೩॥

ಬಂದಿದೆ ಸಕಲ ಗೌಡರು ಎಲ್ಲ ತಮಗೊಂದು
ನಿಂದೆ ಬರಲು ತಮ್ಮ ಬಳಿಗೆ
ಇಂದಿಗವರ ಕರ್ಮ ಹಿಂಗಿತು ವರವಿತ್ತು
ಮುಂದೆ ಕೃಪೆಯು ಪಾಲಿಸೆಂದ ॥೩೪॥

ಗುರುವು ರೇವಣಸಿದ್ಧನೊರ ಪುತ್ರ ಶಾಂತಯ್ಯ
ಪರರಿಗೆ ಒಡಲಾದನೆಂದು
ತರಿಸಿದ ಭಸಿತ ವೀಳ್ಯಂಗಳ ಬೇಗದಿ
ಕರೆಸಿದ ಮತದ ಕುಲವನು ॥೩೫॥

ದಿಕ್ಕುದಿಕ್ಕಿನ ಕುಲದವರೆಲ್ಲ ಬಂದರು
ಅಕ್ಕರಿಂದಲಿ ಹಾಲುಮೊಸರ
ಲೆಕ್ಕವಿಲ್ಲದ ಕಂಬಿಗಳ ತಂದಿಳುಹಲು
ನಕ್ಕನು ಬಸವರಾಜೇಂದ್ರ ॥೩೬॥

ತರಿಸಿದ ಬಸವ ನಾಣ್ಯದ ಉಡುಗೊರೆ ಸಹ
ತರಿಸಿಕೊಟ್ಟನು ಉಡುಗೊರೆಯ

ಹರಸಿ ಹೊದ್ದಿಸಿ ಭಸಿತವನಿಟ್ಟು ಸುಖದಿಂದ
ಇರಿ ಹಾಲಮತದವರೆನಿಸಿ ॥೩೭॥

ಹಾಲುಮತದ ಕುಲದವರ್ಗೆಲ್ಲ ಶಾಂತಯ್ಯ
ಲೋಲ ನೀನೇ ಗುರುವಾಗಿ
ಭೂಲೋಕದೊಳು ಕೀರ್ತಿವಂತನೆನಿಸಿಕೊಂಡೆ
ಮೇಲಾಗಿ ಕುಲವನುದ್ಧರಿಸಿ ॥೩೮॥

ಅರಿಬಿರಿದಿಲಿ ಬಂದು ಪಡೆದೆ ಮಕ್ಕಳನೆಂದು
ಪರಶಿವ ಬಸವಣ್ಣ ನುಡಿದ
ಕ್ಷೀರಕುಲಕೆ ನೀನು ಒಡೆಯನಾಗಿರುಯೆಂದು
ಹರಸಿಯಿಟ್ಟನು ಭಸಿತವನು ॥೩೯॥

ಕುಲಕೆ ದೊಡ್ಡವನಲ್ಲ ಕುಲಕೆ ಮೀರಿದೊನಲ್ಲ
ಕುಲಕಿಂತ ಅಧಿಕ ತಾನಲ್ಲ
ಕುಲವುಯೆಂಬುದು ತನ್ನ ಛಲ ಬಿರಿದೆನುತಲಿ
ಕುಲವನೆತ್ತಿದನು ಶಾಂತಯ್ಯ ॥೪೦॥

ಸತ್ಯಶರಣರೊಂದುಗೂಡಿ ಪಣ್ಣಲಗಳ
ಅರ್ತಿಯಿಂದಲಿ ತಾವು ಸವಿದು
ಮತ್ತೆ ಹೊಲೋಕುಳಿಯೊಳಗಾಡುತಿರ್ದರು
ಭಕ್ತರು ಜಯಜಯವೆನುತ ॥೪೧॥

ಬಿರಿದಿಗೆ ಹೋರಾಡಿ ಶರಣ ಶಾಂತಯ್ಯನು
ಕರುಣದಿ ಪಡೆದ ಮಕ್ಕಳನು
ಗುರುವೀತ ನಮಗೆ ಶಾಂತಯ್ಯನೆಂದೆನುತಲಿ
ಚರಣಕೆರಗೆ ಹಾಲಕುಲರು ॥೪೨॥

ಎರಗಿದ ಗೌಡರನೆಬ್ಬಿಸಿ ಶಾಂತಯ್ಯ
ಭರದಿಂದಲವರ ಸತ್ಕರಿಸೆ
ಎರಗಿ ಬಸವಗೆ ಬೇಡಿಕೊಂಡರು ನಮ್ಮ ಕುಲಕೆ
ಗುರುತು ಏನೋ ಗುರುವೆ ॥೪೩॥

ಆಡುತ್ತ ಶರಣರು ನೋಡುತ್ತ ದಂಡೇಶ
ಕೂಡೆ ಉಡುಗೊರೆಯ ತರಿಸಿದನು
ನಾಡಾನಾಡ ಹಾಲಮತಕೆಯೆಲ್ಲ ಕೊಟ್ಟನು
ಕೂಡೆ ಶಾಲುಡುಗೊರೆಗಳನು ॥೪೪॥

ಕ್ಷೀರಕುಲಕೆ ಎನ್ನ ಒಡೆಯನ ಮಾಡಿದೆ
ಕುರುಹು ಯಾವುದು ಎನ್ನ ಗುರುವೆ
ಮೂರುಲೋಕಕೆ ಪ್ರಜ್ವಲಿತಹ ಕುಲವೆಂದು
ಊರೇಣಿನ ಕಂಥೆಯನಿತ್ತ ॥೪೫॥

ಮೂರೇಣಿನ ಕಂಥೆ ಅಧಿಕೆಂದು ಬಸವೇಶ
ಕ್ಷೀರಕುಲದ ಗೌಡರ್ಗಿತ್ತ
ಮಾರಾರಿಯ ಭಕ್ತ ಧೀರ ಶಾಂತನ ಕೂಡೆ
ಸಾರಿದ ಬಸವ ಭಕ್ತಿಯನು ॥೪೬॥

ಕಲ್ಲಿನೊಳಗೆ ಲಿಂಗ ಹುಟ್ಟಿದ ಮರಿಯಾದೆ
ಯಲ್ಲಿರಬೇಕು ಭಕ್ತಿಯೊಳು
ಜಲದೊಳು ತಾವರೆ ಹುಟ್ಟಿದ ಮರಿಯಾದೆ
ಅಲ್ಲಲ್ಲೆ ಪೂಜ್ಯುಂಟು ನಿಮಗೆ ॥೪೭॥

ಬಸವಣ್ಣ ನುಡಿದ ವಾಕ್ಯವ ಕೇಳಿ ಶಾಂತಯ್ಯ
ವಸುಧೆಗೆ ಮೈಯನಿಕ್ಕಿದನು
ಅಸು ಹೋದ ತಗರಿಗೆ ನಿಮ್ಮ ಕೃಪೆಯು ಆಯ್ತು
ಚಿತ್ತವಿಟ್ಟವರು ಪೊಗಳಿದರು ॥೪೮॥

ಮದ್ದಳೆ ತಾಳ ದಂಡಿಗೆ ಮೂಜಗದೊಳು
ರುದ್ರವೀಣೆಯ ಧ್ವನಿಯಲ್ಲಿ
ಸಿದ್ಧ ರೇವಣ್ಣನ ವರಪುತ್ರನಹುದೆಂದು
ನಿರ್ಧರದೊಳು ಪೊಗಳಿದರು ॥೪೯॥

ಊದುವ ಬುರುಗ ತಿತ್ತಿರಿಯೆಂಬ ಹೆಗ್ಗಾಳೆ
ವಾದ್ಯದ ರಭಸ ಘೀಳಿಡಲು

ಊದುತ ಬಿರಿದ ಕೊಂಡಾಡಿಸಿಕೊಳುತಲಿ
ಬೀದಿಯೊಳಗೆ ಬರುತಿರಲು ॥೫೦॥

ನೆಗೆದು ಮಂಡಿಯ ಹೂಡಿ ಒಲೆವೊಲಿದಾಡುತ
ಅಗಣಿತ ಸಮಯದ ಗಂಡ
ಗಗನಮಣಿಯ ರಥ ನಿಲಿಸಿದೆ ದೇವನೆ
ಮುಗುಳಾಂಬರ ಭಕ್ತನಹುದೊ ॥೫೧॥

ಛಲದಂಕಮಲ್ಲ ದೂಷಕ ಪರವಾದಿಯ
ಗೆಲಬಂದ ಶರಭಭೇರುಂಡ
ಮಲೆತಗಣಿತ ಸಮಯದ ಗಂಡನೆನುತಲಿ
ಕಲಹ ಕೇತಯ್ಯ ಕೊಂಡಾಡೆ ॥೫೨॥

ಕೇತಾರ ಕಾಶಿ ಕಲ್ಯಾಣವು ವಿರೂಪಾಕ್ಷ
ಭೂತಳದೊಳಗೆ ಕೀರ್ತಿಯನು
ಹೋತ ಪವಾಡದ ಗೆದ್ದ ಶಾಂತಯ್ಯನು
ಈತನೆ ಎನುತ ನುಡಿವರು ॥೫೩॥

ಹಿಂದೆ ಪವಾಡವ ಮೆರೆದನೆಂಬುದಕೀಗ
ಮುಂದಕ್ಕೆ ಗುರುತೆಂದು ಪೇಳಿ
ನಂದೀಶನೆ ಗತಿಯೆನುತ ಕಲಕೇತಯ್ಯ
ಬಂದನೆಲ್ಲರಿಗೆ ಬೀಳ್ಕೊಟ್ಟು ॥೫೪॥

ಕಂಡೆನೆಂಬರು ಕಾಣೆನೆಂಬರು ಬಿರುದನು
ದಂಡೇಶ ಬಸವನಿತ್ತುದನು
ಲಂಡಪುಂಡರಿಗೆದೆಗೊಂತ ಗಂಟಲಗಾಣ
ಕಂಡಿರೆನ್ನುತ ಸಾರಿದನು ॥೫೫॥

ಶರಣರೆಲ್ಲರು ನೋಡುತಿರಲು ಶಾಂತಯ್ಯನ
ಗುರುತು ಇರಲಿಬೇಕು ಎನುತ
ಭರದಿಂದ ವಜ್ರಕಂಬವ ತಿವಿಯಲು ಆಗ
ಕರ ಮುಳುಗಲು ಕಂಬದೊಳಗ ॥೫೬॥

ಮಂಡೆಯನೊಲಿದು ಕಂಡಿರೆಯೆಂದು ಶರಣರು
ಕೊಂಡಾಡಿ ಶಂತಯ್ಯ ನಪಾಡೆ
ಖಡೆಂದುಧರಭಕ್ತ ಕಲಕೇತ ಬೇಡೆನೆ
ಮಂಡಿಸಿ ಪಿಡಿದನಾ ಕೋಡ ॥೫೭॥

ಪಿಡಿದು ಮೇಷನ ಕೋಡ ಕಲಕೇತ ಬ್ರಹ್ಮಯ್ಯ
ಮೃಡಹರ ಜಯಜಯಯೆನುತ
ಪೊಡವಿಯೊಳಿಪ್ಪ ಪವಾಡ ಮೆರೆವೆನೆಂದು
ಒಡನೊಜ್ರಕಂಬವ ತಿವಿದ ॥೫೮॥

ಹೇಮದ ಮಳೆಗರೆಯಿತು ವಜ್ರಗಂಭದಿ
ಭೂಮೀಶ ಬಿಜ್ಜಳ ನಡುಗೆ
ಸೋಮಶೇಖರ ಜಯಜಯವೆಂದು ಬಿಜ್ಜಳ
ಆ ಮಹಿಮರ ಪೊಗಳಿದ ॥೫೯॥

ಉತ್ತಮ ಶರಣರು ಶಾಂತಮುತ್ತಯ್ಯನ
ಎತ್ತಿ ಪುಷ್ಪಕದೊಳಗಿರಿಸಿ
ಮುತ್ತೈದೆರೆಲ್ಲರೂ ಆರತಿ ಪಿಡಿದಾಗ
ಎತ್ತಿದರ್ಜಯಜಯತೆನುತ ॥೬೦॥

ಕಲ್ಯಾಣದೊಳಗಣ ಎಲ್ಲ ಗಣಂಗಳು
ಮೆಲ್ಲಡಿಯಿಡುತಲಿ ಬರಲು
ಎಲ್ಲ ಪವಾಡಕ್ಕೆ ಅಧಿಕವಾಯಿತುಯೆಂದು
ಬಲ್ಲಿದ ಜನರು ಕೊಂಡಾಡೆ ॥೬೧॥

ಅಲ್ಲಯೆಂಬರ ಅಹುದೆಂಬವರ ಅಹು
ದಲ್ಲವೆಂಬೊರೆದೆಗೂಟ
ಬಲ್ಲಿದ ಬಸವರಾಜನು ಕೊಟ್ಟ ಬಿರಿದನು
ಕಲ್ಯಾಣದೊಳು ಮೆರೆಸುತಲಿ ॥೬೨॥

ಸರ್ವ ಬೀದಿಗಳೊಳು ಅಡಿಯಿಟ್ಟು ಬರುತಿರೆ
ಶರಣಭಕ್ತರ ಸ್ತೋಮದೊಡನೆ

ಹರುಷವಾಯಿತು ಇಲ್ಲಿ ಗೆದ್ದ ಪವಾಡವು
ಕೀರ್ತಿಯಾಯ್ತೆಂದು ಬಿಜ್ಜಳನು ॥೬೩॥

ನಿಲ್ಲದೆ ಶರಣರು ಶಾಂತಮುತ್ತಯ್ಯನ
ಉತ್ಸವ ಮಾಡೆ ಕಲ್ಯಾಣದಿ
ಎಲ್ಲ ಮುತ್ತೈದೆರಾರತಿಯ ತಂದೆತ್ತಲು
ಕಲಹಕೇತಯ್ಯ ಕೊಂಡಾಡುತಲಿ ॥೬೪॥

ಊರೊಳು ಮೆರವಣಿಗೆಯ ಮಾಡಿ ಶಾಂತಯನ
ಧೀರ ಬಿಜ್ಜಳನರಮನೆಗೆ
ಭೋರನೆ ಕರೆತಂದು ಉಡುಗೊರೆಗಳನಿತ್ತು
ಆರತಿಗಳನು ಎತ್ತಿದರು ॥೬೫॥

ಬಿರಿದಿನ ಡಂಗುರ ಸಾರಿತು ಪುರದೊಳು
ಶರಣರೆಲ್ಲರು ಜಯತೆನುತ
ಕರುಣಾಳು ಬಸವದಂಡೇಶಗೆ ಶರಣೆಂದು
ಹರಭಕ್ತ ಶಾಂತಯ್ಯ ಬಂದ ॥೬೬॥

ಕಲ್ಯಾಣಪುರವನು ಹೊರಹೊಂಟು ಶಾಂತಯ್ಯ
ಎಲ್ಲ ಜಂಗಮಕೆರಗಿದನು
ನಿಲ್ಲದೆ ಕಳುಹಿಸಿಕೊಂಡಾಗ ಬರುವನೆಂ
ಬಲ್ಲಿಗಾದುದು ಏಳು ಸಂಧಿ ॥೬೭

ಅಂತು ಸಂಧಿ ೭ಕ್ಕಂ ಪದನು ೫೮೧ಕ್ಕಂ ಮಂಗಳಮಹಾ ಶ್ರೀ ಶ್ರೀ ಶ್ರೀ

❖❖

ಸಂಧಿ : ಎಂಟು

*ವೇದಶಾಸ್ತ್ರಗಳಿಗೆ ನಿಲುಕದೆಯಿರುತಿಹ
ಆದಿಮೂರುತಿ ಪರಶಿವನ
ಪಾದವೆ ಗತಿಯೆಂದು ಪೇಳ್ದನೀ ಕೃತಿಯ ವಿ
ನೋದದಿ ಕೇಳಿ ಸಜ್ಜನರು ॥೧॥

ಭಕ್ತಿಯ ಡಂಗುರ ಸಾರಿತು ಪುರೊದಳು
ಚಿತ್ತಜಾರಿಯ ಭಕ್ತ ನುಡಿ[ಯೆ]
ಉತ್ತಮ ಶರಣರು ಊರಿಗೈದಿದ
ವಿಸ್ತರಿಸುವೆನು ಈ ಕಥೆಯ ॥೨॥

ಕಲ್ಯಾಣಪುರದಿಂದ ಹೊರಹೊಂಟ ಶಾಂತಯ್ಯ
ಎಲ್ಲ ಕುಲದ ಹಾಲರುಗಳಾ
ಮೆಲ್ಲನೆ ಬನ್ನಿ ಬಳಲದಿರಿಯೆನುತಲಿ
ನಿಲ್ಲದೆ ತಾನಡಿಯಿಟ್ಟ ॥೩॥

ಬರುತಿರೆ ಬಲು ಬೇಸಗೆಯಿಂದ ಸೆಕೆದೋರೆ
ತರುಸಾಲು ಮರದ ತಂಪಿನೊಳು
ನೆರೆತಂಗಾಳಿ ಸೋಪಾನಗಳಲಿ ನಿಂದು
ಪರಿಮಳಗಳನು ಈಂಟುತಲಿ ॥೪॥

* ಶಾಂತಯ್ಯ ಕೈಲಾಸಕ್ಕೆ ಹೋದದ್ದು(ಅ)

ಕೊಳರ್ವಕ್ಕಿ ಹಂಸೆಗಳರಗಿಳಿ ಪಾರಿವಾಳ
ಎಳೆದುಂಬಿ ಮೊರೆವ ಕೋಗಿಲೆಯ
ಕಳರವ ಧ್ವನಿಯಿಂದ ತಂಗಾಳಿ ಬೀಸಲು
ಕುಳಿತು ನೋಡುತಲಿ ಐದಿದರು ॥೫॥

ಕಾಮನ ಬಳಘವು ಬಲವುಂಟು ವನದೊಳು
ತಾವರೆ ಕೊಳನ ನೋಡುತಲಿ
ಭಾವಜ ಪರಶಿವ ಬಾಳುಯೆಂದೆನುತಲಿ
ಆ ವನದೊಳು ಒಪ್ಪುತಿಹುದು ॥೬॥

ಮರುಗ ಮಲ್ಲಿಗೆ ಜಾಜಿ ಸುರಹೊನ್ನೆ ಪಾದರಿ
ಇರವಂತಿ ಮೊಲ್ಲೆ ಮಲ್ಲಿಗೆಯು
ಸರೋವರದೊಳು ಪೊಕ್ಕು ಸುಳಿವ ತಂಗಾಳಿಯ
ಪರಿಮಳದೊಳಗೆ ಐದಿದರು ॥೭॥

ನೆಲ್ಲಿ ನೇರಿಲು ಮಾವು ಸುರಹೊನ್ನೆ ಸಂಪಗೆ
ಬಿಲ್ವ ದ್ವಾರದ ಬಿದಿರುಗಳು
ಕಲ್ಲತ್ತಿ ಕರಿಯಾಲ ಕಕ್ಕೆಯು ಬಿಕ್ಕೆಯು
ಎಲ್ಲ ಮರಂಗಳೊಪ್ಪುತಿಹವು ॥೮॥

ದಾಳಿಂಬ ದ್ರಾಕ್ಷೆ ಖರ್ಜೂರ ಕೇತಕಿ ತೆಂಗು
ಈಳೆ ಹೇರೀಳೆ ನಿಂಬೆ ಹಲಸು
ಬಾಳೆ ಬಾವನ್ನ ಚಂದನ ಪೂಗವೃಕ್ಷವು
ಹೇಳಲಳವೆ ಕಂಪಿನಿರವ ॥೯॥

ನಂದನ ವನದೊಳು ನಲಿದು ಆಡುತಲಾಗ
ಮುಂದಿಹ ಅರವಂಟಿಗಯನು
ಅಂದವನೇನೆಂಬೆ ಮುಡಿವಾಳ ಲಾಮಂಚ
ದಿಂದ ಚಪ್ಪರ ಎಸೆದಿಹುದು ॥೧೦॥

ಬಳಲಿ ಬಂದವರಿಗೆ ತಳಿರು ಹಾಸಿಕೆ ಹಾಸಿ
ಎಳನೀರು ಕಬ್ಬು ಪಣ್ಫಲವ

ತಿಳಿಯ ಮಜ್ಜಿಗೆ ಮೊಸರು ಪಾನಂಗಳನುಯಿತ್ತು
ಬಿಳಿಯೆಲೆ ಅಡಿಕೆ ಕೆನೆಸುಣ್ಣ ॥೧೧॥

ಕಲ್ಯಾಣಪುರದಿ ಪವಾಡವ ಮೆರೆಯಲು
ನಮ್ಮ ಮನಸು ಸಂತಸವಾಯ್ತು
ಇಲ್ಲಿರುತಿಹ ಅರವಂಟಿಕೆಯನು ನೋಡಿ
ಇಲ್ಲಿ ಕಲ್ಯಾಣವೆಂದೆನುತಲಿ ॥೧೨॥

ಮೆಲ್ಲನೆ ಬಳಲಿಕೆಗಳ ಪರಿಹರಿಸಿಕೊಂ
ಡೆಲ್ಲರು ಪಥವಿಡಿದಾಗ
ನಿಲ್ಲದೆ ಬಂದರು ಸರವೂರ ಹೊರಪಾಳ್ಯ
ಅಲ್ಲಿರ್ಪ ನಂದನದೆಡೆಗೆ ॥೧೩॥

ಬಂದು ಶಾಂತಯ್ಯನು ತನ್ನ ಬಳಗಗೂಡಿ
ನಂದನ ಬನದೊಳು ಕುಳಿತ
ಮುಂದಾಗಿ ಬಂದ ವಾರ್ತೆಯನಾಗ ಪೇಳಲು
ಅಂದು ಕೇಳ್ದಳು ಸಂಗಮ್ಮಾಜಿ ॥೧೪॥

ಗೆದ್ದು ಬಂದರು ಪವಾಡವನೆಂದು ಪೇಳಲು
ಮುದ್ದು ಸಂಗಮ್ಮಾಜಿ ನಲಿದು
ಎದ್ದಳು ಎಡಬಲದವರ ಕರೆಸಿಕೊಳ್ಳು
ತಿರ್ದಳನೇಕ ಸಂಭ್ರಮದಿ ॥೧೫॥

ಆರತಿಗಳ ಗಿಂಡಿ ಕಳಶ ಕನ್ನಡಿಗಳ
ನೀರೆಯರೆಲ್ಲರು ಪಿಡಿದು
ಭೋರೆಂಬ ವಾದ್ಯ ಸಂಭ್ರಮದಿಂದ ನಡೆದಳು
ನಾರಿ ಸಂಗಮ್ಮಾಜಿ ಸಂತಸದಿ ॥೧೬॥

ಎದುರ್ಗೊಳ್ಳುವದಕೆ ಬರಲು ಕಂಡು ಶಾಂತಯ್ಯ
ಮದನಹರನೆ ಗತಿಯೆನುತ
ಮುದದಿಂದ ಪುರಜನ ಪರಿಜನ ಸಹ ಬಂದು
ಎದುರು ಬಿನ್ನಹವ ಮಾಡಿದರು ॥೧೭॥

ಬಿರಿದುಳ್ಳ ಮೇಷ ಪವಾಡವ ಗೆದ್ದೀಗ
ಧರಣಿಯೊಳಗೆ ಕ್ಷೀರಕುಲ[ವು]
ಸ್ಥಿರಕೀರ್ತಿ ಪಡೆ[ಯೆ] ಎಲ್ಲರನುಳುಹಿದೆಯೆಮದು
ಗುರುವಿನ ಕೃಪೆ ನಿಮಗಾಯ್ತು ॥೧೮॥

ಎಂದು ಮಾತಾಡುತ ಹಿರಿಯರಿಗೊಂದಿಸಿ
ಅಂದಣವೇರಿ ಆಕ್ಷಣದಿ
ಮುಂದೆ ನಡಸಿಕೊಂಡು ಬರುತಾಗ ಕಂಡರು
ಚೆಂದದಿ ಸರಪೂರ ಪುರವ ॥೧೯॥

ಸರವೂರ ಹೊರಪಾಳ್ಯವಿರುವ ಶೃಂಗಾರವ
ಒರೆದು ಬಣ್ಣಿಸಲಳವಲ್ಲ
ವರ ಶಶಿಮಣಿಯ ಗತಿ ಕರುವಿಟ್ಟಂಥ
ಶರಣರು ನೋಡುತ್ತೈದಿದರು ॥೨೦॥

ಅಗಳು ಆಳ್ವೇರಿಯು ಅಗಣಿತ ಸರವೂರು
ಮುಗುಳಾಂಬರನ ಜರಿವಂತೆ
ಮುಗಿಲಟ್ಟಣೆಗಳು ಡೆಂಕಣಿ ಪೇರ್ಗುಂಡು
ಗಗನವ ತುಡುಕುತಲಿಹವು ॥೨೧॥

ಅಗಳೊಳಗಿರುವ ನೀರಾನೆ ಮೊಸಳೆಗಳ
ಬಗೆಯ ನೋಡುತ ಹುಲಿಮುಖದ
ಸೊಗಸ ಕಂಡವರು ಹಿಗ್ಗುತ ಮುಂದಿರುವ ಹೊ
ನ್ನಗಸೆಯ ಕಂಡು ಹಿಗ್ಗಿದರು ॥೨೨॥

ಮುಂಕೊಂಡು ಬರುವ ವೈರಿಗಳ ಕಣ್ಮನಕಿದು
ಲಂಕೆಯೆಂದೆನುತಲೊಪ್ಪಿದುದು ॥೨೩॥

ಕೋಟೆಕೊತ್ತಲ ತೆನೆಗಳ ಕಂಡು ಇದರ ಕೈ
ಮಾಟಕ್ಕೆ ಸಮನಾವುದೆನುತ
ಮೀಟಾದ ಆಳ್ವೇರಿ ಮಕರದಿಬ್ಬಿಯ ನೋಡಿ
ದಾಟಿ ಮುಂದಕೆ ಅಡಿಯಿಡಲು ॥೨೪॥

ಚಲುವಿಕೆಯಾದುದು ಕೋಟೆಯ ಶೃಂಗಾರ
ಛಲವಿಲ್ಲದಂತೆ ಮಾಡಿದನು
ನಲವಿಂದಂಬಕನುಜೋದ್ಭವನ ಕಳುಹಿಸಿದನೊ
ಬಲವಂತ ವಿದ್ಯದವರ ॥೨೫॥

ಅನಿತರೊಳಗೆ ಸತಿಯಿರ್ವರು ಸಹಿತಲಿ
ಇನಿತು ಬೇಗದಿ ವಿದ್ಯದವರು
ಘನಘನವಾಗಿ ಬಂದಾಗ ತ್ರಿಶೂಲಿಯ
ಮನೆಗೆ ಕಳುಹಿಸಿದರು ಆಗ ॥೨೬॥

ಐವರು ಕರವೆರೆದರೊ ಏನೋ ಕೋಟೆಯ
ಐಮುಖದವನ ಪಾಡುತಲಿ
ಅಯ್ಯನೆ ನಾನುಸುರುವೆನೆಂದು ವಿಶ್ವಕರ್ಮ
ಮಿಗಿಲೊಂದ ರೂಪ ರಚಿಸಿದ ॥೨೭॥

ಮೋಡಗತ್ತಲೆಯಂತೆ ಮೂಗುಮೋರೆಯ ಮಾಡಿ
ನೋಡಿದ ನಮ್ಮನು ಕರೆದು
ಕೂಡೆ ನಗುತ ಅಜ ಬಾರೆಂದು ಕರೆದನೊ
ಕೂಡೆ ಪಲ್ಗಿರಿದು ನಗುವರು ॥೨೮॥

ಬಾಗಿಲವಾಡದಿ ಅಜ ಕರವೆರೆದನೊ
ಮಿಗಿಲೊಂದು ರೂಪ ರಚಿಸಿದನು
ಲಾಗಿಸುವದು ವಿಶ್ವಕರ್ಮನ ಕಂಡರೆ
ಮಾಗಿಯ ಕೋಗಿಲಂದದಲಿ ॥೨೯॥

ಹೆಣ್ಣು ರೂಪನೆ ಮಾಡಿ ಹೆಣ್ಣೊಂದ ರಚಿಸಿದ
ಕಣ್ಣು ಹತ್ತಿಹ ತೊಪ್ಪೆಯಂತೆ
ಬಣ್ಣಿಸಿ ಕರೆದು ಬಾಹುಕ ಬಾರೆಂದು
ನುಣ್ಣಿಸಿ ತುರುಬ ಹಾಕುತಲಿ ॥೩೦॥

ಸುಮ್ಮಾನದಲಿ ಕಮ್ಮಗೋಲನು ರಚಿಸಿದ
ವರ್ಮದೊಳಗೆ ಇರುಯೆಂದು

ಗಮ್ಮನೆ ನೋಡುತ ಕೆಂಬಲ್ಲ ಕೆರೆಯುತ
ನಿಂದು ಇರುವ ಪ್ರತಿಮೆಗಳು ॥೩೧॥

ಉಬ್ಬಿನ ಕರುವಾಡ ಅಂಗಜ ಸಹವಾಗಿ
ಉಬ್ಬಿ ಕರೆದನೇನೊ ನಮ್ಮ
ಒಬ್ಬನೆ ಆದೆಯೊ ನಾನು ಬರಲುಯೆಂದು
ಅಬ್ಬರದೊಳಗಿಹ ಬೊಂಬೆ ॥೩೨॥

ಬಾಗಿಲವಾಡದಿ ಚಿತ್ರಿಕ ರಚಿಸಿದ
ಮೂಗ ಕೊಯ್ದು ಡೊಂಕಗಾಲ
ಲಂಗಿಸಿ ನೋಳ್ಪರ ನಗಿಸುವಂದದಿ ನಿಂದು
ಬಂದವರನು ನೋಡುತಿಹವು ॥೩೩॥

ಅಲ್ಲಿಗಲ್ಲಿಗೆ ನಿಂದು ಇರುವ ಬೊಂಬೊಗಳಾಗ
ಹಲ್ಲುಗಿರಿದು ನಿಂತುಕೊಂಡು
ಎಲ್ಲರ ನೋಡಿ ನಗುತ ವಿಶ್ವಕರ್ಮನು
ಎಲ್ಲಿ ಕಲಿತ ವಿದ್ಯೆಗಳ ॥೩೪॥

ಕೋಟೆಯ ಶೃಂಗಾರ ನಾಟಕದೊಳಗಿಲ್ಲ
ಪಾಟಿಸಿದನೊ ವಿಶ್ವಮಯನು
ನೋಟಕರಿಗೆ ಅಳವಲ್ಲಯೆನುತ ಮುಂದೆ
ದಾಟಿ ಬಂದರು ಜನರೆಲ್ಲ ॥೩೫॥

ನಡೆಮಡಿಗಳ ಹಾಸಿ ಗುಡಿತೋರಣವ ಕಟ್ಟಿ
ಎಡೆಯೆಡೆಗಾರತಿವಿಡಿದು
ಹೊಡೆವ ನಿಸ್ಸಾಳ ತಮ್ಮಟಿ ಗಿಡಿಬಿಡಿಯಿಂ
ಮೃಡನ ಓಲಗಕೆ ಬಂದರು ॥೩೬॥

ವೀರ ಜಂಗಮಕೆ ರೇವಣಸಿದ್ಧಗೊಂದಿಸಿ
ಧೀರ ಶಾಂತನು ಹರುಷದಲಿ
ಕ್ಷೀರಕುಲಕೆ ಪಡಿಬೀಡಾರ ಮಾಡೆಂದು
ಮಾರಾರಿ ಶರಣ ನೇಮಿಸಿದ ॥೩೭॥

ತುಂಬಿತು ಸರವೂರ ಇಂಬಿಲ್ಲವೆನುತಲಿ
ಅಂಬಿಕೆ ರಮಣನಾಜ್ಞೆಯೊಳು
ಶಂಭು ರೇವಣಂಗೆ ಶರಣೆಂದು ದೇವಾಲ್ಯ
ತುಂಬಿ ಕುಳ್ಳಿರ್ದರರ್ತಿಯಿಲ ॥೩೮॥

ಪಡಿಬೀಡಾರವ ಮಾಡಿ ಕಡುಗಲಿ ಶರಣರು
ಹೊಡೆವ ವಾದ್ಯದ ರಭಸದಲಿ
ಬಿಡದೆ ಕೂಗುವ ಕಾಳೆ ಶಂಖಿನ ಧ್ವನಿಯಿಂದ
ಒಡೆಯ ಜಂಗಮ ತೆರಳಿದರು ॥೩೯॥

ಸೂರ್ಯವೀಧಿಗಳೋಳು ನಾರಿಯರೈತಂದು
ಮಾರಹರನ ಶರಣ[ನಿ]ಗೆ
ಕ್ಷೀರಕುಲವ ಜಗವರಿಕೆಗೆ ತಂದೆಂದು
ಹಾರೈಸೆ ಸರವೂರ ಪ್ರಜೆಯು ॥೪೦॥

ಬಂದ ಗಣಂಗಳು ರೇವಣ್ಣನೋಲಗ
ಅಂದವ ನೋಡಿ ಬಳಸುತಲಿ
ಕಂದುಗೊರಳನ ಶರಣ ಚಿತ್ರಿಕನ
ಅಂದವ ನೋಡುತ್ತೈದಿದರು ॥೪೧॥

ಬಂದ ಶರಣರಿಗೆ ವಂದಿಸಿ ಸಂಗಮ್ಮ
ತಂದು ಪಾದಾಚನೆಗೈದು
ಬಂಧು ಬಳಗದ ಭಾಗ್ಯದ ನಿಧಿ ಬಳಲಿದಿ
ರೆಂದೆರಗಿದಳಡಿಗಡಿಗೆ ॥೪೨॥

ಲಕ್ಷ್ಯದ ಮೇಲೆ ತೊಂಬತ್ತಾರು ಸಾವಿರ
ಮುಕ್ಕಣ್ಣ ಶಿವನ ಜಂಗಮವು
ಅಕ್ಕರಿಂದಲಿ ಕುಳಿತಿರೆ ಉಳಿದವರ್ಗಳ
ಲೆಕ್ಕ ಮಾಡುವರಳವಲ್ಲ ॥೪೩॥

ಮಾರಾರಿಯ ದ್ವಾರವಟ್ಟವನೊಳ ಪೊಕ್ಕು
ಭೋರೆಂದು ಶಂಖ[ವು] ಪರಿ[ಯೆ]

ವಾರಿಜಸಖನೊಪ್ಪುವಂತಾಯ್ತೀ ಗದ್ದುಗೆ
ನಾರಿ ಹಾಕಿದಳು ಆಕ್ಷಣದಿ ॥೪೪॥

ರತ್ನಗದ್ದುಗೆ ಮೇಲೆ ಜಂಗಮಲಿಂಗವು
ಚಿತ್ತಜಾತಿಯ ನೆನೆವುತಲಿ
ಭಕ್ತರು ಭಾಗ್ಯದಿ ನಿಧಿ ಬಸವರಾಜ ಮು
ಹೂರ್ತ ಮಾಡಿ ಗದ್ದುಗೆಯೊಳು ॥೪೫॥

ಮುತ್ತು ಮಾಣಿಕ ನವರತ್ನ ಗದ್ದುಗೆಯಲ್ಲಿ
ಚಿತ್ತಜಾರಿಯ ಮಹಿಮರು
ಅರ್ತಿಯಿಂದಲಿ ಕುಳಿತಿರೆ ಶಿವಪೂಜೆಗೆ
ಜತ್ತಾಯತವ ಮಾಡಿದರು ॥೪೬॥

ಚಿನ್ನದ ಗಿಂಡಿ ರನ್ನದ ಮಜ್ಜನಸಾಲೆ
ಹೊನ್ನ ಕರಡಿಗೆಯೊಳು ಭಸಿತ
ಉನ್ನತ ಪರಿಮಳ ಒಡೆಯ[ರಿ]ಗೆ ಪುಷ್ಪವ
ಸಂಗಮ್ಮಾಜಿಯು ಇಳುಹಿದಳು ॥೪೭॥

ಲಿಂಗಾರ್ಚನೆ ಮಾಡಿ ಧೂಪದೀಪಂಗಳ
ಸಂಗಮ್ಮಾಜಿಯು ಮಡಗಿದಳು
ಮಂಗಳಮಯ ಹರಿವಾಣ ಬಟ್ಟಲನು ಗ
ಣಂಗಳಿಗೆಡೆಯ ಮಾಡಿದಳು ॥೪೮॥

ಹೇರೀಳೆ ನಿಂಬೆಯು ಸುತ್ತು ಹಣ್ಣುಗಳನು
ಶಾರ ಗೆಣಸು ಮಾಗಾಯಿಯ
ಿರುಬು ನೆಲ್ಲಿಯಹಿಂಡಿ ಬೆಲವತ್ತದ್ಹಣ್ಣನು
ೀರೆ ಸಂಗಾಜಿ ನೀಡಿದಳು ॥೪೯॥

ದನೆಯ ಬಜ್ಜಿ ಹಾಗಲು ಕೋಡಬಳೆಯು
ದುವಾದ ನುಗ್ಗಿ ಹೀರೆಗಳ
ಗೊಳಿಸಿದ ಶಾಕವನು ತಂದು ಬಡಿಸಿದ
ದಿ ಸಂಗಾಜಮ್ಮ ಶರಣೆ ॥೫೦॥

ಸಂಡಿಗೆ ಹಪ್ಪಳ ಸಂಬಾರ ಕಡಲೆಯ
ಉಂಡೆ ಎಳ್ಳುಂಡೆ ಚಕ್ಕುಲಿಯ
ಮಂಡಿಗೆ ಬೀಸುಹೂರಿಗೆ ಉದ್ದಿನೊಡೆ ಸುಖಿ
ನುಂಡೆಯ ಎಡೆಯ ಮಾಡಿದಳು ॥೫೧॥

ಸಣ್ಣಕ್ಕಿವಾಗರ ಬೆಣ್ಣೆ ಕಾಸಿದ ತುಪ್ಪ
ಬಣ್ಣದೋರುವ ತೋಯ ಪಳಿದ್ಯಾ
ಅಣ್ಣಿ ಹಾಲೊಳು ಗಟ್ಟಿ ಪಾಯಸವನು ತಂದು
ಉಣ್ಣೆಂದು ಬಡಿಸುತಲಿಹಳು ॥೫೨॥

ಕಂಬಿಕಂಬಿಯೊಳು ಕಾವಡಿ ಹಾಲು [ಹು]ಲಸು
ತುಂಬಿತುಂಬಿಯೆ ಕೊಡುತಿರಲು
ಉಂಬೋತನಕ ಬಾಯಿ ಆರಲು ನೊರೆವಾಲ
ಕೊಂಬೋ ಸಂಭ್ರಮವನೇನೆಂಬೆ ॥೫೩॥

ತುಪ್ಪ ಹಾಲೋಕುಳಿಯಿಂದ ಗಣಂಗಳು
ತೊಪ್ಪನೆ ತೊಯ್ದು ಸಂಭ್ರಮದಿ
ತೃಪ್ತಿಯಾಗುತ ಜಂಗಮರುಂಡು ಹರಸಿತು
ಸರ್ಪಭೂಷಣ ಶರಣೆನುತ ॥೫೪॥

ಹಾಲವೋಕುಳಿಯನು ಆಡಿ ಜಂಗಮರೆಲ್ಲ
ಹಾಲುಕುಲದವರೆಂದು ಕರೆದು
ಹಾಲಿಂದ ಸಿರಿಯು ಸಂಪದವೆಂದು ಹರಸುತ
ಹಾಲಿಂ ಕೈಯ ತೊಳೆದರು ॥೫೫॥

ಆರೋಗಣೆಯ ಮಾಡಿ ವೀರಜಂಗಮರೆಲ್ಲ
ಭೋರನೆ ಕ್ರಮುಕ ಪರ್ಣವನು
ವಾರಿಜಮುಖಿ ನಾಣ್ಯವಸ್ತ್ರ ದೇವಾಂಗವ
ಶರಣರಿಗುಡುಗೊರೆ ಮಾಡೆ ॥೫೬॥

ಊಟವ ಮಾಡಿ ಸಂತಸದಿಂದ ಕರ್ಪೂರ
ಗೂಡಿ ತಾಂಬೂಲಗಳನಿತ್ತು
ಮೀಟಾದ ಉಡುಗೊರೆಯನು ತಂದು ಹಾಲರಿಗೆ
ನೀಟಾಗಿ ತೊಡಿಸಿದರಾಗ ॥೫೭॥

ಉಡುಗೊರೆಗಳನಿತ್ತು ವೀರಜಂಗಮಕಾಗ
ಪೊಡಮಡೆ ಶಾಂತ ಸಂಗಮ್ಮ
ಒಡೆಯ ರೇವಣಸಿದ್ಧ ಅಂಗದೊಳಿರಲೆಂದು
ಪಿಡಿದು ಭಸಿತ ಧರಿಸಿದರು ॥೫೮॥

ಹರಸಿ ವಿಭೂತಿಯ ಧರಿಸಿ ಜಂಗಮರೆಲ್ಲ
ಕರವ ಪಿಡಿದು ಶಾಂತಯ್ಯನನು
ಧರಣಿಯೊಳಿತಿರ್ಪ ಕಾಲಕುಲದೋರಿಗೆ
ಕರುಣದಿ ಒಡೆಯನಾಗಯ್ಯ ॥೫೯॥

ನಿಮ್ಮ ಕುಲಕೆ ಗುರುವಾಗಿ ಸ್ಥಿರಕಾಲ
ಸುಮ್ಮಾನದಲಿ ಬಾಳುಯೆಂದು
ನಿರ್ಮಲ ಹೃದಯ ಬಸವರಾಜ ಹರಕೆಯ
ಕೊಟ್ಟು ಕಲ್ಯಾಣಕ್ಕೆ ನಡೆಯೆ ॥೬೦॥

ಚಿಕ್ಕಶಾಂತಯ್ಯ ಸಂಗಮ್ಮನಮರ್ದಪ್ಪುತ
ವರ ಶಾಂತಮುತ್ತಯನ ಕೊಟ್ಟು
ಕ್ಷೀರಕುಲದೋರ್ಗ್ಗೆಲ್ಲ ಒಡೆಯನೆ ನೀನೆಂದು
ಹರಿಸಿಯಿಟ್ಟರು ಭಸಿತವನು ॥೬೧॥

ಹಾಲುಕುಲದ ಹಾಲರೊಡೆಯ ಶಾಂತಯ್ಯಗೆ
ಸಾಲೋಕ್ಯ ಪದವಿಯನಿತ್ತು
ಲೋಲ ರೇವಣಸಿದ್ಧನೊಲುಮೆಯಾದುದು ಕಂಡು
ಮೇಲೆ ಗಣಂಗಳೈದಿದರು ॥೬೨॥

ಭಾಪುರೆ ಶರಣನೆ ಭಾಪುಭಾಪೆನುತಲಿ
ದೀಪಕರ್ಪೂರ ಬೆರೆದಂತೆ
ಕಾಪಾಲಧರ ಶಂಕರ ಉಘೆ ಉಘೆಯೆನುತ
ಲಿ ಪಾರ್ವತಿಯರಸನು ಪೊಗಳೆ ॥೬೩॥

ಕರಿಕಂಠನಂಘ್ರಿಯೊಳೆರಕವಾದನುಯೆಂದು
ಕರೆದವು ಪುಷ್ಪದ ಮಳೆಯು

ಸರ್ವಗಣಂಗಳು ಉಘೆಉಘೆಯೆನುತಲಿ
ಹೊರಟರು ಕಲ್ಯಾಣಪುರಕೆ ॥೬೪॥

ಉದ್ದುಗಿರಿಯ ಕೇತಗೌಡ ಹೆಗ್ಗೊಂಡ
ಬುದ್ಧಿವಂತನು ಮಲ್ಲಿಗೌಡ
ಮುದ್ದು ಮಳೆಯಖೇಡದ ಮಾದಿಗೊಂಡನು
ಇದ್ದವರೆಲ್ಲ ತೆರಳಿದರು ॥೬೫॥

ಗುರು ಗುರುತಿನ ಗೌಡರಿಗುಡುಗೊರೆಯಿತ್ತು
ಹಿರಿದುಪಚಾರವ ಮಾಡಿ
ಕರುಣವುಳ್ಳರು ಬಹುಕಷ್ಟಪಟ್ಟಿರಿಯೆಂದು
ತೆರಳೆಂದು ನೇಮವನಿತ್ತ ॥೬೬॥

ಈಶನೊಪ್ಪಿದನು ದೇವೇಶನೊಪ್ಪಿದ
ಶೇಷಭೂಷಣ ಸರವೂರ
ವಾಸ ರೇವಣಸಿದ್ಧ ಹಾಲು ಕುಲದರ್ಗೆ
ಲೇಸ ಪಾಲಿಪ ಅನುದಿನದಿ ॥೬೭॥

ಈ ಶರಣನ ಸಾಂಗತ್ಯವನೆಲ್ಲ ಕೇಳ್ದರ್ಗೆ ಪಾ
ನಾಶವಹುದು ದಿವಸದಲಿ
ಲೇಸ ಕೊಡುವ ಗಿರಿಜೇಶನೆಂಬಲ್ಲಿಗೆ ಕೈ
ಲಾಸದಿ ಸಂಧಿ ಸಂಪೂರ್ಣ ॥೬೮॥

ಅಂತು ಸಂಧಿ ೮ ಕ್ಕಂ ಪದನು ೬೪೯ಕ್ಕಂ ಮಂಗಳಮಹಾ ಶ್ರೀ ಶ್ರೀ ಶ್ರೀ

❖❖

* ಕ್ರೋಧನ ಸಂ. ಮಾಘ ಶುದ್ಧ ಬುಧವಾರ ರೇವಣ ಶಿದ್ಧೇಶ್ವರನ ಮಹಾತ್ಮೆಯು ಸಂಪೂರ್ಣ ಮಂಗಳಮಹಾಶ್ರೀ ಶ್ರೀ ಶ್ರೀ (ಅ).

ಅನುಬಂಧಗಳು

ತುರುವೇಕೆರೆ ತಾಮ್ರಶಾಸನ – ೧

ಪತ್ರ –೧
ಮುಂಭಾಗ

೧. ಶುಭಮಸ್ತು । ನಮಂಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇ । ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾ

೨. ಯ ಶಂಭುವೇ । ಸ್ವಸ್ತಿಶ್ರೀ ಜಯಾಭ್ಯುದಯ ಶಾಲಿವಾಹನ ಶಕವರ್ಷ ೧೪೮೦ನೆಯ ಆನಂದಸಂವತ್ಸರದ ಮಾರ್ಗ

೩. ಶಿರ ಬ।೭ಲು।ನ್ಯಯವಾಡಿದ ವಿವರಾ।ಶ್ರೀಮನ್ಮಂಡಲೇಶ್ವರ ರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪರತಾಪ

೪. ಶ್ರೀ ವೀರಸದಸಿವ ಮಹಾರಾಯರು ಶ್ರೀಮನ್ಮಂಡಲೇಶ್ವರ । ಶ್ರೀ ರಾಮರಾಜ್ಯೆಯದೇವರೂ ಮಹಾಅರಸುಗ

೫ ಳು ವೆಂಕಟಾದ್ರಿರಾಜದೇವರುಗಳೊ।ಯಿ ಯಿವರು ಮಹಾಅರಸುಗಳು ಸಮ್ಮುಖದಲ್ಲಿ । ಶಾಂತಮುತ್ತೈ

೬. ಯ್ಯನವರಿಗೆ । ಗುರುತನದಯ್ಯ ಉಂಟೆಂದು । ಬಿಂನಹ ಮಾಡಲಾಗಿ ಆ ಅರಸುಗಳೂ । ಬಿನಂಹ ಕೇಳಿ ಯಿ

೭. ಅರಸುಗಳ ಮುದ್ರೆ ಮನುಷ್ಯರು ದಳವಾಯಿ ಜಂಗಮಯ್ಯನ ಮುದ್ರೆ ಮನುಷ್ಯರಾ । ತಳವಾರ ತಿರುಮಲ್ಲೆಯನು

೮ ಶಾಂತಮುತ್ತೈಯನವರಿಗೆ । ಮಂಕನವರಿಗೆ । ನ್ಯಯವ ಕೇಳುವದಕ್ಕೆ । ರಾಯರ ಹಜರದಲ್ಲಿ ಕುಳಿತು । ಸಥಚ

೯. ರದವರು । ವಪ್ಪದವರು । ದೊರೆಮಠದ ಶಾಂತದೇವರು । ವಂಟೆತ್ತಿನಮಠದ ವಿರೂಪಾಕ್ಷದೇವರೂ । ಪೂಜೆ

೧೦. ಸ್ತಳದ ಚಿಕವಿರಣವಡೆರು । ಯಲ್ಲಪಂಣನಮಠದ ಸಂಗನಬಸವರಾಜದೇವರು। ಪಟಸ್ರಾಂದಯೆಲೆ ಅಂಗ

೧೧. ಡಿಯ । ಮಠದ ಕುರುಡಸಂಗದೇವರು । ದಣಾಯಕರ ಅಂಗಡಿಯ ಮಠದ ಪರುಟಳದ ದೇವರು । ಬುಕ್ಕಸಾಗರದ

೧೨. ಮಠದ ಕರಿಸಿದ್ಧದೇವರು ।ಪಂಚಮಠಕ್ಕೆ ವಳಗಾದಂತಾ । ಹಿರಿಯರುಗಳು ಪುರ್‍ರಾಣದ । ನಮಶಿವಾಯದವ

೧೩. ರೂ ಪುರಾಣದ ತಂಮಪಂಣದೇವರು । ಪುರಾಣದ ಬವಾನಿದೇವರು । ಪುರಾಣದ

೧೪. ಚೌಉಲ್ಲಿದೇವರು । ಪಟಣದ ಗಣಾಚಾರಿ ರಾಚೈಯವಡೆರು । ಅರಕೆರೆಯ ಅಮೋಗಿ । ಮಲ್ಲಂಣವಡೆರು । ಅರಸುಗ

೧೫. ಳ ಕೆಲಸಿ ತಿಂಮೊಜನು । ಸಟಿಪಟಣಸ್ವಾಮಿಗಳು ವರದ ರಾಚೈಯಂ ಪುನ ಹೊರಪೇಟೆಯ ಸೆಟಿ ಪಟ್ಟಣ

೧೬. ಸ್ವಾಮಿಗಳು । ರಾಮಚಂದ್ರಪುರದಗೆ । ಬಿರುದನು ಸ್ವಾಮಿಗಳು । ತಿರುಮಲದೇವಿಪೆಟೆ ಸೆಟಿಪಟ್ಟಣ

ಹಿಂಭಾಗ

೧೭. ಸ್ವಾಮಿಗಳು ಕೃಷ್ಣಪುರದಸೆಟಿ ಪಟ್ಟಣಸ್ವಾಮಿಗಳು । ಮಲೆವಂತಪೆಟೆಯ ಸೆಟಿಪಟ್ಟಣ ಸ್ವಾಮಿಗಳು । ಸಂಣಕಿಪೆಟೆಸೆಟಿ ಪಟ್ಟಣ

೧೮. ಸ್ವಾಮಿಗಳು । ಅಚ್ಯುತಪುರದಪೆಟೆ ಸೆಟಿಪಟ್ಟಣಸ್ವಾಮಿಗಳು।ಯಿವರೆಲ್ಲರು ಸಹವಾಗಿ। ಸಮಸ್ತ ಸಭೆಗಳು ಸಮ

೧೯. ಸ್ತರ ಸದಚರದಲ್ಲಿ ಕುಳಿತು ಧರ್ಮಧರ್ಮದಲ್ಲಿ ನ್ಯಯವಾಗಿಸಿ ವಿವರ। ಉಬೆಯವಾದಿಗಳ ಮಥ ಕೇಳಿದ ವಿವರ।

೨೦. ಮಂಕನವರು ಆಡಿದಮಾತು। ತಂಮ ಗುರು ಸೊನಲಾಪುರದ ಸಿಧರಾಮದೇವರು। ನಿಂಮ ಕುಲವವದುಯಂದು ಕೇಳಿದರೆ।

೨೧. ಮಂಕನವರು ಆಡಿದ ಮಾತು।ಕೋಡುಗಲ್ಲಿನ ಮೇಲೆ।ಹಂನೆರಡು ಸೂಜಿನಿಲಿಸಿ। ಅದರ ಮೇಲೆ ಹಂನೆರಡು ಅಡಿಕೆ ನಿಲಿಸಿ

೨೨. ಆ ಸೂಜಿಯ ಬಟ್ಟಲ ಮೇಲೆ ತಪಸು ಮಾಡಿದೆಉ।ಮಂಕನವರಿಗೆ ಕುಲವಿಲ್ಲಯಂದು ಮಂಕನವರು ಆಡಿದ

೨೩. ಮಾತು।ಆಮೇಲೆ ಸಭೆಸಮಸ್ತರು ಶಾಂತಮುತ್ತೈಯನವರು ಕೇಳಿದ ಮಾತು।ನಿಂಮ ಗುರು ಆರುಯಂದು ಕೇಳಲಾಗಿ।ಶಾಂ

೨೪. ತಮುತ್ತೈಯನವರು ಆಡಿದ ಮಾತು।ನಂಮ ಗುರು ರೇವಣಸಿಧೆಶ್ವರ ದೆವರೂ ನಿಂಮ ಕುಲವಾವುದುಯಂದು ಕೇಳಲಾಗಿ। ತಂ

೨೫. ಮ ಕುಡಿವೊಕಲ ಮಕ್ಕಳು । ಯಂದು ಶಾಂತಮುತ್ತೈಯನವರ । ಆದಲಗಿ । ನಿಂಮ ಕುಲವೆಂತು ಕುಡಿವಕ್ಕಲಿಗರುವೆಂ

೨೬. ದಿರಿ ನಿಂಮ ಗುರು ರೇವಣಸಿಧೆಶ್ವರ ದೆವರು ಹೆಗಾದರು । ನಮಗೆ ಲ್ಲಿಂಗದೀಕ್ಷೆ । ಹೆಗೆ ಆಯಿತುಯಂದು ಕೆಳಲಾಗಿ ಶಾಂತ ಮುತ್ತೈ

೨೭. ಯ್ಯನವರು ಆಡಿದ ಮಾತು । ನಂಮ ಗುರು ರೇವಣಸಿಧೆಶ್ವರ ದೆವರು ।
ಕಂಚಿಪಟ್ಟಣದಿಂದ ಕಾವಿಕಾಶಾಂಬುದಿದ । ಕಲಕೆ

೨೮. ರೆಯಂಬ ಹಟ್ಟಿಗೆ ಬಂದರು । ನಾ ಉಟ್ಟಿದ ಕಂಬಳಿಯ ಕುಳಿರ ಹಾಕಿದೆವು ।
ಸ್ವಾಮಿಯಲ್ಲಿಂದ ಚಿತ್ತೈಯಸಿದಿರಿಯಂದು ಕೆಳ

೨೯. ಲಾಗಿ । ಕಾಂಚಿ ಪಟ್ಟಣದಿಂದ ಬಂದೆಉ ಯನಲಾಗಿ । ಯೆನು ನಿಮಿತ್ತವಾಗಿ
ಬಂದಿರಿಯಂದು ಕೆಳಲಾಗಿ ಆ ರೆವಣಸಿಧೆಶ್ವರ ದೇವ

೩೦. ರು ಆಡಿದ ಮಾತು । ನೀನು ಚಂಬೆರಡು ಕಂಬಿಹಾಲ । ನಾಗರಿಗೆ ನಿದುತಯಿಥೆ ।
ನಿಉ ಹಾಲುಳವ ಮಗನೆಂದು ಹಾಲ ಸಲ್ಲಿಸೆ

೩೧. ಉಯಂದು । ಬಂದೆಪೆಯಂದು ಯನಲಾಗಿ । ಹಾಗೆಲೆಗಲ್ಲಿ । ಸಲಿಸಿಯಂದು ।
ಬಿಂನಹಂ ಮಾಡಿ ಮನೆಗೆ । ಬಂದೆಉ ಮನೆಗೆ ಬಂದ ಮ

೩೨. ಲೆವಾಲ ಸಲಿಸಿಯಂದು ಬಿಂನಹ ಮಾಡಲಾಗಿ । ನಿನಗೆ ಲಿಂಗಯಿಲ್ಲ । ನಾಉ
ಲಿಂಗಾಂಗಿಯಲ್ಲದ ಬರಿಯ ಹಾಲಲ ಸಲಿಸಲಾಗದು

೩೩. ಯಂದು ಯಂನಲಾಗಿ । ಸ್ವಾಮಿ ಹಾಲ ಸಲಿಸಿದರೆ ಸಾಕು ಯಂನಲಾಗಿ ಹಾಗೆ
ನಿಂಮ ಪಾದವ ಕರಣದಲ್ಲಿ ಲಿಂಗಧಾರಣೆ

೩೪. ಆದವುಯಂದು ಯಂನಲಾಗಿ । ನಂಮ ಸ್ತೀ ಪುರುಷರಿಗೆ ಲಿಂಗದೀಕ್ಷೆಕೊಡಿಯಂದೆ
ಯಂನಲಾಗಿ

ಪತ್ರ – ೨
ಮುಂಭಾಗ

೩೫. ಪಾದಪೂಜೆಗೆ । ಪುಷ್ಪವ ತಾ ಹೋಗುಯಂದು । ಯಂನಲಾಗಿ ಗಿಡಕೊಂದು ಪತ್ರೆಪುಷ್ಪ
ತಂದೆನುಯಂದು ಉನಲಾಗಿ ।

೩೬. ಯಿನ್ನೊಂದು ಪುಷ್ಪವ ತಂದಲ್ಲದೆ ವಪ್ಪನು । ಯೆಂದು ಯಂನಲಾಗಿ । ಯಿನ್ನೊಂದು
ಪುಷ್ಪವಾವುದು ಯಂನಲಾಗಿ । ಕರಿಮಲ್ಲಿಗೆಯ ಪುಷ್ಪ

೩೭. ವ ತಂದಲ್ಲದ ಎವೊಪ್ಪೆನುಯೆಂದು ಯೆನಲಾಗಿ । ಕರಿಮಲ್ಲಿಗೆ ಪುಷ್ಪ ಆಗಬೇಕುಯೆಂದು
ಯನಲಾಗಿ । ಯಿಂಡೆ ಶಾಂತ್ತೈಯನು ರೆವಣಸಿ

೩೮. ದ್ದೇಸ್ವರ ದೇವರ ಪಾದಪೂಜೆ ತಡದಿದೆಯೆಂದು । ಸಾಂತಯ್ಯನಗ ಸ್ವಾಮಿ ವಿಭೂತಿಯ
ಧರಿಸಿದರೆ । ಸ್ವಾಮಿಪಾದ ವಿಡರು । ತಂದನು । ಯಂದು

೩೯. ಯನಲಾಗಿ । ಹೋಗುಯಂದು ವಿಭೂತಿಯ ಧರಿಸಿದರು । ಆ ಮಾವ ಕರಿಮಲ್ಲಿಗೆಯ
ಪುಷ್ಪವವಿಲ್ಲದೆ ರೆವಣಸಿದ್ದೇಸ್ವರ ದೇವರ ಪಾ

೪೦. ದ ಪೂಜೆ ತಡದಿದೆಯಂದು । ಯಿಂಡೆ ಶಾಂತೈಯ ಕೊರಳಿಗೆ ಕಡ್ಗದನೊಲೆ ಕೊಂದು
ಕೂಗಲಾಗಿ । ಆ ದೇವಲೋಕದಿಂದ ಕರಿಯ

೪೧. ಮಲ್ಲಿಗೆಯ ಪುಷ್ಪದ ಸರಸರಗಳು ಯಿಳಿಯಲಾಗಿ । ಆ ಪುಷ್ಪದಿಂದ
ರೆವಣಸಿಧೆಸ್ವರದೇವರ ಪಾದಪೂಜೆಯಂ ಮಾ

೪೨. ಡಿ । ಸ್ವಾಮಿಯನು ಹಾಲಸಲಿಸಿಯಂದು ಬಿಂನಹವ ಮಾಡಿದರೆ । ಸರ್ವಗಣಗಳಲಿ ಸಲಿಸಿದೆಯನುತ ಅವರು । ಬಂದರು

೪೩. ಯಂದರು । ಯಂದು ಯನಲಾಗಿ । ಆ ಸಾಂತೈಯ್ಯನು ಬಿಂನಹ ಮಾಡಲಾಗಿ ನಂಮ ಸ್ರೀ ಪುರುಷರಿಗೆ ಯಿ ಬರಿ ಲಿಂಗದೀಕ್ಷೆ

೪೪. ಕೊಡರು । ಸ್ರೀಯಹ ದವಿಯ ಮಡಕೆಯಲಿ । ಕೊಡಪಾಲ ನಿಡಿಸಿಕೊಂಡು ಸಲಿಸಿದರು ಅಂದು ಮೊದಲು ನಂಮ ಗುರು

೪೫. ರೆವಣಸಿದೆಸ್ವರ ದೆವರು ಯಂದು ಶಾಂತಮುತ್ತೈಯ್ಯನವರು ಆಡಿದರು । ಆಡಲಾಗಿ ಸಭೆ ನಿವು ಕುರುಬರಿಗೆ ನಿವು ಗುರು

೪೬. ವಾದುದು ಹೇಗೆಯಂದು । ನಿಮಗೆ ಮುರುಹು । ಮುದ್ರೆ ಮೂರಡಿಯ ಕಂತೆ ಬಂದುದು ಹೆಗೆಯಂದು ಸಭೆ ಕೆಳಲಾಗಿ

೪೭. ಸಾಂತಮುತ್ತೈಯ್ಯನವರು ಆಡಿದ ಮಾತು । ಆ ಕಲ್ಯಾಣ ಪಟ್ಟಣದಲ್ಲಿ ಸತ್ತ ಕುರಿಯನು ಹೆರ್ತ್ತ ಮೊಸರನು ಯರ

೪೮. ಡನು ಕೂಡಿ । ವಂದುಕ ಗುಡಿಯಲಿರೆ ಕುರುಬರು ಮಾರಲಾಗಿ ಆ ಕಲ್ಯಾಣಪುರದ ಗಣಂಗಳು ಬಸವಂಣನು । ಹೆಂಗೆ ಸತ್ತ

೪೯. ಕುರಿಯನು ಹೆರ್ತ್ತ ಮೊಸರನು । ಹೀಗೆ ಕುರುಬರು ಮಾರಬಹುದೆಯಂದು ಕುರುಬರೆಯಳು ಬೆಲಯಿಂದ್ರ ಹೊರಹಾಲಾಗಿ

೫೦. ಆ ಕುರುಬರು ಬಂದು । ನಮಗೆದುರಾಗಿ ನಂಮ ಕ[ಲ್ಯಾಣ] ಪಟ್ಟಣದೊಳಗೆ । ಕಿನ್ನರಿ ಬ್ರಹ್ಮಯ್ಯನವರ ಲಿಂಗ ಮುದ್ರೆಯ ತಗರು ಸಾಯಲಾಗಿ

೫೧. ಸತ್ತ ತಗರ ಕಲ್ಯಾಣಕೆ ಹಿಡಿಸಿಕೊಂಡು ಹೋಗಿ । ಪುಷ್ಪಕದಲಿ ಕೊಂಡು ಹೋಗಿ ನಂಮ ಗುರು ರೆವಣಸಿಧೆಸ್ವರ ದೆವರು

೫೨. ಸ್ತುತಿಸಿ ಬಂದು ತೀರ್ಥ ಪ್ರಸಾದವನು ತಳಿದು । ಆ ಸತ್ತ ತಗರಿನ ಪ್ರಾಣವನು ಪಡೆವೆಲು ಆ ಕಲ್ಯಾಣದಲಿ ಪುರದ ಬ

೫೩. ಸವಂಣನು । ಮಹಾಮಹಂತು ಸರಣರು ಮೆಚಿ ಮುರುಹ ಮುದ್ರೆ ಮೂರಡಿಯ ಕಂತೆಯನು ಕೊಟ್ಟು ಹೊರ ಹಾ

೫೪. ಕಿದ ಕುರುಬರನು ಕುಲವನು ವಳಿಯಕೆ ತೆಗೆದುಕೊಂಡು ಕುರುಬರೆಲ್ಲರಿಗೂ ಗುರುವಾಗಿರಿಯಂದು

ಹಿಂಭಾಗ

೫೫. ಆ ಕುರುಬರಿಗೆ ವಿಭೂತಿಯ ಧರ್‍ರಿಸಿಕೊಂಡುಯಿರಿಯಂದರು । ಆ ಬಸವಂಣನು ಮಹಾಶರಣನು ಆರಭ್ಯ ಮೊದಲು ಕಂತೆ ಬಂ

೫೬. ದದು । ಗುರುವಾದ ವಿವರ ಬುದಿಗ । ಯಂದು ಶಾಂತಮುತ್ತೈಯ್ಯನವರು ಆಡಿದರು ಮಹಾಮಹಂತು ಮಂಕನವರ ಕ

೫೭. ರದು । ನಿಮಗೆ ಮುರುಹು ಮುದ್ರೆ ಮೂರಡಿ ಕಂತೆ ಬಂದುದು ಹೀಗೆ । ಕುರುಬರಿಗೆ ಗುರುವಾದುದು ಹಿರೆಯಂದು ಕೇಳಲಾಗಿ । ಮಂಕನವರು ಆ

೫೮. ಆಡಿದ ಮಾತು । ಕೊಡುಗಲ್ಲಿನ ಮೇಲೆ ಹಂನೆರಡು ಸೂಜಿನಿಲಿಸಿ । ಅದರ ಮೇಲೆ
ಹಂನೆರಡು ಬಟ್ಟಲಿರಿಸಿ । ಆ ಸೂಜಿ ಬಟ್ಟಲ ಮೇಲೆ ಹಂನೆರಡು
೫೯. ವರುಷ ತಪಸ ಮಾಡಲಾಗಿ । ಈಶ್ವರನು ಮೆಚ್ಚಿ ಪ್ರಸಂನವಾಗಿ ನಮಗೆ
ಮುರುಹ ಮುದ್ರೆ ಮೂರಡಿಯ ಕಂತೆಯನು ಕಒಟ್ಟು ಕುರ್ರುಬ
೬೦. ಗುಲಕೆ ಗುರುವಾಗಿರಿಯಂದು । ಮಂಕನವರು ಆಡಲಾಗಿ ಸಭೆ ಸಮಸ್ತರು । ನಿನು
ಯಿಂಥಾ ಪ್ರಸಂಗ ಸ ಆ ಯುಗದಲ್ಲಿ ನಡಿದೆಯಂದು ಸಭೆ ಕೆಳಲಾ
೬೧. ಗಿ ಯಿ ಕಲಿಯುಗದಲ್ಲಿ ಯಿಂದ್ರ ಉಗ್ರ ತಪಸ ಆರು ಮಾಡಿದವರುಯಿಲ್ಲ । ಪೂರ್ವದಲ್ಲಿ
ಬಸವ ಬಿಜ್ಜಣನ ಕಾಲದಲ್ಲಿ ತಪಸ ಮಾಡಿದೆಉ । ಎಂದು ಮಂಕ
೬೨. ನವರು ಆಡಲಾಗಿ । ಆ ಮಾತ ಕೆಳಿಸಿದಂತ ಹಿರಿಯರುಗಳು ಸಮಸ್ತ ಪ್ರಜೆಗಳು
ಸರ್ವರೆಲ್ಲ ಕೇಳಿ । ಆಗಮಗಳ ನೋಡಿ ಯಿ ಕಲಿಯುಗದಲಿ
೬೩. ಯಿಂತಾ ಉಗ್ರ ತಪಸನಾರು ಮಾಡಿದವರುಯಿಲ್ಲ ಪೂರ್ವದಲ್ಲಿ । ಪಾರ್ವತಿದೇವಿಯರು
ಯಂದೆಂದುಗೂ ಜನನ ಮರಣವಿಲ್ಲದಂತಾ ಪುರುಷ
೬೪. ನಾಗಬೇಕೆಂದು ಪರಮೇಶ್ವರನ ಕುಕ್ಕುಟ ತಪಸ ಮಾಡಿದಳು । ಯಿ ಕಲಿಯುಗದಲಿ
ಹೀಗೆ ಆರು ತಪಸ ಮಾಡಿದವರುಯಿಲ್ಲ । ಮಂಕನವರ
೬೫. ಮಾತು ಬಿಳುಸೋಲವೆಂದು ಕಟಕಿಯ ಮಾಡಿದರು । ನಿಂನ ಗುರು ಸೊಂನಲಾಪುರದ
ಸಿದ್ದರಾಮದೇವರಿಗೆ ತಂದೆತಾಯಿ ಉಂಟು ಫಲ ಉಂ
೬೬. ಟು ನಿಮಗೆ ತಂದೆತಾಯಿಯಿಲ್ಲ । ಕುಲವಿಲ್ಲ । ಯಿ ಯರಡು ಬಗೆಯಲ್ಲಿ ನಿಂನ
ಮಾತು ಸೊಲಯಂದು ಸಭೆಯಂ ನಲಗಿ । ಮಂಕನವರು ಆ
೬೭. ಡಿದ ಮಾತು ತಂಮ ಕುಲ ಸೆನೆ ಕುಲವೆಂದು ಆಡಲಾಗಿ । ಸೆನೆ ಕುಲಯಂದರೆ ಹಾಲು
ಕುಲವಾಯಿತ್ತು । ಮೊದಲು ಕುಲವಿಲ್ಲವೆಂದಗ ಯಂ
೬೮. ಗ ಕುಲವ ಹೇಳಿದೆ । ಯಿದರಿಂದ ಮರುಮಾತಿನಲು ನಿಂನ ಮಾತು ಸೊಲ ।ನಿನಗೆ
ಗುರುತನಕೆ ಕೆಲಸವಿಲ್ಲಯಂದು । ಸಭೆ ಯಂನಲಾಗಿ
೬೯. ಹಾಲಮತದ ಕುರುಬ ಕುಲಕೆ ಶಾಂತಮುತ್ತೈಯ್ಯನವರೆ ಗುರುಗಳು।ಮಂಕನಾದರೆ
ಗುರುತನಕೆ ಕಾರಣವಿಲ್ಲ ಎಂದು।ಸಭೆಯಲು
೭೦. ಕೂಡಿ ಸಮಸ್ತರು ಮಠಮನೆಯ ಹಿರಿಯರುಗಳು ಮಹಾಮಹಾಂತು ಸಮಸ್ತರೆಲ್ಲರು
। ಯಿ ಅರ್ಥಕೆ ವಂದು ವೊಲೆ ಬರಸಿ
೭೧. ಮುದ್ರೆ ಮನುಷ್ಯರ ಕೂಡೆ ಹೇಳಿ ಆ ವೊಲೆಯನು ಮುದ್ರೆಮನುಷ್ಯರ ಕೈಯ್ಯ ಕೊಡಲಾಗಿ
। ಆ ಮುದ್ರೆ ಮನುಷ್ಯರು ತಳವರು ಜಂಗ
೭೨. ಮಯ್ಯನ ಮುಂದೆ ಯೆಕವಾಗಿ । ಆ ವೊಲೆ ವೊದಿಸಿಕೊಂಡು ತಿರುಮಲರಾಜ್ಯೆಯ್ಯನವರ
ಮುಂದೆ । ಆ ಸಭೆ ಕಳುಹಿಸಿದ ವೊಲೆ
೭೩. ವೊದಿಸಿ ತೊರ್ಸ್ಸಿ ಬಿಂನಹಂ ಮಾಡಿ।ಆ ತಿರುಮಲರಾಜ್ಯೆಯ್ಯನವರು
ರಾಮರಾಜ್ಯೆಯ್ಯನವರು । ವೆಂಕಟಾದ್ರಿರಾಜ್ಯೆಯ್ಯನವರು

೭೪. ಯಿವರು ಅರಸುಗಳು ನ್ಯಾಯದಲ್ಲಿ।ಗೆದ್ದ ಶಾಂತಮುತ್ತೈಯ್ಯನವರಿಗೆ ವಿರೂಪಾಕ್ಷದೇವರ ಸೋಮವಾರದ ಬಾಗಿಲಲ್ಲಿ ಕುರುಬ

೭೫. ರೆಂಬ ಜಾತಿಗೆ ಮಂಕನವರಿಗೆ ಕಾರಣವಿಲ್ಲ । ಶಾಂತಮುತ್ತೈಯ್ಯನವರೆ ಗುರುಉಗಳೆಂದು । ಹೊಯಿಸಿಕೊಟ್ಟ ಸ್ತಿರಶಾಸನವು ಯಿದು

೭೬. ಅಲ್ಲಯೆಂದವರಿಗೆರವರವ ನರಕ ತಪ್ಪದು।ನ್ಯಾಯದಲಿ ಗೆದ್ದ ಶಾಂತಮುತ್ತೈಯ್ಯನವರಿಗೆ ಉಡುಗೊರೆಯ ಕೊಟ್ಟು ಕಳುಹಿಸಿದರು।ನ್ಯಾಯದ

೭೭. ಲಿ ಸೋತ ಮಂಕನವರ ಕಟ್ಟಿ ಸೆರೆ ಹಾಕಿ ಅಪರಾಜಿತಕೊಂಡಿರು । ಸೋತ ಕಟ್ಟಿ ಸೆರೆಯ ಬಿದ್ದ ಮಂಕನವರ ಹೆಸರು ಬೆಳಮಂಕ । ಪುರಾಣದ ಮಂಕ।

೭೮. ಗಾಯದ ಮಂಕ । ಕಣ್ಣೂರ ಮಂಕ । ಬಿಳಿಚೆಡ ಮಂಕ । ಹೆಗ್ಗೆರೆ ಮಂಕ । ಕಿಜ್ಜು ಮಂಕ । ....ಉ ಮಂಕ । ಅಸುಂಡಿ ಮಂಕ । ಅಂತು ೧೧

ತಾಮ್ರಪತ್ರ – ೩
ಮುಂಭಾಗ

೭೯. ಅಂತು ಸೆರೆಗೆ ಬಿಧವರು । ಅಪರಾಧವ ತತ ಹಂನೊಂದು ಮಂದಿ ಮಂಞನವರು । ಯಿ ಮಂಕನ

೮೦. ವರ ಸೋಲಿಸಿ ಗುರುತನಕೆ ಕಾರಣವಿಲ್ಲಯೆನಿಸಿ ಕಟ ಸೆರೆಗೆ ಹಾಕಿಸಿದ । ಸಾಂತಮುತ್ತೈಯ್ಯನವರ ಹೆ

೮೧. ಸರು ಸಿರ್ಪೆಯದೊಡತಮಿದೆ ವಡೆರು । ಕೊಳಲದ ತಮಿದೆ ವಡೆರು । ಹಿರಿಉರಸಿಯಪ್ರ

೮೨. ವಡೆರು ಕ। ಂದಿಕೆರೆ ಮಯಾದೊಸಿಧ ವಡೆರು । ರೆವಣ ವಡೆರು । ಅಗಳಿಗುರುವಪ ವಡೆರು

೮೩. ಬಸಪವಡೆರು ।ನಂದಿಪ ವಡೆರು । ಬುಧವಡೆರು । ಕೊಟೂರ ನಗಿದವಡೆರು। ಕಂಚವಡೆರು ಯಿ

೮೪. ವರು ಸಾಂತಮುತ್ತೈಯ್ಯನವರು । ಹಾಲುಮತದ ಕುರುಬರೆಂಬ ಜಾತಿಗೆ ಸಾಂತಮುತ್ತೈಯನೊರೆ ಮು

೮೫. ತೈಯನವರೆ ಗುರುಗಳು । ಯಂದು ರಾಯರು ಸಿಂಹ್ವಾಸನಪತಿಗಳು । ಹೊಯಿಸಿಕೊಟ್ಟ ಸ್ತಿರ

೮೬. ಶಾಸನಾಲು ।ಯಿದನು ಅಲ್ಲಯಂದವರಿಗೆ ರವರವ ನರಕ ತಪ್ಪದು । ಯಿಂತಿ ಸಾಸ

೮೭. ನದ ವಿವರಉ ಸಮಾಪ್ತ ಮಂಗಳ ಮಹಾಶ್ರೀಶ್ರೀಶ್ರೀ

ತುರುವೆಕೆರೆಯ ತಾಮ್ರ ಶಾಸನ – ೨*

ಪತ್ರ – ೧
ಮುಂಭಾಗ

೧. ಶ್ರೀಗಣಧಿಪತಾಯೆ ನಮಃ ॥ ಶ್ರೀ ಸ್ವ
೨. ಸ್ತಿರುಗ್ಗು ನಾಮ ಅದರ್ವಣಾತರ್ಗ್ಗತ ಶ್ರೀ ರುದ್ರ
೩. ಪಂಚಬ್ರಹ್ಮಸಿಕ ಸ್ವಕರ ಬ್ರಹದರಂಣ್ಯ
೪. ಕೈನ್ಯೆಷಜ ಬಾಲಾ ಕಾಲಾಗ್ನಿ ರುದ್ರ ಪ್ರಮುಖ
೫. ವಿವಶತೊಮುಖ ವಿಶ್ವಚಕ್ಷುರುತ ವಿಶ್ವ
೬. ದಿಕೊ ರುದ್ರ ಮಹಾರಷಿ ಸರ್ವೊಹ್ಯಶ ರುದ್ರ
೭. ತಸ್ಮೈ ರುದ್ರಯತೆ ಅಸುನಾಮೊ ರುದ್ರಮೈ
೮. ರುದ್ರ ಪಶುಪತಿ ಮಹಿಪತಿ ಸು ರುದ್ರ ಪ
೯. ರಮೇಶ್ವರ ಸಮಾದಿಗತ ಕಾಕ್ಷರಿಯರುಂ
೧೦. ಆದಯ್ಯರು ಯೀಶನ ಸರ್ವವಿದ್ಯನ ಯಿ
೧೧. ಯಿಶ್ವರ ಸರ್ವಭೂತನಲವಿಶ್ವತಃ ಮು
೧೨. ಖ ಸ್ಮ ಯಕೊ ದೇವ ಊರ್ದ ಬಾಹಹ್ಯರು
೧೩. ರುದ್ರ ತಾಸ್ಮಿ ರುದ್ರಯತೆಃ ॥ ಸ್ರೂನ್ವ ಕಿ
೧೪. ಸ್ಮಿತೊ ಪರಮನು ಕಿಂಚಿದ್ಯ ನಾಮಸ
೧೫. ಯೊ ಸಿವ ಯೆಕಾದ್ವಯಾಂ ಯಾ ಮಿತ್ಯೆ
೧೬. ದಿವ್ಯದ ವಚನ ಪ್ರತಿಪಾದಿತ। ಸ
೧೭. ಮಾಗ್ಯನ ಯೋಗ ಸಂಯುಕ್ತಾರುಂ
೧೮. ಯಮನಿಯಮ ಮದ್ಯಷ್ಜಂಗಯೋಗ ಸ
೧೯. ಯುಕ್ತಾರು ಅಯಂಮೋಹ ಸೊಭಗ
೨೦. ವಂ ॥ ಭವ ಆಯೆ ಮೂರು ರೋಮರ್ದ

---

* ಈ ತಾಮ್ರಶಾಸನದ ಆರಂಭದಲ್ಲಿ ಸಂಸ್ಕೃತ ಭಾಷೆಯ ದೇವತಾಸ್ತುತಿ (೧–೧೫), ಆಮೇಲೆ ದೇವಲೋಕದ ಅಸಂಖ್ಯಾತ ಮಹಾಗಣಂಗಳ ಸ್ತುತಿ (೧೬–೫೪), ಸಿದ್ಧಗಣಂಗಳ ಸ್ತುತಿ (೫೫–೬೮), ಹಲರ (ವ್ಯಾಪಾರಿಗಳ) ಬಿರುದಾವಳಿ (೬೮–೧೧೨), ಕಲ್ಯಾಣದ ಮಹಾತ್ಮೆ (೧೧೨–೧೯೪), ರೇವಣಸಿದ್ಧ ಮಹಾತ್ಮೆ (೧೯೪–೨೨೯), ತಗರ ಪವಾಡದ ಮತ್ತು ತಾವು ರೇವಣಸಿದ್ಧ ಪರಂಪರೆಯವರೆಂದು ಸಮರ್ಥಿಸಿಕೊಳ್ಳುವ ವಿಷಯಗಳ ವಿವರಣೆಯಿದೆ.

ಹಿಂಭಾಗ

೨೧. ಯಂಕಿಶ್ರು ದೇವಾಚ್ಯೈತ ಸಿವಲಿಂ
೨೨. ಗರ್ಚನೈಕನಿಷ್ಟ ಗರಿಷ್ಟರುಂ। ಸಕಲ
೨೩. ಭುವನ ಶ್ರೇಷ್ಟರುಂ ॥ ಕ್ರಿಯಾ ಯಿ
೨೪. ಷ್ಟಂ ಜಮದಗ್ನಿ ಕ್ರಿಯಾಯುಷಂ ಕಸ್ಯಪ
೨೫. ಸ್ಯ ಕ್ರಿಯಾಮುಸ್ಯಂ। ಮಗ್ನಿರಿಕಿ ಭಸ್ಮ
೨೬. ಭಸ್ಮವ್ಯಂನ್ಮೊ ವಿಭೂತಿ ರುದ್ರಕ್ಷೆ ಏ
೨೭. ಮಲಮಲಕವಿಭೂಷರುಂ। ನಿರವದಿತಸ್ಯ
೨೮. ಪತ್ಯಪರಿಭಾಷರುಂ। ಶ್ವದತ್ರೆಭಿ ರುದ್ರಪಿ
೨೯. ಚಂಚಯೊ ರುದ್ರ ದ್ರುಷ್ಟ ದೆವಾಮಸ್ತು ಹಾದ್ಯಂ
೩೦. ರುದ್ರೇಣಪಿ ಕಂಪಿಬಂತಿ ರುದ್ರೇಣಗ್ರಂತ
೩೧. ಜಪ್ರುತಿಕೆನಲಗೊಭವರೆ ಕೆವಲಾದಿಕ್ಯ
೩೨. ವಚ್ಯನುರುಲ ಪರತಂತ್ರರುಂ । ಪರಾವ
೩೩. ಸ್ತ ತಂತ್ರರು । ಅತಿಮಯ ಸಂದಲಾಹ
೩೪. ಸಿಕೆನದೆತೆನಹ ಸಿಂಚನದಿತೆ । ನ ಸಹ
೩೫. ಸಂಗ ಸಹ ಭುಂಜತೇ । ಕ್ಯಾದಿವಚ್ಯನುಸಿ
೩೬. ಲಪರತಂತ್ರರುಂ । ಪುವದಹನಮ
೩೭. ದವಮರ್ದನ ಬ್ರಹ್ಮಸಿರೊಂದಶನಕಲ
೩೮. ಗಜನುರೊಂನ್ನದಃ ॥ ನಕಲಾಕುಟಗ್ರೆಸ
೩೯. ನಮವ್ವಕುರ್ಮ್ಮವರಹನರಸಿಂಹ್ಯವಾ
೪೦. ಮನೊಪಸ ಸಿಂಹ್ವ ರಣದಿ ಮಹೋಮ
೪೧. ಹೇಶ್ವರ ಪ್ರಥಕದನ ವಿನೋದಿಗಳುಂ। ವಿ
೪೨. ರಸ್ತಪರಮಗಳುಂ। ದೂರ್ವಸ ಅಗಸ್ತ್ಯ
೪೩. ಬ್ರುಗು ಉಪಮನ್ಯ ದದಚಿ ವಸಿಷ್ಟ ಕಸ್ಯ
೪೪. ಪ ಮುನಿವರ್ಗಪ್ರತಿಷ್ಟಬಾರ್ಯ್ಯರುಂ । ಬ
೪೫. ಜಗದವನ ಚೆತುರದೂಯ್ಯರುಂ ಕಲಿ
೪೬. ಯುಗವೀರಭದ್ರವತಾರರೂಂ। ದುಷ್ಟ
೪೭. ನಿಗ್ರಹಸಿಷ್ಟಪರಿಪಾಲನವಿತಕ್ಷಣ
೪೮. ರುಂ । ಶರಣಾಗತಜನರಕ್ಷಣರುಂ ॥

ಪತ್ರ – ೨
ಮುಂಭಾಗ

೪೯. ಪರಮಸಿವಚರ ಪರಮಪರರುಂ
೫೦. ಕಾಮಕ್ರೋಧಲೋಭಮದಮವರಂವಿವರ್ಜಿ
೫೧. ತ ಮಹಿಮರುಂ ॥ ಸ್ವಸ್ತಿಸಮಸ್ತ ಪ್ರಶಸ್ತಿ ಸಹಿ
೫೨. ತಂ ಶ್ರೀನಂದಿನಾಥ ಶ್ರೀ ಬ್ರುಂಗಿನಾಥ ಶ್ರೀ
೫೩. ವೀರಭದ್ರದೇವರು ಮುಖ್ಯವಾದ ಅಸಂಖ್ಯ
೫೪. ತ ಮಹಗ್ರಣಂಗಳ ಪ್ರಸ್ವಸ್ತಿ ॥ ಶ್ರೀ ಶ್ರೀ ಯಿಂ
೫೫. ನು ಸಿದ್ಧಗಣಂಗಳ ಪ್ರಸ್ವಸ್ತಿಯೆಂತೆಂದಡೆ । ಆ
೫೬. ಮಹಾಮಹಂತಿನ ಮಕ್ಕಳು ಕಲ್ಯಾಣದ
೫೭. ಸಿಂಹ್ವಾಸನದ ಮಹಾಗಣಂಗಳ ಬಿರು
೫೮. ದೂ ॥ ಹುಲೊಳಗಣ ಹಾಲು ಮುಗಿಲೊಳಗ
೫೯. ಣ ಮಿಂಚೂ । ಆಗಸದ ಬರಸಿಡಿಲು । ಬೂ
೬೦. ದಿ ಮುಚ್ಚಿದ ಕೆಂಡ । ವಿಶದ ಗಾಳಿ । ನಂಜಿ
೬೧. ನ ಮಳೆ । ವೊಲುವ ರಾಯರಿಗೆ ವಿಭೂ
೬೨. ತೆಯ್ಯ ಪ್ರಸಾದ । ವಲ್ಲದ ರಾಯರಿಗೆ ಖ
೬೩. ಂಡೆಯದ ಪ್ರಸಾದ । ಇಂತು ಮಹಾಮಹಾ
೬೪. ಂತಿನ ಚಿಟಿಗ ಕರಿಯ ಬಸವರಾಜದೇವ
೬೫. ರು; ಕಟ್ಟಿದುದೆ ಪಟ್ಟ । ಕೊಟ್ಟದುದೆ ಸಾಮ್ಯ
೬೬. ಯಿಂತು ಕಲ್ಯಾಣದ ವಡೆಯರು ಭಕ್ತರ
೬೭. ಸಾಲು ಮೂಲೆ ಸಮಸ್ತ ಪ್ರಜೆಯ ಬಿರಿದಾ
೬೮. ವಳಿ । ಹಲರ ಬಿರುದಾವಳಿ । ಅದು ಹೆಗೆಯಂ
೬೯. ದರೆ । ನೀರುಂ ನೆಳಲುಂ ಸರ್ಪಂಮಪ್ಪರು । ಅಣಕಿ
೭೦. ಗರ ಅಡೆಸೂಲದಲ್ಲಿಕ್ಕಿಸಿಕ್ಕುವರು । ಬಗೆಯದಿದ್ದ
೭೧. ರಸುವಂ ಹೊಸದು ಮುಕ್ಕುವರು । ನಾಡುಕೊಂಡೆಯ
೭೨. ರ ನಲಿಗೆಯನೆಗದೆಕುವರು । ಅಡಿತಪ್ಪುವ ಜಟ
೭೩. ರ ಅಡೆಗಿಕ್ಕಿ ತೆಕುವರು । ಸಂಜೆಗೆಂಪು ಹೋಗದ
೭೪. ಂತೆ ಕೆಡೆಮೆಟ್ಟುವರು । ಮಳಲಸರವಿಯಂ ಮಾಡಿ
೭೫. ಮುಡೆಯಂ ಸುತ್ತುವರು । ಹರಿವ ಬಂಡಿಗೆ ಕಾಲ
೭೬. ಪರಿಪರಿದುನಿಡುವರು । ಹೋಹ ಮಾರಿಯ ಕರದು
೭೭. ಬಳಿಯಲಟ್ಟುವರು । ಅಡವಿಯಂಗಡಿ ಗಿಡುವಾ
೭೮. ಪಟಣವಂ ಮಾಡುವರು । ಕೆಸರಿಗೆ ಕಿಚ್ಚನಿಕ್ಕ ದೆ

೭೯. ಸೆಗೆ ಬೊಬಿರಿವರು । ಕಲಹವೆಂದರೆ ತಾಉ ನಲಿನ
೮೦. ಲಿದು ಬೊಪ್ಪರು । ತೋಟಿಯಂದರೆ ಕೋಟಿಲಾಭವಂ
೮೧. ವೆಂಬರು । ಚಲಕೆ ಚಲದಂಕರುಂ । ನಡೆಗೊಟ್ಟೆ ಮ
೮೨. ಲ್ಲರು । ಉದಂಡ ಸಂಪಂನರು । ಮಂಜಿಮೊ
೮೩. ಯಂ ಕಟಿ ಮನೆಗೆ ಕಳುಹುವರು ॥ ಮಾರಹ

ಹಿಂಭಾಗ

೮೪. ರ ಕೊಲ್ವರು । ಮರೆಹೊಕರೆ ಕಾವರು । ಸರ್ವಜೀವ
೮೫. ದಯಾಕಾರರುಂ । ಪಟ್ಟಣಪ್ರಭಾಕರರುಂ । ಆಸ್ತಾನ ಜ್ಯೋ
೮೬. ತಿಗಳುಂ ಅಯಿನಾಕಿಯ್ಯ ದರ್ಪಣರುಂ । ಪಶ್ಚಿಮದೆಶ ಸ
೮೭. ಮುದ್ರದ ಪೂರ್ವಸಮುದ್ರದ ಗಂಧಕಸ್ತೂರಿ ಕರ್ಪುರ
೮೮. ರು ಉತ್ತರ ಸಮುದ್ರದ ನಾನಾ ವರ್ನ ಅನರ್ಘ್ಯ ದಿವ್ಯರತ್ನ
೮೯. ವೆವಹಾರಿಗಳುಂ । ಅಶ್ವಾವಳ ಗಜಾವಳಿ । ಹಯಾವ
೯೦. ಳಿಲ । ಕರಾವಳಿ । ಪುರ್ವಾವಳಿ । ಸೊಭಾವಳಿ । ಪಟ್ಟಾ
೯೧. ವಳಿ । ಗಯಾವಳಿ । ನಾಗರಿಕ ಚಿಂನಂಗಳಂ ತಂದು
೯೨. ಅಜಗಜ ಆಶ್ವಿಜಮಶ್ವಜ ಪರಿಕ್ಷಿಜರುಂ । ಛಪಂ
೯೩. ನ ದೆಶಂಗಳಂ ಹೊಕ್ಕು । ಲಾಳ ಗೌಳ ಮಲೆಯಾಳ ಗು
೯೪. ಜ್ಯರ । ತೆಲುಗು ಕರ್ನೋಜಿ ಮಾಗವ ಮಾಳವ ದೆಶ
೯೫. ದ ಭಾಷಸಂಪಂನರುಂ । ಯಿಂತು ನಾನಾ ದೆಶಂಗ
೯೬. ಳಂ ಹೊಕ್ಕು । ನಾನಾ ಖಂಡಂಗಳಂ ತುಂಬಿ । ಅಶ್ವಪತಿ ಗ
೯೭. ಜಪತಿ ನರಪತಿ ಯಿವರು ಮೂವ್ವರರಾಯರ ಮೋಹ
೯೮. ಕಾರರುಂ । ಯಿಂತು ನಾನಾ ದೆಶದ ಹಲರ ಬಿರುಗಾವ
೯೯. ಳಿ । ಯಿಂತು ನಾನಾ ವರ್ನಗಂಗಳಂ ಬಲ್ಲ ಜಾಣರು ।
೧೦೦. ಪ್ರಹುಡರುಂ । ನಾನಾ ಪರಿಕ್ಷವಂತರುಂ । ಯಿಂತು
೧೦೧. ನಾನಾ ದೆಶದ ದಯದವ ಪರಿಕ್ಷಿರುಂ । ಯಿಂತು
೧೦೨. ನಾಲು ಮೂಲೆ ಸಮಸ್ತ ಕಲ್ಯಣದ ಸಿದಗಣಂಗಳುಂ ಶ್ರೀ
೧೦೩. ಗೌರಿಶ್ವರದೆವರ ಶ್ರೀಪಾದಪದ್ಮ ಕದರರುಂ । ಉಂ
೧೦೪. ಮುಪ್ಪ ಶ್ರೀ ಬಣಜ ಕಟಿದುದೆ ಪಟ್ಟ ಕೊಟ್ಟದು
೧೦೫. ದೆಶಮ್ಯ ಯಿಟದೆ ಶ್ರೀವಿಭೂತಿ । ಬರಮರ್ಗ ಪ್ರತಿ
೧೦೬. ಷ್ಟಚಾರ್ಯರು । ಯೊಗಮಾರ್ಗ ಗ್ನಾನಮಾರ್ಗ ಹದಿನೆ
೧೦೭. ಂಟು ಸಮಯಕ್ಕೆ ನೂರೊಂದುಕುಲಕ್ಕೆ ಆಚಾರ ಪ್ರ
೧೦೮. ತಿಪಲರುಂ । ಅನಾಚಾರ ಸಂಹ್ವಾರರುಂ । ಪರನಾ

೧೦೯. ರಿ ಸಹೋದರರುಂ । ಪರಧನರಹಿತರುಂ । ಪರ
೧೧೦. ವಸ್ತು ಶರಣರವಾಮಾಅಗ್ರಗಂಣ್ಯರುಂ । ವಿರರುಂ । ಧೀ
೧೧೧. ರರುಂ । ಯಿಂತು ಉಭಯ ನಾನಾ ದೆಶದ ಹಲರ ಬಿ
೧೧೨. ರಿದಾವಳಿ ಸಂಪಂನರುಂ । ಯಿಂನು ಕಲ್ಯಣದ ಮ
೧೧೩. ಹತ್ಮೆಯಂ ಪೇಳ್ವೆ । ಚೆಂನಾಗಿ ವಿವರವಾಗಿ ಕೇಳಿ ಗಉಳಿ
೧೧೪. ವಯದ ಮಾಡದೆ ವಿವರಗಳಂ ನಿಂಮ ವಿವರಾ
೧೧೫. ದಲ್ಲಿ ಚೆಂನಗಿ ವಿವರವಾಗಿ ತಿಳಿದು ಕೇಳುವದು
೧೧೬. ಕೇಳಿ ಕುಲದ ಸಾಮ್ಯಂಗಳಂ ವಿವರವ ತಿಳಿದು
೧೧೭. ಲಾಲಿಸಿ ಪರಂಬರಿಸಿ ಯೀ ಪಲಕೆ ನಾನಾ ದೇಶದ ಹ
೧೧೮. ಲರಿಗೆ ನಂಮ ಭಕ್ತರಾದಂಥವರುಗಳು ಮಹಮ
೧೧೯. ಹಂತಿನ ವಾಕ್ಯವನು ಉದಾಸೀನವನು ಮಾಡಲಾಗ
೧೨೦. ದು ಕಲ್ಯಾಣದ ಗವಿಯರು ಸಿಂಹ್ವಾಸನದ ಹಿರಿಯ

ಪತ್ರ–೩
ಮುಂಭಾಗ

೧೨೧. ರು ಬರೆಸಿಕೊಟ್ಟ ವೊಡೆಯರು ಭ
೧೨೨. ಕ್ತರು ಆ ಸಮಸ್ತ ಮುಖ್ಯವಾಗಿ ಸೆಟ್ಟಿಪಟ್ಟ
೧೨೩. ಣ ಸ್ವಾಮಿಗಳು ಮೊದಲಾಗಿ ಬರಸಿಕೊಟ್ಟ
೧೨೪. ಸ್ತಿರ ಶಾಸನಲು ಯಿಂನು ಕಲ್ಯಾಣದ ಮಹಾ
೧೨೫. ತ್ಮೆಯನು ಪೆಳ್ವೆ । ಅನಂತನೆಂಬ ಯುಗದಲ್ಲಿ
೧೨೬. ಬಸವಂಣನು ಆದಿಮಹೇಶ್ವರನೆಂಬ ಭಕ್ತ
೧೨೭. ನಾದರಿಸುವಲ್ಲಿ । ಪ್ರಭುವೆ ಅನಾದಿಯೆಂಬ ಜ
೧೨೮. ಂಗಮವಾಗಿ ಬಂದು । ಲಿಂಗಾರ್ಚನೆಯಂ ಮಾ
೧೨೯. ಡುವಲ್ಲಿ ಅಂದು ಕಲ್ಯಾಣದ ಹೆಸರು । ಅಭೆ
೧೩೦. ಯಪುರಉ । ಅದ್ಯುಕನೆಂಬ ಯುಗದಲ್ಲಿ ಬ
೧೩೧. ಸವಂಣನು ನಾದಮೂರ್ತಿ ಭಕ್ತನೆಂದು ಆದ
೧೩೨. ರಿಸುವಲ್ಲಿ ಪ್ರಭುವೆ ನಿರಾಳ ಜಂಗಮವಾಗಿ ಬಂ
೧೩೩. ದು ಲಿಂಗಾರ್ಚನೆಯಂ ಮಾಡುವಲ್ಲಿ । ಅಂದು ಕ
೧೩೪. ಲ್ಯಾಣದ ಹೆಸರು । ಸಯಂಪುರಉ । ತಂಮಧನೆ
೧೩೫. ಂಬ ಯುಗದಲ್ಲಿ ಬಸವಂಣನು । ಸದಾಚಾರಿಯೆ
೧೩೬. ಂಬ ಭಕ್ತರಾದರಿಸುವಲ್ಲಿ ಪ್ರಭುವೆ ಆಚಾರಿಯೆಂಬ
೧೩೭. ಜಂಗಮವಾಗಿ ಬಂದು । ಲ್ಲಿಂಗಾರ್ಚನೆಯಂ ಮಾಡು
೧೩೮. ವಲ್ಲಿ ಅಂದು ಕಲ್ಯಾಣದ ಹೆಸರು। ಮನ್ಮತಪುರಉ

೧೩೯.ಕಂಡಜನೆಂಬ ಯುಗದಲ್ಲಿ ಬಸವಂಣನು ನೀಲ
೧೪೦.ಕಂಠ ಭಕ್ತನಾಗಿ । ಆದರಿಸುವಲ್ಲಿ ಪ್ರಭುವೆ ಅ
೧೪೧.ನುವಿಸಿಯಂಬ ಜಂಗಮವಾಗಿ ಬಂದು । ಲಿ
೧೪೨.ಂಗಾರ್ಚನೆಯಂ ಮಾಡುವಲ್ಲಿ । ಅಂದು ಕಲ್ಯಾಣ
೧೪೩.ದ ಹೆಸರು । ನಂದಾಪುರಉ । ಬಿಂನಜನೆಂಬ ಯುಗ
೧೪೪.ದಲ್ಲಿ ಬಸವಂಣನು ಸಂಕಶಿಕಾನೆಂಬ ಭಕ್ತನಾಗಿ ನಾದರಿ
೧೪೫.ಸುವಲ್ಲಿ ಪ್ರಭುವೆ ಕ್ರೋಧಮೂರ್ತಿಯೆಂಬ ಜಂಗಮವಾ
೧೪೬.ಗಿ ಬಂದು । ಲಿಂಗಾರ್ಚನೆಯಂ ಮಾಡುವಲ್ಲಿ । ಅಂದು ಕ
೧೪೭.ಲ್ಯಾಣದ ಹೆಸರು । ನಾರಾಯಣಪುರಉ । ಬಿಂನಾ
೧೪೮.ಯುಕ್ತನೆಂಬ ಯುಗದಲ್ಲಿ ಬಸವಂಣನು ಸಮಂತ
೧೪೯.ನೆಂಬ ಭಕ್ತನಾಗಿ । ಆದರಿಸುವಲ್ಲಿ ಪ್ರಭುವೆ ಸ್ವಯ
೧೫೦.ಂಭುವೆಂಬ ಜಂಗಮವಾಗಿ ಬಂದು । ಲಿಂಗಾರ್ಚನೆ
೧೫೧.ಯಂ ಮಾಡುವಲ್ಲಿ । ಅಂದು ಕಲ್ಯಾಣದ ಹೆಸರು
೧೫೨.ವಿಮಳಾಪುರಉ । ಮಭ್ಯುಕ್ತಾನೆಂಬ ಯುಗದಲ್ಲಿ
೧೫೩.ಬಸವಂಣನು ವೃಷಭಕಂದರನೆಂಬ ಭಕ್ತ
೧೫೪.ನಾಗಿ ಆದರಿಸುವಲ್ಲಿ ಪ್ರಭುವೆ ವಿಮಲಲೋಚ
೧೫೫.ನನೆಂಬ ಜಂಗಮವಾಗಿ ಬಂದು ಲಿಂಗಾರ್ಚನೆ
೧೫೬.ಯಂ ಮಾಡುವಲ್ಲಿ । ಅಂದು ಕಲ್ಯಾಣದ ಹೆಸರು
೧೫೭.ಸಿದ್ಧಪುರಉ । ಮಂನ್ಯರಣನೆಂಬ ಯುಗದ
೧೫೮.ಲ್ಲಿ ಬಸವಂಣನು ವಿಶ್ವಸನೆಂಬ ಭಕ್ತನಾಗಿ

ಹಿಂಭಾಗ

೧೫೯. ಆದರಿಸುವಲ್ಲಿ । ಪ್ರಭುವೆ ಸಸಿಧರನೆಂಬ ಜಂಗ
೧೬೦. ಮವಾಗಿ ಬಂದು । ಲಿಂಗಾರ್ಚನೆಯಂ ಮಾಡುವಲ್ಲಿ
೧೬೧.ಅಂದು ಕಲ್ಯಾಣದ ಹೆಸರು । ಸರಸ್ವತಿಯಂಬಪುರಉ।
೧೬೨. ಅಲಕೃತನೆಂಬ ಯುಗದಲ್ಲಿ ಬಸವಂಣನು ಯಕಾಂಕಾ
೧೬೩. ರನೆಂಬ ಭಕ್ತನಾಗಿ । ಆದರಿಸುವಲ್ಲಿ ಪ್ರಭುವೆ ನಿತ್ಯಾನೆಂ
೧೬೪. ಬ ಜಂಗಮವಾಗಿ ಬಂದು ಲಿಂಗಾರ್ಚನೆಯಂ ಮಾಡು
೧೬೫. ವಲ್ಲಿ ಅಂದು ಕಲ್ಯಾಣದ ಹೆಸರು ನಿಲಕಂಠಪುರ
೧೬೬. ಉ ವಿಶ್ವಾವಸುಯೆಂಬ ಯುಗದಲ್ಲಿ ಬಸವಂಣನು
೧೬೭. ಯೆಕಾಂಗ್ರನೆಂಬ ಭಕ್ತನಾಗಿ ಆದರಿಸುವಲ್ಲಿ ಪ್ರಭು
೧೬೮. ವೆ ಸುಚಿತ್ತನೆಂಬ ಜಂಗಮವಾಗಿ ಬಂದು । ಲಿಂಗಾರ್ಚ

೧೬೯. ನೆಯಂ ಮಾಡುವಲ್ಲಿ । ಅಂದು ಕಲ್ಯಾಣದ ಹೆಸರು
೧೭೦. ತ್ರಿಪುರಾಂತಕಪುರಲು । ಮಾಭ್ಯಾಕ್ತನೆಂಬ ಯುಗದಲ್ಲಿ ಬಸ
೧೭೧. ವಂಣನು ಸಂಪಂನನೆಂಬ ಭಕ್ತನಾಗಿ । ಆದರಿಸು
೧೭೨. ವಲ್ಲಿ ಪ್ರಭುವೆ । ಯಿಶ್ವರನೆಂಬ ಜಂಗಮವಾಗಿ ಬಂದು
೧೭೩. ಲಿಂಗಾರ್ಚನೆಯ ಮಾಡುವಲ್ಲಿ । ಅಂದು ಕಲ್ಯಾಣದ ಹೆಸ
೧೭೪. ರು ಅಮೃತಾಪುರಲು । ಮನ್ಯರಣನೆಂಬ ಯುಗದ
೧೭೫. ಲ್ಲಿ ಬಸವಂಣನು ಮಹಾಮಹೇಶ್ವರನೆಂಬ ಭಕ್ತನಾ
೧೭೬. ಗಿನಾದರಿಸುವಲ್ಲಿ ಪ್ರಭುವೆ ಶಡ್ಗುರುವೆಂಬ ಜಂಗ
೧೭೭. ಮವಾಗಿ ಬಂದು । ಲಿಂಗಾರ್ಚನೆಯಂ ಮಾಡುವಲ್ಲಿ ಅ
೧೭೮. ಂದು ಕಲ್ಯಾಣದ ಹೆಸರು । ಮಾಯಾಪುರಲು । ಕೃತ
೧೭೯. ಯುಗದಲ್ಲಿ ಬಸವಂಣನು । ದೆವಾಂಗನೆಂಬ ಭಕ್ತ
೧೮೦. ನಾಗಿ । ನಾದರಿಸುವಲ್ಲಿ ಪ್ರಭುವೆ ನಿಲಕಂಠನೆಂಬ ಜಂಗಮ
೧೮೧. ವಾಗಿ ಬಂದು ಲಿಂಗಾರ್ಚನೆಯಂ ಮಾಡುವಲ್ಲಿ । ಅಂದು ಕ
೧೮೨. ಲ್ಯಾಣದ ಹೆಸರು । ಅಂದಾಪುರಲು । ತ್ರೆತೆಯುಗದಲ್ಲಿ ಬ
೧೮೩. ಸವಂಣನು ಮಾರ್ಕಂಡನೆಂಬ ಭಕ್ತನಾಗಿ ನಾದರಿಸುವಲ್ಲಿ
೧೮೪. ಪ್ರಭುವೆ ಅಮರೆಶ್ವರನೆಂಬ ಜಂಗಮವಾಗಿ ಬಂದು ಲಿಂಗಾರ್ಚ
೧೮೫. ನೆಯಂ ಮಾಡುವಲ್ಲಿ । ಅಂದು ಕಲ್ಯಾಣದ ಹೆಸರು । ನಂದಾ
೧೮೬. ಪುರಲು । ದ್ವಪರಯುಗದಲ್ಲಿ ಬಸವಂಣನು ವೃಷಭನೆ
೧೮೭. ಂಬ ಭಕ್ತನಾಗಿ ನಾದರಿಸುವಲ್ಲಿ ಪ್ರಭುವೆ ಮಾಯಾಕೊಳಾಹ
೧೮೮. ಳನೆಂಬ ಜಂಗಮವಾಗಿ ಬಂದು । ಲಿಂಗಾರ್ಚನೆಯಂ ಮಾಡು
೧೮೯. ವಲ್ಲಿ । ಅಂದು ಕಲ್ಯಾಣದ ಹೆಸರು । ಆದಿಪುರಲು । ಕಲಿಯು
೧೯೦. ಗದಲ್ಲಿ ಬಸವಂಣನೆಂಬ ಭಕ್ತನಾಗಿ । ಆದರಿಸುವಲ್ಲಿ ಪ್ರ
೧೯೧. ಭುವೆ ಜಂಗಮವಾಗಿ ಬಂದು ಲಿಂಗಾರ್ಚನೆಯಂ ಮಾ
೧೯೨. ಡುವಲ್ಲಿ ಅಂದು ಕಲ್ಯಾಣದ ಹೆಸರು । ಪ್ರತ್ಯಕ್ಷ ಕ
೧೯೩. ಲ್ಯಾಣಲು । ಯಿಂದು ಪ್ರಭುವೆ ಕಲ್ಯಾಣದ ಮಹಾತ್ಮೆ
೧೯೪. ಸಮಾಪ್ತಃ ॥ ಶ್ರೀ ಶ್ರೀ ಶ್ರೀ ಸ್ವಸ್ತಿ ಸಮಸ್ತ ಭುವನಜನ ತಿ
೧೯೫. ಮಿರಹರಣ ಕರಣ ಸ್ವರೂಪರುಂ । ಸ್ವಾರ್ಥನ ಪ್ರಾ
೧೯೬. ಣಲಿಂಗ ವಿಲಾಸರುಂ । ಭಕ್ತದೇಹಿಕದೇವರು । ಭಕ್ತಿ
೧೯೭. ವತ್ಸಲರು । ಕಲ್ಯಾಣಪುರವರಾಧೀಶ್ವರರು । ಅಪೂ
೧೯೮. ರ್ವ ಸ್ವಯಂಭು ಪ್ರಸಂನಮೂರ್ತಿ ಬಸವರಾಜದೆವರ
೧೯೯. ಶ್ರೀ ದಿವ್ಯಪದ ಪದ್ಮರಾಧಕರುಂ ತ್ರಿಕಂಡ

ಪತ್ರ – ೪
ಮುಂಭಾಗ

೨೦೦. ಸಿಷ್ವರುಂ । ರುಗ್ದಂಜನ ಸಾಮ ಅಥರ್ವಣ ತರ್ಕ ಪ್ರತಿಪಾ
೨೦೧. ದ್ಯ ಪ್ರತಿಮುಕರು । ಶ್ರುತಿ ಸ್ಮೃತಿ ಪುರಾಣ ಆಗಮ ಯಿಂತಿ ಸ
೨೦೨. ಹದಿಂ ನಾನಾ ಶಾಸ್ತ್ರ ಕೋವಿದರು ಪರಮ ಸಿಮಗುಮಚಾ
೨೦೩. ರ್ಯ್ಯರು । ಸಕಲ ಪ್ರಸಾದ ಪಂಚಾಕ್ಷರಿಯ । ಮಂತ್ರ ಸಿಧರುಂ
೨೦೪. ನಿತ್ಯ ಪರಿಪೂರ್ಣ ಸಚ್ಚಿತ್ತಾನಂದ ನಿರಂಜನ ಪರಂಜ್ಯೋತಿಶ್ವರು
೨೦೫. ಪರು । ಉಂಮುಪ್ಪ ಮಹಲಿಂಗದೆವರು ।[೧] ತಂಮ ದಿವ್ಯಜ್ಞಾನ
೨೦೬. ಗವೆಂಬ । ರೆವಣಸಿಧ್ಯೆಯದೆವರ ಮಹಾತ್ಮೆ ಯೆಂತೆಂದ
೨೦೭. ಡೆ । ಕೃತಯುಗದಲ್ಲಿ । ಶ್ರೀ ಪರಮೇಶ್ವರನು ಲೋಕಾದಿಲೋಕವನ
೨೦೮. ನುಗ್ರಹ ಕರುಣವಾಗಿ । ನಾಲ್ವರು ಆಚಾರ್ಯರು । ನಿರ್ಮಿಸಿದ
೨೦೯. ಅವರು ಆರರೆಂಧರೆ । ಯೀಶ್ವರ ಮಹೇಶ್ವರಾ ರುದೇಶಿ ಯೀ ಮೂ
೨೧೦. ರ್ತಿಗಳೆಂಬ । ಗಣೇಶ್ವರರು । ಸಿಧನಿಂದ ದಿಕ್ಷಿಸಿ ದೀಕ್ಷೆ
೨೧೧. ಯಂ ಪಡದು । ಸಿವಲಿಂಗಮಂ ಧರಿಸಿಕೊಂಡು ವಿಷ್ನು
೨೧೨. ಬ್ರಹ್ಮ ಪಾರ್ವತಿ ಯಿಂದ್ರಮೊದಲಾದವರಿಗೆ । ಉಪದೇಶ
೨೧೩. ವಂ ಪಡದು । ಅ ಗಣೇಶ್ವರರ ಸಂಪ್ರದಾಯದಲ್ಲಿ । ರೆ
೨೧೪. ಣುಕ ದಾರುಕ ಶಂಭುಕವರ್ನ ಗ್ರೋಕರ್ನರೆಂಬ ಗಣೇಶ್ವರರು
೨೧೫. ಅ ಗಣೇಶ್ವರರ ಸಂಪ್ರದಾಯದಲ್ಲಿ । ಯೆಕಾಕ್ಷರ ಶಡಾಕ್ಷ
೨೧೬. ರ ಪಂಚಾಕ್ಷರ ಕಾ(ತ್ರಿ)ಯಕ್ಷರವೆಂಬ ಗಣೇಶ್ವರರು। ಅ
೨೧೭. ಗಣೇಶ್ವರರ ಸಂಪ್ರದಾಯದಲ್ಲಿ । ರೇವಣಸಿದ್ಧೇಶ್ವರ
೨೧೮. ದೆವರು । ಮರುಳಸಿದ್ಧೇಶ್ವರದೆವರು । ಪಂಡಿತಾರಾಧ್ಯರು ।
೨೧೯. ಯೆಕೊರಾಮಯ್ಯದೆವರು । ಯೀ ನಾಲ್ಕು ಆಚಾರ್ಯ
೨೨೦. ರಿಗೆ ರೆವಣಸಿದ್ಧೇಶ್ವರದೆವರು ಶ್ರೀಗುರು । ಅವರು ಉ
೨೨೧. ಧ್ಭವಿಸಿ ಕೊಲ್ಲಿಪಾಕಿ ಸೋಮೇಶ್ವರದೆವರಲ್ಲಿ ಪ್ರತಮಃ
೨೨೨. ಪವಾಡಂಗಳಂ ಗೆಲಿದು ಅಲಿಂದ ಸಮಸ್ತ ಭು
೨೨೩. ವನದೊಳು । ಗಣ ಪವಾಡಂಗಳಂ ಗೆಲಿದು । ಕೊ
೨೨೪. ಲ್ಲಪುರದ ಸಿಧ್ಧರನೆಲ್ಲರ ಕುರಿಗಳ ಮಾಡಿ । ಹೊಡ
೨೨೫. ತಂದು ಭುಪಾಳಿ ಸಿಧ್ಯೆಯದೆವರಾಗಿ ಕೆರೆಯ
೨೨೬. ಂ ಕಟ್ಟಿ । ಯೆಳನೂರು ಕುಮಾರಿಯರ ಸೆರೆಯ

೧–೧ ಇಷ್ಟು ಭಾಗ ಏಕೋತ್ತರಶತಸ್ಥಲದ ಮಹಾಲಿಂಗದೇವನ ಪ್ರಶಸ್ತಿಯೇ ಆಗಿದೆ.

೨೨೭. ೦ ಬಿಡಿಸಿ । ಕಲ್ಯಾಣಕ್ಕೆ ಬಂದು । ಸತ್ತ ಕುರಿಯ ಪ್ರಾ
೨೨೮. ಣಮಂ ಪಡದು ಯಿಂನು ಹೆಳೆನೆಂದರೆ ನಾನಾ
೨೨೯. ಪ್ರಕಾರವೆಲ್ಲಾ ಉಂಟು । ಯಿಲ್ಲಿಗೆ ಸುಚಿತಾರ್ಥಲು
೨೩೦. ಅವರ ಕಾರುಂಣ್ಯದ ಮಕ್ಕಳು ಸಾಯಿಮುತ್ತೈ
೨೩೧. ಯ ಸೊಹಿಮುತ್ತಯನೆ ಆರಾಧ್ಯರರು । ಮಿಕ್ಕ
೨೩೨. ವರಿಗೆ ಸಮಂಧವಲ್ಲಉ। ಕುರುಬರೆಂಬ ಜಾತಿ
೨೩೩. ಗೆ ಅವರೆ ಗುರುಗಳು ವಿಜೆನಾಗರದ ಪಟ್ಟ
೨೩೪. ದ ಮನೆ । ಬಳಾರಿ ಯಿದರ ಸ್ತಿತಿಗತಿಯನರಿ
೨೩೫. ತು ಪಡೆಯರು ಭಕ್ತರು ಹಂತು ಅವರುಗಳು
೨೩೬. ಬಳಾರಿಯ್ಯ ಸಾಲುಮೂಲೆ ಸಮಸ್ತ ಹಲ
೨೩೭. ರು ಸಂಪಾದಿಸಿ ಚೆಂನಾಗಿ ಧರ್ಮಾಧರ್ಮದಲ್ಲಿ
೨೩೮. ಕಾರ್ಯ್ಯವ ಕಾಬುದು ಯಿದನು ಅಲ್ಲಾಯೆಂ
೨೩೯. ದವರಿಗೆ । ರವರವ ನರಕ ತಪ್ಪದು । ಯಿದನರಿ
೨೪೦. ತು ಧರ್ಮಾಧರ್ಮದಲ್ಲಿ ಕಾಬುದು । ಯಿದು ಕ
೨೪೧. ಲ್ಯಾಣದ ಸಿಂಹ್ವಾಸನದ ದೆವಪೃತ್ತಿ ಮಹಮ
೨೪೨. ಹಂತು । ಪಂಚಪುರದ ವೊಡೆಯರು ಭಕ್ತರು
೨೪೩. ಕಳುಹಿದಂಥಾ ಲಿಖಿತಉ । ಯಿದನು ಬಸ
೨೪೪. ವಂಣನ ಧರ್ಮ ಸಿಂಹ್ವಾಸನದಲಿ ಹಾಯಿಸಿ
೨೪೫. ಕೊಟ್ಟ ಸ್ತಿರ ಸಾಸನಉ । ಯಿದನು ಚೆಂನಾ

ಹಿಂಭಾಗ

೨೪೬. ಗಿ ಪ್ರತಿಪಾಲಿಸುವದು ಲಿಖಿತ
೨೪೭. ಉ । ಧರ್ಮಾಧರ್ಮದಲ್ಲಿ ಬಂದು ಸಾಯಿಮು
೨೪೮. ತ್ಯಾ ಸೊಹಿಮುತ್ಯಾ । ಅವರು ಮಕ್ಕಳೆಂಬವ
೨೪೯. ರೆ ಗುರುಗಳೂ । ಮಂಗಳ ಮಹಿಮಾ ಧ
೨೫೦. ರ್ಮಕ್ಕೆ ಜಯತು । ಯಿಂತಿ ಶಾಸನದ ವಿ
೨೫೧. ವರಉ । ಶ್ರೀ ಶ್ರೀ ಶ್ರೀ ಶ್ರೀ ಶ್ರೀ ॥

ತುರುವೆಕರೆಯ ತಾಮ್ರಶಾಸನ – ೩*

ಪತ್ರ – ೧
ಮುಂಭಾಗ

೧. ಶ್ರೀ ಗುರುವೆ ನಮಃ॥ ನಮಸ್ತುಂಗ ಶಿರಶ್ಚುಂಬಿ ಚಂ
೨. ದ್ರಚಾಮರ ಚಾರವೇ ತ್ರೈಲೋಕ್ಯನಗರಾರಂಭ ಮೂ
೩. ಲಸ್ತಂಭಾಯ ಶಂಭವೇ ಸ್ವಸ್ತಿಶ್ರೀ ಶಾಲಿ
೪. ವಾಹನ ಸಕ ವರ್ಷ ೬೫೦ ನೆ ಸಂವ
೫. ತ್ಸರ ಫಾಲ್ಗುಣ ಬ ೧೩ ಗುರುವಾರ ಹಸ್ತಾ
೬. ನಕ್ಷತ್ರದಲ್ಲು ರೇವಣಸಿದ್ಧೇಸ್ವರ ದೆವರು ಸಓ
೭. ವಿಮುತ್ತನೆಂಬ ಸಿಷ್ಯಗೆ ಸಿಷ್ಯಪಟ್ಟವ ಕ
೮. ಟ್ಟಿ ಪಾಲಿಸಿದ ಸ್ತಿರಸಾಸನ ॥ ರೆವಣಸಿ
೯. ರ್ದಧೇಸ್ವರನ ಪ್ರಸಸ್ತಿ ॥ ಕ[ಕು]ಟಿಲಸಿದ್ದ ಕಾಲಾಹ
೧೦. ಅಂಕನಸಿದ್ಧಮಂ ಕಾಲಾರಕ ನವಕೋ
೧೧. ಟಿ ಸಿದ್ಧರ ಮಹಾಮೂರ್ತಿ ಮಸ[ತ್ಸ]ರಿಸುವ ಸಿದ್ಧರ
೧೨. .... । ಮಂತ್ರಸಿದ್ಧರ ಮಕುಟಮಣಿ
೧೩. ಯ ಯಂತ್ರಸಿದ್ಧರ ಚಿಂತಾಮಣಿ ಸಿದ್ಧ
೧೪. ರ ಬಾಗಲೆಯ। ಸರ್ವಸಿದ್ಧರ ಪೂರ್ವಸಿದ್ಧನ
೧೫. ರೆವಣಸಿದ್ಧೇಸ್ವರನು ಸಮಸ್ತ ಬ್ರಹ್ಮಾಂಡದ
೧೬. ರಿಸಿಬದು ಮೇರುಪರ್ವತಾಶ್ರಮ ಹಾಲು ರಟ್ಟ
೧೭. ಶಿಷ್ಯದಿ ಕಂಗಳಂ .... ಕಳುಹಲಾ
೧೮. ಗ ಸೋವಿಮುತ್ತನೆಂಬ ಶಿಷ್ಯನು ಕೊಲ್ಲಾಪುರಕ್ಕೆ
೧೯. ಬಂದು ಭಿಕ್ಷವಂ ಕೇಳಲು ನೀವಾರೆಂದು ಕೇಳಿದರೆ ನಾ
೨೦. ನು ರೆವಣಸಿದ್ಧೇಸ್ವರ ಯ ಶಿಷ್ಯನೆಂದು ಹೇಳಿರೆ
೨೧. ತಾವೆ ಸಿದ್ಧರಲ್ಲದೆ ನಮಗೆ ಖರಿಯ ಸಿದ್ಧರುಂಟೆ
೨೨. ಯೆಂದು ಕಾಳಕೂಟ ವಿಷವಂ ತೆಗದು ನಿಜವಂ ನಿ...
೨೩. ರದ ನಿಂಮ ಗುರುವಿನ ನಾಲಿಗೆ ಕೊಂದು ಹೋಗು
೨೪. ಯೆಂದು ಕಳುಹಿದರು ಆತನು ಖೇಚರ ಮಾರ್ಗದಲ್ಲಿ

---

* ಈ ತಾಮ್ರಶಾಸನವು ದೇವನಾಗರಿ ಲಿಪಿ, ಕನ್ನಡ ಭಾಷೆಯನ್ನೊಳಗೊಂಡಿದೆ. ಅಕ್ಷರಗಳು ತುಂಬಾ ತ್ರುಟಿತಗೊಂಡಿವೆ. ರೇವಣಸಿದ್ಧೇಶ್ವರನ ಪ್ರಶಸ್ತಿ, ಸೋವಿಮುತ್ತನಿಗೆ ಶಿಷ್ಯಪಟ್ಟವ ಕಟ್ಟಿದ ವಿಷಯ ಮತ್ತು ಸಿದ್ಧಮಂಕನ ವಿವರಣೆ ಇದೆ.

೨೫. ...ಗುರು ಶಾಂತಲಿಂಗ ಬಂದು ನಮಸ್ಕಾರವಂ ಮಾ
೨೬. ಡಿ .....ಕೊಲ್ಲಾಪುರಕ್ಕೆ ಹೋದ ವೃತ್ತಾಂತವನ್ನು ಸಿ
೨೭. ದ್ಧರಾ... ಅಹಂಕಾರದಲು......ಬಿನ್ನಹಂ
೨೮. ಮಾಡಿ ಆ...................ಸಿದ್ಧೇಸ್ವರನು
೨೯. ನೋಡಿದರೆ ಅ............ನೀನು ದರಿ
೩೦. ಸುಯೆಂದು ಕೊಡಲು ಮಹಾಪ್ರಸಾದವೆಂದು ..
೩೧. ರಿಸಲು ಮೆಚ್ಚಿ ನಿನ್ನಿಂದಲೇ ಅವರ ತಂಗಿ...
೩೨. ವೆನೆಂದು ಅ.....ಕೊಲ್ಲಾಪುರಕ್ಕೆ ಸಿದ್ಧೇ
೩೩. ಸ್ವರದೇವರು ಸೋವಿಮುತ್ತನು ಸಹವಾಗಿ.......
೩೪. ಮಡಿದಾರು । ಬರುತಿರಲಾಗ ನಾವುರ ಹೊಲ
೩೫. ದಲ್ಲಿ ....ನಿದ್ದವರು ನೀನಾ
೩೬. ರೆಂದು ಕೇಳಿದರೆ
೩೭. ಖರಿಯ ನೋಡುವಾಯೆಂದು.................
೩೮. ....ಮಂತ್ರಿಸಿರಡಲು ಸರ್ಪಗಳಾಗಿ..........ರೆ
೩೯. ವಣಸಿದ್ಧೇಸ್ವರನ ಸರ್ವಾಂಗದ ಮಂತ್ರಿ........ಗು
೪೦. ರುವಿನ..........ಸೋವಿಮುತ್ತನ ಅ............
೪೧. ....

ಹಿಂಭಾಗ

೪೨. ಗಿ ಆವು ಸರ್ಪಗಳಾಗಿ ಅವರನ್ನೆ ಮು
೪೩. ತ್ತಿ ಮುಸುಕಿದರೆ ತ್ರಾಹಿಯೆಂದು ಬಿ
೪೪. ನ್ನಹಂ ಮಾಡಲು ಅವರೊಳು ಮುಖ್ಯನಾದ
೪೫. ವಗೆ ಗೋರಕ್ಷಸಿದ್ಧನೆಂಬ ನಾಮನಂ
೪೬. ಕೊಂದು ಪಾಲಿಸಿ ಬರುತ್ತಿರಲು ಹೆಬ್ಬಾಗಿ
೪೭. ಲ ಮುಂದೆ ರಟ್ಟವರು ನೀನಾರೆಂದು ಕೇಳಿದರೆ
೪೮. ನಾನು ಸಿದ್ಧನೆಂದರೆ ನಿಂನ ಸಿದ್ಧಿಯ
೪೯. ನೋಡುವಾಯೆಂದು ಯೆರಡ ಕಲವ ಮುಟ್ಟ
೫೦. ಲು ಯೆರಡು ಭೂತಂಳಾಗಿ ಮುಗಿಲುದ್ದ
೫೧. ಕೆ ಬೆಳದವು ಆ ನು[ಭೂ]ತ್ತಂಗಳನು ಸೋವಿ
೫೨. ಮುತ್ತನೆ ಮುಟ್ಟಿದರೆ ಯಂದಿನಂತೆ ಕಲ
೫೩. ಗಳಾದವು ಇಂತಪ್ಪ...........ಪವಾಡಗ
೫೪. ಳಂ ಸೋವಿಮುತ್ತನ ಕಯ್ಯ............ಲಿಸಿ

೫೫. ಮುಂದೆ ಮುಂದಾಗಲು ಮೆಂಚಸು.....ರಾ
೫೬. ಕ್ಷಸನು ರ.......ಗಿ ಕಂಡು ಈತನು ನಂ
೫೭. ಮ ನವಕೋಟಿ ಸಿದ್ಧರ ವಷವಲ್ಲ ಕ
೫೮. ರಿಯ ಕಂತೆ....ಕಂತೆಕ..........
೫೯. ರದನಂ...........ಮಾಡಲು ರೆವಣ
೬೦. ಸಿದ್ಧೇಸ್ವರನು ಕಂಡು ಸೋವಿಮುತ್ತನ ಮು
೬೧. ಖವಂ ನೋಡಲು ಮಹಾಪ್ರಸಾದವೆಂದು ಬೃಹದಾ
೬೨. ಕಾರವಂ ತಾಳಿ ಅವನ ಕಂಡು ಕೊಂದು
೬೩. ಮೂರ್‍ರು ಸೀಳಾಗಿ ಸೀಳಿದರೆ ರೆವಣ
೬೪. ಸಿದ್ಧೇಸ್ವರನು ಮೆಚ್ಚಿ ಅವನ ಚರ್ಮವ ಮೂ
೬೫. ರ್‍ರ ಸೀಳದು ಮೂವೆಡೀನ ಕಂತೆಯಾಗಿ
೬೬. ಹೊದೆಯೆಂದು ಬಿಂನಪವ ಕೊಂಡಳುಹ....
೬೭. ಮೂವೆಡಿನ ಕಂತೆಯ ಹೊದ್ದು ನಮ
೬೮. ಸ್ಕಾರವಂ ಮಾಡಿದನು ಅಲ್ಲಿಂದ ಮುಂದೆ ಬರಲು
೬೯. ನವಕೋಟಿಸಿದ್ಧರ ಸಭೆನೆರದು ನಾನಾ
೭೦. ಕುಟಿಲಂಗಳ ಮಾಡಿ ಕೊಂದು ಕಾಲಕೂಟ ವಿ
೭೧. ಷವಂ ಮುಂದಿರಿಸಿ ಕೊಂದುದ್ದರಲಿ ಕಂಡು
೭೨. ಆ ವಿಷವಂ ಗೆಲಿದು ಆ ನವಕೋಟಿ
೭೩. ಸಿದ್ಧರಂ ಕುರಿವಿಂಡ ಮಾಡಿ ಈ...........
೭೪. ದ್ಧರ.......................................

ಪತ್ರ – ೨
ಮುಂಭಾಗ

೭೫. ....ರಿಗಳು ತಮಗಾವುದು ಗತಿಯೆಂದು ಬಿಂ
೭೬. ನಹ ಮಾಡಿಕೊಂಡರೆ ಸಮಸ್ತ ಶಕ್ತಿದೆ
೭೭. ವತೆಯರುಗಳಿಗೆ ಆಹಾರವಾಗಿ
೭೮. ನಿಂನ ರೋಮ ಪುಣವಿತ್ತವಾಗಿ ಸರ್ವಜ
೭೯. ನರಿಗೆ ಹಿತವಾಗಲೆಂದು ನಿರೂಪಿಸಿದ
೮೦. ಆ ಸಿದ್ಧ ಕುರಿವಿಂದುಗಳನ್ನು ಆ
೮೧. ಡಿಸಿ ವೋಡಿದರ್‍ಫಲ ಭೋಗಕ್ಕೆ...
೮೨. ನಾಗಿ ಈ ಹಾಲಮತಕ್ಕೆ ಗುರುವಾಗಿರೆಂದು
೮೩. ಸೋವಿಮುತ್ತಂಗೆ ಅಭಯಹಸ್ತವಂ ಪಾಲಿ

೮೪. ಸಿ । ರೇವಣಸಿದ್ಧೇಸ್ವರದೇವರು ತಂಮ ಆಶ್ರ
೮೫. ಮಕ್ಕೆ ದಿಕ್ಕಮಾಡಿದರು ನಾ ಸೋ
೮೬. ವಿಮುತ್ತನು ತ್ತಂಮ ತಂಮ ಸಾಯಿಮುತ್ತನು ಸಿದ್ಧೇ
೮೭. ಸ್ವರನ ಕಯ್ಯಲ್ಲಿ ಹಾಲಂತ ಮತಕ್ಕೆ
೮೮. ಗುರುವಾಗಿರುತ್ತಿರಲು ....
೮೯. ದವರು ಕುರಿಗಾಹಿಗಳುಯೆಂದು ನಿಂದು ಹು
೯೦. ಸಿಯಲ್ಲ ಬೇಲಿಗೆ ಹೊರಗುಯೆಂದರೆ ಹೊರಗಾ
೯೧. ದ ಕುಲವ ವೊಳಗು ಮಾಡುವೆಯಂದು ಆ ಸೋ
೯೨. ವಿಮುಕ್ತ ಸಾಯಿಮುತ್ತಗಳು ಹಾಲಮತವೆಲ್ಲವು ಕೂ
೯೩. ಡಿಕೊಂಡು ಕಾಳಗಕ್ಕೆ ನಡೆಯಲು । ಕುರಿಯಕು
೯೪. ಪ್ಪೆಲ್ಲಿ ಕುರಿ ಹಾಕಿತ್ತು । ತೊಗಲಗುಡೆಯ
೯೫. ಲ್ಲಿ ತೊಗಲು ಹಾಕಿತ್ತು ಹೊರವದಿ ಸಲ್ಲಿ
೯೬. ಗೆಯಿತ್ತು ಕಲ್ಯಾಣಕ್ಕೆ ಕಾಗುಡಿಯಂ ಹೊತ್ತು ನ
೯೭. ಡವಿತ್ತು ಅಲ್ಲಿದ್ದಂ ಬಸವೇಶ್ವರನು ಮುಖ್ಯ
೯೮. ರಾದ ಸಮಸ್ತ ಸರಣಗಳು...........
೯೯. ಸೋವಿಮುತ್ತನು ಸಿದ್ಧೇಸ್ವರನ ವರವಿಡಿದು ಸ
೧೦೦. ತ್ತ ತಗರಿನ ಪ್ರಾಣವಂ ಪಡದು ತಗರಿನ.
೧೦೧. ....ಭಟ್ಟದೋರಿ ಹೊತ್ತಿನ ಮೇಲೆ....
೧೦೨. ....ರಿ ಪವಾಡವಂ ಮೆರೆಯಲ್ಲು ಮಹಾ....
೧೦೩. ... ಸೆಟ್ಟಿ ಸಮೆಯಲು....ಮೆ........

ಹಿಂಭಾಗ

೧೦೪. ಹ ವಾಸಂಗಳಿಂ ಮೆರೆಸಿ ಮೆಚ್ಚಿದವು
೧೦೫. ಬೇಡಿಕೊಳ್ಳಿಯೆಂದು ಈ ಹಾಲಮತನು
೧೦೬. ವಂದು ಸೂರ್ಯರುಳ್ಳಂನವರ ಕೆಡದೆ ನೊ
೧೦೭. ಡೆಯಬೇಕುಯೆಂದು ಬಿನ್ನಹಂ ಮಾಡಿದರೆ
೧೦೮. ರೆವಣಸಿದ್ಧೇಸ್ವರದೇವರ ಕೊಟ್ಟ
೧೦೯. ವರ ತಪ್ಪಬಾರದೆಂದು । ಸರಣರೆಲ್ಲರೂ
೧೧೦. ಕಾರುಣ್ಯದಿಂದ ಅಭಯವ ಪಾಲಿಸಿ
೧೧೧. ದರು ಪಾಲಿಸಲಾಗಿ ಸರಣರಿಗೆ
೧೧೨. ಬಿನ್ನಹಂ ಮಾಡಿ ನಂಮ ಮನೆಗೆ ಗಣ
೧೧೩. ಪರ್ವಕ್ಕೆ ಚಿತ್ತೈಸಬೇಕೆಂದು ಅವರ ಬೀ

೧೧೪. ಳ್ಕೊಂಡು । ಸೋವಿಮುತ್ತಗಳು ಸರವೂರಿ
೧೧೫. ಗೆ ನಡದರು ಅಂದಿಗೆ ಸಕವರ್ಷ
೧೧೬. ೬೯೧ ವರ್ಷ ಸಂದಿತ್ತು ಪವಾಡವಂ ಗೆ
೧೧೭. ಲಿದು ಬಂದರೆ ಬುಧಂ ಕೇಳಿ ಸಮಸ್ತ
೧೧೮. ಹಾಲಮತದವರೆಲ್ಲರು ಸಂಭ್ರಮದಿಂ
೧೧೯. ದ ಇದಿರುಗೊಂಡು । ಸ್ವಾಮಿ ನಿಮಗೆ ನಾವು
೧೨೦. ಮಾಡುವೆ ಸೇವೆಯನೆಂದು ಬಿನ್ನಹಂ ಮಾಡಿ
೧೨೧. ದರೆ ನಾವು ಗಣಪರ್ವವ ಮಾಡಬೇಕು ತಾ
೧೨೨. ವೆಲ್ಲರು ಸಹಾಯವಾಗಬೇಕುಯಂದು
೧೨೩. ಮಹಾಪ್ರಸಾದವೆಂದು ಕೈಕೊಂಡು ನ
೧೨೪. ಮ್ಮಲ್ಲಿ ಹುಟ್ಟಿದ ಗಂಡುಮಕ್ಕಳು ಹೊಕ್ಕಳಿ
೧೨೫. ಗೊಂದೊಂದು ಹೊಂನ.........

ಪತ್ರ – ೩
ಮುಂಭಾಗ

೧೨೬. ಹೆಂಣು ಮಗುವಾದರೆ ಧಾರ
೧೨೭. ಣ ಮದುವೆ ಆದರೆ ಗಂಡಿನ
೧೨೮. ವರೊಂದು ಹಣ ಹೆಂಣಿನವರೊಂ
೧೨೯. ದು ಹಣ ಕೋಣನ ಮುಂದಣ ಮಾ
೧೩೦. ಣಿಕ ಕುದುರೆಯ ಮುಂದಣ ಮ
೧೩೧. ರ್‍ರಿ ಹೊತ್ತಿನ ಮುಂದಣ ಪೊರ
೧೩೨. ಮ ಹಿಂಡಿಗೊಂದು .ತ್ತೆ ವೋಲ್ಲೈ
೧೩೩. ಸಿದರೆ ಬಿಲ್ಲಗೊಂದು ಹಣ
೧೩೪. .ಷನು ನಾವು ತಪ್ಪದೆ ನಡಸಿ
೧೩೫. ಕೊಂಡು ಬಿನ್ನಹಂ ಮಾಡಿದರು
೧೩೬. ಸ್ರೀ ಸೋವಿಮುತ್ತನ ಪವಾಡ
೧೩೭. ಂಗೊಂದು ಬಿದ್ದರೆ..... ಕೇಳಿ ಮ
೧೩೮. .....ತ್ತುವಾಡದ ಗೆ[ಗೋ]ಮರಾಯನು
೧೩೯. ತನಗೆ ಕಾದಿಯಾಗಿರಲಾಗಿ
೧೪೦. ತಂನ ಪುರಾತರಂ ಕಳುಹಾಲು...
೧೪೧. ಸ್ರೀ ಸೋವಿಮುತ್ತನು ತಾನು ಹೋಗ
೧೪೨. ದೆ ತಂನ ತಂಮ ಸಾಯಿಮುತ್ತನನು

೧೪೩. ...ಕೆತ್ತ ನಮಗೆ ಮಂಕನ ಕಾದಿ
೧೪೪. ರಟ್ಟು ಕಳುಹಿದ ಆತನು ಹಾ
೧೪೫. ...ಯದಿ ಪಂಣು ನೋಡಿದಾ....

ಹಿಂಭಾಗ

೧೪೬. ಆ ರಾಯನು ಪಾಡಿ ಬೀಡಾ
೧೪೭. ರವ ಕೊಟ್ಟು ಗೌಡಿಯನು
೧೪೮. ಕೊಟ್ಟು ಕಳುಹಿದನು । ಆ
೧೪೯. ಸಾಯಿಮುತ್ತನು ಆ ರಾಯನ
೧೫೦. ರೋಗವಂ ಮಾಣಿಸಿ ಉಡುಗೊ
೧೫೧. ರೆಯನಿಸೀಕೊಂಡು ಬಾರುತ
೧೫೨. ಆ ಗೌಡಿಯನು ಅರಮನೆ
೧೫೩. ಗೆ ಒಪ್ಪಿಸಲಾಗಿ । ನಿಮ...
೧೫೪. ಡೆ ಇದ ಮಂಕನೆಂಬವನು ಇವ
೧೫೫. ಳನು ಮುಟ್ಟಿದ ಅವಳು ನಿನ್ನ
೧೫೬. ಮನೆಯ ಹೊಗಬಾರದುಯೆ
೧೫೭. ...ದರೆ ಆ ಗೌಡಿಯಂ ಮಂಕನನು..
೧೫೮. ಸರವೂರಿಗೆ ಹೋದ ಈ ಮಂಕ
೧೫೯. ನು ಗೌಡಿಯನು ಕೂಡಿಕೊಂಡು ತಾ
೧೬೦. ಯಿ ತಂದೆಯ ಬಳಿಗೆ ಬಂದ ಅವ
೧೬೧. ರು ಇವಳು ಗೌಡಿಯೆಂಬುದನು.
೧೬೨. ತ್ತು ಈತನ ಹೊರಗು ಮಾಡಿ ಹೊರಡಿ
೧೬೩. ಸಿದಾರು ಈ ಕುಲವಂನ್ನುದ್ದಾರ ಮಾ
೧೬೪. ಡುವೆನೆಂದು ಸರೂರಿಗೆ ಹೋದನಾಗಿ
೧೬೫. ಸೋವಿಮುತ್ತನ ಗಣಪರ್ವಕ್ಕೆ ಮಡು
೧೬೬. ವಳಯ್ಯಗಳು ಬಹಾದೀಯಂ ಕಟ್ಟಿ
೧೬೭. ಕೊಂಡು ನಮಸ್ಕಾರವಂ ಮಾಡಿದರೆ । ಇದೆ
೧೬೮. ನೆಯೆಂದು ಕೇಳಿದರೆ ತನ್ನ ಕುಲಕ್ಕೆ....
೧೬೯. ...ಗಾಗಿ ಇದೆನೆ ಸಾಇಮುತ್ತನು..........

ಪತ್ರ – ೪
ಮುಂಭಾಗ

೧೭೦. ಟ್ಟಿದಳು ಸಾಯಕ್ಕನನು ತನಗೆ ಕೊಡಿ
೧೭೧. ಸಬೇಕುಯೆಂದು ಬಿಂನಹಂ ಮಾಡಿದರೆ...
೧೭೨. ಗೆ ಆಗಲಿಯೆಂದು । ಮಡುವಾಳಯ್ಯಗ
೧೭೩. ಳು ಗಣಪರ್ವಕ್ಕೆ ಚಿತ್ತೈಸಿದರು । ಆ
೧೭೪. ಸೋವಿಮುತ್ತಗಳು ಬಂದ ಸರಣರನೆ
೧೭೫. ಲ್ಲರ ಇದಿರುಗೊಂಡು ಅನಂತ ಒಸಗೆಯಿಂ
೧೭೬. ದ ಪ್ರಸ್ತವ ಮಾಡಿದರು । ಸರಣರೆಲ್ಲರು ಕ
೧೭೭. ಳುಹಿಸಿಕೊಂಡು ಹೋಹಾಗ ಮಡುವಾಳ
೧೭೮. ಯ್ಯಗಳು ಸೋವಿಮುತ್ತನ ಕರದು ನಿಂನ
೧೭೯. ತಂಗಿ ಸಾಯಕ್ಕನನು ಮಂಕಗೆ ಕೊ
೧೮೦. ಡಿಯೆಂದು ಕೊಡಿಸಿ ಹೋದರು । ಆ ಮಂಕ
೧೮೧. ಗೆ ಕೆಲವು ದಿನಕ್ಕೆ ಒಬ್ಬ ಗಂಡು ಮಗನಾದರೆ
೧೮೨. ಆ ಮಗ ನಂಮ ಸೋವಿಮುತ್ತನ ಹೆಸರನಿ
೧೮೩. ಟ್ಟಳು ಹೆಂಣು ಮಗಳಾದರೆ ಸಾಯಿಮು
೧೮೪. ತ್ತನ ಹೆಸರನಿಟ್ಟಳು । ತಂನ ಮಕ್ಕಳು
೧೮೫. ಗೌಡಿಯ ಮಕ್ಕಳು ಖರಿಯಲಿರೆಂದು ಮು
೧೮೬. ವೆಡಿನ ಕಂತ್ತೆಯನು ಬೇಡಿ ಆ ಸಾಯಕ್ಕಳು
೧೮೭. ತಂನ ಒಡಹುಟ್ಟಿದರಿಗೆ ಹೇಳಿದು ......
೧೮೮. ಹೆಂಣು ..ಗೆ ಸಲ್ಲದುಯೆಂದು ಕೊಟ್ಟು
೧೮೯. ದಿಲ್ಲ ಕೊಡದೆಯಿದ್ದರೆ ಮನೆಯಲ್ಲಿ.....
೧೯೦. ....ಯನು ತೊಟ್ಟಿಲ ಮೇಲೆ ಹಾಕಿ
೧೯೧. ಕೊಂಡು ಹೋಗುತ್ತಿರಲಾಗಿ । ಕಂಡು ಹರಿ.
೧೯೨. ...ಕೊಂಡು ಬಂದು ಆಕೆ ಕೋಪಿಸಿ

ಹಿಂಭಾಗ

೧೯೩. ಕೊಂಡು ತವರು ಮನೆಯ ಹೊಗದೆ
೧೯೪. ತಂನ ಮಗಗೆ ಸಮಸ್ತ ವಿದ್ಯೆಗ
೧೯೫. ಳಂ ಕಲಿಸಿಲಾಗಿ ಆತನು ಪ್ರ
೧೯೬. ವೀಣನಾಗಿ ಗೋಮರಾಯನ ಮನೆ

೧೯೭. ಯ ಕರಣಿಕತನವ ಮಾಡುತ್ತಿದ್ದ
೧೯೮. ಕೂಡಣ ಕರಣಿಕರು ಈತನ ಹೊರಡಿ
೧೯೯. ಸಬೇಕೆಂದು ತಂತ್ರವ ಮಾಡಿದರು । ಈತನ
೨೦೦. ರಾಣಿವಾಸಕೆ ಒಪ್ಪಿದನು । ಇಂದಿರು
೨೦೧. ಳಿಗೆ ಕೊಲಿಸಿರುತೆಂದು ಅವರ ತಂ
೨೦೨. ದೆ ತಾಯಿಗಳ ಬಳಿಗೆ ಹೇಳಿ ಕಳು
೨೦೩. ಹಿದರೆ ಅವರು ಆ ಮನೆ ಕರಸಿದರು । ಈ
೨೦೪. ತನು ಬಹದ ಕಂಡು ಆತನ ತಂಗಿ
೨೦೫. ಸಾಯಕ್ಕನು ಸೋವಿಯಂಣ ಬಂದನಂದು ತಂ
೨೦೬. ಮ ತಂದೆಯ ಕೂಡೆ ಹೇಳಿದರೆ ಆತ
೨೦೭. ನು ಸೋವಿಮುತ್ತನು ಮಕ್ಕಳ ಹಾಗೆ ನಾ
೨೦೮. ಡೊಳಗೆ ಗುರುತನವ ಮೆರೆದು ಬಳಿಕಿನ್ನು
೨೦೯. ಅಪಕೀರ್ತಿಯಲಿಂದ ತಾನು ಸತ್ತರೆ ಮಗ
೨೧೦. ನು ಒರೆದರೆ ಯೆನ..ಲರಿಯದವ
೨೧೧. ರು ಗುರುಗಳಾದರಂತೆ ನಾಕಲಿತ್ತ ...
೨೧೨. ಸವದುಕೆಯೆಂದು ಅಗವೆ ಗುರುತನವ
೨೧೩. ಮೆರೆಹೆನೆಂದು ಕಪಟವೇಷದಿಂ ಕೊಲ್ಲಾ
೨೧೪. ಪುರಕ್ಕೆ ಹೋಗಿ ಒಂದು ಕೆರಿಯಲ್ಲಿ
೨೧೫. ಹೊಕ್ಕೆನುಯೆಂದು ಕೆರಿಗೆ ಬ..........

ಪತ್ತ – ೫
ಮುಂಭಾಗ

೨೧೬. ಅಹಂಕಾರದಿಂಧಲ ಭೂತ
೨೧೭. ಹೊಡದು ಸಾವನು ಸಾಯಲಾಗಿ
೨೧೮. ಕೂಡಣವರು ದೇವಾಲಯದೊಳು ಆ ಸಾ
೨೧೯. ವವನು ಹಾಕಿ ಅವರ ತಂದೆತಾಯಿ
೨೨೦. ಗಳಿಗೆ ಹೇಳಿದರು । ಆತನ ತಾಯಿ
೨೨೧. ತಂನ ಮಗಳು ಸಾಯಿಸುತ್ತ ತನ್ನ ಹೆಸರು
೨೨೨. ಸಾಯಕ್ಕನ ಕರದು ನಿಂನ ಒಡಹುಟ್ಟಿ
೨೨೩. ದನ ಪ್ರಾಣವಂ ಬೇಡು ಹೋಗುಯೆಂದು ಕಳು
೨೨೪. ಹಿದರೆ ಆಕೆ ತಂಮ ಮಾವನ ಕೂಡೆ
೨೨೫. ನಿಂನ ಅಳಿಯ ಸೋವಿಯಂಣನು ಕೊ

೨೨೬. ಲ್ಲಾಪುರಕ್ಕೆ ಹೋಗಿ ಮೃತ..ವಾದನು
೨೨೭. ಆತನ ಪ್ರಾಣವಾದನವ ಕೊಡಬೇಕು ।
೨೨೮. ಯೆಂದುರೆ ಮೂವೆಡಿನ ಕಂತೆಯನುಟ್ಟಿ....
೨೨೯. ....ಯನು ಕಾಲು ಹಾಲುಹಿದರೆ ಆ ಕಂ
೨೩೦. ಥೆಯ ಕೊಂಡು ಹೋಗಿ ಹೊದಿಸಿದರೆ ಪ್ರಾಣ ಬಂ
೨೩೧. ದುದು ಆತನನು ಕರದುಕೊಂಡು ಬಂದು ನಮ
೨೩೨. ಸ್ಕಾರವಂ ಮಾಡಿಸಿ ನೀನು ಕೊಟ್ಟ ಪ್ರಾಣವ
೨೩೩. ನು ಈ ಮುವೆಡಿನ ಕಂತೆಯನು ತೆಗೆಯಬಾ
೨೩೪. ರದೆಯಂದುಯೆಂದರೆ ಸಿದ್ಧೇಸ್ವರದೇವರು
೨೩೫. ....ರದ ಕಂತೆಯನು ಕೊಟ್ಟರೆ ತಲೆ ಸಹಸ್ರ
೨೩೬. ಹೊಳಹವು ಕೊಡಬಾರದೆಂದು । ಕರಿಯ ಕಂತೆ
೨೩೭. ಬಿಳಿಯ ಕಂತೆಯಂ ಕೊಟ್ಟು ಶಿಷ್ಯಪಟ್ಟ
೨೩೮. ವಂ ಕಟ್ಟಿ ಪಾಲಿಸಿದರು । ಸ್ವಸ್ತಿ ಸ್ರೀ ಜ
೨೩೯. ಯಾಭ್ಯುದಯ ಸಕವರ್ಷ ೭೧೫ ಅಂದಿಗೆ ಸಂ
೨೪೦. ದಿತ್ತು ಅವನಾನೊಬ್ಬ ಈ ಹಾಲಮತ
೨೪೧. ದ ಸಾಸನವನು ಪೂಜ್ಯವಿಲ್ಲದಿ ಪಾ
೨೪೨. ಲಿಸಿದರೆ ರೇವಣಸಿದ್ಧೇಸ್ವರನ

ಹಿಂಭಾಗ

೨೪೩. ಕೃಪೆ ಅಹದು ಇದಕ್ಕೆ ವಿರೋ
೨೪೪. ಧಿಗಳಾದರೆ ಕುಂಭಿಯ ಪಾತಕ
೨೪೫. ವಹುದು ॥*

❖❖

* ವಾರ್ತಾ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಶ್ರೀ ಸಿ.ಕೆ.ಪರಶುರಾಮಯ್ಯನವರ ಸೂಚನೆಯ ಮೇರೆಗೆ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದ ಪ್ರವಾಚಕ ಡಾ.ಎಫ್.ಟಿ.ಹಳ್ಳಿಕೇರಿ ಅವರು ತುಮಕೂರು ಜಿಲ್ಲೆಯ ತುರುವೆಕೆರೆಯ ಶ್ರೀ ರೇವಣಸಿದ್ಧೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ಈ ಮೂರು ಶಾಸನಗಳನ್ನು ಶೋಧಿಸಿದರು. ಈ ದೇವಸ್ಥಾನದ ಪೂಜಾರಿಗಳೂ, ಕುರುಬರ ಗುರುಗಳೂ ಆದ ಒಡೆಯರ ಮನೆತನದ ಶ್ರೀ ಸಿ.ಕೆ.ರೇಣುಕಾಮೂರ್ತಿ ಮತ್ತು ಸಮಾಜದ ಹಿರಿಯರಾದ ಶ್ರೀ ಪರಶೇಗೌಡ್ರು ಅವರ ಒಡೆತನದಲ್ಲಿ ಈ ತಾಮ್ರಶಾಸನವಿದೆ. ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಶ್ರೀ ಸಿ.ಕೆ.ಪರಶುರಾಮಯ್ಯ ನವರಿಗೆ, ದೇವನಾಗರಿ ಲಿಪಿಯನ್ನು ಓದಲು ಮಾರ್ಗದರ್ಶನ ನೀಡಿದ ಡಾ. ದೇವರಕೊಂಡಾರೆಡ್ಡಿ ಅವರಿಗೆ, ಶಾಸನವನ್ನು ಪ್ರತಿ ಮಾಡುವಲ್ಲಿ ನೆರವು ನೀಡಿದ ಡಾ. ಬಿ.ನಂಜುಂಡಸ್ವಾಮಿಯವರಿಗೆ, ತಾಮ್ರಪತ್ರಗಳನ್ನು ನೋಡಲು ಅವಕಾಶ ಮಾಡಿಕೊಟ್ಟ ತುರುವೆಕೆರೆಯ ಶ್ರೀ ಸಿ.ಕೆ.ರೇಣುಕಾಮೂರ್ತಿ, ಶ್ರೀ ಪರಶೇಗೌಡ್ರು ಮೊದಲಾದ ಸಮಾಜದ ಗಣ್ಯರಿಗೆ ಕೃತಜ್ಞತೆಗಳು.)

೨. ರೇವಣಸಿದ್ಧೇಶ್ವರನ ಮಂಗಳಾರತಿ ಪದಗಳು

೧

ಅಂದಿಗೆ ಮಾಯೆಯನು ಕೊಂದು ಮರ್ಧಿಸಿದವಗೆ
ಒಂದು ಕೊಡ ವಿಷವನ್ನು ಧರಿಸಿದವಗೆ
ಒಂದಿದ ದೈಯ್ವಗಳ ಸೆರೆಯ ಬಿಡಿಸಿ
ತಂದ ಅಳವಾಂಡಧರನೀತ ಆದಿಮೂರುತಿಗೆ
ಜಯಮಂಗಳಂ ನಿತ್ಯ ಶುಭಮಂಗಳಂ ॥೧॥

ಕಲ್ಯಾಣಪುರದಲ್ಲಿ ಕಡೆಗೆ ತೆಗೆದಿಟ್ಟವರ
ಒಳಿತವರ ಮಾಡಿ ಒಳಗೆ ತೆಗೆದವಗೇ
ಜಯಮಂಗಳಂ ನಿತ್ಯ ಶುಭಮಂಗಳಂ ॥೨॥

ಕರಿಯಕಂತೆಯ ಪೊದ್ದು ಕಪ್ಪರವ ಹಿಡಿದವಗೆ
ಕೊರಳಲ್ಲಿ ರುದ್ರಾಕ್ಷಿ ಸರವ ಧರಿಸಿದವಗೆ
ಈ ಧರೆಯೊಳಗೆ ಹಿರಿಯನಿಗೆ ದೈತ್ಯ ಸಂಹಾರನಿಗೆ
ಪರಮ ಆನಂದ ಪಾವನ ಮೂರ್ತಿಗೆ
ಜಯಮಂಗಳಂ ನಿತ್ಯ ಶುಭಮಂಗಳಂ ॥೩॥

ಒಂದು ರೂಪಿನಲಿ ತಗುಣೆ ಕೊಂದು ಸುರಗಿಯ ಮಾಡಿ
ತಂದು ಉಜ್ಜೈನಿಯ ವಿಕ್ರಮ ಭೂಪಗೆ
ಮತ್ತೊಂದು ಮಾಸನೂರ ಮಡುವಿನೊಳಗಿದ್ದ
ಸುರಗಿಯ ತಂದು ಬಿಜ್ಜಳಗೆ ತೋರಿಸಿದಾತಗೇ
ಜಯಮಂಗಳಂ ನಿತ್ಯ ಶುಭಮಂಗಳಂ ॥೪॥

ಹುತ್ತದ ಮೇಲನ ಮುತ್ತುಗವ ಕಡಿದವಗೆ
ಹುಟ್ಟು ಬಂಜೆಯರಿಗೆಲ್ಲ ಮಕ್ಕಳ ಕೊಟ್ಟ ದೇವಗೆ

ಕಿಚ್ಚುಗಣ್ಣೈಯ್ಯನಿಗೆ ಕಿರಿಜಡೆಯಾತನಿಗೆ
ಸತ್ಯಕಕೆ ಒಲಿದ ರೇವಣಸಿದ್ಧಗೇ
ಜಯಮಂಗಳಂ ನಿತ್ಯ ಶುಭಮಂಗಳಂ ॥೫॥

ಮೂರು ಕಂಣ್ಣೈಯ್ಯನಿಗೆ ಮರುಳೆ ಸಿದ್ಧೇಂದ್ರನಿಗೆ
ಊರಿಂದ ಬಂದ ಮಹೇಶ್ವರಗೆ ಶಿಲ್ಪಿಯ ಸಿದ್ಧಣ್ಣ
ಮಾಯೆಗೆದಾತನಿಗೆ ತಾನು ಒಲಿದು ಬಂದ ರೇವಣಸಿದ್ಧಗೇ
ಜಯಮಂಗಳಂ ನಿತ್ಯ ಶುಭಮಂಗಳಂ ॥೬॥

ಸೋಮಸೋಮವಾರ ನೇಮ ಸಿದ್ಧೇಶ್ವರಗೆ ಪ್ರೇಮದಿಂದಲಿ
ಒಲಿವ ನಿಜರೂಪಗೆ ಅಂದಣ ಪಲ್ಲಕ್ಕಿ ಜಾಜಿಹೂವ್ವಿನ ದಂಡೆ
ಯೋಗಿ ಮೂರುತಿ ಕರಿಯ ಸಿದ್ಧೇಂದ್ರಗೆ
ಜಯಮಂಗಳಂ ನಿತ್ಯ ಶುಭಮಂಗಳಂ ॥೭॥

೨

ಇಂದು ಬೆಳಗಿರೆ ಚಂದ್ರಶೇಖರ ನಂದಿವಾಹನರೂಢಗೆ
ಕಂದುಗೊರಳಗೆ ಕಾಂತಿಪುರುಷಗೆ ಸುಂದರಾಂಗಿಯ ರಮಣಗೆ ॥೧॥

ಗರಳವುಂಡಗೆ ಸುರರ ಪೊರದಗೆ ಸರಸಿಜಾಂಬಕ ಒರೆದಗೆ
ಪುರವ ಸುಟ್ಟಗೆ ಪಾಲನೇತ್ರಗೆ ನರಗೆ ವರವನು ಕೊಟ್ಟಗೆ ॥೨॥

ದಕ್ಷಶಿಕ್ಷಗೆ ಶಿಕ್ಷರಕ್ಷಗೆ ವೃಷಭವಾಹನ ಯಕ್ಷೆಗೆ
ರಕ್ಷಿತ ಭಕ್ತ ಪ್ರಮುಖಗೆ ಲಕ್ಷಣಾಂತಕ ಜೂಟಗ ॥೩॥

ರಾಜ ಪುರದೊಳು ತೇಜ ಮೂರ್ತಿಗೆ ರಾಜರಾಜನ ಸಖನಿಗೆ
ಮಾಜಹರನಿಗೆ ಮಹಿಮ ಪುರುಷಗೆ ರಾಜಶೇಖರ ಮೂರ್ತಿಗೆ ॥೪॥

❖❖

೩. ನಾಮಸೂಚಿ

(ಇಲ್ಲಿನ ಅಂಕಿಗಳು ಸಂಧಿ ಮತ್ತು ಪದ್ಯವನ್ನು ಸೂಚಿಸುತ್ತವೆ)

ವ್ಯಕ್ತಿಸೂಚಿ

ಸ್ಥಳಸೂಚಿ

❖❖

೪. ಪದ್ಯಗಳ ಅಕಾರಾದಿ

(ಇಲ್ಲಿನ ಸಂಖ್ಯೆಗಳು ಸಂಧಿ ಮತ್ತು ಪದ್ಯವನ್ನು ಸೂಚಿಸುತ್ತವೆ)

ಹ

❖❖

ಸಮಗ್ರ ಲಿಂಗಾಯತ ಅಪ್ರಕಟಿತ ಪ್ರಾಚೀನ ಸಾಹಿತ್ಯ ಪ್ರಕಟನಮಾಲೆ : ೫೯

ಸಿದ್ಧಮಂಕ ಚರಿತೆ

ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ಡಾ. ವೈ. ಸಿ. ಭಾನುಮತಿ

೨೦೦೪

ಪ್ರಕಾಶಕರು

ಲಿಂಗಾಯತ ಅಧ್ಯಯನ ಸಂಸ್ಥೆ

ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ

ಗದಗ

*

ಪ್ರಸ್ತಾವನೆ

ಲಿಂಗಾಯತ ಸಮಾಜ, ಕುರುಬ ಸಮಾಜಗಳ ಏಕೀಕರಣವನ್ನು ಧ್ವನಿಸುವ ಪುರಾಣೀಕೃತ ಇತಿಹಾಸ ಕೃತಿಯಾಗಿದೆ, ಸಿದ್ಧಮಂಕ ಚರಿತೆ. ಕರ್ನಾಟಕದಲ್ಲಿ ಬೇಡರ ಬೇಟೆಸಂಸ್ಕೃತಿ, ಕುರುಬರ ಪಶುಪಾಲನೆ ಸಂಸ್ಕೃತಿ, ಲಿಂಗಾಯತರ ಕೃಷಿಸಂಸ್ಕೃತಿ ಎಂಬ ಮೂರು ಘಟ್ಟಗಳು ಬೆಳೆದುಬಂದಿವೆ.[೧] ಈ ಘಟ್ಟಗಳಲ್ಲಿ ಕ್ರಮವಾಗಿ ಬೇಟೆಗೆ ಸಹಕಾರಿಯಾದ ನಾಯಿಲಾಂಛನವುಳ್ಳ 'ಭೈರವ', ಪಶುಪಾಲನೆಗೆ ಸಹಕಾರಿಯಾದ ನಾಯಿಲಾಂಛನವುಳ್ಳ 'ಮೈಲಾರ', ಕೃಷಿಕಾರ್ಯಕ್ಕೆ ಸಹಕಾರಿಯಾದ ನಂದಿ ಲಾಂಛನವುಳ್ಳ 'ಶಿವ' ದೇವತೆಗಳು ಸೃಷ್ಟಿಯಾಗುತ್ತ ಬಂದಿವೆ. ಅಂದರೆ ಭೈರವನೆ ಮೈಲಾರನಾಗಿ, ಮೈಲಾರನೆ ಶಿವನಾಗಿ ಪರಿವರ್ತನೆಗೊಳ್ಳುತ್ತ ಬಂದಿದ್ದಾರೆ. ಈ ಕ್ರಮವನ್ನು ನೋಡಿದರೆ ಲಿಂಗವಂತರಿಗೆ ಹತ್ತಿರದ ಘಟ್ಟದವರಾಗಿದ್ದರೆ ಕುರುಬರು. ಹೀಗಾಗಿ ಈ ಎರಡೂ ಸಮುದಾಯಗಳಿಗೆ ರೇವಣಸಿದ್ಧ ಕುಲಗುರುವಾಗಿದ್ದಾನೆ. ಅಮುಗಿದೇವ, ಗೊಲ್ಲಾಳ ಮೊದಲಾದ ಕುರುಬ ಶರಣರು ಇಲ್ಲಿ ಕಂಡುಬರುತ್ತಾರೆ.

ಕುರುಬರ ಬೀರಪ್ಪ–ವೀರಗಾರ, ಲಿಂಗಾಯತರ ವೀರಭದ್ರ–ಪುರವಂತ ಸಂಪ್ರದಾಯಗಳಲ್ಲಿ ವಿಶೇಷ ಹೋಲಿಕೆಯಿದೆ. ಲಿಂಗಾಯತರು ಮತ್ತು ಹಂಡೆ ಕುರುಬರಲ್ಲಿ ಬೇರ್ಪಡಿಸಿ ಹೇಳಲಾರದಂಥ ಏಕೀಕರಣ ಏರ್ಪಟ್ಟಿದೆ. 'ಒಡೆಯರು' ಎರಡೂ ಸಮಾಜದಲ್ಲಿ ಕಂಡುಬರುವ ಗುರುಗಳಾಗಿದ್ದಾರೆ. ಇದೆಲ್ಲವನ್ನು ನೋಡಿದರೆ ಲಿಂಗಾಯತರಲ್ಲಿ ಸೇರಿಹೋದ ಹಲವಾರು ಸಮಾಜಗಳಲ್ಲಿ ಕುರುಬ ಸಮಾಜವೇ ದೊಡ್ಡದೆಂದು ಸ್ಪಷ್ಟವಾಗುತ್ತದೆ. ಈ ಸೇರುವಿಕೆಯ ಸಂಕ್ರಮಣ ಸಂದರ್ಭದ ಘಟನೆಯನ್ನು ಆಧರಿಸಿದೆ. ಈ ಕೃತಿ, ಕುರುಬ ಸಮಾಜವನ್ನು ಪ್ರತಿನಿಧಿಸುವ ರೇವಣಸಿದ್ಧ–ಸಿದ್ಧರಾಮ, ಮಂಕಯ್ಯತಂದೆ–ಹೆಗ್ಗಗೌಡರು, ಲಿಂಗಾಯತ ಸಮಾಜವನ್ನು ಪ್ರತಿನಿಧಿಸುವ ಬಸವಾದಿ ಶರಣರ ಸಮಕ್ಷಮದಲ್ಲಿ ಏಕೀರರಣಗೊಳ್ಳುವ ಕ್ರಿಯೆ ಕಥೆಯಾಗಿ ಬೆಳೆದಿದೆ. ಬಹುಶಃ "ಭಂಡಾರಸಂಸ್ಕೃತಿ"ಯಿಂದ "ವಿಭೂತಿಸಂಸ್ಕೃತಿ"ಗೆ ಹೊರಳುವ, "ಸಿದ್ಧಪಂಥೀಯ"ರು "ಶರಣ ಪಂಥೀಯ"ರಾಗುವ ಕ್ರಿಯೆ ಪರೋಕ್ಷವಾಗಿ ಇಲ್ಲಿ ಕಾಣಿಸುತ್ತದೆ. ಅಲ್ಲಮಪ್ರಭು ಕಾರಣವಾಗಿ ಸಿದ್ಧರಾಮ, ಸಿದ್ಧರಾಮ ಕಾರಣವಾಗಿ

---

೧. ಕುಲನಾಮವನ್ನು ಗಮನಿಸಿ ಒಕ್ಕಲಿಗರನ್ನು ಕೃಷಿ ಸಂಸ್ಕೃತಿಯವರೆಂದು ಹೇಳಬಹುದಾದರೂ, ನಾಯಿ ಲಾಂಛನದ ಭೈರವನ ಆರಾಧಕರಾದುದರಿಂದ, ಇವರನ್ನು ಬೇಟೆ ಸಂಸ್ಕೃತಿಯವರೆಂದು ಕರೆಯಬಹುದಾಗಿದೆ.

ಮಂಕಯ್ಯತಂದೆ, ಶರಣ ಸಂಸ್ಕೃತಿಗೆ ಹೊರಳಿದ ಎರಡು ಘಟನೆಗಳ ಸಂಯುಕ್ತ ಸಂಪುಟವಾಗಿದೆ, ಈ ಕೃತಿ. ಆದುದರಿಂದ ಸಿದ್ಧರಾಮನ ಚರಿತ್ರೆಯೆಂದು ಕರೆದಿದ್ದರೂ ಇದು, ನಿಜ ಅರ್ಥದಲ್ಲಿ ಮಂಕಯ್ಯತಂದೆಯ ಚರಿತ್ರೆಯೂ ಆಗಿದೆ.

ಇಂದು ಸ್ಥಳೀಯ ಚರಿತ್ರೆಯ ಬಗ್ಗೆ ವಿದ್ವಾಂಸರು ಹೆಚ್ಚು ಆಸಕ್ತಿ ತೋರಿಸುತ್ತಲಿದ್ದಾರೆ. ಈ ಆಸಕ್ತಿಗೆ ಪೋಷಕವಾಗುವಂತೆ ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ಸಿರುಮನಚರಿತೆ,

೧. ಕುಲನಾಮವನ್ನು ಗಮನಿಸಿ ಒಕ್ಕಲಿಗರನ್ನು ಕೃಷಿ ಸಂಸ್ಕೃತಿಯವರೆಂದು ಹೇಳಬಹುದಾದರೂ, ನಾಯಿ ಲಾಂಛನದ ಭೈರವನ ಆರಾಧಕರಾದುದರಿಂದ, ಇವರನ್ನು ಬೇಟೆ ಸಂಸ್ಕೃತಿಯವರೆಂದು ಕರೆಯಬಹುದಾಗಿದೆ.

ನಿಂಬಸಾಮಂತ ಚರಿತೆ, ಹೊಸ ಕುಮಾರ ರಾಮನ ಸಾಂಗತ್ಯ, ಕೊಮಾರ ರಾಮಯ್ಯನ ಚರಿತ್ರೆ, ಸೌಂದರ ಕಾವ್ಯ, ಸರಜಾಹನುಮೇಂದ್ರ ಯಶೋವಿಲಾಸಂ ಇತ್ಯಾದಿ ಕೃತಿಗಳು ಇತ್ತೀಚೆಗೆ ಕನ್ನಡದಲ್ಲಿ ಬೆಳಕು ಕಂಡಿವೆ. ಈ ಸಾಲಿಗೆ ಸೇರುವ ಇನ್ನೊಂದು ಕೃತಿಯಾಗಿದೆ, ಸಿದ್ಧಮಂಕ ಚರಿತೆ.

ಕವಿ

ಕನ್ನಡದಲ್ಲಿ ಕೆಲವೊಮ್ಮೆ ಕವಿಕೃತಿಯ ಶೋಧ ಒಂದು ದೊಡ್ಡ ಸಮಸ್ಯೆ. ಕವಿ ಗೊತ್ತಿದ್ದು ಕೃತಿ ಸಿಕ್ಕಿಲ್ಲ, ಕೃತಿ ಸಿಕ್ಕಿದ್ದು ಕವಿ ಗೊತ್ತಿಲ್ಲ ಎಂಬ ನಿದರ್ಶನಗಳಿವೆ. ಒಮ್ಮೊಮ್ಮೆ ಇವೆರಡೂ ಸಂದೇಹದಲ್ಲಿ ಉಳಿದೂದು ಉಂಟು. ಪ್ರಕೃತದಲ್ಲಿ ಕೃತಿ ಸಿಕ್ಕಿದೆ, ಕವಿಯ ಬಗ್ಗೆ ಗೊತ್ತಾಗುವುದಿಲ್ಲ. ಏಕೈಕ ಹಸ್ತಪ್ರತಿಯಲ್ಲಿರುವ ಇದರ ತ್ರುಟಿತ ಭಾಗದಲ್ಲೇನಾದರೂ ಕವಿನಾಮವಿರಬಹುದೇ? ಎಂಬ ಸಂದೇಹವೂ ಹುಟ್ಟುತ್ತದೆ. ಹೀಗಿದ್ದೂ ಕವಿಶೋಧಕ್ಕೆ ಈ ರೀತಿ ತೊಡಗಬಹುದು:

ಹಸ್ತಪ್ರತಿಯ ಆರಂಭದ ಪ್ರಶಸ್ತಿಭಾಗದಲ್ಲಿ 'ಗುರುಶಾಂತಗೆ ಇಷ್ಟಾರ್ಥವನಿತ್ತ ಶ್ರೀಗುರು ಸಿದ್ಧರಾಮೇಶ್ವರ ಸ್ವಾಮಿ' ಎಂಬ ವಾಕ್ಯವಿದೆ. ಇಲ್ಲಿಯ ಗುರುಶಾಂತ ಕವಿಯಾಗಿರದೆ ಲಿಪಿಕಾರನಾಗಿರಬಹುದು.

ಸಿದ್ಧ ಮಂಕನು ಸರವುರದೊಳು ತಪವಿದ್ದು
ಸಿದ್ಧಿಯ ಪಡೆದ ಕಥನವ
ಆದ್ಯರ ವಚನ ಶಾಸನವನೀಕ್ಷಿಸಿಯ
ಲ್ಲಿರ್ದುದ ಪೇಳ್ದ ಸಿದ್ಧಿಯನು ೧-೧೬

ಎಂಬ ಪದ್ಯವನ್ನಾಧರಿಸಿ ಡಿ.ಎಲ್.ಎನ್. ಅವರು ತಾವು ಸಂಪಾದಿಸಿದ ಸಿದ್ಧರಾಮ ಚಾರಿತ್ರದ ಪೀಠಿಕೆಯಲ್ಲಿ ಇದರ ಕರ್ತೃ ಸಿದ್ಧಯ್ಯನಿರಬಹುದೆಂದು ಊಹಿಸಿದ್ದಾರೆ. ಸಿದ್ಧಿಯನು>ಸಿದ್ಧಯನು ಎಂದು ತಿದ್ದಿಕೊಳ್ಳಲು ಅವಕಾಶವಿರುವುದರಿಂದ ಇವರ ಊಹೆ ನಿಜವಿರಬೇಕೆನಿಸುತ್ತದೆ. ಇದಲ್ಲದೆ,

ನೋಡಿದವರಿಗೆ ತಿಳಿಯದಿಳೆ.....
ಬೀಡುಯೆನುತ ಬಿಸುಟಲಿಕೆ

ಕಾದೊಡಿ ಒಡೆಯ ಸಿದ್ಧ ಬರೆದರ್ಥವ
ಗಾಢದಿ ಬರೆದಡಗಿಸಿದ ೪-೨೪೭

ಎಂಬ ಪದ್ಯ ಕವಿಯ ಹೆಸರು ಸಿದ್ಧನೆಂದೇ ಸೂಚಿಸುವಂತಿದೆ. ಈ ಹೆಸರಿಗೆ ವಿಶೇಷವಾಗಿದರುವ **'ಕಾದೊಡಿ ಒಡೆಯ'** ಎಂಬಲ್ಲಿಯ 'ಕಾದೊಡಿ' ಎಂಬುದು ಇವನ ಗ್ರಾಮನಾಮವಾಗಿರಬಹುದು. ಇದು ಎಲ್ಲಿದೆ ಹುಡುಕಬೇಕು. ಇದರ ನಿಜರೂಪ ಕಾದವಾಡಿ ಇರಬಹುದು. ಇಲ್ಲಿನ 'ಕಾದೊಡಿ ಒಡೆಯ' ಎಂಬಲ್ಲಿಯ 'ಒಡೆಯ' ಎಂಬುದು ಕುರುಬ ಗುರುವಿನ ಸೂಚನೆಯಾಗಿರುವ ಸಂಭವ ಅಧಿಕ. ಹಾಗಿದ್ದರೆ ಇವನು ಕಾದೊಡಿ ಗ್ರಾಮದವನೂ ಕುರುಬಜಾತಿಯ ಗುರುವೂ ಆಗಿರುವ ಒಡೆಯ ಸಿದ್ಧನೆಂದು ಹೇಳಬೇಕೆನಿಸುತ್ತದೆ. ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಈ ಕೃತಿಯ ಏಕೈಕ ಹಸ್ತಪ್ರತಿ ಮೂಲತಃ ಹೆಗ್ಗಡದೇವನಕೋಟೆ ತಾಲ್ಲೂಕು ಸರಗೂರು ಹೋಬಳಿ ಎತ್ತಿಗಗ್ರಾಮದ ಎತ್ತಿಗದ ಮಠದಲ್ಲಿ ಲಭಿಸಿದೆ. ಈ ಕವಿಯು ಈ ಪರಿಸರದವನಾಗಿರುವ ಸಾಧ್ಯತೆಯಿದೆ.

ಪ್ರಸ್ತುತ ಕವಿಯ ಕಾಲದ ಬಗ್ಗೆ ಅಂತರಿಕ ಮತ್ತು ಬಾಹ್ಯ ಆಧಾರಗಳು ಲಭ್ಯವಿಲ್ಲ. ಛಂದಸ್ಸು, ಭಾಷೆ ಇತ್ಯಾದಿಗಳನ್ನು ಗಮನಿಸಿ ಕೃತಿಯ ಕಾಲ ಸುಮಾರು ೧೭ನೆಯ ಶತಮಾನವೆಂದು ಹೇಳಬಹುದು. ಹಾಗಿದ್ದರೆ ಹಾಲುಮತವನ್ನು ಕುರಿತ ಪುರಾಣಗಳಲ್ಲಿ ಇದೇ ಮೊದಲಿನದೆನಿಸುತ್ತದೆ.

ಕಥೆ

ಸಂಧಿ ಒಂದು : ಪರಮಾರ್ಥ-ಪುಣ್ಯ ತೀರ್ಥ-ಶರಣಜನ ಹಿತಾರ್ಥ-ಉದ್ಯದರ್ಥ-ವರಮಂತ್ರ-ಸತ್ಯತಂತ್ರ-ಭುವನಜನ ಸಮುದಾತ್ತ ಮಂತ್ರ, ಮಹೇಶ-ಧರಣೀಶ-ಚಿತ್ರಕಾಶ ನಿರುಪನಗುಣಭೂಷ-ವಿರೂಪಾಕ್ಷವೇಶ-ಹರನಾಮ ಭರಿತಸಂಗ್ರಾಮನಾದ ಸಿದ್ಧರಾಮಶಿವನಿಗೆ ನಮಸ್ಕಾರ (೫). ಕಪಿಲಸಿದ್ಧ ಮಲ್ಲನ ಮಹಿಮೆಯನ್ನು ಬಣ್ಣಿಸುತ್ತೇನೆ, ಶರಣರು ಲಾಲಿಸಬೇಕು. ಈ ಕೃತಿ ಕೇಳಿದವರ ಪಾಪ ನಾಶವಾಗುತ್ತದೆ. ಕಡಲು ಅಡವಿ ಬೆಟ್ಟಗಳ ವರ್ಣನೆ ಕೇಳಿ ಕೆಡಬೇಡಿರಿ. ರೇವಣಸಿದ್ಧನ ಇರವನ್ನು ನೆನೆಯಿರಿ. ರಸಭಾವ ಲಕ್ಷಣಗಳನ್ನು ಎಣಿಸಬೇಡಿರಿ. ಲಕ್ಷಣವನ್ನೇ ಮುಖ್ಯವಾಗಿಟ್ಟುಕೊಂಡು ಭಾರತ ರಾಮಾಯಣ ಬರೆದವರು ಯಾವ ಮುಕ್ತಿ ಪಡೆದರು ? ಕೇವಲ ಲಕ್ಷಣದಿಂದ ಏನಾಗುತ್ತದೆ (೧೫). ಸಿದ್ಧಮಂಕನು ಸರವೂರ ಗ್ರಾಮದಲ್ಲಿ ತಪವಿದ್ದು ಸಿದ್ಧಿ ಪಡೆದುದನ್ನು ಆದ್ಯರ ವಚನ ಮತ್ತು ಶಾಸನಗಳನ್ನಾಧರಿಸಿ ಹೇಳುತ್ತೇನೆ (೧೬). ರೇವಣಸಿದ್ಧ ಸಿದ್ಧರಾಮರು ದೇವರ ಪ್ರತಿರೂಪವೆಂದು ಭಾವಿಸಿದರೆ ನಿಮಗೆ ಸಿದ್ಧೇಶ್ವರನು ಒಲಿಯುತ್ತಾನೆ. ಈ ಕೃತಿಯನ್ನು ಕೇಳಿದವರ ಪಾಪ ಪರಿಹಾರವಾಗುತ್ತದೆ. ಅನ್ನದಾನ ಕನ್ಯಾದಾನಾದಿಗಳ ಫಲ ಲಭಿಸುತ್ತದೆ (೨೦).

ಭೂವಳಯದ ಸರ್ವಜೀವಾದಿಗಳನ್ನು ಪಾವನವ ಮಾಡುವುದಕ್ಕಾಗಿ ಸಿದ್ಧರಾಮ ಹುಟ್ಟಿದ ಕಥೆಯನ್ನು ಕೇಳಿರಿ. ಧರೆಗೆ ಸೊನ್ನಲಪುರ ಕೈಲಾಸ, ಸಿದ್ಧರಾಮನೇ ಶಿವ, ಗುಡ್ಡರು ಗಣೇಶ್ವರರು, ಅಷ್ಟಷಷ್ಟಿತೀರ್ಥವೇ ಶಿವನಿಲಯವೆಂದು ಬಣ್ಣಿಸುತ್ತೇನೆ. ಒಮ್ಮೆ ಸುರರ ಕಿನ್ನರರ ಸಭೆಗೆ ಆಗಮಿಸಿದ

ಭೃಂಗಿಯನ್ನು ನೋಡಿ ಗಂಧರ್ವರು ನಕ್ಕರು. ಇದರಿಂದ ಸಿಟ್ಟಿಗೆದ್ದ ಭೃಂಗಿ "ನೀವು ಭೂಮಿಯಲ್ಲಿ ಸತಿಪತಿಗಳಾಗಿ ಹುಟ್ಟಿರಿ" ಎಂದು ಶಾಪವಿತ್ತನು. ಕ್ಷಮೆ ಕೇಳಿದ ಗಂಧರ್ವನಿಗೆ "ಉಣ್ಣದ ಉಸಿರಿಕ್ತದ ಜಿತೇಂದ್ರಿಯ ಮಗನು ಹುಟ್ಟುವಲ್ಲಿ ನಿಮಗೆ ಶಾಪವಿಮೋಚನೆಯುಂಟು" ಎಂದು ಭೃಂಗಿ ಹೇಳಿದ. "ಇಂಥ ಮಗನು ನನಗೆ ಹುಟ್ಟುವುದು ಹೇಗೆ ಸಾಧ್ಯ?" ಎಂದು ಕೇಳಲು "ಈ ಬಗ್ಗೆ ಶಿವನಲ್ಲಿ ಬಿನ್ನವಿಸಿ ಕೇಳಿರಿ" ಎಂದು ಹೇಳಿದ (೨೮). ಶಾಪಗ್ರಸ್ತ ಗಂಧರ್ವರು ಶಿವನಲ್ಲಿಗೆ ಬಂದು ಜರುಗಿದ ಸಂಗತಿಯನ್ನು ವಿವರಿಸಲು "ನಾನೇ ನಿಮ್ಮ ಮಗನಾಗಿ ಹುಟ್ಟುತ್ತೇನೆ" ಎಂದು ಭರವಸೆ ನೀಡಿದ. ಶಾಪಗ್ರಸ್ತ ಗಂಧರ್ವರು ಕುಡಿಯರ ಕುಲದಲ್ಲಿ ಹುಟ್ಟಿ ಮುದ್ದಯ್ಯ ಸುಗ್ಗವ್ವೆ ಹೆಸರಿನಿಂದ ಬೆಳೆದರು (೩೬). ಇಬ್ಬರ ವಿವಾಹ ಜರುಗಿ ಅರವತ್ತು ವರುಷದವರಾದವರು(೩೮).

ಹನ್ನೆರಡು ಸಾವಿರ ಕನ್ನೆಯರ ಭಿಕ್ಷೆ ಬೇಡಿದ ರೇವಣಸಿದ್ಧನು ಸಂಚರಿಸುತ್ತ ಸೊನ್ನಲಿಗೆಯ ಸಮೀಪ ಬರುತ್ತಲೇ ಪಾದುಕೆಗಳನ್ನು ಕಳಚಿ, ಭೂಮಿಗೆ ನಮಸ್ಕಾರಮಾಡಿದ. "ಇದು ತೀರ್ಥಕ್ಷೇತ್ರವಲ್ಲ ಹೀಗೇಕೆ ಮಾಡಿದಿರಿ?" ಎಂದು ಶಿಷ್ಯರು ಕೇಳಲು "ಇದು ಲಿಂಗದ ಬೀಡು, ಮುಕ್ತಿಯ ಕ್ಷೇತ್ರವಾಗಿ ಬೆಳೆಯುತ್ತದೆ. ಸುಗ್ಗಲೆಯ ಬಸಿರಿನಿಂದ ನಿಮ್ಮೆಲ್ಲರನ್ನು ಪಾವನ ಮಾಡುವ ಸಿದ್ಧರಾಮ ಹುಟ್ಟಲಿದ್ದಾನೆ" ಎಂದು ನುಡಿದು, ಗ್ರಾಮ ಪ್ರವೇಶಿಸಿ, ಸುಗ್ಗವ್ವೆಗೆ ನಮಸ್ಕರಿಸಿ "ನಿನ್ನ ಜಠರದಲ್ಲಿ ಓರ್ವ ಶಿವಯೋಗಿ ಜನಿಸುವನು" ಎಂದು ಹೇಳಿದ. "ಹೊಲೆ ನಿಂತು ದಿನಗಳುರುಳಿವೆ" ಎಂದು ಆಕೆ ನುಡಿಯಲು, "ಸತಿಪತಿಗಳ ಯೌವನ ವಿಕಾರದಲ್ಲಿ ಹುಟ್ಟುವವನಲ್ಲ" ಎಂದು ಹೇಳಿ ರೇವಣಸಿದ್ಧ ಮರಳಿದ (೪೬). ಬಳಿಕ ಶಿವನು ತನ್ನ ನಿತ್ಯತ್ವವನ್ನೇ ಒಂದು ರೂಪಮಾಡಿ ಸುಗ್ಗವ್ವೆಯ ಗರ್ಭದಲ್ಲಿರಿಸಿದ. ಐದು ತಿಂಗಳಿಗೆ ಒಂಬತ್ತು ತಿಂಗಳು ತುಂಬಿದ ಚಿಹ್ನೆ ತೋರಿತು. ಸಂಕಟ ತೊಂದರೆಗಳಿಲ್ಲದೆ ಒಂದು ಮಧ್ಯರಾತ್ರಿಯಲ್ಲಿ ಹೂಮಳೆ ಸುರಿಯುತ್ತಿದ್ದಂತೆಯೇ ಸಿದ್ಧರಾಮ ಉದಯಿಸಿದ (೫೬). ಗೌರಿ ಧರೆಗೆ ಇಳಿದು ಬಂದು ಮೊಲೆಯೂಡಿ, ತೊಟ್ಟಿಲೊಳಿಟ್ಟು ತೂಗಿ, ಸಿದ್ಧರಾಮ ಎಂದು ಹೆಸರಿಟ್ಟು ಕೈಲಾಸಕ್ಕೆ ಮರಳಿದಳು. ಎಚ್ಚೆತ್ತ ಸುಗ್ಗಲೆ ಕೂಸನ್ನು, ಮಗ್ಗುಲಲ್ಲಿದ್ದ ಹೆಸರು ಕೆತ್ತಿದ ಪಟವನ್ನು ನೋಡಿ ಹಿಗ್ಗೆದಳು. ಹೀಗಿದ್ದೂ ಕೂಸಿಗೆ ಧೂಳಿಮಾಕಾಳ ಎಂದು ಹೆಸರಿಟ್ಟರು. ಏಳೆಂಟು ತಿಂಗಳಲ್ಲಿ ಐದು ವರ್ಷದವನಾಗಿ ಮಗು ಬೆಳೆಯಿತು. ಮಗನಿಗೆ ದನ ಕಾಯುವ ಕೆಲಸ ಹಚ್ಚಿದರು. ಅಡವಿ ಯಲ್ಲಿ ಸಿದ್ಧರಾಮನು ಮರದ ಕೆಳಗೆ ಲಿಂಗವನ್ನು ಪೂಜಿಸುವಲ್ಲಿ, ಹೂಪತ್ರೆ ಏರಿಸುವುದರಲ್ಲಿ ತಲ್ಲೀನನಾಗಿರುತ್ತಿದ್ದನು (೭೭).

ಒಮ್ಮೆ ಸಿದ್ಧರಾಮನು ಹೊಲದಲ್ಲಿ ಕರುಗಳನ್ನು ಕಾಯುತ್ತಿರುವಾಗ ಜಡೆ, ಕಿರೀಟ, ಚಂದ್ರ, ದೇವಗಂಗೆ, ಕುಂಡಲಗಳೊಂದಿಗೆ ಪ್ರತ್ಯಕ್ಷನಾದ ಶಿವನಿಗೆ ಅವನು ತಿನ್ನಲು ಬೆಳಸಿಯನ್ನು ಕೊಟ್ಟ, ತಾನು ಶ್ರೀಶೈಲಮಲ್ಲಿಕಾರ್ಜುನನೆಂದೂ ಹಸಿದಿರುವ ತನಗೆ ಅಶನ ಬೇಕೆಂದೂ ಶಿವ ಕೇಳಿದ. ಸಿದ್ಧರಾಮ ಓಡಿಹೋಗಿ ಮನೆಯಿಂದ ತರುವಷ್ಟರಲ್ಲಿ ಶಿವ ಮಾಯವಾದ. ಸಿದ್ಧರಾಮ ಶಿವನನ್ನು ಹುಡುಕಿ ಬಳಲಿದ (೯೦). ಆಗ ಪರ್ವತಕ್ಕೆ ಹೊರಟಿದ್ದ ಪರಿಷೆಯವರು ಸಿದ್ಧರಾಮನನ್ನು ಕಂಡು, ಅವನ ಅಳಲನ್ನು ಕೇಳಿ, ಪರ್ವತಕ್ಕೆ ಕರೆದುಕೊಂಡು ಹೋದರು (೯೪). ಕಳೆದುಹೋದ ಮಗನಿಗಾಗಿ ಸುಗ್ಗಲೆ ಹಲುಬಿದಳು. ಅಷ್ಟರಲ್ಲಿ ಶಿವ ಜಂಗಮರೂಪದಲ್ಲಿ ಬಂದು, ಸಿದ್ಧರಾಮ ಶ್ರೀಶೈಲದತ್ತ ಹೋದುದನ್ನು ಹೇಳಿದ. ಅಣ್ಣ ಬೊಮ್ಮಯ್ಯ ತಮ್ಮನನ್ನು ಹುಡುಕಲು ಶ್ರೀಶೈಲಕ್ಕೆ ಹೊರಟ. ಪರಿಷೆಯವರು

ಸಿದ್ಧರಾಮನಿಗೆ ಶ್ರೀಶೈಲದಲ್ಲಿ ಮಲ್ಲಿಕಾರ್ಜುನಲಿಂಗ ತೋರಿಸಿದರು. ಇದು ತಾನು ಕಂಡ ಶಿವನಲ್ಲವೆಂದು ಸಿದ್ಧರಾಮ ಮತ್ತೆ ಅಳುತ್ತ ಹುಡಕತೊಡಗಿದ, ಸಿಗದಿರಲು ಪ್ರಾಣತ್ಯಾಗಕ್ಕೆ ಸಿದ್ಧನಾಗಿ ಕಮರಿಯಲ್ಲಿ ಹಾರಿದ. ಶಿವ ಪ್ರತ್ಯಕ್ಷನಾಗಿ ರಕ್ಷಿಸಿದ. ಶಿವನ ಆಜ್ಞೆಯಂತೆ ಭೈರವನು ಸಿದ್ಧರಾಮನಿಗೆ ನಲ್ವತ್ತೆಂಟು ಯೋಜನ ವಿಸ್ತಾರದ ಶ್ರೀಶೈಲ ತೋರಿಸಿದ. ತನ್ನ ಸಾಮರ್ಥ್ಯವನ್ನೆಲ್ಲ ಸೊಲ್ಲಾಪುರಕ್ಕೆ ಧಾರೆ ಎರೆಯುವೆನೆಂದೂ ಬರಡು ಕಪಿಲೆಯಿಂದ ಕರು ಹುಟ್ಟಿದ ದಿನ ಬರುವೆನೆಂದೂ ಶಿವ ಹೇಳಿದ ಮಾತನ್ನು ನಂಬಿ, ಸಿದ್ಧರಾಮ ಸೊಲ್ಲಾಪುರಕ್ಕೆ ಮರಳಿ, ಶಿವನ ಆದೇಶದಂತೆ ಅಣ್ಣ ಬೊಮ್ಮಣ್ಣನ ಸಹಾಯದಿಂದ ದೇವಾಲಯ ನಿರ್ಮಿಸಿ, ಶ್ರೀಶೈಲದಿಂದ ಲಿಂಗರೂಪದಲ್ಲಿ ಬಂದ ಶಿವನನ್ನು ಸ್ಥಾಪಿಸಿದ (೧೪೩).

ಕೊಲ್ಲಿಪಾಕಿಯ ಸೋಮೇಶ್ವರದಲ್ಲಿ ಹುಟ್ಟಿದ ರೇವಣಸಿದ್ಧನು ಈ ಹಿಂದೆ ಸೊಲ್ಲಾಪುರ ಸೀಮೆಗೆ ಬಂದು, ಶರಣಾರ್ಥಿ ಹೇಳಿದುದಕ್ಕೆ ಕಾರಣವೇನೆಂದು–ಮಹೇಶ್ವರನ ಶಾಪದಿಂದ ರೋಮಕೋಟಿಋಷಿಯು ಮಂಕುಮರುಳ ಹೆಸರಿನಿಂದ ಹುಟ್ಟಿ ಶಿಷ್ಯನಾಗಿದ್ದವನು ಕೇಳಲು, ಮಹಾಪುರುಷನೊಬ್ಬನು ಪರ್ವತಲಿಂಗಗಳನ್ನು ಇಲ್ಲಿ ಸ್ಥಾಪಿಸುವನೆಂದು ಗುರು ನುಡಿಯುತ್ತಲೇ "ಈ ಮಹಾಪುರುಷನೇ ನನ್ನ ಗುರು, ನಾನು ಅವನಿಗಾಗಿ, ನೀವು ನಿನ್ನೆ ಮೂರ್ತವ ಮಾಡಿದ್ದ ಸರವೂರು ಗ್ರಾಮದ ಕೋಡುಗಲ್ಲಿನ ಮೇಲೆ ತಪೋಮಗ್ನನಾಗುವೆನು" ಎನ್ನುತ್ತ ತಪಸ್ಸಿಗೆ ಕುಳಿತನು (೧೫೪), ಈ ವಿಪರೀತ ತಪಸ್ಸನ್ನು ನಾರದನಿಂದ ಕೇಳದ ಶಿವ, ನಂದಿಯನ್ನೇರಿ ಭೂಲೋಕಕ್ಕೆ ಪಯಣಿಸಿದ.

ಸಂಧಿ ಎರಡು : ದಾರಿಯಲ್ಲಿ ಮೂಕನೆಂಬ ಋಷಿಯ ತಪೋವನಕ್ಕೆ ಬರುತ್ತಲೇ ಅಲ್ಲಿ ಚರಿಸುತ್ತಲಿದ್ದ ಅಸಂಖ್ಯಾತ ಕುರಿಗಳ ಬಗ್ಗೆ ಗಿರಿಜೆ ಕೇಳಿದಳು. "ಭೃಂಗಿಯನ್ನು ಕಂಡು ಕಿನ್ನರರು ಕುರಿಗಳಂತೆ ಅರಚಿ ಚೇಷ್ಟೆ ಮಾಡಲಾಗಿ, ಭೃಂಗೀಶನಿತ್ತ ಶಾಪದಿಂದ ಅವರೆಲ್ಲ ಕುರಿಗಳಾಗಿ ಇಲ್ಲಿ ಚರಿಸುತ್ತಲಿದ್ದಾರೆ" ಎಂದು ಶಿವ ಉತ್ತರಿಸಿದ ಹಾಗೂ ಅವುಗಳನ್ನು ಹೊಡೆದು ಕೊಂಡು ಹೊರಟ. ನಿಂದಲ್ಲಿ ನಿಲ್ಲದ ಇವುಗಳನ್ನು ನಿಗ್ರಹಿಸುವುದು ಅಸಾಧ್ಯವೆನಿಸಲು ಗವಿಯಲ್ಲಿ ಹೊಗಿಸಿ ಕೈಲಾಸಕ್ಕೆ ಮರಳಿದ (೨–೧೦).

ಇತ್ತ ಶಿವಭಕ್ತನಾದ ಕುಡಿಯೊಕ್ಕಲ ಮಗನ (ಹೆಗ್ಗಗೌಡನ) ಹೊಲಕ್ಕೆ ಹೊಂದಿ ವಿಸ್ತಾರವಾಗಿ ಹುತ್ತ, ಅದರ ಮೇಲೆ ಮುತ್ತುಗ ಬೆಳೆದಿದ್ದಿತು. ಇದನ್ನು ನೆಲಸಮ ಮಾಡುವುದಕ್ಕಾಗಿ ಮರ ಕಡಿದು, ನೇಗಿಲು ಹೂಡಲು, ಹುತ್ತದ ಕೆಳಗಿನ ಗವಿಯಿಂದ ಇರುವೆಯಂತೆ ಬಂದ ಕುರಿಗಳನ್ನು ಮೆದೆ ಹಾಕಿ ಸುಟ್ಟನು. ಆದರೂ ಅವು ತಂಡೋಪತಂಡವಾಗಿ ಬಂದು ಹೊಲ ಮೇಯಲು, ಒಕ್ಕಲುಮಗ ಅಡ್ಡಗಟ್ಟಿ ತರುಬಿದನು (೧೭). ಆಗ ಶಿವನು ವೃದ್ಧವೇಷದಿಂದ ಬಂದು, ಆ ಕೀಲಾರಗಳಲ್ಲಿ ಒಂದು ಕಪಿಲೆಯನ್ನು ಬೇಡಿದನು. "ಇದು ನನ್ನ ಸಂಪತ್ತಲ್ಲ ಹೇಗೆ ಕೊಡಲಿ?" ಎಂದು ಒಕ್ಕಲುಮಗ ನುಡಿದ. "ಈ ಸಂಪತ್ತೆಲ್ಲ ನೀನೇ ಇಟ್ಟುಕೋ" ಎಂದ ಶಿವನ ಮಾತಿಗೆ "ನನಗೆ ಬೇರೆ ಸಂಪತ್ತು ಅಪಾರವಾಗಿದೆ, ಅನ್ಯರ ಈ ಸಂಪತ್ತು ನನಗೆ ಬೇಡ" ಎಂದು ಉತ್ತರಿಸಿದ. ಆಗ ಶಿವನು "ಇದೆಲ್ಲ ನನ್ನದು" ಎಂದು ಒಕ್ಕಲು ಮಗನಿಗೆ ನಂಬುಗೆ ಬರುವಂತೆ ಹೇಳಿ, ಆಶೀರ್ವದಿಸಿ ಇವುಗಳ ತುಪ್ಪಳ ಕತ್ತರಿಸುವ, ನೂಲುವ, ನೇಯುವ ವಿಧಾನಗಳನ್ನು ಹೇಳಿದ. ಒಕ್ಕಲುಮಗ ತುಪ್ಪಳ ಕತ್ತರಿಸಿ,

ನೇಯ್ದು, ಅದರಿಂದ ಲಿಂಗಕ್ಕೆ ಗದ್ದುಗೆ ಮಾಡಿ ಪೂಜಿಸಿದ (೩೫). ಬಳಿಕ ಶಿವನನ್ನು ಸ್ಮರಿಸುತ್ತಲೇ ಪ್ರತ್ಯಕ್ಷನಾಗಲು, ಅವನಿಗೆ ಹಾಲು ಮೊಸರಿನ ಆರೋಗಣೆ ಮಾಡಿಸಿದ. ಇದಕ್ಕೆ ಮೆಚ್ಚಿದ ಶಿವನು ಕುರಿ ಕಾಯಲು ತಳವಾರರನ್ನು ಕೊಟ್ಟು ಮಾಯವಾದನು. ಒಕ್ಕಲು ಮಗನ ಸುತ್ತ ಹಾಲು ಹಯನ ಬೆಳೆದು ನಿಂತಿರುವುದನ್ನು ಕಂಡು, ಅವನ ಊಳಿಗದವಳಾಗಿರಲು ಒಬ್ಬ ರಕ್ಕಸಿಯ ಮಗಳನ್ನು ಕಳಿಸಿದನು. ಒಕ್ಕಲು ಮಗ ಅವಳಿಗೆ ಮೋಹಗೊಂಡು ಹೆಂಡತಿಯನ್ನಾಗಿ ಸ್ವೀಕರಿಸಿದನು (೪೫). ಬಳಿಕ ತನ್ನ ಮೊದಲ ಹೆಂಡತಿಯನ್ನು ನೆನೆದು ಸ್ವಗ್ರಾಮವಾದ ಕುರಿಬೆಟ್ಟದೂರ ಗ್ರಾಮಕ್ಕೆ ಬಂದು, ಬಂಧು ಬಳಗ ಪ್ರಭು ಗೌಡರನ್ನು ನೆರವಿಸಿ "ಚಂದಗೊಂಡನ ಬಸಿರಲ್ಲಿ ಬಂದು ಐದು ಜನರಲ್ಲಿ ಒಬ್ಬನಾದ ನಾನು ಮಂದಮತಿಯಂತೆ ಇಷ್ಟು ದಿನ ದೂರ ಹೋದುದಕ್ಕೆ, ತನ್ನಿಂದಾಗಿ ಕುಲಧರ್ಮ ವ್ಯತಿರಿಕ್ತವಾದುದಕ್ಕೆ ಕ್ಷಮೆ ಇರಲಿ" ಎಂದು ಬಿನ್ನವಿಸಿಕೊಂಡನು. ಅವರೆಲ್ಲ "ಶಿವಸ್ಪರ್ಶದಿಂದ ನೀನು ಕುಲೀನನೇ ಆಗಿರುವೆ, ಮರುಗಬೇಡ" ಎಂದು ಹೇಳಿದರು. ಆಗ ತನ್ನ ವಧುವನ್ನು ತನಗೆ ಒಪ್ಪಿಸಲು ಬಿನ್ನವಿಸಿದರೆ ತಂದೆ ಚಂದಗೊಂಡನು "ಇವನು ರಾಕ್ಷಸಿಯನ್ನು ಮದುವೆಯಾಗಿರುವ"ನೆಂದು ಎತ್ತಿ ನುಡಿದ. "ಶಿವನೊಲಿದ ಇವನಲ್ಲಿ ಅದೆಲ್ಲ ಎಣಿಸಬಾರದು" ಎಂದು ಎಲ್ಲರೂ ಹೇಳಿದ ಬಳಿಕ, ಅವರು ಕೊಟ್ಟ ಆಸ್ತಿಯ ಭಾಗ ಮತ್ತು ಕುಲವಧುವಿನೊಂದಿಗೆ ತನ್ನ ಕುರಿ ಹಿಂಡಿನತ್ತ ಹೆಗ್ಗಗೌಡ ಮರಳಿ ಬಂದನು (೬೪). ಬಳಿಕ ಸಿದ್ಧರಾಮನನ್ನು ಕಾಣಬಯಸಿ ಇಬ್ಬರು ಹೆಂಡಿರೊಡನೆ ಸೊಲ್ಲಾಪುರಕ್ಕೆ ಪ್ರಯಾಣ ಬೆಳೆಸಿದನು. ದಾರಿಯಲ್ಲಿ ಸರವೂರಿನ ಹತ್ತಿರ ತನ್ನ ಕುರಿಹಿಂಡನ್ನು ತರುಬಿ ಅಲ್ಲಿಂದಲೇ ಸಿದ್ಧರಾಮನಿಗೆ ಹಾಲುಬೆಣ್ಣೆ ಕಳುಹಿಸತೊಡಗಿದನು. ಈ ರೀತಿ ಹಲವು ದಿನ ಕಳೆಯುತ್ತಿರಲು ಸಿದ್ಧರಾಮನು ಕರೆಯಿಸಿ "ಸರವೂರಲ್ಲಿ ಮರುಳಮಂಕನು ತಪಸ್ಸು ಮಾಡುತ್ತಲಿದ್ದು, ನೀನು ಅವನ ರಕ್ಷಣೆಗಾಗಿ ಅಲ್ಲಿಯೇ ನೆಲಸು" ಎಂದು ಹೇಳಿದನು. ಆ ಮೇರೆಗೆ ಕುಲಸ್ತ್ರೀ ಸಿದ್ಧಮ್ಮನೊಂದಿಗೆ ಅಲ್ಲಿ ನೆಲಸಿದನು.

ಸಂಧಿ ಮೂರು : ಹೊಕ್ಕರೆ ಹೊರಗೆ ಬರಲು ಅಸಾಧ್ಯವಾದುದು ಈ ಸಂಸಾರ. ಅದು ಅಲ್ಲಮ ಅಜಗಣ್ಣ ಮಹಾದೇವಿಗಳ ಕೈಗೆ ಸಿಕ್ಕಿಹಾಕಿಕೊಂಡಿತು. ಇವರು ಆ ಸಂಸಾರದ ಕೈಗೆ ಸಿಗದೆ ಕಾಯಕದಳಿಯನ್ನು ಹೊಕ್ಕರು. ಈ ಲೋಕದಲ್ಲಿ ಹದಿನೆಂಟು ಕುಲಗಳಿವೆಯೆಂದು ಹೇಳುತ್ತಾರೆ. ನಿಜ ಹೇಳುವದಾದರೆ ಭವಿಕುಲ ಒಂದು, ಭಕ್ತಕುಲ ಮತ್ತೊಂದು. ಹೀಗಾಗಿ ಶ್ವಪಚನಾಗಲಿ ಮುನಿಯಾಗಲಿ ಕಪಿಲಸಿದ್ಧಮಲ್ಲನನ್ನು ಅರ್ಚಿಸದವನು ಶ್ವಪಚನಿಂದ ಕೀಳು. ಶರಣರ ಚರಿತ್ರೆಯನ್ನು ನೋಡಿದರೆ ಶಂಕರದಾಸಿಮಯ್ಯನು ಮಸಣಯ್ಯನಿಂದ ಭತ್ತ ಕುಟ್ಟಿಸಿದ, ಕಣ್ಣಪ್ಪ ದೇವರಿಗೆ ಕಣ್ಣು ಅರ್ಪಿಸಿದ. ಏಳು ಬೇಲಿಯ ಹೊರಗಿರುವ ಹಳ್ಳಯ್ಯನ ಪಾದೋದಕದಿಂದ ಏಳುನೂರ ಎಪ್ಪತ್ತು ಮಂದಿ ವಿಪ್ರರು ಪವಿತ್ರರಾದರು. ಕೆಂಭಾವಿ ಭೋಗಣ್ಣನನ್ನು ಹೊರಹಾಕಲಾಗಿ ಲಿಂಗಗಳ ಬೆನ್ನುಹತ್ತಿ ಹೋದನು. ಹೀಗೆ ಶಿವಶರಣರು ಮಹಿಮಾಶಾಲಿಗಳು.

ಶಿವನನ್ನು ಕುರಿತು ತಪಸ್ಸು ಮಾಡುತ್ತಿರುವ ಇಂಥ ಮಹಿಮಾಶಾಲಿ ಶರಣನಾದ ಮಂಕತಂದೆಯನ್ನು ನೋಡುವ ಇಚ್ಛೆಯಿಂದ ನಾರದನು ಅವನ ವನವನ್ನು ಪ್ರವೇಶಿಸುತ್ತಲೇ, ಅವನನ್ನು ರಕ್ಷಿಸಿಕೊಂಡಿದ್ದ ಹೆಗ್ಗಗೌಡನು ಮಠಕ್ಕೆ ಕರೆತಂದನು. ತಲೆಕೆಳಗಾಗಿ ನಿಂತಿ ಮಂಕತಂದೆ ಮಾಡುತ್ತಲಿದ್ದ ತಪಸ್ಸನ್ನು ಕಂಡು ನಾರದ ಆಶ್ಚರ್ಯಚಕಿತನಾದ. ಹೆಗ್ಗಗೌಡನ ಜಂಗಮ ದಾಸೋಹಕ್ಕೆ

ಸಂತುಷ್ಟನಾಗಿ ದೇವಲೋಕದತ್ತ ಪ್ರಯಾಣ ಬೆಳೆಸಿ, ಮಂಕತಂದೆಯ ಉಗ್ರತಪಸ್ಸನ್ನು ಶಿವನಿಗೆ ವಿವರಿಸಿದ. ಆ ಸಮಯದಲ್ಲಿ ಕೈಲಾಸಕ್ಕೆ ಬಂದ ಸಿದ್ಧರಾಮಯ್ಯನು ನಾರದನ ಹೇಳಿಕೆಯನ್ನು ಬೆಂಬಲಿಸಿ, ಮಂಕತಂದೆಯ ಅಭೀಷ್ಟವನ್ನು ಪೂರೈಸಲು ಬಿನ್ನವಿಸಿಕೊಂಡ. ನಂದಿಯನ್ನೇರಿ ಬಂದು ಶಿವನು ಮಂಕತಂದೆಯ ಉಗ್ರತಪಸ್ಸನ್ನು ಒರೆದು ನೋಡ ಬಯಸಿದ (೧೦೫).

ಇತ್ತ ಮಂಗಳವಾಡದಲ್ಲಿ ಆಳುತ್ತಲಿದ್ದ ಬಿಜ್ಜಳರಾಯನಲ್ಲಿಗೆ ಸೇವಕರು ಬಂದು, ಮಂಕತಂದೆಯು ಕೋಡುಗಲ್ಲಿನ ಮೇಲೆ ಸೂಜಿಯೂರಿ, ಅದಕ್ಕೆ ತಲೆ ಹಚ್ಚಿ, ಕಾಲು ಮೆಲೆ ಮಾಡಿ ಆಚರಿಸುತ್ತಿದ್ದ ತಪಸ್ಸನ್ನು ಅರುಹಿದರು. ರಾಜನು ಬೇಟೆಯ ನೆವದಿಂದ ಬಂದು ನೋಡಿ, ತಪಸ್ಸಿಗೆ ಬೆರಗಾದ. "ಸಿದ್ಧರಾಮನು ಪರ್ವತಮಲ್ಲಯ್ಯನನ್ನು ತನ್ನಲ್ಲಿಗೆ ತಂದರೆ, ಸಿದ್ಧರಾಮನನ್ನೇ ತನ್ನಲ್ಲಿಗೆ ತರಲು ಈತ ತಪಸ್ಸು ಮಾಡುತ್ತಲಿರುವ"ನೆಂದು ಬಸವಣ್ಣ ಬಿಜ್ಜಳನಿಗೆ ಹೇಳಿದ. ಹೆಗ್ಗಗೌಡನು ಬಿಜ್ಜಳನನ್ನು ಕಂಡು ಕೈಮುಗಿದ. ಆಗ, ತನ್ನ ರಾಜಧಾನಿಗೆ ಬಂದು ವಾಸಿಸಲು ಬಿಜ್ಜಳನು ಆ ಹೆಗ್ಗಗೌಡನಿಗೆ ಪ್ರೀತಿಯ ಆದೇಶ ನೀಡಿದ. ಮಗ್ಗುಲಲಿದ್ದ ಬಸವಣ್ಣನನ್ನು ಕಂಡು ಹೆಗ್ಗಗೌಡ "ಬಸವನ ನೆನೆದರೆ ಭಯವಿಲ್ಲ ಭವವಿಲ್ಲ, ಬಸವನ ಭಜಿಸೆ ಸುಖಿಸಲು" ಎಂದು ಭಾವಿಸಿ, ಅವನಿಗೆ ಸಾಷ್ಟಾಂಗ ನಮಸ್ಕಾರ ಮಾಡಿದ. ಬಸವಣ್ಣ ಹೆಗ್ಗಗೌಡನಿಗೆ ಹರಸಿ, ರಾಜಧಾನಿಗೆ ಬಿಜ್ಜಳನೊಡನೆ ಮರಳಿದ.

ಹೆಗ್ಗಗೌಡ ರಾಜಧಾನಿಗೆ ಬಂದು ನೆಲೆನಿಂತು, ಜಂಗಮದಾಸೋಹ ಮುಂದುವರೆಸಿದ. ಒಮ್ಮೆ ಹಾಲಕಂಬಿಗೆ ಸತ್ತ ಕುರಿಯನ್ನು ಕಟ್ಟಿಕೊಂಡು ಕುರುಬರು ಬರುತ್ತಿರುವುದನ್ನು ಪುರಜನರು ಕಂಡು "ಬಿಜ್ಜಳನು ಕುರುಬರಿಗೆ ಅವಕಾಶ ಮಾಡಿಕೊಟ್ಟು ರಾಜಧಾನಿ ಅಪವಿತ್ರವಾಗುವಂತೆ ಮಾಡಿದ" ಎಂದು ಮುನಿದರು. ಗೌತಮಮುನಿಯು ಆಕಳನ್ನು ಕೊಂದ ಕಾರಣ ಬ್ರಾಹ್ಮಣರೆಲ್ಲ ಊರು ಬಿಟ್ಟು ಹೋದುದನ್ನು ನೆನಪಿಸಿಕೊಂಡು, ಬಿಜ್ಜಳನಲ್ಲಿಗೆ ದೂರು ಒಯ್ದರು. "ಮೂವತ್ತಾರು ಸಿಂಹಾಸನ ಆಳಿದ ಈ ಪಟ್ಟಣದಲ್ಲಿ ಇಂಥ ಘಟನೆ ಜರುಗಿರಲಿಲ್ಲ. ಹಿಟ್ಟಿನ ಕೋಳಿಯ ಕೊರಳ ಕೊಯ್ಯುವವರಿಗೆ ನರಕವಿದೆ. ಹೀಗಿರುವಾಗ ಇಂದು ಕುರುಬರು ದೇವರಿಗೆ ಬಲಿಕೊಟ್ಟ ಕುರಿಯನ್ನು ಊರೊಳಗೆ ತಂದಿದ್ದಾರೆ. ಇದನ್ನು ಕೇಳಿದರೆ ಭಕ್ತರು ಕಲ್ಯಾಣವನ್ನೇ ತ್ಯಜಿಸುತ್ತಾರೆ" ಹೀಗೆ ಏನೆಲ್ಲ ಹೇಳಿದರು. ರಾಜನು ಹೆಗ್ಗಗೌಡನೇ ಮೊದಲಾದ ವರನ್ನು ರಾಜಧಾನಿಯಿಂದ ಹೊರಹಾಕಿ, ಸುತ್ತಲೂ ಏಳುಗೆರೆ ಬರೆಯಿಸಿ, ಇದನ್ನು ದಾಟಬಾರ ದೆಂದು ಆಜ್ಞೆ ಮಾಡಿದ. "ಕುಲದಲ್ಲಿ ಕಿರಿಯರಾದರೂ ನಮ್ಮ ನಡತೆ ಕಿರಿಯದಲ್ಲ" ಎಂದು ಮುಂತಾಗಿ ಹೆಗ್ಗಗೌಡ ಬಿನ್ನವಿಸಿದರೂ ಬಿಜ್ಜಳ ಕಿವಿಗೊಡಲಿಲ್ಲ (೧೫೩).

ಸಿದ್ಧರಾಮನು ನಿಜಗುಣದೇವನನ್ನು ಕಂಡು ಗೌರವಿಸಿ, ತುಂಗಭದ್ರೆಯ ತೀರದಲ್ಲಿ ಅವನನ್ನು ಬಿಟ್ಟು, ಪ್ರಯಾಣ ಬೆಳೆಸಿದವನುಮ ಮತ್ತೆ ಹಿಂದಿರುಗಿ ಅವನನ್ನು ಕರೆದುಕೊಂಡು ಸೊಲ್ಲಾಪುರಕ್ಕೆ ಬಂದನು. ಆ ಸಮಯಕ್ಕೆ ಅಲ್ಲಮನು ಸೊಲ್ಲಾಪುರಕ್ಕೆ ಬಂದು, ಕಲ್ಲುಮರ ಹರವಿಕೊಂಡು ಸಿದ್ಧರಾಮನು ಪ್ರಸಿದ್ಧಿಗಾಗಿ ಕೆರೆ-ದೇವಾಲಯ ನಿರ್ಮಾಣಕಾರ್ಯದಲ್ಲಿ ತೊಡಗಿದುದನ್ನು ಖಂಡಿಸಿದನು. ಸಿದ್ಧರಾಮನ ಗುಡ್ಡರು ಸಿಟ್ಟಿಗೆದ್ದು ಅಲ್ಲಮನನ್ನು ಹಿಡಿಯಲು ಹೋದರೆ ಸಿಗಲಿಲ್ಲ. ಕಲ್ಲಿನಿಂದ ಹೊಡೆದರೆ ನಿರ್ಮಾಯಿಯಾದ. ಇದರಿಂದ ನೊಂದ ಗುಡ್ಡರು ಸಿದ್ಧರಾಮನಿಗೆ ವಿಷಯ ತಿಳಿಸಿದರು.

ಸಿಟ್ಟಿನಿಂದ ಹೊರಬಂದ ಸಿದ್ಧರಾಮ ಹಣೆಗಣ್ಣು ತೆರೆದ. ಆ ಬೆಂಕೆ ಅಲ್ಲಮನನ್ನು ಹೊರತುಪಡಿಸಿ, ಸುತ್ತಲಿನ ಪರಿಸರವನ್ನು ಸುಡತೊಡಗಿತು. ಸಿದ್ಧರಾಮನಿಗೆ ತನ್ನ ತಪ್ಪಿನ ಅರಿವಾಯಿತು. ಅಲ್ಲಮನಿಗೆ ಶರಣು ಹೋದನು. ಘಟ್ಟಿವಾಳಯ್ಯ, ಅಜಗಣ್ಣ, ಅಲ್ಲಮ ಪ್ರಭುಗಳೊಂದಿಗೆ (ಕಲ್ಯಾಣಕ್ಕೆ) ಹೊರಟ ಸಿದ್ಧರಾಮನು ಮಂಕಸಿದ್ಧನ ಸರವೂರಿಗೆ ಬಂದನು. ಮಂಕಸಿದ್ಧನಲ್ಲಿ ಮಕ್ಕಳೆಂಬ ಭಾವದಿಂದ ಚಿಕ್ಕಯ್ಯ ಶಾಂತಯ್ಯರೆಂಬ ಕುಮಾರರಿದ್ದರು. ಪ್ರಭು ಸಿದ್ಧರಾಮ ರೇವಣಸಿದ್ಧರು ಮಂಕಸಿದ್ಧನನ್ನು ಸ್ಪರ್ಶಿಸುತ್ತಲೇ ಅವನು ಎದ್ದು, ಸಿದ್ಧರಾಮನಿಗೆ ವಂದಿಸಿದ. ಎಲ್ಲರೂ ಕಲ್ಯಾಣಕ್ಕೆ ಹೋಗೋಣವೆಂದು ಸಿದ್ಧರಾಮ ಹೇಳಿ "ಮನದ ಬಯಕೆಯೇನು?" ಎಂದು ಮಂಕಯ್ಯನಿಗೆ ಕೇಳಿದ. "ರಾಜಧಾನಿಯ ಹೊರಗೆ, ಏಳುಬೇಲಿಯ ಒಳಗೆ ಕುರುಬಗೌಡರು ಬದುಕುತಿದ್ದು, ಅವರು ಗ್ರಾಮದೊಳಗೆ ಸೇರುವಂತೆ ಮಾಡುವುದು" ಎಂದು ಬಿನ್ನವಿಸಿದನು.

ಸಂಧಿ ನಾಲ್ಕು : ಮಂಕಯ್ಯನ ಕೋರಿಕೆಯನ್ನು ಆಲಿಸಿ "ಕಲ್ಯಾಣಕ್ಕೆ ಹೋದ ಬಳಿಕ ನಮ್ಮಂತೆ ಮಾಡುವೆನು ನಡೆ" ಎಂದು ಸಿದ್ಧರಾಮ ಹೇಳಿದನು. ಬಳಿಕ ಪ್ರಭು, ಸಿದ್ಧರಾಮ, ರೇವಣಸಿದ್ಧ, ಮಂಕಯ್ಯಗಳು ಶರಣರ ಕಡೆಗೆ ನಡೆದರು. ಅರವಟ್ಟಿಗೆ, ಛತ್ರ, ಅರವತ್ತು ನಾಲ್ಕು ಶೀಲದವರು ಇತ್ಯಾದಿಗಳಿಂದ ಕೂಡಿದ ಕಲ್ಯಾಣದ ಹಾದಿಯಲ್ಲಿ ಸಂತೋಷದಿಂದ ಹೆಜ್ಜೆಹಾಕಿದರು. ಕಲ್ಯಾಣಕ್ಕೆ ಬರುತ್ತಲೇ ತರುಲತೆ, ಶುಕ ಪಿಕ ಕೋಗಿಲೆ, ಪ್ರವಾಹ, ಕೋಟೆ, ಅಟ್ಟಳೆ, ಹುಲಿಮುಖ ಇತ್ಯಾದಿಗಳನ್ನು ಕಂಡರು. ಸಿದ್ಧರಾಮನ ಆಗಮನಕ್ಕೆ ಭಕ್ತರೆಲ್ಲ ಹರ್ಷಪಟ್ಟರು. ಹಡಪದ ಅಪ್ಪಣ್ಣನಿಂದ ಈ ಸುದ್ದಿ ತಿಳಿದ ಬಸವಣ್ಣ, ಇವರೆಲ್ಲರನ್ನು ಸಾಷ್ಟಾಂಗ ನಮಸ್ಕಾರ ಪೂರ್ವಕ ಸ್ವಾಗತಿಸಿದ. ಸಿದ್ಧರಾಮನು ಮಂಕಯ್ಯನ ತಪಸ್ಸನ್ನು ವಿವರಿಸಿ, ಇವನ ರಕ್ಷಣೆಗೆ ಇದ್ದ ಕುರುಬಗೌಡನನ್ನು ಹೊರಹಾಕಿದ ಕಾರಣವೇನು? ಎಂದು ಮಂತ್ರಿ ಬಸವಣ್ಣನನ್ನು ಕೇಳಿದ. ಈ ಘಟನೆಯ ನಿಜಸ್ಥಿತಿ ಖಚಿತಪಡಿಸುವುದಕ್ಕಾಗಿ ಎಲ್ಲ ಪುರಾತನರನ್ನು ತ್ರಿಪುರಾಂತಕ ದೇವಾಲಯಕ್ಕೆ ಬರಬೇಕೆಂದು ಪಡಿಹಾರಿ ಉತ್ತಣ್ಣನು ಬಸವಣ್ಣನ ಆದೇಶದಂತೆ ಡಂಗುರ ಸಾರಿದ. ನಲ್ವತ್ತೆಂಟು ಗಾವುದ ಪ್ರಖ್ಯಾತಿಯ ಮೂಲಸ್ಥಾನ ತ್ರಿಪುರಾಂತಕ ದೇವಾಲಯಕ್ಕೆ ಹದಿನೆಂಟು ಸಮಯದವರೂ ಶರಣರೂ ಆಗಮಿಸಿದರು. ಬಿಜ್ಜಳನನ್ನು ಕರೆಯಿಸಿದರು. "ನಿಮ್ಮ ಪಟ್ಟಣದಿಂದ ಕುರುಭಕ್ತರನ್ನು ಹೊರಹಾಕಿದ ಕಾರಣವೇನು?" ಎಂದು ಕೇಳಿದರು. "ಹಾಲುಕಂಬಿಯ ಮೇಲೆ ಸತ್ತ ಕುರಿಯ ಮಾಂಸ ಒಯ್ಯುವುದನ್ನು ಹದಿನೆಂಟು ಸಮಯದವರು ಸಹಿಸದೆ ದೂರು ನೀಡಿದು"ದಕ್ಕಾಗಿ ಹೊರಹಾಕಲಾಯಿತೆಂದು ಬಿಜ್ಜಳ ನುಡಿದ. ಬಸವಣ್ಣನು ಹೆಂಡದ ಮಾರಯ್ಯ, ಬೇಡರ ಕಣ್ಣಪ್ಪ ಮೊದಲಾದ ಭಕ್ತರ ವಿಪರೀತ ಚರಿತ್ರೆಗಳನ್ನು ಹೇಳಿ ಕುರುಬಗೌಡರನ್ನು ಸಮರ್ಥಿಸಿದ (೭೩). ಬಿಜ್ಜಳ ತನ್ನ ತಪ್ಪನ್ನು ಒಪ್ಪಿಕೊಂಡ. ಬಲದೇವ, ಜಗದೇವ, ಬಸವೇಶ ಮಂತ್ರಿಗಳೊಂದಿಗೆ ಸಿದ್ಧರಾಮಯ್ಯನ ಶಿಷ್ಯನಾದ ಮಂಕಯ್ಯನ ಕೀರ್ತಿಯನ್ನು ಕೇಳಿದ. ತನ್ನ ಕಾಯವನ್ನು ದಂಡಿಸಿ ಅನ್ಯರ ಹಿತಕ್ಕಾಗಿ ಹಂಬಲಿಸಿದ ಅವನ ತ್ಯಾಗವನ್ನು ಮೆಚ್ಚಿದ, ಮಂಕತಂದೆ ಮತ್ತು ಕುರುಬ ಹೆಗ್ಗಗೌಡರ ಮಹಿಮೆಯನ್ನೂ ರೇವಣಸಿದ್ಧ-ಅಲ್ಲಮಪ್ರಭು-ಸಿದ್ಧರಾಮರ ಆಗಮನವನ್ನೂ ಕೇಳಿ ನಾಡಕುರುಬರೆಲ್ಲ ಕಲ್ಯಾಣದ ಹೊರವಲಯಕ್ಕೆ ಬಂದರು. ಬಿಜ್ಜಳ ಮಾಡಿದ ತಪ್ಪನ್ನು ಸರಿಪಡಿಸಿಕೊಟ್ಟ ಬಸವಣ್ಣನಿಗೂ ತಮ್ಮ ಗುರುವಾದ ಮಂಕತಂದೆಗೂ ಅಲ್ಲಿಗೆ ಆಗಮಿಸಿದ ಕುರುಬರು ಎರಗಿದರು. ಶಿಷ್ಯ ಮಾಡಿದ ಶಾಪ ಗುರುವಿಗೆ ತಗಲುವಂತೆ, ತಾವು ಮಾಡಿದ ಅಪಚಾರ ಗುರು ಮಂಕತಂದೆಯನ್ನು ನೋಯಿಸಿತು. ಇದನ್ನು ತಿದ್ದಿಕೊಳ್ಳುವುದಕ್ಕಾಗಿ ಪ್ರಾಣಾರ್ಪಣೆ

ಮಾಡುವೆನೆಂದು ಹೆಗ್ಗಗೌಡನ ಮಕ್ಕಳಾದ ತೋಹಿನಮುತ್ತ, ಚೀನಿಮುತ್ತ, ಕಾಳಮಾದ ಮುತ್ತ, ರಾಮಮುತ್ತ, ಏಕಜಡೆಯ ಮಲ್ಲಮುತ್ತ, ಸೋಯಿಮುತ್ತ ಮೊದಲಾದವ(೧೨ ಜನ)ರು "ಗುರು ಮಂಕತಂದೆಗೆ ಶರಣು" ಎನ್ನುತ್ತ ಖಡ್ಗ ಹಿರಿದು ನಿಂತರು. ಈ ಸುದ್ದಿಯನ್ನು ನಾರದನ ಮೂಲಕ ಶಿವ ಮತ್ತು ಶಿವಶರಣಂಗಳು ಕೇಳಿ ಆಕಾಶಮಾರ್ಗದಲ್ಲಿ ಕಿಕ್ಕಿರಿದು ನೆರೆದರು (೧೦೨).

ಕತ್ತರಿಸಿಕೊಳ್ಳುತ್ತಲೇ ತಲೆ ಚಿಗಿಯುತ್ತಲಿದ್ದವು. ಇವೆಲ್ಲವನ್ನೂ ನೋಡಿ ಬಿಜ್ಜಳನ ಸೈನ್ಯ ಹೆದರಿತು. ಕತ್ತರಿಸಿದ ತಲೆಗಳನ್ನು ಕೈಯಲ್ಲಿ ಹಿಡಿದು ಚಂಡಾಡಿದರು. ಕೆಲವರು ಕಣಕಾಲು ಕಡಿದುಕೊಂಡರು. ಮಡದಿಯರು ನಾಲಗೆ, ಕಣ್ಣು, ಮೊಲೆ, ಮೂಗು ಕಡಿದುಕೊಂಡರು. ಈ ಲಿಂಗಭಕ್ತಿಗೆ ಶಿವ ಮೆಚ್ಚಿದನು. ಆಗ ಮಂಕಯ್ಯನು ಹನ್ನೆರಡು ತಲೆಗಳನ್ನು ಶರಣರಿಗೆ ಅರ್ಪಿಸಿದನು. ಹನ್ನೆರಡೂ ತಲೆಗಳು ದೇಹಕ್ಕೆ ಅಂಟಿಕೊಂಡು ಜೀವ ಪಡೆದವು. ಬಿಜ್ಜಳನು ಈ ಭಕ್ತಿಗೆ ಬೆರಗಾಗಿ ಶರಣರಿಗೆ ಎರಗಿದನು. ಕೊಂಡೆಯರು ತಮ್ಮ ತಪ್ಪಿಗೆ ದಿಙ್ಮೂಢರಾದರು. ಕಲ್ಯಾಣಪಟ್ಟಣದ ಹದಿನೆಂಟು ಸಮಯದವರೆಲ್ಲ ಸಂಭ್ರಮಿಸಿದರು. ರೇವಣಸಿದ್ಧನು ಪ್ರಾಚೀನಕಾಲದ ಭಕ್ತರ ಮಹಿಮೆಗಳನ್ನು ಬಿಜ್ಜಳನಿಗೆ ವಿವರಿಸಿದನು. ಸಿದ್ಧರಸ ಡಣಾಯಕ, ಬಲದೇವ ಡಣಾಯಕ, ಸೊಡ್ಡಳ ಬಾಚರಸ, ಬಸವ ಡಣಾಯಕರು ಬಿಜ್ಜಳನ ಕೈಹಿಡಿದರು. ಪ್ರಭುದೇವ, ರೇವಣಸಿದ್ಧ, ಸಿದ್ಧರಾಮಯ್ಯ ಮೊದಲಾದವರಿಗೆ ವಂದಿಸಿದರು. ಛಪ್ಪನ್ನದೇಶದ ಹದಿನೆಂಟು ಪಟ್ಟಣದವರು, ನಾನಾ ದೇಶ ಸೆಟ್ಟಿಪಟ್ಟಣಕ್ಕೆ ಸಲುವ ಭಕ್ತರು, ಮಂಕತಂದೆಗಳ ಕೈ ಹಿಡಿದರು. ರೇವಣಸಿದ್ಧನ ಆದೇಶದಂತೆ ಸಿದ್ಧರಾಮನು ಎಲ್ಲರಿಗೂ ವಿಭೂತಿಯನ್ನಿಟ್ಟನು. ಶಿವನು ಹಾಲುಮತದ ಗೌಡುಗಳನ್ನು ಕರೆದು "ಇವರು ನಮ್ಮಂಥವರು" ಎಂದು ಸಾರಿ ಕೈಲಾಸಕ್ಕೆ ಹೋದನು(೧೩೫).

ಇತ್ತ ಶರಣರೆಲ್ಲ ಸಂಭ್ರಮಿಸುತ್ತ "ಕಪಿಲಸಿದ್ಧ ಮಲ್ಲೇಶನು ಹಸಿದನು" ಎನ್ನಲಾಗಿ, ಹಾಲುಮತದ ಕಂಬಿಗಳು ಬಂದವು. ಸುತ್ತಲೂ ತೆರೆ ಕಟ್ಟಿದರು. ಹೆಗ್ಗಗೌಡನ ಅರಸಿಯು ಸಿದ್ಧರಾಮನಿಗೆ ಎರಗಿ "ತಲೆ ಕತ್ತರಿಸಿಕೊಂಡ ಹನ್ನೆರಡು ಬಾಲಕರನ್ನು ಭಕ್ತರನ್ನಾಗಿಸ"ಲು ಬಿನ್ನವಿಸಿಕೊಂಡಳು. ಅದನ್ನು ಪೂರೈಸಲಾಯಿತು. ಆರೋಗಣೆ ನೆರವೇರಿತು. "ಬಸವನೆಂದರೆ ಪಾಪ ಓಡುವುದು, ಬಸವನೆಂದರೆ ಪಾಪ ಹರಿಯುವುದು" ಎಂದು ಮುಂತಾಗಿ ಎಲ್ಲರೂ ಘೋಷಿಸಿದರು. "ಶರಣನ ಅಂಗಳವ ಕಂಡು ಪಾಪಗಳು ಪರಿಹಾರವಾಗುವವು, ಶರಣನ ಅಂತರಂಗದಲ್ಲಿ ಶಿವನಿದ್ದಾನೆ"ಎಂದು ಭಾವಿಸಿದರು. ಎಲ್ಲ ಜಂಗಮರಿಗೊ ಬೀಳ್ಕೊಂಡು ಮಂಕತಂದೆ "ನಮ್ಮನ್ನು ಉದ್ಧರಿಸಿದಿರಿ" ಎನ್ನುತ್ತ, ಸಿದ್ಧರಾಮ-ಅಲ್ಲಮ-ರೇವಣಸಿದ್ಧರಿಗೆ ಗದ್ದುಗೆ ಕಂಬಳ ನೀಡಿದನು (೧೫೪). ಆಗ ಸಿದ್ಧರಾಮನು "ನಿನ್ನ ಭಕ್ತರನ್ನು ಕರೆ"ಯೆಂದು ಮಂಕಯ್ಯನಿಗೆ ಹೇಳಿದನು. ಅವರೆಲ್ಲ ನೆರೆದಿರಲು "ನೀವೆಲ್ಲ ನಮ್ಮಲ್ಲಿ ಮಗ್ನರಾಗಿ ಬದುಕಿರಿ. ಮನಸೋತು ಬಂದ ರಾಕ್ಷಸಿಯಿಂದಾಗಿ ನಿಮಗೆ ತಗುಲಿದ ಅಪಕೀರ್ತಿ ನಮ್ಮಿಂದ ದೂರವಾಯಿತೆಂದು ತಿಳಿಯಿರಿ, ನಿಮ್ಮ ಹೆಣ್ಣುಗಂಡುಗಳಲ್ಲಿ ನೆಂಟಸ್ತಿಕೆ ಬೆಳೆಸಿರಿ, ಐದು ಹೊನ್ನು ತೆರ ನೀಡಿರಿ. ಈ ಐದರಲ್ಲಿ ಎರಡು ಹೊನ್ನು ಮಂಕತಂದೆಗೆ ಸಮರ್ಪಿಸಿರಿ" ಎಂದು ಸಿದ್ಧರಾಮ ಕಟ್ಟಳೆ ಮಾಡಿದನು. "ಹಿಂಡಿನೊಳಗೆ ಒಂದು ಕಪಿಲೆಯನ್ನು, ಇಲ್ಲವೆ ಐದರೊಳಗೆ ಒಂದು ಕಪಿಲೆಯನ್ನು ಕೊಟ್ಟವನಿಗೆ ಸುಖವಾಗಲಿ" ಎಂದೂ ಹರಸಿದನು. ಈ ರೀತಿ ಕುಳತೆರಿಗೆಯನ್ನು ನಿರ್ಣಯಿಸಿದನು. ಮಂಕತಂದೆಯ ಹತ್ತಿರ ಬನ್ನಿರೆಂದು ತೋಹಿನಮುತ್ತ, ಚೀನಿಮುತ್ತ, ಕಾಳಮಾದಮುತ್ತ,

ರಾಮಮುತ್ತ, ಏಕಜಡೆಯ ಮುತ್ತ, ಮಲ್ಲಮಾದ ಮುತ್ತರನ್ನು ಸಿದ್ಧರಾಮಯ್ಯನು ಕರೆದನು. ಅವರಲ್ಲಿ ಮಾಯಿಮುತ್ತನು ಮಂಕಯ್ಯನಿಗಾಗಿ ಒಂದು ಕಂಬಳಿಯನ್ನು ನೆಯ್ದು ತಂದನು. ಮಂಕಸಿದ್ಧಯ್ಯನು ಎಲ್ಲರ ಹಣೆಗೆ ವಿಭೂತಿಯಿಟ್ಟನು. ಹಾಲುಮತದ ಗೌಡುಗಳಿಗೆ "ವಿಭೂತಿಯನ್ನು ಪಾಲಿಸಿರಿ" ಎಂದು ಆದೇಶ ಮಾಡಿದನು. ಮಂಕತಂದೆ ಸಿದ್ಧರಾಮನಿಗೆ ನಮಸ್ಕರಿಸಿ "ರೇವಣ-ಸಿದ್ಧರಾಮರೆ ದೇವಮುದ್ರೆಯನೊತ್ತಿ ಸಲಹಿ" ಎಂದು ಬಿನ್ನವಿಸಿಕೊಳ್ಳಲು, ಇದೆಲ್ಲ ನಮ್ಮ ಸೀಮೆಯೊಳಿರಲಿಯೆಂದು ಲಿಂಗವಿತ್ತು, ಮುದ್ರೆ ಯೊತ್ತಿ "ಕಂಥೆಯಲ್ಲಿ ತಟ್ಟುಮುಟ್ಟು ಮಾಡಿದರೆ ಕುಲ ನಷ್ಟವಾಗುವುದೆಂ"ದು ಹೇಳಿದನು. "ವಿಭೂತಿಯನ್ನಿಟ್ಟರೆ ಸಿದ್ಧಿ ಲಭಿಸುವುದೆಂ"ದು ತಿಳಿಹೇಳಿದನು (೧೭೬). ಆಗ ಹೆಗ್ಗಗೌಡನು ಎದ್ದು ನಿಂತು "ಮಂಕತಂದೆಯು ನಮ್ಮನ್ನು ಉದ್ಧರಿಸಿದ"ನೆಂದು ಎರಗಿದನು. ಮಂಕತಂದೆಯು "ಶಿವಭಕ್ತಿಯಿಂದ ಮೂಜಗದೊಳು ಕುಲಜರೆನಿಸಿಕೊಂಡಿರಿ" ಎಂದು ಉಪದೇಶಿಸಿದನು. ಆಗ ಸಿದ್ಧರಾಮನು ಮಂಕತಂದೆಗೆ ಜೀರ್ಣದ ಕಂಥೆಯನ್ನು ಕೊಟ್ಟು, ಇದನ್ನು ಮೈಲಿಗೆಯಾಗದಂತೆ ನೋಡಿಕೊಳ್ಳಲು, ಪೂಜಿಸಲು ತಿಳಿಸಿದನು (೧೯೧). ಹೆಗ್ಗಗೌಡನು "ತನಗೆ ಮಂಕತಂದೆ ಗುರು, ಸಿದ್ಧರಾಮ ಪರಮಗುರು" ಎಂದು ಹೇಳಿದನು (೧೯೩).

ಸಿದ್ಧರಾಮ ಮಂಕತಂದೆಗಳು ಹೀಗೆ ಮೆರೆಯುತ್ತಿರಲು, ಒಡ್ಡಿಯ ದೇಶದಿಂದ ಸಾಲ ತೀರಿಸದೆ ಓಡಿಬಂದು, ಸಿದ್ಧರಾಮನ ಗುಡ್ಡರಲ್ಲಿ ಸೇರಿಕೊಂಡಿದ್ದ ಬಿಲ್ಲೇಶ ನರಕದಲ್ಲಿ ನರಳುತ್ತಿರಲು, ಸಿದ್ಧರಾಮ ಅವನನ್ನು ಉದ್ಧರಿಸಿದ (೨೦೬). ಮಂಕತಂದೆಯ ಆದೇಶದಂತೆ ನಡೆದುಕೊಳ್ಳಲು ಹೆಗ್ಗಗೌಡ ಮೊದಲಾದವರಿಗೆ ಸಿದ್ಧರಾಮ ಹೇಳಿ, ಬಸವಾದಿ ಶರಣರ ಮುಂದೆ ಎಲ್ಲ ಕುರುಬರ ಹಣೆಗೆ ವಿಭೂತಿಯನ್ನಿತ್ತು ಹರಸಿದ. ರೇವಣಸಿದ್ಧ, ಪ್ರಭುದೇವರನ್ನು ಬೀಳ್ಕೊಟ್ಟು, ಸಿದ್ಧರಾಮ ಮಂಕತಂದೆ-ಹೆಗ್ಗಗೌಡ ಸೊನ್ನಲಿಗೆಗೆ ನಡೆದರು (೨೭೦). ಸರವೂರನ್ನು ಪ್ರವೇಶಿಸಿದರು. ಸಿದ್ಧರಾಮನು ಮಲ್ಲಯ್ಯ (ಮಲ್ಲಿಕಾರ್ಜುನ)ನಿಗೆ ಎರಗಿ, ಮಠಕ್ಕೆ ಮಾರಿಯನ್ನು ಕಾವಲಿತ್ತನು. ಸೊಲ್ಲಾಪುರಕ್ಕೆ ಬಂದ ಸಿದ್ಧರಾಮೇಶ್ವರನು ಪರ್ವವನ್ನು ಮಾಡಿ, ಪುರಕ್ಕೆ ಕಾವಲಾಗಿ ಹೆಗ್ಗಗೌಡನನ್ನಿರಿಸಿ, ಮಂಕನಿಗೆ "ಈ ಪುರಕ್ಕೆ ನೀನೇ ಅರಸು" ಎಂದು ಪಟ್ಟ ಕಟ್ಟಿದನು ಮತ್ತು "ಪ್ರತಿವರ್ಷ ಕುಳದೆರಿಗೆಯನ್ನೆತ್ತಿ ಗುರುಸೇವೆಯನ್ನೂ ಪರಿಷೆ ನೆರಹಿ ಹಿರಿಯರಿಗೆ ಪರ್ವವನ್ನೂ ಮಾಡು" ಎಂದು ಹೇಳಿದನು(೨೦). ಈ ರೀತಿ ಹೇಳಿ, ಸಿದ್ಧರಾಮನು ಗವಿಯಲ್ಲಿ ಐಕ್ಯನಾದ.

ಗುರುವನ್ನು ಕಾಣದೆ ಮಂಕಯ್ಯ ಮರುಗಿದ. ಆಮೇಲೆ ಮಂಕಯ್ಯ ಸರವೂರಲ್ಲಿ ಐಕ್ಯನಾದ. ಗುರುವನ್ನುಕಾಣದೆ ಹೆಗ್ಗಗೌಡ ಮರುಗಿದ. ಸಿದ್ಧರಾಮ (ಅದೃಶ್ಯರೂಪದಿಂದಲೇ) ಸಮಾಧಾನ ಹೇಳಿ "ನೀನು ಮುಂದೆ ರಾಯವಂಶದಲ್ಲಿ ಜನಿಸು" ಎಂದು ಹರಸಿದನು (೨೨೬). ಆ ಮೇರೆಗೆ ಹೆಗ್ಗಗೌಡ (ಕುರಿಗೌಡ)ನು ಮಾದಗೌಡನ ಬಸಿರಲ್ಲಿ ಬುಕ್ಕಗೌಡ (ಬುಕ್ಕಗೊಂಡ) ಹೆಸರಿನಿಂದ ಹುಟ್ಟಿ, ಕುರಿ ಸಲಹುತ್ತಿದ್ದು, ಅಲ್ಲಿಗೆ ಬಂದ ಚಿಕ್ಕಯ್ಯ ಶಾಂತಯ್ಯರನ್ನು ಬರಮಾಡಿಕೊಂಡನು. ಅಷ್ಟರಲ್ಲಿ ಆಗಮಿಸಿದ ರೇವಣಸಿದ್ದನು (ಸಿದ್ದೇಶ)ಗುರುವನ್ನು ಕರಿಯ ಕಂಬಳಿ ಗದ್ದುಗೆಯ ಮೇಲೆ ಕುಳ್ಳಿರಿಸಿ, ಹಾಲು ಸಕ್ಕರೆ ಮುಂದಿಟ್ಟ (೨೩೪). "ಲಿಂಗಾರ್ಪಿತ ಮಾಡದೆ ಲಿಂಗಕ್ಕೆ ಆಹಾರ ಸೇವಿಸಿದರೆ ಭವ ತಪ್ಪದು" ಎಂದು ಹೇಳಿ, ರೇವಣಸಿದ್ಧ ಲಿಂಗಕ್ಕೆ ಅರ್ಪಿಸಿ ಸೇವಿಸಿದ. "ಧರೆಯನ್ನಾಳುವ ಭಾಗ್ಯ ನಿನ್ನದಾಗಲಿ" ಎಂದು ಆಶೀರ್ವದಿಸಿದ. ಆ ಮೇರೆಗೆ ಬುಕ್ಕಗೌಡ(?) ಆತಕೂರನ್ನು

ಆಳತೊಡಗಿದ. ಅವನಿಗೆ ವಿಭೂತಿಯಿಟ್ಟು ರೇವಣಸಿದ್ಧ ದೇಶಪರ್ಯಟನಕ್ಕೆ ನಡೆದ ಮತ್ತು ಚಿಕ್ಕಯ್ಯ ಶಾಂತಯ್ಯಕುಮಾರರಿಗೆ ರೇವಣಸಿದ್ಧ (ಸಿದ್ಧೇಶ) ಹಾಲುಮತದ ಪಟ್ಟಕಟ್ಟಿದ (೨೪೫).

ಈ ಸಿದ್ಧಮಂಕ ಚರಿತೆಯನ್ನು ಕೇಳಿದವರು ಸಕಲ ಸೌಭಾಗ್ಯ ಪಡೆದು ಸತಿ ಸುತರು ಸಹಿತ ಸುಖದಲ್ಲಿರುತ್ತಾರೆ. ಸಿದ್ಧರಾಮನ ಚರಿತೆಯನ್ನು ಕೇಳಿದವರಿಗೆ ಸಿದ್ಧಿ ಪ್ರಾಪ್ತವಾಗುತ್ತದೆ. ಏಳೂನೂರು ವರ್ಷ(?) ಬದುಕಿದ (ರೇವಣ)ಸಿದ್ಧ ಮತ್ತು ಸಿದ್ಧರಾಮ (ಐಕ್ಯರಾಗಿ) ಸಂಗನ ಬಸವನಲ್ಲಿ ಸುಖವಾಗಿದ್ದರು (೨೫೧).

ಈ ಕೃತಿಯನ್ನು ಕಾದೊಡಿ ಒಡೆಯ ಸಿದ್ಧ ಬರೆದನು. ಬಸವ ಮೊದಲಾದ ಅಸಂಖ್ಯಾತರ ಮುಂದೆ ಮೆರೆದ ಸಿದ್ಧರಾಮಯ್ಯನ ಚರಿತ್ರೆಯನ್ನು ಕೇಳಿ ಸುಖಿಯಾಗಿರಿ (೨೫೮).

ಕೃತಿ

ಕನ್ನಡದಲ್ಲಿ ಯಾವತ್ತೂ ಕಾಡುವ ಪ್ರಶ್ನೆಗಳಲ್ಲಿ ಕೃತಿಶೀರ್ಷಿಕೆಯೂ ಒಂದು. ಒಂದು ಶೀರ್ಷಿಕೆಯ ಅನೇಕ ರೂಪಗಳನ್ನು, ಒಂದಕ್ಕಿಂತ ಹೆಚ್ಚು ಶೀರ್ಷಿಕೆಗಳನ್ನು ಬಳಸಿದ ಮತ್ತು ಲಿಪಿಕಾರರು ಬೇರೆ ಶೀರ್ಷಿಕೆಗಳನ್ನು ದಾಖಲಿಸಿದ ಉದಾಹರಣೆಗಳು ನಮ್ಮಲ್ಲಿವೆ. ಪ್ರಸ್ತುತ ಕೃತಿಯಲ್ಲಿ ಈ ಮೂರೂ ನಿದರ್ಶನಗಳಿರುವುದರಿಂದ ಇದರ ನಿಜನಾಮವೇನು? ಎಂಬುದೇ ಮೊದಲ ಪ್ರಶ್ನೆಯೆನಿಸುತ್ತದೆ. ಇಲ್ಲಿ ಲಿಪಿಕಾರ ಆರಂಭದಲ್ಲಿ "ಸೊನ್ನಲಾಪುರದ ಸಿದ್ಧರಾಮೇಶ್ವರ ದೇವರ ಚಾರಿತ್ರ" "ಸಿದ್ಧರಾಮ ಚರಿತ್ರ" ಎಂದು, ಅಂತ್ಯದಲ್ಲಿ "ಸೊನ್ನಲಾಪುರದ ಸಿದ್ಧರಾಮಯ್ಯ ದೇವರ ಚರಿತ್ರೆ" ಎಂದು ಮೂರು ರೂಪಗಳನ್ನು ಬಳಸಿದ್ದಾನೆ. ಕವಿಯು "ಕಪಿಲಸಿದ್ಧ ಮಲ್ಲನ ಕೃತಿ" (೧-೭) "ಸಿದ್ಧರಾಮ ಚಾರಿತ್ರ" (೨೦ ಗದ್ಯ) "ಸಿದ್ಧಮಂಕ ಚರಿತೆ" (೪-೨೪೩) "ಸಿದ್ಧರಾಮನ ಚರಿತೆ" (೪-೨೪೫) "ಸಿದ್ಧರಾಮ ಮರುಳು ಮಂಕನ ಕಥೆ" (೪-೨೪೭) "ಸಿದ್ಧರಾಮಯ್ಯನ ಚರಿತೆ" (೪-೨೫೦) ಇಷ್ಟುರೂಪಗಳನ್ನು ಬಳಸಿದ್ದಾನೆ. ಕಥಾ ವಿವರಗಳನ್ನು ಗಮನಿಸಿ ನಾವು "ಸಿದ್ಧಮಂಕ ಚರಿತೆ" ಎಂಬುದನ್ನೇ ಇಟ್ಟುಕೊಂಡಿದ್ದೇವೆ. ಇದರಿಂದ ಸಿದ್ಧಸಂಪ್ರದಾಯದ ಮಂಕನ ಚರಿತ್ರೆ, ಸಿದ್ಧರಾಮ ಮತ್ತು ಮರುಳಮಂಕರ ಚರಿತ್ರೆ ಎಂಬ ಎರಡು ಸೂಕ್ತ ಅರ್ಥ ಹೊರಡಬಹುದಾಗಿದೆ.

ಇಂದು ಕವಿಕೃತಿಗಳನ್ನು ಸಾಹಿತ್ಯಿಕ ಮಾನದಂಡದಿಂದ ಅಳೆಯುವ ಪ್ರವೃತ್ತಿಯು ಬೆಳೆದು ಬಂದಿದೆ. ಕೆಲವು ಕೃತಿಗಳು ಸಾಹಿತ್ಯಿಕ ಒರೆಗಲ್ಲಿಗೆ ಸೋತರೂ ಸಾಹಿತ್ಯೇತರ ಕಾರಣಗಳಿಂದಾಗಿ ಮಹತ್ವ ಪಡೆಯುತ್ತವೆ. ಇದಕ್ಕೆ ನಿದರ್ಶನವಾಗಿರುವ ಪ್ರಸ್ತುತ ಕೃತಿಯು ಚಾರಿತ್ರಿಕ ಮತ್ತು ಸಮಾಜೋಧಾರ್ಮಿಕ ದೃಷ್ಟಿಯಿಂದ ನಮ್ಮ ಗಮನಸೆಳೆಯುತ್ತದೆ.

ಪೌರಾಣಿಕ ಕೃತಿಗಳಿಗೆ ಸಾಮಾನ್ಯವಾಗಿ ಪ್ರಾಚೀನತಮ ಪುರಾಣಗಳೇ ಆಕರ. ಐತಿಹಾಸಿಕ ಕೃತಿಗಳಿಗೆ ಇಂಥ ಸಿದ್ಧ ಆಕರಗಳು ಕಡಿಮೆ. ಪ್ರಸ್ತುತ ಕೃತಿಯು ಸಿದ್ಧರಾಮಚಾರಿತ್ರ ಮತ್ತು ಪ್ರಭುಲಿಂಗಲೀಲೆಗಳಿಗೆ ಭಾಗಶಃ ಋಣಿಯಾಗಿದ್ದರೂ ಕೇಂದ್ರಕಥೆಯನ್ನು ಈ ಕವಿಯೇ ಮೊದಲ ಬಾರಿ ಜನ ವದಂತಿಯಿಂದ ಹುಡುಕಿರುವ ಸಾಧ್ಯತೆಯಿದೆ. "ಆದ್ಯರ ವಚನ ಶಾಸನವನೀಕ್ಷಿಸಿಯಲ್ಲಿ ದುರ್ದದ ಪೇಳ್ದ" (೧-೧೬) ಎಂಬುದು, ಈತನು ಆದ್ಯರ ವಚನಸಾಹಿತ್ಯ (ಅಥವಾ ಹೇಳಿಕೆ)

ಮತ್ತು ಶಾಸನಗಳಿಂದ ಈ ಕಥಾದ್ರವ್ಯವನ್ನು ಸಂಗ್ರಹಿಸಿರುವನೆಂದು ಸೂಚಿಸುತ್ತದೆ. ಇಲ್ಲಿ ಅಲ್ಲಮಪ್ರಭುವಿನ ಒಂದು ವಚನ (೪-೧೪೯), ಬಹುಶಃ ಸಿದ್ಧರಾಮನ ಒಂದು ಸ್ವರವಚನ (೩ನೆಯ ಸಂಧಿಯ ಆರಂಭ)ಗಳು ನೇರವಾಗಿ ಬಳಕೆಯಾಗಿರುವಂತಿವೆ. ಮುದ್ದೇಬಿಹಾಳ ತಾಲ್ಲೂಕಿನ ಸರೂರ ಗ್ರಾಮದ ಶಾಸನಗಳಲ್ಲಿ ಸಿದ್ಧರಾಮ ಮಂಕಯ್ಯ ಮಲ್ಲಿಕಾರ್ಜುನ ಇತ್ಯಾದಿ ಹೆಸರುಗಳ ಪ್ರಸ್ತಾಪವಿರುವುದು ಗಮನಿಸುವ ಅಂಶವಾಗಿದೆ.

ಚಾರಿತ್ರಿಕ : ಹನ್ನೆರಡನೆಯ ಶತಮಾನ ಕರ್ನಾಟಕದ ಇತಿಹಾಸದಲ್ಲಿ ಸಂಕ್ರಮಣ ಸಂದರ್ಭ. ಶರಣರ "ಉದಾರವಾದಿ ಮತಾಂತರದೃಷ್ಟಿ"ಯಿಂದ ತುಂಬ ಮಹತ್ವ ಪಡೆದಿದ್ದ ಈ ಕಾಲಘಟ್ಟದಲ್ಲಿ ಕುರುಬರು ಲಿಂಗಾಯತಕ್ಕೆ ಹೊರಳಿದ ವಿಷಯವನ್ನು ಕಥಾರೂಪದಲ್ಲಿ ಈ ಕೃತಿ ಕಟ್ಟಿಕೊಡುತ್ತದೆ. ಈ ಕಥೆಯ ಕ್ಷೇತ್ರ ಸಿದ್ಧರಾಮನ ಸೊನ್ನಲಿಗೆ, ಬಸವಣ್ಣನ ಕಲ್ಯಾಣ, ಮರುಳ ಮಂಕನ ಸರೂರ-ಕುರಿಬೆಟ್ಟದೂರ-ಆತಕೂರು. ಇವುಗಳಲ್ಲಿ ನಮ್ಮ ಗಮನ ಸೆಳೆಯುವ ಗ್ರಾಮವೆಂದರೆ ಸರೂರು. ಕಾವ್ಯದ ತುಂಬ ಸರವರ, ಸರೋವರ ಎಂದೇ ಬಳಕೆಯಾಗಿರುವುದರಿಂದ ಇದು ಸರೋವರ (ಐಚಿಇಜ) ಆಗಿರಬಹುದೆ? ಎನಿಸುತ್ತದೆ. ಆದರೆ-

> **ಸರವರದೊಳಗೆಲ್ಲ ಕೆರೆ ಬಾವಿ ದೇಗುಲ**
> **ತುರುಗಿನ ಹೂದೋಟ ಚೆಲ್ವ**
> **ಪರಿಪರಿಯಲಿ ಮಾಟಕೂಟದ ಮಠಗಳ**
> **ಪರಿಕಿಸಿ ನೋಡುತ ಬರಲು** (೩-೧೨೬)

ಎಂಬಂಥ ಪದ್ಯಗಳು, ಇದು ಒಂದು ಗ್ರಾಮವೆಂಬುದನ್ನು ದೃಢಪಡಿಸುತ್ತವೆ. ಇದು ಸೊಲ್ಲಾಪುರದ ಸಮೀಪದಲ್ಲಿ ಇರಬಹುದೆಂಬ ಸೂಚನೆಗಳು ಕಾವ್ಯದಲ್ಲಿವೆ. ಆದರೆ ಇದು ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಸರೂರು ಗ್ರಾಮವಾಗಿರುವ ಸಾಧ್ಯತೆ ಹೆಚ್ಚು. ಶಾಸನಗಳಲ್ಲಿ ಇದು ಸರವೂರ ಎಂದು ದಾಖಲಾಗಿದೆ. ಇಲ್ಲಿ ಕುರುಬರೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಊರ ಹೊರಗೆ ಹೊಂದಿಕೊಂಡು ಐದು ಶಿಖರಗಳ ಒಂದು ದೇವಾಲಯ, ಎರಡು ಶಿಖರಗಳ ಇನ್ನೊಂದು ದೇವಾಲಯಗಳಿವೆ. ಐದು ಶಿಖರಗಳ ದೇವಾಲಯದ ಶಾಸನಸ್ಥ ಹೆಸರು "ಮಲ್ಲಿಕಾರ್ಜುನ" "ಮಲ್ಲಿನಾಥ" (ಇಂದು ರೇವಣಸಿದ್ಧ ಎಂದು ಕೆಲವರು ಕರೆಯುವ ತಪ್ಪು ಮಾಡುತ್ತಲಿದ್ದಾರೆ). ಇಲ್ಲಿ ಎರಡು ಶಾಸನ (ಕ್ರಿ. ಶ. ೧೨೦೮ ಮತ್ತು ಕ್ರಿ. ಶ. ೧೨೧೦)ಗಳಿವೆ. ಮೊದಲಿನ ಶಾಸನದಲ್ಲಿರುವ "ಮಂಕಯಂಗಳಿಗೆ ಮಲ್ಲಿನಾಥರಾಮವಂಬನು ಸಂನಿಧಾನದಲು" ಎಂಬ ವಾಕ್ಯ, ಎರಡನೆಯ ಶಾಸನದಲ್ಲಿರುವ "ಅರಸನಹಳ್ಳಿಯ ವೀರನಗೌಡರ ಕೈಯಲು ಮಂಕಯ್ಯನು ಹೊಂನ ಕೊಟ್ಟು ಆ ಹೊಲದಲು" ಮತ್ತು "ಹೊನಗು[ಂ]ದದ ಬೀಚಗುರು ತಂನ ಮಗ ಮಂಕಯನ ಕಾಲವಾ ಗುರುವಿಗೆ ಮಂಕಯನು ಮಲಿನಾಥದೇವರ ಸ್ತಾನವ ಧಾರಾಪೂರ್ವಕ ಮಾಡಿಕೊಟ್ಟರು" ಎಂಬ ವಾಕ್ಯಗಳು ಕಾವ್ಯೋಕ್ತ ಮಂಕಯ್ಯನನ್ನು ನೆನಪಿಸುತ್ತವೆ. "ಸರವೂರ ಅರಳಿಗೆರೆಯ ಕೋಡಿಯ ಮಲ್ಲಿಕಾರ್ಜುನ ದೇವರ ಸಿಧರಾಮ ತಂದೆ ಪ್ರತಿಷ್ಠೆ ಮಾಡಿದ" ಎಂಬ ಹೇಳಿಕೆಯಲ್ಲಿರುವ "ಸಿಧರಾಮತಂದೆ" ಸೊನ್ನಲಿಗೆಯ ಪ್ರಸಿದ್ಧ ಸಿದ್ಧರಾಮನೇ ಆಗಿರುವ ಸಾಧ್ಯತೆಯಿದೆ.

ಮುದ್ದೇಬಿಹಾಳ ತಾಲ್ಲೂಕಿನ ಇಂದಿನ ಸರೂರು ಗ್ರಾಮದ ಈ ಎಲ್ಲ ವಿವರಗಳು ಕಾವ್ಯೋಕ್ತ ಮಂಕಯ್ಯ, ಮಂಕಯ್ಯನ ಸರವೂರ (ಸರೋವರ) ಇತ್ಯಾದಿಗಳಿಗೆ ಸರಿಯಾಗಿ ಹೊಂದಿಕೆಯಾಗುತ್ತದೆ. ಶಾಸನ ಹೇಳುವಂತೆ ಇಲ್ಲಿನ ಮಲ್ಲಿಕಾರ್ಜುನದೇವಾಲಯವನ್ನು ಕಪಿಲಸಿದ್ಧ ಮಲ್ಲಿಕಾರ್ಜುನನ ಭಕ್ತನಾದ ಸೊಲ್ಲಾಪುರ ಸಿದ್ಧರಾಮನೇ ಸ್ಥಾಪಿಸಿರುವ ಸಾಧ್ಯತೆಯಿದೆ. ಈ ಕಾವ್ಯದಲ್ಲಿ ಪದೇ ಪದೇ 'ತಂದೆ' ಉಪಸರ್ಗದೊಂದಿಗೆ ಬರುವ 'ಸಿದ್ಧರಾಮತಂದೆ' ಎಂಬ ನಾಮರೂಪ ಶಾಸನದಲ್ಲಿಯೂ ಕಾಣಿಸಿಕೊಂಡಿದೆ. ಇಲ್ಲಿಯ ಕೆಲವು ಶಿಲ್ಪಗಳಲ್ಲಿ ಪ್ರಾಣಿಬಲಿಯ ಚಿತ್ರಗಳಿವೆ. ಬಹುಶಃ ಇವು ಕಾವ್ಯದಲ್ಲಿ ಮಂಕತಂದೆಯ ಮಕ್ಕಳ ಉಗ್ರಬಲಿ ಘಟನೆಗಳನ್ನೇ ನೆನಪಿಸುತ್ತಿರಬಹುದು.

ಮೇಲೆ ಹೇಳಿದ ಮಲ್ಲಿಕಾರ್ಜುನ ದೇವಾಲಯದ ಅರ್ಚಕರು ಕುರುಬರು. ಇಲ್ಲಿ ಶಾಂತ ಮುತ್ತಯ್ಯನೆಂಬುವನ ಗದ್ದುಗೆಯಿದೆ. ಕಾವ್ಯದಲ್ಲಿ ಹೆಗ್ಗಗೌಡನ ಮಕ್ಕಳ ಹೆಸರಿನ ಮುಂದೆ 'ಮುತ್ತಯ್ಯ' ಉಪಸರ್ಗ ಕಂಡುಬರುವುದನ್ನು ಇಲ್ಲಿ ನೆನೆಯಬೇಕು. ಈ ಶಾಂತಮುತ್ತಯ್ಯನು ರೇವಣಸಿದ್ಧನ ಗುರುವಾಗಿರಬಹುದೆಂದು ಇತರ ಶಾಸನಗಳಿಂದ ಊಹಿಸಬಹುದಾಗಿದೆ.* ದಕ್ಷಿಣೋತ್ತರ ಕರ್ನಾಟಕದ ಕುರುಬರ ಲಗ್ನದಲ್ಲಿ ಈ ಶಾಂತಮುತ್ತಯ್ಯನ ಘೋಷಣೆ ತಪ್ಪದೇ ಕೇಳಿಬರುತ್ತದೆ. ಕುರುಬರಲ್ಲಿ 'ಸರೂರ ಸಂಪ್ರದಾಯ' ಎಂಬ ಪ್ರಸಿದ್ಧ ಗೋತ್ರವಿದೆ. ಈ ಊರಿನಲ್ಲಿ 'ಟಗರ ಪವಾಡ' ಹೆಸರಿನ ಹಸ್ತಪ್ರತಿಯಿದೆ (ಅನುಬಂಧ ಗಮನಿಸಿ). ಇದೆಲ್ಲವನ್ನು ನೋಡಿದರೆ ಈ ಸರೂರು ಕುರುಬರ ಸಂಸ್ಕೃತಿ ದೃಷ್ಟಿಯಿಂದ ತುಂಬ ಮಹತ್ವದ ಗ್ರಾಮವಾಗಿದ್ದು, ಇಲ್ಲಿಯ ಕುರುಬ ಮತ್ತು ಲಿಂಗಾಯತ ಸಮಾಜ, ದೇವಾಲಯ ಶಿಲ್ಪ, ಧಾರ್ಮಿಕ ಆಚರಣೆ, ಪದ್ಧತಿ, ಗದ್ದುಗೆ, ಶಾಸನ, ಲಿಖಿತ ದಾಖಲೆಗಳ ಸಮಗ್ರ ಶೋಧ ಜರುಗುವುದು ಅವಶ್ಯವಿದೆ.

ಕಾವ್ಯದಲ್ಲಿ ಬರುವ ಸರವುರ, ಸರೋವರ ಇದೇ ಗ್ರಾಮವಾಗಿದ್ದು, ಕವಿ ಗೊಂದಲ ಸೃಷ್ಟಿಸಿಕೊಂಡು ಸೊಲ್ಲಾಪುರದ ನೆರೆಯ ಗ್ರಾಮವೆಂಬಂತೆ ಚಿತ್ರಿಸಿದ್ದಾನೆ. ಹೀಗೆ ನೆರೆಯ ಗ್ರಾಮವೆಂದು ಭಾವಿಸಿದ ಕಾರಣ, ಕಥೆಯಲ್ಲಿ ಆಗಾಗ ತೊಡಕುಗಳು ನಿರ್ಮಾಣವಾಗಿವೆ. ಸರೂರನ್ನು ಬಿಟ್ಟರೆ ಇಲ್ಲಿರುವ ಸೊಲ್ಲಾಪುರ ಕಲ್ಯಾಣಗಳು ಪ್ರಸಿದ್ಧ ಪಟ್ಟಣಗಳೇ ಆಗಿವೆ. ಈ ಕಾವ್ಯದಲ್ಲಿ ಮಂಗಳವಾಡ ಕಲ್ಯಾಣಗಳನ್ನು ಒಂದೇ ಸ್ಥಳವೆಂಬಂತೆ ಭಾವಿಸಲಾಗಿದೆ ಅಥವಾ ಮೊದಲ ಸಲ ಮಂಗಳವಾಡ ಹೆಸರು ಆಮೇಲೆ ಕಲ್ಯಾಣದ ಹೆಸರು ಬರುತ್ತಿರುವುದರಿಂದ ರಾಜಧಾನಿ ಸ್ಥಳಾಂತರವಾದುದನ್ನು ಈ ಕಾವ್ಯ ಸೂಚಿಸುತ್ತಿರಬಹುದು. ಇಲ್ಲಿ ಹೇಳಲಾದ ಕುರಿಬೆಟ್ಟದೂರ ಯಾವುದು? ಬಹುಶಃ ಬೆಟ್ಟದೂರ ಎಂಬುದೇ ಇದರ ಮೂಲ ಹೆಸರು. ಕುರಿ ಕಾರಣವಾಗಿ ಈ ಹೆಸರು ರೂಢಗೊಂಡಿರಬೇಕು. ಈ ಕೃತಿಯಲ್ಲಿ ಕುರಿಗಳು ಗವಿ ಸೇರಿದ ಗ್ರಾಮವೆಂಬತೆ ಇದನ್ನು ಚಿತ್ರಿಸಲಾಗಿದೆ. ಬೆಳಗಾವಿ ಜಿಲ್ಲೆಯ ಇಂದಿನ ಮಮದಾಪುರ ಗ್ರಾಮದ ಪ್ರಾಚೀನ ಹೆಸರು ಕುರುಬೆಟ್ಟ. ಬಹುಶಃ ಕಾವ್ಯೋಕ್ತ ಗ್ರಾಮ ಇದಾಗಿರಕ್ಕಿಲ್ಲ. ಬುಕನನ್ ಫ್ರಾನ್ಸಿಸ್‌ನು ತನ್ನ ಪ್ರವಾಸ ಕೃತಿಯಲ್ಲಿ ಈ ಕುರಿಬೆಟ್ಟ ಗ್ರಾಮವು ಪುಣೆಯ ಹತ್ತಿರ ಇರುವುದಾಗಿ ಹೇಳುತ್ತಾನೆ. ಇಲ್ಲಿ ಕಾಣಿಸಿಕೊಂಡ ಇನ್ನೊಂದು ಗ್ರಾಮ ಆತಕೂರು. ಮಂಕತಂದೆಯ ಶಿಷ್ಯ ಹೆಗ್ಗಗೌಡನು ಬುಕ್ಕಗೌಡನಾಗಿ ಹುಟ್ಟಿ, ಈ ಗ್ರಾಮದಲ್ಲಿ ಆಳಿದನೆಂದು

---

* ಕುರುಬರ ಗುರು ಶಾಂತಮುತ್ತಯ್ಯ : ಮಾರ್ಗ-೪, ಡಾ. ಎಂ. ಎಂ. ಕಲಬುರ್ಗಿ, (ಪುಟ ೩೪೯)

ಕಾವ್ಯ ತಿಳಿಸುತ್ತದೆ. ಬಹುಶಃ ಇದು ಆಂಧ್ರಪ್ರದೇಶದ ಶ್ರೀಶೈಲ ಸಮೀಪದ ಇಂದಿನ ಆತ್ಮ ಕೂರು ಇರಬಹುದು.

ಗ್ರಾಮಚರಿತ್ರೆಗಳಲ್ಲದೆ ವೃತ್ತಿಗಳ ಚರಿತ್ರೆಯೂ ಇಲ್ಲಿ ಮುಖ್ಯವೆನಿಸುತ್ತದೆ. ಆರಂಭದ ಸಿದ್ಧರಾಮನ ವಿಷಯ ರಾಘವಾಂಕನ ಸಿದ್ಧರಾಮಚರಿತ್ರೆಯ, ಸಿದ್ಧರಾಮನನ್ನು ಅಲ್ಲಮ ಭೇಟಿಯಾದ ಭಾಗ ಪ್ರಭುಲಿಂಗಲೀಲೆಯ ಅನುಕರಣವಾಗಿವೆ. ಇವೆರಡನ್ನು ಬಿಟ್ಟರೆ ಮಿಕ್ಕ ಕಥಾ ವಿಷಯ ಹೊಚ್ಚಹೊಸದು. ಮಧ್ಯೆ ಮಧ್ಯೆ ರೇವಣಸಿದ್ಧನು ಕೆಲವೊಮ್ಮೆ ಶರಣ ಸಂಪ್ರದಾಯಗಳ ಕುರುಬ ಸಂಪ್ರದಾಯಗಳ ಕೊಂಡಿಯಂತೆ ಕಾಣಿಸಿಕೊಳ್ಳುತ್ತಾನೆ. ಸಿದ್ಧರಾಮನ ಕಥೆಯಿಂದಾಗಿ ಒಂದಿಷ್ಟು ಮರೆಯಾಗಿದ್ದರೂ ಈ ಕೃತಿಯ ನಿಜವಾದ ಕಥಾನಾಯಕ ಮಂಕತಂದೆಯೇ ಆಗಿದ್ದಾನೆ. ಉಪಕಥಾ ನಾಯಕ ಹೆಗ್ಗಗೌಡಯೆನಿಸಿದ್ದಾನೆ. ಹೀಗಾಗಿ ಇದು ಸಿದ್ಧರಾಮ–ಮಂಕತಂದೆ–ಹೆಗ್ಗಗೌಡರ ಕಥೆಯಾಗಿದೆ. ನಿಜಗುಣನೆಂಬ ಶರಣನನ್ನು ಸಿದ್ಧರಾಮ ಭೇಟಿಯಾಗಿ ತುಂಗಭದ್ರೆಯ ದಡದಲ್ಲಿ ಬಿಟ್ಟು ಬಂದು, ಆಮೇಲೆ ಸೊಲ್ಲಾಪುರಕ್ಕೆ ಕರೆದುಕೊಂಡು ಬಂದುದು, ಸಿದ್ಧರಾಮ ಅಲ್ಲಮರೊಂದಿಗೆ ಘಟ್ಟಿವಾಳ ಮುದ್ದಣ್ಣ ಅಜಗಣ್ಣರೂ ಸೊಲ್ಲಾಪುರದಿಂದ ಕಲ್ಯಾಣಕ್ಕೆ ಹೋದರೆನ್ನುವುದು (೩–೧೯೬), ಚಿಕ್ಕಯ್ಯ, ಶಾಂತಯ್ಯರೆಂಬವರು ಮಂಕತಂದೆಯ ಶಿಷ್ಯರೆನ್ನುವುದು (೩–೨೦೬) "ಅಲ್ಲಮ ಅಜಗಣ್ಣ ಮಹಾದೇವಿ ಹೊಕ್ಕರು ಕಾಯಕದಳಿಯನು" (೩–೭೮) ಎಂದು ಹೇಳಿದುದು ಹೊಸ ವಿಷಯಗಳಾಗಿವೆ.

ಕುರುಬ ಸಮಾಜವನ್ನು ಕುರಿತಂತೆ "ತಗರ ಪವಾಡ" ಹೆಸರಿನ ಇನ್ನೊಂದು ಸಾಂಗತ್ಯ ಕಾವ್ಯವಿದೆ.* ಕಲ್ಯಾಣದಲ್ಲಿ ಜರುಗಿದ ಸತ್ತಕುರಿಯ ಮೈಲಿಗೆಯೇ ಎರಡೂ ಕೃತಿಗಳ ಕೇಂದ್ರ ಆಶಯವಾಗಿದೆ. ಸಿದ್ಧಮಂಕ ಚರಿತೆಯ ಹೆಗ್ಗಗೌಡನು ತಗರಪವಾಡದಲ್ಲಿ ಪದ್ಮಗೊಂಡವೆನಿಸಿದ್ದಾನೆ. ಕುರಿ ಗವಿಯಲ್ಲಿ ಅವಿತಿರುವುದು, ರಾಕ್ಷಸಿ ಎರಡನೆಯ ಹೆಂಡತಿಯಾಗಿರುವುದು ಇತ್ಯಾದಿ ವಿವರಗಳು ಎರಡರಲ್ಲಿಯೂ ಸಮಾನವಾಗಿವೆ. ತಗರಪವಾಡದಲ್ಲಿ ಪದ್ಮ ಗೊಂಡನ ಮಗ ಶಾಂತಮುತ್ತಯ್ಯನೇ ಕಥಾನಾಯಕ. "ಸಿದ್ಧಮಂಕ ಚರಿತೆಯಲ್ಲಿ ಈ ತಂದೆ ಪದ್ಮಗೌಡ(ಹೆಗ್ಗಗೌಡ) ಒಬ್ಬ ಉಪಕಥಾನಾಯಕ. ಸಿದ್ಧಮಂಕ ಚರಿತೆಯಲ್ಲಿ ಶಾಂತಮುತ್ತಯ್ಯನ ಉಲ್ಲೇಖವಿಲ್ಲ. ತಗರ ಪವಾಡದಲ್ಲಿ ಮರುಳಮಂಕಯ್ಯನ ಉಲ್ಲೇಖವಿಲ್ಲ. "ತಗರಪವಾಡ"ವು ಪದ್ಮಗೌಡನ ಊರು ತೊಗರ್ಸಿಯೆಂದು ಹೇಳಿ, ಮಗ ಶಾಂತಮುತ್ತಯ್ಯನ ಲೀಲಾಭೂಮಿ ಸರೂರು ಎಂದು ದಾಖಲಿಸಿದೆ. ಸಿದ್ಧಮಂಕ ಚರಿತೆಯ ಹೆಗ್ಗಗೌಡನ ಊರು ಕುರಿಬೆಟ್ಟದೂರು ಎಂದು ಸೂಚಿಸಿದೆ. ತಗರಪವಾಡದಲ್ಲಿ ಸತ್ತ ಕುರಿ ಬದುಕಿಸಿದ ಮತ್ತು ಕಲ್ಯಾಣದಿಂದ ಹೊರ ಹೋಗಿದ್ದ ಕುರುಬರನ್ನು ಒಳಗೆ ಕರೆದುಕೊಂಡ ವಿಷಯವಿದ್ದರೆ, ಇನ್ನೊಂದರಲ್ಲಿ ಸತ್ತಕುರಿಗಾಗಿ ಕಲ್ಯಾಣದಿಂದ ಹೊರ ಹಾಕಿಸಲ್ಪಟ್ಟಿದ್ದ ಕುರುಬರನ್ನು ಒಳಗೆ ಕರೆದುಕೊಂಡ ವಿವರಗಳಿವೆ. ಒಟ್ಟಾರೆ ಒಂದೇ ಮೂಲದ ಕಥೆಗಳು ಎರಡು ಕವಲಾಗಿ ಬೆಳೆದಿವೆ ಅಥವಾ ಎರಡು ಕಥೆಗಳು ಒಂದು ಕಥೆಯಾಗಿ ಕೂಡಿವೆ.

ಸಮಾಜೋಧಾರ್ಮಿಕ : ಭಾರತದಲ್ಲಿ ಸಮಾಜ ಮತ್ತು ಧರ್ಮಗಳು ಬೇರ್ಪಡಿಸಲಾರದಷ್ಟು ಬೆಸೆದುಕೊಂಡಿವೆ. ಮೊದಲು ಸಮಾಜವು ಧರ್ಮವನ್ನು ರೂಪಿಸಿದರೆ ಆಮೇಲೆ ಧರ್ಮವು

---

* ಈ ಹಸ್ತಪ್ರತಿ ಬೆಂಗಳೂರಿನ ಶ್ರೀ ಸಿ.ಕೆ. ಪರಶುರಾಮಯ್ಯ ಅವರ ವಶದಲ್ಲಿದೆ.

ಸಮಾಜವನ್ನು ರೂಪಿಸುವುದು ಇಲ್ಲಿಯ ಪ್ರಕ್ರಿಯೆಯಾಗಿದೆ. ಇಲ್ಲಿ ಅಂಥ ಸಮಾಜ ಕ್ರಮವನ್ನಲ್ಲದೆ, ಕುರುಬ ಸಮಾಜವು ಲಿಂಗಾಯತ ಸಮಾಜದಲ್ಲಿ ಸಮನ್ವಯಗೊಳ್ಳುವ ಪ್ರಕ್ರಿಯೆಯನ್ನು ಕಾಣಬಹುದಾಗಿದೆ.

ಯಾವುದೇ ಸಮಾಜ ವಿಕಸನಶೀಲವಾಗಿರುತ್ತದೆ. ಅಪೂರ್ಣತೆಯಿಂದ ಪೂರ್ಣತೆಗೆ ಹೋಗುವುದು, ಕೆಲಮೊಮ್ಮೆ ಪೂರ್ಣವಾಗಿದ್ದರೂ ಪ್ರತಿಷ್ಠೆಯತ್ತ ಸಾಗುವುದು ಇದರ ಸ್ವಭಾವ. ಇಲ್ಲಿ ಕುರುಬ "ಸಂಪ್ರದಾಯ" ಲಿಂಗಾಯತ "ಧರ್ಮಕ್ಕೆ"ವಾಲಿದ, ವಾಲುತ್ತಿರುವ ಚಿತ್ರಣ ಕಂಡುಬರುತ್ತದೆ.

ಕುರುಬರದು "ಸಿದ್ಧಸಂಪ್ರದಾಯ". ಇದು "ಶರಣ ಸಂಪ್ರದಾಯ"ಕ್ಕೆ ಹೊರಳುತ್ತಲಿರುವುದು ಇಲ್ಲಿಯ ವಿಷಯವಾಗಿದೆ. ಹೀಗಾಗಿ ಕುರುಬರಾದ ರೇವಣಸಿದ್ಧ-ಸಿದ್ಧರಾಮ-ಮರುಳಮಂಕಯ್ಯಗಳು ಒಂದು ಕಡೆ, ಬಸವಣ್ಣ-ಅಲ್ಲಮ ಇನ್ನೊಂದು ಕಡೆ ನಿಂತುದು, ಅವರು ಇವರಂತಾದುದು ಇಲ್ಲಿ ಕಂಡುಬರುತ್ತದೆ. ಮಂಕತಂದೆಯ ರಕ್ಷಣೆಯ ಕಾರ್ಯ ಕೈಗೊಂಡಿದ್ದ ಹೆಗ್ಗಗೌಡನ ಮನೆಗೆ ಬಂದ ನಾರದ "ಹರಸಿ ವಿಭೂತಿಯನಿಟ್ಟು" (೩-೯೧) ಆಶೀರ್ವದಿಸುತ್ತಾನೆ.

ಬಿಜ್ಜಳನು ಕುರುಬರಿಗೆ ಕಲ್ಯಾಣಪ್ರವೇಶಕ್ಕೆ ಅನುಮತಿ ನೀಡುತ್ತಲೇ ಜರುಗಿದ ಆರೋಗಣೆಯ ಬಳಿಕ ಎಲ್ಲರಿಗೂ ವಿಭೂತಿ ವೀಳ್ಯ (೪-೧೫೧) ಕೊಡಲಾಗುತ್ತದೆ. ಕುರುಬರಿಗೆ ಕಟ್ಟಳೆ ಮಾಡಿದ ಸಿದ್ಧರಾಮಯ್ಯ "ಹಾಲುಮತದ ಗೌಡಗಳಿಗೆ ವಿಭೂತಿ"ಯು ಎನ್ನುತ್ತ ಹೆಗ್ಗಗೌಡನ ಮಕ್ಕಳ ಹಣೆಗೆ ವಿಭೂತಿ ಇಟ್ಟು (೪-೧೬೩), ಅದರ ಮಹತ್ವವನ್ನು ವಿವರಿಸುತ್ತಾನೆ. ಇದಲ್ಲದೆ-

ಹೊದ್ದವು ಮುನ್ನ ಅಱುವತ್ತು ವ್ಯಾಧಿಯು
ಸಿದ್ಧನ ನೆನೆ[ದು] ವಿಭೂತಿಯನು
ಮದ್ದು ಇದೆಂದು ದಿನಪ್ರತಿ ಧರಿಸಲು
ಸಿದ್ಧಿಯಹುದು ನೆನೆದುದಕೆ (೪-೧೭೫)

ಎಂದು ಇಲ್ಲಿ ಸೂಚಿಸಲಾಗಿದೆ. ಸಿದ್ಧರಾಮನು ಹಾಲುಮತದ ಇತರ ಗೌಡುಗಳನ್ನು ಕರೆದು ವಿಭೂತಿ ಹಚ್ಚುವ (೪-೨೦೯), ರೇವಣ್ಣಸಿದ್ಧನು ಹೆಗ್ಗಗೌಡನಿಗೆ ರಾಜವಂಶದಲ್ಲಿ ಹುಟ್ಟಲು ಆಶೀರ್ವದಿಸಿ ಹಣೆಗೆ ವಿಭೂತಿಯಿಡುವ (೪-೨೫೩) ಘಟನೆಗಳು ಇಲ್ಲಿವೆ. ಹೀಗೆ ಪದೇ ಪದೇ ವಿಭೂತಿಯ ಪ್ರಸ್ತಾಪ ಇಲ್ಲಿ ಬರುತ್ತದೆ. ಬಹುಶಃ ಕುರುಬರು ತಮ್ಮ 'ಭಂಡಾರ ಸಂಸ್ಕೃತಿ' ಯಿಂದ 'ವಿಭೂತಿ ಸಂಸ್ಕೃತಿ'ಗೆ ಹೊರಳುತ್ತಲಿರುವರೆಂಬ ಧ್ವನಿ ಇಲ್ಲಿದೆ.

ಕುರುಬ ಸಮಾಜಕ್ಕೆ ಸಂಬಂಧಿಸಿದಂತೆ ಉಣ್ಣೆ, ಕತ್ತರಿಸುವ, ನೂಲುವ, ಕಂಬಳಿ ನೇಯುವ, ಹಾಲು ಮೊಸರಿನ ಹೈನುಗಾರಿಕೆ ಮಾಡುವ, ಕಂಬಳಿ ಗದ್ದುಗೆ, ಕಂಬಳಿ ಕಂಥೆ ಬಳಸುವ ವಿವರವು ಅಲ್ಲಲ್ಲಿ ಬರುತ್ತದೆ. ಈ ಕೃತಿಯಲ್ಲಿಯ

"ಲಿಂಗಾರ್ಪಿತ ಮಾಡಿದಲ್ಲದೆ ಬೋನವ
ನಂಗಸುಖಕೆ ಸಲ್ಲಿಸಿದರೆ
ಹಿಂಗದು ಭವ" (೪-೨೩೧)

"ಗುರುವೆ ನೀ ಕರುಣಿಸು ಲಿಂಗನಿಷ್ಠೆಯ" (೩-೧೩೮)

"ನಿಮ್ಮ ಮತದೊಳು ಜಂಗಮರಿರುವುದು ಲೇಸು" (೩-೧೯)

"ಬಂದ ಜಂಗಮಕನ್ನ ಉದಕವನಿತ್ತು" (೩-೫೨)

ಇತ್ಯಾದಿ ಮಾತುಗಳು ಕುರುಬರ ಈ ಕಥೆಯಲ್ಲಿ ಲಿಂಗಾಯತದ ವಾತಾವರಣವನ್ನು ಪ್ರತಿನಿಧಿಸುತ್ತವೆ. ಇಲ್ಲಿಯ ಕೇಂದ್ರಪ್ರಜ್ಞೆ ಕುಲಭೇದ ನಿರಾಕರಣೆ. ಹೀಗಾಗಿ "ಈತ ಮುಟ್ಟಿದ ಕುಲಲೇಸಾಯಿತು" (೨-೫೩)" ಜಾತಿಸೂತಕವೆಂಬ ನೀತಿಯ ಚುನ್ನದ ರೀತಿಯ ನೀನಾಡಬೇಡ (೨-೫೭) "ಜಾತಿರಹಿತನು ಅಜಾನೊಲಿದವಗೆ ಜಾತಿನೀತಿಯನರಸುವರೆ" (೨-೭೦) ಭುವನದೊಳಗೆ ಹದಿನೆಂಟು ಕುಲಗಳೆಂದು ವಿವರವರಿಯದೆ ನುಡಿದರು, ಸುವಿಚಾರದಿ ಪೇಳುವೆ ಭಕ್ತಕುಲವೊಂದು ಭವಿಗಳ ಕುಲವೆಲ್ಲವೊಂದು" (೨-೭೯) ಇತ್ಯಾದಿ ಹೇಳಿಕೆಗಳು ಶರಣರ ನಿಲುವನ್ನು ಬೆಂಬಲಿಸುತ್ತವೆ. ಇವೆಲ್ಲಕ್ಕೆ ಕಳಸವಿಟ್ಟಂತೆ ಬಸವಣ್ಣನನ್ನು–

ಬಸವನ ನೆನೆದರೆ ಭಯವಿಲ್ಲ ಭವವಿಲ್ಲ
ಬಸವ ಭಜಿಸೆ ಸುಖಿಗಳು (೩-೪೯)
ಬಸವ ಎಂದರೆ ಪಾಪ ಓಡುವುದು ಬಸವಯ್ಯ
ಬಸವ ಎನಲು ತಪ ಹರಿಗು
ಬಸವನ ನೆನದರೆ ಹೆಣನೆದ್ದು ನಡೆವುದು
ಬಸವ ಎಂದರೆ ಭಯವಿಲ್ಲ (೪-೧೪೯)

ಎಂದು ಬಸವಣ್ಣನ ಬಗ್ಗೆ ಅಪಾರ ಭಕ್ತಿಯನ್ನು ವ್ಯಕ್ತಪಡಿಸಲಾಗಿದೆ. ಇದಲ್ಲದೆ ಇಲ್ಲಿಯ "ಉಪಪಾತಕ ಕೋಟ್ಯನುಕೋಟಿಯ ಮಾಡಿದ ಕರ್ಮಂಗಳು......" ಎಂಬುದು (೪-೧೪೯) ಅಲ್ಲಮನ ವಚನವಾಗಿದೆ. "ಧಿಂ ಧಿಮಿಕನೆಂಬ ಶಬ್ದ ತೋಹಿನತ್ತಲು...." ಎಂದು ಆರಂಭವಾಗುವ ಕಪಿಲ ಸಿದ್ಧ ಮುದ್ರಿಕೆಯ ಪತ್ಯ ೫ ನುಡಿಗಳ ಸ್ವರವಚನವಾಗಿದೆ. ಸಿದ್ಧರಾಮನದಾಗಿರಬಹುದಾದ ಈ ಸ್ವರವಚನಕ್ಕೆ "ರಾಗ:ವರಾಳಿ" ಎಂದು ಹೇಳಲಾಗಿದೆ. ಹೆಗ್ಗಗೌಡನನ್ನು "ಕುರುಬ ಲಿಂಗವಂತ" ನೆಂದೇ (೪-೯೩) ಕರೆಯಲಾಗಿದೆ.

ಹೀಗೆ ಲಿಂಗಾಯತ ಸಮಾಜದಲ್ಲಿ ಬೆರೆಯುತ್ತಲಿದ್ದ, ಬೆರೆತ ಕುರುಬ ಸಮಾಜದ ಒಂದು ಸಣ್ಣ ಚಿತ್ರವನ್ನು ಈ ಕೃತಿ ಪೂರೈಸುತ್ತದೆ.

ಪರಿಷ್ಕರಣ

ಡಿ.ಎಲ್.ಎನ್. ಅವರು ತಾವು ಸಂಪಾದಿಸಿದ ಸಿದ್ಧರಾಮ ಚಾರಿತ್ರದ ಪೀಠಿಕೆಯಲ್ಲಿ "ಇನ್ನೊಂದು ಸಿದ್ಧರಾಮಚರಿತ್ರೆ" ಶೀರ್ಷಿಕೆಯ ಕೆಳಗೆ ಪ್ರಸ್ತುತ ಕೃತಿಯನ್ನು ಕುರಿತು ಬರೆದಿದ್ದಾರೆ. ಇದು ನಮ್ಮ ಗಮನ ಸೆಳೆದು, ಈ ಕೃತಿ ಪ್ರಕಟಣೆಗೆ ಪ್ರೇರಣೆ ನೀಡಿತು.

ಪ್ರಸ್ತುತ ಸಂಪಾದನೆ ಏಕೈಕ ಹಸ್ತಪ್ರತಿಯನ್ನಾಧರಿಸಿದೆ. ಮೂಲತಃ ಹೆಗ್ಗಡದೇವನಕೋಟೆ ತಾಲ್ಲೂಕಿನ ಸರಗೂರು ಹೋಬಳಿ ಎತ್ತಿಗದ ಮಠಕ್ಕೆ ಸಂಬಂಧಿಸಿದ ಓಲೆ ಹಸ್ತಪ್ರತಿ ಇದು. ಈಗ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದ

ಕೆ-೫೬೨ ಸಂಖ್ಯೆಯ ಪ್ರತಿಯಾಗಿದೆ. ಇದರ ಉದ್ದಗಲಗಳು ೧೩.೧"*೧.೨" ಆಗಿದ್ದು, ಇದರಲ್ಲಿ ೧-೮೯ ಪತ್ರಗಳಿವೆ. ಪ್ರತಿ ಪತ್ರದಲ್ಲಿಯೂ ೪ ಪಂಕ್ತಿಗಳಿವೆ. ಪ್ರತಿ ಪಂಕ್ತಿಯಲ್ಲಿಯೂ ೫೮ ಅಕ್ಷರಗಳಿವೆ. ಪ್ರತಿಯು ಹೇರಳವಾದ ಸ್ಖಾಲಿತ್ಯಗಳಿಂದ ಕೂಡಿದೆ. ಕೆಲವು ಪತ್ರಗಳು ಲುಪ್ತವಾಗಿವೆ. ೯,೧೧,೨೩ನೆಯ ಪತ್ರಗಳು ಮುರಿದಿವೆ. ೧೫ನೆಯ ಪತ್ರ ಲುಪ್ತವಾಗಿದೆ. ಹಸ್ತಪ್ರತಿಯಲ್ಲಿ ಶಕಟರೇಫದ ಬಳಕೆಯಿರುವುದರಿಂದ ಪಠ್ಯದಲ್ಲಿ ಶಕಟರೇಫವನ್ನು ಉಳಿಸಿಕೊಳ್ಳಲಾಗಿದೆ.

ಏಕೈಕ ಹಸ್ತಪ್ರತಿಯನ್ನಾಧರಿಸಿ ಅದರಲ್ಲಿ ಯೂ ತ್ರುಟಿತ ಪ್ರಯನ್ನಾಧರಿಸಿ ಸಂಪಾದನ ಕಾರ್ಯವನ್ನು ಪೂರೈಸುವುದು ತುಂಬ ಕಷ್ಟ. ಈ ಹಸ್ತಪ್ರತಿಯ ದೋಷಗಳನ್ನು ನೋಡಿದರೆ ಇದು ಬಹುಶಃ ಪ್ರತಿಯಿಂದ ಹುಟ್ಟಿದ ಪ್ರತಿಯಾಗಿದರೆ ಹಾಡುಗಾರನಿಂದ ಹಾಡಿಸುತ್ತ ಬರೆದ ಪ್ರತಿಯೆನಿಸುತ್ತದೆ. ಹೀಗಾಗಿ ಇದನ್ನು ಮೌಖಿ ಪರಂಪರೆಯ ಪಾಠವೆಂದೇ ಹೇಳಬಹುದು. ಹಾಡುಗಾರನು ಕಲಿಯುವಾಗ ಉಂಟಾದ ಕಿವಿತಪ್ಪು, ಅವನು ಹಾಡಿ ಹೇಳುವಾಗ ಉಂಟಾದ ಬಾಯಿತಪ್ಪು, ಹಾಡುಗಾರಿಕೆಗೆ ತಕ್ಕಂತೆ ಶಬ್ದಗಳಲ್ಲಿ ಉಂಟಾಗುವ ವ್ಯತ್ಯಾಸ ತಪ್ಪು, ದುರ್ಬಲ ನೆನಪು ಕಾರಣವಾಗಿ ಉಂಟಾಗುವ ವಿಸ್ಮೃತಿ ತಪ್ಪು, ಮತ್ತೆ ಕೇಳಿ ಬರೆಯುವವನ ಕಿವಿತಪ್ಪು, ಕಣ್ತಪ್ಪು, ಕೈತಪ್ಪು, ಇತ್ಯಾದಿಗಳು ಸೇರಿ ಅಪಪಾಠಗಳು ಪುನರಾವರ್ತನೆಗೊಳ್ಳುತ್ತ ಬಂದಿರುತ್ತವೆ. ಬಹುಶಃ ಇಂಥ ಪರಂಪರೆಗೆ ಸೇರಿದ ಈ ಹಸ್ತಪ್ರತಿಯನ್ನು ಸಾಹಿತ್ಯದ ಅಭ್ಯಾಸಬಲ, ಪರಿಷ್ಕರಣದ ಪರಿಶ್ರಮಬಲಗಳ ಹಿನ್ನೆಲೆಯಲ್ಲಿ ಪರಿಷ್ಕರಿಸಿದ್ದೇವೆ. ತಿದ್ದುಪಡಿ ಮಾಡಿದಾಗ ಸ್ವೀಕೃತ ಪಾಠಗಳನ್ನು ಚೌಕಕಂಸದಲ್ಲಿ, ದೋಷಪಾಠಗಳನ್ನು ಅಡಿಟಿಪ್ಪಣಿಯಲ್ಲಿ (ಮೂ=ಮೂಲದ್ದು) ಕೊಟ್ಟಿದ್ದೇವೆ. ನಮ್ಮ ಸಾಮರ್ಥ್ಯಕ್ಕೆ ಮೀರಿ ಕೆಲವು ಪಾಠಗ್ರಂಥಿಗಳು ಉಳಿದಿಕೊಂಡಿವೆ. ನಮ್ಮ ಊಹೆಯಲ್ಲಿ ದೋಷಗಳೂ ನುಸುಳಿವೆಯೆಂಬ ಭಾವನೆ ನಮ್ಮದಾಗಿದೆ. ಇವೆಲ್ಲವನ್ನು ವಿದ್ವಾಂಸರು ಮನ್ನಿಸಬೇಕೆಂದು ಬಿನ್ನವಿಸಿಕೊಳ್ಳುತ್ತೇವೆ.

ಅನುಬಂಧದಲ್ಲಿ 'ಟಗರ ಪವಾಡ' ಹೆಸರಿನ ಗದ್ಯಕೃತಿಯನ್ನು ಜೋಡಿಸಲಾಗಿದೆ. ಇದು ಮುದ್ದೇಬಿಹಾಳ ತಾಲೂಕಿನ ಸರೂರು ಗ್ರಾಮದ ಕುರುಬ ಪೂಜಾರಿಗಳ ಮನೆಯಲ್ಲಿ ಲಭಿಸಿದುದಾಗಿದೆ. ಕೃತಿನಾಮ ಹಸ್ತಪ್ರತಿಯಲ್ಲಿ ಕಂಡುಬರುವುದಿಲ್ಲವಾದರೂ, ಸರೂರಿನ ಜನತೆ ಇದನ್ನು 'ಟಗರ ಪವಾಡ' ಎಂದು ಕರೆಯುತ್ತಿದ್ದು, ಈ ಹೆಸರನ್ನೇ ನಾವು ಶೀರ್ಷಿಕೆಯಾಗಿ ಬಳಸಿದ್ದೇವೆ.

ಈ ಎರಡು ಕೃತಿಗಳಲ್ಲದೆ (ಸಿದ್ಧಮಂಕ ಚರಿತೆ, ಟಗರ ಪವಾಡ) 'ತಗರ ಪವಾಡ' ಹೆಸರಿನ ಇನ್ನೊಂದು ಸಾಂಗತ್ಯ ಕೃತಿ ಇದೆ. ಅದನ್ನು ಇಷ್ಟರಲ್ಲಿ ಪ್ರಕಟಿಸುವ ಪ್ರಯತ್ನದಲ್ಲಿರುವೆವೆಂದು ತಿಳಿಸಲು ಸಂತೋಷವೆನಿಸುತ್ತದೆ.

ಕೃತಜ್ಞತೆ : ದಶಕಗಳ ಹಿಂದೆ ನಮ್ಮ ಕೋರಿಕೆಯ ಮೇರೆಗೆ ಪ್ರಸ್ತುತ ಓಲೆಗರಿ ಪ್ರತಿಯನ್ನು ಪರಿಶೀಲಿಸಿ ಪ್ರತಿಮಾಡಿಕೊಳ್ಳಲು ಅವಕಾಶವಿತ್ತ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಅಂದಿನ ನಿರ್ದೇಶಕರಾಗಿದ್ದ ಪ್ರೊ. ಜೀ.ಶಂ. ಪರಮಶಿವಯ್ಯ ಅವರನ್ನು ಈ ಹೊತ್ತು ಕೃತಜ್ಞತೆಯಿಂದ ಸ್ಮರಿಸುತ್ತ, ಹಾಗೆಯೇ ಸಂಸ್ಥೆಯ ಇಂದಿನ ನಿರ್ದೇಶಕರಾದ ಪ್ರೊ. ಸಿ. ಪಿ. ಸಿದ್ಧಾಶ್ರಮ ಅವರಿಗೂ ಸಂಪಾದನ ವಿಭಾಗದ ಉಪ ನಿರ್ದೇಶಕರಾದ ಡಾ. ಮೈಲಹಳ್ಳಿ ರೇವಣ್ಣರಿಗೂ, ಈ ಕೃತಿಯನ್ನು ಪ್ರಕಟಿಸುತ್ತಿರುವ ಗದುಗಿನ ಶ್ರೀ ತೋಂಟದಾರ್ಯಮಠದ ಲಿಂಗಾಯತ ಅಧ್ಯಯನ

ಸಂಸ್ಥೆಗೂ ಅನುಬಂಧದಲ್ಲಿ ಸೇರಿಸಿದ 'ಟಗರ ಪವಾಡ' ಕೃತಿಯನ್ನು ಪೂರೈಸಿದ ಸರೂರು ಗ್ರಾಮದ ಪೂಜಾರಿಗಳಿಗೂ, ಇದನ್ನು ಒದಗಿಸಿಕೊಡುವಲ್ಲಿ ನೆರವಾದ ಮುದ್ದೇಬಿಹಾಳದ ಶ್ರೀ ತಡಸದ ಅವರಿಗೂ, ಸ್ನೇಹಿತ ಶ್ರೀ ಸಿ.ವಿ. ಮುಳಗುಂದ ಅವರಿಗೂ ಧನ್ಯವಾದಗಳು.

– ಸಂಪಾದಕರು

❖❖

*

ಪರಿವಿಡಿ

ಪ್ರಥಮ ಸಂಧಿ

ಮಹಾಸ್ರಗ್ಧರಾ ವೃತ್ತ ॥

ಪರಮಾರ್ಥಂ ಪುಣ್ಯತೀರ್ಥಂ ಶರಣಜನಹಿಸಾರ್ಥನುದ್ಯತ್ಸದರ್ಥಂ
ವರಮಂತ್ರಂ ಸತ್ಯತಂತ್ರಂ ಭುವನಜನ ಸಮುದಾತ್ತಯಂತ್ರಂ ಮಹೇಶಂ
ಧರಣೀಶಂ ಚಿತ್ಪ್ರಕಾಶಂ ನಿರುಪಮ ಗುಣಭೂಷಂ ವಿರೂಪಾಕ್ಷವೇಶಂ
ಹರನಾಮಂ ಭಕ್ತಿಧಾಯಂ ಮದನಭರಿತ ಸಂಗ್ರಾಮನೀ ಸಿದ್ಧರಾಮಂ

ಸಾಂಗತ್ಯ ॥

ಶಿರಕರ ಶಿರಶಿರ ಶಿರಶಿರ ಗೋಶಿರ
ಶಿರಹಾರಿ ಶಿರಶಿಖಿಯವಗೆ
ಶಿರದಹಿ ಶಿರಭಕ್ತಿ ಶಿರವೈದುಳ್ಳನ
ಚರಣಕ್ಕೆ ನಾನೆರಗುವೆನು ॥೧॥

ಕರುಣಾಕರ ಭಕ್ತವತ್ಸಲನಕ್ಷಯ
ನಿರುಪಾಧಿಕ ನಿತ್ಯತೃಪ್ತ
ನಿರಪೇಕ್ಷ ನಿರ್ವಂಚಕ ಗುರುಸಿದ್ಧೇಶ
ಧರೆಯ ಭಕ್ತರನು ಪಾಲಿಪುದು ॥೨॥

ಅಮರರ ದೈವ[ಗಳ]ರಸನೆ ಭರ್ಗನೆ
ದ್ಯುಮಣಿ ಕೋಟಿತೇಜದ[ವ]ನೆ
ಉಮೆಯ ಮನೋಹರನೆ ನೀ ಕೃಪೆಯಿಂದ
ಸುಮತಿಗಳನಿತ್ತು ಸಲಹು ॥೩॥

ಈ ಕೃತಿಯು ಶ್ರೀ ಸರಸ್ವತಿತಾಯೆ ಶ್ರೀ ಗುರುಸಿದ್ಧರಾಮಚರಿತ್ರಕ್ಕೆ ನೆರವಾಗು ॥ ಗುರುಶಾಂತಗೆ ಇಷ್ಟಾರ್ಥವನಿತ್ತ ಶ್ರೀ ಗುರುಸಿದ್ಧರಾಮೇಶ್ವರಸ್ವಾಮಿ ಕೃಪೆಯಾಗಬೇಕು ಶ್ರೀ ಗುರುಸಿದ್ಧರಾಮೇಶ್ವರನ ಶ್ರೀಪಾದಕ್ಕೆ ಶರಣು ಶರಣಾರ್ಥಿ- ಎಂದು ಆರಂಭವಾಗಿದ್ದು, ಹಸ್ತಪ್ರತಿಯಲ್ಲಿ ಈ ಭಾಗಕ್ಕೆ ಕಂದ ಎಂದು ಸೂಚಿಸಲಾಗಿದೆ. ಇಲ್ಲಿ ಗುರುಶಾಂತ ಉಲ್ಲೇಖವಿದೆ. ಇದು ಕವಿಯ ಇಲ್ಲವೆ ಪ್ರತಿಕಾರನ ಹೆಸರನ್ನು ಸೂಚಿಸುತ್ತಿರಬಹುದು.

ರಾಜರಾಜಸಖ ರಾಜಕಲಾಯುಧಧರ
ರಾಜಾರಿ [ನ]ಪೀನಾಭರಣ
ರಾಜಿಪ ರಾಜೀವಸಂಭವ ಹರಿ ಸುರ
ರಾಜಪೂಜಿತನೆ ರಕ್ಷಿಪುದು ॥೪॥

ಶಶಿ ರವಿ ಭಾಗೀರಥಿಯ ಜೂಟದೊಳಿಟ್ಟು
ನೊಸಲಕಣ್ಗಳ ಪಂಚವದನ
ವಿಷಗೊರಳುರಗಾಭರಣ ಶಿರಮಾಲೆಯು
ದಶಭುಜಗಳು ರಾಜಿಸಲು ॥೫॥

ತ್ರಿಶೂಲ ಡಮರುಗ ಕರದಿ ಬ್ರಹ್ಮನ ಶಿರ
[ಶಶಿಮು]ಖಿ ಗಿರಿಜೆ ವಾಮದೊಳು
ಎಸೆವ ಕಪಿಲಸಿದ್ಧಮಲ್ಲನ ಮಹಿಮೆಯ
ನೊಸೆದು ಬಣ್ಣಿಪೆನು ಜಗದೊಳು ॥೬॥

ಕರಿಚರ್ಮ ಪುಲಿದೊಗಲೊಪ್ಪೆ ಮನ್ಮಥನ ಸು
ಟ್ಟುರುಹಿದ ಭಸ್ಮ ದೇಹದೊಳು
ಎಸೆವ ಕಪಿಲಸಿದ್ಧಮಲ್ಲನ ಕೃತಿಯನು
ಹರಶರಣರು ಲಾಲಿಪುದು ॥೭॥

ಕಾಮಿತಫಲವಿತ್ತು ಸುರನಿಕರಕೆ ಮುನಿ
ಸ್ತೋಮಾಮಳ ಪಾದಭಕ್ತ
ಪ್ರೇಮಿ ಚಿನ್ಮಯ ಸರ್ವೇಶ [೧][ನೆ ಈಶನೆ][೧]
ಪ್ರೇಮದಿ ಮತಿಯ ರಕ್ಷಿಪುದು ॥೮॥

ಪರಕೆ ಶಾಸನವೆನಿಸುವ ಈ ಕೃತಿಯಿದ
ಹರುಷದಿಂದಲಿ ಕೇಳ್ದವರ
ದುರಿತ ಊರಿಗೆ ತೋರಿದರಗಿನಂದದೊಳು
ಕರಗಿ ಹೋಹದು ಸತ್ಯವೆಂದ ॥೯॥

---

೧ ನಿವಾಸನೆ[ಮೂ]

ಕಡಲು ಅಡವಿ ಬೆಟ್ಟ ಪುರ ಕೆಳದಿಯರನಾ
ಪೊಡವಿಪತಿಯ ರವಿಶಶಿಯ
ಒಡನೆ ವರ್ಣಿಸಿ ಕೇಳಿ ಕೆಡಬೇಡ ನೆನವುದೆ
ನ್ನೊಡೆಯ ರೇವಣಸಿದ್ಧನಿರ [ವ] ॥೧೦॥

ರಸಭಾವಲಕ್ಷಣಂಗಳು ತೋಜಿಕೆಯಿಲ್ಲ
ದುಸುರಲಾಗದೆನುತಿಹರು
[೧][ರಸೆ][೧]ಯ ಜನರು ಲಕ್ಷಣದಿಂದ [೨][ಪೇ][೨]ಳ್ದರೆ
ಶಶಿಧರಾವೆಡೆ[ಗೆಂದೆ]ನಲು ॥೧೧॥

ಭಾರತ ರಾಮಾಯಣ ಪದ ಪದ್ಯವ
ಸೇರಿಸಿ ಲಕ್ಷಣವಿಡಿದು
ಸಾರಿದರಾವ ಮುಕ್ತಿಯನೆಂಬುದನು ವಿ
ಚಾರ ಉಳ್ಳವರು [೩][ಪೇ][೩]ಳುವುದು ॥೧೨॥

ಆವ ಲಕ್ಷಣದಿಂದಲಿ ಪೇಳಿದರೇನು
ಸಾವ ಲಕ್ಷಣ ತಪ್ಪದಿಹುದೆ
ದೇವಲಕ್ಷಣವಹುದಿದು ನಿಜವೆಂದು
ದೇವ ರೇವಣಸಿದ್ಧ ಪೇಳ್ದ ॥೧೩॥

ಲಕ್ಷಣವಿಡಿದು ಪೇಳಿದ ಕವಿಜನರಿಗೆ
ಅಕ್ಷಯ ಪದವು ಸಾರಿದುದೆ
ಲಕ್ಷಣ ಶಿವಭಕ್ತಿ ಕೂಡೆ ಮೋಕ್ಷವು ಬಜಿ
ಲಕ್ಷಣದಿಂದೇನಹುದು ॥೧೪॥

ಅಭ್ಯಾಸದಿಂದ ನುಡಿದ ನುಡಿಗಳ ಕೇ
ಳ್ದುಬ್ಬಿ ಕೊಬ್ಬುತ್ತಿರಲೇನು
ಪರ್ಬಿದ ನಿರೆಯಾಲಿಯ ಸುಟ್ಟುರುಹಿಯೆ
ನಿರ್ಭಯ[೪][ದಲಿ ಪೇಳೆ][೪]ಯಿದಿ ॥೧೫॥

---

೧ ಶಶಿ[ಮೂ] ೨ ಪೇಳ್ದಪೇ[ಮೂ] ೩ ಕೇ(ಮೂ) ೪ ಧಾರಿ ವೇಳೆ (ಮೂ)

ಸಿದ್ಧಮಂಕನು ಸರ[1][ವೂ][1]ರದೊಳು ತಪವಿದ್ದು
ಸಿದ್ಧಿಯ ಪಡೆದ ಕಥನವ
ಆದ್ಯರ ವಚನಶಾಸನವನೀಕ್ಷಿಸಿಯಲ್ಲಿ
ರ್ದುದ ಪೇಳ್ದ ಸಿ[2]ದ್ಧ[2]ಯನು ॥೧೬॥

ರೇವಣಸಿದ್ಧಯ್ಯನು ಸಿದ್ಧರಾಮನು
ದೇವನ ಪ್ರತಿರೂಪೆಂದು
ಭಾವದಿಂದಜಿದ ನರರ ಸಲೆ ಕರುಣದೊ
ಳೋವನು ಸಿದ್ಧೇಶ್ವರನು ॥೧೭॥

ಬೇಡಿದಿಷ್ಟಾರ್ಥಸಿದ್ಧಿಯನಿತ್ತು ಸಲಹುವ
ರೂಢಿಪಾಲಕರು ಕೇಳಿದರೆ
ಮಾಡಿದ ಪಾಪ ಹರಿದು ವೈರಿಗಳು ಕೆ
ಟ್ಟೋಡುವರೆಂದ ಸಿದ್ಧೇಶ ॥೧೮॥

ಪಂಚಾಕ್ಷರಿಯ ಶಾಸನಸಿದ್ಧರು [ಘನ]
ಸಂಚಿತಾರ್ಥವನಜಿದರಿಗೆ
ಪಂಚತೀರ್ಥಕೈದಿಯೆ ಮಿಂದ ಫಲಗಳು
ವಂಚನೆಯಿಲ್ಲದೆ ಕೇಳೆ ॥೧೯॥

ಅನ್ನದಾನ ಕನ್ನಾದಾನ ಗೋದಾನದಿಂ
ದುನ್ನತ ಫಲವೀ ಕೃತಿಯ
ತನ್ನ ಪುತ್ರರು ಮಿತ್ರರುಗೂಡಿ ಕೇಳಲು
ಪನ್ನಗಧರ ಸಲಹುವನು ॥೨೦॥

ವಚನ ॥

ಅಮರಾಮರಾಮ ಕೊಮಾರರಾಮ ರಾಕ್ಷಸರಾಮ ಜಟ್ಟಂಗಿರಾಮ ಬಲಭದ್ರರಾಮನೆಂಬ ಯೀ ಐದು ಲಿಂಗದಲ್ಲಿಗೆ ಹೋಗಿ ಅನ್ನದಾನ ಕನ್ಯಾದಾನ ಗೋದಾನ ಸುವರ್ಣದಾನ ಅಶ್ವದಾನ ಮಹಿಷಿದಾನಕ್ಕಿಮ್ಮಡಿ ನೂಱು ಯಜ್ಞವ ಮಾಡಿದ ಫಲಕ್ಕೆ ಇಮ್ಮಡಿ ಫಲವು ಸಿದ್ಧರಾಮ ಚಾರಿತ್ರವ ಕೇಳ್ದ ಭಕ್ತರಿಗೆ ರಾಜ್ಯಾಧಿಪತಿಗಳಿಗೆ ಭೂಪ್ರಜೆಗಳಿಗೆ ಲೇಸಕ್ಕು ಪುಣ್ಯಮಕ್ಕು ಶಾಶ್ವತ ಪದವಿಗಳ ಕೊಟ್ಟು ಸಲಹುತ್ತಿಪ್ಪನು ವರ ಕಪಿಲಸಿದ್ಧನು ಲೋಕಹಿತಾರ್ಥವ ಪೇಳ್ದನು ಕಥೆಯನು

---

೧ ವ(ಮೂ) ೨ ಧಿ (ಮೂ)

ಭೂವಳಯದ ಸರ್ವ ಜೀವಾದಿಗಳನು
ಪಾವನ ಮಾಡುವೆನೆಂದು
ದೇವರೊಳಧಿಕ ಸಿದ್ಧೇಂದ್ರ ಪುಟ್ಟುವ ಕಥೆ
ಕೋವಿದರೆಲ್ಲ ಕೇಳುವದು ॥೨೧॥

ಆ ಮಹಾಪಾತಕಂಗಳ ಹೋರಟೆಯನು
ಈ ಮಹಿಯೊಳು ಕೆಡಿಸುವದು
ತಾಮಸವಿಲ್ಲದೆ ಕೇಳ್ವುದು ಮದನ ಸಂ
ಗ್ರಾಮ ವಿಜಯನ ಕೃತಿಯನು ॥೨೨॥

ಧರೆಗೆ ಸೊನ್ನಲಪುರ ಕೈಲಾಸ ಗುರು ಸಿದ್ಧ
ಹರನು ಗುಡ್ಡರ ಗಣೇಶ್ವರರು
ನೆರೆದಷ್ಟಷಷ್ಟಿತೀರ್ಥವೆ ಶಿವನಿಳೆಯವು
ನಿರುತವೆಂದಿದನು ಬಣ್ಣಿಸುವೆ ॥೨೩॥

ಸುರರು ಕಿನ್ನರರು ಖೇಚರರೆಕ್ಷ ರಾಕ್ಷಸ[ರು]
ನೆರೆದು ಕೇಳಿಸುವ ತುಂಬುರರು
ಹರನೋಲಗಕೆ ಭೃಂಗಿ ನಡೆತರುತಿರೆ ಕಂಡು
ಪಿರಿದು ಗಂಧರ್ವರು ನಗಲು ॥೨೪॥

ಇವರೆನ್ನಜಿದಜಿಯದವೋಲು ನಗೆ ನಕ್ಕ
ರಿವರಿಗೆ ನರಜನ್ಮದೊಳು
ಭವಿಯ ಬಸುಱ ಬಂದು ಭವಿ ಸತಿಪತಿಯಾಗಿ
ನವೆವ ಬುದ್ಧಿಯ ಶಾಪವಿತ್ತ ॥೨೫॥

ನೊಂದೆವು ಮುಂದುಗಾಣದಾದೆವು ತಂದೆ
ಬಂದುದು ಶಾಪ ವಿಶಾಪ
ಎಂದಹುದೆಂದು ಕೇಳಲು ಭೃಂಗೀಶ್ವರ
ಮಂದಮತಿಗಳಿಗಿಂತೆಂದ ॥೨೬॥

ಉಣ್ಣದೆ ಉಸುರಿಕ್ಕದೆ ಕಣ್ಣುದೆಜಿಯದೆ
ನಿರ್ಮಳ ಜಿತೇಂದ್ರಾರ್ಥದಲಿ

ಬಿನ್ನಾಣದಿಂದಲಿ ನಡೆಸುವ ಗುಣಸಂ
ಪನ್ನ ಪುಟ್ಟಲು ನಿಶ್ಯಾಪಗಳು ॥೨೭॥

ಇಂತಪ್ಪ ಸಾಮರ್ಥ್ಯ ಉಳ್ಳಂಥ ಮಗ ನಮ
ಗೆಂತು ಪುಟ್ಟುವನೆಂದೆನಲು
ಕಂತುಹರನ ಬಳಿಗೆಯಿದಿ ಕೇಳೂದೆಂ
ದಿಂತು[ತಾ] ಹೋದನು ಭೃಂಗಿ ॥೨೮॥

ಶಾಪಕೆ ಕಂಗೆಟ್ಟು ಗಂಧರ್ವರು ನೊಂದು
ಮಾಪತಿಯೋಲಗಕೈದಿ
ರೂಪುಗುಂದಿ ಜಸವಳಿಯೆ ಕಂಡು ಶಿವ
ತಾಪತ್ರಯಾದುದಾರಿಂದ ॥೨೯॥

ಆರಿಂದ ಶಾಪ ಬಂದುದು ಪೇಳು ಎನಲವ
ಧಾರು ಭೃಂಗಿಯ ಕಂಡು ನಗಲು
ಸೇರಿತು ನರಜನ್ಮ ಭವಿ ಸತಿಪತಿಯಾಗಿ
ಓರಂತೆ ಜನಿಸಿ ನೀವೆನಲು ॥೩೦॥

ನಡುಗಿ ವಿಶಾಪವೆಂತೆನೆ ನಿತ್ಯತೃಪ್ತನು
ಒಡಲ ಧರ್ಮಕರ್ಮಗಳನು
ತೊಡ[ರ]ದ ಶಿವಯೋಗಿ ನಿಮ್ಮೊಳು ಜನಿಸಲು
ಬಿಡುವುದು ನರಜನ್ಮ ನಿಮಗೆ ॥೩೧॥

ಇಂತಪ್ಪ ಮಗ ನಮಗೆಂತು ಪುಟ್ಟುವನೆನ
ಲಂತದ ಶಿವನ ಕೇಳೆಂದ
ಕಂತುಹರನೆಮಗೀ ವಿಧಿಯಾಯಿತೆಂ
ದಂತಕಾಂತಕಗೆ ಬಿನ್ನೈಸೆ ॥೩೨॥

ಎನಲು ಶಿವನು ನುಡಿದನು ನಿಮ್ಮ ಜಠರದಿ
ಜನಿಸುವೆ ನಾನಿಳೆಯಜಿಯೆ
ಘನರಜತಾದ್ರಿಗೆ ನಿಮ್ಮನು ತಹೆನೆಂದು
ಚಿನುಮಯ ಕಳುಹಿದನವರ ॥೩೩॥

ನಡೆತಂದು ಧರೆಯೊಳು ಬಿಡ[ದವರಜ]ಸು
ತ್ತೊಡನಾ ಕಿರುಪ[ಳ್ಳಿಗಳೊ]ಳು
ಕುಡಿಯರ ಕುಲಶಿರೋಮಣಿಯಪ್ಪ ಗೌಡ[ರ]
ಮಡದಿಯರಿರುತೊಪ್ಪಿಹರು ॥೩೪॥

ಕುಲದೊಳಾಚಾರ ರೂಪ ಗುಣ ಪತಿವ್ರತ
[ಸಲೆ] ನಿಷ್ಠೆ ಸೌಭಾಗ್ಯ ಸಂಪತ್ತು
ನೆಲೆಗೊಂಡ ಪುಣ್ಯಪುಂಜೆಯರಪ್ಪ ಸತಿಯ[ರ]
ಚೆಲುವ ಗರ್ಭವ ಸಾರಿದರು ॥೩೫॥

ತರುಣ ಪುಟ್ಟಲು ಮೊರಡಿಗಳೆಲ್ಲ ಬೆಳೆಯಲು
ಮೊರಡಿಯ ಮುದ್ದಯ್ಯನೆಂದು
ತರಳೆಯ ಸುಗ್ಗವ್ವೆಯೆಂದು ಪೆಸರನಿ
ಟ್ಟರು ಪಿತಮಾತೆಯರೊಲಿದು ॥೩೬॥

ಬೆಳೆವುತಿರಲು ಈರ್ವರೊಳು ನವಯೌವನ
ನೆಲೆದೋಱಲು ವಿವಾಹವನು
ಒಲಿದು ಮಾಡಿದರು ಸುಗ್ಗಲೆ ಮುದ್ದಗೌಡ[೧][ರ][೧]
ಸಲೆ ಸರ್ವ ಸಂಭ್ರಮದಿಂದ ॥೩೭॥

ಇಂತು ದಂಪತಿಗಳು ಕಾಮಕಲೆಯನೋ
ರಂತೆ ಸುಖಿಸಿ ಬಾಳುತಿರೆ
ಅಂತಱುವತ್ತು ವತ್ಸರವಾಗಲವರಿಗೆ
ಮುಂ ತೋಱಿತು ವೃದ್ಧತ್ವ ॥೩೮॥

ಕನ್ನೆಯರುಗಳು ಹನ್ನೆರಡು ಸಾಸಿರವನು
ಮನ್ನಿಸಿ ಭಿಕ್ಷವ ಬೇಡಿ
ಇನ್ನಿರಬಾರದೆನುತ ರೇವಣಸಿದ್ಧ
ತನ್ನ ಲೀಲೆಯೊಳೈತರುತ ॥೩೯॥

---

೧ ರನ(ಮೂ)

ಮೆಟ್ಟಿದ ಹಾವುಗೆಗಳೆದು ಮೈಯಿಕ್ಕಲು
ಸೃಷ್ಟಿಗಧಿಕನಡಿಗಡಿಗೆ
ದೃಷ್ಟವಿದೇನಯ್ಯ ಕ್ಷೇತ್ರತೀರ್ಥವಿಲ್ಲ
ಕಷ್ಟರು ದುಷ್ಟರಿಲ್ಲಿಹರು ॥೪೦॥

ನದಿಯಿಲ್ಲದಿಹ ತೀರ್ಥ ಶಿಲೆಯ ಪೊರ್ದವ ವಿಹ
ಗದವೊಲೊಬ್ಬ ಸಿದ್ಧ ನಿಂದ
ಇದು ಲಿಂಗದ ಬೀಡು ಇದು ಮುಕ್ತಿಯ ಕ್ಷೇತ್ರ
ಇದು ಧರ್ಮದಾದಿ ಸೊನ್ನಲಿಗೆ ॥೪೧॥

ಇಲ್ಲಿಪ್ಪನೊಬ್ಬ ಸುಗುಣಿ ಮುದ್ದುಗೌಡನ
ವಲ್ಲಭೆ ಸುಗ್ಗಲೆ ಬಸುಜೆಂ
ನಿಲ್ಲದೆ ಜನಿಸುವನ್ಯೆ ಸಿದ್ಧರಾಮ ನಿ
ಮ್ಮೆಲ್ಲರ ಪಾವನ ಮಾಳ್ಪ ॥೪೨॥

ಊರ ಬಳಸಿ ಮುದ್ದುಗೌಡನ ಬಾಗಿಲು
ಸಾರುತ ಶಿವ ಶಿವಯೆನುತ
ನಾರಿ[ಗೆ] ನಮಿಸಿ ನಿನ್ನ ಜಠರದಿ ಶಿವಯೋಗಿ
ಓರಂತೆ ಜನಿಸುವನೆಂದ ॥೪೩॥

ಎನ್ನ ಹರೆಯ ಹೋಗಿ ನರೆ ತೆರೆ ಹೊಲೆಗೆಟ್ಟು
ಮುನ್ನಿನ ಧಾತು ಪಲ್ಲವಿಸಿ
ಇನ್ನು ನಾನೆತ್ತಲಾ ಮಗನೆತ್ತ ಲೋಕದೊ
ಳೆನ್ನ ತಗುವ ಮಾತು ಬೇಡ ॥೪೪॥

ಸತಿಪತಿಗಳ ಯೌವನ ವಿಕಾರದಿ ಹುಟ್ಟಿ
ಗತಿಗೆಡಿಸುವ ಮಗನಲ್ಲ
ಅತಿಶಯ ಯೋಗಿ ಪುಟ್ಟುವನೆನಲಾತನ
ಪಥವಾವುದೆಂದು ಕೇಳಿದಳು ॥೪೫॥

ಜಡ ಕೂಳನುಣ್ಣನು ನುಡಿಯನು ಮಗನೆಂದು
ದೃಡಗೆಡದಿರು ನೀ ಮಗಳೆ

ಮಡದಿಯ ಬಲಗೊಂಡು ಪೊಡವಟ್ಟು ಚಾಮಲೆ
ಯೊಡನುಸು[ರ್ದು] ಸಿದ್ಧ ಪೋದ ॥೪೬॥

ಅಱುವತ್ತುದುಂಬಲು ಮಱುಮಾತುದೋಱವು
ಅಱಿತೇೞ್ನೂಱು ವತ್ಸರವು
ಅಱಿಯದೇೞ್ನೂಱು [ವತ್ಸರ] ಬದುಕಿದ ಸಿದ್ಧ
ನರರೆ ನುಡಿದು ತಪ್ಪುವನೆ ॥೪೭॥

ಇತ್ತಲಾ ಉಮೆವರ ತನ್ನ ಸಮತೆ ಸತ್ಯ
ನಿತ್ಯತ್ವ ಭಕ್ತಿಜ್ಞಾನವನು
ಎತ್ತಿ ಸದ್ಗುಣದ ರೂಪನು ಮಾಡಿ ನೆಱೆಜೀವ
ವಿತ್ತ ಸುಗ್ಗಲೆಯ ಗರ್ಭದೊಳು ॥೪೮॥

ಮದನಗೆ ಚಿಂತೆ ದುಗುಡ ಹರಿಬ್ರಹ್ಮಗೆ
ಹೆದಱಿಲಾ ದುಷ್ಕರ್ಮಗಳು
ಸುದತಿ ಸುಗ್ಗಲೆಗೊದಗಿತು ನವಮಾಸವು
ಮದನಹರನ ನೇಮದಲಿ ॥೪೯॥

ಬೆಳೆಯಲು ಶಿವಯೋಗಿಯ ಗರ್ಭದೊಳಗಂ
ದಳಿದವು ಮುನ್ನಿನ ಗುಣವು
ತೊಳಗಿ ಬೆಳಗುವ ದೇಹದೊಳೀ ನಾಭಿಯ ಗುಂ
ಫಳಿದುದೇನೆಂಬೆನಂಗನೆಯ ॥೫೦॥

ಬಟ್ಟಮೊಲೆಗೆ ದೃಷ್ಟಿ ನಟ್ಟಪವೆಂದಜ
ನಿಟ್ಟ ಕರಿಯ ಬೊಟ್ಟುಗಳೊ
ಹುಟ್ಟುವ ಶಿಶು ಮುಟ್ಟನೆಂದು ಮೊಲೆ[ಗಳ]
ತೊಟ್ಟು ಕಪ್ಪಾದುವಂಗನೆಯ ॥೫೧॥

ಬಸುಱ ಭಾರೈಸೆ ನುಡಿಗಳು ಮೆಲ್ಲಗಾಗೆ
ನಸುಗಲೆಯಾಗೆ ಕಣ್ಣುಳಿದು
ಶಶಿವದನೆಗೆ ನವಮಾಸದ ಚಿಹ್ನೆಗ
ಳೆಸಗಿದವೈದು ತಿಂಗಳಿಗೆ ॥೫೨॥

ಹರನ ಬಲದ ಕಣ್ಣೆತ್ತಿ ಗೌರಿಯ ಮೊಲೆ
ತೊರೆಯೆ ಸುರರು ಗುಡ್ಡರಾಗೆ
ಭರವಾಯ್ತು ಸಿದ್ಧರಾಮಯ್ಯ ಜನಿಸಲು
ಪುರವಾಯ್ತು ಸೊನ್ನಲಿಗೆ ॥೫೩॥

ಇಂದು ಪುಟ್ಟುವ ಸಿದ್ಧೇಶನ ಕಾಂತಿಯ
ಮುಂದೆನ್ನ ತೇಜವೇಕೆಂದು
ಬಂದು ಪೊಕ್ಕನು ಪಡುಗಡಲ ದಿನೇಶ್ವರ
ನಂದು ಕವಿಯೆ ಕತ್ತಲೆಯ ॥೫೪॥

ನಕ್ಷತ್ರವಿಧಿ ಮೂಡಿದವು ಪ್ರಕಾಶದೊ
ಳಕ್ಷ[ಯ] ಪಾ[ಲ]ನುದಯಿಸಿದ
ಈ ಕ್ಷಿತಿಯೊಳು ಸುಗ್ಗವ್ವೆಯ ಪುಣ್ಯವ
ನೀಕ್ಷಿಸಿ ಪೇಳ್ವರಿಗರಿದು ॥೫೫॥

ಸಂ[1][ಕಟ][1]ವಿಲ್ಲ ಸೂಲಿಸುವಂಗ ಮುನ್ನಿಲ್ಲ
ಶಂಕರನುದಯ ಕಾಲದೊಳು
ಬಿಂಕವನೇನೆಂಬೆನು ಮಧ್ಯರಾತ್ರಿಯೊಳ್
ಶಂಕೆಯಿಲ್ಲದೆ ನಿದ್ರೆಗೆಯ್ಯೆ ॥೫೬॥

ದುಂದುಭಿನಾದ ಹೂಮಳೆ ಸುರಿಯಲು ಉಘೆ
ಯೆಂದಾರತಿ ಸೇಸೆವಿಡಿದು
ಬಂದಳಗಜೆ ಸುರಸತಿಯರ ಮೇಳದಿ
ನಿಂದಳು ಸಿದ್ಧನುದಯದಿ ॥೫೭॥

ಮಲವಿಲ್ಲ ಮಾಸಿಲ್ಲ ಹೊಲಸನುಜೆಯಿಲ್ಲ
ಫಳಿಲನೆ ಶಿಶು ಉದಯಿಸಿತು
ಒಲವಿಂದ ಸಿರಿ ಸರಸ್ವತಿಗೂಡಿ ಗಿರಿಜೆಯು
ಸಲಹುತಿರ್ದಳು ಆ ಶಿಶುವ ॥೫೮॥

ಮೂಜಗಲೋಕದ ಮುತ್ತೈದೆಯರ್ವೈದಿ ದೇವಿ
ಗೌರಿ ತೂಪಿಜೆ[2][ದೆತ್ತಿ][2]ಕೊಂಡು

---

೧ ಕಂದಿ(ಮೂ) ೨ ದುದೆ (ಮೂ)

ಗಾಜಾದ ಮಗನೆಂದು ಮೊಲೆಯನೂಡಿ ನೋಡಿ
ಬೀಜಿದಳಲ್ಲಿ ಬಾಯನವ ॥೫೯॥

[ತೊಟ್ಟಿಲೊಳಿಟ್ಟು ಜೋ]ಗುಳ ಪಾಡಿದಳಾಗ
ಮುಟ್ಟಿದ ಮೋಹದಿ ಗಿರಿಜೆ
ಅಷ್ಟಮದನಟ್ಟಿದನೆ ಜೋ ಮದನವ
ಸುಟ್ಟಾತನೆ ಜೋ ಎಂದು ॥೬೦॥

[ಇಟ್ಟಳು ನಾಮವ] ಸಿದ್ಧರಾಮನುಯೆಂದು
ಪಟ್ಟವ ಕಟ್ಟಿ ಹರಸುತ
ಕೊಟ್ಟಳು ಹರನ ಸಾಮರ್ಥ್ಯವನೆಲ್ಲವ
ಕಟ್ಟಾಣಿ ಗಿರಿಜೆ ಕರುಣದಿ ॥೬೧॥

ಹರಸಿ ತಿರುಗಿ ಕೈಲಾಸವ [ಪೊಗಲಿತ್ತ]
[ತರು]ಣಿ ಸುಗ್ಗಲೆ ಬೆಚ್ಚಿ ಬೆದಜಿ
ಸಿರಿ ಸೌಭಾಗ್ಯದ ಸುಖ ಸೊಗಸಿನ ನಿದ್ರೆ
ಸರಿಯೆ ಮೈಮುಜಿದೆದ್ದಳಾಗ ॥೬೨॥

ನಿದ್ರೆಗೆಯಿದನೆ ಇಲ್ಲವೊ ಎಂ[ದು ಕಂದನ]
[ಎದ್ದು] ನೋಡಲು ತೊಟ್ಟಿಲೊಳಗೆ
ಮುದ್ದುಮುಖದ ಸಿದ್ಧರಾಮನೆಂದು ಪೆಸ
ರಿದ್ದ ಶಾಸನ ಧೂಪದೀಪ ॥೬೩॥

ನೆರಮನೆ ಮುಮ್ಮನೆ ....ನೆನಲು
ಅಜಿದೈದು ತಿಂಗಳೊಳೆನುತ.........
............ಬೆಚ್ಚಂಬಿಲ
ವರಳೆಯ ತುದಿಗೋಲ ತಂದು ॥೬೪॥

ಮುಚ್ಚಿದ ಮುಖವ ತೆಗದು ನೋಡಿ ಶಿವ [ಶಿವ]
ಅಚ್ಚರಿ [ಅಚ್ಚರಿಯೆನು]ತ
ನಿಚ್ಚಯ ಮುಚ್ಚಿದ ಕಣ್ಣು ಮುಗಿದ ಹಸ್ತ
ವಚ್ಚುಗಬಡಬೇ[ಡಿಯಿ]ದಕೆ ॥೬೫॥

ಹರನರಸಿಯು ಬಂದು ಹರಸಿ ಮೊಲೆಯನೂಡಿ
[ಇರಿಸಿ ಕಂದನ] ತೊಟ್ಟಿಲೊಳಗೆ
ಕರುಣದಿ ಸಿದ್ಧರಾಮನುಯೆಂದು ಹೆಸರಿಟ್ಟು
ಹರಸಿದಳಿವನನಗಜೆ[ಯು] ॥೬೬॥

ಹರನ ಸಾಮರ್ಥ್ಯವ ತರಳಗೆ ನೆಱೆಕೊಟ್ಟು
[ತೆರಳಲು ತಾ] ಬೆಚ್ಚಿ ಬೆದಱೆ
ಸಿರಿಸೌಭಾಗ್ಯದ ಸುಖ ಸೊಗಸಿನ ನಿದ್ರೆ
ಸರಿಯೆ ಮೈಮುಱೆದೆ[ದ್ದನಾ]ಗ ॥೬೭॥

....

....
ತರುಣಿ ಸುಗ್ಗಲೆ ಸ್ವಪ್ನವ ಪೇಳುತಿರಲಿತ್ತ
ಭರದಿಂದೆ ರವಿಯುದಯಿಸಿದ ॥೬೮॥

ಜಾತಕರ್ಮವ ಮಾಡಿ ಪಿತಮಾತೆಯರು ಗಿರಿ
ಜಾತೆ ಕೊಟ್ಟಾ ನಾಮವನು
ನೀತಿಗಳೆದು ಧೂಳಿಮಾಕಾಳನೆಂದವ
ರೋತು ಕೊಟ್ಟರು ಪೆಸರುವನು ॥೬೯॥

ಅಳನುಸುರಿಡ ಮೊಲೆಯುಣ್ಣ ಕಣ್ದೆಱೆಯನೆಂ
ದಳಲಿ ಬೀಳ್ವರು ಮಾತೆಪಿತರು
ಬೆಳೆಯದ ಹೊಲ ಬೆಳೆದವು ಸಿರಿಸಂಪದ
ಗಳಿಗೆ ಗಳಿಗೆಗೊದಗಿದವು ॥೭೦॥

ಧೂಳಯ್ಯಯೆನೆ ಕೇಳದಿಹ ಸಿದ್ಧರಾಮಾ ಎಂ
ದಾಲೋಕಿಸೆ ನೋಡಿ ನಗುತ
ಏಳೆಂಟು ತಿಂಗಳೊಳೈದು ವರುಷ ರೂಪ
ತಾಳಿದನಾ ಸಿದ್ಧರಾಮ ॥೭೧॥

ಹುಟ್ಟಿದೈದು ವರುಷಕೆ ಕಱುವ ಕಾಯ[ಲು]
ಅಟ್ಟಿದನಾ ಮುದ್ದಗೌಡ

ಕಟ್ಟೋಗರವ ಕಟ್ಟಿ ಕೊಟ್ಟು ಸುತನ ತುಱಿ
ವಟ್ಟೆಯ ಕೂಡಿ ಕಳುಹಿದ ॥೭೨॥

ಒಡನೆ ಕಱುವ ಕಾವ ಮಕ್ಕಳ ಕರೆದು ಕೈ
ಲೆಡೆಗೊಟ್ಟು ತಿರುಗಿ ತಾ ನೋಡಿ
ಬಿಡದಿರಿ ಕಱುವ ತಮ್ಮನನೆಂದಪ್ಪಣೆಗೊಟ್ಟು
ನಡೆತಂದ ತನ್ನ ನಿಳಯಕೆ ॥೭೩॥

ಒಡನಾಡಿ ಮಕ್ಕಳ ಕರೆದು ಕರುವ ಕಾವ
ಕುಡೆವೊಲದೊಳು ಮಾಮರದ
ಅಡಿಯೊಳು ಪೊಸಮಂಟಪದೊಳು ಸಿದ್ಧಗೆ
ಮೃಡ ತನ್ನ ಕುಱುಹುದೋಱಿದನು ॥೭೪॥

ಕುಱುಹ ಕಾಣುತ ಹೂ ಪತ್ರೆ ಜಲವ ತಂದು
ಅಱಿದು ಲಿಂಗವ ಪೂಜೆ ಮಾಡಿ
ಮಱಿಯದೆ ಕಟ್ಟೋಗರ ನೈವೇದ್ಯವಿ
ಟ್ಟೆಱಗಿ ನೋಡಿದ ಲಿಂಗವನು ॥೭೫॥

ಜನನಿ ಕಟ್ಟೋಗರವನು ಲಿಂಗಕೆ ತೋಱಿ
ದನಿದೋಱಿ ಕರೆದು ಮಕ್ಕಳನು
ಸನುಮಾನದಿಂದೆಲ್ಲರಿಗೆ ತಣಿಯಲಿತ್ತು
ಮನದೊಳು ಹರನ ನೆನೆವುತ ॥೭೬॥

ತಿರಿಗಿ ಕಱುಗಳ ಹಿಂದ್ಯೆದಿಬಹುದ ಕಂತು
ಪರಿತಂದು ಬಿಗಿಯಪ್ಪಿ ಮಗನ
ಕರ ಬಳಲಿದೆ ಬಿಸಿಲೊಳು ನೊಂದೆ ಎಂದಾಗ
ಕರೆದುಕೊಂಡು ಹೋದ ನಿಳಯಕೆ ॥೭೭॥

ಗಿರಿಯಲಿ [೧]ಪುಟ್ಟಿದ ದಿನಪನಂದದೊಳಾ[೧]
ಧರೆಯೊಳೊಗೆದ ಲಿಂಗದಂತೆ
ಹರನುದಿಸಿದ ಸಿದ್ಧರಾಮಯ್ಯ ವೇಷದಿ
ನರರ ಪಾವನ ಮಾಡಲೆಂದು ॥೭೮॥

---

೧ ದಿನಪ ಪುಟ್ಟಿದ ಎಂದು ದಿನಪನಂದದೊಳಾ (ಮೂ)

ತಮ್ಮ ಕೆಯ್ಯೊತ್ತಿಲಿ ಕಱುವನಾಡಿಸುತಿರೆ
ಚಿನ್ಮಯ ಬಂದು ನಿಂದಾಗ
ನಿರ್ಮಳ [ಗೆಯ್] ತಮ್ಮ ಸುಮ್ಮನಿರಲು ಬೇಡ
ನಮ್ಮ ದೇವರಿಗೆ ತಾ ಬೆಳಸ ॥೭೯॥

ಚರರೂಪಿನ ಕುಱುಹನು ಧರಿಸಿಯೆಕೊಂಡು
ಹರ[ನು] ಸಮ್ಮುಖದಿ ನಿಂದಿರಲು
ಭರವಸದಿಂದ ಸಿದ್ಧೇಶ್ವರ ಶರಣೆನೆ
ಹರ ಭಸಿತನಿಟ್ಟನೊಲಿದು ॥೮೦॥

ಕಣ್ಣಱಿಯದಿರಲು ಕರುಳಱಿಯದೆ ಶಿವ
ಚೆಣ್ಣನ ಭಕುತಿಯ ನೋಡಿ
ಸಣ್ಣಸಿದ್ಧಂಗೆನ್ನ ಕುಱುಹು ತೋಱುವೆನೆಂದು
[1][ಹ][1]ಣ್ಣಿಸಿದನು ನಿಜರೂಪ ॥೮೧॥

ಜಡೆಮಕುಟವು ಶಶಿ ಸುರನದಿ ಕುಂಡಲ
ಕಿಡಿಗಣ್ಣು ದಶಭುಜದಿಂದ
ಹಿಡಿದ ಡಮರುಗ ತ್ರಿಶೂಲ ಪುಲಿಯ ಚರ್ಮ
ಮೃಡ ತನ್ನ ಕುಱುಹುದೋಱಿದನು ॥೮೨॥

ಕುಱುಹ ಕಂಡು ತನ್ನ ತೆಱನಱಿದೆಲ್ಲವ
ಮಱಿಬೇಡ ಹೇಳೆಂದ ಶಿವ[ಗೆ]
ಮಱಿಯಲ್ಲ ನಿನ್ನ ನೋಡಲಿಕೆ ಹಂಜಕ್ಕಿಯ
ಕಿಱಿದ ಮೆಲಲು ಬಂದೆವೆಂದ ॥೮೩॥

ಎಲ್ಲಪ್ಪಿರಿ ದೇವರೆಂದು ಕೇಳಲು ಶ್ರೀ
ಮಲ್ಲಿಕಾರ್ಜುನನ ಪರ್ವತದ
ಅಲ್ಲಿಪ್ಪೆವೆನಲು ಹಂಜಕ್ಕಿಯ ತಂದನು
ಪಲ್ಲಯಿಸುವ ಕೈಯೊಳಗೆ ॥೮೪॥

---

೧ ಬ (ಮೂ)

ಹೊಸಿಹೊಸಿದವಲನು ಪಶುಪತಿಗೀಯಲು
ಶಶಿಧರ ಸವಿದು ನುಡಿದನು
ಹಸಿದೆನಶನವುಂಟೇ ಎನಲಿಲ್ಲೆನೆ
ನಸುನಕ್ಕು ತಾ ಹೋಗೆಂದ ॥೮೫॥

ನಿನ್ನನೊಬ್ಬನ ಎತ್ತಿರಿಸಿ ಪೋಪೆನು ಇಲ್ಲಿ
ಉನ್ನತ ಕ್ರೂರಮೃಗಗಳು
ಬನ್ನಬಸಿಪವೆನಲೆನಗೆ ಚಿಂತಿಸಬೇಡ
ಚಿಣ್ಣ ನೀ ಬೇಗ ಬಾಯೆಂದ ॥೮೬॥

ಹರಿದು ಮನೆಯೊಳಿರ್ದಶನವ ಕೊಂಡಾಗ
ಬೆರೆಸಿ ಬಂದನು ಶಿವನೆಡೆಗೆ
ಹರ ಬಯಲಾಗಲು ಕರ ನೊಂದು ಮನದಲಿ
ಮಱುಗಿದ ಸಿದ್ಧರಾಮಯ್ಯ ॥೮೭॥

ಬೆಳೆಗೈಯೊಳು ಮೆಳೆಯೊಳು ಮರನಡಿಯೊಳು
ಎಳೆಲತೆಗಳ ತೋಪಿನೊಳು
ತಿಳಿಗೊಳ ಗಿರಿ ಗಹ್ವರದೊಳಱಿಸಿ ಮಿಗೆ
ಬಳಲಿದನಾ ಸಿದ್ಧೇಶ ॥೮೮॥

ಕೆನ್ನೆಗೆ ಕೈಗೊಟ್ಟು ತಲೆಗುತ್ತಿಯೊಱಲುವ
ನಿನ್ನ ಮೀಸಲ ಬೋನವನು
ಚೆನ್ನಮಲ್ಲಯ್ಯ ಆರೋಗಣೆ ಮಾಡು ಬಾ
ಎನ್ನ ನೀನಿಂತು ಕಾಡುವರೆ ॥೮೯॥

ಹಸಿದಶನವ ಬೇಡಲು ಹರಿದೈದಿ ನಾ
ನುಸುರಿದೆ ತಾಯೊಡನಿಂದು
ಹಸನಪ್ಪ ಬೋನವ ತಂದೆನಿದೇನಯ್ಯ
ಉಸುರೆನ್ನೊಳಗೆಲೆ ಹರನೆ ॥೯೦॥

ಎಂದು ಪ್ರಳಾಪಿಸುತಿಪ್ಪ ಸಮಯದಲಿ
ಬಂದುದು ಪರ್ವತಪರಿಷೆ

ಸಂದ[ವು ಶಿ][1] ವಭಕ್ತರ ವಾದ್ಯಧ್ವನಿ
ಯಿಂದುಘೆ ಉಘೆಯೆಂದೆನುತ ॥೯೧॥

ಹರಿದಱಸಿಯೆ ಕಾಣದೆ ಬಟ್ಟೆಯೊಳು ಕಾದ
ಹರಳೊಳು ಹುಡಿಯೊಳು ಹೊರಳಿ
ನರಳಿ ಬಿದ್ದಿಪ್ಪ ಶಿಶುವ ಕಂಡು ಮುಂದಕ್ಕೆ
ಉರವಣಿಸಿದರು ಕೆಲಬರು ॥೯೨॥

ಇಱುಹೆ ಕಡೆಯು ಆನೆ ಮೊದಲಾದ ಜೀವವ
ನೆಜೆ ನೋಯಿಸದ ಹಿರಿಯರು
ಬರುತ ಕಂಡರು ಬಟ್ಟೆಯೊಳ್ ಬಿದ್ದು ಹೊರಳುವ
ತರಳನ ದುಃಖವನಾಗ ॥೯೩॥

ಹಿಡಿದೆತ್ತಿ ಸಂತೈಸಿಯೆ ಕಳು[ಹ]ಲಿಕೆ
ನ್ನೊಡೆಯ ಪರ್ವತದ ಮಲ್ಲಯ್ಯನ
ಅಡಿಗಾಬೆನೆನೆ ತೋರ್ಪೆವೆನಲು ನಂಬುಗೆಗೊಂಡು
ನಡೆದ ಪರಿಷೆಯೊಡಗೂಡಿ ॥೯೪॥

ಕಡುಚಿಂತೆ ಮೊಳೆಯೆ ಸುಗ್ಗಲೆಗೆ ಕಱುವ ಕಾವ
ಒಡನಾಡಿಗಳ ಕೇಳಿದರೆ
ಅಡವಿಯೊಳೊಂದು ಹೊತ್ತಿಂದ ಕಾಣೆವು ಎಂದು
ನುಡಿದರು ತಱುವಕ್ಕಳೆಲ್ಲ ॥೯೫॥

ಕೆಡಿಸಿದಿರಯ್ಯ ಕೈಲೆಡೆಯ ಶಿಶುವನೆಂದು
ಕಡುದುಃಖದಿ ಮೊಜೆಯಿಡುತ
ನಡೆದೂರ ಹೊಱವಂಟಱಸಿದಳೆಲ್ಲೆಡೆ
ಮಡದಿ ತನ್ನಯ ವರಸುತನ ॥೯೬॥

ಕೆಟ್ಟೆನಿ[ನ್ನೇವೆ] ಸಿದ್ಧನ ಹುಲಿ ಕರಡಿಗ
ಳಟ್ಟಿ ಕೊಂದುವೊ ಅಡವಿಯಲಿ
ತೊಟ್ಟನೆ ತೊಳಲಿ ಕರೆದು ಬಯಾಱುತ
ಬಿಟ್ಟಪೆನೆನ್ನ ಪ್ರಾಣವನು ॥೯೭॥

---

೧ ನೊಸು (ಮೂ)

ಹಿಂದೆ ಮುಂದೆಡಬಲದೊಳು ಬಂದವರನು
ಸಂಧಿಸಿ ಕೇಳುವಳೊಡನೆ
ಕಂದನ ಕಂಡುದುಂಟೆ ಕಂದಗಳಿರ ನೀ
ವೆಂದು ಹಂಬಲಿಸಿ ಬಾಯಾಱೆ ॥೯೮॥

ಕತ್ತಲೆಯೊಳು ಹರಿಹರಿದು ಕಾಡೊಳು ನೋ
ಡುತ್ತ ಹಲವ ಹಂಬಲಿಸಿ
ಎತ್ತ ಹೋದೆಯೊ ತಂದೆ ಎಲ್ಲಿದ್ದೆ ಹೇಳೊ ಎ
[೧][ನುತ್ತೆನುತ್ತೆ] ಗೋಳಿಡುತ ॥೯೯॥

ಒಬ್ಬರು ಸಿದ್ಧರಾಮಾ ಎಂದು ಕರೆದು ಮ
ತ್ತೊಬ್ಬರು ಧೂಳಯ್ಯಾ ಎಂದು
ಒಬ್ಬರು ಮರುಳ ಮಗನೇ ಎಂದು ಕರೆವು
ತ್ತಬ್ಬರಿಸುತ ನಡೆತರುತ ॥೧೦೦॥

ಎಂತು ಮಱೆವೆ ಮೊಲೆಯೂಡಿ ಸಂತೈ[೨][ಸಿದು][೨]
ದೆಂತು ಮಱೆವೆ ನಿನ್ನನೆನಲು
ಸಂತಾನವಾಗಬೇಕೆಂದು ರೇವಣಸಿದ್ಧ
ಚಿಂತಿ[೩][ಸೆ][೩] ಕೊಟ್ಟ ನಿನ್ನುವನು ॥೧೦೧॥

ದುಃಖವ ಮಾಡುತಿರಲು ಶಿವಕರುಣದಿ
ಧಿಕ್ಕನೆ ಚರರೂಪ ಧರಿಸಿ
ಅಕ್ಕಱು ಮಿಗೆ ಬಂದು ನುಡಿದ ಸುಗ್ಗಲೆಯೊಳು
ಚಿಕ್ಕವ ಹೋದ ಪರ್ವತಕೆ* ॥೧೦೨॥

[ಕಱಿದು ಕಱೆ]ದು ನಿಲಿಸುತ್ತಣ್ಣ ಬೊಮ್ಮಯ್ಯ
ನಱಿಸಿ ತಾಹೆನು ನಾನೆನಲು
ಬಱೆ ಮಾತನಾಡಿ ನಮ್ಮನು ಬೀಳುಮಾಡದೆ
ಅಱಿಸಿ ತಾಱೆಂದಟ್ಟಿದರು ॥೧೦೩॥

೧ ನ್ನಪ್ಪ ಎನುತ (ಮೂ) ೨ ಸೆನ (ಮೂ) ೩ ಜ (ಮೂ)

* ೧೫ನೆಯ ಪತ್ರದ ಒಂದು ಭಾಗ ಮುರಿದಿರುವುದರಿಂದ ಇಲ್ಲಿಂದ ಮುಂದೆ ಕೆಲವು ಪದ್ಯಗಳ ಪಾಠ ಅಪೂರ್ಣವಾಗಿವೆ.

[ಅಲ್ಲಲ್ಲಿ ತಿರುಗುತ] ಕಱೆವುತ ಕೇಳುತ
ಬಲ್ಲಿದ ಬೊಮ್ಮಯ್ಯ ಬರಲು
ಮಲ್ಲಯ್ಯ ಮಲ್ಲಯ್ಯ ಎನುತಾ ಸಿದ್ಧೇಂದ್ರ
ನಿಲ್ಲದೇಱಿದನು ಪರ್ವತವ ॥೧೦೪॥

[ಹಗಲಿರುಳೆ]ನ್ನದೆ ಹರನ ಕಱೆವುತಲಿ
[ಪೊ]ಗುತಲಿಹರು ಪರುಷೆಯೊಳು
ಅಘಹರರೂಪ ನಿನಗೆ ತೋಱುವೆವೆಂದು
ಮಿಗೆ ಕೈವಿಡಿದು ಕೊಂಡೊಯ್ದು ॥೧೦೫॥

[ಎಲ್ಲಿಹನಾ ಮ]ಲ್ಲಯ್ಯನು ದಮ್ಮಯ್ಯ
ನಿಲ್ಲದೆ ತೋಱೆ ಮಲ್ಲಯ್ಯನ
ಇಲ್ಲೀಗ ತೋಱುವೆನೆನುತೆಲ್ಲರೊಗ್ಗಾಗಿ
ಮಲ್ಲಯ್ಯನ ತೋಱೆದರು ॥೧೦೬॥

..................ಡಿದ ಹಸ್ತವು
ಎಡದೆಱಪಿಲ್ಲದ ಸಂದಣಿಯು
ಮೃಡಭಕ್ತರೆಲ್ಲರು ತೊಲಗಿಸಿ ಬಾಲನ
ಪಿಡಿದೈದಿ[ಯೆ] ತೋಱೆದರು ॥೧೦೭॥

[ಅಂದು ನಾ ಕ]ಂಡ ರೂಪಲ್ಲವಿದು ಕಲ್ಲಿ
ದೆಂದು ಬಗೆದು ಮನದೊಳಗೆ
ಬಂದರೆ ತೋಱೆದಪ್ಪವುಯೆನೆ ನಾ ನಂಬಿ
ಬಂದು ಕೆಟ್ಟೆನು[ಯೆಂದು ನುಡಿದ] ॥೧೦೮॥

ಬಱೆದೇಕೆ [ಬಾಯ]ಬಿಡುವೆ ಸಾಕು ತಮ್ಮ ನೀ
ನಱೆತಿಹ ಕುಱುಹಾವುದೆನಲು
ಹಱೆ ರವಿ ತೊಱೆಯುಂಟು [ಶಿರದೊ]ಳು ಕಱೆ[ಯ]
ಕೊರಳುಂಟು ಪಂಚಮುಖಗಳು ॥೧೦೯॥

ಇಂತಪ್ಪ ಶಿವನ ತೋಱೆಸಲು ನಮ್ಮಳವಲ್ಲ
ಕಂತುಹರನು ಶಿವ[೧][ನೀತ][೧]

---

೧ ನಿತ್ತ (ಮೂ)

ಮುಂತೆ ನಿನ್ನಿಷ್ಟಾರ್ಥವ ಬೇಡಿಕೊಳ್ಳೆಂದು
ಸಂತೈಸಿಯೆ ಹೋದರವರು ॥೧೧೦॥

ಹೋದಡೇನಾಯಿತೆನ್ನಯ್ಯ ಮಲ್ಲಯ್ಯನ
ಭೇದಿಸಿ ನೋಡುವೆನೆಂದು
ಮೂದೇವರೊಡೆಯ ಮಲ್ಲಯ್ಯ ಮಲ್ಲಯ್ಯ ಎಂ
ದದರದಿಂದ ಕರೆಕರೆದು ॥೧೧೧॥

ಆವೆಡೆಯೊಳಗಿಪ್ಪೆ ಮಲ್ಲಯ್ಯ ನೀನಿಪ್ಪ
ತಾವ ತೋಱೆನಗೆ ಕರುಣದಿ
ಈ ವಿಧಿ ಬಿಡಸಬೇಡಯ್ಯ ಎನ್ನಯ್ಯನೆ
ಸಾವೆನಲ್ಲದೆ ಬೆನ್ನ ಬಿಡೆನು ॥೧೧೨॥

ಮುತ್ತಿರ್ದಳಿಗಿಳಿ ಕೋಗಿಲೆ ನುಡಿಗಳ್ಗೆ
ಸುತ್ತುತಿರ್ಪೆಯೊ ಮಲ್ಲಯ್ಯ
ಹುತ್ತವಡರ್ದು ಸಮಾಧಿನಿಷ್ಠರ ಚಿತ್ತದ
ಲ್ಲಿತ್ತ ಸಿಲ್ಕಿದೆಯೊ ಎನ್ನುವನೆ ॥೧೧೩॥

ಗಂಗೆಯ ಸೂಡಿ ತಿಂಗಳ ಮುಡಿದಿಹ ಮಹಾ
ಲಿಂಗ ಮಲ್ಲಯ್ಯ ಬಾ ಬಾರೈ
ಅಂಗನೆಯನು ವಾಮಭಾಗದಿ ಧರಿಸಿದ
ನಂಗರಿಪುವೆ ನೀ ಬಾರೈ ॥೧೧೪॥

ಹೀನ ಮಾನವರ ಚೆಂಚರ ಬೇಡರ ವೃಕ್ಷ
ವಾನರ ಮೃಗಪಕ್ಷಿಗಳ
ಏನೆಂದು ಅಱಿಯದ ಜೀವರೊಳಾಡುವೆ
ಹಾನಿ ನಿನ್ನದು ಕೇಳಯ್ಯ ॥೧೧೫॥

ಕರೆವುತಲಿರೆ ಗಿರಿಗಹ್ವರ ಮಾರ್ದನಿ
ಗರೆಯಲಲ್ಲಿಹನೆಂದು ಹೋಗಿ
ಅಱಿಸಿ ಕಾಣದೆ ನೊಂದು ಹರಿದು ಹರಿದು ಕ
ಮ್ಮರಿಗಳೊಳಗೆ ನೋಡುತಿರ್ದ ॥೧೧೬॥

ಚಿನುಮಯನೀ ಪರ್ವತದಲ್ಲಿಹನೆಂದು
ವಿನಯದಿಂದೆನ್ನ[ಯ] ಕೂಡೆ
ಮನವಾಱೆ ನುಡಿದು ತೋಱಿದೆ ನಿನ್ನ ನಿಜವನು
ಎನಗೆ ಕಾಣಿಸು ಪುರಹರನೆ ॥೧೧೭॥

ಸಾಱಿದೆ ಸಾಱಿದೆ ದುರ್ಜನ[ವೆಲ್ಲ]ದು
ಗಾಱಿಹೆ ಮುಂದೆ ಭಕ್ತರೊಳು
ತೋಱಿ ನಿಜವ ತೋರದಿರ್ದಡೆ ಪ್ರಾಣವ
ಬೀಱುವೆನೀ ಕಮ್ಮರಿಯೊಳು ॥೧೧೮॥

ಹೆಱೆಯ ಸೂಡಿದನ ಹಿಂದಕೆ ಕಂಡ ಮೂರ್ತಿಯ
ಎಱಗಿದಂತಾಗಿ ಚಿತ್ತದೊಳು
ಸಱೆಗಲ್ಲ ಮೇಲೆ ನಿಂದಿರ್ದು ಬಾಯದೆಱ
ದಿರೆ ಕಂಡು ಹರ ಬೆಱಗಾದ ॥೧೧೯॥

ನೋಡಿದ ಮೋಹದಿ ಕಾಡಲೇಕಕಟೆಂದು
ರೂಢಿಯಱಿಯೆ ಪಾಲಿಪೆನು
ಆಡಿದ ಭಾಷೆಯ ಬಿಡ ಸತ್ತಪನೆಂದು
ಜೋಡಿಸಿದನು ನಿಜರೂಪ ॥೧೨೦॥

ಕೊರಳೆತ್ತಿ ನೋಡಿ ಕರೆಯೆ ಮಾರ್ದನಿಗೊಡೆ
ಭರದಿ ನೆಗೆದು ಬಿದ್ದನೊಡನೆ
ಹರನಾಂತುಕೊಂಡಪ್ಪಿ ಮುಂಡಾಡಿ ನಿಜರೂಪ
ನಿರದೆ ತೋಱಿದನು [ಬೇಗದಲಿ] ॥೧೨೧॥

ಅಳಲಬೇಡೆಂದು ತಕ್ಕೈಸಿ ಮೊಲೆಯನೂಡಿ
ಬಳಲಿದ ಮಗನೆಂದೆನುತ
ಬಲಿದು ಕುಂಡಲ ಕಂಥೆ ಲಾಕುಳಗಳನಿತ್ತು
ಸಲಹಿ ನೀವೆಂದಳು ಗಿರಿಜೆ ॥೧೨೨॥

ತಾನೆ ಕೊಟ್ಟಳು ಭಕ್ತಿಜ್ಞಾನ ವೈರಾಗ್ಯದ
ಆನಂದವ ಕಂದನಿಗೆ

ದಾನಿ ಪರ್ವತ ಮಲ್ಲಿಕಾರ್ಜುನ ಭೈರವ
.... ॥೧೨೩॥

ಸುತ್ತಿ ಬಂದೀತಂಗೆ ಪರ್ವತದೊಳಗುಳ್ಳ
ಉತ್ತಮ ತೀರ್ಥಕ್ಷೇತ್ರವನು
ಮತ್ತೆ ಹಲವು ಸೋಜಿಗ ಹೊಸಪರಿಗಳ
ನರ್ತಿಯಿಂ ತೋ[1][ಱು ನೀ][1] ನೆಂದ ॥೧೨೪॥

ಎನಲು ಹಸಾದವೆನುತ ಸಿದ್ಧರಾಮನ
ಅನುನಯದಿಂದೆತ್ತಿಕೊಂಡು
ಮನ ಹೆಚ್ಚಿ ಹಿಗ್ಗಿ ತೋಱಿದ ಪರ್ವತ ಕುಳ
ಘನತರ ಮಹಿಮೆಯೆಲ್ಲವನು ॥೧೨೫॥

ಪರ್ವತ ನಾಲ್ವತ್ತೆಂಟುಗಾವುದವಲ್ಲಿ
ಸರ್ವತೀರ್ಥಗಳು ಲಿಂಗವನು
ಪಾರ್ವತಿಯರಸನ ಕರುಣದಿಂದಲಿ ಬಂದು
ಸರ್ವೇಶಗೆ ಬಂದು ನಮಿಸಿ ॥೧೨೬॥

ಏನೇನು ಚೋದ್ಯವ ಕಂಡೆ ಪರ್ವತದೊಳು
ನೀನೆನೆ ಸಿದ್ಧೇಂದ್ರ ನುಡಿದ
ನಾನಾಮೃತವುಂಡ ಬಾಯಿಗೆ ಜೇನಿಟ್ಟ
ಪಾನೀಯವು ಸೊಗಸುವುದೆ ॥೧೨೭॥

ಹರಿಬ್ರಹ್ಮರಿಗೆ ನಿಲುಕದಾನಂದನೆ
ಸುರಮುನಿಗಳಿಗೆ ವೇಧಿಸದ
ಗಿರಿಜಾಧಿಪ ನಿನ್ನ ಕಂಡ ಕಣ್ಣಿಗೆ ಎ
ನ್ನಱಿವದೊಂದು ಸೊಗಸುವುದೆ ॥೧೨೮॥

ಎಲೆ ಸಿದ್ಧರಾಮಯ್ಯ ನಿನ್ನ ಮನೋರಥ
ಫಲಿಸಿತು ಹೋಗು ಹೋಗೆನಲು

---

೧ ಱಿಯೆ (ಮೂ)

ಅಲೆವರವರು ನಿನ್ನನಱಿಸಿ ತಾಯಿತಂದೆ
ಕಲುಮನ ಬೇಡ ಹೋಗೆನಲು ॥೧೨೯॥

ಕಂತುಹರನೆ ನಿನ್ನನಗಲಿರಲಾರ್ಪೆನೆ
ಪಿಂತೆ ಜೀವನು ಉೞಿದಿರಲು
ಎಂತು ತನುವು ಮುಂದೆ ಹೋಹುದುಂಟೇ ನೀ
ನಿಂತು ಪೇೞ್ದುದು ಹಸನಾಯ್ತು ॥೧೩೦॥

ಕಂದ ನೀನಗಲಲಾಱದೆ ನುಡಿದಪೆ ನಾ
ಹಿಂದುಗೊಂಡು ಬಂದು ನೀನು
ನಿಂದಲ್ಲಿ ನಿಂದು ನಡೆದರೆ ನಡೆವೆ ನಂ
ಬೆಂದು ನಂಬುಗೆಯಿತ್ತ ಹರನು ॥೧೩೧॥

ಚಿನ್ಮಯನಿಪ್ಪುದೆ [ಶ್ರೀ] ಪರ್ವತಕುಳ
ನಿನ್ನ ಸಾಮರ್ಥ್ಯವೆಲ್ಲವನು
ಎನ್ನ ಸೊನ್ನಲಿಗೆಯೊಳಗೆ ನೆಲಸೆಂದಾಗ
ನನ್ನಿ[೧][ಯಿಂ ತಿರುಗೆನು][೧] ತಲಿ ॥೧೩೨॥

ನೀನು ಬಪ್ಪ ಕುಱುಹು ಎಂತಯ್ಯಯೆಂದಡೆ
ಭಾನುಕೋಟಿತೇಜ ನುಡಿದ
ಏನ ಹೇಳುವೆ ಬಿಱುಗಾಳಿ ಮೊಳಗುತಿಹ
...............ದಿದ್ದಿಹೆ ಸೂಚನೆಯು ॥೧೩೩॥

ಆದಿವೃಷಭ ಕುಱುಹಿಡಿದಾಚಾರ್ಯನು
ಭೇದಿಸೆ ಬರಡುಗವಿಲೆಯು
ಆ ದಿನದೊಳು ಮೂಡಿ ಆ ದಿನದೊಳು ಹುಟ್ಟಿ
ಆ ದಿನ ಬೆಳದು ಬಂದಪನು ॥೧೩೪॥

ಪಲ್ಲವಿಸಿ[ಪ್ಪ]ಷ್ಷಷ್ಟಿತೀರ್ಥಕ್ಷೇತ್ರ
ದಲ್ಲಿಹ ಲಿಂಗಮೂರ್ತಿಯನು

---

೧ ಹಿಡಿಗಂತಿ (ಮೂ)

ಸಲ್ಲೀಲೆಯೊಳ್ ನಿನ್ನ ಪುರದೊಳ್ ನಿಲಿಪೆ ಮತ್ತೇ
ನಿಲ್ಲದುದನು ಬಂದು ಬೇಡು ॥೧೩೫॥

ನಿಲ್ಲದೆ ಬಪ್ಪುದುಂಟೇ ದೇವ ಹುಸಿನುಡಿ
ಯಿಲ್ಲ ನಂಬುಗೆಗೊಡುಯೆಂದು
ಲಲ್ಲೆಗರೆದು ಸಾಷ್ಟಾಂಗ ಪ್ರಣೀತನಾಗಿ
ಮಲ್ಲಿಕಾರ್ಜುನನ ಬೀಳ್ಕೊಂಡ ॥೧೩೬॥

ಮಲ್ಲಯ್ಯ ಬಂದಪನಲ್ಲಿ ಮಂಟಪಗಳ
ನೆಲ್ಲವ ರಚಿಸಬೇಕೆಂದು
ಕಲ್ಲ ಕಡಿಸಲು ತಮ್ಮಣ್ಣ ಬೊಮ್ಮಣ್ಣ[ಗಳಿ]
ಗೆಲ್ಲವ ಹೇಳಿ ಕಳುಹಿದ ॥೧೩೭॥

ಹರುಷದಿಂದಾ ಸೊನ್ನಲಾಪುರಕೈತರೆ
ಗುರುಮೂರ್ತಿ ಸಿದ್ಧರಾಮೇಶ
ಹರಶರಣರು ಗುಡಿತೋರಣಗಟ್ಟಲು
ವರ ಗೃಹವನು ಬಂದು ಹೊಕ್ಕ ॥೧೩೮॥

ಗಿರಿಸುತೆವಲ್ಲಭನೇಱುವ ವಾಹನ
ವಿರದೀಯೂರ ತುಱುವಿನ
ಬರಡುಗವಿಲೆಯ ಬಸುಱೊಳು ಬಂದತ್ತೆಂದು
ನೆರೆದು ನೋಡಲು ಜನರೆಲ್ಲ ॥೧೩೯॥

ಅನ್ನಬರಾ ನಂದಿಯ ಕಾಣುತ ಸಿದ್ಧ
ನುನ್ನತದಿಂ ಗುಡಿಗಟ್ಟಿ
ಸನ್ನುತದಿಂದ ಪ್ರತಿಷ್ಠೆಗೈದಾಕ್ಷಣ
ಮನ್ನಿಸಷ್ಟವಿಧಾರ್ಚನೆಯಿಂದ ॥೧೪೦॥

ವಸುಧೆ ಕಂಪಿಸೆ ಭಕ್ತಾಳಿಯಲಿಯುತಿರೆ
ದೆಸೆದೆಸೆಗಳುಘೇಯೆನಲು
ಪಸರಿಸಿ ವೃಷಭಾರ್ಚನೆ ಮಾಡಿ ಹೂಮಳೆ
ಯೊಸರುತ ಬಂದ ಮಲ್ಲಯ್ಯನು ॥೧೪೧॥

ದೇವ ಸಮರ್ಥ ಪರ್ವತ ಮಲ್ಲಯ್ಯನ
ನೋವಿಯೊಲಿಸಿ ಸಿದ್ಧೇಶ
ಭೂವಳಯದೊಳಚಿವಂತೆ ಸೊನ್ನಲಿಗೆಗೆ
ದೇವರ ತಂದು [೧][ನಿಲಿ][೧]ಸಿದ ॥೧೪೩॥

ವಚನ ॥

ಕೊಲ್ಲಿಪಾಕದ ಸೋಮೇಶ್ವರನಲ್ಲಿ ಹುಟ್ಟಿದ ತಂದೆ ರೇವಣಸಿದ್ಧೇಶ್ವರನು ಜಗವ ಪಾವನವ ಮಾಡುವೆನೆಂದು ಸುಳಿದಾಡುತ ಬಂದು ಸೊನ್ನಲಪುರದ ಸೀಮೆಯಲಿ ನಿಂದು ತಾ ಧ್ಯಾನದಿಂ ಧ್ಯಾನಿಸಿ ನೋಡಿ ಕಂಡು ಮಹಾಪುರುಷನಿಲ್ಲಿ ಜನಿಸುವನೆಂಬ ಬೇರನ್ನಚಿದು ಅಲ್ಲಿ ನಿಂದು ಶರಣಾರ್ಥಿ ಶರಣಾರ್ಥಿ ಎನ್ನುತ್ತಿರಲು ರೋಮಕೋಟಿ ಋಷಿ ಎಂಬ ಮಹಾಪುರುಷನು ಮಹೇಶ್ವರಶಾಪದಿಂ ಬಂದು ಮಂಕುಮರುಳನೆಂಬ ಹೆಸರಿಂ [ರೇವಣ] ಸಿದ್ಧೇಶ್ವರನ ಕಕ್ಷಪಾಲಮಂ ಪಿಡಿದು ಶಿಷ್ಯಭಾವಮಂ ಧರಿಸಿದ ಹಿಂದೆ ಹನ್ನೆರಡು ವರುಷ ತೇಗು ಬಿಕ್ಕುಳು [ಸೀನು] ಉದುಗರ ಆಗುಳಿಕೆ ಆಲಸ್ಯ ಕೆಮ್ಮು ತೂಕಡಿಕೆ ನಸುಕಳವಳಿಕೆ ಅನ್ನ ಉದಕ ಸ್ತ್ರೀಸಂಗವಂ ಬಿಟ್ಟು ಪವನಾಹಾರಂಗಳಂ ಕೊಂಡು ಗುರುಸೇವೆಯಂ ಮನಮುಟ್ಟಿ ಮಾಡಿಕೊಂಡಿರಲು ಈ ಗುರುವಿಂದ ಸಿದ್ಧಿಯಂ ಪಡೆದು ಮುಂದೆ ಪರ[ಮ]ಪುರುಷಾರ್ಥವಂ ಮಾಡಿ ಮಹೇಶ್ವರಗೆ ಶರಣಾರ್ಥಿಯಂ ಮಾಡಿ ದೇವರು ನೀವು ಈ ಸೀಮೆಯಲ್ಲಿ ನಿಂದು ಶರಣಾರ್ಥಿಯ ಮಾಡುವಾಗ ಕೇತಾರವಲ್ಲ ವಾರಣಾಸಿಯಲ್ಲ ಗಯೆಯಲ್ಲ ಶ್ರೀಪರ್ವತವಲ್ಲ ಈರಾಱುಪಳ್ಳಿಯ ಮೊರಡಿಗೆ ಶರಣಾರ್ಥಿಯಂ ಮಾಡುತಿದ್ದಿರಿ ಇದೇನು ಕಾರಣವೆಂದು ಕೇಳಲು ಆ ರೇವಣಸಿದ್ಧೇಶ್ವರನು ನುಡಿವುತ್ತಿರ್ದನದೆಂತೆಂದಡೆ ಇಲ್ಲಿ ಒಬ್ಬ ಮಹಾಪುರುಷ ಹುಟ್ಟಿ ಪರ್ವತಕೈದಿ ಲಕ್ಷದ ಮೇಲೆ ತೊಂಬತ್ತಾಱುಸಾಸಿರ ಲಿಂಗಂಗಳಂ ತಂದು ಇಲ್ಲಿ ನಿಲಿಸಿಹ ನಿಂದಾಗ ಲೋಕ ಪಾವನವೆಂದೆಡೆ ಆ ಮಂಕುಮರುಳು ಬಿನ್ನಹಂ ಮಾಡಿದ ಇಲ್ಲಿಗೆ ಲಕ್ಷವು ತೊಂಬತ್ತಾಱು ಸಾಸಿರ ಲಿಂಗವ ತಂದಾತನೆನಗೆ ಗುರು ನೀವೆ ಪರಮಗುರು ನಿಮ್ಮ ಕಾರುಣ್ಯ[ದಿ] ದೇವರು ನಿನ್ನೆ ನೀವು ನೋಡಿದ [ಸರವೂರ]ದಲ್ಲಿ ದೇವರು ಮೂರ್ತ ಮಾಡಿದ [೨][ಕೋಡು][೨]ಗಲ್ಲಿನಲ್ಲಿ ಉಗ್ರತಪಸ್ಸಿರಲು ಆ ತಪಸ್ಸಿಂದ ಲಕ್ಷವು ತೊಂಬತ್ತಾಱು ಸಾಸಿರ ಲಿಂಗ ಅಷ್ಟಷಷ್ಟಿ ತೀರ್ಥಂಗಳಂ ಆ ಸಿದ್ಧರಾಮೇಶ್ವರ ಬಂದು ನನ್ನ ತಪಸ್ಸ ನೋಡಿ ಕೃತಾರ್ಥವ ಮಾಡಿಹನೆಂತೆಂದಡೆ–

ಪದ॥

ರೇವಣಸಿದ್ಧಯ್ಯ ಬರುತ ಸೊನ್ನಲಪುರ
ಭೂಮಿಗಚ್ಚರಿಯಾಗೆ ಕಂಡು
ದೇವ ಸಮರ್ಥ ಪುರುಷನಿಲ್ಲಿ ಜನಿಸುವ
ಭಾವವಚಿದು ಶರಣೆಂದ ॥೧೪೩॥

---

೧ ನೆಲ (ಮೂ) ೨ ಕಾರು(ಮೂ)

ಕೇತಾರ ವಾರಣಾಸಿಯು ಪರ್ವತವಲ್ಲ
ದೇತಕೆ ಶರಣೆಂದಿರೆನಲು
ಭೂತಳವಜೆಯಲಷ್ಟಷಷ್ಟಿತೀರ್ಥವು
ಸೋತು ಬಂದು ನೆಲಸುವವು ॥೧೪೪॥

ನೆಲಸುವುದಾರಿಂದಲೆಂದೊರ್ವ ಶಿಷ್ಯನು
ಸಲುಗೆಯಿಂದ ಕೇಳಿದರೆ
ಘಳಿಲನೆ ರೇವಣಸಿದ್ಧಯ್ಯ ಪೇಳಿದ
ನೊಲವಿಂದಲಾ ಕಥನವನು ॥೧೪೫॥

ನಿಂದರೆ ನೆಳಲಿಲ್ಲ ನಡೆದರೆ ಕುಜುಹಿಲ್ಲ
ತಂದೆತಾಯಿಲ್ಲದ ಮಹಿಮ
ಪಿಂದಿಲ್ಲಿ ಪುಟ್ಟಿ ಪರ್ವತದ ಮಲ್ಲಯ್ಯನ
ತಂದುಜೆ ನೆಲಸಿಹನೆಂದ ॥೧೪೬॥

ಆತನಿಂತೆನೆ ಕೇಳ್ದು ಸರ್ವಯೋಗಂಗಳ
ಭೀತಿಬಡಿಪ ಪಂಚೇಂದ್ರಿಯಕೆ
ಕಾತರಿಸದೆ ತಲೆಯೂಜೆ ತಪಸು ಮಾಡಿ
ಆತನ ತಹೆನೆನ್ನ ಬಳಿಗೆ ॥೧೪೭॥

ಆದರೆ ನೋಡೆಂದು ರೇವಣಸಿದ್ಧೇಶ
ನಾದರದಿಂ ತಪದನುವ
ಭೇದವ ಹೇಳಿ ತೋಜೆದ ಯೋಗಗಳನು
ಸಾಧಿಸು ಹೋಗೆಂದು ಕಳುಹಿ ॥೧೪೮॥

ಬೆದಱದಿರ್ರೈ ತಪಗಳಿಗೆ ವಕ್ರಗಳುಂಟು
ಸದುಗುರು ಸಿದ್ಧರಾಮನನು
ಹೃದಯದೊಳಚ್ಚೊತ್ತಿಕೊಂಡಿರಲಾಗಿ
ಬೆದರ್ವರು ಬ್ರಹ್ಮರಾಕ್ಷಸರು ॥೧೪೯॥

ಹರಿದುಹೋಹುದು ಪಾಪ ತಪದ ನಿಷ್ಠೆಗಳಿಂದ
ಕರುಣದಿಂದ ಹರ ಸಲಹುವನು

ಧರೆಯೊಳು ಕುಲಧರ್ಮ ಇಹಪರವಜೆಯದ
ನರರ ಪಾವನ ಮಾಡು ಹೋಗೈ ॥೧೫೦॥

ಎನಗುಳ್ಳ ಸಾಮರ್ಥ್ಯವ ನಿನಗೀವೆನು
ಅನುಮಾನಬೇಡ ಹೋಗೆನಲು
ಅನುಪಮ ದಾನಿ ಸರ್ವೇಶ್ವರ ನೀನೆಮ್ಮ
ಮನದೊಳಗಿರೆ ಹೋಹೆನೆಂದ ॥೧೫೧॥

ಹೋಗೆನಲಾಕ್ಷಣ ಯೋಗಿಯಡಿಗೆ ಬಿದ್ದ
ನೀಗಿಯೆ ಭವಬಂಧನವ
ಬೇಗ ಸರವೂರದೊಳು ಕೋಡುಗಲ್ಲಲಿ
ಲಾಗಿಂದ ತಪ ಮಾಡಿದನು ॥೧೫೨॥

ತಪದನುವನು ಕಂಡು ವಿಪರೀತವೆತ್ತನು
ಕೃಪೆಯಿಂದ ಬಂದು ನಾರಂದ
ಕಪಿಲಸಿದ್ಧ ಮಲ್ಲೇಶನೊಳುಸುರ್ದನು
ವಿಪರೀತ ತಪಸಿಯ ಪರಿಯ ॥೧೫೩॥

ಇಂತೆಂದು ನಾರಂದ ನುಡಿಯಲೊಡನೆ ಶಿವ
ಸಂತೋಷದಿಂದ ನಂದಿಯನು
ಸಂತೈಸುತ ಶೃಂಗರಿಸಿ ಗಿರಿಜೆಗೂಡಿ
ಕಂತುಹರನು ನಡೆತಂದ ॥೧೫೪॥

❖❖

ದ್ವಿತೀಯ ಸಂಧಿ

ಆಕಾಶಮಾರ್ಗದಿಂದಲಿ ಪರಮೇಶ್ವರ
ಲೋಕಕಚ್ಚರಿಯಾಗಿಪ್ಪ
ಮೂಕನೆಂಬ ಋಷಿ ತಪವಿದ್ದ ವನವ ಪಿ
ನಾಕಿ ನೋಡುತ ನಡೆತಂದ ॥೧॥

ಆ ವನದೊಳು ಪರಮೇಶ್ವರ ಬರೆ ಕಂಡು
ಭಾವವಱಿದು ಕುಱಿಯಂತೆ
ತೀವಿದ ಮೃಗ ಹುಲಿ ಕರಡಿ ಹೆಮ್ಮರೆಯಲ್ಲಿ
ದಾವುದೆಂದು ಕೇ[ಳೆ] ಗಿರಿಜೆ ॥೨॥

ಗಿರಿಜೆಯ ಮಾತ ಕೇಳುತಲೀಶ್ವರ ತಾ
ನೊರೆದನು ಕುಱಿಯಾದವರನು
ಪರಮಪುರುಷ ಭೃಂಗಿ ಎನ್ನೋಲಗಕೆ ಬರೆ
ಜಱಿದರಿವರು ನೋತಿ ನಗುತ ॥೩॥

ಅಱಿದಱಿಯದೆ ಕಿನ್ನರರು ಭೃಂಗಿಯ ಕಾಣ್ಬು
ತ್ತಿರದೆ ಕುಱಿಗಳಂತೆ ನುಡಿಯೆ
ಅಱಿದ ಅರಿ[ಯದ] ಕುಱಿವೇಷದಿ ಮರ್ತ್ಯದಿ
ಕುಱಿಯಾಗೆನುತ ಶಾಪವಿತ್ತ ೪

ಶಾಪವಿತ್ತದರಿಂದ ಮೂಕನಾಶ್ರಮದಲ್ಲಿ
ಈ ಪರಿ ಚರಿಸ್ಯಾಡುವರು
ಓಪಳೆ ಕೇಳೆಂದದರ ವೃತ್ತಾಂತವ
ಕಾಪಾಲಿ ಗಿರಿಜೆಗಱುಹಿದ ೫

ಕುಱಿಯಾದವರ ಕಂಡು ಕರೆದು ತೋ[ಱೆಂ]ದಡೆ
ನೆಱೆ ನೋಡೆನುತ ಪಾರ್ವತಿಯ
ಹಱೆ ಚೆಕ್ಕ ಟಱ್ಱೆಂದು ಕರೆಯಲು ಹರಿತರೆ
ಪರಿಹಾರವಾಹದಿನ್ನೆಂದು ॥೬॥

ದಕ್ಷನ ಯಜ್ಞದಿ ಮೋಕ್ಷವಪ್ಪು[ವು]ದಿದ
ಶಿಕ್ಷಿಸಿಹನು ವೀರೇಶ
ಸಾಕ್ಷಿಯಾಗಿ ಕುಱಿದಲೆಯಿತ್ತು ದಕ್ಷಗೆ
ಮೋಕ್ಷವಂತು ಬಳಿಕಿವಕೆ ॥೭॥

ಎಂದು ಗಿರಿಜೆಗೊರೆವುತ ಗೌರೀಶನು
ನಿಂದು ಕರೆದು ಮೈದಡವಿ
ನಂದಿಕೇಶ್ವರನ ಬೆನ್ನೇಱಿದ ಶಿವನಾಗ
ಹಿಂದುಗೊಂಡವನೊಯ್ವುತ್ತ* ॥೮॥

ನಿಂದಲ್ಲಿ ನಿಲ್ಲದಿರಲು ಆ ಮೃಗಗಳು
ಹಿಂದುಗೊಂಡೈದೆ ಬಳಲುತ್ತ
ಇಂದುಧರನ ಮಡದಿಯು ಹಣ್ಣ ಕೊಡೆ ಮೆ
ದ್ದಾನಂದದಿಂದ[ಲಿ ವೋ]ಡೆ ॥೯॥

ಇವರ ಕೂಡೆ ಹರಿದಾಡಲೇತಕೆಯೆಂದು
ವಿವರಿಸಿ ಗುಹೆಯೊಳು ಕೂಡಿ
ನವೆಯದೆ ಸುಖದಲಿ ಪೆಚ್ಚೆಂದು ವರವಿ[ತ್ತು]
ಭವ ಕೈಲಾಸಕ್ಕೆ ನಡೆದ ॥೧೦॥

ಇತ್ತಲು ಶಿವಭಕ್ತ ಕುಡಿಯೊಕ್ಕಲಮಗ
ನೊತ್ತಿ ಗೆಯ್ದನದಱೊತ್ತ
ಸುತ್ತ ಸವರಿ ಹುತ್ತ ದೊಡ್ಡಿತ್ತದಱ ಮೇಲೆ
ಮುತ್ತುಗ ಬೆಳೆದಿರುತಿರಲು ॥೧೧॥

---

* ೨೩ನೆಯ ಪತ್ರ ಮುರಿದಿರುವುದರಿಂದ ಇಲ್ಲಿಯ ಕೆಲವು ಪದ್ಯಗಳು ಲುಪ್ತವಾಗಿವೆ. ಕಡೆವೊಲವನು ನೋಡುವೆನೊಂದೊಕ್ಕಲಮಗ

ಕಡುವೇಗದಿಂದಲಿ ಬಂದು
ನಡುವೆ ಹುತ್ತ ದೊಡ್ಡಿತ್ತಾಗಿರುತಿರೆ ಕಂಡು
ಕಡು ಕೋಪಿಸಿ ತಮ್ಮಂದಿರನು ॥೧೨॥

...............ಗೊಂಡತ್ತಿ ಮುತ್ತುಗ
ದಲು ಒತ್ತುಗೆಯ್ದಡೇನಹುದು
ಎಲವೋ ನೀವು ಗೆಯ್ಯದೊಕ್ಕಲಾದಿರಿ ಎಂದು
ಹಲುಬಿ ಮನೆಗೆ ಬಂದಾಗ ॥೧೩॥

...................[ಕೊ]ಡಲಿಯ ಕೊಂಡು ವೃಕ್ಷವ
ನಪಸತ್ಯದಿ ತಜಿದೊಟ್ಟಿ
ರೂಪುದೋಱುವೆನೆಂದು ನೇಗಿಲ ಕಟ್ಟಿಯೆ
ಆ ಪಾಮರನುಳುತಿರ್ದ ॥೧೪॥

.........................ರಳಿಯೆ ತೆರೆಯೊಳಗಿಂ
ಒತ್ತರಿಸಿಱುಹೆಗಳಂತೆ
ಕರ್ತುವಿರಿಸಿದ ಮೃಗ ಹೊಱವಡಲವ
ನೊತ್ತಿ [1][ಮೆ][1]ದೆಯ ಹಾಕಿ ಸುಡಲು ॥೧೫॥

.......................ದಾಗಿಯೆಡ ಅಳಗನಾಗಿ
ಪುಟ್ಟ ಚಿನ್ನ ಕಾಳ ಕಣಬ
ಬೊಟ್ಟು ಬಳಗ ಎಡಪುಟ್ಟಿಯು ಬೆಳಕವ
ನೊಟ್ಟಯಿಸಿಯೆ ಪೊಱಮಡಲು ॥೧೬॥

.....................ಮೃಗ ಹರಿದೇಜಿ ಬೆಳೆವ ಬೆಳೆ
ಸಿರದೆಲ್ಲವ ಮೇವುತಿರಲು
ಹರಿದೊಕ್ಕಲಮಗನಿರದೆಲ್ಲವ ಕೂಡಿ
ಭರದಿಂದಲಿ ತಱುಬಿರಲು ॥೧೭॥

ಅಡ್ಡಗಾಲು ದೊಡ್ಡ ಹೊಟ್ಟೆ ಜೋಲುವ ಗಡ್ಡ
ಹೆಡ್ಡರಂದದಿ ಶಿವ ಬಂದು

---

೧ ಪ (ಮೂ)

ಖಡ್ಡಿಂದ ತಱುಬಿದೊಕ್ಕಲ ಮಗನನು ಕಂಡು
ಗುಡ್ಡ ಕೀಲಾರವಾರದೆಂದ ॥೧೮॥

ತಱುಬಿದೊಕ್ಕಲಮಗನನು ಕಂಡು ಹರನಾಗ
ಚರರೂಪ[ವ]ನು ತಾಳಿ ಬಂದು
ಹರಹರ ಎ[1][ನುತ][1] ವಂದಿಸಿ ಒಕ್ಕಲ ಮಗ
ನಿರದೆ ಬೇಡುವುದಾವುದೆನಲು ॥೧೯॥

ಕೀಲಾರದೊಳಗೊಂದು ಕಪಿಲೆಯ ಕೊಡುಯೆಂದು
ಕೇಳಲು ಎನ್ನ ಸೊಮ್ಮಲ್ಲ
ಬೀಳ ಬೆಳೆದ ಹೊಲವನು ಮೇವುದ ಕಂಡು
ಅಲಿ ಅಬ್ಬರಿಸಿ ಕೂಡಿದೆನು ॥೨೦॥

ಕೂಡಿದರೇನಾಯಿತು ಶಿವಶರಣರು
ಬೇಡಲು ಕೊಡು ಸುಖವಹುದು
ಆಡಬಹು[2][ದೆ][2] ನಾಡಮಾತೇನಿದೇನಯ್ಯ
ನೀಡಬಹುದೆ ಅನ್ಯಧನವ ॥೨೧॥

ಹಸಿದವರ್ಗನ್ನ[ವ] ಶಿಶುವಿಗೆ ಹಾಲ್ಬೆಣ್ಣೆ
ಪಶುವಿಗೆ ತೃಣವನಿತ್ತವನು
ವಸುಧೆ ಮೆಚ್ಚಲು ಕುಲಕೋಟಿಯನೆಲ್ಲವ
ನೆಸಗುವ ಶಿವಪುರಕೆಂದ ॥೨೨॥

ಅಂತು ಕಾರಣ ಪಶುಗಳ ತಱುಬಲು ನಿನ
ಗಂತರವಲ್ಲ ಕೇಳೆನಲು
ಚಿಂತೆ[ಯ] ತೃಣಜಲವ[ನು] ತೋಱಲು ನಿನ
ಗೆಂತೆನಬಹುದು ಸಂಪದವು ॥೨೩॥

ಮುನ್ನೊಬ್ಬ ಪಶುವ ಬಂಧನಕಿಕ್ಕಿಯಾಳಲು
ಪನ್ನಂಗಧರನಲ್ಲಿ ಬಂದು

---

೧ ನಲು (ಮೂ) ೨ ದು (ಮೂ)

ಉನ್ನತ ನರಕವನೀಡುಮಾಡಿ[ದ] ನೀ
ನನ್ನಿಯಿಲ್ಲದೆ ಸಲಹೆಂದ ॥೨೪॥

[೧][ತ][೧]ಳುಹಲು ಶಿವ ಮೆಚ್ಚ ಸಲಹು ತಂದೆ ನೀನು
ಬಳಲಿದೆ ಮಗನೆಂದೆನುತ
ಒಲಿದು ಪಾಲಿಪ ಕೀಲಾರ ಸಹಿತ ಶಿವ
ಸಲೆ ಸೌಭಾಗ್ಯವ ಕೊಡುವ ॥೨೫॥

ಶಿವ ಕೊಟ್ಟ ಸಿರಿಸಂಪದ ನಮಗುಂಟಯ್ಯ
ಇವನಾರೈವರೆನ್ನಳವೆ
ವಿವರಿಸಲೈವರು ದಾಯಾದ್ಯರುಂಟೆನ್ನ
ಅವರೊಳು ಕುಱೆಗಾವುತಹನೆ ॥೨೬॥

ಎಂದು ಕೊಟ್ಟ ಕೊಂಡ ಬೀಯಗರಾಡುವ
ನಿಂದ್ಯವ ನಾ ಕೇಳಲಾಱೆ
ಹಿಂದೀ ಪಾಶುವನಿರಿಸಿ[೨][ದ][೨] ಕರ್ತರು ಬರೆ
ನಿಂದು ತೋಱೆಯೆ ಹೋಹೆನೆಂದ ॥೨೭॥

ಹಿಂದೆಯು ನಿಷ್ಠೂರಬಂಧನವೀ ಪಶು
ವಿಂದಲಿ ಹು[೩][ಟ್ಟೂದೆಂ][೩]ತೆನಲು
ಮುಂದುಗಾಣದ ಕುಲವಱಿ[೪][ದೆ][೪]ವದೇಕೆಂದು
ನಿಂದು ಪೇಳಿದನದಱಿನುವ ॥೨೮॥

ಕೀಲಾರ ನನ್ನದು [ನಾನು] ನಿಮ್ಮವನೆಂದು
ಹೇಳಿದನೊಕ್ಕಲಮಗಗೆ
ಅಳಿ ಬಾಳೆಂದು ಶಿಷ್ಯಗೆ ನಂಬುಗೆಗೊಟ್ಟು
ಕೀಲಾರವಿತ್ತು ಹರಸಿದ ॥೨೯॥

ಒಂದು ನೂಱಾಗಿಯ ನೂಱು ಸಾವಿರವಾಗಿ
ಬಂಧುವ ಕೂಡಿ ಬದುಕುವ

---

೧ ಕ (ಮೂ) ೨ ದೆ (ಮೂ) ೩ ಟ್ಟುವೆಂ (ಮೂ) ೪ ದ (ಮೂ)

ಸಂಧಾನವ ಹೇಳುತ ಪಶುಗಳ ತುಪ್ಪು
ಟಂದಗೆಡದೆ ತೆಗೆದನುವ ॥೩೦॥

ಕಮ್ಮಾರನ ನೆನೆದರೆ ಕತ್ತರಿ ಬರೆ
ವರ್ಮವಜೆದು ಪಶುಗಳನು
ನಿರ್ಮಳದಿಂದ ಕತ್ತರಿಸಿ ಹೊಡಚಿ ಕಟ್ಟಿ
ತಮ್ಮ ನೀ ಹೊಸೆ ತೊಡೆಗದಿರಿಂ ॥೩೧॥

ತೊಡೆಗದಿರಿಂ ನೂತು ಹಿಡಿದಾಱು ಮೊಳನಿಕ್ಕಿ
ಒಡನೆ ತೋಱಿದ ಮಗ್ಗದನುವ
ಕಡುವೇಗದಿ ಪೇಳಿ ಕಲಿಸಿ ಕರಿದ ನೆಯ್ದು
ಮೃಡಸಿದ್ಧಮಲ್ಲಗೀಯೆನಲು ॥೩೨॥

ಎಕ್ಕೆಯಡಿಯ ಮಗ್ಗವನಿಕ್ಕಿ ಹೆಗ್ಗೊಂಡ
ಚಿಕ್ಕಕಂಬಳಿಗಳ ನೆಯ್ದು
ಮುಕ್ಕಣ್ಣ ಮೃಡನು ಕಪಿಲಸಿದ್ದಮಲ್ಲಗೆ
ತಕ್ಕವೆನುತ ಮನದೊಳಗೆ ॥೩೩॥

ಅಚ್ಚಕರಿಯ ಕಂಬಳಿಗಳ ನೆಯ್ದಾಗ
ಉಚ್ಚಹದಿಂ ಶಿವಗೆಂದು
ಮಚ್ಚಿ ಗದ್ದುಗೆಯಿಕ್ಕಿ ಅರ್ಚಿಸಿ ಪೂಜಿಸಿ
ನಿಶ್ಚಿಂತನೆ ಗತಿಯೆಂದ ॥೩೪॥

ಮೊಲ್ಲೆ ಮಲ್ಲಿಗೆ ಜಾಜಿ ಸುರಹೊನ್ನೆ ಸಂಪಗೆ
ಎಲ್ಲ ಪುಷ್ಪದಿ ಪೂಜೆ ಮಾಡಿ
ಮಲ್ಲಿಕಾರ್ಜುನ ನಮ್ಮ ಕುಲದೇವನೆನುತಲಿ
ನಿಲ್ಲದೆ ಸೊ[1][ಬ][1]ಗರಸಿದ ॥೩೫॥

ಕರಸಿದಾಕ್ಷಣ ಹರಿಗಡ್ಡ ಉರುಗುಬಾಯಿ
ನರೆದಲೆ ಪಿಡಿದೂಱುಗೋಲು

---

೧ ಬು (ಮೂ)

ಉರುಗಿದ ಟೊಂಕವು ಬಡಿಕೋಲು ಕವಣೆಯು
ಬೆರಗು ವೇಷವ ತಾಳಿ[೧][ಬ][೧]ಂದ ॥೩೬॥

ನಿಂದ ಹರನ ರೂಪ ಸಂದೇಹ ಮಾಡದೆ
ತಂದಿರಿಸಿದ ಹಾಲು ಮೊಸರ
ತಂದೆ ನೀನರೋಗಣೆಯ ಮಾಡೆನುತಲಿ
ವಂದಿಸಿ ಕರವ ಮುಗಿದನು ॥೩೭॥

ಆರೋಗಣೆ ಮಾಡಿ ಕೇಳಿದ ಗೌಡನ
ನಾರಿ ಸುತರು ನಿನಗಿಲ್ಲ
ಓರಂತೆ ಕೀಲಾರಕೆ ತಳವಾಜಿರಿಲ್ಲ
ಹೋರಾತ್ರಿಯು ಕಾಯಲರಿದು ॥೩೮॥

ಎಚ್ಚಜಿಕೆಗೆ ತಳವಾಜಿರ ಕೊಟ್ಟನು
ನಿಚ್ಚಲುಂಬರೆ [೨][ಕಪ್ಪರಿ][೨]ತ್ತು
ಅಚ್ಚುಗಬಡಬೇಡವೆನುತಲೆಲ್ಲವ ಕೊಟ್ಟು
ನಿಶ್ಚಿಂತನಡಗಿದನಲ್ಲಿ ॥೩೯॥

ಹಾಲು ಹಳ್ಳ ಬೆಣ್ಣೆ ಬೆಟ್ಟವಾಗಿರೆ ಕಂಡು
ಶೂಲಿ ನೆನೆದನೊಂದನುವ
ಕಾಳರಕ್ಕಸಿಯ ಮಗಳ ಕಳುಹಿದನವ
ಳೂಳಿಗದವಳಾಗಿರೆಂದು ॥೪೦॥

ಮುಗುಳುನಗೆಯ ಸೂಸುತಲಿ ಭುಜಂಗನೆ
ಸೊಗಸುನೋಟವ ನೋಡುತಿರಲು
ಬಗೆ ಬಳಲಿತು ಮನ್ಮಥಸರಳಾಕ್ಷಣ
ತಗಿಬಗಿ ಮಾಡಿತಾತನನು ॥೪೧॥

ನೊಣವಿಗೆ ಶ್ರೀಗಂಧವಿರಲು ಮುಟ್ಟದೆ ಹಳೆ
ಹುಳಿತ ವ್ರಣಕೆ ಹರಿವುದು

---

೧ ಯೆ (ಮೂ) ೨ ಕಂಯಿ (ಮೂ)

ಸೊಣಗಗಮೃತವ ನೀಡಲು ಉಣಲೊಲ್ಲದೆ
ಹೆಣಕೆ ಹರಿವ ತೆಱನಂತೆ ॥೪೨॥

ಹರಿ ಬ್ರಹ್ಮ ದೇವೇಂದ್ರರು ಮೊದಲಾಗಿಯೆ
ತರುಣಿಯ ಬಲೆಯೊಳು ಬಿದ್ದು
ಹೊರಳುತಹರೆ ದೇವರ್ಕಳು ಮೊದಲಾಗಿ
ನರರ ಹೊಸೆದು ಮುಕ್ಕದಿಹಳೆ ॥೪೩॥

ಸಾರಾಯದ ಶಿವಯೋಗವಿಚಾರದ
[೧][ಸಾರವ][೧]ನಱಿಯದ ನರರು
ಸೇರಿ ತರುಣಿಯರು......ರಿಟ್ಟದುದಿಟ್ಟು
ಆರುಂಟು ಮರುಳಾಗದವರು ॥೪೪॥

ಶೃಂಗರಿಸಿಯೆ ಹೆಂಗುಸು ಬಪ್ಪುದ ಕಂಡು
ಅಂಗೈಸಿಯೆ ಮನ ಹಱಿದು
ಹಿಂಗದೆ ರಕ್ಕಸಿಯನು ಕೂಡಿ ಗೌಡ ಕು
ಲಾಂಗನೆಯನು ನೆನೆದೆಯ್ದಿ ॥೪೫॥

ಬಂದನು ಕುಱಿಬೆಟ್ಟದೂರ ಮುಂದೆ ನಿಂದನು
ತಂದೆ ತಾಯೊಡಹುಟ್ಟಿದರನು
ಬಂಧುಬಳಗ ಗೌಡಪ್ರಜೆಗಳನೆಲ್ಲರ
ತಂದು ಕುಳ್ಳಿರಿಸಿ ಬಿನ್ನೈಸಿ ॥೪೬॥

ಚಂದಗೊಂಡನ ಬಸುಱೊಳು ಬಂದೈವರೊಳೊಬ್ಬ
ಮುಂದಱಿಯದೆ ಹೋದೆ ನಾನು
ಎಂದು ಬಿನ್ನಹ ಮಾಡಿಯೆ ಪ್ರಭುಗಳೊಳಾಗ
ವಂದಿಸಿ ಕರವ ಮುಗಿದನು ॥೪೭॥

ಸತ್ಯರು ಸಕಲಾಗಮಶಾಸ್ತ್ರಯುಕ್ತರು
ಭಕ್ತಿಯುಳ್ಳವರು ಕುಲಜರು

---

೧ ವ (ಮೂ)

ಕರ್ತು ನೀವು ಆ[೧][ಳ್ವ][೧] ಧರ್ಮ ಪರೋಕ್ಷಕೆ
ವ್ಯರ್ಥನಾದೆನು ನಿಮ್ಮ ಬಿಟ್ಟು ॥೪೮॥

ಕುಲದೊಳು ಹುಟ್ಟಿ ಅಕ್ಕುಲಜನಾದೆನು ಎಂಬ
ಹೊಲಬಱಿಯದ ಮಾತು ಬೇಡ
ಕುಲವು ಕಾಷ್ಟವು ಕೂಡಿದರ ಮನವದಱೊಳು
ಕುಲವನಱಿಸಲಿಲ್ಲವಯ್ಯ ॥೪೯॥

ಈಶ ಮುಟ್ಟಿದ ಕುಲ ಲೇಸಾಯಿತೆಂದೀಗ
ಭಾಷೆಯ ಕೊಟ್ಟುದ[ನ]ಱಿಯಾ
ದೋಷದ ನುಡಿಯ ಬಿಜ್ಜಳ ನುಡಿಯಲು ಕೇಳಿ
ಲೇಸೆನಿಸಿದನು ಹಳ್ಳಯ್ಯ ॥೫೦॥

ಇಂತಾ ಬಸವನಿದ್ದುದೆ ಕಂಡು ಕಲ್ಯಾಣ
[ಅಂ]ತು ಶಿವನ ಬೀಡೆನಿಸಿತು
ಕಂತುಹರನ ಭಕ್ತರು ನೀವು ನುಡಿದಪ
ರಿಂತು ಬಿನ್ನಹವ ಮಾಡಿದನು ॥೫೧॥

ಕುಱಿಬೆಟ್ಟಮೆಂಬ ಹೆಸರು ಬಂದುದೇತಕೆ
ಕುಱಿಗುಹೆಯೊಳಿರೆ ನಾನು
ತೆಱಿನನಱಿಯದೆ ಹೇಳಿದೆಲ್ಲರ ಝುಂಕಿಸಿ
ಜಱಿವುತ ಮರನ ತಱಿಯಲು ॥೫೨॥

ಹರನ ವರದ ಕುಱಿ ಧರೆ ಬಾಯಿದೆಗೆದಂತೆ
ಭರದಿಂದ ಹರಿದು ಕೆಯ್ಯೊಳಗೆ
ಇರದೆ ಬೆಳೆ ಸಲಿಸುತಿರೆ ನೋಡಿ ನಿಲ್ಲದೆ
ಹರಿದು ನೆರಹಿ ಕಾದಿರಲು ॥೫೩॥

ಹರನ ವೇಷದೊಳೊಬ್ಬ ಭರದೊಳು [೨][ಬಂ]ದಾ[ಗ][೨]
ತಱುಬಿದ ಕುಱಿಗಳ ಕಂಡು
ಕರೆದು ಕೀಲಾರ [೩][ಒಪ್ಪಿ][೩]ಸಿ ತೆಱದೋಱಿಸಿ
ಇರದೆ ಮಾಯವಾದನೆ ರುದ್ರ ॥೫೪॥

೧ ವ (ಮೂ) ೨ ಮಿಂದಾಸ (ಮೂ) ೩ ಉಬ್ಬಿ (ಮೂ)

ಅಂದು ಮೊದಲು ಇಂದು ಕಡೆ ಇವರೊಳು ಬಳಿ
ಬಂದನೆಂದು ಬಿನ್ನೈಸಿದನು
ಚಂದಗೊಂಡನ[೧][ರಕ್ಕ][೧]ಸಿಯ ಪ್ರಭುಗಳೆ ಭಿನ್ನ
ಕಂದ[೨][ಗೆ][೨] ವಧುವ ಕೊಡೆನಲು ॥೫೫॥

ಕುಱಿಬೆಟ್ಟದೂರ ಪ್ರಭುಗಳ ಮನಕೆ ಬಂದ
ಕಿಱುರಕ್ಕಸಿಯನು ತಂದು
[೩][ಅ][೩]ಱಿಯದೀತನ ಕುಲಸ್ತ್ರೀಗೂಡಿ ಬದುಕುವ
ತೆಱವಾವುದೆಂದ ಚಂದಗವುಡ ॥೫೬॥

ಜಾತಿಸೂತಕವೆಂಬ ನೀತಿಯ [ಬೊಮ್ಮ]ದ
[೪][ರೀ][೪]ತಿಯ ನೀನಾಡಬೇಡ
ಜಾ[೫][ತ][೫]ರಹಿತನು ಅಜಾತ ನೀನೊಲಿದವಗೆ
ಜಾತಿಯನೊಲಿದಱಿಸುವರೆ ॥೫೭॥

ಅಱಿಸಿದರೇ ಕುಱಿಯೂರಪ್ರಭುಗಳೊಳು
ತೆಱನಱಿದೆಂತು ಬದುಕುವ
[ಹೊಱ]ಸಬೇಡವು ಪಾಪ ಹಲವು ಸ್ತ್ರೀಯರ ಕೊಟ್ಟು
ಹಱುಮಾಡಿ ಗೌಡಪ್ರಜೆಗಳು ॥೫೮॥

ಭಾಗವ ಕೊಡಿಸಿ ಪ್ರಭುಗಳು ಸ್ತ್ರೀಯನು ಕೊ
ಟ್ಟಾಗ ಜಗದೊಳು ಬಾಳೆಂದು
ನಾಗಕುಂಡಲನ ಭಕ್ತಿಯ ಬಿಡದಿರೆ ಮುಂದೆ
ರಾಗದಿ ಹರ ನಿನಗೊಲಿವ ॥೫೯॥

ಎಂದು ಪ್ರಭುಗಳು ಬುದ್ಧಿಯ ಹೇಳಿ ಹೆಣ್ಣನು
ತಂದು ಪಿಡಿದು ಕರೆದವನ
ಚಂದಗೊಂಡನ ಬಸುಱಲಿ ಬಂದುದಕೆ ನೀ
ನಂದಗೆಡಿಸದಾಳು ಮಗನೆ ॥೬೦॥

---

೧ ರಾ (ಮೂ) ೨ ನ (ಮೂ) ೩ ಹ (ಮೂ) ೪ ನೀ (ಮೂ) ೫ ತಿ (ಮೂ)

ಹೆರರ ಹೆಣ್ಣನು ತಂದು ತಱಿಕಟಗಾಡಲು
ಇಱಿದು ಬಾಧಿಪರೆಮಭಟರು
ತಱಿದು ತಱಿದು ಚಿನಿಖಂಡವ ಕೊಯಿವರು
ಮಱಿಯ ಮಾತಲ್ಲ ಕೇಳೆನಲು ॥೬೧॥

ಅಂತು ಕಾರಣ ಧರ್ಮ ಒಲಿದು ರಕ್ಷಿಸು ನಿನ್ನ
ಸಂತಾನಕೆ ಸುಖವಹುದು
ಕಂತುಹರನು ನಿನ್ನ ರಕ್ಷಸುವನು ನೀ
ಮುಂತನಱಿದು ನಡೆ ಮಗನೆ ॥೬೨॥

ತನ್ನ ಸತಿಯ ಬಿಟ್ಟು ಪರಸತಿ ಬೆದಕಲು
ಮುನ್ನವೆ ನರಕವೆಂಬುದನು
ಚೆನ್ನಾಗಿ ತಿಳಿದೆನದನು.........
ನಿನ್ನ ಚಿತ್ತಕೆ ದೂರವೆಂದ ॥೬೩॥

ಎಂದು ಸಾಷ್ಟಾಂಗವೆಱಿಗಿ ಭಯಭಕ್ತಿಲಿ
ತಂದೆತಾಯೊಡಹುಟ್ಟಿದರನು
ಮುಂದಿಟ್ಟುಕೊಂಡಿರಿ ಎಂದು ಕೈಯೆಡೆಗೊಟ್ಟು
ಮಂದೆಯ ಬಳಿಗೆ ತಿರುಗಿದ ॥೬೪॥

ಬರವ ಕಂಡಳು ರಕ್ಕಸಿ ತನ್ನ ಗಂಡನು
ಉರುಸ್ತ್ರೀಯನು ಕರೆತಹುದ
ಎರವು ಮಾಡದೆ ಶರಣೆಂದು ಕಾಲನುದೊಳೆ
ದಿರದೆ ಕುಳ್ಳಿರಿಸುಣಲಿಕ್ಕಿ ॥೬೫॥

ಉಂಡು ಕೈದೊಳೆದು ವೀಳೆಯಗೊಂಡು ಮೂವರು
ಖಂಡೇಂದುಮೌಳಿಯ ನೆನೆದು
ಮಂಡಲಕೊಡೆಯನು ಗುರುಸಿದ್ಧರಾಮನ
ಕಂಡರೆ ಬದುಕುವೆವೆನುತ ॥೬೬॥

ಸೊನ್ನಲಾಪುರಕೆ ಸ್ತ್ರೀಯ[ರ] ಕಳುಹುವೆನೆಂದು
ಉನ್ನತ ಹೋತನ ತಂದು

ಬೆನ್ನ ಮೇಲೆ ಕಂಬಳಿಯ ಬಿಗಿದು ತನ್ನ
ರನ್ನದ ಕಂಪಿ......ಹೇಱಿ ॥೬೭॥

ಅಳಗ ಬಳಗನೆಂಬೆರಡು ಶುನಕಗಳ
ನೊಲವಿಂದ ತಾ ಪಿಡಿಕೊಂಡು
ಬಳಲದ ತೆಱದಲಿಬ್ಬರು ಸ್ತ್ರೀಯರ ಕೊಂ
ಡಲಸದೆ ಬರೆ ಸರ[೧][ವೂ][೧]ರಕೆ ॥೬೮॥

ಸರ[೧][ವೂ][೧]ರದೊತ್ತಿಲಿ ತಱುಬಿ ಕೀಲಾರವ
ಗುರು ಸಿದ್ಧರಾಮಗೆಂದೆನಲು
ಇರದೆ ಬೆಣ್ಣೆ ಪಾಲು ಮೊಸರನು ಕಣಿಕಕ್ಕಿ
ವೆರಸಿ ಗುರುವಿಗೆ ಕಳುಹಿದ ॥೬೯॥

ಈ ತೆಱದಲಿ ಪಲಕಾಲ ನಡಸುತ್ತಿರ
ಲಾತ[ನ] ಸಿದ್ಧರಾಮ ಕರೆದ
ಜಾ[೨][ತಿ][೨]ರಹಿತನು ಅಜಾತನೊಲಿದವಗೆ
ಜಾತಿನೀತಿಯನಱಸುವರೆ ॥೭೦॥

ಎಸೆವ ಜಂಬೂದ್ವೀಪ ಮಧ್ಯದಲಿಹುದೊಂದು
ಹೆಸರುಳ್ಳ ಘನ ಸರ[೩][ವು][೩]ರವು
ಪಸರಿಸಿ ಝೇಂಕರಿಸುವ ತುಂಬಿ ಗಿಣಿ ಕೋಗಿ
ಲೆಸೆದವು ಆ ಸರ[೩][ವು][೩]ರದಿ ॥೭೧॥

ಮರೆ ಹುಲ್ಲೆ ಹಂದಿ ಸಾರಗ ಪುಲಿ ಪೆರ್ಬುಲಿ
ಕರಡಿ ಮುಂಗುಲಿ ಮೂಗಿಲಿಯು
ಇರುತಿಹವಾ ಮಂಕನುಗ್ರ ತಪವ ನೋಡಿ
ಮಱೆದವು ಕುಲವೈರವನು ॥೭೨॥

ಈ ತಪಸಿಯ ಸುತ್ತ ಕಾದುಕೊಂಡಿರ ಹೇಳ್ದು
ಮಾಪತಿವರದ ಸಿದ್ಧಯನು
ಮಾತೆಪಿತರು ಇಲ್ಲದಾತನೈದಾನೆ [ಅ]
ತಾಪ[ಸ]ನತ್ತ ನೀವಿಹುದು ॥೭೩॥

---

೧ ವ (ಮೂ) ೨ ತ (ಮೂ) ೩ ವ (ಮೂ)

ಅಂದು ಸೊನ್ನಲಪುರದಿ ಸಿದ್ಧರಾಮಯ್ಯಗೆ
ತಂದು ತನ್ನರಸಿಯಳೊಡನೆ
ಬಂದ ಪುರಾತರಿಗೊಂದು ಭಿಕ್ಷವ ನೀಡ
ಲಂದವಹುದು ಕೇಳು ಮಗಳೆ ॥೭೪॥

ಎನಲು ಸಿದ್ಧರಾಮಗೆಜಿಗಿ ನಿಂದಿರೆ ಕಂಡು
ಮನದೊಳು ಭಯಬೇಡ ಹೋಗೌ
ಘನಮಹಿಮನು ಸಿದ್ಧಮಂಕನೊಳಿಹುದೆಂದು
ಅನುನಯದಿಂ ಬುದ್ಧಿಗಲಿಸಿ ॥೭೫॥

ಸಿದ್ಧಮಂಕನು ತಪವಿಹ ಸುತ್ತಲು ಬಾಧೆ
ಹೊದ್ದದಂದದಿ ತೋಹನಿಕ್ಕಿ
ಅದ್ಭುತವೆಸೆವುತ ಸುತ್ತ ಪಹರಿಯಿಂದ
ಕಾದುಕೊಂಡಿ[೧][ರು ಕೇ][೧]ಳು ಮಗಳೆ ॥೭೬॥

ಎಂದ ವಾಕ್ಯವನು ಕೇಳುತ ಸಿದ್ಧರಾಮನು
ಬಂದು ಪುರುಷನೊಳು ಪೇಳೆ
ಬಂದನು [೨][ಗು][೨]ರುವಿರೂಪನು ಅಂದು ತೋಹ[ವ]
ನಂದಿಕ್ಕಿದ ಚಂದಗೊಂಡ ॥೭೭॥

❖❖

---

೧ ರ ಹೇ (ಮೂ) ೨ ಕು (ಮೂ)

ತೃತೀಯ ಸಂಧಿ

ರಾಗ ವರಾಳಿ ॥

ಧಿಂಧಿಮಿಕ್ಕನೆಂಬ ಶಬ್ದ ತೋಹಿನತ್ತಲು ಆ
ನಂದದಿಂ ಮಂಕ ತಪವಿದ್ದ ಸುತ್ತಲಿ

ಅಂಗದಾಸೆಯನುಳಿದು ಲಿಂಗದಂಘ್ರಿಯ ಪಿಡಿದು
ಹಿಂಗದೆ ನಮಃ ಶಿವಾ ಸಂಗಸು
ಸಂಗದಿಂ ಮರುಳು ಮಂಕನನ್ನು ನೀನು ನೆನೆಯೆ
ನಿಶ್ಚಿಂತ ಕಪಿಲಸಿದ್ಧಮಲ್ಲೇಶ ಪಾಲಿಸ ॥೧॥

[೧][ದ್ಯೂತಾದಿ][೧] ವೆಸನವೆಂಬೇಳುಸುತ್ತಿನಗಳಿ
ವೊತ್ತಿನಲಷ್ಟ ಮದವೆಂಬ ಕೋಟೆ ಬಳಸಿಲಿ
ಮತ್ತೆ ಮನ ಬುದ್ಧಿ ಚಿತ್ತ ಕರಗೂಡಿಸಲೆಂ
ಬತ್ತುನಾಲ್ಕು ಲಕ್ಷಗಳು ಇಪ್ಪವಯ್ಯ ॥೨॥

[೨][ಮಿಥ್ಯ][೨]ವೆಂಬ ಕಳ್ಳರೂರ ಹೊಕ್ಕರೆಂದಲ್ಲಿ
ಚಿತ್ತಸಂಚಲದಿಡ್ಡಿ ಹೊಜೆಕಾಜರು
ಎತ್ತಿ ಚಾಂಡಾಳವೆಂಬ ಉಕ್ಕಡಗಾಳೆಯಿಂದ
ಸತ್ಯದಲ್ಲಿ ಬಿರಿದ ಕೊಂಡಾಡಿ ತೀರಿರೊ ॥೩॥

ಕುಟಿಲಕ್ಷುದ್ರಗಳೆಂಬ ಅಟ್ಟಳೆಯು ಎಡೆಎಡೆಗೆ
ಸಟೆದಿಟಕೆ ಠವಣೆಂಬ ಕೊತ್ತಳಂಗಳು

---

೧ ಬಸವೇಶನ ವಂಶನ (ಮೂ) ೨ ಸತ್ಯ (ಮೂ)

ದಿಟದ ನುಡಿಯ ಶಿರವ ಮುಱಿಯಲಿಟ್ಟೆನೆಂಬ
ಅಟಮಟದ ಡೆಂಕಣಿ ಎಂಬ ಸೂಸುಗಲ್ಲೊಳು ॥೪॥

ಇಂತಪ್ಪ ಪಟ್ಟಣದೊಳೆಂತಿಹೆನಯ್ಯ ತಂದೆ
ಚಿಂತೆಯ ಬಿಡಿಸಿ ನಿಮ್ಮ ಪದಪದ್ಮವ
ನಂತರ್ಚಿಸುತ ಮರುಳುಮಂಕನನು ನೀನು ನೆನೆಯೆ ನಿ
ಶ್ಚಿಂತ ಕಪಿಲಸಿದ್ಧ ಪಾಲಿಪ ॥೫॥

ಪದ ॥

ಹೊಕ್ಕರೆ ಹೊಱವೊಡಲರಿದು ಸಂಸಾರವು
ಸಿಕ್ಕಿತು ಮೂವರ ಕೈಯ
ಸಿಕ್ಕದೆ ಅಲ್ಲಮ ಅಜಗಣ್ಣ ಮಹಾದೇವಿ
ಹೊಕ್ಕರು ಕಾಯಕದಳಿಯ* ॥೭॥

ಭುವನದೊಳಗೆ ಹದಿನೆಂಟು ಕುಲಗಳೆಂದು
ವಿವರವಱಿಯದೆ ನುಡಿವರು
ಸುವಿಚಾರದಿ ಪೇಳುವೆ ಭಕ್ತಕುಲವೊಂದು
ಭವಿಗಳ ಕುಲವೆಲ್ಲವೊಂದು ॥೭॥

ಶ್ವಪಚನಾದರೆಯಾಗಲಿ ಮುನಿಯಾಗಲಿ
ಚಪಳ ಚತುರ್ವೇದಿಯಾಗಲಿ
ಕಪಿಲಸಿದ್ಧಮಲ್ಲನನರ್ಚಿಸದವ
ಶ್ವಪಚನಿಂದತಿ ಕಷ್ಟವಹನು ॥೮॥

ಹರಭಕ್ತನು ಶಂಕರದಾಸಿಮಯ್ಯನು
ಕರೆದು ಮಾರಿಯ ಮಸಣಿಗಳ
ಶರಣರಾರೋಗಣೆಗಕ್ಕಿ ಬೇಕೆಂದಾಗ
ಭರದಿಂದ ಮಿದಿಸಿ ಕೊಟ್ಟಣವ ॥೯॥

ಚೆನ್ನಾಗಿಯೆ ಕೇಳಿ ಶರಣನೊರ್ವನು ತನ್ನ
ಕಣ್ಣೆರಡನು ತೆಗೆದೊಡನೆ

* ಹಸ್ತಪ್ರತಿಯಲ್ಲಿ ಈ ಪದ್ಯದ ಸಂಖ್ಯೆ ೭೮ ಎಂದಿದ್ದು ಹೀಗೆಯೇ ಮುಂದುವರೆದಿದೆ

ಪನ್ನಗಧರಗರ್ಪಿಸಲು ಕಣ್ಣಪ್ಪಗೆ
ಮನ್ನಿಸಿದನು ಹರನೊಲಿದು ॥೧೦॥

ಏಳು ಬೇಲಿಯ ಕಳೆದಿಹ ಹಳ್ಳಯ್ಯನ
ಆಲಯ ಪಾದತೀರ್ಥವನು
ಆಳಿ ಮುಳುಗಿ ಕುಷ್ಠ ವಿಪ್ರರು ಬದುಕಿತು
ಏಳುನೂಱೆಪ್ಪತ್ತು ಮಂದಿ ॥೧೧॥

ಕೆಂಭಾವಿಯ ಭೋಗಣ್ಣನೆಂಬ ಶರಣನ
ಇಂಬಱೆಯದೆ ಹೊಱವಡಿಸೆ
ಬೆಂಬಳಿಯಲಿ ಲಿಂಗಗಳುರುಳಿದವೆನೆ
ಶಂಭುಭಕ್ತರ ಮಹಿಮೆಯಲಿ ॥೧೨॥

ಇತ್ತ ಹರನ ನೆನೆದು ಉಗ್ರ ತಪವ ಮಾಳ್ಪ
ಭಕ್ತನ ನೋಡುವೆನೆಂದು
ಅರ್ತಿಯಿಂದಲಿ ನಾರಂದನೈತರುತಿರ್ದ
ಕತ್ತಲಿಸುವ ವನದೊಳಗೆ ॥೧೩॥

ಹರಚರಣಾಂಬುಜ ಮೋದಕೆ ಮಧುಕರ
ವಿರದೈದುವ ತೆಱನಂತೆ
ಸರಿಗಾಣೆನು ಸರ[ವೂ]ರದೊಳು ಕುಱಿಗಾವ
ಪರಮಭಕ್ತನು ಹರಿತಂದ ॥೧೪॥

ಬಂದು ಸಾಷ್ಟಾಂಗವೆಱಗಿ ಭಯಭಕ್ತಿಯಲಿ
ನಿಂದು ಕರಗಳನು ಮುಗಿದು
ಮುಂದಿರ್ವ ಮಂಕತಂದೆಯ ಮಠವೆಂ[1][ದುಱೆ][1]
ಸಂದೇಹ ಮಾಡದೆ ಬಂದ ॥೧೫॥

ಸುತ್ತ ತಳಿಯ ಹೊಯಿದೆತ್ತಿದುಪ್ಪರಗುಡಿ
ಮೊತ್ತವಿದಾರಮಠಗಳೈ

---

೧ ಹರೆ (ಮೂ)

ಕರ್ತುವೆ ನಿಮ್ಮ ಭಕ್ತನು ಮಂಕತಂದೆಯ
ನಿತ್ಯವು ಕೃತ್ ತಪದಿರವು ॥೧೬॥

ತಪದನುವನು ಕಂಡು ವಿಪರೀತವೆಂದನು
ಕೃಪೆಯಿಂದ ನೋಡಿ ನಾರಂದ
ಉಪಮಿಸಬಾರದು ತಲೆಕೆಳಗಾಗಿಹ
ತಪಸಿದು ಕರ ಚೋದ್ಯವೆಂದ ॥೧೭॥

ಎನುತ ಭಕ್ತನ ಮನೆಗೈತರುತಿರೆ ಕಂಡು
ವನಿತೆ ನಮಿಸಿ ಭಕ್ತಿಯಲಿ
ಘನಮಹಿಮನ ಕಾಣುತ ಶರಣೆಂದರೆ
ವಿನಯದಿಂದೆತ್ತಿ ಮಸ್ತಕವ ॥೧೮॥

ಹರಸಿ ವಿಭೂತಿಯನಿಟ್ಟು ಸ್ತ್ರೀಪುರಷರ
ಹರುಷವ ನೋಡಿ ಹಾರೈಸಿ
ಪರಿಸೆಯಾಗಿದೆ ನಿಮ್ಮ ಮಠದೊಳು ಜಂಗಮ
ದಿರವಿದು ಕರಲೇಸು ಮಗನೆ ॥೧೯॥

ನಿನಗೇನು ಬೆವಸಾಯವೆನಲು ತೋಹಿನ ಭಕ್ತ
ನಾನಿಹೆ ನಿಮ್ಮ ಪಾದವನು
ನೆನವುತ ಕೀಲಾರವ ಕಾದುಕೊಂಡಿಹೆ
ಘನಮಹಿಮನೆ ಚಿತ್ತೈಸು ॥೨೦॥

ಎಂದಿನಂದದಿ ನೀನು ಸಂದೇಹ ಮಾಡದೆ
ಬಂದ ಜಂಗಮಕನ್ನುದಕವ
ತಂದು ನೀಡಲು ಹರ ನಿನಗೆ ಪಾಲಿಸುವನು
ಚಂದದ ಮುಕ್ತಿಪಥವನು ॥೨೧॥

ದೇವರು ನೀವು ಕೊಟ್ಟಿಹ ತವನಿಧಿ ನಿಮ್ಮ
ದೇವರಿಗೆಯು ಸಲಲೆಂದು
ಭಾವಿಸಿ ಮಾಳ್ಪೆನೆನಲು ಹೆಗ್ಗಗೌಡನ
ನೋವಿ ಹರಸಿ ಹೋಗುತಿರ್ದ ॥೨೨॥

ಹರಸಿ ಹೋಗುತ ತಪದಿರವಿದು ಕರ ಲೇಸು
ಉರಗಕುಂಡಲಗಜುಹಲಿಕೆ
ಪರದರುಶನ ಕೋಳಾಹಳ ನಾರಂದ
ಹರಿದನು ಶಿವನೋಲಗಕೆ ||೨೩||

ಹರಿಬ್ರಹ್ಮದೇವೇಂದ್ರ ಸುರಮುನಿಗಳ ಮೊತ್ತ
ಪಿರಿದೆಕ್ಷರಾಕ್ಷಸ ಮೊತ್ತ
ಗರುಡಗಂಧರ್ವರು ಸಿದ್ಧವಿದ್ಯಾದರರು
ನೆರೆದರು ಹರನೋಲಗದೊಳು ||೨೪||

ನಂದೀಶ ಮುದ್ದಳೆಯನು ಮುಟ್ಟೆ ತುಂಬುರ
ನಿಂದು ಪಾಡಲು ಗೀತವನು
ಕುಂದದಾನಂದದಿ ಭೃಂಗಿ ನೃತ್ಯನಾಡೆ
ಕಂದರ್ಪಹರ ನೋಡಿ ನಗುತ ||೨೫||

ಎತ್ತ ಹೋಗಿದ್ದೆ ಇತ್ತ ಬಾರೊ ನಾರದಯೆನೆ
ಚಿತ್ತ ನಲಿದು ನಮಿಸುತಲಿ
ಕರ್ತುವೆ ಮರ್ತ್ಯದಿ ಸರ[1][ವೂ][1]ರದೊಳಗೊರ್ವ
ಉತ್ತಮ ತಪಸಿಯ ಕಂಡೆ ||೨೬||

ಕಂಡು ನಿಮಗೆ ಬಿನ್ನಹ ಮಾಡದೆ ಭೂ
ಮಂಡಲದೊಳು ಸುಖವುಂಟೆ
ದಂಡಿಸಿದುಗ್ರ ತಪವ ಮಂಕ ಮಾ[2][ಳ್ಪನು][2]
ಖಂಡೇಂದುಧರ ಕೃಪೆಮಾಡು ||೨೭||

ಆ ಸಮಯದಿ ಸಿದ್ಧರಾಮಯ್ಯ ಬಂದ ಸಂ
ತೋಷವನೇನ ಹೇಳುವೆನು
ಈಶ ತನಗೆ ಗತಿಮತಿಯೆಂದು ಮಂಕಯ್ಯ
ವಾಸಿಯಿಂದಲಿ ತಪಸಹನೆ ||೨೮||

---

೧ ವ (ಮು) ೨ ಳ್ಪುದು (ಮೂ)

ಹರ ನೀನೇ ಗತಿ ಹರ ನೀನೇ ಮತಿ
ಹರ ನೀನೆ ತಾಯ್ತಂದೆಯೆಂದು
ಪಿರಿದುಗ್ರ ತಪವ ಮಾಡುವನಿಗೆ ವರವನು
ಕರುಣಿಸೆಂದನು ಸಿದ್ಧರಾಮ ॥೨೯॥

ಕಪಿಲಸಿದ್ಧ ಮಲ್ಲೇಶನ ಕುಜಿತವ
ವಿಪರೀತ ತಪ ಮಾಡುತಹನೆ
ಕೃಪೆಯಿಂದಲವ[ನಿ]ಗಭೀಷ್ಟವ ಸಲಿಸೆಂದು
ಅಪ್ರತಿ ಸಿದ್ಧರಾಮ ತಿರುಗೆ ॥೩೦॥

ಎಂದು ಹೇಳಲು ಪರಮಾನಂದ ಮಹಿಮನು
ನಂದಿಕೇಶನನೇಜಿ ನಡೆಯೆ
ಸಂದ ಪ್ರಮಥಗಣ ಗಿರಿಜೆ ಸಹಿತ ಬಂದು
ನಿಂದು ನೋಡಿದ ತಪದನುವ ॥೩೧॥

ಮುನ್ನಿನ ಋಷಿಜನದುಗ್ರ ತಪಗಳಿಂದ
ಉನ್ನತ ಈತನ ತಪವು
ಚಿನ್ಮಯ ನೀನಿನ್ನು ಕೃಪೆಮಾಡೆಂದಾಗ
ಬಿನ್ನೈಸಲು ದೇವತೆಗಳು ॥೩೨॥

ಪಿರಿದು ಕೋಟಿ ತಪ ಮಾಡಿದನೀತನ
ಕರುಣಾಕರ ಪಾಲಿಸೆಂದು
ಗಿರಿಜೆ ಬಿನ್ನೈಸಲಾತನ ದೃಢಚಿತ್ತವ
ನೊರೆದು ನೋಡುವೆನೆಂದ ಹರನು ॥೩೩॥

ಇತ್ತ ಮಂಗಳವಾಡದೊಳು ಬಿಜ್ಜಳರಾಯ
ನರ್ತಿಯಿಂದೋಲಗಗೊಡಲು
ಸುತ್ತ ಬಳಸಿ ಮನ್ನೆಯ ಮಂಡಳೀಕರು
ಮತ್ತೆ ಜೀಯವಧಾರು ಎನಲು ॥೩೪॥

ಕವಿ ಗಮಕಿಯು ವಾದಿಗಳ ಸಂದಣಿಯಿಂ
ದವೆ ಮೆಜೆವುದೊಂದೋಲಗಕೆ

ತವಕದಿ ಬಂದು ನುಡಿ[೧][ದರಿಯ][೧] ಕಂಡೆ[೨][ವು][೨]
ಭುವನಕಚ್ಚರಿಯೊರ್ವ ತಪಸಿ ॥೩೫॥

ಏನು ತಪಸು ದಂಡಣೆಯೆಂದು ನುಡಿಯಲು
ಭೂನಾಥಗೆ ಬಿನ್ನೈಸಿದರು
ಏನೆಂಬೆನು ಕಂಡು ಕೇಳಿದುದಿಲ್ಲ ಸು
ಜ್ಞಾನಿಯ ಬಲು ತಪದಿರವು ॥೩೬॥

[ಸಂದುಗ್ರ] ಬೇಸಗೆಯೊಳು ಕೋಡುಗಲ್ಲೊಳು
ಬಂಧಿಸಿ ಸುಜಿಯನದಕೆ
ತಂದು ತಲೆಯನೂಜೆ ತಪವಿದ್ದಾತನ ದೇಹ
ನಿಂದು ತಿರುಗುತದೆ ನೋಡಾ ॥೩೭॥

ಕಂಡುದಲ್ಲ ಕೇಳಿದುದಲ್ಲ ವಿಪರೀತ
ದಂಡಿಸಿದನು ಮಂಕ ತನುವ
ಮಂಡಲದೊಳಗಿದು ಹೊಸತೆಂದು ರಾಯನು
ದಂಡೆತ್ತಿ ನಡೆಯಲಾ ಕಡೆಗೆ ॥೩೮॥

ಎಂಟುಸಾವಿರ ಕೂಡೆ ಮಕುಟವರ್ಧನರೀ
ರೆಂಟುಸಾವಿರದ ಧನಿಕರ
ನಂಟರ ಧರ್ಮದಿ ನಾಡೆ ಕಂಡೆನು ಎಂಬ
ದುಂಟಾಯಿತು ರಾಯನಿಂದ ॥೩೯॥

ರಾಯ ಬೇಂಟೆಯ ನೆವದಿಂದ ಮಂಕನ ತಪ
ದಾಯತವನು ನೋಡಬಂದು
ಮಾಯಾ ಮೋಹ [೩][ಒಲ್ಲ][೩]ದಿಹ ತಪಸಿಯ ಕಂಡು
ಜೀಯ ಎನುತ ಕೈಯ ಮುಗಿದ ॥೪೦॥

ತಪಸಿನಿರವ ಕಂಡು ವಿಪರೀತವಿದನಿ
ನ್ನುಪಮಿಸಬಾರದೆಂದೆನುತ

---

೧ ದೆನಿಂದು (ಮೂ) ೨ ನು (ಮೂ) ೩ ಬಲಿ (ಮೂ)

ವಿಮಲಜ್ಞಾನಿಯ ನೋಡಿ ಶಿರದೂಗುತೆಂದನು
ಸುಪಥಕೆ ಸಾರಿ ತೀವಿಹನು ॥೪೧॥

ಎನುತ ಬಿಜ್ಜಳರಾಯ ಶರಣೆಂದು ಕೈಮುಗಿ
ದನುನಯದಿಂದಲಿ ನೋಡಿ
ಘನಮಹಿಮನ ಮಂಕತಂದೆಯ ತಪಸಿನ
ಅನುವ ಹೇಳೆಂದ ಬಸವನ ॥೪೨॥

ಸಿದ್ಧರಾಮಯ್ಯ ಪರ್ವತದ ಮಲ್ಲಯ್ಯನ
ಸದ್ಯಫಲದಿ ತಂದನೆಂದು
ಸಾಧ್ಯವಾಯಿತು ತಪ ಸಿದ್ಧರಾಮಯ್ಯನೀತ
ನಿದ್ದಲ್ಲಿಗೆ ತಹನಿಂದು ॥೪೩॥

ಸಕಲ ತೀರ್ಥವನೆಲ್ಲ ಸಿದ್ಧರಾಮಯ್ಯನು
ಭಕತಿಯಿಂದಲಿತ್ತನೆಂದು
ಅಕಳಂಕ ಸಿದ್ಧೇಶ್ವರ ಬಂದು ನಿಂದಾಗ
ಮುಕು.........................ನ ಮಂಕತಂದೆ ॥೪೪॥

ಇಂತೆಂದು ಬಸವದಂಡಾಧೀಶ ಹೇಳಲು
ಸಂತೋಷದಿಂ ಬಿಜ್ಜಳನು
ಮುಂತೆ ಸಾಷ್ಟಾಂಗವೆಱಗಿ ಬೀಳುಕೊಂಡಾಗ
ನಂತ ಸಂಭ್ರಮದಿಂದ ತಿರುಗೆ ॥೪೫॥

ತಿರುಗಿದಾಕ್ಷಣ ಹೆಗ್ಗಗೌಡ ಕಂಬಳಿಯಿತ್ತು
ಕರವ ಮುಗಿಯೆ ರಾಯನಿಗೆ
ಪಿರಿದು ಮನ್ನೆಯ ಮಂಡಲೀಕರೆಲ್ಲರು ನೋಡಿ
ಇರಬೇಕು ಈತ ನಮ್ಮೊಳಗೆ ॥೪೬॥

ವೀಳೆಯ ಉಡುಗೊಱೆ ಅಂದಳವಿತ್ತನು
ಲಾಲಿಸಿ ಬಿಜ್ಜಳರಾಯ
ಹೇಳಲೇನು ಮನ್ನೆಯ ಮಂಡಲೀಕರೆಲ್ಲ
ಪಾಲಿಸಿದರು ಗೌಡವನು ॥೪೭॥

ರಾಯನ ಬೀಳುಕೊಂಡಾಗ ಗೌಡನು [1][ಅಂ][1]ದು
ನಾಯಕ ಬಸವ ನಿಂದಿರಲು
ಓಯರದಿಂದ ಸಾಷ್ಟಾಂಗ ಎಱಗಿ ನಿಂದು
ಜೀಯ ಎನುತ ಕೈಯ ಮುಗಿದ ॥೪೮॥

ಬಸವನ ನೆನೆದರೆ ಭಯವಿಲ್ಲ ಭವವಿಲ್ಲ
ಬಸವನ ಭಜಿಸೆ ಸುಖಿಗಳು
ಬಸವ ಎನ್ನನು ಸಲಹೆಂದು [ತೋ]ಹಿನ ಹೆಗ್ಗ
ಬಸವಣ್ಣಗೆ ಶರಣೆಂದ ॥೪೯॥

ಶರಣೆನಲಾಕ್ಷಣ ಪಿಡಿದೆತ್ತಿ ಬಸವಣ್ಣ
ಪರಮ ಪರುಷದ ಹಸ್ತವನು
ಶಿರದ ಮೇಲಿರಿಸಿ ಮನ್ನಿ[ಸಿ ಬಸವ]ಣ್ಣನು
ಹರುಷದಿಂದಲಿ ತಿರುಗಿದನು ॥೫೦॥

ಅರಸು ಪಟ್ಟಣ ಹೊಕ್ಕು ಕರೆಸಿದ ಗೌಡನ ನೀ
ನಿರು ಸುಖದಲಿಯೆಂದೆನುತ
ಪರಪುರುಷಾರ್ಥಿ ನೀನಹುದೆಂದು ಬಿಜ್ಜಳ
ಕರೆದು ಮನ್ನಿಸಿ ಮನೆಗೊಟ್ಟ ॥೫೧॥

ಬಂದ ಜಂಗಮಕನ್ನ ಉದಕವನಿತ್ತು ಶಿವ
ಲಿಂಗವಂತರ ಮನಗಳನು
ಹಿಂಗದೆ ನೀ ಪಡೆವುತಲಸಂಖ್ಯಾತರ
ಸಂಗದಿ ಸುಖವಿಹುದೆಂದು ॥೫೨॥

ಇಂತು ಭಕ್ತರ ಸೇವೆಯ ಮಾಡುತಿಪ್ಪ ಮ
ಹಂತಗೆ ಬಂದ ವಿಘ್ನವನು
ಎಂತೆಂಬೆ ಸತಿ ಸುತ ನಂಟ ದಾಯಾದ್ಯರು
ಸಂತೆಯು ನೆರೆವ ಚಂದದಲಿ ॥೫೩॥

೧ ನಿಂ (ಮೂ)

ಹಾಲೊಂದು ಕರೆಯಲಿ ಕೀಳೊಂದು ಕರೆಯಲಿ
ಮೇಲೆ ಮಾಂಸವ ಕಟ್ಟಿಬಹುದ
ಬಾಲಮಜೆಯ ತಲೆಕೆಳಗಾಗಿ ಹಿಡಿತಹ
ಖೂಳರ ಕಂಡು ಹೇಸುತಲಿ ॥೫೪॥

ಹಾಲ [ಕಂಬಿಗೆ] ಸತ್ತ ಕುಜಿಮಾಂಸವ ಕಟ್ಟಿ
ಸಾಲುವಿಡಿದು ಕಂಬಿ ಬರಲು
ಮೇಲನಜೆಯದ ರಾಯನು ಮಾದಿಗರುಗೂಡಿ
ಹಾಳುಮಾಡಿದರು ಪಟ್ಟಣವ ॥೫೫॥

ಸತ್ತ ಹೆಣನ ಹೊತ್ತು ಪಟ್ಟಣದೊಳು ತರ
ಲತ್ಯಂತ ಪಾತಕವೆನುತ
ಸತ್ಯರು ಸಕಾಲಾಗಮಶಾಸ್ತ್ರಯುಕ್ತರು
ಭಕ್ತಿಯನಜಿದ ಕುಲಜರು ॥೫೬॥

ಹೊಲೆಗಲಸಿದನು ಬಿಜ್ಜಳ ಪಟ್ಟಣವನು
ನೆಲೆದಪ್ಪಬೇಕೆನುತೆಲ್ಲ
ಹಲರು ನೆರೆದು ಹದಿನೆಂಟು ಸಮಯದೊಳು
ಸಲರೆಂದು ಹೊಱಹಾಕಿದರು ॥೫೭॥

ಊರೊಳಗೊಬ್ಬ ಸತ್ತರೆ ತೆಗೆದಲ್ಲದೆ
ನೀರ ಮುಟ್ಟಲುಬಾರದೆಂದು
ಊರ ಹೊಱಗೆ ಸತ್ತುದ ತಹ ಹೊಲೆಯರ
ಊರೊಳಗಿರಿಸಿಕೊಂಡಿಹರೆ ॥೫೮॥

ಬರ ಹನ್ನೆರಡು ವತ್ಸರದೊಳು ಗೌತಮ
ನೆರೆವ ದ್ವಿಜರಿಗನ್ನವನು
ಭರದಿ ನೀಡೆ ಕ್ಷಾಮವಳಿಯೆ ಹೋಹೆನುಯೆನ
ಲಿ[೧][ರಿಮೆನೆ][೧] ಅತಿ ಕರುಣದಲಿ ॥೫೯॥

---

೧ ರಲೆನ್ನ (ಮೂ)

ಊರುವ ಮಾತೆಯು ಸತಿಯುಂಟೆನೆ ಮತ್ತೆಯು
ಭರದಿಂದ ತಡೆಯಲಾ ದ್ವಿಜರು
ಕರ ಕೋಪಿಸಿ ಮಾಯದ ಪಶುವೊಂದನು
ನಿರುತದಿಂದಲಿ ನಿರ್ಮಿಸಿದರು ॥೬೦॥

ಆ ಪಶು ಹೋಗಿ ಬಿತ್ತಿದ ಗದ್ದೆಯನು ಮೇಯೆ
ಕೋಪದಿಂದಲಿ ಗೌತಮನು
ರೂಪುಗೆಡಿಸುತ್ತಿದೆ ಪೈರನೆನುತ ಪೊಯ್ಯೆ
ರಾಪುಗೊಂಡೋಡಿ ಬಿದ್ದಳಿಯೆ ॥೬೧॥

ಬ್ರಹ್ಮೇತಿಕಾಱ ಗೌತಮನು ಪಶುವನು ಕೊಂದ
ಬ್ರಾಹ್ಮರಿಲ್ಲಿರಬಾರದೆನುತ
ತಮ್ಮ ತಮ್ಮೂರಿಗೈದುವೆವೆಂದು ದ್ವಿಜರೆಲ್ಲ
ಹಮ್ಮಿಂದ ಹೊಱಗೆಂದು ಹರಿಯೆ ॥೬೨॥

ಹರಿಯಲು ಗೌತಮ ಹರನ ಪೂಜೆಯ ಮಾಡಿ
ನೆರೆದ ಪಾತಕಗಳ ಕಳೆದು
ಇರವಱಿಯದೆ ಪರವಜೆಯದೆ ಬ್ರಾಹ್ಮರು
ಪರಕೆ ಸಲ್ಲದೆ ಹೋಗಲೆಂದ ॥೬೩॥

ಸುರೆ ಮಾಂಸವ ಮುಟ್ಟಿ ಮಾತೆ ಪಿತರ ಮಾಜಿ
ಇರದೈದಿ ತೀರ್ಥಯಾತ್ರೆಯನು
ತಿರಿದು ಅಕ್ಕುಲಜರಿಗಾಳುಮಾಗಿಯೆ
ನರಕಕ್ಕೈದಲೆಂದು ಶಪಿಸಿದ ॥೬೪॥

ಶಾಪದ್ರಷ್ಟರು ಶಿವಭಕ್ತಿಹೀನರು ನಿ
ಶ್ಯಾಪ ಪಿರಿದು ಎಡೆಗೊಂಡು
ಈ ಪರಿಯಲಿ ಭವಬಂಧಕೆ ಬರುತಲಿ
ಸ್ವಾಪಥವಜೆಯದೆ ಹೋಗಿ ॥೬೫॥

ಕೊಂದು ತಿನ್ನದ ಭಾಷೆ ಸಂದುದು ಹೊಲೆಯಗೆ
ಹೊಂದಿದುದಲ್ಲದೆ ಓಡಿಹೋಗಿ

ಮಂದೆಯೊಳಗಣಿಂದ ನಡೆಸಿತಂದು ಶಿರ[೧][ದ][೧]
ಸಂದ ಬಿಡಿಸಿ ಕೊಲುತಹರೆ ॥೧೬॥

ಎಂದು ಕಲ್ಯಾಣದ ಪ್ರಜೆಸಮಯವು ಕೂಡೆ
ಬಂದು ರಾಯಗೆ ಬಿನ್ನೈಸಲು
ಇಂದಿವದಿರ[ನು] ಹೊಱವಡಿಸದಿದ್ದರೆ
ಮುಂದೆ ನಿಮಗೆ ಕೊಱತೆಗಳು ॥೧೭॥

ಮೂವತ್ತಾಱು ಸಿಂಹಾಸನವಾಳಿತು
ದೇವ ನಿಮ್ಮವರ ಪುರವ
ಭಾವಿಸಲಂದು ಮೊದಲು ಇಂದು ತನಕ ಮ
ತ್ತಾವ ಜೀವಕೆ ಬಾಧೆಯಿಲ್ಲ ॥೧೮॥

ದೇವರು ಕೇಳಿ ಬಲ್ಲಿರಿ ಶಾಸ್ತ್ರಂಗಳು
ಜೀವವಳಿಯೆ ಪಾಪವೆಂದು
ಭಾವಿಸಿ ಹಿಟ್ಟುಗೋಳಿಯ ಕೊರಳರಿದವ
ಗಾಯಿತು ನರಕವೆಂಬುದನು ॥೧೯॥

ಕಾಡೊಳಾಡುವ ಹುಲಿ ಕರಡಿ ಹೆಮ್ಮರೆಯನು
ಬೇಡವು ಆನೆ ಕುದುರೆಯ
ಬೇಡಿದ ವರ[೨][ಕೊ][೨]ಡುವವ[೩][ರ][೩]ಲ್ಲ ಬಡಕುಱಿ
ಆಡ ಬೇಡುವವು ದೈವಗಳೆ ॥೨೦॥

ಕೋಳಿ ಕುಱಿಯ ಆಡ ಬೇಡುವ ದೈವದ
ಕಾಲ ಹಿಡಿಯಬೇಡವೆಂದು
ಹೇಳದೆ ಹಿಂಡಿನೊಳ್ಳೈದೆ ಕುಱಿಯನೊ[೪][ಯ್ವ][೪]
ತೋಳನ ದೈವವೆಂದಱಿಯ ॥೨೧॥

ಕೊಂದು ತಿಂಬವರೆಂದು ಈ ಪಟ್ಟಣದೊ[ಳಿ]ಲ್ಲ
ಇಂದುಭಕ್ತರು ಕೇಳಿದರೆ

---

೧ ವನು (ಮೂ) ೨ ಕಾ (ಮೂ) ೩ ರಿ (ಮೂ) ೪ ಯ್ಯೆ (ಮೂ)

ದ್ವಂದ್ವಗೆಡಿಸಿ ಹೋಹರು ಕಲ್ಯಾಣವ
ಇಂದಿವನನು ಪೊಱಮಡಿ[ಸು] ॥೭೨॥

ಅರಸು ಪ್ರಧಾನರು ಪ್ರ[೧][ಜೆ][೧]ಸಮ[[೨]ಸ್ತ][೨]ವು ಕೂಡಿ
ಹರಿತಂದು ಕುರುಬಗೌಡಗಳ
ಕರೆದು ನೆರಹಿ ಕಲ್ಯಾಣವ ಹೊರಡಿಸಿ
ಬರೆದು ಬಂದರು ಏಳುಗೆಱೆಯ ॥೭೩॥

ಈ ಗೆಱೆಯನು ಮೀಱಿ ನಡೆದು ಬಂದರೆ ಕಿವಿ
ಮೂಗನು ಕೈಕಾಲುಗಳನು
ಬೇಗದಿ ಕೊಯಿಸುವೆನೆಂದು ಕಟ್ಟಳೆ ಮಾಡಿ
ಆಗ ಹೊಱಡಿಸೆ ಅವದಿರನು ॥೭೪॥

ಏಳುಗೆಱೆಯ ದಾಂಟಿದ ಸೀತೆ ಸೆಱೆ ಹೋಗಿ
ಬಾಳುಗೆಟ್ಟುದ ಬಲ್ಲೆವೆಂದು
ಬಾಳಲೋಚನನ ಭಕ್ತರು ಕೃಪೆಮಾಡಲು
ಬಾಳಹುದೆಂದು ಮುಂದೆನಲು ॥೭೫॥

ನಾವು ತಪ್ಪಿ ನುಡಿದರೆ ತಪ್ಪಿ ನಡದರೆ
ದೇವ ಕಪಿಲಸಿದ್ಧ ಬಲ್ಲ
ಭಾವಿಸಿ ಮಂಕತಂದೆಯ ಕೂಡಿ ಬಂದೆಮ್ಮ
ಕಾವನು ಘನಕೃಪೆಯಿಂದ ॥೭೬॥

ಹೊಲೆಯರ ಮನೆಯ ಹೋರಿಯ ತಂದು
ಸಲೆ ಲಿಂಗಮುದ್ರೆಯೊತ್ತಿದರೆ
ಹೊಲೆಯರ ಹೋರಿಯೆಂಬರೊ ಗೂಳಿಯೆಂಬರೊ
ಹೊಲಬಱೆಯದೆ ಹೊಱಡಿಪರೆ ॥೭೭॥

ಕುಲದೊಳು ಕಿಱಿದಾದರೆ ಆಚಾರದ
ನೆಲೆಮಾರ್ಗವು ಕಿಱಿದಲ್ಲ

---

೧ ತಿ (ಮೂ) ೨ ಯ (ಮೂ)

ಕುಲದೊಳಧಿಕ [೧][ಸಾಮವೇದಿಗೆ][೧] ಶ್ವಪಚಯ್ಯ
ನೊಲಿದು ದೀಕ್ಷೆಯ ಕೊಟ್ಟುದಜೆಯ ॥೭೮॥

ಆದಿಯ ಲಿಂಗವನಾದಿಯ ಶರಣನು
ಭೇದಿಸಿ ತಂದುದನಜೆಯ
ನಾದ ಬಿಂದು ಕಳೆಗಳ ಮೀಱಿ ತಪವಿದ್ದ
ನಾದಿಯ ಸಿದ್ಧರಾಮೇಶ ॥೭೯॥

ಎಂದು ತೋಹಿನ ಹೆಗ್ಗಗೌಡ ಬಿಜ್ಜಳಭೂಪ
ಗಂದು ಬಿನ್ನಹ ಮಾಡುತಿರಲು
ನೊಂದು ನೀ ಮಾತನಾಡಲು ಬೇಡ ಸೈರಿಸು
ನಿಂದು ಕಾಬುದು ಮುಂದಣನುವ ॥೮೦॥

ವಚನ ॥

ಇಂತೆಂದು ತೋಹಿನ ಹೆಗ್ಗಗೌಡ ಬಿಜ್ಜಳರಾಯಂಗೆ ಬಿನ್ನಹಂ ಮಾಡಲು ನಮ್ಮ ಆರಾಧ್ಯರು ಸಿದ್ಧರಾಮಯ್ಯ ಮಂಕತಂದೆಗಳು ಬಂದಾಗ ಡಣಾಯಕರ ಮುಂದೆ ಹಸ ಮಾಡುವೆನೆಂದು ತೋಹಿನ ಹೆಗ್ಗಗೌಡ ಹೇಳಿದನದೇನೆಂದರೆ

ಪದ ॥

ಸಿದ್ಧರಾಮಯ್ಯನು ನಿಜಗುಣದೇವರು
ಇದ್ದ ಠಾವಿಗೆ ನೋಡ ಬರಲು
ಮುದ್ದು ಮುಖದ ಸಿದ್ಧರಾಮ ಕರೆ[ದಾ]ತಗೆ
ಎದ್ದು ಸಾಷ್ಟಾಂಗವೆಱಗಿದ ॥೮೧॥

ಪಾದಾರ್ಚನೆ ಮಾಡಿ ಪಾದಾಂಬುವನೀಂಟಿ
ವಾದ್ಯವಾಳಾಪಗಳಿಂದ
ಐದೆ ಕೀರ್ತಿಸಿ ಭಕ್ತನ ಕೂಡಿಕೊಂಡವ
ರಾದರದಿಂದ ಬಂ[೨][ದಿರಲು][೨] ॥೮೨॥

ಲಿಂಗಾರ್ಚನೆ ಮಾಡಿ ನಿಜಗುಣದೇವರ
ಸಂಗಡ ಒಡಗೊಂಡು ಬರಲು

---

೧ ಸಾಮನಲ್ಲ (ಮೂ) ೨ ದರು (ಮೂ)

ತುಂಗಭದ್ರೆಯ ತೀರದೊಳು ಸಿದ್ಧರಾಮಯ್ಯ
ಹಿಂಗಿಸಿ ನಿಜಗುಣಯ್ಯಗಳ ||೮೩||

ಬಂದು ಸೊನ್ನಲಪುರ ಹೊಗುತ ಸಂದೇಹಿಸಿ
ಹಿಂದಕೆ ತಿರುಗಿ ರಾಮಯ್ಯ
ನಿಂದನು ಹೊಳೆಯೊಳು ನಿಜಗುಣದೇವನು
ಬೆಂದೆನೆನುತ ತಿರುಗಿದನು ||೮೪||

ಹೊಳೆಯ ತಡಿಯ ನಿಂದು ನಿಜಗುಣದೇವರ
ಸಲೆ ಬೋಳೈಸಿದ ಸಿದ್ಧರಾಮ
ಸುಲಭ ಕಪಿಲಸಿದ್ಧಮಲ್ಲೇಶನ ನಿಜ
ನಿಲವ ನೋಡುವರೆ ಬಾರಯ್ಯ ||೮೫||

ಎಂಬ ಸಮಯದೊಳು ಪ್ರಭು ಬಂದು ನೋಡಿದ
ಇಂಬುಳ್ಳ ಸೊನ್ನಲಪುರವ
ಡಂಬಕತ್ವದಿ ಕಲುಮರನನೊಡ್ಡಿಸಿ ಹೆಸ
ರಿಂ೧ಬೆಂ[1][ದ]ನು ಸಿದ್ಧರಾಮ ||೮೬||

ಹಲವು ಪರಿಯ ಚಿತ್ರ ಪತ್ರಂಗಳಿಂದ
ಬಲುಮೆ ಮಾಡಿದ ದೇಗುಲಗಳ
ನೆಲ ಬೆಸಲಾದಂತೆ ಮಿಗೆ ಮರಗೆಲಸದ
ಕಲುಕುಟಿಕರ ನೆರವಿಗಳ ||೮೭||

ಬಾಳಲಾಱದೆ ಸತಿಸುತರೊಳು ಭಯದೊಳು
[2][ಬಾಳಿಕೆ][2]ಗಳ ಅತಿಗಳೆದು
ಕೋಳತಿಹೋದ [3][ವಿಭೂತಿ][3]ಪೂಜೆಗಳಿಂದ
ಕಾಳ ಕೂಡಿದ ಸಿದ್ಧರಾಮ ||೮೮||

ಚಿಕ್ಕ ಬದುಕನೊಲ್ಲದೆ ಸಿದ್ಧರಾಮಯ್ಯ
ಹೊಕ್ಕ ಹಿರಿಯ ಬದು[ಕಿನಲಿ]

---

೧ ಬ (ಮೂ) ೨ ಬಯಕೆ (ಮೂ) ೩ ನಿಭಿರ್ತಿವುಪ (ಮೂ)

ಸಿಕ್ಕಿದನೀತನು ಮಿಕ್ಕಿನ ನರರನು
ಮುಕ್ಕದಿಹಳೆ ವಿಧಿಯೆನುತ ॥೮೯॥

ಒಡ್ಡತನ[ದಿ] ಸಿದ್ಧರಾಮ ಕೆಟ್ಟನುಯೆನೆ
ಗುಡ್ಡರೆಲ್ಲರು ಕೆರಳಿದರು
ಕಡ್ಡತನದಿ ನಮ್ಮ ಗುರುವ ಜಜಿದನೆಂದು
ಅಡ್ಡಹಾಯ್ದರು ಕೋಟೆಯನು ॥೯೦॥

ಫಡ ಫಡ ದಾರು ನಮ್ಮಯ ಗುರುವಿನ ಕೂಡೆ
ನುಡಿದನ ಬಿಡೆವೆಂದೆನುತ
ನುಡಿಯಲನ್ನರು ಹರಿಯಜರು ದೇವೇಂದ್ರರು
ಬಡವ ನೀ ನುಡಿದು ಕೆಡುವರೆ ॥೯೧॥

ಅಕ್ಕಕ್ಕು ನಿಮ್ಮಯ ಗುರುವಿನಾಗಮಗಳ
ಯುಕ್ತಿ [೧][ಪಾ][೧]ಷಾಣಕೆ ಬಂತು
ಮುಕ್ತಿಹೀನನ ನಂಬಿ ಕೆಟ್ಟರಿ ನೀವೀಗ
ಸಿಕ್ಕಿದಿರೀ ಭವಶರಕೆ ॥೯೨॥

ಕಲ್ಲ ಕಡಿದು ಕಲ್ಲಿಗೆ ಗುಡಿಗಟ್ಟುವ
ರೆಲ್ಲರು ಸಿದ್ಧರಲ್ಲೆಂದು
ಹುಲ್ಲ ಹಿಡಿದು ಸಾಜಿದೆ ನೀ ಕೆಡಬೇಡ
ಬಲ್ಲೆ ನಾನೊಡ್ಡರಾಮನನು ॥೯೩॥

ಹಿಡಿ ಹಿಡಿ ನಮ್ಮೊಡೆಯನ ಜಜಿದಪದ ತಾ
ಪೊಡವಿಯ ಬಗಿದಡಗುವನೆ
ಬಿಡದೆ ತೆಕ್ಕೆಯೊಳವಚೆಂದು ಪಿಡಿಕೊಂಡು
ಬಡಿಯಲು ಬಯಲಾಗಿಹನು ॥೯೪॥

ನೆರವಿಗೆ ತೆರಳ ತೆಕ್ಕೆಗೆ ಸಿಕ್ಕನೀ ಪರಿ
ಹುರುಳುಗೆಡಿಸಿದ ಗುಡ್ಡಗಳ

---

೧ ಪೊ (ಮೂ)

ತೆರಳಿದರಾ ಗುಡ್ಡಗಳು ಅಲ್ಲಮನ ಮೇ
ಲುರವಣಿಸಿದ ಕಲ್ಲಿಂದ ॥೯೫॥

[1][ಸದೇ][1] ಹಿಯಾದರೆ ಖಂಡಿಸುವವು ಕೈದು
ನಿರ್ದೇಹಿಯನಟ್ಟಿ ಮುಟ್ಟುವವೆ
ನೋಯಿಸಲಱಿಯೆವು ಕೆಡಬೇಡವೊ ನಿಮ್ಮ
ದಾಯಿಗರನು ಕರೆಸೆಂದ ॥೯೬॥

ನೊಂದು ಸೈರೆಸದವನೇ ಕನಿಷ್ಠನು ಮಿಗೆ
ನೊಂದು ಸೈರಿಪನು ಮಧ್ಯಮನು
ನೊಂದೆನೆಂಬುದ ಮಱೆದರೆ ದೇವ[2][ನವ][2] ನಾ
ನೊಂದರೆ ಕೇಡು ತ್ರೈಜಗಕೆ ॥೯೭॥

ಮುರಿದು ಮತ್ತೆ ಸೆಣಸುವರಿಗೆ ಬಹುರೂಪು
ಧರಿಸಿಯೆ ನಿಂದು ಮಾರ್ಮಲೆಯೆ
ಪಿರಿದು ಬಳಲಿ ವಿಡಾಯದೊಳು ಕಾದುವರಂತೆ
ಹುರುಳುಗೆಟ್ಟರು ಗುಡ್ಡಗಳು ॥೯೮॥

ಹರಿಯಾದರೆ ಚಕ್ರದಿ[ನೆಱೆ] ಮರ್ದಿಪ
ಹರನಾದರೆ ಬಿಸಿಗಣ್ಣ
ತೆರೆದುರುಹುವನೀತನ ಬಗೆ ಲೇಸೆಂದು
ನೆರವಿ ಕೊಂಡಾಡಲಲ್ಲಮನ ॥೯೯॥

ನಮ್ಮ ಸಿದ್ಧನ ನಿಂದಿಸಿದಗೆ ಶಿಕ್ಷೆಯ
ನೊಮ್ಮೆಯು ಮಾಡಬೇಕೆನುತ
[ತ]ಮ್ಮ ಗುರುವಿಗಱುಹಿದರೊಬ್ಬ ಜಂಗಮ
ನಿಮ್ಮ ಜಱಿದ[3][ನೆಂ][3]ದೆನಲು ॥೧೦೦॥

ಹರಿಯಜ ದೇವೇಂದ್ರರು ಮೊದಲಾಗಿಯೆ
ನೆಱೆ ನಮ್ಮ ನುಡಿಯಲಂಜುವರು

---

೧ ನಿರ್ದೇ (ಮೂ) ೨ ನೆ (ಮೂ) ೩ ರೆಂ (ಮೂ)

ಜಱಿದವನಾರೆನುತಲಿ ಸಿದ್ಧರಾಮಯ್ಯ
ಪಿರಿದು ಕೋಪಿಸಿ ನಡೆತಂದ ॥೧೦೧॥

ಲೇಸುಲೇಸೈ ಸಿದ್ಧರಾಮ ನಿನ್ನಯ ಕೋಪ
ವಾಸಿ ಸಂಸಾರಿಗಳಿಂದ
ಸಾಸಿರ ಮಡಿಯಾಯಿತು ಸುಡು ಯತಿತನ ನಿ
ರಾಸವಂತನು ನೀನಹುದೈ ॥೧೦೨॥

ಆವ ಪರಿಯಿಂದಲಿ ನಿಜಸುಖವಹುದಾ
ಸೇವೆಯ ಮಾಳ್ದಲ್ಲಮನು
ಭಾವವು ಸೊಗಸವು ಕಡುಗೋಪದುಱಿ ನೆಱಿ
ತೀವಿತು ಸಿದ್ಧರಾಮನಿಗೆ ॥೧೦೩॥

ಸಾಕು ಮಹೇಂದ್ರಜಾಲನೆ ನಮ್ಮ ಗುಡ್ಡರ
ಕಾಕು ಮಾಡಿದ ಗರ್ವಗ[1][ಳು][1]
ನೂಕಲಱಿಯನೆಂದು ಅಲ್ಲಮಪ್ರಭುವನ
ನೇಕ ವಹಣಿಯಿಂ ಜಱಿದ ॥೧೦೪॥

[2][ಭಾಪುರೆ][2] ಮಝು ಪೂತು ಯೋಗಿ ನೀನಹುದೈ
ಕೋಪ ನಿಮ್ಮಯ ವಂಶಕ್ಕೆ
ಲೇಪವಾಗಿಹುದೆಲೆ ಸಿದ್ಧರಾಮಯ್ಯ ನಿನ
ಗೀ ಪರಿಯುನ್ನತವೆ ಹೇಳು ॥೧೦೫॥

ಜಡಿದು ನುಡಿವುದನು ಬಿಡನೆಂದು ಸಿದ್ಧೇಶ
ಘುಡುಘುಡಿಸುತ ಕಿಡಿಗಣ್ಣಿ
ಒಡನೆ ತೆಗೆಯಲಲ್ಲಮನ ಹೊದ್ದಲಮ್ಮದೆ
ಸುಡುತಿರ್ದವಖಿಳ ಲೋಕವನು ॥೧೦೬॥

ಮಾಡಿಕೊಂಡನು ಅಲ್ಲಮನೊಳು ತೋಟಿಯ
ಮೂಢತನದಿ ಸಿದ್ಧರಾಮ

---

೧ ಳೆ (ಮೂ) ೨ ಳೆ (ಮೂ)

ನೋಡಲು ಬಡವನ ಕೋಪ ಜೌಡಿಗೆ [೧][ಕೇಡು][೧]
ಕೂಡೆ ಸುಟ್ಟಿತು ತನ್ನ ಪುರವ ॥೧೦೭॥

ಕಡಲ ಮಥನಿಸಲು ಪುಟ್ಟಿದ ವಿಷವಂದು
ಸುಡಲು ದೇವಾಸುರರುಗಳ
ಮೃಡನು ರಕ್ಷಿಸಿದಂತೆ ಕಿಡಿಗಣ್ಣಿನುರಿಯನು
ಕೆಡಿಸಿ ಸಲಹಿದನಲ್ಲಮನು ॥೧೦೮॥

ಕಲ್ಲ ತಾಗಿದ ಮಿಟ್ಟೆಯಂದದಿ ಕಿಡಿಗಣ್ಣು
ದಳ್ಳುರಿ ತಾ ಹುಟ್ಟಿದೆಡೆಗೆ
ನಿಲ್ಲದಡರೆ ಸಿದ್ಧರಾಮಯ್ಯ ನೋಡಿ ತ
ನ್ನಲ್ಲಿ ತಾ ಸಿಡಿಮಿಡಿಗೊಳುತ ॥೧೦೯॥

ನೊಸಲ ಕಣ್ಣನು ತೋಱಲಂಗಾಲ ಕಣ್ಣನು
ಪಸರಿಪರುಂಟು ಲೋಕದಲಿ
ಸಸಿನೆಮಾಡಿನ್ನು ಗರ್ವಿಸಿದ ಬುದ್ಧಿಯ ಬಿಡೆಂ
ದೊಸೆದು ಬೋಧಿಸಿದನಲ್ಲಮನು ॥೧೧೦॥

ನಾಚಿದ ಸಿದ್ಧರಾಮನು ನೊಸಲ್ಗಣ್ಣಿಗೆ
ಚಾಚಿದನೆನೆ ಕದಹುಗಳ
ಸೂಚಿಸಿದವು ಪರಿಪಕ್ವ ಭಾವ[ನೆ]ಯೋಗ
ಶೌಚತೆ ಬೇರೂಱಿದುದು ॥೧೧೧॥

ಕುಱಿಗಳಾದರೆ ತನ್ನ ಸಲಹಿದೊಡೆಯನೆಂ
[೨][ದ][೨]ಱಿದಱಿಚುತ ಬೆನ್ನ ಬಿಡವು
ಮಱೆದೆನು ಮನದಲೆನುತ ಸಿದ್ಧರಾಮಯ್ಯ
ನೆಱಗಿದ ಪ್ರಭುವಿನಂಘ್ರಿಯಲಿ ॥೧೧೨॥

ದೇವ ಜಂಗಮವೇಷ[ವ] ತಾಳಿ ಬಂದರೆ
ಗಾವಿಲ ನಾನೆತ್ತ ಬಲ್ಲೆ

---

೧ ಮೂಡಿ (ಮೂ) ೨ ದು (ಮೂ)

ಅದ ಪರಿಯಲೆನ್ನ ತಪ್ಪ ನೋಡದೆ
ಕಾವುದೆನುತಲೆಱಗಿದನು ॥೧೧೩॥

ಕಪಿಲಸಿದ್ಧ ಮಲ್ಲೇಶನ ನೋಡಲು
ಕೃಪೆಯಿಂದ ಬಿಜಯಮಾಡೆನುತ
ವಿಪರೀತಮತಿಗೇಡಿಯ ಸಲಹೆನ್ನುತ
ಅಪ್ರತಿಮನ ಮಠಕೆ ಕರೆದ ॥೧೧೪॥

ಬಿಡು ಮರುಳೇ ಮನೆಯೇನು ಮಠವುಯೇನು
ಅಡವಿಯೇನು ....ಗುತಕೆ
ನುಡಿದುದೆ ಶಿವತತ್ತ್ವದಾಗಮವಾತಗೆ
ನಡೆದುದೆ ಶಿವಪಥವೆಂದ ॥೧೧೫॥

ಹಲವು ಬಿನ್ನಹಕೆ [೧][ಅಡಲು ನೆರೆ][೧] ಕೋಟಲೆ
ಗಲಸಿದೆ ಅಜ್ಞಾನದಿಂದ
ಹೊಲಬುಗೆಟ್ಟೆನು ಸಲಹೆನುತಲಲ್ಲಮಗೆ ತಾ
ನೊಲಿದು ಮೈಯಿಕ್ಕಿದ ರಾಮಯ್ಯ ॥೧೧೬॥

ಕರುಣದಿ ಹೆಱೆನೊಸಲೆತ್ತಿ ಕೈವಿಡಿದು ಹ
ತ್ತಿರೆ ಕರೆದು ಕುಳ್ಳಿರಿಸಿ
ತರಳತನದಿ ನಡೆದುಱೆ ಕೆಡಬೇಡೆಂ
ದೊರೆದನು ಸಿದ್ಧರಾಮನಿಗೆ ॥೧೧೭॥

ಕೀಳು ಮಾಂಸವ ಕಟ್ಟಿ ನೀರೊಳು ಬಿಡಲದ
ಮೇಲಱೆಯದೆ ಮತ್ಸ್ಯನುಂಗೆ
ಮೇಲಕೆ ತೆಗೆದು ಬಂಧಿಪವೊಲು ನರರುಱೆ
ಕೋಳುಹೋದರು ವಿಷಯಕೆ ॥೧೧೮॥

ಬಿದ್ದರನೇಕ ಸಿದ್ಧರು ಅಂತರಂಗವ
ಹೊದ್ದಿ ತೋಱುವ ವಿಷಯಕ್ಕೆ

---

೧ ಆಡುವನಾರೆ (ಮೂ)

ಬಿದ್ದು[ಂ]ಬೀಳದೆ ನಿಲ್ಲಿಸಲು ಬಳಿಕ
ಸಿದ್ಧನಹುದು ತಪ್ಪದೆಂದು ॥೧೧೯॥

ಕರಣಂಗಳೆಲ್ಲವ ತನ್ನ ವಶವ ಮಾಡಿ
ಮರಣಂಗಳ ಗೆಲುವುದಕೆ
ಶರಣರ ಚಿಂತೆಯಲಿರುತಲಿರಲು ನೀನು
ಪರಮನಪ್ಪುದು ತಪ್ಪದೆಂದ ॥೧೨೦॥

ನಾನಾ ಮುಖದಲಿ ಹರಿದು ಮನಗಳನು
ನೀನಿರಿಸುವುದು ಲಿಂಗದಲಿ
ಧ್ಯಾನವಸ್ತುವಿನಲೆರಕವಾಗಿರುತಿರೆ
ನೀನೇ ಅನುಪಮಸುಖಿಯು ॥೧೨೧॥

ಇಂತೆಂದು ಬಳಿಕೇಕಾಂತದಿ ಪೇಳ್ದನು
ಅಂತಕಾಂತಕ ಪ್ರಭುರಾಯ
ಸಂತೋಷದಿಂದಲಿ ಸಿದ್ಧರಾಮಯ್ಯನು
ಇಂತು ಸೊನ್ನಲಪುರದಿಂದ ॥೧೨೨॥

ಸಿದ್ಧರಾಮಯ್ಯನು ಪ್ರಭುರಾಯ ಘಟ್ಟಿವಾಳ
ಮುದ್ದಣ್ಣನು ಅಜಗಣ್ಣ
ಸಿದ್ಧಿಯ ಪಡೆದು ಸೊನ್ನಲಪುರದೊಳಗಿಹ
ಸಿದ್ಧರುಗಳ ಕೂಡಿಕೊಂಡ ॥೧೨೩॥

ಬೇಡಿದಿಷ್ಟಾರ್ಥವ ಶರಣರುಗಳಿಗೆ ಕೈ
ಗೂಡಿಸಿ ಕೊಡುವೆನೆಂದೆನುತ
ಆಡುತಾಡುತ ಪ್ರಭುವನು ಸಿದ್ಧರಾಮಯ್ಯ
ಕೂಡಿಕೊಂಡು ಬರುತಿರ್ದ ॥೧೨೪॥

ಲಕ್ಷ ಭಕ್ತರು ಲಕ್ಷ ಗುಡ್ಡರು ಸಹವಾಗಿ
ಲಕ್ಷ ಮಹೇಶ್ವರರೊಡನೆ
ಈ ಕ್ಷಿತಿಯಜೀಯೆ ಮಂಕನ ನೋಡುವರೆ ಅ
ಪೇಕ್ಷೆಯಿಂದಲಿ ಸಿದ್ಧರಾಮ ॥೧೨೫॥

ಸೊನ್ನಲಪುರದ ಹೊರಟ ಸಿದ್ಧರಾಮಯ್ಯ
ನುನ್ನತಭಕ್ತರ ಕೂಡೆ
ತನ್ನ ಶಿಷ್ಯನು ಮಂಕ ತಪವಿದ್ದ ತಾವನು
ಸನ್ಮತದಿಂದ ನೋಡುತಲಿ ॥೧೨೬॥

ಸರ[೧][ವೂ][೧]ರದೊಳಗೆಲ್ಲ ಕೆರೆ ಬಾವಿ ದೇಗುಲ
ತುರುಗಿದ ಹೂದೋಟ ಚೆಲ್ವ
ಪರಿಪರಿಯಲಿ ಮಾಟಕೂಟದ ಮಠಗಳ
ಪರಿಕಿಸಿ ನೋಡುತ ಬರಲು ॥೧೨೭॥

ಬಾಳೆ ಹಲಸು ಮಾದಲ ಮಾವು ನೇರಲು
ಈಳೆ ಹೇರೀಳೆ ವೃಕ್ಷಗಳು
ದಾಳಿಂಬ ನಿಂಬೆ ರುದ್ರಾಕ್ಷಿಯ ತರುಗಳು
ಮೇಳೈಸಿರ್ದ ವನವೆಸೆಯೆ ॥೧೨೮॥

ನೋಡುತ ಬರುತ ಕಂಡನು ಸರ[೧][ವೂ][೧]ರದೊಳು
ಕೋಡುಗಲ್ಲಿನ ಮೇಲಿಹನ
ಖೋಡಿಯಿಲ್ಲವು ಮಂಕ ಕಂದ ಕೂಸನು ಎಂದು
ಗಾಢದ ತಪವು ಎಂದೆನುತ ॥೧೨೯॥

ಸಿದ್ಧರಾಮಪ್ರಭು ನೋಡು ರೇವಣಸಿದ್ಧ
ಸಾಧ್ಯವಾಯಿತು ತಪದಿರವು
ಮದ್ದು ಮರನು ನಾರು ಬೇರು ಗುಟಿಕೆ ಕೊಂಬ
ಸಿದ್ಧರಂತವನಲ್ಲ ಬಾರೈ ॥೧೩೦॥

ಮೋನ ಮೂಗನಾಗಿ ಮಾನಿಸ ವೇಧೆಯಿಂದ
ಧ್ಯಾನವನೊಳಕೊಂಡು ನಿಂದು
ಧ್ಯಾನಾರೂಢನಾಗಿಹ [೨][ತಪಸಿ][೨]ಯ ಕಂಡು
ನಾನಾ ಪರಿಯ ನೋಡಿದನು ॥೧೩೧॥

---

೧ ವ(ಮೂ) ೨ ಕಪಿ (ಮೂ)

ಚಿಕ್ಕಯ್ಯ ಶಾಂತಯ್ಯನೆಂಬ ಕುಮಾರರ
ಮುಕ್ಕಣ್ಣ ಕಲು[ಹೆ] ಮಂಕಯಗೆ
ಮಕ್ಕಳೆಂಬ ಭಾವದೊಳು ಸತ್ಯದಿಂದಾತ
ನೊಕ್ಕುದ ಕೊಂಡಿರುತಿಹರು ॥೧೩೨॥

ನೋಟ ನಿಂದರೆ ಮನದಾಟವು ನಿಲುವುದು
ಬೇಟವ ನಿಲಿಸುವುದರಿದು
ಪಾಟಿಸದಿರೆ ಮನಗ[1][ತಿ][1]ಗೆಟ್ಟುದು ಯಮ
ನಾಟ[2][ದ][2] ಘಟಿತವು ತಪವು ॥೧೩೩॥

ಮಾಡಬಲ್ಲರೆ ತಪದಿರವಿಂತಿರಬೇಕು
ನೋಡಿರೆ ಮಂಕನ ಪರಿಯ
ಆದಿಗೇಕೋಭಾವನಿಷ್ಠೆಯದ ತಪವೊಡ
ಗೂಡದೆನುತ ರೇವಣನು ॥೧೩೪॥

ಸುತ್ತ ಪ್ರದಕ್ಷಿಣ ಬಂದು ರೇವಣಸಿದ್ಧ
ಮತ್ತಾ ಪ್ರಭು ಸಿದ್ಧರಾಮ
ಹಸ್ತದಿಮದ ಉತ್ತಮಾಂಗವ ಮುಟ್ಟಲು
ಕರ್ತುವೆ ಬಂದನೆಂದಜಿದು ॥೧೩೫॥

ಹತ್ತೆಸಾರಿದ ಸೂಜಿಕಲ್ಲ ಸೂಜಿಗೆ ತೋಜಿ
ಹತ್ತಿಕೊಂಡು ಬಿಡದಂತೆ
ನಿತ್ಯಗುರುವೆ ಸಿದ್ಧರಾಮ ಎನುತ ಮಂಕ
ಹಸ್ತವ ಮುಗಿದೆಜಗಿದನು ॥೧೩೬॥

ಗುರುವ ಕಂಡೆನು ಕಲ್ಪತರುವ ಕಂಡೆನು ವರ
ಸಿರಿಯ ಕಂಡೆನು ಕಂಡೆನೆಂದು
ಪರುಷದ ಗಿರಿಯ ಸಾರಿದ ಲೋಹದಂದದಿ
ಹರುಷದಿ ನಿಂದು ಮಂಕಯನು ॥೧೩೭॥

---

೧ ತ(ಮೂ) ೨ ಕ (ಮೂ)

ಗುರುವೆ ನೀ ಕರುಣಿಸು ಶಿವಭಕ್ತಿಭಾವದ
ತರುವೆ ನೀ ಕರುಣಿಸೆಂದೆಱಗಿ
ಪರಕೆ ಪರವೆ ಕರುಣಿಸು ಲಿಂಗನಿಷ್ಠೆಯ
ಗುರುವೆ ನೀ ಕರುಣಿಸೆಂದೆನುತ ॥೧೩೮॥

ನರನು ತಾ ಪರರಿಗೆ ದಿಟವೆಂಬ ಬಳಕೆಯ
ಪರಿಯ ನೀನಳವಡಿಸಿದರೆ
ಪರಕೆ ಪರಾ[1][ತ್ಪ][1]ರ ವಸ್ತುವೆಂಬುದ ಬಲ್ಲೆ
ಕರುಣಿಸೊ ಸಿದ್ಧರಾಮಯ್ಯ ॥೧೩೯॥

ಅಱಿಯದಱಿಯದಂತಿರಲಿ ಎನಗೆ ಈಗ
ಉಱುವ ಗುರು[ವೆ] ಸಿದ್ಧರಾಮ
ಮೆಱೆಯಲಿ ಭೂಮಿ[2][ಗೆ][2] ಉಱುವ ಕಲ್ಯಾಣದಿ
ಮೆಱೆವ ಬಿಜ್ಜಳ ಭಕ್ತರೊಳಗೆ ॥೧೪೦॥

ಬೇಡು ನಿನ್ನಯ ಮನದೊಳಗಿರ್ದ ಬಯಕೆಯ
ಬೇಡಿದಿಷ್ಟಾರ್ಥ ಸಿದ್ಧಿಗಳ
ನೀಡುವೆನೀಕ್ಷಣ ಬೇಡು ಬೇಡೆನಲಾಗಿ
ಬೇಡಿದ ಪರಪುರುಷಾರ್ಥಿ ॥೧೪೧॥

ಏಳು ಬೇಲಿಯನೆ ಕಳೆದು ಹೊಱಹಾಕಿಯೆ
[ಮೂಲೆ] ಮೂಲೆಗೆ ಮುಟ್ಟದವರ
ಸಾಲಿಗೆ ತಂದು ಸಲಹಿದ ಬಳಿಕಲೆನ್ನ
ಪಾಲಿಸೆನುತಲೆಱಗಿದನು ॥೧೪೨॥

ದೇವಲೋಕವ ಬೇಡು ವಿಷ್ಣುಲೋಕವ ಬೇಡು
ತೀವಿ ಬ್ರಹ್ಮಲೋಕ[3][ವ][3] ಬೇಡು
ಇವನೇನ ಬೇಡಿದೆ ಮರುಳು ಮಂಕಯಯೆಂದು
ನುಡಿದನು ಸಿದ್ಧರಾಮಯ್ಯ ॥೧೪೩॥

---

೧ ಪ(ಮೂ) ೨ ಯ (ಮೂ) ೩ ವ ನೀನು(ಮೂ)

ಉಪಪಾತಕ ಮಹಾಪಾತಕ ಕರ್ಮವು
ವಿಪರೀತ ಕೋಟ್ಯಾನುಕೋಟಿ
ಉಪಮಿಸದಾದೊಬ್ಬ ಶರಣ [೧][ನು][೧] ಕಾಣುತ
ತಪ ಹರಿಸಿದನೆಂಬುದಜೆಯ ॥೧೪೪॥

ಕೊಂಡಲಿಗನ ಹುಳುವೊಂದು ಕೀಡೆಯ ತಂದು
ಕೊಂಡು ತನ್ನಂತೆ ಮಾಡುವ[ದ]
ಕಂಡು ನಿಮ್ಮಯ ಪಾದವೆ ಗತಿಯೆಂಬುದ
ಬಂಡು ಮಾಡಿ[ಯೆ] ಹೊರಡಿಪರೆ ॥೧೪೫॥

❖❖

---

೧ ನ(ಮೂ)

ಚತುರ್ಥ ಸಂಧಿ

ಮುಂದಣ ಸಂಧಿಯ ಕಥೆಯೆಂತೆನೆ ಮಂಕ
ತಂದೆಯ ತಪದಿಂದಿಳುಹಿ
ಬಂದು ಕಲ್ಯಾಣದ ಭಕ್ತರುಗಳ ನೋಡು
ತ್ತಂದು ಗೌಡನ ಹೊಲೆದೊಳೆದ ॥೧॥

ಕಪಟನಾಟಕದಿಂದ ಜಗವನಾಡಿಪ ಜಯ
ವಿಪರೀತರೂಪನೆ ಜಯತು
ಉಪಮನ್ಯುವಿಗೆ ಪಾಲ್ಗಡಲನಿತ್ತನೆ ಜಯ
ಅಪರ್ಣೆಯಪ್ರಿಯನೆ ಜಯತು ॥೨॥

ಇಂತೆಂಬ ಮಾತಿಗೆ ಸಿದ್ಧರಾಮಯ್ಯನು
ಸಂತೈಸಿದನು ಮಂಕಯನ
ಚಿಂತಿಸಬೇಡ ಕಲ್ಯಾಣಕೆ ಪೋಗಿ ನ
ಮ್ಮಂತೆ ಮಾಡುವೆ ನಡೆಯೆಂದ ॥೩॥

ಎಂದು ಹೇಳುತ ಪ್ರಭು ಸಿದ್ಧರಾಮಯ್ಯನು
ಮುಂದೆ ರೇವಣಸಿದ್ಧಯನು
ಅಂದುಭಕ್ತರು ಸಹ ಮಂಕತಂದೆಯ ಕೂಡಿ
ಬಂದರು ಶರಣರ ಪೊರೆಗೆ ॥೪॥

ಬರುತಿರಲಲ್ಲಿಗಲ್ಲಿಗೆ ಗಣಸ್ತೋಮವು
ನೆರೆದಿರ್ಗೊಂಡು ಸಂತೈಸಿ
ಕರ ಹೊಸತಾಯಿತು ಧರೆಯ ಪಾವನ ಮಾಡೆ
ಗುರುಮೂರ್ತಿಗಳೈತರಲು ॥೫॥

ಲೇಸೆನಿಸುವದಕ್ಕೆ ವಿಶ್ರಮಿಸುವದಕ್ಕೆ
ಲೇಸೆನಿಸಿದ ನಿವಾಸಗಳು
ಬೇಸಜೆಲ್ಲವು ಕಲ್ಯಾಣಕ್ಕೆ ಹೋಹ ಸಂ
ತೋಷವನೇನ ಹೇಳುವೆನು ||೬||

ಅರವಟ್ಟಿಗೆಯು ಛತ್ರಗಳು ಪಥದಲಿ ನೋಡೆ
ತೆರಹಿಲ್ಲವೆಲ್ಲಡೆಯೊಳಗೆ
ಅಱವತ್ತನಾಲಕು [ಶೀ]ಲದವರು ಬರೆ ಆ
ಸರಿಲ್ಲವು ಭಕ್ತ[1][ಜನರಿಗೆ][1] ||೭||

ಆರಾರ ಮನದಲುಂಟಾದುದನೆಲ್ಲ ವಿ
ಚಾರಿಸಲಿಲ್ಲ ದಾರಿಯಲಿ
ಸಾರಿದವರಲುಪಚರಿಸಿ ಪದಾರ್ಥವ
ಸೇರಿ ನೀಡುವ ಬಗೆ ಲೇಸು ||೮||

ನೋಡು ಸಿದ್ಧರಾಮ ನೋಡು ರೇವಣಸಿದ್ಧ
ನೋಡಿರೆ ಬಸವನುನ್ನತಿಯ
ನೋಡಿರೆ ದಾರಿಯ ಸುಖವನೆನುತಲೊಡ
ಗೂಡಿ ಪೇಳಿದನಲ್ಲಮನು ||೯||

ಬರುತಿರೆ ತನ್ನ[ಯ] ಮನ[ದ]ಸ್ವರುಪಕೆ
ವೆರಸಿಯೆ ಸಚರಾಚರವ
ಹರುಷದಿಂದ ಪಾವನ ಮಾಡುತ ಬಂ[ದ]
ಪರಮ [2][ಪು][2]ರುಷ ಸಿದ್ಧರಾಮ ||೧೦||

ಮಂಗಳಮಹಿಮರು ಶಿವಶರಣರುಗಳು
ಲಿಂಗವಂತರು ಸಹ ಬರುತ
ಕಂಗೆ ಕವುತುಕವಾಗಿ ತೋಱುತಲಿಹ ಶುಭ
ಮಂಗಳಕಲ್ಯಾಣವ ಕಂಡ ||೧೧||

---

೧ ರನು (ಮೂ) ೨ ಹ (ಮೂ)

ಎತ್ತ ನೋಡಿದರತ್ತ ನಗರದ ಸುತ್ತಲು
ದ್ಯುಕ್ತವಾಗಿಹ ತರುಲತೆಯು
ಮುತ್ತಿ ಮಂಡಳಿಸಿದ ಶುಕ ಪಿಕ ಕೋಗಿಲೆ
ಮೊತ್ತದ ದನಿ ರಾಜಿಸಿಹವು ॥೧೨॥

ಪುರದ ಸುತ್ತುವಳೆಯದಿ ಬಳಸಿಯೆ ಬಂದ
ಹರಿವ ಗಂಭೀರದ ಗಂಗೆ
ಕರಮೊಪ್ಪೆ ಪ್ರಮಥರು ಸಹ ದಾಂಟಿ ಕಲ್ಯಾಣ
ದಿರವ ನೋಡಲು ನಡೆತರುತ ॥೧೩॥

ಒಲವಿಂದ ರಜತಗಿರಿಯು ಹರಭಕ್ತರ
ನೆಲೆಯ ನೋಡುವೆವೆಂದೆನುತ
ನೆಲಸಿದವೆನೆ ಪೊಂಗೋಂಟೆಯ ಮಧ್ಯದಿ
ಹೊಳೆದವು ಬಿಳಿಯ ಪಳವಿಗೆ ॥೧೪॥

ಬಸವನ ನೋಡುವರ್ತಿಗೆ ಸಿದ್ಧರಾಮಯ್ಯ
ಎಸೆವ ಭಕ್ತರ ಕೂಡಿಕೊಂಡು
ಮುಸುಕಿ ನೋಡಲು ಅಮರರಘ ೧[ಹರಿ]೧ದಂತೆ
ಎಸೆದವಟ್ಟಳೆಯಗಲದಲಿ ॥೧೫॥

ಹುಲಿಮುಖ ವಂಕದಾರವು ನೆಲೆ ಹಲ ತೆರೆ
ಚೆಲುವ ಉಪ್ಪರಿಗೆ ಬಾಗಿಲನು
ಬಲುಗೆಲಸವ ನೋಡುತ ಬೀದಿಬೀದಿಯೊ
ಳುಲಿವ ಜನರ ಸಂದಣಿಯು ॥೧೬॥

ಮುಂದೆ ಕಟ್ಟಿಗೆಕಾಜಿರು ಓಲಗಿಸುತವೆ
ಬಂದರು ಸಕಲ ಸಂಭ್ರಮದಿ
ಧಿಂ ಧಿಮಿ ಧಿಮಿಕೆಂದು ಪಂಚವಾದ್ಯವು ಸಹ
ನಿಂದು ಪಾಡುಲಾಡುತಲಿ ॥೧೭॥

---

೧ ಹ್ಯಕ (ಮೂಲ)

ಕಳಕಳರವ ಕಲ್ಯಾಣಪಟ್ಟಣದೊಳು
ಹಲವು ಸಂಭ್ರಮದಿಂದ ಬರಲು
ಸುಲಭ ಸಿದ್ಧರಾಮ ಪಟ್ಟಣವನು ಹೊಗ
ಲೊಲಿದು ಭಕ್ತರು ಗುಡಿಕಟ್ಟೆ ॥೧೮॥

ಬಂದರು ಮೆಲ್ಲ ಮೆಲ್ಲನೆ ಬಸವೇಶನ
ಮಂದಿರದೆಡೆಗೆ ಸಂಭ್ರಮದಿ
ನಿರೆದು ನೋಡಿಯೆ ಬಸವಣ್ಣನ ಬಾಗಿಲ
ಇಂದುಧರನು ಬಲ್ಲನೆನುತ ॥೧೯॥

ಹಡಪದಪ್ಪಣ್ಣ ನೋಡಿಯೆ ನಡೆತಂದಾಗ
ನುಡಿದನು ಬಸವರಾಜನಿಗೆ
ಮೃಡನಂಥ ರೂಪುಗಳೆ[ನ]ಲಿಬ್ಬರೊಡೆಯ[ರು]
ಸಡಗರದಲಿ ಬರುತಹರೆ ॥೨೦॥

ಬಂದರೆ ಲೇಸು ಲೇಸೆನುತ ಬಸವರಾಜ
ನಂದು ಸಾಷ್ಟಾಂಗವೆಱಗಿದ
ನಿಂದು ಸಕಲಪ್ರಮಥರು ಎಲ್ಲ ಶರಣೆನ
ಲಂದು 'ಸಿದ್ಧರಾಮ[ನ] ಕರೆದ ॥೨೧॥

ಪಂಚಾಕ್ಷರಿಯ ಬ್ರಹ್ಮವು ತಾನೇ ಎಂದು
ಪಂಚಾಕ್ಷರಿಯ ಜಪಿಸುತಲಿ
ಸಂಚಿತ ಭಸ್ಮವು ಪರಕೌಷಧಿ ಎಂದು ನಿ
ಶ್ಚಿಂತನು ತಾ ಭಸ್ಮವಿಟ್ಟ ॥೨೨॥

ಆದಿಯ ನುಡಿಯು ಇದುವೆ ಗಾದೆಮಾತಲ್ಲ
ಹೋದರೆ ಹೋಗಿದ್ದರಿಹರು
ನಾದ ಬಿಂದು ಕಳೆಗಳ ಮೀಱಿ ತಪವಿದ್ದ
ಆದಿಯ ಮಂಕನ ತೋಱಿ ॥೨೩॥

ಸರ[1][ವೂ][1]ರದೊಳು ತಲೆಯೂಱಿ ತಪವನಿದ್ದ
ನಿರವ ಕಂಡ ಪ್ರಭುರಾಯ

---

೧ ವ(ಮೂ)

ಪರಮಪುರುಷ ರೇವಣ ಸಿದ್ಧರಾಮಯ್ಯ
[ರಿ]ರವ ತೋಱಿದ[೧][ನು][೧] ಬಸವಗೆ ||೨೪||

ದೇವರು ಬಿಜಯಮಾಡಲು ಮಂಕತಂದೆಯ
ಭಾವವ ಕೇಳಿ ಬಸವನು
ದೇವ ಸಿದ್ಧರಾಮನ ಶಿಷ್ಯಗೀತನು
ಗಾವ ಕೊಱತೆ ಚಿತ್ತೈಸು ||೨೫||

ಮಂಕತಂದೆ ಶಂಕೆಯಿಲ್ಲದೆ ತಪವಿದ್ದ
ಶಂಕರ ನೋಡಿ ಹರುಷದಿಯ
ಸಂಖ್ಯಾತರ ಕೂಡಿ ಶಿವಪೂಜೆಯ ಮಾ[ಡಿ]
ಸುಂಕಿಗ ಸಿದ್ಧರಾಮಯ್ಯ ||೨೬||

ಲಿಂಗಜಂಗಮದ ಪೂಜೆಯ ಮಾಳ್ಪ ಭಕ್ತರ
ಅಂಗವೆಲ್ಲವ ಹೊಱಹಾಕಿ
ಸಂಗನಬಸವಣ್ಣ ತಕ್ಕೊಂಡೆಸಗಿದ ಪ್ರ
ಸಂಗವ ನೀನು ಹೇಳೆಂದ ||೨೭||

ಒಳಯಿಕೆ ಕರೆದುಪಚರಿಪ ನಿನಗೀ ಪರಿ
[ಯಳ]ವಡದೆಲೆ ಬಸವಣ್ಣ
ಹೊಲಬ ಪೇಳು ಹೊಱಹಾಕಿದ ಪಱಿಗಳ
ನೆಲೆಯನೆಂದನು ಸಿದ್ಧರಾಮ ||೨೮||

ಬಂದು ಚಿತ್ತೈಸಿದ ದೇವ[ರ] ವಾಕ್ಯಕೆ
ನಿಂದು ಪುರಾತನರೆಲ್ಲರು
ಬಂದು ಕಂ[೨][ಡುದ][೨] ಹೇಳೆಂದು ಗಜದ ಮೇಲೆ
ಅಂದು ಡಂಗು[೩]ರ[೩] ಸಾರುತಿರಲು ||೨೯||

ಸಾಱಿದ ಗಜವೇಱಿ ಪಡಿಹಾಱಿ ಉತ್ತಣ್ಣ
ಮಾಱಾನದೆ ಬಹುದೆಂದು

---

೧ ರು (ಮೂ) ೨ ಡ(ಮೂ) ೩ ರವನು (ಮೂ)

ಮೀಱಲು ಭೂರಿರುದ್ರಕ್ಷಿಗೆ ಹೊಱಗೆಂದು
ಸಾಱುತ ಬರಲು ಡಂಗುರವ ॥೩೦॥

ಕಟ್ಟಿದುಪ್ಪರಗುಡಿ ಕಳಸ ಕನ್ನಡಿಯಿಂದ
ಪಟ್ಟಣ ಇದಿರುಗೊಳುತಲಿ
ಪಟ್ಟಗದ್ದುಗೆಯ ಮೇಲಿದ್ದ ಬಿಜ್ಜಳರಾಯ
ನಟ್ಟಿದ ಪಡಿಹಾಱರನು ॥೩೧॥

ನೋಡಿದ [೧][ಪಡಿ][೧]ಹಾಱ ಗಾಢದಿಂದಲಿ ಬಂದು
ರೂಢಿಯೊಡೆಯಗೆ ಬಿನ್ನೈಸಿ
ಕೂಡಿದೆರಡು ಲಕ್ಷ ಭಕ್ತರ ಘನವನು
ರೂಢೀಶ ನೋಡಬೇಕಯ್ಯ ॥೩೨॥

ಬಸವರಾಜನ ಕೂಡಿಕೊಂಡು ಸಿದ್ಧರಾಮ
ಪಶುಪತಿ ತ್ರಿಪುರಾಂತಕಗೆ
ವಸುಧೆಗಚ್ಚರಿಯಾಯಿತು ಸದ್ಭಕ್ತರು
ಮುಸುಕಿದರಾ ದೇಗುಲದ ॥೩೩॥

ಏಳುನೂಱೆಪ್ಪತ್ತು ಅವರಗಣಂಗಳು
ಸಾಲೊಪ್ಪೆ ತ್ರಿಪುರಾಂತಕದಿ
ಭಾಳಲೋಚನ ಸಿದ್ಧರಾಮಯ್ಯ ಪ್ರಭುವ[೨][ರ][೨]
ಮೇಳವ ನೋಡುತ ಬಸವ ॥೩೪॥

ನಾಲುವತ್ತೆಂಟುಗಾವುದ ಬಳಸೆಲ್ಲಕ
ಮೂಲ ಸ್ಥಾನವು ತ್ರಿಪುರಾರಿ
ಸಾಲುಮೂಲೆಯ ಹದಿನೆಂಟು ಸಮಯವೆಲ್ಲ
ಮೇಳವ ನೋಡುತ ಬರ[೩][ಲು][೩] ॥೩೫॥

ಕಲ್ಯಾಣಪಟ್ಟಣದೊಳಗಿಹ ಸದ್ಭಕ್ತ
ರೆಲ್ಲರು ಬಂದಾಗ [ಕೂಡೆ]

೧ ಮಣಿ (ಮೂ) ೨ ನು (ಮೂ) ೩ ಲಿ (ಮೂ)

ಬಲ್ಲಿದ ರೇವಣಸಿದ್ಧಯ್ಯ ಪ್ರಭು[1]ರಾಯ[1]
ರಲ್ಲಿ ಕೇಳಿದರು ಬಸವನ ॥೩೬॥

ಬಂದರೆಂದು ಬಸವಣ್ಣ ಬಿನ್ನೈಸಿದ
ನಂದು ಸಿದ್ಧರಾಮನಿಗೆ
ಮುಂದಣಿಯದ ಬಿಜ್ಜಳನ ಕರೆಸಿಯೆನ
ಲಂದು ಬಂದ [ಸಂ]ಭ್ರಮದಿ ॥೩೭॥

ಲಕ್ಷ ಕುದುರೆ ಲಕ್ಷ ಕರಿಘಟೆ ಸಹಿತಲಿ
ಈ ಕ್ಷಿತಿಗೊಡೆಯ ಬಿಜ್ಜಳನು
ಮೋಕ್ಷವ ಕೊಡುವ ಭಕ್ತರು ಬಂದರೆನುತಲ
ಪೇಕ್ಷೆಯಿಂದಲಿ ನಡೆತಂದ ॥೩೮॥

ಬಂದು ಸಾಷ್ಟಾಂಗವೆಱಗಿ ಭಯಭಕ್ತಿಲಿ
ನಿಂದು ಕರಗಳನು ಮುಗಿದ
ಮುಂದಣಿಯದ ಬಿಜ್ಜಳನ ರೇವಣಸಿದ್ಧ
ತಂದು ಸಿದ್ಧರಾಮ[2][ನಡಿಗೆ][2] ॥೩೯॥

ಕೆಡಹಿ ನೆಗಹಿ ಕುಳ್ಳಿರಿಸಿ ರೇವಣಸಿದ್ಧ
ಪೊಡವಿಪಾಲಕ ಬಿಜ್ಜಳನ
ತಡೆಯದೆ ಬುದ್ಧಿ[ಗಲಿಸಿ] ಸಲಹೆಂದಾ
ಮೃಡ ಸಿದ್ಧರಾಮಗೆ ನುಡಿಯೆ ॥೪೦॥

ನಮ್ಮ ಸೇವೆಯ ಮಾಡುವ ಭಕ್ತರುಗಳು
ಕರ್ಮಿಗಳಿವರನ್ಯರೆಂದು
ನಿಮ್ಮ [ಪಟ್ಟ]ಣದಿಂದ ತೆವಱಿ ಬಳಿಕಲಿ ಅ
ಧರ್ಮದಿ ನಡೆದುದೇನೆಂದ ॥೪೧॥

ಹಾಲಕಂಬಿಯ ಮೇಲೆ ಸತ್ತ ಕುಱಿಯ ಮಾಂಸ
ಮೂಳೆ ಸಹಿತ ಹೊತ್ತು ತಹುದ

೧ ಯ ದೇವ (ಮೂ) ೨ ನೆಡೆಯ (ಮೂ)

ಸಾಲುಮೂಲೆ ಹದಿನೆಂಟು ಸಮಯವೆಲ್ಲ
ತಾಳಲಾಜದೆ ಬಂದು ನುಡಿಯೆ ॥೪೨॥

ನುಡಿದ ಮಾತನು ಕೇಳುತ ಹೆಗ್ಗಗೌಡನಿ
ಗೊಡನೆ ಹೇಳಿದನು ಬುದ್ಧಿಯನು
ಅಡಗಿಹ ಮೃಡಶರಣರು ಎಲ್ಲ ನಿನ್ನನು
ಪೊಡವಿ ಮೆಚ್ಚೊಳಕೊ[೧][ಳ್ಳ][೧]ರೆಂದ ॥೪೩॥

ಎಂದ ನುಡಿಗೆ ಬಸವಣ್ಣ ಬಿಜ್ಜಳ ಕೇ
ಳೊಂದು ಮಾ[೨][ತನಿಂ][೨]ತೆಂದ
ಹಿಂದೆ ಮುಂದೆ ನಮ್ಮ ಶರಣರು ನಡೆವುದ
ರಂದವ ಕೇಳೆಂದ ಬಸವ ॥೪೪॥

ಹೆಂಡವ ತಂದೊಬ್ಬನಂಗಡಿಯೊಳು ಮಾಜಿ
ಹೆಂಡದ ಮಾರಯ್ಯನೆನಿಸಿ
ಕಂಡ ಮೃಗವ ಕೊಂದು ಮಾಂಸವ ಮಾಜಿದು
ದ್ದಂಡ ತೆಲುಗಜೊಮ್ಮಯ್ಯ ॥೪೫॥

ಮುಕ್ಕುಳಿಸಿಯೆ ತಂದುದಕ ಮಜ್ಜನಮಾಡಿ
ಸಖ್ಯವಾದ ನಮ್ಮ [೩][ಪಶುಪ][೩]
ಮುಕ್ಕಣ್ಣಗರ್ಪಿಸಿ ವರವನು ಪಡೆದನು
ಧಿಕ್ಕನೆ ಕಣ್ಣಪ್ಪನಂದು ॥೪೬॥

ರಾವಣ ಶಾಕವ ಮಾಡಿ ರಾಮೇಶ್ವರ
ದೇವರಿಗಂದರ್ಪಿಸಲು
ಭಾವದಿ ನೈವೇದ್ಯವಿಟ್ಟು ಪ್ರಸಾದವ
ನೋೞಿಕೊಂಬ ಸಮಯಕ್ಕೆ ॥೪೭॥

ಪಂಚಪಕ್ವಾನ್ನ[೪][ವ][೪] ಷಡುರಸಾಯನಗ[೫][ಳ][೫]
ಪಂಚೈವರು [ತ]ಣಿದಾಗ

---

೧ ೦ಬ (ಮೂ) ೨ ತಿಗಿಂ (ಮೂ) ೩ ಬಸವ (ಮೂ) ೪ ವು (ಮೂ) ೫ ಳು (ಮೂ)

ಸಂಚಿತಾರ್ಥ ಶಿವಗೆಂದು ಸಲಿಸಲಾಗ
ಸಂಚಿತು ಶಿವಗೆಂದು ಬಿಡ[೧][ನು][೧] ॥೪೮॥

ನಾಲಕೆರಡುಲಕ್ಷ ಪ್ರಾಣಿಯ ವಧಿಸಲು
ಕಾಲ ಯಮನು ಕಂಡು ಹೇಸಿ
ಮೇಲೆತ್ತು[೨][ವಂತ][೨] ಕರನಟ್ಟಿ ತರಹೇ[೩][ಳೆ][೩]
ಲಾಲಿ[೪][ಸಿ][೪]ದವರು ಬಂದವನ ॥೪೯॥

ನೋಡಿ ಕುಱುಹ ಕಂಡು ಕೊರಳಿಗೆ ಪಾಶವ
ಹೂಡಿಯೆ ಬಿಗಿದೆಳೆವಾಗ
ಓಡಿಯಳುಕಿ ಹರನನು ಮಱೆವೊಕ್ಕರೆ
ಕೂಡೆ ಕಾಲನು ಬಿಡೆನೆಂದ ॥೫೦॥

ಮೇಲೆಯವನ ಸತಿ ಸುತ ಮಿತ್ರರು ಬಂದು
ಕೂಡೆ ಶಿವಗೆ ಮೊಱೆಯಿಡಲು
ಭಾಳಲೋಚನಗೆ ಮೊಱೆಯನಿಡುತಿರಲಾಗ
ಶೂಲಿಯ ದೂತರು ಕೇಳಿ ॥೫೧॥

ನೆನೆದಾಗ ಶಿವನ ದೂತರು ಬಂದು ನಿಂದಾಗೆ
ಮನ ದೂತರು ಬಿಟ್ಟೋಡಿದರು
ವಿನಯದಿಂದಲಿ ಸಂತೈಸುತಲಾತನ
ಚಿನುಮಯನಿದ್ದೆಡೆಗೊಯ್ದು ॥೫೨॥

ನಂದೀಶ್ವರನಂದು ಶಿವನ ಮುಂದೆ ತಂದು
ನಿಂದಿರಿಸುತಲಂದು ನುಡಿದನು
ಇಂದುಧರನ ಕುಱಿತವ ಮಾಡಿದ ಕರ್ಮ
ಸಂದಿತು ಶಿವಗೆಂದು ಬಿಡಲು ॥೫೩॥

ಅಂದು ಮೊದಲು ಶಿವಗೆಂದು ಮಾಡಿದ ಕರ್ಮ
ದಿಂದಲಿ ಶಿವಪುರಕೈದಿ

---

೧ ಲು (ಮೂ) ೨ ನ್ನಂತಕತರ (ಮೂ) ೩ ಳು (ಮೂ) ೪ ಸ ಮೂ)

ಸಂದ ಪ್ರಮಥರೊಳು ಸುಖದಲಿಪ್ಪರ ನೀನು
ಕುಂದು ಹೆಚ್ಚನು ಆಡಬೇಡ ॥೫೪॥

ಜೀವಧರ್ಮವರ್ಜಿಯದ ಮನುಜರುಗಳು
ತಾವೆ ಮಾಯಾವಶವಾಗಿ
ಅವರನು ಯಮನೊಯ್ದು ಶಿಕ್ಷೆ ಮಾಡುವನೆಂದ
ವಿವರವ ಬಿಜ್ಜಳನೊಡನೆ? ॥೫೫॥

ಎಲ್ಲಿಯ ಸ್ವರ್ಗ ಎಲ್ಲಿಯ ನರಕಗಳೆಂಬ
ಎಲ್ಲಯ ಭಕ್ತರ್ಮುಕುತಿಯ
ಎಲ್ಲಿಯ[1]ದಿ[1]ದನು ಬರೆದುಕೊಂಡಿದ್ದವ
ರಲ್ಲಿಗೊಯ್ವರು ಯಮಭಟರು ॥೫೬॥

ಇಱಿದು [ತಱಿ]ತಱಿದು ತಲೆಗಳ ಚೆಂಡಾಡಿ
ದುಱುದುಱನೆ ಕಾಸಿ ಕಡಿದು
ಒಱಿಒಱಿಲಿ ಬಿಗಿ ಚಿನಿಖಂಡವ ಕೊಯ್ವರು
ಎಱಿವರು ಸುರೆಯ ಬಾಯೊಳಗೆ ॥೫೭॥

ಅಕ್ಕಟಕ್ಕಟ ಬೆಂದ ಹುಣ್ಣ ಕಚ್ಚುವ ನಾಯಿ
ಯಕ್ಕಱಿಂ ಸವಿವ ರೀತಿಗಳು
ಮಿಕ್ಕುದ ಕಾದೆಣ್ಣೆಯೊಳಗದ್ದಿ ಸವಿದವ
ತಿಕ್ಕಿ ಮುಕ್ಕುವರೆಮಭಟರು ॥೫೮॥

ಪಾಪವ ಮಾಡಿದವರನೊಯ್ವ ದಾರಿಯೊ
ಳಾಪತ್ತನೇನ ಹೇಳುವೆನು
ಕೂಪವಲ್ಲಿಲ್ಲವಾಗಿ ಮಾಡಿದ ಕರ್ಮವು
ರೂಪುಗೆಡಿಸಿ ಕಾಡುವುದು ॥೫೯॥

ಮುಕ್ತಿಲೋಕ ಸ್ವರ್ಗಲೋಕಕೆ [ಪೋಗಲು]
ಸಪ್ತದಾರಿಯು ಎಂತಯ್ಯ
ಅತ್ಯಂತ ಧರ್ಮಿಗಳನು ಒಯ್ವ ಪಥದೊಳ
ಗರ್ತಿಯನೇನ ಬಣ್ಣಿಸುವೆ ॥೬೦॥

---

೧ ದಿದು (ಮೂ)

ಛತ್ರ ಚಾಮರವೆತ್ತಿ ಸಕಲುಪಚಾರದಿಂ
ದರ್ತಿಯಿಂ ಭೋಗಪಾತ್ರಗಳ
ಸುತ್ತಲುಘೇ ಚಾಂಗು ಭಲ ಎಂದು [ಸಲೆ] ಪೊಗ
ಳುತ್ತ ಪುಷ್ಪಕದೊಳಗೊಯ್ಯೆ ॥೬೧॥

ಎಂತು ಮಾಡಿದ ಧರ್ಮದಂತವ ನೋಡುತ
ಲಂತವಜೆದು ಕೊಂಡೊಯ್ದು
ಮುಂತಜೆಯದ ಧರ್ಮವ ನಜೆ ಕೆಡಿಸಿದ
ಸಂತಾನಗೇಡಿಯ ತಂದು ॥೬೨॥

ತೋಜೆದ[1][ರಾ][1] ಯಮ ಗಾಜಾದ ದೊರೆಯನು
ತೇಜಿ ಹಾಯಿಕಿ ಸಂಬಳವ
ಮೂಜುಬಾರಿ ವಹಿದೆಗಸಿ ಯಮನು ಕೇಳೆ
ಸಾಜಿ ತೋಜೆದ ಚಿತ್ರಗುಪ್ತ ॥೬೩॥

ಮಂಡಲ ಉಂಟೆ ಮಂಡಲೇಶ್ವರರುಂಟೆ
ಲೆಂಡರು ಭಂಡರು ಉಂಟೆ
ಭಂಡಾರ ಪರಿವಾರವುಂಟೆ ಒಡನಿರ್ದ
ಹೆಂಡಿರ ನೆರವಿ ತಾನುಂಟೆ ॥೬೪॥

ನರಕಿಗಳೊಡನಾಡಿ [ಭವ]ಶರಧಿಗೊಳಗಾಗಿ
ಗಿರಿಯರಸ ಸ್ವರ್ಗಗೆಡಿಸಿ
ದುರುಳರ ಮಾತ ಕೇಳಿದರಿಂದ ಭೂಪರು
ನರಕಕೀಡಾಗುತಲಿಹರು ॥೬೫॥

ನರಕವಿಪ್ಪತ್ತೆಂಟು ಕೋಟಿ ನಿರಯದೊಳು
ಪರಿಪರಿಯಲಿ ವಿಷಾದಿಸುವ
ಪರಧನ ಪರಸ್ತ್ರೀಯರೆ[2][ನ್ನುವ] ಹಿರಿಯರ
ಪಿರಿಯವರ್ಗದಿ ಪರಿಕಿಸದೆ ॥೬೬॥

---

೧ ವಾ (ಮೂ) ೨ ನ್ನದ (ಮೂ)

ಸುರಚಾಪ ತೋಚಿ ತಾನಡುಗುವ ಪರಿಯಂತೆ
ಶರಿರವದನು ನಚ್ಚಿ ಕೆಡದೆ
ಗುರುಹಿರಿಯರ ಪರಿಕಿಸಿ ಕೇಳದೆ ಮುಂದೆ
ನರಕವೆಂದನು ಸಿದ್ಧರಾಮ ||೬೭||

ಮಲಭಾಗದ ಮಡು ಮೂತ್ರಾದಿ ನಾನಾ
ಜಲದ ಭಾಗವು ನೋಡಲಿಕೆ
ಹೊಲಸಿನಟ್ಟುಳಿಗಾಡುಂಬೊಲನೆಂದಿಗಾ
ಗಳವಟ್ಟ ಗುಜಿಪಾತಕಕೆ ||೬೮||

ಕೇಳು ಮಗನೆ ಈ ಸಂಸಾರವ ನಚ್ಚಿ
ಮೇಳದವರ ಮಾತ ಕೇ[1][ಳೆ][1]
ಗಾಳಿಗಿಟ್ಟ ಸೊಡ[2][ರೆನೆ][2] ಸಂಸಾರವಾ
ಮೇಳದವರ ಮಾತ ಕೇಳು ||೬೯||

ಹಿಂದೆ ಗೊಲ್ಲಾಳ ಮಂದೆಯೊಳಗೊಂದು ಹಿಕ್ಕೆಯ
ಅಂದು ಲಿಂಗವೆಂದು ಹಾಲ
ತಂದು ಸುರಿವುತಿರೆ ತಂದೆ ತಾ ಬಂದಂದು
ಅಂದೊದೆಯೆ ಕೊಂದುದಜಿಯ ||೭೦||

ಚೋಳಿಯಕ್ಕನು ರುಚಿಸಿದ ಕೂಳನುಂಡನು
ಚೋಳನೊಳಗೆ ಮೇಳವಾಗಿ
ಓಳಿಯಿಂ ಚೆನ್ನನ ಮನೆಯಂಬಲಿಯನುಂಡು
ಬಾಳುಗೆಟ್ಟುದ ಬಲ್ಲೆಯೆಂದ ||೭೧||

ಶಿಶುಗಳಾಡುತ್ತಲಿ ಮಳಲಕುಪ್ಪೆಯ ಮಾಡಿ
ವಸುಧೆಯೊಳ್ ಲಿಂಗವಿದೆಂದು
ಒಸೆದರ್ಚಿಸೆ ಶಿಶು ಮೃತವಾಗಲಾತನ
ಎಸಗಿದರಂದು ಪುಷ್ಪಕದಿ ||೭೨||

---

೧ ಳಿ (ಮೂ) ೨ ರಿನ (ಮೂ)

ಹಿಂದೆ ನಾಯಟ್ಟಿ ಬರಲು ಹಂದಿ ಕಂಗೆಟ್ಟು
ಮುಂದೆ ಶಿವಾಲ್ಯವ ಪೊಗಲು
ಚಂದದಿ ಗಣಪದವಿಯ ಕೊಟ್ಟು ಶಿವನಾಗ
ಸಂದ ಪ್ರಮಥರೊಳಿರಿಸಿದನು ॥೭೩॥

ಭಸಿತ ರುದ್ರಾಕ್ಷಿ ಲಿಂಗವ ಧರಿಸಿದವರು
ವಸುಧೆಯೊಳಗೆ ಸುಳಿದರೆ
ಮಸುಳಿಸುವುದು ಕರ್ಮ ಶತಕೋಟಿ ಪಾಪವು
ಮಿಸುಕಲಮ್ಮವು ಕೇಳು ರಾಯ ॥೭೪॥

ಭಕ್ತನೆ ದೇವ ದೇವನೆ ಭಕ್ತನೆಂದೀ
ಶಾಸ್ತ್ರಗಳೆಲ್ಲ ಹೇಳುವವು
ಭಕ್ತ ಮಾಡಿದ ಪುಣ್ಯ ಪಾಪವು ಶಿವಗೆನೆ
ಭಕ್ತನು ತಾ ನುತಿಸುವನು ॥೭೫॥

ಎರಡು ಲಕ್ಷವು ತೊಂಬತ್ತೆಂಟುಸಾವಿರ
ಪರಮವ್ರತಿಗಳಿಹ ಪುರವ
ದುರುಳತನದಿ ಕೆಡಿಸದಿರೆಂದು ಗುರು ಸಿದ್ಧ
ನೊರೆದನು ಬಿಜ್ಜಳನೃಪಗೆ ॥೭೬॥

ಕೇಳಿದಾಕ್ಷಣ ತಾ ಹಸವಳಿದುದು ನಿಜ
ದೇಳಿಗೆ ಮನಸಿಂ ತೋಱೆ
ಬಾಲಕ ನಾ ನಿಮಗೆನುತ ಬಿಜ್ಜಳರಾಯ
ಪಾಲಿಸೆನುತ್ತೆಱಗಿದನು ॥೭೭॥

ಎಱಗಿದ ಬಿಜ್ಜ[೧]ಳ[೧] ಕರವನು ಮುಗಿದಿರೆ
ಕುಱುಬರ ಮಾತನು ಕೇಳಿ
ತೆಱನಱಿಯದೆ ಸದ್ಭಕ್ತರ ನಿಂದಿಸಿ
ಗುಱಿಯಾಗದಿರು ಪಾತಕಕೆ ॥೭೮॥

---

೧ ಳ ರಾಯ (ಮೂ)

ಇಂತೆಂದು ಬಲದೇವ ಜಗದೇವ ಬಸವೇಶ
ಮಂತ್ರಿಯು ಬಿಜ್ಜಳನೊಡನೆ
ಕಂತುಮರ್ದನ ಸಿದ್ಧರಾಮಯ್ಯನ ಶಿಷ್ಯನ
ನೆಂತೆಂಬರೆ ಪುರುಷಾರ್ಥಿ ॥೭೯॥

ತನ್ನ ಕಾಯವ ದಂಡಿಸಿ ತಪವಿದ್ದಾತ
ನನ್ಯರ ಪರವನು ಮಾಳ್ಪ
ಮುನ್ನವೆ ಮಂಕತಂದೆಯ ಮಗ ತೋಹಿನ
ಅನ್ವಯ ಹೆಗ್ಗೌಂಡನೊಡನೆ ॥೮೦॥

ಇಹ ಪರವೆರಡು ಮೆಚ್ಚಲು ಹೊಱಹಾಕಿದ
ಇಹಪರವೆರಡಱಿಯಲಿಕೆ
ಇಹದೊಳು ಸಲಿಕೆಗೆ ಸಲಿಸಬೇಕೆನುತಲಿ
ಇಹಪರವೆರಡ ಕೂಡಿದನು ॥೮೧॥

ಕೂಡಿದ ಕಾರಣ ಸಂದುದಗ್ಗದ ಕೀರ್ತಿ
ನಾಡು ನಾಡುಗಳೊಳು ಪರ್ಬಿ
ರೂಢಿಯಱಿಯೆ ರೇವಣಸಿದ್ಧ ಪ್ರಭುವನು
ನೋಡಲು ಸಿದ್ಧರಾಮಯ್ಯನ ॥೮೨॥

ನಾಡ ಕುಱುಬರೆಲ್ಲ ದೂಡಿ ಬಂದು ಹೊಱ
ವಾಡದೊಳಹರೆ ನೋಡೆನಲು
ರೂಢಿಗೇಕೋದೇವ ಮೆಚ್ಚೆ ತಲೆಯನರಿ
ದೀಡಾಡುತ ಬಹೆವೆಂದ ॥೮೩॥

ಆಚಾರವಿಡಿದಿರ್ದವರ ಬಿಜ್ಜಳನು[ಸು]
ವಿಚಾರವಿಲ್ಲದೆ ಹೊಱಹಾಕಿ
ಆಚಾರ್ಯರು ಬಂದರು ಭಕ್ತರು ಸಹ
ನಾಚಿಸುವರೆ ಬಿಜ್ಜಳಗೆ ॥೮೪॥

ಚಪ್ಪನ್ನ ದೇಶದ ಭಕ್ತರೆಲ್ಲರು ಪಿರಿ
ದಪ್ಪ ಸೊನ್ನಲಪುರದಿಂದ

ಒಪ್ಪು ತಪ್ಪಿಗೆ ಸಿದ್ಧಮಲ್ಲೇಶ್ವರ ತಾ
ನಿಪ್ಪ ಸೊನ್ನಲಪುರದಿಂದ ॥೮೫॥

ಮಂಕತಂದೆಯು ಗುರು ಸಿದ್ಧರಾಮಯ್ಯ ಪ್ರಭು
ಶಂಕರ ರೇವಣಸಿದ್ಧ
ಬಿಂಕದಿ ಬಸವಣ್ಣ ಮೊದಲಾಗಿರ್ದ ನಿ
ಶ್ಶಂಕ ಶರಣರೊಪ್ಪುತಿರಲು ॥೮೬॥

ಹಿಂದೆ ಶ್ರೀರಾಮನೊಡೆಯನೆಂದು ಲಂಕೆಯ
ಮುಂದಱಿಯದೆ ಸುಟ್ಟು ಕೆಡಿಸೆ
ನೊಂದರು ಅಖಿಳ ಮಹೇಶ್ವರರಾಕ್ಷಣ
ಇಂದುಧರನು ನೋಡಿ ಮುನಿದ ॥೮೭॥

ಒಂದು ರೋಮವ ಕಿತ್ತು ಧರೆಯೊಳು ಹಾಕಲು
ಬಂದುದಸಿಯ ಲಿಂಗಗಳು
ನಿಂದಾಗ ಕೆಱೆ ಬಾವಿ ಹೂದೋಟವಾಗಲು
ಇಂದುಧರನು ಕೊಟ್ಟ ವರವು ॥೮೮॥

ಇಂದಿನಿತು ಮಹೇಶ್ವರರೆಲ್ಲ[ರ] ನೋವ
ಒಂದು ನೆವದಿ ತಿದ್ದಲೆಂದು
ಬಂದೊಂದು ಸರ[೧][ವೂ][೧]ರದೊಳು ತಪವಿರುತಿರೆ
ತಂದೆ ಸಿದ್ಧರಾಮ ಬಂದು ॥೮೯॥

ತಪವಿದ್ದಡೇನು ಫಲವು ಎಂದು ಸಿದ್ಧೇಶ
ಕೃಪೆಯಿಂದ ಕಲ್ಯಾಣಗಂಡು
ಅಪರಿಮಿತದ ಭಕ್ತರು ಬಸವನ ಕಾಣು
ತಪರಾಧ ಹಿಂಗಿತೆಂದೆಱಗಿ ॥೯೦॥

ಎಱಗಿದ ಮಂಕತಂದೆಗೆ ಪ್ರಭು ರೇವಣ್ಣ
ನುಱುವ ಸಿದ್ಧರಾಮಯ್ಯ

೧ ವ (ಮೂ)

ನೆರೆದ ಪ್ರಮಥಗಣಂಗಳು ಒಪ್ಪಲಾಕ್ಷಣ
ಕರೆ ಮಂಕ ನಿನ್ನ ಭಕ್ತರನು ॥೯೧॥

ಕರೆಯಲಾಕ್ಷಣದಲ್ಲಿ ಶರಣರ ಬೀಳ್ಕೊಂಡು
ಹರುಷದಿಂದಲು ಮಂಕತಂದೆ
ಬರುತಿರೆ ಹಾಲುಮತದ ಗೌಡುಗಳೆಲ್ಲ
ಗುರುವ ಕಂಡುಘೆ ಉಘೆಯೆನಲು ॥೯೨॥

ಗುರುವ ಕಂಡೆವು ಪರದಿರವನು ಕಂಡೆವು
ಹರಶರಣರ ಕಂಡೆವಿಂದಿನಲಿ
ಇರಪರ ಮೆಚ್ಚೆ ಮೆಱಿವೆವೆಂದು ನೆರೆದೆಲ್ಲ
ಗುರು ಮಂಕತಂದೆಗೆಱಗಲು ॥೯೩॥

ಎಱಗಿದ ಶಿಷ್ಯ ಕುಱುಬಲಿಂಗವಂತನು
ಕಱಿಕಂಠ ಸಿದ್ಧರಾಮನಿಗೆ
ಕೊಱತೆಯ ತಂದೆನಲ್ಲ [೧][ವೆ][೧] ಕಲ್ಯಾಣ[ದೊ]
ಉಱುವ ಬಿಜ್ಜಳ ಭಕ್ತರೊಳಗೆ ॥೯೪॥

ತಪ್ಪದು ಶಿಷ್ಯ ಮಾಡಿದ ಪಾಪ ಗುರುವಿಗೆ
ದರ್ಪಣಗೀತೆಯೆಂದೆನುತ
ಒಪ್ಪಿಸುವೆಂ ನಿ[೨][ನ್ನ][೨] ಪ್ರಾಣವ ಗುರುವಿಗೆ
ಅರ್ಪಿತ ಮಾಡುವೆವೆನುತ ॥೯೫॥

ಶ್ಲೋಕ ॥ ರಾಜಾ ರಾಷ್ಟ್ರ ಕೃತಂ ಪಾಪಂ ರಾಜ ಪಾಪ ಪುರೋಹಿತಂ
ಭರ್ತಾರೋ ಸ್ತ್ರೀ ಪಾಪಸ್ಯ ಶಿಷ್ಯ ಪಾಪ ಗುರೋರಪಿ

ಪದ ॥ ಎಂಬ ಶಾಸ್ತ್ರವು ತಪ್ಪದೀ ಲೋಕದೊಳು ಗುರು
ವೆಂಬ ಮಂಕತಂದೆ ಬಂದು
ಶಂಭು ತಾ ಮೊದಲಾದ ಪ್ರಮಥರ ಕರುಣಗ
ಳಿಂಬಾದವೆಂದು ಕಂಕಣವ ॥೯೬॥

---

೧ ದೆ (ಮೂ) ೨ ಮ್ಮ (ಮೂ)

ಕಟ್ಟಿದ ಕಂಕಣವನು ತೋಹಿನ ಹೆಗ್ಗ
ಹುಟ್ಟಿದ ಮಕ್ಕಳುಸಹಿತ
ಸೃಷ್ಟಿಗಧಿಕ ಕಲ್ಯಾಣಪಟ್ಟಣದೊಳು
ದೃಷ್ಟ ದಿಬ್ಬವನಿಕ್ಕಿ ಮೆಱೆ[೧][ದ][೧] ॥೯೭॥

ಅಂದು ತೋಹಿನ ಮುತ್ತನು ಚೇನಿಮುತ್ತನು
ಬಂದು ಕಾಳಮಾದಮುತ್ತ
ನಿಂದ ರಾಮಮುತ್ತನು ಏಕಜಡೆಯ[೨][ಮುತ್ತ][೨]
ಬಂದನಲ್ಲಿಗೆ ಮಲ್ಲಮುತ್ತ ॥೯೮॥

ಘಳಿಲನೆ ಬಂದನಾಕ್ಷಣ ಸೋಯಿಮುತ್ತನು
ಬಿಳಿಯ ಕುಱಿಯ ಸೋಯಿಮುತ್ತ
ಒಲವಿಂದ ಗುರು ಮಂಕತಂದೆಗೆ ಶರಣೆಂದು
ಹೊಳೆವಲಗುಗಳ ಪಿಡಿದರು ॥೯೯॥

ಇತ್ತಲೀ ಹದವಾಗುತ್ತಿರೆ ನಾರಂದ
ಅರ್ತಿಯಿಂದಲಿ ಬೇಗಲೈದಿ
ಕರ್ತುರ್ ಪಾರ್ವತಿಯರಸನ ಓಲಗದೊಳು
ಬಿತ್ತಿದ ಹೊಸ ವಾರ್ತೆಯನು ॥೧೦೦॥

ಗುಡಿ ತೋರಣದಿಂದ ಹಲವು ವಾದ್ಯಗಳವು
[೩]ಬಿ[೩]ಡದ ಪಾತ್ರಭೋಗದಿಂದ
ಮೃಡ ನಿನ್ನ ಭಕ್ತರಿದ್ದೆಡೆಗೆ ತಲೆಯನರಿ
ದಿಡುತ ಬಹುದ ನೋಡೆಂದ ॥೧೦೧॥

ಹೇಳಲು ಕೈಲಾಸದೊಳಗೆಲ್ಲ ನಾರಂದ
ಗೂಳೆಯ ತೆಗೆವ ಚಂದದಲಿ
ಮೇಳವಾಗಿ ರುದ್ರ ಭದ್ರ ಗಣಂಗಳು
ವೇಳೆಯ ಸಾಧಿಸುತಿರಲು ॥೧೦೨॥

---

೧ ವ (ಮೂ) ೨ ವ (ಮೂ) ೩ ಎಡೆಬಿ (ಮೂ)

ನೋಡಲು ಪಾರ್ವತಿ ಸಹಿತ ಗಣಂಗಳ
ಕೂಡಿಕೊಂಡು ಹರುಷದಲಿ
ಆಡುತಾಡುತ ಖೇಚರತ್ವದಿ ಶಿವನಾಗ
ನೋಡಿದನವರ ವೀರವನು ॥೧೦೩॥

ಹಿಂದೊಬ್ಬ ತಲೆಯನರಿದು ಶಿವಗರ್ಪಿಸಿ
ಸಂದಿಸುತ್ತಿರೆ [೧][ಮಿಗೆ][೧] ನೋಡಿ
ತಂದು ತಲೆಯ ಕೈಯ ಪಿಡಿದು ಸಲ್ಲದು
ಎಂದಬ್ಬರಿಸಿ ಕುಳ್ಳಿರಿಸೆ ॥೧೦೪॥

ತಲೆಯನರಿದು ಹಾಯಿಕಲು ಶಿರ ಚಿಗುರಲು
ತಲೆಯನೆನ್ನುತಲರಿದಿಡುತ
ಅಲಸಿದನಱುವತ್ತು ಮೂಱು ತಲೆಗೆ ಶಿವ
ಸಲೆ ಮೆಚ್ಚುತವನ ಕೊಂಡೊಯ್ದ ॥೧೦೫॥

ಅಂದುಂಟು ಹರನು ತಾನಿಂದಿಲ್ಲವೆಂದೆಂಬ
ಸಂದೇಹಿಗಳಿಗೆ ದೃಷ್ಟವನು
ಇಂದು ತೋಱಿ ಮೆಱೆವೆವು ಸಿದ್ಧರಾಮಯ್ಯ
ತಂ[೨][ದೆ][೨] ಭಕ್ತರಹುದೆನಲು ॥೧೦೬॥

ನಿಂದು ಬಸವ ಮೊದಲಾದ ಭಕ್ತರ ನೆನೆ
ದಂದು ಮಂಕತಂದೆಗೆಱಗಿ
ಕುಂದು ಹೆಚ್ಚಿಲ್ಲದಲಂದು ಕಪಿಲಸಿದ್ಧ
ತಂದೆಗೆ ನಮೋ ನಮೋ ಎನುತ ॥೧೦೭॥

ಸಕಲ ಪ್ರಮಥರುತ್ಸಹಗೊಳುತಿರಲಾಗ
ಭಕುತರು ಹೆಚ್ಚಿ ಹಿಗ್ಗುತಿರೆ
ವಿಕಳಗೊಂಡು ಬಿಜ್ಜಳಭೂಪನ ಬಲ
ನಿಕರ ಬೆಚ್ಚಿ ಬೆದಱುತಲಿ ॥೧೦೮॥

---

೧ ಮಗ (ಮೂ) ೨ ದ (ಮೂ)

ಪೊಡವಿಯದುರೆ ಕಡಲ್ ಕದಡಲು ಕೂರ್ಮನಂ
ದಡಿಗದ್ದೆ ಫಣಿಯೊಲ್ಲುಗ್ಗಡಿಸೆ
ಪೊಡೆವ ವಾದ್ಯದ ರವ ಸಿಡಿಲ ಗರ್ಜನೆಯೊಲು
ಮೃಡಶರಣರು ನೋಡುತಿರಲು ॥೧೦೯॥

ಅಬ್ಬರಿಸುತಲುಬ್ಬಿ ಖಡ್ಗವ ಜಡಿವುತ
ಒಬ್ಬರೊಬ್ಬರ ಮುಟ್ಟದಂತೆ
ಇಬ್ಬಗಿ ಮಾಡಿ[೧][ಧಾರೆ][೧]ಯ ಕೊಂಡು ತಲೆಗಳ
ನಿಬ್ಬರದಿಂದರಿದಿಡುತ ॥೧೧೦॥

ಅರಿದ ತಲೆಗಳನು ಪಿಡಿದು ಚೆಂಡಾಡುತ
ಭರದಿಂದ ಬರುತಿರೆ ನೋಡಿ
ನೆರೆ ವೀರವು ಅಹುದೆನುತ ಬಿಜ್ಜಳನೊಳು
ಹರಿಕಾರ ಬಂದು ಬಿನ್ನೈಸೆ ॥೧೧೧॥

ಬಿಡಬೇಡೆನುತ ಕೆಲರು ಕಣಕಾಲನು
ಕಡಿದಾಡುತ ಬರುತಿರಲು
ಮಡದಿಯರೆಲ್ಲ ನಾಲಗೆ ಕಣ್ಣು ಮೊಲೆ ಮೂಗ
ಕಡಿವುತ ಬರುತಿರ್ದರಾಗ ॥೧೧೨॥

ಕೆಡಹಿ ತಲೆಯನೊದೆವುತ ಬರೆ ಮಿದುಳಿನ
ಲಿಡುವ ಖಂಡದಲದ್ಭುತವ
ನಡುವೆ ಶ್ರೋಣಿತ ಮಡು ಎಡೆಯಲಂಗಡಿ ಬೀದಿ
ಗೆಡೆಗೊಡದಾಡುತ ಬರಲು ॥೧೧೩॥

ನೋಡಿದ ಹರನು ಗಾಡಿಗವೆಂದು ಶರಣರ
ಕೂಡೆ ಹೇಳಿದನು ಪಾರ್ವತಿಗೆ
ನೋಡು ನಂದೀಶ ಪ್ರಮಥರೆಂದು ಪುರಹರ
ಗಾಡಿಯಿಂದಲಿ ಹೇಳುತಿರಲು ॥೧೧೪॥

---

೧ ದಾರಿ (ಮೂ)

ಮಂದಮತಿಯ ಬಿಜ್ಜಳಗೂಡಿ ಪ್ರಮಥರು
ಬಂದೇಱಿ ಗೋಪುರಗಳನು
ಗೊಂದಣಿದಮರರು ನೋಡಿ ನಗಲು ಹರ
ಗಂದು ನಾರಂದಗುತ್ಸಹವು ॥೧೧೫॥

ಸುರರೆಲ್ಲರು ಕರಗಳ ಮುಗಿಕೊಳುತಾಗ
ಲಿರದೆಲ್ಲರು ಜಯಯೆನಲು
ಶರಣರು ಇವರಹುದೆನುತಲಿ ಹರಿಯಜ
ಸುರಪತಿ ಸಹ ಉಘೆಯೆನುತ ॥೧೧೬॥

ಪುರಹರನೆ ಶರಣೆನುತಲಿ ಹನ್ನೆರ
ಡರಿದಲೆಯನು ಪಿಡಿಕೊಂಡು
ಶರಣರು ಸಿದ್ಧರಾಮನು ಪ್ರಭು ರೇವಣ
ನಿರಲಾಗ ಮಂಕತಂದೆಗಳು ॥೧೧೭॥

[1][ಬಂ][1]ದು ಕಲ್ಯಾಣದ ಭಕ್ತರ ನೆರವಿಯ
ಮುಂದೆ ಮಂಕತಂತೆ ನಿಂದು
ಹಿಂದೆ ನಿಮ್ಮಯ ಸೇವೆಯ ಭಕ್ತರ ತಲೆ
ಯೆಂದೆತ್ತಿ ತೋಱಿ ಮುಂದಿರಿ[ಸೆ] ॥೧೧೮॥

ಬಂದು ಸ್ತ್ರೀಯರಾರತಿಯೆತ್ತಿ ಪ್ರಮಥರ
ಮುಂದೆ ನಿಂದಿರೆ ಸಿದ್ಧರಾಮ
ತಂದು ತಲೆಯ ಹತ್ತಿಸಿ ಶರಣರ ಪದ
ವ್ರಂಕೆಱಗಿ ನಿಲಿಸಿದನು ॥೧೧೯॥

ನೋಡಿ ಬಿಜ್ಜಳನಚ್ಚರಿವಟ್ಟು ಬಸವನ
ಕೂಡೆ ನುಡಿದ ನಿಮ್ಮ ಘನವ
ನಾಡಾಡಿಗಳಿಗಘಟಿತವೆಂದು ರಾಯ ತಾ
ನೋಡಲಮ್ಮದೆ ಎಱಗಿಧನು ॥೧೨೦॥

---

೧ ತಂ (ಮೂ)

ರಾಯನೆಱಗಲಾಗಿ ನೋಡಿ ಕೊಂಡೆಗರೆಲ್ಲ
ಬಾಯ ಬೀಯಗ ಮುಱಿದಂತೆ
ಕಾಯಯ್ಯ ನಿಮ್ಮ ಶರಣರ ಕೃಪೆಗಳಿಂದ
ರಾಯ ಎನುತ ಕೊಂಡಾಡೆ ॥೧೨೧॥

ಹದಿನೆಂಟು ಸಮಯವೆಲ್ಲವು ಗುಡಿಗಟ್ಟಿತು
ಸದುಭಕ್ತರು ತಮತಮಗೆ
ಇದು ಹೊಸತೆನುತಲಿ ಕಳಸ ಕನ್ನಡಿ ಸಹಿ
ತಿದಿರುಗೊಂಡರು ಸಂಭ್ರಮದಿ ॥೧೨೨॥

ಕಲ್ಯಾಣಪಟ್ಟಣದೊಳು ಗುಡಿಗಟ್ಟಿತು
ಎಲ್ಲರು ನೋಡಲೈದಿದರು
ಬಲ್ಲಿದ ಬಿಜ್ಜಳರಾಯನ ದಳವೆಲ್ಲ
ನಿಲ್ಲದೋಡಿದರು ವಹಿಲದಿ ॥೧೨೩॥

ಇತ್ತಲು ಜಯವಂತರು ಜಯವಾದುದು
ಇತ್ತ ಹರುಷ[1][ವತ್ತ][1] ದುಃಖ
ಇತ್ತ ಸಂತೋಷವು [2]ಅತ್ತ[2] ಚಿಂತಾತುರ
ಒತ್ತುತಿರಲು ಬಿಜ್ಜಳ[ನ] ॥೧೨೪॥

ಇತ್ತಲು ನಂದಿಯ ಧ್ವಜವು ಪತಾಕೆಯ
ನೆತ್ತಿ ಕಳಸ ಕನ್ನಡಿಯ
ಸುತ್ತ ಪಂಚ[3][ಮಾ][3]ವಾದ್ಯ ಗುಡಿ ಸಹ ಭಕ್ತರು
ಎತ್ತಿದರಾರತಿಗಳನು ॥೧೨೫॥

ನೆರೆದ ಪ್ರಮಥರೊಳು ಹಿರಿಯ ರೇವಣಸಿದ್ಧ
ಶರಣಸಂಗತಿಯ ಕೇಳೆನಲು
ಒರೆದನು ಬಿಜ್ಜಳನೊಳು ಪೂರ್ವಕಥನವ
ನೆರೆದ ಗಣಂಗಳ ಮುಂದೆ ॥೧೨೬॥

---

೧ ವಂತ (ಮೂ) ೨ ಅಂತ (ಮೂ) ೩ ಮ (ಮೂ)

ಕೂನಪಾಂಡ್ಯನನಾ ಗುರುಗಳು ನೆರೆದೆಲ್ಲ
ಕೂನ ಮಾಣಿಸಲುಬೇಕೆಂದು
ನಾನಾ ಶಾಸ್ತ್ರಂಗಳಿಂದ ಜಪಿಸುತಿರೆ
ಕೂನಿನಿತು ಘನವಾಗಿರಲು ॥೧೨೭॥

ಹೀನಗಂಡು ನುಡಿದಳು ಗುರುಗಳನೆಲ್ಲ
ಮಾನಿನಿ ಕೇಳಿ ಹೇಳಿದಳು
ನ್ಯೂನದಿ ನಮ್ಮಯ ಗುರು ನೋಡಿಮಾದರೆ
ನೀನಿವರ[ನು] ಶೂಲಕಿಕ್ಕು ॥೧೨೮॥

ತಪ್ಪದೆ ಶೂಲಕಿಕ್ಕುವೆನೆನಲಾ ಸತಿ
ಸರ್ಪಭೂಷಣನ ಭಕ್ತರನು
ಒಪ್ಪಿ ಕರೆಸಿ ಬೆನ್ನ ಮುಟ್ಟಲಾಕ್ಷಣ ಮಾಣೆ
ಒಪ್ಪಚ್ಚಿ ಹಜಿದುದಾತನಿಗೆ ॥೧೨೯॥

ಮಂಡಲಾಧಿಪ ಕೇಳ್ಗೆ ಪಾಂಡ್ಯಭೂಪನ
ನಂಡಲೆವತಿ ರೋಗಗಳು
ಕಂಡಾಕ್ಷಣ ಹಜಿಯಲು ಗುರುಗಳನೆಲ್ಲ
ತಂಡತಂಡದ ಶೂಲಕಿಕ್ಕಿ ॥೧೩೦॥

ಶ್ವೇತನೆಂದೆಂಬ ನೃಪಾಲನೋರ್ವನು ತಾ
ಭೂತನಾಥನ ನಜಿ ಭಜಿಸಿ
ಕಾತರಿಸೆಮನು ಬಂದೆಳೆಯಲವನ ಬಲ
ಘಾತಿಗೆಟ್ಟುದನು ನೀನಜಿಯ ॥೧೩೧॥

ದೇವನೆ ಭಕ್ತ ಭಕ್ತನೆ ದೇವನೆಂಬೆ[ವ]
ಭಾವಶಾಸ್ತ್ರಗಳು ಹೇಳುವವು
ಭಾವಿಸಿ ಭಕ್ತ ಮಾಡಿದ ಕರ್ಮ ಶಿವಗೆನೆ
ದೇವ ತಾನೆ ಪಾಲಿಸುವನು ॥೧೩೨॥

ಉನ್ನತಧರಧುರ ಬವರವ ಗೆಲುವರೆ
ತನ್ನ ದೈವದಲಾಗದೆಂದು

ಪನ್ನಗಧರನ ಕುಱಿತು ತಪವಿದ್ದಾತ
ತನ್ನ ಮನದಲಿದ್ದನಱಿಯ ॥೧೩೩॥

ಮುನ್ನಲರ್ಜುನ ತಪವಿರೆ ಶಿವ ಮೆಚ್ಚಿಯೆ
ತನ್ನ ಪಾಶುಪತಾಸ್ತ್ರವೀಯೆ
ಬನ್ನಬಡಿಸಿ[ದ] ಕೌರವ ಭೀಷ್ಮ ದ್ರೋಣನು
ಕರ್ಣ ದುಶ್ಯಾಸನೆಂ[1][ಬರ][1]ನು ॥೧೩೪॥

ಇಂತು ಬಿಜ್ಜಳ ಶಿವಶರಣರ ಮಹಿಮೆಯ
ನಂತ ಉಂಟದನೇನ ಪೇಳ್ವೆ
ಕಂತುಮರ್ದನ ಸಿದ್ಧರಾಮನ ಭಕ್ತರ
ನಂತಿಂತೆಂದರೆ ನರಕ ॥೧೩೫॥

ದೇವ[2][ರೆ][2] ಹಾಲುಮತದ ಗೌಡುಗಳೆಂದು
ದೇವರು ಮಮಕರಿಸಿದಿರಿ
ಆವ ಕೊಱತೆಯಿಲ್ಲದಿರಲುದ್ದದ ಮಾತು
ದೇವ ಚಿತ್ತೈಸು ಬಿಜ್ಜಳನ ॥೧೩೬॥

ವಚನ ॥
ಇಂತೆಂದು ಸಿದ್ಧರಸಡಣಾಯಕರು ಬಲದೇವಡಣಾಯಕರು ಸೊಡ್ಡಳಬಾಚರಸರು ಬಸವಡಣಾಯಕರು ಸಹವಾಗಿ ಎದ್ದು ಬಿಜ್ಜಳರಾಯನ ಕೈವಿಡಿದು ಪ್ರಭುದೇವರು ರೇವಣ ಸಿದ್ಧಯ್ಯ ಸಿದ್ಧರಾಮಯ್ಯದೇವರು ಒಳಗಾದ ಅಸಂಖ್ಯಾತರು ಮಹಾಭಕ್ತರುಗಳಿಗೆ ವ್ಯೆಯಿಕ್ಕಿ ಸಾಷ್ಟಾಂಗದಂಡವಿಕ್ಕಿರಲು ಆ ಮಂಕತಂದೆಗಳ ಕರೆದು ಕೈವಿಡಿದೆಬ್ಬಿಸಿ ಛಪ್ಪನ್ನದೇಶ ಹದಿನೆಂಟು ಪಟ್ಟಣದವರು ಉಭಯ ನಾನಾದೇಶ ಸೆಟ್ಟಿಪಟ್ಟಣಕ್ಕೆ ಸಲುವ ಭಕ್ತರಾದರ ಕೈವಿಡಿದು ತೆಗೆದುಕೊಳ್ಳಿ ಎಂದು ಸಿದ್ಧರಮಯ್ಯ ಚಿತ್ತೈಸಲಾಗಿ ನಾನಾದೇಶ ಸೆಟ್ಟಿಪಟ್ಟಣದವರು ಹದಿನೆಂಟುಸಮಯದವರು ಎದ್ದು ಬಂದು ಬಿಜ್ಜಳನಿಹ ತಾನೀ ಮಹಾಮಹತ್ತಿಂಗೆ ಅಸಂಖ್ಯಾತರಿಗೆ ಪ್ರಮಥಗನಣಂಗಳಿಗೆ ಸಾಷ್ಟಾಂಗವೆಱಗಿ ಶರಣಾರ್ಥಿಯಂ ಮಾಡಿ ನಿಂದು ಕೈವಿಡಿದು ಇರುತ್ತಿರಲಾಗಿ ರೇವಣಸಿದ್ಧೇಶ್ವರ ಬಂದು ವಿಭೂತಿಯ ಧರಿಸಿಯೆಂದು ಸಿದ್ಧರಾಮೇಶ್ವರಗೆ ನಿರೂಪಿಸಲು ಬಿಜ್ಜಳ ಸಹವಾಗಿ ಎಲ್ಲರಿಗೆ ವಿಭೂತಿಯನಿಟ್ಟು ಶಿವ ಬಳಿಕ ಹಾಲಮತದ ಗೌಡುಗಳಂ ಕರೆದು ಬಿಜ್ಜಳನೊಂದು ಹಸ್ತಮಂ ಪಿಡಿದು ಉಭಯ ನಾನಾದೇಶ ಒಂದು ಹಸ್ತಮಂ ಪಿಡಿದು ಇವರು ನಮ್ಮಂಥವರುಯೆಂದು ಸಿದ್ಧರಾಮೇಶ್ವರಂಗೆ ಬಿನ್ನಹಂ ಮಾಡಿ ಕಳುಹಿಸಿಕೊಂಡು ಹೋದರರದೆಂತೆಂದರೆ

---

೧ ಬುವ (ಮೂ) ೨ ರ (ಮೂ)

ಪದ ॥

ಅತ್ತ ಹರನು ಕೈಲಾಸಕೈದಿ ಪುರ
ದತ್ತಲು ಗುಡಿಗಟ್ಟೆನಲು
ಇತ್ತ ಸತ್ಯಶರಣರು ಪ್ರಮಥರು ಮುಳುಗಿ
ಭಕ್ತಿಯಲುಘೆಯೆನುತಿರಲು ॥೧೩೭॥

ಅಚ್ಚರಿಯನು ನೋಡಿರೆ ಸಿದ್ಧರಾಮಯ್ಯ
ಬೆಚ್ಚನವರ ತಲೆಗಳನು
ನುಚ್ಚು ನೂಱಾಗಿಹ ಕರ ಕಾಲುಗಳೊಳು
ಅಚ್ಚೊತ್ತಿದವ್ಯೆ ತಂದೆ ಎನುತ ॥೧೩೮॥

ಅವರ ಕರೆದು ಸಿದ್ಧರಾಮಯ್ಯ ಪ್ರಭು
ರೇವಣಸಿದ್ಧನು ನಿಜಗುಣನು
ಶಿವನು ಕಪಿಲಸಿದ್ಧಮಲ್ಲೇಶ ಹಸಿದನು
ಸವಿವನು ಭೋಜನವೆನಲು ॥೧೩೯॥

ಹೇಳಲಾಕ್ಷಣದಲ್ಲಿ ಹಾಲಮತದ ಕಂಬಿ
ಮೇಲೆ ಮೇಲೆ ಬಂದು ನಿಲಲು
ವೇಳೆಯಾಯಿತು ಲಿಂಗಜಂಗಮ ಹಸಿದರೆಂ
ದಾ ಲಲನೆಯರೆಡೆ ಮಾಡಿ ॥೧೪೦॥

ಸುತ್ತಲು ತೆರೆ ಸೀರೆಯ ಕಟ್ಟಿ ಭಕ್ತರು
ಎತ್ತಿದರುಪ್ಪರಗುಡಿಯ
ಕರ್ತುವೆ ಗತಿಯೆಂಬ ಹಾಲಮತದವ
ರುತ್ತಮಿಕೆಯನೇನೆಂಬೆ ॥೧೪೧॥

ಹಾಲಮತದ ತೋಹಿನ ಹೆಗ್ಗನರಸಿ ತ್ರಿ
ಶೂಲಿ ಸಿದ್ಧರಮಗೆಱಗಿ
ವೇಳೆಯಾಯಿತು ಬಾಲಕರನು ಭಕ್ತರ
ಪಾಲಿಸೆನುತಲೆಱಗಿದಳು ॥೧೪೨॥

ಹನ್ನೆರಡು ತಲೆಯನ್ನು ಅರಿದವರನ್ನು
ಮನ್ನಿಸಿ ಭಕ್ತರ ಮಾಡಿ

ಗನ್ನಘಾತಕವರ್ಜಿತದಿ ನಡೆಯೆ ನೀವು
ಮುನ್ನಿನಿಂದಲು ಮಿಗಿಲಹರಿ ॥೧೪೩॥

ಎಂದು ಬುದ್ಧಿಯ ಪೇಳುತ ಸಿದ್ಧರಾಮಯ್ಯ
ಚಂದದಲೆಡೆಮಾಡಿದರು
ಬಂದು ಮಂಕ ಸಿದ್ಧರಾಮಗೆಜಿಗಿ ಕರೆ
ತಂದ ಜಂಗಮಭಕ್ತರನು ॥೧೪೪॥

ಕರ ಹಸಿದನು ಕಪಿಲಸಿದ್ಧಮಲ್ಲನು ಎಂ
ದುರವಣಿಸಿಯೆ ಹರಿತರಲು
ಇರವನು ಕಾಣುತ ಶರಣೆಂದೊಳಯಿಕೆ
ಕರವನು ಹಿಡಿದು ಕುಳ್ಳಿರಿಸಿ ॥೧೪೫॥

ಭಕ್ತಿಯಿಂದ ಪಾದಾರ್ಚನೆಯನು ಮಾಡಿ ತಾ
ನೊತ್ತಿಲಿ ಕುಳಿತು ಹರುಷದಿ
ಉತ್ತಮಕ್ಷೇತ್ರವಿದಪ್ಪುದಾಗಿ ನೀವು
ಸತ್ಯವಿಡಿದು ನೀವು ಬದುಕಿ ॥೧೪೬॥

ಶಂಕು ಘಂಟೆ ಜಾಗಟೆ ವಚನಗಳಿಂದ
ಶಂಕರನನು ಪೂಜೆ ಮಾಡಿ
ಮಂಕತಂದೆ ಬಸವಣ್ಣನೊಳಗಾದ ಅ
ಸಂಖ್ಯಾತರ ಕೂಡಿಕೊಂಡು ॥೧೪೭॥

ಲಿಂಗಜಂಗಮ ಆರೋಗಣೆ ಮಾಳ್ಪ ಸು
ಸಂಗವ ಕೇಳಿ ಬಸವನು
ಮಂಗಳವಾಗಿ ಸುಳಿವ ಸಿದ್ಧರಾಮನ
ಸಂಗವ ಮಾಡಿಯೆ ಬದುಕಿ ॥೧೪೮॥

ಬಸವ ಎಂದರೆ ಪಾಪ ಓಡೂದು ಬಸವಯ್ಯ
ಬಸವ ಎನಲು ತಾಪ ಹರಿಗು
ಬಸವನ ನೆನೆದರೆ ಹೆಣನೆದ್ದು ನಡೆದವು
ಬಸವ ಎಂದರೆ ಭಯವಿಲ್ಲ ॥೧೪೯॥

ಇದಕ್ಕೆ ವಚನ ॥

ಉಪಪಾತಕ ಕೋಟ್ಯನುಕೋಟಿಯ ಮಾಡಿದ ಕರ್ಮಂಗಳು ಒಬ್ಬ ಶಿವಶರಣನ ಅಂಗಳವ ಕಂಡಲ್ಲಿ ಅಳಿದುಹೋಹವು ನೋಡಾ ಅದೆಂತೆಂದರೆ ಶಿವಶರಣರ ಅಂತರಂಗದಲ್ಲಿ ಶಿವನಿಪ್ಪನು ಶಿವನಿದ್ದಲ್ಲಿ ಕೈಲಾಸವಿಪ್ಪುದು ಕೈಲಾಸವಿದ್ದಲ್ಲಿ ಅಷ್ಟಷಷ್ಟಿಕೋಟಿ ತೀರ್ಥಂಗಳು ರುದ್ರಗಣಂಗಳಿಪ್ಪವು ಶಿವನೊಲಿದಲ್ಲಿ ಇನಿತು ನೆಲಸಿಪ್ಪವಯ್ಯ ಇಂತಪ್ಪ ಶರಣ ಬಸವಣ್ಣನ ಅಂಗಳವ ಕಂಡೆನಾಗಿ ಕಂಗಳಿಗೆ ತೃಪ್ತಿಯಾಯಿತ್ತು ಕಾಣಾ ಸಿದ್ಧರಾಮಯ್ಯ

ಪದ ॥

ಇಂತು ಬಸವನೊಳಗನು ಕಂಡವರನು
ಎಂತೆಂಬೆ ಮುಕ್ತಿಸಾಧನವು
ಮುಂತೆ ಯಮನ ಬಾಯ ಟೊಣೆದು ಕಪಿಲಸಿದ್ಧ
ನಂತು ಕಾಬ[ರು] ನಿಶ್ಚಯವು ॥೧೫೦॥

ಇಂತು ಬಸವನೊಳಗನುಭವ ಮಾಡಿ ಮ
ಹಂತರಾರೋಗಣೆಗೆಯ್ಯೆ
ಸಂತೈಸಿ ಅವರ್ಗೆ ವಿಭೂತಿವೀಳೆಯ ತಂದು
ಕಂತೆಗಳನು ಮಂಕ ತಂದು ॥೧೫೧॥

ಲಕ್ಕದ ಮೇಲೆ ತೊಂಬತ್ತಾಱುಸಾವಿರ
ಮುಕ್ಕಣ್ಣನ ಜಂಗಮವು
ಇಕ್ಕಿದ ಅಮೃತಾನ್ನವನುಂಡು ಸಿದ್ಧನ
ನಕ್ಕಱಿಂ ಹರಸುತ್ತೈದಿದರು ॥೧೫೨॥

ದೇವರು ಬಳಲಿದಿರೆನುತಲಿ ಮಂಕಯ್ಯ
ನೋವಿ ಜಂಗಮರ ಸಂತೈಸಿ
ಭಾವಜಹರರೆಲ್ಲರು ಬೀಳುಕೊಂಡಾಗ
ಪಾವನಂಗನು ಸಿದ್ಧಗೆಱಗಿ ॥೧೫೩॥

ಸಿದ್ಧರಾಮಯ್ಯ[೧][ಗೆ][೧] ಪ್ರಭುರಾಯ ರೇವಣ
ಸಿದ್ಧಯ್ಯಗೆ ಮಂಕತಂದೆ
ಉದ್ಧರಿಸಿದಿರಿ ನಮ್ಮನು ನೀವೆನುತಲಿ
ಗದ್ದುಗೆಗೆನುತ ಕಂಬಳಿಯ ॥೧೫೪॥

---

೧ ನು (ಮೂ)

ಇತ್ತ ಮಂಕ ಶರಣಾರ್ಥಿ ಮಾಡಲು ನೋಡಿ
ಹತ್ತಿರೆ ಕರೆದು ಕುಳ್ಳಿರಿಸಿ
ಸತ್ಯ ನಿನಗೆ ಪರಪುರಾಷಾರ್ಥಿ ನಿನ್ನಯ
ಭಕ್ತರ ಕರೆದು ತೋಱಿನಲು ॥೧೫೫॥

ಹೆಗ್ಗಗೌಡನು ಆತನ ಸತಿಸುತರನು
ಅಗ್ಗಳರನು ತಂದು ತೋಱಿ
ಸಿಗ್ಗಾಗಿ ಪರದೈವವ ಕಂಡರೆ ನೀವು
ಮಗ್ನವಾಗಿಹಿರಿ ನಮ್ಮೆಡೆಯ ॥೧೫೬॥

ಸೋತು ಬಂದವಳೀತಗೆ ಒಬ್ಬ ರಾಕ್ಷಸಿ
ನೀತಿಯನಱಿಯದೆ ನಡೆದು
ಈತನಿಂದಪಕೀರ್ತಿ ಬಂದುದು ನಿಮ್ಮಿಂದ
ಲೀತಗಾಯಿತು ಮುಕ್ತಿಯೆಂದ ॥೧೫೭॥

ಹಾಲುಮತದ ಗೌಡುಗಳನೆಲ್ಲರನಿಂದು
ಪಾಲಿಸಿ ಪಾವನ ಮಾಡಿ
ಮೇಲೆ ನಮ್ಮ ಹೆಣ್ಣುಗಂಡಿಗೆ ಕೊಳುಕೊಡೆ
ಸಾಲೈದು ಹೊನ್ನಿನ ತೆರವು ॥೧೫೮॥

ಐದು ಹೊನ್ನಿನೊಳಗಿಪ್ಪ ಪಣವನು ತೆಗ
ದೈದೆ ಸಿದ್ಧಮಂಕಗೆಂದು
ಆಲಿಸಿ ಕಲ್ಯಾಣಮಾಡಿದವನ ಮಿಗೆ
ದೇವ ಮಂಕ ಸಲಹುವನು ॥೧೫೯॥

ಎಂದು ಕಟ್ಟಳೆ ಮಾಡಿ ಸಿದ್ಧರಾಮನು ನಿಮ್ಮ
ಹಿಂಡಿಗೊಂದು ಕಪಿಲೆಗಳ
ತಂದುಕೊಡಲು ಐದರೊಳಗೊಂದು ಕೊಟ್ಟವ
ಗಂದವಾಯಿತು ಸಿದ್ಧ ಹರಸಿ ॥೧೬೦॥

ಈ ಪರಿ ಕುಳದೆಱಿಗೆಯ ಕಟ್ಟಳೆ ಮಾಡು
ಮಾಪತಿ ವರದ ಸಿದ್ಧಯನು

ರೂಪುದೋಟಿ ಮಂಕತಂದೆಗೆ ದಾಯದಿ
ಪಾಪ ಹರಿಯೆ ಮಲ್ಲನಲ್ಲಿ ॥೧೬೧॥

ಹರಸಿ ವಿಭೂತಿಯ ಕರೆವೆನೆಂದು ಸಿದ್ಧ
ಕರೆ [1][ತಂ][1]ದ ಮಂಕತಂದೆಯನು
ಕರೆಸಿ ಕೂಡಿ ಹಾಲಮತದ ಗೌಡರ
ನಿರದೆ ತಂದನು ಮಂಕನೆಡೆಗೆ ॥೧೬೨॥

ಬಾರೊ ತೋಹಿನಮುತ್ತ ಬಾರೊ ಚೀನಿಮುತ್ತ ನೀ
ಬಾರೊ ಕಾಳಮಾದಮುತ್ತ
ಬಾರೊ ರಾಮಮುತ್ತ ಏಕಜಡೆಯ ಮುತ್ತ
ಬಾರೊ ಮಲ್ಲಮಾದಮುತ್ತ ॥೧೬೩॥

ಬರುತವರೊಳಗೊಬ್ಬನು ಮಾಯಿಮುತ್ತನು
ಗುರು ನಮ್ಮ ಮಂಕಯ್ಯಗೆನುತ
ಸರಸರನೊಂದು ಕಂಬಳಿಯ ನೆಯಿದು ತಂದು
ಗುರುವಿನ ಮುಂದಿರಿಸಿದನು ॥೧೬೪॥

ತನ್ನ ಭಕ್ತರ ಕರೆತಂದು ಮಂಕತಂದೆ
ಮನ್ನಿಸೆನುತಲ[2][ಡಿ][2]ಗೆಡಹಿ
ಇನ್ನು ನೀ ಕೊಟ್ಟುದೆ ವರ ಇಟ್ಟುದೆ ಶಾಪ
ಎನ್ನ ಬಿನ್ನಪವ ಚಿತ್ತೈಸು ॥೧೬೫॥

ಸಿದ್ಧಯ್ಯನೆಲ್ಲರ ಕರೆದು ವಿಭೂತಿಯ
ಮುದ್ದು ನಮ್ಮನು ನೆನೆದಿಡಲು
ಹೊದ್ದಲಮ್ಮವು ತೊನ್ನು ತುರಿ ವ್ಯಾಧಿ ಬಾಧೆಯು
ಸಿದ್ಧಿಯೆನುತ ಹರಸಿಡಲು ॥೧೬೬॥

ಹಾಲುಮತದ ಗೌಡುಗಳಿಗೆ ವಿಭೂತಿಯ
ಪಾಲಿಸೆನುತ ಹರಸಿಡಲು

---

೧ ಎಂ (ಮೂ) ೨ ಡ (ಮೂ)

ಮೇಲಾಗಿ ಬದುಕಿ ಆಚಾರವಿಡಿದು ಮಂಕ
ಹೇಳಿದಂತಿರಿ ನೀವೆಂದ ॥೧೬೭॥

ಮರುಳು ಮಂಕಗೆ ಶಿವನೊಳಿದ ಕರುಣದಿಂದ
ಸರ[1][ವೂ][1]ರದೊಳು ಬಂದು ನೆಲಸಿ
ಇರವ ತೋಱೆ ಸಲಹಿದ ಮಂಕತಂದೆಯ
ಪರಮ ಗುರುವೆ ಸಿದ್ಧರಾಮ ॥೧೬೮॥

ಇರಪರವಱೆಯದೆ ಪರಮಪುರುಷಾರ್ಥಿ ನೀ
ನಿರುತಿರು ಸುಖದಿಂದಲೆನುತ
ಕರೆದು ಕರುಣದಿಂದ ಉಡುಗೊಱೆಗೊಡಲಾಗ
ಕರುಣದಿ ಕೈ ಕೊಳುತೆಱಗಿ ॥೧೬೯॥

ಎಱಗೆ ನೀ ಮರುಳ ಮಂಕ ಕುಱುಹಾಗಬೇಕೆಂದು
ಕರವ ಮುಗಿದು ಸಿದ್ಧೇಶ
ಅಱೆಮರುಳೆ ಮಂಕ ಬಾರೆಂದು ಸಿದ್ಧೇಶ
ಕಱೆಕಂಠಮಲ್ಲನ ನೆನೆದ ॥೧೭೦॥

ದೇವ ಬಿನ್ನಹ ಎಂದು ಮಂಕತಂದೆಯು ತನ್ನ
ದೇವ ಸಿದ್ಧೇಶ್ವರಗೆಱಗಿ
ಈವ ಕಾವ ರೇವಣ ಸಿದ್ಧರಾಮಗೆ
ದೇವಮುದ್ರೆಯನೊತ್ತಿ ಸಲಹಿ ॥೧೭೧॥

ಎಂದು ಬಿನ್ನೈಸಲು ಸಿದ್ಧರಾಮನು ಒಲ
ವಿಂದಲು ಧ್ಯಾನಿಸಿ ನೋಡಿ
ಇಂದು ಮೊದಲು ನಮ್ಮ ಸೀಮೆಯೊಳಿಹು
ದೆಂದು ಲಿಂಗವಿತ್ತು ಮುದ್ರೆಯೊತ್ತಿ ॥೧೭೨॥

ಇಟ್ಟ ಗಂಧವ ಮೂಱುಬೊಟ್ಟಿಂದಲಿ ತೆಗ
ದಿಟ್ಟೊತ್ತಿ ಬರೆದ ಕಂಥೆಯೊಳು

---

೧ ವ (ಮೂ)

ತಟ್ಟುಮುಟ್ಟು ಮಾಡಿದಾಗಲವರ ಕುಲ
ನಷ್ಟವಹುದು ಸತ್ಯವೆಂದ ॥೧೭೩॥

ಕೆಟ್ಟವರಿಗೆ ತೊನ್ನು ಹುಟ್ಟಿದವಗೆ ಬಾಧೆ
ಮುಟ್ಟುತಟ್ಟು ಬಂದೆಡೆಯೊಳು
ಮುಟ್ಟಿ ಕಪಿಲಸಿದ್ಧಮಲ್ಲೇಶನ ನೆನ
ದಿಟ್ಟು ವಿಭೂತಿಯನಿಡಲು ॥೧೭೪॥

ಹೊದ್ದವು ಮುನ್ನ ಅಱುವತ್ತು ವ್ಯಾಧಿಯು
ಸಿದ್ಧನ ನೆನೆ[೧][ದು][೧]ಭೂತಿಯನು
ಮದ್ದು ಇದೆಂದು ದಿನಪ್ರತಿ ಧರಿಸಲು
ಸಿದ್ಧಿಯಹುದು ನೆನೆದುದಕೆ ॥೧೭೫॥

ಆಱಿವಂತೆ ಮೂಱುಲೋಕಕೆ ಕುಱುಹೊಂದಿ[ದ]
ತೆಱಿನ ಪೇಳಿದ ಸಿದ್ಧರಾಮ
ನೆಱಿನಂಬಿ ಮನದೊಳು ಕಱಿಕಂಠ ಸಿದ್ಧನೆಂ
ದಱಿದು ಮಂಕತಂದೆ ಎಱಗೆ ॥೧೭೬॥

ಸಿದ್ಧರಾಮನು ಪ್ರಭು ರೇವಣಸಿದ್ಧಯ್ಯ
ಇದ್ದ ಭಕ್ತರುಗಳ ಕರೆಸಿ
ಗೆದ್ದಿರಿ ಬಿಜ್ಜಳನಲ್ಲಿ ಪವಾಡವ
ಸಾಧ್ಯ ಶಾಸನವಿದು ನಿಮಗೆ ॥೧೭೭॥

ಬುದ್ಧಿಗಲಿಪ ವೇಳೆಗೆ ತೋಹಿನ ಹೆಗ್ಗ
ಎದ್ದು ಬಿನ್ನಹವ ಮಾಡಿದನು
ಗೆದ್ದನು ಮಂಕತಂದೆಯು ತಪದಲಿ ನಮ್ಮ
ನುದ್ಧರಿಸಿದನೆಂದೆಱಗಿ ॥೧೭೮॥

ಪರಿಭವದಲಿ ಬಂದು ನರಜಲ್ಮದಲಿ ಹುಟ್ಟಿ
ಇರಪರದಲಿ ಕೆಟ್ಟವರ

---

೧ ದ (ಮೂ)

ಗುರು ಸಿದ್ಧಮಂಕಯ್ಯ ತಪವಿದ್ದು ನಮ್ಮನು
ಕರುಣದಿ ಕುಲಜರ ಮಾಡಿ ॥೧೭೯॥

ಸಲಹಿದ ಕರುಣದಿ ಒಲಿದು ಮರುಳು ಮಂಕ
ಕಲುಹೃದಯರನೆಲ್ಲ ತಿಳುಹಿ
ಸಲುವುದು ಶಿವಭಕ್ತಿಯಿಂದ ಮುಜಗದೊಳು
ಕುಲಜರೆನಿಸಿಕೊಂಬಿರೆಂದ ॥೧೮೦॥

ಭಕ್ತಿಯಿಲ್ಲದ ಭವಿಗಳ ಕೂಡೆ ಬೆರಸನು
ಸತ್ಯನು ಮರುಳು ಮಂಕಯನು
ಸತ್ಯಸ್ಥಿತಿಯೊಳು ನೆನೆಯಲವರ ಕುಲ
ದುತ್ತಮಿಕೆಯನೇನೆಂಬೆ ॥೧೮೧॥

ಎಂದ ಮಾತಿಗೆ ಹೆಗ್ಗಗೌಡ ಗುರುವು ಮಂಕ
ಗಂದು ಬಿನ್ನಹವ ಮಾಡಿದನು
ತಂದೆ ತಾಯಿ ಬಂಧು ಬಳಗವೆಲ್ಲಕೆ ಗುರು
ವೆಂದು ಮಂಕಯನ ಕೊಂಡಾಡೆ ॥೧೮೨॥

ಕೊಂಡಾಡಿದ ಹೆಗ್ಗಗೌಡಗೆ ಗುರು ಮಂಕ
ಖಂಡೇಂದುಮೌಳಿಯ ನೆನೆದು
ಕಂಡು ಧ್ಯಾನಿಸಿ ನೋಡಿ ಆಚಾರವುಳ್ಳವ
ನೆಂದು ಮಂಕಯ್ಯ ಹರಸಿದನು ॥೧೮೩॥

ಆಚಾರವಿಧಿಯಲೊಪ್ಪುವ ಸಿದ್ಧರಾಮಯ್ಯ
ಆಚಾರವಡೆಯಲೊಪ್ಪುವನೆ
ನಾಚಿ ಭಕ್ತ[೧][ಗೆ][೧] ಹೇಸಿ[ಪ] ಜಂಗಮವೆಂದು
ಆಚಾರಕೆ ನಡೆ ಮಗನೆ ॥೧೮೪॥

ಆಚಾರದಿಂದ ನಡೆಯಲಾಗಪ್ಪನು
ನೀತಿಯಿಂದಲಿ ಪ್ರಭುವಹನು

---

೧ ನು (ಮೂ)

ಮಾತು ತಪ್ಪಿ ಹುಸಿದರೆ ಗುರುವಿನ ಮುಂದೆ
ಭೂತೇಶ ನರಕಕಿಕ್ಕುವನು ॥೧೮೫॥

ದೇವ ಚಿತ್ತೈಸು ಬಿನ್ನಹ ನಿಮ್ಮ ಬಾಗಿಲ
ಕಾವುದನೊಕ್ಕುದ ಕೊಂಡು
ದೇವ ನಮಗೆ ನಿಮ್ಮ ಬೀಳುಡೆಯಿತ್ತೆನ್ನ
ಕಾವುದೆನುತಲೆಱಗಿದನು ॥೧೮೬॥

ಎಱಗಿದ ಮಂಕತಂದೆಗೆ ಸಿದ್ಧರಾಮಯ್ಯ
ನು[ಱು]ವ ಲಿಂಗವು ತಾನೆಂದು
ಮಱೆಯ[ದಿ]ಪ್ಪುದೈಸಲೆಯೆಂದು ಗೋತ್ರದ ಮುಂ
ದು[೧][ಱು][೧]ವ ಜೀರ್ಣದ ಕಂಥೆಯಿತ್ತ ॥೧೮೭॥

ಹೊಲೆಚಲೆ ಮುಟ್ಟ ಗಂಧದಲೀ ಕಂಥೆಯ
ನೊಲಿದು ಪೂಜೆಯ ಮಾಡು ಮಗನೆ
ಧರಿಸು ಕಂಥೆಯನೆಂದು ರೇವಣಪ್ರಭುರಾಯ
ನೊರೆದನು ಮಂಕಸಿದ್ಧನಿಗೆ ॥೧೮೮॥

ಈ ಕ್ರಮದಲಿ ಪೂಜೆಮಾಡೆಂದು ಕಂಥೆಯ
ಮಂಕತಂದೆಯ ಕೂಡೆ ನುಡಿದ
ವಾಕ್ಯವ ಶಬ್ದಿಸಲವನೆಱಗಲು ದೇವ
ನೀ ಕರುಣದಿ ಪೇಳ್ದಂತೆ ಮಾಳ್ಪೆ ॥೧೮೯॥

ಕರೆದು ಹೆಗ್ಗಗೌಡನ ಸಿದ್ಧರಾಮಯ್ಯ
ಗುರು ನಿನಗಾರೆಂದು ಕೇಳೆ
ಪರಮಗುರುವು ನೀನು ಮಂಕತಂದೆಯು ವರ
ಗುರುವೆನುತಲಿ ಕೊಂಡಾಡೆ ॥೧೯೦॥

ಈ ವಿವರದಲಿರು ಮಗನೆ ಎಂದೆನುತಲಿ
[೨][ಭಾವಿಸೆ][೨] ಹಿರಿಯರೆಂಬವರು

---

೧ ಜೆ (ಮೂ) ೨ ಬೋಧಿಸಿ (ಮೂ)

ದೇವ[ರ]ನವರ ಮುಂದಿಟ್ಟು ಸಿದ್ಧರಾಮ
ನೋವಿ ಮಂಕಗೆ ಪಟ್ಟಗಟ್ಟಿ ॥೧೯೧॥

ಗುರು ಸಿದ್ಧರಾಮ ಮಂಕನ ಕಂಥೆ ಎಂದೆಂಬುದ
ಶಿವನಾಮ ಶಾಸನದಿಂದ
ಸಾಧಿಸಿ ಬರೆಸಿ ರೇವಣ ಸಿದ್ಧರಾಮಯ್ಯ
[ರೀ] ಧರೆಯೊಳು ಮೆಱೆಯಲ್ಕೆ ॥೧೯೨॥

ಒಡ್ಡಿಯದೇಶದಿಂದಲಿ ಸಾಲವ ಕೊಂಡು
ಕದ್ದೋಡಿ ಸೊನ್ನಲಪುರಕೆ
ಗುಡ್ಡರ ಕೂಡಿರುತಿರಲು ಅವರು ಕಂಡು
ಬಡ್ಡಿಸಹಿತ ಕೊಂಬೆವೆನಲು ॥೧೯೩॥

ಕೊಟ್ಟ ಸಾಲವ ಕೊಡದಾ ಬಲ್ಲೇಶನು
ಘಟ್ಟುವತನದಿಂದಲಿರಲು
ಬಟ್ಟೆಯೊಳಗೆ ಕಲ್ಲ ಹೊಱೆಸಲು ಒಲ್ಲದೆ
ಒಟ್ಟಯಿಸಿಯೆ ಪೋಗುತಿರಲು ॥೧೯೪॥

ಹೋದರೆ ನಿನಗೀಗ ಸಿದ್ದರಾಮಯ್ಯನ
ಪಾದದಾಣೆಯೆಂದೆನಲು
ಸಾಧಿಸದೇ ಪೋಗಲವರು ಸಿದ್ಧೇಶನ
ಪಾದದೊಡನೆ ಬಿನ್ನೈಸಿ ॥೧೯೫॥

ಬಂದುಱೆ ಪಾದಾಕ್ರಾಂತರಾಗುತ ಹುಲ್ಲ
ನೊಂದು ಪಿಡಿದು ಮೊಱೆಯಿಡುತ
ನಿಂದರು ಸಿದ್ಧರಾಮಯ್ಯ ವಿಚಾರಿಸ
ಲಂದು ಬಿನ್ನೈಸಿದರವರು ॥೧೯೬॥

ದೇವರೆ ಕೊಟ್ಟ ಸಾಲವ ಕೊಡದೀತನು
ದೇವರ ಬಳಿಗೋಡಿ ಬಂದು
ದೇವರೆ ಬಾಯಾಱುತಹನೆ ಸಾಲವಿಲ್ಲೆಂದು
ದೇವರ ಮುಂದಿಟ್ಟು ಹೋಹೆವೆಂದ ॥೧೯೭॥

ಅಂದು ಬಾಯಾಜಿ ಹೋಗಲು ಸಿದ್ಧರಾಮಯ್ಯ
ಬಂದವರಿಗೆ ತಿದ್ದಿ ಕಳುಹೆ
ಸಂದನವನು ಗುರುವಾಜ್ಞೆಯ ಮೀಜಿದ
ನಂದು ನರಕಕಂದಿಳಿಯೆ ॥೧೯೮॥

ಸಿದ್ಧರಾಮಯ್ಯ ನರಕವ ನೋಡುತ ಬರು
ತಿದ್ದ ಬಾಳುತಲೇಳುತಲಿ
ಸಿದ್ಧರಾಮಾ ಸಿದ್ಧರಾಮಾ ಎನಲು ಕೇಳಿ
ಸಿದ್ಧರಾಮ ನೋಡಿ ತಾ ತೆಗೆದ ॥೧೯೯॥

ತೆಗೆಯಲು ಘನ ನರಕದಲಿದ್ದ ಜೀವವು
ಮಿಗೆ ಮಾಲೆವಿಡಿದ ಪರಿಯೊಳು
ಉಘೆ ಉಘೆ ಎನುತ ಹೊಱಡಲಾಗ ಯಮಕೂಪ
ಒಗೆದು ಘೂರ್ಮಿಸುತ್ತೈತರಲು ॥೨೦೦॥

ಹರಿದ ಮಂದಿಯ ಕೂ[೧][ಗ][೧] ಕೇಳುತಲೆಮ ಬಂದು
ಗುರು ಸಿದ್ಧರಾಮನ ಕಂಡು
ನಿರಯವ ಹಾಳುಮಾಡಿದಿರೊಬ್ಬನಿಂದಲಿ
ಇರವಾವುದು [೨][ಪೇ][೨]ಳೆನಲು ॥೨೦೧॥

ಯಮನ ಕರೆದು ಸಿದ್ಧರಾಮಯ್ಯ ಗೌರಿಯ
ರಮಣನೋಲಗಕೆ ಕಳುಹಿದನು
ಕ್ರಮದೀಶನ ಬಿನ್ನಹ ಮಾಡೆ ಶಿವ ಕೇಳಿ
ಅಮಮ ಮೋಕ್ಷವವರ್ಗೆಂದ ॥೨೦೨॥

ಎಂತುಟು ಗುರು ಹೇಳಿದಂತಿರಬೇಕು ಮಾ
ಱಾಂತರೆ ಬಿಲ್ಲೇಶನಂತೆ
ಸಂತಾನ ಸತಿ ಸುತರ್ಗಳು ಗುರುವಾಕ್ಯವ
ನೇಂತು ಮೀಜಿದರೆ ನರಕವು ॥೨೦೩॥

---

೧ ಡ (ಮೂ) ೨ ಕೇ (ಮೂ)

ಹಾಲಮತದ ಗೌಡುಗಳ ಕರೆದು ಮಂಕ
ಹೆಳಿದಂತಿರಿ ನೀವೆಂದು
ಪಾಲಿಸಿ ಸಿದ್ಧರಾಮಯ್ಯ ಮರುಳು ಮಂಕ
ಮೇಳದಿ ಹೆಗ್ಗೊಂಡ ಸಹಿತ ॥೨೦೪॥

ಬಸವ ಮುಂತಾದ ಸಮಸ್ತ ಭಕ್ತರ ಮುಂದೆ
ಹೆಸರುಗೊಂಡೊಬ್ಬರೊಬ್ಬರನು
ಪಶುಪತಿ ಸಿದ್ಧರಾಮಯ್ಯ ವಿಭೂತಿಯ
ನೊಸೆದು ಧರಿಸಿದನು ಹರಸಿ ॥೨೦೫॥

ಸಿದ್ಧರಾಮಯ್ಯನು ಪ್ರಭುವಿಗೆ ರೇವಣ
ಸಿದ್ಧಯ್ಯಂಗೆ ಬಿನ್ನೈಸಿ
ಎದ್ದು ಸಾಷ್ಟಾಂಗದಿ ದೀರ್ಘದಂಡವನಿಕ್ಕಿ
ಉದ್ಧರಿಸಿದಿರಿ ನಮ್ಮುವನು ॥೨೦೬॥

ಎಂದು ಬಿನ್ನಹ ಮಾ[ಡೆ] ಪ್ರಭುವಿಗೆ ರೇವಣ
ಗಂದು ಪ್ರಮಥರೊಡಗೂಡಿ
ಬಂದು ಸಿದ್ಧರಾಮನ ಕಳುಹಿಯೆ ಗಣ
ವೃಂದಸಹಿತ ತಿರುಗಿದರು ॥೨೦೭॥

ಇತ್ತ ಸಿದ್ಧರಾಮನು ಮಂಕತಂದೆಯು
ಅರ್ತಿಯಿಂ ಶರಣಸಂಕುಳ[೧][ವು][೧]
ಉತ್ತಮಕ್ಷೇತ್ರವೆನಿಪ ಸೊನ್ನಲಿಗೆಗೆ
ನಿತ್ಯನು ಹೆಗ್ಗೊಂಡಸಹಿತ ॥೨೦೮॥

ಬಂದು ಸರ[೨][ವೂ][೨]ರದಲಿ ಹೊಕ್ಕು ಸಿದ್ಧನಾ
ನಂದದಿಂ ಮಲ್ಲಗೆಜಿಗಿದ
ನಿಂದು ಮಠಕೆ ಮಾರಿಯ ಕಾವಲಿತ್ತ
ಲ್ಲಿಂದ ಲಿಂಗವನು ನೋಡಿದರು ॥೨೦೯॥

---

೧ ವ (ಮೂ) ೨ ದಿ (ಮೂ)

ಮಾರಿ ಬಿನ್ನೈಸಿ ಸಿದ್ಧರಾಮೇಶನೊಡನೆನ್ನ
ನಾರೈದುಕೊಂ[೧][ಡಿ][೧]ಹರೆ[ನಲು]
ಪಾ[ರ]ವೈದಿಸುವ ಮಂಕಯ್ಯ ನಿನಗೆ ಸಲೆ
ಕಾರುಣ್ಯದಿಂದೊಕ್ಕುದಿತ್ತು ॥೨೧೦॥

ಅಲ್ಲಿಗಲ್ಲಿಗೆ ತಕ್ಕ ಸೇವೆಯನಿತ್ತಾಗ
ಬಲ್ಲಿದ ಮಂಕಯ್ಯ ಸಹಿತ
ನಿಲ್ಲದೆ ತೋಹಿನ ಹೆಗ್ಗೊಂಡ ಕೂಡಿಯೆ
ಮಲ್ಲಿಕಾರ್ಜುನನಲ್ಲಿಗೈದೆ ॥೨೧೧॥

ಬಂದು ಸೊನ್ನಲಪುರದಲಿ ಸಿದ್ಧರಾಮೇಶ
ನಂದು ಪರ್ವವ ಮಾಡುತಿರಲು
ನಿಂದು ಸಿದ್ಧರಾಮ ಶರಣರೆಲ್ಲರ ಮುಂದೆ
ಸಂದ ಮಾರಿ[೨][ಯ][೨] ಮಗ ಮಂಕ ॥೨೧೨॥

ಇಂದು ಮೊದಲು ನಮ್ಮ ಮಲ್ಲಿಕಾರ್ಜುನನ
ಚಂದದಿ ಪೂಜೆಮಾಡಿ ಮಗನೆ
ಬಂದ ಭಕ್ತರ ಸೇವೆಯ ಮಾ[೩][ಡು][೩] ನೀ ಶಿವ
ಮಂದಿರವನು ಕೆಡಿಸದಿರೈ ॥೨೧೩॥

ಪುರಕೆ ಕಾವಲ ತೋಹಿನ ಹೆಗ್ಗಗೌಡ ನೀ
ಪುರಕೆಯರಸು ನೀನೆನಲು
ನೆರೆದ ಭಕ್ತರ ಮುಂದೆ ಪಟ್ಟವ ಕ[ಟ್ಟಿ] ನೀ
ನಿರು ಸುಖದಿಂದ[ಲಿಯೆ]ನುತ ॥೨೧೪॥

ಬೇಡಿದವರಿಗಿಷ್ಟಾರ್ಥ ಸಿದ್ಧಿಯನೀವ
ಗಾಢದ ಗದ್ದುಗೆದೋಜಿ
ನಾಡೊಳಗಣ ಹಾಲುಮತದವ[೪][ರಿಗೆ] ನೀ
ಮಾ[೫][ಡು][೫]ಕುಳದೆಜೆಗೆಯ ತಂದು ॥೨೧೫॥

---

೧ ದಿ (ಮೂ) ೨ ನ (ಮೂ) ೩ ಡಿ (ಮೂ) ೪ ರ (ಮೂ) ೫ ಡಿ (ಮೂ)

ವರುಷ ಒಂದೊಂದಕೆ ಕುಳದೆಱೆಗೆಯನೆತ್ತಿ
ಗುರುಸೇವೆಯ ಮಾಡು ಮಂಕ
ಪರುಷೆಯ ನೆರಹಿ ಹಿರಿಯರಿಗೆ ಪರ್ವವ ಮಾಡಿ
ಗುರುಸೇವೆ ಮಾಡು ಮಂಕಯ್ಯ ॥೨೧೬॥

ಈ[ಪ]ರಿಯಲಿ ಕಟ್ಟಳೆ ಮಾಡಿ ಸಿದ್ಧೇಶ
ರೂಪು[ದೋಱದೆ] ಗುಂಡೊಳಗೆ
ತಾಪದೋಱೆಯೆ ಮಂಕಗುರುವ ಕಾಣದೆ ಮಱು
ಗೀ ಪರಿಯೊಳಗಱಸಿದನು ॥೨೧೭॥

ಕಪಿಲಸಿದ್ಧಮಲ್ಲೇಶಗೆ ಹೇಳುಗಲಿ ಪ
ರಿ[ಪರಿ] ದುಃಖಗೊಳ್ಳುತಲಿ
ಉಪಮಿಸಬಾರದ ಗುರು ನಿಮ್ಮ ಮಹಿಮೆಯು
ಕಪಟ[1][ದಿ ಗುಂ][1]ಡೊಳಗಡಗುವರೆ ॥೨೧೮॥

ಅಱಸುತಿರಲು ಸಿದ್ಧರಾಮಯ್ಯ ಮಂಕಗೆ
ಅಱುಹಿದ ಪ್ರಕಟಮಾಡದಿರೈ
ಎಱಕವಾಗಿ ಸಿದ್ಧಮಲ್ಲನೊಳಿಹುದೆಂದು
ಉಱುವ ಧ್ಯಾನದಲಿ ಹೇಳಿದನು ॥೨೧೯॥

ಅಂದು ಮೊದಲು ಸಿದ್ಧರಾಮನ ಹಂಬಲ
ನಿಂದು ಮಂಕ[ನಿರುತಿ]ರಲು
ಮುಂದನಱೆದು ಸಿದ್ಧಮಲ್ಲನ ಪದಗಳ
[ವೃಂದ]ದೊಳಿರುತ ಬಿನ್ನೈಸಿ ॥೨೨೦॥

ಮಲ್ಲೇಶ[ನೆ] ನಿನ್ನ ನಲ್ಲಮಗನು ಸಿದ್ಧ
ಕಲ್ಲೊಳಗಡಗಿದನೆನಲು
ಸಲ್ಲರಮಂ.........[ಲೈದಿ] ಸರ[2][ವೂ][2]ರ
ದಲ್ಲಿಯಡಗಿದ [3][ಮಂಕಯ್ಯ][3] ॥೨೨೧॥

---

೧ ದಿಂದಲಿ ಗೂ (ಮೂ) ೨ ವು (ಮೂ) ೩ ಮಲ್ಲೇಶ (ಮೂ)

ತೋಹಿನ ಹೆಗ್ಗಗೌಡ[ನು] ಮಂಕತಂದೆಯು
ಮಾಯವಾದುದನು ಕಂಡರಸಿ
ಬಾಯಬಿಡಲು ಸಿದ್ಧರಾಮ ಕರೆದು ನೀನು
ರಾಯವಂಶದಿ ಜನಿಸು ಹೋಗೈ ॥೨೨೨॥

ಸಿದ್ಧರಾಮಯ್ಯನು ಮಂಕತಂದೆಯ ಕಾಣ
ದಿದ್ದನು ದುಃಖಗಡಲೊಳು
ಶುದ್ಧರ ಮಾಡಲ್ಯೆದಿದಿರಿ ನಮ್ಮ ವಂಶವ
ಸಿದ್ಧಯ್ಯ ಕರುಣಿಸೆಂದೆಱಗಿದನು ॥೨೨೩॥

ಲಿಂಗಸೇವೆಯಲಿರು ೧[ಲಿಂ]೧ಗಸುಖವಾಗೆ
ಮಂಗಳ ಮಹಿಮ ಹರಸಿದ
ಹಿಂಗದೆ ನರಜನ್ಮದೊಳು ಬಂದು ನೀನೀಗ
ಮಂಗಳಸುಖವಿರು ಬಾರೈ ॥೨೨೪॥

ಎಂದು ಸಿದ್ಧರಾಮ ಕಳುಹಲು ಕುಱಿಗೌಡ
ಮಾದಗೌಡನ ಬಸಿಱೊಳಗೆ
ಬಂದು ಬುಕ್ಕಗೊಂಡನೆನಿಸಿಯೆ ಕುಱಿಗಳ
ನಂದು ನಡೆಸುತಿರುತಿರಲು ॥೨೨೫॥

ಚಿಕ್ಕಯ್ಯ ಶಾಂತಯ್ಯನೆಂಬ ಕುಮಾರರು
ಧಿಕ್ಕನೆ ರಾಜ್ಯದಿ ನಡೆತರೆ
ಮುಕ್ಕಣ್ಣನ ಜಂಗಮ ಬಂದರು ಎಂದು
ಧಿಕ್ಕನೆ೨[ಬುಕ್ಕೊಂ]೨ಡ ನಗುತ ॥೨೨೬॥

ಜಂಗಮರೂಪ ಧರಿಸಿಕೊಂಡು ಗುರುಗಳು
ಹಿಂಗದೆ ಧಾತ್ರಿಯಲಿರಲು
ಹಿಂಗದೆ ಚಿಕ್ಕಯ್ಯನು ಶಾಂತಯ್ಯನು
ಕಂಗಳು ಮೂಱಿರ ಸಿದ್ಧೇಶ ॥೨೨೭॥

---

೧ ಅಂ (ಮೂ) - [illegible]ಂ (ಮೂ)

ಎಱಗಿ ನೋಡಿ ಗುರು ಬಳಲಿ ಬಂದರು ಎಂದು
ಇರದೆ ಎಲ್ಲರು ಒಡಗೂಡಿ
ಅಱೆಯ ಮೇಲೊಂದುದ್ದ ಕೋಡುಗಲ್ಲಿನ ಮೇಲೆ
ಕಱೆಯ ಕಂಬಳಿ ಗದ್ದುಗೆ[ಯ] ॥೨೨೮॥

ದೇವರು ಬುಜಮಾಡಿದಿರೆಂದು ಬುಕ್ಕೊಂಡ
ದೇವರ ಮೂರ್ತಿಗೊಳಿಸಲು
ಈವ ಕಾವ ಗುರುವೆಂದು ಪಾದಾರ್ಚನೆ
ಭಾವಭಕ್ತಿಯಿಂದ ಮಾಡಿ ॥೨೨೯॥

ಬೇಗ ತನ್ನಿರಿ ಹೊಸಮಡಕೆ[ಯ] ಹಾಲನು
ಶ್ರೀಗುರು ಬಳಲಿದರೆಂದು
ಆಗ ಬುಕ್ಕೊಂಡ ಸಕ್ಕರೆ [೧][ಹಾಲನರ್ಪಿಸೆ][೧]
ಯೋಗಿ ರೇವಣಸಿದ್ಧಯ್ಯ ॥೨೩೦॥

ಲಿಂಗಾರ್ಪಿತ ಮಾಡಿದಲ್ಲದೆ ಬೋನವ
ನಂಗಸುಖಕೆ ಸಲಿಸಿದರೆ
ಹಿಂಗದು ಭವ ಮುಂದಕೆ [ತಾ] ಎಂದು
ಲಿಂಗವ ತಂದೀವೆನೆಂದ ॥೨೩೧॥

ಎಂದು ರೇವಣಸಿದ್ಧ ಲಿಂಗಕರ್ಪಿತ ಮಾ[೨][ಡಿ][೨]
ತಂ[೩][ದ][೩] ಪ್ರಸಾದವನೀಯೆ
ಮುಂದಕ್ಕೆ ಫಲಪದಂಗಳೊಲಂಜನ
ವೆಂದು ರೇವಣ ಹರಸಿದಳ[ನು][೪] ॥೨೩೨॥

ದೇವ ರೇವಣಸಿದ್ಧನಾರೋಗಿಸಿ ಮಿ[ಕ್ಕ]
ದೇವರ ತತ್ಪ್ರಸಾದವನು
ಭಾವಿಸಿ ಗೌಡ ಕೊಳ್ಳಲು ನೋಡಿ ಧರೆಯ ನೀ
ನಾಳ್ವ ಭಾಗ್ಯವಾಯಿತೆಂದ ॥೨೩೩॥

---

೧ ಬೆಣ್ಣೆ ಹಾಲನು (ಮೂ) ೨ ಮ (ಮೂ) ೩ ದು (ಮೂ) ೪ ನವರ (ಮೂ)

ನಾನಾರು ಭಾಗ್ರವರಾ[೧][ಳ್ವರಾ][೧]ದರೆ ಯಾರು
ನೀನದ ಬಲ್ಲೆನೆಂದೆಱಗಿ
ನಾನಾ ಶಾಸ್ತ್ರಗಳಿಂದ ನೋಡಿಸಿದಾ
ನ್ಯೂನವಿಲ್ಲ ಮುಂದೆ [ಅ]ಹುದ ॥೨೩೪॥

ಎಂದು ಸಿದ್ಧ ಬಂ[ದ]ವರ ಹರಸಿ ನಮ
ಗೊಂದು ಕಾಣಿಕೆ ಬಿಟ್ಟುಕೊ[ಡಲು]
ಮುಂದೆ ನಿಮಗೆ ಫಲವಹುದೆಂದು ನುಡಿಯಲು
ಅಂದು ಕಾಣಿಕೆಗಳ ಕೊಡಲು ॥೨೩೫॥

ಈ ತೆಱದಲು ಸಿದ್ಧ ಕಾಣಿಕೆಗಳನೆತ್ತಿ
ಓತು ತನ್ನ ಶಿಷ್ಯ[ರಾ]ರೆಂದು
ಕಾತರಿ[ಸ]ದೆ ನೂಱಾಱು ಮಂದಿಯ ಕೂಡಿ
ಆತಕೂರಿಯನಾಳುತಿರಲು ॥೨೩೬॥

ಹರಸಿ ವಿಭೂತಿಯನಿಟ್ಟು ಕರುಣದಿಂದ
ಚರಿಸಾಡಿ ಬಪ್ಪೆಂವೆಂದೆನುತ
ಇರು ಸುಖವಿಂದಲೆನ್ನುತ ರೇವಣಸಿದ್ಧ
ನಿರದೈದಿದ ಖೇಚರಕೆ ॥೨೩೭॥

ಗುರು ಹೇಳಿದ ನೀತಿಮಾರ್ಗವ ಮಱೆಯದೆ
[ಗುರು ನೀತಿ]ಯಲಿರುತಿರಲು
ಧರೆಯನಾಳ್ವ ಭಾಗ್ಯ ದೊಱಕೊಳುತಿರಲಾಗ
ಅಱೆದನು ತನ್ನ ಮನದೊಳು ॥೨೩೮॥

ಕುಱಿಗಳ ನಡೆಸುತಿರಲು ಬುಕ್ಕೊಂಡಗೆ
ವರ ಸಿದ್ಧ ಹೇಳಿ[ದ] ದಿನವು
ಇರದೆ ಒದಗೆ ಗುರು ಹೇಳಿದ ವಾಕ್ಯವ
ನೆರೆದು ಹೆಚ್ಚಿದ ಮನದೊಳಗೆ ॥೨೩೯॥

---

೧ ಳುವ (ಮೂ)

ಎಲ್ಲಿ ಹುಟ್ಟಿ ಎಲ್ಲಿ ಗುರುಸೇವೆಯ ಮಾಡಿ
ಎಲ್ಲಿಯ ಪದ ಬಂತೆಂದು
ಬಲ್ಲವರಿದ ವಿಚಾರಿಸಲರಿದು ಸಿದ್ಧ
ಮಲ್ಲನ ಕರುಣವೆಂದಜಿದು ॥೨೪೦॥

ಚಿಕ್ಕಯ್ಯ ಶಾಂತಯ್ಯನೆಂಬ ಕುಮಾರರ
ಮುಕ್ಕಣ್ಣವರದ ಸಿದ್ಧೇಶ
ಒಪ್ಪಿ ಹಾಲುಮತದವರಿಗೆ ಗುರುವೆಂದು
ಒಪ್ಪಿ ಪಟ್ಟವ ಕಟ್ಟಿದನು ॥೨೪೧॥

ಬಲ್ಲಿದ ಶಶಿ ವಾಯು ಧರೆಯುಳ್ಳನ್ನಬ
ರಲ್ಲಿ ಸಂಚಲಬೇಡ ನಂಬು
....
.... ॥೨೪೨॥

ಓತು ಸಿದ್ಧಮಂಕ ಚರಿತೆಯ ಕೇಳಲ
ನಂತ ಸಕಲ ಸೌಭಾಗ್ಯ
ಎಂತೆಂಬೆ ಸತಿ ಸುತರುಗಳು ಎಲ್ಲರು ಅ
ನಂತಸುಖದೊಳಿರುತಿರಲು ॥೨೪೩॥

ಕೋಟಿ ಅಶ್ವೇತಿ[೧][ಯ][೧] ಕೋಟಿ ಬ್ರಹ್ಮೇತಿ[೧][ಯ][೧]
ಕೋಟಿ ನಾನಾ ಪ್ರಾಣಿ ವಧೆ[೧][ಯ][೧]
ರಾಟಾಳದ ಭವವ[ನು] ಸುಡುವುದು[ನೆಜಿ]
ಪಾಟಿಸಿ ಕೇಳ್ದರೀ ಕೃತಿಯ ॥೨೪೪॥

ಸಿದ್ಧರಾಮನ ಚರಿತೆಯ ಕೇಳ್ದವರಿಗೆ
ಸಿದ್ಧಿಯಹುದು ಭಯವಿಲ್ಲ
ಉದ್ಧರಿಸಲು ಭಯ ಭವವಹವಪಮೃತ್ಯು
ಹೊದ್ದಲಮ್ಮವು ಕೇಳ್ದವರ ॥೨೪೫॥

---

೧ ಯು (ಮೂ)

ಇಂತೇಳು ನೂಱು.....................ಸಿದ್ಧ
ನಂತು...................ನರಿವಾರಾರಳವು
ಕಂತುಮರ್ದನ ಸಿದ್ಧರಾಮ ಬಂದೋಲೈಪ
ಸಂಗನ ಬಸವನಲ್ಲಿಹರು ॥೨೪೬॥

ನೋಡಿದವರಿಗೆ ತಿಳಿಯದಿಳೆ..............
ಬೀಡುಯೆನುತ ಬಿಸುಡಲಿಕೆ
ಕಾದೊಡಿ ಒಡೆಯ ಸಿದ್ಧ ಬರೆದರ್ಥವ
ಗಾಢದಿ ಬರೆದಡಗಿಸಿದ ॥೨೪೭॥

ಇರದೈವತ್ತಾಱು ಭಾಷೆಯ ಲಿಪಿಯೊಳು
ತೆರಹುಗೊಡದೆ ಬರೆದಿರಲು
ಉರುವ ಕಲ್ಯಾಣವ ಬಸವ ಬರೆದ ಲಿಪಿ
ಸಿರಿಯದು ನೋಡಿದವರಿಗೆ ॥೨೪೮॥

ಕಡೆಯಕ್ಷರದೊಳು ಸಿದ್ಧರಾಮಯ್ಯನ
ಬೆಡಗಿರೆ ನಾನದ ಕಂಡು
ಸುಡಿದೆ ಸಿದ್ಧರಾಮ ಮರುಳು ಮಂಕನ ಕಥೆ
ನಡೆವ ಭಕ್ತರು ಕೇಳಿ ಬದುಕಿ ॥೨೪೯॥

ಬಸವ ಮುಂತಾದ ಅಸಂಖ್ಯಾತರ ಮುಂದೆ
ವಸುಧೆಯಱಿಯೆ ಮೆಱಿದುದನು
ಪಶುಪತಿ ಸಿದ್ಧರಾಮಯ್ಯನ ಚ[ರಿತೆಯ]
ಒಸೆದು ಕೇಳಿ ಸುಖಿಯಾಗಿ* ॥೨೫೦॥

❖❖

---

* ಅಂತು ಸಂಧೀ ೪ಕ್ಕಂ ಪದನು ೬೨೬ಕ್ಕಂ ಸಮಾಪ್ತ ಎಂದು ಅಂತ್ಯದಲ್ಲಿದೆ

ಅನುಬಂಧಗಳು

೧. ಟಗರ ಪವಾಡ
೨. ಪದ್ಯಗಳ ಅಕಾರಾದಿ ಸೂಚಿ

೧. ಟಗರ ಪವಾಡ

[ಒಂದನೆಯ ಸುರುಳಿ]

*ಷಡುಸ್ತ ತ್ರಭೂವನ ವಿನುತ ಸಂಶಿತ ಕೋಟಿಯೋಜನ ವಿಸ್ತೀರ್ಣ ಭೂಮಂಡಲ ವೀರಶಾಸನ ಆಭ್ಯವ ಅನೇಕ ಗುಣಗಣಾಲಂಕಾರ ನಯವಿನಯ ದಯದಾಕ್ಷಣ್ಯ ಪರೋಪಕಾರ ಮೂರ್ತಿಗಳಾದ, ಶ್ರೀ ಮನ್ಮಹಾಮುನಿಕುಲವಾರ್ಧಿ ಸುಧಾಕರರಾದ ಬಾಲ್ಯವತ್ತರ ಬಹುಲೀಲಾ ವಿನೋದಿಗಳಾದ ಯವ್ವನಕಾಲ ಜಿತೇಂದ್ರಿ ಸಧರ್ಮಾಚಾರಶೀಲರಾದ ಅಂಗ ವಂಗ ಕಳಿಂಗ ಕಾಶ್ಮೀರ ಗುಜ್ಜರ ಗೌಳ ಮಾಳವ ಮಲೆಯಾಳ ಜಿನ್ನ ಘೋಟಕ ಕರ್ನಾಟಕ ಸೌರಾಷ್ಟ್ರ ಮಹಾರಾಷ್ಟ್ರ ಮಾಗಧ ಲೇಪಾಳ ಚೋಳ ಕೇರಳ ಪಾಂಚಾಲ ಸಿಂಹಳ ದ್ರಾವಿಡ ಹಮ್ಮೀರ ಕರಹಾಟಕ ಮಹಾಕರ್ನಾಟಕ ಸಯಿಂದವ ಬಭ್ರ ವಿದರ್ಭ ವಿದೇಹ ಕೌಶಲ ಕುಂತಲ ಕಿರಾತ ಮತ್ಸ್ಯಸೌಬಲ ಮಾದ್ರ ಮೊದಲಾದ ಚಪ್ಪನ್ನೈವತ್ತಾರು ದೇಶಾಧೀಶ್ವರರಾದ, ಜಂಬೂದ್ವೀಪ ಪಕ್ಷದ್ವೀಪ ಕುಶಲದ್ವೀಪ ಶಾಕದ್ವೀಪ ಶಾಲ್ಮಲಿದ್ವೀಪ ಪುಷ್ಕರದ್ವೀಪ ಕ್ರೌಂಚದ್ವೀಪ ಮೊದಲಾದ ಸಪ್ತದ್ವೀಪಾಧೀಶ್ವರರಾದ, ಹರಿವರುಷ ಭರತವರುಷ ಭದ್ರಸ್ಮಿತವರುಷ ಇಳಾವೃತ ವರುಷ ಕುರುವರುಷ ಕರುಣಿವರುಷ ಕೇತುಮಲವರುಷ ಕಿಂಪುರಷಗಳೆಂಬ ನವವರುಷ ನಿವಾಸಿಗಳಾದ, ಮಧುಹರಣ ಕಾಲುಹರಣ ಪಾಂಚಜನ್ಯ ಸಿಂಹಳ ಲೆಂಕೆ ಗಂಧರ್ವ ಭರತ ಮೊದಲಾದ ನವಖಂಡ ದೇಸಿ ಕೃತಶಾಸನರಾದ, ಅತಳ ವಿತಳ ಸುತಳ ತಾಳಾತಳ ರಸಾತಳ ಮಹೀತಳ ಪಾತಾಳ ಭೂರ್ಲೋಕ ಸುವರ್ಲೋಕ ಮಹರ್ಲೋಕ ಜನರ್ಲೋಕ ತಪರ್ಲೋಕ ನಾಗರ್ಲೋಕಾಧೀಶ್ವರರಾದ, ಸಾಲು ಸಕಲಾತಿ ಪಟ್ಟೆ ಪೀತಾಂಬರ ಸಾಳಂಗರವೆಯ ಮನ್ಮತಗ ಕೋಟಿ ತೇಜವು ಏನೆಂದರೆ ಒಂದು ಸೆಲ್ಲೆದ ಹೊನ್ನು ಐದು ವೀಳ್ಯೆ ಕಾಶಿರಾಮೇಶ್ವರ ಪರಿಯಂತರ ಕುರುಬರ ಕುಲವೆಂದು ಹೇಳಲಾಗಿ ಕುಲಾಚಾರಕೆ ದಣಿಯೆಂದು ಕುಲಾಚಾರ ಗಣಾಚಾರವೆಂದು ಅಹುದೆಂದು ಮತ್ತು ಚಲವಾದಿಗೆ ಈತನೆ ದಣಿಯೆಂದು ನಾಲ್ವರೊಳಗೆ ನಾಲ್ವರು ಅರಾರೆಂದಡೆ ನಾಗೋಜಿ ಬೆಡಗು ಸರು ಅವನು ಗಉಡನೆಂದು ಅವನ ಹಕ್ಕು ಮುಗಂಡುಗ ವೀಳ್ಯೆ ವರ್ಷಕ್ಕೆ ವಂದು ಬಾರಗಣಿಂ ಮತ್ತಂ ಆಚಾರ ವಿಭೂತಿ ದನಿಯೆಂದು ಆವನು ಸಂಬೊ ಕೊಡೆ ಆವನು ಗಣಾಚಾರನೆಂದ ಅವನ ಹಕ್ಕು ಟಂ॥೬ ಐದು ಪಸುಗಾಣಿ ದೈವಕ್ಕೆ ವೀಳ್ಯೆ ಹಂಚಿಕೊ ನಾಮವು ಮತ್ತಂ ಚಲವಾದಿ ಬಿವಜಿ ಗೋತ್ರಾಳ ಅವನ ಹಕ್ಕು ಒಂದು ಟೆಂಕಿಗೆ ವಂದುರುವಿಂ '೧' ಒಂದೆ ಕಳಸ ಹಂದರಕ್ಕೆ ತೋರಣವ ಕಟ್ಟಬೇಕು. ದೈವಕ್ಕೆ ಸೇವಕನೂ ಇವರಿಗೆ ಕರ್ತನಾದಾತ

ಈ ಪತ್ಯದ ತಲೆಯ ಮೇಲೆ ತಾಲಿಕ ನೋಡಿ ಬರದು ಎಂಬ ವಾಕ್ಯವಿದೆ, ಈ ಪತ್ಯ ಎರಡು ಸುರಳಿಗಳಲ್ಲಿ ವ್ಯಾಪಿಸಿದೆ.

ಉತ್ತರದೇಶದ ಕರಿಬಸವದೇವರು ತಾನು ಧರ್ಮವ ಪಡೆದು, ನಾಲ್ವರ ಶಿಷ್ಯರ ಪಡೆದು, ನಾಲ್ವರಿಗೆ ಅವರವರ ಕಾಯಕ ಧರ್ಮಂಗಳಂ ಕೊಟ್ಟು ರಕ್ಷಿಸಿದಾತನ, ಸರಊರ ರೇವಣಸಿದ್ಧೇಶ್ವರನೆಂದು ಹೆಳಲಂ ಪಟ್ಟಿತ್ತು ಜಗವರಿಯಲಿಕ್ಕಾಗಿ ನೀತಿವಂತರು ಅರಿಯಲಿಕ್ಕಾಗಿ ಸತ್ಯವೆಂಬ ಬಿರಿದು ನಡವುತಿದ್ದಿತೆಂದು ಕುಲಮಾರ್ಗ ಬಲ್ಲವರರಿಯಲು ಇದು ಕಾರಣ ಶ್ರೀ ಕಲ್ಯಾಣ ಮಹಾತ್ಮೆಗಳು.

ಶ್ರೀಮತು ಕಲಿಯುಗದ ಆ[೧][ದೇವೋತ್ತ][೧]ಮನ ಆದರೆ ಕಲ್ಯಾಣಪಟ್ಟನಕ್ಕೆ ಬಿಜ್ಜಳಾಂಕನೆಂಬ ಅರಸು ಇರಲಿಕ್ಕಾಗಿ ಬಿಜ್ಜಳನ ಮಹಾತ್ಮೆಯೆಸದಿಹುದು. ಆಮೇಲೆ ಮತ್ತಂ ಕಲಿಗಣನಾಥ ತಿರುಣಂಕಪುರದ ಅರಸು ರಾಜ್ಯಮನಾಳುವಲ್ಲಿ ತಾನು ಭಕ್ತಂದೇಹಿಯಾಗಿರಲಾಗಿ ಭುವನದೊಳಗೆ ದೇಶಕೋಶಂಗಳೊಳಗೆ ಭವಿಗಳು ಲಿಂವಿರಹಿತರು ಇರಲಿಕ್ಕಾಗದುಯೆಂದು ಹೇಳಿ ಡಂಗುರವ ಹೊಯಿಸಿರಲು, ಆಮೇಲೆ ಕುರುಬರಯೆಂಬ ಕುಲಗಳು ಲಿಂಗವಿಲ್ಲವೆಂದು ಪಟ್ಟಣದಿಂದ ಹೊರಿಯಿಕ್ಕೆ ಹಾಕಲಿಕ್ಕಾಗಿ ಇವರುಗಳು ತಮ್ಮ ಮಕ್ಕಳು ಹೆಮ್ಮಕ್ಕಳು ಮೊದಲಾದ ತುರುಗಳು ಸಮೇತವಾಗಿ ಕಾಳಿಂಗನೆಂಬ ಮಡುವಿಲಿಳಿಯಲಾಗಿ ಅಲ್ಲಿದ್ದ ದಾxxನಾಲತವಾಡಕೆ ಬಂದರು. ನಾಲ್ವತ್ತುನಾಲ್ಕು ಹಟ್ಟಿ ಹಾಕಿದರು. ಸರಊರಲ್ಲಿ ಅಯ್ಯನವರು ತಪಸ ಮಾಡುತಿದ್ದರು. ತಪಸು ಮಾಡುವಲ್ಲಿಗೆ ನಾಲ್ವತ್ತು ಹಟ್ಟಿಕಾರು ಬಂದು ಕಲಿಕೆರೆಯಲ್ಲಿ ತುರುಗಳ ಹಾಕಿಕೊಂಡಿದ್ದರು. ನಮಗೆ ಗುರುಗಳಿಲ್ಲ ಯಿಾ ತಪಸ ಮಾಡುತಿದ್ದಾತನ ಈತನ ಕಾದರೆ ನಮ್ಮ ಪಾಪ ಹಿಂಗೀತು. ಹನ್ನೆರಡೊರುಷ ತಪಸ ಕಾದರು. ಆ ತಪಸಿಗೆ ಮೆಚ್ಚಿ ರೇವಣಸಿದ್ಧೇಶ್ವರನೆ ಗುರುವಾಗಿ ಬಂದು ತಪಸಿ ಏನು ಬೇಡುತಿದ್ದಿ ಬೇಡು ಕೊಟ್ಟೇನು. ಸ್ವಾಮಿ ಹೊನ್ನ ಚಿನ್ನದ್ರವ್ಯನ ಕೊಟ್ಟಡೆ ನನಗೆ ಇರಲರಿಯರು, ಆದಿಗೊಂಡಗೌಡನ ಮಕ್ಕಳು ಉಂಡಾಡ ಪದ್ಮಣ್ಣನ ಮಕ್ಕಳು ಹೊರ ಹಾಕಿಸಿಕೊಂಡು ಬಂದರು. ಈ ಬಂದವರಿಗೆ ಇವರೆ ನನಗೆ ಶಿಶುಮಕ್ಕಳು ಇವರ ವಳತ ಮಾಡಿಕೊಂಡು ಎಂಬುತ ನನಗೆ [೨][ಅಭಯ][೨] ಹಸ್ತವ ಕೊಡು ಎಂಬುತ ಬೇಡಿಕೊಂಡ. ಇಂಥ ಕುಲವ ನೀನು ಬೇಡಿಕೊಳಬಹುದೆ ಇವರು ಹೆಗರುಹೆಡ್ಡರು ಮರುಳು ಮಂಕು ಕುಲವ ಯೇನ ಬೇಡಿಕೊಂಡೆ ಇವಗೆ ನನಗೆ ಬೇಕು. ಹಾಗಾದರೆ ನಿನಗೆ ಕೊಟ್ಟೆ, ಕೊಟ್ಟ ಭಾಷೆಯ ನನಗೆ ನಿರುಪವ ಪಾಲಿಸಿ ಬ್ರಹ್ಮ ವಿಷ್ಣು ರುದ್ರ ಮಹೇಶ್ವವ ಮೊದಲಾಗಿ ಕೊಟ್ಟರು. ಇನ್ನು ಹೊರಹಾಕಿದ ಜಾಗ್ಯ ಕಲ್ಯಾಣ ಪಟ್ಟಣಕ್ಕೆ ಅರಸು ಬಿಜ್ಜಳರಾಯ ಪರದಾನಿ ಬಸವಣ್ಣ ಸತ್ತ ಕುರಿ ಹೆತ್ತ ಮೊಸರು ಹೊತ್ತುಕೊಂಡು ಬಂದರು. ಸತ್ತ ಕುರಿ ಊರಾಕೆ ಬಿಡೊದಿಲ್ಲ ಯಂಬುತ ತರಿಬಿದರು. ಕುಲಕೊಬ್ಬ ಶರಣರು ಕೋಟಿಗೊಬ್ಬ ಭಕ್ತರು ಅರವ೩[ತ್ಮೂ]೩ರು ಪುರಾತ[ನ]ರು ಏಳುನೂರೆಪ್ಪತ್ತು ಅಮರ ಗಣಂಗಳು ತರಿಬಿದರು. ಈ ಮಾತ ಜುಲಿಮಿ ಮಾಡಬಾರದು ಎಂದು ಕೊಂಡೆಮಂಚಣ್ಣ ಅರಸಿಗೆ ಹೇಳಿದ. ಪಟ್ಟಣದೊಳಗೆ ಬಸವಣ್ಣ ಐಕ್ಯವಾದ ಆರತಳಿಗಿ ತಕ್ಕೊಂಡು ಬಸವಣ್ಣನಯಿಂಬಡಲಿಕ್ಕೆ ಬಂಡಿ ಮೇಲೆ ತೆಕೊಂಡು ಅಗಿಸಿಬಾಗಿಲಿಗೆ ಬಂದರು. ಜಗ್ಗಶ ಹಂತೆಯ್ಯ ಜಗ್ಗಮುತ್ಯ ಸಾಂತಮುತ್ತಯ್ಯ ಅಂಬಲಿಮುತ್ಯ ಕಂಬಳಿಮುತ್ಯ ಏಕಜಡಿ ರಾಮಮುತ್ಯ ಪದ್ಮಮುತ್ಯ ಹಾಲಮುತ್ಯ ನಡಹಟ್ಟಿ ನಾಗಮುತ್ಯ ಹುಲಿಮುತ್ಯ ಬರಡಾವಿನಮುತ್ಯ ಗೌಡನವರೆಂಬ ಕುರುಬರು ತೋವಿನವರು ಗಡ್ಡದವರು ಭಸ್ರೆಲವರು ಬೊಪ್ಪಲವರು ಯಡವನವರು ಕೊರೆಲವರು ಮನ್ನೆಲವರು ಭನ್ನೆಲರು ತುರುಬಿನವರು ಹಂಡೆಲವರು ಹತ್ತಿಕಂಕಣದವರು ಉಣ್ಣಿಕಂಕಣದವರು ಉಂಡಾಡಪದ್ಮಣ್ಣನ

---

೧ ದಿಹಾರ್ತ (ಮೂ) ೨ ಅಭಿ (ಮೂ) ೩ ತ್ತಾ (ಮೂ)

ಇಬ್ಬರ ಹೆಂಡಿರ ಹೊಟ್ಟೆಗೆ ಹುಟ್ಟಿದ ಮಕ್ಕಳು, ರಾಕಾಸಿ ಮಗಳ ತಂದಿದ್ದ. ಆಕಿ ಹಾಲು ಅಮೃತ ಯಿಷ್ಟ ಸವಿ ಐತೆ, ಸತ್ತ ಕುರಿ ತಿಂದರೆ ಸವಿಯಾದೀತೆಂದು ತಿಂದಳು. ಹಿರಿಯ ಹೆಂಡತಿ ಮಕ್ಕಳು ರಾಕಾಸಿ ತನ್ನ ಮಕ್ಕಳ ಕೂಡಿಕೊಂಡು ಆ ಕುರಿ ತಿಂಬತಿದ್ದರು. ಕೈಗಳ ಮಾಂಸವ ಕಂಡು ಹಿರೇಹೆಂಡತಿ ಮಕ್ಕಳು ಕಸುಕೊಂಡು ತಿಂದರು. ಆ ಕಾರಣಕ್ಕೆ ಹೊರಹಾಕಿದರು. ಆಗ ಕಲ್ಯಾಣಪಟ್ಟಣದಲ್ಲಿ ಕಡೆಬಾಗಿಲೊಳಗೆ ಈ ಸತ್ತ ಬಸವಣ್ಣನ ಹೊರಕ್ಕೆ ಹೊಗಗೊಡವಲ್ಲರು. ಈ ಕುರುಬರು ಆ ಗಣಂಗಳ ತಡದರು. ಬಸಪ್ಪಗೆ ಕುರಿಗೆ ವಾದ ಪವಾಡ ಬಿತ್ತು. ಅಲ್ಲಿದ್ದು ತಾಸಿನೊಳಗೆ ಎಬ್ಬಿಸಿದರೆ ನೀವು ಗಾರಡಗಿ ವಿದ್ಯೆ ಗಣಂಗಳಹುದು. ಅವರು ಮಂತ್ರ ಗಾರಡ ವಿದ್ಯ ಅಡವಿ ಗಿಡಮೂಲಿಕಿ ಗೊಲ್ಲ ತುರಗಾರುಯೆಬ್ಬಿಸಾರು ಆ ಸತ್ತ ಕುರಿ ಎಬ್ಬಿಸಾರು ನಾವು ನೆಂಬಲಾರೆವು. ನಿಮ್ಮ ಅರಮನೆ ಟಗರು ಬಿಜ್ಜಳರಾಯನ ಸೂಳೆ ಬೊಮ್ಮಲ ದೇವಿ ಮನೆವೊಳಗೆ ಟಗರು ಐತಂದು ಇಸುಕೊಂಡು ಅದ ತಕೊಂಡು ಬಂದು ತ್ರಿಪುರಾಂತಕ ಲಿಂಗ[ದ] ಮುಂದೆ ಆ ಟಗರ ತಂದರು. ಆ ತ್ರಿಪುರಾಂತಕ ಲಿಂಗದ ಗುಡಿ ವಳಗೆ ಕಿನ್ನರಿ ಬ್ರಹ್ಮಯ್ಯನೆಂಬ ಶರಣ, ಲಿಂಗದ ಮರೆ ಬಿತ್ತು ಎಂದು ಲಿಂಗಮುದ್ರಿ ಹಾಕಿದರು. ಆ ಟಗರ ಜುಲಿಮಿ ಮಾಡಿ ಹಗ್ಗಗಳ ಹಾಕಿ ಹಿಡಿಯ ಹೋದವರನ ಹತ್ತೆಂಟು ಮಂದಿ ಕೊಂತು, ಮತ್ತೆ ಹಗ್ಗ ಹಾಕಿ ಹಿಡಿತಂದು ಸತ್ತ ಬಸವಣ್ಣನ ಮುಂದೆ ತಲೆ ಹೊಯಿದರು. ನವಚಿತ್ರವ ಮಾಡಿ ಕಡಿದರು. ಕಡಿದು ಮೇಲೆ ತಲೆಯಿಕ್ಕಿ, ಇನ್ನು ಪ್ರಾಣವ ಪಡೆಯೆಂದು ಈ ಕುರುಬರು ಅಪ್ಪಣೆಯ ಕೊಟ್ಟರು. ಸತ್ತ ಬಸವಣ್ಣನ ಎಬ್ಬಿಸುಯೆಂದು ಗಣಂಗಳಿಗೆ ಅಪ್ಪಣೆಯ ಕೊಟ್ಟರು. ಬಸವಣ್ಣಗೆ ಏಕಾರತಿ ಪಂಚಾರತಿ ರಂಗವಾಲಿ ತುಂಬಿ ಕ್ರಿಯ ಕೊಟ್ಟು ಎಬ್ಬಿಸಿದರೆ ಏಳಲಿಲ್ಲ. ಬಸವಣ್ಣ ನಮ್ಮ ಪವಾಡ ನಿಂತಿತು, ನಿಮ್ಮ ಟಗರ ನೀವು ಎಬ್ಬಿಸುಯೆಂದು ಅವರಿಗೆ ಅಪ್ಪಣೆ ಕೊಟ್ಟರು. ಕುರುಬರು ಸಂದಿಗೆ ಸಾವಿರ ಬಿರಿದ ಕಟ್ಟಿ ಪವಾಡಕೆ ನಿಂತರು. ಸತ್ತ ಕುರಿಯ ಮೂರೇಡಿನ ಕಂತಿಯ ರೇವಣಸಿದ್ಧಯ್ಯ ಕೊಟ್ಟ ಕಂತಿಯ ಹೊದ್ದಿಸಿ ಆರ್ತಳಿಗಿ ಏಕಾರತಿ ಪಂಚಾರತಿ ಎತ್ತಿ, ಆ ಟಗರಿಗೆ ಬೆಳಗಿ ಗುರುವು ಸಿದ್ಧೇಶ್ವರನು ನಾಗಬೆತ್ತ ಕೋಲಿನಲ್ಲಿ ಎಳದರು. ಆ ಟಗರು ಎದ್ದಿತು ಪವಾಡ ಗೆದ್ದರು. ಪಟ್ಟಣದೊಳಕೆ ಟಗರು ಗೆದ್ದುಹೋಯಿತ್ತು. ಕಲಹಕೇತಯ್ಯನೆಂಬ ಶರಣನ ಮುಂದೆ ಹಾಯಿತ್ತು. ಹಾಯಲಿಕ್ಕೆ ಕುರುಬರು ಹಿಡಿಯೆಂದರು ಹಿಡಿದ ಹಿಡಿಯಲಿಕ್ಕೆ ಕೊಂಬು ಕಿತ್ತು ಕೈವಳಗೆ ಬಂದಿತು. ಟಗರು ಓಡಿಹೋಯಿತು. ನಮ್ಮ ಪವಾಡದ ಟಗರಿನ ಕೊಂಬ ಕೊಡುಯೆಂಬುತ ಕೇಳಿದರು. ನನ್ನ ತಪಸ ಬಿಟ್ಟು ನಿಮ್ಮ ಬಿರಿದ ಹಿಡಿದೆ. ನಾನೇ ಕಲಹಕೇತಯ್ಯನೆಂಬ ಮುಂಡಿಗಿ ಇಟ್ಟಿಂಗರಿ ಟಗರಿನ ಕೊಂಬ ಮುಂಡಿಗೆ ಮರ್ತ್ಯಲೋಕದೊಳಗೆ ಹಾಕುತೀನಿ ಯೆಂಬುತ ಇಸಕೊಂಡನು. ಹಾಕಿದ ಇನ್ನು ಮರ್ತ್ಯಲೋಕಕ್ಕೆ ಹಾಕುತೀನಿಯಿದೆ ಕುರುಬನ ಬಿರಿದು. ಮತ್ತೆ ಕಲ್ಯಾಣದ ತಳವಾರ ಹಿಡಿದ ಟಗರ ಕೊಂಬ ಹಿಡಿಯಲಿಕ್ಕೆ ಕೊಂಬ ಕಿತ್ತ ಕಡಿಗೆ ಆಯಿತ್ತು. ಟಗರ ಹಿಡಿದ. ಮುಂದೆ ಕಟಕ ಹಿಡಿದ. ಹಿಂಗಾಲ ಕುರುಬ ಹಿಡಿದ. ಸತ್ತ ಕುರಿಯನು ಹೆತ್ತ ಮೊಸರನು ಹೊತ್ತು ಮಾರಿಸಿದರು. ಕಲ್ಯಾಣಪಟ್ಟಣದೊಳಗೆ ಅಲ್ಲಿದ್ದ ಸರ್ವರು ಸರೂವೂರು ಎಂಬ ಊರಿಗೆ ಬಂದರು. ನಮ್ಮ ಗುರುವಿನ ವಾಲ್ಯವ ಕಟ್ಟಿಸಬೇಕೆಂಬುತ ಹೊನ್ನನೆಲ್ಲ ತಂದು ಅರಿಕಲ್ಲ ಮೇಲೆ ಹೊನ್ನ ತೂರಿದರು. ಜಳ್ಳ ಹೊನ್ನನೆ ಬಿಟ್ಟು ಗಟ್ಟಿ ಹೊನ್ನನೆ ಗುರುವಾಲ್ಯವ ಕಟ್ಟಿದರು. ಅರವತ್ತಾರು ಕಂಬ ಒಂಬತ್ತು ಬಾಗಿಲು ಪಂಚಕಳಸವಿಕ್ಕಿ ಗುರುವಾಲ್ಯವ ಕಟ್ಟಿದರು. ರೇವಣಸಿದ್ಧೇಶ್ವರನದು ಒಂದು ಕಳಸ ಮರುಳು ಸಿದ್ಧೇಶ್ವರನದು ಒಂದು ಕಳಸ ಅರವತ್ತಾರು ಪುರಂತರದು ಒಂದು ಕಳಸ

ಚಿಕ್ಕಯ್ಯನದು ಒಂದು ಕಳಸ ಶಾಂತಯ್ಯನದು ಒಂದು ಕಳಸ ಸೊಲ್ಲಾಪುರದ ಸಿದ್ಧರಾಮಯ್ಯನದು ಒಂದು ಕಳಸ, ಪರುತ ಮಲ್ಲಿಕಾರ್ಜುನದು ಒಂದು ಗುರು ಕಳಸ. ಅಲ್ಲಿ ನಲ್ವತ್ತು ಮಂದಿ ತುರುಗಾರು ಗುರುಮಠ ಕಟ್ಟಿಸಿದರು. ಈ ಗುರುವಿಗೆ ಸ್ವಾತಿ (ಸ್ವಾಸ್ಥಿ?) ಸಂಬಂಧಗಳು ಹಿಂಡಿಗೊಂದು ಜನ್ನಿಗಿ ಮಗ್ಗದೊಂದು ಜಾಡಿ, ಮದಿವಿ ಆದರೆ ಮದಿವಿ ಕಾಣಿಕೆ ಉಡುಗೊರೆ, ಉಚ್ಚಾಯಗಳು ಕೊಟ್ಟು ನಡೆಸಿಕೊಟ್ಟೇವು. ಇದಕ್ಕೆ ಕೋಣಿಗನೂರ ಬೀರದೇವರು ಸಾಕ್ಷಿ. ಹೈಹಳದ ಬೀರದೇವರು, ಹಿರಿವೂರ ಬೀರದೇವರು, ನಾಥಡಿಗೆ ನಾಕ್ಕಟ್ಟಿಂಣ್ಯ ಬೀರದೇವರು, ಹೈಯಾಳದ ಬೀರದೇವರು, ಪೂರ್ವದ ಆದಿದೈವ. ಇನ್ನು ಇವರಿಗೆ ಕುರುಬರು ಕುಲ ಸೂರ್ಯ ಚಂದ್ರ ಇರುತನಕ xxxx ನಾಲ್ವತ್ತವಾಡದಲ್ಲಿ ಶಾಸನದ ಲಿಪಿ ಕಲ್ಲು ಹಾಕಿಯಿದ್ದೀತೆ. ಕುರುಬರು ಕುಲಯಿಷ್ಟು ಕುಡ್ಲಿಕ್ಕಾಗಿ ಕುರಿಹಿಂಡು ದನದ ಹಿಂಡು ಹಿರೇಹೊಳೆಯ ದಿಡಗು ನೀರ ಕುಡೆಗೊಸದು ತಮ್ಮ ತುರದೊಳಗಣ ವಂದಿನದ ಕಡೆದ ಬೆಣ್ಣೆ ಮೂಗಂಡುಗ ಬೆಣ್ಣೆನು ಹಾಕಿ ನಾಲ್ವತ್ತು ಮಂದಿ ತುರಕಾರು ಹಾಕಿಸದೆ ವಿದಿಡಗ ಸುಟ್ಟರು. ಆಮೇಲೆ ಪಕ್ಷಿಗಳ ಸಾವಗೊಳಗಾದರು. ಆಮೇಲೆ ಗುರುವಿಗೆ ಊರು ಉಮ್ಮಳಿ ಗುರುವಿಗೆ ಕೊಟ್ಟರು, ಹಿರುಊರು ಗೌಡಕಿ ಸರೂರ ಗೌಡಿಕಿ ಕಿರಸೂರು ಗೌಡಿಕಿ ಚಿಗಭೂಮಿ ಅರವತ್ತಾರು ಚವರ ಚಿಗಭೂಮಿ, ಅರವತ್ತಾರು ಚವರ ಭೂಮೀಯೊಳಗೇ ಕರಿಸಿದ್ಧವೊಡೇರು ಮಾನ್ಯವು. ಮಳಗಾವಿ ಗೌಡಿಕಿ ನಾಕು ಊರ ಗೌಡಿಕಿ ಹಡಿದಿಸಿರಿ ಮದಾರಿಕಿ ಆಳು ಯಿಷ್ಟು ನಡದು ಮೇಟಿ ಮಾನ್ಯ. ಹತ್ತು ಕೊಳಗದ ಭೂಮಿ ಮಾನ್ಯವು ಗುರುವಿಗೆ. ಇಲ್ಲಿ ವಡೇರು ರಾಜ್ಯದ ಮೇಲೆ ಯಾರು ಕುರುಬರ ಗುರುಯೆಂಬವರೆಲ್ಲರು ಸರವೂರು ಮಠಕೆ ನಡೆಬೇಕು. ನಡೇದಿದ್ದರೆ ಕುಲಾಚಾರ ಶಿವಾಚಾರಕ್ಕೆ ಸಲ್ಲ, ಯೀ ಗುರುವಿನ ಸೇವೆ ಸತಕಾರ ಮಾಡುವಂತರ, ಜಗ್ಗಲವರು ಹಾಲವರು ನಡಹಟ್ಟಿ ಅವರು ಗೌಡನವರು ಇದಕ್ಕೆ ಚಾಜಗಾರರು ಗುರುಕಳಸವಿಕ್ಕಿದಲ್ಲಿ ಜಗ್ಗಮುತ್ಯನದು ಒಂದು ಕಳಸ. ಹಾಲವರದು ಒಂದು ಕಳಸ. ಆದಿಗೊಂಡ ಗೌಡನವರದು ವಂದು ಕಳಸ. ನಡಹಟ್ಟಿ ನಾಗರಾಯ ಕೆಟ್ಟವರ ಕೂಡಿಕೊಂಡು ಉಣಬೇಕು. ಉಂಡವನದು ಗಂಗಳ ಇವನದು ಯಿವರಿಗೆ ಊಡುಗೊರೆ ಉಚ್ಚಾಯ, ನಾಲ್ವರಿಗೆ ಮಾಮನಿಯವರಿಗೆ ಚಾಜ. ಇಷ್ಟಕುಲದೈವಕೆ ಚಾಜ ಮಾನ್ಯಣೆ ಕೊಡುವದು. ಕುರುಬಯಂಬ ಕುಲ ತಪ್ಪಿದರೆ ಬೇಡರ ಮನೆ ವಳಗೆ ಉಂಡರೆ ತಪ್ಪು. ಕಬ್ಬೆರ ಮನೊವೊಳಗೆ ಉಂಡರೆ ತಪ್ಪು. ತುರಕರ ಮನೆವೊಳಗೆ ಉಂಡರೆ ತಪ್ಪು. ಹೊಲತಿ ಹೋದರೆ ತಪ್ಪು ಸೂಳಿವೆಣ್ಣು ಬಿಟ್ಟರೆ ತಪ್ಪು. ಸೆರೆಹೋದಡೆ ಹೆಣ್ಣಾಗಲಿ ಗಂಡಾಗಲಿ ಹಾಗೆ ಬಹುದು. ಸುಕ್ಷದಲ್ಲಿ ಹೊದದು ಕುಲಕೆ ಸಲ್ಲದು ಇನ್ನು ಇದ ಮೀರಿ ನಡದರೆ ಅರಮನೆ ಗುರುಮನೆ ತೆಪ್ಪುಗಾಣಿಕಿ ಕೊಡಬೇಕು, ದಿವಾದ ಹೊಂನ ಕೊಡಬೇಕು. ಆದರೆ ಇಷ್ಟು ಮೀರಿ ನಡೆದರೆ ಸರೂರ ಮಠಕ್ಕೆ ಬಂದು ಶುದ್ಧಿ ಕೊಟ್ಟರೆ ನಮ್ಮ ದೋಷ ಹಿಂಗೀತು ಯೆಂದೂ ಮಾ[ತನಾ]ಡಿದರು. ನಾಲ್ವತ್ತು ಮಂದಿ ತುರಕಾರರು ನಮ್ಮ ಬದಿಕಿನಯೊಳಗೆ ಸರಿಬದಕ ಕೊಡಬೇಕುಯೆಂದು ನಾಲ್ವತ್ತುಮಂದಿ ಮಾತನಾಡಿದರು. ಗುರುಸ್ವಾಮಿ ಯೀಗೆ ನಡದಿತ್ತು ಮುಂದೆನಡೆಯದುಯೆಂದನು. ಗುರುಸ್ವಾಮಿ ನೀವು ಹೆಳಿದವಕ್ಕೆ [ನಾ]ವು ಕೇಳೇವುಯೆಂದು ಕುರುಬರ ಆಡಿದರು. ಗುರುವು ಶಿಷ್ಯರಿಗೆ ಹೇಳಿದನು. ಹಿಂಡಿಗೊಂದು ಜೆಂನಿಗಿ, ಮಗ್ಗಕೊಂದು ಜಾಡಿ ಮದಿವಿಯ ಮಾಡಿದರೆ ಉಡುಗೊರಿ ಉ[ಭ]ಯಾ, ಹದರಗಣ್ಣಿಕ್ಕಿ ಸೀತ ಪರಿಹರವು, ಕಟ್ಟ ಮಾಡಿರಿಯ ಉಣ್ಣಿ, ಇದ ನಡಸಿಕೊಡಿರಿ. ಇಷ್ಟುದಿನ ಅಣ್ಣಗೆ ತಂಗಿಗೆ ಮದಿವಿ ಮಾಡಿದಿರಿ. ಇನ್ನು ಮದಿವಿಯ ಮಾಡಬೇಡಿರಿ. ಇನ್ನು ಬೆಡಗ ಹೆಸರ ಕೊಡುತಿನಿ.

ಜಗ್ಗಲವರು ಗೌಡನವರು [೧][ಹಾಲ][೧]ವರು ನಡಹಟ್ಟಿ ಯವರು ಮಾನ್ಯನವರು ಬನ್ನೆನರು ಬರಡಾವಿನವರು ಹುಲ್ಲೆನವರು ತೋವಿನವರು ಸಿತ್ತಳದವರು ಗಂಟೆನವರು ಬಸಿರಿನವರು ತುರಿಬಿನವರು ಬೆಲ್ಲವರು ಬೊಪ್ಪ[ಣಿಗ]ರು ಬೂತಲವರು ಯಡವನರು ಹುತ್ತದವರು ರುದ್ರಗುಲದವರು ವರಿಗೆ [ಲವ]ರು ಹಂಡೆಲವರು ಕೆಂಗರಲವರು ಕೊರೆಲವರು ಅಗ್ಗಣಿಗೊಲದವರು ಕೊಟ್ಟಲವರು ದಣ್ಣೆಲವರು ತುಪ್ಪದವರು ಕೆಂಬೆಲವರು. ಆವಾಗುರುಬು ಸಾದಗುರುಬು ಪಂಚಮ ಗುರುಬು ಕಂಬಳಿಗುರುಬು ಕುರಿಯ ಆದಿನವರು ಆವಾಗುರುಬು ಸಾದಗುರುಬು ಪಂಚಮ ಗುರುಬು ಕಂಬಳಿಗುರುಬು ಕುರಿಯ ಆದಿನವರು ಚಿಕ್ಕದಉಂಗರ ಹತ್ತಿಯ ಕಂಕಣ ಉಣ್ಣಿಯ ಕಂಕಣxxxಯ ಕಟ್ಟಿ ಉಣ್ಣಿಯ ಕಂಕಣದ ಹೆಣ್ಣ ಹತ್ತಿಕಂಕಣದವರು ತಕೊಂಡರೆ ತಪ್ಪು. ಹತ್ತಿಯ ಕಂಕಣದ ಹೆಣ್ಣು ಉಣ್ಣಿಯ ಕಂಕಣದವರು ತಕೊಂಡರೆ ತಪ್ಪು. ಕು[ರು]ಬಯೆಂಕುಲವ ನಡತಿ ಹೆಂಗೆಯ ಹೇಳುವೆನು ಕೇಳು ಬೇಡರ ಮ[ನೆಯೊಳ]ಗೆ ಉಂಡರೆ ತಪ್ಪುxxxವೆಸದು.

[ಎರಡನೆಯ ಸುರುಳಿ]

xxxಸಂಬನು ಉಳಿಯಳುxxಡುಯೆಂಬವನು ಬೆಳಿಯ ಬೆಳೆಯ ಕೆಡಗೆ ನಾಯಹಲ್ಲು ಎಂಬುತ ತಿನಬಾರದು ಗxxಡರೆ ಹೋತಿನ ಬಡಿಗೆಯಂಬನುxxxಗೆಣಸ ಕಂಡರೆ ನಾಯ ತುಣಿಯಗಟ್ಟು ಯಂಬನು. ಮುಲ[ಂ]ಗಿಯ ಕಂಡರೆ ಕೋಣನ ತುಣಿಯಂಬನು, ಕೆಂಬರಿವಿಯ ಪಲ್ಲೆವ ತಿಂದರೆ ಮಾಂ[ಸಯೆಂ]ಬನು ತಿನ್ನಬಾರುದು ಯೆಂದುವೀ ಪರಿಯಲ್ಲಿ ಡಂಗುರವ ಹೊಡಸು ತಿರ್ದ. ಕುರಿಮರಿ ಸಹವಾಗಿರು ಹಟ್ಟಿ ಹಾಕಿಕೊಂಡು ಇಳದರು. ಕಲಿಗಣನಾಥನೆಂಬ ಅರಸುಮಷ್ಟ ಸೀಮಿಯಲ್ಲಿ ಇವರಾರೂ ಇಳದಾರು ಆರನ ವಿಚ್ಚ ಮಾಡಿ ಕೇಳಿ ಬಾಯೆಂದು ಮನಿಷನ ಕಳಿವಿದನು ಆ ಮನಿಷ ಬಂದು ನೀವಾರು ನಮ ಸೀಮೆಗೆ ಇಳಿದಿರಿಯೆಂದು ಕೇಳಲಿಕ್ಕೆ ನಾನು ಈ ಭೂಮಿಯ ಆದಿಯ ಒಕ್ಕಲು, ನಾನು ಆದಿಗೊಂ[೨]ಡ[೨]ಗೌಡ, ನಮ್ಮ ಹಿರಿಯರು ದೇವಗೊಂಡಗೌಡ, ಅವರ ಹಿರಿಯರು ಆxxರ ಗೊಂಡಗೌಡ ನಮ್ಮ ವಾರಿಗಿಯವರು ಯಿದಾxxxxಳಗೆ ಯಾರಾರುಯಿಲ್ಲ ಎಂಬುತ ಬಂದ ಮನುಷ್ಯನೊಡನೆ ಹೇಳಿದನು. ಹಂಗಾದರೆ ನಮ್ಮ ಅರಸು ಕರಕೊಂಡು ಬಾ ಆ ಯೆಂಬುತ ಹೇಳೆನ್ಯೆ, ನಿಮ್ಮ ನಡಿ ಅರಸಿನ ಬದಿಗೆಯೆಂದು ಕರದರು. ಹಂಗಾದರೆ ನಾನು ಬರುದಿಲ್ಲ ಹಿಂದಕೆ ಈ ಅರಸಿನ ಹಿರೇರು ನಮ್ಮ ಕರಕೊಂಡು ಬಂದು ನಿನಗೆ ಲಿಂಗವುಂಟೇ ಎಂದು ಕೇಳಿದರು. ನನಗೆ ನಮ್ಮ ಅಜ್ಜ ಅರತಲೆ ಮುತ್ಯ ಮುರುಯುಗ ನಮಗೆ ಮುನ್ನೆ ಲಿಂಗಧಾರಣವಿಲ್ಲ. ಹಿಂದೆ ಲಿಂಗ ನಮಗೆಲ್ಲಕ್ಕು ಲಿಂಗ ಕಟ್ಟಿಕೊಳಿಯೆ[ನುತ] ತಾವೆ ಸೋತುಹೋದರೊ ನನ್ನೆವೆ ಉಳಿದಿವು. ಅಲ್ಲಿಗೆ ನಾನು ಬರುವುದಿಲ್ಲವು, ನೀನೆ ನಿಮ್ಮ ಅರಸಿಗೆ ಹೇಳು ಹೋಗು ಎಂದ ಮಾತಿಗೆ ಬಂದಂಥ ಮಾನಿಸರು ತಿರಿಗಿ ಹೋಗಿ ಅರಸಿಗೆ ಹೇಳಿದರು. ಲಿಂಗವ ಯಿಲ್ಲದಿದ್ದರೆ ನಮ್ಮ ಭೂಮಿಗೆ ಬೇಡ ಅವನ ಕಳಿವಿಕೊಡು ಯೆಂಬುತ ಮನಿಷನ ಕಳಿವಿದನು. ಅವನು ಹೋಗಿ ನಮ್ಮ ಅರಸು ಅಷ್ಟು ಲಿಂಗವನು ಕಟ್ಟಿಕೊಂಡು ಇರುಬೇಕಾದರೆ ಇರು ಇಲ್ಲವೆ ಬಾ ಹೋಗು ಯೆಂದರೆ ಕುರುಬರು ಹಿಂಡ ಎಬ್ಬಿಸಿಕೊಂಡು ಹೋದರು. ಹೊರಕ್ಕೆ ಹಾಕಿಸಿಕೊಂಡು ಹೋದರು.

---

೧ ಹಲ್ಲ (ಮೂ) ೨ ಡ ಗೊಡ

ದೇವಗೊಂಡಗೌಡನ ಒಬ್ಬನೆ ನಿಂದ್ರಿಸಿಕೊಂಡರು. ಈತನ ಕರಕೊಂಡು ಅರಸಿನ ಬಳಿಗಿ ಕರಕೊಂಡು ಹೋಗಿ ಅಗಿಸಿಯ ಬಾಗಲ ಹೊರಗೆ ನಿಂದ್ರಿಸಿ ಹಚ್ಚಡದ ಪರದಿಯ ಕಟ್ಟಿ ಆ ಪರದಿಯ ಒಳಗೆ ಸೂತ್ರ[ದಾರ]ವನು ಕೊಟ್ಟು ಹಿಡಿಸಿ ಮೊಕ ನೋಡಬೇಕು ಎಂದು ಪಂಚಕಾಳವ ನಿಕ್ಕಿ ಮೊಕವ ನೋಡಿದರು. ಕಲಿಗಣನಾಥಗೆ ತನ್ನ ನಿಜರೂಪು ತೋರಿದನು. ನೊಸಲಕಣ್ಣು ದಶಭುಜ ಪಂಚಮುಖ ನಂದಿಮುಖವಾಹನವನು ಕಲಿಗಣನಾಥನ ಭಾವಕ್ಕೆ ಮೆಚ್ಚಿ ತನ್ನ ನಿಜರೂಪ ತೋರಿದನು. ನಿನ್ನ ಭಾವಕ್ಕೆ [ಮೆ]ಚ್ಚಿದೆನು ಏನು ಬೇಡುತ್ತಿದಿ ಬೇಡುಯೆಂದನು. ಎಲೆ ಸ್ವಾಮಿ ನಿನ್ನ ಮಹಿಮೆ ಯಾರಿಗೂ[ಹೊಳ]ದಿಲ್ಲ ಬ್ರಹ್ಮ ವಿಷ್ಣುಗಳಿಗೆ ನಿಲಕಲಿಲ್ಲ. ಎಲ್ಲಿದೆನೆ ನಿನ್ನ ಮಹಿಮಿ ನೀನೆ ಬಲ್ಲಿ. ಯಾರಿಗೂ ತಿಳದಿದ. ಎಲೆ ಸ್ವಾಮಿ ಯನ್ನನು ಕುತ್ರನ ಮಾಡುಯೆಂದು ಶಿರಸಾಷ್ಟಾಂಗ ನಮಸ್ಕಾರವನು ಮಾಡಿದನು. ಕಲಿಗಣನಾಥನು ಕಲ್ಲಿಯೊಳಗೆ ಮೆಚ್ಚಿದ ಗುಣದಿಂದ ಕಲಿಗಣನಾಥನೆಂಬ ಹೆಸರು ಕೊಟ್ಟುಹೋದನು ರಜತಾದ್ರಿ ಪರ್ವತಕೆ ಹೋದನು. ಪರಮೇಶ್ವರನು ಕಲಿಗಣನಾಥ ಸಂಗ[ಟ] ಹೊರಿಯಕ್ಕೆ ಹೊಕ್ಕಿಸಿಕೊಂಡು ಹೋದ ಕು[ರು]ಬರು ಮಕಣಿಯ ಹೊತ್ತುಕೊಂಡು ಮಕಣಿಯನು ಕಾಳಿಂಗ ಮಡಿವಿಗೆ ಇಳಿದರು. ಅಲ್ಲೆ ನಾಲ್ವತನು ಹಟ್ಟಿ ಮಾಡಿದರು. ಹಿರೆಯ ಹೊಳೆಯ ಹಿಡಿದು ಮೇಸಿಕೊಂಬು ಹೋದರು. ಹಟ್ಟಿಕಾರರು ಸರವೂರದಲ್ಲಿ ಮೊಬ್ಬ ಋಷೇಶ್ವರನು ತಪಸವನು ಮಾಡುತ್ತಿದ್ದನು. ಆ ತಪಸಿಯನು ಕಂಡರು. ಹಟ್ಟಿಕಾರರು ಕಲಿಗಣನಾಥನ ಸಂಗಟ ಹೊರಕ್ಕೆಸಿಕೊಂಡೆವು ಇಲ್ಲೆ ಮುನೇಶ್ವರ ಕಿಪಳಿಯ ಮೊರಡಿಯಲ್ಲಿ ತಪಸ ಮಾಡುತನೆ. ಈ ಮುನೇಶ್ವರನ ಪಾದವ ಹಿಡಕೊಂಡು ಇದ್ದರೆ ನಮಗೆ ಮುಂದೆ ಮೋಕ್ಷದ ಫಲವುಂಟುಯೆಂದು ಆ ಮುನೇಶ್ವರನ ಸುತ್ತಮುತ್ತ ಹಟ್ಟಿ ಹಾಕಿದರು. ಹಟ್ಟಿಕಾರರು ನಲ[ವಿಂದ] ಹಟ್ಟಿಯ ಹಾಕಿದರು. ನಮ್ಮ ಹೆಸರು [ಸಹ] ನಮ್ಮ ಇರಬೇಕೆಂದು ನಲ್ವತು ಮ[ಂ]ದಿ ಹಟ್ಟಿಕಾರರು ಕೂಡಿ ನಲ್ವತು ಮಂದಿ ಪಟ್ಟಣವ ಕಟ್ಟಿದರು ನಲ್ವತು ಮಂದಿ ಕೂಡಿ ಕಟ್ಟಿದ ಗುಣದಿಂದ ನಾಲ್ವತ್ತುಬಾಡಯೆಂಬ ಹೆಸರು ಇಟ್ಟುಕೊಂಡರು. ಇದಕ್ಕೆ ಒಬ್ಬ ಅ[ರ]ಸು ಬೇಕೆಂದು ನಾಲ್ವತು ಮಂದಿ ಮಾತಾಡಿಕೊಂಡು ಯೀರ ಹೆಮ್ಮಳ ರಾ[ಯ]ನೆಂಬ ಕುರುಬನನೆ ಅರಸ ಮಾಡಿಕೊಂಡರು. ನಲ್ವತ್ತಬಾಡದೊಳಗೆ ನಾಗರಬೆಟ್ಟದ ಹುತ್ತಕ್ಕೆ ಹಾಲನೆರವರು. ಸಪರಗೆ ರೋಮಜಮುನಿಗೆ ಹಾಲನೆರವರು ಯಿನಸದಲ್ಲಿ ಯಿರತಿರತಿದರು.

ಬಸಪ್ಪನ ಗುರುವು ಕಪ್ಪಡಿ ಸಂಗಮನಾಥನ [೧][ಪವಾಡ][೧] ನೋಡಬೇಕೆಂದು ಅರಸು ಬಿಜ್ಜಳರ ಪ್ರಧಾನ ಬಸಪ್ಪನು ಸಹಿತವಾಗಿ ನಮ್ಮ ತಳತಂತ್ರ ಮಾರ್ಬಲ ಸಹಿತವಾಗಿ ನೋಡಬೇಕೆಂದು ಬಂದರು. ಕುಲಕ್ಕೊಬ್ಬ ಶರಣ ಕೋಟಿಗೊಬ್ಬ ಭಕ್ತರುಗಳು ಬಂದರು. ಸಂಗಮನಾಥನ ಪಾದಕ್ಕೆ ನಮಸ್ಕಾರವ ಮಾಡಿ ದಂಡು ತಿರಿಗಿ ಹೋಗುತ ಇದ್ದರು. ಆ ಸಮಯದಲ್ಲಿ ಸ[ರೂ]ರ ಶಾಂತಮುತ್ಯ ಹಾಲಮುತ್ಯ ಅಬಲ್ಲಿಮುತ್ಯ ಕಂಬಳಿಮುತ್ಯ ಏಕಜಡೆಯ ರಾಮಮುತ್ಯಯ್ಯ ಪದ್ಮ ಮುತ್ಯಯ್ಯ ಬೆಲ್ಲಮುತ್ಯ ಮುತ್ಯಯ್ಯ ಯೇಳೂ ನಾಲ್ವತವಾಡಿಯ ಒಳಗೆ ಇವರು ಏಳು ಮಂದಿ ಹಿರೇರು. ಬಿಜ್ಜಳರಾಯನ ಬಸಪ್ಪನ ಕಾಣಿಸಿಕೊಳ್ಳಬೇಕೆಂದು ಒಂದು ಟಗರು ಎರಡು ಕಂಬಳಿ ಒಂದು ಹಾಲಕೊಡ ಒಂದು ತುಪ್ಪದ ಕೊಡ ಯಿವುದನು ಬೆಟ್ಟಿಯನಿಟ್ಟು ನಮಸ್ಕಾರ ಮಾಡಿದರು.

---

೧ ಪೊವರ (ಮೂ)

ಬಿಜ್ಜಳರಾಯನು ಬಸವಣ್ಣನು ನೀವು ಯಾರುಯೆಂದು ಕೇಳಿದರು. ನಾವು ಆದಿಗೊಂಡಗೌಡನ ಮೊಮ್ಮಕ್ಕಳು ಇಲ್ಲಿ ಮುನಿಯು ಕೋಡಗ[ಲ್ಲ] ಮೇಲೆ ತಪಸ ಮಾಡುವ ರುಷಿಯ ಕಾಯಕೊಂಡು ಇದ್ದೆವು. ಹಾಗಾರೆ ತಪಸ ಮಾಡುವ ಮುನಿಯ ನಮಗೆ ತೋರುಯೆಂದರೆ ಕರಕೊಂಡು ತೋರಿದರು. ಅರಸು ಪ್ರಧಾನಿ ಪ್ರದಕ್ಷಿಣವ ಮಾಡಿ ತಿರಿಗಿ ನೋಡಿ, ಇಂತಪ್ಪ ತಪಸ ಈ ಮುನಿ ಕೈಲಾಸ ಬೇಡಾನೊ ಭೂಮಿಯ ಬೇಡಾನೊ ನಮ್ಮ ಕೈಯ ಆಗದುಯೆಂದು ಹಿಂದಕ್ಕೆ ತಿರಿಗಿ ಹೋಗುವಾಗೆ, ಅರಸಿಗೊಂದು ಪ್ರಧಾನಿಗೊಂದು ತಲೆಗೆ ಒಂದೊಂದು ಹೊದಕೊಂಡರು. ಆ ಟಗರ ಅರಸು ತಾನೆ ತಕೊಂಡನು. ತುರಗಾರರಿಗೆ ಮೆಚ್ಚಿ ಅರಸು ಉಡುಗೊರೆಯ ಮಾಡಿದನು. ಈ ತುರಗಾರರು ಸಂತೋಷಬಟ್ಟರು. ತುರಗಾರರು ನಮ್ಮಲ್ಲಿ ಹಾಲು ಬೆಣ್ಣೆ ಮಜ್ಜಿಗೆ ನಿಮ್ಮ ದಂಡಿಗೆಯೆಲ್ಲ ಆದೀತುಯೆಂಬುತ ಹೇಳಿದರು. ಇವರ ನೋಡಬೇಕೆಂದು ಅರಸು ಒಪ್ಪಕೊಂಡನು. ಅದಕ್ಕೆ ಸಗೆ ದಂಡಿಗೆಲ್ಲ ಆದೀತುಯೆಂಬುತ ಹೇಳಿದರು. ಇವರ ನೋಡಬೇಕೆಂದು ಅರಸು ಒಪ್ಪಕೊಂಡನು. ಅದಕ್ಕೆ ಸಗೆ ದಂಡಿಗೆಲ್ಲ ಹಾಲು ಬೆಣ್ಣೆ ಮಜ್ಜಿಗೆ ನೀಡಿದರು. ಇಂತವರನು ಬಿಡಬಾರದೆಂದು ಅರಸು ಪ್ರಧಾನಿ ತಮ್ಮ ಕಲ್ಯಾಣಪಟ್ಟಣಕೆ ಕರಕೊಂಡು ಹೋಗಿ ಪವಲ್ಲಗೆರಿಯಲ್ಲಿ ಅವರ ಹಟ್ಟಿಯ ಹಾಕಿಸಿದರು. ಈ ತುರಗಾರು ತಮ್ಮ ಸತ್ತಕುರಿಯನೆಲ್ಲ ಕಡದು ಸುಟ್ಟು ಕಮರ ಎಬ್ಬಿಸಿದರು. ಆ ಪಟ್ಟಣದೊಳು ಹೊಸ ಕಮರುಯೆಲ್ಲಿದೊ ಇದನು ತಿಳಿದುಕೊ ಕೊಂಡೆಯ ೧[ಮಂ]೧ಚಣ್ಣಯೆಂಬುತ ಅರಸು ಪೇಳಿ ಕಳಿವಿದನು. ಆ ಕೊಂಡೆಯ ಮಂಚಣ್ಣ ಬಂದು ನೋಡಿಕೊಂಡು ಹಿಂದಕೆ ಹೋಗಿ ಅರಸಗೆ ಹೇಳಿದನು. ನಿನ್ನೆ ಬಂದ ಹೊಸ ಒಕ್ಕಲು, ಆ ಹಾಲ ಕೊಟ್ಟವು ತಾಯಿ ಯೆಂದು ಅರಿಯರು ತಂದೆ[ಯೆಂ]ದು ಅರಿಯರು ಮಕ್ಕಳೆಂದರಿಯರು ಇಷ್ಟನೂ ತಿಂಬುತಾರೆ ಯೆಂದು ಕೊಂಡೆಯ ಮಂಚಣ್ಣ ಹೇಳಿದನು. ಅರಸು ಇಂಥ ದ್ರೋಹಿಯ ಮುಖ ನೋಡಲಾಗದು ತುರಗಾರನು ಏಳುಬೇಲಿಯ ಕೀಳ ಹೊಲೇರುಯೆಂದು ಹೊರಯಕ್ಕೆ ಹಾಕಿಸಿದನು. ಮತ್ತೆ ತಿರಿಗಿ ತಪಸಿಯ ಹಂತ್ತಿಕ್ಕೆ ಬಂದರು. ಸರವೂರದಲ್ಲಿ ಇಳಿದರು ಈ ತಪಸಿಯಿಂದ ನಮ್ಮ ಪಾಪ ಹಿಂಗದೆ ಎಂದುಹನ್ನೆ[ರ]ಡು ವರುಷ ಆ [ತಾ]ಪಸಿಯ ಕಾಯ್ದು ಕೊಂಡೊಯಿದರು. ಆ ತಪಸ ಕೆಡಿಸಬೇಕೆಂದು ದೇವಗನ್ನಿಕೆಯರು ನಾಗ[ಕನ್ನಿ]ಕೇರು ಕಂಚಕಕ್ಕಿ ಕಳಸವ ತುಂಬಿಕೊಂಡು ಬಂದು ತಾಪಸಿಗೆ ಬೆಳಗಿದರು. ಹೆಣ್ಣುಮಕ್ಕ ಕಣ್ಣಲ್ಲಿ ನೋಡಲಿಲ್ಲವು. ಅ ಹೆಣ್ಣಮಕ್ಕಳು ನಿಂತು ನಿಂತು ನೋಡಿ ಬೇಸತ್ತು ಹಿಂದಕ್ಕೆ ತಿರಿಗಿ ತಮ್ಮ ಸ್ಥಳಕ್ಕೆ ಹೋದರು. ಹೋಗಿ ಪರಮೇಶ್ವರರಿಗೆ ಎಲ್ಲೈ ಪರಮೇಶ್ವರನೆ ಕೇಳು. ಆ ಮುನಿಪಾಲ ಹೆಣ್ಣಿಗೆ ಮಣ್ಣಿಗೆ ಸಿಕ್ಕುವಾತನಲ್ಲವು. ಹಂಗಾದರೆ ಮತ್ತೊಂದು ವಿದ್ಯೆಯನು ಹೇಳುವೆನು ಕೇಳು. ಆತನ ಮೇಲೆ ತರೆದ ಕೆಂಡವನು ತಾಂ ಕೊಂಡು ಹೋಗಿ ಆ ಮುನಿಯ ಮೇಲೆ ಹೊಯ್ಯಿರಿ ಎಂದು ಹೇಳಿದನು. ಆ ದೇವಕನ್ನಿಕೇರು ಕೆಂಡವನು ತಾ ಕೊಂಡು ಬಂದು ಆ ಮುನಿಯ ಮೇಲೆ ಹೊಯ್ದರೆ ಕೆಂಡಯೆಲ್ಲವೂ ನಂದಿ ತಣ್ಣಗಾಗಿ ಇದ್ದಿಲಾಗಿ ನೆಲಕ್ಕೆ ಉರುಳಿದವು. ಆ ಮುನಿಯು ಹಾಗೆ ತಪಸ ಮಾಡುತ ಇದ್ದನು. ಆ [ದೇ]ವಗನ್ನಿಕೇರು ಹಿಂದಕ್ಕೆ ತಿರಿಗಿ ಹೀಗೆ ಶಿವಗೆ ಬಿನ್ನೈಸಿದರು. ಎಲ್ಲೈ ಶಿವನೆ ಹೆಣ್ಣು ಮಣ್ಣು ಬೆಂಕಿಗೆ ಗಾಳಿ ಬಿಸಿಲು ಸತ್ವ ರಜತಮಗುಣಂಗಳನು ವಿಡಂಬ ಮಾಡಿ ನಿಂತಂತಾತನು. ಆ ಮುನಿಯು ನಿನ್ನನೇ ಧ್ಯಾನಿಸುವನು ಆತನ ತಪಸವ ನಮ್ಮ

---

೧ ಮಾ (ಮೂ)

ಕೈಯಲ್ಲಿ ಕೆಡಿಸುವದು ಆಗದು. ಹಂಗಂದ ಮಾತಿಗೆ ಶಿವನು ನಾರಂದ ಮುನಿಯ ಕರದು, ಎಲೈ ನಾರಂದನೆ ಕೇಳು ಕಿರಪಳ್ಳಿ ಮೊರಡಿಯಲ್ಲಿ ಅರಿತು ಹನ್ನೆರಡು ವರುಷ ಅರಿಯದೆ ಹನ್ನೆರಡು ವರುಷ ಅನ್ನಯಿಲ್ಲವು ಆಹಾರವಿಲ್ಲ, ಮುಚ್ಚಿ[ದ] ಕಣ್ಣು ಮುಗಿದ ಹಸ್ತವು ಉಗ್ರತಪಸಿನಲಿದ್ದನು. ನಾರಂದಋಷಿ ಕೇಳು, ಆ ಮುನಿಯನು ಏನ ಬೇಡಿ ತಪಸ ಮಾಡುತಾನೆ ಕೇಳಿ ಬರೋಣ ನಡಿಯೆಂದು ನಾರಂದಗೆ ಶಿವನು ಹೇಳಲು, ಆಗಲಿ ಸ್ವಾಮಿಯೆಂದು ನಡಯಿ ಯೆಲೆ ದೇವನೆ ಸರವೂರಕೆ ಬಂದು ಮರ್ತ್ಯಲೋಕದ ವಿಸ್ತಾರವನೆಲ್ಲ ನೋಡಿ ಮನಸಿ[ಗೆ] ತಂದು ಆ ಮುನಿಯ ಹತ್ತಿ[ರ]ಕೆ ಬಂದರು. ತ್ರಿಶೂಲ ಡಮರುಗ ಬಾರಿಗಪರ ಕಡಿಸುತ್ತ ನಿಲವಗನ್ನಡಿ ವಜ್ರಾಯುಧ ಕರಕೋಟನೆಂಬೊ ಕರ್ನಕೊಲವು ಪದ್ಮಶಂಕನೆಂಬೊ ಸರ್ಪವ ಮುಡಿಗೆ ಧರಿಸಿದನು ತ್ರಿಪರಾಗಿ ಎಂಬ ಸರ್ಪನ ನಡಿವಿಗೆ ಒಡ್ಯಾಣ ಮಾಡಿದನು. ವೆರಾಗಿಯೆಂಬ ಸರ್ಪನ ಪಾದುಕವ ಮಾಡಿದನು. ಒಂದು ಕಡೆಯ ಸೂರ್ಯನ ಧರಿಸಿದನು. ಒಂದು ಕಣ್ಣು ಚಂದ್ರನ ಧರಿಸಿದನು. ಒಂದು ಕಣ್ಣು ಅಗ್ನಿಯ ಕಣ್ಣು ಧರಿಸಿಕೊಂಡು ಇದ್ದನು. ನೊಸಲಕಣ್ಣು ಚತುರ್ಭುಜ ನಂದಿವಾಹನ ಗರುಡರು ಗಂಧರ್ವರು ಕಿನ್ನರರು ಕಿಂಪುರುಷರು ಸಿದ್ಧವಿದ್ಯಾಧರರು ತೆತ್ತೀಸಕೋಟಿ ದೇವರ್ಕಳು ಕೂಡಿ [೧][ಪ್ರದ][೧]ಕ್ಷಣವನೆ ತಿರಿಗಿ–ಎಲೆ ಮುನಿ ಏನು ಬೇಡುತಿದ್ದಿ ಬೇಡು ಹರನಂದು ತಬ್ಬುತಲಿ ತಬ್ಬಿಸಿ ಕರಗಳ ಮುಗಿದು ಸ್ಥಿರವ ನೀ ಬಾಳು ಏನು ಬೇಡುತಿದ್ದಿ ಬೇಡು ಎಂದನು ಒಡವಿಯನೊಲ್ಲೆ ವಸ್ತವನೊಲ್ಲೆ ಕಲ್ಯಾಣಪಟ್ಟಣದಗೆ ಏಳ[೨][ಬೇಲಿ][೨] ಕೀಳ ಹೊಲೇರಾಗಿ ಬಂದರೆ ಈ ಕು[ರು]ಬರ ಕುಲವ ಮೇಲ ಕುಲವ ಮಾಡಿ ಕೊಡಿಸೆನಗೆಯೆಂದು ಬೇಡಿದನು. ನೀ ಮಾಡಿದಂಥ ತಪಸಕೆ ಸೀಮೆ ಬೇಡನೊ ಭೂಮಿ ಬೇಡನೊ ಧೈರ್ಯವ ಬೇಡನೊ ಎಂದಿದ್ದೆವು. ಉಂಡಕೈಯ ಉಣ್ಣಿಗೆ ಒರಸುವಂಥ ಹೆಡ್ಡಗುರುಬರು ಕುಲವ ಬೇಡಬಹುದೆ. ಮರುಳು ಮಕ್ಳಿಗೆ ಒಡೆಯನಾಗಿದ್ದೆನು ಶಂಕರ ವರವ ಪಾಲಿಸು ಏವ ಬಿರದ ಗೆಲಸು ಎಂದನು. ಕೊಟ್ಟೆ ಕೊಟ್ಟೆ, ಕೊಟ್ಟುದೆ ಖರೆವದರೆ ಬ್ರಹ್ಮ ವಿಷ್ಣು ರುದ್ರ ಇವರು ಮೊದಲು ಸೂರ್ಯ ಚಂದ್ರ ಇರುವ ಪರಿಯಂತ್ರ ಪಾಲಿಸು ಯೆಂದನು. ಮೂರುಬೊಟ್ಟಿನ ವಿಭೂತಿಯನು ಧರಿಸಿದನು. ಬೆಳ್ಳಗೆ ಮೂರುಬೊಟ್ಟಿನ ವಿಭೂತಿಯ ಹೆಸರು ಹೇಳುಯೆಂದನು. ಅರಿತವಗೆ ಮೂರು ಯೆ[ರ]ಡು ಅರಿಯದವಗೆ ಮೂರು ಕೇಡು. ಕೊಟ್ಟರೆ ವರವು ಇಟ್ಟರೆ [೩][ಶಾಪ][೩] ಕೊ[೪][ಲ್ಲ][೪]ದ ಕೊಲೆ ಹಗ್ಗವಿಲ್ಲದ ಕಟ್ಟು ಹಾಲ ಮತ ಹರುವ ಸಾಗ್ರ ಕೊಟ್ಟು ಭಾಷೆಗೆ ತಪ್ಪುದಿಲ್ಲ ಎಂಬುತ ಶಿವನು ಕೊಟ್ಟ ಹೊಲ್ಲರೆಂಬ ಕುಲವನಳಿದು ಗುರುದೀಕ್ಷವಂ ಕೊಟ್ಟು ಪಂಚಕಳಸನಿಟ್ಟು ಆಚಾರರು ಬಂದರು.

ಸೊಲ್ಲಾಪುರ ಸಿದ್ಧರಾಮಯ್ಯನವರದು ಒಂದು ಕಳಸ, ಪರ್ವತ ಮಲ್ಲಿಕಾರ್ಜುನದೊಂದು ಕಳಸ, ರೇವಣಸಿದ್ಧೇಶ್ವರ[ನ]ದು ಒಂದು ಕಳಸ, ಚಿಕ್ಕಯ್ಯನವರದು ಒಂದು ಕಳಸ, ಶಾಂತಯ್ಯನವರದು ಒಂದು ಕಳಸ, ಗುರುವಿನ ಗುರು ಪರಮಗುರು ಪರಮಾರಾಧ್ಯರ ಆದಿಗೊಂಡಗೌಡನ ಮೊಮ್ಮಕ್ಕಳು ದೀಕ್ಷ ಪಡದರು. ಕಲ್ಯಾಣಪಟ್ಟಣಕೆ ನಮ್ಮ ಪವಾಡವನು ಉಂಟುಮಾಡಿ ಕೊಡಿ ಎಂದರು. ಹಾಗಂದ ಮಾತಿಗೆ ತಪಸಿ ನೀನು ನಿನ್ನ ಶಿಷ್ಯರ ಕೂಡಿಕೊಂಡು ಕಲ್ಯಾಣ ಪಟ್ಟಣಕೆ ಹೋಗು ಎಂಬುತ ಶಿವನು

---

೧ ಪಡ್ಲ (ಮೂ) ೨ ಬೆಲ್ಲೆ (ಮೂ) ೩ ಸ್ರಾಪ್ಪ (ಮೂ) ೪ ಲ್ಲಿಲ (ಮೂ)

ಅವರಿಗೆ ಹೇಳಿದನು. ಈ ವರವ ತಕೊಂಡ ಈ ಸತ್ತಕುರಿ ಹೆತ್ತ ಮೊಸರು ಹೊತಕೊಂಡು ನಲ್ವತ್ತ ಮಂದಿ [ತುರ]ಗಾರರ ಕೂಡಿಕೊಂಡು ಪರಿಸವ ಹೋಗುತಿದ್ದರು. ಆ ಹೋಗೊ ಸಮಯದಲ್ಲಿ ಲಿಂಗವನು ಕಟ್ಟಿಕೊಂಡು ಬಾಯೆಂದು ಮುಕ್ಕಂಡುಗ ಲಿಂಗವ ಹೇರಿಕಳಿವಿದ್ದರು.ಲಿಂಗವ ಕಣ್ಣಿಗೆ ಮಯವ ಮಾಡಿದ್ದರು. ಆಗ್ಗೆ ಮಾಯಿ ಮುಕ್ಕಣ್ಣಯಪುರ ಎಂಬ ಹೆಸರಾಯಿತ್ತು. ಅದನು ದಾಟಿ ಮುಂದಕೆ ಹೋದರು. ಕಲ್ಯಾಣಪಟ್ಟಣದೊಳಗೆ ಸತ್ತ ಬಸವನ ಬಂಡಿ ಮೇಲೆ ಹೇರಿಕೊಂಡು ಇಂಬಿಡಲಿಕೆ ಬರುತಿದ್ದರು. ಹೊರಗಿದ್ದವರು ಸತ್ತ ಕುರಿಯ ಹೊತ್ತುಕೊಂಡು ತುರಗಾರರು ಇವರು ಬರುತಿದ್ದರು. ಬರೋ ಹೊತ್ತಿಗೆ ಇಬ್ಬರಿಗೆ ಕಡೆಯ ಬಾಗಲದಲ್ಲಿ ತುರಗಾರರನು ಒಳಯಿಕ್ಕೆ ಹೋಗಗೊಡದೆ ತರಿಬಿದರು. ಬಸವನ ಹೊರಯಿಕ್ಕೆ ಹೋಗಗೊಡದೆ ತರಿಬಿದರು. ನಿಮ್ಮ ಸತ್ತ ಬಸವಣನ ಪ್ರಾಣ ನೀವೆ ಪಡೀರಿ. ನಮ್ಮ ಸತ್ತ ಕುರಿಯ ಪ್ರಾಣ ನಾವೇ ಪಡೆಯುತ್ತೇವೆ ಎಂದು ವಾದವ ಬಿತ್ತು. ವಾದ ಬಿದ್ದುದ ಕಂಡು ಕೊಂಡೆಯ ಮಂಚಣ್ಣನು ಬಿಜ್ಜಳರಾಯರಿಗೆ ಹೇಳಿದನು. ತುರಗಾರರ ಜುಲ್ಮಿಯ ಮಾಡಬೇಡಿ ಎಂದು ಹೇಳಿದನು. ಬಿಜ್ಜಳರಾಯನು ಪವಾಡವ ಮಾಡಿಸುಯೆಂದನು. ಅದಕ್ಕೆ ಗಣಂಗಳು ನಮ್ಮ ಬಸವಣ್ಣ ಸತ್ತ ನಾವು ಬಲ್ಲೆವು. ಅವರ ಕುರಿ ಸತ್ತುದ ನಾವು ಅರಿಯೆವು. ಅವರು ಗಿಡಗಾರರು ಸತ್ತ ಕುರಿ ಎಬ್ಬಿಸರು ಅದ ಕುರಿಯ ನಾವು ಒಲ್ಲೆವು. ನಿಮ್ಮ ಅರಮನೆ [ಯಲಿ] ಇರುವ ಟಗರ ಕೊಡಿ. ಅದರ ಬೆಲೆ ನಾವು ಕೊಟ್ಟೇವು ಎಂಬುತ ತಳ್ಳಿದರು. ತನ್ನ ಟಗರ ಅರಸು ಕೊಟ್ಟನು. ಆ ಟಗರನು ಹಿಡಕೊಂಡು ಬಂದರು. ತ್ರಿಪುರಾಂತಕಲಿಂಗದ ಗುಡಿಯ ಮುಂದೆ ತಲೆ ಹೋಹ ಸಮಯದಲ್ಲಿ ಲಿಂಗದ ಮರೆಯ ಬಿತ್ತು. ಅಡಿಯಲ್ಲಿ ಕಿನ್ನರಯ್ಯ ಬ್ರಹ್ಮಯ್ಯನೆಂಬ ಶರಣನು ಆ ಟಗರ ಕಂಡು ಲಿಂಗಮುದ್ರೆಯನು ಹಚ್ಚಿದನು. ಅರಮನೆಯ ಟಗರ ನೀ ಹೆಂಗೆ ಲಿಂಗಮುದ್ರಿ ಹಾಕಿದಿಯೆಂದು ಜುಲಿಮಿಯಲ್ಲಿ ಆ ಟಗರ ಹಿಡಿಯ ಹೋದರು. ಹೋದ ಹೋದವರನೆಲ್ಲ ಸರದೂ ಹಾದು ಕೊಂ[ದಿ]ತು. ಹತ್ತೆಂಟು ಮಂದಿಯ ಕೊಂ[ದಿ]ತು. ಅದಕ್ಕೆ ಸೆಡಿಕಿನ ಹಗ್ಗ ಹಾಕಿ ಪಿಡಿತಂದು ಆ ಸತ್ತ ಬಸವಣನ ಮುಂದೆ ತಲೆಯ ಹೊಯಿದರು ನವ ಚಿದ್ರವ ಮಾಡಿ ಕಡಿದರು. ಅದರ ತಲೆ ಮೇಲೆ ಚಿದ್ರದ ಮೇಲೆ ಇಟ್ಟರು. ಇದರ ಪ್ರಾಣವ ಪಡೆಯೆಂದರು. ಹಂಗಾದರೆ ನಿಮ್ಮ ಬಸವಣನ ಪ್ರಾಣ ನೀವು ಮುಂದೆ ಪಡೀರಿ ಎಂದು ಹೇಳಿದರು. ಕಂಚಕ್ಕಿ ಕಳಸ ತುಂಬಿ, ರಂಗವಾಲಿಯನಿಕ್ಕಿ, ಕ್ರಿಯ ತೀರ್ಥ ಪ್ರಸಾದವ ಕೊ[ಟ್ಟು] ಬಸವೇಶ್ವರಗೆ ಅರ್ಪಿಸಿ, ಬಸಪನ ಎಬ್ಬಿಸಿದರೆ ಏಳಲಿಲ್ಲವು. ನಮ್ಮ ಪವಾಡ ನಿಂತಿತು, ನಿಮ್ಮ ಟಗರ ಪವಾಡವ ಮಾಡಿ ಎಂದು ಹೇಳಿದರು. ತುರಗಾರರು ತಮ್ಮ ಗುರುವಿಗೆ ಹೇಳಿದರು. ಮುಂದೆಯು ತನ್ನ ಮೂರೆಡಿನ ಕಂಥಿಯ ಆ ಕುರಿಗೆ ಹೊದಿಸಿ ವಿಭೂತಿಯನ್ನು ಧರಿಸಿದನು. ಏಕಾರತಿ ಪಂಚಾರತಿ ಬೆಳಗಿ ಸಂದಿಗೆ ಸಾವಿರ ಬಿರದ ಕಟ್ಟಿ ಜೆಗ್ಗು ಡೊಳ್ಳು ಕಟ್ಟಿ ವಾಲಗವ ಮಾಡಿದರು. ಆ ಟಗರಿಗೆ ಆ ಪ್ರದಕ್ಷಿಣವ ತಿರಿಗಿ ಗುರುವು ನಾಗಬೆತ್ತದಲ್ಲಿ ಇಳಿಯದಾಗತು ಎಬ್ಬಿಸಿದರು. ಸತ್ತ ಮುತ್ಯೆ ಹಿಂಡಿ ನನ್ನ ಟ[ಗ]ರು ಹೇಗೆ ಕರೆತಿರಿ ಕರೀರಿ ಟಗರ್ರಗಯೆಂದು ಆ ಮುನಿ ಹೇಳಿದನು. ಟರ್ ಬಾ ಬಾ ಯೆಂದು ಕರದನ. ಸತ್ತ ಮುತ್ಯೆ ಟಗರು ಕಲ್ಯಾಣಪಟ್ಟಣದೊಳಗೆ ಹೋತು. ಕಲಕೇತ ಶರಣ ಕಂಡು ಆ ಟಗರ ಹಿಡಿಯಲಿಕ್ಕೆ ಕೊಂಬು ಕಿತ್ತು ಕೈಯ ಒಳಗೆ ಬಂತು. ನಮ್ಮxxದರು ಕುರುಬರು. ನಾನೇಕೆ ಕೊಟ್ಟೆನುಯೆಂದನುxxಟ್ಟು ನಿಮ್ಮ ಬಿರಿದ ಹಿಡಿದದಿxxನು ಆದ ಮುಗಿ ಆತು. ಆಟxxಲೋಕಕ್ಕೆ ಕಲಕೇತನೆಂಬxxಮುಂದಕೆ ಓಡಿ ಓಡಿ ಹೋಗುವ ಟಗರನು ಕಲ್ಲೆxxದ ತಳವಾರ ಹಿಡಿದನು. ಆ

ಟಗರಿನ ಕೊಂಬು ಕಿತ್ತು ಕೈಯಗೆ ಬಂತು. ನಮ್ಮ ಕೊಂಬು ಕೊಡು ಯೆಂದನು. ಹಿಡಿದೆವು ಎಂದನು. ಅದಕ್ಕೆ ಆ ತಳವಾರ ಆ ಟಗರ ಜೋಗಿಯದನು. ಅದನು ಮೀರಿ ಹೋಗುವ ಟಗರ ಕಟ್ಟಿ ಕಣ ಮುಂಗಾಲ ಹಿಡಿದನು. ಕುರುಬ ಹಿಂಗಾಲ ಹಿಡಿದನು. ಸತ್ತ ಕುರಿ ಹೆತ್ತ ಮೊಸರ ಹೊತ್ತು ಮಾರಿ ರೇವಣ ಸಿದ್ಧೇಶ್ವರನು ಕಲ್ಯಾಣಪಟ್ಟಣದೊಳಗೆ ಡಂಗುರವನೆ ಹೊಯ್ದು, ಪಟ್ಟದ ಬಿಜ್ಜಳರಾಯ ಪರದಾನಿ ಬಸವಣ್ಣ ಸೆಟ್ಟಿ ಶೀಲವಂತರು ಕುಟ್ಟಿ ಡಂಗುರವ ಹೊಯ್ದು ಪಟ್ಟಣವೆಲ್ಲ ನೆರದು ಶೆಟ್ಟಿ ಶೀಲವಂತರು ಮೊದಲಾಗಿ ಬಂದು ಸರವೂರಲ್ಲಿ ನೆಟ್ಟರು. ಶಾಸನದ ಕಲ್ಲು ನೆಟ್ಟರು. ಆಗ ಈ ತು[ರು]ಗಾರರು ಕೂಡಿ ನಲ್ವತ್ತು ಮಂದಿ ಗುರುವಾಲಯಯೆಲ್ಲ ಕಟ್ಟಬೇಕೆಂದು, ನಾವು ಗಳಿಸಿದ ಹೊನ್ನು ಗಟ್ಟೊ ಜೊಳ್ಳೊ ಎಂದು ತಮ್ಮ ತಮ್ಮ ಹೊನ್ನನೆ ತಂದು ಕಲ್ಲ ಅರೆಯ ಮೇಲೆ ತೂರಿದ[ರು]. ಜೊಳ್ಳ ಹೊನ್ನನೆ ಬಿಟ್ಟು ಗಟ್ಟಿ ಹೊನ್ನ ವೆಚ್ಚು ಮಾಡಿ ಕಡಿಸಿ ಅಲೆಯವ ಕಟ್ಟಿದರು. ಅರವತ್ತಾರು ಕಂಬ ಒಂಬತ್ತು ಬಾಗಿಲು ಪಂಚಕಳಸವನಿಕ್ಕಿ ಕಟ್ಟಿದರು. ಪಂಚ ಕಳಸಕ್ಕೆ ಮೀರಿದ ಸ್ಥಳವು ಪರ್ವತ ಕ[೧][ಪಿಲ][೧] ಸಿದ್ಧಮಲ್ಲಿಕಾರ್ಜುನದೇವರು ಆತನ ಶಿಷ್ಯ ಸೊಲ್ಲಾಪುರದ ಸಿದ್ಧರಾಮಯ್ಯನವರು ಪರುತ ಕಪಿಲ ಸಿದ್ಧಮಲ್ಲಿಕಾರ್ಜುನ ದೇವರೆ ಮೀರಿದ ಸ್ಥಲವು ಇರುವಿಗೆ ಯೆನ್ನಸೊ।*

❖❖

೧ ಪಲ್ಲಿ (ಮೂ)

* ಮುದ್ದೇಬಿಹಾಳ ತಾಲೂಕಿನ ಸರವೂರು ಗ್ರಾಮದ ಕುರುಬ ಪೂಜಾರಿಗಳಿಂದ ದೊರೆತ ಕಾಗದದ ಪ್ರತಿ ಈ ಟಗರ ಪವಾಡಕ್ಕೆ ಆಕರವಾಗಿದೆ. ಇದರ ಮುಂದಿನ ಪಠ್ಯ ದೊರೆಯಲಿಲ್ಲ.

೨. ಪದ್ಯಗಳ ಅಕಾರಾದಿ ಸೂಚಿ

(ಇಲ್ಲಿನ ಸಂಖ್ಯೆಗಳು ಸಂಧಿ ಮತ್ತು ಪದ್ಯವನ್ನು ಸೂಚಿಸುತ್ತವೆ)

ಕ

ಫ

ಬ

ಭ

❖❖

ಅಪ್ರಕಟಿತ ಪ್ರಾಚೀನ ಸಾಹಿತ್ಯ ಮಾಲೆ : ೨೪

ಗುಂಡ ಬಸವೇಶ್ವರ ಚರಿತ್ರೆ

ಸಂಪಾದಕರು

ಎಂ.ಎಂ.ಕಲಬುರ್ಗಿ

ಸಂಗಪ್ಪಯ್ಯ ಸ್ವಾಮಿ

೨೦೦೭

ಕರ್ನಾಟಕ ಸರ್ಕಾರ

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು

*

ಪ್ರಸ್ತಾವನೆ

ಯಾವುದೇ ದೇಶದಲ್ಲಿ ಮಾರ್ಗೀಯ (Great tradition) ಮತ್ತು ದೇಶೀಯ (Little tradition) ಎಂಬ ಎರಡು ಸಂಪ್ರದಾಯಗಳು ರೂಢಿಯಲ್ಲಿರುತ್ತವೆ. ಮಾರ್ಗೀಯ ಸಾರ್ವತ್ರಿಕವಾಗಿದ್ದರೆ, ದೇಶೀಯ ಪ್ರಾದೇಶಿಕವಾಗಿರುತ್ತದೆ. ಗುಂಡ ಬಸವೇಶ್ವರ ಚರಿತ್ರೆ ಪ್ರಾದೇಶಿಕ ಧರ್ಮಸಂಪ್ರದಾಯವೊಂದನ್ನು, ಈ ಸಂಪ್ರದಾಯದ ಮುಖ್ಯ ವ್ಯಕ್ತಿಯೊಬ್ಬನ ಚರಿತ್ರೆಯನ್ನು ಸಂಕಥಿಸುವ ಸಾಂಗತ್ಯಕೃತಿಯಾಗಿದೆ.

ಇದರ ಕರ್ತೃವಿನ ಹೆಸರು ತಿಳಿದು ಬಂದಿಲ್ಲ. ಕೃತಿರಚನಾ ಕಾಲವೂ ಗೊತ್ತಾಗಿಲ್ಲ. ಹಸ್ತ ಪ್ರತಿಯ ಲಿಪಿಕರಣ ಕಾಲ ೧೬೨೨(ವಿಕ್ರಮನಾಮ ಸಂವತ್ಸರ) ಅಂದರೆ ಕ್ರಿ.ಶ.೧೭೦೦. ಹೀಗಾಗಿ ಈ ಕೃತಿ ಇದಕ್ಕೆ ಮೊದಲು ಹುಟ್ಟಿದೆಯೆಂದು ಮಾತ್ರ ಹೇಳಬಹುದು. ಕವಿಯು ಒಮ್ಮೆ ಮಾತ್ರ "ಗುಂಡ ಬಸವೇಶ್ವರ ಚರಿತ್ರೆ" (೭-೯೧)ಯೆಂದು ಕರೆದುದರಿಂದ ಇದನ್ನೇ ಕೃತಿನಾಮವೆಂದು ಇಟ್ಟುಕೊಂಡಿದ್ದೇವೆ.

ಗುಂಡ ಬಸವಣ್ಣ-ಕೊಡೇಕಲ್ಲ ಬಸವಣ್ಣ:

'ಸಿದ್ಧಪಂಥ' ಭಾರತದ ಪ್ರಾಚೀನತಮ ಧಾರ್ಮಿಕ ಸಂಪ್ರದಾಯವೆನಿಸಿದೆ. ಯೋಗನಿಷ್ಠವಾಗಿರುವ ಇದು ಮತ್ಸೇಂದ್ರನಾಥ, ಗೋರಖನಾಥರಿಂದಾಗಿ 'ನಾಥಪಂಥ'ವೆಂಬ ಹೆಸರು ಪಡೆಯಿತು. ಜೊತೆಗೆ ಪ್ರಾದೇಶಿಕ ಅನ್ಯಧರ್ಮಗಳ ಪ್ರಭಾವದಿಂದಾಗಿ, ಭಾರತದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೂಪಾಂತರ ತಾಳಿ ನಿಂತಿತು. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ, ಕಲ್ಯಾಣ ಬಸವಣ್ಣನ ಪ್ರಭಾವದಿಂದಾಗಿ ಈ ಪಂಥ ಒಂದಿಷ್ಟು ರೂಪ ಬದಲಿಸಿಕೊಂಡು 'ಆರೂಢ ಪಂಥ'ವಾಗಿ ಬೆಳೆಯಿತು. ಈ ಸಂಪ್ರದಾಯದವರು "ಆರೂಢಮತ ಐಕ್ಯಸ್ಥಲದ ಶೂನ್ಯಸಿಂಹಾಸನಾಧಿಪತಿ" ಎಂದು ಕರೆದುಕೊಳ್ಳುತ್ತಲಿರುವುದೂ ಇದನ್ನು ಬೆಂಬಲಿಸುತ್ತಲಿದೆ. ಅಸ್ಪಷ್ಟವೂ ಬಿಡಿಬಿಡಿಯೂ ಆಗಿದ್ದ ಈ ಸಂಪ್ರದಾಯವನ್ನು ನಾಯಕ ವ್ಯಕ್ತಿಯಾಗಿ ನಿಂತು, ಕೇಂದ್ರೀಕರಿಸಿದವ ಕೊಡೇಕಲ್ಲ ಬಸವಣ್ಣ. ಕಲ್ಯಾಣ ಬಸವಣ್ಣ ಇಷ್ಟಲಿಂಗವನ್ನು ಮುಖ್ಯವಾಗಿಟ್ಟುಕೊಂಡರೆ, ಕೊಡೇಕಲ್ಲ ಬಸವಣ್ಣ ಪ್ರಾಣಲಿಂಗವನ್ನು ಮುಖ್ಯವಾಗಿಟ್ಟುಕೊಂಡನು. "ಅಂದು ಕಟ್ಟಿದ ತೊಟ್ಟಿಲು ಇಂದು ತೂಗಲು ಬಂದರು ಜ್ಯೋತಿ ಸಂಗನ ಶರಣರು" ಎಂಬಂಥ ಮಾತುಗಳಲ್ಲಿ ಈ ಅಭಿಪ್ರಾಯ ವ್ಯಕ್ತವಾಗಿದೆ. ಹೀಗೆ ನಾಥವಾಗಿಯೂ ನಾಥವಲ್ಲದ,

ಲಿಂಗಾಯತವಾಗಿಯೂ ಲಿಂಗಾಯತವಲ್ಲದ ಈ 'ಆರೂಢ ಪಂಥ' ತನ್ನದೇ ಆದ ತತ್ವ ಆಚರಣೆ, ಧಾರ್ಮಿಕ ಕೇಂದ್ರ, ಅನುಯಾಯಿವರ್ಗ, ಸಾಹಿತ್ಯ ಇತ್ಯಾದಿಗಳನ್ನು ನಿರ್ಮಿಸಿಕೊಂಡು ಬೆಳೆದಿದೆ.

ಈವರೆಗೆ ಕೊಡೇಕಲ್ಲ ಬಸವಣ್ಣನ ಬಗ್ಗೆ ಗಮನವನ್ನು ಕೇಂದ್ರೀಕರಿಸಿದ ನಾವು, ಗುಂಡ ಬಸವಣ್ಣನನ್ನು ಅಲಕ್ಷಿಸುತ್ತ, ಕೆಲವೊಮ್ಮೆ ತಪ್ಪು ಇತಿಹಾಸ ಬರೆಯುತ್ತ ಬಂದಿದ್ದೇವೆ. ಇದರ ಫಲವಾಗಿ ಇವರಿಬ್ಬರೂ ಒಬ್ಬನೇ ಎಂಬ, ಕೊಡೇಕಲ್ಲ ಬಸವಣ್ಣ ಹಿರಿಯ- ಗುಂಡ ಬಸವಣ್ಣ ಕಿರಿಯನೆಂಬ ಅಭಿಪ್ರಾಯಗಳು ಮಂಡಿಸಲ್ಪಟ್ಟಿವೆ. ಆದರೆ ಇಬ್ಬರೂ ಭಿನ್ನವ್ಯಕ್ತಿಗಳಾಗಿದ್ದು, ಇವರಲ್ಲಿ ಗುಂಡ ಬಸವಣ್ಣನೇ ಒಂದಿಷ್ಟು ಹಿರಿಯನೆಂದು ಹೇಳಬಹುದಾಗಿದೆ. ಇದಕ್ಕೆ ಗುಂಡ ಬಸವೇಶ್ವರ ಚರಿತ್ರೆ ಮತ್ತು ನಂದಿ ಆಗಮಲೀಲೆಗಳು ಹೀಗೆ ಆಧಾರ ನೀಡುತ್ತವೆ:

ಗುಂಡ ಬಸವಣ್ಣನ ಈ ಪುರಾಣದಲ್ಲಿ (೪-೧೫ ಮತ್ತು ೧೬) ತಿಪ್ಪಣ್ಣಯ್ಯನು ಬಾಲಕ ಗುಂಡ ಬಸವಣ್ಣನಿಗೆ "ಭಾಳಲೋಚನ ಭಕ್ತನೊಬ್ಬನು ಹಳೆಯ ಸಗರದ ಹೊರಗೆ ಮಠಕಟ್ಟಿ," ಅದನ್ನು 'ಅಮರಕಲ್ಯಾಣ'ವನ್ನಾಗಿ ಮಾಡಿ, ವರ್ಷಕ್ಕೆ ನಾಲ್ಕು ಉತ್ಸವ ತಿಥಿಗಳನ್ನು ನಿರ್ಧರಿಸಿ, ಭಕ್ತರು ಬೋಳರು ಎಂಬ ಅನುಯಾಯಿಗಳನ್ನು ಹುಟ್ಟುಹಾಕಿ, ಶ್ರುತಿಧರ್ಮ ಬೋಧೆಯ (ಡಂಗುರ) ಸಾರುತಲಿಹನು" ಎಂದು ಹೇಳುತ್ತಾನೆ. ಇಲ್ಲಿ ಹಳೆಯ ಸಗರವೆಂದರೆ ಇಂದು ತಾಲೂಕು ಸ್ಥಳವಾದ ಶಹಪುರ ಗ್ರಾಮವಾಗಿದೆ. ಈ ಗ್ರಾಮದ ಹೊರಗೆ ಮಠ ಕಟ್ಟಿದ "ಭಾಳಲೋಚನ ಭಕ್ತನೊಬ್ಬ"ನೆಂದರೆ "ಪ್ರಾಣಲಿಂಗಸ್ಥಲವ ತಂದ" (ನಂದಿ ಆಗಮಲೀಲೆ, ೧೪-೧೯) ದಿಗ್ಗಿ ಸಂಗಮನಾಥನಾಗಿದ್ದಾನೆ.

ಕೊಡೇಕಲ್ಲ ಬಸವಣ್ಣ ದೇಶಪರ್ಯಟನ ಮಾಡುತ್ತ, ಅಮರಕಲ್ಯಾಣ ಪರ್ಯಾಯನಾಮದ ಈ (ಹಳೆಯ) ಸಗರಕ್ಕೆ ಬರುತ್ತಾನೆ. ಆ ಹೊತ್ತಿಗೆ ಸಂಗಮನಾಥ 'ಸಂದು ಹೋಗಿದ್ದ' (ನಂದಿ ಆಗಮಲೀಲೆ ೧೪-೧೦). ಅವನ ಕುಟುಂಬದವರು ಧರ್ಮಬೋಧೆಯನ್ನು ಉಪಜೀವನದ ಮಾಧ್ಯಮ ಮಾಡಿಕೊಂಡು ಬಾಳುತ್ತಿದ್ದರು. ಕೊಡೇಕಲ್ಲ ಬಸವಣ್ಣ ಈ ಸಂಗಮನಾಥನ (ಗದ್ದುಗೆ) ದರ್ಶನಪಡೆದು, ಈಶಾನ್ಯಕ್ಕೆ ನಡೆದು(ಹಳೆಯ)ಸಗರದಿಂದ ನಾಗಾವಿಗೆ ಬರುತ್ತಾನೆ. ಅಲ್ಲಿಯ 'ಗುಂಡಬಸಪ್ಪನಲ್ಲಿಗೆ' (ನಂದಿ ಆಗಮಲೀಲೆ ೧೪-೨೬) ಅಂದರೆ ಗುಂಡಬಸಪ್ಪನ ಮನೆಗೆ ಹೋಗಿ, ಅವನ ಹೆಂಡತಿಗೆ ಭಿಕ್ಷೆ ಬೇಡುತ್ತಾನೆ. ನೀಡಲು ಸಿದ್ಧ ಅಡಿಗೆ ಉಳಿದಿಲ್ಲವೆಂದು ಅವಳು ಉತ್ತರಿಸಲು, "ಶಿವನು ನೀಡಿದ 'ಬಹುದಿನದ ಕಜ್ಜಾಯ' ನಿಮ್ಮಲ್ಲಿದೆ ನೀಡಿ" ಎಂದು ಕೇಳಿ ಪಡೆದು, ಅಲ್ಲಿಂದ ನಿರ್ಗಮಿಸುತ್ತಾನೆ. ಮನೆಗೆ ಬಂದ ಮಗ ಈರಪ್ಪಯ್ಯ ತಾಯಿಯಿಂದ ಈ ವಿವರ ತಿಳಿದು, ಕೊಡೇಕಲ್ಲ ಬಸವಣ್ಣನನ್ನು ಹುಡುಕಿ, ಕಂಡು, ಕಜ್ಜಾಯವನ್ನು ಮರಳಿ ಪಡೆಯುತ್ತಾನೆ ಮತ್ತು ಅವನ ಶಿಷ್ಯನಾಗಿ, ಕತ್ತೆಗೆ ಜೀವ ನೀಡುವ ಪವಾಡ ಮೆರೆಯುತ್ತಾನೆ. ಬಳಿಕ ಕೊಡೇಕಲ್ಲ ಬಸವಣ್ಣ ನಾಗಾವಿಯಿಂದ ಇಕ್ಕಳಿಕೆ ಇತ್ಯಾದಿ ಗ್ರಾಮಗಳಿಗೆ ಸಂಚರಿಸಿ ಕೊಡೇಕಲ್ಲಿಗೆ ಬಂದು, ಅಲ್ಲಿ ಸಿಂಹಾಸನ ಸ್ಥಾಪಿಸುತ್ತಾನೆ.

ಇದೆಲ್ಲವನ್ನು ನೋಡಿದರೆ ಕೊಡೇಕಲ್ಲ ಬಸವಣ್ಣ ಹಳೆಯ ಸಗರಕ್ಕೆ (ಮತ್ತು ನೆರೆಯ ದಿಗ್ಗಿ ಪ್ರದೇಶಕ್ಕೆ) ಬಂದ ಸಂದರ್ಭದಲ್ಲಿ ಸಂಗಮನಾಥ ಲಿಂಗೈಕ್ಯನಾಗಿದ್ದನೆಂದು, ಬಳಿಕ ನಾಗಾವಿಗೆ ಬಂದ ಸಂದರ್ಭದಲ್ಲಿ ತಾಯಿ ಮತ್ತು ಮಗ ಈರಪ್ಪಯ್ಯನ ಪ್ರಸ್ತಾಪ ಮಾತ್ರ ಬರುವುದರಿಂದ

ಆಗ ಗುಂಡ ಬಸವಣ್ಣನೂ ಬದುಕಿರಲಿಲ್ಲವೆಂದು ಸ್ಪಷ್ಟವಾಗುತ್ತದೆ. ಇದರಿಂದ ದಿಗ್ಗಿ ಸಂಗಮನಾಥ ಹಿರಿಯ, ಇವನಿಗಿಂತ ಗುಂಡ ಬಸವಣ್ಣ ಕಿರಿಯ, ಇವನಿಗಿಂತ ಕೊಡೇಕಲ್ಲ ಬಸವಣ್ಣ ಕಿರಿಯನೆಂದು ಸ್ಪಷ್ಟವಾಗುತ್ತದೆ. ಅಂದರೆ ಕೊಡೇಕಲ್ಲ ಬಸವಣ್ಣ, ಆರೂಢ ಸಂಪ್ರದಾಯದ ಕ್ಷಿತಿಜದ ಮೇಲೆ ಮೂಡುವ ಮೊದಲೇ ದಿಗ್ಗಿ ಸಂಗಮನಾಥ, ತಿಪ್ಪಣ್ಣಯ್ಯ, ಗುಂಡ ಬಸವೇಶ್ವರ ಈ ಸಂಪ್ರದಾಯವನ್ನು ಆರಂಭಿಸಿದ್ದರೆಂದು ವಿದಿತವಾಗುತ್ತದೆ. ಇನ್ನೂ ಒಂದು ಮುಖ್ಯ ಸಂಗತಿಯೆಂದರೆ, ಮೊದಲು ಅಸ್ತಿತ್ವಕ್ಕೆ ಬಂದುದು ದಿಗ್ಗಿ ಪ್ರದೇಶದ 'ಅಮರಕಲ್ಯಾಣ', ಆಮೇಲೆ ನಾಗಾವಿ ಪ್ರದೇಶದ 'ಧರ್ಮಕಲ್ಯಾಣ', ಕೊನೆಗೆ ಕೊಡೇಕಲ್ಲ ಪ್ರದೇಶದ 'ಕಡೆಯ ಕಲ್ಯಾಣ'ವೆಂದು ಮೇಲಿನ ವಿವರಣೆ ಸ್ಪಷ್ಟಪಡಿಸುತ್ತದೆ. ಅದಕ್ಕಾಗಿಯೇ ಈ ಸಂಪ್ರದಾಯದಲ್ಲಿ 'ಕೊಡೆಯ ಕಲ್ಲೆಂಬುದು **ಕಡೆಯ** ಕಲ್ಯಾಣ'ವೆಂದು ಪದೇ ಪದೇ ಕೊಂಡಾಡಲ್ಪಟ್ಟಿದೆ. ಈ ಮೂರು ಕಲ್ಯಾಣಗಳಿಗೆ ಆದರ್ಶವಾದುದು ಬಸವಕಲ್ಯಾಣ. ಹೀಗಾಗಿ "ಕಲ್ಯಾಣ ನಾಲ್ಕರೊಳಗೆ ಬಂದ ಶರಣರ ಸೊಲ್ಲ ಕೇಳದಾಯಿತು ಲೋಕ" (೭-೩೩) ಎಂಬ ಪದ್ಯದಲ್ಲಿ ಬಸವಕಲ್ಯಾಣ, ಅಮರಕಲ್ಯಾಣ, ಧರ್ಮಕಲ್ಯಾಣ, ಕಡೆಯ ಕಲ್ಯಾಣಗಳೆಂಬ ನಾಲ್ಕು ಕಲ್ಯಾಣಗಳನ್ನೇ ಈ ಕವಿ ಸೂಚಿಸುತ್ತಿರಬೇಕು. ಇದೇ ಕಾವ್ಯದೊಳಗೆ ಮುಂದಿನ ದಿನಗಳಲ್ಲಿ "ಸಮಯಕಲ್ಯಾಣವನ್ನು (೬-೩೪) ಸ್ಥಾಪಿಸಲು ಶರಣರು ಹುಟ್ಟಿ ಬರುವ"ರೆಂಬ ಸೂಚನೆಯೂ ಇದ್ದು, ಇದು ಈ 'ಧರ್ಮಕಲ್ಯಾಣ'ದ ತರುವಾಯದ 'ಕಡೆಯ ಕಲ್ಯಾಣ'ವನ್ನೋ, ಇನ್ನೂ ಭವಿಷ್ಯತ್ತಿನಲ್ಲಿ ಆವಿರ್ಭವಿಸಲಿರುವ ಬೇರೊಂದು ಕಲ್ಯಾಣವನ್ನೋ ಸೂಚಿಸುತ್ತಿರಬಹುದು. ಇದೆಲ್ಲವನ್ನೂ ನೋಡಿದರೆ ಕೊಡೇಕಲ್ಲ ಸಾಹಿತ್ಯದಲ್ಲಿ ಬಸವಕಲ್ಯಾಣವನ್ನು 'ಸಮಯಕಲ್ಯಾಣ'ವೆಂದು ಕರೆಯಲಾಗಿದೆ ಎಂದು ವಿದ್ವಾಂಸರು ಹೇಳುತ್ತಲಿರುವುದು ಸಂದೇಹ ಹುಟ್ಟಿಸುತ್ತದೆ. ಒಟ್ಟಾರೆ, ಈ ಕಲ್ಯಾಣ ಪರಂಪರೆಯ 'ಧರ್ಮಕಲ್ಯಾಣ'ದ ಸ್ಥಾಪಕ ಗುಂಡ ಬಸವಣ್ಣನನ್ನು ಕುರಿತುದಾಗಿದೆ, ಈ 'ಗುಂಡ ಬಸವೇಶ್ವರ ಚರಿತ್ರೆ'.

ಕಥಾಸಾರ

ಸಂಧಿ-೧: ಕಾಮಿತ ಫಲದಾಯಕನಾದ ಗುರು ಗುಂಡ ಬಸವೇಶ್ವರನೇ ರಕ್ಷಿಸು (I-V). ಶ್ರೀ ಮಹಾದೇವನೇ ನಿನ್ನನ್ನು ಹೊಗಳಲು ನಾನು ಅಸಮರ್ಥನು, ದೇವಾದಿದೇವತೆಗಳೂ ಸಮರ್ಥರಲ್ಲ. ಹರನನ್ನು ಮೆಚ್ಚಿಸಿದ ಭಕ್ತರಾದ ದುಗ್ಗಳೆ ಮೊದಲಾದವರನ್ನು ಸ್ತುತಿಸುತ್ತೇನೆ (೩೭). ಗುರು ಪಾದವನ್ನು ಎಂದೆಂದೂ ಬಿಡಲಾರೆ. ನನಗೆ ಗುರು ಗುಂಡ ಬಸವ, ಲಿಂಗ ಸಂಗಮನಾಥ, ಜಂಗಮ ಪ್ರಭುದೇವ (೪೭).

ಸಂಧಿ-೨: ಗುಂಡರಾಯ ಲೋಕವನುಳುಹಲು ಶಿವಲೋಕದಿಂದ ಇಳಿದು ಬಂದನು (೧). ಶಿವಲೋಕದ ಕಥೆ ಕೇಳಿರಿ (೨). ಮೇರು ಪರ್ವತದ ಮೇಲೆ ಕೈಲಾಸಪುರ, ಶಿವನ ಅರಮನೆಗಳಿವೆ (೧೨). ಭದ್ರ, ಭೈರವ, ನಂದೀಶ, ವಿನಾಯಕ, ಪಾರ್ವತಿ, ಭೃಂಗಿ ಎಲ್ಲರೂ ಶಿವನ ಸ್ತುತಿಗೆಯ್ಯುವರು (೧೯). ಶಿವನ ಸಭೆಗೆ ಆಗಮಿಸಿದ ನಾರದ, ಜಂಬುದ್ವೀಪದಲ್ಲಿ ಜರುಗುತ್ತಲಿರುವ ಪಾಪಕಾರ್ಯ ವಿವರಿಸಿದ. ಸಿಟ್ಟಿಗೆದ್ದ ಶಿವ ಮರ್ತ್ಯದ ಪಾಪ ನಾಶವಾಗುವುದಕ್ಕಾಗಿ ವಿಷದ ಮಳೆ ಸುರಿಸಲು ವೀರಭದ್ರನಿಗೆ ಆದೇಶಿಸಿದ. ಆದರೆ ಅವನ ಮತ್ತು ತನ್ನ ನಾಲ್ಕು ಮುಖಗಳ ಬಿನ್ನಹದ ಮೇರೆಗೆ ಅದನ್ನು ಕೈಬಿಟ್ಟು, ಮೃತ್ಯುದೇವತೆಯನ್ನು ಲೋಕಕ್ಕೆ ಕಳಿಸಲು ಯಮನಿಗೆ ಹೇಳಿದ. ಇದನ್ನು

ಗಮನಿಸಿ ನಾಲ್ಕು ಮುಖಗಳು ಶಿವನ ಸಾಮರ್ಥ್ಯವನ್ನು ಪ್ರಶ್ನಿಸಿದವು. ಆಗ ಶಿವನು ಗುಂಡ ಬೊಮ್ಮಯ್ಯನ ಪ್ರಸಂಗ ವಿವರಿಸಿದ. (೯೦-೯೯). ಶಿವನ ನಾಲ್ಕು ಮುಖಗಳು ಮರ್ತ್ಯಕ್ಕೆ ಆಗಮಿಸಿದವು. ಹಳೆಯ ಸಗರ ಗ್ರಾಮದಲ್ಲಿ ಗುರುವೊಬ್ಬ ಜನಿಸಿದನು. (೧೦೦-೧೦೯), ಎಷ್ಟು ಪ್ರಯತ್ನಿಸಿದರೂ ಲೋಕವನ್ನು ತಿದ್ದುವುದಾಗಲಿಲ್ಲ, (೧೦೦-೧೧೫), ಆಗ ಶಿವನು ಗುರುಗುಂಡರಾಯನನ್ನು ಕರೆದು ಭೂಮಿಯಲ್ಲಿ ಜನಿಸಲು ಹೇಳಿದ. ಗುಂಡಯ್ಯ ಶಿವನಿಂದ, ಶಿವಗಣಂಗಳಿಂದ ಬೀಳ್ಕೊಂಡು ಭೂಲೋಕಕ್ಕೆ ಬಂದನು (೧೧೬-೧೩೨).

ಸಂಧಿ-೩: ಕಲ್ಯಾಣಕ್ಕೆ ಏಳು ಯೋಜನ ದಕ್ಷಿಣಕ್ಕೆ, ದಂಡಗುಂಡಕ್ಕೆ ಒಂದು ಕಾಲು ಯೋಜನ ಉತ್ತರಕ್ಕೆ ಅಪ್ಪ ಬಸವೇಶ (ನಂದಿ) ನೆಲೆಸಿದ್ದಾನೆ (೧). ಇಲ್ಲಿಂದ ಮೂರು ಯೋಜನದಲ್ಲಿ ಕೂಡಲಸಂಗಮವಿದೆ. ಇಲ್ಲಿಂದ ಅರ್ಧಗಾವುದ ದೂರದಲ್ಲಿ ಈಶಾನ್ಯ ಮೂಲೆಯ(ನಾಗಾವಿಯ)ಲ್ಲಿ ಗುಂಡ (ಗುಂಡಬಸವಪ್ಪ) ಜನಿಸಿದನು. ಸಂಗನಬಸವನ ಅಕ್ಕ ನಾಗಾಯಿ ಆಳಿದ ಗ್ರಾಮವಿದು. ಇದರ ಪೂರ್ವಭಾಗದ ಕೂಗಳತೆಯಲ್ಲಿ ಸಂಗಮೇಶ್ವರ ನೆಲೆಸಿದ್ದಾನೆ (೨-೩). ಈ ಊರಿನಿಂದ ವಾಯವ್ಯದಲ್ಲಿ ಹರದಾರಿ ದೂರದಲ್ಲಿ ಕಂಗಳಿಗೆ ಸೋಮಯ್ಯಲಿಂಗ, ವೀರಭದ್ರ ನೆಲೆಸಿದ್ದಾರೆ (೫). ಕಂಗಳಿಗೆ ಸೋಮಯ್ಯಲಿಂಗ ದೃಷ್ಟಿದೋಷ ಪರಿಹಾರ ಮಾಡುತ್ತಾನೆ. ಯುಗಾದಿ ಅಷ್ಟಮಿಗೆ ಜಾತ್ರೆ ಜರುಗುತ್ತದೆ (೬) ಸನ್ನೆ ಗ್ರಾಮದ ಮೂಡಣದಲ್ಲಿ ಪಾರ್ವತಿಯೊಂದಿಗೆ ಶಿವ ನೆಲೆಸಿದ್ದಾನೆ (೭). ನೂರೊಂದು ಕಂಬದ ಶಿವಾಲಯದಲ್ಲಿ ಅಕ್ಕನಾಗಾಯಿ ಜಂಗಮ ದಾಸೋಹ ಮಾಡುತ್ತಲಿದ್ದ ಕಾರಣ, ಛತ್ರಸಾಲೆ ಎಂಬ ಹೆಸರು ಅದಕ್ಕೆ ಪ್ರಾಪ್ತವಾಗಿದೆ (೮). ಊರ ಮುಂದೆ ಪುಣ್ಯತೀರ್ಥ, ನಂದಿಯ ಭಾವಿಗಳಿವೆ. ಇದರ ದಡದಲ್ಲಿ ಪೂರ್ವಾಭಿಮುಖನಾದ ರಾಮೇಶ್ವರನಿದ್ದಾನೆ. ನಂದಿತೀರ್ಥದಲ್ಲಿ ಸ್ನಾನಮಾಡಿದರೆ ಪಾಪನಾಶವಾಗುತ್ತದೆ (೯-೧೦). ಅಡಕೆ, ತೆಂಗು ಮೊದಲಾದವುಗಳಿಂದ ಉದ್ಯಾನ ಶೋಭಿಸುತ್ತದೆ (೧೧-೧೩). ಈ ವನದಲ್ಲಿ ಸಿದ್ಧೇಶ್ವರ, ಎದುರು ನಂದಿಕೇಶ್ವರನಿದ್ದಾನೆ (೧೪). ಮೂಲಸ್ಥಾನ ಮಲ್ಲಿಕಾರ್ಜುನ ದೇವಾಲಯ, ಇದರ ಮುಂದೆ ಬಾವಿ ಇವೆ (೧೫). ಇಲ್ಲಿಯೇ ಜಕ್ಕಿ, ಕಾಳವ್ವೆಯರಿದ್ದಾರೆ (೧೬).

ಇಂಥ ಪುಣ್ಯಕ್ಷೇತ್ರ ನಾಗಾವಿಯಲ್ಲಿ ನಾಗಿಸೆಟ್ಟಿ ಕಾಮಮ್ಮ ದಂಪತಿಗಳಿದ್ದರು (೧೮). ಕಾಮಮ್ಮ ಗರ್ಭವತಿಯಿರುವಾಗ ತಿಪ್ಪಣಯ್ಯನೆಂಬ ಸಂತ 'ಶಿವನ ಒಂದು ಮುಖವು ಇಲ್ಲಿ ಅವತರಿಸಲಿದೆ'ಯೆಂದು ಕಾಯ್ದುಕೊಂಡಿದ್ದನು (೧೯). ಈ ತಿಪ್ಪಣಯ್ಯನು ಮಲ್ಲಿಸೆಟ್ಟಿಯ ಮಗ. ಬೆಳೆದ ತಿಪ್ಪಣಯ್ಯನಿಗೆ ಮದುವೆ ಮಾಡಲು ನಿರ್ಧರಿಸಿ, ತಂದೆ ಮಲ್ಲಿಸೆಟ್ಟಿ ಮಗನೊಂದಿಗೆ ಅರಸುಗ್ರಾಮಕೆ ಹೋಗಿ ಮದುವೆ ನಿಶ್ಚಯಿಸಿದ. ಅರಸನು ಕಾಣಿಕೆಯೊಂದಿಗೆ ಒಂದು ಕುದುರೆ ತೆಗೆದುಕೊಳ್ಳಲು ಸೂಚಿಸಿದ. ತಿಪ್ಪಣಯ್ಯ ರಾಯನು ಏರುವ ಕುದುರೆಯನ್ನೇ ಆಯ್ದುಕೊಂಡ (೨೪). ಬೇರೊಂದು ಕುದುರೆಯನ್ನಾಯ್ದುಕೊಳ್ಳಲು ಹೇಳಿದರೂ (ತಿಪ್ಪಣಯ್ಯ) ಕೇಳಲಿಲ್ಲ (೨೫). ಪಟ್ಟದ ಕುದುರೆಯನ್ನು ಶೃಂಗರಿಸಿ ನೂರಾರು ಆಳು ಸಹಿತ ಕೊಟ್ಟನು (೨೬). ಕುದುರೆಯೊಂದಿಗೆ (ತಿಪ್ಪಣಯ್ಯ, ಮಲ್ಲಿಸೆಟ್ಟಿ) ತಮ್ಮ ಊರಿಗೆ ಮರಳಿದರು. ಮದುವೆ ವ್ಯವಸ್ಥೆ ನಡೆಸಿದರು. ಮದುವೆ ಒಂದು ಕೋಟಲೆಯೆಂದು ತಿಪ್ಪಣಯ್ಯ ತಂದೆಗೆ ಹೇಳಿದ. ಇದನ್ನು ಗಮನಿಸದೆ ಮಲ್ಲಿಸೆಟ್ಟಿ ಮದುವೆ ನಿಬ್ಬಣ ಪ್ರಯಾಣ ಬೆಳೆಸಿದ (೩೧). ಹತ್ತೆಂಟು ಚಕ್ಕಡಿಗಳು,

ಏಳು ಹಿಟ್ಟು, ಎಂಟು ಹಿಟ್ಟು, ಹದಿನೆಂಟು ಕುಲದವರು, ರುದ್ರವಾಣಿಜರು, ಕೈಲಾಸವಾಣಿಜರು, ಕವಿಗಮಕಿವಾದಿವಾಗ್ಮಿಗಳೆಲ್ಲ ಹೊರಟರು (೩೪). ಅಡಿಗೆ ವಸ್ತುಗಳನ್ನು ಹೇರಿ ವಾಹನಗಳು ಮುನ್ನಡೆದವು (೩೭). ವರ ತಿಪ್ಪಣ್ಣಯ್ಯ ಕುದುರೆ ಏರಿದ. ಹೆಂಗಳೆಯರು, ಪರಿವಾರದವರು ಜೊತೆ ಹೊರಟರು (೪೧). ಊರ ಹೊರಗೆ ಬರುತ್ತಲೇ ತಿಪ್ಪಣಯ್ಯ ಕುದುರೆ ಓಡಿಸಿ ಅಡವಿ ಪ್ರವೇಶಿಸಿದ (೪೩). ವರನನ್ನು ದಾರಿಯುದ್ದಕ್ಕೂ ಹುಡುಕಹತ್ತಿದರು. ಅಷ್ಟರಲ್ಲಿ ಒಬ್ಬ ಹಿರಿಯ ಬಂದು, ವಿವರ ಕೇಳಿ, ತಾನೊಬ್ಬನೇ ಹುಡುಕಿ ತರುವುದಾಗಿ ಕುದುರೆ ಏರಿ ಹೊರಟು, ದಾರಿಯಲ್ಲಿ ತಿಪ್ಪಣಯ್ಯನನ್ನು ಭೆಟ್ಟಿಯಾದ. ಮದುವೆ ತನಗೆ ಇಷ್ಟವಿಲ್ಲೆಂದು ತಿಪ್ಪಣ್ಣಯ್ಯ ಸ್ಪಷ್ಟಪಡಿಸಿದ. 'ಮದುವೆ ಬೇಡವೆಂದರೆ ಬಿಡು, ಊರಿಗೆ ನಡೆ'ಯೆಂದು ಹಿರಿಯ ತಿಪ್ಪಣಯ್ಯನನ್ನು ಕರೆದುಕೊಂಡು ಬಂದ (೫೯). ತಿಪ್ಪಣಯ್ಯನನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ, ನಿಬ್ಬಣದವರು ವಧುವಿನ ಊರಿಗೆ (ಬಳ್ಳಿವಾಡ) ಬಂದರು (೬೨). ಬೀಗರನ್ನು ಎದುರುಗೊಂಡು ವಸತಿ ಮನೆಯಲ್ಲಿಳಿಸಿದರು. ಮರುದಿನ ತಿಪ್ಪಸೆಟ್ಟಿಯ ಮದುವೆ ಜರುಗಿತು. ಮನೆ ತುಂಬಿಸಿಕೊಂಡರು (೮೦). ಹಲವು ದಿನ ಕಳೆದ ಬಳಿಕ ಈ ಸತಿ ಈ ಸಂಸಾರ ಬೇಡವೆನಿಸಿತು. ಅಭರಣ, ಸೆಟ್ಟತನದ ಪೊಗು (?) ಇತ್ಯಾದಿ ಹರಿದು ಚೆಲ್ಲಿ, ಮನೆಯಿಂದ ಹೊರಗೆ ಹೋದನು (೮೬). ಅರಿವೆ ಉಟ್ಟು, ಕೋರಿಹೊದ್ದು, ಆಭರಣಾದಿ ಕಳ್ಳರು ಸುಲಿದರೆಂದು ಹೇಳತೊಡಗಿದ (೮೭). ಕಷ್ಟಪಟ್ಟು ಕಟ್ಟಿಗೆಹೊರೆ ತಂದು ಮಾರಿ ಜೀವಿಸತೊಡಗಿದ (೮೮). ತಂದೆ ತಾಯಿಗಳ ಬಿನ್ನಹವನ್ನು ನಿರಾಕರಿಸಿದ (೧೧೧). ಒಂದು ಹೆಡಿಗೆ, ಒಂದು ಗುದ್ದಲಿ, ಕುರುಪಿ, ಸಲಿಕೆ ತೆಗೆದುಕೊಂಡ ಊರ ದಾರಿ ಸ್ವಚ್ಛಮಾಡತೊಡಗಿದ (೧೧೪). ಕೆರೆ ದುರಸ್ತಿ, ಮರಕ್ಕೆ ನಿರುಣಿಸುವಿಕೆ, ಬಾವಿಯ ಹೂಳೆತ್ತುವುದು, ಹಾವು, ಚೇಳು ಸಹ ಕೊಲ್ಲದುದು– ಈ ಕೆಲಸ ಮಾಡತೊಡಗಿದ (೧೧೯). ಈತ ಊಟ ಮಾಡಿದ ಬಡವರ ಮನೆ ಶ್ರೀಮಂತ, ಊಟ ನೀಡದ ಶ್ರೀಮಂತರ ಮನೆ ಬಡವಾದವು (೧೨೫). ಅರುವತ್ತು ವರ್ಷ ಜಳಕ ಮಾಡದೆ ಕಳೆದ (೧೩೧). "ಇಟ್ಟುಕೊಳ್ಳನು ವಿಭೂತಿಯ", "ದಾಳಿವಾಸ ಕಂಡರೆ ಇಟ್ಟುಕೊಂಬನು ಬಟ್ಟೆನನಿತ" (೧೩೪). ಲಿಂಗಪೂಜೆಯ ಕರಸ್ಥಲದಲ್ಪಿಡಿದು ಬಾಹಿರಂಗವಾಗೆಂದು ತಾ ಮಾಡ. ಹಿಂಗದಿಹನಂತರಂಗದ ಪೂಜೆಯನೆ ಲಿಂಗಧ್ಯಾನದಲಿ ತಾನಿಹನು (೧೩೫). ಹೀಗೆ ತಿಪ್ಪಣಯ್ಯ ಇರುತ್ತಿರಲು ಶಿವನ ಒಂದು ಮುಖದ ಅವತಾರ ವ್ಯಕ್ತಿಯಾದ ಗುಂಡ ಬಸವ ಹುಟ್ಟಿದನು (೧೩೬).

ಸಂಧಿ–೪: ಮಗುವಿಗೆ ಬಸವನೆಂದು ಹೆಸರಿಟ್ಟರು (೨). ಶಿಶುವನ್ನು ನೋಡಲಿಕ್ಕೆ ತಿಪ್ಪಣಯ್ಯ ಬಂದು, "ಇವನು ಸತ್ಯಶರಣ, ಸರ್ವಾಂಗಲಿಂಗಿ' ಎಂದು ನುಡಿದ (೬). ಶಿವನ ಏಕಮುಖದ ಈ ಅವತಾರವ್ಯಕ್ತಿ ಇಲ್ಲಿ ಮನೆಕಟ್ಟುತ್ತಾನೆ, ಮಠ ಬೆಳೆಸುತ್ತಾನೆ– ಎಂದು ಆ ನೆಲವನ್ನು ತಿಪ್ಪಣಯ್ಯ ಹಸನು ಮಾಡುತ್ತಲಿದ್ದ. ಶಿಶು ಬಸವಣ್ಣ ಬಾಲಕನಾಗಿ ಬೆಳೆದ (೧೪). ತಿಪ್ಪಣಯ್ಯ ಬಾಲಕ ಬಸವನನ್ನು ಕುಳ್ಳಿರಿಸಿಕೊಂಡು "ಭಕ್ತನೊಬ್ಬ ಹಳೆಯ ಸಗರ ಹೊರಗೆ ಮಠ ಕಟ್ಟಿ "ಅಮರ ಕಲ್ಯಾಣ'ವನ್ನು ಬೆಳೆಸಿರುವನು. ೪ ತಿಥಿ ಮಾಡಿರುವ, ಭಕ್ತರು ಮತ್ತು ಬೋಳರನ್ನು ಬೆಳೆಸಿ, ಬೋಧಿಸಿರುವನು" ಎಂದು ಹೇಳುತ್ತಲಿದ್ದ (೧೬). ಈ ಮಾತು ಕೇಳಿ ಬಸವಣ್ಣ "ನಾನೂ ಭಕ್ತರು ಬೋಳರನ್ನು ಬೆಳೆಸುತ್ತೇನೆ, ನಾಲ್ಕು ತಿಥಿ ಮಾಡುತ್ತೇನೆ, ಸಂಗಮೇಶ್ವರನ ಡಂಗುರ ಬೋಧೆ ಹೇಳುತ್ತೇನೆ" ಎಂದು ನುಡಿಯುತ್ತಿದ್ದನು. ೧೦–೧೨ ವರ್ಷವಾಗುತ್ತಲೇ

ಬಸವಣ್ಣ ತಡಪು ನಡುಕಟ್ಟು ಕಸಿಯಂಗಿ ನಿಟ್ಟಲ್ಲಿ ಧರಿಸಿ ಬೋಧೆ ಆರಂಭಿಸಿದನು (೨೧). "ಬಸವಣ್ಣಾ ನಿನ್ನ ಹೆಸರಿಗೆ ತಕ್ಕ ಪ್ರಸಾರ ಮಾಡು" ಎಂದು ತಿಪ್ಪಣಯ್ಯ ಆಗಾಗ ನುಡಿಯುತ್ತಿದ್ದನು (೨೩). ದಿನಗಳೆಯಲು ನಾಗಿಶೆಟ್ಟಿ ಮಗನ ಮದುವೆಗಾಗಿ ಗುಂಡಗುರುಕಿಯ ತುಪ್ಪದ ಶಂಕರಶೆಟ್ಟಿ ಮನೆಯಲ್ಲಿ ಕನ್ಯೆ ನೋಡಿ ಬಂದನು (೨೮). ಬಸವಣ್ಣ ಮನಸ್ಸಿಲ್ಲದ ಮನಸ್ಸಿನಿಂದ ಮದುವೆಗೆ ಸಿದ್ಧನಾದ (೪೦). ತಂದೆ ನಾಗಿಶೆಟ್ಟಿ ನಿಬ್ಬಣ ಸಿದ್ಧಗೊಳಿಸಿದ. ತಾಯಿಯ ಹಿರಿಯಣ್ಣ ಸತ್ತ ಕಾರಣ, ಇದೆಲ್ಲ ಸಂಭ್ರಮವೆಂದು ಬಸವಣ್ಣ ನುಡಿಯುತ್ತಿದ್ದ (೪೪). ನಿಬ್ಬಣ ಪ್ರಯಾಣ ಬೆಳೆಸಿತು (೪೬). ಒಲ್ಲದ ಮನಸ್ಸಿನಿಂದ ಮದುವೆಯಾದ. ಮನೆ ತುಂಬಿಸಿದರು (೫೧). ಬಸವಣ್ಣ ಬಣಜಿಸ ಬಯಸಿ ೭೨ ಕೇಣಿ ಹಸಿಬೆಯನ್ನು ತುಂಬಿ, ಮೂಡಣಕ್ಕೆ ಪಯಣ ಬೆಳೆಸಿದನು. ದಾರಿಯಲ್ಲಿ ಕಳ್ಳರು ಬೆನ್ನಟ್ಟಿದರು. ಹೊತ್ತಹೊರೆ ಸಹಿತ ಬಸವಣ್ಣ ಬೇಲಿ ಜಿಗಿದು ಪಾರಾದ (೬೧). ಆಗ ಪಾದದಲ್ಲಿ ದೊಡ್ಡ ಮುಳ್ಳು ನಟ್ಟಿತು (೬೨). ಮನೆಗೆ ಬಂದು ಪ್ರಯತ್ನಿಸಿದರೂ ಮುಳ್ಳು ಹೊರಬರಲಿಲ್ಲ. ನೋವು ಬಾಧಿಸಿತು. ಅನ್ನ ನೀರು ಬಿಟ್ಟು ಬಳಲಿದ. ಶಿವಧ್ಯಾನದಲ್ಲಿ ದಿನಗಳೆದ (೬೭). ಕನಸಿನಲ್ಲಿ ದೇವರು ಬಂದು ಹಣೆಗೆ ವಿಭೂತಿ ಹಚ್ಚಿ, "ಪದಗಳನ್ನು ಹೇಳು ಎಲ್ಲವೂ ಸರಿ ಹೋಗುತ್ತದೆ" ಎಂದು ಆದೇಶಿಸಿದ. "ನನಗೂ ಹಾಡಿಗೂ ಏನು ಸಂಬಂಧ? ಮುಳ್ಳಿನ ಬಾಧೆಯಲ್ಲಿ ಬಳಲುತ್ತಲಿರುವೆ" ಎಂದು ಉತ್ತರಿಸಿದ. ಶಿವ "ಮುಳ್ಳಿನ ಮೇಲೆ ಪದ ಬರೆ" ಎಂದು ಹೇಳಿದ. ಎಚ್ಚತ್ತು ನೋಡಿದರೆ ಕನಸಿನ ಜಂಗಮ ಕಾಣಲಿಲ್ಲ. ಅವನ ಬಗ್ಗೆ ಹೆಂಡತಿಯರಿಗೂ ಕೇಳಿದ. "ಶಿವಭಕ್ತರಾದ ಚೋಳ, ಕಲ್ಯಾಣ ಬಸವಣ್ಣರನ್ನು ಕಾಡಿದಂತೆ ನನ್ನನ್ನು ಕಾಡದಿರು ಶಿವನೇ!" ಎಂದು ಬೇಡಿಕೊಂಡ (೮೧), "ಕಾಡಬೇಡವು ಮುಳ್ಳೆ" ಎಂದು ಪದ ಹಾಡಿದ. ಮುಳ್ಳು ಕಡೆಗಾಯಿತು. (೮೨) ಹಾಡು ಹೇಳುವದು, ಶಿವಯೋಗದಲ್ಲಿ ತೊಡಗುವದು ಮುಂದುವರಿಯಿತು (೮೮). ಮತ್ತೆ ಬಣಜಿಸುವ ಕಾರ್ಯದಲ್ಲಿ ತೊಡಗಿದನು (೯೦). ಈ ವೃತ್ತಿಯಲ್ಲಿ ಪಾಪಕ್ಕೆ ಅವಕಾಶವಿದೆಯೆಂದು ತಿಳಿದು, ಮಲ್ಲಿಕಾರ್ಜುನನ ಬೆಟ್ಟದತ್ತ ನಡೆದ, ಗಿರಿಗಹ್ವರ ಸುತ್ತಿದ, ಕದಳಿಯನ್ನು ಪ್ರವೇಶಿಸಿದ, ಅಲ್ಲಿ ತಪಸ್ಸು ಮಾಡುತ್ತಲಿದ್ದ ಮೂವರಲ್ಲಿ ಒಬ್ಬನು ಇವನ ವಿವರ ಕೇಳಿದ (೯೮). ಎಲ್ಲರೂ ಈತನೊಂದಿಗೆ ಅಧ್ಯಾತ್ಮ ಚರ್ಚೆ ಮಾಡಿದರು. ಬಸವೇಶ ತಪೋನಿರತನಾದ (೧೧೪). ಶಿವಸಾಕ್ಷಾತ್ಕಾರವಾಯಿತು. "ತರುವಿಂಧ್ಯ ತಪಸು ಸಾಕು, ನರವಿಂಧ್ಯ ತಪಸು ಮಾಡು" ಎಂದು ಶಿವ ಆದೇಶ ನೀಡಿದ (೧೨೦). "ಮೂರು ಯುಗಗಳಲ್ಲಿ ಅರಣ್ಯ ತಪಸ್ಸು, ಕಲಿಯುಗದಲ್ಲಿ ಇದು ಸಲ್ಲದು (೧೨೩). ಗ್ರಾಮದಲ್ಲಿ ಧರ್ಮಬೋಧಮಾಡು" ಎಂದು ಶಿವ ನಿರೂಪಿಸಿದ. "ನನ್ನ ಊಟಕ್ಕೆ ಏನು ಮಾಡುವುದು?" ಎಂದು ಬಸವೇಶ ಕೇಳಿದ (೧೨೫). ಶಿವನು ಕಪ್ಪರವನ್ನು ಕೊಟ್ಟ. ಬಯಸಿದ ಆಹಾರ ಇದರಿಂದ ಸಾಧ್ಯವೆಂದು ತಿಳಿಸಿ, ಬೋಧೆ ಮಾಡುವುದಕ್ಕಾಗಿ ಗ್ರಾಮಕ್ಕೆ ಮರಳಲು ಹೇಳಿದ (೧೨೬). "ಉದ್ದಿಮೆ ಮಾಡಿ ಇರಿದು ತಿನ್ನುವುದಕ್ಕಿಂತ ತಿರಿದು ತಿನ್ನುವುದು ಲೇಸು. ಉದ್ದಿಮೆ ಸಾಕು" ಎಂದು ಶಿವ ಹೇಳಿದ (೧೨೭). ಬಸವೇಶ ಗ್ರಾಮಕ್ಕೆ ಮರಳಿದ. ಗಂಗೆ ಎತ್ತಿನೊಂದಿಗೆ ಆಡಿಸುವವರು ಜೊತೆ ತಿರುಗುವಂತೆ, ಬಸವಣ್ಣನ ಜೊತೆ ಸಂಗಮೇಶನಿರುತ್ತಿದ್ದನು (೧೩೦).

ಸಂಧಿ–೫: ಶ್ರೀಶೈಲದಿಂದ ಬಸವೇಶನು ತನ್ನ ಗ್ರಾಮಕ್ಕೆ ಮರಳಿದನು (೧). ಭಕ್ತಿ ಮಾಡಬಯಸಿದನು. ಪತಿ ಹಿಡಿದ ವ್ರತ ಸತಿಗೂ ಇರಬೇಕೆಂದು ದಂಪತಿಗಳು ವ್ರತಿಗಳಾದರು (೪). ಉಗ್ರಶಿಲೆಯ

ಮೇಲೆ ತಪಸ್ಸು, ಸಮಯಾಚಾರ ನಡೆಸಿದನು (೫). ಈ ಕ್ರೂರಭಕ್ತಿ ನಿನಗೆ ಸೂಕ್ತವಲ್ಲವೆಂದು ಶಿವ ತಿಳಿಹೇಳಿ, 'ಡಂಗುರ ಬೋಧೆಯ ಸಾರು' ಎಂದು ಸೂಚಿಸಿದ (೯). ಆಮೇರೆಗೆ ಈ ಮೊದಲು ಹಿಡಿದ ವ್ರತ ಕೈಬಿಟ್ಟನು (೧೦). ಪ್ರಸೂತಿಯಾದ ಹೆಂಡತಿಯನ್ನು ನೋಡಲು ಗುಂಡಗುರುಕಿಗೆ ಹೋದನು. ಅವರ ಮನೆಯಲ್ಲಿದ್ದ ಗುಂಡಬೊಮ್ಮಯ್ಯನ ಎರಡು ಸುರಿಗೆಗಳಲ್ಲಿ ಉಳಿದಿದ್ದ ಒಂದನ್ನು ಅವರಿಂದ ಪಡೆದು, ಹೆಂಡತಿ ಜಕ್ಕಾಂಬೆಯೊಂದಿಗೆ ಮರಳಿದನು (೧೪). ಕರೆತಂದ ಹೆಂಡತಿಯನ್ನು ಊರ ಹೊರಗೆ ಇಟ್ಟ. ಗಿಡದ ರೆಂಬೆಗೆ ಬುತ್ತಿಗಂಟು ಕಟ್ಟಿ ೩ ದಿನಗಳ ಮೇಲೆ ಪ್ರಸಾದವೆಂದು ಹಂಚಿದ (೧೭). ಬಿಲ್ಲು ಬಾಣ ಹಿಡಿದು ಊರಲ್ಲಿ ಸಂಚರಿಸಿ. ಕೇಡು ಬರುವುದನ್ನು ಸಾರಿದ (೧೮). ಊರ ಹೊರಗೆ ಹೋಗಿ ಬಿಲ್ಲನಿಳುಹಿ "ಊರ ಹೀನ ಅಡವಿ ಲೇಸು" ಎಂಬ ಆಟವಾಡಿದ (೧೯). "ಬೂದಿಯೊಳು ಚಿಟ್ಟೋರಿಗೆ" ಎನ್ನುತ್ತ ಬೂದಿ ಚೆಲ್ಲಾಡಿದ (೨೧). ಈ ಆಟ ಆಡಿದ ಎಂಟು ದಿನಕ್ಕೆ ಊರು ಸೂರೆ ಹೋಯಿತು(೨೩). ಹೀಗೆ ಅನೇಕ ಸೂಚನೆ (ಕಾಲಜ್ಞಾನ) ನುಡಿಯುತ್ತಲಿದ್ದ, ಪವಾಡ ತೋರುತ್ತಲಿದ್ದ, ಬಸವೇಶನು ಒಮ್ಮೆ ಊರ ಹೊರಗಿನ ದೇವಾಲಯದಲ್ಲಿ ವಾದ್ಯ ನುಡಿಸುತ್ತಿರಲು, ದೂಷಿಸಿದವನಿಗೆ ದೇಹದಂಡನೆಯಾಗಿ, ಕ್ಷಮೆ ಕೇಳಿ, ಅದರಿಂದ ಮುಕ್ತನಾದ (೪೧). ಬಸವೇಶನನ್ನು ನಿಂದಿಸಿದವನು ಮೈ ಬಿಗಿದು ಬಿದ್ದು, ಕ್ಷಮೆ ಕೇಳಿ ಗುಣಮುಖಿಯಾದನು (೪೮). ಮೋರಿಯ ನೀರು ಬಸವೇಶನ ಮೈಮೇಲೆ ಚೆಲ್ಲಿದವನು ಹತನಾದ (೫೦). ಬೈದ ಒಕ್ಕಲಿಗನ ಒಕ್ಕಲು ಹಾಳಾಯಿತು (೫೨). ಬಸವೇಶನ ಹುಚ್ಚು ಬಿಡಿಸಬೇಕೆಂದು ಊರ ಅಧಿಕಾರಿಯ ಆಜ್ಞೆಯಂತೆ ಇಬ್ಬರು ಬಡಿಗೆ ಹಿಡಿದು ಕೈ ಎತ್ತಿದರು. ಎತ್ತಿದ ಕೈ ಇಳಿಯಲಿಲ್ಲ. ಕ್ಷಮೆ ಬೇಡಿ ಬಸವೇಶನನ್ನು ಗೌರವಿಸಿದರು. ಬಸವೇಶ ಊರ ಹೊರಗೆ ವಾಸಿಸುತ್ತಿರಲು ಜೇಡ ಸಿಂಪಿಗರೆಂಬ ಭೇದ ಮಾಡದೆ ಉಣ್ಣುತ್ತಿದ್ದನು (೬೮). ತಂದೆ ತಾಯಿಗಳು ಬಂದು ಕಂಡಕಂಡವರ ಅಡಿಗೆ ಊಟ ಮಾಡುವದನ್ನು ಆಕ್ಷೇಪಿಸಲು "ಭಕ್ತರಾದರೆ ಸಾಕು ಮತ್ತೇಕೆ ಕುಲ?" ಎಂದು ಪ್ರಶ್ನಿಸಿದ (೬೪). ಒಂದೆ ಭೂಮಿ, ಒಂದೆ ಜಲ, ಒಂದೆ ಅಗ್ನಿ, ಒಂದೆ ವಾಯು, ಒಂದೆ ಆಕಾಶ– ಹೀಗಿರುವಾಗ ಕುಲ ಬೇರೆ ಬೇರೆ ಏಕೆ? ಎಂದು ಪ್ರಶ್ನಿಸಿದ (೮೩). ಸತ್ಯದ ಹಾದಿಯಲ್ಲಿರುವವರು ಮಂತ್ರಪಿಂಡ, ಅಸತ್ಯದ ಹಾದಿಯಲ್ಲಿರುವವರು ಮಾಂಸಪಿಂಡವೆಂದು ವಿವರಿಸಿದ (೯೪). "ಏನು ಹೇಳಿದರೂ ನಾವು ನಿನ್ನನ್ನು ಬಿಡೆವು" ಎಂದು ನುಡಿದರೆ, "ನಾನು ನಿಮ್ಮ ಮಗನಲ್ಲ, ದೇವರ ಮಗ"ನೆಂದು ಉತ್ತರಿಸಿದ (೧೦೨). ತಂದೆ ತಾಯಿ ನಮಿಸಿ ಮರಳಿದರು (೧೨೧). ಏಕವಾಕ್ಯ ಪ್ರತಿಷ್ಠಾಚಾರ್ಯ ಬಿರುದು ಗುಂಡ ಬಸವಣ್ಣನಿಗೆ ಸಂದಿತು. ಲೋಕದ ಆರು ದರ್ಶನಕೆ ದೀಕ್ಷೆ ನೀಡಲು ಕರ್ತೃ ಈ ರೂಪದಲ್ಲಿ ಬಂದ (೧೨೨).

ಸಂಧಿ–೬: ಆರನೆಯ ಸಂಧಿಯಲ್ಲಿ ಕ್ರೂರಭಕ್ತಿ ಕೈಬಿಟ್ಟು, ಆರು ದರುಶನಕೆ ಅಧಿಕ ಸ್ಥಲ ತಾಳಿ, ಬಸವೇಶ ನಿಂತುದನ್ನು ಕೇಳಿರಿ (೧). ಬಸವೇಶ ಊರ ಹೊರಗೆ ಮಠ ಕಟ್ಟಿ 'ಧರ್ಮಕಲ್ಯಾಣ' ವೆಂದು ಹೆಸರಿಟ್ಟನು. ನನ್ನ ಈಗಿನ ಹೆಸರು ಬಸವಣ್ಣ, ಹಿಂದಿನ (ಜನ್ಮದ) ಹೆಸರು ಗುಂಡಯ್ಯ. ಇನ್ನು ಮೇಲೆ ಗುಂಡಯ್ಯನೆಂದೇ ಕರೆಯಿರಿ ಎನ್ನಲು, ಎರಡನ್ನು ಸೇರಿಸಿ 'ಗುಂಡ ಬಸವಯ್ಯ' ಎಂದಿರಲಿ ಎಂದು ತಿಪ್ಪಣಯ್ಯ ನುಡಿದನು. ಅದಕ್ಕೆ ಬಸವಯ್ಯನು ಸಮ್ಮತಿಸಿದನು (೬). "ದೇವರ ಆಚಾರಕ್ಕೆ ನಿಷ್ಠೆಯಿಂದ ನಿಲ್ಲುವವರು ಮುಂದೆ ಬನ್ನಿರಿ" ಎಂದು ಬಸವಣ್ಣ ಹೇಳಲು, ಒಬ್ಬಿಬ್ಬರು ಮುಂದೆ ಬಂದು ಪ್ರತಿಜ್ಞಾಬದ್ಧರಾದರು. ಅವರಿಗೆ 'ಬೋಳೆಯರು' ಎಂದು ಹೆಸರಿಡಲಾಯಿತು

(೧೪). "ನಿಮ್ಮ ನಿಮ್ಮ ಪುಣ್ಯಸ್ತ್ರೀಯರಲ್ಲಿಗೆ ಹೋಗಿ ಕರಿಮಣಿ, ಬಳೆ ಪಡೆದುಕೊಂಡು ಬನ್ನಿರಿ" ಎನ್ನಲು, ಅವರು ಹಾಗೆಯೇ ಮಾಡಿದರು (೧೫), ಬೋಳೆಯರ ಮುಂಗೈಗೆ ಕಂಕಣ ಕಟ್ಟಲಾಯಿತು (೧೬). ತೊಗಲ ಜಾಗಟೆ, ಎಲುವಿನ ಕೋಲಿನಿಂದ ಡಂಗುರ ಹೊಯಿಸಿದನು (೧೭). ಬಳಿಕ ಮಣ್ಣು ತೂರಿದನು. ಆಗ ನೆರೆದವರು ೧೫ ಕೊಳಗ ಜೊಳ್ಳ ಹಾರಿ ೫ ಕೊಳಗು ಉಳಿಯಿತೆಂದರು. ೧೮ ಕೊಳಗ ಹಾರಿ, ೨ ಕೊಳಗ ಮಾತ್ರ ಉಳಿಯಿತೆಂದು ಬಸವಣ್ಣ ನುಡಿದನು. (ಅನುಯಾಯಿಗಳಲ್ಲಿ) ಗಟ್ಟಿಗರು ಇಷ್ಟೇ ಎಂದು ಹೇಳಿದನು (೧೯). ಪರಸತಿ, ಪರಧನಕೆ ಆಸೆ ಮಾಡಬೇಡಿರಿ, ಪರನಿಂದೆ ಮಾಡಬೇಡಿರಿ, ಶಿವನು ಮರ್ತ್ಯಕ್ಕೆ ಬರ, ಭಯ, ರೋಗ ಈ ಮೂರನು ಹರಿಯ ಬಿಟ್ಟಿರುವನೆಂದು ಹೇಳಿದನು (೨೧). ಕರಿಯ ಮಣಿ, ಓಲೆ, ತೋಡು, ಹುಲ್ಲಿನ ಸೂಡು ಹೊರೆ ಕಟ್ಟಿಸಿ ಲೋಕದಲ್ಲಿ ಡಂಗುರ ಸಾರಿದನು (೨೪). ಷಷ್ಠಿ, ಶಿವರಾತ್ರಿ, ದವನದ ಹುಣ್ಣಿಮೆ, ನೂಲ ಹುಣ್ಣಿಮೆ– ಪ್ರತಿವರ್ಷ ಈ ನಾಲ್ಕು ಮೂಹೂರ್ತಗಳಲ್ಲಿ ಬರಲು ಶಿಷ್ಯರಿಗೆ ಕಟ್ಟಪ್ಪಣೆ ಮಾಡಿದ (೨೬). ಬಂದ ಭಕ್ತರು ತೆವರಿಯಲ್ಲಿ, ತಾನು ತಗ್ಗಿನಲ್ಲಿ ಕುಳಿತು ಬೋಧಿಸುತ್ತಿದ್ದನು, ಬರಿಗಾಲಿನಿಂದ ಸಂಚರಿಸುತ್ತಿದ್ದನು. ಹೊರಸಿನ ಮೇಲೆ ಮಲಗುತ್ತಿರಲಿಲ್ಲ. ಹೀಗೆ ಅಂಗಭೋಗ ತೊರೆದಿದ್ದನು. ಬಟ್ಟೆಯನ್ನು ಹರಿಯುವ ವರೆಗೆ ತೊಡುತ್ತಿದ್ದನು. ದಂಪತಿಗಳು ತಪೋಮಗ್ನರಾಗಿರುತ್ತಿದ್ದರು. ಅಂಗಮಜ್ಜನ ಬಿಟ್ಟು, ದಿನವೂ ಲಿಂಗಮಜ್ಜನ ಮಾಡುತ್ತಲಿದ್ದನು. ಅಂಗಸುಖ ಬಿಟ್ಟು ಲಿಂಗಸುಖದಲ್ಲಿದ್ದನು. ದಿನಾಲು ೧೭ ಪೂಜೆ ಮಾಡುತ್ತಲಿದ್ದ. ಇವುಗಳಲ್ಲಿ ಅವಸರದ ಪೂಜೆ ೧೦. ಅವು ಸೂರ್ಯೋದಯ ಮೊದಲ ಪೂಜೆ ೬, ಸುರ್ಯೋದಯಕ್ಕೆ ೪. ಈ ಸಂದರ್ಭದಲ್ಲಿ ತನ್ನ ಇಷ್ಟಲಿಂಗಕ್ಕೆ ಮಜ್ಜನ ಗಂಧ, ಪುಷ್ಪ ಇತ್ಯಾದಿ ಪೂರೈಸುತ್ತಿದ್ದನು (೩೯). ಮಂಗಳಾರತಿ, ನೈವೇದ್ಯ, ಶಂಖ–ಜಾಗಟೆ ಹೀಗೆ ಪೂಜೆ ಮಾಡಿದ ಬಳಿಕ, ಪ್ರಾಣಲಿಂಗ ಪೂಜೆಯನ್ನು ನೆರವೇರಿಸುತ್ತಿದ್ದನು (೪೩). ಮೂರು ತನುವೆಂಬ ಗದ್ದುಗೆ, ಧ್ಯಾನವೆಂಬ ತಾಣದೀವಿಗೆ ಇತ್ಯಾದಿಯಾಗಿ ಈ ಪೂಜೆ ಮಾಡುತ್ತಿದ್ದನು. (೪೯). ಪಂಚೇಂದ್ರಿಯಗಳನ್ನು ಲಿಂಗಮುಖಗೊಳಿಸಿ (೫೦), ಅಂಗಸೋಂಕಿದ ಸೋಂಕ ಲಿಂಗಕರ್ಪಿತ ಮಾಡುತ್ತಿದ್ದನು (೫೭).

ಹೀಗೆ ಅಂತರಂಗ ಪೂಜೆ ಬಹಿರಂಗ ಪೂಜೆ ಮಾಡಿದನು (೫೮). ಧರ್ಮಮಾರ್ಗದಿಂದ ನಡೆಯಲು ಮುಂದಣ ವಿದ್ಯಮಾನ ಹೇಳುವ ಡಂಗುರ ಸಾರಿದನು (೬೬). ಭಾಳಲೋಚನನ ನಿಲುವು, ಪಂಚತತ್ವ ಇತ್ಯಾದಿಗಳನ್ನೆಲ್ಲ ನಿರೂಪಿಸಿದನು (೭೦). ಬ್ರಹ್ಮ, ವಿಷ್ಣು ಸ್ವರೂಪ ವಿವರಿಸಿದನು. (೮೫). ಹೀಗಿರಲು ತಿಪ್ಪಣಯ್ಯ ಬಸವೇಶನಿಗೆ ಒಮ್ಮೆ "ನಿಮ್ಮದು ಯಾವ ಕುಲ, ಯಾವ ಜಾತಿ? ಯಾವ ಸ್ಥಲ" ಇತ್ಯಾದಿ ಕೇಳಿದನು (೮೬). ನಮ್ಮದು ದೇವಕುಲ, ಶಿವಜಾತಿ, ಐಕ್ಯಸ್ಥಲವೆಂದು ತಿಳಿಸಿದನು (೮೭). "ನೀನು ಗುರುಲಿಂಗ ಜಂಗಮ ಪ್ರೇಮಿ, ತ್ರಿಮೂರ್ತಿಯನೊಳಕೊಂಡ ಮಹಿಮ" ಎಂದು ತಿಪ್ಪಣಯ್ಯ ಹೊಗಳಿದನು (೯೪). ಈ ಕ್ಷೇತ್ರವು ಶ್ರೀಶೈಲ ಸೇತುಬಂಧಕ್ಕಿಂತ ಮಿಗಿಲೆಂದೂ ಇದು ರಜತಾದ್ರಿ, ನೀನೇ ಶಂಭುವೆಂದೂ ತಿಪ್ಪಣಯ್ಯ ಹೇಳಿದನು (೯೮). ಶಿವನ ಪಾದಕ್ಕೆ ತಾನು ಪಯಣ ಬೆಳೆಸುವದಾಗಿ ತಿಪ್ಪಣಯ್ಯ ನುಡಿದನು (೧೦೧). ಆಗ ಬಸವಣ್ಣ "ನಾವು ಈ ಭುವನದಲ್ಲಿ ದೇವರ ಮಣಿಹವನ್ನು ಇನ್ನೂ ಮಾಡಬೇಕಾಗಿದೆ. ಕಾರಣ ಈ ಬಗ್ಗ ವ್ಯವಧಾನವಿರಲಿ" ಎಂದನು. ಆಮೇರೆಗೆ ತಿಪ್ಪಣಯ್ಯ ಎರಡು ಮೂರು ವರುಷ ಕಳೆದು, ಮತ್ತೆ ಆ ಬಗ್ಗೆ ಕೇಳಿದ. ಆಗ ಶಿವನ ಪಾದಕ್ಕೆ ಪಯಣ ಬೆಳೆಸಲು ತಿಪ್ಪಣಯ್ಯಗೆ ಬಸವಣ್ಣ ಹೇಳಿದ.

ಎಲ್ಲಿಯಾದರೂ ಪ್ರಾಣಬಿಡುವೆನೆಂದ, ತಿಪ್ಪಣಯ್ಯ (೧೦೪). ಇದೇ ಸ್ಥಲದಲ್ಲಿ ದೇಹ ಬಿಡಬೇಕೆಂದು ಬಸವಣ್ಣ ಬಿನ್ನವಿಸಿಕೊಳ್ಳಲು ತಿಪ್ಪಣಯ್ಯ ಒಪ್ಪಿದ (೧೦೫). ತಿಪ್ಪಣಯ್ಯ ಪ್ರಾಣಬಿಟ್ಟ (೧೦೬). ಗೋಪೆಯ ಮಾಡಿ ಒಳಗೆ ಶವವಿಟ್ಟು, ಕಟ್ಟೆ ಕಟ್ಟುವಾಗ ತನ್ನ ಕಪೋಲದ ಮೇಲೆ ಕೇಸರು ಬಿದ್ದಿದೆ ಎಂದು ತಿಪ್ಪಣಯ್ಯ ಕಟ್ಟೆ ಕಟ್ಟಿದವನ ಕನಸಿನಲ್ಲಿ ಹೇಳಿದ (೧೦೭). ಗುಂಡರಾಯ ಸಮಾಧಿ ಅಗೆಸಿ, ಕಪೋಲದ ಮೇಲಿನ ಕೆಸರ ಒರೆಸಿ, ಮಜ್ಜನ ಮಾಡಿಸಿ, ಮರು ಸಂಸ್ಕಾರ ಮಾಡಿದ (೧೦೯). ಗುಂಡರಾಯ ಡಂಗುರ ಸಾರುತ್ತ ಪಯಣಿಸಿದ (೧೧೦). ಆರು ದರ್ಶನ ಹದಿನೆಂಟು ಸಮಯಗಳಿಗೆ ಮಾರ್ಗ ತೋರಿದ (೧೧೨). "ಇನ್ನು ತಪಸ್ಸು ಸಾಕು" ಎಂದು ಶಿವನ ಅಪ್ಪಣೆಯಾಯಿತು. (೧೧೪). ತಪಸ್ಸು ೧೬ ವರ್ಷವಾಯಿತೆಂದು ಸತಿ ಜಕ್ಕಾಂಬೆ ಹೇಳಿದಳು (೧೧೫). ತಪಸ್ಸನ್ನು ಕೈಬಿಟ್ಟನು. ಸ್ನಾನಮಾಡಿ ಮಡಿಯುಟ್ಟು, ಪಟ್ಟೆಮಂಚ, ವೀಳ್ಯೆ, ಪಾದರಕ್ಷೆ ಬಳಸಹತ್ತಿದನು (೧೧೬). ಹೀಗಿರುವಲ್ಲಿ ಕಣ್ಣು ಬೇನೆ ಬಂದಿತು (೧೧೮). ಬೇನೆ ತಾಳಲಾರದೆ "ಈ ಜನ್ಮಸಾಕು" ಎಂದು ನುಡಿಯಲು, ಶಿವಲೋಕದವರು ಕರೆಯಲು ಬಂದರು. "ನಾನು ಇನ್ನೂ ಡಂಗುರ ಸಾರಬೇಕು. ಅಲ್ಲಿಗೆ ಬರಲಾರೆ" ಎನ್ನಲು, ಶಿವಲೋಕದವರಿಗೂ ಬಸವಣ್ಣನಿಗೂ ಕಾಳಗ ಏರ್ಪಟ್ಟಿತು. ಶಿವಲೋಕದವರು ಸೋತು ಹಿಂದಿರುತಿದರು. ಈಗ ತನ್ನ ಕೈಯ್ಯಲ್ಲಿ ಅಂಬು ನಟ್ಟಿರುವುದನ್ನು ತನ್ನ ಹೆಂಡತಿಗೆ ತೋರಿಸಿದ (೧೨೮). ಬಳಿಕ ಬೋಧೆ ಮಾಡುತ್ತ ಪ್ರಯಾಣ ಬೆಳೆಸಿ, ಮೈಲವಾರದಲ್ಲಿ ಹೋಗಿ ನಿಂತನು (೧೩೦).

ಸಂಧಿ-೭: ಗುರುಗುಂಡನ ಕ್ಷೇತ್ರಕ್ಕೆ ವರ್ಷದೊಳಗೆ ನಾಲ್ಕು ಸಲ ಪ್ರಯಾಣಿಸಿದರೆ ಸಾಮಿಪ್ಯ, ಈ ಕ್ಷೇತ್ರದ ಅಂಗಳದಲ್ಲಿ ಹಕ್ಕರೆ ಸಾರೂಪ್ಯ, ಗುರುಗುಂಡನಿಗೆ ಭಕ್ತಿಯಿಂದ ನಡೆದುಕೊಂಡರೆ ಸಾಯುಜ್ಯ ಪದವಿ ಪ್ರಾಪ್ತವಾಗುತ್ತದೆ. ಈಗ ಬೋಧೆಮಾಡುವುದನ್ನು ಬಿಟ್ಟು ಕುದುರೆ ಹತ್ತಿದ, ಸತ್ತಿಗೆ ಹಿಡಿಸಿ, ಕಹಳೆಯೂದಿಸಿದ, ಎರಡೂ ಕಡೆಗೆ ಬಿಲ್ಲು ಡಾಲು ಹಿಡಿಸಿ, ಕಹಳೆಯೂದಿಸಿದ, ಎರಡೂ ಕಡೆಗೆ ಬಿಲ್ಲು ಡಾಲು ಹಿಡಿಸಿ ಪ್ರಯಾಣ ಬೆಳೆಸಿದ (೨). ಹೀಗೆ ಒಂದೆರಡು ವರ್ಷ ಕಳೆಯಲು 'ಇಷ್ಟಲಿಂಗದ ಪೂಜೆ ಬಿಡು' ಎಂದು ಸಂಗಮೇಶನ ಅಪ್ಪಣೆಯಾಯಿತು (೪). 'ಲಿಂಗವನೊಡೆನೆರೆವಾಗ ಲಿಂಗಪೂಜೆ ಬೇಡ' ಹೀಗೆ ಮತ್ತೆ ೩ ಸಲ ಅಪ್ಪಣೆಯಾಯಿತು. ಅದರೆ ಬಹಿರಂಗದಲ್ಲಿ ಈ ಬಗ್ಗೆ ತಾರ್ಕಿಕ ಘಟನೆ ಜರುಗುವ ವರೆಗೆ ಇಷ್ಟಲಿಂಗಪೂಜೆ ನಿಲ್ಲಿಸಲಾರೆನೆಂದು ನುಡಿದನು (೫). "ನಾಲ್ಕು ಜಂಗಮ ಸ್ಥಲಗಳಲ್ಲಿ ಎರಡಕ್ಕೆ ಕರಡಿಯ ವಾದ್ಯ ಸಲ್ಲುವುದಿಲ್ಲ. ಜಂಗಮನಲ್ಲದ ನಿನಗೇಕೆ ಕರಡಿಯ ವಾದ್ಯ"ವೆಂದು ತರ್ಕಿಗಳು ವಾದಿಸಿದರು. "ಈ ವಾದ್ಯ ನನಗಲ್ಲ, ಲಿಂಗಪೂಜೆಗೆ" ಎಂದು ಬಸವಣ್ಣ ಉತ್ತರಿಸಿದ. "ಕರಡಿಯ ಶಬ್ದ ಕೇಳಿದರೆ ನಿನ್ನನ್ನು ಕೊಲ್ಲುವೆವು" ಎಂದು ತರ್ಕಿಗಳು ವಾದಿಸಿದರು. "ಕರಡಿ ವಾದ್ಯ ಕೇಳಿಸದ ವರೆಗೆ ನಾನು ಲಿಂಗಪೂಜೆ ಮಾಡಿಕೊಳ್ಳುವುದಿಲ್ಲ"ವೆಂದು ಬಸವಣ್ಣ ಹಟ ಹಿಡಿದ. ಅಷ್ಟ ದಿಕ್ಕಿಗೂ ಈ ಸುದ್ದಿ ಕಳಿಸಿದ. ಆದರೂ ವಾದಿಗಳು 'ಕರಡಿ ವಾದ್ಯ' ನುಡಿಸಬಾರದೆಂದು ಉತ್ತರಿಸಿದರು. ಆಗ ಬಸವಣ್ಣ ಇಷ್ಟಲಿಂಗದ ಪೂಜೆ ಬಿಟ್ಟು ಪ್ರಾಣಲಿಂಗದ ಪೂಜೆಯಲ್ಲಿ ತೊಡಗಿದ (೧೮). "ಡಂಗುರ ಸಾರಿದರೂ ಲೋಕ ಸತ್ಪಥಕ್ಕೆ ಬರುತ್ತಿಲ್ಲ" ಎಂದು ಬೇಸರಪಟ್ಟು (೧೧), "ನಾನು ೧೭ ವರ್ಷ ಸಾರಿದೆನು, ಮುಂದೇನು ನಿರೂಪ?" ಎಂದು ಶಿವನಿಗೆ ಕೇಳಿದ. "ಮರ್ತ್ಯದ ಬಳಲಿಕೆ ಸಾಕು, ಮರಳಿ ಬಾ" ಎಂಬ ಆದೇಶವಾಯಿತು (೧೩). ಭಕ್ತರು ಮತ್ತು ಬೋಳರನ್ನು ಕರೆಸಿ, "ಮಕ್ಕಳು

೫ ಜನರಿದ್ದಾರೆ. ಇವರಲ್ಲಿ ಮೂವರು ಚಿಕ್ಕವರು, ಮಿಕ್ಕ ಇಬ್ಬರಲ್ಲಿ ಗದ್ದುಗೆಗೆ ತಕ್ಕವರಾರು?" ಎಂದು ಕೇಳಿದ (೧೫). ಹೊದಿಕೆಯ ಹೊಲಿಸಿ ತರಿಸಿದ. "ಗದ್ದುಗೆಯ ಮೇಲೆ ಒಬ್ಬನನ್ನು ಕುಳ್ಳಿರಿಸುವೆ"ನೆಂದು ನುಡಿದ (೧೬). "ಮುಂದೆ ತಾನಾಗಿಯೇ ಆದೀತು. ಈಗ ಬೇಡ" ಎಂದು ಅವರು ಹೇಳಿದರು (೧೭). "ಜೇನುತುಪ್ಪ ಹಚ್ಚಿಕೊಂಡು ಹುಡಿಯಲ್ಲಿ ಉರುಳಿದರೆ ಹತ್ತಲಾರದ್ದು ಹತ್ತಲಾರದು. ಹಾಗೆ ಮುಂದೆ ತಾನಾಗಿಯೇ ಆದೀತು (೧೮), ಯಾರನ್ನೂ ನೇಮಿಸಬೇಡಿರಿ" ಎಂದರು. ಅವರ ಮಾತನ್ನು ಮನ್ನಿಸಿ 'ಇಂದು ಎರಡು ಗದ್ದುಗೆ ಮಾಡಿದರೇನು? ಮುಂದೆ ಒಂದೇ ಆದೀತು. ಏಕೆಂದರೆ ಇವರಲ್ಲಿ ಒಬ್ಬನಿಗೆ ಶಿವಯೋಗ ಸಹಜವಾಗಿದೆ' ಎಂದು ನುಡಿದು, ಬೋಳರನ್ನು ಕರೆದು, ತನಗೆ ಗವಿ ಮಾಡಲು ಹೇಳಿದ. ಅವರೆಲ್ಲ ದುಃಖಿಸಿದರು (೨೧). ಇನ್ನು ಒಂದು ವರ್ಷಕ್ಕೆ ಐಕ್ಯವಾಗುವುದಾಗಿ ಹೇಳಲು, "ಹಾಗಿದ್ದರೆ ಇಷ್ಟು ಅವಸರವೇಕೆ?" ಎಂದು ಕೇಳಿದರು. ಇದನ್ನು ಕೇಳಿ ಗುಂಡರಾಯ ಮೈಲವಾರದಲ್ಲಿ ನಿಂತನು (೨೩). ವರ್ಷ ತುಂಬುವುದರೊಳಗಾಗಿ ಮೈಲವಾರಕ್ಕೆ ಭಕ್ತರನ್ನು ಬರಮಾಡಿಕೊಂಡು, ಮತ್ತೆ ತನ್ನ ಇಚ್ಛೆ ಹೇಳಿ, ಅಲ್ಲಿಂದ ಯಲ್ಲನಾಗಾವಿಗೆ ಬಂದನು (೨೫). ಮಕ್ಕಳಿಗೆ, ಭಕ್ತರಿಗೆ ಬುದ್ದಿ ಮಾತು ಹೇಳಿದನು. "ಧರ್ಮಕಲ್ಯಾಣ'ದ ಸನ್ನಿಧಿಯಲ್ಲಿರಲು ತಿಳಿಸಿದನು. ಮುಂದೆ ಇಲ್ಲಿ ಶರಣರು ಬರಲಿದ್ದಾರೆಂದು ಸೂಚಿಸಿದನು. (೩೨) ನಾಲ್ಕು ಕಲ್ಯಾಣಗಳಲ್ಲಿ ಬಂದು ಶರಣರು ಹೇಳಿದುದನ್ನು ಜನ ಕೇಳಲಿಲ್ಲ. ಹೊಸ ಕಲ್ಯಾಣಕ್ಕಾಗಿ ಶರಣನು ಬರುವನು (೩೩), 'ಸಮಯ ಕಲ್ಯಾಣ'ವನ್ನು ರಚಿಸುವ ಒಬ್ಬ ಕರ್ತ ಬಂದು, ಭಕ್ತರ ಪಾಪ ಕಳೆಯುವನು (೩೫). ಇಲ್ಲಿ ಭಕ್ತರು ಬೋಳರು, ಮಕ್ಕಳಾದ ಅಲ್ಲಮಯ್ಯ ಸಂಗಯ್ಯ ಮೊದಲಾದ ಐವರನ್ನು ಕೂಡಿಕೊಂಡು, ಡಂಗುರ ಓದಿ ಬಾಳಿರಿ (೩೮). ""ಲಿಂಗಪೂಜೆಯ ಮಾಡು ಎಂದರೆ ಮಾಡಿ,ಮುಂದೆ ಬೇಡವೆಂದರೆ ನಿಲ್ಲಿಸಿರಿ" (೪೦) ಎಂದು ಭಕ್ತರಿಗೆ ಬೋಳರಿಗೆ ಬುದ್ದಿ ಹೇಳಿದ. ತನ್ನ ಏಳು ಮಂದಿ ಸತಿಯರನ್ನು ಕರೆಸಿ, "ಮಿಕ್ಕವರಿಗೆ ಹೊರಗೆ ಒಳಗೆ ಹೋಗಗೊಡದೆ, ಅರು ಮಂದಿಗೆ ನೀನೇ ಗಂಡನಾಗಿರು" ಎಂದು ಹಿರಿಯವಳಿಗೆ ಹೇಳಿದ. ಐದೂ ಜನ ಮಕ್ಕಳು ನಿನ್ನವರೆಂದು ಹೇಳಿದ (೪೪). ಇಬ್ಬರು ಮಕ್ಕಳಲ್ಲಿ ಒಬ್ಬಗೆ ಶಿವಯೋಗ ಭಾಗ್ಯವಿದೆ. ಮಿಕ್ಕ ನಾಲ್ವರು ಅವನ ಇಚ್ಛೆಯಂತೆ ನಡೆಯಿರಿ (೪೫). ಹಿರಿಯವನ ಮಾತ ಮೀರಿದವಗೆ ಭಕ್ತರು ಎತ್ತು ಕೊಡಿರಿ (೪೬). ನನ್ನನ್ನು ಕಂಡ ರೀತಿಯಲಿ ಇವರನ್ನು ನೀವು ಕಾಣಿರಿ" ಎಂದು ಹೇಳಿ, ಇಬ್ಬರಿಗೂ ಕೈಹಿಡಿಸಿದ (೪೭), ಥರಕಾರರನ್ನು ಕರೆಸಿ ತಿಪ್ಪಣಯ್ಯನ ಸಮಾಧಿಯ ಹತ್ತಿರ ಗವಿ ಮಾಡಲು ಹೇಳಿದ (೪೯). ಅಲ್ಲಿ ಕಲ್ಲುಯಿದೆಯೆಂದು ಸೂತ ನುಡಿದ. "ಬಸವಯ್ಯನಿಗಾಗಿ ಎಂದು ಬೇಡಿಕೊಳ್ಳಲು ಭೂದೇವಿ ಕೊಟ್ಟಾಳು" ಎಂದು ಹೇಳಿದ (೫೦). ಅಗಿಯಲಾಗಿ ಮೊದಲೇ ಸಿದ್ಧಪಡಿಸಿದ ಹಗೆಯಂಥ ರಚನೆ ಸಿಕ್ಕಿತು (೫೧). ಇಂದಿಗೆ ೫ ದಿನಕ್ಕೆ ಆದಿತ್ಯವಾರ ಪರಲೋಕ ಪ್ರಯಾಣವೆಂದು ಬಸವಣ್ಣ ಹೇಳಿದ (೫೨). ತನ್ನ ಜನರನ್ನು ಕರೆಯಿಸಿ ಭವಿಷ್ಯದ ವಿವರ ಬರೆದುಕೊಳ್ಳಲು ತಿಳಿಸಿದ (೫೩). ಬರೆದುಕೊಂಡರೆ ತಮ್ಮನ್ನು ಆಗಲುವನೆಂದು ಬರೆದುಕೊಳಲ್ಲಿಲ್ಲ(೫೪) "ನೀವು ಹೋದರೆ ನಮಗೆ ದಿಕ್ಕು ಯಾರು?" ಎಂದು ಸತಿ ದುಃಖಿಸಿದಳು (೫೫). "ಶಿವನೇ ನಿಮಗೆ ದಿಕ್ಕು, ೨-೩ ವರ್ಷ ತೊಂದರೆ, ಮುಂದೆ ಸುಖವಿದೆ" ಎಂದು ಹೇಳಿದ (೫೭). "ಕರಿಯಮಣಿ, ಓಲೆ, ತೋಡೆ ಕಳಚಬೇಡಿರಿ. ಪುರುಷನೆ ಗತಿಯೆಂದು ಬಾಳಿರಿ (೫೮). ಅಳಬೇಡಿರಿ, ಹಿರಿಯ

ಹೆಂಡತಿ ನೀರು ಬಿಡಲಿ" ಎಂದನು (೫೯). ದೇವದುಂದುಭಿ ಮೊಳಗಿತು. "ದೇವಲೋಕದಿಂದ ವೀರಭದ್ರ ಪುಷ್ಪಕ ತರುತ್ತಿದ್ದಾನೆ. ಇಂದು ಮಧ್ಯಾಹ್ನದೊಳಗೆ ಹೋದರೆ ಹೋಗುವೆನು, ತಪ್ಪಿದರೆ ಇಲ್ಲಿಯೇ ಇರುವೆನು" (೬೩). ಎಂದು ಹೇಳಿ, ಅಂದೇ ಲಿಂಗದೊಳಗಾಗಿ, ಪುಷ್ಪಕವೇರಿ ನಡೆದನು (೬೬). ಪಾರ್ವತಿ ಮೊದಲು ಮಾಡಿ ಕಳಸ ತಂದರು. 'ಬಂದೆಯಾ ಮಗನೇ' ಎಂದು ನುಡಿದ ಪಾರ್ವತಿ ಗುಂಡರಾಯನನ್ನು ಕರೆದೊಯ್ದಳು. ಈಶನನ್ನು ತಕ್ಕೈಸಿದನು (೭೦). "ಹೇಳಿದ ಬೋಧೆ ಲೋಕ ಕೇಳದು. ನೀನು ಬಹಳ ಬಳಲಿದೆ" ಎಂದು ಶಿವ ನುಡಿದು ಸಂತೈಸಿದನು (೭೧).

ದುಃಖಿಸಿದ ಜನರನ್ನು ಸಂತೈಸಿದರು (೭೩). ಗುಂಡ ಬಸವಣ್ಣ ಶಿವನಂತೆ ಕುಳಿತಿದ್ದನು. ವಾಲಗ ಏರ್ಪಟ್ಟಿತು. ಏಳು ನೆಲೆಯ ಪುಷ್ಪಕ ರಚಿಸಿ ಫಲಪೂಜೆ ಮಾಡಿದರು. (೭೪). ಶವಯಾತ್ರೆ ಆರಂಭವಾಯಿತು. ವೀಳ್ಯದೆಲೆ, ಹೂವು ಬುಕ್ಕಿಟ್ಟು ಚೆಲ್ಲುತ್ತ ನಡೆದರು. ಒಲೆ ಹೊತ್ತಿಕ್ಕದೆ ಊರೆಲ್ಲ ದುಃಖಿಸಿತು (೭೭). ಎರಡೂ ದಿಕ್ಕಿನ ಜನ ಸೇರಿತು (೭೮). ಪಟ್ಟೋಳಿ, ಕುಲಾಯಿ ಕಪ್ಪಡ, ಕಂಬಳಿ, ರುದ್ರಾಕ್ಷಿಯ ಹಸ್ತಡ್ಡಿಕೆ, ಕರದಲ್ಲಿ ಇಷ್ಟಲಿಂಗದೊಂದಿಗೆ ಶವ ಶೃಂಗಾರವಾಗಿದ್ದಿತು(೭೯). ಅಂತ್ಯಕ್ರಿಯೆ ಮುಗಿಸಿ, ಮೂರನೆಯ ದಿನಕ್ಕೆ ಸಮಾಧಿ ತೆಗೆಯಲಾಗಿ ಶವ ಹಾಗೆಯೇ ಇದ್ದಿತು. ಹೂವಿನ ಹಚ್ಚಡದಲ್ಲಿ ಹೊದೆದು, ಹೂವಿನ ಗಿಡದಲ್ಲಿ ಕುಳಿತಂತೆ ಶೋಭಿಸಿದ. ಧೂಪದ ಹೊಗೆ ಇನ್ನೂ ಇದ್ದಿತು (೮೨). ಶವ ಮುಚ್ಚಿ, ಕಟ್ಟೆ ಕಟ್ಟಿ, ಆಲಯ ನಿರ್ಮಿಸಿದರು (೮೩). ಎರಡೂ ಶಿವಾಲಯ ಗಂಗೆಮುಖವಾಗಿ ನಿರ್ಮಾಣಗೊಂಡವು. ವರ್ಷಕ್ಕೆ ನಾಲ್ಕು ತಿಥಿ ಸಮಾರಂಭಗಳು ಜರುಗಿದವು (೮೪). ಹಗಲಿರುಳು ನಂದಾದೀಪ, ಅಷ್ಟವಿಧಾರ್ಚನೆ, ಪಂಚಮಹಾವಾದ್ಯದ ಪೂಜೆ ಜರುಗಿದವು (೮೫). ಗುಂಡಯ್ಯನ ಗದ್ದುಗೆ ಬೇಡಿದ ವರ ನೀಡುವ ಕೇಂದ್ರವಾಯಿತು (೮೬). ಗುಂಡನನ್ನು ನೆನೆದರೆ ಕೈಲಾಸ ಸಾಧ್ಯ (೮೯). ಶ್ರೀಗುರು ಗುಂಡನಿಗೆ ಜಯಜಯವೆಂದು ಕೈಮುಗಿದು ವಂದಿಸುವೆ (೯೦). ಏಳು ಸಂಧಿ ಏಳು ನೂರಾ ತೊಂಬತ್ತೂರು ಪದ್ಯಗಳಿಗೆ ಚರಿತ್ರೆ ಮುಗಿಯಿತು (೯೧).

ವಿಮರ್ಶೆ

ನಡುಗನ್ನಡ ಸಂದರ್ಭವು ಕರ್ನಾಟಕದ ಅಸ್ಮಿತೆ ಅವತಾರಗೊಳ್ಳಲಾರಂಭಿಸಿದ ಅವಧಿಯಾಗಿದೆ. ಅನ್ಯಧರ್ಮ, ಅನ್ಯಭಾಷೆಗಳ ಪ್ರಭಾವಗಳಿಂದ ಬಿಡಿಸಿಕೊಂಡು, ದೇಶೀಧರ್ಮ-ದೇಶಿಭಾಷೆಗಳ ಅನುಷ್ಠಾನದ ಹೊಸಪ್ರಯತ್ನ ಈಗ ಆರಂಭವಾಯಿತು. ಇದರ ಫಲವಾಗಿ ಭಾಷೆಯಲ್ಲಿ ಸ್ಥಳೀಯ ಪ್ರಜ್ಞೆಯ ವಚನವಾಙ್ಮಯ, ಧರ್ಮದಲ್ಲಿ ಸ್ಥಳೀಯ ದರ್ಶನ ಮತ್ತು ವ್ಯಕ್ತಿಚರಿತ್ರೆಗಳು ಉದಯವಾಗತೊಡಗಿದವು. ಇಂಥ ಸಂದರ್ಭದಲ್ಲಿ ಸಹಜವಾಗಿಯೇ ಕಲ್ಪಿತ ಪುರಾಣಗಳಿಗೆ ಬದಲು ಘಟಿತ ಚರಿತ್ರೆಗಳ ಪುರಾಣೀಕರಣ ಕ್ರಿಯೆ ಆರಂಭವಾಗುತ್ತದೆ. ಆಗ ಸಹಜವಾಗಿಯೇ ಆಯಾ ಪ್ರದೇಶಗಳ ಭೌತಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಅಂಶಗಳು ನೇರವಾಗಿ ಕೃತಿ ರೂಪ ಪಡೆಯತೊಡಗುತ್ತವೆ. ಪ್ರಸ್ತುತ ಕೃತಿಯಲ್ಲಿ ಇವು ಮೂಡಿದ ಬಗೆಯನ್ನು ಇಲ್ಲಿ ನೋಡಬಹುದು.

ಭೌತಿಕ ವಿವರಣೆ :

ಭೌತಿಕ ದೃಷ್ಟಿಯಿಂದ ಗುಂಡಬಸವೇಶ್ವರನ ಚರಿತ್ರೆಯನ್ನು ನೋಡ ಹೊರಟರೆ, ಆ ಪರಿಸರದ ಗ್ರಾಮ, ದೇವಾಲಯ, ಮಠ ಇತ್ಯಾದಿಗಳ ವಿವರ ಇಲ್ಲಿ ದಟ್ಟವಾಗಿ ಗೋಚರಿಸುತ್ತದೆ. ೩ನೆಯ ಸಂಧಿ ಆರಂಭವಾಗುವದೇ ಈ ಭೌತಿಕ ವಿವರಗಳಿಂದ. ಕಲ್ಯಾಣಕ್ಕೆ ಏಳು ಯೋಜನ ದಕ್ಷಿಣಕ್ಕೆ, ದಂಡಗುಂಡಕ್ಕೆ ಒಂದು ಕಾಲು ಯೋಜನ ಉತ್ತರಕ್ಕೆ ಬಸವೇಶ (ನಂದಿ) ನೆಲೆಸಿದ್ದಾನೆ. ಇಲ್ಲಿಂದ ಮೂರು ಯೋಜನ ದೂರದಲ್ಲಿ ಕೂಡಲ ಸಂಗಮವಿದೆ. ಇಲ್ಲಿಂದ ಅರ್ಧಗಾವುದ ದೂರದ ಈಶಾನ್ಯ ಮೂಲೆಯಲ್ಲಿ (ನಾಗಾವಿಯಲ್ಲಿ) ಗುಂಡಬಸಪ್ಪ ಜನಿಸಿದ. ಸಂಗನಬಸವ ಅಕ್ಕ ನಾಗಾಯಿ ಆಳಿದ ಗ್ರಾಮವಿದು. ಇದರ ಪೂರ್ವಭಾಗದ ಕೂಗಳತೆಯಲ್ಲಿ ಸಂಗಮೇಶ್ವರ ನೆಲೆಸಿದ್ದಾನೆ. ಈ ಊರಿನಿಂದ ವಾಯವ್ಯದಲ್ಲಿ ಹರಿದಾರಿ ದೂರ ಕಂಗಳಿಗೆ ಸೋಮಯ್ಯ, ವೀರಭದ್ರ ನೆಲೆಸಿದ್ದಾರೆ. ಕಂಗಳಿಗೆ ಸೋಮಯ್ಯ ದೃಷ್ಟಿದೋಷ ಪರಿಹಾರ ಮಾಡುತ್ತಿದ್ದು, ಯುಗಾದಿ ಅಷ್ಟಮಿಯಂದು ಇಲ್ಲಿ ಜಾತ್ರೆ ಜರುಗುತ್ತದೆ. ಸನ್ನೆ ಗ್ರಾಮದ ಮೂಡಣದಲ್ಲಿ ಪಾರ್ವತಿ ಸಹಿತ ಪರಮೇಶ್ವರ ನೆಲೆಸಿದ್ದಾನೆ. ನೂರೊಂದು ಕಂಬದ ಶಿವಾಲಯದಲ್ಲಿ ಅಕ್ಕನಾಗಾಯಿ ಜಂಗಮ ದಾಸೋಹ ಮಾಡುತ್ತಲಿದ್ದ ಕಾರಣ, ಇದು ಛತ್ರಸಾಲೆಯೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಊರ ಮುಂದೆ ಪುಣ್ಯತೀರ್ಥ, ನಂದಿಯ ಭಾವಿಯಿದೆ. ಇವುಗಳ ದಡದಲ್ಲಿ ಪೂರ್ವಾಭಿಮುಖವಾಗಿ ರಾಮೇಶ್ವರನಿದ್ದಾನೆ. ಇಲ್ಲಿಯ ವನದಲ್ಲಿ ಸಿದ್ದೇಶ್ವರನ ಎದುರು ನಂದಿಕೇಶ್ವರ ನೆಲೆಸಿದ್ದಾನೆ. ಮೂಲಸ್ಥಾನದಲ್ಲಿ ಮಲ್ಲಿಕಾರ್ಜುನ ದೇವಾಲಯ, ಇದರ ಮುಂದೆ ಭಾವಿ ಇದೆ. ಇಲ್ಲಿಯೇ ಜಕ್ಕಿ ಕಾಳವ್ವೆ ದೇವತೆಗಳಿವೆ. ಇದು ನಾಗಾವಿಯ ಭೌತಿಕ ಅಂಶಗಳ ವಿವರ.

ಕವಿಗೆ ಇಲ್ಲಿಯ ಪ್ರತಿಯೊಂದು ಘಟಕ ಪ್ರತ್ಯಕ್ಷ ಗೊತ್ತಿದೆ. ಆದರೆ ಒಂದೆರಡು ಘಟಕಗಳಿಗೆ ಕಲ್ಪನೆ ಆರೋಪಿಸಿದ್ದಾನೆ. ಅವು: ನಾಗಾವಿ ಹೆಸರು ಅಕ್ಕ ನಾಗಮ್ಮನಿಂದಾಗಿ ಬಂದಿದೆಯೆಂದು ಭಾವಿಸಿದ್ದಾನೆ. ಬಹುಶಃ ನಾಗ+ಭಾವಿ=ನಾಗಾವಿ ಎಂಬುದು ಇದರ ನಿಜವಾದ ಅರ್ಥವಿರಬಹುದು. ಇಲ್ಲಿಯ ನೂರೊಂದು ಕಂಬಗಳ ಶಿವದೇವಾಲಯದಲ್ಲಿ ಅಕ್ಕ ನಾಗಮ್ಮ ಜಂಗಮದಾಸೋಹ ನಡೆಸುತ್ತಿದ್ದ ಕಾರಣ, ಈ ಕಟ್ಟಡಕ್ಕೆ ಛತ್ರಸಾಲೆ (ಅನ್ನಛತ್ರದ ಶಾಲೆ) ಹೆಸರು ಪ್ರಾಪ್ತವಾಯಿತೆಂಬುದೂ ಒಂದು ಕಲ್ಪನೆ. ಇದರ ನಿಜನಾಮ ಛಾತ್ರಶಾಲೆ. ಅಂದರೆ ವಿದ್ಯಾರ್ಥಿಗಳು ಓದುವ ಘಟಿಕಾಸ್ಥಾನ. ಈ ಘಟಿಕಾ ಸ್ಥಾನವನ್ನು ಮಧುಸೂದನ ಹೆಸರಿನ ಅಧಿಕಾರಿ ಕಟ್ಟಿಸಿದನೆಂದು ಅಲ್ಲಿಯ ೧೧೪೯ರ ಶಾಸನ ತಿಳಿಸುತ್ತದೆ.

ತಿಪ್ಪಣಯ್ಯನಿಗೆ ಕನ್ಯೆ ತಂದುದು ಅರಸುಗ್ರಾಮವೆಂದೂ ಬಹುಶಃ ಇದರ ಹೆಸರು ಬಳ್ಳಿವಾಡವೆಂದೂ ಸೂಚಿಸಿದ್ದಾನೆ. ಈ ಬಗ್ಗೆ ಶೋಧ ನಡೆಯಬೇಕು. ಬಸವಣ್ಣನನ್ನು ಆರೂಢಮಾರ್ಗಕ್ಕೆ ತಿರುಗಿಸಿದವನು ಈ ತಿಪ್ಪಣಯ್ಯ. "ಹಳೆಯ ಸಗರದ ಹೊರಗೆ ಮಠ ಕಟ್ಟಿ ಶಿವಭಕ್ತನೊಬ್ಬನು (ದಿಗ್ಗಿ ಸಂಗಮನಾಥ) ಆ ಪ್ರದೇಶವನ್ನು ಅಮರಕಲ್ಯಾಣವನ್ನಾಗಿಸಿ, ಅನುಯಾಯಿಗಳನ್ನು ಭಕ್ತರು-ಬೋಳರೆಂದು ನಿರ್ಧರಿಸಿ, ವರ್ಷಕ್ಕೆ ನಾಲ್ಕು ತಿಥಿ ಸಂದರ್ಭಗಳಲ್ಲಿ ಉತ್ಸವ ಏರ್ಪಡಿಸುತ್ತಲಿದ್ದಾನೆ. ನೀನೂ ಹೀಗೆಯೇ ಮಾಡಬೇಕೆ"ಂದು ಈ ತಿಪ್ಪಣಯ್ಯ ಬಾಲಕ ಬಸವಣ್ಣನಿಗೆ ಬೋಧಿಸುತ್ತಾನೆ. ಈ ಹಳೆಯ ಸಗರವೆಂಬುದು ಇಂದಿನ ಶಹಾಪುರ. ಇದರ

ನೆರೆಯಲ್ಲಿಯೇ ಸಂಗಮನಾಥನ ದಿಗ್ಗಿ ಕ್ಷೇತ್ರವಿದೆ. ಬಸವಣ್ಣನ ಹೆಂಡತಿಯ ಊರು ಗುಂಡಗುರುಕಿ. ಬಸವಣ್ಣ ಶ್ರೀಶೈಲಕ್ಕೆ ಹೋಗಿ ಕದಳಿಯಲ್ಲಿ ತಪಸ್ಸು ಮಾಡಿ ನಾಗಾವಿಗೆ ಮರಳಿದ. ಬಳಿಕ ಊರ ಹೊರಗೆ ಮಠ ಕಟ್ಟಿಸಿ, ಆ ಪ್ರದೇಶಕ್ಕೆ 'ಧರ್ಮಕಲ್ಯಾಣ'ವೆಂದು ಹೆಸರಿಟ್ಟ. ನಾಗಾವಿಯಲ್ಲಿ ಗೋಪೆಮಾಡಿ ತಿಪ್ಪಣಯ್ಯನ ಶವ ಮುಚ್ಚಿ ಕಟ್ಟೆ ಕಟ್ಟಿದರು. ಬಳಿಕ ಬಸವಣ್ಣ ಕೆಲವು ದಿನ ಮೈಲವಾರದಲ್ಲಿ ನೆಲೆನಿಂತನು. ನಾಗಾವಿಯಲ್ಲಿ ತಿಪ್ಪಣಯ್ಯನ ಗವಿಗೆ ಹೊಂದಿ ಈ ಬಸವಣ್ಣನ ಸಮಾಧಿಯಿದೆ. ಎರಡೂ ಸಮಾಧಿಗಳ ಮೇಲೆ ಗಂಗೆ ಮುಖಮಾಡಿ ಶಿವಾಲಯ ನಿರ್ಮಿತವಾಗಿದೆ. ಈ ಪುರಾಣದಲ್ಲಿ ಬರುವ ಈ ವಿವರಗಳು ಹರಿಹರನ ಪಂಪಾಕ್ಷೇತ್ರ ರಗಳೆಯ ವಿವರಗಳಂತೆ ಕಣ್ಣಿಗೆ ಕಟ್ಟುತ್ತವೆ. ಆಸಕ್ತರು ಕ್ಷೇತ್ರಕಾರ್ಯ ನಡೆಸಿ, ಒಂದು ಸಂಪ್ರಬಂಧ ಬರೆಯಬಹುದಾದಷ್ಟು, ನಕ್ಷೆ ಬಿಡಿಸಬಹುದಾದಷ್ಟು ನಿಬಿಡವಾದ ಭೌತಿಕ ಮಾಹಿತಿ ಇಲ್ಲಿದೆ.

ಸಾಂಸ್ಕೃತಿಕ ನಿರೂಪಣೆ:

ಜೀವನವು ಸಂಪ್ರದಾಯ ಮತ್ತು ಘಟನೆಗಳ ಸರಮಾಲೆಯಾಗಿದೆ. ಸಮಾಜ ಸಮ್ಮತ ಸಂಪ್ರದಾಯಗಳೇ ಸಂಸ್ಕೃತಿಯೆನಿಸುತ್ತವೆ. ಇಂಥ ಅನೇಕ ಸಂಸ್ಕೃತಿ(ಸಂಪ್ರದಾಯ)ಗಳ ದೃಷ್ಟಿಯಿಂದ ಈ ಕೃತಿ ತುಂಬ ಮಹತ್ವದ್ದೆಂದೇ ಹೇಳಬೇಕು. ಇಲ್ಲಿಯ ಎರಡು ಮದುವೆ ಸಮಾರಂಭ (ತಿಪ್ಪಣ್ಣಯ್ಯ, ಬಸವಣ್ಣ), ಎರಡು ಸಮಾಧಿಕ್ರಿಯೆ (ತಿಪ್ಪಣಯ್ಯ, ಬಸವಣ್ಣ), ಇವರಿಬ್ಬರ ಧಾರ್ಮಿಕ ಜೀವನ, ಸಾಮಾನ್ಯ ಸಂಸಾರ ಜೀವನಗಳಿಗೆ ಸಂಬಂಧಿಸಿದ ಸಂಪ್ರದಾಯಗಳು ಸಮಕಾಲೀನ ಸಂಸ್ಕೃತಿಕ ಚಿತ್ರವನ್ನು ನೀಡುತ್ತವೆ.

ತಿಪ್ಪಣಯ್ಯನ ಮದುವೆ (೩-೨೧ ರಿಂದ ೮೦) ವಿವರಣೆ ಹೀಗೆ ಬಂದಿದೆ: ಗೌಲಿ, ಪರಡಿ, ಸರಳಿಗೆ, ಸೇವಗೆ, ಅಂಬ (೩-೨೯) ಸಿದ್ಧಪಡಿಸಿದರು. ಹತ್ತೆಂಟು ಕೊಲ್ಲಾರಿ ಬಂಡಿಗಳು, ಉರಗೆಜ್ಜೆ ಚವುರಿ ಕಟ್ಟಿದ ಎತ್ತುಗಳು ನಡೆದವು. ಏಳು ಹಿಟ್ಟು, ಎಂಟು ಹಿಟ್ಟು, ಸೆಟ್ಟಿಯರು, ನ್ಯಾಯಕಾರರು, ಹದಿನೆಂಟು ಕುಲದವರು, ರುದ್ರವಾಣಿಜರು, ಕೈಲಾಸ ವಾಣಿಜರು, ಕವಿಗಮಕಿವಾಗ್ಮಿ, ಮದ್ದಳೆಯವರು ಸಾಗಿದರು (೩೪), ಐರಾಣಿ ಕೊಳಲು ತಪ್ಪಟಿ ಕಹಳೆ ವಾದ್ಯಗಳು ಮೊಳಗುತ್ತಿದ್ದವು (೩೫). ಅಕ್ಕಿ, ಕಣಕ, ಎಣ್ಣೆ, ತುಪ್ಪಗಳ ಸಿದ್ಧಿಕೆ, ಬುದ್ಧಲಿಗಳು, ಹಪ್ಪಳ, ಸಂಡಿಗೆ, ನೆಲ್ಲಿಯಚಟ್ನಿ, ಉಪ್ಪಿನಕಾಯಿ, ಉಪ್ಪು, ಉಳ್ಳೆಯಗಡ್ಡಿ, ಮೆಣಸು, ಹುಣಿಸೆಹಣ್ಣು ಸಹಿತ ಹೊರಟರು (೩೭). ಅಡಿಗಡಿಗೆ ವೀಳ್ಯೆ ನೀಡುತ್ತ, ಎಡ ಬಲಕೆ ಸತ್ತಿಗೆ ಕುದುರೆ ಮಂದಿ ನಡೆದರು (೩೮). ಸೀಗುರಿ, ತಳೆ, ಚೌರಗಳೊಂದಿಗೆ ಕದುರೆ ಏರಿದ ಮದುಮಗನೂ, ಪಳಿ, ಪಟ್ಟಾವಳಿ, ನಾಣ್ಯ, ದೇವಾಂಗಗಳನ್ನುಟ್ಟು, ಆಭರಣ, ಮುತ್ತಿನ ಹಾರಗಳನ್ನು ತೊಟ್ಟು ಯುವತಿಯರೂ ಸಾಗಿದರು. ಅವರು ಕಂಚಕ್ಕಿ ಕಳಸಾರತಿ ಹಿಡಿದುಕೊಂಡು ಹಾಡುತ್ತ ಅಂಬಾರಿಯ ಆನೆಯಂತೆ ನಡೆದರು (೪೧). ಬೀಗರನ್ನು ಎದುರು ಗೊಳ್ಳಲಾಯಿತು. (೬೩). ಬಳಲಿದ ಬೀಗರಿಗೆ ಅಂಬಲಿ, ಉಪ್ಪಿನಕಾಯಿ ಬಡಿಸಿ, ವೀಳ್ಯೆ ನೀಡಿ, ಎಲ್ಲರಿಗೂ ಹೊರಸು ಹಾಸಿಗೆ ವ್ಯವಸ್ಥೆ ಮಾಡಿದರು (೬೬). ಉಂಡುಟ್ಟು ಸುಖವಾಗಿದ್ದ ಗಂಡಿನ ಕಡೆಯವರು ಮರುದಿವಸ ಪಟ್ಟಾವಳಿ ಸೀರೆ, ಕುಪ್ಪಸ, ಆಭರಣ, ಪಟ್ಟಿಗೆ, ಕುಪ್ಪು, ವಾಲೆ, ಹೊನ್ನಸರಿಗೆ, ಅಷ್ಟಧಾರೆ, ಎಣ್ಣೆನೂಲು, ಮುತ್ತಿನ ಚೌಕಳಿ, ಗಿಲಿಬಿಲಿ, ತೆತ್ತಿಸಿದ ಹೊನ್ನಮಣಿ, ಕೈಕಟ್ಟು, ಕಡಗ, ಹೊನ್ನಒತ್ತು, ಕಾಲಕಡಗ, ಕಾಲಂದುಗೆ, ಪಿಲ್ಲೆ, ಬೆಳ್ಳಿಯ ಕಾಲುಂಗುರ,

ವೀರಮುದ್ರೆ, ಗುಬ್ಬಿಮೆಟ್ಟಿಕೆ, ಉಡೆಯಕ್ಕಿ, ಜೀರಿಗೆ, ಮೆಣಸು, ಬೆಲ್ಲದ ಅಚ್ಚು, ಅಡಿಕೆ, ಕೊಬ್ಬರಿ, ಅರಿಷಿಣ, ಚೊಕ್ಕ ಉಪ್ಪು, ಜೋಡು ಕರಿಮಣಿ, ಸರಳಿಗೆ, ಶ್ಯಾವಿಗೆ, ಪರಡಿ, ಗೌಲಿ, ಜಿರಿ ಸಾಲಕ್ಕಿ, ಬೇಳೆ ಇವೆಲ್ಲ ಒಯ್ದರು. ಬಾಸಿಂಗ ತಂದಿರಿಸಿದರು (೭೫). ತಿಪ್ಪಸೆಟ್ಟಿಗೆ ಬಾಸಿಂಗ ಕಟ್ಟಿ, ವೀಳ್ಯವನ್ನು ಕೊಟ್ಟರು. ಕುದುರೆಯಿಂದ ಇಳಿಸಿದರು. ಸೆಟ್ಟಿಗಳೆಲ್ಲ ಸೇರಿ ಅವನನ್ನು ಕರೆದೊಯ್ದುದರು. ಕನ್ನಿಕೆಗೆ ಚೊಕ್ಕ ಆಭರಣ ಇಟ್ಟರು. ಮೂಹೂರ್ತ ಸಮೀಪಿಸಲು ಕನ್ನೆಯನ್ನು ಕರೆತಂದರು. ಹಸೆಯನ್ನು ರಚಿಸಿ ಹಂದರ ವೀಳ್ಯ ಜರುಗಿಸಿದರು. ನಾಗವಾಸವನ್ನು ಸಂತೈಸಿ, ಎರಡು ದಿನ ನಿಂತು, ಉಡುಗೊರೆ ಪಡೆದು ಮರಳಿದರು. ಕನ್ನೆಯನ್ನು ಮನೆತುಂಬಿಸಿಕೊಂಡರು (೮೦).

ಇಲ್ಲಿ ಮದುವೆಯ ಸಡಗರ, ವಿವರಗಳ ಚಿತ್ರಣವಿದ್ದು, ಏಳು ಹಿಟ್ಟು, ಎಂಟು ಹಿಟ್ಟು, ರುದ್ರವಣಿಜ, ಕೈಲಾಸವಣಿಜ ಪದಗಳು ಸಾಂಸ್ಕೃತಿಕವಾಗಿ ತುಂಬ ಮಹತ್ವದವುಗಳೆನಿಸಿವೆ. ಹಿಟ್ಟು ಎಂಬುದು ಹಳ್ಳಿಯ ಆಯಗಾರರ ಪರ್ಯಾಯ ನಾಮ. ಕೈಲಾಸವಣಿಜನೆಂಬುದು ಕೈಲಾಸಧ್ವಜದ (ಗುಡ್ಡಧ್ವಜದ) ವ್ಯಾಪಾರಿಗಳನ್ನೂ, ರುದ್ರವಣಿಜನೆಂಬುದು ವೀರಬಣಂಜು (ವ್ಯಾಪಾರಿಗಳ ಸೈನ್ಯ) ಸಂಸ್ಥೆಯನ್ನೂ ಸೂಚಿಸುವಂತಿದೆ.

ಬಸವಣ್ಣನಿಗೆ ಗುಂಡಗುರುಕಿ ಗ್ರಾಮದ ಶಂಕರಶೆಟ್ಟಿ ಲಕ್ಕಾಯಿ ಅವರ ಮಗಳನ್ನು (ಜಕ್ಕಾಂಬೆಯನ್ನು) ವಧುವೆಂದು ನಿಶ್ಚಯ ಮಾಡಿದರು (೪-೨೬). ಕನ್ಯೆಗೆ "ತೊಡಿಸಿ ಕುಪ್ಪಸವ" (೨೮), ಮರಳಿ ನಾಗಾವಿಗೆ ಬಂದು, ವಿವಾಹದ ವ್ಯವಸ್ಥೆ ಆರಂಭಿಸಿದರು. ಅಡಿಗಡಿಗೆ ಕೋರೂಟ, ಮದುವಣಿಗಗೆ ಗಡಿಗೆ ನೀರೆರೆಯುವುದು ಜರುಗಿದವು (೩೨). ತಾಯಿ ಮಕ್ಕಳು ಮೀಯುವುದಕ್ಕಾಗಿ ಕಳಸಗಳನ್ನಿಟ್ಟು ನೂಲು ಸುತ್ತಿದರು. ಮದುವಣಿಗ ಮಿಂದು ಬಂದ ಬಳಿಕ, ಅವನಿಗಾಗಿ ಎಣ್ಣೆ ಹೋಳಿಗೆ, ಪಾಯಸದ 'ಅನ್ನವತ್ತಿಗೆ' ತುಂಬಿದರು (೩೯), ನಿಬ್ಬಣ ಹೊರಟಿತು (೪೬). ಮದುವೆ ಮುಗಿದು ಮನೆ ತುಂಬಿಸಿದರು (೫೧). ಹಳ್ಳಿಯಲ್ಲಿ ಈಗಲೂ ಜರುಗುತ್ತಲಿರುವ ಇಲ್ಲಿಯ ಮದುವೆಯ ವಿವರಗಳು ತುಂಬ ಅಪೂರ್ವವೆನಿಸಿವೆ.

ಇಂಥವೇ ಎರಡು ಸಮಾಧಿಕ್ರಿಯೆಗಳು ಇಲ್ಲಿ ವರ್ಣಿತವಾಗಿವೆ. ತಿಪ್ಪಣ್ಣಯ್ಯ ನಿಧನ ಹೊಂದಲು ಗೊಪೆ (ಗವಿ) ಕಟ್ಟಿಸಿ, ಶವ ಸಂಸ್ಕಾರ ಮಾಡಿ ಮೇಲೆ ಕಟ್ಟೆ ಕಟ್ಟಿದರು (೬-೧೦೭). ಗುಂಡ ಬಸವಣ್ಣನ ನಿಧನ ಪ್ರಸಂಗ ೭ನೆಯ ಸಂಧಿಯ ೧೪ರಿಂದ ೮೫ನೆಯ ಪದ್ಯದ ವರೆಗೆ ವ್ಯಾಪಿಸಿದೆ. ಈಗ ಭಕ್ತರು ಬೋಳೆಯರನ್ನು, ಹೆಂಡಿರು ಮಕ್ಕಳನ್ನು ಕರೆದು ಗುಂಡಬಸವಣ್ಣ ಮಾಡುವ ಉಪದೇಶ ಮನನೀಯವೆನಿಸಿದೆ. ಉಪ್ಪಾರನನ್ನು ಕರೆಯಿಸಿ ತಿಪ್ಪಣ್ಣಯ್ಯನ ಗವಿಯ ಹತ್ತಿರ ತನಗೂ ಗವಿ ರಚಿಸಲು ಹೇಳಿದ. ಕರಿಮಣಿಯ ಓಲೆ, ತೋಡೆ, ಬಿಚ್ಚಬೇಡಿರೆಂದು ಮಡದಿಯರಿಗೆ ತಿಳಿಸಿದ. ಹಿರಿಯ ಹೆಂಡತಿಗೆ ನೀರು ಬಿಡಲು ಹೇಳಿದ. ಶವವನ್ನು ಕುಳ್ಳಿರಿಸಿದ್ದರು. ವಾಲಗ ಮಾಡುತ್ತಲಿದ್ದರು. ಏಳು ನೆಲೆಯ ಪುಷ್ಪಕ ವಿಮಾನ ರಚಿಸಿದರು. ಫಲಪೂಜೆಯಿಂದ ಶೃಂಗರಿಸಿದರು. ವೀಳ್ಯದ ಎಲೆ, ಹೂವು, ಬುಕ್ಕಿಟ್ಟು ಚೆಲ್ಲುತ್ತ ಶವಯಾತ್ರೆ ನಡೆಯಿತು. ಒಲೆ ಹೊತ್ತಿಕ್ಕದೆ ಜನರೆಲ್ಲ ದುಃಖಿಸುತ್ತಿದ್ದರು. ಎಂಟೂ ದಿಕ್ಕಿನ ಜನ ನೆರೆಯಿತು. ಪಟ್ಟೋಳಿ, ಕುಲಾಯಿ, ಕಪ್ಪಡ, ಕಂಬಳಿ, ರುದ್ರಾಕ್ಷಿ, ಹಸ್ತಡ್ಡಿಕೆ, ಕರದಲ್ಲಿ ಇಷ್ಟಲಿಂಗದೊಂದಿಗೆ ಶವಸಂಸ್ಕಾರ ಮಾಡಲಾಯಿತು. ಮಾರನೆಯ ದಿನ ಗವಿ ತೆಗೆದು ನೋಡಿದರು. ಶವ ಹಾಗೆಯೇ ಇದ್ದಿತು. ಧೂಪದ ಹೊಗೆ

ಆವರಿಸಿದ್ದಿತು. ಎಲ್ಲರೂ ಆರತಿ ಬೆಳಗಿ ನಮಸ್ಕರಿಸಿದರು (೭-೮೨). ಬಳಿಕ ಕಟ್ಟೆ ಕಟ್ಟಿಸಿದರು. ಮೇಲೆ ಜೋಡು ಶಿಖರದ ದೇವಾಲಯ ನಿರ್ಮಿಸಿದರು. ಈ ಗದ್ದುಗೆಗೆ ಹಗಲಿರುಳು ನಂದಾದೀವಿಗೆ, ಅಷ್ಟವಿಧಾರ್ಚನೆ, ಪಂಚಮಹಾವಾದ್ಯ ಹೀಗೆ ಪೂಜೆ ಜರುಗುತ್ತಲಿದೆ (೭-೮೫).

ಸಾಮಾನ್ಯ ಗೋರಿಗಿಂತ ಭಿನ್ನವಾದ ಗವಿ ಸಂಪ್ರದಾಯ ಇಲ್ಲಿ ಪ್ರತಿಪಾದಿತವಾದಂತಿದೆ. ದಿಗ್ಗಿ ಸಂಗಮನಾಥನದೂ ಇಂಥದೇ ಗವಿಯಿದ್ದ ಬಗ್ಗೆ ನಂದಿ ಆಗಮ ಸೂಚನೆ ನೀಡುತ್ತದೆ. ಸಿದ್ಧರಾಮನು ಜೀವಂತ ಗವಿಪ್ರವೇಶ ಮಾಡಿದ ವಿಷಯ ಪ್ರಸಿದ್ಧವಾದುದು. ನಂದಿ ಆಗಮ ಲೀಲೆಯ ಪ್ರಕಾರ ಬಸವಣ್ಣನು ಕೂಡಲ ಸಂಗಮದಲ್ಲಿ ಗವಿ ಪ್ರವೇಶಿಸುತ್ತಾನೆ. ಕಲ್ಯಾಣದಲ್ಲಿ ಗವಿಗಳೇ ವಿಶೇಷವಾಗಿರುವುದನ್ನೂ, ಇಂಗಳೇಶ್ವರದಲ್ಲಿ ರೇವಣಸಿದ್ಧ ಅಕ್ಕನಾಗಮ್ಮರ ಗವಿಗಳಿರುವುದನ್ನೂ ಇಲ್ಲಿ ನೆನೆಯಬಹುದು.

ಮದುವೆಯಾದ ಬಳಿಕ ಬಸವಣ್ಣ ವ್ಯಾಪಾರಕ್ಕೆ ಹೋಗುವ ದೃಶ್ಯ ಹೀಗಿದೆ:

ಹಸುಬೆಯ ಬಣಗಿಸಿಯೆನೆಂದು ಎನುತಲಿ। ಬಸವಣ್ಣ ತಾ ಕೈಕೊಂಡು।
ವಸುಧೆಯೊಳಗೆ ಉಳ್ಳ ಎಪ್ಪತ್ತೆರಡು ಕೇಣಿ । ಹಸುಬೆಯನಾಗ ತುಂಬಿದನು॥(೪-೫೫)

ಹೀಗೆ ವ್ಯಾಪಾರಕ್ಕೆ ಹೋದ ಸಂದರ್ಭದಲ್ಲಿ ಬೆನ್ನಟ್ಟಿದ ಕಳ್ಳರಿಂದ ಬಸವಣ್ಣ ಪಾರಾಗುತ್ತಾನೆ. ವ್ಯಾಪಾರದಲ್ಲಿ ಮೋಸಕ್ಕೆ ಅವಕಾಶವಿದೆಯೆಂದು ಬೇಸರಪಟ್ಟರೂ ವ್ಯಾಪಾರ ಮಾಡುತ್ತ ಶ್ರೀಶೈಲಕ್ಕೆ ಹೋಗುತ್ತಾನೆ (೫-೯೨ ಮತ್ತು ೯೩).

"ಬೆಲ್ಲ ಕೊಬ್ಬರಿ ತಿಂದು ಸೊಕ್ಕಿದ ಬಣಜಿಗ। ನಿಲ್ಲದೆ ಕುಣಿದಾಡುತಹನೆ" (೫-೩೭)

"ಸೊಕ್ಕಿದ ಬಣಜಿಗ ಹಕ್ಕ್ಯಾಗಿರದೆ ತಾ। ಹೊಕ್ಕನೇತಕೆ ಇಲ್ಲಿ ಎನುತ" (೫-೫೧)

ಎಂದು ದೂಷಕರು ಜಾತಿಯೆತ್ತ ಬಯ್ಯುವುದನ್ನು ಇಲ್ಲಿ ಗಮನಿಸಬಹುದು. ವಯಸ್ಸಿಗೆ ಬಂದ ಬಸವಣ್ಣನ ನಿಲುವು ಹೀಗಿದ್ದಿತು:

ತಡಪು ನಡುಕಟ್ಟು ಕಸಿಯಂಗಿ ನಿಟ್ಟಲ್ಲಿ। ಕಡು ಸೊಬಗಾಗಿ ತಾನಿಹನು

ಎಡದೆರಹಿಲ್ಲದೆ ಪಸರವ ಮಾಡುತಿಹನು ತಾ। ಬಡಬಣಜಿಗರಳವಲ್ಲ (೫-೨೧)

ತಿಪ್ಪಸೆಟ್ಟಿಯ ಮದುವೆಗೆ ಏಳುಹಿಟ್ಟು, ಎಂಟು ಹಿಟ್ಟು (ಹಿಟ್ಟು=ಆಯಗಾರರು) ಮೊದಲಾದವರಲ್ಲದೆ ರುದ್ರವರೇಣ್ಯವರು (ರುದ್ರವಣಿಜರು), ಕೈಲಾಸವರೇಣ್ಯರು (ಕೈಲಾಸವಣಿಜಿಗರು) ಹೋದ ವಿಷಯ ಇಲ್ಲಿದೆ. ಇವರಲ್ಲಿ ಮೊದಲಿನವರು ವೀರಬಣಜಿಗರೆಂಬ ಸೈನ್ಯದವರಾಗಿರಬಹುದು. ಹೀಗೆ ಬಣಜಿಗ ಸಮಾಜದ ದೃಶ್ಯವನ್ನು ಇಲ್ಲಿ ಕಾಣಬಹುದಾಗಿದೆ. ಈ ಹಿನ್ನೆಲೆಯ ಬಸವಣ್ಣನಿಗೆ ತಿಪ್ಪಣಯ್ಯನು ಹೇಳುವ

ವಸುಧೆಗೆ ಪಸರವನಿಕ್ಕಬೇಕಯ್ಯ ನೀ। ಹುಸಿಯ ಪಸರವದೇನೆಂಬ।
ಬಸವಣ್ಣ ನೀನು ನಿನ್ನಯ ಹೆಸರಿಗೆ ತಕ್ಕ। ಪಸರವಲ್ಲವಿದೆಂಬ॥ (೪-೨೩)

ಈ ಮಾತು ಅವನು ಲೌಕಿಕ ವ್ಯಾಪಾರ ಬಿಟ್ಟು ಧಾರ್ಮಿಕ ವ್ಯಾಪಾರಕ್ಕೆ ಹೊರಳಬೇಕೆಂಬುದನ್ನು ತಿಳಿಸುತ್ತದೆ.

ಧಾರ್ಮಿಕ ಧೋರಣೆ :

ಗುಂಡ ಬಸವಚರಿತ್ರೆ ಮೂಲತಃ ಧಾರ್ಮಿಕ ಕೃತಿ. ಗುಂಡ ಬಸವಣ್ಣ ಮೊದಲಾದವರು ಲಿಂಗಾಯತರಾಗಿದ್ದರೂ ಒಂದಿಷ್ಟು ಅಲಿಂಗಾಯತರಾಗಿರುವ ಕಾರಣ, ಇಲ್ಲಿಯದು ವಿಶಿಷ್ಟ ಆರೂಢಸಂಪ್ರದಾಯವಾಗಿದ್ದು, ಇದರ ಧಾರ್ಮಿಕ ಧೋರಣೆ ವಿಶಿಷ್ಟವೆನಿಸುವದು ಸಹಜ. ಅವುಗಳನ್ನು ೧. ತಾಮಸಗುಣ ನಿರಸನ, ೨. ಪೂರ್ವಾಶ್ರಯ ನಿರಸನ, ೩. ಜಾತಿಭೇದ ನಿರಾಕರಣೆ, ೪. ಇಷ್ಟಲಿಂಗ ವಿಸರ್ಜನ-ಪ್ರಾಣಲಿಂಗಾನುಷ್ಠಾನ, ೫. ಧಾರ್ಮಿಕ ಆಚರಣೆ,೬. ಧಾರ್ಮಿಕ ಕೇಂದ್ರ ,೭. ಡಂಗುರ ಸಾರುವುದು, ೮. ಭಕ್ತರು ಬೋಳರೆಂಬ ಅನುಯಾಯಿವರ್ಗ- ಎಂದು ಮುಂತಾಗಿ ಬಿಡಿಸಿ ಅಭ್ಯಸಿಸಬಹುದು.

೧. ತಾಮಸಗುಣ ನಿರಸನ ಎಲ್ಲ ಧರ್ಮಗಳೂ ಎತ್ತಿ ಹೇಳುವ ಅಂಶವಾಗಿದ್ದು, ಇಲ್ಲಿಯೂ ತಿಪ್ಪಣಯ್ಯ, ಬಸವಣ್ಣನವರ ಸಂದರ್ಭದಲ್ಲಿ ಅದು ಮತ್ತೆ ಮತ್ತೆ ಪ್ರಸ್ತಾಪವಾಗಿದೆ. "ಸತಿಸುತ ಕೋಟಲೆ ಅತಿಶಯವೆಲ್ಲವು ಹಿತವಾಗದೆಮಗ" (೩-೩೦), "ಹದುಳ ಹೋಗದು ಹೆಣ್ಣು ಹೊನ್ನು ಮಣ್ಣಿನ ಭ್ರಮೆ" (೮೧), "ಸಿರಿ ಸ್ಥಿರವಲ್ಲ, ನಾರಿಯರು ಸ್ಥಿರವಲ್ಲ, ಶರೀರ ಪ್ರಾಣವ ಹರಗೊಪ್ಪಿಸುವೆ" (೮೨), ಪರಸತಿ ಪರಧನಕೊಳಗಾಗದಿರಿ (೬-೨೧) ಇತ್ಯಾದಿಗಳು ತಾಮಸಗುಣ ನಿರಸನಕ್ಕೆ ಸಾಕ್ಷಿಯಾಗಿವೆ.

೨. ಪೂರ್ವಾಶ್ರಯ ನಿರಸನವನ್ನು ಕುರಿತು ಹೇಳುವುದಾದರೆ ತಿಪ್ಪಣಯ್ಯ "ಎಲ್ಲಿಯ ತಾಯಿ ಎಲ್ಲಿಯ ತಂದೆ ಮತ್ತೆಲ್ಲಿಯ ಪುತ್ರನು ನಾನು" (೯೦) ಎಂದು ನುಡಿದುದಲ್ಲದೆ, ಈತನು ಹೆಂಡತಿ (ಲಖಮಾಯಿ, ೩-೧೧೦)ಯನ್ನು ಬಿಟ್ಟು ಹೋಗುತ್ತಾನೆ. ಆದರೆ ಬಸವಣ್ಣ ೫ನೆಯ ಸಂಧಿಯ ತುಂಬ ತಂದೆ ತಾಯಿಗಳಿಗೆ "ಪುತ್ರ ನಾ ನಿಮಗಲ್ಲ" (೫-೧೦೨) ಎಂದು ವಾದಮಾಡುವನಾದರೂ ಈತನದು ನಿವೃತ್ತಿ ಜೀವನವಲ್ಲ, ಪ್ರವೃತ್ತಿ ಜೀವನ. 'ಸತಿ ಪತಿ ಒಂದಾಗಿ ವ್ರತಿಗಳಾದರು ತಾವು ಪ್ರೀತಿಯಿಂದಲಿ ಸಂತೋಷದಲಿ' (೫-೪) ಎಂಬಂಥ ಮಾತುಗಳು ಇದಕ್ಕೆ ನಿದರ್ಶನವೆನಿಸಿವೆ. ಇಷ್ಟೇ ಏಕೆ ಇವನಿಗೆ ಏಳು ಜನ ಸತಿಯರೂ ೫ ಜನ ಪುತ್ರರೂ ಇದ್ದಾರೆ.

೩. ಜಾತಿಭೇದ ನಿರಾಕರಣೆ ಈ ಸಂಪ್ರದಾಯದ ಮುಖ್ಯಲಕ್ಷಣ. ಮನೆ ಬಿಟ್ಟು ಹೊರಬಂದ ತಿಪ್ಪಣ್ಣಯ್ಯ "ಮನಕೆ ಬಂದವರ ಮನೆಗೆ ಹೋಗಿ" (೩-೧೨೬) ಊಟ ಮಾಡುತ್ತಿದ್ದನು. ಬಸವಣ್ಣನಂತೂ ಊಟದ ವಿಷಯದಲ್ಲಿ "ಜೇಡ ಸಿಂಪಿಗರೆಂದು ನೋಡ ತಾ ಕುಲಗಳ" (೫-೬೯) ನೆಂದೂ, "ಭಕ್ತರಾದರೆ ಸಾಕು ಮತ್ತೇಕೆ ಕುಲವೆಂದು ವ್ಯರ್ಥಮಾಡದಿರಿ ಈ ಮಾತ। ಕರ್ತನರ್ಚನೆಯ ಮಾಡುವರಿಗೆ ಕುಲವೊಂದೆ" ಎಂದು ಅವನು ತಂದೆ ತಾಯಿಗಳಿಗೆ ಹೇಳಿದುದು ಈ ಕೃತಿಯಲ್ಲಿದೆ. "ದೇವನ ಒಲಿಸಿದವರು ಕುಲಜರು ಮಿಕ್ಕ ಜೀವರಿಗೆ ಕುಲವಿಲ್ಲ" (೫-೯೮) ಎಂದು ಬಸವಣ್ಣ ಆಡಿದ ಮಾತು, ಕುಲಭೇದ ನಿರಾಕರಣೆಗೆ ಉದಾಹರಣೆಯೆನಿಸಿದೆ.

೪. ಇಷ್ಟಲಿಂಗ ವಿಸರ್ಜನೆ-ಪ್ರಾಣಲಿಂಗಾನುಷ್ಠಾನ ಆಹ್ವಾನ ಈ ಪಂಥದ ಎತ್ತಿ ಹೇಳಬೇಕಾದ ಲಕ್ಷಣವಾಗಿದೆ. ಎಲ್ಲ ಧರ್ಮಗಳಂತೆ ಪ್ರಾಣಲಿಂಗವು ಸಿದ್ದ(ನಾಥ)ಪಂಥದ

ಲಕ್ಷಣವಾಗಿದೆ. ಆದರೆ ಸಾಮಾನ್ಯರಿಗೆ ಅವಶ್ಯವಿರುವ ಮೊದಲ ಮೆಟ್ಟಿಲೆಂಬಂತೆ ಕಲ್ಯಾಣ ಬಸವಣ್ಣ ಈ ಪ್ರಾಣಲಿಂಗಕ್ಕೆ ಮೊದಲು, ಇಷ್ಟಲಿಂಗ ಕಲ್ಪನೆಯನ್ನು ಜೋಡಿಸಿದನು. ಆದರೆ ೧೫ನೆಯ ಶತಮಾನದ ಹೊತ್ತಿಗೆ ಕಲ್ಯಾಣ ಬಸವಣ್ಣನನ್ನು ಒಪ್ಪಿಕೊಂಡೂ ಇಷ್ಟಲಿಂಗ ನಿರಾಕರಣೆ, ಪ್ರಾಣಲಿಂಗ ಆಹ್ವಾನ ರೂಪದ ಆರೂಢ ಹೊಸ ಸಂಪ್ರದಾಯ ಇಲ್ಲಿ ಆಕಾರ ಪಡೆಯಿತು. ಈ "ಪ್ರಾಣಲಿಂಗಸ್ಥಲವ ತಂದ"ವನು ದಿಗ್ಗಿ ಸಂಗಮನಾಥನೆಂದು ನಂದಿ ಆಗಮಲೀಲೆ(೧೪-೧೯) ತಿಳಿಸುತ್ತದೆ. ಇದನ್ನೇ ಈ ಕಾವ್ಯದ ತಿಪ್ಪಣಯ್ಯ, ಗುಂಡ ಬಸವಣ್ಣ ಮುಂದುವರಿಸಿದ್ದಾರೆ. ತಿಪ್ಪಣಯ್ಯನು

ಇಟ್ಟುಕೊಳ್ಳನು ವಿಭೂತಿಯನೆಂದು ತೊಡೆಗ। ಬಟ್ಟೆಯೊಳಗೆ ಹೊಸತಿರಲು।
ದೃಷ್ಟಿಲಿ ದಾಳಿವಾಸವ ಕಂಡರೆ ತಾನು। ಇಟ್ಟುಕೊಂಬನು ಬಟ್ಟಿನನಿತ॥ (೩-೧೩೪)

ಲಿಂಗಪೂಜೆಯ ಕರಸ್ಥಲವ್ಹಿಡಿದು ಬಾಹಿ। ರಂಗವಾಗೆಂದು ತಾ ಮಾಡ।
ಹಿಂಗದಿಹನಂತರಂಗದ ಪೂಜೆಯನೆ। ಲಿಂಗಧ್ಯಾನದಲಿ ತಾನಿಹನು॥ (೩-೧೩೪)

ಈ ರೀತಿ ಬಾಳುತ್ತಿದ್ದನು. ಗುಂಡ ಬಸವಣ್ಣನ ವಿಷಯದಲ್ಲಿ ಇಷ್ಟಲಿಂಗ-ಪ್ರಾಣಲಿಂಗ ಪ್ರಶ್ನೆ ವಿವರವಾಗಿಯೇ ಬರುತ್ತದೆ. ಈತನು 'ಅಂತರಂಗದ ಪೂಜೆ ಬಹಿರಂಗದ ಪೂಜೆ ಇಂತು ಪರಿಯಲಿ ಮಾಡುತಿಹ" (೮-೫೮) ಎನ್ನುತ್ತ, ಬಹಿರಂಗದ "ಇಷ್ಟಲಿಂಗ" ಪೂಜೆ (೬-೩೮ ಮತ್ತು ೪೦-೩೨)ಯನ್ನು ೩೨ನೆಯ ಪದ್ಯದಿಂದ ೪೨ರ ವರೆಗೆ ವಿವರಿಸಲಾಗಿದೆ. ೪೪ರಿಂದ ಮುಂದೆ ಪ್ರಾಣಲಿಂಗಪೂಜೆಯನ್ನು ಕುರಿತ ವಿವರಗಳನ್ನು ನೀಡಿ, ಕೊನೆಯಲ್ಲಿ

ಅಂಗಸೋಂಕಿದ ಸೋಂಕ ಲಿಂಗಕರ್ಪಿತ ಮಾಡಿ। ಲಿಂಗಮುಖದಿ ಕೊಳುತಿಹನು।
ಸಂಗವಾಗಿಹ ಲಿಂಗದೊಳಗೆ ಆವಾಗ ಸ। ರ್ವಾಂಗವೆಲ್ಲವು ಲಿಂಗವಹುದು॥ (೬-೫೭)

ಎಂದು ಹೇಳಿದುದು ಮುಖ್ಯವೆನಿಸಿದೆ.

ಗುರುಲಿಂಗಜಂಗಮ ಪ್ರೇಮಿಯೆಂಬುದು ಸಹಜ। ಗುರುರೂಪು ನಿಮ್ಮನುಭಾವ।
ಸರ್ವಾಂಗವೇ ಲಿಂಗ ಪ್ರಾಣನೆಂಬುದು ತಾನು। ಪರಮಜಂಗಮ ಮೂರ್ತಿ ಅಹುದು॥ (೬-೯೩)

ಎಂದುದು ಗಮನಾರ್ಹವಾಗಿದೆ. ಇಷ್ಟೆಲ್ಲ ಹೇಳಿಯೂ ಅಂತ್ಯಕಾಲದಲ್ಲಿ ಇಷ್ಟಲಿಂಗವನ್ನು ತೆಗೆದು ಬಿಡುವ ಒಂದು ಪ್ರಸಂಗವನ್ನು ೭ನೆಯ ಸಂಧಿಯಲ್ಲಿ ನೇರವಾಗಿಯೇ ಚಿತ್ರಿಸಲಾಗಿದೆ.

ಸಂಗಮೇಶ್ವರನ ನಿರೂಪವಾಯಿತು ಇಷ್ಟ। ಲಿಂಗಪೂಜೆಯ ಬಿಡುಯೆನುತ।
ಲಿಂಗವನೊಡವೆರೆವಾಗ ಲಿಂಗಪೂಜೆಗೆ ಮುಂದೆ। ಅಂಗವಿಸಲಿಬೇಡವೆನುತ॥ (೭-೪)

ಈ ಪರಿ ಲಿಂಗಪೂಜೆಯ ಬೇಡವೆನುತ ನಿ। ರೂಪವಾಯಿತು ಮೂರು ಸಾರೆ।
ತಾ ಪೂಜೆ ಬಿಡಲಾರೆ[ಯದ]ಕೆ ಹೊರಗೆ ತರ್ಕ। ವಾಪನಕ[ವು] ನಿಲ್ಲೆನೆಂದ॥

ಇಷ್ಟಲಿಂಗ ಕಳಚಲು ದೇವರಿಂದ ೩ ಸಲ ಆಜ್ಞೆಯಾಯಿತು. ಆದರೆ ಬಾಹ್ಯದ ಘಟನೆಯೊಂದು ಈ ಬಗ್ಗೆ ಜರುಗಲಿ ಎಂದು ಸಮಾಧಾನಪಟ್ಟುಕೊಂಡನು. ಆ ಮೇರೆಗೆ "ಕರಡಿವಾದ್ಯ ಗೌರವವು ಜಂಗಮನಿಗೆ ಮಾತ್ರ, ನೀನು ಜಂಗಮನಲ್ಲವಾಗಿ ಇಷ್ಟಲಿಂಗ ಪೂಜಾಪ್ರಸಂಗದಲ್ಲಿ ಅದನ್ನು ಬಳಸಬಾರದು" ಎಂಬ ಸಾರ್ವಜನಿಕ ವಾದ ನಿರ್ಮಾಣವಾಯಿತು. ಈತ ಕರಡಿ ವಾದ್ಯ ನುಡಿಸುವ

ತನಕ ಇಷ್ಟಲಿಂಗಪೂಜೆ ಮಾಡೆನೆಂದು ಹಟ ಹಿಡಿದು, ಕೇವಲ "ಪ್ರಾಣಲಿಂಗಪೂಜೆ ಮಾಡುತಿಹನು" (೭-೧೦). ಹೀಗಿದ್ದೂ ಸಮಾಧಿ ಮಾಡುವ ಪ್ರಸಂಗದಲ್ಲಿ "ಮಾಡುಯೆಂದರೆ ಮಾಡಿ ಲಿಂಗಪೂಜೆಯ ಮುಂದೆ ಬೇಡವೆಂದರೆ ನಿಲ್ಲಿ[ಸೆಂ]ದ" (೭-೪) ಎಂಬ ಹೇಳಿಕೆಯೂ ಇದೆ. ಇದಲ್ಲದೆ

ಲಿಂಗದೊಳಗೆ ಆಪಾಗಲಿ ಕೇಳಿದರು ಮತ್ತೆ। ಲಿಂಗಪೂಜೆಗೆ ಎಂತು ಎನುತ।
ಲಿಂಗದೊಳಗೇಕ ಚಿತ್ತದಲಾಗಗೊಡಿರೆಂದು। ಹಿಂಗದೆ ಎದ್ದ ಕೋಪದಲಿ ॥ (೭-೬೪)

ಇನ್ನು ಪೂಜೆಯ ಮಾಡಿದರೆ ಕರ್ತರು ಬಂದು। ಚಿನ್ನ ಕಡಿಕಡಿಯ ಮಾಡಿಯರು।
ತನ್ನಿ ಅಂಜಿದರೆ ತನ್ನ ಕೈಯಲೆನುತ ಪ್ರ। ಸನ್ನ ಮೂರುತಿ ತಾನಾಡಿದನು॥ (೭-೬೫)

ಎಂಬ ಅಸ್ಪಷ್ಟ ಮಾತುಗಳೂ ಇವೆ. ಇಷ್ಟಾಗಿಯೂ ಸಮಾಧಿ ಸಂದರ್ಭದಲ್ಲಿ "ಇಷ್ಟಲಿಂಗವ ಕರದೊಳಗೆ ಇಳುಹಿ" (೭-೭೯) ಎಂಬ ಮಾತೂ ಬರುತ್ತದೆ. ಹೀಗೆ ಈ ಪಂಥದಲ್ಲಿ ಇಷ್ಟಲಿಂಗದ ಬಗ್ಗೆ ಒಂದಿಷ್ಟು ಉಪೇಕ್ಷೆಯೇ ಇರುವಂತೆ ತೋರುತ್ತದೆ.

ಷಡುಚಕ್ರವನು ಏರಿಸಿಹ ಬ್ರಹ್ಮರಂಧ್ರಕೆ। ತಡೆಯದೆ ಭುಜಗ ಹೊತ್ತಿರ್ದ।
ಕೊಡನ ಕೆಡಹಿ ಅಮೃತಗಳನುಣುತಲಿಹ। ಒಡನಾಡುತಿಹ ಪರಮನೊಳು॥ (೪-೮೮)

ಎಂದು ಯೋಗವನ್ನು ಎತ್ತಿಹಿಡಿಯಲಾಗಿದೆ.

೫. ಧಾರ್ಮಿಕ ಆಚರಣೆಗಳು : ಯಾವುದೆ ಧರ್ಮದ ಅನಿವಾರ್ಯಭಾಗ. ಇಲ್ಲಿ ಅಂಥ ಕೆಲವು ಆಚರಣೆಗಳು ಎದ್ದು ಕಾಣುತ್ತವೆ. ಮಠ ನಿರ್ಮಾಣ ಈ ಸಂಪ್ರದಾಯದ ಭಾಗವಾಗಿದ್ದಿತು. ಹಳೆಯ ಸಗರದ ಹೊರಗೆ (ದಿಗ್ಗಿಯಲ್ಲಿ) ಸಂಗಮನಾಥನು ಮಠ ಕಟ್ಟಿದ ಉಲ್ಲೇಖ ಎರಡು ಕಡೆ ಬಂದಿದೆ (೨-೧೦೯, ೪-೧೫). ಇದಕ್ಕೆ 'ಅಮರಕಲ್ಯಾಣ' ವೆಂದು ಕರೆಯುತ್ತಿದ್ದರು. ಮುಂದೆ ಗುಂಡಬಸವಣ್ಣ ನಾಗಾವಿಯ ಹೊರಗೆ ಮಠ ಕಟ್ಟಿಸಿದ, ಅದಕ್ಕೆ 'ಧರ್ಮಕಲ್ಯಾಣ'ವೆಂದು ಹೆಸರಿಟ್ಟ ವಿಷಯವೂ ಇಲ್ಲಿದೆ (೬-೨). ಸಂಗಮನಾಥನಂತೆ ಇವನೂ ಉತ್ಸವದ ನಾಲ್ಕು ತಿಥಿ (ಷಷ್ಠಿ, ಶಿವರಾತ್ರಿ, ದವನದ ಹುಣ್ಣಿಮೆ, ನೂಲಹುಣ್ಣಿಮೆ) ನಿರ್ಣಯಿಸಿದ ಪ್ರಸ್ತಾಪ ಇಲ್ಲಿದೆ (೫-೧೬, ೭-೨೬).

ಬಸವಣ್ಣ ದಿನಕ್ಕೆ ೧೭ ಸಲ ಪೂಜೆ ಮಾಡುತ್ತಿದ್ದನು. ಇವುಗಳಲ್ಲಿ ಅವಸರ ಪೂಜೆ ೧೦, ಈ ಹತ್ತರಲ್ಲಿ ಸೂರ್ಯೋದಯ ಮೊದಲು ಆರು, ಸೂರ್ಯೋದಯಕ್ಕೆ ನಾಲ್ಕು ಪೂಜೆ ಜರುಗುತ್ತಿದ್ದವು (೬-೩೨). ಇಲ್ಲಿ ಬಾಹ್ಯಪೂಜೆಯ ಸುದೀರ್ಘವರ್ಣನೆಯಿದೆ (೬-೩೨ ರಿಂದ ೪೨). ಈ ವರ್ಣನೆಯಲ್ಲಿ ಮಜ್ಜನಕ್ಕಾಗಿ ಪನ್ನೀರು, ಗಂಧಕ್ಕಾಗಿ ಅಗರು ಗಂಧ ಬುಕ್ಕಿಟ್ಟು, ಗಹುಲಿಕ, ಚೌರ, ಬಗೆಬಗೆಯ ಪರಿಮಳದ ಪನ್ನೀರು ಬಳಸುತ್ತಿದ್ದನು. ಮುಕ್ಕಾಗದ ಅಕ್ಷತೆ, ಇರವಂತಿಗೆ, ಸಂಪಿಗೆ, ಸೇವಂತಿಗೆ, ಮೊಲ್ಲೆ, ಮಲ್ಲಿಗೆ, ನಂದ್ಯಾಳ, ದಾಸ್ಯಾಳ, ಕರಬಾಳ, ಕಣಗಿಲು, ಕಮಲ, ಕೇದಗೆ, ಕಂಚಾಳ, ಪಡ್ಡಳೆ, ಗೊಗ್ಗಿ, ಬೆಲ್ಲಪತ್ತರಿ, ಮರುಗ, ಮಂಚಪತ್ತರಿ, ದವನ, ಬೊಬ್ಬಿರಿ, ಪಚ್ಚೆ ಈ ಹೂವುಗಳನ್ನು ಬಳಸುತ್ತಿದ್ದನು.

ದಶಾಂಗ, ಲೋಬಾನ, ಸಜ್ಜಿರಸ, ಗುಗ್ಗುಳ, ಧೂಪ ಪರಿಮಳ ನೀಡುತ್ತಿದ್ದನು. ಕಡ್ಡಿಬತ್ತಿ, ಕಲಿಯಾರತಿ, ಏಕಾರತಿ, ನಾಗಾರತಿ, ಪಂಚಾರತಿ, ಸಪ್ತಾರತಿ, ಸೂಜ್ಞಣಮಂತ – ಚೌಡಿ

ಸೂರಿಯಾರತಿ, ಕಲಿಗಣಯಾರತಿ, ಚಂಗಳಾರತಿ, ಪುರುಷಾಮೃಗ – ಮೈಲಾರ ದೇವಾರತಿ, ಭದ್ರಾರತಿ, ನಿರಂಜನಾರತಿ ಬೆಳಗುತ್ತಿದ್ದನು,. ನೈವೇದ್ಯ ತಾಂಬೂಲಗಳಿಂದ ಉಪಚರಿಸುತ್ತಿದ್ದನು. ಮದ್ದಳೆ, ತುಡುಮು, ಭೇರಿ, ಕರಡಿ, ತಾಳ, ದಂಡಿಗೆ, ಕೈಸಾಳೆ, ಜೇಗಟೆ, ಶಂಖ, ಘಂಟೆ, ಕಹಳೆ, ಧವಳ, ಶಂಖಪುಷ್ಪಗಳ ಧ್ವನಿ ಮೊಳಗುತ್ತಿತ್ತು. ಬಳಿಕ (೬–೪೩ ರಿಂದ ೫೫) ಪ್ರಾಣಲಿಂಗಪೂಜೆಯ ವಿವರಗಳಿವೆ.

ಇದಕ್ಕೆ ಪೂರಕವಾಗಿ ಇವರ ನಿತ್ಯಜೀವನ ವಿವರಗಳನ್ನು ಇಲ್ಲಿ ಗಮನಿಸಬಹುದಾಗಿದೆ. ತಿಪ್ಪಣ್ಣಯ್ಯನು ಕುಟುಂಬ ತ್ಯಜಿಸಿ, ಕಟ್ಟಿಗೆ ಹೊರೆ ತಂದು ಅರ್ಧ ಬೆಲೆಗೆ ಮಾರಿ ಜೀವಿಸುತ್ತಿದ್ದನು. ಊರ ಹಾದಿ–ಬೀದಿಗಳನ್ನು ಸ್ವಚ್ಛಗೊಳಿಸುವುದು, ಹೆಡಿಗೆ, ಗುದ್ದಲಿ, ಕುರುಪಿ ಹಿಡಿದು ಹುಲ್ಲು ತೆಗೆಯುವುದು, ಒಡೆದ ಕೆರೆ ದುರಸ್ತಿ ಮಾಡುವುದು, ಮರಗಳಿಗೆ ಕಟ್ಟೆ ಕಟ್ಟುವುದು, ಜೀರ್ಣ ಶಿವಾಲಯದ ಕಲ್ಲು ಸರಿಪಡಿಸುವುದು, ಬಾವಿಯ ಹೂಳನ್ನೆತ್ತುವುದು, ಹಾವು ಕಂಡರೆ ಕೊಲ್ಲದಿರುವುದು, ಹಬ್ಬದ ದಿನ ಊಟಕ್ಕೆ ಆಮಂತ್ರಿಸುವರೆಂದು ಊರು ಬಿಡುವುದು, ಭವಿಷ್ಯದ ಬವಣೆಯನ್ನು ಸಾರುವುದು, ಇವನ ದೈನಂದಿನ ಕಾರ್ಯಗಳಾಗಿದ್ದವು. ಈತ ಬರಿಗಾಲಿನಿಂದ ಸಂಚರಿಸುತ್ತಲಿದ್ದ, ಹೊರಸಿನ ಮೇಲೆ ಮಲಗುತ್ತಿರಲಿಲ್ಲ. ೬೦ ವರ್ಷದವರೆಗೂ ಸ್ನಾನ ಮಾಡಲಿಲ್ಲ. ವಿಭೂತಿ ಇಟ್ಟುಕೊಳ್ಳುತ್ತಿರಲಿಲ್ಲ, ದಾಳಿವಾಸ ಕಂಡರೆ ಬೊಟ್ಟಿನಷ್ಟು ಇಟ್ಟುಕೊಳ್ಳುತ್ತಿದ್ದನು.

ಗುಂಡ ಬಸವಣ್ಣ ಬಂದ ಭಕ್ತರಿಗೆ ತೆವರಿನ ಮೇಲೆ ಕುಳ್ಳಿರಿಸಿ, ತಾನು ಗೇಣಳತೆ ತಗ್ಗಿನಲ್ಲಿ ಕುಳಿತು ಧರ್ಮಭೋದೆ ಮಾಡುತ್ತಿದ್ದ ಬರಿಗಾಲಿನಿಂದ ಸಂಚರಿಸುತ್ತಲಿದ್ದ, ಹೊರಸಿನ ಮೇಲೆ ಮಲಗುತ್ತಿರಲಿಲ್ಲ. ತೊಟ್ಟ ಬಟ್ಟೆಯನ್ನು ಹರಿಯುವ ವರೆಗೆ ಬದಲಿಸುತ್ತಿರಲಿಲ್ಲ. ಸತಿಪತಿ ನಿಷ್ಠೆಯಿಂದ ತಪಸ್ಸು ಮಾಡುತ್ತಿದ್ದರು. ಅಂಗಮಜ್ಜನ ಮಾಡುತ್ತಿರಲಿಲ್ಲ. ಹೀಗೆ ಇವರ ಜೀವನದ ರೀತಿಯಾಗಿದ್ದಿತು.

೬. "**ಸಂಗಮೇಶ್ವರ** ಪರಿಕಲ್ಪನೆ ಮೂಲತಃ ನಾಥ ಸಂಪ್ರದಾಯಕ್ಕೆ ಸಂಬಂಧಿಸಿರಬಹುದೇ?" (ಮಾರ್ಗ–IV- ಪು. ೩೧೮–೧೯) ಎಂದು ನಾನು ಊಹಿಸಿದ್ದೆನು. ಈ ಆರೂಢ ಸಂಪ್ರದಾಯದ ಸಾಹಿತ್ಯದ ಅಭ್ಯಾಸದಿಂದ ಈ ಹೇಳಿಕೆಗೆ ಹೆಚ್ಚಿನ ಪುಷ್ಟಿ ಸಿಗುತ್ತಲಿದೆ.

"ಅಂದು ಕಟ್ಟಿದ ತೊಟ್ಟಿಲು, ಇಂದು ತೂಗಲು ಬಂದರು ಜ್ಯೋತಿ ಸಂಗನ ಶರಣರು" ಎಂಬ ಕೊಡೆಕಲ್ಲ ಸಂಪ್ರದಾಯದ ಈ ಪದ್ಯ, ಹೀಗೆ ಬಂದವರು 'ಸಂಗನ ಶರಣರು' ಎಂದು ಬಿಡಿಸಿ ಹೇಳುವುದನ್ನು ನೋಡಿದರೆ ಈ ಪರಂಪರೆಯ ಕೇಂದ್ರ ದೈವತ ಸಂಗಮನಾಥನೆಂದೇ ಸ್ಪಷ್ಟವಾಗುತ್ತದೆ. ಗುಂಡ ಬಸವ ಚರಿತ್ರೆಯ ಕರ್ತೃ "ನನಗೆ ಗುರು ಗುಂಡ ಬಸವ, ಲಿಂಗ ಸಂಗಮನಾಥ, ಜಂಗರು ಪ್ರಭುದೇವ" (೧–೪೭) ಎಂದು ಹೇಳುತ್ತ ಸಂಗಮನಾಥನನ್ನು ತನ್ನ ಲಿಂಗವೆಂದು ಸಾರಿದ್ದಾನೆ. ಹಳೆಯ ಸಗರದಲ್ಲಿ 'ಅಮರಕಲ್ಯಾಣ' ಕಟ್ಟಿದವನು ದಿಗ್ಗಿ ಸಂಗಮನಾಥನೆಂಬುದನ್ನು ಇಲ್ಲಿ ನೆನೆಯಬಹುದು. ಈ ಸಂಗಮನಾಥ ಸಂಪ್ರದಾಯದ ಮೂಲಕೇಂದ್ರ ಕಪ್ಪಡಿ (ಕೂಡಲ) ಸಂಗಮನೆಂದು ತೋರುತ್ತದೆ. ಗುಂಡಬಸವ ಚರಿತ್ರೆಯಲ್ಲಿ ಪ್ರಾದೇಶಿಕ ವಿವರಗಳನ್ನು ಕೊಡುತ್ತ ಈ ಕೂಡಲಸಂಗಮ ಕ್ಷೇತ್ರವನ್ನೂ ಹೆಸರಿಸಲಾಗಿದೆ. ನಂದಿ ಆಗಮ ಲೀಲೆಯಲ್ಲಿ ಕೊಡೆಕಲ್ಲ ಬಸವಣ್ಣನು ನೀಲಮ್ಮನೊಡನೆ ದೇಶಪರ್ಯಟನ ಮಾಡುತ್ತ ಕಪ್ಪಡಿ

ಸಂಗಮಕ್ಕೆ ಬಂದು, ದೇವರ ವರದಿಂದ ಮಗನಾದ 'ಸಂಗಯ್ಯ' ನನ್ನು ಪಡೆಯುತ್ತಾನೆ. ಕೊಡೇಕಲ್ಲಬಸವಣ್ಣನ ಮಗ ರಾಚಪ್ಪಯ್ಯನ (ರಾಚಪ್ಪಾಜಿ)ಗದ್ದುಗೆ ಕಾವೇರಿ ತೀರದಲ್ಲಿದ್ದು ಆ ಸ್ಥಳವನ್ನು ಕಪ್ಪಡಿಯೆಂದೇ ಕರೆಯುತ್ತಾರೆ. ಈ ಸಂಪ್ರದಾಯದ ಎಲ್ಲ ಗ್ರಾಮಗಳಲ್ಲಿ ತಪ್ಪದೇ ಸಂಗಮೇಶ್ವರ ದೇವಾಲಯಗಳಿವೆ. ಉದಾ: ಕೊಡೇಕಲ್ಲು, ನಾಗಾವಿ, ದಿಗ್ಗಿ, ಕಕ್ಕಳಮೇಲಿ ಇತ್ಯಾದಿ. ಇದೆಲ್ಲವನ್ನು ನೋಡಿದರೆ ಕಪ್ಪಡಿ ಸಂಗಮ ಈ ಭಾಗದ ಪ್ರಮುಖ ನಾಥಕೇಂದ್ರವೆಂದು ಹೇಳಬೇಕಾಗುತ್ತದೆ. ಆಮೇಲೆ ಇದು ಕಲ್ಯಾಣ ಬಸವಣ್ಣನ ಪ್ರಭಾವದಿಂದಾಗಿ 'ಆರೂಢ ಸಂಪ್ರದಾಯ'ಕ್ಕೆ ತಿರುಗಿ, ಹಳೆಯ ಸಗರ (ದಿಗ್ಗಿ), ನಾಗಾವಿ, ಕೊಡೇಕಲ್ಲುಗಳಲ್ಲಿ ಶಾಖೆಗಳನ್ನು ಸ್ಥಾಪಿಸಿಕೊಂಡಂತಿದೆ.

೭. **"ಡಂಗುರ ಸಾರುವುದು"**ಈ ಆರೂಢಸಂಪ್ರದಾಯದ ಆಚರಣೆಗಳಲ್ಲಿ ಮುಖ್ಯವಾದುದು. ತಿಪ್ಪಣಯ್ಯ "ಮುಂದೆ ಊರಿಗೆ ದಾಳಿ ಬಂದೀತು" (೩-೧೨೯) ಎಂದು ಸಾರಿದುದು ಘಟಿಸಿಬಿಟ್ಟಿತು. ಗುಂಡಬಸವಣ್ಣ ಶ್ರೀಶೈಲದಲ್ಲಿ ತಪೋನಿರತನಾದಾಗ "ತರುವಿಂಧ್ಯೆ ತಪಸ್ಸಿಗಿಂತ ನರವಿಂಧ್ಯೆ ತಪಸ್ಸು ಲೇಸು" ಎನ್ನುತ್ತ ಶಿವನು "ನಿಲ್ಲದೆ ಧರ್ಮದ ಬೋಧೆಯ ಹೇಳು" (೪-೧೨೫) ಎಂದು ಬಸವಣ್ಣನಿಗೆ ಆಜ್ಞಾಪಿಸುತ್ತಾನೆ. ಆದರೆ ಊರಿಗೆ ಬಂದ ಬಸವಣ್ಣ ಉಗ್ರವ್ರತ, ಸಮಯಾಚಾರ ಕೈಕೊಳ್ಳುತ್ತಾನೆ. ಇದನ್ನು ಬಿಟ್ಟು "ಹಿಂದುಗಳೆಯದೆ ನೀನು ಮುಂದೆ ಬೋಧೆಯ ಸಾರು" (೫-೯) ಎಂದು ಶಿವ ಎಚ್ಚರಿಸುತ್ತಾನೆ. ಆಮೇರೆಗೆ ಆವನು 'ಡಂಗುರ ಬೋಧೆ' (೫-೧೦) ಆರಂಭಿಸುತ್ತಾನೆ.

ಬಿಲ್ಲು ಏರಿಸಿ, ಬಾಣ ಹಿಡಿದು ಊರಲ್ಲಿ ಓಡಾಡುತ್ತ "ಊರಿಗೆ ಕೇಡು ಬಂದೀತು" ಎಂದೂ, ಊರ ಹೊರಗೆ ಬಿಲ್ಲನಿಳಿಸುತ್ತ "ಊರ ಹೀನ ಅಡವಿ ಲೇಸು" ಎಂದೂ ಸಾರುವನು. 'ಬೀದಿಯಲ್ಲಿ ಬಿಟ್ಟೂರಿಗೆ' ಎಂದು ಕೂಗುತ್ತ ಬೂದಿ ಚೆಲ್ಲಾಡಲು, ಮುಂದೆ ಊರು ಸುಟ್ಟು ಹೋಯಿತು. "ಒಂದೊಂದು ಪರಿ ಸೆರೆ ಸೂರೆ ಘನವಾದಾವು", "ಕಾಳಗ ಹುಟ್ಟಿತ್ತು ಹಾಳು ಆದೀತು ಲೋಕ", "ಆರು ಒಬ್ಬರಿಗೊಬ್ಬರಂಜದೆ ಮುಂದಿನ್ನು ಸೂರ್ಯಾದೀತು" ,"ಭೂಪತಿ ಸಂಪತ್ತು ಬಯಲಾಗಿ, ಬದುಕ್ಹೋಗಿ, ಭೂಪತಿ ಮನೆಯ ನಾರಿಯರು ಆಪತ್ತಿಗೊಳಗಾಗಿ ಘಾಸಿಯಾದಾರು", " ಹನ್ನೆರಡು ಗಾವುದಕೆ ಒಂದೂರಾಗಿ ಮುನ್ನಿನ ದಿನ ವೇದ್ಯ"- ಹೀಗೆ ೫ನೆಯ ಸಂಧಿ (೧೮-೨೭)ಮತ್ತು ೬ನೆಯ ಸಂಧಿ(೬೭-೬೬)ಗಳಲ್ಲಿ ಲೋಕಭವಿಷ್ಯವನ್ನು ಕುರಿತು, ೬ನೆಯ ಸಂಧಿ(೬೭-೮೫)ಯಲ್ಲಿ ಲೋಕದ ಉತ್ಪತ್ತಿ ಇತ್ಯಾದಿ ಕುರಿತು ಡಂಗುರ ವಿಷಯವಿದೆ.

ಕರಿಯಮಣೋಲೆ ತೋಡು ಹುಲ್ಲಿನ ಸೂಡು। ಮೊರೆಯ ಕಟ್ಟಿಸಿ ನಾಡೊಳಗೇ
ತಿರುಗುತ ಡಂಗುರವನು ಸಾರುವ ತಾನು। ಪರಶಿವ ಮುಖ ಗುಂಡರಾಯ (೬-೨೪)
ಮುಂದೆ ತಾನಿರುತಿಹ ಗುಂಡರಾಯನು॥ ಶಿವಾನಂದದಿ ಬೋಧೆ ಹೇಳುತಲಿ।
ತಂದ ಡಂಗುರವ ಮರ್ತ್ಯದೊಳು ಸಾರಲಿಬೇಕು। ಎಂದು ತಿರುಗಿದ ನಾಡೊಳಗೆ॥ (೬-೧೧೦)

ಎಂಬ ಪದ್ಯಗಳು ನಾಡಿನಲ್ಲಿ ಸಂಚರಿಸುತ್ತ ಈ ಡಂಗುರ ಸಾರಿದುದನ್ನು ಸೂಚಿಸುತ್ತವೆ. ಹೀಗಿರುತ್ತಿರಲು ಒಮ್ಮೆ ಕಣ್ಣ ಬೇನೆ ತಡೆಯದೆ" ನಾನಿರಲೊಲ್ಲೆ ಮರ್ತ್ಯದೊಳಗೆ" ಎಂದು

ನುಡಿಯಲು ಶಿವಲೋಕದವರು ಅವನನ್ನು ಕರೆಯಲು ಬಂದರು. ಆಗ "ಸಾರಬೇಕು ಮರ್ತ್ಯದೊಳಗೆ ಬೋಧೆಯನಿನ್ನು ಬಾರೆನು ಹೋಗಿ" ಎಂದರೂ ಅವರು ಕೇಳದಿದ್ದಲ್ಲಿ, ಅವರನ್ನು ಕಾಳಗದಲ್ಲಿ ಸೋಲಿಸಿ ಕಳಿಸಿದನು(೬-೧೧೯ ರಿಂದ ೧೨೮).

'ಹೀಗೆ ಎಷ್ಟು ಪರಿಯಿಂದ ಬೋಧೆ ಹೇಳಿದರೂ ಜನ ಸುಧಾರಿಸರು' ಎಂದು ಬಸವಣ್ಣನಿಗೆ ಭ್ರಮೆ ನಿರಸನವಾಯಿತು(೭-೧). 'ನಾನು ಡಂಗುರವನು ಸಾರಲಿಕೆ ಕೇಳದೆ ಲೋಕ। ಹೀನ ನಡೆಯ ನಡೆಯಲಿಕೆ॥ ಏನು ಹೇಳಲಿ ಇನ್ನುಯೆಂದು ಬಳಲಿ ಗುಂಡ। ತಾನು ಬೇಸತ್ತು ನುಡಿದನು॥(೭-೧೧). ಹೀಗೆ ೧೭ ವರ್ಷ ಡಂಗುರ ಸಾರಿದನು(೭-೧೨). ಸಾಯುವಾಗಲೂ" ಮುಂದಣಾಗಾಂತ್ರವ ಬರಕೊಳ್ಳಿ ಹೇಳಿ"(೭-೫೨)ಎನ್ನುವುದನ್ನು ನೋಡಿದರೆ ಡಂಗುರ ಸಾರುವುದೇ ತನ್ನ ಜನನದ ಉದ್ದೇಶವೆಂದು ಈತ, ಈತನ ಸಂಪ್ರದಾಯದವರು ಭಾವಿಸಿರುವಂತಿದೆ.

ಗುಂಡ ಬಸವೇಶ್ವರ ಪುರಾಣದಲ್ಲಿ ಡಂಗುರ ಪದ ಸೃಷ್ಟಿಯಾದುದರ ಹಿನ್ನೆಲೆಯ ಪ್ರಸಂಗವೊಂದು ಹೀಗಿದೆ: ಬಸವಣ್ಣ ವ್ಯಾಪಾರ ಮಾಡುತ್ತಲಿರುವಾಗ ಅಡವಿಯಲ್ಲಿ ಕಳ್ಳರು ಬೆನ್ನಟ್ಟುತ್ತಾರೆ. ತಪ್ಪಿಸಿಕೊಳ್ಳಲು ಎತ್ತರದ ಗೋಡೆಯಾಚೆ ಜಿಗಿದ. ದೊಡ್ಡ ಮುಳ್ಳು ನಟ್ಟು ಗೋಳಾಡ ಹತ್ತಿದ. ಶಿವ ಕನಸಿನಲ್ಲಿ ಬಂದು(೪-೬೮) 'ಪದವನ್ನು ಹಾಡು' ಎಂದು ಸೂಚಿಸಿದ. ಆ ಮೇರೆಗೆ "ಕಾಡಬೇಡವು ಮುಳ್ಳೆ ಮೃಡರ ಭಕ್ತರನಿನ್ನು" ಎಂದು ಹಾಡುತ್ತಲೇ ಮುಳ್ಳು ಕಳಚಿಬಿದ್ದಿತು. ಅಂದಿನಿಂದ ಪದ ಹಾಡುವುದನ್ನು ಮುಂದುವರಿಸಿದ(೪-೬೩, ೬೫). "ತೊಗಲ ಜಾಗಟೆ ಎಲುವಿನ ಕುಡುವಿನಲಿ ಹೊಸ। ಬಗೆಯ ಡಂಗುರ ಹೊಯಿಸದನು॥"(೬-೧೭) ಎಂಬ ಮಾತು ಗಮನಾರ್ಹವೆನಿಸಿದೆ.

ಇದೆಲ್ಲವನ್ನು ನೋಡಿದರೆ ಈತ ಡಂಗುರ ಸಾಹಿತ್ಯವನ್ನು ಕೇವಲ ಸಾರಿದನೇ? ಬರೆಹದಲ್ಲಿ ಶಾಶ್ವತಗೊಳಿಸಿದನೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಸಾಲೊಟಗಿ ಶಿವಯೋಗೀಶ್ವರ ಹೆಸರಿನಲ್ಲಿ, ಕೊಡೆಕಲ್ಲ ಸಂಪ್ರದಾಯದಲ್ಲಿ 'ಡಂಗುರ ಪದಗಳು' ಲಭ್ಯವಿದ್ದು ಪ್ರಕಟವಾಗಿವೆ. ಇದೇರೀತಿ ಗುಂಡ ಬಸವಣ್ಣನ ಲಿಖಿತ ಕಾಲಜ್ಞಾನ ಸಾಹಿತ್ಯ ಇರಬಹುದೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕೆ ಉತ್ತರವೆಂಬಂತೆ ಇತ್ತೀಚೆ" 'ಗುಂಡ ಬಸವಾಂಕಿತ' ಸ್ವರ ವಚನಗಳು ಶೀರ್ಷಿಕೆಯಲ್ಲಿ"೬೬ ಹಾಡುಗಳು ಪ್ರಕಟವಾಗಿವೆ. ಇವುಗಳಲ್ಲಿ ಜಕ್ಕಮ್ಮ, ತಿಪ್ಪಣ್ಣಯ್ಯ, (ಕಕ್ಕಳಮೇಲಿ) ಅಲ್ಲಮಪ್ರಭು- ಇವರನ್ನು ಕುರಿತ ಹಾಡುಗಳೂ ಇವೆ. ಸಾಮಾನ್ಯವಾಗಿ ಇವು ಗುಂಡಬಸವೇಶ, ಗುರುಗುಂಡೇಶ, ಗುರುಗುಂಡ,ಗುಂಡರಾಯ ಅಂಕಿತಗಳಿಂದ ಕೊನೆಗೊಳ್ಳುತ್ತವೆ. ಹೀಗಾಗಿ ಇವುಗಳ ಕರ್ತೃ ಗುರುಗುಂಡ ಬಸವಣ್ಣನೋ? ಬೇರೊಬ್ಬನೋ ಎಂಬ ಸಂದೇಹ ಮೂಡುತ್ತದೆ.

೮. ಅನುಯಾಯಿಗಳು ಯಾವುದೇ ಧಾರ್ಮಿಕ ಸಂಪ್ರದಾಯದ ಜೀವಂತಿಕೆ, ಮುಂದುವರಿಕೆಗಳಿಗೆ ಅವಶ್ಯ. ಈ ಆರೂಢ ಪಂಥದ ಅನುಯಾಯಿಗಳಲ್ಲಿ ಭಕ್ತರು- ಬೋಳರು ಎಂದು ಎರಡು ವರ್ಗಗಳಿವೆ. ಈ ರೀತಿಯ ವರ್ಗೀಕರಣ ಅಸ್ತಿತ್ವಕ್ಕೆ ತಂದವ ದಿಗ್ಗಿ ಸಂಗಮನಾಥ(೪-೧೫,೧೬). ಗುಂಡಬಸವಣ್ಣನೂ ಇಂಥ ಪಡೆಯನ್ನು ಕಟ್ಟುತ್ತಾನೆ. ಇವರಲ್ಲಿ ಬೋಳರು ನಿಷ್ಠಾವಂತ ಅನುಯಾಯಿಗಳು(೬-೯ರಿಂದ೨೫). ಇವರು ಈ ದೀಕ್ಷೆ ತೊಡುವಾಗ ತಲೆ ಬೋಳಿಸಿ ಕೊಳ್ಳುತ್ತಲಿದ್ದರೆಂದು ಕಾಣುತ್ತದೆ. ಬಸವಣ್ಣ ಇವರನ್ನು ಕರೆದು " ದೇವರಾಚಾರ ಕಾರ್ಯಕ್ಕೆ"

ನಿಷ್ಠೆಯಿಂದ ನಿಲ್ಲಬೇಕೆಂದೂ, ಶಿವನಿಗೆ ಅರ್ಥ ಪ್ರಾಣ ಅಭಿಮಾನ ಸಮರ್ಪಿಸಬೇಕೆಂದೂ, ನಿಮ್ಮ ಹೆಂಡಿರ ಕೊರಳ ಕರಿಮಣಿ, ಓಲೆ, ತೋಡೆ ತೆಗೆದುಕೊಂಡು ಬನ್ನಿರೆಂದೂ ಹೇಳುತ್ತಾನೆ. ಅವರ ಕೈಗೆ ಕಂಕಣ ಕಟ್ಟಲಾಗುತ್ತದೆ. ಇಂಥ ಬೋಳುಕರು ಇಲ್ಲಿ ಅನುಯಾಯಿಗಳಾಗಿದ್ದರು. ಮಿಕ್ಕವರು ಭಕ್ತರಾಗಿರುತ್ತಿದ್ದರು. ನಾಗಾವಿಯಲ್ಲಿ ಈಗ ಗುಂಡಬಸವನ ವಂಶೀಯರಿಲ್ಲ. ಇವರೇ ಇಂದು ಕೊಡೇಕಲ್ಲಿಗೆ ಬಂದು, ಅಲ್ಲಿಯ ಮಠದ ಅಧಿಕಾರಿಗಳಾಗಿದ್ದಾರೆ. ಕೊಡೇಕಲ್ಲ ದೇವಾಲಯದ ಅರ್ಚಕರು ಜಾಡರಿದ್ದು, ಇವರು ಕೊಡೇಕಲ್ಲ ಬಸವಣ್ಣನೊಂದಿಗೆ ಇಕ್ಕಳಿಕೆ ಗ್ರಾಮದಿಂದ ಬಂದವರೆಂದು ನಂದಿ ಆಗಮಲೀಲೆ ತಿಳಿಸುತ್ತದೆ.

ಬಣಜಿಗ ಸಮಾಜದವರೇ ಕೊಡೇಕಲ್ಲ ಗುರು ಪರಂಪರೆಯಲ್ಲಿ ವಿಶೇಷ ಕಂಡು ಬರುತ್ತಾರೆ. ಗುಂಡ ಬಸವೇಶ್ವರ ಚರಿತ್ರೆಯ ಮುಖ್ಯ ವ್ಯಕ್ತಿಗಳಾದ ತಿಪ್ಪಣ್ಣಯ್ಯ ಮತ್ತು ಬಸವಣ್ಣ ಇಬ್ಬರೂ ಬಣಜಿಗ ಕುಟುಂಬದವರಾಗಿದ್ದಾರೆ. ನಾಗಾವಿಯ ಮಲ್ಲಿಶೆಟ್ಟಿಯ ಮಗ ತಿಪ್ಪಣಯ್ಯ. ನಾಗಿಶೆಟ್ಟಿ ಕಾಮಮ್ಮ ದಂಪತಿಗಳ ಮಗ ಬಸವಣ್ಣ. ಬಸವಣ್ಣನಿಗೆ ಗುಂಡಗುರ್ಕಿಯ ತುಪ್ಪದ ಶಂಕರಶೆಟ್ಟಿಯ ಮಗಳು ಪತ್ನಿಯಾಗಿ ಬಂದಳು. ಇದನ್ನು ಬಿಟ್ಟರೂ ಈ ಪರಂಪರೆಯ ಕೊಡೆಕಲ್ಲ ಬಸವಣ್ಣನೂ ಬಣಜಿಗನಾಗಿರುವುದು ಗಮನಿಸಬೇಕಾದ ವಿಷಯವಾಗಿದೆ. ಹೀಗಾಗಿ ಈ ಸಂಪ್ರದಾಯದ ಮೂಲಪುರುಷನಾದ ದಿಗ್ಗಿ ಸಂಗಮನಾಥ, ಇವನ ಗುರು(ಹೆಬ್ಬಾಳ) ಪರಮಾನಂದರ ಜಾತಿ ಯಾವುದೆಂಬುದು ಶೋಧನೀಯವಾಗಿದೆ. ಗುಂಡಬಸವೇಶ್ವರ ಪುರಾಣದಲ್ಲಿ ತಿಪ್ಪಶೆಟ್ಟಿ ಸಂಸಾರ ತ್ಯಾಗಮಾಡುವ ಪ್ರಸಂಗದಲ್ಲಿ ಬರುವ

ಇಟ್ಟ ಹೊನ್ನುಂಗುರ ಕಟ್ಟಿದುಡುವಣಿ। ಕಟುಕು ಕಡಗ ಕಂಡಮಾಲೆ
ಸೆಟ್ಟಿತನದ ಪೊಗು ಪದಕ ನೇವಳಗಳ। ಬಿಟ್ಟು ಬಿಸುಟ ಮನೆಯೊಳಗೆ॥
ಹಲ್ಲುಕಡ್ಡಿ ಶಿವದಾರ ಹಲವಾಭರಣ।ಒಲ್ಲೆನೆಂದು ಕಡೆಗೆ ಹಾಕಿದನು।
ಉಟ್ಟ ತಡಪು ಕಟ್ಟಿದಂಥ ನಡಕಟ್ಟು। ತೊಟ್ಟಿದ್ದ ಜೋಡಂಗಿಯನು
ನಿಟ್ಟು ಪ್ರಾಕಳೆಯ ಪಟ್ಟೆದ ಹಚ್ಚಡ। ಬಿಟ್ಟು ಬಿಸುಟು ಮನೆಯೊಳಗೆ॥

ಈ ವಿವರ ಅಂದಿನ ಶೆಟ್ಟಿಗಳ ವೇಷಭೂಷಣದ ವಿವರ ನೀಡುತ್ತದೆ.

ಹೀಗೆ ಸಾಹಿತ್ಯೇತರವಾಗಿ ತುಂಬ ಮಹತ್ವದ ಕೃತಿಯಾಗಿರುವ ಇದು, ಸಾಹಿತ್ಯಿಕವಾಗಿ ನಿರೂಪಣಾತ್ಮಕ ಗುಣವನ್ನು ಹೊಂದಿದ್ದು, ಶೈಲಿಯ ಆಪ್ತತೆ ಇದರ ವೈಶಿಷ್ಟವಾಗಿದೆ.

ಪರಿಷ್ಕರಣ–ಕೃತಜ್ಞತೆ :

ಈ ಕೃತಿಯನ್ನು ಏಕೈಕ ಕಾಗದ ಹಸ್ತಪ್ರತಿಯ ನೆರವಿನಿಂದ ಪರಿಷ್ಕರಿಸಲಾಗಿದೆ. ಇದು 9' x 6' ಆಕಾರದ್ದಾಗಿದೆ. ಮೊದಲಿನ ಪುಟ ಕಳೆದಿದೆ. ಒಟ್ಟು ಹಾಳೆ ೬೫. ಅಕ್ಷರ ಚೆನ್ನಾಗಿವೆ. ಭಾಷೆ ಅಶುದ್ಧವಾಗಿದೆ. **ಆದಿ :** ಶ್ರೀ ಗುರುವೆ ಗತಿ। ರಾಘು ಸಾಳುಗ ಪಲ್ಲವ॥. **ಅಂತ್ಯ :** "ಶ್ರೀಮತು ಶಾಲಿವಾಹನ ಶಕ ೧೬೭೨ನೆಯ ವಿಕ್ರಮ ನಾಮ ಸಂವತ್ಸರದೊಳಗೆ ಆಶ್ವೀಜ ಅಧಿಕಮಾಸದೊಳು ಸಪ್ತಮಿ ಮಂಗಳವಾರ ದಿನ ಮುಗಿಯಿತು. ಈ ಪುಸ್ತಕವ ಬರೆದವರಾರು ಎಂದರೆ ಕೊಡೆಯಕಲ್ಲು ಸಿದ್ಧಯ್ಯನ ಕೊಮಾರ ಬಸವಯ್ಯನು ತನ್ನ ಸ್ವಹಸ್ತದಲ್ಲಿ ಬರೆದುಕೊಟ್ಟನು. ಕಕ್ಕಳಮೇಲಿಯ

ಮಠದ ಅಲ್ಲಮಪ್ರಭುದೇವರ ವರಪುತ್ರ ಗದ್ದಿಗಿರಾಯನ ಸೋದರಳಿಯನು ಬರೆಸಿದನು, ಪರಭಯ್ಯನು....................". ಈ ಪ್ರತಿಯು ಕೊಡೇಕಲ್ಲ ಗ್ರಾಮದ ಶ್ರೀ ಈರಪ್ಪಯ್ಯ ಹುಣಸಿಗಿಡದ ಅವರಿಗೆ ಸಂಬಂಧಿಸಿದೆ.

ಕೊನೆಯ ಗಳಿಗೆಯಲ್ಲಿ ಇನ್ನೊಂದು ಕಾಗದ ಪ್ರತಿ ಲಭಿಸಿದ್ದು, ಇದು 7' x 3½' ಆಕಾರದ್ದಾಗಿದೆ. ಒಟ್ಟು ಹಾಳೆ ೧೦೮. ಅಕ್ಷರ ಚೆನ್ನಾಗಿವೆ. ಭಾಷೆ ಅಶುದ್ಧ. **ಆದಿ :** ಶ್ರೀಗುರು ಪಾದವೆ ಗತಿಃ। ಶ್ರೀಗುರುಗುಂಡಬಸವೇಶ್ವರನ ಶ್ರೀಚರಣಾರವಿಂದಕ್ಕೆ ಶರಣು ಶರಣಾರ್ತಿ। ಶ್ರೀ ಸಂಗಮೇಶ್ವರನ ಪಾದವೇ ಗತಿ। ಸಕಲ ಪುರಾತನರ ಪದಕೆ ಶರಣು ಶರಣಾರ್ತಿ। ಅಲ್ಲಮಾಪ್ರಭುದೇವರ ದಿವ್ಯಾಶ್ರೀ ಪಾದವೇ ಗತಿಃ। **ಅಂತ್ಯ :** ಅಂತು, ಸಂಧಿ ೭ಕ್ಕಂ ಪದ ೭೯೩ಕ್ಕಂ ಸೇರಿಸಿದ ಕಂದ ೨೧ಕ್ಕಂ ಸಮಾಪ್ತ ಮಂಗಳಮಹಾಶ್ರೀ........" ಇದು ಶಹಪೂರ ತಾಲೂಕಿನ ಡೋರನಹಳ್ಳಿಯ ಕಲ್ಯಾಣರಾವ ದೇಸಾಯಿ ಅವರಿಗೆ ಸಂಬಂಧಿಸಿದ ಪ್ರತಿ.

ಮೇಲೆ ಹೇಳಿದ ಮೊದಲನೆಯ ಪ್ರತಿಯನ್ನು ಮಾತ್ರ ಆಧರಿಸಿ ಪರಿಷ್ಕರಣ ಪೂರೈಸಲಾಯಿತು. ಕೊನೆಯ ಗಳಿಗೆಯಲ್ಲಿ ಡಾ। ಶಿವಾನಂದ ವಿರಕ್ತಮಠ ಅವರ ಮೂಲಕ ನಮ್ಮ ಕೈಸೇರಿದ ಪ್ರತಿಯು ಕಳೆದ ಮೊದಲನೆಯ ಪುಟದ ಪಠ್ಯವನ್ನು, ಕೆಲವೊಮ್ಮೆ ಅಪಪಾಠಗಳನ್ನು ಸರಿಪಡಿಸಲು ನೆರವಾಯಿತು. ಹೀಗಿದ್ದೂ ನಮಗೆ ಸಾಧ್ಯವಾಗದ ಅಪಪಾಠಗಳು ಉಳಿದುಕೊಂಡಿವೆ. ವಿದ್ವಾಂಸರು ಮನ್ನಿಸಬೇಕು.

ಹಸ್ತಪ್ರತಿಯನ್ನು ಪೂರೈಸಿದ ಶ್ರೀ ಈರಪ್ಪಯ್ಯ ಹುಣಸಿಗಿಡದ, ಶ್ರೀ ಕಲ್ಯಾಣರಾವ್, ದೇಸಾಯಿ, ಡಾ। ಶಿವಾನಂದ ವಿರಕ್ತಮಠ ಅವರಿಗೆ, ಬೆರಳಚ್ಚು ಕಾರ್ಯದಲ್ಲಿ ಶ್ರಮಪೂರ್ವಕ ನೆರವು ನೀಡಿದ ಡಾ। ಹನುಮಂತ ಮೇಲಿನಮನಿ ಅವರಿಗೆ ಕೃತಜ್ಞತೆಗಳು.

❖❖

*

ಪರಿವಿಡಿ

*

ಸಂಧಿ : ಒಂದು

ಶರಣ ಸ್ತುತಿ

ಕಂದ :

ಕಾಮಿತ ಫಲದಾಯನೆಂ[ಬ]
ನಾಮವು ನಿಮಗುಂ[ಟೈ] ಗುರುವೇ ಅ[ದು]।
ಪ್ರೇಮ[ದಿ] ನಿಮ್ಮ[ಯ] ಪಾದವ
ನೇಮಿಸು[ವಾ] ಮತಿಯ ಕೊಟ್ಟು ರಕ್ಷಿಸು ಗುಂಡಂ ॥I॥

ನಿನ್ನಾಳಿನಾಳು ನಾನೈ
ಎನ್ನಯ ಅವಗುಣಗಳೇನು ಗಣಿತಗಳಿಲ್ಲವು।
ಇನ್ನು[ಂ] ನೀನವ ನೋಡದೆ
ಪನ್ನಗಧರನ ವರಗುಂಡ ರಕ್ಷಿಪುದೆನ್ನಂ ॥II॥

ಒಡೆಯನೆ ಎನ್ನಾ ಮನಸಿನ
ತುಡುಗುಣಿತಗಳನೆ ಬಿಡಿಸಿ ನಿಮ್ಮಯ ಪಾದವ।
ಬಿಡದೆ ನೆನೆವಂಥ ಮತಿಯನು
ಕೊಡುವುದು ವರ ನೀನೆನಗೇ ಶ್ರೀ ಗುರುಗುಂಡಂ ॥III॥

ಕರ್ತ[ಂ] ನೀ[ನುಂ] ಭಕ್ತಿಗೆ
ಮರ್ತ್ಯದ ಮನುಜರಿಗೆ ಭಾಗ್ಯವೀಯಲು।
ಸತ್ಯ ಸದಾಚಾರವರಿಯದಾದೆನು
ಧೂರ್ತ[ನೆ]ಯಾದೆ ಪಾಪಿ ಎನ್ನಯ ಮದದಿಂ ॥IV॥

ಐದು ಮುಖ ದೇವನಲ್ಲಿಂ
ದೆಯ್ತಂದ್ಯೆ ಒಂದು ಮುಖದ ಕರ್ತ[ನೆಯ]ಹುದ್ಯೆ।
ಸ್ವಯ ಭಕ್ತಿಯ ತಂದ ನಿಮ್ಮ
ಮಹಿಮೆಯ ನಾನರಿಯದಾದೆ ಶ್ರೀ ಗುರುಗುಂಡಂ ॥೮॥

ಪದನು :

ಶ್ರೀ ಮಹಾದೇವನೆ ಕಾಮಿತಿ ಫಲದಾಯ
ಸ್ವಾಮಿ ನೀ ಶಂಭು ಶಂಕರನೆ ।
ಕಾಮ ನಿರ್ಧೂಮನೆ ಸೋಮಶೇಖರನನು
ಪ್ರೇಮದಿಂದಲಿ ಬಲಗೊಂಬೆ ॥೧॥

ಹರಿಹರ ಪ್ರಿಯನೆ ವರವೀವ ದೇವನೆ
ಶರಣ ಜನಕೆಲ್ಲ ಸಂಕುಳನೆ।
ಪರಕೆ ಪರದೈವನೆ ಕರುಣಾಮೃತಕನ
ಸ್ಥಿರದಿಂದ ನಾ ಬಲಗೊಂಬೆ ॥೨॥

ವಸುಧೆಯ ಪಾಲಿಸುವನೆ ಶಶಿಯ ಮುಡಿದಿಹನೆ
ಬಸವ ವಾಹನನೆ ಸಂಗಮನೆ।
ಎಸೆವ ತ್ರಿನೇತ್ರನೆ ವಿಷವ ಧರಿಸಿಹನ
ಭಸಿತಭೂಷಣನ ಬಲಗೊಂಬೆ ॥೩॥

ದೇವ ದೇವೇಶನೆ ಸುಭಾವ ಭರಿತನೆ
ಕಾವಂಥ ಕರುಣಾಕರನೆ।
ಹಾವನೆ ಕುಂಡಲ ಮಾಡಿ ಧರಿಸಿಹನ
ಭಾವದಂದಲಿ ಬಲಗೊಂಬೆ ॥೪॥

ಕೈಲಾಸದೊಡೆಯನೆ ಐದು ಮುಖದಯ್ಯನೆ
ಐದು ತತ್ವಕೆ ಮೀರಿದವನೆ।
ಸಯವಾಗಿ ಬಾಳ್ವನೆ ನಯಗುಣಕಧಿಕಂಗೆ
ಭಯಭಕ್ತಿಯಿಂದ ವಂದಿಸುವೆ ॥೫॥

ನಿರ್ವಯ ರೂಪನೆ ಪಾರ್ವತಿಪ್ರಿಯನೆ
ಸರ್ವ ದೇವತೆಗಳೊಡೆಯನೆ।

ಸರ್ವ ಜೀವನ ದಯಾಪರನೆಂಬ ಕರ್ತಂಗೆ
ಸರ್ವಪರಿಯಿಂದ ವಂದಿಸುವೆ ॥೬॥

ಆದಿ ಮಹಿಮ ನಿಮ್ಮ ಭೇದ ಕಿಂಚಿತವನು
ವೇದ ಶಾಸ್ತ್ರವು ಮೊದಲಾಗಿ।
ಆದಂಥ ಆಗಮ ವರ ಪುರಾಣಗಳೆಲ್ಲ
ಎಯ್ದವು ಮಹಿಮೆ ಹೊಗಳಿಕೆ ॥೭॥

ಮೃಡ ನಿಮ್ಮ ಹೊಗಳಲಿ ಷಡುಮುಖಗಳವಲ್ಲ
ನುಡಿ[ಯಲಾರವು] ಜಹ್ವೆ ದಂತ।
ಒಡೆಯನ ಮಹಿಮೆಯ ಕಡೆಯಿಲ್ಲದಗಣಿತ
ಬಡಮತಿಯವ ಎನಗಳವೆ ॥೮॥

ಏಳು ನಾಲಗೆಯುಳ್ಳ ದಾಳದಾ[ಳಿ]ಪ ಅಗ್ನಿ
ಭಾಳಲೋಚನ ಮಹಾತ್ಮೆಯನು।
ಥಾಳಿಸಿ ಪೊಗಳಲಿಕಾರನೆಂಬಾ ಶ್ರುತಿ
ಕಾಳ ಮನುಜನೆನಗಳವೆ ॥೯॥

ಹತ್ತು ನಾಲಗೆಯುಂಟಾ ಕರ್ತನ ಹೊಗಳಲಿ
ಮತ್ತೆ ರಾವಳನಳವಲ್ಲ।
ಮತಿ ಎಯ್ದುದಾಯಿತು ಸ್ತುತಿಸಿ ವಿನಾಯಕ
ಮತಿಗೇಡಿ ಎನ್ನಳವಹುದೆ ॥೧೦॥*

ಮಹಿಮೆಯ ಹೊಗಳ[೧][ಲು][೧] ಎಯ್ದಬಾರದ ಘನ
ಬಹುಗುಣ ಮೂರ್ತಿಯ ಇರವು।
ಸ[೨][ವಿವ][೨] ಈರೇಳು ಜಿಹ್ವೆಗಳು ಉಳ್ಳಂಥ
ಅಹಿ ಹೊಗಳಲಿಕೆ ತಾನಾರ ॥೧೧॥

ಈಶನ ಮಹಿಮೆಯನೇಸೆಂದು ಹೊಗಳಲಿ
ಅಸವಲ್ಲದಂಥಗೋಚರವ।

---

* ನಾವು ಬಳಸಿದ ಹಸ್ತಪ್ರತಿಯಲ್ಲಿ ಆರಂಭದ ಒಂದು ಹಾಳೆ ಕಳೆದು ಹೋದ ಕಾರಣ ಮೊದಲಿನ ೧೦ಪದ್ಯಗಳನ್ನು ಡಾ.ಶಿವಾನಂದ ವಿರಕ್ತಮಠ ಅವರು ಪೂರೈಸಿದ ಹಸ್ತಪ್ರತಿಯಿಂದ ಸ್ವೀಕರಿಸಲಾಗಿದೆ.

೧-೧ ಲಿ (ಮೂ) ೨-೨ ಹಿ (ಮೂ)

ಏಸೋ ದೈವ ಈಶಮಹಿಮೆಯ ಕಾಣದೆ
ಗಾಸಿಯಾಗುತ ಮುನ್ನ ಇರರೆ ॥೧೨॥
ಹರ ನಿಮ್ಮ ಹೊಗಳಲು ಭಾರತಿಗಳವಲ್ಲ
ನರಮಾನುಷ ನನಗಳವೆ।
ಹರಿ ಅಜ ನಿಮ್ಮ ಇರವ ಕಾಣದೆ ಹೋಗಿ
ಹೋರ್‍ಯಾಡುತಿಹರನುದಿನ[೩][ವು][೩] ॥೧೩॥

ಪಂಥದಿ ಹರಿ ಅಜ ಕಂತುಹರನ ಪಾದ
ಅಂತು ಮಣಿಮುಕುಟವನು।
[೪][ಹ][೪]ಂತಿಲಿ ಕಂ[೫][ಡೇವು][೫] ಎಂದ್ಹೋಗಿ ಸೋತರು
ಎಂತಳವಹುದೆಲೆ ಸ್ವಾಮಿ ॥೧೪॥

ನಿನ್ನ ಮಹಿಮೆಯಾರೆ ಮುನ್ನಾರಿಗಳವಲ್ಲ
ಪನ್ನಂಗಧರನ ಭಕ್ತರಿಗೆ।
ಉನ್ನಂತ ಮಹಿಮೆಯ ಚೆನ್ನಾಗಿತ್ತೆ ನೀ
ಇನ್ನು ಮತ್ತೆನ್ನಳವಹುದೆ ॥೧೫॥

ಹೊಗಳಲಿ ಅಳವಲ್ಲ ನಿಗುಮನ ಮಹಿಮೆಂದು
ಬಗೆಯದೆ ಮತ್ತಿರಲಿಲ್ಲ।
ಬಗೆದು ಭಾವದೊಳು ನೆಗಹಿ ಕೊಂಡಾಡಲು
ಜಗದೀಶ ತಾನೊಲಿದಿಹನು ॥೧೬॥

ಮತಿಯ ಕೊಟ್ಟಾತನ ಸ್ತುತಿಸುತಲಿರಬೇಕು
ಮತಿಹೋದ ಬಳಿಕ ಮತ್ತಳವೆ।
ನೀತಿವಿಡಿದು ಮುಂದೆ ಮತಿಯ ವೆಗ್ಗಳವನು
ದಾತನ ಭಜಿಸಿ ಬೇಡುವೆನು ॥೧೭॥

ತರಳನಾಡುವದೊಂದು ಮರುಳು ಬಿನ್ನಹ ಕೇಳು
ಉರಗಭೂಷಣ ಕೃಪೆಮಾಡು।
ಇರುಳುಹಗಲು ನಿಮ್ಮ ಚರಣ ಸೇವೆಯನಿತ್ತು
ಕರುಣದಲೆನ್ನ ರಕ್ಷಿಪುದು ॥೧೮॥

೩–೩ ಲಿ (ಮೂ) ೪–೪ ವಂ (ಮೂ) ೫–೫ ಕಂಥೆಯ (ಮೂ)

ಹರನ ಶ್ರೀಚರಣದ ಕರುಣವ ಪಡೆದೀಗ
ಹರನ ಮೆಚ್ಚಿಸಿದ ಭಕ್ತರನು।
ಹರುಷದಿಂದಲಿ ಬಲಗೊಂಡು ವಂದಿಸುವೆನು
ನೆರೆ ಕಂದ ನಾ ನಿಮಗೆನುತ ॥೧೯॥

ದುಗ್ಗಳೆ ಚಂಗಳೆ ಅಗ್ಗಳಿಪ ಮಹಾದೇವಿನ
ಯಗ್ಗಳ ಭಕ್ತಿ ಇತ್ತ [೬][ವ][೬]ರು।
ಭರ್ಗ[೭][ಗೆ][೭] ಗೋಕ್ಷೀರ ಸಲಿಸಿದ ಕೊಡಗೂಸು
ಗೊಗ್ಗವ್ವೆಯನು ಬಲಗೊಂಬೆ ॥೨೦॥

ನಿಂಬೆಕ್ಕ ಲಕ್ಕಾಯಿ ನಂಬೆವ್ವೆ ಮಲ್ಲಿದೇವಿ
ಶಂಭುಭಕ್ತಿಯಲಿ ಸತ್ಯಕ್ಕ।
ಉಂಬ ಅಗಲ ಶಿವಗರ್ಪಿಸಿ ಮೆರೆದ ಚೋ
ಳೆಂಬ ಭಕ್ತೆಯ ಬಲಗೊಂಬೆ ॥೨೧॥

ನೀಲಲೋಚನೆ ಅಕ್ಕನಾಗಾಯಿ ರೆಮ್ಮವ್ವೆ
ಬಾಲ ಬಿಜ್ಜವ್ವೆಯೆಂಬಳನು।
ಲೀಲೆಯಿಂದಲಿ ವಂದಿಸಿ ಮುಂದೆ ಶರಣರ
ಭುಲ್ಲೆಂದು ನಾ ಬಲಗೊಂಬೆ ॥೨೨॥

ದಾಸಿಮಯ್ಯನು ದಸರಯ್ಯ ಗೊಗ್ಗಯ್ಯನು
ಈಶನ ತಂದಾದಿಮಯ್ಯ।
ದೇಶವರಿಯಲು ತಂದೆಯ ಶಿರವರಿದ ಮ।
ಹೇಶ ಭಕ್ತರ ಬಲಗೊಂಬೆ ॥೨೩॥

ಬಾಡಿಗೆ ಬೈರತಂದೆಯು ಪುಷ್ಪದಂತಕ
ಬೇಡರ ಕನ್ನಪ್ಪಯ್ಯಗಳ॥
[೮][ಖೇ][೮]ಡದ ಸಾತಿಮಯ್ಯನ ಉದ್ಭಟಯ್ಯನ
ಹೇಡ್ಯಾಡದಲಿ ಬಲಗೊಂಬೆ ॥೨೪॥

೬–೬ ವಾ (ಮೂ) ೭–೭ ಥ (ಮೂ) ೮–೮ ಸೆ (ಮೂ)

ಹರಳಯ್ಯ ಮಧುವಯ್ಯ ಚಿಲ್ಲಾಳ ಸಿರಿಯಾಳ
ಚೋಳ ಬಿಲ್ಲರಾಯರೆನಿಪ।
ಹೇಳಲೇನರವತ್ಮೂರು ಪುರಾತರ
ವ್ಯಾಳೆವ್ಯಾಳ್ಯಗೆ ಬಲಗೊಂಬೆ ॥೨೫॥

ನಂಬಿಯಣ್ಣನು ಭೋಗಣ್ಣನು ಓಹಿಲಯ್ಯನು
ಅಂಬಿಗರ ಚೌಡಯ್ಯ।
ಕುಂಬಾರ ಗುಂಡಯ್ಯ ಬಿಬ್ಬಿಬಾಚಯ್ಯನಿಂತು
ಶಂಭು ಭಕ್ತರ ಬಲಗೊಂಬೆ ॥೨೬॥

ನಿಜಲಿಂಗ ಚಿಕ್ಕಯ್ಯ ಜೊಮ್ಮಯ್ಯ ಮಾಚಯ್ಯ
ರಜ ೯[ಕ]೯ ಕಾಯಕದ ಭಕ್ತ ಸಹಿತ।
ರಾಜಾನ್ನ ಮಾರಯ್ಯನ ಮೊ೧೦[ನ]೧೦ದಯ್ಯನ
ಅಜಗಣ್ಣಯ್ಯನ ಬಲಗೊಂಬೆ ॥೨೭॥

ಕಲ್ಲನೇಮದ ಶಂಕರಯ್ಯ ಕಕ್ಕಯ್ಯನು
ಮಲ್ಲೆಬೊಮ್ಮಣ್ಣ ಜಗದೇವ।
ಬಲ್ಲಿದ ಕೂಗಿಮಾರಿಯತಂದೆ ಬಂಕಣ್ಣಿಂ
ತೆಲ್ಲ ಭಕ್ತರ ಬಲಗೊಂಬೆ ॥೨೮॥

ಚೇರಮರಾಯ ೧೧[ನ]೧೧ ನೆರೆ ೧೨[ಮಾದಿರಾಜನ]೧೨
ವರಸುತ ಬಸವಕುಮಾರ।
ಹರಗೆ ಸತಿಯನಿತ್ತ ಸಿಂಧುಬಲ್ಲಾಳನಿಂತು
ಪರಮಭಕ್ತರ ಬಲಗೊಂಬೆ ॥೨೯॥

ಕಲಿಗಣನಾಥ ಕಲಿಕಾಮಿದೇವನು
ಕಲಿನಾಥ ದೀಪದಭಕ್ತ।
ನುಲಿಯ ಚಂದಯ್ಯ ಹಾವಿನಾಳ ಕಲ್ಲಯ್ಯ
ತೆಲಗು ಜೊಮ್ಮಯ್ಯಗೊಂದಿಪೆನು ॥೩೦॥

೯-೯ ದ (ಮೂ) ೧೦-೧೦ ಥ (ಮೂ) ೧೧-೧೧ ನು (ಮೂ) ೧೨-೧೨ ಧವರ್ಮನು (ಮೂ)

ಮಾರಯ್ಯ ಮುಟ್ಟದ ಮಾರಯ್ಯ ಮುಟ್ಟುವ
ಮಾರಯ್ಯ ಆಯ್ದಕ್ಕಿಗಳ।
ಮಾರಯ್ಯ ಹೆಂಡದ ಮಾರಯ್ಯ ಮೋಳಿಗೆ
ಮಾರಯ್ಯನನು ಬಲಗೊಂಬೆ ॥೩೧॥

ಬೊಮ್ಮಯ್ಯ ಶ್ವಪಚಯ್ಯ ಶಾಂತಯ್ಯ ಜಕ್ಕೇರ
ಬೊಮ್ಮಿತಂದೆಯು ಬಾಣಸುರನು।
ಚಿಮ್ಮಲಿಗೆಯ ಚನ್ನರಾಮಯ್ಯ ಪಾದರದ
ಬೊಮ್ಮಿತಂದೆಯ ಬಲಗೊಂಬೆ ॥೩೨॥

ಮರುಳಶಂಕರದೇವ ಸುರಗಿಯಾ ಚೌಡಯ್ಯ
ಪರಮಭಕ್ತನು ಅನುಮಿಷನು।
ಮೆರೆಮಿಂಡ ನಾಯ್‌ನಾರ ರೇವಣಸಿದ್ಧಯ್ಯ
ಕೆರೆಯ ಪದ್ಮರಸಗೊಂದಿಸುವೆ ॥೩೩॥

ಪಡಿಹಾರ ಉತ್ತಯ್ಯ ನಾಗಯ್ಯನೆಂಬವನ
ಹಡಪದಪ್ಪಣ್ಣ ಕೇತಿಮಯ್ಯ।
ಮಡಿವಾಳ ಮಾಚಯ್ಯ ಸಿದ್ಧರಾಮಯ್ಯನಿಂತು
ಮೃಡನ ಭಕ್ತರ ಬಲಗೊಂಬೆ ॥೩೪॥

ಕನ್ನದ ಮಾರಯ್ಯ ಚನ್ನಯ್ಯ ಮಾದಾರ
ಹೊನ್ನಿತಂದೆಯು ಬಾಚಿರಾಜ।
ಕಿನ್ನರಿಬ್ರಹ್ಮಯ್ಯ ಚನ್ನಬಸವಣ್ಣ
ಗುನ್ನಂತವಾಗಿ ವಂದಿಸುವೆ ॥೩೫॥

ವೀರಶೈವದ ಸಂಗಯ್ಯನು ಮುಗ್ಧಸಂಗಯ್ಯ
ಕ್ರೂರಭಕ್ತಿಯಲಿ [ಗೂರ್ಜರನ]
ಯಾರರಿಯದಲಿರ್ದ ಸತ್ಯಣ್ಣ ಪೆದ್ದಯ್ಯ
ಧೀರ ಗುಂಡ ಬೊಮ್ಮಯ್ಯಗೊಂದಿಸುವೆ ॥೩೬॥

ಬಸವೇಶ ಮೊದಲಾದ ಶಶಿಧರ ಭಕ್ತರಿಗೆ
ಒಸೆದು ವಂದಿಸುವೆ ಮನದಲಿ।

ಅಸವಲ್ಲದಗಣಿತ ಹೆಸರ ಹೇಳಲಿ ನಿಮ್ಮ
ಹಸುಳನೆಂದೆನ್ನ ಪಾಲಿಪುದು ॥೩೭॥

ಹಿಂದಣ ಪ್ರಮಥರನೊಂದಿಸಿ ಬಲಗೊಂಬೆ
ತಂದೆತಾಯಿಗಳು ನೀವೆನುತ।
ಮುಂದೆ ಶ್ರೀಗುರುಪಾದವೆಂದೆಂದು ಬಿಡಲಾರೆ
ನೆಂದು ಬೇಡುವೆನು ಸುಮತಿಯ ॥೩೮॥

ಏನುವನರಿಯದ ಹೀನಮತಿಯವ ನಾನು
ಜ್ಞಾನವ ಕೊಡು ಗುರುರಾಯ।
ಹೀನಮನವನೆಲ್ಲ ನೀನೆ ಎದ್ದೋಡಿಸಿ
ಧ್ಯಾನವಿರಿಸು ನಿನ್ನ ಪಾದ ॥೩೯॥

ತಳಿತ ತಂಪಿನ ತರು ಒಳಿತಾಗಿ ಇರುವಂತೆ
ಉಳುಹಿ ಸಲಹು ಗುರುರಾಯ।
ಹಳಿದು ಆಡದೆ ಎನ್ನ ಒಳಹೊಕ್ಕು ನುಡಿಸಯ್ಯ
ಬೆಳಗುಳ್ಳ ಗುರು ಗುಂಡ ಬಸವ ॥೪೦॥

ಗುಂಡ ನಿಮ್ಮಯ ಪಾದ ಕೊಂಡಾಡ ಮ[೧೩][ರೆ][೧೩]ಯ[೧೪][ಲು][೧೪]
ದಂಡವ ಕೊಡು ಗುರುರಾಯ।
ಮಂಡಲದೊಳಗೆ ಅಹುದೆಂಬ ಕೃತಿಯ ಪ್ರ
ಚಂಡ ಮೂರುತಿ ನುಡಿಸುವುದು ॥೪೧॥

ಹಲವು ಬಿನ್ನಹವೇಕೆ ಒಲಿದು ನೀ ಕೃಪೆಮಾಡಿ
ಸಲಿಸುವದೆನ್ನ ಬಿನ್ನಪವ।
ಮಲಹರ ನೀನೆಂದು ನಲಿದು ನಾ ನಂಬಿದೆ
ನೆಲಸುವದೆನ್ನ ಜಿಹ್ವೆಯಲಿ ॥೪೨॥

ಧರೆಗೆ ಶ್ರೀಗುರುಗುಂಡ ನೆರೆ ಬಂದ ಕಥನವ
ಪ[೧೫][ರಿವಿಡಿಯೆ][೧೫]ನೆ ಹೇಳಿಸೆಂದು।

೧೩–೧೩ ತಿ (ಮೂ) ೧೪–೧೪ ವು (ಮೂ) ೧೫–೧೫ ರುವಡೆಯ (ಮೂ)

ಗುರುಲಿಂಗಜಂಗಮದ ಚರಣಕೆ ಎರಗಿ ನಾ
ವರವ ಬೇಡುವೆನು ಘುಮತಿಯ। ॥೪೩॥

ಗುರು ಗುಂಡಬಸವೇಶ ನೆರೆ ಲಿಂಗ ಸಂಗಮ
ಚರವು ಎನಗೆ ಪ್ರಭುದೇವ।
ಗುರು ಹೃದಾಲಯದೊಳು ಚರಲಿಂಗವಿಹುದೆಂದು
ನೆರೆ ನಂಬಿ ನಾ ಭರಿಸುವೆನು ॥೪೪॥

ಗುರು ತಾಯಿ ತಂದೆಯು ಗುರು ಬಂಧು ಬಳಗವು।
ಗುರು ಪರಶಿವಮೂರ್ತಿ ಎನಗೆ।
ಗುರುಮೂರ್ತಿಯೇ ಧ್ಯಾನ ಗುರುಚರಣಾರ್ಚನೆ ಪೂಜೆ
ಗುರುಕೃಪೆಯಾದುದೇ ಮುಕ್ತಿ ॥೪೫॥

ಕೊಟ್ಟಂಥ ಮತಿಯ ಮುಂದಿಟ್ಟು ನಾನುಸುರುವೆ
ಸೃಷ್ಟಿ ಘುಜನರಹುದೆನಲು।
ಸೃಷ್ಟಿಗೀಶ್ವರ ಮೆಚ್ಚಿ ಕೊಟ್ಟಂಥ ವರವಿದು
ಭ್ರಷ್ಠ ಎನ್ನಯ ಹವಣಲ್ಲ ॥೪೬॥

ಕುಂದದೆ ನಲ್ವತ್ತಯೇಳು ಪದಗಳೊಳು
ನಾಂದ್ಯದ ಸಂಧಿ ಮುಗಿದುದು।
ತಂದೆ ಶ್ರೀಗುರುಗುಂಡ ಬಂದಂಥ ಕಥನವ
ಮುಂದೆ ಸಂದೊಳಗೆ ಕೇಳುವದು ॥೪೭॥

ಪ್ರಥಮಸಂಧಿ ಸಮಾಪ್ತ ಮಂಗಳಮಹಾ

❖❖

*

ಸಂಧಿ : ಎರಡು

ಗುಂಡ ಬಸವೇಶ್ವರನ ಶಿವಸನ್ನಿಧಿ ಕಥನ

ಕಂದ :

ವರವ ಬೇಡುವರು ಬೇಡಿಲ್ಲಿ
ವರವೀವ ದಾನಿ ಕಾರುಣ್ಯಕರನು ಈತನು।
ಕೊರಡ ಚಿಗುರಿಸುವ ಬರಡನು
ಕರತ [೧][ಳ][೧] ಕೆ ತಂಬಂಥ ಕರ್ತೃ ಶ್ರೀಗುರು ಗುಂಡಂ ॥೧॥

ಅಂಜದೆ ಬೇಡೊರವ ಆಳ್ದನ
ಬಂಜೆಗೆ ಮಕ್ಕಳನು ಕೊಡುವ ಹಂದೆಗೆ ಧೈರ್ಯವ।
ಕುಂಜರ ಸತ್ವಹೀನಗೆ
ನಂಜನು ಪರಿಹರಿಪ ಒಡೆಯ ನಿರಂಜನ ಗುಂಡಂ ॥೨॥

ಪದನು :

ಸಾಕ್ಷಾತ ಗುರು ತಾನು ಏಕೆ ಬಂದನು ಕೇಳಿ
ಲೋಕಪಾಲಿಪ ಗುಂಡರಾಯ।
ಲೋಕವನುಳುಹಲು ಬೇಕಾಗಿ ಬಂದುದ
ಏಕಚಿತ್ತದಲಿ ಕೇಳುವುದು ॥೧॥

ಶಿವಲೋಕದೊಳಗಿಂದ ಭುವನವನುಳುಹಲು
ಹವಣಿಸಿ ಗುರು ಎಯ್ತಂದ।

---

* ಶ್ರೀ ಗುರು ಗುಂಡಬಸವಯ್ಯನ ಪಾದವೇ ಗತಿ (ಮೂ) ೧-೧ (ಮೂ)

ಶಿವಲೋಕದೊಳಗೇನು ಕಥನವಾಯಿತು ಎಂಬ
ನೆವನಗಳಿನ್ನು ಕೇಳುವುದು ॥೨॥

ಮೇರು ದುರ್ಗವನಾರು ಬಣ್ಣಿಸಲಳವಲ್ಲ
ಈರೇಳು ಭುವನದೊಳಧಿಕ।
ವೀರಶೈವದ ಭ[ಕ್ತ] ಶೈವಭಕ್ತರುಗಳ
ಕೇರಿ ಕೇರಿಗೆ ಕಟ್ಟಳಿಲ್ಲ ॥೩॥

ಇತ್ತರದಲಿ ಬಿಡಿ ಚಿತ್ರ ಚಿನ್ನದ ಗೋಡೆ
ರತ್ನ ತೆತ್ತಿಸಿದ ಮಾಳಿಗೆಯೊ।
ಎತ್ತ ನೋಡಿದರೆ ನಂದಿಯ ಧ್ವಜ ಆತಂಗೆ
ಮುತ್ತಿನ ಕಳಸವೆತ್ತಿಹವು ॥೪॥

ಓಳಿ ಓಳಿಯೊಳೆಲ್ಲ ಕೇಳೋಕೆ ಶಿವ ಶಿವ
ಭಾಳಲೋಚನ ಮಹಾತ್ಮೆಯನು।
ಥಾಳಿಸಿ ಪೊಗಳಿ ಮೊಳಗುವ ಭಕ್ತರ ಸಭೆ
ಹೇಳಲೇನನು ಕಟ್ಟಳಿಲ್ಲ ॥೫॥

ಕಯಿಲಾಸಪುರದೊಳು ಮಹಿಮೆದೋರುತವಾಗ
ನಯಕಟ್ಟಳೆಗಳ ಚಾವಡಿಗಳು।
[3][ಬಹು][3]ರೂಪ ಕೊಂಡಾಡಿ ಎಯ್ದಬಾರದ ಘನ
ವಾಯ ಕಿಂಚಿತಗಳ ಪೇಳುವೆನು ॥೬॥

ಹೇಮದ ನೆಲಕಟ್ಟು ಪ್ರೇಮ ಪಚ್ಚದ ಗೋಡೆ
ನಾಮ ವಜ್ರದ ಕಂಬಗಳು।
ಆ ಮನೆ [ಕಟ್ಟೆ]ಗೆ ಹವಳ ಬೋದಿಗೆಯೆಲ್ಲ
ಸ್ವಾಮಿ ನಿರ್ಮಿತದ ಮಾಣಿಕವು ॥೭॥

ನಿರುತ ನೀಲದ ಜಂತಿ ಪರುಷ ಸಂದುಗಳಿಕ್ಕಿ
ನೆರೆ ಶಂಖ ಚಿಲಿಕೆ ಹಾಸಿಹವು।
ಬರಿಯ ಬೆಳ್ಳಿಯ ನೀರು ವರದ ಗಚ್ಚಿನ ಲೇಪ
ಹರನ ಚಾವಡಿಯ[4][ಲೊ][4]ಪ್ಪಿಹವು ॥೮॥

೩–೩ ಭಯ (ಮೂ) ೪–೪ ನೊ (ಮೂ)

ಚಾವಡಿ ಲೇಪಕೆ ಬಾವನ್ನ ಕಸ್ತೂರಿ ಜವ್ವಾದಿ
ಪುನುಗು ಪಚ್ಚೆಗಳು।
ಭಾವಿಸಿ ಕದಂಬ ಪನ್ನೀರ ವಳೆಗಳು
ದೇವಚಾವಡಿ ಇಂತೊಪ್ಪಿಹವು ॥೯॥

ಕರಿಯಮಲ್ಲಿಗೆ ಜಾಜಿ ಸೂಜಿ ಸೇವಂತಿಗೆ
ಇರವಂತಿಗರಳು ಸಂಪಿಗೆಯೊ।
ಮರುಗ ದವನಗಳ ತರತರ [೫][ದಲಿ ಹಾ][೫]ಸಿ
ಪರಿಮಳ ಪುಷ್ಪ ಮೋದಗಳು ॥೧೦॥

ಹಲವು ಮಾಳಿಗೆಗಳ ಕೆಲಸಗತಿಪರಿ
ನೆಲೆ ಲೆಕ್ಕಕೇನು ಕಟ್ಟಳಿಲ್ಲ।
ಬಲುದುರ್ಗ ಸುತ್ತಲೆಸೆವ   ವಜ್ರಗಟ್ಟಳೆ
ಅಲ್ಲಿ ಗೋಮೇಧ ತೆನೆಗಳು ॥೧೧॥

ಇಂತಪ್ಪ ಚಾವಡಿಯೊಳಗೆ ಒಪ್ಪುತಲಿಹು
ದೆಂತು ಗದ್ದಿಗೆಯ ಮಹಿಮೆಯೊ।
ಸಂತತ ಹದಿನಾಲ್ಕು ಭುವನ ಹೋಲುವ ಪೀಠ
ಕಂತುಹರನು ಕುಳಿತಿಹನು ॥೧೨॥

ಭದ್ರ ಭೈರವರು ಇದ್ದರು ಎಡಬಲದಲಿ
ಚಿದ್ರೂಪನ ಮುಂದೆ ನಂದೀಶ।
ಇದ್ದ ಸೋಹಗಳ ಮಾಡಲಿಕೆ ವಿನಾಯಕ
ರುದ್ರನ ಹಿಂದೆ ತಾನಿಹನು ॥೧೩॥

ಎಡದಲಿ ಪಾರ್ವತಿ ಜಡಿವ ಭಕ್ತರ ಸಭೆ
ನಡುವೆ ಭೃಂಗಿಯ ನಾಟ್ಯಗಳು।
ಬಿಡದೆ ಓದುವ ಗೀತ ಒಡೆಯನ ಮಹಿಮೆಯ
ಕಡು ಭಕ್ತಿಯಲಿ ಸ್ತುತಿಸುತಲಿ ॥೧೪॥

೫–೫ ಅಸ್ಪಷ್ಟ (ಮೂ)

ಇಂದ್ರನಗ್ನಿಯು ಯಮ ನೈರುತ್ಯ ವರುಣನು
ಮುಂದೆ ವಾಯವ್ಯ ಕುಬೇರ।
ಚಂದದೀಶಾನ್ಯ ಇಂತಷ್ಟದಿಕ್ಪಾಲಕರು
ಬಂದಿಹರವರು ವಾಲಗಕೆ ॥೧೫॥

ತಂಡತಂಡದ ನೃತ್ಯ ಮಂಡಳೇಶನ ಮುಂದು
ದಂಡ ವಾಲಗವಾಡುತಿಹವು।
ಹಿಂಡು ದೈವಗಳೆಲ್ಲ ದಂಡ್ಯಾಗಿ ಮಹಿಮೆಯ
ಕೊಂಡಾಡಿ ಉಘೆ ಉಘೆಯೆನುತ ॥೧೬॥

ಕಿನ್ನರ ತುಂಬುರರು ಪನ್ನಂಗಧರನನು
ಚೆನ್ನಾಗಿ ತಾವು ಹೊಗಳುತ।
ಚಿನ್ಮಯ ಚಿದಾನಂದ ಉನ್ನಂತ ಮಹಿಮ ಪ್ರ
ಸನ್ನಮೂರುತಿ ನಮೋಯೆನುತ ॥೧೭॥

ಹರಿಯ ನಯನ ನಿಮ್ಮ ಚರಣಕರ್ಪಿಸಲಾಗಿ
ಹರಿಗಿತ್ತೆ ಹಲವು ಪದಗಳ।
ಕೊರತೆಯಾಗಲು ಬ್ರಹ್ಮ ಶಿರವ ಚಿವುಟಿದೆಯಯ್ಯ
ಹರನೆ ನಮೋ ನಮೋಯೆನುತ ॥೧೮॥

ಕಾಮನ ಸುಟ್ಟು ನಿರ್ಧೂಮವ ಮಾಡಿದೆ
ಹೋಮದಿಕ್ಕಿ ದಕ್ಷಯನ।
ಹೋಮದೊಳಗೆ ಶಿರವರಿದು ಹಾಕಿದ [6][ಕೋಟಿ][6]
ಸೋಮತೇಜನೆ ನಮೋಯೆನುತ ॥೧೯॥

ಹವಿಯ ಭಾಗದೊಳಿಟ್ಟ ರವಿಕೋಟಿ ತೇಜನೆ
ಭವನಾಶದುರಿತ ವಿದೂರ।
ಕವಿದು ತ್ರಿಪುರವ ದಹನವನು ಮಾಡಿದೆ ನೀನು
ಭುವನಕೀಶನೆ ನಮೋಯೆನುತ ॥೨೦॥

೬-೬ ಗೂಡಿ (ಮೂ)

ಇಂತು ಪರಿಯಲಿ ಸ್ತುತಿಸಿ ಗಣಂಗಳು
ಸಂತೋಷದಲಿ ಕುಳಿತಿರಲು।
ಚಿಂತೆ ಮುಖವು ಅಡರುತಲಿ ನಾರಂದ ನಿ
ಶ್ಚಿಂತನ ಬಳಿಗೆ ಬಂದಾಗ ॥೨೦॥

ಧರುಣಿಯೊಳಗಣ ಕ್ರೂರಕರ್ಮಂಗಳ
ನಾರದಮುನಿ ಕೊಂಡು ಒಯ್ದು।
ಮಾರಹರನ ಪಾದಕೆರಗಿ ಸಾಷ್ಟಾಂಗವ
ಕರವ ಮುಗಿದು ಎದ್ದ ನಾರಂದ ॥೨೨॥

ಬಂದ ನಾರಂದನ ಇಂದುಧರನೆ ನೋದ
ನಿಂದ ಕಾರಣಗಳೇನೆಂದ।
ಒಂದು ಬಿನ್ನಹಯೆಂದು ನುಡಿದನಾಗ
ತಂದೆ ಬಿನ್ನಹ ಕೇಳು ಎನುತ ॥೨೩॥

ತುಂಬರ ಗೀತವು ಸಂಭ್ರಮ ವಾದ್ಯವು
ರಂಭೆ ಊರ್ವಶಿಯರೋಲಗವ।
ಡಂಬಿಸಿ ನಿಲಿಸಿದ ಅಂಬರಾತ್ಮಕ ತಾನು
ಜಂಬುದ್ವೀಪದ ಸುದ್ದಿಗಾಗಿ ॥೨೪॥

ಗಲಿಬಿಲಿ ನಿಲ್ಲೆಂದ ಮಲಹರನೆಲ್ಲರ
ಉಲಿದಾಡದಿರು ಭೃಂಗಿನಾಥ।
ಒಲಿದು ಕೇಳುವದೆಲ್ಲ ನೆಲೆಯನು ಮರ್ತ್ಯದ
ಸಲೆ ಸುದ್ದಿ ಹೇಳೊ ನಾರಂದ ॥೨೫॥

ಹರ ನಿಮ್ಮ ಭಕ್ತರ ಕರೆಸಿ ಎಲ್ಲರನೆಂದು ಲ
ನಾರಂದಮುನಿ ಬಿನ್ನವಿಸಲು।
ಕರೆಯೆಂದ ಈಶನು ಹರಿದರಾಗಳೆ ಬೇಗ
ಹರನ ದೂತರು ನಿಮಿಷದಲಿ ॥೨೬॥

ಲಿಂಗ ಕರೆದನೆಂದು ಹಿಂಗದೆ ಹೇಳಲು
ಗಂಗೆವಾಳುಕರೆಲ್ಲ ತಾವು।

ಕಂಗೆಡುತೆದ್ದು ಬಂದರು ಎಲ್ಲ ಓಡುತ
ಗಂಗಾಧರನ ವಾಲಗಕೆ ॥೨೭॥

ಬೆಜ್ಜರಗೊಂಡರು ಸೋಜಿಗವೆನುತಲಿ
ಮೂಜಗದೊಡೆಯ ಕರಸಿದರೆ।
ಅಜ ಹರಿ ಮುಂತಾಗಿ ಸುಜನ ಸುಭಕ್ತರು
ರಜತಾದ್ರಿಯಲಿ ನೆರೆದರು ॥೨೮॥

ಬಂದ ಭಕ್ತರ ಕುಳ್ಳಿರೆಂದು ಕರುಣದಿಂದ
ಚಂದ್ರಶೇಖರ ನಿರೂಪಿಸಿದ।
ಬಂದರೆಲ್ಲರು ನಾರಂದಮುನಿಯೆ ನೀನು
ತಂದ ಸುದ್ದಿಗಳ ಹೇಳೆಂದ ॥೨೯॥

ಇನ್ನು ಬಿನ್ನಯಿ[ಸುವೆ] ಪನ್ನಂಗಧರ ನೀವು
ಚೆನ್ನಾಗಿ ಚಿತ್ತಗೊಡಿ[ರೆನ]ಲು।
ಭಿನ್ನಹೋಗದ ಹಾಗೆ ಚೆನ್ನಾಗಿ ಕೇಳುವೆವು
ನಿನ್ನ ಸುದ್ದಿ ಹೇಳೊ ನಾರಂದ ॥೩೦॥

ತಂದೆಯೆನುತಲಿ ಮಂದಿಯೊಳು ಕರೆವರು
ನಿಂದು ರೂಪನೆ ನೋಡುತಿಹರು।
ಚೆಂದವಾಗಿರೆ ನೋಡಿ ತಂದೆಯೆಂಬುದ ಬಿಟ್ಟು
ಮಂದಮತಿಯಲಿ ಕೂಡುತಿಹರು ॥೩೧॥

ಹೊರಗೆ ಮಾವೆನುತಲಿ ಕರೆದು ಮಾತಾಡುವರು
ಭರದ ಪ್ರಾಯವ ನೋಡುತಿಹರು।
ಬರಿದೆ ಭ್ರಮಿಸುವರು ತರಹರಿಸದಲಾಗ
ನೆರೆ ಮನೆಯಲಿ ಕೂಡುತಿಹರು ॥೩೨॥

ಅಣ್ಣ ತಮ್ಮಿದರೆಂದು ಬಣ್ಣಿಸಿ ಕರೆವರು
ಸಣ್ಣ ಪ್ರಾಯವ ನೋಡುತಿಹರು।
ಕಣ್ಣ ನೋಟದಿ ಸೋತು ಅಣ್ಣ ತಮ್ಮಿದರನು
ಹೆಣ್ಣು ತಾ ಕರೆಸಿ ಕೂಡುವಳು ॥೩೩॥

ಭಾವ ಮೈದುನರೆಂದು ಯಾವಾಗ ಕರೆವರು
ಭಾವಿಸಿ ರೂಪ ನೋಡುವರು।
ಜೀವ ಮೆಚ್ಚಿಕೆಯಾಗೆ ಭಾವಮೈದುನರನು
ತಾವಾಗೆ ಕರೆಸಿ ಕೂಡುವರು ॥೩೪॥

ಅಳಿಯ ಮಗನುಯೆಂದು ಅಸರಂತ ಕರೆವರು
ಎಳೆಯ ಪ್ರಾಯವ ನೋಡುತಿಹರು।
ಕಳೆಯವಾಗಿರೆ ನೋಡಿ ಅಳಿಯ ಮಗನನಾಗ
ಒಳ ಒಳಗೇ ಕೂಡುತಿಹರು ॥೩೫॥

ತಾಯಿ ಅಕ್ಕನುತಲಿ ಬಾಯಲಿ ಕರೆವರು
ಛಾಯನೋಡುವರು ರೂಪಗಳ।
ಆಯವಾಗಿರೆ ನೋಡಿ ಬಾಯ ನುಡಿಯ ಬಿಟ್ಟು
ನಾಯಂತೆ ಬೆರಸುತಲಿಹರು ॥೩೬॥

ಅತ್ತೆ ಅತ್ತಿಗೆಯೆಂದು ಹತ್ತೆಯಾಗಿರುವರು
ನಿತ್ಯ ರೂಪನೆ ನೋಡುತಿಹರು।
ಮತ್ತೆ ಏಕ್ಕಟೆ ಸಿಕ್ಕ ಅತ್ತೆಯೆಂಬುದ ಬಿಟ್ಟು
ಕತ್ತೆಂತೆ ಬೆರಸುತಲಿಹರು ॥೩೭॥

ತಂಗಿ ನಾದಿನಿಯೆಂದು ಹಿಂಗದೆ ಕರೆವರು
ಅಂಗರೂಪನೆ ನೋಡುತಿಹರು।
ಅಂಗನೆ ಅವರನು ಮುಂಗಯ್ಯ ಹಿಡಿದಾಗ
ಸಂಗಗಳನೆ ಮಾಡುತಿಹರು ॥೩೮॥

ಸೊಸೆ ಮಗಳೆನುತಲಿ ಅಸರಂತ ಕರೆವರು
ಎಸೆವ ರೂಪನೆ ನೋಡುತಿಹರು।
ಹಸನಾಗಿಯಿರೆ ನೋಡಿ ಹೇಸದೆ ಪಾಪಕೆ
ವ್ಯಸನದಲೊಡಗೂಡುತಿಹರು ॥೩೯॥

ಮೋಸ ಮುಕ್ಕರಗೊಂಡು ಏಸೋ ಲಿಂಗದ ಆಣೆ
ಹೇಸದೆ ಮತ್ತಿಡುತಿಹರು।

ಆಸೆಗೊಟ್ಟದು ನಿರಾಸೆ ಮಾಡುವರು
ಹುಸಿಯ ವೆಗ್ಗಳಿಸಿ ನುಡಿವರು ॥೪೦॥

ಕೊಂಡಂತೆ ಕೊಟ್ಟರಿ ತಂಡಿಲಿ ಕೆಲವರು
ಕೊಂಡೆಯಗಳ ಮಾಡುತಿಹರು।
ಉಂಡ ಮನೆಯ ಕೊಂಡು ದಂಡ್ಯಾಗಿ ಬಾಳ್ವರು
ಮಂಡಳೇಶನೆ ಕೇಳೊ ಎಂದ ॥೪೧॥

ಪರಸತಿ ಪರಧನ ಪರನಿಂದೆಕೊಳಗಾಗಿ
ನರಕವನುಣಲದರಿಂದ।
ಪರಲೋಕ ಸಾಧಿಸೇವು ಎಂದು ಎಂಬರು
ಅರಿತು ನಡೆವುದಕೇನು ॥೪೨॥

[ತಾ]ನು ಬಿತ್ತಿದ ಬೆಳೆ ತಾನೆ ಉಣುತಲಿಹ
ಹೀನ ಒಳಿತುಗಳೆರಡನು।
ಭಾನುಕೋಟಿತೇಜ ಕಡೆಯ ಪಾಪಾಯಿತು
ಏನ ಹೇಳಲಿ ಸ್ವಾಮಿಯೆಂದ ॥೪೩॥

ಮಾಡಿದ ಫಲವನು ಮಾಡಿದಾತನೆ ಉಂಬ
ಕಾಡದು ಅದರಿಂದಲೇನು।
ನೋಡಬಾರದ ಪಾಪ ಮಾಡುತಾರೈ ಅಲ್ಲಿ
ರೂಢಿಗೀಶನೆ ಕೇಳುಯೆಂದ ॥೪೪॥

ವೇಸಿದಾಸೆರ ಸಂಗವೇಸೆಂದು ಹೇಳಲಿ
ರಾಸಿಪಾಪಕೆ ಕಟ್ಟಳಿಲ್ಲ।
ಈಶ ನಿಮ್ಮಯ ಗುಡಿ ವಾಸಕಾಗಿವೆ ಹೋಗಿ
ಹೇಸದೆ ಬೆರಸುತಲಿಹರು ॥೪೫॥

ರಂಡೆಮುಂಡೆರ ಸಂಗ ದಂಡೇನ ಹೇಳಲಿ
ಹಿಂಡು ಪಾಪಕೆ ಕಟ್ಟಳಿಲ್ಲ।
ಮಂಡಳೇಶ್ಯಾಲಯಕೆ ಕೊಂಡೊಯ್ದು ಸತಿಯರ
ದಂಡ್ಯಾಗಿ ಬೆರಸುತಲಿಹರು ॥೪೬॥

ಎಲೆ ಸ್ವಾಮಿ ಮತ್ತೊಂದು ಬಲು ಪಾಪವಾಗ್ಯದೆ
ನೆಲೆಯ ಪೇಳಲು ಬಾರದಂತೆ।
ಹಲವು ಮಾತುಗಳೇಕೆ ನಿಮ್ಮ ಠಾವುಗಳಿಲ್ಲ
ಮಲಹರ ನೀ ಕೇಳೊ ಎಂದ ॥೪೭॥

ನಿಟಿಲಾಕ್ಷನ ಗುಡಿ ಕಟ್ಟಿದ ಕಲ್ಲು ಬಿಚ್ಚಿ
ಕೋಟೆಕೊತ್ತಳ ಮನೆ ಮಗಿಲು।
ಪಾತೆಗಿಕ್ಕಿ [೭][ಸಿ][೭] ಜಲಹರಿಯ ಒರಳಮಾಡಿ
ದಿಟ ಲಿಂಗ ಒಲೆಯ ಗುಂಡಾಯಿತು ॥೪೮॥

ಲಿಂಗಗೂಡೊಡೆವಾಗ ಲಿಂಗಪೂಜಕರಲ್ಲಿ
ಲಿಂಗಕಾಗರ್ಥ ಪ್ರಾಣವನು।
ಅಂಗೋಸಿ ಅಭಿಮಾನವೀವರಿಲ್ಲವೆಯೆಂದು
ಗಂಗಾಧರನಾಗ ಕೇಳಿದನು ॥೪೯॥

ಅರ್ಥ ಪ್ರಾಣಭಿಮಾನ ಕರ್ತರಿಗೆಂದಿತ್ತ
ಭಕ್ತರ ಹರ ಕಾಣೆನೆಂದ।
ತುರ್ತು ಈವರು ಸ್ವಾಮಿ ಅರ್ಥಭಿಮಾನ
ವ್ಯರ್ಥ ಹೆಣ್ಣೊನ್ನು ಮಣ್ಣಿಗಾಗಿ ॥೫೦॥

ಲಿಂಗಪೂಜೆಯ ಮಾಡಿ ಲಿಂಗಕೆ ಶರಣೆಂದು
ಅಂಗೋಸಿ ಧನಕಾಸೆಮಾಡಿ।
ರಂಗಮಂಟಪ ಲಿಂಗ ಜಲಹರಿ ಒಡೆವರು
ಸಂಗಮೇಶನೆ ಕೇಳೊ ಎಂದ ॥೫೧॥

ನಂದಿಯನೊಡೆವರು ಸಂದುಗಲ್ಲನೆ ಬಿಚ್ಚಿ
ಬಂದು ಬೆನಕನ ಹೊಟ್ಟೆಗಳ।
ಸಂದೇಗದಿಂದ ಒಡೆದು ಲಿಂಗವನೆ ಕಿತ್ತು
ತಂದೆ ಕೆಳ [೮][ಗೆಳೆಯು][೮] ವರೆಂದ ॥೫೨॥

೭–೭ ಸಿ (ಮೂ) ೮–೮ ಗುಳು (ಮೂ)

ಶಿವಭಕ್ತರೆಂಬರು ಶಿವಪೂಜೆ ಮಾಡುವರು
ಶಿವನ ಆಲ್ಯದ ಕಲ್ಲನೆಲ್ಲ।
ಅವ ಬಿಚ್ಚಿ ಜಗುಲಿ ಬಚ್ಚಲಿಗಿಕ್ಕಿ ಬಾಳ್ವರು
ಭುವನಕೇಶನೆ ಕೇಳು ಎಂದ ॥೫೩॥

ಪೂಜೆಯ ಮಾಡುವರು ವಾಜೆದಪ್ಪೊಡೆಯಲು
ರಾಜ್ಯದೊಳಾರು ಮಾಣುವರು।
ನಾಜದು ಭಕ್ತಿ [೯][ಶೂ][೯] ನ್ಯವು ಮರ್ತ್ಯದೊಳಗಲ್ಲಿ
ಮೂಜಗದೊಡೆಯ ಕೇಳೆಂದ ॥೫೪॥

ನಿಗಮ ಶಾಸ್ತ್ರವನೋದಿ ಆಗಮ ಪುರಾಣ
ಬಗೆ ಬಗೆಯ ಧರ್ಮಮಾರ್ಗವನು।
ಜಗದೊಳಗರಿವ ನೆಗಹಿ ತೋರರೆಯೆಂದು
ಜಗದೀಶನಾಗ ಕೇಳಿದನು ॥೫೫॥

ವೇದಶಾಸ್ತ್ರವನೋದಿ ಬೋಧೆಯ ಹೇಳಿ ಧರ್ಮ
ದ್ಹಾದಿಯ ತಪ್ಪಿ ನಡೆಯಲು।
ವೇದಿಸಿ ಕೇಳಿ ನಡೆವರಾರಯ್ಯ ಅಲ್ಲಿ
ನಾದಮಯನೆ ಕೇಳೊ ಎಂದ ॥೫೬॥

ಆರು ದರುಶನದೊಳು ಯಾರು ಇಲ್ಲ[೧೦][ವು][೧೦] ಎಂದ
ಸಾರಿ ಧರ್ಮವ ಹೇಳುವವರು।
ಆರು ದರುಶನವೆಲ್ಲ ಮೀರಿ ನಡೆದವು ಅಲ್ಲಿ
ಮಾರಹರನೆ ಕೇಳೊ ಎಂದ ॥೫೭॥

ಹೇಳುವವರು ತ [೧೧][ಪ್ಪೆ][೧೧] ಕೇಳಿ ನಡೆವರಾರು
ಕೋಳುಹೋದವು ದರುಶನವು।
ಕೇಳು ಹೆಣ್ಣು ಹೊನ್ನು ಮಣ್ಣಿನಾಸೆಗೆ ಬಿದ್ದು
ಜಾಳಾದವಾರು ದರುಶನವು ॥೫೮॥

೯-೯ ಸ (ಮೂ) ೧೦-೧೦ ವೆ (ಮೂ) ೧೧-೧೧ ಪ್ಪಿ (ಮೂ)

ಗುರುಹಿರಿಯ [೧೨][ರ][೧೨] ಬೋಧೆ ಉಪದೇಶವನೆ ತುಂಬಿ
ಅರಿಕೆ ಮಾರ್ಗವ ತೋರುವವರು।
ಊರ್ವಿಯೊಳಿಲ್ಲವೇ ಎಂದು ನಾರಂದ [೧೩][ಗೆ][೧೩]
ಹರನು ತಾನಾಗ ಕೇಳಿದನು ॥೫೯॥

ಅಂದ ಮಾತಿಗೆ ನಾರಂದಮುನಿ ನುಡಿದ
ಮಂದಮತಿ ಅಹು [೧೪][ದು][೧೪] ಹೇಳಿದರೆ।
ಕುಂದು ನಡೆವವರು ಮುಂದಾರಿಗ್ಹೇಳ್ವರಾ
ನಂದಮಯನೆ ಕೇಳೊ ಎಂದ ॥೬೦॥

ಪಾಪಕಾಜ್ಞೆವ ಮಾಡೊ ನೃಪರು ಇಲ್ಲವೆ ಎಂದು
ಈ ಪರಿ ಶಿವನು ಕೇಳಿದರೆ।
ನೃಪರು ಪಾಕೆಯ ಆಸೆ ಪಾಪಕಾಜ್ಞೆಗಳಿಲ್ಲ
ಅಪರಂಪರನೆ ಕೇಳೊ ಎಂದ ॥೬೧॥

ಕಳವು ಹಾದರಿಗರ ಹಿಡಿತಂದರರಸಿಗೆ
ಥಳ ಥಳ ಹೊನ್ನನೆಣಿಸಲು।
ವೀಳ್ಯವ ಕೊಟ್ಟು ಕಳವು ಹಾದರಿಗರನು
ಕಳಹಿಕೊಡುವರು ಕೇಳೆಂದ ॥೬೨॥

ಜಗಳ ಬಂದರಿಗರಸು ಆಗ [೧೫][ದವರ][೧೫]ನೋಡಿ
ತೆಗೆವುತಿಹನು ತ [೧೬][ಪ್ಪ][೧೬] ಬೇಗ।
ಬಗೆಯಿಂದ ಸುಲಿವರು ಆಗ ಹೊನ್ನುಗಳಡಿ
ನಾಗಭೂಷಣ ಕೇಳೊ ಎಂದ ॥೬೩॥

ಇಂತೀ ಪರಿ ನೃಪರು ಭ್ರಾಂತುಗೊಂಡರು ಧನಕೆ
ಅಂತು ಕಾರಣ ಕರ್ಮ ಹೆಚ್ಚಿ।
ಸಂತತ ತುಂಬಿತುಳುಕಿ ವಾಲಾಡುತಲದೆ
ಕಂತುಹರನೆ ಕೇಳೊ ಎಂದ ॥೬೪॥

೧೨-೧೨ ರು (ಮೂ) ೧೩-೧೩ ನು (ಮೂ) ೧೪-೧೪ ದೆ (ಮೂ) ೧೫-೧೫ ದೊರೆಯ (ಮೂ)
೧೬-೧೬ ಪ್ಪಿ (ಮೂ)

ವಸಧೆಯೊಳಗೆ ಖಾಜಿ ಸೈದ ಮುಲ್ಲರುಗಳು
ಎಸೆವ ಕಿತಿಬೆ ಪ್ರಮಾಣ।
ಪಸರಿಸಿ ನೃಪತಿಗ್ಹೇಳುವರು ಇಲ್ಲವೆ ಎಂದು
ಬಿಸಿಗಣ್ಣನಾಗ ಕೇಳಿದನು ॥೬೫॥

ಇಲ್ಲಿ ಪೇಳಲಿಕೆಂತು ಅಲ್ಲದೆ ಅವರೇನು
ಸೊಲ್ಲನಾಡಲಿಕೆ ಅಂಜುವರು।
ಅಲ್ಲಿ ಕೊಟ್ಟುಮ್ಮುಳಿ ತೆಗೆದಾರು ಬೆದರಿಕೆ
ನಲ್ಲಳೇಶನೆ ಕೇಳೊ ಎಂದ ॥೬೬॥

ಪೊಡವಿಯೊಳಗೆ ಧರ್ಮ ನಡೆವರಿಲ್ಲವೆ ಎಂದು
ಮೃಡನು ಕೇಳಿದನು ನಾರದನ।
ನಡೆವರೆಲ್ಲಕೆ ಒಬ್ಬನು ನುಡಿಯಲಾರದರಲ್ಲಿ
ಅಡಗಿ ಇಹರು ಪಾಪಕಂಜಿ ॥೬೭॥

ಪಾಪ ಮರ್ತ್ಯದ ಒಳಗೀ ಪರಿಯಾದರೆ
ಉಪಾಯವೇನು ನಾರಂದ।
ಅಪರಂಪರನೆ ನಿಮಗುಪಾಯ ಹೇಳಲು
ಆಪುದೆ ತ್ರಾಹಿ ತ್ರಾಹಿ ಎನುತ ॥೬೮॥

ಕೇಳಿ ಬಿನ್ನಹ ಒಂದ ಹೇಳಿಸುದ್ದರು ನಾವು
ಹಾಳು ಭಕ್ತಿಗೆ ಮರ್ತ್ಯಲೋಕ।
ಆಳಿದಾತಗೆ ಮುಂದೆ ಹೇಳ ಬುದ್ಧಿಗಳುಂಟೆ
ಭಾಳಲೋಚನ ಬಲ್ಲಿರೆಂದ ॥೬೯॥

ಹರ ಭಾವದೊಳಗಾಗ ಪರೀಕ್ಷಿಸಿ ನೋಡಿದ
ನೆರೆ ಕಿಂಚಿತ್ಕೋಪ ಮಾಡಿದರೆ।
ಉರಿ ಉರಿ ೧೭[ವವೇ]೧೭ಳು ಭುವನವು ಆಗಳೆಯೆಂದು
ಪರಶಿವ ಶಾಂತ ತಾಳಿದನು ॥೭೦॥

೧೭-೧೭ ದೆ (ಮೂ)

ಉರ್ವಿಯ ಪಾಪದ ಭರವನೆಲ್ಲವ ಕೇಳಿ
ಉರಗಭೂಷಣ ನಸುನಗುತ।
ತರಿದೊಟ್ಟು ವೀರ ನೀ ಉರಿವ ಗಾಳಿಯ ಬಿಟ್ಟು
ಕರೆ ವಿಷಮಳೆಯನೆಂದೆನಲು ॥೭೧॥

ನಿನ್ನ ಮಯವು ಲಿಂಗ್ವಿಭೂತಿ ರುದ್ರಾಕ್ಷೆಂದು
ಚೆನ್ನ ವಿರೇಶ ಕೇಳಿದರೆ।
ಇನ್ನು ಆ ಮಹಿಮೆ ತೆಗೆದೆ ಹೋಗೆನುತಲಿ
ಪನ್ನಂಗಧರ ಬೆಸಸಿದನು ॥೭೨॥

ನಾಲ್ಕು ಮುಖದವರು ಏಕಮುಖಕೆ ಬಂದು
ವಾಕು ಒಂದೆಂದೆರಗಿದರು।
ಲೋಕದೊಳಗೆ ಪುಣ್ಯ ಶಿಖರಿಗಳಧಿ ಮೂಲ
ಲೋಕಪಾಲಿಪ ಕಾವುದೆನುತ ॥೭೩॥

ಬಂದು ನಾಲ್ಕು ಮುಖವಂದ ಮಾತನೆ ಕೇಳಿ
ನಿಂದಿರಿಸಿದ ಗಾಳಿ ಮಳೆಯ।
ಮುಂದೆ ಮರ್ತ್ಯದ ಪಾಪಕೊಂದು ಬುದ್ಧಿಯ ಕಾಂಬೆ
ನೆಂದು ಕಾಲನ ಕರೆಸಿದನು ॥೭೪॥

ಆಗ ಬಂದನು ಯಮ ಬೇಗ ತಡೆಯದಲಿ
ಮೇಘಪತಿಗೆ ಶರಣೆಂದು।
ಭಾಗ್ಯಮುಖನೆ ನಮಗೇನು ಸೋಹಗಳೆಂದು
ಆಗ ಬಿನ್ನೈಸಿ ಕೇಳಿದನು ॥೭೫॥

ಯಮಗೆ ಎಂದನು ಶಿವನು ನಿಮಗೆ ಕೊಟ್ಟೆವು ಲೋಕ
ಕ್ರಮದಿಂದ ಪಾಪಕಾಜ್ಞೆಗಳ।
ನಿಮುಷದಿ ಮಾಡೆಂದು ನೇಮಿಸಿ ಕುಡಲಾಗಿ
ಯಮ ಸಂತೋಷಗಳ ಮಾಡಿದನು ॥೭೬॥

ಹಸಾದವೆನುತಲಿ ಹರುಷದಿಂದಲಿ ಯಮ
ಈಶನ ಪಾದಕೆರಗಿದನು।

ವಸುಧೆಯೊಳಗೆ ಹೋಗಿ ಹಸನ ಮಾಡೆನುತಲಿ
ವೃಷಭವಾಹನ ಕಳುಹಿದನು ॥೭೭॥

ಅತ್ತ ಹೋದನು ಯಮ ಮತ್ತೆ ತನ್ನಯ ಪುರ
ಕರ್ತಿಯಿಂದಲಿ ಪರಿವಾರವ।
ತುರ್ತು ಕರೆಯೆಂದನು ಮಾರಿ ಚಾಮುಂಡಿಯ
ಮಿತ್ತು ದೇವತೆ ಮೊದಲಾಗಿ ॥೭೮॥

ಕರೆ ಶಾಕಿನಿ ಡಾಕಿನಿಯರೆಂಬ ದೈತ್ಯರ
ಮುರಿವ ದುರ್ಗೆಂಬ ರಾಕ್ಷಸಿಯ।
ಹಿರಿದು ಚೌಡೇಶ್ವರಿಯೆಂಬಳು ಮೊದಲಾಗಿ
ಬರಹೇಳು ಸರ್ರನೆಯೆಂದೆನುತ ॥೭೯॥

ಕಂತುಹರನು ಕೊಟ್ಟ ಅಂತು ಭೂಲೋಕವ
ಸಂತೋಷದಿಂದ ಯಮ ನಗುತ।
ಪಂಥದ ದೈತ್ಯ ರಾಕ್ಷಸರ ಕರಸಿ ಮ
ತ್ತಿಂತಾಯಿತೆಂದು ಪೇಳಿದನು ॥೮೦॥

ಮುದ್ದರಿವೆಡಗಿಯಂದದಿ ಕಣ್ಣು ಬಾಯೊಳು
ಗುದ್ದಳಿಯಂಥ ಹಲ್ಲುಗಳು।
ತಿದ್ದಿದ ವಾಲೆ ಬಂಡಿಯ ಗಾಲಿಯಂಥವ
ರೆದ್ದುಬಂದರು ಸಂತೋಷದಲಿ ॥೮೧॥

ಅತ್ತಲೀ ಸಂಭ್ರಮವರ್ತಿಯಾಗಿರಲಿಕೆ
ಕರ್ತನ ನಾಲ್ಕು ಮುಖವು।
ವ್ಯರ್ಥವಾಯಿತು ಲೋಕವೆತ್ತಲೆಂದರಿಯದೆ
ಮತ್ತೆ ಕಾವುದು ಒಮ್ಮೆಮ್ಮೆನುತ ॥೮೨॥

ಸಾರಿ ದೂರಲಿಕಾಗಿ ಮೀರಿ ನಡೆಯೆ ಲೋಕ
ಮಾರಹರನೆ ನಿಮಗೆಣೆಯೆ।
ಸೂರೆಯ ಕೊಡಿ ಮುಂದೆ ಯಾರಿಗಾದರೆಯೆಂದು
ಧೀರ ನಾಲುವರು ಆಡಿದರು ॥೮೩॥

ಶಿವನು ನುಡಿದನಾಗ ಭುವನದೊಳು ಪಾಪವ
ನೀವೆ ಬೆಳಸಿದಿರಿ ಎಂದೆನುತ।
ಶಿವಶಿವ ನೀವು ಎಂದರೆ ಏನನೆಂಬೆವು
ಭುವನದೊಳೇನ ಮಾಡಿದೆವು ॥೮೪॥

ತಡಹಿದನಾಗ ಹಿಂದಣ ಸುದ್ದಿಗಳ ತಾನು
ಮೃಡನು ಬೇಗದಿ ನಸುನಗುತ।
ಕಡುಗಲಿ ಭಕ್ತರು ಭದ್ರ ಭೈರವರು ನಿಮ್ಮ
ಎಡಬಲದಲಿ ಕುಳಿತಿರಲು ॥೮೫॥

ಬಂದ ಚಾರಮರಾಯ ನೊಂದು ಮಾತನು ತಾನು
ಕುಂದ ಹೊರಿ[ಸೆ] ನಂಬಿಯಣಗೆ।
ತಂದ ನಂಬೆಣ್ಣನ ಹಿಂದಕೆ ಕೊಟ್ಟೆವು
ಕುಂದಕಾಣುತ ಬೇಗ ನಾವು ॥೮೬॥

ಪೊಲ್ಲ ಸಿಕ್ಕಿಯು ಬಂದ ಕೇತಿಮಯ್ಯನು ತಾನು
ಕಲ್ಯಾಣದೊಳು ಮಡಿವಳನು।
ಅಲ್ಲಿ ನಾದವ ಹೊಯ್ದರೆ ಕೇತಿಮಯ್ಯನ
ನಿಲ್ಲಲೀಸದೆ ಕಳುಹಿದೆವು ॥೮೭॥

ತಡೆಯದೆ ಬೇಗದಿ ಕೊಡಲು ನಾನವರಿಗೆ
ನೋಡಿ ಸಂತೋಷದಿ ನಗುತ।
ಎಡಬಲದವರೆದ್ದು ತಡವಿಲ್ಲದೆ ಶರಣೆಂದು
ನುಡಿದಿರಿ ನೀವೊಂದು ಮಾತ ॥೮೮॥

ನಂಜುಂಡ ನೀನು ಶರಣಾಗತಿ ವಜ್ಜರ
ಪಂಜರ ಮರೆಹೊಕ್ಕರ ಕಾಯುವೆ।
ಅಂಜದೆ ಮಾರಾಂತವರ ಕೊಲುವ ದೇವ
ಅಂಜಿದೆ ನಮ್ಮ ಭಕ್ತರಿಗೆ ॥೮೯॥

ಕೆಸರಿಗೆ ಕಿಚ್ಚನಿಕ್ಕಿ ದೆಸೆಗೆ ಬೊಬ್ಬೆಯನಿಟ್ಟು
ಪಸರಿಸಿದಾ ಮಂಜುಗಳನು।

ಒಸರದ ಹಾಗೆ ಮೊಟ್ಟೆಯ ಕಟ್ಟುವ ದೇವ
ಹೊಸತಾಗಂಜಿದೆ ನೀ ಭಕ್ತರಿಗೆ ॥೯೦॥

ಮಳಲ ಸರವಿಯ ಹೊಸೆದು ಬಾರದಿದ್ದರೆ
ಬಳಿಯನಟ್ಟುವಿ ಮಾರಿಗಳಿಗೆ।
ಕಳುಹಿಕೊಡುವೆ ಇದ್ದಂಥ ಮಾರಿಗಳನು
ಪ್ರಳಯರಹಿತ ಅಂಜಿದೆನುತ ॥೯೧॥

ಅಹಿಛತ್ರಪುರವರಾಧೀಶನೆಂಬಯ ಬಿರುದು
ಓವಿಕೊಂಡಿರಿ ನಿಮ್ಮದೆಂದು।
ಸಹಿಭಕ್ತರಿಗೆ ಅಂಜಿದೆ ಶಿವ ನೀನೆಂದು ।
ಮಹಿಮರು ನೀವು ಆಡಿದಿರಿ ॥೯೨॥

ಸಲ್ಲದು ಬಿರುದು ಶಿವಗೆಯೆಂದು ಎನುತಲಿ
ಸೊಲ್ಲನಾಡಿದಿರಿ ಅಂಜದಲಿ।
ಬಲ್ಲಿದರೆಮ್ಮ ಭಕ್ತರಿಗೆ ಬಿರುದುಯಿದು
ಸಲ್ಲುವುದೆನುತ ನುಡಿದಿರಿ ॥೯೩॥

ಆಗಲಿ ಬಿರುದು ನಮಗೆ ಸಲ್ಲದೆಂದರೆ
ಹೋಗಿ ಮರ್ತ್ಯದೊಳು ನೀವು।
ಸಾಗಿಸಿ ನಿಮ್ಮ ಬಿರುದು ಎಂದೆನುತಲಿ
ಬೇಗದಿಂದಲಿ ಕಳುಹಿದೆವು ॥೯೪॥

ಹೋದಿರಿ ಓರುಗಲ್ಲೊಳಗೆ ನೀವಿಬ್ಬರು
ಸಾಧಿಸಿವೆ ಎಂದೆನುತಲಿ।
ವೇದಿಸಿ ಶಿವನ ಹೊಗಳಿ ಬಿರಿದಿನ ಕಹಳೆ
ಸಾಧಿಸುವದನು ಮರೆದಿರಿ ॥೯೫॥

ಭಕ್ತರ ಬಿರಿದೆಂದು ಹೊಗಳಿಸಿದಿರಿ ನೀವು
ಶಕ್ತಿಯಿಂದಲಿ ಅಲ್ಲಿ ಹೋಗಿ।
ಯುಕ್ತಿವಂತರು ಕಳ್ಳರಿಗೆ ಲಿಂಗವನೆ ಕೊಟ್ಟು
ಭಕ್ತಿಯ ಶೂನ್ಯ ಮಾಡಿದಿರಿ ॥೯೬॥

ಇಂತು ನಿಮ್ಮಿಂದ ಪಾಪಕೆ ಬೆಸನಾಯಿತೆಂದು
ಕಂತುಹರನು ತಾನು ನುಡಿದ।
ಎಂತು ನಾನವರಿಗೆ ಕೊಟ್ಟರೆಂದೆಂಬುದ
ಅಂತವರಿಯದೆ ಆಡಿದಿರಿ ॥೯೭॥

ಒಪ್ಪಿಸಿ ಕೊಟ್ಟೆವು ನಾವು ಅವರನಲ್ಲಿ
ತಪ್ಪ ಕಾಣುತ ಒಪ್ಪದಲಿ।
ಉಪಾಯವರಿಯದೆ ನೀವು ಮರ್ತ್ಯದೊಳು
ಒಪ್ಪುಗೊಂಡಿರಿ ತಪ್ಪುಗಳನು ॥೯೮॥

ಮಕ್ಕಳ ಕುತ್ತಕೆ ದು:ಖಪಡುವ ತಾಯಿ
ಕಕ್ಕುಲತೆಯಲಿ ಔಷಧವ।
ಇಕ್ಕುವಂದದಲಿಕ್ಕಿ ದೊಕ್ಕನೆಂದೆನುತಲಿ
ಮುಕ್ಕಣ್ಣನಾಗ ಪೇಳಿದನು ॥೯೯॥

ನಿಲಿಸಿದನಾಗ ಕಾಲನ ಸಂಭ್ರಮಗಳನು
ಮಲಹರ ತಾ ಕರುಣದಲಿ।
ಬಲುಹಿಂದ ಮರನ ಕಡಿದು ಮೇಲೆ ಹಾಕಿಕೊಂ
ಡೊಲುವೆ ಆಯಿತು ನಿಮಗೆನುತ ॥೧೦೦॥

ಮೃಡ ನಡೆಯೆಂದನು ಪೊಡವಿಯ ವಳಯಕೆ
ಹಿಡಿದು ಸಾರಿನ್ನು ಮೊರೆಗಳನು।
ಮಾಡಿಕೊಂಡಿರಿ ಕುತ್ತವ ಹಾಡುತ ಮದ್ದನೆರೆ
ಬಿಡರು ನಿಮಗೆ ಹೋಗಿಯೆಂದ ॥೧೦೧॥

ಅಂದಮಾತನು ಕೇಳಿ ನಿಂದು ನಾಲ್ಕುಮುಖ
ವಂದಿಸಿದರು ಈಶನಡಿಗೆ।
ತಂದೆ ಎಮ್ಮಯ ತಪ್ಪುಗಳನು ತಿದ್ದುವ ಪರಿಯೆಂ
ತೆಂದು ಕೇಳಿದರು ಭೀತಿಯಲಿ ॥೧೦೨॥

ಆದರೆ ಕೇಳಿ ತಪ್ಪುಗಳು ತಿದ್ದುವ ಪರಿ
ಭೇದಂಗಳನು ಹೇಳ್ವೆನೆಂದ।

ಹೋದಂಥ ಭಕ್ತಿಯಾಚಾರವನೆತ್ತೆಂದು
ಆದಿಮೂರುತಿ ತಾನಾಡಿದನು ॥೧೦೩॥

ಬೇಗದಿ ಸೀಳಿ ಕಳ್ಳರಿಗೆ ಕೊಟ್ಟ ಲಿಂಗವ
ಆಗುಳ್ಳ ಭಕ್ತರಿಗಿತ್ತು।
ಸಾಗಿಸಿ ಧರೆಯೊಳು ಶಿವನ ಬಿರುದುಯೆಂದು
ಸಾಗರಮಥನನಾಡಿದನು ॥೧೦೪॥

ಮರ್ತ್ಯದೊಳಗೆ ಹೋಗಿ ಪಾಪಕಾಜ್ಞೆವ
ತುರ್ತದಿಂದಲಿ ಮಾಡಿಯೆಂದಾ।
ನಿರ್ತದಿಂದಲಿ ಧರ್ಮಮಾರ್ಗದಿ ನಡೆಸೆಂದು
ಕರ್ತ ತಾನಾಗ ಪೇಳಿದನು ॥೧೦೫॥

ಗುಡಿಯ ಖೂನಿಯ ತಡೆಯದೆ ಬೇಗ ಕೊಳ್ಳೆಂದು
ಮೃಡನು ಪೇಳಿದನು ಭಕ್ತರಿಗೆ।
ಪೊಡವಿಯೊಳಗೆ ಇಷ್ಟುಮಾಡಿದಲ್ಲದೆ ಮುಂದೆ
ಬಿಡದು ನಿಮಗೆ ಖೂನಿಯೆಂದ ॥೧೦೬॥

ಹಸಾದವೆನುತಲಿ ಹರುಷದಿ ಶರಣೆಂದು
ಈಶನ ನಾಲ್ಕುಮುಖವು।
ವಸುಧೆಯೊಳಗೆ ಮಣಿಹವ ಮಾಡಬೇಕೆಂದು
ಒಸೆದು ಮಾತಾಡಿದರವರು ॥೧೦೭॥

ಉಪಕಾರ ಮಾಡಲಿ ಅಪಕಾರವಾದವು
ಅಪರಾಧವೆಮಗೆ ಜನನವು।
ಸರ್ಪಭೂಷಣನಿಂತು ಒಪ್ಪಿಸಿದನು ನಮ್ಮ
ತಪ್ಪದು ಹೋಗಬೇಕೆನುತ ॥೧೦೮॥

ಬಾಳಲೋಚನನಲ್ಲಿ ಕಳಿಹಿಸಿಕೊಂಡರು
ಢಾಳರು ಗೋಮುಖದವರು।
ಇಳೆಯೊಳು ಹಳೆಯಸಗರವೆಂಬ ಊರಲ್ಲಿ
ಬೆಳಗುಳ್ಳ ಗುರು ಜನಿಸಿದನು ॥೧೦೯॥

ಹೇಳಹೇಳಲಿ ಲೋಕ ಬಹಳ ತಪ್ಪಿತು ಮಾರ್ಗ
ಕೇಳದಾದರು ಬೋಧೆಗಳನು।
ಹೇಳರೆನಲಿ ಬೇಡ ಕೇಳೆ ಪಯಣ ನಾವು
ಕೋಳ್ಹೋಗದಿರಿ ಬಂಬರೆಲ್ಲ ॥೧೧೦॥

ದೇವರೋಲಗವ ಮಾಡುತಲಿರಿ ಬೆಳಗುಳ್ಳ
ದೇವ ಬರುತಲಿಹನೆಂದ।
ಭಾವಶುದ್ಧಗಳಿಂದ ಸೋಹವ ಮಾಡ್ಯವರಿಗೆ
ದೇವರೊಲುಮೆ ಬೇಕಾದವರು ॥೧೧೧॥

ಎತ್ತಿನವರು ಹೋಗೆ ಕತ್ತೆಯನೇರಿ ಬಂದು
ಭಕ್ತಿಯನೆತ್ತಿ ತೋರಿಹರು।
ವ್ಯರ್ಥರಾಗದೆ ಮುಂದೆ ಭಕ್ತರಾಗ್ಯವರಿಗೆ
ಮುಕ್ತಿಯ ಪಡೆ ನೀವು ಎಂದ ॥೧೧೨॥

ಭೋರನೆ ತಿರಿಗಿದ ಶರಣ ತಾ ಶಿವನಲ್ಲಿ
ಚರಣಕೆರಗಿ ಹೇಳುತಿರ್ದ।
ಸಾರಿದೂರಲಿ ಅಲ್ಲಿ ಮೀರಿ ನಡೆದು ಲೋಕ
ಯಾರು ಎನ್ನದೆ ನೊ[ಯಿ]ಸಿತೆಮಗೆ ॥೧೧೩॥

ಅಷ್ಟಮದಗಳಿಂದ ಕೆಟ್ಟುನಡೆದು ಲೋಕ
ಎಷ್ಟ ಹೇಳಲಿ ಕೇಳದಿಹರು।
ಸೃಷ್ಟಿಗೀಶ್ವರ ನೀವು ಕೊಟ್ಟಷ್ಟು ಭಾಗ್ಯವ
ಕಷ್ಟಬಟ್ಟೆವು ನಾವುಯೆಂದ ॥೧೧೪॥

ಆಡಿದ ಶಬ್ದಕೆ ರೂಢಿಗೀಶ್ವರನಾಗ
ಮಾಡಿಕೊಂಡಿರಿ ನೀವೆ ಎಂದ।
ಕೇಡಬಿಡಲಿಕೆದ್ದು ಬೇಡೆಂದು ಶರಣೆಂದು
ಆಡಿರೆ ಸಾರಬೇಕೆನುತ ॥೧೧೫॥

ಹರನಾಗ ಕರೆದನು ಗುರು ಗುಂಡರಾಯನ
ತೆರಳು ಮರ್ತ್ಯಕೆ ನೀನೆನುತ।

ಸಾರಿದೂರ್ಥಿಯೆವೆಂದಿರೊಮ್ಮಿಮ್ಮೆ ಧರೆಯೊಳು
ಸಾರು ನೀನಿನ್ನೊಮ್ಮೆಯೆಂದ ॥೧೧೬॥

ಅಂದ ಮಾತಿಗೆ ಗುಂಡನೆಂದನೊಂದ ಮಾತ
ತಂದೆ ಬಿನ್ನಹ ಕೇಳು ಎನುತ।
ಹಿಂದಕೆ ಹೋದರು ನೊಂದು ಬಂದರು ಸ್ವಾಮಿ
ಮುಂದೆ ನಮಗೆ ಹೇಗೆಯೆಂದ ॥೧೧೭॥

ಹಿಂದಕೆ ಹೋದರು ಒಂದನೆ ಒಯ್ದರು
ಇಂದು ಮತ್ತೊಂದು ಕ ೧೮[ಳು]೧೮ ಹೇನು।
ಮುಂದೆ ನಡೆಯಯ್ಯ ನೀನು ಹಿಂದೆ ಬಿಟ್ಟೆನು ದುರಿತ
ವೆಂದು ಗುಂಡನ ಸಂತೈಸಿದನು ॥೧೧೮॥

ಕಂಕರಿ ನಿನಗಿತ್ತೆ ಬಿಂಕವ ಮುರಿಯಲಿ
ಅಂಕದ ತರಟಿಯೆಂಬುದನು।
ಡೊಂಕು ಬಿಲ್ಲರಿಗಿತ್ತು ಕಳಿಹಿಕೊಡುತಿಹಿನೆ
ಶಂಕಿಸದಿರು ನಡೆಯೆಂದ ॥೧೧೯॥

ಜಾಳು ದೈತ್ಯರಿಗೆ ಹೇಳಿ ಕಳುಹಿದನು
ಹಾಳು ಮಾಡೆನುತ ಮರ್ತ್ಯವನು।
ಏಳು ನೀನಿನ್ನು ಪಯಣವಾಗುಯೆನುತಲಿ
ಬಾಳಲೋಚನ ಹೆಸರಿಟ್ಟ ॥೧೨೦॥

ಹೇಳ ಗುಂಡನುಯೆಂದ ಕೋಳು ಸಿಕ್ಕದುಯೆಂಬ
ವೀಳೆವ ಕೊಡಿ ನನಗೆನಲು।
ಜಾಳು ಶಬ್ದವನಾಡೆ ಮೇಲು ಮೂಲೋಕಕೆಂಬ
ವೀಳೆವ ಕೊಟ್ಟನು ಶಿವನು ॥೧೨೧॥

೧೯[ಶರಧಿ]೧೯ಗಳ ಕೊಂಡು ಹೋಗೊ ಬರೆಯಲಿಕ್ಕೆ
ಮೇರುವನೊಯ್ಯೊ ವಿದ್ಯೆಯದ।

೧೮-೧೮ ಳಿ (ಮೂ) ೧೯-೧೯ ಸಾರಥಿ (ಮೂ)

ಧೀರತನದಲಿ ಮರ್ತ್ಯದೊಳಗೆ ಹೋಗಿ
ಸೂರೆಗೊಡಯ್ಯ ಬೋಧೆಯನು ॥೧೨೨॥

ವಸುಧೆಗೆ ಚಾವಡಿ ಬಸವನಿದ್ದದುವೊಂದು
ಅಸಮ ಉಭಯ ಕಲ್ಯಾಣವನು।
ಹಸನ ಮಾಡಲ್ಹೋಗಿ ದೆಸೆಗೆ ಗುಂಡಯ್ಯನೆಂದು
ಹೊಸ ಕಲ್ಯಾಣೆನಿಸು ನೀನೆಂದ ॥೧೨೩॥

ಧರೆಗೆ ಹೋಗೆನುತಲಿ ನಿರೂಪ ಕೊಟ್ಟನು
ಹರನು ತನ್ನಯ ಏಕಮುಖಕೆ।
ಉರ್ವಿಯ ಒಳಿಯಕೆ ಸರನೆ ಎಯ್ದುಹೋಗಿ
ಹೊರೆಯನಿಳುಹು ಪಾಪಗಳನು ॥೧೨೪॥

ಹೋಗೆಂದು ಕಳುಹಿದ ನಾಗಭೂಷಣನಾಗ
ಭಾಗ್ಯನಿಧಿಯೆ ನೀ ಮರ್ತ್ಯದ।
ರಾಗದಿಂದಲಿ ನೀನು ಸಾಗಿಸು ಬೋಧೆಯ
ಆಗ ನಾ ನಿನ್ನೊಳಗಿಹೆನು ॥೧೨೫॥

ಮೆಲ್ಲನೆ ಶಿವನ ಅಂಘ್ರಿಗೆ ಎರಗಿ ತಾನು
ಬಲ್ಲಿದ ಗುರು ಗುಂಡಬಸವ।
ಎಲ್ಲ ಪ್ರಮಥರು ಕುಳ್ಳಿಕುಳ್ಳಿರೆನುತಲಿ
ಅಲ್ಲಿಂದ ತಾ ತೆರಳಿದನು ॥೧೨೬॥

ಹೊರಗೆ ಬಂದನು ಗುಂಡ ಕರೆ ಬ್ರಹ್ಮ ವಿಷ್ಣುನ
ಹರನ ದೂತರೆ ಹೋಗಿಯೆಂದ।
ಹರಿದು ಹೋದವರಲ್ಲಿ ಗುರು ಗುಂಡಯ್ಯನು ನಿಮ್ಮ
ಬರಹೇಳಿದನುಯೆಂದು ಎನಲು ॥೧೨೭॥

ಒಂದೆ ಉಸುರಿಲಿ ಬಂದರಾಗಳೆಲ್ಲ
ವಂದಿಸಿದರು ಇದುರಿನಲಿ।
ತಂದೆ ನಿರೂಪಗುಡಿಯೆಂದು ಕರವ ಮುಗಿದು
ನಿಂದರು ಹರಿಬ್ರಹ್ಮ ಸಹಿತೆ ॥೧೨೮॥

ಪೊಡವಿಯ ಒಳಗೊಂದು ಅಡಿಗೆಯ ಮನೆಯನು
ಮಾಡಿ ಬೇಗದಿ ನಡೆಯೆನಲು
ಒಡೆಯನ ಭರಕೆಯ ಕಡು ಭಕ್ತಿಯನೆ ಮಾಡಿ
ಪೊಡವಿಯೊಳಗೆ ಜನಿಸಿಹರೆ ॥೧೨೯॥

ಎಲೆ ಸ್ವಾಮಿ ಅವರಿಗೆ ಒಲಿದು ನೀ ಕೃಪೆಮಾಡಿ
ಸಲೆ ಚಿತ್ತೈಸಲ್ಲಿಗೆನುತ।
ನೆಲೆಯಾಗಲೊಂದಿನ ತೊಲಗುವದವರಿಗೆ
ಹಲವು ಜಲ್ಮದ ಪಾಪವೆನಲು ॥೧೩೦॥

ಆಗಲೆನುತ ಗುರು ಸಾಗಿದ ಮರ್ತ್ಯಕೆ
ಬೇಗದಿಂದಲಿ ನಸುನಗುತ।
ರಾಗದಿಂದಲಿ ಭೋದೆ ಸಾಗಿಸುವೆನು ಎಂದು
ಆಗ ನೆನೆದ ಧರೆಯೊಳಗೆ ॥೧೩೧॥

ನೂರಮುವತ್ತೆರಡನೆಯ ಪದಗಳೊಳು
ತೀರಿದುದೆರಡನೆ ಸಂಧಿ।
ಧರೆಯೊಳು ಗುರು ಗುಂಡ ಜನಿಸಿದ ಗ್ರಾಮದ
ಪರಿಗಳನಿನ್ನು ಕೇಳುವುದು ॥೧೩೨॥

ಅಂತು ಸಂಧಿ೨ಕ್ಕಂ ಪದನು ೧೮೬ಕ್ಕಂ ಮಂಗಳಮಹಾ

❖❖

*

ಸಂಧಿ : ಮೂರು

ಗುಂಡ ಬಸವೇಶ್ವರನ ಗ್ರಾಮ ಕಥನ

ಕಂದ :

ಕೈಕಾಲು ಕಣ್ಣುಯಿಲ್ಲದೆ
ಭಯಭಕ್ತಿ ೧[ಗಳಿಂ]೧ ದಲೆರಗಿ ನಂಬಿದವರಿಗೆ।
ಕೈಕಾಲು ಕಣ್ಣನೀವನು
ಸ್ವಯವು೨[ಳ್ಳಾ]೨ ಗುರು ಗುಂಡಬಸವೇಶ್ವರನ ೩[ವಂ]೩ ॥ I ॥

ನಂಬಿದ ಭಕ್ತರಿಗೇ ತಾಂ
ಬೆಂಬಳಿಯಲ್ಲಿಹನು ದುರಿತ ಹೊಂದ ೪[ಲಿಕೀ]೪ಯನು।
ನಂಬದ ಮನುಜರಿಗೆ ಗುಂಡನು
ಕುಂಭಿಯ ನರಕದಲಿಹಾ೫[ಕೆ]೫ ತಪ್ಪದು ದುರಿತಂ ॥ II ॥

ಪದನು :

ಸಪ್ತಯೋಜನವು ಕಲ್ಯಾಣಕೆ ದಕ್ಷಿಣಭಾಗ
ಇಪ್ಪುದು ಸವಾ ಯೋಜನವು।
ತಪ್ಪದೆ ದಂಡಗುಂಡಕೆ ಉತ್ತರದೊಳು
ಅಪ್ಪ ನೆನೆದ ಬಸವೇಶ ॥೧॥

ಪಕ್ಷಿಮಯಕಾಂಬರಕೆ ತ್ರಿಯೋಜನ ದಾರಿ
ಮುಕ್ಕಣ್ಣ ಕೂಡಲಸಂಗಮಗೆ।

---

* ಶ್ರೀಗುರುವೇ ಗತಿ (ಮೂ) ೧–೧ ಯಿಂ (ಮೂ) ೨–೨ ಳ್ಳ (ಮೂ) ೩–೩(ಮೂ)
೪–೪ ಲೀ (ಮೂ) ೫–೫ ಕಿ (ಮೂ)

ಸಾಕ್ಷಾತ ಗುರು ಜನಿಸಿದ ಗಾವುದರೆಯೊಳು
ದಿಕ್ಕಲ್ಲಿ ಈಶಾನ್ಯ ಕೋಣೆಯಲಿ ॥೨॥

ಸಂಗನ ಬಸವನ ಅಕ್ಕ ನಾಗಾಯೆಂಬ
ಅಂಗನೆಯಾಳಿದ ಗ್ರಾಮದಲಿ।
ಹಿಂಗದೆ ಪೂರ್ವಭಾಗಲಿ ಕೂಗಳತೊಳು
ಸಂಗಮೇಶ್ವರ ನೆಲಸಿಹನು ॥೩॥

ಸಂಗ ಭಕ್ತರ ಸಂಗ ಸಂಗ ಮಹೇಶ ಸಂಗ
ಸಂಗ ಪ್ರಸಾದಿಯ ಸಂಗ।
ಸಂಗ ಪ್ರಾಣಲಿಂಗಿ ಸಂಗ ಸಂಗ ಶರಣ ಸಂಗ
ಸಂಗ ಐಕ್ಯ ಸಂಗಮೇಶಾ ॥೪॥

ಊರಿಗೆ ವಾಯವ್ಯದ ಮಧ್ಯದೊಳು
ಸಾರೆಯರ್ಧರೆ ದಾರಿಯೊಳಗೆ।
[೬][ವೀ][೬]ರರಸನು ಕಂಗಳಿಗೆಯ ಸೋಮಯಲಿಂಗ
ವೀರಭದ್ರ ನೆಲಸಿಹರು ॥೫॥

ನಾಗಧರನು ಕಂಗಳಿಗೆಯ ಸೋಮಯಲಿಂಗ
ಈಗ ದೃಷ್ಟಿ[೭][ಸೆ][೭] ಪರಿಹರವು।
ಭಾಗ್ಯನಿಧಿಯು ನೆನೆವರಿಗೆ ತಪ್ಪದು ನಿಜ
ಉಗಾದಷ್ಟಮಿಯ ಜಾತರಿಯೊ ॥೬॥

ಸನ್ನೆ ಗ್ರಾಮಕೆ ಮೂಡಣ ದಿಕ್ಕಿನಲಿ ಪ್ರ
ಸನ್ನ[೮][ಮೂರುತಿ][೮] ಮಹೇಶ್ವರನು।
ಚಿನ್ಮಯರೂಪನಿಹನು ದೃಷ್ಟವಾಗಿ ತಾ
ಕನ್ನೆ ಪಾರ್ವತಿ ಎಡದಲ್ಲಿ ॥೭॥

ಇಂತು ನೂರೊಂದು ಕಂಬದ ಶಿವಾಲ್ಯದೊಳು
ಸಂತತ ಅಕ್ಕ ನಾಗಾಯಿ।

೬–೬ ನೀ (ಮೂ)   ೭–೭ ಷ (ಮೂ)   ೮–೮ ಮೊರಥಿ (ಮೂ)

ಕಂತುಹರನ ಭಕ್ತೆ ಜಂಗಮಾರ್ಚನೆ ಮಾಡೆ
ಅಂತು ಛತ್ರಸಾಲೆಯೆಂದೆನಿಸಿ ॥೮॥

ಊರ ಮುಂದಣ ಪುಣ್ಯತೀರ್ಥ ನಂದಿಯ ಬಾವಿ
ಸಾರೆ ದಡದಲಿ ರಾಮೇಶ।
ಪೂರ್ವಮುಖವಾಗಿ ಕಟ್ಟಿದ ಶಿವಾಲ್ಯ
ನೀರ ಮಹಿಮೆಯನೇನೆಂಬೆ ॥೯॥

ನಂದಿಯ ತೀರ್ಥವ ಬಂದು ಮುಳಿಗಿದರ್ಗೆ
ಹಿಂದೆ ಮಾಡಿದ ಪಾಪ ಹರವು।
ಮುಂದೆ ಸತ್ಯವನೀಗ ಕುಂದದೆ ನಡೆಯಲು
ನಂದಿವಾಹನನು ಮೆಚ್ಚುವನು ॥೧೦॥

ಅಡಕೆ ಕೊಬ್ಬರಿಮರ ಗಿಡನಿಂಬೆ ಡಾಳಿಂಬ
ಕಡು ಚಲ್ವಿಕೆಯ ರಾಯನೆಲ್ಲೆ।
ಒಡನೆ ಹರಿವ ಬಳ್ಳಿದ್ರಾಕ್ಷೆ ಹಂದರ
ಎಡೆದೆರವಿಲ್ಲದ ಕಬ್ಬು ಬಾಳೆ ॥೧೧॥

ಹಲಸು ಮಾವಿನಮರ ನೆಲೆಯೆಲ್ಲ ಬೋರೆಯು
ಹಲವು ಪರಿಮಳದ ಹೂದೋಟ।
ಎಲ್ಲಿ ನೋಡಿದರೆ ರಾಜಾನ್ನ ಬಜಿಯ ಗದ್ದೆ
ಪಲ್ಲೆದೋಟಕೆ ಕಟ್ಟಳಿಲ್ಲ ॥೧೨॥

ಎತ್ತ ನೋಡಿದರೆ ಕಾಲುವೆ ಬಿಡನೀರಿನ
ಅರ್ತಿ ಉನ್ನತದ ಬಾವಿಗಳು।
ಮತ್ತೆ ಭೂಮಿಯನಗುಳಿದರೆ ಗಜಕೆ ನೀರು
ಚಿತ್ರವದೇನ ಪೇಳುವೆನು ॥೧೩॥

ಇಂತಪ್ಪ ಶೃಂಗಾರ ವನದೊಳಗೊಪ್ಪುವ
ಕಂತುಹರನು ಸಿದ್ಧೇಶ್ವರನು।
ಸಂತತ ನಂದಿಕೇಶ್ವರನು ತಾನಿದುರಾಗಿ
ನಿಂತಿಹ ಮಹಿಮೆಯನೇನೆಂಬ ॥೧೪॥

ಗ್ರಾಮಕೆ ಮೂಲಸ್ಥಾವರ ಮಲ್ಲಿಕಾರ್ಜುನ
ಪ್ರೇಮದಿಂದೂರೊಳಗಿಹನು।
ಆ ಮಹಿಮನ ಶಿವಾಲಯದ ಮುಂದಣ ಬಾವಿ
ಈ ಮಹಿಯೊಳಗೆ ಆಶ್ಚರಿಯೋ ॥೧೫॥

ಕಂಡವರು ಬೆದರುವಂದದಲಿ ಭಾವಿಯು
ದ್ದಂಡ ಹಸಿರಿನುದಕಗಳು।
ದಂಡ್ಯಾಗಿ ಜಕ್ಕೇರು ಕಾಳಿಯರಿಹರಲ್ಲಿ
ಮಂಡಳೇಶ್ವರನ ವಾಲಗಕೆ ॥೧೬॥

ಈ ಪರಿ ನಾಗಾವಿ ಪುಣ್ಯತೀರ್ಥವು ನಿಜ
ಪಾಪಹರವು ನಂಬಿದರಿಗೆ।
ಕೋಪ ಕ್ರೋಧವು ತ್ರಿವಿಧವ ಜರಿದವರಿಗೆ
ಆಪದು ಸಾಯೋಜ್ಯ ಪದವು ॥೧೭॥

ಪುರವು ನಾಗಾವಿಯೊಳಿರೆ ನಾಗಿಸೆಟ್ಟಿಯ
ವರಸತಿ ನಾಮ ಕಾಮಮ್ಮ।
ಹರನ ಭಕ್ತರು ಮುಗ್ಧಭಾವದಲಿರುತಿರೆ
ಪರಮಮೂರುತಿ ನೆಲಸಿದನು ॥೧೮॥

ಒಪ್ಪದಿಂದಲಿ ಗುಂಡ ಗರ್ಭದೊಳಿರುತಿರೆ
ತಿಪ್ಪಣಯ್ಯನೆಂಬ ಮಹಿಮ।
ತಪ್ಪದೆ ಶಿವನೇಕ ಮುಖವಿಲ್ಲಿ ಬಹುದೆಂದು
ಇಪ್ಪ ಮಹಿಮೆಯನೇನೆಂಬೆ ॥೧೯॥

ಆತನ ಮಹಿಮೆಯ ಸೂತ್ರವ ಹೇಳಲು
ಭೂತಳದೊಳಗೆ ಸೋಜಿಗವು।
ನೀತಿಮಾರ್ಗ[೯][ನು][೯] ಧರ್ಮಗುಣ ಮಲ್ಲಿಸೆಟ್ಟಿಯೆಂ
ಬಾತನಲ್ಲೀತ ಜನಿಸಿದನು ॥೨೦॥

೯-೯ ವು (ಮೂ)

ಜನಿಸಿದ ಪುತ್ರನು ಅನುವಾಗಿ ಬೆಳೆದನು
ದಿನಕರನಂತೆ ತೇಜದಲಿ।
ಜನನಿ ಜನಕರಾಗ ಸನುಮಾನ ಗುಣ[೧೧][ವಂತ][೧೧]
ತನಯಗೆ ಮದುವೆ ಬೇಕೆನುತ ॥೨೧॥

ಅರಸು ಗ್ರಾಮಕೆ ತಾವು ಹರುಷ ಉನ್ನತದಿಂದ
ನೆರೆ ರಚಿಸಿದರು ಮದುವೆಯ।
ಧರೆಯನಾಳುವನಲ್ಲಿ ಅರಿ[ರ್ತಿ] ಪೇಳುವೆನೆಂದು
ಕರೆದೊಯ್ದರು ಸುನಂದನನ ॥೨೨॥

ಹೋಗಿ ಹೇಳಲಿಕೆಯು ಭಾಗ್ಯಮುಖವ ಕಂಡು
ಆಗೆತ್ತಿಕೊಂಡ ತಾ ರಾಯ।
ಹೋಗಿ ಮದುವೆಗೆಂದು ಬೇಗ ಅರ್ತಿಗಳಿಂದ
ಸಾಗಿಸಿದನು ಉಡುಗೊರೆಯ ॥೨೩॥

ರಾಯ ಪ್ರಿಯದಲಿ ಕಬಾಯವ ಕೊಟ್ಟನು
ಲಾಯದೊಳಗೆ ಕೊಂಡುಹೋಗಿ।
ಆಯಿದುಕೊ ಆಯವಾದ ತೇಜಿಯನೆನೆ
ರಾಯರೇರುವ ತೇಜಿ ಹಿಡಿದ ॥೨೪॥

ಎಡಬಲದವರಾಗ ಬಿಡು ಆ ತೇಜಿಯ ಮತ್ತೆ
ಹಿಡಿದುಕೊ ಮನಬಂದುದೆನಲು।
ಹಿಡಿದ ಕುದುರೆಯನೆ ಕೊಡಿ ಶೃಂಗರಿಸಿ ಬೇಗ
ನುಡಿದು ತಪ್ಪಿದರೇನೆಂದ ॥೨೫॥

ಪಟ್ಟದ ಕುದುರೆಯ ಬಿಟ್ಟು ತಂದರು ಮತ್ತೆ
ಎಷ್ಟೊ ಶೃಂಗಾರ ಮಾಡಿದರು।
ಕೊಟ್ಟು ಕಳುಹುತಲಿ ಸೆಟ್ಟಿ ಸಂಗಾತಕೆ
ಕೊಟ್ಟರು ನೂರಾರಾಳುಗಳ ॥೨೬॥

೧೧-೧೧ ವೆಂದ (ಮೂ)

ಬೆಳಗುಳ್ಳ ಮಹಿಮನ ಒಳಭೇದವರಿಯರು
ಸೆಳೆದನೆಂಬುದಕದು ಕೂನ।
ಕಳೆಯ ಪಟ್ಟಣವೆಲ್ಲ ಅಳಿದು ಹೋಹುದುಯೆಂದು
ಸೆಳೆದನು ಪಟ್ಟದಶ್ವವನು ॥೨೭॥

ತಿರಿಗಿ ಬಂದನು ತನ್ನ ಪುರಗ್ರಾಮದೆಡೆಗಾಗಿ
ಅರಿತಿನಿಂದಲಿ ತೇಜಿಸಹಿತ।
ಧರೆಗೆ ಸೋಜಿಗವಾಗಿ ಪರಿಪರಿ ಸಂಭ್ರಮ
ವಿರಚಿಸಿದರು ಮದುವೆಯನು ॥೨೮॥

ಸಂಭ್ರಮ ಮಾಡ ಹಣ್ಣಿದರು ಮನೆಯೊಳಗೆಲ್ಲ
ಬೆಂಬಳಿವಿಡಿದು ಕೆಲಸವ।
ಇಂಬಾಗಿ ಗೌಲಿ ಪರಡಿ ಸರಳಿಗೆ ಸೇವ
ಗೆಂಬವ ಮಾಡ ಹಣ್ಣಿದರು ॥೨೯॥

ಸತಿಸುತ ಕೋಟಲೆ ಅತಿಶಯವೆಲ್ಲವು
ಹಿತವಾಗದೆಮಗೆ ಎಂದೆನುತ।
ಪ್ರಥವ ನೋಡಿದ ತನ್ನ ಅತಿಶಯ ಜ್ಞಾನದಿ
ವೃಥಾ ಜಲ್ಮವಿದನೊಲ್ಲೆನೆಂದ ॥೩೦॥

ಎಂದ ಮಾತನು ಕೇಳಿ ನಿಂದಿರ ಮದುವೆಯ
ತಂದೆಯೆಂಬ[೧೧][ವ][೧೧] ಗರ್ವದಿಂದ।
ಮಂದಿಯ ಕೂಡಿಸಿ ನಿಬ್ಬಣ ತೆರಳಿಸೇ
ನೆಂದು ಹೋದನು ಮಲ್ಲಿಸೆಟ್ಟಿ ॥೩೧॥

ಅರ್ತಿಯಿಂದಲಿ ತಾನು ನಿಬ್ಬಣಿಗರನಾಗ
ಚಿತ್ರದಿಂದಲಿ ತೆರಳಿಸಿದ।
ಹತ್ತೆಂಟು ಕೊಲ್ಲಾರಿ ಬಂಡಿ ಅಣಸು ಘಂಟೆ
ಎತ್ತಿಗೆ ಉರಗೆಜ್ಜೆ ಚವರ ॥೩೨॥

೧೧-೧೧ ಯ (ಮೂ)

ಏಳು ಹಿಟ್ಟೆಂಟಿಟ್ಟ ಮಾನ್ಯರು ಒಡೆಯರು
ಓಳಿಯೊಳುಳ್ಳ ಸೆಟ್ಟಿಯರು।
ಹೇಳಲೆ ನ್ಯಾಯಕಾರರು ಅಷ್ಟಾದಶ ಕುಲ
ಮೇಳವದೇನ ಪೇಳುವೆನು ॥೩೩॥

ರುದ್ರ[೧೨][ವಾಣಿಜ][೧೨]ರು ಕೈಲಾಸ[೧೩][ವಾಣಿಜ][೧೩]ರೆಲ್ಲ
ತಿದ್ದಿ[೧೪][ದ ಸರಿ][೧೪] ಮಂಡಳಿ ಸಹವಾಗಿ।
ಇದ್ದಂಥ ಕವಿಗಮಕಿಗಳ್ವಾದಿ ವಾಗ್ಮಿಕ
ಮದ್ದಳಿಗರು ತೆರಳಿದರು ॥೩೪॥

ಒಡ್ಡಿಯಿರಾಣೆ ಕೊಳಲು ತಮ್ಮಟೆ ಕಹಳೆ
ನಡೆ ಶಂಖ ಪವನ ಸಾಧಕರು।
ಹಿಡಿವ ಪಂಜವರು ನಾಲ್ಕೆರಡು ಮಂದಿಗಳೆಲ್ಲ
ನಡೆಗೊಂಡರವರು ನಿಬ್ಬಣಕೆ ॥೩೫॥

ಅಕ್ಕಿ ಕಣಕವನು ಲೆಕ್ಕವಿಲ್ಲದೆ ಹೇರಿ
ಚೊಕ್ಕವಾದೆಣ್ಣೆ ತುಪ್ಪವನು।
ಅಕ್ಕೋಜವಾಹ ಸಿದ್ಧಿಕೆ ಬುದ್ದಲಿಯ ತುಂಬಿ
ದೊಕ್ಕನೆಯವ ನಡೆಸಿದರು ॥೩೬॥

ಹಪ್ಪಳ ಸಂಡಿಗೆಗಳು ನೆಲ್ಲಿಯ ಚಟ್ಟು
ಉಪ್ಪಿನಕಾಯಿ ಕಂಬಿಗಳೊ।
ಉಪ್ಪು ಉಳ್ಳಿಯಗಡ್ಡೆ ಮೆಣಸು ಹುಣಸೆಹಣ್ಣು
ತಪ್ಪದೆಯವ ನಡೆಸಿದರು ॥೩೭॥

ಅಡಿಗಡಿಗೆ ವೀಳೆಯವನು ನಿಬ್ಬಣಕೆಲ್ಲ
ಕೊಡುವೆಂದು ತಾನು ತಹಿಮಾಡಿ।
ಪಿಡಿದ ಸತ್ತಿಗೆಯ ನಾಯಕರು ಕುದುರೆ ಮಂದಿ
ಎಡಬಲದಲಿ ಸಾಲಾಗಿ ॥೩೮॥

೧೨–೧೨ ವೇಣ್ಯವ (ಮೂ) ೧೩–೧೩ ವೇಣ್ಯವ (ಮೂ) ೧೪–೧೪ ದಶರ (ಮೂ)

ಮುಂದೆ ಸೀಗುರಿ ತಳೆ ಹಿಂದೆ ಮದುವಣಿಗ ತಾ
ನೊಂದು ಕುದುರೆಯನೇರಿಕೊಂಡು।
ಛಂದದ ಸತ್ತಿಗೆ ಚೌರವ ಢಾಳಿಸುತಾಗ
ಬಂದರು ಗೃಹ ಪೊರವೊಂಟು ॥೩೯॥

ಪಳಿ ಪಟ್ಟಾವಳಿ ನಾಣ್ಯ ದೇವಾಂಗಗಳನುಟ್ಟು
ಹೊಳೆವುತಾಭರಣ ಮುತ್ತಿನಲಿ।
ಎಳೆಯ ಪ್ರಾಯದ ಐದೆಯರು ಬಂಡಿಯನೇರಿ
ನಳನಳಿಸುತಲಿ ಪಾಡುತಲಿ ॥೪೦॥

ಕಂಚಕ್ಕಿ ಕಳಸಾರತಿಯ ಪಿಡಿದುಕೊಂಡು
ಸಂಚಲಿಲ್ಲದಲಿ ಪಾಡುತಲಿ।
ಹಿಂಚು ಮುಂಚಾಗದಡಿಯನಿಡುತಲಾಗ
ರಂಚು ಹಮ್ಮಿದ ಆನೆಯಂತೆ ॥೪೧॥

ಊರಹೊರಗೆ ಬಂದು ಭೋರನೆ ತೆರಳಿತು
ಚೀರುತ ವಾದ್ಯ ರಭಸದಲಿ।
ಕರದ ಚಮ್ಮಟಿಗೆಯ ಬರಸೆಳೆದೊಯ್ದನು
ಹರಿದು ಹೋದನು ಮದವಣಿಗ ॥೪೨॥

ಬಂದ ನಿಬ್ಬಣವೆಲ್ಲ ಹಿಂದೆ ಹತ್ತಿದರಾಗ
ಮುಂದಕೆ ಹೋದನೆಂದೆನುತ।
ಕುಂದುಗುದುರೆಗೆ ತಾ ನಿಂದಿರ ನಿಲುಕನು
ಬಂದು ಹೊಕ್ಕನಡವಿಯನು ॥೪೩॥

ಬರಿದೆ ಬಳಲಿತೆಲ್ಲ ಹರಿದು ಕುದುರಿ ಮಂದಿ
ನರೆದರೆಲ್ಲರು ಹೋದನೆನುತ।
ಹಿರಿದು ವೃದ್ಧನೊಬ್ಬ ಪರೀಕ್ಷಿಸಿ ಕೇಳಿದ
ತೆರನೇನು ಮುನಿದ ಕ್ರಮಗಳು ॥೪೪॥

ಅಲ್ಲಿ ಹೇಳಿದನಾಗ ಮಲ್ಲಿಸೆಟ್ಟಿಯು ತಾನು
ಒಲ್ಲೆನೆಂದನು ಮದುವೆಯನು।

ಎಲ್ಲಿಯ ಸತಿ ಸಾಕು ಒಲ್ಲೆನೆಂದೆನಲಿಕೆ
ಬಲ್ಲಿದ ಪರಿಯ ಸಾಗಿಸಿದೆ ॥೪೫॥

ಕಿರಿಯನಾದರೆ ಏನು ಅರಿಕೆ ಜ್ಞಾನದ ಮಾತು
ಪರೀಕ್ಷಿಸಿ ನೋಡಿದರಹುದು।
ಹಿರಿಯ ನಾಗಲಿಕಾದೆ ಅರಿವು ಬುದ್ಧಿಯನೇನು
ನರವಾಹನದೊಳಿದ್ದರಿರುವ ॥೪೬॥

ಬುದ್ಧಿಯ ಬಲ್ಲರೆ ಎದ್ದುಹೋಹನೆ ಮಗ
ಇದ್ದುಕಾವನು ಸುಖದಿಂದ।
ಬುದ್ಧಿವಂತರು ನೀವು ಇದ್ದಿರಿ ಹಿರಿಯರು
ಬುದ್ಧಿ ಇನ್ನೇನಿದಕೆಂದ ॥೪೭॥

ಉತ್ತಮ ತೇಜಿ ತಾ ಚಿತ್ರದಲು ಹೋಯಿತು
ಮತ್ತುಳ್ಳುದಾದ ಕುದುರೆಗೆ।
ಹತ್ತೆಲಿದ್ದರೆ ಸಿಕ್ಕ ವ್ಯರ್ಥ ಹೋದರೆ ಎಲ್ಲ
ಮತ್ತೆ ಬುದ್ಧಿಗಳ ಕೇಳೆಂದ ॥೪೮॥

ಇಷ್ಟು ಪರಿವಾರ ಕಷ್ಟಬಟ್ಟರೆ ಸಿಕ್ಕ
ನಷ್ಟವಾಗಲಿ ಬೇಡ ನಿಲ್ಲಿ।
ಘಟ್ಟವ ಹೊಕ್ಕರೆ ದೃಷ್ಟಿಗೆ ಬೀಳನು
ಅಷ್ಟರಿಂದೇನು ಮಾಡುವಿರಿ ॥೪೯॥

ಎಲ್ಲ ಪರಿವಾರ ನಿಲ್ಲಿ ಪೌಜನಮಾಡಿ
ಅಲ್ಲ್ಯಾತ ಕಾಬ ಅಂದದಲಿ।
ಮೆಲ್ಲನೊಬ್ಬನೆ ಹೋಗಲ್ಲೊಡಂಬಡಿಸಿ ತಾ
ನಿಲ್ಲಿಗೆ ಕರೆತಾಹೆನೆಂದ ॥೫೦॥

ಸಾಗಿಸಿ ಕಳಿಹಿದರಾಗ ಹಿರಿಯನನು
ಬೇಗ ಕುದುರಿಯನೇರಿಸಿಯೆ।
ಹೋಗ ಹೋಗಲಿಕಲ್ಲಿ ಆಗ ದೃಷ್ಟಿಗೆ ಬಿದ್ದು
ಹೋಗುತಿರ್ದನು ಮುಂದೆ ಮುಂದೆ ॥೫೧॥

ಅದಕೆ ಬುದ್ಧಿಯ ಮಾಡಿ ಕುದುರೆಯನಿಳಿದನು
ಇದು ಅಲ್ಲದಾತ ನಿಂದಿರನು।
ಕುದುರೆಯ ಹಿಡಕೊಂಡು ಮುದದಿಂದ ನಡೆದನು
ಅದ ಕಂಡ ಹಿಂದೆ ನೋಡುತಲಿ ॥೫೨॥

ಹಿಡಿದು ಕುದುರೆಯನು ನಡೆದುಬಂದನು ಹಿರಿಯ
ನುಡಿಸದೋಹುದು ಕ್ರಮವಲ್ಲ।
ದಡನೆ ಇಳಿದು ತಾನು ನಡೆತಂದಿದಿರಾಗಿ
ಕಡು ಬಳಲಿದಿರಿದೇನೆಂದ ॥೫೩॥

ಏನ ಮಾಡುವೆವಯ್ಯ ನೀನೆ ಬಳಲಿಸಿ ನಮ್ಮ
ನಾನಾ ವಿಧಿಯನುಣುಸಲಿಕೆ।
ಮೋನದಿಂದಲಿ ತೇಜಿ ನೀ ಮುಂದೋಡಿಸಲಾಗ
ಏನ ಹೇಳುವೆವನವಲಿಯ ॥೫೪॥

ದುರುಳ ನೀ ನಡವೊಳು ತೆರಳಿ ಬಂದ್ಯೆ ಒಬ್ಬ
ಸರಳ ಬಿಟ್ಟಂತೆ ಓಡಿಸುತ।
ತರಳತನದಿ ಹೋಗಿ ಸರಿದು ಬಿದ್ದಾನೆಂದು
ಕರ ಬಳಲಿದೆವು ನಾವೆಂದ ॥೫೫॥

ಕಡು ಬುದ್ಧಿವಂತನಾದೆ ನಡೆ ಹೋಹ ತಿರುಗೆಂದು
ಹಿಡಿದ ಕುದುರೆಯ ತಕ್ಕೊಂಡ।
ನುಡಿಯನೊಂದನೆ ಕೇಳು ಮಾಡಬೇಡ ಮದುವೆಯ
ನಡೆ ಬಂದೆ ಕೈಕೊಂಡರೆಂದ ॥೫೬॥

ಒಲ್ಲೆನೆಂಬಯ ಮಾತ ಅಲ್ಲೆ ಹೇಳಿದರಾಗ
ನಿಲ್ಲದಿದ್ದೆವೆ ನಾವು ಈಗ।
ಇಲ್ಲಿತನಕ ಬಂದು ಒಲ್ಲೆನೆಂಬಯ ಮಾತು
ಸಲ್ಲದು ಸಾಕು ನಡೆಯೆನಲು ॥೫೭॥

ಒಲ್ಲೆನೆಂಬಯ ಮಾತಅಲ್ಲೆ ಹೇಳಿದೆ ನಾನು
ಮಲ್ಲಿಸೆಟ್ಟಿಯ: ಒಳಗೆಂದ।

ಬಲ್ಲಿದ ಪರಿಯಲಿ ನಿಲ್ಲದೆ ತೆರಳಿದ
ರಿಲ್ಲಿಗೆ ನಾ ಬಂದೆನೆಂದ ॥೫೮॥

ಬೇಡವೆಂದರಿನ್ನು ಮಾಡೆವು ಮದುವೆಯ
ನಡೆ ಅಡವಿಯೊಳಿದೇನೆಂದ।
ಬಡಗುದುರೇರಿಸಿ ನಡೆಯೆಂದ ಹಿರಿಯನು
ಹಿಡಿದು ತಾ ತೇಜಿ ಏರಿದನು ॥೫೯॥

ಬಂದು ಕೂಡಿದರಾಗ ನಿಂದ ನಿಬ್ಬಣದೊಳು
ಕುಂದದಲ್ಯದೇಳಲಿಕೆ।
ಇಂದು ತನ್ನಿಚ್ಛೆಯಲಿ ನಿಂದೆನೆ ಎನುತಲಿ
ತಂದೇರಿಸಿದರು ಪಲ್ಲಕ್ಕಿಯ ॥೬೦॥

ಹರುಷದಿಂದಲಿ ಪಲ್ಲಕ್ಕಿಯನೇರಿಸಿದರು
ಪರುಷಮೂರುತಿ ತಿಪ್ಪಣ್ಣಯ್ಯನ।
ತರಳತನವ ಬಿಟ್ಟು ಸುಮ್ಮನಿರೆನುತಲಿ
ತೆರಳಿಸಿದರು ನಿಬ್ಬಣವನು ॥೬೧॥

ಹರುಷದಲಲ್ಲಿಂದ ತೆರಳಿ ಬಂದರು ಮತ್ತೆ
ಪುರ ಬಳ್ಳವಾ [೧೫][ಡಿ][೧೫] ಸನ್ನಿಧಿಗೆ।
ಅರಿಯದಂಥವರೆಲ್ಲ ಯಾರ ದಂಡೆನುತಲಿ
ಏರಿಕೊಂಡರು ಮಾಳಿಗೆಗಳ ॥೬೨॥

ಘೀಳಿಡುತಲಿ ಬಂದು ನಿಬ್ಬಣಿಗರೆಲ್ಲ
ಇಳಿದೂರ ಮುಂದೆ ಪ್ರೇಮದಲಿ।
ಹೇಳಿ ಕಳುಹಿದರೂರೊಳಿಯಕೆ ಬೇಗದಿ
ಕೇಳಿ ಬಂದನು ಬೀಗ ತಾನು ॥೬೩॥

ಅಂಬಲಿಯ ಭಾಂಡ್ಯ ಹಲವು ಉಪ್ಪಿನಕಾಯಿ
ಎಂಬವ ತಂದಿಳಿಹಿದನು।

೧೫-೧೫ ಡಿಗೆ (ಮೂ)

ಕೊಂಬವರೇಳಿ ಬಳಲಿದಿರಿ ಬಿಸಿಲಿಲೆಂದು
ಯೆಂಬನುಸರಣೆಯಾಡಿದನು ||೬೪||

ಹಾಕಿದರವರು ಕುಳ್ಳಿರಲಿಕೆ ಬೀಗಗೆ
ಏಕೆ ನಿಂದಿರಿ ಕುಳ್ಳಿರೆನಲು।
ಆ ಕಡೆ ಕೆಲಸ ಹೋಗಬೇಕು ಎನುತಲಿ
ವಾಕನಾಡುತ ತೆರಳಿದನು ||೬೫||

ಕೊಟ್ಟರವರು ಬಂದವರಿಗೆ ವೀಳ್ಯಯಗಳ
ತಟ್ಟನೆ ತಿರಿಗಿ ಬಂದಾತ।
ಅಷ್ಟು ಮಂದಿಗೆ ಹೊರಸು ಜನ್ನಿವಾಸಮನೆ
ಇಟ್ಟರು ನೀರ ಹರವಿಯ ||೬೬||

ಊರಿಗೆ ಉಳ್ಳ ಸೆಟ್ಟಿ ಚೌದರಿಗಳ
ನೆರಹಿಕೊಂಡನು ಬೇಗದಿಂದ।
ಕರೆತಂ[೧೬][ದ][೧೬]ನಿದಿರುಗೊಂಡು ನಿಬ್ಬಣವನೆಂದು
ಕರೆಸಿದ ವಾದ್ಯದವರನು ||೬೭||

ಹಮ್ಮಾಗಿದಿರುಗೊಂಡು ನಿಬ್ಬಣವ ತಾವು
ತಮ್ಮಯ ಭಾರಣದಿಂದ।
ಪ್ರೇಮದಿಂದಲಿ ವೀಳ್ಯವ ನಡೆಸಿದರಾಗ
ನಾಮವುಳ್ಳ ಬೀಗ ಬೀಯಗರು ||೬೮||

ಬಂದರು ಜನ್ನಿವಾಸದ ಮನೆಯೆಡೆಗಾಗ
ಮಂದಿ ನಿಬ್ಬಣ ಮೆರೆಯುತಲಿ।
ಇಂದಿನ ದಿನವಿಲ್ಲ ನಾಳೆ ಲಗುನವಿದೆ
ಯೆಂದು ಮಾತಾಡಿದರಾಗ ||೬೯||

ಉಂಡುಟ್ಟು ಸುಖದಲ್ಲಿದ್ದು ಮರುದಿವಸವ
ಕಂಡು ಲಗುನದ ಸಂಭ್ರಮವ।

೧೬–೧೬ ಬ (ಮೂ)

ದಂಡ್ಯಾಗಿ ಮಾಡಿ ಮೆರೆಯುತ ತೆರಳಿದರಾಗ
ಕಂಡವರಾಶ್ಚರ್ಯದಂತೆ ॥೭೦॥

ಪಟ್ಟಾವಳಿಯ ಸೀರೆ ಕುಪ್ಪಸ ಮೊದಲಾಗಿ
ಇಟ್ಟೆವೆಂದೆಂಬ ಆಭರಣ।
ಪಟ್ಟಿಗೆ ಕುಪ್ಪು ವಾಲೆಯು ಹೊನ್ನಸರಿಗೆಯು
ಅಷ್ಟಧಾರೆಯ ಎಣ್ಣೆನೂಲು ॥೭೧॥

ಮುತ್ತಿನ ಚಳಕಿ ಸರವು ಗಿಲಿಬಿಲಿಗೆಲ್ಲ
ತೆತ್ತಿಸಿ ಹೊನ್ನ ಮಣಿಗಳು।
ಮತ್ತೊಳೆ ಕೈಕಟ್ಟು ಕಡಗ ದೋರೆಯ ಹೊನ್ನ
ಒತ್ತು ಎರಡು ಕೈಗಳಿಗೆ ॥೭೨॥

ಕಾಲಕಡಗ ಕಾಲಂದುಗೆ ಪಿಲ್ಲೆ ಮೊದಲಾಗಿ
ಕಾಲವುಂಗುರವು ಬೆಳ್ಳಿಯವು।
ಮೇಲಪ್ಪ ವೀರಮುದ್ರೆಯು ಗುಬ್ಬಿಮೆಟ್ಟಿಗೆ
ಸಾಲುಡುಗೊರೆ ಕಟ್ಟಳಿಲ್ಲ ॥೭೩॥

ಉಡಕಿಗೆ ಜೀರಿಗೆ ಮೆಣಸು ಬೆಲ್ಲದ ಅಚ್ಚು
ಅಡಕೆ ಕೊಬ್ಬರಿ ಅರಿಷಿಣವು।
ಕಡು ಚೊಕ್ಕ ಉಪ್ಪು ತುಂಬಿದ ತೋಡು ಕರಿಮಣಿ
ಎಡೆದೆರಹಿಲ್ಲದಲಿ ಸಾಗಿದವು ॥೭೪॥

ಸರಳಿಗೆ ಸ್ಯಾವಿಗೆ ಪರಡಿ ಗೌಲಿಗಳು
ಜಿರಿ ಸಾಲಕ್ಕಿ ಬೇಳೆಯನು।
ಮೆರೆಸುತಲೊಯ್ಯಲು ಪರಿಪರಿಯುಡೆಕ್ಕಿಯ
ನೆರೆ ತಂದಿರಿಸಿದರು ಬಾಸಿಂಗವ ॥೭೫॥

ಕಟ್ಟಿ ಬಾಸಿಂಗವ ಕೊಟ್ಟರೀಳೆವ ತಿಪ್ಪಿ
ಸೆಟ್ಟಿಯ ಕೈ[ಯ್ಗೆ] ಮತ್ತವರು।
ನೆಟ್ಟನೆ ಕುದುರೆಯನಿಳಿಹಿಕೊಂಡೊಯ್ದರು
ಸೆಟ್ಟಿಗಳನು ಸಹವಾಗಿ ॥೭೬॥

ಚೊಕ್ಕನಾಭರಣವ ಇಕ್ಕಿದರವರು ಕ
ನ್ನಿಕೆಗೆ ಬೇಗ ಅರ್ತಿಯಲಿ।
ಇಕ್ಕಬೇಕಿನ್ನು ಶಾಸಿಯ ವೇಳೆಯಾಯಿತೆಂದು
ದೊಕ್ಕನೆ ಕರೆದು ಕುಳ್ಳಿರಿಸಿ ॥೭೭॥

ಮುಂದೆ ಶಾಸಿಯ ಮಾಡಿ ಹಂದರವೀಳ್ಯವ
ಚಂದದಿಂದಲಿ ನಡೆಸಿದರು।
ಬಂದಂಥ ನಾಗವಾಸವನೆಲ್ಲ ಸಂತೈಸಿ
ನಿಂದಿರ್ದರೆರಡು ದಿವಸವು ॥೭೮॥

ಉಂಡು ತೆರಳುವ ವೇಳೆಯದಲುಡುಗೊರೆ
ದಂಡ್ಯಾಗಿ ಎತ್ತಿದರವರು।
ಕೊಂಡುಬಂದು ಮನೆಯನೆ ತುಂಬಿಸೆನುತಲಿ
ದಂಡಿನಂದದಿ ತಿರುಗಿದರು ॥೭೯॥

ಇವರು ಬಂದಂದದಿ ಅವರು ಬಂದರು ಮತ್ತೆ
ಹವಣಿಸಲಳವಲ್ಲದಂತೆ।
ಭುವನದೊಳಗೆ ಹಸರೆನಿಸಿ ಮನೆಯ ತುಂಬಿ
ಸ್ಯವರು ಹೋದರರುತಿಯಲಿ ॥೮೦॥

ಮದುವೆಯಾಗಿ ಹಲವು ದಿನವಿರುತಲಿ
ಮದನಾರಿಯ ಭಕ್ತ ತಾನು।
ಹದುಳಹೋಗದು ಹೆಣ್ಣು ಹೊನ್ನು ಮಣ್ಣಿನಾ ಭ್ರಮೆಂ
ದದನೊರೆದನು ಮನದೊಳಗೆ ॥೮೧॥

ಸಿರಿ ಸ್ಥಿರವಲ್ಲ ನಾರಿಯರೆಂತು ಸ್ಥಿರವಲ್ಲ
ಊರ್ವಿಯೊಳಗಿರಲಿಲ್ಲ
ಶರೀರ ಪ್ರಾಣವ ಹರಗೊಪ್ಪಿಸುವೆನೆಂದು
ಪರೀಕ್ಷಿಸಿದನು ಮನದೊಳಗೆ ॥೮೨॥

ಮಡದಿ ಮಕ್ಕಳು ಬಾರರೆಂತು ಸಂಗಾತಲಿ
ವಿಡಿದ ಧನವು ಬರಲಿಲ್ಲ।

ಪೊಡವಿಯೊಂದಿಗೆ ಬರಲರಿಯದಿವನಿನ್ನು
ಬಿಡುವೆನೆಂದನು ಮನವೊಲಿದು ॥೮೩॥

ಇಟ್ಟ ಹೊನ್ನುಂಗುರ ಕಟ್ಟಿದ ಉಡುವಣಿ
ಕಟುಕು ಕಡಗ ಕಂಠಮಾಲೆ।
ಸೆಟ್ಟಿತನದ ಪೊ[೧೭][ಂ][೧೭]ಗು ಪದಕ ಲೇವಳಗಳ
ಬಿಟ್ಟು ಬಿಸುಟ ಮನೆಯೊಳಗೆ ॥೮೪॥

ಹಲುಗಡ್ಡಿ ಶಿವದಾರ ಹಲವಾಭರಣವ
ಒಲ್ಲೆನೆಂದು ಕಡೆಗೆ ಹಾಕಿದನು।
ಬಲ್ಲಿದ ಪರಿಯ ರಾಜದ್ರವ್ಯಗಳಿವು
ಸಲ್ಲದು ಶಿವಪಥಕೆಯೆಂದ ॥೮೫॥

ಉಟ್ಟ ತಡಪು ಕಟ್ಟಿ ಇದ್ದಂಥ ನಡಕಟ್ಟು
ತೊಟ್ಟಿದ್ದ ಜೋಡಂಗಿಯನು।
ನಿಟ್ಟುಪ್ರಾಕಳೆಯ ಪಟ್ಟೆದ ಹಚ್ಚಡ
ಬಿಟ್ಟು ಬಿಸುಟ ಮನೆಯೊಳಗೆ ॥೮೬॥

ಅರಿವೆಯನುಟ್ಟು ಕೋರಿಯ ಹೊದ್ದೂರೊಳು
ಯಾರು ಕೇಳಿದರೆ ಸುದ್ದಿಯನು।
ಸೂರೆಯ ಮಾಡಿ ಸುಲಿದುಕೊಂಡರೆನುತಲಿ
ವಾರತಿಯನೆ ಹೇಳುತಿಹನು ॥೮೭॥

ಕಟ್ಟಿಗೆಯ ಹೊರೆಯ ತಂದಿಟ್ಟು ತಾ ಊರೊಳು
ಎಷ್ಟಕೆ ಕೊಂಡಿರೆಂದೆಂಬ।
ಎಷ್ಟನಾಡಿದರರ್ಧ ರೊಕ್ಕವ ಕೊಂಡು ತಾ
ನಿಷ್ಠೆಯಿಂದಲಿರುತಿರಲು ॥೮೮॥

ತಂದೆತಾಯಿಯು ಬಂದು ಕಂದ ನೀ ಹುಟ್ಟೊಬ್ಬ
ತಂದೆಪಕೀರ್ತಿ ಬಾಳುವೆಗೆ।

೧೭-೧೭ (ಮೂ)

ಕುಂದಮಾಡಿದೆ ನಮ್ಮ ಹೆಸರಿಗೂನ್ಯವಾಯಿ
ತೆಂದು ಪಿಡಿದರು ಕಾಲುಗಳ ॥೮೯॥

ಎಲ್ಲಿಯ ತಾಯಿ ಎಲ್ಲಿಯ ತಂದೆ ನೀವು ಮ
ತ್ತೆಲ್ಲಿಯ ಪುತ್ರನಾನೆಂದು।
ಇಲ್ಲಿ ಬಂದರೆ ತಂದೆತಾಯಿಯರಾದಿರಿ ಹಿಂ
ದೆಲ್ಲೆಲ್ಲಿ ಜನಿಸಿರ್ದವೆಂದ ॥೯೦॥

ತಂದೆ ತಾಯಿಗಳೆಂದು ಹೊಂದಿ ಬಂದುದಕೆ ನಾ
ವೆಂದೆವಲ್ಲದೆ ಎನ್ನೆವಯ್ಯ।
ಮುಂದೆಯೆಂದರೆ ನೀನು ಕುಂದು ಹೊರಿಸುವಂತೆ
ಬಂದುಂಡು ಇರು ಸುಖದಿಂದ ॥೯೧॥

ಎಲ್ಲಿಯಾದರೆ ಉಂಬೆ ಒಲ್ಲೆ ನಾನಿನ್ನು ನಿ
ಮ್ಮಲ್ಲಿ ಉಣಲಿಬಾರದೆನಲು।
ಇಲ್ಲಿತನಕವು ಉಂಡು ಬೆಳೆದು ಮತ್ತಿಂದೀಗ
ಒಲ್ಲೆನೆಂಬುದಿದೇನೆನಲು ॥೯೨॥

ಅರಸುತನದ ದ್ರವ್ಯ ಊರ ಬಿರಾಡಕೆ
ದೊರೆ ಬಡವಿಗೆ ಪನ್ನಮಾಡಿ।
ಕೋರಕೊಂಬಲ್ಲೊತ್ತಿ ಅಳಕೊಂಡು ಕಡ್ಡಾಯ
ಧಾರಣಿಗಳ ಹೆಚ್ಚ ಕಟ್ಟಿ ॥೯೩॥

ಇಂತಪ್ಪ ಗಳಿಕೆಯನೆಂತುಣಬಹುದಯ್ಯ
ಅಂತನಾಚಾರದೊಡವೆಯ।
ಕಂತುಹರನ ಭಕ್ತರುಂಡರೆ ಮುಂದೆ ನಿ
ಶ್ಚಿಂತ ಹರನು ಒಪ್ಪನೆಂದ ॥೯೪॥

ಇಂದು ನೀನೊಲ್ಲದೆ ಕುಂದು ಹೊರಸಿ ನಮ್ಮ
ಹಿಂದುಗಳೆದು ಹೋಗುಬಹುದೆ।
ಹಿಂದಕ್ಕೆ ಹೇಗುಂಡೆ ಇನ್ನೊಲ್ಲೆನೆಂದರೆ
ಮುಂದೆ ಬಿಡುವೆನೆ ನಾನೆಂದ ॥೯೫॥

ಬಾಲತನದೊಳಿರ್ದು ಹೇಲೊಳು ಹೊರಳುತ
ಲೀಲೆಯಿಂದಲಾಡುತಿಹುದು।
ಬಾಲತನಕೆ ಮೀರಿ ಮೇಲೆ ಯೌವನನಾಗೆ
ಹೇಲ ಕಂಡರೆ ಹೇಸದಿಹರೆ ॥೯೬॥

ಶಿಶುಬುದ್ಧಿಗಲಿತದು ಕಸಮಳ ಕಾಣುತ
ಹೇಸಿ ಕಡೆಗೆ ತೊಲಗಲಿಕೆ।
ಈಸು ದಿನವೂ ಕಸಮಳದೊಳಗಿದ್ದ ನೀ
ಹೇಸಬೇಡಿಂದೆನಬಹುದೆ ॥೯೭॥

ಹಿರಿಯ ನೀನಾಗಿಂದು ಅರಿತು ಹೇಲೆಂದೀಗ
ಜರೆದು ಬಿಟ್ಟೆಯ್ಯ ಅದಕೇನು।
ಕಿರಿಯರು ನಾವು ಅಹುದೆ ಹೇಲ ಒಳಗಿವೆ
ಹಿರಿಯ ನೀ ಇದ ಹೇಳು ಎಂದ ॥೯೮॥

ಹಿರಿಯರು ನೀವು ಕಿರಿಯರೆಂಬವರೆ ನಾವು
ಹಿರಿಯರು ಜ್ಞಾನವುಳ್ಳವರು।
ನೆರೆ ಈಸು ದಿನ ಹೇಗೆ ಉಂಡೆಂದರುಪ ಸಾಕ್ಷಿ
ತೆರನ ಪೇಳಿದೆವು ನಾವೆಂದ ॥೯೯॥

ಒಪ್ಪವ ಮಾಡಿದಾಗಳೆ ಆಡಿದ ಮಾತ
ತಪ್ಪಿಸಿಕೊಂಡೆ ಎಂದೆನಲು।
ತಪ್ಪಲಾಡಿನ್ನು ತಪ್ಪಿಸಿಕೊಂಡರದು ಹೀನ
ಸರ್ಪಭೂಷಣ ಮೆಚ್ಚನೆಂದ ॥೧೦೦॥

ಕಿರಿಯ ನೀ ನಮಗಿಂದ ಹಿರಿಯತನದ ಮಾತ
ಅರಿಕೆ ಜ್ಞಾನದಲಾಡುತಿರುತ।
ಬರಿದೆ ಕಟ್ಟಿಗೆ ಕಂಟಿ ಹೊರೆಯನೆ ಹೊತ್ತುತಂದು
ಕರ ಬಳಲುವ ಮರುಳುಂಟೆ ॥೧೦೧॥

ರಾಯತನವ ಬಿಟ್ಟು ಆಯ್ದು ನೀ ಕಟ್ಟಿಗೆ
ಕಾಯ ಕೃಷಿಯದಿಂದ ಗಳಿಸಿ।

ಮಾಯಕೋಳಾಹಳಗರ್ಪಿಸಿ ಸಲಿಸುತ
ಛಾಯಗುಂದದ ಮುನ್ನ ಇರರೆ ॥೧೦೨॥

ಹಿಂದಾದ ಸುದ್ದಿಯ ಕಂದೇನ ಬಲ್ಲೆಯ್ಯ
ಇಂದು ನೀನಿನ್ನು ಬಾಲಕನು।
ಒಂದೊಂದು ಸಾಕ್ಷಿಯನಾಡಿ ತೋರಿಸಿ ನಮ್ಮ
ಹಿಂದುಗಳೆದು ಹೋಗಬೇಡ ॥೧೦೩॥

ನನ್ನ ಹಂಬಲ ನೀವು ಇನ್ನು ಬಿಡೆಂದನು
ಪನ್ನಂಗಧರನಾಣೆ ನಿಲ್ಲೆ।
ಚೆನ್ನಾಗಿ ಹರನ ಸೋಹಗಳಲ್ಲದನ್ಯಕೆ
ಇನ್ನು ಹೋಗೆನೆಂದ ಶರಣ ॥೧೦೪॥

ದೊಕ್ಕನಾಣೆಯನಿಟ್ಟು ಧಿಕ್ಕರಿಸೋಪುದು
ಅಕ್ರಮವಿದು ಬೇಡವೆನುತ।
ಕಕ್ಕುಲತೆಯ ಬಡುತಿವೆ ಮಗನೆನುತಲಿ
ಉಕ್ಕಿ ಹೋಗಲಿಬೇಡವಯ್ಯ ॥೧೦೫॥

ಬೇಡವೆಂಬಯ ಮಾತನಾಡ ಬಲ್ಲೆಲ್ಲದೆ
ನೋಡಿ ತಿಳಿಯಲರಿಯೆಂದ।
ರೂಢಿಗೀಶ್ವರನಾಣೆ ಇಟ್ಟಿರಬಲ್ಲೆವೆ
ಬೇಡ ಹಂಬಲು ಎಂದನಾಗ ॥೧೦೬॥

ಮಗನು ಎಂದೆನುತಲಿ ಬಗೆದುಕೊಂಡಿರಬೇಡ
ಜಗದೊಳಗಣ ಜೀವವೆಂದು।
ಬಗೆದು ಭಾವದೊಳು ನೀ ಹೋಗೆಂದು ಕಳುಹಯ್ಯಾ
ನಗುತ ಸಂತೋಷದಿಂದೆಂದ ॥೧೦೭॥

ತಂದೆ ತಾಯಿಗಳಲ್ಲ ಕಂದ ನಾ ನಿಮಗಲ್ಲ
ವೆಂದು ಜರೆದು ಕಾಯಿಬೇಗ।
ಕಂದದೆ ಕುಂದದೆ ಇಂದು ನೀ ಜರಿದೆನ್ನ
ನೆಂದು ತಾ ಶರಣೆಂದ ಶರಣ ॥೧೦೮॥

ಎಷ್ಟನೆಂದರೆ ನಿನ್ನದೃಷ್ಟ ತಪ್ಪದು ಹೋಗು
ಇಷ್ಟರಿಂದೇನ ಮಾಡುವೆವು।
ಕಷ್ಟವೆ ಕೈದಟ್ಟಿತಲ್ಲದೆ ಬುದ್ಧಿಯ ಕೇಳೆ
ಇಷ್ಟರಿಂದಲಿ ಪಾರ ೧೯[ಬುದ್ಧಿ]೧೯ ॥೧೦೯॥

ತಪ್ಪದು ಸಹಜ ಪೂರ್ವದ ಕರ್ಮಶೇಷವು
ಒಪ್ಪದಿಂದಲುಣಿಸುವುದು।
ಸರ್ಪಭೂಷಣನರ್ಚನೆಯ ಮಾಡಿದ ಫಲ
ತಪ್ಪದು ಭವಭವಂಗಳಲಿ ॥೧೧೦॥

ತೊಲಗಿ ಹೋಹುದು ಸಹಜ ಹಲವು ಜಲ್ಮದ ಪಾಪ
ಮಲಹರನಾರ್ಚನೆಯಿಂದ।
ಬಾಲೆ ಕನ್ನೆಯ ಲಖುಮಾಯ ಪೂರ್ವದ ಕರ್ಮ
ತೊಲಗಿ ಹೋಗದೆ ಜಗವರಿಯೆ ॥೧೧೧॥

ಮಾತಿಗೆ ಮಾತನಾಡಿದರೆಷ್ಟಾದರುಂಟು
ಯಾತರ ಮಾತೆಂದರವರು।
ರೀತಿಯ ಕೇಳೆ ನಮ್ಮಯ ನುಡಿ ಬಿಸುಟೆಂದು
ಸೋತು ಹೋದರು ತಾಯಿತಂದೆ ॥೧೧೨॥

ತೊರೆದನು ತಾಯಿತಂದೆಂಬ ಹಂಬಲನಾಗ
ಜರೆದನು ಮನೆಮಾರು ಬದುಕ।
ಅಱಿತನು ಹರ ತಂದೆ ಗಿರಿಜೆ ತಾಯೆಂಬುದ
ಪರಮಭಕ್ತನು ತಿಪ್ಪಣ್ಣಯ್ಯ ॥೧೧೩॥

ಶಿವನ ಸೋಹಗಳದಾವದನು ಮಾಡುವೆನೆಂದು
ಹವಣಿಸಿದನು ಮನದೊಳಗೆ।
ಶಿವಶರಣರು ಭುವನದೊಳು [ಬ]ಹರು ಇನ್ನು
ಸವುರಿಸುವೆನು ಹಾದಿಗಳನು ॥೧೧೪॥

೧೯-೧೯ ಬುದ್ಧಾ (ಮೂ)

ಒಂದು ಹೆಡಿಗೆ ಒಂದು ಗುದ್ದಳೆ ಕುರುಪಿ ಮ
ತ್ತೊಂದು ಸಲಿಕೆ ತನ್ನ ಕೈಯ।
ಒಂದೊಂದು ಪರಿ ಹಾದಿಬೀದಿಯ ಸವರುತ
ಬಂದುಂಡು ಇಹ ಊರೊಳಗೆ ॥೧೧೫॥

ನಡೆವ ಮಾರ್ಗದ ತಗ್ಗು ತೆವರ ಸವನಮಾಡಿ
ಎಡವುಗಲ್ಲುಗಳ ಕೀಳುವನು।
ಒಡದ ಕೆರೆಗೆ ಮಣ್ಣ ತಡೆಯದೆ ಹಾಕುವ
ಗಿಡವ ಕಂಡರೆ ಸವುರಿಸುವ ॥೧೧೬॥

ಮರವ ಕಂಡರೆ ಕಟ್ಟೆಯನೆ ಕಟ್ಟಿ ನೀರ ಮ
ತ್ತೆರೆದು ಸೌರಣೆಮಾಡುವನು।
ಜರಿದ ಶಿವಾಲ್ಯದ ಕಲ್ಲ ಕಂಡರದ
ಸರ್ವ ಪರಿಯಿಂದ ಕಟ್ಟುವನು ॥೧೧೭॥

ಹೂಳಿದ ಬಾವಿಯನಗುಳಿ ತೆಗೆದು ಮಣ್ಣ
[ಜುಳು]ಕಿದ ಬಾವಿಕಟ್ಟೆಯನು।
ಬೀಳಗುಡದ ಹಾಗೆ ಕಟ್ಟಿ ಗಟ್ಟಿಯ ಮಾಡು
ವಾಳಾಪ ತನಗಾಗಿಹುದು ॥೧೧೮॥

ಹೊನ್ನ ಕಾಣಲಿ ಹಣಗಳ ಕಾಣಲದ ತಾನು
ಕಣ್ಣುದೆರದು ನೋಡದಿಹನು।
ತನ್ನ ಹತ್ತೆಯಲಿ ದಾರಾರೆ ಇದ್ದರದ
ಕಣ್ಣುಮುಚ್ಚಿಸಿ ಬೀಸಾಡಿಸುವ ॥೧೧೯॥

ಜೀವವ ಕಂಡರೆ ನೋವಮಾಡನವ
ನಾವಪರಿಯಿಂದಾ ರಕ್ಷಿಸುವ।
ಹಾವು ಚೇಳುಗಳ ಕೊಲ್ಲದೆ ಕಡೆಗ್ಹಾಕುವ
ದೇವಭಕ್ತನು ತಿಪ್ಪಣಯ್ಯ ॥೧೨೦॥

ಒಂದು ಸಂದೊಳು ಸರ್ಪ ಬಂದು ಹೊಕ್ಕಿರಲಿಕೆ
ತಂದಾಗ ಹಾರೆಗುದ್ದಲಿಯ।

ಮಂದಿ ನೆರೆದು ಕೂಡಿ ಕೊಂದೆಯವೆನಲಿಕೆ
ಬಂದು ಕೇಳಿದದೇನೆಂದು ॥೧೨೧॥

ಹೊಕ್ಕಿದೆ ಹಾವಿಲ್ಲಿ ಮಕ್ಕಳಾಡುವ ಠಾವು
ಸಿಕ್ಕಿಸಿ ಕೊಂದೆವೆಂದೆನಲು।
ಅಕ್ಕಟಕ್ಕಟ ಕೊಲ್ಲದಿರಿ ನಿಲ್ಲಿಯೆನುತ ಕೈ
ಯಿಕ್ಕಿ ತೆಗೆದ ಹಾವ ಹಿಡಿದು ॥೧೨೨॥

ಏತಕೆ ಕೊಂದಿಯವೆಂದಿರಿ ಸರ್ಪನ
ಪಾತಕ ನಿಮಗೆ ಘಟಿಸದೆ!
ಈ ತೆರದಲಿ ತೊನಸಿಯ ಕೊಂದ ಜಮದಗ್ನಿ
ಆತಗಾಯಿತು ಕೊಲೆ ಮುಂದೆ ॥೧೨೩॥

ಎಂದು ಒಡಂಬಡಿಸಿ ಆವಾವ ಜೀವವ
ಮುಂದೆ ಕೊಲ್ಲಬೇಡವೆನುತ।
ಮಂದಿಗೆಲ್ಲರಿಗೆ ಬೋಧೆಯನು ಹೇಳುತಲಿಹ
ಚಂದ್ರಶೇಖರನ ಶರಣನು ॥೧೨೪॥

ಬಡವರ ಮನೆಯ ಪವಡಿಸ ಠಾವಿಷ್ಟೆಂದು
ಬೇಡಿ ಉಂಡರೆ ಮತ್ತವರ।
ಬಡತನ ಹಿಂಗಿ ಮತ್ತೊಡನೆ ಒಕ್ಕಲು ಹೆಚ್ಚಿ
ಮೃಡನೊಲುಮೆಯಂತೆ ಬಾಳುವರು ॥೧೨೫॥

ಎಲ್ಲಿ ದೊಡ್ಡೊಕ್ಕಲಿದ್ದಲ್ಲಿಗೆ ತಾ ಹೋಗಿ
ಮೆಲ್ಲನೆ ಬುತ್ತಿ ಬೇಕೆನಲು।
ಸೊಲ್ಲಿಲಾಡಲು ಆ ಒಕ್ಕಲು ಕೆಟ್ಟವರಿಗೆ
ನಿಲ್ಲ ಠಾವಿಲ್ಲದಂತಹುದು ॥೧೨೬॥

ಮನಕೆ ಬಂದವರ ಮನೆಗೆ ಹೋಗಿ ತಾನಲ್ಲಿ
ಮೌನದಿಂದಲಿ ಕುಳ್ಳಿರುವನು।
ಮನೆಯೊಳಗೆಯು ಇದ್ದ ಹಾಗೇನ ನೀಡಲು
ತಾನುಂಬ ಅದ ಸಂತೋಷದಲಿ ॥೧೨೭॥

ಬಂದ ತಿಪ್ಪಣ್ಣಯ್ಯನೆಂದು ಎನುತಲಾಗ
ಕುಂದದೆ ಬಿಸಿಯಡಿಗೆಯನು।
ಮುಂದೆ ಮಾಡುವ ಸೋಹಗಳ ಕಂಡ ಬಳಿಕಲ್ಲಿ
ನಿಂದರದಲಿ ಹೋಗುತಿಹನು ॥೧೨೮॥

ಹಬ್ಬವಾದರೆ ಊರ ಒಳಗೆ ನಿಂದಿರ ತಾನು
ಸಿಬ್ಬದಿಯಿಂದ ಓಡುವನು।
ಬೆಬ್ಬಳೆ ಗೊಂಡಂತೋಡುವನು ಮಂದಿಯ ಕಂಡು
ಒಬ್ಬಿಬ್ಬರೊಳು ಮಾತಾಡುವನು ॥೧೨೯॥

ಮುಂದೆ ಊರಿಗೆ ದಾಳಿ ಬಂದಿತೆಂಬುದ ಕಟಕ
ತಂದು ಖಪ್ಪರವ ಹೂಳುವನು।
ಬಂದು ಸುಲಿದು ಕೊಂಡಾರೆಂದಾಡುವ ತಾನು
ಅಂದ ಪರಿಯಲಾಗುತಿಹುದು ॥೧೩೦॥

ಸೂಚನೆಗಳನು ತೋರುವ ಮುಂದೆಯಾಪುದ
ವಾಚನಾಡನು ಆಟದೊಳಗೆ।
ಯೋಚಿಸಿ ನೋಡಿದರರಿಯದಂದಲಿಹ
ವಾಚನಾಡಲು ಶಿವತತ್ವ ॥೧೩೧॥

ಬರಿಯ ಪಾದದಲಿ ಸೋಹಗಳ ಮಾಡುವ ತಾನು
ಹೊರಸಿನ ಮೇಲೆ ಪವಡಿಸ।
ಅರವತ್ತೊರುಷ ಮಜ್ಜನವಿಲ್ಲದಿರುತಿಹ
ಶಿರದ ರೋಮಗಳು ಹೇಗಿಹವು ॥೧೩೨॥

ಗಂಗಾಳ ಚೌರದಂದದಿ ನರೆಗೂದಲು
ಶೃಂಗಾರವೇನ ಪೇಳುವೆನು।
ಬಂಗಾರ ಹದಿನಾರು ಬಣ್ಣದಂದದಿ ಅಂಗ
ಕಂಗಳ ಹಬ್ಬವಾಗಿಹನು ॥೧೩೩॥

ಕೆಸರ ಒಳಗೆ ಕೆಲಸವ ಮಾಡುತಿಹನು ತಾ
ಅಸರಂತ ಉದಯಾಸ್ತಮಾನ।

ಕೆಸರ ತೊಳೆಯದೆ ಪವಡಿಸಿ ಹೊತ್ತಾರೆ ಏಳೆ
ಹೊಸ ಪರಿಯಂಗವಾಗಿಹುದು ॥೧೩೪॥

ಇಟ್ಟುಕೊಳ್ಳನು ವಿಭೂತಿಯನೆಂದು ತೊಯಿದೀಗ
ಬಟ್ಟೆಯೊಳಗೆ ಹೊಸತಿರಲು।
ದೃಷ್ಟಿಲಿ ದಾಳಿವಾಸವ ಕಂಡರದ ತಾನು
ಇಟ್ಟುಕೊಂಬನು ಬೊಟ್ಟಿನನಿತ ॥೧೩೫॥

ಲಿಂಗಪೂಜೆಯ ಕರಸ್ಥಲದಲ್ಲಿಡಿದು ಬಾಹಿ
ರಂಗವಾಗೆಂದು ತಾ ಮಾಡ।
ಹಿಂಗದಿಹನಂತರಂಗದ ಪೂಜೆಯನೆ
ಲಿಂಗಧ್ಯಾನದಲಿ ತಾನಿಹನು ॥೧೩೬॥

ಇಂತೀ ಪರಿಯಲಿ ತಿಪ್ಪಣ್ಣಯ್ಯನಿರಲಿಕೆ
ಕಂತು ಹರನೇಕಮುಖವು।
ಜಂತ್ರ ಘಟವ ತಾಳಿ ಪರಮಜ್ಞಾನದಲಿ ತಾ
ಸಂತತ ಹುಟ್ಟಿದ ಗುಂಡರಾಯ ॥೧೩೭॥

ಒಂದು ಶತಕದ ಮುವ್ವತ್ತೆಂಟು ಪದದೊಳು
ಸಂಧಿ, ಮುಗಿದುದು ಮೂರನೆಯ।
ಮುಂದೆ ಶ್ರೀಗುರು ಗುಂಡ ಧರೆಯೊಳು ಹುಟ್ಟಿ ಬೆಳೆದ
ಅಂದವನಿನ್ನು ಕೇಳುವುದು ॥೧೩೭॥

ಅಂತು ಸಂಧಿ ಮೂರಕ್ಕಂ ಪದನು ೩೧೭ಕ್ಕಂ ಮಂಗಳಮಹಾ

❖❖

*

ಸಂಧಿ : ನಾಲ್ಕು

ಗುಂಡ ಬಸವೇಶ್ವರ ಅವತಾರ ಕಥನ

ಕಂದ :

ಮುನ್ನೂರರುವತ್ತು ರೋಗವು
ಉನ್ನಂತವಾಗ್ಯಡರೆ ಧರ್ಮಪುರದಲಿ ಬಂದು।
ತನ್ನ ಮನ ಶುದ್ಧವಾಗಿಯೆ
ಬಿನ್ನೈಸಲ್ ಗುಂಡರಾಯ ಪರಿಹರಿಸುವನುಂ ॥ I ॥

ಕುಷ್ಟ ಮೊಲನಾಗ ಮೊದಲಾಗಿ
ಅಷ್ಟಶತವ್ಯಾಧಿಯೆಂಬ ಇಂತಿವು ಸಹಿತಂ।
ದುಷ್ಟಗ್ರಹ ೧[ಪ್ರೇತ]೧ ಭೂತಿಗೆ
ನಿಷ್ಠೆಯಿಂದಲಿ ಗುಂಡರಾಯನ ನೆನೆದರೆ ಹರಿವವು ॥ II ॥

ಪದನು :

ಹುಟ್ಟಿದ ತಿಥಿವಾರ ನಕ್ಷತ್ರ ಯೋಗ ಕರಣ
ಇಷ್ಟನೆಲ್ಲವ ಕೇಳಲಾಗ।
ನಿಷ್ಠಭಕ್ತಿಗೆ ತಿಲಕನು ಹುಟ್ಟಿದಾ ವೇಳೆ
ಕಟ್ಟಿಕೊಟ್ಟರು ಶ್ರೇಷ್ಠವೆಂದು ॥೧॥

ಹೆಸರನಿಟ್ಟರು ಪಂಚ ದಿವಸದೊಳಗೆ ತಾವು
ಸಿಸುವಿಗೆ ಜನನಿ ಜನಕರು।

---

* ಶ್ರೀ ಗುರುವೇ ಗತಿ (ಮೂ) ೧-೧ ಪೇತು (ಮೂ)

ದೆಸೆಗೆ ಬಸವ ಹಾದಿಬೀದಿಯ ಬಸವನೆಂದು
ಹೆಸರನಿಟ್ಟರು ಅರುತಿಯಲಿ ॥೨॥

ಹುಟ್ಟಿದೈದಾರು ದಿವಸದ ಶಿಶುವಾಗಿ
ತೊಟ್ಟಿಲೊಳಗೆ ಪವಡಿಸಿ।
ಸೃಷ್ಟಿಗೀಶ್ವರನ ತಧ್ಯಾನ ಸಂಗದಲಿ ತಾ
ನಿಷ್ಠೆಯಿಂದಲಿ ಇರುತಿಹನು ॥೩॥

ದೊಕ್ಕನೆ ಮರ್ತ್ಯದ ಅಕ್ರಮಂಗಳನೆಲ್ಲ
ಹಕ್ಕೆಗೊಳಿಸಿಯೆನೆಂದೆನುತ।
ಠಕ್ಕ ವೇಷವ ತಾಳಿ ನರಕಂಥಿಯನೆ ತೊಟ್ಟು
ಮುಕ್ಕಣ್ಣ ಭಕ್ತನಿಂತಿರಲು ॥೪॥

ಬಂದನು ತಿಪ್ಪಣ್ಣಯ್ಯನು ಮಾತನಾಡಿಸೇ
ನೆಂದು ನಿಂದನು ತೊಟ್ಟಿಲಡಿಯ।
ಬಂದಿರೆ ಸತ್ಯಶರಣ? ಸರ್ವಾಂಗಲಿಂಗಿ
ಯೆಂದು ನುಡಿಸುತಿರ್ದನಾಗ ॥೫॥

ನುಡಿಸಿದ ಶಬ್ದಕೆ ಹೊಡೆದ ಠೊಣಲ ಮೂರ
ಎಡಬಲದರು ಕೇಳುವಂತೆ।
ಧಡಧಡನೆ ಶರಣೆಂದು ನಡೆಗೊಂಡ ಹೊರಯಿಕೆ
ಕಡು ನಲುವಿಲಿ ತಿಪ್ಪಣ್ಣಯ್ಯ ॥೬॥

ಇದು ಏನು ಸೋಜಿಗ ಐದು ದಿನದ ಶಿಶು
ಮುದದಿಂದ ಮಾತನಾಡಿಸಲು।
ಅದಕೆ ಠೊಣಲ ಹಾಕಿದನು ಬಸವಣ್ಣ ನಾನೆಂದು
ಅದಕಚ್ಚರಿಯ ಮಾಡುವರು ॥೭॥

ಬೆರಗಾಗುತಲಿ ಇಹರು ಮನೆಯವರೆಲ್ಲ
ಅರಿಯರು ಮಹಿಮನೆಂಬುದನು।
ಶರೀರವ ತಾಳಿ ಬಂದರೆ ತಮ್ಮ ಮನದೊಳು
ನರನೆಂದಾಶ್ಚರಿಯ ಮಾಡುವರು ॥೮॥

ಹಾವಿನ ಹೆಜ್ಜೆಯ ಹಾವು ಬಲ್ಲವು ಮತ್ತೆ
ಆವ ಜೀವನಕರಿಕುಂಟೆ।
ದೇವಭಕ್ತರ ಮಹಿಮೆ ದೇವಭಕ್ತರಿಗರಿಕೆ
ಭವಜೀವಿಗಳಿಗರಿಕುಂಟೆ ॥೯॥

ಅರ್ತಿಯಲಿ ಬೆಳೆಯುತ್ತಿದ್ದನು ಮನೆಯೊಳಗೆ
ಕರ್ತು ಕರುಣಿ ಬಸವೇಶ।
ಮತ್ತೆ ಸೋಹಗಳ ಮಾಡುತಲಿಹ ಮೊದಲಂತೆ
ನಿರ್ತದಿಂದಲಿ ತಿಪ್ಪಣ್ಣಯ್ಯ ॥೧೦॥

ಮುನ್ನ ಮಾತಿಗೆ ಬಂದಾಗ ಪೇಳುತಿಹನು ತಾ
ತನ್ನ ಮನಕೆ ಬಂದರೊಡನೆ।
ಪನ್ನಂಗಧರನೇಕಮುಖವಿಲ್ಲಿ ಬರಬೇಕು
ಉನ್ನಂತ ಮಹಿಮನೆಂದೆಂಬ ॥೧೧॥

ನೋಡುತಿ[೨][ಹಾ][೨]ತ ಬಂಬಯ ಹಾದಿಗಳನೆಂದು
ಆಡುತಿಹನು ಅನವರತ।
ನಾಡೊಳು ಧರ್ಮ ಬೋಧೆಗಳನೆ ಪೇಳ್ವನು
ರೂಢಿಗೆ ತಾ ಘನ ಮಹಿಮ ॥೧೨॥

ಇಲ್ಲಿ ಮಠವ ಮಾಡಿ ಇಲ್ಲಿ ಮನೆಯ ಕಟ್ಟಿ
ಸಿಲ್ಲಿ ಬಾವಿಯ ತೋಡಿಸಿಹನು।
ಬಲ್ಲಿದ ಶಿವಶರಣನು ನಿಂತಾನಿಲ್ಲೆಂದು
ಅಲ್ಲಿ ತಾ ಸವುರಿಸುತಿಹನು ॥೧೩॥

ಇತ್ತ ತಿಪ್ಪಣ್ಣಯ್ಯ ಈ ಪರಿಯಿರುತಿರೆ
ನಿರ್ತ ಬೆಳೆದ ಬಸವೇಶ।
ಮತ್ತೆ ಐದಾರು ವರ್ಷದಾತನಾಗಿ
ಹತ್ತೆ ಬಂದರೆ ಕುಳ್ಳಿರಿಸುವ ॥೧೪॥

೨–೨ ವಾ (ಮೂ)

ಕೇಳು ನೀ ಬಸವಣ್ಣ ಹೇಳುವ ಮಾತನು
ಭಾಳಲೋಚನ ಭಕ್ತನೊಬ್ಬ।
ಹಳೆಯ ಸಗರದ ಹೊರಗೆ ಮಠಕಟ್ಟಿ ತಾ
ಇಳೆಯೊಳಮರಕಲ್ಯಾಣೆನಿಸಿ ॥೧೫॥

ತಿಥಿನಾಲ್ಕು ಮಾಡಿದ ಆತ ತಾ ಬಸವಣ್ಣ
ಮತ್ತೆ ಭಕ್ತರು ಬೋಳರೆನಿಸಿ।
ಶ್ರುತಿಧರ್ಮ ಬೋಧೆಯ ಸಾರಿಸುತಲಿಹನು
ಮಥಿಸಿ ಮರ್ತ್ಯಲೋಕದೊಳಗೆ ॥೧೬॥

ಅಂದ ಮಾತನು ಕೇಳಿ ಎಂದೆಂಬ ಬಸವಣ್ಣ
ಮುಂದೆ ಭಕ್ತರು ಬೋಳರೆನಿಸಿ।
ಕುಂದದೆ ನಾಲ್ಕು ತಿಥಿಯನು ಮಾ *[ಡುವೆ]* ನಾನು
ಎಂದಾಡುವನು ತಾನಾಡುತಲಿ ॥೧೭॥

ಡಂಗುರ ಬೋಧೆಯ ಹಿಂಗದೆ ಹೇ ಇ[ಳ್ವೆ]ಇನು
ಅಂಗವಿಸಲು ಬಾರದಂತೆ।
ಸಂಗಮೇಶ್ವರನ ಮೆಚ್ಚಿನ ನುಡಿ ನುಡಿದೆನೆಂ
ದಂಗವಣಿಗಳನಾಡುವನು ॥೧೮॥

ಇಂತಾಡುವ ಮಾತು ಕೇಳಿ ತಿಪ್ಪಣ್ಣಯ್ಯ
ಸಂತೋಷಗಳ ಮಾಡುತಿಹನು।
ಕಂತುಹರನ ಭಕ್ತ ನಿನಗಲ್ಲದಿನ್ನಾರಿ
ಗಿಂತು ಸತ್ವಗಳುಂಟೆ ಎಂಬ ॥೧೯॥

ಹಲವು ದಿವಸವು ಈ ಪರಿಯಲಿರುತಲಿ
ಫಲಿಸಿ ಬೆಳೆದ ಬಸವೇಶ।
ನೆಲಸಿ ಹತ್ತನ್ನೆರಡೊರುಷದಾತನಾಗಿ
ಮಲಹರನೊಲುಮೆಯಂತಿಹನು ॥೨೦॥

– ಡಿಯೆ (ಮೂ) ಇ–ಇ ಳೆ (ಮೂ)

ತಡುಪು ನಡುಕಟ್ಟು ಕಡಿಯಂಗಿ ನಿಟ್ಟಲಿ
ಕಡು ಸೊಬಗಾಗಿ ತಾನಿಹನು।
ಎಡೆದೆರಹಿಲ್ಲದೆ ೪[ಪಸರವ]೪ ಮಾಡುತಿಹನು ತಾ
ಬಡ ಬಣಜಿಗರಳವಲ್ಲ ॥೨೧॥

ನಿನಗಿದು ಏಕೆ ಎನುತ ತಿಪ್ಪಣ್ಣಯ್ಯನು
ಅನವರತಲಿ ನುಡಿಸುವನು।
ಮೋನದಿಂದಲಿ ತಲೆಯನೇ ಕುತ್ತುವನು ತಾನು
ಏನು ಎನ್ನದೆ ಬಸವೇಶ ॥೨೨॥

ವಸುಧೆಗೆ ಪಸಾರವಿಕ್ಕಬೇಕಯ್ಯ ನೀನು
ಹುಸಿಯ ಪಸಾರವಿದೇನೆಂಬ।
ಬಸವಣ್ಣ ನೀನು ನಿನ್ನಯ ಹೆಸರಿಗೆ ತಕ್ಕ
ಪಸಾರವಲ್ಲವಿದೆಂಬ ॥೨೩॥

ಅಂದ ಮಾತನು ಕೇಳಿ ಮುಂದೇನು ಎನ್ನದೆ
ನಿಂದರದ[ಲೆ] ಹೋಗುತಿಹನು।
ಸಂದೇಗದಿಂದ ತನ್ನಯ ಮನದೊಳಗೆ ತಾ
ಒಂದೊಂದ ಹವಣಿಸುತಿಹನು ॥೨೪॥

ಹಲವು ದಿವಸವು ಈ ಪರಿಯಲ್ಲಿರಲಿಕೆ
ಸಲೆ ಮಾತೆಪಿತರು ತನಯಗೆ।
ಬಲಿತನು ಇನ್ನು ಮದುವೆಯ ಮಾಡಬೇಕೆಂದು
ನಲಿವಿಂದ ಮಾತನಾಡಿದರು ॥೨೫॥

ನೋಡಿ ಬಂದೆ ಬಸವಣ್ಣನಿಗೆ ವರನೆಂದು
ಆಡಿ ತೆರಳಿ ನಾಗಿಸೆಟ್ಟಿ।
ನೋಡು ನೋಡುತ ಗುಂಡಗುರುಕಿಯೊಳಗೆ ಹೋಗಿ
ಕೊಡಗೂಸುಂಟೆಂದು ಕೇಳಿದರೆ ॥೨೬॥

೪–೪ ಪಾಸರವ (ಮೂ)

ತುಪ್ಪದ ಶಂಕರಸೆಟ್ಟಿ ಲಕ್ಕಾಯಲ್ಲಿ
ಇಪ್ಪುದು ಕೊಡಗೂಸೆಂದೆನಲು।
ತಪ್ಪದಾಯಿತು ತರುಣ ಸಂಬಂಧ ಕೇಳಲು
ಒಪ್ಪದಿಂದಲಿ ಕೊಟ್ಟರವರು ॥೨೭॥

ತುಡಿಸಿ ಕುಪ್ಪಸವ ತಡೆಯದೆ ಬೇಗ ಬಾ
ಸಡಿಕೆ ಮಾಡಿದರರುತಿಯಲಿ।
ಒಡನೆ ವಿ[೫][ವಾಹ][೫]ಕಾರ್ಯವನು ಸಾಗಿಸುವೆನೆಂದು
ನುಡಿದು ಬಂದನು ಗ್ರಾಮದೆಡೆಗೆ ॥೨೮॥

ಬಂದು ಪೇಳಿದನು ತಾನಿಂದು ಬಸವಣ್ಣ
ಗೊಂದು ಹೆಣ್ಣನು ಕೊಂಡೆವೆನುತ।
ಹಿಂದುಗಳೆವ ಬೇಗ ಮುಂದೇತಕಾಲಸ್ಯ
ವೆಂದು ಸಾಗಿದನು ಮದುವೆಯ ॥೨೯॥

ಹೇಗೆ ಮದುವೆಗಿನ್ನು ಹೋಗಬೇಕೆನುತಲಿ
ಬೇಗದಿಂದಲಿ ಮನೆಮನೆಯ।
ಸಾಗ ಮೊದಲುಗೊಂಡು ಆ ಅರುತಿಯಿಂದ
ನಾಗಿಸೆಟ್ಟಿಯು ತವಕದಲಿ ॥೩೦॥

ಮನೆಯೊಳಗಿಷ್ಟು ಸಂಭ್ರಮವಾಗುತಿರಲಿಕೆ
ಮನದೊಳಗೆಯು ಮದುವಣಿಗ।
ಚಿನುಮಯನಾಟವು ಶಿವನಜ್ಞಾನಗಳಿಂದ
ಅನೇಕ ಹವಣಿಸುತಿಹನು ॥೩೧॥

ಅಡಿಗಡಿಗೆ ಕೋರೂಟವು ಮದುವಣಿಗಗೆ
ಗಡಿಗೆ ನೀರೆರೆವ ಸಂಭ್ರಮವು।
ಎಡದೆರಹಿಲ್ಲದೆ ಉಡುಗೊರೆಯನೆತ್ತಲಿಕೆ ತಾ
ನುಡಿವ ಈ ಮಾನಸಿಗೆಂದು ॥೩೨॥

೫-೫ ಭಾ (ಮೂ)

ತಾಯಿಮಕ್ಕಳು ತಾವು ಮೀಯಬೇಕೆನುತಲಿ
ಸಾಯಸದಿಂದ ಕಳಸವ।
ಆಯತವಾಗಿಕ್ಕಿ ನೂಲಸುತ್ತಿರಲಿಕೆ
ಹಾಯ್ದೋಗುತಲದನೊದ್ದ ॥೩೩॥

ಒಬ್ಬುಳಿ ಬಂದವು ತೊಂಬಿಗಯಿದುಯೆಲ್ಲ
ಬೆಬ್ಬಳೆಗೊಂಡು ಮಾನ್ಯವರು।
ಖಬ್ಬನೆ ನಾಗಿಸೆಟ್ಟಿಗೆ ಹೇಳಲಿಕಾತ
ಉಬ್ಬಸದಲಿ ಘುರುಮಿಸಿದ ॥೩೪॥

ಮಿಂದು ಮದುವಣಿಗನು ಬಂದ ಮನಿಯೊಳಯಿಕೆ
ಚಂದ್ರಶೇಖರನ ಧ್ಯಾನದಲಿ।
ಕಂದ ನೀ ಉಣಲೇಳು ಎಂದೆನುತ ತಾಯಿ
ತಂದು ಇಕ್ಕಿದಳಗಲನು ॥೩೫॥

ಹೆಣ್ಣುಮಕ್ಕಳು ಗಂಡುಮಕ್ಕಳುಗಳನೆಲ್ಲ
ಉಣ್ಣೆಂದು ಕರೆದು ಕುಳ್ಳಿರಿಸೆ।
ಸಣ್ಣ ಆಮಿಗನ ಹೊಯ್ದು ನಡುಬೆನ್ನನು
ಹಣ್ಣಿದಳಾಕೆ ಬೊಬ್ಬೆಯನು ॥೩೬॥

ಏನಾಯಿತೆನುತಲಿ ತಾನು ಬಂದಳು ತಾಯಿ
ಮೌನದಿಂದಲಿ ಕುಳಿತಿಹನು।
ಹೀನಗುಣವನಿಂದು ನೀನೇಕೆ ಕಲಿತೆಂದು
ತಾ ನುಡಿದಳು ಸೀವರಿಸುತ ॥೩೭॥

ಖೋಡಿಗುಣವನಿಂದು ಮಾಡಲಾಗದುಯೆಂದು
ಆಡಿದಳು ಮಾತೆ ಸುತನ।
ಬೇಡಿಕೊಂಡಳು ಸೆರಗೊಡ್ಡಿ ಬಸವಣ್ಣ
ಆಡಿದನುಣಲೊಲ್ಲೆನೆನುತ ॥೩೮॥

ಉಣ್ಣದಿದ್ದರೆ ಮಾಣು ಹಣ್ಣ ಹದುಳವಾಗಿ
ತಣ್ಣನಿದ್ದರೆ ಸಾಕುಯೆನುತ।

ಎಣ್ಣೆ ಹೋಳಿಗೆಯ ಪಾಯಸವ ಮಾಡಿದಂಥದ
ಅನ್ನವತ್ತಿಗೆಯ ತುಂಬಿದಳು ॥೩೯॥

ಸಾಕು ವಿಭೂತಿಯ ಪಟ್ಟ ಭಕ್ತರಿಗಿಂತೀ
ಲೋಕ ಬಳಕೆ ಯಾಕೆಯೆಂಬ।
ಕಾಕು ಮಾಡಿ ಕೆಡಿಸುತಲಿಹ ಮನೆಯೊಳು
ಲೋಕ ಪಾಲಿಪ ಬಸವೇಶ ॥೪೦॥

ಪರಮಪುರುಷನಾಡಿದ ಮಾತ ಕೇಳದೆ
ಮೀರಿ ಮಾಡುವರರುತಿಯನು।
ತೆರಳಿಸಿ ತಂದ ನಿಬ್ಬಣಿಗರನೆಲ್ಲರ
ಹಿರಿದು ಪರಿಯ ನಾಗಿಸೆಟ್ಟಿ ॥೪೧॥

೬[ಸಾ]೬ಗಿತು ನಿಬ್ಬಣ ಕೂಗುತ ವಾದ್ಯದಿ
ಹೋಗುತಿರಲು ಬೀದಿಯೊಳಗೆ।
ಆಗ ತಾ ನುಡಿದ ನುಡಿಯನು ಪೇಳೆವೆ ಕೇಳಿ
ಭಾಗ್ಯನಿಧಿಯು ಬಸವೇಶ ॥೪೨॥

ಹೊಡೆಯ ತೆಗೆಯುತಲಹರೆ ತಲೆಯನು ನನ್ನ
ಬಿಡರು ಪಾಪಕೆ ನೋಡಿಯೆಂಬ।
ಮೃಡನಾಟವು ತನ್ನ ಒಡಲೊಳು ತುಂಬಿ ತಾ
ಹೊಡೆವುತಿಹನು ಬೊಬ್ಬೆಗಳನು ॥೪೩॥

ಯಾರು ಕೇಳಿದರೆ ಹೇಳುತಲಿಹ ಹೆತ್ತಳ
ಹಿರಿಯಣ್ಣ ಸತ್ತನೆಂದೆನುತ।
ಆರಯ್ಯೆ ಹೋಗುತಲಿವೆ ನಾವು ಎನುತಲಿ
ಯಾರತಿಯನೆ ಹೇಳುತಿಹನು ॥೪೪॥

ಸಾಗಿವೆ ಮದುವೆ ಈಗ ಅಶುಭವಾಕ್ಯ
ಹೀಗಾಡದಿರು ನೀನು ಎನುತ।

೬–೬ ಚಾ (ಮೂ)

ನಾಗಿಸೆಟ್ಟಿಯು ಬಂದು ಆಗ ತಾ ಸೆರಗೊಡ್ಡಿ
ಭಾಗ್ಯಮುಖನ ಬೇಡಿಕೊಂಡ ॥೪೫॥

ಸುಮ್ಮಗಾದನು ಬೇಡಿಕೊಂಡ ಮಾತನು ಕೇಳಿ
ನಿಮ್ಮಚ್ಛೆ ನಡೆನಡೆ ಎಂದ।
ಘಮ್ಮನೆ ತೆರಳಿ ಹಾದಿಯ ಹತ್ತಿ ನಿಬ್ಬಣ
ಪ್ರೇಮದಿಂದಲಿ ಹೋಗುತಿರಲು ॥೪೬॥

ಗಂಗೆಯ ಒಳಗೆ ಅಂಗನೆ ಕಾಮಾಯಿಣಬೇಡಿ
ಅಂಗ[೧][ವಿ][೧]ಸೆನು ಮುಂದಕೆಂದ।
ಗಂಗಾಳ ಮುಂದಿಟ್ಟು ಬುತ್ತಿ ಬಿಡಲಿಕಾಗ
ಲಿಂಗಬಸವ ಒಲ್ಲೆನೆಂದ ॥೪೭॥

ಮನೆಯಲಿ ಏನ ನೀಡಲಿ ಬಂದೆ ಉಣಲಿಕೆ
ನನಗೆ ತಾ ಅದನಿಲ್ಲಿಯೆನಲು।
ನಿನಗೆಲ್ಲಿ ತರಲಿ ಅದನು ಇಲ್ಲಿ ಎಂದೆನೆ
ಮುನಿದು ಕುಳಿತ ಉಣಲೊಲ್ಲದೆ ॥೪೮॥

ಎಲ್ಲಿ ಆದರೆ ಅಡಾಳಿಸಿಯನೆಂದೆನುತಲಿ
ಬಲ್ಲೆ ನಾ ನಿನ್ನಯ ಗುಣವ।
ಮೆಲ್ಲನೆ ಅನ್ನವತ್ತಿಗೆಯ ಬಿಟ್ಟಿಕ್ಕಲು
ಅಲ್ಲಿ ತಾ ನಗುತುಂಡನಾಗ ॥೪೯॥

ವಿಗಡ ಮಾಡುತಲಿಹ ಅವರು ಮಾಡುವ ಮಾಟ
ಸೊಗಸದೆ ತನ್ನ ಮನಸಿಗೆ।
ಬಗೆಬಗೆ ಅಡಾಳಗಳನು ಮಾಡುತಲಿಹ
ಜಗದೀಶ ನೂಚಾಟದಿಂದ ॥೫೦॥

ಅಲ್ಲಿಂದ ತೆರಳಿ ಹೋಗಿ ಮದುವೆಯ ಮಾಡಿ
ಮೆಲ್ಲನೆ ತಿರುಗಿ ಬರುತಲಿ।

೭-೭ ದಿ (ಮೂ)

ನಿಲ್ಲದೆ ಬೇಗ ಮನೆಯ ತುಂಬಿಸೆನುತಲಿ
ಸೊಲ್ಲ ಹೇಳುತ ತೆರಳಿದರು ॥೫೧॥

ಬಂದರು ಕಳುಹ ನಿಬ್ಬಣ ಮದುವಣಿಗರ
ತಂದು ಕಳುಹಿದರರ್ತಿಯಲಿ।
ಒಂದೊಂದು ಪರಿ ಸೇವೆಗಳು ಆದ ಬಳಿಕಲಿ
ಹಿಂದಕೆ ತಿರುಗಿದರವರು ॥೫೨॥

ಇರುತಿಹ ಮದುವೆಯಾಗಿ ಅನವರತವು
ಹರನ ಧ್ಯಾನದಿ ಬಸವೇಶ।
ಅರಿಯನು ಯಾರು ಬಂದರು ಇದುರೆಂಬುದ
ದಾರಿಯೊಳಗೆ ಹೋಗುತಿರಲು ॥೫೩॥

ಮುಂದೆ ಹಲವು ದಿನವಿದ್ದನು ಬಸವಣ್ಣ
ಗಂದಿಗುಡಿಯನು ಮಾಡುತಲಿ।
ಮುಂದೆ ಜ್ಞಾನದಲಿ ನೋಡಿದ ಪಾಪವಿದರೊಳ
ಗೆಂದು ಎನುತಾ ಬಿಟ್ಟ ತಾನು ॥೫೪॥

ಹಸುಬೆಯ ಬಣ[೮][ಜಿ][೮]ಸಿಯೆನೆಂದು ಎನುತಲಿ
ಬಸವಣ್ಣ ತಾ ಕೈಕೊಂಡು।
ವಸುಧೆಯೊಳಗೆ ಉಳ್ಳ ಎಪ್ಪತ್ತೆರಡು ಕೇಣಿ
ಹಸುಬೆಯನಾಗ ತುಂಬಿದನು ॥೫೫॥

ಬಣ[೮][ಜಿ][೮]ಸ ಹಣ್ಣಿದ ಬಸವಣ್ಣ ಹಸುಬೆಯ
ಎಣೆಯಿಲ್ಲದಿನ್ನು ಎಂಬಂತೆ।
ಕ್ಷಣಕೊಂದು ಪರಿಯ ಗಳಿಕೆಯ ಗಳಿಸುತಿಹ
ಹಣೆಗಣ್ಣಿನೊಡೆಯನ ಭಕ್ತ ॥೫೬॥

ಚರಿಸಿಯಾಡುತ ಹೋದ ಮೂಡಲು ಹಸುಬೆಯ
ಚೋರರು ಅಡಗಟ್ಟಲಾಗ।
ಮೀರಿ ಹೋದನು ಅವರಿಗೆ ಸಿಕ್ಕದಲಿ ಓಡಿ
ಪಾರಿವಾಳದ ಅಂದದಲಿ ॥೫೭॥

೮-೮ ಗಿ (ಮೂ)

ಇಂದು ಈತನು ಹೋದ ಮುಂದೆ ನಮಗೆ ಹೀನ
ಎಂದು ಎನುತ ಕಳ್ಳರೆಲ್ಲ।
ಸಂದೇಗದಿಂದ ಎಂದಿದ್ದರೀತನನಿನ್ನು
ಕೊಂದಲಿಲ್ಲದೆ ಆಗದೆನುತ ॥೫೮॥

ಇಷ್ಟರೊಳಾತನ ಕೊಲಬೇಕು ಎನುತಲಿ
ಅಟ್ಟಟ್ಟಿಗೆಯಲಿ ಮತ್ತವರು।
ಗಟ್ಯಾಗಿ ಎರಡು ಕಡೆಯ ಬೇಲಿಯೊಳಗಾಗ
ಕಟ್ಟಿ ಕಾಯಿದರು ಹಾದಿಯನು ॥೫೯॥

ಹರನ ಧ್ಯಾನದಲಿ ಬಂದನು ಬಸವಣ್ಣನಲ್ಲಿ
ಭರ ಘನ ಹಸುಬೆ ಹೊರೆಯಲಿ।
ಹರಿತಂದಲ್ಲಿಂದ ಮುಂದೆ ಅಬ್ಬರಿಸುತಾಗ
ಬರೆ ಕಂಡ ತಾನು ಮತ್ತವರ ॥೬೦॥

ಎತ್ತ ನೋಡಿದರೆತ್ತುಗ್ಯೆಯುದ್ದ ಬೇಲಿಯು
ತೆತ್ತಿಸಿ ಎರಡು ಕಡೆಯಲಿ।
ಮತ್ತೆ ಶಿವನ ನೆನದ್ಹಾರಿದ ಬೇಲಿಯ
ಹೊತ್ತಿರ್ದ ಹೊರೆ ಸಹವಾಗಿ ॥೬೧॥

ನಟ್ಟಿತು ಕಾಲಲಿ ಗೂಟದಂದದಿ ಒಂದು
ಹೊಟ್ಟೆ ಜಾಲಿಯ ಮುಳ್ಳು ತಾನು।
ನಟ್ಟಿತೆಂಬುದನರಿಯದ ಹಾಗೆ ಅಲ್ಲಿಂದ
ತಟ್ಟನೆ ಕಡೆಗೆ ಹಾರಿದನು ॥೬೨॥

ಎಚ್ಚರು ಅವರು ಹಾರಿದ ಸೋಹೆಗಲ್ಲಿಂದ
ಎಚ್ಚೆತ್ತನೆಂಬುದರಿಯದೆ।
ಎಚ್ಚಕೋಲು ಕಟ್ಟಿತು ಹಾರಿದಡಿಯನು
ನಿಶ್ಚಿಂತ ತಾ ಹೋಗುತಿರ್ದ ॥೬೩॥

ಹೋಗಿ ಊರಿಗೆ ತಾನು ⁽[ಆ]⁾ಗ ಇಳಿವ ಠಾವೆ
ಬೇಗ ನಿಂದನು ಬಸವೇಶ।

೯–೯ ಯಾ (ಮೂ)

ಆಗ ಹೇಳುತಲಿರ್ದ ಬಿಡಾರ ಮನೆಯಲಿ
ಹೀಗಾಯಿತೆಂದು ಎನುತಲಿ ॥೬೪॥

ಹೇಳಲಿನ್ನೇನ ಕಾಲೊಳು ಮುಳ್ಳು ನೆಟ್ಟದೆ
ಭಾಳವೇಧೆಂದು ಪೇಳಿದರೆ।
ಕೇಳ್ದೋಗಿ ಕರೆದು ತಂದರು ನಾವಿದಗೆ ಮುಳ್ಳು
ಅಳವಲದಲಿ ಕಾಡುತಿಹುದು ॥೬೫॥

ಘನವಾಗಿ ರಗುತ ಚಿಮ್ಮುತಲಿಹುದದ ಕಂಡು
ಮನ ಹೇಸಿ ಬಿಟ್ಟ ನಾವಿದನು।
ದಿನಕರ ಕೋಟಿ ತೇಜಪ್ರಕಾಶನ ನೆನೆ
ನೆನಹುತಿಹನು ಬಸವಣ್ಣ ॥೬೬॥

ಅನ್ನವುದಕವ ಕೊಳ್ಳದಲಿ ಬಳಲುತಿಹ
ತನ್ನ ಕಾಲಿನ ವೇಧೆಯಲಿ।
ಪನ್ನಂಗಧನೆ ನನಗೆಯೇಕೆ ಇದುಯೆಂದು
ಉನ್ನಂತ ಧ್ಯಾನದಲ್ಲಿಹನು ॥೬೭॥

ಬಂದ ಸ್ವಪನದಲಿ ಚಂದ್ರಶೇಖರ ತಾನು
ಮುಂದೆ ಪದನ ಹೇಳು ಎನುತ।
ತಂದು ಹಣೆಯಲಿ ವಿಭೂತಿಯ ಧರಿಸಿದ
ಸಂದೇಗ ಬೇಡವಿನ್ನೆನಸು ॥೬೮॥

ಬಲ್ಲೆ ನಾನೇನ ಪದನ ನುಡಿಯಲಿಕೆಂದು
ಒಲ್ಲೆ ನಾನೆಂದು ಎನುತಲಿ।
ಮಲ್ಲಿಕಾರ್ಜುನಗೆ ಇದುರು ನುಡಿಗೊಟ್ಟನು
ಎಲ್ಲಿಯ ಝುಟೆ ನನಗೆನುತ ॥೬೯॥

ನುಡಿ ಮನಬಂದಂತೆ ಪೊಡವಿಯೊಳಗೆ ನಿನ್ನ
ನುಡಿಯಹುದಹುದು ಎಂದೆನಿಸಿ।
ರೂಢಿಯೊಳಗೆ ನಿನ್ನ ನುಡಿಯಲ್ಲದಿನ್ನಿಲ್ಲ
ಮೃಡ ತಾನು ಅಭಯವ ಕೊಟ್ಟ ॥೭೦॥

ಏನ ಹೇಳಲಿ ಇನ್ನು ನಾನಾ ವಿಧಿಯ ಮುಳ್ಳು
ಧ್ಯಾನವಾಗಿದೆ ನನಗೆನಲು।
ನೀನ್ಹೇಳು ಪದನ ಮುಳ್ಳಿನ ಮೇಲೆ ಅದು ತನ್ನ
ತಾನೆ ಬಿದ್ದೀತು ಮುಳ್ಳೆಂದ ॥೭೧॥

ಹಿಂಗದೆ ಶಿವನ ಸುಷುಪ್ತೊಳು ಕಾಣುತ
ಕಂಗೆಡುತೆದ್ದು ಮತ್ತಾಗ।
ಜಂಗಮರೂಪು ಬಂದರೆ ಇಲ್ಯರಿತ್ಯಾಯೆಂದು
ಅಂಗನೆಯರನು ಕೇಳಿದನು ॥೭೨॥

ಕಾಣೆವು ಇಲ್ಲಿ ಯಾರನು ಎಂದು ಎನಲಿಕೆ
ಹೊಣಿಸಿದನು ಮನದೊಳಗೆ।
ಫಣಿಧರನಲ್ಲದಲ್ಲವು ಮತ್ತಾರೆನುತಲಿ
ಜಾಣನರಿತ ಮನದೊಳಗೆ ॥೭೩॥

ಕಾಡಿದೆ ಚೋಳರಾಯನ ಮನೆಯುಣ್ಣದೆ
ಬೇಡಿದೆ ಮಗನ ಮಾಂಸವನು।
ಮಾಡಿ ನೀಡಲು ಮಕ್ಕಳಿಲ್ಲದೊಲ್ಲೆನುಯೆಂದು
ಆಡಿದೆ ನೀ ಜಗವರಿಯೆ ॥೭೪॥

ಬುದ್ದಿಯಿಂದಲಿ ಮಾಯಾಂಗನೆಯ ಕಾಡೋಡಿದೆ
ಮದ್ದಳೆಯನು ಒಡೆಹಾಕಿ।
ಸಿದ್ದರಾಮಯ್ಯನ ಕಾಡಿ ಪುರವ ಸುಡು
ತಿದ್ದೆ ನೀನಿಲ್ಲದಂದದಲಿ ॥೭೫॥

ಮೆಲ್ಲನೆ ಹುಲಿಯಾಗಂಜಿಸಿದೆ ಜೊಮ್ಮಯ್ಯನ
ಬೆಲ್ಲಪತ್ತರಿಗೆ ಹೋದಲ್ಲಿ।
ಸೊಲ್ಲಿಗೆ ಮುನಿದು ಕಾಡಿದೆ ಬರಲೊಲ್ಲದೆ
ಕಲ್ಯಾಣದೊಳು ಬಸವಣ್ಣಗೆ ॥೭೬॥

ಮೊನದ ಮಾರಯ್ಯನ ಕಾಡಿದೆಯ್ಯಾ ನೀನು
ನಾನಾ ವಿಧಿಯನುಣುಸಲಿಕೆ।

ಹೇನು ಸಾಯದೆ ಸೀರುವಡೆಯದೆ ಒಗೆಯೆಂದು
ನೀನು ಕಾಡಿದೆ ಮಡಿವಳಗೆ ॥೭೭॥

ಕುಂಬಾರ ಗುಂಡಯ್ಯನ ಕಪ್ಪರಕೆ ಕಾಡಿ
ನಂಬದಂದದಿ ಭಾಷೆಗೊಂಡೆ।
ಬೆಂಬಿಡದಲಿ ಗುಂಡಬೊಮ್ಮಯ್ಯಗಳ ಕಾಡಿ
ದಂಬರಾತ್ಮಕ ಶಿವ ನೀನು ॥೭೮॥

ಅವರ ಕಾಡಿದೆ ನೀನು ಅವರ ಮಾತುಗಳಿಂದ
ನೆವನಾವುದೆನ್ನ ಕಾಡಲಿಕೆ।
ಶಿವ ಶಿವ ಎನ್ನ ಕಾಡುವುದದು ತರವಲ್ಲ
ಭುವನಕೀಶನೆ ಕೇಳೊ ಎಂದ ॥೭೯॥

ಅಂದು ಕಾಡಿದಂತೆ ತಂದ ಥಾಳವನೊಡ್ಡಿ
ಇಂದು ಪೇಳೆಂದೆನುತಿದ್ದೆ।
ಹಿಂದಕೆ ಶರಣರ ಕಾಡಿದಂತೆ ಎನ್ನ
ಮುಂದೆ ಕಾಡಲಿ ಬೇಡವಯ್ಯ ॥೮೦॥

ಭಾಳಲೊಚನ ಬಂದು ಹೇಳೆಂಬ ಶಬ್ದಕೆ
ಹೇಳ ಮೊದಲುಗೊಂಡ ಪದನ।
ಕೇಳುವವರಿಗೆ ಮೊದಲೆ ಬಲ್ಲಂದದಿ
ಹೇಳುತಿರ್ದನು ಪದನಾಗ ॥೮೧॥

ಕಾಡಬೇಡವು ಮುಳ್ಳೆ ಮೃಡನ ಭಕ್ತರನಿನ್ನು
ಕಾಡುವದು ದುಗುಣವಲ್ಲವೆನುತ।
ಹಾಡುವ ಪದದ ಒಳಗೆ ಮುಳ್ಳು ಉಚ್ಚಿತು
ನೋಡಿ ಕಂಡರು ಹತ್ತಿ[೧೦][ರಿ][೧೧]ದ್ದವರು ॥೮೨॥

ವೆಕ್ಕಸ ಕೀವುರಂದೂ ಹೋಗಿ ಕಾಲಿಗೆ
ಎಕ್ಕಲವಾಗಿ ಬೇನೆಗಳು।

೧೦-೧೦ (ಮೂ)

ಮುಕ್ಕಣ್ಣನ ಭಕ್ತ ಪದನ ಹೇಳುತಲಿಹ
ಅಕ್ಕಜಬಡುವ ಅಂದದಲಿ ॥೮೩॥

ಅಕ್ಷರವರಿಯ ನಿರಕ್ಷರಿ ತಾನೀಗ
ಅಕ್ಷರಿಕರು ಎಂದೆಂಬರಿಗೆ।
ದೀಕ್ಷವ ಕೊಡುವ ಅಂದದಲಿ ಹೇಳುತಲಿಹ
ಅಕ್ಷಪದವನೀವ ಕರ್ತ ॥೮೪॥

ಛಂದ ಅಮರಸಿಂಹ ನಿಘಂಟು ವ್ಯಾಕರಣವ
ಹಿಂದುಗಳೆದು ಹೇಳುತಿಹನು।
ಚಂದ್ರಶೇಖರನೇಕಮುಖವಿದ್ದೆಯದ ಕರ್ತ
ಬಂದಿಹ ತಾ ಮರ್ತ್ಯದೊಳಗೆ ॥೮೫॥

ಮೂರನಿಟ್ಟೊರಸಿಹ ನಾಲ್ಕನೆಚ್ಚರಲೀಯ
ಮೂರು ಗುಣವ ವರ್ಜಿಸಿಹನು।
ಮೀರಲೀಯದೆ ಲಿಂಗಮುಖಮಾಡಿ ಐದನು
ಮೂರೆರಡೊಂದ ಮಾಡಿಹನು ॥೮೬॥

ಷಡುವರ್ಗವೆಂಬವ ಗಡಣ ಹೊಂದಲಿಹ
ಕೆಡೆಸಿಹ ಸಪ್ತವ್ಯಸನವ।
ದೃಡದಿಂದ ಅಷ್ಟಮದವನೆಲ್ಲ ಮುರಿದೊಟ್ಟಿ
ತಡೆದಿಹ ಹಂಸನೊಂದೆಡೆಯ ॥೮೭॥

ಷಡುಚಕ್ರವನು ಏರಿಸಿಹ ಬ್ರಹ್ಮರಂದ್ರಕೆ
ತಡೆಯದೆ ಭುಜಗ ಹೊತ್ತಿರ್ದ।
ಕೊಡನ ಕೆಡಹಿ ಅಮೃತಗಳನುಣುತಲಿಹ
ಒಡನಾಡುತಿಹ ಪರಮನೊಳು ॥೮೮॥

ಇಂತಪ್ಪ ಪರಮಜ್ಞಾನದಲಿ ತಾನಿರುತಲಿ
ಅಂತುವರಿಯದಂತೆ ಇಹನು।
ಸಂತತ ಹಸುಬೆಯ ಕೊಂಡು ತೆರಳಿದನು
ಕಂತುಹರನ ಭಕ್ತ ತಾನು ॥೮೯॥

ತಿರುಗಿ ಬಂದನು ತನ್ನ ಸ್ಥಿರಗ್ರಾಮದೆಡೆಗೆ ತಾ
ಹರನ ಭಕ್ತನು ಬಸವೇಶ।
ಕರೆತಂದ ⁽⁽[ಇ]⁽⁽ಭ ಗಮನೆಯ ತವರೂರಿಂದ
ಇರುತಿಹ ಚರಿಸಿಯಾಡುತಲಿ ॥೯೦॥

ತಪ್ಪನು ಹಸುಬೆಯ ಬಣ[ಜಿ]ಸಿಕೊಳ್ಳುತಲಿ
ಒಪ್ಪದಿಂದಲಿ ಬಸವೇಶ।
ಉಪಾಯದಿಂದ ನೋಡಿದ ಪಾಪ ಪುಣ್ಯವ
ತಪ್ಪದು ಪಾಪವಿಲ್ಲಿಯೆನುತ ॥೯೧॥

ಎಲ್ಲಿ ನೋಡಿದರಲ್ಲಿ ಪಾಪ ತಪ್ಪದಲದೆ
ಒಲ್ಲೆ ನಾನಿನ್ನು ಉದ್ದಿಮವ।
ಮೆಲ್ಲನೆ ಹಸುಬೆಯ ಕೊಂಡು ತೆರಳಿಹೋದ
ಮಲ್ಲಿಕಾರ್ಜುನನ ಅರಣ್ಯಕೆ ॥೯೨॥

ಚೆಂಚರೊಳಗೆ ಬಣ[ಜಿ]ಸುತ ಹೋದನು ಪ್ರ
ಪಂಚವಿಲ್ಲದೆ ವೆಚ್ಚಗಳನು।
ಕಿಂಚಿತ ಹೆಚ್ಚಕೊಳ್ಳನು ಕುಂದನೀಯನು
ಪಂಚವದನ ಬಸವೇಶ ॥೯೩॥

ಅಡವಿ ಅರಣ್ಯದೊಳಗೆ ತಿರುಗುತಲಿಹ
ಮೃಡನ ತಧ್ಯಾನ ಮಾಡುತಲಿ।
ಕಡುಗಲಿ ತಪಸಿಗಳನೆ ಕಂಡು ಅವರಲ್ಲಿ
ದೃಢವ ಕಾಣದೆ ಹೋಗುತಿಹನು ॥೯೪॥

ಉಗ್ರತಪಸವ ಮಾಡುವರ ನೋಡುವ ತಾ
ಶೀಘ್ರದೊಳವರ ಭೇದವನು।
ಆಗಳೆ ಅರಿತು ಫಲವಿಲ್ಲವೆನುತಲಿ
ಸಾಗಿ ಹೋಹನು ಅತಿಗಳೆಯ ॥೯೫॥

೧೧-೧೧ ವಿ (ಮೂ)

ಗಹ್ವರದೊಳು ತಿರುಗುತಲಿಹ ಶರಣನು
ಸ್ಥಾವರವಾಗಿ ನಿಂದಿರನು।
ಭಾವಿಸಿ ನೋಡುತಿಹನು ತಪಸಿಗಳೊಳು
ಭಾವಶುದ್ಧ್ಯುಳ್ಳವರನು ॥೯೬॥

ಕದಳಿಯ ಸುತ್ತಲಿ ತಿರುಗಿ ನೋಡುತ ಹೋದ
ಮದನ ಅರಿಯ ಭಕ್ತ ತಾನು।
ಮುದದಿಂದ ಸರಿಯಲಿ ಕೆಳಗೆ ಮೂವರೊಂದೆಡೆ
ಅದ ಕಂಡ ತಪಸಮಾಡುವುದ ॥೯೭॥

ಯೋಗಧ್ಯಾನದಲಿರೆ ಹೋಗಿ ನಿಂದನು ಅಲ್ಲಿ
ಆಗ ಅವರ ಮುಂದೆ ತಾನು।
ಭಾಗ್ಯಮುಖನ ಕಂಡು ಆಗ ನುಡಿದನೊಬ್ಬ
ಹೇಗೆ ಬಂದೆಯ್ಯ ಇಲ್ಲಿಗೆನುತ ॥೯೮॥

ಹುಲಿಕರಡಟ್ಟುಳಿ ಬಲು ಆನೆಗಳ ಹಿಂಡು
ಎಲ್ಲಿ ನೋಡಲಿ ಕರ ಘನವು।
ನೆಲೆಯನರಿಯದೆ ನೀನಿಲ್ಲಿಗೇಕೆ ಬಂದೆಂದು
ಸಲೆ ತಪಸಿಗಳು ಆಡಿದರು ॥೯೯॥

ಬಂದೆ ಶಿವನ ಕೃಪೆಯಿಂದ ನಿಮ್ಮನು ನೋಡ
ಲೆಂದು ನುಡಿದ ಬಸವೇಶ।
ಬಂದಿರೆ ನಿಮ್ಮ ಕೃಪೆಯಿಂದ ನಮ್ಮಯ ತಪ
ಮುಂದೆ ಸಾಧ್ಯಗಳೆಂದರವರು ॥೧೦೦॥

ಶಿವಕೃಪೆಯಿಂದಲಿ ಭವನಾಶವೀರೇಳು
ಭುವನದೊಳುಳ್ಳ ಜೀವರಿಗೆ।
ಭವಪಾಶಕರ ಕಂಡರೇನು ಸಾಧ್ಯಗಳೆಂದು
ಭವನಾಶ ತಾನು ನುಡಿದನು ॥೧೦೧॥

ಅಂದಮಾತಿಗೆ ಕುಳ್ಳಿರಿಯೆಂದು ಕುಳ್ಳಿರಿಸಿ ಮ
ತ್ತೊಂದು ನುಡಿದನು ತಾ ತಪಸಿ।

ಚಂದ್ರಶೇಖರಕೃಪೆಯಿಂದ ಸಾಧ್ಯವು ಸಹಜ
ಹೊಂದಿಕ್ಯಾಗಿಹ ಶಿವ[೧೨][ನ] ಲ್ಲಿ ॥೧೦೨॥

ಜೀವನ ಸರ್ವಕೆ ಜೀವ ಚೈತನ್ಯನು
ದೇವ ತಾನಾಡಿಸುತಿಹನು।
ಭಾವಿಸಿ ಭಕ್ತರ ಹೃದಯದೊಳಗೆ ಶಿವ
ಸ್ಥಾವರವಾಗಿರುತಿಹನು ॥೧೦೩॥

ಅದರಿಂದ ಶಿವ ನಿಮ್ಮ ಹೃದಯದೊಳಿಹನಾಗಿ
ಸಾಧ್ಯವೆಂದೆವು ನಾವು ಎನುತ।
ಮುದದಿಂದ ತಪಸಿ ಆಡಿದ ಮಾತನೆ ಕೇಳಿ
ಅದಕೆ ನುಡಿದ ಬಸವೇಶ । ॥೧೦೪॥

ಭಕ್ತನೆಂಬಯ ಮಾತು ಚಿಕ್ಕಟಲ್ಲವು ಕೇಳಿ
ಅಕ್ಕಜವದು ಆರಿಗಳವು।
ಮುಕ್ತಿಯ ಪಡೆದರೆ ಭಕ್ತರಲ್ಲದೆ ಉಳಿದ
ಯುಕ್ತಿಹೀನರು ಭಕ್ತರಹುದೆ ॥೧೦೫॥

ಹೀನಯುಕ್ತರು ಆರು ಮಾನವ ಜಲ್ಮದೊ
ಳೇನುವನರಿಯದ ಶಿಶುವು।
ತಾನು ಅಳುತ ಕಣ್ಣ ಹೊರ ಕೈಯಲೊರಸಿತು
ನೀನೆ ಖಿನ್ನವು ಎಂದ ತಪಸಿ ॥೧೦೬॥

ಕಣ್ಣೊರಸಿದರೇನು ಹೊನ್ನಗಳಸಿದರೇನು
ಹೆಣ್ಣೇಸ ನೆರಹಿದರೇನು।
ಮಣ್ಣನನೇಕ ಸಾಧಿಸಿದ ಯುಕ್ತಿಗೆ ಮು
ಕಣ್ಣ ಮೆಚ್ಚನು ಎಂದ ಶರಣ ॥೧೦೭॥

ಶಿವನೊಲಿದುದೇ ಭಕ್ತಿ ಶಿವನೊಲಿದುದೇ ಮುಕ್ತಿ
ಭವನಾಶವಾದುದೇ ಯುಕ್ತಿ।

೧೨-೧೨ ನೆ (ಮೂ)

ಶಿವನಲ್ಲದನೇಕವನು ಸಾಧಿಸಿದರೇನು
ಭವಪಾಶಕನದು ದುರ್ಯುಕ್ತಿ ॥೧೦೮॥

ಹಲವು ಮಾತುಗಳೇಕೆ ಒಲಿವ ಶಿವನು ಎಂತು
ನೆಲೆಯನಿದೊಂದ ಪೇಳೆನುತ ।
ಒಲಿದು ಕೇಳಿದನು ತಪಸಿ ತನ್ನ ಮನಸು ತಾ
ನಲಿದು ಸಂತೋಷ ಮಾಡುತಲಿ ॥೧೦೯॥

ಕಟ್ಟಿ ಇಂದ್ರಿಯಗಳ ಸುಟ್ಟು ಗರ್ವಗಳೆಲ್ಲ
ನಿಟ್ಟೊರಸಲು ವ್ಯಸನಗಳ ।
ಧಟ್ಟಿಸೊತ್ತಲು ಮದಗಳನು ಎಲ್ಲವನಾಗ
ನಿಷ್ಠೆಗೆ ಶಿವ ತಾನೊಲಿವನು ॥೧೧೦॥

ಆಸೆ ಮೂರಕೆ ಸಿಕ್ಕಿ ವೇಷವ ತಾಳ್ದರೆ
ಈಶ ತಾನದಕೆ ಮೆಚ್ಚುವನೆ।
ಆಸೆ ವರ್ಜಿಸಿ ಮನ ಬೀಸರುವೋಗದಲಿರೆ
ಬಿಸಿಗಣ್ಣನಾಗ ಮೆಚ್ಚುವನು ॥೧೧೧॥

ಇಂತು ಆಡಿದ ಮಾತುಗಳ ಕೇಳಿ ತಪಸಿ ತಾ
ಸಂತೋಷಗಳ ಮಾಡಿದನು।
ಕಂತುಹರನ ಭಕ್ತ ನೀ ಕೊಟ್ಟೆ ಉಪದೇಶ
ಇಂತು ಸಾಧ್ಯವು ತಪವೆನುತ ॥೧೧೨॥

ಫಲ ಆಹಾರವ ತಂದ ಕೊಟ್ಟೆನು ತಪಸಿದ್ದು
ಸಲೆ ಮಧುರಾಮ್ಲ ಒಗರನು।
ಸಲಸಬೇಕು ಶಿವಶರಣರು ನೀವೆಂದು
ನಲಿದು ನುಡಿದರು ಮತ್ತಾಗ ॥೧೧೩॥

ಅಂದ ಮಾತಿಗೆ ಇಸುಕೊಂಡು ಫಲವನಾಗ
ಮುಂದೆ ತನ್ನಯ ಮನದೊಳಗೆ।
ನಿಂದೆವು ನಾವು ತಪಸಮಾಡಲೆನುತಲಿ
ಎಂಧ್ಧವಣಿಸಿ ಬಸವೇಶ ॥೧೧೪॥

ಸುಳುಹು ಶಿವನದಾಯಿತ್ತೊಳೆದ ಮಿಂಚಿನಂತೆ
ರಳಿಯ ವಾದನು ಕಾಣಲೊಡನೆ।
ಬೆಳಗುಳ್ಳ ದೇವನೀ ಸುಳಿದ್ದೋದೇತಕೆಯೆಂದು
ಒಳಶ್ರುತಿಯಿಂದ ಕೇಳಿದನು ॥೧೧೫॥

ಮಂದಮತಿ ಲೋಕಕೆ ಮುಂದೆ ಮಾರ್ಗವ ತೋರ
ಬಂದ ಕಾರಣಪುರುಷ ನೀನು।
ದಂದುಗ ನಿನಗೇಕೆ ಇಂದು ತಪಸವೆಂಬು
ದೆಂದು ನುಡಿದ ಶಿವನಾಗ ॥೧೧೬॥

ಲೋಕವನುಳುಹಲಿ ಬೇಕಾಗಿ ಬಂದಂಥ
ಏಕ ಮೂರುತಿ ಬಸವ ನೀನು।
ಲೋಕರಕ್ಷಕ ನಿನಗೇಕೆ ತಪಸವೆಂದು
ವಾಕು ಬಂದಿತು ಶಿವನಿಂದ ॥೧೧೭॥

ದಾತ ನೀಯೆನ್ನನು ಏತಕೆ ಸ್ತುತಿ[೧೩][ಸುವೆ][೧೩]
ಭೂತಳದೊಳಗೆ ಬಂದಿರ್ದ।
ಭೂತೇಶ ಶರಣರೊಳೇತರೊಳಗೆ ಏನು
ಮಾತಿಗಂಜುವೆ ಸ್ವಾಮಿಯೆಂದ ॥೧೧೮॥

ಆಡಿದ ಶಬ್ದಕೆ ರೂಢಿಗೀಶ್ವರ ತಾನು
ಮಾಡಿದ ಕರ ಸಂತೋಷವನು।
ರೂಢಿಯೊಳಗೆ ತಪ ಮಾಡಬೇಕಾದರೆ
ಬೇಡವು ಇಲ್ಲಿ ನಡೆಯೆನುತ ॥೧೧೯॥

ಹರನ ನಿರೂಪವೀ ಪರಿಯಿಂದಲಾಯಿತು
ತಿರುಗು ಹಿಂದಕೆ ನೀನು ಎನುತ।
ತರುವಿಂದ್ಯ ತಪಸ ಮಾಡಿದರೊಪ್ಪೆ ನೀ ಹೋಗಿ
ನರವಿಂದ್ಯ ತಪಸ ಮಾಡೆನುತ ॥೧೨೦॥

ಮೂರು ಯುಗವು ಪುಣ್ಯಯುಗವರಿದಲ್ಲೆಂದು
ಸೇರಿ ಅರಣ್ಯದ ಒಳಗೆ।

೧೩-೧೩ ಸ್ತ್ಯಯ. (ಮೂ)

ಕರ ಘನ ಹುಲಿ ಕರಡಾನೆ ಹೆಬ್ಬಾವಿನೊಳು
ಹರನ ಧ್ಯಾನಿಸಬೇಕು ಎನುತ ॥೧೨೧॥

ಮಳೆಗಾಲದೊಳು ಮರದಡಿಯ ಮಾಗಿಗಳೊಳು
ನೆಳಲು ಅಂಬುಧಿ ತಟಾಕದಲಿ।
ಝಳ ಬಿಸಿಲೊಳು ಗುಂಡಿನ ಮೇಲೆ ಅಗ್ನಿಯ
ಬೆಳಗ ಕಾವುತ ತಪಸವನು ॥೧೨೨॥

ಇಂತು ಪರಿಯ ಉಗ್ರ ತಪಸ ಮಾಡುತಲಿಹ
ರಂತು ಪೂರ್ಣ್ವೆಯ ಯುಗದೊಳಗೆ।
ಸಂತತ ಕಲಿಯುಗದೊಳಗೊಪ್ಪೆ ಇದನೆಂದು
ಕಂತುಹರನು ತಾನು ನುಡಿದ ॥೧೨೩॥

ಇದು ಸುಖ ಇಂದು ಅರಣ್ಯದ ಒಳಗಿಲ್ಲಿ
ಇದಕಿಂದ ದುಃಖ ಗ್ರಾಮದಲಿ।
ಉದಮದ ನಿಂದೆಯು ಇವು ತಾಳಿಗೊಳುತಿರೆ
ಹೆದರದೆ ತಪಸಮಾಡೆಂದ ॥೧೨೪॥

ನಿಲ್ಲದೆ ಧರ್ಮಬೋಧೆಯ ಹೇಳು ಧರೆಗೆಂದು
ಮಲ್ಲೇಶ ನಿರೂಪಿಸಿದರೆ ।
ಅಲ್ಲಿ ನಾನೇನುಂಡು ಬೋಧೆ ಹೇಳಲಿಯೆಂದು
ಸೊಲ್ಲನಾಡಿದ ಬಸವೇಶ ॥೧೨೫॥

ಕಪ್ಪರವನು ಕೊಟ್ಟ ಸರ್ಪಭೂಷಣನಾಗ
ತಪ್ಪದೆ ಏನ ಬೇಡಿದುದು।
ಇಪ್ಪುದು ಅದನುಣುತಲಿ ಬೋಧೆ ಹೇಳುತ
ತಪಸ ಮಾಡಿನ್ಹೋಗಿ ಎಂದ ॥೧೨೬॥

ಮಾಡಬೇಡ ಒಂದುದ್ದಿಮವನೆಂದೆನುತಲಿ
ರೂಢಿಗೀಶ್ವರ ನಿರೂಪಿಸಿದ।
ಮಾಡಿ ಉದ್ದಿಮದೊಳು ಇರಿದು ತಿಂಬುದಕಿಂದ
ನೋಡಿ ತಿರಿದು ಉಂಬುದೊಳಿತು ॥೧೨೭॥

ಬಂದುದನತಿಗಳೆಯದೆ ಬಾರದುದಕೇನು
ಸಂದೇಗದಿಂದ ಬಯಸದೆ।
ನಿಂದು ಧರ್ಮಬೋಧೆಯನು ಸಾರುತಲಿ ನರ
ವಿಂಧ್ಯ ತಪಸ ಮಾಡುಯೆಂದ ॥೧೨೮॥

ಈಶನ ಶಬ್ದಕೆ ಬಸವೇಶ ತಿರುಗಿದ
ಹಸುಬೆ ಸಹಿತನಾಗಿ ತಾನು।
ಮೋಸ ಹೋಗದೆ ನರವಿಂಧ್ಯ ತಪಸವನು
ರಾಶಿ ಮಾಡಲಿಬೇಕು ಎನುತ ॥೧೨೯॥

ಗಂಗೆಯೆತ್ತನು ಆಡಿಸುವರು ಯಾವಾಗಲಿ
ಸಂಗಾತ ತಿರುಗುತಿಹಂತೆ।
ಹಿಂಗದಿಹನು ಬಸವಣ್ಣನನಾವಾಗ
ಸಂಗಮೇಶ್ವರ ತಾನಾಡಿಸುತ ॥೧೩೦॥

ಏಕಶತಕ ಏಕತ್ರಿದಶ ಪದದೊಳು
ನಾಲ್ಕನೆ ಸಂಧಿ ಮುಗಿಯಿತು।
ವಾಕಿಸುವೆನು ಐದನೆ ಸಂಧಿಗಳೊಳು
ಲೋಕ ಪಾಲಿಪನ ಭಕ್ತಿಯನು ॥೧೩೧॥

ಅಂತು ಸಂಧಿ ೪ಕ್ಕಂ ಪದನು ೪೪೮ ಕ್ಕಂ ಮಂಗಳಮಹಾ

❖❖

*
ಸಂಧಿ : ಐದು

ಗುಂಡ ಬಸವೇಶ್ವರನ ಸಂಸಾರ ಕಥನ

ಕಂದ :

ಗುಂಡಯ್ಯನೆಂಬ ನಾಮವು
ಮಂಡಲದೊಳು ಪೆಸರುವಡೆದ ಮಹಿಮೆಯ ಗುಂಡಂ।
ಕೊಂಡಾಡಿ ನೆನೆದ ಅವರಿಗೆ
ಖಂಡಿಸುವವು ಭವಭವಂಗಳು ಪಾತಕವೆಂಬವು ॥ I ॥

ಧರ್ಮಗುಂಡಮೃತಗುಂಡಂ
ನಿರ್ಮಳ ಭಕ್ತಿಯಲಿ ಗುಂಡ ಭಾಗ್ಯದ ಗುಂಡಂ।
ವರ್ಮವರಿಹಿಸುವ ಗುಂಡಂ
ಪರ್ಮ ಶಾಂತಿಯ ಗುಂಡ ನಿಜಗುರು ಗುಂಡಂ ॥ II ॥

ಪದನು :

ಅಲ್ಲಿಂದ ತಿರುಗಿ ಬಂದನು ತನ್ನ ಗ್ರಾಮಕೆ
ಬಲ್ಲಿದ ಬಸವೇಶ ತಾನು।
ಮಲ್ಲೇಶ್ವರನ ಉಪದೇಶ ಮನಕೆ ತುಂಬಿ
ಎಲ್ಲಿಲ್ಲದೆ ಕಾಲ ತನಗೆ ॥೧॥

ಮಾಡಬೇಕಿನ್ನು ಭಕ್ತಿಯನು ಎಂದೆನುತಲಿ
ರೂಢಿಗೀಶನ ಭಕ್ತ ತಾನು।

---

* ಶ್ರೀ ಗುರುವೇ ಗತಿ (ಮೂ)

ಹೇಡ್ಯಾಡಲೇಕೆ ಎಂದೆನುತ ವ್ರತವ ತಾನೂ
ಮಾಡಿಕೊಂಡನು ಮನವೊಲಿದು ॥೨॥

ಹರನ ಭಕ್ತನು ಬಸವೇಶನು ಈ ಪರಿ
ಇರುತಿಹ ತನ್ನ ಗ್ರಾಮದಲಿ।
ಪುರುಷ ಹಿಡಿದ ವ್ರತ ಸತಿಗಿರಬೇಕೆಂದು
ಪರಮಪುರುಷ ತಾನಾಡಿದನು ॥೩॥

ಸತಿಪತಿ ಒಂದಾಗಿ ವ್ರತಿಗಳಾದರು ತಾವು
ಪ್ರೀತಿಯಿಂದಲಿ ಸಂತೋಷದಲಿ।
ಮಾತೆ ಪಿತರುಯೆಂಬ ಹಂಬಲ ಮರೆದು ತಾ
ರೀತಿವಿಡಿದು ಬೇರೆ ನಿಂದ ॥೪॥

ನಿಲ್ಲದೆ ಉಗ್ರಶಿಲೆಯನು ಕೈಕೊಂಡನು
ಬಲ್ಲಿದ ಬಸವೇಶ ತಾನು।
ಇಲ್ಲದೆ ಉಣ್ಣ ಸಮಯಾಚಾರವಾ [೧][ವಾ][೧]ಗ
ಎಲ್ಲಿ ಇದ್ದರೆ ತಪ್ಪದಿಹನು ॥೫॥

ವ್ರತಿಯಾಗಿ ಶಿವನನು ಸ್ತುತಿಸುತಲಿರುತಿಹ
ಮಥಿಸಿ ನೋಡಲು ಕವಿಯಲ್ಲ।
ಪೃಥ್ವಿಯೊಳಗೆ ಉಳ್ಳ ಕವಿಗಮಕಿಗಳಿಗೆ
ಮತಿಯನೀಯಲು ಬಂದ ಕರ್ತ ॥೬॥

ಈ ಪರಿಯಲಿ ಇರುತಲಿ ಬಸವೇಶನು
ವ್ಯಾಪಿಸಿ ನೋಡಿ ಮನದಲ್ಲಿ।
ಪಾಪಕನ್ನವ ನೀಡಿದರೆ ಫಲವಿಲ್ಲೆಂದು
ಉಪಾಯ ತೋರಿದ ಶಿವನು ॥೭॥

ಧಾರುಣಿಯೊಳಗೀಗ ಸಾರಿದೂರಲಿ ಬಂದ
ಕಾರುಣಿಕನು ನೀನು ಇಲ್ಲಿ।
ಕ್ರೂರಭಕ್ತಿಯ ಮಾಡಿ ಒಲಿಸ ಬಂದುದು ಇಲ್ಲ
ಕಾರಣಲ್ಲಿದು ನಿನಗೆಂದ ॥೮॥

೧–೧ ವಾ (ಮೂ)

ಬಂದ ಕಾರಣ ಬಿಟ್ಟು ಇಂದು ಭಕ್ತಿಯ ಮಾಳ್ಪ
ದಂದುಗ ನಿನಗೇಕೆನುತ।
ಹಿಂದುಗಳಿ೨[ದು]೨ ನೀನು ಮುಂದೆ ಬೋಧೆಯ ಸಾರು
ಎಂದಾಗ ಶಿವನ ಆಜ್ಞೆಗಳು ॥೯॥

ಹೇ೩[ಳು]೩ ಮೊದಲುಗೊಂಡ ಡಂಗುರ ಬೋಧೆಯ
ಹೇಳು ಎಂದೆಂಬ ನಿರೂಪಕೆ।
ಜಾಳಿಸಿದನು ಹಿಡಿದಂತಹ ವ್ರತವ ತಾನು
ಭಾಳಲೋಚನನಾಟದಿಂದ ॥೧೦॥

ಬೆಂಬಿಡಿತಾಗಿ ಹೋಗಿ ಬಸವೇಶನ
ನಂಬಿದಾ ಸತಿ ಹೆತ್ತವರ।
ಬೆಂಬಳಿಯಲಿ ಪ್ರಸೂತೆಯಾಗಿರೆ ಕರೆ
ತಂಬ ವೇಳೆಯು ಶಿವನಾಟ ॥೧೧॥

ಕರೆಯ ಹೋದನು ಗುಂಡಗುರುಕಿಗೆ ಸತಿಯನು
ಸುರಗಿಯ ಕಂಡ ಮ೪[ನೆಯೊ]೪ಳಗೆ ।
ಹರಭಕ್ತ ಗುಂಡಬೊಮ್ಮಯ್ಯಗಳ್ಹಿಡಿದಿರ್ದ
ವೆರೆಡೊಳಿನ್ನೊಂದೆಲ್ಲೆಂದ ॥೧೨॥

ಏನ ಬಲ್ಲೆವು ನಾವು ಒಂದೆರಡೆಂಬುದ
ನೀನೆ ಬಲ್ಲೈಯ್ಯಾ ಅದನೆನುತ।
ಏನ ಮಾಡೆವು ನಾವು ಸುರುಗಿಯನದನಿನ್ನು
ನೀನೊಯ್ಯಿ ಎಂದು ಆಡಿದರು ॥೧೩॥

ತೆರಳಿಸಿದನು ಸತಿ ಜಕ್ಕಾಂಬಿಕೆಯನಾಗ
ಸುರಗಿ ಸಹಿತವಾಗಿ ತಾನು।
ಬರುತಲು ಚಾಟ ತುಂಬಿತು ಹರನದು ಮುಂದೆ
ಪರಮ ಪುರುಷನಾಟ ಕೇಳಿ ॥೧೪॥

೨–೨ ದ (ಮೂ)   ೩–೩ ಳ (ಮೂ)   ೪–೪ ನೊ (ಮೂ)

ಕಂಗಳ ಸೋಮಯ್ಯಲಿಂಗನ ಸ[೫][ನಿಹ][೫]ದ
ಲಂಗರ್ಥೋಳಿಗೆ ಬುತ್ತಿಯನು ।
ಹಿಂಗದೆ ಗಿಡದ ಕೊನೆಗೆ ಕಟ್ಟಿ ಬಂದನು
ಲಿಂಗನಾಟದಿ ಬಸವೇಶ ॥೧೫॥

ಹಕ್ಕಿ ಪಕ್ಷಿಗಳು ಮುಟ್ಟವು ಕ್ಕುಲತೆಯಲಿ
ಸುಕ್ಕವು ಬಿಸಿಲ ಕೂರದಲಿ।
ಹಕ್ಕೆದಪ್ಪದಲಿ ಇದ್ದವು ಕಟ್ಟಿದಂದದಿ
ಅಕ್ಕಜದಾಟವಾಡಿದನು ॥೧೬॥

ಊರ ಹೊರಗೆ ಇಟ್ಟ ಕರೆತಂದ ಸತಿಯನು
ಮೂರು ದಿನಕೆ ಕಟ್ಟಿದವನು।
ತರಸಿದ ಮೀಸಲಳಿಯದ ಇದ್ದವ ತಾನು
ಪರಸಾದವೆಂದು ಸಲಿಸಿದ ॥೧೭॥

ಬಿಲ್ಲನೇರಿಸಿ ಅಂಬ ಹಿಡಿಕೊಂಡು ಊರೊಳು
ನಿಲ್ಲದೆ ಓಡ್ಯಾಡುತಿಹನು।
ಸೊಲ್ಲಿಲಾಡುವ ಕೇಡು ಬಂತು ಪಾಪಕೆಯೆಂದು
ಎಲ್ಲರಾ[ಶ್ಚ]ರಿಯ ಮಾಡುವರು ॥೧೮॥

ಊರ ಒಳಗೆ ಬಿಲ್ಲನೇರಿಸಿದಾತನು
ಊರ ಹೊರಗೆ ಬಿಲ್ಲನಿಳಸಿ।
ಊರ ಹೀನಡವಿ ಲೇಸೆಂಬ ಆಟವನಾಡೆ
ಯಾರಾದರಣಕವಾಡುವರು ॥೧೯॥

ಅಣಕವಾಡಲಿಬೇಡ ಬಿಲ್ಲಕೋಲವರಿನ್ನು
ಎಣಕೆಯಿಲ್ಲದೆ ಎದ್ದು ಬಂದು।
ಕಣುಕಸ ಉರಿಗೆ ಕೆಟ್ಟಂತೆ ಕೆಟ್ಟಿತು ಲೋಕ
ಅಣಕವಾಡುವರೆ ಕೇಳೆಂದ ॥೨೦॥

೫–೫ ನ್ನ (ಮೂ)

ಬೀದಿಯೊಳು ಚಿಟ್ಟೋರಿಗೆ ಎಂದು ಎನುತಲಿ
ಬೂದಿಯ ಚೆಲ್ಲ್ಯಾಡುತಿಹನು।
ವೇದಿಸಿ ಹರಿಬ್ರಹ್ಮರಿಗೆ ಅಳವಲ್ಲದ
ಆದಿಮೂರುತಿ ಆಟದಿಂದ ॥೨೧॥

ಕೆಟ್ಟಾಡುತಿಹರು ಊರೊಳಗೆಲ್ಲ ಹಲಬರು
ನಿಷ್ಠೆಯ ಕಾಣಲರಿಯದೆ।
ಚಿಟ್ಟೋರಿಗಾಟವಾಡಿದ ಅಷ್ಟ ದಿವದೊಳು
ಸುಟ್ಟು ಸೂರ್‍ಯಾಡಿತೂರೆಲ್ಲ ॥೨೨॥

ಒಂದು ದಿವಸ ಬಿಲ್ಲನೇರಿಸಿ ಹಿಡಕೊಂಡು
ನಿಂದರರದೋಡಿದ ತಾನು।
ಬಂದು ದಕ್ಷಿಣ ಭಾಗದಲಿ ಬಿಲ್ಲ ಬಿಸುಟಾಗ
ಕೊಂದರೆನುತ ಹೊರಳಿದನು ॥೨೩॥

ಅರಸು ದಂಡ್ಯಾವ ಕಡೆಗೆ ಹೋದನೆನುತಲಿ
ನೆರೆದಿದ್ದವರ ಕೇಳಲವರು।
ಪೂರುವ ಮುಖಕೆ ಹೋಯಿತು ದಂಡ ಎನೆ ಕೇಳಿ
ಹರಭಕ್ತ ತಾ ಹುಸಿಯೆಂದ ॥೨೪॥

ದಂಡ ಹೋಯಿತು ದಕ್ಷಿಣ ಭಾಗದಲ್ಹೋಗಿ
ತುಂಡಿಸ್ಯಾವೆರಡು ಶಿರಗಳು।
ಕೊಂಡು ಬಂದರು ಅಲ್ಲಿರ್ದ ದೇವರನೆಂದು
ಕಂಡಂತೆ ತಾನು ಹೇಳಿದನು ॥೨೫॥

ಹುಸಿಯದಲಾದವು ರಾಜಕಾರ್ಯವು ಮುಂದೆ
ಬಸವೇಶ ಹೇಳಿದಂದಲಿ।
ಹುಸಿಯೆಂದು ನಿಂದೆಗಳ ಮಾಡುವರ ಮೋರೆಗಳೆಲ್ಲ
ಮಸಿಯಂತಾದವು ಕಳೆವಳಿದು ॥೨೬॥

ಇಂತೀ ಪರಿಯ ಸೂಚನೆಗಳನು ಪೇಳುತ
ಕಂತುಹರನ ಗೂಡೊಳಿರಲು।

ಸಂತತ ಬಂಜೆ ಮುತ್ತೈದೆ ಕೊಡನ ಹೊತ್ತು
ಕಾಂತೆ ಬಂದಳು ತಾನಾಡುತಲಿ ॥೨೭॥

ನನ್ನ ಮಗನು ಬಸವಣ್ಣನೆಂದೆನುತಲಿ
ರನ್ನೆ ಬಂದಳು ತಾನಾಡುತಲಿ।
ತನ್ನ ಸ್ತನದಲಿ ಕ್ಷೀರವು ಧಾರೆಗಟ್ಯಾಗ
ಉನ್ನಂತವಾಗಿ ಸುರಿವುತ ॥೨೮॥

ಕೊಡನಿಳುಹಲಿ ಹೋದರು ನುಡಿಗೊಳ್ಳದೆ
ಕೊಡನಿಳಿಯದು ತಲೆಯಿಂದ।
ನುಡಿಯ ಕೊಟ್ಟನು ಕೊಡನಿಳುಹೆಂದು ಬಸವಣ್ಣ
ಕೊಡನಿಳಿಯಿತು ನಿಮಿಷದಲಿ ॥೨೯॥

ಸುರಗಿಯ ಪಿಡಿದು ಇದ್ದನು ಮಾಸಿಯಿದ್ದುದ
ನೆರೆದಿದ್ದ ಜನರು ನೋಡಲಿಕೆ।
ಕರದ ವಿಭೂತಿಯ ತೊಡೆದು ತೋರಿದನಾಗ
ಕರ ಚೊಕ್ಕ ಬೆಳ್ಳಿಯಂತಿಹುದು ॥೩೦॥

ಪಾಪ ತೊಳೆದು ಹೋದಿತು ಲೋಕದೊಳು ಮುಂದೆ
ಈ ಪರಿಯೆಂದು ಹೇಳಿದನು।
ಉಪಾಯದಿಂದ ಪುಣ್ಯಕೆ ಉಣಿಸೆ ಮುಂದೆ
ಆ ಪರಿಗಳನು ತೋರಿದನು ॥೩೧॥

ಬಿತ್ತದೆ ಬೆಳದ ನಿರಾಳ ಬೊಮ್ಮನುಯೆಂದು
ಮತ್ತಾಡುವರು ಲೋಕದೊಳಗೆ।
ತುರ್ತೀಗ ನೋಡಿ ಬಿತ್ತದೆ ಬೆಳೆವುದ ಕಂಡು
ಸತ್ಯ ಬಸವ ತಾನಾಡಿದನು ॥೩೨॥

ಅರೆಯ ಮೇಲೆ ಹಸ್ತವೆಳೆದು ಬರೆದನು
ನೆರದಿದ್ದ ಜನರು ನೋಡಲಿಕೆ।
ಬೆರಗಾದರವರು ಸಾಲನು ಮೂರು ಕಾಣುತ
ಹರಭಕ್ತ ನೀನಹುದೆನುತ ॥೩೩॥

ಧರ್ಮಕೀ ಪರಿ ಉಣಿಸ್ಯಾನು ಶಿವಭಕ್ತಿಯ
ವರ್ಮವರಿತು ನಡೆದವರಿಗೆ।
ಕರ್ಮಕೆ ಕೇಡು ಅಧಿಕ ಮುಂದೆ ಅದೆಯೆಂದು
ಪರ್ಮ ಪುರುಷ ತಾನಾಡಿದನು ॥೩೪॥

ಈಶಭಕ್ತನು ಪವಾಡಗಳ ತೋರುತ ಮ।
ಹೇಶನ ಗುಡಿಯೊಳಗಿರಲು
ಬೇಸರದಲಿ ವಾದ್ಯ ಬಾರಿಸುತಿಹುದಲ್ಲಿ
ಬಸವೇಶ ಕುಳಿತ ಇದಿರಲಿ ॥೩೫॥

ಇಬ್ಬರು ಹಾದಿ ಹೋಗುತಲಿ ಮದ್ದಳೆ ಶಬ್ದ
ದಬ್ಬರ ಕೇಳಿ ಮತ್ತವರು।
ಒಬ್ಬ ನೋಡುವ ನಡೆ ಏನಾಗುತದೆ ಎನೆ
ಒಬ್ಬ ನಿಂದೆಗಳ ಮಾಡಿದನು ॥೩೬॥

ಬೆಲ್ಲ ಕೊಬ್ಬರಿ ತಿಂದು ಸೊಕ್ಕಿದ ಬಣಜಿಗ
ನಿಲ್ಲದೆ ಕುಣಿದಾಡುತಹನೆ।
ಅಲ್ಲೇನ ನೋಡಿ ನಡೆ ಹೋಗಬೇಕೆಂದು
ಸೊಲ್ಲ ಹೇಳುತ ಹೋಗುತಿರ್ದ ॥೩೭॥

ಹೊಡೆದ್ಹಾಗಾಯಿತು ದೂಷಕವ ಮಾಡಿದವನಿಗೆ
ಹೆಡಕಿನ ಮೇಲೆ ಸೀಮೊಳಗೆ।
ಹೊಡೆದೆಂದು ಹಿಂದಣವಗೆ ಆಡಲಿಲ್ಲೆನೆ
ನಡೆ ನೀನಾದರೆ ಮುಂದೆ ಎಂದ ॥೩೮॥

ಮತ್ತೊಡೆದ್ಹಾಗಾಗೆ ಕತ್ತಲಿಡುತ ಬಿದ್ದ
ಸತ್ಯನ ಕೆಡನುಡಿದುದಕೆ।
ಮತ್ತೇಳು ಮೋರೆ ಹಿಡಿದೋಡು ಹಿಂದಕೆಯೆಂದು
ಉತ್ತರವಾಯಿತು ಬಯಲ ॥೩೯॥

ತಿರುಗಿ ಬಂದನು ಮೋರೆ ಹಿಡಿದು ಅಬ್ಬರಿಸುತ
ಹರ ಬಸವೇಶನಿದ್ದೆಡೆಗೆ।

ಅರಿಯದೆ ನಿಂದ್ಯ ಮಾಡಿದ ತಪ್ಪ ಕಳೆಯೆಂದು
ಕರವ ಮುಗಿದು ಅಡ್ಡ ಬಿದ್ದ ॥೪೦॥

ಏಳು ಶಿವನು ತಪ್ಪನು ಕಳೆದನೆಂದು
ಕಳುಹಿ ಅವರ ಮತ್ತೆ ತಾನು।
ಘೀಳೆಂಬ ವಾದ್ಯರಭಸದಿಂದ ತೆರಳಿದ
ಭಾಳಲೋಚನ ಭಕ್ತರೊಳಗೆ ॥೪೧॥

ಹೋಗಿ ಕುಳಿತನೊಬ್ಬ ಭಕ್ತನ ಮನೆಯಲಿ
ಆಗ ನಿಂದ್ಯವ ಮಾಡಿದೊಬ್ಬ।
ಹೇಗುಣ ಕುಳಿತಾತ ಹಾಗೆಯೆ ಹೆಡೆಗಯ್ಯ
ಆಗ ಬಿಗಿದಂತೆ ಬಿದ್ದ ॥೪೨॥

ಓಡಿ ಬಂದಳು ನಿಂದಕನ ಮದವಳಿ ತಾ
ಬಾಡಿದ ಮುಖವು ಅಳಲುತಲಿ।
ಮಾಡುತಿದ್ದನು ಶಿವಪೂಜೆಯ ಮನೆಯೊಳು
ನುಡಿಯಿಲ್ಲ ಬಿದ್ದನೆಂದೆನಲು ॥೪೩॥

ಅಂದಮಾತಿಗೆ ಬಸವೇಶ ತಾ ನುಡಿದನು
ಕಂಡುಕೊಂಡನು ತನ್ನ ತಾನೆ।
ನಿಂದ್ಯವ ಮಾಡಿದ ಕಾರಣದಲಿ ಆತ
ಬಂಧನದೊಳು ಬಿದ್ದನೆಂದ ॥೪೪॥

ಕರುಣಿಸಿ ಗುಣದೋಷಗಳನು ನೋಡದೆ ಇನ್ನು
ಪರಿಹರಿಸೆಂದು ವಂದಿಸಲು।
ಕರೆತನ್ನಿ ಆತನಿಲ್ಲಿಗೆ ಎಂದು ಎನೆ ಬಾಲೆ
ಕರೆತಂದಳಾಗ ಪುರುಷನ ॥೪೫॥

ತಾನು ಬಂದನು ನಿಂದಕನು ದಬ್ಬರಿಸುತ
ಮೋನದಿಂದಲಿ ಶರಣೆನಲು।
ಏನ ಮಾಡಿದೆ ನಿಂದೆಯವ ಹೇಳು ಎನುತಲಿ
ತಾನು ನುಡಿದ ಬಸವೇಶ ॥೪೬॥

ತಪ್ಪು ನಮ್ಮದು ಸ್ವಾಮಿ ತಪ್ಪ ಭಕ್ಷಿಸಿಯೆಂದು
ಒಪ್ಪದಿಂದಲಿ ಶರಣೆನಲು।
ಇಪ್ಪ ಭಕ್ತರ ಕೈಯ್ಯ ವಿಭೂತಿ ಧರಿಸ್ಯಾಗ
ಅಪ್ಪ ಕರುಣಿ ಕಳುಹಿದನು ॥೪೭॥

[೬][ಹೀ][೬]ಗೆ ಬಸವಲಿಂಗ ಹೋಗೆಂದು ಕಳುಹಲು
ಬೇಗ ಬಿಟ್ಟಿತು ದೇಹ ಜಡವು।
ಆಗ ಸ್ತುತಿಸ ಹಣ್ಣಿದನು ನಿಂದಕನು ಶಿವ
ಯೋಗಿ ನೀನಹುದಹುದೆನುತ ॥೪೮॥

ಒಂದು ದಿವಸ ಶಿವನಾಟದಿ ಬಸವೇಶ
ಬಂದೊಂದು ಠಾವಿಲಿ ತಾನಿರಲು।
ಮಂದ ಮತಿಯವ ತನ್ನ ಪಾದವ ತೊಳೆಯಲು
ಬಂದು ಬಿದ್ದವು ನೀರು ಮೇಲೆ ॥೪೯॥

ಆಗ ಮೋರೆಯ ನೀರು ಮೇಗ ಬಿದ್ದದ ನೋಡಿ
ಬೇಗ ವಂದಿಸಿದ ಬಸವೇಶ।
ಬಾಗ್ಯಹೀನನು ಮೀಯಲು ಬಂದನು ಬೈಗಲ್ಲಿ
ನಾಗರು ಕಚ್ಚಿ ಹತವಾದ ॥೫೦॥

ಸೊಕ್ಕಿದ ಬಣಜಿಗ ಹಕ್ಕ್ಯಾಗಿರದೆ ತಾ
ಹೊಕ್ಕನೇತಕೆ ಇಲ್ಲಿ ಎನುತ।
ದೊಕ್ಕನೆ ನುಡಿದ ಕಾಲನು ಹಿಡಿದೆಳೆಯೆಂದು
ಒಕ್ಕಲಿಗ ತಾನಾಡಿದನು ॥೫೧॥

ಇಂದೆನ್ನ ಎಳೆದಿರಿ ಮುಂದೆ ದೈವದ ದುರಿತ
ಬಂದಾಗ ಎನ್ನ ಪಾಪಿಯನು।
ಅಂದಿಗೆ ಎಳೆಯೆಂದು ಹೇಳಿದ ಪದದೊಳು
ಮುಂದೆ ಕೆಟ್ಟನು ಆ ಒಕ್ಕಲಿಗ ॥೫೨॥

೬-೬ ಹೇ(ಮೂ)

ಮರುಳು ಹತ್ತಿದೆ ಬಿಡಿಸೇನು ಎಂದೆನುತಲಿ
ಊರಧಿಕಾರಿ ತಾ ಬಂದ।
ಎರಡು ಹೊರ್ಥುಣಿಸಿಯ ಬಡಿಗೆಯ ತರಿಸಿದ
ಊರ್ಥೊರೆಯಕೆ ಕರೆತರಿಸಿ ॥೫೩॥

ಬೇಡ ನೋಯದೆ ಬಿಡು ಮರುಳು ತನವನೆಂದು
ಆಡಿದ ತಾನಧಿಕಾರಿ।
ನೋಡೆರಡ್ಥೊರೆ ಬಡಿಗೆಯ ತರಿಸಿದೆನೀಗ
ಮಾಡುವೆ ನಿನಗೆ ಶಿಕ್ಷೆಯನು ॥೫೪॥

ಕೇಳು ಮರುಳುತನ ಬಿಡೆ ನನ್ನಿಚ್ಛೆಗಳಲ್ಲ
ಭಾಳಲೋಚನ ಇಚ್ಛೆಯೆಂದ।
ಆಳ ನಿಮ್ಮಯ ತಾಯ ಮೊಲೆಯ ಕೊಯ್ತಾಯೆನೆ
ಹೇಳು ಕೊಯ್ತರಬೇಕೊ ಬೇಡ ॥೫೫॥

ಒಡೆಯ ಕೊಯ್ತಾಯೆನೆ ತರಿಬೇಕು ಎನುತಲಿ
ನುಡಿದನಾಗಲೆ ಠಾಣದಾರ।
ಮೃಡನಾಜ್ಞೆ ನಮಗೆ ಹಾಗೆಯೆಂದು ಎನುತಲಿ
ನುಡಿವುತಿದ್ದನು ಬಸವೇಶ ॥೫೬॥

ಪಾಪ ಮಾಡಿದ ಕಾಯಕಾಜ್ಞೆಯ ಹರ ತಾನು
ಈ ಪರಿ ಮಾಡಿದನೆನಲು।
ಪಾಪವೇನನು ಮಾಡಿದ್ದೇಳೆಂದು ಎನುತಲಿ
ಪಾಪಿ ಕೇಳಿದ ಠಾಣದಾರ ॥೫೭॥

ಅಕ್ಕ ತಾಯಿ ತಂಗಿ ಎಂದೆನುತಳುಪಿದ
ಅಕ್ರಮದ ಕಾಯವಿದಕೆ।
ತಕ್ಕ ಶಿಕ್ಷೆಯ ಮಾಡುತಹನೆ ಶಿವನೆ ಎಂದು
ಮುಕ್ಕಣ್ಣ ಭಕ್ತನಾಡಿದನು ॥೫೮॥

ನೋಡು ನಿನ್ನಯ ಪಾಪಕಾಜ್ಞೆಯನೀಗಲೆ
ಮಾಡುವೆ ನಾನು ಎಂದೆನಲು।

ಮಾಡು ಬೇಗದಲಿ ಎಂದೆನುತ ಬಸವಲಿಂಗ
ಆಡಿದ ತಾ ನಸುನಗುತ ॥೫೯॥

ನಿನ್ನ ಮರುಳ ಹೊಡೆದೀಗ ಬಿಡಿಸೇನಿಂದು
ಅನ್ನಕ್ಕ ನೀ ನಿಲ್ಲು ಎನುತ।
ಇನ್ನೀಗ ನೋಡ್ವೇಗೆ ಮಾಡೇನೆಂದೆನುತಲಿ
ತನ್ನ ಸೊಕ್ಕಿಂದಲಾಡಿದನು ॥೬೦॥

ಮತ್ತೆಡಬಲದಲಿ ಬಡಿಗೆಯ ಹಿಡಕೊಂಡು
ಎತ್ತಿದರ್‍ಹೊಡೆದೇವೆನುತ।
ಎತ್ತಿದ ತೋಳು ಎತ್ತಿರುವವು ಬೀಳವು
ಸತ್ಯಯನಂಗದ ಮೇಲೆ ॥೬೧॥

ಪೆಟ್ಟು ಬೀಳದ ನೋಡಿ ತಟ್ಟನುಚ್ಚಿದ ಕತ್ತಿಯ
ಸಿಟ್ಟಲಿ ಹೊಡೆದ ಬಸವೇಶನ।
ಪೆಟ್ಟು ಎರಡು ಮೂರು ತಟ್ಟಾಗಿ ಬೀಳೆ ಕ
ಪ್ಪಿಟ್ಟು ಕಾಯಿತು ಅವನ ಮೋರೆ ॥೬೨॥

ಸಾತು ಪುರ್ಮಾನವು ಬಂದಿತು ಪಾಪಕೆ
ಕಿತಿಬೆ ನೋಡ್ಹೊಡೆ ಎನುತ।
ಭೀತಿಯಿಲ್ಲದೆ ಹೇಳುತಿರ್ದ ಪದಗಳೊಳು
ದಾತ ಬಸವಲಿಂಗ ನಗುತ ॥೬೩॥

ಕಾರತಾರಹಾನೆಂದು ಅರಿತು ಬೆರಳು ಕಚ್ಚಿ
ಕರವ ಜೊಡಿಸಿ ತಲೆವಾಗಿ।
ತುರುಕ ಕಿವಿಯ ಹಿಡಿದೊಡಮುರಿಕೊಂಡಾಗ
ತೆರಳಿದ ಗುನ್ಹಭಗಸೆನುತ ॥೬೪॥

ಬಂದ ಗೌಡರು ಮಂದಿಸಹಿತ ವಾದ್ಯ
ವೃಂದ ಕಂಚಕ್ಕೆ ಕಳಸವ।
ತಂದಿಳಿಹಿದರು ಮುಂದೆ ಬಸವೇಶನು
ಚಂದ್ರಶೇಖರಗೆ ಎತ್ತಿಸಿದ ॥೬೫॥

ಇಲ್ಲಿ ಸಂಭ್ರಮವರ್ತಿಯಾಗಿರಲಿಕೆ
ಉತ್ತಮ ಸತಿಯಿದ್ದ ಎಡೆಯ।
ಮತ್ತೆ ಕಾಸಿದರು ಉದಕವನಾಗಲಿ ಬೇಗ
ಸತ್ಯನ ಅಂಗ ಮಜ್ಜನಕೆ ॥೬೬॥

ಕರೆತಂದು ಅಂಗಮಜ್ಜನ ಮಾಡಿಸೆಲ್ಲರು
ತಿರುಗಿ ಹೋದರು ಬಹುಜನರು।
ಕರ ಪ್ರಿಯದಲಿ ಭಕ್ತರಡಿಗೆಯ ತಂದರು
ಪರಮಪುರುಷ ಸಲಿಸಿದನು ॥೬೭॥

ಮೃಡನಾಟದಿಂದೂರ ಹೊರಗಿರುತಿರಲಿಕೆ
ಕಡು ಭಕ್ತಿಯಿಂದುಣ ತರಲು।
ಜೇಡ ಸಿಂಪಿಗರೆಂದು ನೋಡ ತಾ ಕುಲಗಳ
ಹೇಡ್ಯಾಡದಲಿ ಉಣುತಿಹನು ॥೬೮॥

ತಂದೆ ತಾಯವೆ ಓಡಿ ಬಂದರು ತಮ್ಮಯ
ಕಂದೇಕೆ ಹೀಗಾದನೆನುತ।
ನಿಂದರು ಬಸವಣ್ಣನಿದಿರಲಿಬ್ಬರು ತಾವು
ಕಂದಿದೇನನು ಮಾಡಿದೆನಲು ॥೬೯॥

ನಾನೇನ ಮಾಡಿದೆ ಏನಾಯಿತೀಗಲಿ
ಏನಾಪುದದೆ ಮುಂದೆ ಎನುತ।
ತಾನು ಆಡಿದ ಬಸವಣ್ಣನಾಗಲಿ ಶಿವ
ಜ್ಞಾನದಿಂದಲಿ ಸೂಚನೆಗಳ ॥೭೦॥

ಏತಕೆ ಬಸವಣ್ಣ ರೀತಿದಪ್ಪಿದೆ ನೀನೆ
ಮಾತ ಪಿತರಿಗೂನ್ಯ ತಂದೆ।
ಭೂತಳದೊಳು ಹೆಸರಾಗಿ ಇದ್ದವರಿಗೆ
ಮಾತ ತಂದೆಯಾ ಪುತ್ರ ಹುಟ್ಟಿ ॥೭೧॥

ಹುಟ್ಟಿದೆ ನೀ ನಮ್ಮ ಹೊಟ್ಟೆಯಲಿಂದು ನೀ
ಕೆಟ್ಟ ಬಳಸಿ ಮುಂದೆ ನಮ್ಮ।

ಖೊಟ್ಟಿ ಮಾಡಿದಿ ಸೃಷ್ಟಿಯೊಳಗೆ ಎಂದೆನುತಲಿ
ನಿಷ್ಠುರ ನುಡಿಯನಾಡಿದರು ॥೭೨॥

ನುಡಿ[ದ] ನುಡಿಯ ಕೇಳಿ ನಡೆದೆವೇನನು ತಪ್ಪಿ
ತಡೆಯದೆ ಹೇಳಿ ಇದನೆನಲು।
ಓಡ್ಯಾಡಿ ಕಂಡಂತೆ ಮಾಡಿದೂಟವ ನೀನು
ನೋಡದೆ ಕುಲಗೋತ್ರಗಳನು ॥೭೩॥

ಭಕ್ತರಾದರೆ ಸಾಕು ಮತ್ತೇಕೆ ಕುಲವೆಂದ
ವ್ಯರ್ಥವಾಡಿದಿರಿ ಈ ಮಾತ।
ಕರ್ತನಾರ್ಚನೆಯ ಮಾಡುವರಿಗೆ ಕುಲವೊಂದೆ
ನಿರ್ತವ ಕೇಳಿ ಇದನೆಂದ ॥೭೪॥

ಯಾತರ ಮಾತಾಡಿ ಜಾತ ಹದಿನೆಂಟಕೆ
ಭೂತೇಶನಾರ್ಚನೆಯುಂಟು।
ಜಾತಿಹೀನಗಳೆಂಬ ರೀತಿಯಿಲ್ಲವೆಯೆಂದು
ಮಾತನಾಡಿದರು ಮತ್ತವರು ॥೭೫॥

ಏನು ಕ್ರಮವು ಅವರದು ಹೀನಕುಲ ಮತ್ತೆ
ಏನು ಕ್ರಮವು ಶ್ರೇಷ್ಠ ನೀವು।
ಜ್ಞಾನವಿಲ್ಲದೆ ನುಡಿವುತಲಿದ್ದಿರೆನುತಲಿ
ತಾನು ನುಡಿದ ಬಸವೇಶ ॥೭೬॥

ಕ್ಷೀರ ಸುರಿವುದೆ ಕುಲಜರ ಅಂಗದಲೇನು
ಯಾರು ಅಕ್ಕುಲಜರಂಗದಲಿ।
ಬೇರೆ ರುಧಿರವು ಸುರಿವುದೆ ಎಂದೆನುತಲಿ
ತೋರಿಯಾಡಿದ ಬಸವೇಶ ॥೭೭॥

ಉರ್ವಿಯೊಳು ಕುಲಕತಿ ಬೆರೆವರು ನೀವು
ತೆರನ ಪೇಳಿನ್ನಿದನೊಂದ।
ಎರಡು ದೈವ ಎರಡು ಸ್ವರ್ಗ ನರ್ಕಂಗ
ಳೆರಡೆರಡುಂಟೆ ಪೇಳೆಂದ ॥೭೮॥

ದೇವರಿಬ್ಬರು ಎಂದು ನಾವೇನ ಹೇಳ್ವೆವು
ದೇವನೊಬ್ಬನೆ ತಾ ಮೂಜಗಕೆ।
ಭಾವಿಸಿ ಸ್ವರ್ಗ ನರಕಂಗಳೊಂದೆಯಾದರೆ
ಭುವನದೊಳಗೆ ಏಕವಹುದೆ ॥೭೯॥

ಬಂದಿಕಾನವು ಕೋಳ ಛಂದದ ಚಾವಡಿ
ಒಂದೊ ಎರಡೊ ಹೇಳಿಯಿದನು।
ಅಂದ ಮಾತಿಗೆ ಒಂದೆಯೆಂದು ಪೇಳಿದರಾಗ
ಮುಂದೆಂತು ಮನುಜರ್ಥೇಳೆಂದ ॥೮೦॥

ಮರುಳು ಮಾನವರಿದೇ ತೆರನೊಂದೆ ಕುಲಕೆಲ್ಲ
ಬೆರೆ[೭][ಯಿ][೭]ರೇತಕೆ ನೀವು ಬರಿದೆ।
ಅರಿವಂತೆ ತಿಳಿಯ ಪೇಳುವೆ ಕೇಳಿ ಎನುತಲಿ
ಹರಭಕ್ತ ಬಸವೇಶ ನುಡಿದ ॥೮೧॥

ಒಂದೆ ಭೂಮಿಯು ಜಲವೊಂದೆ ಅಗ್ನಿಯು ವಾಯು
ಒಂದೆ ಆಕಾಶ ಪಂಚಕವು।
ಒಂದೆ ಸೂರ್ಯನು ಚಂದ್ರವೊಂದೆ ಧಾನ್ಯವು ಬಾಂಡ್ಯ
ಒಂದೆ ಗೋಕ್ಷೀರ ಸರ್ವರಿಗೆ ॥೮೨॥

ಇಂತಿವನೆಲ್ಲವ ಬೇರೆಮಾಡಿ ಕೊಡಿ ನೀವು
ಅಂತಾದರಹುದು ಕುಲಜರು।
ಅಂತವನರಿಯದೆ ಬೀಗ ಬೇಡೆನುತಲಿ
ಕಂತುಹರನ ಭಕ್ತನುಡಿದ ॥೮೩॥

ಹಂದಿ ನಾಯಿಗೆ ಎಲ್ಲ ಒಂದೆ ಭೂ ಮ್ಯಹುದಯ್ಯ
ಒಂದೆ ಸರಿಯೆ ಅವು ನಾವು।
ಎಂದ ಮಾತಿಗೆ ಸರಿಯೆಂದು ಬಸವಲಿಂಗ
ಮುಂದೆ ತೋರಿದ ಭೇದಗಳನು ॥೮೪॥

೭–೭ ವ (ಮೂ)

ಹಸಿವು ನಿದ್ರೆಗಳೊಂದೆ ಅಶನ ಮೋಹಗಳೊಂದೆ
ವ್ಯಸನ ಅಂಜಿಕೆಗಳೆಲ್ಲೊಂದೆ।
ತೃಷೆ[ಯು][೮] ಮದಗಳೊಂದೆ ಶಶಿ ರವಿಭೇದೊಂದೆ
ಅಸು ರುಜೆಗಳು ಒಂದೆ ಸಮನು ॥೮೫॥

ಮಾತ ಪಿತರ ಕೂಟದುತ್ಪತ್ತಿ ತೆರನೊಂದೆ
ಧಾತು ಸಪ್ತಕವದು ಒಂದೆ।
ಭೂತ ಪಂಚಕ ಒಂದೆ ಸುಖ ದು:ಖ ಕ್ರಮವೊಂದೆ
ಸ್ಥಿತಿಲಯಗಳ ಭೇದವೊಂದೆ ॥೮೬॥

ಭವ ಬಂಧನಗಳೊಂದೆ ಜೀವಕಾಯಗಳೊಂದೆ
ಶಿವನಿರ್ಮಿತದ ಕಲ್ಪನೊಂದೆ।
ಇವರ ಭೇದವನರಿಯದ ನುಡಿವರ ಮುಂದೆ
ಶಿವನು ಮೆಚ್ಚನು ಎಂದ ಶರಣ ॥೮೭॥

ಹಲವು ಪರಿಯಲಿನ್ನು ಕುಲಕೆ ಹೋರ್‍ಯಾಡದರಿ
ನೆಲೆಯ ಪೇಳುವೆನು ಕುಲಗಳ।
ಹೊಲೆಯಿಂದ್ರಿಯಗಳಿಂದ ನೆಲೆಗೊಂಡ ತನುವೆಂದು
ಕುಲದ ಬೇರೆತ್ತಿ ತೋರಿದನು ॥೮೮॥

ಇಂತು ಹುಟ್ಟಿದದು ಸಹಜವದ ಪರಿಯಲಿ
ಸಂತತ ಮಾಂಸ ಪಿಂಡಳಿದು।
ಮಂತ್ರಪಿಂಡವಾದ ಬಳಿಕಲಿ ಮರಳಿ ಮ
ತ್ತೆಂತೆನಬಹುದೆಂದರವರು ॥೮೯॥

ನುಡಿದ ನುಡಿಯನು ಕೇಳಿ ಆಡಿದ ಬಸವಣ್ಣ
ಒಡಗೂಡುತಿರೆ ಮಾತಪಿತರು।
ಒಡನೆ ಮಂತರಿಸುತಿದ್ದವರಾರು ಅಲ್ಲೆಂದು
ಧಡನೆ ನುಡಿದ ಬಸವೇಶ ॥೯೦॥
ಅಲ್ಲವೆ ಮಂತ್ರಪಿಂಡಗಳು ಎಂದೆನುತಲಿ

೮–೮ ಯ (ಮೂ)

ಮೆಲ್ಲನೆ ಕೇಳಿದರವರು।
ಸೊಲ್ಲ ಸಿಕ್ಕಿಸಿದನು ಅವರ ಮಾತುಗಳಿಂದ
ಬಲ್ಲಿದ ಬಸವೇಶ ತಾನು ॥೯೧॥

ಕುಲಜರೆಂದೆಂಬಲ್ಲಿ ಮಂತ್ರಪಿಂಡಗಳಾಗಿ
ಕುಲಹೀನರೆಂದೆಂಬರಲ್ಲಿ।
ಸಲೆ ಮಂತ್ರಪಿಂಡವಾಗವೇ ಅದನರಿತು
ಕುಲಕೆ ಬೀಗುವಿರೇತಕೆಂದ ॥೯೨॥

ಕೇಳು ಮಂತರ ಪಿಂಡದ ಮಾಂಸ ಪಿಂಡದ ತೆರೆ
ಹೇಳುವೆನಿನ್ನು ಎಂದೆನುತ।
ಹೇಳ ಮೊದಲೆಗೊಂಡ ಬಸವಲಿಂಗನು ತಾನು
ಭಾಳಲೋಚನನ ಮೆಚ್ಚಿನಲಿ ॥೯೩॥

ಯಾರು ಸತ್ಯ ಧರ್ಮ ಹಾದಿಯ ತಪ್ಪದೆ
ಧೀರಭಕ್ತಿಯಲಿ ನಡೆದರು।
ಸಾರ ಜ್ಞಾನದಲಿ ಶಿವನನೊಲಿಸಿದರೆಲ್ಲ
ಧಾರುಣಿಯೊಳು ಮಂತ್ರಪಿಂಡ ॥೯೪॥

ಸಿಲುಕದೆ ಪಾಪದ ಬಲೆಯ ಹರಿದು ಆರು
ಕಾಲನ ಗೆಲಿದಂಥವರು।
ಭೂಲೋಕದೊಳವರಿಗೆ ಮಂತರ ಪಿಂಡ
ಮೂಲೋಕದೊಡೆಯ ಮೆಚ್ಚಿನಲಿ ॥೯೫॥

ಕುಂದು ಭಕ್ತಿಯ ಭಾವ ಕಳವು ಹಾದರ ಹುಸಿ
ಯಿಂದ ಎಂಬತ್ತುನಾಲ್ಕುಲಕ್ಷ।
ದಂದುಗ ಯೋನಿಯಲಿ ಹೊಂದಿ ಬರುತಲಿಹ
ಅಂದನಕಲಿ ಮಾಂಸಪಿಂಡ ॥೯೬॥

ಎಂಬತ್ತುನಾಲಕು ಲಕ್ಷ ಯೋನಿಯೊಳಗೆಲ್ಲ
ಬೆಂಬಿಡದಲಿ ತಿರಿತಿರಿಗಿ।
ಕುಂಬಿನಿ ನರಕದ ಫಲವನೆಲ್ಲವ ತೀರ
ಲುಂಬನಕಲಿ ಮಾಂಸಪಿಂಡ ॥೯೭॥

ಭಾವಿಸೆ ಕಾಯವಕ್ಕುಲವದು ಕುಲವಿಲ್ಲ
ಜೀವ ಬಯಲು ಕುಲವಿಲ್ಲ।
ದೇವನ ಒಲಿಸಿದವರು ಕುಲಜರು ಮಿಕ್ಕ
ಜೀವನರಿಗೆ ಕುಲವಿಲ್ಲ ॥೯೮॥

ಕುಲಹೀನವೆ ಪಾಪ ಕುಲಜನೀಗಲೆ ಪುಣ್ಯ
ನೆಲೆಯರಿತರಿಗಿದು ನಿಜವು।
ಹಲವು ಮಾತುಗಳು ಸಲ್ಲವು ನಿಲ್ಲಿಯೆನುತಲಿ
ಬಲುಭಕ್ತಿ ಪಥವನೆತ್ತಿದನು ॥೯೯॥

ಪ್ರಥಮ ವಾಕ್ಯವು ಖಂಡಣಾಚಾರ್ಯನೆಂದೆಂಬ
ಅತಿಶಯ ಬಿರುದಿನ ಒಡೆಯ
ಪೃಥ್ವಿಯೊಳಗೆ ಮಂತ್ರ ಮಾಂಸಪಿಂಡದ ತೆರ
ಶ್ರುತಿವಾಕ್ಯದಿಂದ ತೋರಿದನು ॥೧೦೦॥

ಹೇಗೆ ಆಡಿದ ಮಾತ ಹಾಗೆ ಕಟ್ಟಿದರೆ ತಾ
ನಾಗ ಕಪ್ಪಿಟ್ಟು ಮೋರೆಗಳ।
ಹೇಗಾದರಾಗು ಮಗನು ಎಂಬುದಕೆ ನಾವು
ಹೀಗೆ ಬೇಡೆಂದೆವೆಂದೆನಲು ॥೧೦೧॥

ಪುತ್ರ ನಾ ನಿಮಗಲ್ಲ ನಿರ್ತವ ಕೇಳಿನ್ನು
ವ್ಯರ್ಥ ಬಳಲ ಬೇಡ್ಹೋಗೆನಲು।
ಮತ್ಯಾರ ಪುತ್ರ ನೀನೆಂದೆನೆ ಬಸವೇಶ
ಕರ್ತನ ಪುತ್ರ ನಾನೆಂದ ॥೧೦೨॥

ನಿಮ್ಮ ಮಗನು ಎಂದು ಎನ್ನದಲಿರೆ ನಾನು
ನಿಮ್ಮ ಮಗನು ಅಲ್ಲ ನೀವು।
ನಮ್ಮ ತಾಯಿತಂದೆ ಅಲ್ಲವೆಂದೆನುತಲಿ
ಬ್ರಹ್ಮದ ಮಾತನಾಡಿದನು ॥೧೦೩॥

ನಿಷ್ಠೆಭಕ್ತನು ತಟ್ಟನಾಡಿದ ಶಬ್ದಕೆ
ಹುಟ್ಟಿದೆ ನಮ್ಮ ಹೊಟ್ಟೆಯಲಿ।
ಬಿಟ್ಟುಹೋಹದೆ ಮಗನಲ್ಲವೆಂದೆಂದರೆ
ಕೆಟ್ಟವು ಮಾತೆಂದರವರು ॥೧೦೪॥

ಜನಸಿದರೇನು ಆಯಿತು ನಿಮ್ಮುದರದಿ
ಜನಿತವಾರಿಂದಲೆಂಬುದನು।
ಇನಿತುವನರಿಯದೆ ಮಾತನಾಡಲಿಬೇಡ
ಜನಿತವಾಹುದು ಶಿವನಿಂದ ॥೧೦೫॥

ಮಾತಪಿತರ ಕೂಟದಿಂದುತುಪತಿಯಾಗಿ
ಮಾತನಾಡುವರೆ ಬ್ರಹ್ಮಗಳ।
ಭೂತೇಶನಿಂದಲಿ ಎಂತುತ್ಪತ್ತಿಯಯ್ಯಾ
ಮಾತೆಪಿತರು ಇಲ್ಲದಹುದೆ ॥೧೦೬॥

ಕೂಟದಿಂದಲಿ ಪುತ್ರರಾದರೆಂದೆಂಬಿರಿ
ಕೂಟವಿಲ್ಲವೆ ಬಂಜೆಯರಿಗೆ।
ಕೂಟವಿರಲು ಪುತ್ರರೇತಕಾಗರು ಹೇಳಿ
ಪೋಟಿವಾಯರ ಮಾತು ಬೇಡ ॥೧೦೭॥

ಮೂರು ತಾಯವು ರುಧಿರವು ಮಾಂಸ ಚರ್ಮ
ಬೇರೆ ಅಸ್ತಿ ನರರೋಮ।
ಮೂರು ತಂದೆಯವು ಎಂದೆಂಬಂಥ ಶಾಸ್ತ್ರದ
ವಾರತಿ ಹುಸಿಯೆ ಎಂದವರು ॥೧೦೮॥

ಅಂದ ಮಾತಿಗೆ ಹುಸಿಯಲ್ಲವೆಂದೆನುತಿನ್ನು
ಮುಂದೆ ಕೇಳವರ ಭೇದವನು।
ಒಂದೊಂದ ಮೂರು ತೆರನ ಮಾಡಿದವರಾರು
ತಂದೆ ತಾಯಿಯೊ ಹೇಳಿಯೆಂದ ॥೧೦೯॥

ಶುಕ್ಲಶ್ರೋಣಿತವೆರಡಾರು ತೆರನ ಮಾಡಿ
ಹಕ್ಕೆಗೊಳಿಸಿದರಾರೆಂದ।
ಧೊಕ್ಕನೆ ಹೇಳೆನೆ ನರರಿಂದಲೆಂತಯ್ಯಾ
ಮುಕ್ಕಣ್ಣನಿಂದಲ್ಲದಹುದೆ ॥೧೧೦॥

ಸುಣ್ಣಕರಿಸಿನ ಕೂಡೆ ಬಣ್ಣ ತಿರಿಗಿದಂತೆ
ಹೆಣ್ಣು ಗಂಡು ಕೂಡಲೊಡನೆ।
ಬಣ್ಣ ತಿರಿಗಿ ಆರು ತೆರನಾದವು ಬಸ
ವಣ್ಣ ಕೇಳಯ್ಯ ಎಂದರವರು ॥೧೧೧॥

ಹೊಲೆ ಮಾಂಸ ಮಾಂಸಕೆ ಕಲಸುತಿರವೆ ಶುಕ್ಲ
ನೆಲೆಗೊಳ್ಳವೇಕೆ ಪಿಂಡಗಳು।
ಎಲೆ ಮರುಳೆ ಶಿವನ ತಂತ್ರದಿಂದಾ ಪಂಥ
ನೆಲೆಯ ಪೇಳುವೆ ಕೇಳಿಯೆಂದ ॥೧೧೨॥

ನಾದಬಿಂದುಕಳೆಯವುಯೆಂದು ಎಂಬವು
ಆದಿಮೂರುತಿಯ ಆಜ್ಞೆಗಳು।
ವೇಧಿಸಲವು ಬಂದು ನೆಲೆಗೊಂಡು ಪಿಂಡವು
ಆದುದು ಸಪ್ತಧಾತುಗಳು ॥೧೧೩॥

ಇಂದ್ರಿಯ ಶ್ರೋಣಿತದೊಳಗವು ಕೂಡಲು
ಛಂದವಾಯಿತು ಅಂಗವಾಗಿ।
ಸಂಧಿಸಿದಾ ತ್ವಕ್ಕೂ ಸಹವಾಗಿ ಪೇಳಲು
ಎಂದೆನಿಸಿತು ಸಪ್ತಧಾತು ॥೧೧೪॥

ಇಂತು ಪುಟ್ಟಿದವರು ಎಂತು ಪುತ್ರರು ನಿಮ್ಮ
ಸಂತತ ಪುತ್ರರೆಂಬವರು।
ನಿಂತಿತೆಂಬುದು ಬಲ್ಲಿರೆ ನಿಂತ ಬಳಿಕಲ್ಲಿ
ಅಂತವರ್ತಿರೆ ಗಂಡ್ಹೆಣ್ಣೆಂದು ॥೧೧೫॥

ಅದು ಬೇಡ ಹುಟ್ಟಿದ ಶಿಶುವಿನ ಅಸು ಸಿರಿ
ವಿಧಿ ಬಡತನ ರುಜೆ ಮರಣ।
ಅದನಾದರೆ ಅರಿತಿರೆ ಹೇಳಿ ನೀವಿಂತು
ಅವರಹುದು ತಾಯಿ ತಂದೆ ॥೧೧೬॥

ಅವಘಡವನು ತಂದುವೊಡ್ಡಿದಿ ಬಸವಣ್ಣ
ಇವನೆಲ್ಲವ ಬಲ್ಲೆವೆ ನಾವು।
ಶಿವನು ಒಬ್ಬನು ಬಲ್ಲನಲ್ಲದೆ ಇಂತಿವ
ಭುವನದೊಳರಿವವರುಂಟೆ ॥೧೧೭॥

ಅರಿಯಿರಂತಿವನೇನು ಬೆರೆವಿರೇತಕೆ ನೀವು
ಬರಿದೆ ನಮ್ಮಯ ಮಕ್ಕಳೆನುತ।
ಗಿರಿಜೆ ತಾಯಿ ಹರ ತಂದೆ ಎಂಬುದ
ಅರಿತಿರಿ ನೀವು ಇನ್ನೆಂದ ॥೧೧೮॥

ಪಂಕದೊಳ್ಹುಟ್ಟಿತು ಪಂಕಜವದು ತಾನು
ಪಂಕ ತನಯ ಪಂಕಜಹುದೆ।
ಮಂಕುತನವ ಬಿಟ್ಟು ಮಾತನಾಡೆನುತಲಿ
ಶಂಕರ ಶರಣನಾಡಿದನು ॥೧೧೯॥

ಏನ ಮಾತಾಡೇವು ಏನ ಬಲ್ಲೆವು ನಾವು
ನೀನೆ ಬಲ್ಲೆಲ್ಲವನೆನುತ।
ಮೌನದಿಂದಲಿ ಶರಣೆಂದು ಹೋಗುತಲಿರೆ
ತಾನು ಕರೆದ ಬಸವೇಶ ॥೧೨೦॥

ಬಿಡಿ ಮಗನೆಂಬಂಥ ಜಡಭಾವಗಳನೆಂದು
ಒಡೆಯ ಬಸವೇಶ ನುಡಿಯಲು।
ಮೃಡನ ಮಗನು ನೀನು ನುಡಿಯಲಂಜುವೆವೆಂದು
ತಡೆಯದೊಂದಿಸಿ ಹೋದರವರು ॥೧೨೧॥

ಏಕವಾಕ್ಯವು ಪ್ರತಿಷ್ಠಾಚಾರ್ಯನೆಂದೆಂಬ
ವಾಕು ಸಂದಿತು ಬಸವಣಗೆ।
ಲೋಕದೊಳು ಉಳ್ಳ ಆರು ದರುಶನಕೆ
ದೀಕ್ಷವೀಯಲು ಬಂದ ಕರ್ತ ॥೧೨೨॥

ಮುಗಿದುದೈದನೆ ಸಂಧಿ ಬಗೆ ನೂರಯಿಪ್ಪತ್ತ
ಈಗ ಮೂರು ಪದನಿಲ್ಲಿಗಾಗಿ।
ನೆಗಳುವುದನೆ ಕೇಳಿ ಆರು ಸಂಧಿಗಳೊಳು
ಸುಗುಣ ಭರಿತ ನಿಂತ ಪ್ರಥವ ॥೧೨೩॥

ಅಂತು ಸಂಧಿ ೫ಕ್ಕಂ ಪದನು ೫೨೩ಕ್ಕಂ ಮಂಗಳಮಹಾ

❖❖

*
ಸಂಧಿ : ಆರು

ಗುಂಡ ಬಸವೇಶ್ವರನ ಲೀಲಾ ಕಥನ

ಕಂದ :

ಸತ್ಯ ಗುಂಡಂ ತತ್ವ ಗುಂಡಂ
ನಿತ್ಯಂ ನಿರ್ಭಾವ ಗುಂಡ ಯುಕ್ತಿಯ ಗುಂಡಂ।
ಮುಕ್ತಿಫಲಸಾಧ್ಯ ಗುಂಡಂ
ಭಕ್ತಿಯ ಮಾಡಿದರೆ ಭಾಗ್ಯವೀವನು ಗುಂಡಂ ॥ I ॥

ಈರೇಳು ಭುವನದೊಡೆಯನು
ಸಾರಿಯೆ ಬಂದಿರ್ದ ಧರ್ಮಕಲ್ಯಾಣದೊಳುಂ।
ಯಾರರಿತು ನಡೆದವರಿಗೆ
ಸೂರೆಯ ಕುಡುವನು ಗುಂಡ ಸಾಯುಜ್ಯಗಳಂ ॥ II ॥

ಪದನು :

ಆರನೆ ಸಂಧಿಗಳೊಳಗೆ ಕೇಳುವದಿನ್ನು
ಕ್ರೂರಭಕ್ತಿಯಲಿ ಮೆರೆದುದನು।
ಆರು ದರುಶನಕೆ ಅಧಿಕ ಸ್ಥಲವ ತಾಳಿ
ಧೀರ ನಿಂದನು ಬಸವೇಶ ॥೧॥

ಕಟ್ಟಿದ ಊರ ಹೊರಗೆ ಮಠವನು ತಾನು
ಇಟ್ಟನು ಅದಕೆ ನಾಮವನೂ।

---

* ಶ್ರೀಗುರುವೇ ಗತಿ (ಮೂ)

ಸೃಷ್ಟಿಗೆ ಧರ್ಮಕಲ್ಯಾಣವೆಂದೆನಿಸಿದ
ನಿಷ್ಠೆಗೆ ಮೂಲ ಪೀಠಕನು ॥೨॥

ತನ್ನ ಹೆಸರು ಬಸವಣ್ಣನೆಂದೆನುತಲಿ
ಮುನ್ನಲಿಟ್ಟರು ಹುಟ್ಟಿದಲ್ಲಿ।
ಇನ್ನು ಈ ಹೆಸರ ತೀರಿಹೆನು ಎಂದೆನುತಲಿ
ಸನ್ನಿಹಿತನು ತಾನಾಡಿದನು ॥೩॥

ಹಿಂದಣ ನಾಮ ಗುಂಡಯ್ಯನೆಂಬುದು ನಮ
ಗಿಂದು ಕರೆ ಅದರಲೆಂದೆನಲು।
ಒಂದು ಬಿನ್ನಹ ಕೇಳಿ ಎಂದು ಎನುತ ಶರ
ಣೆಂದು ನುಡಿದ ತಿಪ್ಪಣ್ಣಯ್ಯ ॥೪॥

ವಿಶ್ವಮುಖನೆ ನಿ[ನ]ಗುಸುರಲಂಜುವೆ ಸ್ವಾಮಿ
ಬಸವಯ್ಯನೆಂಬ ನಾಮವನು।
ಹುಸಿಯ ಮಾಡಿದೆ ಗುಂಡಬಸವಯ್ಯನೆನುತಲಿ
ವಸುಧೆಪಾಲಿಪ ಎಂದರೆ ಹೇಗೆ ॥೫॥

ಹಾಗಾಗಲೆನುತಲಿ ಬೇಗ ತಾ ಕೈಕೊಂಡ
ಆಗ ಹೇಳಿದ ನುಡಿಗೇಳಿ।
[೧][ಸಾ][೧]ಗಿಸೆಂದನು ಗುಂಡಬಸವಯ್ಯ ಎನುತಲಿ
ಯೋಗಿ ಹೇಳಿದ ಬಸವೇಶ ॥೬॥

ಒಡೆಯ ನೀ ನಮ್ಮ ನುಡಿಯ ಪಾಲಿಸಿದೆಂದು
ಕಡು ಸಂತೋಷದಲಿ ಸ್ತುತಿಸುತ।
ಮೃಡನ ಪಂಚಮುಖದೊಳಗೊಂದು ಮುಖ ದೇವ
ಪೊಡವಿ ರಕ್ಷಕ ಶರಣಾರ್ಥಿ ॥೭॥

ಎಂದು ಕಳುಹಿಸಿಕೊಂಡನು ತಿಪ್ಪಣ್ಣಯ್ಯ
ಮುಂದೆ ಗುಂಡಬಸವೇಶ।

೧–೧ ಚಾ (ಮೂ)

ತಂದ ಆಚಾರವನೆತ್ತಿ ತೋರಿಹೆನೆಂದು
ನಿಂದನು ತಾ ಶಿವಪಥಕೆ ॥೮॥

ಜಂಬದ್ವೀಪಕೆ ರಣಗಂಭ ಒಂದನೆ ನಟ್ಟ
ಶಂಭುಭಕ್ತನು ಗುಂಡರಾಯ।
ಕುಂಭಿನಿಯೊಳಗಧಿಕವು ಭಯಗಳು ಆದಾ
ವೆಂಬ ಡಂಗುರವ ಹೇಳಿದನು ॥೯॥

ಕಡಿದರು ರಣಗಂಭವನು ಸೇರಲಾರಗೆ
ಕಡಿಯುತಿರಲಿಕೆ ತಾ ಬಂದು।
ಮೃಡನ ದೋಹೆ ಕಡಿಯಲಿ ಬೇಡವೆಂದನೆ
ಕಡಿಯೆಂದರೆಂದು ಹೇಳಿದರು ॥೧೦॥

ನಿಂದಿರೇ ದೇವರಾಚಾರ ಕಾರ್ಯಕೆ ಎಂದು
ಮಂದಿಯೊಳಗೆ ತಾ ಕೇಳಿದನು।
ಬಂದರಾಗಳೆ ಒಬ್ಬಿಬ್ಬರು ತಾವು ಬೇಗದಿ
ನಿಂದೇವು ನಾವು ಎಂದೆನುತ ॥೧೧॥

ಒಪ್ಪಿಸಿಯಿರೆ ಅರ್ಥಪ್ರಾಣಭಿಮಾನವ
ಕಪ್ಪುಗೊರಳಗೆಂದು ಕೇಳಿದನು।
ಒಪ್ಪಿಸಿಹೆವು ನೀವು ಹೇಳಿದಂದದಲಿನ್ನು
ತಪ್ಪೆವು ಎಂದು ಆಡಿದರು ॥೧೨॥

ಕೈಕೊಳ್ಳಿ ಭೂಮಿ ಸ್ವಾಮಿಯ ಕೈಯಿಂದಲಿ ನೀವು
ಕೈಕೊಳಿಸುವರು ನಾವಲ್ಲ।
ಕೈಕೊಂಡ ಸಾಲ ಬಿಡದು ಸಂಬಾಳಿಸಿ ಎನೆ
ಕೈಕೊಂಡು ಶರಣೆಂದರವರು ॥೧೩॥

ಆಗ ಬೋಳರುಯೆಂದು ಎನಿಸಿದನವರನು
ಬೇಗದಿಂದಲಿ ಶಿವಪಥಕೆ।
ಈಗ ನಿಂದಿರಬೇಕು ಎಂದು ಎನುತಲಿ ತಾ
ನಾಗವರಿಗೆ ನಿರೂಪಿಸಿದ ॥೧೪॥

ತನ್ನಿ ಕರಿಯ ಮಣಿಯೋಲೆಯ ತೋಡನು
ಪುಣ್ಯಸ್ತ್ರೀಯರಲ್ಲಿ ಹೋಗಿ।
ಅನ್ನಕ ದೃಡವಿಲ್ಲವೆಂದು ಎನುತಲಿ ಪ್ರ
ಸನ್ನಮೂರುತಿ ತರಿಸಿದನು ॥೧೫॥

ಕಟ್ಟಿನಿಂದರು ಕಂಕಣವನು ಮುಂಗೈಯಲಿ
ನಿಷ್ಠೆಯಿಂದಲಿ ಶಿವಪಥಕೆ।
ಕೆಟ್ಟತನದಲ್ಯಾರು ಅರಿತು ಕಡಿಸಿದರು
ನಷ್ಟವಾಗಲಿಬೇಕು ಎನುತ ॥೧೬॥

ತೊಗಲ ಜಾಗಟೆ ಎಲುವಿನ ಕುಡುವಿಲಿ ಹೊಸ
ಬಗೆಯ ಡಂಗುರ ಹೊಯ್ಸಿದನು।
ಜಗದೀಶನಾಚಾರದ ರಣಗಂಬದ
ಹಗೆಬಿಡದೆಂದು ಸಾರಿದನು ॥೧೭॥

ಸಾರಿಸಿ ಡಂಗುರ ತೂರಿಸಿದನು ಮಣ್ಣ
ಧೀರ ತಾ ಗುರು ಗುಂಡರಾಯ।
ಬೇರೆ ಗಟ್ಟಿ ಎಷ್ಟು ಉಳಿಯಿತು ಹೊಟ್ಟು ತಾ
ಹಾರಿತೆಷ್ಟೆಂದು ಕೇಳಿದನು ॥೧೮॥

ಹೊಟ್ಟು ಹಾರಿತು ಹದಿನೈದು ಕೊಳಗವೆಲ್ಲ
ಗಟ್ಟುಳಿಯಿತು ಅಯಿ[ಗೊಳಗೆ]ನಲು।
ಅಷ್ಟೆಲ್ಲಿಹುದು ಹೊಟ್ಟು ಹದಿನೆಂಟು ಕೊಳಗವು
ಗಟ್ಟಿ ಇಕ್ಕಳ ನೋಡಿಯೆಂದ ॥೧೯॥

ಗುಂಡ ಬಸವೇಶನಾಡಿದ ಶಬ್ದವ
ಕೊಂಡಷ್ಟೆಯಹುದೆಂದರವರು।
ಮಂಡಲದೊಳಗೆ ಮುಂದಾ[೨][ಗು][೨] ಪಂಥ ಕಾರ್ಯವ
ದಂಡ್ಯಾಗಿ ಆಗ ತೋರಿದನು ॥೨೦॥

೨-೨ (ಮೂ)

ಪರಸತಿ ಪರಧನಕೊಳಗಾಗದಿರಿ ಮುಂದೆ
ಪರನಿಂದೆಗಳನಾಡಬೇಡ।
ಹರನು ಬಿಟ್ಟನು ಮೂರಕೆ ಮೂರು ಕೇಡನು
ಬರ ಭಯ ರೋಗ ಮರ್ತ್ಯಯಕೆ ॥೨೧॥

ಕೇಡು ಬಂದಿತು ಮಾಡದಿರಿ ಪಾಪಗಳನೆಂಬ
ರೂಢಿಗೆ ಗುರು ಗುಂಡರಾಯ।
ನೋಡ ನೋಡಲಿ ಕೇಳದೊಯ್ದಾರೊ ಸತಿಯರೆಂ
ದಾಡುತಿಹನು ಮೊರೆಹಿಡಿದು ॥೨೨॥

ಮೃಡನು ಬಿಟ್ಟನು ಕೇಡ ಗುಡಿಗೊಲೆ ಖೂನಿಗೆ
ಪೊಡವಿಯೊಳಗೆ ನಿಲ್ಲದಂತೆ।
ಕಡಿದಾಟ ಹುಟ್ಟಡಿಮೇಲು ಆದಿತು ಲೋಕ
ಹಿಡಿದು ಸಾರಿದ ಮೊರೆಗಳನು ॥೨೩॥

ಕರಿಯ ಮ[3][ಣ್ಣೋ][3]ಲೆಯ ತೋಡು ಹುಲ್ಲಿನ ಸೂಡು
ಮೊರೆಯ ಕಟ್ಟಿಸಿ ನಾಡ ಒಳಗೆ।
ತಿರುಗುತ ಡಂಗುರವನು ಸಾರಿಸುವ ತಾನು
ಪರಶಿವಮುಖ ಗುಂಡರಾಯ ॥೨೪॥

ಬಂದಾರು ಶರಣೆಂದವರಿಗೆ ಬೋಧೆಯ ಹೇಳಿ
ಮುಂದೆ ತೋರುವನು ಮಾರ್ಗಗಳ।
ನಿಂದೆ ಪರಸತಿ ಪರಧನಕೊಳಗಾಗದಿ
ರೆಂದು ಕೈಕೊಳಿಸುತಲಿಹನು ॥೨೫॥

ಷಷ್ಠಿ ಶಿವರಾತ್ರಿ ದವನ ನೂಲಹುಣ್ಣಿವೆ
ಗಟ್ಟಿಮಾಡಿದ ನಾಲ್ಕು ತಿಥಿಯ।
ಕಟ್ಟಮಾಡಿದ ಬರಹೇಳಿ ಭಕ್ತರಿಗೆಲ್ಲ
ಸೃಷ್ಟಿಗೆ ತಾ ಹೆಸರೆನಿಸಿ ॥೨೬॥

೩-೩ ಣೋ (ಮೂ)

ವರುಷಕೆ ನಾಲ್ಕು ತಿಥಿಯೊಳು ತಪ್ಪದಲೆಲ್ಲ
ಬರಬೇಕು ವ್ರತವು ಭಕ್ತರಿಗೆ।
ಇರುಳು ಹಗಲು ಹೇಳುತಲಿಹ ತಾನೀಗ
ಪರಶಿವತತ್ವ ಬೋಧೆಯನು ॥೨೭॥

ಬಂದ ಭಕ್ತರು ತೆವರಲ್ಲಿ ತಾನು ಕುಳುತಿಹ
ಒಂದು ಗೇಣಳತೆ ತಗ್ಗಿನಲಿ।
ಒಂದು ಶರಣೆಗೆ ತಾನು ಎರಡನೆ ಶರ
ಣೆಂದು ಹೇಳುವನು ಧರ್ಮಗಳ ॥೨೮॥

ಬರಿಯ ಪಾದದಲಿ ನಡೆವುತಲಿಹನು ತಾನು
ಹೊರಸಿನ ಮೇಲೆ ಪವಡಿಸ।
ತೊರೆದು ಇಹನು ವೀಳೆಯವ ತಾನು ಬಸವೇಶ
ಜರೆದಿಹ ಅಂಗಭೋಗವನು ॥೨೯॥

ಉಟ್ಟತೊಟ್ಟಂಥವ ಒಗೆಯ [೪][ಹಾ][೪]ಕನು ತಾನು
ಉಟ್ಟತೊಟ್ಟಿಹ ಹರಿವನಕ।
ನಿಷ್ಠೆಯಿಂದಲಿ ಸತಿಪತಿ ತಪಸದಲಿ ಹಿ
ಮ್ಮೆಟ್ಟದೆ ತಾವಿರುತಿಹರು ॥೩೦॥

ಅಂಗಮಜ್ಜನವ ಮಾಡನು ಗುಂಡಬಸವೇಶ
ಲಿಂಗಮಜ್ಜನವನವರತ।
ಅಂಗ ಸುಖಗಳನೊಲ್ಲನು ತಾನು ಯಾವಾಗ
ಲಿಂಗ ಸುಖದೊಳೋಲಾಡುವನು ॥೩೧॥

ದಿವದೊಳು ಹದಿನೇಳು ಪೂಜೆಯ ಮಾಡುವ
ಅವಸರ ಪೂಜೆ ದಶಕವು।
ರವಿವುದಯದ ಮುನ್ನ ಆರು ಪೂಜೆಯ ಮಾಡಿ
ರವಿ ಆಪಾರಕೆ ನಾಲ್ಕು ಪೂಜೆ ॥೩೨॥

೪-೪ ಹು (ಮೂ)

ಚೆನ್ನಾಗಿ ಹತ್ತು ಪೂಜೆಯ ಸಂಭ್ರಮಗಳಿಂದ
ತನ್ನಯ ಮಾನಸ ಪ್ರಿಯದಲಿ।
ಪನ್ನೀರ ಮಜ್ಜನ ಇಷ್ಟಲಿಂಗಕೆಯಾಗ
ಭಿನ್ನವಿಲ್ಲದೆ ಮಾಡುತಿಹನು ॥೩೩॥

ಅಗರು ಶ್ರೀಗಂಧೊಡಪಚ್ಚೆ ಬುಕ್ಕಿಯ ಹಿಟ್ಟು
ಮಿಗಿಲು ಗಹುಲಿಕ ಚೌರವನು।
ಬಗೆ ಬಗೆ ಪರಿಮಳ ಪನ್ನೀರಿನಲಿ ತೇದು
ಜಗದೀಶ ಪೂಜೆಯವಸರಕೆ ॥೩೪॥

ಮುಕ್ಕುಹೋಗದ ಅಕ್ಕಿ ಅಕ್ಷತೆ ಪೂಜೆಗೆ
ತಕ್ಕ ಜಾಜಿಯು ಇರವಂತಿಗೆ।
ಚೊಕ್ಕ ಸಂಪಿಗೆ ಸೇವಂತಿಗೆ ಮೊಲ್ಲೆ ಮಲ್ಲಿಗೆ
ಅಕ್ಕಜ ರಾಯಭೇರಿಗಳು ॥೩೫॥

ನಂದ್ಯಾಳ ದಾಸ್ಯಾಳ ಕರಬಾಳ ಕಣಗಿಲು
ಗೊಂದಣ ಕಮಳ ಕೋಮಳೆಯೊ।
ತಂದರ್ಪಿಸಿದ ಕೇದಗೆ ಹೂವು ಕಂಚಾಲ
ಚಂದದ ಪಡ್ಡಳೆ ಗೊಗ್ಗಿಯನು ॥೩೬॥

ಬೆಲ್ಲಪತ್ತರಿ ಮರುಗವು ಮಂಚಿಪತ್ತರಿ
ಬಲ್ಲಿತ ದವನ ಬೊಬ್ಬರಿಯೊ।
ಎಲ್ಲ ಪತ್ತರಿ ಪಚ್ಚೆಯವು ತಾನು ಮೊದಲಾಗಿ
ಬಲ್ಲಿದರ್ಚಿಸುವ ಪುಷ್ಪಗಳ ॥೩೭॥

ದಶಾಂಗ ಲೋಬಾನ ಸಜ್ಜರಸ ಗುಗ್ಗುಳ
ಎಸೆವ ಧೂಪದ ಪರಿಮಳವ।
ಒಸೆದರ್ಪಿಸುವ ತನ್ನ ಇಷ್ಟಲಿಂಗಕೆ ಗುಂಡ
ಬಸವೇಶ ತಾನು ಪ್ರಿಯದಲಿ ॥೩೮॥

ಕಡ್ಡಿಬತ್ತಿ ಕಲಿಯಾರ್ತಿ ಏಕಾರ್ತಿ ನಾಗಾರ್ತಿ
ದೊಡ್ಡ ಪಂಚಾರ್ತಿ ಸಪ್ತಾರ್ತಿ।

ಒಡ್ಡಾದ ಸೂಜ್ಜಣುಮಂತ ಚೌಡೇಸುರಿಯಾರ್ತಿ
ನಿಡ್ಡಣೆ ಕಲಿಗಣ ಆರ್ತಿ ॥೩೯॥

ಚಂಗಳಾರತಿ ಪುರುಷಾಮೃಗ ಮೈಲಾರದೇವಾರ್ತಿ
ಅಂಗರೂಪಿರಭದ್ರಾರ್ತಿ।
ಹಿಂಗದೆ ನಿರಂಜನಾರತಿಯಲಿ ಇಷ್ಟ
ಲಿಂಗಪೂಜೆಯ ಮಾಡುತಿಹನು ॥೪೦॥

ಅಷ್ಟವಿದಾರ್ಚನೆ ನೈವೇದ್ಯ ತಾಂಬೂಲ
ಅಷ್ಟ ಅಷ್ಟಕ ಉಪಚರಿಯ।
ಎಷ್ಟೋ ವಾದ್ಯವು ಮದ್ದಳೆಯು ತುಡುಮವು ಭೇರಿ
ದೃಷ್ಟವಾದ್ಯಗಳು ಕರಡಿಯೊ ॥೪೧॥

ತಾಳದಂಡಿಗೆ ಕೈಸಾಳೆ ಜೇಗಟೆಗಳು
ಘೀಳಿಡುತಿಹ ಶಂಖ ಘಂಟೆ।
ಕಾಳೆ ಧವಳ ಶಂಖಪುಷ್ಪಂಗಳಿಂದ
ಆಳಾಪ ಧರ್ಮಬೋಧೆಗಳು ॥೪೨॥

ಹಿಂಗದೆ ಇಂತು ಪಂಚಮಾವಾದ್ಯದಲಿ ತಾನು
ಲಿಂಗಪೂಜೆಯ ಮಾಡುತಿಹನು।
ಅಂಗದೊಳಗಾಗ ಹಿಂಗದಿಹನು ಪ್ರಾಣ
ಲಿಂಗಪೂಜೆಯ ಕ್ರಮವೆಂತು ॥೪೩॥

ಕೋಣೆಯ ಬ್ರಹ್ಮಸ್ಥಾನದ ಪ್ರಾಣಲಿಂಗಕೆ
ಜಾಣ ತಾ ಪೂಜೆ ಮಾಡಿದನು।
ಮಾಣದೆ ಮೂರು ತನುವು ಗದ್ದಿಗೆಯು ಜ್ಞಾನ
ಠಾಣದೀವಿಗೆಯನಿಕ್ಕಿದನು ॥೪೪॥

ಧರ್ಮಪೂರ್ಣದ ಗಿಂಡಿ ಸಮತೆಯಗ್ಘಣಿಗೊಟ್ಟು
ಪೆರ್ಮಶಾಂತಿಯ ಗಂಧಲೇಪ।
ನಿರ್ಮಳ ಭಕ್ತಿಯಕ್ಷತೆಯನರ್ಚಿಸಿ
ವರ್ಮವಿನ್ನೆಂತು ಪುಷ್ಪಗಳ ॥೪೫॥

ನಾಲ್ಕು ಎಸಳು ಆರು ಎಸಳು ಹೆತ್ತೆಸಳು
ನಾಲ್ಕೆಂಟು ಎಸಳೀರೆಂಟೆಸಳು।
ಬೇಕಾದೆಸಳು ಸಹಸ್ರೆಸಳಿನ ಪುಷ್ಪವನೆಲ್ಲ
ಏಕಮಾಡ್ಯವನು ಏರಿಸಿದ ॥೪೬॥

ನಿಟಿಲಾಕ್ಷನ ಧ್ಯಾನ ಧೂಪಾರತಿಯೊಳು
ಪಟುಮಾಡಿ ಅನುಭವಾಗ್ನಿಯನು।
ಕುಟಿಲ ಕುಹಕ ಸಟೆಯೆಂಬ ಧೂಪವ ಸುಟ್ಟು
ದಿಟ ಸುಗುಣ್ಪರಿಮಳೆಬ್ಬಿಸಿದ ॥೪೭॥

ಸುಭಾವವೆಂದೆಂಬ ಹತ್ತಿಗೆ ಹತ್ತುವ
ಕೂಭಾವ ಕಸವ ಝಾಢಿಸಿದ।
ನಿರ್ಭಯವೆಂದೆಂಬ ಅರಳೆಯ ತೆಗೆದು ತಾ
ಆ ಭಾವ ಬತ್ತಿ ತೀವಿದನು ॥೪೮॥

ಸತ್ಯ ಸದಾಚಾರವೆಂಬ ತೈಲದೊಳು
ಬತ್ತಿಯ ತೊಯಿದಿರಿಸಿದನು।
ಉತ್ತಮ ದೃಢವೆಂಬ ಆರತಿಯೊಳಗಿಕ್ಕಿ
ಭಕ್ತಿಯ ಬೆಳಗನೆತ್ತಿದನು ॥೪೯॥

ಪಂಚ ಇಂದ್ರಿಯ ಲಿಂಗಮುಖವಾಗಿರುವಂಥ
ಪಂಚ ಆರತಿಯನೆತ್ತಿದನು।
ಸಂಚಲಾಗದೆ ತನುಗುಣಗಳನೊತ್ತಿದ
[೫][ಮಿ][೫]ಂಚಾರತಿಗಳನೆತ್ತಿದನು ॥೫೦॥

ನಿಶ್ಚಿತೊಮ್ಮನವೆಂಬ ಸಯದಾನದೊಳಗಣ
ದುಶ್ಚಿತ್ತ ಹರಳ ಕಳೆದನು।
ಸುಚಿತ್ತದೊರಳು ಶಿವನ ನಾಮದೊನಕೆಲಿ
ನಿಶ್ಚಿಂತದಕ್ಕಿ ಮಾಡಿದನು ॥೫೧॥

೫–೫ ಏ (ಮೂ)

ಗರ್ವವಿಲ್ಲದ ಬಾಂಢ್ಯದಿಂದಡಿಗೆಯ ಮಾಡಿ
ಅರ್ವು ಎಂದೆಂಬ ಬೋನವನು।
ಸರ್ವಜೀವದಯಾಪಾರದ್ಧರಿವಾಣದೊಳು
ನಿರ್ವಯ ಲಿಂಗಕರ್ಪಿಸಿದ ।೫೨॥

ಅಂತಃಕರಣ ಶುದ್ಧವೆಂಬ ಎಲ್ಯಡಿಕೆಗೆ
ಸಂತತ ಮನಪಕ್ವ ಸುಣ್ಣ।
ಇಂತು ಸನುಮಾನವೆಂಬ ಕರ್ಪುರದೀಳ್ಯವ
ಅಂತರ್ಪಿಸಿದ ಪ್ರಾಣಲಿಂಗಕೆ ॥೫೩॥

ಶಂಖ ನಾದಿಸುತಿಹವಾರುತೆರದ ಯೋಗ
ಜೇಂಕಾರ ಮೊದಲು ಆದವನು।
ಅಂಕಕರ್ಮದ ಮೇಲೆ ಬಿರಿದಿನ ಕಹಳೆಯು
ಶಂಕೆಯಿಲ್ಲದೆ ಭೇರಿ ಹೊಯಿದ ॥೫೪।

ಕೋಳುಹೋಗದ ಮನವೆಂದೆಂಬ ದಂಡಿಗೆ
ತಾಳೋಕಿಯೆಂಬ ತಾಳದಲಿ।
ಆಳಾಪ ಕಿಂಕುರವಾಣದ ಶಿವಸ್ತುತಿ
ಮೇಳಾಪ ಪಂಚಮಾವಾದ್ಯಗಳು ॥೫೫॥

ನಿರುತ ಪೂಜೆಯ ಮಾಡಿ ಪರಮ ಪ್ರಸಾದವ
ಪರಿಣಾಮದಿಂದ ಸ್ವೀಕರಿಸಿ।
ಶರಣಸ್ಥಲದಲಿ ಇರುತಲಿಹನು ತಾನು
ಪರಿಕ್ಷಿಸಿ ನೋಡಲೈಕ್ಯನು ॥೫೬॥

ಅಂಗಸೋಂಕಿದ ಸೋಂಕ ಲಿಂಗಕರ್ಪಿತ ಮಾಡಿ
ಲಿಂಗಮುಖದಿ ಕೊಳುತಿಹನು।
ಸಂಗವಾಗಿಹ ಲಿಂಗದೊಳಗೆಯು ಆವಾಗ ಸ
ರ್ವಾಂಗವೆಲ್ಲವೂ ಲಿಂಗವಹುದು ॥೫೭॥

ಅಂತರಂಗದ ಪೂಜೆ ಬಹಿರಂಗದ ಪೂಜೆ
ಇಂತು ಪರಿಯ ಮಾಡುತಿಹನು।

ಎಂತು ಪಂಚಶತಕೋಟಿ ವಿಸ್ತೀರ್ಣದ
ಅಂತವೆಲ್ಲವ ಅರಿತಿಹನು ॥೫೮॥

ಈರೇಳು ಭುವನದೊಳಗೆ ಆಗುತಲಿಹ
ಕಾರ್ಯಯಗಳನೆಲ್ಲ ಬಲ್ಲ।
ಧಾರುಣಿಯೊಳಗೆ ತಾ ನರಕಂತಿಯನೆ ತೊಟ್ಟು
ಸಾರದೂರಲಿ ಬಂದ ಕರ್ತ ॥೫೯॥

ಬಂದು ಸಾರಿದ ಧರ್ಮಮಾರ್ಗದಿ ನಡೆಯೆಂದು
ಮುಂದಣಾಗಾಂತ್ರ ಹೇಳಿದನು।
ಒಂದೊಂದು ಪರಿ ಸೆರೆ ಸೂರೆಯು ಘನವಾದ
ವೆಂದು ಡಂಗುರವ ಸಾರಿದನು ॥೬೦॥

ಕಾಳಗ ಹುಟ್ಟಿನ್ನು ಹಾಳು ಆದಿತು ಲೋಕೆಂ
ದ್ಹೇಳಿದ ತಾ ಗುಂಡರಾಯ।
ಕೋಳು ಹೋಗದಲ್ಯಾರು ಕೇಳಿ ನಡೆದವರಿಗೆ
ಭಾಳಲೋಚನ ತಪ್ಪಿಸುವನು ॥೬೧॥

ನೀರಹೊಳೆಗೆ ಅಸಗರ ಮನೆಗನುಪಾಗಿ
ದಾರಿ ಬಟ್ಟೆಗಳು ನಡೆಯದೆ।
ಆರು ಒಬ್ಬರಿಗೊಬ್ಬರಂಜದೆ ಮುಂದಿನ್ನು
ಸೂರ್‍ಯಾದಿತೆಂದು ಪೇಳಿದನು ॥೬೨॥

ಭೂಪತಿ ಸಂಪತ್ತು ಬಯಲಾಗಿ ಬದುಕ್ಹೋಗಿ
ಭೂಪತಿ ಮನೆಯ ನಾರಿಯರು।
ಆಪತ್ತಿಯೊಳಗಾಗಿ ಗಾಸಿಯಾದಾರೆಂದು
ತಾ ಪದದೊಳಗೆ ಹೇಳಿದನು ॥೬೩॥

ಹನ್ನೆರಡು ಗಾವುದಕೆ ಒಂದೂರಾಗಿ
ಮುನ್ನಿನ ದಿನ ವೇದ್ಯವೆಂದ।
ಚೆನ್ನಾಗಿ ಮುಂದಣಾಗಾಂತ್ರವ ಹೇಳಿದ
ತನ್ನಯ ಹೃದಯ ಜ್ಞಾನದಲಿ ॥೬೪॥

ಎಂದು ಆದಿತು ಯಾರು ಕಂಡಾರೆನುತ ಲೋಕ
ನಿಂದಿಸ್ಯಾಡುವುದರಿಯದಲಿ।
ಮಾಡಿದ ಕೇಡು ಕರ್ಮಕೆ ತಪ್ಪದೆನುತಲಿ
ಮುಂದೆ ಹೇಳಿದ ಪದದೊಳಗೆ ॥೬೫॥

ಹೇಗೆ ಭಯವು ದಿನದಿನಕಧಿಕವು ಎಂದು
ಹಾಗೆ ಆಯಿತು ಲೋಕದೊಳಗೆ।
ಭಾಗ್ಯಪುರುಷನು ಎಂದು ಯಾರರಿತವರ್ಗೆಲ್ಲ
ಆಗಳೆ ತಾವೆರಗಿದರು ॥೬೬॥

ಹೇಳಿದ ಆದಿ ಅನಾದಿಗೆ ನಿಲುಕದ
ಭಾಳಲೋಚನನಿರ್ದ ನಿಲವ।
ಕೇಳು ಪಂಚತತ್ವವಿಲ್ಲವು ರವಿಶಶಿ
ಕಾಳ ಹುಟ್ಟದ ಸುದ್ದಿಗಳನು ॥೬೭॥

ಗಂಗೆ ಗೌರಿ ಬ್ರಹ್ಮ ವಿಷ್ಣು ಯಮಧರ್ಮ
ಗಂಗೆ ವಾಳುಕರು ಎಂಬವರು।
ಭೃಂಗಿ ತುಂಬರ ನಾರಂದ ದೇವೇಂದ್ರನು
ಅಂಗಜ ಹುಟ್ಟಿದ ಸುದ್ದಿಗಳನು ॥೬೮॥

ಅಷ್ಟ ದಿಕ್ಪಾಲಕರು ಈರೇಳುಭುವನವು
ಎಷ್ಟೊ ದೈವವು ನವಗ್ರಹವು।
ಹುಟ್ಟದಂದಿನ ಸುದ್ದಿ ಅಷ್ಟನು ಹೇಳಿದ
ಸೃಷ್ಟಿಗೀಶ್ವರನಿರ್ದ ನಿಲವ ॥೬೯॥

ಬಯಲಿಗೆ ಬಯಲು ನಿರ್ವಯಲಾಗಿ ಶಿವನಿರೆ
ಬಯಲಿನ ಪೂಜೆ ಹೇಳಿದನು।
ಅಯಿದುಮುಖಕೆ ತತ್ವವಯಿದು ಹುಟ್ಟಿತು ಮುಂದೆ
ಅಯಿದರಿಂದೆಲ್ಲಾಯಿತೆಂದ ॥೭೦॥

ಓಂಕಾರಿಸಿದ ಶಿವ ಜಲಪ್ರಳಯದೊಳು
ನಾಂಕಾರವನೆ ಕೊಟ್ಟ ವೃಷಭ!

ಮಾಂಕಾರವನೆ ಕೊಟ್ಟು ಶಿವಯೆಂದು ಪೇಳಲಿ
ಆಂಕಾರವಳಿದೋಡಿ ಬಂದ ॥೭೧॥

ವಂದಿಸಿ ಬಸವೇಶ ಮುಂದುಪದೇಶನೆ
ನಂದಿ ನಿನ್ನಯ ತೊಡೆ ಎಡೆಗೆ।
ಬಂದೆನೆಂದನು ಶಿವನಂದಿಯಾಗಲಿ ತಾನು
ತಂದೆ ಬಾಯೆಂದು ಆಡಿದನು ॥೭೨॥

ಒಡೆಯ ಮೇಲಿರೆ ಶಿವ ಕಡಲು ಉಕ್ಕೇಳಲು
ತಡೆಯದೇರಿದ ಇಣಿಯೆಡೆಗೆ।
ಅಡರುವ ಜಲದೊಳು ಒಡೆಯ ಬಸವಲಿಂಗ
ಕಡು ಸಂತೋಷದಲೀಸುತಿರುತ ॥೭೩॥

ಬಲು ಮೇವ ಮೇದನು ಓಂಕಾರವೆಂಬುದ
ಮೆಲುಕಿರಿದನು ಸುಜ್ಞಾನಗಳ।
ಸಲೆ ಪರಮಾತ್ಮದ ಹೆಂಡೆಯನಿಕ್ಕಿದ
ಜಲದೊಳಗೀಸಿಯಾಡುತಲಿ ॥೭೪॥

ಬಸವ ಹೆಂಡೆಯನಿಕ್ಕೆ ಶಶಿಧರ ತಾನಾಗ
ಬಿಸಿಗಣ್ಣ ತೆರೆದು ನೋಡಿದನು।
ಭಸ್ಮವಾಯಿತು ಹೆಂಡೆ ಬಸವ ನೀ ತಿಳಿಯೆಂದು
ವಸುಧೆ ನಿರ್ಮಿಸಲು ಹೇಳಿದನು ॥೭೫॥

ಅಪ್ಪ ಬಸವಲಿಂಗ ಹೆಪ್ಪುಕೊಡಲಿಕಾಗಿ
ತಪ್ಪದಾಯಿತು ಭೂಮಿಯಾಗ।
ಒಪ್ಪವಾಯಿತು ಈರೇಳು ಭುವನ ಹುಟ್ಟಿ
ಸರ್ಪಭೂಷಣನ ಆಜ್ಞೆಯಲಿ ॥೭೬॥

ಧರೆಯ ಹೊತ್ತವು ಎಂಟು ಆನೆ ಆನೆಯನೆಲ್ಲ
ಉರಗ ಹೊತ್ತನು ಏಳು ಹೆಡೆಯ।
ಉರಗನ್ಹೊತ್ತಿತು ಕೂರ್ಮ ಕೂರ್ಮನ ಹೊತ್ತು
ಪರಸಾದ್ಹೊತ್ತಿತು ಆ ತೀರ್ಥವನು ॥೭೭॥

ಇಂತು ಶಿವನ ಕರುಣ ಪ್ರಸಾದ ತೀರ್ಥದಿ
ನಿಂತಿಹುದೀರೇಳು ಭುವನ।
ಅಂತಸ್ಥಲವನೆಲ್ಲ ಎತ್ತಿ ತೋರಿದನಾಗ
ಇಂತು ತೀರ್ಥವು ಪ್ರಸಾದವನು ॥೭೮॥

ಪರಶಿವ ನಿರ್ಮಿಸಿದನು ರುದ್ರ ಮುಖದಲಿ
ಉರದಲಿ ವಿಷ್ಣು ನಾಭಿಯಲಿ।
ಸರಸಿಜೋದ್ಭವ ಹುಟ್ಟಿ ಚರಣದ್ದುಟ್ಟಿದ ಇಂದ್ರ
ಪರುಉದ್ಯಾಯಿತು ನಾಲ್ಕು ಜಾತ ॥೭೯॥

ಜನಿತ ಗುಣವನಿತ್ತ ಬ್ರಹ್ಮಂಗಾ ವಿಷ್ಣುಂಗೆ
ಜನಿತ ರಕ್ಷಿಪ ಗುಣವಿತ್ತ।
ಅನಲನಯನ ಉಳ್ಳಂಥ ರುದ್ರಂಗಿತ್ತ
ಜನಿತ ರಕ್ಷ ಭಕ್ಷಿಪುದನು ॥೮೦॥

ಮತ್ತೆ ಬ್ರಹ್ಮಂಗೆ ರಜಗುಣವಿತ್ತ ವಿಷ್ಣುಂಗೆ
ಸತ್ವ ರಜವನೆರಡಿತ್ತ।
ಸತ್ವ ರಜ ತಮ ಮೂರು ರುದ್ರಂಗಿತ್ತ
ನಿರ್ತದಿಂದಲಿ ಪರಶಿವನು ॥೮೧॥

ತನ್ನ ವಾಹನವಿತ್ತು ತನ್ನ ಪದವಿಗೊಟ್ಟು
ತನ್ನ ನಾಮವನೆಲ್ಲವಿತ್ತು।
ಕನ್ನೆ ಗೌರಿಯ ರಮಣಗೆ ಪಟ್ಟವ ಕಟ್ಟಿ
ಮುನ್ನಿನಂದದಲಾಡುತಿರ್ದ ॥೮೨॥

ಶಂಭು ನಿರ್ಮಿಸಿದ ದೇವಾಧಿದೇವರ್ಕಳು
ಎಂಬವರು ಮೊದಲಾಗಿ।
ಎಂಬತ್ತು ನಾಲ್ಕು ಲಕ್ಷ ಜೀವರಾಶಿ
ಎಂಬವೆಲ್ಲವನು ಕಲ್ಪಿಸಿದ ॥೮೩॥

ಮೂರು ನೇತ್ರಗಳು ಉಳ್ಳಂಥ ಪಾರ್ವತಿಪ್ರಿಯ
ಈರೇಳು ಭುವನಸ್ವಾಮೆಂದು।

ಪಾರ ಪಾರಂಪಾರವೆಂಬ ಸುದ್ದಿಯನೆಲ್ಲ
ಬೇರೆತ್ತಿ ತೋರ್ದ ಗುಂಡೇಶ ॥೮೪॥

ಇಂತು ಪರಿಯ ಹಿಂದುಮುಂದಣಾಗಾಂತ್ರದ
ಅಂತವೆಲ್ಲವ ಹೇಳುತಿಹನು।
ಸಂತತ ತಿಪ್ಪಣ್ಣಯ್ಯನು ಕೇಳಿದನು ಏ
ಕಾಂತದಿ ತಾನೊಂದು ಮಾತ ॥೮೫॥

ಯಾವ ಕುಲವು ನಿಮ್ಮದಾವ ಜಾತವು ನಿಮ್ಮ
ದಾವಸ್ಥಲವು ನಿಮ್ಮದೆನುತ।
ಯಾವ ಬಿರುದು ನಿಮ್ಮದ್ದೇಳೆಂದು ಕೇಳಿದ
ದೇವಭಕ್ತನು ತಿಪ್ಪಣಯ್ಯ ॥೮೬॥

ದೇವಗುಲವು ಇನ್ನು ಕೇಳಿ ತಿಪ್ಪಣ್ಣಯ್ಯ
ಶಿವಜಾತ ನಮ್ಮದುಯೆಂದ।
ಯಾವ ಸ್ಥಲವು ಎಂದು ಕೇಳಿದರಿಂತಿದು
ಭಾವಿಸಲೈಕ್ಯ ಸ್ಥಲಗಳು ॥೮೭॥

ಒಡೆಯರ ಭಕ್ತರ ಲೆಂಕನೆಂದೆನುತಲಿ
ನಡೆವ ಬಿರಿದು ನಮ್ಮದೆಂದ।
ಬಡ ಬಿರಿದುಗಳನು ಒಲ್ಲೆನೆಂದೆನುತಲಿ
ಒಡೆಯ ನುಡಿದ ಬಸವೇಶ ॥೮೮॥

ಕುಲವಿಲ್ಲ ಕುಲಕಧಿಕ ಛಲವಿಲ್ಲ ಛಲದಂಕ
ಬಲುಹುದೋರದ ಬಲುಮಹಿಮ।
ನೆಲೆಯ ತೋರದೆ ಬಂದೆ ಗುಂಡ ಬಸವಲಿಂಗ
ಹಲವು ಲೋಕದ ಕರ್ತ ನೀನು ॥೮೯॥

ಕರ್ಮಖಂಡಿತ ನೀನು ನಿರ್ಮಳ ದೇಹಿಕ
ಧರ್ಮಕಧಿಕ ತವರ್ಮನೆಯೊ।
ಕರ್ಮ ಬೇಡೆಂದು ಹೇಳಲಿ ಬಂದೆ ಮರ್ತ್ಯಕೆ
ಪರ್ಮಮೂರುತಿ ಮಹಾವಸ್ತು ॥೯೦॥

ಭಕ್ತಿಗೆ ಭದ್ರಗಜಂಕನು ಅಹುದಯ್ಯ
ಯುಕ್ತಿಯ ಮೇರುವೆ ಒಡೆಯ।
ಭುಕ್ತಿಯ ಬೇಡಿದವರಿಗೆ ಈವ ದೇವ
ಮುಕ್ತಿಯ ಸಾಧನ ನೀನು ॥೯೧॥

ಆಚಾರಕೆ ಅಗ್ರಗಣ್ಯನು ನೀನಿಂತು
ವಿಚಾರಕೆ ಪಾರಾಯಣನು।
ಯೋಚನೆ ಇರುಳು ಹಗಲು ಶಿವಧ್ಯಾನ ಅ
ವಿಚಾರದ ವಿವರ್ಜಿತನೆ ॥೯೨॥

ಗುರುಲಿಂಗಜಂಗಮಪ್ರೇಮಿಯೆಂಬುದು ಸಹಜ
ಗುರುರೂಪು ನಿಮ್ಮನುಭಾವ।
ಸರ್ವಾಂಗವೇ ಲಿಂಗಾರ್ಪಣವೆಂಬುದು ತಾನು
ಪರಮ ಜಂಗಮಮೂರುತಿ ಅಹುದು ॥೯೩॥

ಇಂತು ತ್ರಿಮೂರ್ತಿಯನೊಳಕೊಂಡ ಮಹಿಮ ನೀ
ನಿಂತ ಠಾವೆ ಕೈಲಾಸ ।
ಕಂತುಹರನು ನಿಮ್ಮ ಹೃದಯದೊಳಿಹನಾಗಿ
ಸಂತತ ನೀ ಶಿವರೂಪ ॥೯೪॥

ಎಲೆ ಸ್ವಾಮಿ ನೀ ನಿಂತ ಕ್ಷೇತ್ರದ ಮಹಿಮೆಯ
ನೆಲೆಯ ಪೇಳಲಿಕಗಣಿತವು।
ಬಲುಕ್ಷೇತ್ರ ಹಿಮವಂತ ಶ್ರೀಶೈಲ ಸೇತುಬಂಧಿ
ಗ್ಢಲವು ಪರಿಯಲಗಣಿತವು ॥೯೫॥

ಈ ಕ್ಷೇತ್ರದಲಿ ದೀಕ್ಷೆಗಳನು ಕುಡಲುಂಟು
ದೀಕ್ಷೆಕೆ ತಪ್ಪಿ ಶಿಕ್ಷೆಯನು।
ಆಕ್ಷಣ ಮಾಡಲುಂಟು ದೀಕ್ಷೆವಿಡಿದಿರೆ
ಮೋಕ್ಷವೀಯಲು ಸತ್ವವುಂಟು ॥೯೬॥

ಅದರಿಂದಲೀ ಕ್ಷೇತ್ರವಧಿಕವೆಂಬುದು ಸಹಜ
ಅದಕೆ ಸಂದೇಹವೇನಿಲ್ಲ।

ಇದರಿಂದ ಮುಕ್ತಿಯಾಹುವುದು ನಿಜವೆನುತಲಿ
ಹೆದರದಾಡಿದ ತಿಪ್ಪಣ್ಣಯ್ಯ ॥೯೭॥

ನಂಬಿದವರಿಗೆ ಈ ಕ್ಷೇತ್ರವು ರಜತಾದ್ರಿ
ಯೆಂಬುದು ಹುಸಿಯಲ್ಲವೆಂದ।
ಶಂಭು ನಿಮ್ಮಂಗದೊಳಿಂಬುಗೊಂಡಿಹನಾಗಿ
ಶಂಭು ನೀನೆಂದೆನಬಹುದು ॥೯೮॥

ನಿಮ್ಮ ಭಜಿಸಿ ನಿಮ್ಮ ಹೊಗಳಿ ಕೊಂಡಾಡ್ಯಾರು
ನಿಮ್ಮ ನುಡಿಯ ಮೀರದಿರ್ದು।
ನಿಮ್ಮಿಚ್ಛೆಯಲಿ ನಿಮ್ಮ ಇಚ್ಛಿಸಿದವರಿಗೆ
ಘಮ್ಮನೈಕ್ಯಪದವಹುದು ॥೯೯॥

ಪರಮಭಕ್ತನು ನೀನು ಬರಿದ್ಯಾಕೆ ಸ್ತುತಿ[೬][ಸುವೆ][೬]
ಪರಕೆ ಆರೆವು ನಾವು ಎನುತ।
ಶರಣರ ಕರುಣದ ಕಂದ ನಾನೆನುತಲಿ
ಪರಿಯ ನುಡಿದ ಬಸವೇಶ ॥೧೦೦॥

ಅಂದ ಮಾತಿಗೆ ಭೀತಿಯಿಂದಲಿ ತಾ ಇನ್ನರಿತಾ ಶರ
ಣೆಂದು ತ್ರಾಹಿ ತ್ರಾಹಿಯೆನುತ।
ಒಂದು ಬಿನ್ನಹ ನಾವು ಶಿವನ ಪಾದಕೆ ಪಯಣ
ವೆಂದು ನುಡಿದ ತಿಪ್ಪಣಯ್ಯ ॥೧೦೧॥

ದೇವರ ಮಣಿಹವ ಭುವನದೊಳಗೆ ಇನ್ನು
ನಾವು ಮಾಡಲಿಬೇಕು ನೀವು।
ದೇವರ ಪಾದಕೆ ಬಿಜೆಮಾಡೇವೆಂಬುದ
ಅವಧಾನವಲ್ಲ ನಿಲ್ಲೆಂದ ॥೧೦೨॥

ಅಂದ ಮಾತನು ಕೇಳಿ ನಿಂದ ತಿಪ್ಪಣಯ್ಯ
ಮುಂದೆ ಎರಡು ಮೂರು ವರುಷ।

೬-೬ ಸಯ್ಯ (ಮೂ)

ಬಂದು ಕೇಳಿದ ಕೈಲಾಸಕ್ಕೆ ಬಿಜೆಮಾಡೇ
ವೆಂದು ಎನುತಾತ ಮತ್ತೆ ತಾನು ॥೧೦೩॥
ಒಳ್ಳಿತು ಬಿಜೆಮಾಡಿ ಎನುತ ನುಡಿಯ ಕೊಟ್ಟ
ಬಲ್ಲಿದ ಗುರು ಗುಂಡರಾಯ।
ಎಲ್ಲಿಯಾದರು ಕಾಯವನು ಬಿಟ್ಟೆನೆನುತಲಿ
ಸೊಲ್ಲನಾಡಿದ ತಿಪ್ಪಣಯ್ಯ ॥೧೦೪॥

ಬಿಡಬೇಡ ಹೊರಗೆಲ್ಲಿ ಕಾಯವನು ನೀವು
ಬಿಡಬೇಕು ಇಲ್ಲಿ ಕಾಯವನು।
ನುಡಿಯ ಕೇಳುತ ಗುಂಡರಾಯನ ಮಾತನು
ತಡೆಯದೆ ತಾ ಕೈಕೊಂಡ ॥೧೦೫॥

ರುಜೆಯ ಕರೆದುಕೊಂಡ ತಡೆಯದೆ ಬೇಗದಿ
ರಜತಾದ್ರಿಗೆ ಹೋದೆವೆನುತಲಿ।
ಭುಜಗಭೂಷಣ ಪಾದದೆಡೆಗೆ ಪ್ರಾಣವಬಿಟ್ಟ
ನಿಜಗುಣಭರಿತ ತಿಪ್ಪೇಶ ॥೧೦೬॥

ಗೊಪೆಮಾಡಿ ಇಂಬಿಟ್ಟು ಕಟ್ಟೆಯ ಕಟ್ಟಲು
ಕಪಾಳದಾ ಮೇಲೆ ಕೆಸರು।
ತಪ್ಪಿ ಕೆಡಹಿದ ಆತನ ಸ್ವಪ್ನದಲಿ ಹೋಗಿ
ಉಪದ್ರವು ತೆಗೆ ಬೇಗಯೆನಲು ॥೧೦೭॥

ಥರಕಾರ ಬಂದು ಹೇಳಿದ ಗುಂಡರಾಯಗೀ
ಪರಿಯ ಸ್ವಪನವಾಯಿತೆನಲು।
ತೆರೆದು ನೋಡಿ ಅರಲನೆ ತೆಗೆಯೆನುತಲಿ
ನಿರೂಪ ಕೊಟ್ಟ ಹೋಗೆಂದು ॥೧೦೮॥

ಆಗ ತೆಗೆದು ನೋಡಿ ಅರಲ ಕಾಣುತ ಒರೆಸಿ
ಬೇಗ ಮಜ್ಜನವ ಮಾಡಿಸಿದರು।
ಹೇಗಿದ್ದ ರೂಪ ಇದ್ದಿತು ಹಲವು ಕಾಲ
ಹಾಗೆ ಇಂಬಿಟ್ಟು ಕಟ್ಟಿದರು ॥೧೦೯॥

ಮುಂದೆ ತಾನಿರುತಿಹ ಗುಂಡರಾಯನು ಶಿವಾ
ನಂದದಿ ಬೋಧೆ ಹೇಳುತಲಿ।
ತಂದ ಡಂಗುರವ ಮರ್ತ್ಯದೊಳು ಸಾರಲಿಬೇಕು
ಎಂದು ತಿರುಗಿದ ನಾಡೊಳಗೆ ॥೧೧೦॥

ಹೊತ್ತು ತಿರುಗಿದ ಆರು ದರುಶನವನು
ಕರ್ತ ತಾ ಮರ್ತ್ಯದೊಳಗೆ।
ಉತ್ತರ ಕೊಡುತಿಹ ಆರು ಕೇಳಿದರೆ ತಾ
ಸತ್ಯಶರಣ ಬಸವೇಶ ॥೧೧೧॥

ಆರು ದರ್ಶನ ಹದಿನೆಂಟು ಸಮಯಕೆಲ್ಲ
ತೋರುತಿಹನು ಮಾರ್ಗಗಳನು।
ಯಾರು ತರ್ಕಿಸಿದರೆ ಉತ್ತರ ಕೊಡುತಿಹ
ಬೇರೆತ್ತುವನು ನಡಗುಣದ ॥೧೧೨॥

ಈ ಪರಿ ವಾದ ವಿವಾದಗಳ ಮಾಡುವ
ವಿಪರೀತ ಪದನ ಹೇಳುತಲಿ।
ತಾಪಿಸುವಂಥ ಭಕ್ತರಿಗೆಲ್ಲ ತಾ
ಪಾಪ ಬೇಡೆಂದ್ಹೇಳುತಿರಲು ॥೧೧೩॥

ವಾಕು ಶಿವನದು ಬಂದಿತು ಗುಂಡರಾಯಗೆ
ಸಾಕು ತಪಸಮಾರ್ಗವೆನುತ।
ಲೋಕದೊಳಗೆ ನಿನಗೇಕೆ ದಗ್ಧಗಳೆಂದು
ಲೋಕಪಾಲನು ನಿರೂಪಿಸಿದ ॥೧೧೪॥

ಕರೆದು ಕೇಳಿದನು ಸತಿಯ ತಪಸದಲಿರ್ದ
ವರುಷವೆಷ್ಟಾಯಿತೆಂದೆನಲು।
ಪರೀಕ್ಷಿಸಿ ಹೇಳಿದಳ್ಹದಿನಾರು ವರುಷೆಂದು
ಹಿರಿಯ ಸತಿ ಜಕ್ಕಾಂಬಿಕಾಗ ॥೧೧೫॥

ಬಿಟ್ಟನು ತಪಸವ ಮಜ್ಜನವ ಮಾಡಿದ
ಉಟ್ಟನು ಮಡಿವರ್ಗಗಳನು।

ಪ[ಟ್ಟೆ]ಮಂಚ ಸುಪ್ಪತಿಗೇರಿಳಿವ ಮಾಡಿ
ಮೆಟ್ಟಿದ ಪಾದರಕ್ಷೆಯನು ॥೧೧೬॥
ಎಲ್ಲಿ ಭಕ್ತರು ಏನು ಮಾತಾಡಿ ಬಂದುದ
ಅಲ್ಲಿ ಇದ್ದಂತೆ ಹೇಳುವನು।
ಕಳ್ಳವಾರದ ಒಡವೆಯ ಮುಟ್ಟಸಲಿ ಬಂದ
ರಿಲ್ಲಿ ಹೋಗಲಿ ಬೇಡವೆಂಬ ॥೧೧೭॥

ಇಂತು ಪರಿಯಲಿ ಪ್ರತ್ಯಕ್ಷ ಹೇಳುವ ಭಕ್ತ
ರಂತವೆಲ್ಲವ ಅರಿತಿಹನು।
ಸಂತತ ತಾನಿರುತಿರಲು ಕಣ್ಣಿಗೆ ವ್ಯಾಧಿ
ಬಂತು ಶಿವನ ನಿರೂಪದಲಿ ॥೧೧೮॥

ಒಂದು ದಿವಸ ಬಸವೇಶ ತಾ ನುಡಿದನು
ಚಂದ್ರಶೇಖರಗೆ ಕೋಪದಲಿ।
ಮುಂದೆ ಬೋಧೆಯ ಸಾರಬೇಕೆಂತು ಧರೆಯೊಳು
ಬಂದಿಹ ಕಣ್ಣವ್ಯಾಧಿಯಲಿ ॥೧೧೯॥

ಇಲ್ಲಿ ನಾನಿರಲೊಲ್ಲೆ ಮರ್ತ್ಯದೊಳಗೆಂದು
ಬಲ್ಲಿದ ಬಸವೇಶ ನುಡಿಯೆ।
ಸೊಲ್ಲಿಗೆ ಶಿವ ಕಳಿಹಿದ ಬಸವೇಶನ
ಮೆಲ್ಲನೆ ಕರೆತನ್ನಿ ಎನುತ ॥೧೨೦॥

ಕುಳಿತಿರೆ ಮನೆಯ ಒಳಗೆ ಗುಂಡಬಸವೇಶ
ಭಾಳಲೋಚನನವರು ಬಂದು।
ಏಳಿ ಪಯಣವಾಗಿ ಶಿವಲೋಕಕೆಂಬುದ
ಕೇಳಿ ಬಸವಲಿಂಗ ತಾನು ॥೧೨೧॥

ಸಾರಬೇಕು ಮರ್ತ್ಯದೊಳಗೆ ಬೋಧೆಯನಿನ್ನು
ಬಾರೆನು ಹೋಗಿಯೆಂದೆನಲು।
ಮೀರಿ ಬಲುಹ ಮಾಡಿ ಕರೆದೊಯ್ದವೆಂದರೆ
ಧೀರ ಬಡಿದ ಬಸವೇಶ ॥೧೨೨॥

ಆಗ ಅವರು ಕಾಳಗವ ಮಾಡ ಹಣ್ಣಲು
ಬೇಗ ಹಳ್ಳದ ಕಲ್ಲನೆಲ್ಲ।
ಸಾಗಿಸಿ ತರಿಸಿದ ನಿರಾಕಾರದಲಿ ತಾ
ಹೋಗೆಂದು ಹೊಡೆವುತಿರಲಿಕೆ ॥೧೨೩॥

ಅಬ್ಬರಿಸಿ ಕಾಳಗವನು ಮಾಡುತಲಿರೆ
ಬೆಬ್ಬಳಿಗೊಂಡು ಮನ್ಯವರು।
ಒಬ್ಬನ ಕಾಬರು ಇದಿರ ಕಾಣರು ಯಾರ
ಸರ್ಬ ದಳದೊಳು ಕಾದಲಿಕೆ ॥೧೨೪॥

ಬೆಂಬಿಡದೆಚ್ಚರು ಅವರು ಬಸವಣ್ಣ
ಬಂಬ ಕೋಲಿಗೆ ಕೈಯನಾಂತ।
ಅಂಬು ನಟ್ಟಿತು ಅಂಗೈಯೊಳಗೆ ಆಗ
ಶಂಭು ಕಳುಹಿದ ಮಾತಿಯನು ॥೧೨೫॥

ಬಂದವರೆಂದರು ಬಂದೆಯವೆಂದರೆ
ಚಂದ್ರಶೇಖರ ಕರೆಸಿದನು।
ನಿಂದೆಯನೆಂದರೆ ಬಲುಹೇಕೆ ಗುಂಡನೊ
ಳೆಂದು ಅವರ ಕಳುಹಿದರು ॥೧೨೬॥

ಕಾಳಗವನು ಮಾಡಿ ಬರಲಿಕೆ ಗುರುಗುಂಡ
ತಾಳದಿರಿನ್ನು ಕೋಪವನು।
ಇಳೆಯೊಳಗಿನ್ನು ನೀನಿರಲೊಲ್ಲೆನೆಂದರೆ
ಭಾಳಲೋಚನ ಕರೆಸಿದನು ॥೧೨೭॥

ಎಂದು ಸಂತೈಸಿ ಹೋದರು ಬಂದ ಶರಣರು
ಹಿಂದೆ ತಾ ಗುರು ಗುಂಡರಾಯ ।
ಕುಂದದೆ ಕರೆಸಿದ ಪಟ್ಟದ ಸ್ತ್ರೀಯಳ
ಮುಂದೆ ತೋರಿದ ತನ್ನ ಕರವ ॥೧೨೮॥

ನಟ್ಟ ಅಂಬಿನ ಗಾಯ ದೃಷ್ಟ ಹಾವಸೆಗೆಯ್ಯೆ
ಇಷ್ಟನೆಲ್ಲವನು ತೋರಿದನು।

ಸೃಷ್ಟಿಗೀಶ್ವರನ ಶರಣರಿಗೆ ನಮಗಿಂದು
ಇಷ್ಟು ಕಾಳಗವಾಯಿತೆಂದ ॥೧೨೯॥

ಇಂತು ಪರಿಯಲಿ ಮರ್ತ್ಯಕೆ ಬೋಧೆಯ ಹೇಳಲಿ
ನಿಂತಿಹ ತಾ ಗುಂಡರಾಯ।
ಸಂತತ ತಾನಿರುತಿರುತ ತೆರಳಿಹೋಗಿ
ನಿಂತನು ಮೈಲವಾರದಲಿ ॥೧೩೦॥

ಆರನೆ ಸಂಧಿ ಮುಗಿಯಿತು ಇಲ್ಲಿಗೆ ಪದ
ನೂರ ಮುವತ್ತೊಂದು ಆಗಿ।
ಧಾರುಣಿಯೊಳಗೆ ಸಾರ ಕೇಳಿರೆನುತ ಗುಂಡ
ಬೇರೊಂದು ಆಟ ಹಣ್ಣಿದನು ॥೧೩೧॥

ಅಂತು ಸಂಧಿ ೬ಕ್ಕಂ ಪದನು ೭೦೨ಕ್ಕಂ ಮಂಗಳಮಹಾ

❖❖

*

ಸಂಧಿ : ಏಳು

ಗುಂಡ ಬಸವೇಶ್ವರನ ಐಕ್ಯ ಕಥನ

ಕಂದ :

ಕುಂದದೆ ಗುರು ಗುಂಡನಿರುವ
ಮಂದಿರಕೆ ನಾಲ್ಕು ತಿಥಿಯ ತಪ್ಪದೆ ನಡೆದರೆ
ಮುಂದೆ ಸಾಮಿಪ್ಯಪದಗಳ ।
ಕುಂದದಲೀವಂಥ ಕರ್ತು ಶ್ರೀ ಗುರು ಗುಂಡಂ ॥ I ॥

ಹಿಂಗದೆ ನೆರೆ ನಂಬಿ ಭಕ್ತರು
ಅಂಗವಿಸಿ ಗುಂಡರಾಯ ನಿಂತ ಕ್ಷೇತ್ರದ
ಅಂಗಳವ ಹೊಕ್ಕು ಶರಣೆನ್ನಿ।
ಸಂಗನ ಬಸವೇಶನೀವ ಪರಮ ಸಾರೂಪ್ಯವ ॥ II ॥

ಧರ್ಮಕಲ್ಯಾಣದೊಡೆಯಗೆ
ನಿರ್ಮಳ ಭಕ್ತಿಯಲಿ ನಡೆದು ಗುರುವೆಂದರಿತರೆ।
ಪರ್ಮ ಪದವೀವ ಇಹದಲಿ
ಪರ್ಮ ಗುರು ಗುಂಡನೀವ ಪರಮ ಸಾಯುಜ್ಯವ ॥ III ॥

ಪದನು :

ಇನ್ಹಿಗೆ ಬೋಧೆಯ ಕೇಳರೆನುತಲಿ ತಾ
ಹಣ್ಣಿದ ಹೊಸ ಆಟಗಳನು।

---

* ಶ್ರೀಗುರುವೇ ಗತಿ (ಮೂ)

ಚೆನ್ನಾರೆ ಆಜ್ಞೆಯ ಮಾಡಿದಲ್ಲದೆ ಮುಂದೆ
ಅನ್ನಕ ಹಸನಾಗದೆನುತ ॥೧॥

ಮತ್ತೆ ಈ ಆಟವು ತೀರಿತೆಂದೆನುತಲಿ
ಕರ್ತು ಏರಿದ ಕುದುರೆಯನು।
ಸತ್ತಿಗೆ ಹಿಡಿಸಿ ಕಹಳೆಯನು ಊದಿಸಿ ಮುಂದೆ
ಇತ್ತರದಲಿ ಬಿಲ್ಲು ಹರಿಗೆ ॥೨॥

ಸಂಭ್ರಮ ಮಾಡ ಹಣ್ಣಿದನು ಈ ಪರಿಯಲಿ
ಹಂಬಲು ಶಿವನ ಕೈಲಸದ।
ಬೆಂಬಳಿವಿಡಿದ ಒಂದೆರಡು ವರುಷಕೆ ತ್ರಿ
ಯಂಬಕ ತಾ ನಿರೂಪಿಸಿದ ॥೩॥

ಸಂಗಮೇಶ್ವರನ ನಿರೂಪವಾಯಿತು ಇಷ್ಟ
ಲಿಂಗಪೂಜೆಯ ಬಿಡುಯೆನುತ।
ಲಿಂಗವನೊಡ[ವೆರೆ]ವಾಗ ಲಿಂಗಪೂಜೆಗೆ ಮುಂದೆ
ಅಂಗವಿಸಲಿ ಬೇಡವೆನುತ ॥೪॥

ಈ ಪರಿ ಲಿಂಗಪೂಜೆಯ ಬೇಡವೆನುತ ನಿ
ರೂಪವಾದವು ಮೂರು ಬಾರಿ।
ತಾ ಪೂಜೆ ಬಿಡಲಾರದಕೆ ಹೊರಗೆ ತರ್ಕ
ವಾಪನಕಲಿ ನಿಲ್ಲೆನೆಂದ ॥೫॥

ಮುಂದೆ ಆಡಿದರು ಕರಡಿಯ ವಾದ್ಯವು ಬೇಡ
ಎಂದುಯೆನುತಲಿ ತರ್ಕಿಗಳು।
ಅಂದಮಾತಿಗೆ ಬೇಡವೇಕೆ ಕರಡಿವಾದ್ಯ
ವೆಂದು ಕೇಳಿದ ಬಸವೇಶ ॥೬॥

ಜಂಗಮಸ್ಥಲ ನಾಲ್ಕರೊಳು ಸಲ್ಲದೆರಡಕೆ
ಜಂಗಮವಲ್ಲ ನಿನಗೇಕೆನಲು।
ಲಿಂಗಪೂಜೆಯ ಮಾಡುತೀನೆ ನನಗಲ್ಲೆಂದು
ಸಂಗನ ಶರಣನಾಡಿದನು ॥೭॥

ಕರಡಿಯ ಶಬ್ದವ ಕೇಳಿದರಿನ್ನು ನಾ
ವಿರಿದುಕೊಂಡೆಯವು ಎಂದೆನಲು।
ಹರಗೆ ಕರಡಿಸಲಿಕ್ಯಾಪನ್ನಕ ಪೂಜೆ
ತೊರೆದೆನೆಂದನು ಗುಂಡರಾಯ ॥೮॥

ಇಷ್ಟಲಿಂಗಕೆ ಕರಡ್ವಾದ್ಯ ಸಲ್ಲದು ಎನೆ
ಬಿಟ್ಟೆವು ಲಿಂಗಪೂಜೆಯೆದು।
ಅಷ್ಟದಿಕ್ಕಿಗೆ ಓಲೆ ಕೊಟ್ಟು ಕಳುಹೆ ಮತ್ತೆ
ಅಟ್ಟಿದರವರು ಬೇಡೆಂದು ॥೯॥

ಮೃಡನ ನಿರೂಪದಿ ತಡೆಮಾಡಿ ಪೂಜೆಯ
ಪೆಡಿಯ ಹೊರಗೆ ಹಾಕಿದನು।
ಒಡೆಯ ಬಸವಲಿಂಗ ಪ್ರಾಣಲಿಂಗದ ಪೂಜೆ
ಎಡದೆರಿಲ್ಲದೆ ಮಾಡುತಿಹನು ॥೧೦॥

ನಾನು ಡಂಗುರವ ಸಾರಲಿಕೆ ಕೇಳದೆ ಲೋಕ
ಹೀನ ನಡೆಯ ನಡೆಯಲಿಕೆ।
ಏನ ಹೇಳಲಿ ಇನ್ನು ಎಂದು ಬಳಲಿ ಗುಂಡ
ತಾನು ಬೇಸತ್ತು ನುಡಿದನು ॥೧೧॥

ತಿರುಗಲೊಪ್ಪಿಸಿದ ಡಂಗುರವನು ತಾ ಮತ್ತೆ
ಹರಗೆ ಶರಣು ಶರಣೆಂದು।
ಮೊರೆಯ ಹಿಡಿದು ಶರಣೆಂದು ಹದಿನೇಳು
ವರುಷ ಸಾರಿದೆವು ನಾವೆಂದ ॥೧೨॥

ಮುಂದೇನು ಉಪದೇಶ ನಿರೂಪಗೊಡಿ ನಮ
ಗೆಂದು ಬಿನ್ನೈಸಿ ಕೇಳಿದರೆ।
ಹಿಂದಕೆ ತಿರಿಗಿ ಬಾ ನೀನು ಮರ್ತ್ಯದೊಳು
ನೊಂದು ಬಳಲಬೇಡವೆನುತ ॥೧೩॥

ನಿರೂಪವಾಯಿತು ತಿರುಗಿ ಬಾಯೆನುತಲಿ
ಕರೆದ ಬೋಳರು ಭಕ್ತರುಗಳ।

ತೆರಳಿದೆವು ನಾವು ಒಂದು ಕಡೆಗೆ ಎಂದೀ
ಪರಿಯ ಬೆಡಗನು ಆಡಿದನು ॥೧೪॥

ಮಕ್ಕಳೈವರು ಹಾರೆ ಅದರೊಳು ಮೂವ್ವರು
ಚಿಕ್ಕವರು ಇಬ್ಬರೊಳಗೆ।
ತಕ್ಕವರಾರು ಗದ್ದಿಗೆಗೆ ಎಂದೆನುತಲಿ
ಠಕ್ಕಿಲಿ ತಾನು ಕೇಳಿದನು ॥೧೫॥

ಸೆಬ್ಯದ ಹೊದಿಕೆಯ ಹೊಲಿಸಿ ತರಿಸಿದನಾಗ ಕೇ
ಳಿಬ್ಬರೊಳಗೆ ಇನ್ನು ನಾವು।
ಒಬ್ಬನ ಗದ್ದಿಗೆಯಲಿ ಕುಳ್ಳಿರಿಸೇವೆಂದು
ಉಬ್ಬರದಿಂದಲಾಡಿದನು ॥೧೬॥

ಅಂದ ಮಾತಿಗೆ ಭಕ್ತರೊಂದಿಸಿದರು ಎಲ್ಲ
ಮುಂದೆ ಆದಿತು ತನ್ನ ತಾನೆ।
ಇಂದು ಮೊದಲು ಆಗಿ ಬರಿದೇ ಕದನವಾದೀ
ತೆಂದು ಬೇಡೆಂದು ಆಡಿದರು ॥೧೭॥

ಜೇನುತುಪ್ಪವ ಹೂಸಿ ಹುಡಿಯಲಿ ಹೊರಳಲಿ
ಏನು ಹತ್ತುವದೆ ಹತ್ತುವದು।
ಏನು ಮಾಡಿದರೆ ಹತ್ತದದು ಹತ್ತದು ತನ್ನ
ತಾನೆಯಾದೀತು ಮುಂದೆನುತ ॥೧೮॥

ಅಮವಾತವನು ಮಾಡಿಬಿಡಿಯೆಂದು ಶರಣೆಂದು
ನೇಮಿಸದಿರಿ ಎಂದೆನಲು।
ಅಮವಾತವನು ಮಾಡಿಬಿಟ್ಟನು ಗುರು ಗುಂಡ
ಕ್ರಮದಿಂದ ಒಂದಾದಿತೆನುತ ॥೧೯॥

ಇಂದಿಗೆ ಎರಡು ಗದ್ದಿಗೆಯ ಮಾಡಿದರೇನು
ಒಂದೆ ಆದಿತು ಮುಂದೆನುತ।
ಸಂದೇಹವಿಲ್ಲವು ಶಿವಯೋಗ ಒಬ್ಬಗೆ ಸಹಜ
ಅಂದನಕಲಿ ಇರಲೆಂದ ॥೨೦॥

ಎಕ್ಕಟಿ ಬೋಳರ ಕರದ್ಹೇಳಿದ ನಮಗೆ
ದೊಕ್ಕನೆ ಮನೆಮಾಡಿ ಎನಲು।
ದುಃಖವ ಮಾಡುತ ಹೀಗೇಕೆಯೆಂದು ಮೈ
ಯಿಕ್ಕಿದರವರು ಬೇಡೆನುತ ॥೨೧॥

ನಿಮಗೇಕೆ ದುಃಖ ಹೋಗೆನುತ ಕೋಪವ ಮಾಡಿ
ನಮಗೆ ಶಿವನ ಇಚ್ಛೆಯೆನುತ।
ಆ ಮಾತಿಗವರೆಂದು ಪಯಣವೆನುತ ಕೇಳೆ
ತಾ ಮತ್ತೆ ವರುಷಕೆ ಎಂದ ॥೨೨॥

ಇಂದು ಮೊದಲವಾಗಿ ಏಕ ವರುಷವಾದ
ರಂದಿಗೆ ಮಾಡುವೆವೆನಲು।
ಅಂದ ಮಾತನು ಕೇಳಿ ಮೈಲವಾರದೊಳು
ನಿಂದಿಹ ತಾ ಗುಂಡರಾಯ ॥೨೩॥

ವರುಷ ತುಂಬದ ಮುನ್ನ ಕರೆದನು ತಾ ಮತ್ತೆ
ನೆರೆದಿದ್ದ ಭಕ್ತರೆಲ್ಲರನು।
ಮರೆಯ ಮಾಡಿ ಅಡಗಿದರು ಎನಲಿಬೇಡ
ತೆರಳುತೀವಿನ್ನು ನಾವೆಂದ ॥೨೪॥

ಎಲ್ಲವ ಹೇಳಿದ ಗುಂಡ ಬಸವಲಿಂಗ
ನಿಲ್ಲದೆ ಮೈಲವಾರದಲಿ।
ಅಲ್ಲಿಂದ ಬಂ[ದ] ಯಲ್ಲನಾಗಾವಿಯೊಳು
ನಿಲ್ಲದೆ ತಾನು ಬೇಗದಲಿ ॥೨೫॥

ಅಲ್ಲಮಯ್ಯ ಸಂಗಯ್ಯ ಐವರು ಪುತ್ರ
ರೆಲ್ಲಿ ಇದ್ದಲ್ಲಿ ತಿಥಿಯನು।
ನಿಲ್ಲದೆ ಮಾಡಿ ನಾಲ್ಕನು ಎಂದು ಎನುತಲಿ
ಎಲ್ಲ ಭಕ್ತರಿಗೆ ಹೇಳಿದನು ॥೨೬॥

ಇವರನಿಬ್ಬರನಿಂದು ತೋರುತಲಿವೆ ನಾವು
ಶಿವಯೋಗ ಮುಂದೊಬ್ಬಗಹುದು।

ಅವರ ನಾಲ್ವರ ತಿದ್ದಿರಿ ಮುಂದೆ ಆತನ
ಸೇವೆಗೆನುತಲಿ ಹೇಳಿದನು ॥೨೭॥

ನಡೆಗುಣವುಳ್ಳರೆ ದೇವರ ಮಕ್ಕಳು
ನಡೆಗುಣವಿಲ್ಲದವರು।
ಕೆಡೆಯವೆ ಮಲದೊಳು ಜಂತುಯೆಂದೆನುತಲಿ
ನುಡಿದನೀ ಪರಿ ಗುಂಡರಾಯ ॥೨೮॥

ದೇವರ ಮಾರ್ಗದಲಿದ್ದಾತಗೆ ಮುಂದೆ
ದೇವ ಭಕ್ತರು ಎಲ್ಲ ನೀವು।
ಸೇವೆಯ ಮಾಡಿ ಆತನ ಬೆಂಬಳೆನುತಲಿ
ದೇವ ಬಸವ ತಾ ಹೇಳಿದನು ॥೨೯॥

ನಡೆದು ಕೆಟ್ಟೆವು ಎಂದು ಎನಬೇಡಿ ಭಕ್ತರು
ನಡೆವುದು ಧರ್ಮವ ಬಲಿದು।
ಬಿಡಬೇಡಿ ದೇವರೋಲಗವನೆಂದೆನುತಲಿ
ನುಡಿಯ ಹೇಳಿದ ಗುಂಡರಾಯ ॥೩೦॥

ಬಂಬದು ಮುಂದೆ ದೈವದ ದುರ್ತ ಕಂಡಂತೆ
ಹಂಬಲಿಸಲಿ ಬೇಡ ನೀವು।
ಬೆಂಬಳಿ ಇರಿ ಧರ್ಮಕಲ್ಯಾಣ ಸನಿಹದಿ
ತಂಬಣಾಹುದು ಮುಂದೆಯೆಂದ ॥೩೧॥

ವ್ಯರ್ಥರಾಗದೆ ಠಾವನು ಬಿಡದಿರಿ ಮುಂದೆ
ಕರ್ತು ಬರುತಾರೆ ಎನಲು।
ಕರ್ತರು ಎಂಥವರೆಂದೇನ ಬಲ್ಲೆವು
ಅರ್ತೇವು ಎಂತೆಂದರವರು ॥೩೨॥

ಕಲ್ಯಾಣ ನಾಲ್ಕರೊಳಗೆ ಬಂದ ಶರಣರ
ಸೊಲ್ಲ ಕೇಳದಾಯಿತು ಲೋಕ।
ಬಲ್ಲಿದ ದೀಕ್ಷೆ ಶಿಕ್ಷೆಯ ಕೊಂಡುಬಂದು ಹೊಸ
ಕಲ್ಯಾಣವನು ನಿರ್ಮಿಸಿಹನು ॥೩೩॥

ಸಮಯ ಕಲ್ಯಾಣವೆಂಬುದನು ರಚಿಸಿ ಮುಂದೆ
ಸಮಯವೆತ್ತುತಲಿ ಬಂದಾರು।
ಕ್ರಮದಿಂದ ಪಾಪಕೆ ಲೆಕ್ಕವ ಕೊಳಲಿಕೆ
ಭೂಮಿಗೆ ತಾನೊಬ್ಬ ಕರ್ತ ॥೩೪॥

ಜಂಬುದ್ವೀಪಕೆ ಕರ್ತನೆಂಬಾತ ತಾನೊಬ್ಬ
ಶಂಭು ಭಕ್ತಿಯನು ಎತ್ಯಾನು।
ನಂಬಿದ ಭಕ್ತರ ಪಾಲಿಸುತಲಿ ಪಾಪ
ವೆಂಬುದ ಮರ್ದಿಸ್ಯಾನೆಂದ ॥೩೫॥

ಗುಡಿಗೊಲೆ ಖೂನಿಯ ತಡೆಯದೆ ಕೊಳುತಲಿ
ಗುಡಿಯ ಕಲ್ಲಿನ ಕೋಟೆಗಳನು।
ಕೆಡಹಿ ಸಂಹಾರಮಾಡಿ ಗುಡಿಯ ಕಲ್ಲುಗಳೆಲ್ಲ
ಗುಡಿಗೆತ್ತಿಸುತಲಿ ಬಂದಾರು ॥೩೬॥

ಕರ್ತರು ಬಂದರು ಎನುತ ಸಂತೋಷದಿ
ಭಕ್ತರು ನೀವು ಹೋಗಬೇಡಿ।
ಭಕ್ತರು ಯಾರು ಮುಂದೋದಂಥವರಿಗೆ
ಕರ್ತರು ಶಿಕ್ಷೆಮಾಡಿಯರು ॥೩೭॥

ಇಲ್ಲಿದ್ದ ಭಕ್ತರು ಬೋಳರು ಸಹವಾಗಿ
ಅಲ್ಲಮಯ್ಯ ಸಂಗಯ್ಯ ಐವರನು।
ಅಲ್ಲಿಗೆ ಕೂಡಿಕೊಂಡ್ಹೋಗಿ ಡಂಗುರನೋದಿ
ಅಲ್ಲವೆಂದರೆ ಅಂಜಬೇಡ ॥೩೮॥

ನೀವು ಕರ್ತರು ಇಲ್ಲಿಗೆಂದು ಎನುತ ಬನ್ನಿ
ತಾವು ಹಿಂದಕೆ ಮತ್ತೆ ಕರೆದು।
ದೇವಭಕ್ತರು ನೀವು ಅಹುದು ಎಂದೆನುತಲಿ
ತಾವು ತರ್ಕೈಸಿಕೊಂಡಾರು ॥೩೯॥

ಮಾಡುಯೆಂದರೆ ಮಾಡಿ ಲಿಂಗಪೂಜೆಯ ಮುಂದೆ
ಬೇಡನೆಂದರೆ ನಿಲ್ಲಿಸೆಂದ।

ಹೇಡಿಗೊಂಡೀವೆಲಿ ಲಿಂಗಪೂಜೆಯ ಮಾಡೆ
ನಡುವ ಕಡಿದಾರು ಕ*[ರ್ತ]*ರು ॥೪೦॥

ಸರ್ವತಃ ಧರ್ಮಕಲ್ಯಾಣವೆಲ್ಯಾದೆಂದು
ಅರಸಿಕೊಳುತಲಿ ಬಂದಾರು।
ಬಾರದಿರ್ದರೆ ನೀವು ಸ್ಥಿತಿಸನ್ಯವಿರಲಿಕೆ
ಮೀರಿ ಹೊಗಲಿಬೇಡವೆಂದ ॥೪೧॥

ಭಕ್ತಬೋಳರಿಗೆಲ್ಲ ಬುದ್ಧಿಯ ಹೇಳಿದ
ಹತ್ತೆಲಿದ್ದವರಿಗೆಲ್ಲರಿಗೆ।
ಮತ್ತೆ ಕರೆದ ಏಳುಮಂದಿ ಸ್ತ್ರೀಯರನೆಲ್ಲ
ಹತ್ತೆ ಕುಳ್ಳಿರಿಸಿ ಹೇಳಿದನು ॥೪೨॥

ಹಿರಿಯ ಸತಿಗೆ ಎಂದ ಹಿರಿಯಳು ನೀನಿದ್ದಿ
ಕಿರಿಯರು ಅವರಾರು ಮಂದಿ।
ಹೊರಯಕೊಳೆಯಕ್ಕೋಗಗೊಡದೆ ಆಜ್ಞೆವ ಮಾಡು
ತಿರು ನೀನು ಗಂಡನಾಗೆಂದ ॥೪೩।

ಇಂದು ನಾ ಹೇಗೆ ನಡೆಸುತಲಿಹೆನೆ ನೀನು
ಮುಂದೆ ನಡೆಸು ಹೀಗೆಯೆಂದ।
ಒಂದ ಕೇಳೈವರು ಮಕ್ಕಳು ನಿನ್ನವ
ರೆಂದು ಕೊಟ್ಟನು ಗುಂಡರಾಯ ॥೪೪॥

ಇಬ್ಬರು ಕೇಳಿ ಗಂಡಸು ಮಕ್ಕಳುಳ್ಳವ
ರೊಬ್ಬಗೆ ಶಿವಯೋಗವಹುದು।
ಒಬ್ಬನಿಚ್ಚೆಯಲಿ ನಾಲ್ವರನು ತಂದಿಟ್ಟೆವೆಂದು
ಇಬ್ಬರು ಶರಣೆನ್ನಿಯೆಂದ ॥೪೫॥

ಯಾರು ಆತನ ಮಾತ ಮೀರಿದಂಥವರಿಗೆ
ಬೇರೊಂದೆತ್ತನು ಬಂಡವಲವ।

– ರತ (ಮೂ)

ದೂರಮಾಡಿ ಭಕ್ತರ ಕೈಯಲೀಸುಕೊಡಿ
ಮೀರದವರು ಇರಲೆಂದ ॥೪೬॥

ನನ್ನ ಕಂಡೋಪಾದಿ ಕಂಡು ಅಂಜುತಲಿರಿ
ಉನ್ನತಿ ಕಳೆದು ನೀವೆಂದ।
ಪನ್ನಂಗಧರಗೆ ಶರಣೆನಿಸಿದನಿಬ್ಬರ
ತನ್ನ ಮುಂದಿಟ್ಟು ಕೈಕೊಳಿಸಿ ॥೪೭॥

ಕರೆಸಿದ ಥರಕಾರನ ಮನೆಮಾಡೆಂದು
ಶರಣೆಂದು ಥರಕಾರ ತಾನು।
ಇರಬೇಕು ನೀವು ಹೀಗೇಕೆ ಮಾಡಿಹಿರೆನೆ
ಅರಿಯಿರಿ ಸುಮ್ಮ ಪೋಗೆಂದ ॥೪೮॥

ಎಲ್ಲಿ ಮಾಡಲಿ ಗವಿಯನು ಎಂದುಯೆನುತಲಿ
ಮೆಲ್ಲನೆ ಕೇಳಿದುಪ್ಪಾರ।
ಸೊಲ್ಲಿಸಿದನು ತಾನು ತಿಪ್ಪಣ್ಣಯ್ಯಗಳೆಡ
ದಲ್ಲಿ ಬೀಡಾರ ಮಾಡೆನುತ ॥೪೯॥

ನುಡಿದ ಹುಟ್ಟದು ಅಲ್ಲಿ ಕಲ್ಲೆಂದು ಸುತಾರಿ
ನುಡಿಯ ಕೇಳುತ ಗುಂಡರಾಯ।
ಬೇಡಿ ಭೂಕಾಂತೆಗೆ ಶರಣೆನ್ನಿ ಕೊಟ್ಟಾಳು
ಕೊಡು ಗುಂಡ ಬಸವಯ್ಯಗೆನಲು ॥೫೦॥

ಹುಟ್ಟಿತು ಬೇಡಿದಂದದಿ ಹೇಳಿ ಶರಣೆಂದು
ನಿಷ್ಠೆಯಿಂದಲಿ ಅಗಳಲಿಕೆ।
ಕಟ್ಟಿದ ಹಗೆಯದಂದದಿ ಇತ್ತು ಎದೆಯುದ್ದ
ಅಷ್ಟರ ಕೆಳಗೆ ಹಾಸರೆಯು ॥೫೧॥

ಮತ್ತೆ ಹೇಳಿದರು ಆಯಿತು ಎಂದು ಎನೆ ಕೇಳಿ
ಸತ್ಯಶರಣ ಬಸವೇಶ।
ಉತ್ತರ ಹೇಳಿದ ಐದು ದಿನಕೆ ಆ
ದಿತ್ಯವಾರವು ಪಯಣವೆಂದ ॥೫೨॥

ಮುಂದೆ ಐದು ದಿವಸ ಪವಡಿಸಿರುತ ತನ್ನ
ಮಂದಿಗೆಲ್ಲರಿಗೆ ಹೇಳಿಹನು।
ಮುಂದಣಾಗಾಂತ್ರವ ಬರಕೊಳ್ಳಿ ಹೇಳಿಹೆ
ನೆಂದು ಎಂಬನು ಗುಂಡರಾಯ ॥೫೩॥

ಬರೆದುಕೊಂಡರೆ ಬಿಜೆಮಾಡಿಯಾರೆನುತಲಿ
ಬರೆದುಕೊಳ್ಳರು ಇರಲೆನುತ।
ಬರಿದೆ ಮಿಡಿಕಿಯಿರಿ ಅರಿಯಿರಿ ನೀವೆಂದು
ಬರೆಯ ಹೇಳ್ಹೇನು ಮುಚ್ಚತ್ತ ॥೫೪॥

ಅಕ್ಕಟಾ ನೀವು ಬಿಜಯ ಮಾಡಿದರೆ ಮುಂದೆ
ದಿಕ್ಕು ನಮಗೆ ಯಾರು ಎನುತ।
ಜಕ್ಕನೆ ಜರಿದು ಚಿಂತೆಯಿಂದಲಾ ಸತಿ
ದುಃಖ ಮಾಡುತಲಿ ಕೇಳಿದಳು ॥೫೫॥

ಬರಿದೆ ಅಳಲಿಬೇಡ ಹರ ದಿಕ್ಕು ನಿಮಗೆಂದು
ವರುಷ ಎರಡು ಮೂರು ತನಕ।
ಕರ ದುಃಖ ಅಟ್ಟುಳಿಯಾಗಿ ತೋರೀತು ಮುಂದೆ
ಪರಿಣಾಮವಹುದು ಅಂಜಬೇಡ ॥೫೬॥

ತಂದುದು ಎನಗೆ ವರನೆಂದು ನಿಮ್ಮನು ನಾನು
ಮುಂದಾರಿಗೊಪ್ಪಿಸಲೆಂದ।
ಚಂದ್ರಶೇಖರಗೆ ನಿಮ್ಮನು ಓವಿಸೀನಿ ನಾ
ನೆಂದು ನುಡಿದ ಬಸವೇಶ ॥೫೭॥

ಕರಿಯ ಮಣಿಯೋಲೆಯ ತೋಡನಿಟ್ಟರಿ ನೀವು
ತೊರೆದೆವೆ ಎಂದೆನಬೇಡ।
ಪುರುಷನೆ ಗತಿಯೆಂದು ಇಹಂಥವರಿಗೆ
ಇರಬೇಕು ಪುರುಷನ ಸೊಮ್ಮ ॥೫೮॥

ಯಾರು ಅಳಲಿಬೇಡ ಗಲಭೆ ಮಾಡಲಿಬೇಡ
ಹೊರಯಿಕೆ ಹೆಂಗಸು ಬರಬೇಡ।

ಯಾರು ಬೇಡವು ನೀರನೆರೆ ನೀನು ಎನುತಲಿ
ಹಿರಿಯ ಸತಿಯಳಿಗ್ಹೇಳಿದನು ॥೫೯॥

ಹೀಗೆಂದು ಬುದ್ಧಿಯ ಹೇಳುತಲಿರುತಿರೆ
ಮೇಘಪತಿಯು ಕರೆಯಲಿಕೆ।
ಸಾಗಿಸಿ ಕಳಿಹಿದನು ತನ್ನ ಪುತ್ರನ
ಆಗ ಪುಷ್ಪಕ ವಾದ್ಯಗಳನು ॥೬೦॥

ಶಂಕನಾದವು ಕೇಳಿಬರುತದೆ ಎನುತಲಿ
ಶಂಖಿಣಿಯರನು ಕೇಳಿದರೆ।
ಶಂಖನಾದವ ನಾವು ಕೇಳೆವೆಂದೆಂದರೆ
ಶಂಕಿಸದಿರಿ ನೀವು ಎಂದ ॥೬೧॥

ಬಂದನು ವೀರಭದ್ದರ ದೇವರೆನುತಲಿ
ಎಂದು ಎಲ್ಲರಿಗೆ ಹೇಳಿದನು।
ತಂದರು ಪುಷ್ಪಕ ಕೈಲಾಸದ ದೇವ
ದುಂದು[ಭಿ] ವಾದ್ಯ ಮೊದಲಾಗಿ ॥೬೨॥

ಮಧ್ಯಾಹ್ನದೊಳಗೆ ಹೋದರೆ ಹೋದೆವು ಇನ್ನು
ಮಧ್ಯಾಹ್ನವಿಲ್ಲಿ ಮೀರಿದರೆ।
ಇದ್ದೆವು ನಾವು ಹೋಗೆವುಯೆಂದು ಎನುತಲಿ
ಇದ್ದರಿಗೆಲ್ಲ ಹೇಳಿದನು ॥೬೩॥

ಲಿಂಗದೊಳಗೆ ಆಪಾಗಲಿ ಕೇಳಿದರು ಮತ್ತೆ
ಲಿಂಗಪೂಜೆಗೆ ಎಂತು ಎನುತ।
ಲಿಂಗದೊಳಗೇಕ ಚಿತ್ತದಲಾಗಗೊಡಿರೆಂದು
ಹಿಂಗದೆ ಎದ್ದ ಕೋಪದಲಿ ॥೬೪॥

ಇನ್ನು ಪೂಜೆಯ ಮಾಡಿದರೆ ಕರ್ತರು ಬಂದು
ಚಿನ್ನ ಕಡಿಕಡಿಯ ಮಾಡಿಯರು।
ತನ್ನಿ ಅಂಜಿದರೆ ನನ್ನ ಕೈಯಲೆನುತ ಪ್ರ
ಸನ್ನ ಮೂರುತಿ ತಾನಾಡಿದನು ॥೬೫॥

ಬಿಡಿ ಅಡ್ಡಮಾತೆಂದು ಒಡನೆ ತಾ ಬೇಗದಿ
ತಡೆಯದಾದನು ಲಿಂಗದೊಳಗೆ।
ಒಡಗೂಡಿ ಶರಣರ ಪುಷ್ಪಕದಲಿ ಹೋದ
ಬಿಡದೆ ಬಾರಿಸುವ ವಾದ್ಯದಲಿ ॥೬೬॥

ಚಂದ್ರಶೇಖರಪುರಕೆ ಎಯ್ದಿ ಹೋಗಲಿಯಾಗ
ಬಂದಳು ಪಾರ್ವತಿ ಇದುರ।
ನಂದಿಯ ಧ್ವಜ ದೇವಗನ್ನೇರು ಸಹವಾಗಿ
ತಂದರಾರತಿ ಕಳಸವನು ॥೬೭॥

ಅಂಬಿಕೆ ಮುಂದೆ ವಾದ್ಯವು ನೃತ್ಯ ಮೊದಲಾಗಿ
ಶಂಭು ಸಂತೋಷದಿ ಕಳುಹಿ।
ಸಂಭ್ರಮವಾಗುತಿಹುದು ಗುಂಡಬಸವೇಶ
ಬಂಬವ್ಯಾಳ್ಯವು ಕೈಲಾಸ ॥೬೮॥

ಬಂದ್ಯ ಮಗನೆಯೆಂದು ಎಂದಳು ಪಾರ್ವತಿ
ವಂದಿಸಿದನು ಕಾಣಲೊಡನೆ।
ಬಂದೆವು ನಿಮ್ಮ ಪಾದದ ಕೃಪೆಗಳಿಂದ
ಲೆಂದು ನುಡಿದ ಗುಂಡರಾಯ ॥೬೯॥

ಈ ಪರಿ ಇದಿರುಗೊಂಡು ಗುಂಡರಾಯನ
ತಾ ಪಾರ್ವತಿ ಕರೆದೊಯ್ಯೆ।
ವ್ಯಾಪಿಸಿದನು ಈಶನಡಿಗೆ ಈಶನು ಬೇಗ
ಭಾಪುಯೆನುತ ತರ್ಕೈಸಿದನು ॥೭೦॥

ಹೇಳಿದೆ ಬೋಧೆಯ ಕೇಳದು ಲೋಕೆಂದು
ಹೇಳಿದ ತಾ ಶಿವನೊಡನೆ।
ಬಾಳ ಬಳಲಿದೆ ನೀನು ಇಳೆಯೊಳು ಪೋಗಿಯೆಂದು
ಪ್ರಳಯರಹಿತ ಸಂತೈಸಿದನು ॥೭೧॥

ಅತ್ತಲೀ ಪರಿ ಸಂಭ್ರಮದೊಳಗಿರುತಿರೆ ಗುಂಡ
ನುತ್ತಮ ಕಾಯವಿದ್ದೆಡೆಯ।

ನಿತ್ತರಸಲಿ ಆರದಲ್ಲಿ ಆ ಕ್ಷಣದೊಳು
ಮತ್ತೆ ೨[ಗೋ]೨ಳೆನುತ ದುಃಖದಲಿ ॥೭೨॥

ಗಲಬಿಲಿ ನಿಲ್ಲೆಂದು ನಿಲಸನಿಲಸಲಾಗಿ
ನಿಲಲಾರದಂಥವರೆಲ್ಲ।
ಕೆಲರು ಧೂಪದ ಹೊಗೆ ತಾಗಿತೆಂದೆನುತಲಿ
ಕೆಲರು ಕಾಣದ ಹಾಗೆ ಅಳುತ ॥೭೩॥

ಶಿವನ ಉ೩[ಚ್ಚಾ]೩ಟದಿಂದಲಿ ಕುಳಿತಿರುವಂತೆ
ಶಿವಶರಣನು ಕುಳಿತಿಹನು।
ಶಿವ ಕಳೆಯವು ಮುಖಪದ್ಮವ ನೋಡಲು
ಶಿವರೂಪು ತಾನೆಯಾಗಿಹನು ॥೭೪॥

ತಪ್ಪದೆ ಇದಿರು ವಾಲಗವ ಮಾಡಲಿಕಾಗಿ
ಪುಷ್ಪಕಾಯಿತು ಏಳು ನೆಲೆಯ।
ಒಪ್ಪವಾಯಿತು ಶೃಂಗರಿಸಿ ಫಲಪೂಜೇಲಿ
ಕಪ್ಪುಗೊರಳನ ಭಕ್ತಗಾಗ ॥೭೫॥

ತಂದು ಕುಳ್ಳಿರಿಸಿಯು ಗುಂಡಬಸವೇಶನ
ಮುಂದೆ ವಾಲಗ ಶಂಖನಾದ।
ಒಂದೊಂದು ಪರಿಯಲಿ ತಂಡ ತಂಡದ ವಾದ್ಯ
ಸಂದಳ್ಯಾದರೆ ಕಟ್ಟಳಿಲ್ಲ ॥೭೬॥

ಎಲೆಯ ಚೆಲ್ಲುತ ಹಲಬರು ಹೂವ ಚೆಲ್ಲುತ
ಸಲೆ ಬುಕ್ಕಿಹಿಟ್ಟು ಚೆಲ್ಲುತಲಿ।
ಒಲೆಯ ಹೊತ್ತಿಕ್ಕದೆ ಊರೆಲ್ಲ ಅಳಲುತ
ಕೆಲರು ಗೋಡೆರಿ ಬಿದ್ಧಿಡಿಯದೆ ॥೭೭॥

ಬಿಟ್ಟು ಹೋದನು ಗುಂಡರಾಯ ಕಾಯವನೆಂದು
ಅಷ್ಟದಿಕ್ಕಿನ ಗ್ರಾಮದವರು।

೨-೨ ಘೆ (ಮೂ) ೩-೩ ಚಾ (ಮೂ)

ನೆಟ್ಟನೆ ಕೇಳಿ ಬಂದರು ನಿಲ ಸಾಲದೆ
ಅಷ್ಟಾದಶ ಕುಲದವರು ॥೭೮॥

ಪಟ್ಟೋಳಿ ಕುಲಾಯ ಕಪ್ಪಡ ಕಂಬಳಿ
ಎಷ್ಟೋ ರುದ್ರಾಕ್ಷೆ ಹಸ್ತಡ್ಡಿಕೆಯೊ।
ಇಷ್ಟಲಿಂಗವ ಕರದೊಳಗೆ ಇಳಿಹೆಯಲ್ಲಿ
ಅಷ್ಟವಿಧವ ಮುಂದೆ ಇಳಿಹಿ ॥೭೯॥

ಸಂಭ್ರಮದಿಂದಲಿ ಇಂಬಿಟ್ಟು ಮೂರನೆ
ಎಂಬ ದಿನಕೆ ಮತ್ತೆ ತೆಗೆದು।
ಬೆಂಬಿಡದಲಿ ನೋಡಲಿಕೆ ಕುಳಿತಿರುವಂಥ
ಸಂಭ್ರಮವನೇನ ಹೇಳುವೆನು ॥೮೦॥

ಹೇಗೆ ಹೂವಿನ ಹಚ್ಚಡ ಹೊದಿಸಿ ಇದ್ದದು ಇತ್ತು
ಆಗ ಗಿಡದಲಿಳಿದಂತೆ।
[ಸಾ]ಗುತಿಹುದು ಧೂಪದ ಹೊಗೆ ವಿಪರೀತ
ಆಗ ಕಂಡರು ಜನರೆಲ್ಲ ॥೮೧॥

ತಂದರೂರೆಲ್ಲ ಆರತಿಯನು ಎತ್ತೆತ್ತಿ
ಮುಂದೆ ಇಳಿಹಿ ಬೆತ್ತಹಿಡಿದು।
ಸಂದಳ್ಯಾಗದ ಹಾಗೆ ಒಬ್ಬೊಬ್ಬರು ಶರ
ಣೆಂದು ಬಳಿಕ ಕಳುಹುತಲಿ ॥೮೨॥

ಅವರಿವರೆನ್ನದೆ ಶರಣೆಂದ ಬಳಿಕಲಿ
ಪಾವನ ಮೂರುತಿಯ ಬಚ್ಚಿಟ್ಟು।
ಅವಧಾನದಿಂದ ಕಟ್ಟೆಯ ಕಟ್ಟಿದ ಮೇಲೆ
ಶಿವನ ಆಲಯವ ಸಾಗಿದರು ॥೮೩॥

ಶೃಂಗಾರವಾಗಿ ಕಟ್ಟಿದವು ಶಿವಾಲ್ಯವು
ಗಂಗೆಮುಖವು ಆಗಿ ಎರಡು।
ಹಿಂಗದೆ ವರುಷಕೆ ನಾಲ್ಕು ತಿಥಿಗಳಾಪ
ಶೃಂಗಾರವೇನ ಹೇಳುವೆನು ॥೮೪॥

ಕಟ್ಟಳೆ ಇರುಳು ಹಗಲು ನಂದಾದೀವಿಗೆ
ಅಷ್ಟವಿಧಾರ್ಚನೆಯಿಂದ।
ಎಷ್ಟು ಪಂಚಮಾವಾದ್ಯ ನಾದದಿಂದಲಿ ಪೂಜೆ
ದೃಷ್ಟದಿಂದಲಿ ಆಗುತಿಹುದು ॥೮೫॥

ಬೇಡಿದ ವರವನೀವುತಲಿಹ ಕೈಕಾಲು
ನೋಡ ಕಣ್ಣಿಲ್ಲವರಿಗೆ।
ನೋಡ ಕಣ್ಣನು ಕೈಕಾಲನೀವುತಲಿಹ
ರೂಢಿಯೊಳಗೆ ಗುಂಡರಾಯ ॥೮೬॥

ಉದಯದಲೆದ್ದು ಗುಂಡ ಬಸವೇಶನ
ಹೃದಯ ಶುದ್ಧದಲಿ ನೆನೆಯಲು।
ವಿಧಿಕರ್ಮಗಳು ಹೊಂದವು ನಂಬಿದವರಿಗೆ
ಅದಕೆ ಸಂದೇಹವೇನಿಲ್ಲ ॥೮೭॥

ಗುಂಡಬಸವೇಶ್ವರನ ನುಡಿವಿಡಿದ್ಯಾರು
ಕೊಂಡಾಡಿ ನೆನೆಯುತ್ತಲಿರಲು।
ಖಂಡಿಸಿವವು ಕರ್ಮವು ಭವ ಬಂಧನ
ಮಂಡಲೇಶನ ಪುರವಹುದು ॥೮೮॥

ಬಿಡದೆ ಜಗದೀಶನ ನುಡಿವಿಡಿದಾದ್ಯರು
ಕೊಂಡಾಡಿ ನೆನೆವುತಲಿರಲು।
ಬೆಂದು ಬೇಕರಿಯಾಗಿಯಂಭವ ಬಂಧನ
ಮಂಡಳೀಶನ ಪುರವಹುದು ॥೮೯॥

ಇಂತು ಈ ಚರಿತೆಯನಚ್ಚು ಮೆಚ್ಚಿಲೆ ಕೇಳಿ
ಚಿಂತೆ ಹರಿವು ಸರ್ವಸುಖವು।
ಭ್ರಾಂತು ಅಳಿದು ಗುಂಡನೀವಯ್ಯ ಗತಿಯೆನೆ ನಿ
ಶ್ಚಿಂತದಿ ಕೈಲಾಸ ಸಾಧ್ಯ ॥೯೦॥

ಜಯತು ಶ್ರೀಗುರುಗುಂಡ ಜಯತು ಬಸವಲಿಂಗ
ಜಯತು ಪರಮಗುರುಮೂರ್ತಿ।

ಜಯತು ಪಾರ್ವತಿಪ್ರಿಯ ಜಯಜಯಜಯವೆಂದು
ಕೈಯಮುಗಿದಾನು ವಂದಿಸುವೆ ॥೯೧॥

ತುಂಬಿತೇಳನೆ ಸಂಧಿ ಅಂತು ಏಳನೂರ
ತೊಂಬತ್ತಮೂರು ಪದನಾಗಿ।
ಶಂಭುಭಕ್ತನು ಗುಂಡಬಸವೇಶ್ವರನ ಚರಿ
ತ್ರಂಬುದಿಲ್ಲಿಗೆ ಸಂಪೂರ್ಣ ॥೯೨॥

ಕಂದ :

ಶರಧಿಯ ಜ್ಞಾನದ ಗುಂಡಂ
ಹಿರಿದಪ್ಪಂತಾರು ದರುಶನ ಮುಳುಗಿದ ಗುಂಡಂ।
ಸರ್ವಶಾಸ್ತ್ರವಡಗಿದ ಗುಂಡಂ
ಪರಶಿವನೊಳಕೊಂಡ ಗುಂಡ ಪರುಷದ ಗುಂಡಂ ॥ I ॥

ಕಲಿಯುಗದ ಕರ್ಮವೆಂಬೀ
ಶಿಲೆಯನು ಒಡೆಯಲಿಕೆ ಬಂದ ವಜ್ರದ ಗುಂಡಂ।
ಮಲಹರನ ಏಕಮುಖ ತಾ
ಬಲುಮಹಿಮನು ಎಂದೆ ಧರೆಗೆ ಶ್ರೀಗುರುಗುಂಡಂ ॥ II ॥

ಹೊಗಳಲೆನ್ನಳವೆ ನಿಮ್ಮನು
ಬಗೆದು ನೋಡುವರೆ ವೇದಶಾಸ್ತ್ರಂಗಳಿಗೆ।
ಅಗಣಿತವು ನಿಮ್ಮ ಮಹಿಮೆಯು
ಜಗದೀಶನಹುದು ನೀನು ಗುರುಗುಂಡಂ ॥ III ॥

ಅಂತು ಸಂಧಿ೭ಕ್ಕಂ ಪದನು ೭೯೩ಕ್ಕಂ ಸೇರಿಸಿದ ಕಂದ೨೧ಕ್ಕಂ

ಸಮಾಪ್ತ ಮಂಗಳಮಹಾ[೧]

❖❖

---

೧. ಶ್ರೀಮತ್ ಶಾಲಿವಾಹನ ಶಕ ೧೬೨೨ನೆಯ ವಿಕ್ರಮನಾಮ ಸಂವತ್ಸರದೊಳಗೆ ಅಶ್ವೀಜ ಅಧಿಕಮಾಸದೊಳುಸಪ್ತಮಿ ಮಂಗಳವಾರದೊಳು ಮುಗಿಯಿತು.ಯೀ ಪುಸ್ತಕವ ಬರದವರಾರು ಯೆಂದರೆ ಕೊಡೆಕಲ್ಲಸಿದ್ದಯ್ಯನ ಕುಮಾರ ಬಸವಯ್ಯನು ತನ್ನ ಹಸ್ತದಲ್ಲಿಬರದುಕೊಟ್ಟನು. ಕಕ್ಕಳಮೈಲಿಯ ಮಠದಅಲ್ಲಮಪ್ರಭುದೇವರ ವರಪುತ್ರ ಗದ್ದಿಗಿರಾಯನಸೋದರಳಿಯನು ಬರಸಿದನು ಪ್ರಭಯ್ಯನು. ಅದಕ್ಕೆನೀವು ತಪ್ಪತಿದ್ದಿ ಓದುವದು. ನೀವು ನಮಗೆ ಬಯ್ಯಬೇಡಿ.ನಿಮ್ಮ ಲೆಂಕರ ಲೆಂಕ ನಾನು ಅಯ್ಯಾ ಮಹಾಗಣಂಗಳಿಗೆ ವಂದನೆಯ ಮಾಡುವೆನು. ಇಂತು ಸಮಾಪ್ತ ಸಂಪೂರ್ಣವು ಮಹಾ (ಮೂ).

ಅನುಬಂಧ

*

ಪದ್ಯಗಳ ಅಕಾರಾದಿ

[ಅಕಾರಾದಿಯ ಮುಂದಿನ ಅಂಕಿಗಳು ಸಂಧಿ ಮತ್ತು ಪದ್ಯವನ್ನು ಸೂಚಿಸುತ್ತವೆ]

❖❖

ಅಪ್ರಕಟಿತ ಪ್ರಾಚೀನ ಸಾಹಿತ್ಯ-ದಾಖಲೆ ಮಾಲೆ : ೨೭

ಕೊಡೇಕಲ್ಲ ವಚನ ವಾಕ್ಯ

(ಸಂಪುಟ-೪)

ಸಂಪಾದಕರು

ಎಂ.ಎಂ.ಕಲಬುರ್ಗಿ

ಸಂಗಪ್ಪಯ್ಯ ಸ್ವಾಮಿ

೨೦೧೧

ಕರ್ನಾಟಕ ಸರ್ಕಾರ

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು

*

ಪ್ರಸ್ತಾವನೆ

ಉಪಲಬ್ಧ ಸಾಹಿತ್ಯವನ್ನು ಗಮನಿಸಿ ಹೇಳುವುದಾದರೆ, ಕನ್ನಡ ಸಾಹಿತ್ಯ ಆರಂಭವಾಗುವುದೇ ಉತ್ತರ ಭಾರತದ ವಲಸೆ ಧರ್ಮಗಳಿಗೆ ಸಂಬಂಧಿಸಿದ ಜೈನ, ವೈದಿಕ ಕವಿಗಳಿಂದ. ಇವರು ಸಹಜವಾಗಿಯೇ ತಮ್ಮ ಉತ್ತರ ಭಾರತದ ಜೈನ, ವೈದಿಕ ಸಂಸ್ಕೃತಿಯ ಪ್ರತಿಪಾದನೆ–ಪ್ರಸಾರಗಳಿಗೆ ಕನ್ನಡ ಭಾಷೆಯನ್ನು ಮಾಧ್ಯಮವಾಗಿ ಬಳಸಿಕೊಂಡರು. ಈ ಸಾಹಿತ್ಯದ ಪ್ರಭಾವಕ್ಕೆ ಒಳಗಾದ ಕನ್ನಡಿಗರು ಕ್ರಮೇಣ ತಮ್ಮ ಸ್ಥಳೀಯ ಸಂಸ್ಕೃತಿಯನ್ನು ಉಪೇಕ್ಷಿಸುತ್ತ, ಕೆಲವೊಮ್ಮೆ ಅವರೊಂದಿಗೆ ಸೇರಿಕೊಂಡು ತಮ್ಮದನ್ನು ತಾವೇ ಅವಹೇಳನ ದೃಷ್ಟಿಯಿಂದ ನೋಡುತ್ತ ಬಂದರು. ಇಂಥ ಧೋರಣೆಯಿಂದಾಗಿ ಪರಕೀಯ ಸಂಸ್ಕೃತಿಯೇ ನಮ್ಮ ಸಂಸ್ಕೃತಿಯೆಂಬ ಭಾವ ಬೆಳೆದು, ಸ್ಥಳೀಯ ಸಂಸ್ಕೃತಿ ಮೂಲೆಗೆ ಸರಿಯುತ್ತ ಅಸ್ಮಿತೆ ಕ್ಷೀಣಿಸುತ್ತ ಬಂದಿತು. ಈ ತಪ್ಪನ್ನು ತಿದ್ದಿಕೊಳ್ಳುವ ಪ್ರಯತ್ನದ ಭಾಗವಾಗಿ ಕೆಲವು ವರ್ಷಗಳ ಹಿಂದೆ ಸ್ಥಳೀಯ 'ಕೊಡೇಕಲ್ಲ ಸಂಪ್ರದಾಯ'ವನ್ನು ಕುರಿತು ನನ್ನ ಮಾರ್ಗದರ್ಶನದಲ್ಲಿ ಡಾ. ಬಸವಲಿಂಗ ಸೊಪ್ಪಿಮಠ ಅವರು ಪಿಎಚ್.ಡಿ ಅಧ್ಯಯನ ಪೂರೈಸಿದರು (೧೯೮೧–೮೮). ನಾನು ಕುಲಪತಿಯಾಗಿದ್ದ ಸಂದರ್ಭದಲ್ಲಿ ಈ ಸಂಪ್ರದಾಯದ 'ಕೊಡೇಕಲ್ಲ ವಚನವಾಕ್ಯ'ಸಂಪುಟ–೧ (ಸಂ. ಬಸವಲಿಂಗ ಸೊಪ್ಪಿಮಠ ೧೯೯೮), ಸಂಪುಟ:೨ ಮತ್ತು ಸಂಪುಟ:೩ (ಸಂ. ಶಿವಾನಂದ ವಿರಕ್ತಮಠ ೧೯೯೯, ೨೦೦೦) ಹೆಸರಿನ ಕೃತಿಗಳು ಹಂಪಿ ವಿಶ್ವವಿದ್ಯಾಲಯದಿಂದ ಪ್ರಕಟವಾದವು. ಡಾ. ಬಿ.ಆರ್. ಹಿರೇಮಠ ಅವರು 'ಗುಂಡಬಸವನ ಅಂಕಿತದ ಸ್ವರವಚನಗಳು' ಹೆಸರಿನ ಪಠ್ಯವನ್ನು ಬಸವಪಥ ಪತ್ರಿಕೆಯ ಮೂಲಕ ಪ್ರಕಟಿಸಿದರು (೧೯೮೬).

ಬಳಿಕ ಡಾ. ಕೆ. ರವೀಂದ್ರನಾಥ ಅವರ ಮಾರ್ಗದರ್ಶನದಲ್ಲಿ ಈ ಸಂಪ್ರದಾಯದ ಆರಂಭಿಕ ಕೇಂದ್ರವಾದ ಅಮರಕಲ್ಯಾಣ (ತಾಲೂಕ ಸ್ಥಳವಾದ ಶಹಪುರ ನಗರದ ಭಾಗವಾಗಿರುವ ಹಳೆಯ ಗ್ರಾಮದ ನೆರೆಯ ಡಿಗ್ಗಿ) ಮತ್ತು ಧರ್ಮಕಲ್ಯಾಣ (ಚಿತ್ತಾಪುರ ತಾಲೂಕಿನ ನಾಗಾವಿ)ಗಳನ್ನು ಕುರಿತು ಕ್ರಮವಾಗಿ ಅನುಪಮಾ ಆದಾಪುರ, ಕಾಂತೇಶ ರೆಡ್ಡಿ ಅವರು ಎಂ.ಫಿಲ್ ಅಭ್ಯಾಸ ಪೂರೈಸಿದರು. ಇದೇ ಹೊತ್ತಿಗೆ ಈ ಸಂಪ್ರದಾಯದ ನಂದಿಹಾಳ ಮಠದವರಾದ ಶ್ರೀ ಸಂಗಪ್ಪಯ್ಯ ಅವರು ಅಮರಗನ್ನಡ ಲಿಪಿ (೨೦೦೬), ಪೂಜಾ ಸಾಹಿತ್ಯ (೨೦೦೭) ಕೊಡೇಕಲ್ಲ ನುಡಿ (೨೦೦೮) ಕೊಡೇಕಲ್ಲವರ ಕಾಲಜ್ಞಾನ(೨೦೦೮)ಕೃತಿಗಳನ್ನು ಪ್ರಕಟಿಸಿದರು. ಡಾ. ಶಿವಾನಂದ ವಿರಕ್ತಮಠ ಅವರು ಅಮರಕಲ್ಯಾಣ (೨೦೦೭)ಕೃತಿಯನ್ನು ಬೆಳಕಿಗೆ ತಂದರು. ಪ್ರೊ. ಆಯ್.ಜಿ. ಕೊಡೆಕಲ್ಲಮಠ

ಅವರು ನಂದಿ ಆಗಮಲೀಲೆಯನ್ನು ಮರು ಪ್ರಕಟಿಸಿದರು(೨೦೦೪). ಇತ್ತೀಚೆ ನಾನು ಗುಂಡಬಸವೇಶ್ವರ ಚರಿತ್ರೆ (೨೦೦೭)ಯನ್ನು ಪ್ರಕಟಿಸಿದೆನು (ಸಹ ಸಂಪಾದಕರು: ಸಂಗಪ್ಪಯ್ಯಸ್ವಾಮಿ). ಇದರ ಫಲವಾಗಿ ಈ ಸಂಪ್ರದಾಯದ ಮೇಲೆ ಕವಿದಿದ್ದ ಕತ್ತಲೆ ಕ್ರಮೇಣ ಕರಗುತ್ತ ನಡೆದು, ೧೨ನೆಯ ಶತಮಾನದ ಶರಣರು ಸ್ಥಾಪಿಸಿದುದು **ಸಮಯ ಕಲ್ಯಾಣ.**[೧] ಬಳಿಕ ಹಳೆಯ ಸಗರದ ನೆರೆಯಲ್ಲಿ ಡಿಗ್ಗಿ ಸಂಗಮನಾಥ ಸ್ಥಾಪಿಸಿದುದು **ಅಮರಕಲ್ಯಾಣ,** ಆ ಮೇಲೆ ಚಿತಾಪುರ ತಾಲೂಕ ನಾಗಾವಿಯಲ್ಲಿ ಗುಂಡಬಸವ ಅಸ್ತಿತ್ವಕ್ಕೆ ತಂದುದು **ಧರ್ಮಕಲ್ಯಾಣ,** ಕೊಡೆಕಲ್ಲಿನಲ್ಲಿ ಬಸವಣ್ಣ ಸ್ಥಾಪಿಸಿದುದು **ಕಡೆಯ ಕಲ್ಯಾಣ**ವೆಂದು ತಿಳಿದು ಬಂದಿತು. ಇವುಗಳಲ್ಲಿ ನಾಗಾವಿ ಕೇಂದ್ರದವರು ಆಮೇಲೆ ಸಿಂದಗಿ ತಾಲೂಕಿನ ಕಕ್ಕಳಮೇಲಿಯಲ್ಲಿ ನೆಲೆನಿಂತರೆಂದೂ, ಕೊಡೇಕಲ್ಲ ಕೇಂದ್ರದ ಶಾಖೆಗಳು ಅನೇಕ ಗ್ರಾಮಗಳಲ್ಲಿ ತಲೆಯೆತ್ತಿವೆಯೆಂದೂ ಈಗ ಸ್ಪಷ್ಟವಾಗಿದೆ.

ಹೀಗೆ ಈ ಧಾರ್ಮಿಕ ಪಂಥ ತನ್ನ ಜಾಲ ಬೆಳೆಸುವುದರೊಂದಿಗೆ, ತಲೆಮಾರಿನಿಂದ ತಲೆಮಾರಿಗೆ ಸಾಹಿತ್ಯ ಸೃಷ್ಟಿಸುತ್ತ ಬಂದುದೂ ಇದರ ಸಾಧನೆಯಾಗಿದೆ. ಈ ವಾಹಿನಿಯಲ್ಲಿ ಹುಟ್ಟಿದ ಮೂಲಸಾಹಿತ್ಯವನ್ನು, ಈ ಮೂಲಸಾಹಿತ್ಯವನ್ನು ಕುರಿತು ಆಧುನಿಕ ವಿದ್ವಾಂಸರು ಸೃಷ್ಟಿಸಿದ ಸಾಹಿತ್ಯವನ್ನು ಮೇಲೆ ವಿವರಿಸಲಾಗಿದೆ. ಇವುಗಳಲ್ಲಿ ಮೂಲಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಈಗಾಗಲೇ 'ಕೊಡೇಕಲ್ಲ ವಚನವಾಕ್ಯ' ಹೆಸರಿನ ೩ ಸಂಪುಟಗಳು ಹೊರಬಂದಿದ್ದು, ಈಗ ೪ನೆಯ ಸಂಪುಟ ಪ್ರಕಟವಾಗುತ್ತಲಿದೆ. ಈ ಸಂಪುಟದಲ್ಲಿ ಎರಡು ಭಾಗಗಳಿದ್ದು, ಮೊದಲಿನ ಭಾಗದಲ್ಲಿ "ಕನ್ನಡ ಅಧ್ಯಯನಪೀಠ ಹಸ್ತಪ್ರತಿಯ ಸ್ವರವಚನಗಳು" ಎರಡನೆಯ ಭಾಗದಲ್ಲಿ 'ಶಹಾಪುರ ಹಸ್ತಪ್ರತಿಯ ಸ್ವರವಚನಗಳು' ಸೇರುವೆಯಾಗಿವೆ.

ಧಾರವಾಡ ಕನ್ನಡ ಅಧ್ಯಯನಪೀಠದ ೨೦೮ನೆಯ ನಂಬರಿನ ಕಾಗದ ಪ್ರತಿಯಲ್ಲಿ 'ಗುಂಡಬಸವ' ಅಂಕಿತದ ಸ್ವರವಚನಗಳಿವೆ. ಈ ಕೃತಿಯ ಹೆಸರಾಗಲೀ, ಕವಿಯ ಹೆಸರಾಗಲೀ ಅಲ್ಲಿ ದಾಖಲಾಗಿಲ್ಲ. 'ನಾ ಪೇಳ್ವೆ ಗುರು ಗುಂಡಬಸವನ ಕೃಪೆಯಲಿ' ಎಂಬಂಥ ಅಲ್ಲಿಯ ವಾಕ್ಯಗಳಿಂದಾಗಿ ಇವುಗಳನ್ನು ಗುಂಡಬಸವನ ಮಕ್ಕಳಲ್ಲಿ ಅಥವಾ ಶಿಷ್ಯರಲ್ಲಿ ಒಬ್ಬನು ಬರೆದಿರಬೇಕೆಂದು ಹೇಳಬಹುದಾಗಿದೆ. ಹೀಗೆ ಕರ್ತೃ ಅಸ್ಪಷ್ಟವಾಗಿದ್ದ ಕಾರಣ, ಈ ಹಸ್ತಪ್ರತಿಯನ್ನು ಬಳಸಿ ಡಾ. ಬಿ.ಆರ್. ಹಿರೇಮಠ ಅವರು ಈ ಕೃತಿಯನ್ನು 'ಗುಂಡಬಸವ' ಅಂಕಿತದ ಸ್ವರವಚನಗಳು ಹೆಸರಿನಿಂದ 'ಬಸವ ಪಥ' ಪತ್ರಿಕೆಯಲ್ಲಿ (೧೯೮೬) ಪ್ರಕಟಿಸಿದರು. ಇದನ್ನು ನಾವು 'ಕನ್ನಡ ಅಧ್ಯಯನಪೀಠ ಹಸ್ತಪ್ರತಿಯ ಸ್ವರವಚನಗಳು' ಹೆಸರಿನಿಂದ ಇಲ್ಲಿ ಪ್ರಕಟಿಸುತ್ತಿದ್ದೇವೆ. ಈ ಹಸ್ತಪ್ರತಿಯಲ್ಲಿ ೬೭ ಸ್ವರವಚನಗಳಿದ್ದು (ಬಸವ ಪಥ ೮-೬ರಲ್ಲಿ ಪ್ರಕಟವಾದ ಹಾಡಿನ ಆರಂಭದ ಸಾಲು ನೋಡಿರಿ), ಇವುಗಳಲ್ಲಿ 'ಹೆಂಡತಿಯೊಲ್ಲೆನು' 'ನನ್ನ ನಡೆಗೆ ನಾ' 'ಮಾಡುವೆ ಜಪ' 'ಎಂತು ಜಂಗಮವಾದೆ'-ಈ ನಾಲ್ಕನ್ನು ಕೈಬಿಟ್ಟು (ಕಾರಣ ಗೊತ್ತಾಗುತ್ತಿಲ್ಲ) ೬೩ ಸ್ವರವಚನಗಳನ್ನು 'ಬಸವ ಪಥ'ದ ಮುಂದಿನ ಸಂಚಿಕೆಗಳಲ್ಲಿ ಬಿ. ಆರ್. ಹಿರೇಮಠ ಅವರು ಪ್ರಕಟಿಸಿದ್ದಾರೆ. ಈಗ ನಾವು ಎಲ್ಲ ೬೭ ಸ್ವರವಚನಗಳನ್ನು ಪ್ರಕಟಿಸಬೇಕೆಂದರೆ, ಕನ್ನಡ ಅಧ್ಯಯನಪೀಠದ ಹಸ್ತಪ್ರತಿ ಭಂಡಾರದಲ್ಲಿ ಈ

---

೧. ಕೊಡೇಕಲ್ಲ ವಚನವಾಕ್ಯ-ಸಂಪುಟ:೧, ಪು. ೩೧೫ರಲ್ಲಿ ಬಸವಕಲ್ಯಾಣವನ್ನು 'ಸಮಯಕಲ್ಯಾಣ'ವೆಂದು ಸೂಚಿಸಲಾಗಿದೆ.

ಹಸ್ತಪ್ರತಿ ಸಿಗುತ್ತಿಲ್ಲ. ಹೀಗಾಗಿ ನಾವು ಬಸವ ಪಥ ಸಂಚಿಕೆಗಳಿಂದಲೇ ೬೩ ಸ್ವರವಚನ ಸ್ವೀಕರಿಸಿ, ತಕ್ಕಮಟ್ಟಿಗೆ ಪರಿಷ್ಕರಿಸಿ ಪ್ರಕಟಿಸುತ್ತಿದ್ದೇವೆ.

ಎರಡನೆಯ ಭಾಗದ "ಶಹಾಪುರ ಹಸ್ತಪ್ರತಿಯ ಸ್ವರವಚನಗಳು" ಕಾಗದಪ್ರತಿಯು ಶಹಾಪುರದ ಶ್ರೀ ಲಿಂಗಣ್ಣ ಸತ್ಯಂಪೇಟೆ ಅವರ ಸಹಾಯದಿಂದ ಅಲ್ಲಿಯ ಶ್ರೀ ಗದ್ದಿಗಿರಾಯ ಒಡೆಯರ್ ಅವರ ಮನೆಯಲ್ಲಿ ಲಭ್ಯವಾಯಿತು. ಈ ಕಾಗದಪ್ರತಿಯು ಸ್ವರವಚನ-ವಚನಗಳ ಸಂಕಲನವಾಗಿದೆ. ಯಾವದೇ ತಾತ್ವಿಕ ತಳಹದಿಯಲ್ಲಿ ಇವುಗಳನ್ನು ಯೋಜಿಸದೆ, ಅಭ್ಯಾಸಿಯೊಬ್ಬ ತನಗೆ ತಿಳಿದಂತೆ ಸಂಗ್ರಹಿಸಿದಂತಿದೆ. ಈ ಸಂಗ್ರಹದಲ್ಲಿರುವ ಸ್ವರವಚನ, ವಚನಗಳು ಈ ಕೆಳಗಿನಂತಿದೆ.

	ಹಾಡಿನ : ವಚನದ ಮೊದಲ ಸಾಲು	**ಪುಟ**	**ಪದ್ಯ/ವಚನಸಂಖ್ಯೆ**
೧.	[1][ನಿಂದೆ] ಕುಂದುಗಳೆಲ್ಲ ಆಡಬೇಡ	೨ನೆಯ	೨೫ ಪದ್ಯ
	[2]ಶಿವಭಕ್ತ ಶಿವಭಕ್ತನೆಂದೆಂಬರು		
	(ಅಂಕಿತ :'ಕೂಡಲಾದಿ ಚೆನ್ನ ಸಂಗಮದೇವಯ್ಯ')	೪ನೆಯ	೨೦ ವಚನ
	ಆಹಾ ಬಾರಯ್ಯ ಬಸವಣ್ಣ ಮರ್ತ್ಯದೊಳು		
	(ಅಂಕಿತ :'ಕೂಡಲಾದಿ ಚೆನ್ನ ಸಂಗಮದೇವಯ್ಯ')	೮ನೆಯ	೧ ವಚನ
	ಕಡೆಯಾಟಕೆ ಕಲ್ಯಾಣಕೆ	೮ನೆಯ	೨೩ ಪದ್ಯ
	ಮುಂದೆ ಗುರುವಿನ ಕಾಣಬೇಕು	೧೦ನೆಯ	೨೪ ಪದ್ಯ
	ಎಂತು ಜಂಗಮವಾದೆ	೧೨ನೆಯ	೨೧ಪದ್ಯ
೨.	ಮಳೆ ಬೆಳೆಯೆಂಬುದು ಪರಮ ಗುರು	೧೪ನೆಯ	೧೧ ಪದ್ಯ
೩.	ಶಿವಶಿವ ಸಿದ್ಧ ಕೈಲಾಸ ಃಪಲ್ಲವ ಃಹರನ ಕೈಲಾಸ	೧೫ನೆಯ	೧೬ ಪದ್ಯ
	ಕುಲಕಾಯಕಚಲ ಪದಮನೆ	೧೭ನೆಯ	೪೬ ಪದ್ಯ
	ತುಳಿಸುತ ಬಂದನಯ್ಯ ಗೌಡ	೨೦ನೆಯ	೨೫ ಪದ್ಯ
೪.	ಅಂಡಜಾಂಡ ಬ್ರಹ್ಮಾಂಡದೊಳಗೇನು	೨೨ನೆಯ	೯ ಪದ್ಯ
೫.	ಶರಣಾರ್ಥಿ ಸಾರಿ ಹೇಳಿದ	೨೩ನೆಯ	೯ ಪದ್ಯ
	ನಂಬಿರೋ ಸಕಲಕೆ ಇಂಬುಗೊಡನೆ	೨೩ನೆಯ	೨೫ ಪದ್ಯ
೬.	ಬಲ್ಲಿದರು ಬಂದರಯ್ಯಾ ಎಲ್ಲ ಪ್ರಮಥರು	೨೫ನೆಯ	೫ ಪದ್ಯ

---

೧. ಆರಂಭದ ಪುಟಗಳಿಲ್ಲ, ಉಳಿದಿರುವ ಮೊದಲ ಪುಟದಲ್ಲಿ ೯ರ ವರೆಗಿನ ಪದ್ಯಗಳಿಲ್ಲ. ೧೦ರಿಂದ ೧೩ನೆಯ ಪದ್ಯಗಳ ವರೆಗೆ ಈ ಹಾಡು ಬೆಳೆದು ಸಮಾಪ್ತಗೊಂಡಿದೆ. ಇದನ್ನು ಕೈಬಿಟ್ಟು ಮುಂದಿನ ಹಾಡು, ವಚನಗಳ ವಿವರವನ್ನು ಮೇಲಿನ ಯಾದಿಯಲ್ಲಿ ಕೊಡಲಾಗಿದೆ.

೨. ಇದರ ಆರಂಭದಲ್ಲಿ "॥ವಚನ॥ ಮಿಸರ ಸಡಸ್ತಲ" ಎಂಬ ಶೀರ್ಷಿಕೆಯಿದೆ. ಇಲ್ಲಿ ಮೊದಲನೆಯ ವಚನದ ಆರಂಭವನ್ನು ಮಾತ್ರ ಉದ್ಧರಿಸಲಾಗಿದೆ. ೫ನೆಯ ವಚನಕ್ಕೆ "ಸಂಗನಬಸವಣ್ಣ" ಎಂಬ ಮುದ್ರಿಕೆಯಿದೆ.

	ಪಲ್ಲಿ ನುಡಿಯಿತು ಪರಮ ರಾಕ್ಷಸರಳಿವೆಂದು	೨೫ನೆಯ	೧೮ ಪದ್ಯ
೭.	ಕರಿಮುಖನೆ ಕೇಳಯ್ಯ ನೀನು	೨೭ನೆಯ	೧೧ ಪದ್ಯ
	[೩]ಜಯತು ಶ್ರೀ ವರಮೂರ್ತಿ ಜಯತು	೨೮ನೆಯ	೩ ಪದ್ಯ
	ಶಿವಯೋಗವೆಂದು.ಆವಾಗಲಾಡುತಲಿಹೆನು	೨೮ನೆಯ	೫ ಪದ್ಯ
	ಭವಿಗೆ ಶರಣೆನಬಹುದೆ, ಭಕ್ತ ನಾನೆಂಬೆನು	೨೯ನೆಯ	೯ ಪದ್ಯ
೮.	ಪತಿವ್ರತೆಯೆಂದು ಬೀಗುತೇನೆ	೩೦ನೆಯ	೯ ಪದ್ಯ
	ಗಂಡಗಂಜದ ಗಯ್ಯಾಳಿಯು ನಾ	೩೧ನೆಯ	೨೫ ಪದ್ಯ
	ವ್ರತ ಶೀಲ ಹಿಡಿವರಣ್ಣಾ	೩೪ನೆಯ	೨೫ ಪದ್ಯ
೯.	[೪]ಕಡೆ ಕಡೆಯಾಟಕೆ ಬಂದ	೩೬ನೆಯ	೬ ಪದ್ಯ
೧೦.	ಅವಘಡ ಬಂದಿದೆಯೋ ಲೋಕಕ್ಕೆ	೩೭ನೆಯ	೬ ಪದ್ಯ
೧೧.	ಧರ್ಮಕಲ್ಯಾಣ ಸಂಗಯ್ಯ ಹೂಡಿದಾಟ	೩೭ನೆಯ	೫ ಪದ್ಯ
೧೨.	ಬಂದೆವಯ್ಯ ಬೊಬ್ಬೆ ನಿಂದರಗೊಡವು	೩೭ನೆಯ	೫ ಪದ್ಯ
	ಪಾರಿಯೋ ಎನ್ನಿರೋ ಶರಣರೆಲ್ಲ	೩೮ನೆಯ	೧೭ ಪದ್ಯ
	ಮಾಡುವೆ ಜಪ ಶಿವಪೂಜೆಯ ಡಂಭಕ	೪೦ನೆಯ	೨೫ ಪದ್ಯ
೧೩.	*ಐಕರುಣಿ ನಂದಿರಾಯ ನಿಮ್ಮ ಚರಣವ	೪೨ನೆಯ	೩ ಪದ್ಯ
೧೪.	ಬಂದೀಚೆ ಓಡಿ ದೇವರ ದೇವಾ	೪೨ನೆಯ	೩ ಪದ್ಯ
೧೫.	ಬೇಡಿಕೊಂಬ ಬನ್ನಿ ವರವನು	೪೩ನೆಯ	೩ ಪದ್ಯ
೧೬.	ಬೇಡಿಕೊಂಬ ಬನ್ನಿ ನಾಡ ಮಹಾಂತರೆಲ್ಲರು	೪೩ನೆಯ	೫ ಪದ್ಯ
೧೭.	ಸಿಕ್ಕಿ ಬಾಯ ಬಿಡುತಿಹೆವಯ್ಯಾ	೪೩ನೆಯ	೩ ಪದ್ಯ
೧೮.	ನಿತ್ಯತೃಪ್ತಿ ಭಕ್ತಿಯಾನಂದ ಲೀಲೆ	೪೩ನೆಯ	೩ ಪದ್ಯ
೧೯.	ಶರಣು ನೇಮವ ಮಾಡಿ ಫಲವು	೪೪ನೆಯ	೩ ಪದ್ಯ
	ನಚ್ಚದಿರೋ ರಾಜ ರಾಜಾರ್ಥ	೪೪ನೆಯ	೩೦ ಪದ್ಯ
	ಅಗಡಿ ತಗಡಿತನ ಆಟ ಬಂದವಯ್ಯ	೪೬ನೆಯ	೩೮ ಪದ್ಯ
೨೦.	[೫]ದುಮ್ಮಿಸಾಲೆ ಇನ್ನು ಪಾಪಕ್ಕೆ ಉಳಿವಿಲ್ಲ	೪೮ನೆಯ	೫೫ ಪದ್ಯ

---

೩. ಇದರ ತಲೆಯ ಮೇಲೆ "ನವಲಗುಂದದ ಪುಣ್ಯಸ್ಥಲದ ನುಡಿಗಳು" ಎಂಬ ಶೀರ್ಷಿಕೆಯಿದೆ. ಇದು ಜಕ್ಕಮ್ಮನನ್ನು ಕುರಿತ ಹಾಡು.

೪. ಇದರ ತಲೆಯ ಮೇಲೆ "ಧರ್ಮಕಲ್ಯಾಣದ ಗುರು ಗುಂಡಬಸವಯ್ಯನ ಪಾದವೇ ಗತಿ" ಎಂಬ ಬರಹವಿದೆ.

* ಇದರ ಮೇಲೆ "ಮುಖವಾಲ್ಯದ ನುಡಿಗಳು" ಎಂಬ ಬರೆಹವಿದೆ.

೫. ಇದರ ತಲೆಯ ಮೇಲೆ "ದುಮ್ಮಿಸಾಲೆ" ಎಂಬ ಶೀರ್ಷಿಕೆಯಿದೆ.

೨೧.	[೬]ಸಿದ್ಧಲಿಂಗನ ಶ್ರೀ ಚರಣವ ನೆನೆವೆನು	೫೩ನೆಯ	೮೬ ಪದ್ಯ
	ಸಂಸಾರವೆಂಬ ಅವಸತ್ತೆದಲ್ಲಿ ನಿಂದ		
	(ಅಂಕಿತ : 'ಅಮರಪುರದ ರಾಯ ಗುರು ನಂದೀಶ')	೫೭ನೆಯ	೧ ವಚನ
	ಕಲ್ಯಾಣ ಒಡೆದು ಕಟಕರ ಕೇರಿಯಾಯಿತ್ತು		
	(ಅಂಕಿತ : 'ಅಮರಪುರದ ರಾಯ ಗುರುನಂದೀಶ')	೫೮ನೆಯ	೧ ವಚನ
೨೨.	ಶಿವ ಶಿವ ಕೈಲಾಸವಾಸವಾಗಿ	೫೮ನೆಯ	೮೫ ಪದ್ಯ
೨೩.	ಸಾಕಯ್ಯ ಗುರುವೆ ಈ ಲೋಕದೊಳು	೬೨ನೆಯ	೨೫ ಪದ್ಯ
	ಗುರುವು ಪೇಳಿದ ಶಿಷ್ಯ ಬೋಧೆಯ	೬೪ನೆಯ	೨೬ ಪದ್ಯ
	ಪಂಚತತ್ವ ಪಂಚತತ್ವವೆಂಬ ಅಣ್ಣಗಳು		
	(ಅಂಕಿತ'ಕೂಡಲಾದಿ ಚೆನ್ನಸಂಗಮದೇವಯ್ಯ')	೬೮ನೆಯ	೧೪ ವಚನ
	ಸಾಕ್ಷಾತ ಬಾವನ್ನ ಹೀನಕುಲಜಾತಿ	೭೩ನೆಯ	೩೯ ವಚನ[೭]
	(ಅಂಕಿತ : 'ಕೂಡಲಾದಿ ಚೆನ್ನಸಂಗಮದೇವಯ್ಯ')		
	ಅಳಂದರ ತಳಂದರ ಅನಂತ		
	(ಅಂಕಿತ: 'ಮಹಾಗುರು ಬಸವ ಪ್ರಭುವೇ')	೮೨ನೆಯ	೧ ವಚನ
	ಬಸವನ ಶೃಂಗದಲ್ಲಿ ತುಂಬುರ ನಾರದ		
	(ಅಂಕಿತ : 'ಕೂಡಲಾದಿ ಚೆನ್ನಸಂಗಮದೇವಯ್ಯ')	೮೨ನೆಯ	೧ವಚನ
	[೮]ಜಂಗಮವಿಲ್ಲ ಲೋಕದೊಳಗೆ	೮೩ನೆಯ	೨೫ ಪದ್ಯ
	ತೂಗುಫ ಮನದುಯ್ಯಲೆ	೮೫ನೆಯ	೨೧ ಪದ್ಯ
	ಇಂದ್ರದೇವಂಗೆ ಕೊಟ್ಟ ಅಂದಿನ ರಥವನ್ನ	೮೭ನೆಯ	೨೩ ಪದ್ಯ
	[೯]ವಸವಂತನೆನ್ನಿರೋ ವಸಂತನೆನ್ನಿ	೮೯ನೆಯ	೧೯ ಪದ್ಯ
೨೪.	ನಡೆಗುಣವಿಲ್ಲದೆ ತುಡುಗುಣಿ ನಾ ಬಂದೆ	೯೦ನೆಯ	೫ ಪದ್ಯ
೨೫.	ಆದಿಲೋಕದಲೆ ಓದುತವೆ ಬಂದು	೯೧ನೆಯ	೫ ಪದ್ಯ
೨೬.	ಒಂದು ಧರ್ಮದ ಪಕ್ಷಿ ಮುಂದು	೯೧ನೆಯ	೩ ಪದ್ಯ
೨೭.	ಬಂತು ಬಂತು ಬಲು ಸಾಕ್ಷಿಯ ನೆಗಳುತ	೯೨ನೆಯ	೫ ಪದ್ಯ
೨೮.	ಬೆಳೆ ಕಂಡೆ ಧರ್ಮವೆ ಬೆಳೆ ಕಂಡೆ ಪುಣ್ಯವೆ	೯೨ನೆಯ	೩ ಪದ್ಯ

---

೬ ಇದರ ತಲೆಯ ಮೇಲೆ "ಶ್ರೀ ಗುರುವೆ ಗತಿ॥ ಚರಿತ್ರೆ" ಎಂಬ ಬರೆಹವಿದೆ.

೭. ಇಲ್ಲಿಯ ೧೯ನೆಯ ವಚನಕ್ಕೆ 'ಲಿಂಗ ಬಸವಪ್ರಭುವೇ" ಎಂಬ ಮುದ್ರಿಕೆಯಿದೆ.

೮. ಇದರ ತಲೆಯ ಮೇಲೆ "ವೀರಪ್ಪಯ್ಯನ ಪಾದವೇ ಗತಿ" ಎಂಬ ಬರೆಹವಿದೆ.

೯. ಇದರ ತಲೆಯ ಮೇಲೆ "ವಸವಂತನ ವಾಕ್ಯ" ಎಂಬ ಬರೆಹವಿದೆ.

	ಅರಿವವರಳವಲ್ಲ ಮರವೆಯೆಂಬುದು ಎಲ್ಲ	೯೩ನೆಯ	೩ ಪದ್ಯ
	ಪರಸತಿಗೆ ಪರಧನಕೆ ಪರನಿಂದ್ಯೆ	೯೩ನೆಯ	೩ ಪದ್ಯ
	ನನ್ನ ನಡೆಗೆ ನಾ ನಾಚೆ ಮೂಳ	೯೪ನೆಯ	೩ ಪದ್ಯ
೨೯.	ಆದಿಯಾಯಿತು ಮನ ಹೋಯಿತು	೯೪ನೆಯ	೩ ಪದ್ಯ
೩೦.	ಬಂದ ನಂದೀಶ್ವರಗೆ ವಂದನೆಯ ಮಾಡಿ	೯೪ನೆಯ	೩ ಪದ್ಯ
೩೧.	ಬಸವೇಶ್ವರನೆ ವಿಷ ಪರಿಹರನೆ	೯೫ನೆಯ	೩ ಪದ್ಯ
೩೨.	ಕಾಯದ ಕಳವಳವು ಜೀವ ದಯಾಸಾರಿ	೯೫ನೆಯ	೫ ಪದ್ಯ
೩೩.	[೧೦]ಕರುಣ ಮಾಡಯ್ಯ ಸ್ವಾಮಿ	೯೬ನೆಯ	೭ ಪದ್ಯ
೩೪.	ದಾನಿ ಅಹೋ ಸುಜ್ಞಾನಿ ಅಹೋ	೯೬ನೆಯ	೫ ಪದ್ಯ
೩೫.	ಬಿಡಲಾರೆನೋ ಬಸವಲಿಂಗ	೯೭ನೆಯ	೫ ಪದ್ಯ
೩೬.	ಅರಸು ಬಂದ ಅಲ್ಲಮರಾಯ ಚಾವಡಿಗೆ	೯೮ನೆಯ	೩ ಪದ್ಯ
೩೭.	ಅಪ್ಪ ಬಂದ ಅಮರ ಕಲ್ಯಾಣಕೆ	೯೮ನೆಯ	೭ ಪದ್ಯ
೩೮.	ಎಲೆ ವಾದಿ ಎಲೆ ಮರನ ನೋಡು	೯೯ನೆಯ	೩ ಪದ್ಯ
೩೯.	ಉಣ್ಣಗೊಡರಿನ್ನು ಕೇಳಿ	೯೯ನೆಯ	೩ ಪದ್ಯ
೪೦.	ಶಿವನ ನೆನೆವ ಚಿತ್ತ ಶುದ್ಧವಿಲ್ಲ	೧೦೦ನೆಯ	೩ ಪದ್ಯ
೪೧.	ಬಟ್ಟೆವಿಡಿದು ಬಂದೆ ಕೆಟ್ಟತನಗಳ ಮಾಡಿ	೧೦೦ನೆಯ	೫ ಪದ್ಯ
೪೨.	ಅಲ್ಲಮನಾಟ ಬಂದಾವೆ ಜಗದೊಳಗೆಲ್ಲ	೧೦೧ನೆಯ	೩ ಪದ್ಯ
೪೩.	ದೇವ ಬಂದನಮ್ಮ ಇವರ	೧೦೧ನೆಯ	೫ ಪದ್ಯ
೪೪.	ಕಾಯ ಜೀವರೆಲ್ಲ ದೇವರಾದಡೆ	೧೦೨ನೆಯ	೫ ಪದ್ಯ
೪೫.	ಅರಿವರಳವಲ್ಲ ಪರಮ ಗೋಹೇಶ್ವರನ	೧೦೩ನೆಯ	೬ ಪದ್ಯ
೪೬.	ನಡೆ ಗುರುವೆ ದಂಡು ಅಡವಿ	೧೦೪ನೆಯ	೫ ಪದ್ಯ
೪೭.	ಬಲ್ಲೆನಮ್ಮ ಭವದೂರ ಎಂಬುದನು	೧೦೫ನೆಯ	೩ ಪದ್ಯ
೪೮.	ಆರು ಹೂಡಿದರಿದನು ಧಾರುಣಿಯೊಳಗೆಲ್ಲ	೧೦೫ನೆಯ	೫ ಪದ್ಯ
೪೯.	[೧೧]ನಿಮ್ಮ ಪಾದವ ನೆನೆದು	೧೦೬ನೆಯ	೩ ಪದ್ಯ
೫೦.	ನಂದಿಕಾಯ ಕಳುಹಿದ ಡಂಗುರ	೧೦೬ನೆಯ	೩ ಪದ್ಯ
	[೧೨]ಧೂಪಾರತಿಯ ತಂದೆತ್ತಿರೋ	೧೦೭ನೆಯ	೩ ಪದ್ಯ

---

೧೦. ಇದರ ಮೇಲೆ "ಗದ್ದಿಗಿರಾಯನ ಪಾದವೇ ಗತಿ" ಎಂಬ ಬರೆಹವಿದೆ.
೧೧ ಇದರ ತಲೆಯ ಮೇಲೆ "ಉದೆದ ಡಂಗುರ" ಎಂಬ ಬರೆಹವಿದೆ.
೧೨. ಇದರ ತಲೆಯ ಮೇಲೆ "ಧೂಪಾರತಿಯ ನುಡಿ" ಎಂಬ ಬರೆಹವಿದೆ.

	[೧೩]ಮಂಗಳಾರತಿಯ ತಂದೆತ್ತಿರೇ	೧೧೭ನೆಯ	೫ ಪದ್ಯ
೫೧.	ನಾನು ನನ್ನ ತಿಳಿಯೆ	೧೦೮ನೆಯ	೩ ಪದ್ಯ
	ಭೇದವೇತಕೆ ಕುಲವು ಬೇಕಾದರೆ	೧೦೮ನೆಯ	೨೫ ಪದ್ಯ
೫೨.	ಪಾದವನೂರಿ ಪಾತಾಳದುದಕವ ತೆಗೆದೆ	೧೦೩ನೆಯ	೫ ಪದ್ಯ
	ಬ್ರಹ್ಮ ಪಂಚಾಳರ ವರ್ಮವನು	೧೧೪ನೆಯ	೨೦ ಪದ್ಯ
	ಸಂಭೋಗಿ ಹೊಲತಿಯೆಂಬಾಕೆಯ	೧೧೬ನೆಯ	೭ ಪದ್ಯ
೫೩.	ನಾಮವನಿಡಿ ಅಣ್ಣಗಳಿರೆ	೧೧೭ನೆಯ	೨೧ ಪದ್ಯ
	ಆದಿಪೂರ್ವ ಭಕ್ತಿಯೆಂಬ ಪುತ್ಥಳಿಗೆ		
	(ಅಂಕಿತ 'ಕೂಡಲಾದಿ ಚೆನ್ನಸಂಗಮದೇವಯ್ಯ')	೧೨೦ನೆಯ	೩೪ ವಚನ
	ಗುರುವಿನ ಗುರು ಪರಮಗುರು	೧೩೧ನೆಯ	೧೬ ವಚನ
	(ಅಂಕಿತ 'ಕೂಡಲಾದಿ ಚೆನ್ನಸಂಗಮದೇವಯ್ಯ')		
	ಕುಲದೆಂಜಲ ಕಲ್ಲ ಕಾರ್ಯಕಡಲೆ	೧೩೭ನೆಯ	೧೧ ವಚನ
	(ಅಂಕಿತ 'ಕೂಡಲಾದಿ ಚೆನ್ನಸಂಗಮದೇವಯ್ಯ')		
	[೧೪]ಗುರುವೇ ಕೇಳಯ್ಯ ಪಿಂಡಾಂಡದ	೧೪೦ನೆಯ	೧೨೪ ಪದ್ಯ
	ಗುರುವಿನ ಗುರುವು ಪರಮ ಗುರು		
	(ಅಂಕಿತ 'ಕೂಡಲಾದಿ ಚೆನ್ನಸಂಗಮದೇವಯ್ಯ')	೧೫೬ನೆಯ	
	[೧೬]ವಚನ[೧೫]		
	ಕುಲದೆಂಜಲು ಕಲ್ಲಕಾಯಕಡಲೆ	೧೬೧ನೆಯ	೧೧ ವಚನ
	(ಅಂಕಿತ 'ಕೂಡಲಾದಿ ಚೆನ್ನಸಂಗಮದೇವಯ್ಯ')		
೫೪.	ಪಾಷಾಣವ ಬಿಡು ಲೇಸುಳ್ಳ ಲಿಂಗವಿಡಿಯೆ	೧೬೩ನೆಯ	೧೨ ಪದ್ಯ
೫೫.	[೧೬]ಅಳುವ ಕಳೆಯ ಬಂದಾರೆ	೧೬೫ನೆಯ	೨೬ ಪದ್ಯ
	ರಣಮಾಲೆಯನಾಡುತ ಬಂದೆ	೧೬೮ನೆಯ	೨೫ ಪದ್ಯ
	ಪ್ರಭುಲೀಲೆಯ ಸೂಚಿತ ಕೇಳಿ	೧೭೦ನೆಯ	೩೩ ಪದ್ಯ
೫೬.	ಕಾಯ ಅರಿಕಾಯ ಗುರುಕಾಯ	೧೭೩ನೆಯ	೨೫ ಪದ್ಯ
೫೭.	ದಾರು ಬಲ್ಲರು ಹೇಳಿರೈ	೧೭೫ನೆಯ	೯ ಪದ್ಯ

---

೧೩. ಇದರ ತಲೆಯನ ಮೇಲೆ "ಮಂಗಳಾರತಿಯ ನುಡಿ" ಎಂಬ ಬರೆಹವಿದೆ.
೧೪. ಇದರ ತಲೆಯ ಮೇಲೆ "ಬಸವಪುರಾಣದ ಬರೆವದಕ್ಕೆ ಶುಭಮಸ್ತು" ಎಂಬ ಬರೆಹವಿದೆ.
೧೫. ೧೪ನೆಯ ವಚನಕ್ಕೆ 'ಕೂಡಲಸಂಗಮದೇವ' ಮುದ್ರಿಕೆಯಿದೆ.
೧೬. ಇದರ ತಲೆಯ ಮೇಲೆ "ವೀರಪ್ಪಯ್ಯನ ಪಾದವೇ ಗತಿ" ಎಂಬ ಬರೆಹವಿದೆ.

೫೮. ಪ್ರಥಕೆ ತೊಡರುವ ಪರಿಗಳಿಂತ ೧೭೭ನೆಯ ೭ ಪದ್ಯ

೫೯. ದೇವ ಮೊರೆಗೇಳೊ ೧೭೯ನೆಯ ೭ ಪದ್ಯ

ಭಿಕ್ಷಾ ಅಷ್ಟು ಅಷ್ಟಕೆ ಭಿಕ್ಷಾ ೧೮೧ನೆಯ ೨೬ ಪದ್ಯ

೬೦. ಕೇಳಿನ್ನೊಮ್ಮೆ ಬೊಮ್ಮನ ೧೮೪ನೆಯ ೫ ಪದ್ಯ

೬೧. ಬಂದಿತಿನ್ನೊಮ್ಮೆ ದಾಳಿ ೧೮೫ನೆಯ ೫ ಪದ್ಯ

೬೨. ಅಲ್ಲಮನಾಟವು ಬಂದಿತು ಜಗದೊಳು ೧೮೬ನೆಯ ೩ ಪದ್ಯ

[೧೭]ಸಿದ್ಧ ಸಿದ್ಧ ೧೮೭ನೆಯ ಅಪೂರ್ಣ ವಚನ

ಈ ಹಸ್ತಪ್ರತಿಯಲ್ಲಿಯ ವಚನಗಳನ್ನೂ, ಪ್ರಕಟಿತ ಸ್ವರವಚಗಳನ್ನೂ ಕೈಬಿಟ್ಟು ಉಳಿದ ೬೨ ಅಪ್ರಕಟಿತ ಸ್ವರವಚನಗಳನ್ನು ಪರಿಷ್ಕರಿಸಿ ಇಲ್ಲಿ ಪ್ರಕಟಿಸುತ್ತಿದ್ದೇವೆ. ಹೀಗಾಗಿ ಎರಡೂ ಭಾಗಗಳು ಸೇರಿ ೧೨೫ ಸ್ವರ ವಚನಗಳು (೬೩ ಮತ್ತು ೬೨) ಪ್ರಥಮ ಸಲ ಬೆಳಕಿಗೆ ಬರುತ್ತಿವೆ.

ಈ ಎರಡೂ ಭಾಗಗಳಲ್ಲಿರುವ ಸ್ವರವಚನಗಳು ಇತಿಹಾಸದುದ್ದಕ್ಕೂ ಲಿಖಿತದಿಂದ ಮೌಖಿಕಕ್ಕೆ, ಮೌಖಿಕದಿಂದ ಲಿಖಿತಕ್ಕೆ ವರ್ಗಾವಣೆಯಾಗುತ್ತ ಬಂದ ಕಾರಣ, ಲೇಖನಪಾಠ, ಪಠನಪಾಠಗಳು ವಿಪರೀತ ಸಂಖ್ಯೆಯಲ್ಲಿ ಸೃಷ್ಟಿಯಾಗಿವೆ. ಎರಡನೆಯದಾಗಿ ಈ ಪ್ರತಿಗಳು ಹುಟ್ಟಿದ್ದು ಸಾಮಾನ್ಯರ ನಡುವೆ, ಬದುಕಿದುದೂ ಸಾಮಾನ್ಯರ ನಡುವೆ. ಹೀಗಾಗಿ ೧೮-೧೯ ನೆಯ ಶತಮಾನದ ಈ ಸಾಮಾನ್ಯರ ಅಶುದ್ಧ ಬರವಣಿಗೆಯಿಂದ ಶುದ್ಧರೂಪ ಗ್ರಹಿಸುವುದೇ ದೊಡ್ಡ ಸಾಹಸ. ಇಷ್ಟು ಸಾಲದೆಂಬಂತೆ ನಮಗೆ ದೊರೆತವು ಒಂದೊಂದೇ ಪ್ರತಿ. ಇಂಥ ಸಂದರ್ಭದಲ್ಲಿ ಸಂಪಾದಕನ ಕಷ್ಟವೇನೆಂಬುದು ವಿದ್ವಾಂಸರಿಗೆ ಗೊತ್ತು. ಹೀಗಿದ್ದೂ ತಕ್ಕಮಟ್ಟಿಗೆ ಪರಿಷ್ಕರಿಸಲಾಗಿದ್ದು, ಇನ್ನೂ ಅಪಪಾಠಗಳು ಉಳಿದುಕೊಂಡಿವೆಯೆಂಬ ಅರಿವು ನಮಗಿದೆ.

ಈ ಹಾಡುಗಳು ಪ್ರತಿಪಾದಿಸುತ್ತಿರುವುದು ತುಂಬ ಹಳೆಯ ನಾಥ ಪಂಥವಾಗಿದ್ದರೂ, ೧೨ನೆಯ ಶತಮಾನದ ಶರಣರ ಪ್ರಭಾವಕ್ಕೆ ಒಳಗಾಗಿ, ಅತ್ತ ಶುದ್ಧ ನಾಥವೂ ಅಲ್ಲ, ಇತ್ತ ಶುದ್ಧ ಲಿಂಗಾಯತವೂ ಅಲ್ಲವೆಂಬ ರೀತಿಯಲ್ಲಿ ಇದು ಆಕಾರ ಪಡೆದಿದೆ. "ಅಂದು ಕಲ್ಯಾಣವು ಹರಿಯಿತೆನುತಲಿ. ಈ ಅಮರ ಕಲ್ಯಾಣವ ನೆರಹ ಬಂದೆ" ಎಂಬ ಸಾಲು ಆ ಕಲ್ಯಾಣದ ಪರಂಪರೆಯನ್ನೇ ಈ ಕಲ್ಯಾಣ ಮುಂದುವರಿಸಿದೆಯೆಂಬುದನ್ನು ಸೂಚಿಸುತ್ತದೆ. ಈ ಕಲ್ಯಾಣ ಪರಂಪರೆಯವರು ಸೃಷ್ಟಿಸಿದ ಈ ವಚನಗಳಲ್ಲಿ ತತ್ವ, ನೀತಿ, ಕಾಲಜ್ಞಾನ ವಿಷಯಗಳ ಜೊತೆ ಇವರಿಗೆ ಸಂಬಂಧಪಟ್ಟ ಚಾರಿತ್ರಿಕ ಅಂಶಗಳೂ ಕಂಡುಬರುತ್ತಿದ್ದು, ಅವು ಹೀಗಿವೆ:

ಕನ್ನಡ ಅಧ್ಯಯನಪೀಠ ಹಸ್ತಪ್ರತಿಯ ಸ್ವರವಚನಗಳು:

ಪೂರ್ವಶೈವ, ಶುದ್ಧಶೈವ, ಮಾರ್ಗಶೈವ, ವೀರಶೈವವೆಂದು ಶೈವದಲ್ಲಿ ೪ ಪ್ರಕಾರಗಳಿವೆ (ಹಾಡು ೨೧). ಐದು ಮೂಲಸ್ಥಾನಗಳಲ್ಲಿ ಕಲ್ಲೇಶ ಗ್ರಾಮ, ರಾಮಲಿಂಗಗಳೂ ಪರಿಗಣಿತವಾಗಿವೆ

---

೧೭. ಇದರ ತಲೆಯ ಮೇಲೆ "ಲಿಂಗವಿಶ್ವಾಸದ ವಚನ"ವೆಂಬ ಬರೆಹವಿದೆ.

(೨೧)ಗುಂಡರಾಯ, ಗದ್ದಿಗೆರಾಯ, ಶಿವಯೋಗಿರಾಯರು ವಿಭೂತಿ ಧರಿಸಿದವರಲ್ಲಿ ಪ್ರಸಿದ್ಧರು (೨೨) ಮಂಡಗೆಯ ಮಾದಿರಾಜ ಮಾದಲಾಂಬಿಕೆಯ ಮಗ ಬಸವಣ್ಣ (೨೩, ೨೫) ಕಲ್ಯಾಣ ಬಸವಣ್ಣನು ಮುಂದೆ ನಾಗಾವಿಯಲ್ಲಿ ಹುಟ್ಟಿ ಧರ್ಮಕಲ್ಯಾಣ ಸ್ಥಾಪಿಸಿದ (೨೩, ೨೫)ಬಸವೇಶನು ಅಕ್ಕ ನಾಗಲೆಗೆ ನಾಗಾವಿಯನ್ನು ಉಂಬಳಿಯಾಗಿ ನೀಡಿದನು (೨೩).[೧] ತಿಪ್ಪಣ್ಣಯ್ಯನ ವಿನಂತಿಯ ಮೇರೆಗೆ ಗುಂಡಬಸವನ ಪತ್ನಿ ಜಕ್ಕಾಂಬೆ ಅಲ್ಲಮರಾಯನಿಗೆ ಜನ್ಮ ನೀಡಿದಳು. ಅಲ್ಲಮರಾಯ ವಿಜಯನಗರದ ರಾಯನಿಂದ ಆನೆಯ ಮೇಲೆ ಮೆರವಣಿಗೆ ಗೌರವ ಪಡೆದನು. ಲೋಕವು ವಾಕಿಗೆ ಮಣಿಯದೆಂದು ಈತನು ಶರಣರ ಸೈನ್ಯಕಟ್ಟಿ 'ವೀರವಸಂತ'ನೆಂದು ಪ್ರಸಿದ್ಧಿ ಪಡೆದನು (೩೪). ಈ ತಿಪ್ಪಣ್ಣಯ್ಯನ ಉಲ್ಲೇಖ ಬೇರೆ ಹಾಡುಗಳಲ್ಲಿಯೂ ಇದೆ. (೮೪, ೫೪). ಕಲ್ಯಾಣದ ಬಸವನೇ ಮರುಜನ್ಮದಲ್ಲಿ ನಾಗಮ್ಮನ ಹೆಸರಿನ ನಾಗಾವಿಯಲ್ಲಿ ನಿಂತು, ತುರುಕಾಣ್ಯ, ತೆಲುಗಾಣ್ಯ, ಒಡ್ಡಿದೇಶಗಳಲ್ಲಿ ಕೀರ್ತಿಶಾಲಿಯಾದನು (೩೫). ಸಂಗಮೇಶನು ಗುಂಡಬಸವೇಶ್ವರನ ಸ್ವಾಮಿಯಾಗಿದ್ದಾನೆ (೩೯). [ಖೇ]ಡದ ಸಾತಿಮಯ್ಯ, ಕೊಪ್ಪಳದ ರಾಮಯ್ಯ(೪೫)ರ ಹೆಸರೂ ಇಲ್ಲಿವೆ. ಇಲ್ಲಿಯ ಖೇಡದ ಸಾತಿಮಯ್ಯನು ಇಂಡಿ ತಾಲೂಕಿನ (ಖೇಡ)ಭೂಯಾರ ಶಾಸನೋಕ್ತ (SIIXX-138,1162)ನೆಲುವಿಗೆಯ ಸಾತೈಯ್ಯನಾಗಿರಬಹುದು. ಜಕ್ಕಮ್ಮನ ಮಂಗಳಾರತಿಯ ಹಾಡು (೫೬) ಗುಂಡಬಸವಯ್ಯನ ಹೆಂಡತಿಯನ್ನು ಕುರಿತದ್ದಾಗಿದೆ. ಇವಳ ಹೆಸರಿನ ಗುಡಿ ಸಿಂದಗಿ ತಾಲೂಕಿನ ಕಕ್ಕಳಮೇಲಿಯಲ್ಲಿದೆ. ಈ ಹಾಡು ಶಹಪುರ ಹಸ್ತಪ್ರತಿಯಲ್ಲಿಯೂ ಇದ್ದು, ಇದರ ತಲೆಯ ಮೇಲೆ 'ನವಲಗುಂದ ಪುಣ್ಯಸ್ಥಲದ ನುಡಿಗಳು' ಎಂದು ಬರೆಯಲಾಗಿದೆ. ಇದು ಏನನ್ನು ಸೂಚಿಸುವುದೆಂಬುದು ಸ್ಪಷ್ಟವಾಗುವುದಿಲ್ಲ. ಹೀಗೆ ಈ ವರೆಗೆ ತಿಳಿದು ಬರದಿರುವ ಅಪ್ರಸಿದ್ಧ ವ್ಯಕ್ತಿಗಳನ್ನಲ್ಲದೆ, ಬಸವಣ್ಣ, ಅಲ್ಲಮ, ಚನ್ನಬಸವಣ್ಣ, ಬಿಜ್ಜಳ ಮೊದಲಾದ ಪ್ರಸಿದ್ಧರನ್ನು ಇಲ್ಲಿ ಪದೇ ಪದೇ ಉಲ್ಲೇಖಿಸಲಾಗಿದೆ. ಶರಣರು ೭೭೦ ವರ್ಷಗಳ ಬಳಿಕ ಹುಟ್ಟಿ ಬರುವರೆಂಬ ಕಾಲಜ್ಞಾನ ಹಲವು ಸಲ ಕಂಡುಬರುತ್ತದೆ. ಬಸವಣ್ಣನ ಜನನ, ಕಲ್ಯಾಣದ ಜೀವನ, ಸಂಗಮದ ಐಕ್ಯಗಳೂ ಇಲ್ಲಿ ಎಡೆಪಡೆದಿವೆ.

ಶಹಾಪುರ ಹಸ್ತಪ್ರತಿಯ ಸ್ವರ ವಚನಗಳು:

'ಅಂದು ಕಲ್ಯಾಣವು ಹರಿಯಿತೆನುತಲಿ ಈ ಅಮರಕಲ್ಯಾಣವ ನೆರಹ ಬಂದೆ' (೧೬) ಎಂಬುದು ಆ ಕಲ್ಯಾಣದ ಮುಂದುವರಿಕೆಯೇ ಈ ಅಮರಕಲ್ಯಾಣ ಸಂಪ್ರದಾಯವೆಂದು ಸ್ಪಷ್ಟಪಡಿಸುತ್ತದೆ. 'ಕೂಡಲ ಸಂಗಯ್ಯ' (೧೬) ಎಂಬ ಅಂಕಿತ, 'ಕಪ್ಪಡಿ' ಎಂಬ ಪ್ರಯೋಗ (೧೬) ಗಳು ಇಂದಿನ ಪ್ರಸಿದ್ಧ ಕೂಡಲಸಂಗಮವು ಮೂಲತಃ ನಾಥಕೇಂದ್ರವೆಂಬುದನ್ನು ಸೂಚಿಸುತ್ತವೆ. ಬುಡಪಟ್ಟ ಪ್ರಯೋಗ(೧೬)ವು ಒಂದು ಕೌಟುಂಬಿಕ ಶಾಖೆಯನ್ನು ಸೂಚಿಸುತ್ತಿದ್ದು, ಇಂದಿಗೂ ಈ ಸಂಪ್ರದಾಯದ ಸಾಲೋಟಗಿ ಶಿವಯೋಗಿಯ ಅರ್ಚಕರನ್ನು 'ಬುಡಪಟ್ಟದವರು' ಎಂದೇ ಕರೆಯಲಾಗುತ್ತದೆ. ಈ ಸಂಪ್ರದಾಯದವರಿಗೆ 'ಬೋಳರು' ಎಂಬ ಪರ್ಯಾಯ ನಾಮವಿದ್ದು, ಇಲ್ಲಿ ಬೋಳರ ಮಠ (೨೧), ಬೋಳಬಸವಯ್ಯ (೩೪) ಪ್ರಯೋಗಗಳು ಕಾಣಿಸಿಕೊಂಡಿವೆ. ಅಮರಪುರ

---

೧. ಈ ಸಂಗತಿ ಐತಿಹಾಸಿಕ ಸತ್ಯವಲ್ಲ.

ನಂದೇಶ (೩೨) ಅಮರ ಕಲ್ಯಾಣ ಬಸವಯ್ಯ (೬೨) ಎಂಬಿವು ಕೊಡೇಕಲ್ಲ ಬಸವಣ್ಣನನ್ನು ಸೂಚಿಸುತ್ತಿದ್ದು ಇಲ್ಲಿಯ ಅಮರಪುರವು ಈತನ ಗುರು ಸಂಗಮನಾಥನ ಡಿಗ್ಗಿ (ಅಮರಕಲ್ಯಾಣ) ಯನ್ನು ನೆನಪಿಸುತ್ತದೆ. ಈ ಡಿಗ್ಗಿ ನೆರೆಯ 'ಹಳೆಯ ಸಗರ' ಗ್ರಾಮದ ಉಲ್ಲೇಖ (೪೧)ವೂ ಇಲ್ಲಿದೆ. ಪ್ರಸ್ತುತ ಡಿಗ್ಗಿಯ ಸಂಗನಿಗೆ 'ಸಗರ ಸಂಗ'ನೆಂದೂ (೬೧) ಇಲ್ಲಿ ಕರೆಯಲಾಗಿದೆ. ರೇವಣಸಿದ್ಧ, ಮರುಳಸಿದ್ಧ, ಏಕೋರಾಮಾರಾಧ್ಯ, (ಪಂಡಿತ) ಆರಾಧ್ಯ ಎಂಬ ಆಚಾರ್ಯರ ಹೆಸರೂ ಇಲ್ಲಿ (೫೩, ೫೭) ಕಾಣಿಸಿಕೊಂಡಿರುವುದರಿಂದ, ಈ ಹೊತ್ತಿಗೆ ಈ ಕಪೋಲಕಲ್ಪನೆಯನ್ನು ಜನ ನಂಬಿದ್ದರೆನಿಸುತ್ತದೆ. ಗುರು ಬಸವಣ್ಣ, ಲಿಂಗ ಸಂಗಮೇಶ್ವರ, ಚರಜಂಗಮ ಪ್ರಭುಲಿಂಗ (೫೫) ಎಂಬ ಮಾತೂ ಇಲ್ಲಿ ಗಮನಾರ್ಹವಾಗಿದೆ.

ಇಲ್ಲಿಯ 'ಕಡೆಕಡೆಯಾಟಕೆ ಬಂದ' (೯) ಎಂಬ ಹಾಡಿನ ತಲೆಯ ಮೇಲೆ 'ಧರ್ಮಕಲ್ಯಾಣದ ಗುರು ಗುಂಡಬಸಯ್ಯನ ಪಾದವೇ ಗತಿ' ಎಂದೂ 'ಕರುಣ ಮಾಡಯ್ಯ ಸ್ವಾಮಿ' (೩೩) ಎಂಬ ಹಾಡಿನ ತಲೆಯ ಮೇಲೆ 'ಗದ್ದಿಗಿರಾಯನ ಪಾದವೇ ಗತಿ' ಎಂದೂ ಲಿಪಿಕಾರ ಬರೆದಿದ್ದಾನೆ. ಬೇರೆಡೆ ಪ್ರಕಟವಾಗಿವೆಯೆಂದು ಕೈಬಿಟ್ಟಿರುವ ಇಲ್ಲಿಯ 'ಅಳುವ ಕಳೆಯ ಬಂದಾರೆ' ಹಾಡಿನ ತಲೆಯ ಮೇಲೆ 'ವೀರಪ್ಪಯ್ಯನ ಪಾದವೇ ಗತಿ' ಎಂಬ, ಜಕ್ಕವ್ವೆಯ ಮಂಗಳಾರತಿ ಹಾಡಿನ ತಲೆಯ ಮೇಲೆ 'ನವಲಗುಂದ ಪುಣ್ಯಸ್ಥಳದ ನುಡಿಗಳು' ಎಂಬ ಬರೆವಣಿಗೆಗಳಿವೆ.

ಮೊದಲನೆ ಭಾಗದ ಎಲ್ಲ ಹಾಡುಗಳಿಗೆ ಸಾಮಾನ್ಯವಾಗಿ 'ರಾಗ' ಸೂಚಿಸಲಾಗಿದೆ. ಇದು ಕವಿಯ ಸಂಗೀತಜ್ಞಾನಕ್ಕೆ ನಿದರ್ಶನವೆನಿಸಿದೆ. ಇಲ್ಲಿ ಹಾಡುಗಳಿಗೆ ಬಳಸಿರುವ 'ತೋಹೆ' ಎಂಬ ಪರ್ಯಾಯ ಪದ ಕನ್ನಡದ ಯಾವ ನಿಘಂಟುವಿನಲ್ಲಿಯೂ ಕಾವ್ಯದಲ್ಲಿಯೂ ಕಂಡುಬರದ ಅಪರೂಪದ ಪ್ರಯೋಗವಾಗಿದೆ. ಇದರ ನಿಷ್ಪತ್ತಿ ಚಿಂತನಾರ್ಹವಾಗಿದೆ.

ಹೀಗೆ ಈ ಸಂಪುಟ ಅನೇಕ ಹೊಸ ವಿಷಯಗಳನ್ನು ತೆರೆದು ತೋರಿಸುವ ಮೂಲಕ ಈ ಸಂಪ್ರದಾಯದ ಬಗೆಗಿನ ನಮ್ಮ ತಿಳುವಳಿಕೆಯನ್ನು ವಿಸ್ತರಿಸುತ್ತದೆ.

ಕೃತಜ್ಞತೆ :

ಈ ಕೃತಿ ಸಂಪಾದನೆಗೆ ಹಸ್ತಪ್ರತಿ ಪೂರೈಸಿದ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಿಗೆ, ಡಾ. ಬಿ. ಆರ್. ಹಿರೇಮಠ, ಶ್ರೀ ಗದ್ದಿಗಿರಾಯ ಒಡೆಯರ, ಡಾ. ಬಸವಲಿಂಗ ಸೊಪ್ಪಿಮಠ, ಮುದ್ರಣ ಕಾರ್ಯದಲ್ಲಿ ನೆರವಾದ ಡಾ. ಹನುಮಂತ ಮೇಲಿನಮನಿ ಅವರಿಗೆ ವಂದನೆಗಳು. ಪ್ರಕಟನೆಗೆ ಅವಕಾಶ ಮಾಡಿಕೊಟ್ಟ ರಾಜ್ಯ ಪತ್ರಾಗಾರ ಇಲಾಖೆಗೆ ಕೃತಜ್ಞತೆಗಳು.

❖❖

*

ಪರಿವಿಡಿ

ಭಾಗ : ಒಂದು

ಕನ್ನಡ ಅಧ್ಯಯನಪೀಠ ಹಸ್ತಪ್ರತಿಯ ಸ್ವರವಚನಗಳು

ಭಾಗ : ಒಂದು

❖

ಕನ್ನಡ ಅಧ್ಯಯನಪೀಠ ಹಸ್ತಪ್ರತಿಯ ಸ್ವರವಚನಗಳು

೧

ರಾಗ : ಭೂಪಾಳಿ

ದೇವರ ದೇವ ದೇವ ದೇವರ ಜೀವ
ದೇವ ದೇವರ ಕಾವ ದೇವ ದೇವರ ಭಾವ
ದೇವ ದೇವರ ನೆನೆವ ದೇವ ದೇವರ ಮನವ ದೇವ ದೇವರ
ಘನವನೀವ ದೇವಾ ॥ಪಲ್ಲ॥

ಕರುಣಾಕರನೆ ಕರ್ತನೆ ಕಲ್ಪವೃಕ್ಷನೆ
ಶರಣಾಗತ ರಕ್ಷನೆ ಭ[ಕ್ತ್ಯಾ]ಪೇಕ್ಷನೆ
ಉರುತರದ ಪ್ರಣಮವೋಂಕಾರ ಝೇಂಕಾರನೇ ಪರಮನೇ ಪಂಚಾಕ್ಷರಿ
ಹರಿವಿರಿಂಚಾದಿ ದಿಕ್ಪಾಲ ನವಗ್ರಹ ಗಣೇ
ಶ್ವರರು ವಿದ್ಯಾಧರರು ಕಿನ್ನರರು ಕಿಂಪುರುಷ
ಗರುಡ ಗಂಧರ್ವ ಚಂಡಂ ಭೃಂಗಿಮುನಿ ಕಿರೀಟಾಭರಣನೆ
ಚಂದ್ರಜೂಟ ಪಾಹಿಮಾಂ ದೇವಾ ॥೧॥

ಈಶನಘನಾಶ ಸರ್ವೇಶ ಫಣಿಭೂಷ ಕೈ
ಲಾಸ ನಿವಾಸ ಸಂತೋಷ ಪರಿತೋಷದಿ ವಿ
ಶ್ವೇಶ ಭಕ್ತೇಶ ಮಾಹೇಶ ಪ್ರಸಾದೇಶ ಶಾಶ್ವತಂ ಪ್ರಾಣಲಿಂಗೇಶ
ಸಾಸ ಶರಣೇಶ ಐಕ್ಯ ಸಮುಕ್ತೇಶನೆ
ಪಾಶ ಭವನಾಶ ಆತ್ಮೇಶ ಜೀವೇಶ ರ
ಕ್ಷೇಶ ಕರುಣೇಶ ಶರಣಾಗು ಶರಣಾಗು ಸಾಸಿರೇಶೋಪೇಶ್ವರನೆ
ಪಾಹಿಮಾಂ ದೇವಾ ॥೨॥

೧, + ಶ್ರೀ ಗುರವೇ ಗತಿ॥ ಶ್ರೀ ಗುಂಡಬಸವಯ್ಯಗಳ ಪಾದವೇ ಗತಿ ॥ ನೀರ ಖರ.....ವೇ ಗತಿ (ಮೂ)

ಅಜ್ಞಾನರೆಂದೆಂಬ ಅಂಧಕಾರಂಗರಿಗೆ
ಸುಜ್ಞಾನರೆಂದೆಂಬ ಜ್ಯೋತಿ ಬೆಳಗಿಹರಿಗೆ
ಸುಜ್ಞಾನಪ್ರಭೆಯುಳ್ಳ ಸೂರ್ಯಪ್ರಕಾಶನೆ ಸ್ವರ್ಗಪತಿ ಶೂಲಪಾಣಿ
ಭರ್ಗನೇಕೋರುದ್ರನದ್ವಿತಿಯನಪ್ರತಿಮ
ಉಗ್ರಂ ಉಮಾಪತಿ ಗಜಾಸುರಾಜಿನ ಪೊದ್ದ
ವ್ಯಾಘ್ರಾಸುರದೊವಲುಡೆಯ ವೇದಕ್ಕಗೋಚರನೆ ನಿರ್ಗುಣನೆ
ನಿತ್ಯತೃಪ್ತ ಪಾಹಿಮಾಂ ದೇವಾ ॥೩॥

ತೋಹೆ – ೧, ಪದ–೩

■

೨

ರಾಗ : ಭೂಪಾಳಿ

ಪೂಜೆ ಮಾಡಿದು ಪೂರ್ವಶೈವ ಪೃಥ್ವ್ಯಾಂಬರವ ಸ
ಹಜವಳಿದವು ನಾಲ್ಕುಯುಗದ ಲಿಂಗ ॥ಪಲ್ಲ॥

ಕೃತಾಯುಗದಲಿ ಚಿನ್ನದ ಲಿಂಗಪೂಜೆ
ತ್ರೇತಾಯುಗದಲಿ ಬೆಳ್ಳಿಯ ಲಿಂಗ[ವ]
ದ್ವಿತೀಯ ದ್ವಾಪಾರದಲಿ ತಾಮ್ರಲಿಂಗಾರ್ಚನೆಯು
ಇಂಥ ಕದನ ಕಲಿಯುಗದಲಿ ಕಲ್ಲಲಿಂಗ ॥೧॥

ಚಿನ್ನದ ಲಿಂಗಗಳ ಭಿನ್ನ ಮಾಡಿದೆ ನಾನು
ಇನ್ನು ಬೆಳ್ಳಿಯ ಲಿಂಗಗಳನಳಿದೆನು
ಉನ್ನತದ ತಾಮ್ರಲಿಂಗವ ಮುರಿದೆ ಶಿಲೆಯ ಲಿಂಗಕೆ
ಚಿನ್ಮಯನ ಹೆಸರಿರಲು ಒಡೆದೆನಲ್ಲ ॥೨॥

ಯುಗಯುಗದ ಲಿಂಗಗಳನೊಡೆದ ಖೂನ್ಯನು ನಾನು
ಜಗದೊಳಗೆ ಮೆರೆವೆ ಶಿವಭಕ್ತನೆಂದು
ನಿಗಮಗೋಚರನೊಪ್ಪ ನಡೆಹೀನ ಭಕ್ತಿಗಳು
ಮುಗಿದು ಮುನ್ನಿನ ಪೂರ್ವಶೈವವೆ ನಿಜವು ॥೩॥

ನಂದಿಯನೊಡೆದೆ ರಂಗಮಂಟಪವನೊಡೆದೆ
ಚೆಂದದ ಗಣಪತಿಯನೊಡೆದೆನಲ್ಲ
ಬಂದು ಭೈರವನೊಡೆದೆನು ದ್ರವ್ಯದಾಸೆಯಲಿ
ಮುಂದೆಲ್ಲಿ ಶಿವಪೂಜೆ ಮುಗಿಯಿತೆನಗೆ ॥೪॥

ಲಿಂಗವನು ಒಡೆದೆ ಭಂಗಡಿಯ ಪಾತಕ ನಾನು
ಲಿಂಗ ಜಲಹರಿಗಳನು ಕಿತ್ತೆನಲ್ಲ
ಶೃಂಗಾರವಪ್ಪ ಶಿಖರದ ಕಳಸಗಳನೊಡೆದೆ
ಲಿಂಗದ್ರೋಹದಿ ಲಿಂಗ ಹಿಂಗಿತಲ್ಲ ॥೫॥

ಒಡೆದೆನೀ ಪರಿ ಲಿಂಗಗಳನು ಪಾತಕ ನಾನು
ನಡೆದೆ ಒಡೆದವರೊಳಗೆ ಸಲೆ ಸಂದು ನಾ
ಕೊಡುವೆ ಕೊಂಬೆನು ಕೂಡಿಯುಂಬೆ ಸಂಭಾಷಣೆಯು
ಗುಡಿಯ ಖೂನ್ಯ[ನು] ನಾನು ಭಕ್ತನಲ್ಲ ॥೬॥

ಆದಿಯ ಲಿಂಗವಾಕಾಶವೆಂದೆಂದು ಶ್ರುತಿ
ವೇದಿಸಲು ಭೂಮಿ ಲಿಂಗದ ಪೀಠಿಕೆ
ಈ ದೈವದರ್ಚನೆಯ ಮಾಡೆಂದು ಗುರು ಬಂದ
ಓದು ತರ್ಕವು ಬೇಗ ಒರೆದು ನೋಡಿ ॥೭॥

ತೋಹೆ – ೨, ಪದ – ೧೦

■

೩

ರಾಗ : ಭೂಪಾಳಿ

ಲಿಂಗದ ಗುಣದ ಅಜ್ಞಾನಿ ನಾನು
ಲಿಂಗವಂತನೆನಿಸಿಕೊಂಬೆ ಪಾತಕನು ನನ್ನ ಅಂಗದ ॥ಪಲ್ಲ॥

ಕಂಗಳು ನಾಶಿಕ ಮುಂಗುರುಳಿನ ಚೆಲ್ವ
ಭೃಂಗಕುಂತಳೆಯರ ನಾ ನೋಡಿ
ಭಂಗಿತನಾಗಿ ಭ್ರಮಿತನಾಗಿ ಬಯಸಿದೆ
ಲಿಂಗಭಕ್ತನೆಂತಹೆನು ಪಾತಕನು ನನ್ನ ಅಂಗದ ॥೧॥

ಉದಮದ ಜವ್ವನದಧಿಕ ಚೆಲ್ವನೆ ಕಂಡು
ಮದನತಾಪದಿ ಬೆಂದು ಮರುಗುವೆನು
ಕುದಿದು ಕುದಿದು ನಿಲ್ಲದೆ ಹೋಗಿ ಕೂಗುವೆ
ಮದನವೈರಿಯ ಭಕ್ತನೆಂತು ಪಾತಕನು ನನ್ನ ಅಂಗದ ॥೨॥

ಬಡನಡು ಬಲುಕುಚ ಕಡೆಗಣ್ಣ ನೋಟದ
ಮಡದಿಯರನೆ ನೋಡಿ ಮನಸೋತು
ಮಿಡಮಿಡನೆ ಮಿಡಕುವೆನು ಕಾಮದಲಿ
ಮೃಡಭಕ್ತನೆಂತಹೆನು ಪಾತಕನು ನನ್ನ ಅಂಗದ ॥೩॥

ಕಿರುದೊಡೆ ಕಣಕಾಲು ಹರಡು ಪಾದದ ಚೆಲ್ವ
ಬೆರಳನು ನೋಡಿ ಬೆರಗಹೆನು
ಮರುಳಾಗಿ ಮತಿಗೆಟ್ಟು ಮನಹೀನ ಕೂಡಿದೆ
ಹರಭಕ್ತನೆಂತಹೆನು ಪಾತಕನು ನನ್ನ ಅಂಗದ ॥೪॥

ಹದಿನೆಂಟು ಲಕ್ಷಣ ಹಸನಾಗಿ ಅಳವಟ್ಟು
ಚದುರ ನುಡಿಯು ಚೆನ್ನಂಗದಲಿ
ಮದನಾಸ್ತ್ರದಂತಿದ್ದ ಮಡದಿಗೆ ಮನಸೋತು
ಗದಗದುಸುರಿದೆನಲಾ ಗುಂಡಗೆ ಸಲ್ಲೆ ॥೫॥

ತೋಹೆ – ೩, ಪದ – ೧೫

■

೪

ರಾಗ : ಭೂಪಾಳಿ

ಸಾರಿ ದೂರಿದರರಿಯೆ ಪಾತಕ ನಾನು
ಮಾರಿ ಬಂದು ಮುರಿಯಲು ಅಳಿವೆನಲ್ಲ ॥ಪಲ್ಲ॥

ಅನ್ನ ಪ್ರಾಯ ಅರ್ಥ ಮದದ ಸೊಕ್ಕಿನಿಂದ
ಕಣ್ದೆರೆಯ[ದಿಹ] ಕರ್ಮಿ ನಾನು
ಹೆಣ್ಣು ಹೊನ್ನಿಗೆ ಹರಿವೆ ವ್ಯರ್ಥನಾಗಿ
ಮಣ್ಣು ಹೊಯ್ದುಕೊಂಡು ಮಡಿವೆನಲ್ಲ ॥೧॥

ಮುಂದುವರಿವೆ ಪಾಪಕೆ ಹೇಸೆನು ನಾನಾ
ನಂದದಿಂದಲಿ ಕೊಬ್ಬಿ ಅಳುಕದಿಹೆ
ಮಂದಮತಿಯು ಪಾಪಿ ನಾ ಮಾಡಿದುದಿಲ್ಲ
ಇಂದುಧರನ ಪೂಜೆಯನಕಟಾ ॥೨॥

ತನುಧನವಿದನು ನಚ್ಚಿ ಗರ್ವಿಸಿ ಸೊಕ್ಕಿ
ಘನಹಿರಿಯರ ಹಿಡುಗಡಣೆಗೊಳ್ಳೆ
ದಿನಬಲದೆನ್ನ ಸಿರಿಸಂಪತ್ತು ಹೋಗಿ
ಮನೆಮನೆಗಳಲಿ ತಿರಿಯಬಂದೆನು ॥೩॥

ನಿಂದೆ ಕುಂದವನು ಮಾಡಿ ಪಾತಕ ಸಾರ
ಬಂದ ಹಿರಿಯರೊಳು ಮತ್ಸರಿಸಿ
ಎಂದೆಂದು ಎರಗಲೊಲ್ಲೆ ಅಜ್ಞಾನಿ ನಾ
ಹಂದಿ ನಾಯಿ ಜನ್ಮದಲಿ ಬಂದೆನು ॥೪॥

ಅಷ್ಟ ಐಶ್ವರ್ಯವನು ನಮಗೆ ಉಣ
ಕೊಟ್ಟ ದೈವವ ನಂಬದ ಭ್ರಷ್ಟ ನಾನು
ಖೊಟ್ಟಿತನವ ಬಿಡೆನು ಪಾತಕ ನಾನು
ನಷ್ಟವಾದೆ ಗುರುವಿಗೆ ಸಲ್ಲೆನು ॥೫॥

ತೋಹೆ – ೪, ಪದ – ೨೦

■

೫

ರಾಗ : ಭೂಪಾಳಿ

ಬೆಡಗಾಗಿ ಆತ್ಮದೊಳು ಅಡಗಿಹ ಮಹಾಘನವ
ಒಡೆಯ ತೋರಿದುದನು ಬಿಡದೆ ಬಿನ್ನಹ ಮಾಳ್ಪೆ ಬೆಡಗ ॥ಪಲ್ಲ॥

ಒಂದು ದ್ವಂದ್ವವು ರತ್ನ ಛಂದದಾಲಯವುಂಟು
ಇಂದು ಕರಪುರಕೆ ಪೂಜೆಗಳುಂಟು
ಚಂದ್ರ ಸೋಮದ ಪೂಜೆ ಹೇಳಲಳವೆ ಅದನು
ನಂದಿವಾಹನ ಶರಣರೆ ಬಲ್ಲರು ॥೧॥

ಪೃಥ್ವಿಯಾಧಾರದಲಿ ಸತ್ಯ ಭೂಲೋಕವಹುದು
ಮತ್ತೇಕ ಮುಖ ಸದ್ಯೋಜಾತ ಕರ್ಮ
ಭಕ್ತನಂಗಸ್ಥಲದ ತತ್ತ್ವದೊಡೆಯನು ತಾನು
ನಿತ್ಯಪೂಜೆಯ ಮಾಡುತಿಹನಲ್ಲಿ ತಾ ॥೨॥

ಮಾಣಿಕ್ಯವರ್ಣದ ಲಿಂಗವಾ ಲಿಂಗಕೆ
ಜಾಣೆ ಅರ್ಚಿಸುತಿಹ ಪುಷ್ಪಗಳು ತಾ
ಮಾಣದೆ ನಾಲ್ಕೆಸಳು ವೇದ ರುಗ್ಯಜುಸಾಮ ಅಥ
ರ್ವಣ ಘೋಷಣೆ ಪೂಜೆಯಾಗುತಿಹುದು ॥೩॥

ಲಿಂಗಸ್ಥಾನದಾಲಯಕೆ ಮಹಲೋಕವಿಹುದು
ಗಂಗೆ ತಾನೆ ವಾಮದೇವನೊಡೆಯ
ಸಂಗಮೇಶ್ವರಗೆ ನಯನವನಿತ್ತು ಮೆರೆದಾತ
ಲಿಂಗಪೂಜೆಯ ಮಾಡುತಿಹನಲ್ಲಿ ತಾ ॥೪॥

ತೇಜನೀಲದ ಲಿಂಗವಿಹುದು ಆ ಲಿಂಗಕೆ
ಸಾಜದಿಂದರ್ಚಿಸುವ ಷಡುಯೆಸಳಿಂದ
ಪೂಜೆಯಾಗುತಿಹುದು ವೇಣುನಾದದಿ ತಾನು
ತ್ರಿಜಗದ ಕರ್ತನಾ ಗುರುಲಿಂಗಕೆ ॥೫॥

ಮಣಿಪೂರಕದಲ್ಲಿ ಮಹಭೂತಿಕ ಹುತವು ತಾ
ಅನುದಿನವು ಅಘೋರ ಕರ್ತನಾಗಿ
ಮನಸಿಜನ ಭಾಳಾಗ್ನಿಯಲಿ ಸುಟ್ಟುರುಹಿದ
ಘನಮಹಿಮ ಪೂಜೆಯ ಮಾಡುತಲಿದ್ದನು ॥೬॥

ಲಿಂಗ ಕುಂಕುಮವರ್ಣವಿಹುದು ಆ ಸ್ಥಾನದಲಿ
ಗಂಟೆನಾದ ದಶಯೆಸಳ ಪುಷ್ಪ
ಹಿಂಗದಿಹ ಬಾಲಾರ್ಕಕೋಟಿ ಪ್ರಕಾಶದಲಿ
ಲಿಂಗ ಶಿವಲಿಂಗನೊಪ್ಪಿದ ಪೂಜೆಗೆ ॥೭॥

ಹೃದಯಸ್ಥಾನದಲಿ ಮಹಭೂತಿಕ ತತ್ಪುರುಷ
ಅದಕಲ್ಲಿ ಪೂಜಾರಿ ಈಶ್ವರಿ ನುತ
ಸದಮದದ ಭೇರಿನಾದದಿ ಪೂಜೆ ಮಾಡುತಿಹ
ಚದುರಿನೊಳಗಿರುತಿಹ ಚರಲಿಂಗಕೆ ॥೮॥

ಹೇಮತೇಜದ ಲಿಂಗವಿಹುದು ಆ ಲಿಂಗಕೆ
ಪ್ರೇಮದಿಂದರ್ಚಿಸುವ ಪುಷ್ಪಗಳು ತಾ

ಸೋಮವಂದಿರ್ಯೆದರಲಿ ಪೂಜೆ ಮಾಡಿದನು
ಸೀಮನಲ್ಲದ ಪರಾಪರ ವಸ್ತುವ ॥೯॥

ವಿಶುದ್ದಿ ಲಯದಲಿ ಮಹಭೂತವಂಬರವುಂಟು
ಈಶಾನ್ಯ ಕರ್ತ ಆಕಾಶನೊಡೆಯ
ಹಸನಾದ ಪೂಜಾರಿಯಾಗಿಹ ತಾನಲ್ಲಿ
ವಶವಾಗಿ ಲಿಂಗಧ್ಯಾನವ ಮಾಡುತ ॥೧೦॥

ಧವಳವರ್ಣದ ಲಿಂಗವಿಹುದು ತಾನಲ್ಲಿ ಆ
ಭುವನಕೊಡೆಯನು ಪ್ರಸಾದಲಿಂಗ
ಸವಿ ಮೇಘಧ್ವನಿಯಿಂದ ಪೂಜೆಯಾಗುತಲಿಹುದು
ರವಿಕೋಟಿ ಬೆಳಗು ಪಸರಿಪ ಲಿಂಗಕೆ ॥೧೧॥

ಭ್ರೂಮಧ್ಯದ ಲಯಕೆ ಭೂತಿಕ ಮನಸು ತಾ
ಪ್ರೇಮದಿಂದಲಿ ಶ್ರೀ ಗುರು ಕರ್ತನು
ತಾ ಮಹಾ ಪರಶಿವನು ಪೂಜೆಮಾಡುತಲಿಹನು
ಆ ಮಹಾ ಮಹಲಿಂಗ ನಿರ್ವಯಲಿನ ॥೧೨॥

ಎರಡೆಸಳ ಪುಷ್ಪವನು ಅರ್ಚಿಸಿದನಲ್ಲ ಶ್ರೀ
ಗುರುವಿನ ಶ್ರೀ ಚರಣಕಮಲಯುಗಳಕೆ
ಉರುತರದ ಪ್ರಣಮನಾದವು ಝೇಂಕರಿಸುತಿರೆ
ಅರಿದು ನಿಬ್ಬೆರಗಿನಲಿ ಹಾರೈಸಿತೊ ॥೧೩॥

ಎರಡು ತ್ರಿಪುರವು ಚಂದ್ರಪುರವ ಧ್ಯಾನಿಸುತಿರಲು
ಪರದ ಲಿಂಗಕ್ಕೆ ದಶಶತೆಸಳ ಪುಷ್ಪ
ಅರಿದೆನಿಸುತಿಹ ಬಹುವರ್ಣ ಲಿಂಗವ ಕಂಡು
ಮರೆದು ಸ್ವೈವೆರಗಾಗಿ ನಿಂದಿದ್ದಿತು ॥೧೪॥

ನಾ ಪೇಳಿದವನಲ್ಲ ಸಖಿ ನನಗೆಲ್ಲಿಯದು
ನೀ ಪೇಳಿಸಲು ನಿಮ್ಮ ಕರುಣದಿಂದ
ನಾ ಪೇಳ್ದೆ ಗುರು ಗುಂಡಬಸವ ಕೃಪೆಯಲಿ ಸಲಹು
ನೀ ಪರಾಪರ ವಸ್ತು ಪರಬ್ರಹ್ಮವು ॥೧೫॥

ತೋಹೆ–೫, ಪದ–೩೫

■

೬

ರಾಗ : ಧನ್ಯಾಸಿರಿ

ಎಲೆಲೆ ಎಚ್ಚತ್ತು ನಡೆ ನೆಲೆಯಿಲ್ಲ ನರಸುರರಿ
ಗೆಲುವು ಮಾಂಸ ಚರ್ಮತನು ನಿತ್ಯವೆ ನಿನಗೆ
ಮಲಹರನ ಚರಣವನು ಮನಮುಟ್ಟಿ ಧ್ಯಾನಿಸುತ
ಹಲವು ಭವಭವವ ನೀಗು ಮನುಜ ॥ಪಲ್ಲ॥

ನಿಜಗುರುವ ನಂಬಿ ಇರು ನಿಹಿತಗಳ ಮರೆಯದಿರು
ಸುಜನರನು ಬಿಡದಲಿರು ಸುಖವ ನೀ ಬಯಸದಿರು
ಭಜನೆಗಳ ಮಾ[ಣ]ದಿರು ಭವಿಗಳ ಕೂಡದಿರು ಕುಜನರೊಳು ಕುಳ್ಳಿರದಿರು
ಅಜನ ಕಲ್ಪಾಂತರಂ ಅವಘಡಕ್ಕೆ ಸಿಕ್ಕಿ ಭವ
ಗಜಬಜದ ಗಸಣೆಯೊಳು ಬಳಲಿ ಬೆಂಡಾಗದಿರು ಅಜಹರಿಗಳೊಡೆಯನಂ ಅರ್ಚಿಸರ್ಚಿಸು
ಬಿಡದೆ ನಿಜವು ನಡೆನುಡಿ
ದೃಢದಲಿ ಮನುಜ ॥೧॥

ಕಡಿತಲೆಯ ಹೊಯಿ ಮೂಗ ಕೊಯಿ ಮರಕೆ ಕಟ್ಟಿಯೆಸೆ
ಕೆಡಪೆದೆಯ ಹೊಡೆ ಬೆನ್ನನೊಡೆ ತೊಡೆಯ ಅಡಗ ಕಡಿ
ಎಡೆಗೊಡದಿರೆರಡು ಕರ್ಣವ ಛಿದ್ರಿಸಿ ಹುಲುಕಟ್ಟಿ ಸುಡು ಕಾವಲೆಯೊಳು ನೂಕು
ಹೊಡೆ ನಡುವಿಗೆರಡು ಕಡಿ ಕಡಿ ಮಾಡಿ ದಿಗುಬಲಿಯ
ಕೊಡಿಯೆಂದು ಘುಡುಘುಡಿಸಿ ಕುಡಿಮೀಸೆ ನಡುಗೆ ಯಮ
ನುಡಿಗೆ ನೂರ್ಮಡಿಸಿ ಕೆಡೆಕೆಡೆಯೆಂಬ ಜವನ ಭಟರ
ಗೊಡವೆಗೀಡಾಗಬೇಡ ಮನುಜ ॥೨॥

ನಿದ್ರೆಗೊಲಿವಂತೆ ನಿನ್ನಯ ಸತಿಸುತರ ಮೇಲೆ
ಇದ್ದ ಮಮಕರದಂತೆ ವಿಷಯದಾತುರದಂತೆ
ಮುದ್ದು ಸತಿಯರ ಸಂಗವೆಂತೆಂತೆ ಹರನಲ್ಲಿಯಿದ್ದಿತಾದರೆ ಈ ಮನ
ರುದ್ರನೊಲವೇಕಾಗದಯ್ಯ ಭಕ್ತಿಯ ಮಾಡಿ
ಸದ್ಭಾವದಿಂದ ಸಕಲಾಗಮೋಕ್ತಿಯಲಿರಲು
ಸಾಧ್ಯವಹುದು ಸತ್ಯವು ಮುಕ್ತಿ ಸಿದ್ಧ ಗುರು ಗುಂಡನೀವ ಮನುಜ ॥೩॥

ತೋಹೆ-೬, ಪದ-೩೮

■

೭

ರಾಗ : ಧನ್ಯಾಸಿರಿ

ಅಯ್ಯಯ್ಯೊ ಆತ್ಮ ಅಜ್ಞಾನಕ್ಕೆ ಒಳಗಾಗಿ
ಮೈಯ ಮರೆದಿರಲು ಮಾರಿಯ ಗಸಣೆಗೊಳಗಾಗಿ
ಕ್ರಿಯಾಭಕ್ತಿಯಿಂದ ಮಹತೋ ಮಹೀಯ ಜಗದಯ್ಯ ಜಯ ನಮೋ
ಎನುತ ಧ್ಯಾನಿಸು ॥ಪಲ್ಲ॥

ಏಕೆ ಮರ್ತ್ಯಕ್ಕೆ ಬಂದೆ ಏನಾದುದಿದು ಹಿಂದೆ
ತಾ ಕಾಡಿ ಕಡು ಬಳಲಿ ಭವಭವಂಗಳ ತೊಳಲಿ
ನೂಕು ನುಗ್ಗು ನಾನಾ ವಿಧಿಯನುಂಡುಟ್ಟು ವ್ಯಾಕುಳಿಸಿ ವ್ಯರ್ಥ ತಿರುಗಿ
ಏ ಕಾರುಣ್ಯದ ಪುಣ್ಯದೊದವೊ ನರಜನ್ಮವನು
ನಾ ಕಂಡೆನೆಂಬ ಉತ್ಸಾಹದಲಿ ಪರಶಿವನ
ಜೋಕೆಯಲಿ ಭಜಿಸು ಈ ಕಾಯವಸ್ಥಿರ ಕಣಕೆ ನೀ ಕಾದಹೋಗಿ
ಕೈದು ಮರೆಯದಿರು ॥೧॥

ಗುರು ಲಿಂಗ ಜಂಗಮವು ಪರವಸ್ತು [ಮೆ]ರೆಯುತಿವೆ
ವರ ತೀರ್ಥಪ್ರಸಾದ ಪರಮ ಪುರುಷಗಳು ಇವೆ
ಶರಣ ಸಂಕುಳರ ಆಚರಣೆ ಸಮುದ್ರವಿರೆ ಮರುಳಾಗಿ ಸುಮ್ಮನಿರದೆ
ಗುರುವಿನಲಿ ತನುವ ಲಿಂಗದಿ ಮನವ ಜಂಗಮದ
ಚರಣದಲಿ ಧನವನರ್ಚಿಸಿ ತೀರ್ಥದಿಂ ಸುಖಿಸಿ
ಪರಮ ಪ್ರಸಾದದಿಂದಾನಂದ ಗಣದಭಯ ಸುರಿದುಂಡು ಸ್ವಾದಗಳನು
ಮರೆಯದಿರು ॥೨॥

ಕುಟಿಲ ಕುಹಕವೆಂಬ ಕಟಕಿಗೊಳಗಾಗದಿರು
ಅಟಮಟ ಅಜ್ಞಾನದಿಚ್ಛೆಯಲಿ ಹರಿಯದಿರು
ಸಟೆಗಳನು ನುಡಿಯದಿರು ಸರ್ವಕ್ಕೆ ದಯವಿರಲಿ ದಿಟ ನಿನ್ನ ಜೀವವಾಗಿ
ನಿಟಿಲಲೋಚನನೆ ಭವಾರಣ್ಯ ವಡಬಾಗ್ನಿ
ಜಠರದೊಳು ಚತುರ್ದಶ ಭುವನ ರಕ್ಷಿಪ ಸ್ವಾಮಿ
ಮಠಪಂಚಮಕ್ಕೊಡೆಯ ಮ[ಮ]ಕರ್ತ ಮದ್ಗುರುವ ಪಠಿಸುತಿರು
ಬಸವಣ್ಣನ ಅರಿ ಮರುಳೆ ॥೩॥

ತೋಹೆ–೭, ಪದ–೪೧

■

೮

ರಾಗ : ಧನ್ಯಾಸಿರಿ

ಒಂದು ನಿಮಿಷದ ಸುಖಕೆ ಸಿಕ್ಕಿ ಹಲವು ಪರಿಯ
ನೊಂದು ಭವದೊಳು ಬೀಳದಿರು ಕೇಳು ಮನವೆ ನೀ
ಮುಂದೆ ಶ್ರೀಗುರು ಚರಣಕೊಂದನೆಯ ಮಾಡಿ ನಿಜದಿಂದಲಿರುತಿಹುದು ಅನವರತ ॥ಪಲ್ಲ॥

ಪರವಧುವಿಗೆ ಹರಿಯಬೇಡವು ಮನವೆ
ಅರಿಯೆ ಹಿಂದಕ್ಕೆಯ್ದು ಕಾಡಿ ಕೆಟ್ಟಂಥವರ
ಧರೆಯನಾಳುತಿಹನು ಸೇನುನೃಪನು ತಾನು ಮರಳಯಿದರದಿಲ್ಲದೆ
ಇರುತಿರಲು ಈ ಪ್ರಕಾರದಿ ಹಲವು ಕಾಲದಲಿ
ಮರವೆ ಬಂದಿತು ತನ್ನ ರಾಜಸದ ಮದದಿಂದ
ತರಿಸಿದನು ಬ್ರಾಹ್ಮಣನ ಸತಿಯಳೊರ್ವಳು ತನ್ನ ಸರಸ ಸಂಕೆನುತಲಿ ॥೧॥

ವಿಪ್ರ ಮಹಂಮಾಯಲ್ಲಿ ತಪ್ಪದಲಿ ತಾನೆರಗಿ
ಒಪ್ಪದಿಂದಲಿ ಪ್ರಾಣಕ್ಷಯವ ಮಾಳ್ಪೆನೆಂ
ದಿಪ್ಪ ದಿವಸದೊಳು ಶಕ್ತಿಯ ಕೃಪೆಯು ಆಗಿ ನಾನೊಪ್ಪಿದೆನಿದೇನೆಂದೆನೆ
ತಪ್ಪದೀ ದೇಶಾಧಿಪತಿಗಿನಿತು ನೃಪನೆ
ನಿಪ್ಪವನು ಎನ್ನ ಕುಲಸ್ತ್ರೀಯಳಿಂಗೊಲಿದೊಯ್ದು
ಕಪ್ಪುಗೊರಳನೆ ಬಲ್ಲ ಕರುಣಿಸೆಲೆ ತಾಯೆ ಎಂದೊಪ್ಪಿಸಿದ ದ್ವಿಜ ಮೊರೆಯನು ॥೨॥

ನುಡಿಯ ದೇವತೆ ಕೇಳಿ ಘುಡುಘುಡಿಸಿ ಕೋಪದಿಂ
ನುಡಿದಳೆಲೆ ವಿಪ್ರ ನೀ ನಡೆ ನಿನ್ನ ಸತಿಯಳನು
ಪೊಡವಿಪತಿಯಂ ಬೇಡು ಕೊಡದಿರಲು ನಾ ಬಂದು ಬಿಡುವೆ ತುಂಬಿಯ ಪುಳವನು
ನಡೆಗೊಂಡು ಚಂದೆಲೆಗೆ ನಮಿಸಿ ಬ್ರಾಹ್ಮಣ ಹೋಗಿ
ಬಿಡುಯೆನ್ನ ಸತಿಯಳಂ ಕಡುಪಾಪಿಯೆಂದೆನಲು
ಹೊಡೆಹೊಡೆಯೆಂದೆನುತ ನೃಪ ಕಡುಗೋಪದಿಂದೆಳೆ ಬಿಡದೆರಗುತಿರೆ ತುಂಬಿಯು ॥೩॥

ತನುವಿನಿಂದ ಚುಚ್ಚಿ ಅನವಲ್ಯವ ಮಾಡುತಿರೆ
ಘನದ ಮರುಕದಲಿ ಗರ್ಜಿಸಿ ಮೊರೆಯೊ ಮೊರೆ
ಎನಗೆ ಕರುಣಿಸು ವಿಪ್ರ ನಿನಗೀವೆ ಸತಿಯಳೆಂದೆನುತಿರಲಿಕಾ ಸ್ತ್ರೀಯಳು
ವಿನಯನೆಡೆಗೆಯ್ದಿದಳು ವಿಪರೀತ ತನು ಛಿದ್ರ
ವನು ತಾಳದೆಯು ಗಂಗೆಯನು ಬಿದ್ದು ಮೃತವಾದ
ನೆನೆಯದಿರು ಪರಸತಿಯ ಘನ ಕೇಡು ಕೇಡುಂಟು ನಿನಗೆ ಸಾರಿ[ದ]ನು
ಮನವೆ ಎಚ್ಚತ್ತಿರು ॥೪॥

ಪರಸತಿಯ ಸಂಗ ಪಂಚಮಹಾಪಾತಕವೆಂದು
ಧರೆಯೊಳಗೆ ಧರ್ಮಶಾಸ್ತ್ರ ಪುರಾಣಾಗಮವು
ಮೆರೆವುತ ಮೇರೆದಪ್ಪದಲಿಯಿರಿ ಜನವೆನಲು ಮರವೆ ನಿನಗೇಕೆ ಮನವೆ
ಅರಿತರಿತು ಅಳುಪೆ ಅನಂತ ಪಾತಕವಹುದು
ನೆರೆ ನಂಬಿ ಶಿವನ ಪೂಜಿಸಿ ಭಕ್ತಿಯನೆ ಮಾಡಿ
ಗುರು ಗುಂಡಬಸವಯ್ಯ ಚರಣವೆ ಗತಿಯೆಂದು ಇರಲು ನಿತ್ಯನಹೆ
ಮನವೆ ॥೫॥

ತೋಹೆ-೮, ಪದ-೪೬

■

೯

ರಾಗ : ಧನ್ಯಾಸಿರಿ

ಇನ್ನು ಸಾರುವರಿಲ್ಲ ನಿನ್ನೆ ಸಾರಿದರು ನಮ
ಗಿನ್ನಾರು ಸಾರುವರು ಮುಂದೆ
ಪನ್ನಗಧರನೊಂದುಮುಖದ ಮಹಿಮರು ಬಂದು
ಉನ್ನತದಿ ಸಾರಿ ದೂರಿದರು ॥ಪಲ್ಲ॥

ದೇವನೊಂದು ಮುಖದ ಪಾವನಾತ್ಮಕರವರ
ಸೇವೆಯನೆ ಮಾಡಿ ಭಕ್ತಿಯಲಿ
ಕಾವರವರನು ಕರೆಯೆ ಆದ ದುರಿತವು ಹೊದ್ದ
ವೀ ವಾಕ್ಯವಿದು ನಿಜವು ಕೇಳಿ
ಭಾವಜ್ಞರವರು ಬಲ್ಲಿದರು ಪರಾಪರ ನಿ
ರಾವಲಂಬನ ತೋರಿಸುವರು
ತಾವೆ ಶಿವಗೆ ಹೇಳಿ ಈವರಾ ಮುಕ್ತಿಯನು
ಭಾವದೊಳು ಭಜಿಸುವರ ಪಾದವ ॥೧॥

ಅನವರತ ಅವರ ಪಾದವ ನೆನೆವುತಿರ್ದರಿಗೆ
ಅನುದಿನವು ಸಕಲ ಸುಖವುಂಟು
ವನಿತೆ ಪರನಿಂದೆ ಪರಧನವು ಪರರ ಜರಿದು
ತನುಶುದ್ಧ ಮನಶುದ್ಧವಾಗಿ
ಇನಿತು ಪರಿಯಿರಲವರ ಘನ ಕೃಪೆಯು ತಪ್ಪದು
ಮನುಜ ಕೇಳಾ ನಿನ್ನ ಮರುಳು
ತನವ ಬಿಟ್ಟಿನ್ನಾದರು ಘನಗುರುವ ನಂಬಿ ನೆನೆ
ನೆನೆ ನಿನ್ನ ಭವಬಂಧ ಬಿಡುಗು ॥೨॥

ಏಕೆ ಮೈಮರೆದಿಹೆ ಅನೇಕ ಕಾಲವು ನಿನಗೆ
ಈ ಕಾಯ ನಿತ್ಯವಾಗಿಹುದೆ
ಸಾಕೀ ಭವವಿದಕುಂಟು ಏ ಕರುಣೆ ಗುರುವೆ ಗುರು
ವೇ ಕಡೆಗೆ ದಾಂಟಿಸಯ್ಯ ಎನ್ನ
ನೀ ಕಾಡಿಸಿದಿರಿಂತು ಏಕೈಕಮೂರ್ತಿ
ಕರುಣಾಕರ ಗುರುವೆ ಸುರತರುವೆ
ಬೇಕು ನಿಮ್ಮಯ ಚರಣಕರುಣವೆಂದೆನುತಿರಲು
ತಾ ಕೃಪೆಯ[ನೀವ] ಗುಂಡಬಸವ ॥೩॥

ತೋಹೆ-೯, ಪದ-೪೯

■

೧೦

ರಾಗ : ಧನ್ಯಾಸಿರಿ

ಗುರುರಾಯ ಗುಂಡೇಶ ಪರಮಭಕ್ತಿಯ ಪೇಳೆ
ನರಗುರಿ ನಡೆಹೀನ ನಡೆಯಲರಿಯದೆ ಕೆಟ್ಟೆ
ದುರುಳ ಪಂಚೇಂದ್ರಿಯಿಚ್ಛೆಗೆ ಹರಿದು ಧೃತಿಗೆಟ್ಟೆ ಹರಹರ
ಮಹಾದೇವನೆ ತ್ರಾಹಿಮಾಂ ಗುರುವೆ ॥ಪಲ್ಲ॥

ಸತ್ಯ ಧರ್ಮದ ಬೋಧೆ ಸಕಲರಿಗೆ ಕರುಣದಲಿ
ಬಿತ್ತಿದಿರಿ ಬೀಜವನು ಬೀಸರಗಳಿಲ್ಲದಲಿ
ವೆತ್ತಿ ಪಾತಕ ನಾನು ವೆಗ್ಗಳಿಸಿ ತಿಳಿಯದಲಿ ಮತ್ತೆ ಮದದಲಿ ನಡೆದೆನು
ಕರ್ತೃ ನಿಮ್ಮ ಧರ್ಮ ಕಾಯಯ್ಯ ಗುರುಮೂರ್ತಿ
ಸತ್ಯಹೀನನು ನಾನು ಶತಲಕ್ಷ ತಪ್ಪುಕನು
ಮತ್ತೆ ಗತಿಯಿನ್ನಾರು ಮಹಾದೇವ ಮದ್ಗುರುವೆ ನಿತ್ಯನಿರಂಜನನೆ
ತ್ರಾಹಿಮಾಂ ಗುರುವೆ ॥೧॥

ಭರಣ ಜಲಪ್ರಳಯದಲಿ ಕರುಣಸಾಗರ ನಿಮ್ಮ
ಹರಣವಂ ಪಿಡಿದು ಬದುಕದಿರಖಿಲರೆಂಬ ಶ್ರುತಿ
ಸುರರು ದೇವರ್ಕಳುಂ ಸುರಪತಿಯು ಬ್ರಹ್ಮನುಂ ಹರಿ ರುದ್ರ ರುದ್ರಗಣರು
ಗುರುಮೂರ್ತಿ ನೀನೆ ಗತಿ ನಮೋ ಜಯವೆನುತಿರಲು
ಪರಮನೋಂಕರಿಸಲದ ಮೆಯ್ದು ಹೆಂಡಿಯನಿಕ್ಕೆ
ಉರಿಗಣ್ಣ ತೆರೆದು ಭಸ್ಮವ ತಳಿಯೆನಲು ತಳಿದು ಧರೆಯ ನಿರ್ಮಿಸಿದ
ಬಸವ ತ್ರಾಹಿಮಾಂ ಗುರುವೆ ॥೨॥

ಉತ್ಪತ್ತಿ ಸ್ಥಿತಿಗೆ ಕರ್ತನೆಂಬ ವಚನ
ಸತ್ಯ ಸತ್ಯಂ ಸತ್ಯ ಮತ್ತೆ ಮರೆಯೇಕಿಳೆಯ
ಉತ್ತಿ ಹರಗುವರಾರು ಬಿತ್ತಿ ಬೆಳೆವ[ವ]ರಾರು ಮತ್ತೆ ಮಳೆಯೆರೆವರಾರು
ಅರ್ತಿ ಆನಂದದ ಐಶ್ವರ್ಯ ಸಂಪದವ
ನಿತ್ತು ಸಲುಹುವರಾರು ನೀವಲ್ಲದೆ ಜಗಕೆ
ಭಕ್ತಿಯೀಯಲು ಕರ್ತೃ ಭಕ್ತಿಯೀಯಲು ತುರ್ತ ಮುಕ್ತಿಯೀಯಲಿಕೆ
ನಿರ್ತಾ ತ್ರಾಹಿಮಾಂ ಗುರುವೆ ॥೩॥

ತೋಹೆ-೧೦, ಪದ-೫೨

■

೧೧

ರಾಗ : ಕಾಂಬೋಧಿ

ತಿಳಿದ ಮಹಾತ್ಮರಿದ್ದ ಮಳೆ ತೀರ್ಥ ಬೆಳೆ ಪ್ರಸಾದವೆಂಬುದು
ಇಳೆಗಹುದಿದು ಸತ್ಯನೋಡಿ
ಮಳೆಯಾಗದಿರಲು ಮಹಾಪ್ರಳಯ ಲೋಕಕೆ ತೋರಿ
ಉಳುವುಂಟೆ ನೀವೆ ಹೇಳಿ ॥ಪಲ್ಲ॥

ಗಂಗೆಮಯವಾದಿಯಲಾಗಿರೆ ಸಂಗಮೇಶ್ವರ ಬಸವ
ಲಿಂಗನು ಲೀಲೆಯಿಂದ
ಮಂಗಳ ಮಹಿಮೆಗೆ ಮಹ ಭಸಿತವ ಹೆಪ್ಪನು
ಲಿಂಗನು ಕೂಡಿಸಲಾಗಿ
ಗಂಗೆ ಬಲಿಯಲು ಭೂಮಿ ಲಿಂಗ ನಿರ್ಮಿತವದಾಗಿ
ಅಂಗ ಬ್ರಹ್ಮಾಂಡ ಹುಟ್ಟಿ
ಸಂಗತಲಿ ಚೌರಾಶಿ ಜೀವ ನಿರ್ಮಿತವಾಗಿ
ಶೃಂಗರಿಸಿತು ಮರ್ತ್ಯವಾಗಿ ॥೧॥

ಆದಿಯಲಾ ಪರಶಿವನ ಪಾದ ಸೋಂಕಿರಲಾಗಿ
ಆದಿತೀರ್ಥವು ನೋಡಿ
ಚೋದ್ಯಗಳಾಗಿ ಯುಗಯುಗದೊಳು ತೀರ್ಥದ ಮಹಿಮೆ
ಮೇದಿನಿಯೊಳು ಮೆರೆಯುತಿರಲು
ವಾದವೇತಕೆ ಶಿವನ ಪಾದತೀರ್ಥವು ಮಳೆಯು
ಈ ಧರೆಯೊಳಗಧಿಕವೆನಲು

ಭೇದ ಭೇದವ ಮಾಡಿ ವಾದಿಸಲಿಬೇಡ
ವೇದದೊಳಗೋದಿ ನೋಡಿ ॥೨॥

ಸತ್ಯತೀರ್ಥವು ಶಿವನ ಉತ್ತಮಾಂಗದಲಿದ್ದು
ಕರ್ತೃ ಚರಣದಲಿ ಬಿದ್ದು
ಮರ್ತ್ಯಕೆ ಬರಲೆಂದು ಸಪ್ತಸಮುದ್ರವೆಂದು
ಮತ್ತೆ ಪೆಸರಾಯಿತಂದು
ಎತ್ತಿ ವಾಯುವ ತಂದು ಮರ್ತ್ಯಕೆ ಎರೆಯಲೆಂದು
ಅರ್ತಿ ಆನಂದದಿಂದ
ಬಿತ್ತಿ ಬೆಳೆದುದನುಂಡು ಮತ್ತೆ ಘನವಲ್ಲೆಂಬುದು
ಉತ್ತಮರೆ ನೋಡಿ ಒರೆದು ॥೩॥

ಇಪ್ಪತ್ತರ ಮೇಲೇಳುಯಿಪ್ಪ ನಕ್ಷತ್ರದೊಳು
ತಪ್ಪದೆ ಮಳೆಯು ಬರಲಿ
ಒಪ್ಪದಲಿ ನುಡಿಯುತಿಹಿರಿ ನಾಲ್ಕು ಚರಣದಲಿ ಮಳೆ
ಬಪ್ಪುದು ಬಂದಿತೆಂದು
ಒಪ್ಪವನಾ ಧರೆ ನೋಡಿ ಚರಣದಲಿ ಬಂದುದನು
ತಪ್ಪಿ ನಿಜತೀರ್ಥವೆನಲಿ ಅದು
ಕಪ್ಪುಗೊರಳನದೆನಲು ಉಪ್ಪರಿಯೊಳು ಬಿದ್ದಂತಾಗಿ
ಚಪ್ಪರಿಯಲಿ ಬೇಡಹೋಗಿ ॥೪॥

ಪರಶಿವಗೆ ಪಂಚಮುಖವಿರುತಿಹವೆಂದೆಂಬಿರಿ
ಒರೆದ್ಧೇಳಾವಾವ ಮುಖವು
ಅರಿಯದಿದ್ದರೆ ಕೇಳಿ ಧರೆಯು ಜಲವಗ್ನಿಯು
ಮರುತ ಆಕಾಶವಿಂತು
ಹರನ ಸದ್ಯೋಜಾತ ವಾಮದೇವ ಅಘೋರ
ತತ್ಪುರುಷ ಈಶಾನ್ಯದಿಂದ
ನೆರೆ ಹುಟ್ಟಿಹವೆಂದು ಒರೆದವು ವೇದವೆಂದು
ಜರಿದಾಡಬೇಡ ಜನರ ॥೫॥

ಪೃಥ್ವಿ ಬ್ರಹ್ಮನು ತನು ಅಪ್ಪು ನಾರಾಯಣನು
ತತ್ವವು ತೇಜ ರುದ್ರ
ಸೂತ್ರ ಸಮೀರನ ಈಶ್ವರನ ಸತ್ಯವೆಂಬರ ಸದಾಶಿವ

ತತ್ವಧಿಪತಿಗಳಿಗೆ ಮಹದೇವ
ಕರ್ತೃವಾತ್ಮದೆಲ್ಲಾ ಉತ್ಪತ್ತೈಕ್ಯಗಳೆಂಬ
ಸೂಕ್ತ ರಹಸ್ಯಾರ್ಥವಿರಲು
ಮತ್ತೇಕೆ ಮಳೆ ತೀರ್ಥವಲ್ಲೆಂಬಿರಿ ರವಿಶಶಿಯಾತ್ಮ
ಮೂರ್ತಿ ಅಷ್ಟಾತ್ಮ ತಾನೆ ॥೬॥

ಭಕ್ತನಂಗಸ್ಥಲಕೆ ಪೃಥ್ವ್ಯಧಿದೇವವೆ ಬ್ರಹ್ಮ
ಶಕ್ತ ಮಹೇಶಂಗಸ್ಥಲಕೆ ತೀರ್ಥ
ಧೋಕ್ಷಜನಧಿದೇವ ಪ್ರಸಾದಿಯಂಗಸ್ಥಲ
ನೀರ್ತಜ್ಞಧಿದೇವ ರುದ್ರ
ಇತ್ತ ಪ್ರಾಣಲಿಂಗಿಯಂಗಸ್ಥಲವೆ ಮರುತ
ತತ್ವೇಶ್ವರನೆಂಬನಧಿದೈವ
ಸತ್ಯವು ಶರಣ ಅಂಗಸ್ಥಲ ನಭ ಸದಾಶಿವದೈವ
ಮತ್ತೈಕ್ಯಗೆ ಮನ ಶ್ರೀಗುರು ತೀರ್ಥ ॥೭॥

ಇದ್ದ ಕ್ರೀಯದ ತೀರ್ಥ ಅಬದ್ಧವೆಂದೆಂದರೆ
ಗುದ್ದಾಡಲಿಬೇಕು ನೀವು
ಅದ್ವೈತದ ಅರ್ಥವ ನೋಡಿ ಆನಂದಿಸಿದವರೊಳಗೆ
ಬದ್ಧದ ಎರವು ಬೇಡ
ಸಾಧ್ಯವಹುದು ಕ್ರಿಯಾಸತ್ಯದಲಿ ನಡೆದವರಿಗೆ
ಅದೆನಗೇನು ಫಲವು
ದ್ವೈತದ ಸಖಿಯಲಿ ಇದ್ದ ಕ್ರಿಯೆಗೆ ಸಲ್ಲ
ಬಿದ್ದೆಯಾ ಮಾಗುಂಡ ಕಲ್ಲ ॥೮॥

ಭಕ್ತರಾದವರಿದಕೆ ಅರ್ತಿ ಮಾಡಲಿಬೇಕು
ಮತ್ತೆ ಮಳೆಬೆಳೆಯು ತಾನು
ಸತ್ಯವು ಶಿವನ ತೀರ್ಥ ಪ್ರಸಾದವೆಂದರೆ
ಹೊತ್ತಾಡಿ ನಲಿಯಬೇಕು
ಮಿಥ್ಯ ಮಾಡಲಿಬೇಕು ಈ ಸತ್ಯದಿ ಜನರುಗಳ
ತೆತ್ತೀಸಕೋಟಿ ದೈವದವರು
ಕರ್ತೃವಿನದುಯೆಂದೆನುತ ತತ್ವವನರಿದರೆನಲು
ವ್ಯರ್ಥ[ವ]ವರಿಗೆ ಇದಿರು ನಿಲಲು ॥೯॥

ಬೆಳೆಯು ಪ್ರಸಾದವೆನಲು ಹಳಿಯಲೇತಕೆ ಬರುವೆ
ಬೆಳೆಯದಿರಲು ಮುಂದೆ
ಉಳುವ ಹಾದಿಯ ತೋರಿ ಉರ್ವಿಯೊಳಗದ ಬಿಟ್ಟು
ಪ್ರಳಯದೊಳಗಾಗಿ ಕೆಟ್ಟು
ಕಳವಳಿಸಿ ಕೆಂಗೆಟ್ಟು ಕೈಯೊಡ್ಡುವೆ ಗತಿಗೆಟ್ಟು
ಹೊಲೆ ಹೊಲೆಯರ ಮನೆಯ ಹೊಕ್ಕು
ಕುಲಗೆಟ್ಟು ಛಲಗೆಟ್ಟು ಬಲಗೆಟ್ಟು ಬಾಯ್ಬಿಟ್ಟು
ಹಲವ ಹಂಬಲಿಸಿ ಸತ್ತು ||೧೦||

ಹದಿನೆಂಟು ಧಾನ್ಯವು ಬಸವನ ವದನ ಜಿಹ್ವದಿ ಹುಟ್ಟಿ
ತದು ಕಾರಣ ಪ್ರಸಾದ ಬೆಳೆಯು
ಅದು ಅಲ್ಲದೆ ಸ್ವಾಮಿಯ ಸದ್ಯೋಜಾತಮುಖ ಭೂಮಿಯೊಳು ತಾ
ಉದುಭವಿಸಿತು ಪ್ರಸಾದ ಬೆಳೆಯು
ಕದನಕೋಳಾಹಳ ಕರ್ತೃ ಗುರು ಗುಂಡೇಶ
ಇದನಾಡಲು ಮರ್ತ್ಯ ಜನರು
ಪದರ ಪಲ್ಲಟದಿಂದ ಪಕ್ಷವಾದವ ಮಾಡಿ
ಅದಕೆ ನೋಡಿ ||೧೧||

ತೋಹೆ-೧೧, ಪದ-೬೧

■

೧೨

ಎಲುವು ಪೂಜೆಗೆ ಸಲ್ಲವೆಂಬೆ
ಎಲುವೆ ಸಲೆ ನೆಲಸಿ ಬಾಯೊಳವೆ ತಳೆದು ಮಾತಾ[ಡಿ]
ಎಲುವು ಪೂಜೆಗೆ ಸಲ್ಲವೆಂಬೆ ||ಪಲ್ಲ||

ಶಂಖ ಸಹಜದ ಲಿಂಗ ಸಮುದ್ರದೊಳಗಿನ ಉಲುಹು
ಝೇಂಕರಿಸುತಿಹವು ಜಗದೊಳಗೆ ಜಂಗಮ ಭಕ್ತರು
ಶಂಕೆಯಿಲ್ಲವು ನಮಗೆ ಸಕಲರೆಂಜಲುಯೆನ್ನದೆ ಓಂಕರಿಸಿ ಪೂಜೆ ಮಾಡುತಲಿ ಬೆಂಕಿಯಂತಾಗಿ
ಬೇನೆಯು ಏಳಲೇಕೆನೆಗೆ
ಶಂಕರನ ಶರಣಗಿದ ಬಳಿಯ ಪೂಜಿಸಲು
ಮಂಕು ನಾ ಮರೆದು ಬೊಗಳಿದರೆ ಕೇಳಿ ಝುಂಕಿಸಿದ ಧರ್ಮರಿಗೆ
ಜಯವಹುದು ಮುಂದೆ ||೧||

ಸ್ವಾಮಿ ಧರಿಸಿದನು ಸಹಜದಿ ಮಾಲೆ ಎಲುವುಗಳ
ಸ್ವಾಮಿ ರುದ್ರಂಗೆ ಸಲ್ಲದು ಪೂಜೆಯೆನಬಹುದೆ
ಭೂಮಿ ತಾಳಿದಳು ಭುವನದೊಳಿದರ ಸ್ಥಿತಿಗಳ ಭೂಮಿ ಭುವನರಿಗೆ ಕಿರಿದಹಳೆ
ನಾಮಿ ನರಕಿಯು ನಾನು ತಿಳಿಯಲರಿಯದ ಪಾಪಿ
ಕಾಮುಕರಿಗೆ [ತಾ] ಕಂಡಂತೆ ಬೊಗಳಿದರೇನು
ಭೂಮಿ ಸ್ವಾಮಿಗೆ ಸಲ್ಲನಿನ್ನು ಮುಂದೆ ನಾಮ ನಷ್ಟವು ಆಗಿ ನಾನಳಿವೆನಿನ್ನು ॥೨॥

ಸತ್ತವರಿಗೆಯು ಪೂಜೆ ಸಲ್ಲದೆಂದಾಡುವೆನು ಭಕ್ತಿ
ಸತ್ತವರ ನಾನೆತ್ತಿ ಪೂಜಿಸುತಿಹೆನು
ಕತ್ತೆಮೂಳನು ನಾನು ಕಲ್ಯಾಣದ ಶರಣರೆತ್ತಲಡಗಿದರು ಎಂದರಿಯೆ
ಮರ್ತ್ಯದೊಳು ಕಾಯವನು ಇಳುಹಿದರು ಅವರೆಲ್ಲ
ಹತ್ತೆಂಟು ಪುಷ್ಪಕದೊಳತ್ತ ಹೋದರು ಇಂದು
ಸತ್ತರುಳಿದರೆನಲುಬಹುದೆ ಸತ್ಯಧರ್ಮರ ಪೂಜೆ ಸಲ್ಲದೆನಬಹುದೆ ॥೩॥

ಗೋಪೆಯೆಂದು ಹಳಿದು ಇರಲಿಕೆ ಗೋಪೆಯು ಇಲ್ಲದಿರೆ
ಗೋಪೆಯೆಂದು ಹಳಿದು ಭೂಮಿಯು ಆಕಾಶವೆಂಬ
ಗೋಪೆಯೊಳಗೆ ನಾ ಸಿಕ್ಕಿ ಗರ್ವಿಸುವೆ ತಿಳಿಯದಲಿ ಗೋಪೆಯು ನಾ ಸತ್ತ ಕಾಲದಲಿ
ಗೋಪೆಯ ಬಿಟ್ಟಿರಲಾರೆ ಗೋಪೆ ಇಹಕೆ ಮುಖ್ಯವು
ಗೋಪೆಯೊಳಗೆ ಈರೇಳು ಭುವನವೆಲ್ಲ ಅಡಗಿ
ಗೋಪೆಗಧಿಕರಿಲ್ಲವಿಳೆಯೊಳಗೆ ಅಪರಾಧಿ ಪಾತಕ[ನ]ರಿಯದೆ ಬೊಗಳುತಿಹೆನು ॥೪॥

ಗುಡ್ಡೆಯನು ಪೂಜಿಸುವಿರೆಂದು ಬೊಗಳುತಲಿಹೆನು
ಹೆಡ್ಡ ಪಾತಕನು ಹೇಸೆನು ಪರರ ಜರೆಯುತಿಹೆ
ಮಡ್ಡ ಎಲ್ಲರಿಗೆರಡು ಗುಡ್ಡೆಗಳು ಮುಖದಲಿದೆ ಗುಡ್ಡೆಯಿಲ್ಲದೆ ಪೂಜೆಯುಂಟು
ಗುಡ್ಡೆಯುಳ್ಳರೆ ಪೂಜ್ಯನಾಗಿ ಜಗದೊಳು ಮೆರೆವೆ
ಗುಡ್ಡೆಯೊಡೆದರೆ ದಾರಿಗಡ್ಡ ಬೀಳುವೆ ಬಂದು
ಗುಡ್ಡೆಯೆ ಮುಖ್ಯ ಮೂಜಗಕೆ ಅಯ್ಯೊ ದಡ್ಡ ನಿಂದಿಸಲು ಧರ್ಮರಿಗೆ ಕುಂದಹುದೆ ॥೫॥

ಮಾಂಸ ಚರ್ಮವು ರಕ್ತವನು ಮಥನದಲಿ ಬಿಟ್ಟಿ
ಸಾಸದಲಿ ಭೃಂಗೀಶ ಶರ್ವಾಣಿಯೊಳು ಸೆಣಸಿ
ಈಶನಾಗಲು ಮೆಚ್ಚಿ ಇತ್ತ ಮುಕ್ಕಾಲು ಕೈಲಾಸದೊಳಗಿಂತು ಮಹಿಮೆಯಲಿ
ಹೇಸಿ ನಾನೆಲುವು ನರರೋಮ ಚರ್ಮವು ರಕ್ತ
ಮಾಂಸದೊಳಗೊಂದ ಬಿಟ್ಟಿರಲಾಪೆನು ವ್ಯರ್ಥ
ರೋಷ ಮದದಲಿ ಬೊಗಳುತಿಹೆನು ಶೇಷಭೂಷಣನೊಪ್ಪ ಇಳಿವೆ ನರಕದಲಿ ॥೬॥

..ದು ದೈವವ ಕೂಡಿ ಪೂಜೆಗೊಂಬವರೊಳಗೆ
ಸರಸದ ಮಾತು ಸಲ್ಲವು ಕೇಡಿಗಿದು ಮೊದಲು
ಜರಿದಾಡಿದವರಿಗೆಯು ನರಕಪ್ರಾಪ್ತಿಯು ಮುಂದೆ ಬರುಮಾತು ಬೇಡ ನಿಮಗಿನ್ನು
ಗುರು ಗುಂಡರಾಯನೆಂದೆಂಬ ಘನಮಹಿಮನು
ಮೆರೆದ ಭಕ್ತಿಯನು ಪವಾಡಪುರುಷನು ತಾ
ಧರೆಗೆ ಧರ್ಮವನು ಸಾರುತಲಿ ಅಯ್ಯೋ ಹರ ನಚ್ಚಿನಲಿ ಹರುಷದಲಿ ಜಗದೊಳಗೆ ॥೭॥

ತೋಹೆ-೧೧, ಪದ-೬೧

■

೧೩
ಮಹಾರಾಯ ಧರ್ಮರ ಹಳಿದು ಛೀ ಎನಿಸಿಕೊಳಬೇಡ
ಬಾಯಲಿ ಬಾಲಹುಳುವು ಬೀಳದಿಹವೆ ॥ಪಲ್ಲ॥

ದೊಡ್ಡ ಮುತ್ತಿನ ನೆಲೆಯು ತನಗೆ ಕಾಣಿಸದಿರಲು
ಬೊಡ್ಡಗಣ್ಣವನು ಹಳಿಯಬಹುದೆ
ದಡ್ಡ ನಾಯಿಗಳೆಲ್ಲ ನೆರೆದು ಸರವಿಯ ಹೊಸೆದು
ಗುಡ್ಡೆಯೆಂದು ಪದನ ಹೇಳಬಹುದೆ
ದೊಡ್ಡ ಪರ್ವತ ತಾನು ಧರಣೇಂದ್ರ ಮಡಿದ ನೆಲೆ
ಅಡ್ಡ ಮಾತೇಕೆ ಅರ್ಜುನ ಮಲ್ಲಿಕೆ
ಕಡ್ಡರಾಯನು ಮಡಿದ ನೆಲೆ ಕಾಶಿ ಶ್ಮಶಾನವೇ
ಗುಡ್ಡಿಯೆಂದವಗೆ ಸಡ್ಡನು ಹೊಡೆಸರೆ ॥೧॥

ಪಂಚಾಮೃತವನು ಪರಿಣಾಮದಲಿ ಕೊಳ್ಳದಲೆ
ಚೊಂಚಗೈಯವ ತಾನು ಹಳಿಯಬಹುದೆ
ಕಂಚಗಾರನ ಒಳಗೆ ಕಲಹದಲಿ ತಾ ಹಾಳ
ಹಂಚಿನೊಳು ಹಾಕಿಕೊಂಡು ತಿನ್ನಬಹುದೆ
ಮಿಂಚುವ ಸೂರ್ಯ ಪ್ರಕಾಶವನು ಕಂಡೂರ
ಮ್ಲೇಂಛರ ನಾಯಿ ಬೊಗಳುವ ತೆರದಲಿ
ಪಂಚಮ ಪಾಪಿ ನಿಂದಕನು ಹಿರಿಯರ ಹಳಿದು
ಹಂಚುದಿರಿಕಿಗೆ ಚಂಚೆ ಕೈಯ ಮೇಲೆ ॥೨॥

ಕಲ್ಯಾಣಭೂಮಿ ಮೊದಲಾಗಿ ಭೂತಳ ಮಧ್ಯ
ಎಲ್ಲೆಲ್ಲಿ ಶಿವಶರಣರೈಕ್ಯವಾಗಿ
ಅಲ್ಲಲ್ಲಿಯಿಟ್ಟು ಗುಡಿಗಳ ಕಟ್ಟಿ ಪೂಜಿಸರೆ
ಗಲ್ಲಿಸ್ಯಾಡದಲಿರೊ ಗುರುಹಿರಿಯರ
ಕಲ್ಯಾಣದಲಿ ಮೆರೆದ ಬಸವ ಕಪ್ಪಡಿ ಸಂಗಮ
ದಲ್ಲಿ ಐಕ್ಯವಾದ ಅದ ನೋಡಿರೊ
ಬಲ್ಲತನಗಳ ಬಲ್ಲೆನೆಂದು ಬೊಗಳಲಿ ಬೇಡ
ಹಲ್ಲ ಹೊಡಸ್ಯಾರು ಸಾಕ್ಷಿಗಳ ತೋರಿ ॥೩॥

ತೊತ್ತಿಗರು ತುಂಬುಲಗಳ್ಳರಿಗೆ ಮಾತೇಕೆ
ಮತ್ತೆ ವೇಶಿಯ ಎಂಜಲುಗಳ್ಳಗೇಕೆ
ನಿತ್ಯ ಪರಸತಿಯ ಸಂಗವ ಮಾಡುವವಗೇಕೆ
ಕತ್ತೆ ಕುದುರೆಯ ಬಿಡದ ಕರ್ಮಿಗೇಕೆ
ಅತ್ತೆ ಸೊಸೆ ಮಗಳು ತಾಯಿ ಅಕ್ಕ ತಂಗೆಂದಿರು
ಅತ್ತಿಗೆ ನಾದಿನಿಗಳುಪುವರಿಗೇಕೆ
ಸತ್ಯ ಭಕ್ತನು ಎಂಬೆ ಸಟೆಯ ಪಾತಕನ[ವ]ನೆ ॥೪॥

ಕತ್ತೆ ಹೊರಳಲಿ ನಾಚಿ ಮೂಕೊರೆಯನು
ವಿರುಪಾಕ್ಷವೆಂಬುದದು ಪಕ್ಷಿ ಮಡಗಿದ ಬಳಿಯು
ಕುರುಕ್ಷೇತ್ರ ಕಡಿದಾಡಿ ಮಡಿದ ಬಳಿಯು
ಹರಕ್ಷೇತ್ರ ಕ್ಷೇತ್ರಗಳು ಹಲಬರಡಗಿದ ಬಳಿಯು
ವಿರಚಿಸಿ ಹೇಳುವರೆ ವಿಪರೀತ ಕೇಳಿ
ಹರ ಹರ ಮಹಾದೇವ ನಿಂದಕರಿಗೋಸುಗರ
ಪರಶಿವನ ಕ್ಷೇತ್ರ ಮೂಲಗಳ ನೆಗಳಿ
ಅರುಹಿ ತೋರಿಸಿ ಮೂಗ ಕೊರೆದು ಸಾಸಿವೆಯುಪ್ಪ
ನರೆದು ಸುಣ್ಣವನಿಡಿಸುವರು ಕರ್ತರು ॥೫॥

ಆಶೆಯಾಮಿಷ ಮರಹು ಮೋಸ ಮುಕ್ಕರದ
ಭಾಷೆಗೇಡಿಗಳು ಶಿವಭಕ್ತರಹುದೆ
ದೋಷಿ ಪಾತಕರಿಂತು ದೊಡ್ಡ ಮಾತಾಡದಿರಿ
ಮೋಸಹೋದಿರೇಕೆ ಕೆಟ್ಟು ಬೊಗಳಿ
ನಾಶವಾದಿರೇಕೆ ಗುರುಹಿರಿಯರನು ಹಳಿದು
ಘಾಸಿಯಾದಿರೇಕೆ ಗರ್ವದಲಿ

ಪಾಷಂಡಿ ಮತ ಬೇಡ ಪರಮರಿಕೆಯಲರಿರೊ
ಈಶನನದರೊಳಗೆ ತರ್ಕವೇನರ್ಕವ ॥೬॥

ಗತಗೋಷ್ಠಿಯಿಂದಲಿ ಗಳಹಬಹುದೆ ವ್ಯರ್ಥ
ಮತಿಹೀನ ಪಂಚಮಹಾಪಾತಕರಿದ್ದ
ಶತಭಸ್ಮಯೆಂದು ಆಕಾಶ ನುಡಿದುದು ಸತ್ಯ
ಕಥೆಯ ಬಲ್ಲವರಲಿಕ್ಕಹೋಗಿರೈ
ಪ್ರಿಥಿವಿ ಪೀಠಿಕೆ ಲಿಂಗವಾಕಾಶವೆಂದೆನುತ
ಶ್ರುತಿ ಸಾರುತಿವೆ ಅರುಹಿ ತೋರಿಸುತಲಿ
ಪ್ರಥಕ ವಾದದ ಮಾತು ಪೂರೈಸಲರಿಯವು
ಹತವಿನ್ನುವಳಿ ನಾಶ ಮಥನದಿಂದ ॥೭॥

ನಿಂದಿಸಾಡಿನ್ನು ನರಕಕೆ ಬೀಳದಿರಿ ವ್ಯರ್ಥ
ವಂದನೆಯ ಮಾಡಿ ಗುರುಹಿರಿಯರಲ್ಲಿ
ಮುಂ ಮುಕ್ತಿಯ ಪಡೆಯಿರೊ ಪಡೆಯದಿದ್ದರೆ ಕೇಡು
ಎಂದೆಂದು ಯಮನ ಬಾಧೆಯು ತಪ್ಪದು
ಚಂದ್ರಶೇಖರನ ಶರಣರು ಬಂದು ಮರ್ತ್ಯದಲಿ
ಚೆಂದ ಚೆಂದದಲಿ ಡಂಗುರ ಸಾರಲು
ಕುಂದು ನಿಂದೆಯನಾಡಿ ಕುಹಕತನದಲಿ ಬೊಗಳಿ
ಹಂದಿ ನಾಯಿ ಜನ್ಮ ಮುಂದೆಯಿನ್ನು ॥೮॥

ಪೂರ್ವಶೈವವು ಶುದ್ಧಶೈವ ಮಾರ್ಗಶೈವ
ವೀರಶೈವವು ನಾಲ್ಕು ಶೈವಭಕ್ತಿ
ಪೂರ್ವಶೈವಕೆ ಪೃಥ್ವಿಯ ಪೂಜೆ ಬಸವೇಶ
ಸೂರ್ಯಸಿಂಹಾಸನಕೆರಗುತಿರನೆ
ಕಾರಣಿಕ ಶುದ್ಧ ಕಪ್ಪಡಿ ಸಂಗಮಕೆ ಎರಗಿ
ವೀರಪರರ ಮಾರ್ಗಶೈವಕೆ ಎರಗುವ
ವೀರಶೈವಾಚರಣೆಯನು ಮಾಡಿ ಎರಗಿದನು

ಧೀರ ಬಸವಣ್ಣ ಮತ್ತೇಕೆ ಮಾತು ॥೯॥
ಅಗಸಿ ಸಿಕ್ಕದಲಿರಲಿ ಅಜ್ಞಾನಿ ಕುರುಡ ಊರ
ಬಿಗುಸೆ ಹೋಯಿತು ಎಂದೆನಲುಬಹುದೆ
ಅಘಹರನ ಶರಣರಾನಂದದಿರವನು ನೋಡಿ

ಬೊಗಳುವಿಯಾ ಕುನ್ನಿ ಬೊಗಳಬಹುದೆ
ನಗೆಗೇಡಿಯಾಗಿ ನಾನಾ ವಿಧ ದುರಿತದಲಿ
ವಿಗಡ ಸಾವನೆ ಸಾವೆ ಪಾಪಿ ನಾನು
ಜಗಕೆಲ್ಲ ಧರ್ಮ ಸಾರುವರನೊಪ್ಪೆನು ದಾಸಿಯ
ಮಗನು ವೇಶಿಯ ಪುತ್ರ ಪಿತನನರಿಯ ॥೧೦॥

ನಾಯಿ ಬಲ್ಲುದು ಸಲಹಿದವರವದಿಂದಧಮ
ಬಾಯಿಂದ ಬೊಗಳುವೆನು ಗುರುಹಿರಿಯರ
ನಾಯಿ ಬೊಗಳಿದರೆ ಬೆಳಗಹುದೆ ನಿಂದಕನಂತೆ
ಣೆಯೆಂಬ ತಾಸುಗಂಟೆಲೊ ಶರಣರು
ಮಾಯಕೋಳಾಹಳ ಕಳುಹೆ ಮರ್ತ್ಯಕೆ ಬಂದು
ನೇಯದಟ್ಟಿದ ಅವರನೆಚ್ಚರಿಸುತ ಬಾಯ
ಹೊಯಿಸುತಲಿ ಬರ ಭಯ ರೋಗದಲಿ ತುಳಿಸಿ ಗದ್ದಿ
ಗೆಯ ರಾಯ ಶಿವಯೋಗಿ ಗುರು ಗುಂಡ ಬಂದ ॥೧೧॥

ತೋಹೆ–೧೩, ಪದ–೬

■

೧೪

ನಂಬಬೇಕು ಗುರುವ ಕಾಣಿರೈ ನಿಶ್ಚಯಿಸಿ
ನಂಬಬೇಕು ಗುರುವ ಕಾಣಿರೈ
ನಂಬಬೇಕು ಗುರುವ ಜಗದ

ಡಂಬಕವ ಜರಿಯಬೇಕು ॥ಪಲ್ಲ॥
ತನ್ನ ತನುವು ನಿತ್ಯವಲ್ಲ
ಹೊನ್ನು ಹೆಣ್ಣಿಗಾಡಲಿಲ್ಲ
ಅನ್ಯಾಯವೆಂಬುದೊಲ್ಲ
ಚೆನ್ನ ನಡೆಯ ನಡೆಯಿರೆಲ್ಲ ॥೧॥

ಈಗ ಆಗಲೆಂಬುದರಿಯ
ಬೀಗಿ ಬೆರೆಯಲೇಕೆ ಬರಿಯ
ಭೋಗಕೊಲಿಯಬೇಡ ಸಿರಿಯ
ಧಗೆ ಇರದು ನೋಡು ಖರೆಯ ॥೨॥

ಚಿಕ್ಕ ಸತಿಯು ಬಂದಡಿಲ್ಲ
ಮಕ್ಕಳೆನಗೆ ಆದಡಿಲ್ಲ
ಲಕ್ಷ ಹೊನ್ನು ನೋಡಿ ನೋಡಿ

ದು:ಖಪಟ್ಟರಿಡುವುದಿಲ್ಲ ॥೩॥
ತಾಯಿ ತಂದೆ ಅಳಲುತಿರಲು
ಮಾಯೆ ಸತಿಯು ಮರುಗುತಿರಲು
ಬಾಯಿಬಿಡಲು ಮಕ್ಕಳೆಲ್ಲ
ರಾಯ ಯಮನು ಬಿಡುವನಲ್ಲ ॥೪॥

ಅಣ್ಣ ತಮ್ಮ ತನಗೆ ಇಲ್ಲ
ಹೆಣ್ಣು ಹೊನ್ನು ಮೊದಲೆಯಿಲ್ಲ
ಬಣ್ಣ ಭಜನೆ ನಂಟರಿಲ್ಲ
ಪುಣ್ಯಪಾಪ ತನ್ನವೆಲ್ಲ ॥೫॥

ಹಿತ್ತಿಲು ಬಾವಿ ಮನೆಯು ಮಗಿಲು
ತೊತ್ತಿರು ಮಡದಿ ಸೊಸೆರು ಮಕ್ಕಳು
ಅರ್ಥವ ಅನಂತ ಗಳಿಸಿ
ಅರ್ತಿಯಲಿರಲು ಮರಣ ಬಿಡದು ॥೬॥

ಹೊಲನು ಹೊಡು ತೋಟ ದೊಡ್ಡಿ
ಬಲನು ಭಾಗ್ಯವೆಗ್ಗಳಿಸೆ
ಫಲವು ಏನು ಮುಂದೆ ಮರಣ
ಸಲೆ ಎಂದು ಕೂಗುತಿದೆ ಕೋ ॥೭॥

ತೇಜ ಭಾಗ್ಯದಿಂದ ಬಾಳಿ
ರಾಜ ದೇಶಗಳನು ಆಳಿ
ತೇಜಿ ಏರಲಿನ್ನು ಕೇಳಿ
ಸಾಜವಿದು ಜೀವಗಾಳಿ ॥೮॥

ಚಿನ್ನ ಬೆಳ್ಳಿಯುಟ್ಟರೇನು
ಸಣ್ಣ ಬಣ್ಣ ತೊಟ್ಟರೇನು

ಬೆಣ್ಣೆ ಹಾಲನುಂಡರೇನು
ಕಣ್ಣುಗಾಣೆ ಸಾವು ಸನಿಯ ॥೯॥

ಉಂಡು ಉಟ್ಟುದಿಲ್ಲವೇನು
ಕೊಂಡುಕೊಟ್ಟುದಿಲ್ಲ ನಾನು
ಹಿಂಡುಯೆಮ್ಮೆ ಮನೆಯ ಹಯನು
ಹಿಂಡಿ ಹಂಡೆ ತಂದರೆ ಬಿಡರು ॥೧೦॥

ಅವರನೊತ್ತಿ ಇವರನೊತ್ತಿ
ಸವರಿ ತಂದು ಬದುಕುಮಾಡಿ
ಭುವನದೊಳಗೆ ಬಾಳ್ವೆನೆನಲಿ
ಜೀವನ ಜಾಲ ಬಂತು ನನಗೆ ॥೧೧॥

ಅಲ್ಲಿ ಇಲ್ಲಿ ಗಳಿಸಿ ತಂದು
ನಿಲ್ಲದೆಲ್ಲ ಧನವ ಕೂಡಿ
ಬಲ್ಪಿನಿಂದ ಬಾಳ್ವೆನೆನಲಿ
ಹೊಲ್ಲ ಯಮನು ನಿಲ್ಲದೊಯ್ವ ॥೧೨॥

ಕಾಡಿ ಬೇಡಿ ಕೊಂಪೆಯಲ್ಲಿ
ನಾಡನೆಲ್ಲ ಪಿಡಿಸಿ ತಂದು
ಕೆಡುವೊಡಲ ಹೊರೆವುತಿರಲು
ಓಡಿ ಬಂದು ಕಾಲನೊಯ್ವ ॥೧೩॥

ಏಕೆ ಆಸೆ ಮಾಡಬೇಕು
ಈ ಕಾಯವಿರದು ಖರೆಯು
ಕಾಕು ಆಗಿ ಕೆಡಲಿಬೇಡ
ಜೋಕೆಯಲಿ ಶಿವ ಭಜಿಸು ॥೧೪॥

ಹಿಂದೆ ಚಕ್ರವರ್ತಿಗಳಿದ್ದು
ಮಿಂದು ಉಂಡು ಹೋದರಲ್ಲದೆ
ನಿಂದುದಿಲ್ಲದಾರು ಸಾಕ್ಷಿ
ಯಿಂದ ತಿಳಿಯೊ ಅರುಹ ಕುರುಹ ॥೧೫॥

ಬರಿದೆ ಭ್ರಾಂತಿಗೊಂಬಿರೇಕೆ
ಇರಲಿ ಇಲ್ಲಿ ಮರ್ತ್ಯದೊಳಗೆ
ಹರನ ಭಜಿಸು ಭಕ್ತಿಯಿಂದ
ದುರುಮರಣ ಮುಸುಕಿ ಅವಕೆ ॥೧೬॥

ಮಳ್ಳುಮಾರಿ ದೆವ್ವ ಹೊಡೆದು
ಕಳ್ಳರಿರಿದು ಅರಸು ಬಡಿದು
ಕೊಳ್ಳಿ ಸರ್ಪ ನೀರು ವಿಷವು
ತಳ್ಳಿ ಉರುಲು ತಗುಲಿ ಸಾವೆ ॥೧೭॥

ಹರನು ಹಾಕಿದ ಮಾಯೆ ಬಲೆಯ
ನರನು ಗೆಲಲು ವಶವಲ್ಲವು
ನರಕಿ ದೇಹವಿದನು ನಚ್ಚಿ
ಸಿರಿಗೆ ಉಬ್ಬಿ ಉರಿಯಲಿಲ್ಲ ॥೧೮॥

ತುಪ್ಪ ಬೋನ ಉಂಡುಯೆದ್ದು
ಕಪ್ಪುರ ವೀಳ್ಯಗಳನು ಮೆದ್ದು
ಪುಷ್ಪಗಳನು ತುರುಬಿ[ಗಿ]ದ್ದು
ಮುಪ್ಪುಮರಣ ಬಂತು ಕದ್ದು ॥೧೯॥

ಹಲ್ಲು ಹುಳುಕು ಆಗತಾವ ಕೋ
ಚೆಲ್ವ ರೋಮ ಬೆಳ್ಳಗಾಗಲು
ನಿಲ್ಲಲಾರದೆ ತಲೆ ನಡುಗಿತು
ಇಲ್ಲೆ ನೋಡು ಇದರ ಕೇಡು ॥೨೦॥

ಕರೆದರೇಕೊ ಕೇಳಲಿಲ್ಲ
ಹರಿದು ಕಾಣ ದೃಷ್ಟಿ ಕೆಟ್ಟು
ಸರನೆ ಏಳಲಾರೆ ಬೀಳ್ವೆ
ಮರಣ ಬಯಸಿ ಮರೆತಿಹೆನು ॥೨೧॥

ಸಾಲಗಳನು ಮಾಡಿ ತಿಂದು
ಮೇಲೆ ಬದುಕ ಬಲಿದು ಕೆಲೆದು

ಕಾಲವಾದ ಮೇಲೆ ಯಮನು
ಹೊಲ್ಲಗೊಲೆಯ ಕೊಲ್ಲದಿರನು
ದಾನಗಳನು ಮಾಡಲೊಲ್ಲ
ಏನು ನಡೆಯ ನಡೆದುದಿಲ್ಲ
ತಾನು ಸತ್ತು ಭವಕೆ ಬರಲಿ
ಶ್ವಾನನಾದರೊಡಲಿಗಿಲ್ಲ ॥೨೩॥

ಅಂತು ಕಾರಣದಲಿ ನಡೆಯ
ನೆಂತು ನಡೆಯಬೇಕು ಸತ್ಯ
ಭ್ರಾಂತನಾಗಬೇಡ ಕಡೆಯ
ನಿಂತು ನೋಡಿ ನಂಬು ನುಡಿಯ ॥೨೪॥

ಪಾಪಗಳನು ಜರೆಯಿರಯ್ಯ
ತಾಪತ್ರಯಗಳನು ಕಳೆಯಿರಯ್ಯ
ಕೋಪ ಕ್ರೋಧವ ಅಳಿಯಿರಯ್ಯ
ಭಾಪು ಗುಂಡಗೆರಗಿರಯ್ಯ

ತೋಹೆ-೧೪, ಪದ-೪೦೪

■

೧೫
ಕೇಳಿರಯ್ಯ ಸತ್ಯವು ನಿಜವಿದ್ದರು ಕೀರ್ತಿಯೊಡೆದುದನು ಕೇಳಿ
ಕೋಳಹೋಗಿ ಮನ ಪಾಪಕೆ ಬಿದ್ದರು ಕೆಟ್ಟು ಹೋದುದನೆ ಕೇಳಿ ॥ಪಲ್ಲ॥
ಧರ್ಮರಾಯ ಧರ್ಮವ ತಾ ಬಿಡದಲಿ ದೈವವ ಕಂಡನು ಕೇಳಿ
ಕರ್ಮದಿಂದ ಕೌರವ ಕಾಂಕ್ಷೆಯಲಿ ಕಷ್ಟಕೆ ಬಿದ್ದನು ಕೇಳಿ
ನಿರ್ಮಲಚಿತ್ತನು ಬಿಲ್ಲಮರಾಯನಿಗೆ ನಿಜಪದವಾದುದ ಕೇಳಿ
ದುರ್ಮನ ಚಿತ್ತನು ನಾಗಾರ್ಜುನನ ತಲೆ ಚಕ್ರಾಹುತಿ ಕೇಳಿ ॥೧॥

ಹಿರಿಯರ ಕಂಡರೆ ಶರಣೆಂದವರಿಗೆ ಹಿತಕರ ಒಳಿತು ಕೇಳಿ
ಹಿರಿಯರ ಕಂಡು ವಾರಿಲಿ ಹೋದರೆ ಮರಣದ ಬೆಳೆ ಮುಂದೆ ಕೇಳಿ
ಶರಣರ ಸಂಗವ ಮಾಡಿದವರು ಶರಣರೆ ಆಹರು ಕೇಳಿ
ನರಕಿಯ ಸಂಗವ ಮಾಡಿದವರು ನರಕಕೆ ಬೀಳ್ವರು ಕೇಳಿ ॥೨॥

ಮುನಿ ಕಾಡಲು ಮರೆದುಸಿರ್ದುದಿಲ್ಲ ಹರಿಶ್ಚಂದ್ರ ಸತ್ಯವನು ಕೇಳಿ
ಘನವಾದದಿ ವಾಣಿಪತಿ ಹುಸಿದು ಗೂಡಿಗೆ ಹೋದನು ಕೇಳಿ
ಜನದರಿಕೆಯ ಕಳ್ಳರು ಕೊಲೆಗಳುಕಿ ನನ್ನಯ್ಯನಾದನು ಕೇಳಿ
ತೊನಸಿಯೆನುತ ಕೊಂದ ಮಾಂಡವ್ಯ ಬ್ರಹ್ಮನ ಶೂಲಕೆ ಬಿದ್ದನು ಕೇಳಿ ॥೩॥

ಅಂಜುತ ಪಾಪಕೆ ಅಳುಕಿ ನಡೆವುತಿರೆ ಅಹುದಹುದೆಂಬರು ಕೇಳಿ
ಅಂಜದೆ ಪಾಪಕೆ ಮುಂದುವರಿವುತಿರೆ ಅವನಲ್ಲೆಂಬರು ಕೇಳಿ
ಕುಂಜರ ಚರ್ಮಾಂಬರನ ಪೂಜಿಸುವ [ಸು]ಶೀಲನೆ ಜಾಣನು ಕೇಳಿ
ರಂಜನೆ ದೈವದ ರಾಟಿಗೊಲಿವ ಭವಭಂಜನ ಭವಿಯವ ಕೇಳಿ ॥೪॥

ಅನ್ನದಾನವನು ಮಾಡಿದ ಸಿರಿಯಾಳಗಷ್ಟೈಶ್ವರ್ಯವನು ಕೇಳಿ
ಹೊನ್ನದಾನವನು ಮಾಡಿದ ಕರ್ಣಗೆ ಒಡಲುರಿಯಾರಿತು ಕೇಳಿ
ತನ್ನೌದಾರದಿ ಭೂದಾನವನು ವಿಕ್ರಮ ಕೊಟ್ಟನು ಕೇಳಿ
ತನ್ನಹಂಕಾರದಿ ಕೊಟ್ಟ ಬಲಿಗೆ ಮುಂದೆ ಬಂಧನವಾದುದ ಕೇಳಿ ॥೫॥

ದಾನ ಧರ್ಮಗಳ ಮಾಡಿದವರು ಧನಪತಿಯಹರು ಕೇಳಿ
ಏನು ದಯ ಚಿತ್ತವಿಲ್ಲದ ಮನುಜರಿಗೆಂದೂ ದಾರಿದ್ರವು ಕೇಳಿ
ಧ್ಯಾನ ಮೌನ ವ್ರತ ತಪ್ಪದೆ ನಡೆದರೆ ತಾನೆ ಶರಣನು ಕೇಳಿ
ಧ್ಯಾನ ಮೌನ ವ್ರತ ತಪ್ಪಿದನಾದರೆ ಕೀನಾಶನ ಕೊಲೆ ಕೇಳಿ ॥೬॥

ಹಾದರದ ಬೊಮ್ಮಯ್ಯನ ಸತ್ಯಕೆ ಹರನೊಲಿದಿದ್ದನು ಕೇಳಿ
ಹಾದರವಾಡಿದ ನರರಿಗೆ ಮುಂದೆ ಯಮಬಾಧೆ ಬಂದುದನೆ ಕೇಳಿ
ಈ ಧರೆಯೊಳು ಕನ್ನದ ಮಾರಯ್ಯಗೀಶ್ವರನೊಪ್ಪಿದ ಕೇಳಿ
ಶೂದ್ರಕ ವೀರನ ತಲೆ ಕಳಿವಿಲಿ ಕಳೆ ಛಲದಿ ಕಟ್ಟಿತು ಕೇಳಿ ॥೭॥

ಅನುಶ್ರುತ ಧ್ಯಾನವು ಮನದೊಳಗಿದ್ದರೆ ಆತನೆ ಶಿವಭಕ್ತನು ಕೇಳಿ
ತನುಗುಣದಿಚ್ಛೆಗೆ ತಲ್ಲಣಿಸುವವನು ತಾನೆ ನರಕಿಯು ಕೇಳಿ
ವಿನಯವು ವಿವರವು ವಿಚಾರವಿದ್ದರೆ ಸಜ್ಜನನೆಂಬರು ಕೇಳಿ
ಮನಹೀನ ದೂಷಕ ಹಿರಿಯರ ನಿಂದಿಸೆ ದುರ್ಜನನೆಂಬರು ಕೇಳಿ ॥೮॥

ಶರಣೆನೆ ಮುತ್ತೈದಾಗೆನೆ ಸತ್ತ ಪುರುಷ ಬದುಕಿದುದ ಕೇಳಿ
ಪರವಾದಿ ನಿಂದಿಸೆ ಹರಶರಣರು ಇರಿದುಕೊಂದುದನೆ ಕೇಳಿ

ಗುರು ಗುಂಡನ ನುಡಿಯ ನಡೆದವರಿಗೆ ಪರಮನೊಲಿವನಿದ ಕೇಳಿ
ಗುರು ಮಾರ್ಗವ ತಪ್ಪಿದ ಪಾತಕರಿಗೆ ಬರ ಭಯ ಮಾರಿಯು ಕೇಳಿ ॥೯॥

ತೋಹೆ-೧೫, ಪದ-೧೧೩

■

೧೬

ಮಾತ ಹೇಳುವೆನು ಮರೆಯದಲೆಲ್ಲರು ಮನಶುದ್ಧಗಳಲಿ ಕೇಳಿ
ನೀತಿಯ ನುಡಿಗಳ ನಿಜ ತಾರ್ಕಣ್ಯವ ಎಚ್ಚರಿಕೆಯಲಿದ ಕೇಳಿ ॥ಪಲ್ಲ॥

ಮೃದುನುಡಿಯಾಡಲು ಸರ್ವರೊಡನೆ ಮಹ ಒಳ್ಳಿದನೆಂಬರು ಕೇಳಿ
ಮದದಿ ಸೊಕ್ಕಿ ಮಹ ಗರ್ವದಲಿದ್ದರೆ ಛೀ ಛೀ ಎಂಬರು ಕೇಳಿ
ಕದನಕಪಟಕ್ರೋಧಕೆ ಹಿಮ್ಮೆಟ್ಟಲು ಕರುಣಿಯೆಂಬರಿದ ಕೇಳಿ
ಕದನಕಪಟ ಕ್ರೋಧಕೆ ಹೆಚ್ಚುತಲಿರೆ ಅಧಮರೆಂಬರಿದ ಕೇಳಿ ॥೧॥

ಮಾತಾಪಿತರ ತೆರನರಿತು ಮನ್ನಿಸಲು ಕ್ಷುತಿ ವಡೆವರಿದ ಕೇಳಿ
ಮಾತಾಪಿತರ ಸೊಕ್ಕಿಲಿ ಲೆಕ್ಕಿಸದಿರೆ ಮಕ್ಕಳೆ ಸಾಕ್ಷಿಯು ಕೇಳಿ
ನೀತಿದಪ್ಪದಲಿ ನಡೆವಂಥವರನು ಅಹುದಹುದೆಂಬರು ಕೇಳಿ
ನೀತಿದಪ್ಪಿದ ಪಾತಕ ಮನುಜರನಾರೂ ಒಪ್ಪರು ಕೇಳಿ ॥೨॥

ಆವ ಜಾತಿಯಾಗಲಿ ಸತ್ಯದಲಿರೆ ಅವರ ಜರೆಯದಿರಿ ಕೇಳಿ
ಕೇವಲ ಕುಲಜನು ಕೆಟ್ಟು ನಡೆವುತಿರೆ ಕೆಲಸಕೆ ಬಾರನು ಕೇಳಿ
ಜೀವನ ಗುಣಗಳನಳಿದ ಭಕ್ತನೆ ಪಾವನಾತ್ಮಕನು ಕೇಳಿ
ಜೀವನ ಗುಣಗಳನಳಿಯದ ನರಗುರಿ ಮೂವಿಧಿಗೊಳಗವ ಕೇಳಿ ॥೩॥

ತನ್ನವರಿಚ್ಛೆಯ ನುಡಿದು ಅನ್ಯರೆಂದು ಭಿನ್ನವಾಡದಿರಿ ಕೇಳಿ
ತನ್ನವರಾಗಲಿ ಅನ್ಯರಾಗಲಿ ಅನ್ಯವ ನುಡಿಯದು ಕೇಳಿ
ಗನ್ನಘಾತಕವು ಹದಿರು ಚದುರುಗಳನಿನ್ನು ನುಡಿಯದಿರಿ ಕೇಳಿ
ಗನ್ನಘಾತಕವು ಹದಿರುಚದುರಿರಲಿನ್ನು ಯಮ ಕೊಲ್ಲುವನು ಕೇಳಿ ॥೪॥

ಕಂಡವರೊಳು ಕಾಳ್ಗೆಡೆದಾಡುವುದು ಕಾರಣವಲ್ಲ ಕೇಳಿ
ತೊಂಡು ಮೊಂಡು ಮಾಡೊಡಲ ಹೊರೆದರೆ ದಂಡನೆ ಮುಂದೆ ಕೇಳಿ

ಹಿಂಡು ಪಾಪಗಳಿಗೊಳಗಾಗದೆ ಮನ ಹೇಸಬೇಕು ನಿಜ ಕೇಳಿ
ಗುಂಡಬಸವ ಹೇಳಿದ ಡಂಗುರಗಳ ಗುಣದಲಿ ಓದಿಸಿ ಕೇಳಿ ॥೫॥

ತೋಹೆ೧೬, ಪದ-೧೧೮

■

೧೭

ಮಾಡು ಮಾಡು ಮಹಲಿಂಗ ಧ್ಯಾನ ಮರೆಯದೆ
ಮಾಡು ಮಹಿಮರಿಗೆ
ಕೂಡು ಕೂಡು ಕುಲದಲಿ ಯಾರಾಗಲಿ ನಡೆ ದೃಢ
ಮೃಡ ಕೃಪೆಯುಳ್ಳವರನು ॥ಪಲ್ಲ॥

ಇರುಳು ಹಗಲು ಗುರುಸ್ಮರಣೆ ಇರುವವರಿಗೆ
ಪರಸತಿ ಪರಧನ ಜರಿದವರಿಗೆ
ಹರಭಕ್ತಿಗೆ ಹರುಷಿತರಾದವರಿಗೆ
ಪರಮಾನಂದದ ಸುಖಿಗಳಿಗೆ ॥೧॥

ಭಕ್ತ ಮಾಹೇಶ ಪ್ರಸಾದಿ ಪ್ರಾಣಲಿಂಗಿಗೆ
ಸತ್ಯ ಶರಣರ ಐಕ್ಯರಿಗೆ
ಅತ್ಯತಿಷ್ಠದ್ದಶಾಂಗುಲಭವನ
ನಿತ್ತಿತ್ತಲಿ ತಹ ನಿತ್ಯರಿಗೆ ॥೨॥

ಅಂಗಭೋಗಗಳನಳಿದಂಥವರಿಗೆ
ಮಂಗಳ ಮಹಿಮೆಯ ಪುರುಷರಿಗೆ
ಸಂಗನ ಬಸವನ ನೆನೆವಂಥವರಿಗೆ
ಲಿಂಗಮಯವು ಸರ್ವಾಂಗರಿಗೆ ॥೩॥

ತೋಹೆ-೧೭, ಪದ ೧೨೧

■

೧೮

ತನ್ನೊಳಗೆ ತಾನರಿದು ತನುಮನ ಶುದ್ಧದಲಿರದೆ
ಅನ್ಯರ ಮಾರ್ಗವನಣಕಿಸಿ ಸೆಣಸುವ ಅಧಮಗೆಲ್ಲಿಯ ಭಕ್ತಿ ॥ಪಲ್ಲ॥

ಗುರು ತನಗೆ ದೀಕ್ಷೆಯನು ಗುಣದಲಿ ಕರುಣಿಸಿದಂದು
ಪರಶಿವ ಧ್ಯಾನವ ಧ್ಯಾನಿಸು ಮಗನೆ ಪರಿಣಾಮದಲೆಂದು
ಶಿರದಲಿ ಭಸಿತವ ಧರಿಸಿ ಶ್ರೀಗುರು ಬೋಧೆಯ ಪೇಳೆ
ಪರರನು ಜರೆವರೆ ಪಾತಕ ಮನುಜ ಫಲ ನಿನಗೇನುಂಟು ॥೧॥

ಮಾಟವನೊಂದನೆ ಪಿಡಿದು ಮದದಲಿ ಬೆರೆಯದಿರಿ
ಕೂಟವನರಿದಿರೆ ಅಂಗಲಿಂಗಸ್ಥಳಕುಳವೆಂತೊಳಗೆಂಬ
ಬೇಟವ ತಿಳಿಯದೆಯ್ದಿರಾ ಬೇಗದಿ ನಿಂದಿಸಬೇಡ
ಆಟವು ಹರನದು ಆರಾರವರಿಗೆ ಅವರಂತಭವನಿಹ ॥೨॥

ಮತಕೆ ಜ್ಞಾನವು ಮೂರೆ ಮರ್ಕಟ ಪಿಪೀಲಿಕ ವಿಹಂಗ
ವ್ರತವು ಅನೆಕವು ಒಡೆಯನ ಭಕ್ತಿಗೆ ಒಂದೆ ತೆರನುಂಟು
ಮತಿಗೆಟ್ಟು ನುಡಿಯದಿರಿ ಮಲಹರನ ಒಲಿಸಲೀ ಪರ
ಸತಿ ಪರಧನ ಪರನಿಂದೆಯ ವರ್ಜಿಸೆ ಪರಮನೊಪ್ಪುವ ತಾನೆ ॥೩॥

ಮಾತನು ಮಮಕರಿಸಿಕೊಂಡು ಮಥನವ ಜೋಡಿಸಿಕೊಂಡು
ಏತಕೆ ಬೆರುದಗೆ ಗೀತ ಗೋಷ್ಠಿಗಳು ಯಾವುದು ಘನ ನಿಮಗೆ
ಆ ತೆರದಿ ನೀವಿಹುದು ಅವರಿವರ ಗೋಡವೇನು
ಪಾತಕವಹುದು ಪರಾಮರಿಸುವುದು ಪಕ್ಷವಾದದಿಂದ ॥೪॥

ಅಗಲನು ತನ್ನದು ತಾನೆ ಅದು ಶೋಧಿಸಿ ಉಣ್ಣದಲಿ
ಹಗರಣವಾಡುವವನಂತೆಯು ಹಲಬರ ಊಟದೆಡೆಯನಿಂದು
ತೆಗೆ ಕಪ್ಪನೆಂದೆನಲು ತನಗೇನು ಸಂಬಂಧ
ಅಘಹರ ಭಕ್ತಿ ಆನಂದಕೆ ನೀವಲ್ಲವಹುದೆನಲೇಕೆ ॥೫॥

ಇಂದುಮೌಳಿಯ ಭಕ್ತಿ ಇದಕೆ ಒಂದೆ ಮುಖವೆ
ಚೆಂದದಿ ಮರ್ತ್ಯದಲಾರು ದರುಶನ ತೋರಿಕೆ ಛಲವ್ರತ ಕೆಡಕುಂಟೆ
ಅಂಧಕರಾನೆಯ ಕಂಡವರಂತೆ ಮಾಡದಿರಿ
ನಂದಿವಾಹನನ ನಂಬಿದ ಶರಣರ ನರಗುರಿ ಜರಿಯದಿರಾ ॥೬॥

ಶಿವನನು ನೆನೆಯದಲಿದ್ದು ಮುನ್ನ ಶಿವನನೆ ಕಾಲಲಿ ಒದ್ದು
ಅವಗಡಗಳ ತಂದಭವನು ಒಡ್ಡಲು ಅದನಾಗಳೆ ಗೆದ್ದು
ರವಿ ಸೋಮಧರನೊಲಿಯೆ ರಜತಗಿರಿಯ ಸಾರಿದರು
ಅವರಿಗೆ ಸ್ವಾಮಿಯು ಒಲಿದುದರಿದಿನ್ನಂತಿಂತೆನ್ನದಿರಾ ॥೭॥

ಷಡುಚಕ್ರ ಭೇದದೊಳು ಷಡುಲಿಂಗವುಂಟೆಂದು
ಷಡುಸ್ಥಳ ಬೋಧೆಯು ಸಾರುತಲದ ಕೋ ಸಹಸ್ರದಳವೆಂದು
ಬಿಡು ನಿನ್ನ ತರ್ಕಿಸು ಬಿನುಗುಬುದ್ಧಿಯ ಬೇಡ
ನಡೆಯುಳ್ಳರೆ ಭಕ್ತ ನಡೆಯಿಲ್ಲದಿರೆ ಭವಿ ದೃಢಶರಣರ ಕೇಳಾ ॥೮॥

ತತ್ವವು ಐದು ಲಿಂಗ ತನಗದ ಪರವಿಲ್ಲೆಂದು
ಯುಕ್ತವೆ ವೇದವು ಶಾಸ್ತ್ರಗಳೊಳಗೆ ಪಂಚಬ್ರಹ್ಮವೆಂದು
ವ್ಯಕ್ತದಲಿ ಸಾರುತಿರೆ ವಿವರಿಸಿ ತಿಳಿಯದೆ ಹಳಿಯೆ
ಶಕ್ತನು ಗುಂಡನು ಅಳುಕುವವನಲ್ಲ ಸಕಲಶಾಸ್ತ್ರಮಯನು ॥೯॥

ತೋಹೆ – ೧೮, ಪದ–೧೩೦

■

೧೯

ತುಳಿಸಬಂದನಯ್ಯಾ ಗೌಳ ತುಳಿಸಬಂದನು
ಪ್ರಳಯವೆಂಬ ಹಂತಿಗಟ್ಟಿ ಪಾಪವೆಲ್ಲವನು ॥ಪಲ್ಲ॥

ಮಾರಿ ಕಾಲ ಮ್ಲೇಂಛ ಸೂನೆಗಾರರೆಂದೆಂಬ ತನ್ನ
ಸೇರುವೆಯೊಳಿಂದ ಕಣ್ಣನು ಸವರುತ ಬಂದ
ಬೇರೆ ತನ್ನ ಲೀಲೆ ಜಲದ ಕಣಕೆ ನೀಡೆಂಬ
ಸಾರಿಸಿದ ಬಸವ ಗುಣದಿಂದ ಕಣದಿಂಬ ॥೧॥

ಶಂಭುವೆಂಬ ಒಕ್ಕಲಿಗ ಸವರ ಕಳುಹಿದ
ಜಂಬುದ್ವೀಪವೆಂಬ ಕಣದ ಹಸನ ಮಾಡೆಂದ ಧರ್ಮ
ತುಂಬಿದ ಬೀಜವನೆಲ್ಲ ಕಡೆಗೆ ಉಳುಹಿದ ಪಾಪ
ಸಂಭ್ರಮದ ರಾಶಿದೆನೆಯ ಕೂಡಿ ಹಾಕಿದ ॥೨॥

ಅಂಬರದ ಹೊಲದ ಬೆಳೆಸ ಶಂಭು ತಾ ತಂದ
ಕುಂಭಿನಿಯೆಂಬ ಕಣಕೆ ಹಾಕಿ ರಾಶಿ ಮಾಡೆಂದ ಕೊರ
ಕೊಂಬ ಪರದರುಶನ ಅಪ್ಪಣೆಯಿಂದ ಕಣವ
ತುಂಬಿದ ತೆನೆಯನೆಲ್ಲ ತುಳಿಸಬೇಕೆಂದ ॥೩॥

ಮಾಯೆ ಕೇಡುಯೆಂಬ ಮಾಸಕೆಂದನು ಮತ್ತೆ
ರಾಯದಲ್ಲಣವೆಂಬ ಬೆಳ್ಳಿ ರೋಗ ಕರಿಯೆತ್ತು
ಆಯಗೆಡಿಸುವ ಅನೇಕ ಅವಗಡ ಹಂಡ ಚಿಂಚ್ಯೆತ್ತು
ನಾಯಕರ ಆಳು ಆಸೆಯ ಹಗ್ಗವ ಹಿಡಿದು ॥೪॥

ಅರ್ತಿಯಿಂದ ಹೊಲಿಯೆಂದು ಹೊಡೆವುತ್ತಿದ್ದನು
ಮರ್ತ್ಯದೊಳಗೆ ಹಂತಿ ಹೊಕ್ಕು ಮಹಾದೇವನು
ಧೂರ್ತವೆಂಬ ಸುಂಕದೊಳಗೆ ನಿಲುವರಾರಿನ್ನು
ಮತ್ತೆ ಕೇಡುಯೆಂಬುದು ಸುತ್ತಿ ತೊಳಗಿನ್ನು ॥೫॥

ತುಳಿಸಿದ ಹೊಲಿಯೆಂದು ಪಾಪ ತೆನೆಯ
ಸೆಳೆದನೆಚ್ಚರಿಕೆಯ ಬಾರಕೋಲಲಿ ಕೊನೆಯ
ಉಳುಹದೆ ತುಳಿದವೆತ್ತಿನ ಖುರ ಮೊನೆಯ
ಬೆಳಸೆಲ್ಲ ನಿಧಿಯಾಗಿ ಅಂಕಣಿದೆನೆಯ ॥೬॥

ತೆಂಕಲು ಬಡಗಲು ಪಡುವಲತ್ತಲಿ ತೆನೆ
ಸೋಂಕಿದರೆ ಸಿಡಿದು ಹೋದವು ಅವನು ಆಳಿಂದ
ಅಂಕಣೆಯ ಮಾಡಿ ಒರೆಸಿ ಅಲ್ಲಿ ಮೆಟ್ಟಿಸಿದ
ಅಂಕದ ಕೊಬ್ಬಿನ ತೆನೆ ಅಡಗಿದರೆ ಬಿಡದೆ ॥೭॥

ಚೆಂದಚೆಂದದ ಹಂತಿ ಇನ್ನು ನಿಂದಿರದೆಂದ
ಹೊಂದಿಕಿಂದ ನಡೆದುಬಂತು ಉತ್ತರದಿಂದ ಸೇತು
ಬಂಧ ರಾಮೇಶ್ವರ ಕಂಚಿ ತಿರುಮಲೆಗೆಂದ ಕಿ
ಷ್ಕಿಂಧ ವಿರೂಪಾಕ್ಷ ಕೆಟ್ಟು ಕೊಟ್ಟಗಳೆಂದ ॥೮॥

ಆಣವ ಮಾಯೆ ಕಾರ್ಮಿಕವೆಂಬ ರಾಗೋಲಿಂದಲಿ
ಹೂಣಿಕೆ ಆಳಿಲಿಂದಳಸಿ ಮತ್ತೆ ತುಳಿಸುತಲಿ

ಜಾಣತನದಿಂದ ನಿಧಿಯನಿಂತು ಒಟ್ಟುತಲಿ
ಸ್ಥಾಣುವೆಂಬ ಒಕ್ಕಲಿಗ ಮೆಟ್ಟನಿಕ್ಕುತಲಿ ॥೯॥

ಹೆಣ್ಣು ಹೊನ್ನು ಮಣ್ಣು ಮೂರುಕಾಲು ಮೆಟ್ಟನು ಬಸ
ವಣ್ಣ ನೆಂಬ ಪಾಲುಗಾರ ಮೆಟ್ಟಿ ನಿಂದನು
ಹಣ್ಗಿದಾಳಿಗೆಂದ ನಿಧಿಯನಿದಿರು ತೂರುವೆನೆಂದು
ಬೆಣ್ಣೆ ಹಾಲು ಬೋಧೆದಳಿದು ತೂರುತಿದ್ದನು ॥೧೦॥

ಕಡೆಗೆ ಬೀಳಲೀಸೆನೆಂಬ ಹೆಡಿಗೆಯಿಂದಲಿ ನಮ್ಮ
ಒಡವೆ ವಸ್ತುವೆಲ್ಲವನು ತೂರುತ್ತಿದ್ದರು
ಬಿಡದೆ ಕಳ್ಳರೆಂಬ ರಜಗಿಲಿಂದ ಉಡುಗಿ ನಮ್ಮ
ಸಡಗರ ಸಂಪ್ಪತ್ತನೆಲ್ಲ ಬಳೆಯುತ್ತಿದ್ದರು ॥೧೧॥

ಮನಬಂದ ಹಾಗೆ ರಾಶಿ ಅನುವಾಗಲು ಕೆಳಗೆ
ಗುನುಗು ಸಿಕ್ಕ ಹಾಗೆ ಆಳು ರಾಶಿ ಮಾಡಲು
ಪೆನುಗೊಂಡೆ ಪರ್ವತ ರಾಶಿ ದಿಳ್ಳಿ ಮಧ್ಯವನು ತನ್ನ
ಅನುವಿನಿಂದಲಿ ತುಳಿಸಿ ತೂರಿ ಅಳತೆ ಮಾಡಿದನು ॥೧೨॥

ಉತ್ತರ ಈಶಾನ್ಯಗಾಳಿ ಎತ್ತಿ ಬೀಸಲು
ತುರ್ತು ಬೇಗದಿಂದ ನಿಧಿಯನೆತ್ತಿ ತೂರಲು
ಮತ್ತೆ ಉಳಿದ ಕಾಳಿಗವರು ಬಂದು ನೆರೆಯಲು ಇ
ಪ್ಪತ್ತು ನಾಲ್ವರು ಹೆಡಿಗೆ ಹೊತ್ತು ಕಣವ ಬಳಿಯಲು ॥೧೩॥

ದುರ್ಗಿಯೆಂಬ ಮಾದಾರಿತಿ ಕಣನ ಹೊಕ್ಕಳು ಆಕೆ
ಬಗ್ಗಿ ಬಳಿಯಲೊಂದು ಕಾಳು ಉಳಿಯದಾದವು
ತೆಗ್ಗು ತೆವರನೆಲ್ಲ ಶೋಧಿಸಿ ಕುಪ್ಪೆ ಹಾಕಿದಳು ಹೀಗೆ
ಸುಗ್ಗಿ ಮಾಡಿಕೊಂಡು ತನ್ನ ಮನೆಗೆ ಹೋದಳು ॥೧೪॥

ಕೆಳಗೆ ಸಿಕ್ಕಿದಂಥವನು ಬಳಿದು ತಂದರು
ಡುಳಿದ ಕಾಳು ಮಣ್ಣು ಕೂಡಿ ಹಾಕಿದರು
ತಲೆ ಕೆಳಗೆ ಮಾಡಿ ಕೊಚ್ಚಿ ಹಸನ ಮಾಡಿದರು
ಹೊಲಗೇರಿಯತ್ತಲವ ಕೊಂಡಹೋದರು ॥೧೫॥

ವೇಧೆಯೆಂಬ ಮೊರಕೆ ಹಾಕಿ ಒರೆಸುತ್ತಿದ್ದಳು
ಶೋಧಿಸಿ ಪಾಪವೆಂಬ ಹರಳ ಕಳೆಯುತ್ತಿದ್ದಳು
ಕ್ರೋಧ ಕಪಟವೆಂಬ ಮಣ್ಣ ಕೊಚ್ಚುತ್ತಿದ್ದಳು
ಬೂದಿಯಾದ ಅಜ್ಞಾನವ ತೊಳೆಯುತ್ತಿದ್ದಳು ॥೧೬॥

ಹದಿನೈದು ಪಾಲು ಹೊಟ್ಟು ಅದು ಹಾರಿತು
ಸದೆಗೂಡಿ ಐದು ಪಾಲು ರಾಶಿಯುಳಿಯಿತು
ಅದನೊಮ್ಮೆ ಮುಗುಚಲು ಮೂರುಪಾಲು ಹೋಯಿತು
ತುದಿಗೆ ಎರಡು ಪಾಲು ನಿಜ ಉಳಿಯಿತ್ತು ॥೧೭॥

ಹಗಲಿರುಳೆಂಬ ಕೊಳಗದಲಳೆದು
ಯುಗಜುಗವೆಂಬ ಹಗೆಯಕೆ ಹಾಕಿದ
ನಿಗಮಗೋಚರ ಅರಸಗೆ ಕೋರನಿಕ್ಕಿದರೊಂದು
ಸುಗುಣ ಹುದುಕಾರರಿಬ್ಬರು ಸುಖದಲಿಂದ ॥೧೮॥

ಡಂಗುರಗಳು ಬಂದು ಸಾರುತಿವೆ ಸೊಕ್ಕಿ
ಅಂಗದಿಚ್ಚೆಗಳಿಂದ ಅಳುಕಲೊಲ್ಲೆ
ಕಂಗಾಣೆ ಕರ್ಮದ ಬಲದಿಂದಲಿ ಮುಂದೆ
ಭಂಗದೊಳಗಾಗಿ ಬಡಿಸಿಕೊಂಬೆ ॥೧೯॥

ಕಳ್ಳ ಹಾದರ ನಿಂದೆಯೆಂದರಳುಕೆ ಪಾಪಿ
ಹಳಿಹಂಡಿಯಾಗಿ ನಾ ಹರಿದದಕೆ
ಪ್ರಳಯವೆಂಬುದು ಬಂದು ತುಳುವುದಕೆ ಮುಂದೆ
ಉಳಿವ ಬುದ್ದಿಗಳುಂಟೆ ಅಳಿವುದಕೆ ॥೨೦॥

ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬ
ಸೀಮೆಗೆ ಸಿಕ್ಕದಿರಿ ಉಳಿದೆವೆಂಬರು
ತಾಮಸ ಬೇಡ ಗುರುಹಿರಿಯರೊಳು ಮುಂದೆ
ಸ್ವಾಮಿ ಗತಿಯೆಂದು ಎನ್ನಿ ನಿಜದಿಂದಲಿ ॥೨೧॥

ತೂಕವು ಪಾಪದಲಿರೆ ತಿಂಬೆನು ನನ್ನ
ಕಾಕು ಬುದ್ದಿಯ ಬಿಡೆ ಕಳ್ಳ ನಾನು

ಸಾಕ್ಷಿ ಡಂಗುರ ಬಂದು ಸಾರುತವಿನ್ನು ಕೇಳಿ
ಏಕಚಿತ್ತದಲಿರಿ ಉಳಿವಿರಿನ್ನು ॥೨೨॥

ಹಿಂದೆ ಮಾಡಿದ ಪಾಪವೆಲ್ಲವು ಭರ್ಗಸ್ಯವೆಂದನು
ಮುಂದೆ ಸತ್ಯದಿಂದ ನಡೆದರೆಂದನು
ನಿಂದೆ ಪರಸತಿ ಪರಧನವ ಜರಿಯೆಂದನು ನೀವು
ಬಂದು ಧರ್ಮಕಲ್ಯಾಣದಲಿ ನಿಂದಿರೆಂದನು ॥೨೩॥

ಬಂಬದು ಮುಂದೆ ದೈವದ ದುರಿತವೆಂದನು
ಹಂಬಲಿಸಬೇಡ ಅತ್ತಲಿತ್ತಲೆಂದನು
ಬೆಂಬಳಿಲಿ ಧರ್ಮಕಲ್ಯಾಣ ಸುತ್ತಲೆಂದನು
ಶಂಭುರಕ್ಷೆ ತಪ್ಪದೆಂದು ಸತ್ಯಕೆಂದನು ॥೨೪॥

ಬಸವಣ್ಣ ತಾನೆ ಬಂದು ಡಂಗುರವೆಂದು ತಂದು
ವಸುಧೆಯೊಳು ಸಾರಿಸಿದ ಕೆಡದಿರೆಂದು
ನಸುವ ನಡೆವ ನಾನು ಕೇಳದೆ ಇಂದು ಸೊಕ್ಕಿ
ಮಸಿ ಮಣ್ಣಾಗಿ ಹೋದೆ ಎಚ್ಚರವದೆಂದು ॥೨೫॥

ತೋಹೆ-೧೯, ಪದ-೧೫೫

■

೨೦

ಇಲ್ಲೆಂದರುಂಟು ಉಂಟೆಂದರಿಲ್ಲವು ಆಗಿ
ಎಲ್ಲರೊಳು ಭರಿತನಾ ಲಿಂಗ
ಕಲ್ಲುದೇಹವು ನಾಮದಲ್ಲಿ ಅಡಗಿದ ಮಹಿಮೆ
ಇಲ್ಲ ಉಂಟೆಂಬರಳವಲ್ಲ ॥ಪಲ್ಲ॥

ಅರಿವೆಂಬುದೆ ಲಿಂಗ ಮರವೆ ಭವಿಯೆಂದು ಭಂಗ
ಪರಾಮರಿಸಿ ನೋಡಿ ಈ ಅಂಗ
ಪರಮದೇವನ ಸಂಗ ಬ್ರಹ್ಮಾಂಡವದ ಹಿಂಗ
ನರರ ಪಿಂಡಾಂಡ ಸರ್ವಾಂಗ
ಅರಿವಾತ್ಮ ಲಿಂಗ ಕುರಿವಿನಾತ್ಮಕ ಭಂಗ

ತೆರನರಿತು ಜರಿ ಜಗದ ರಂಗ
ನರಕಿ ಮನುಜರ ದೊಂಗದಿರಕೆ ಮೆಚ್ಚನು ಸಂಗ
ಗುರುಮಾರ್ಗದಿ ನಡೆಯೆ ನಿಜಲಿಂಗ ॥೧॥

ಓಂಕಾರವೆಂಬುದೆ ಒಳಗೆ ಪ್ರಾಣವು ಪ್ರಣಮ
ಆಕಾರ ಆತ್ಮ ಅಕ್ಷರವು
ಓಂಕಾರ ಶಬ್ದ ನಿರಾಕಾರ ಲಿಂಗವು ಆಕಾರ ಬರಹವೀ ದೇಹ
ಓಂಕಾರ ಆಕಾರಗೂಡಿ ಲೀಲೆಗೆ ಬಂತು
ಝೇಂಕಾರಲಿಂಗ ಪರಿಪೂರ್ಣ
ಓಂಕಾರಮೂಲ ಪಂಚಾಕ್ಷರಿಯೆ ತತ್ವಗಳು
ಈ ಕ್ರಮಗಳನರಿದಿಹನು ಸಹಜ ॥೨॥

ನಾದ ವಕಾರವೆ ಬಿಂದು ತಾ ವೇದ್ಯ ಮಕಾರ ಕಳೆಯಾಗಿ
ಈ ದೇಹ ಜೀವಕ್ಕೆ ಇದೆ ಮುಖ್ಯ ನಿರ್ಮಿತಕೆ
ಮೂದೇವರೆ ಮುಖ್ಯ ಜಗಕೆ
ವಾದವೇತಕೆ ಲಿಂಗಭೇದತ್ರಯವೊಂದಾಗಿ
ಸಾಧಕಗೆ ಲಿಂಗರೂಪಾಗಿ
ತ್ರಿದೈವದುತ್ಪತ್ಯ ತ್ರಿತವನು ತಾಳಿದನು
ಕಾದಾಡುತಿಹೆನು ಕಾಣದಲಿ ॥೩॥

ಇದನರಿಯಲೆಂದು ಇದಿರಿಟ್ಟು ರೂಪನೆ ಮಾಡಿ
ಅದರಲ್ಲಿ ಬ್ರಹ್ಮ ತಳವದ ಕೋ
ಹೃದಯಜಲ ಹರಿ ವಿಷ್ಣು ರುದ್ರ ಪಿಂಡಿಗೆಯಾಗಿ
ಹುದುಗಿ ತ್ರಿಮೂರ್ತಿ ಒಂದಾಗಿ
ಇದ ಮಾಡಿದರು ಲಿಂಗವೆಂದು ಅಂಗದ ಭೇದ
ಇದನರಿಯ ಹೇಳಿ ಇದಿರಿಟ್ಟು
ಅದರಿಂದ ಅರಿವೆ ಲಿಂಗವೆಂಬ ಶಬ್ದವ
ಕದನ ವಾದಗಳೇಕೆ ತಿಳಿಯ ॥೪॥

ಪೂರ್ವ ಪ್ರಮಾಣ ಸಹಜವನರಿಯದನೆ ಭವಿಯು
ಪೂರ್ವ ಸಹಜವನರಿ[ದ]ವ ಭಕ್ತ
ಅರಿವಿನಂದರಿದು ಸ್ನಾನ ಸ್ಥಾನ ಪಂಚಮದ
ಪೂರ್ವಸ್ಥಳವರಿದಹನು ಶರಣ

ಸರ್ವವೆಲ್ಲವು ತಾನೆ ತಾನೆ ಸರ್ವವು ಎಂದು
ನಿರ್ವಾಣಪದದಾತನೈಕ್ಯ
ಉರ್ವಿಯೊಳಗಾರುಲಿಂಗ ಭೇದವ ಬಲ್ಲ
ಸರ್ವಾತ್ಮ ತಾನೆ ಸರ್ವಜ್ಞ ॥೫॥

ತೋಹೆ – ೨೦, ಪದ – ೧೬೦

■

೨೧

ರಾಗ : ಬಹುಳಿ

ಚಂಚ ಆಚಾರ ಹೋದವೆಂದು ಬೊಗಳುತಿಹೆ
ಪಂಚಮಹಪಾತಕರಿಗೆ ಮಾಗುಂಡವು ॥ಪಲ್ಲ॥

ಪಾತಕರಿಗಿಲ್ಲ ಪುಣ್ಯತ್ಮರಿಗೆ ಉಂಟೆಂದು
ದಾತ ಗುರು ಬಂದು ಮರ್ತ್ಯಕೆ ಸಾರಿದ
ಮಾತು ಖರೆಯವು ಸತ್ಯ ಮರುಳು ಮಾತಿನ್ನಿಲ್ಲ
ಖ್ಯಾತಿಯಹುದು ಆಚಾರ ಮುಖ್ಯ ನುಡಿಯು
ಕೋತಿಚೇಷ್ಟೆಯ ಮನುಜ ಕೊನೆಯಿಲ್ಲ ಮಾರ್ಗ ವಿ
ಭೂತಿ ರುದ್ರಾಕ್ಷೆ ಇಲ್ಲೆನಲುಬಹುದೆ
ನೀತಿದಪ್ಪಿದ ಪಾಪಿ ಗುರುಮಾರ್ಗವನು ಬಲ್ಲೆ
ಏತಕೆಯು ಸಲ್ಲೆ ಮಾಗುಂಡವಿಲ್ಲೆ ॥೧॥

ಕಳ್ಳರಲಿ ಸೆಳೆದು ಸಹಜರಿಗೆ ಕೊಟ್ಟರೆಂದು
ಬಲ್ಲಿದ ಗುರು ನುಡಿದ ನುಡಿಯ ನೋಡಿ
ಕಳ್ಳನಳುಕಿ ಮುಂದೆ ಪಾಪಕಂಜಿ ನಡೆವ
ಒಳ್ಳೆಯವನೇಕೆ ಹಳಹಳಿಸಬೇಕು
ಸುಳ್ಳ ಪಾತಕ ನಾನು ಸುಖದಲಿರಲೊಲ್ಲದಲಿ
ಬಳ್ಳುಟ್ಟ ಬೊಗಳ್ವೆ ಬಾಯಿಗೆ ಬಂದಂತೆ
ಕಳ್ಳೆಹೊಕ್ಕಿತು ಡಂಗುರದೊಳಗೆಂದ ಗುರು
ಇಲ್ಲೆ ಬಂದಿತು ನೋಡಿ ಇದ ಕೋ ಸಾಕ್ಷಿ ॥೨॥

ಆದಿಲಿಂಗವ ಕೊಟ್ಟ ಆದಿ ವಿಭೂತಿ ಕೊಟ್ಟ
ಆದಿ ರುದ್ರಾಕ್ಷಗಳನವ ಕೊಟ್ಟ

ಆದಿ ತೀರ್ಥವ ಕೊಟ್ಟ ಆದಿ ಪ್ರಸಾದವ ಕೊಟ್ಟ
ಆದಿಯಾಚರಣೆ ಐದುವನು ಕೊಟ್ಟ
ವಾದಿಸುತಲಿಹನು ಒಂದನು ಅರಿಯೆ ಮೂರ್ಖ ನಾ
ಬಾಧಿಸುವರೆಮ್ಮನವರು ಬಡಿತಕಿಕ್ಕಿ
ಕಾದ ಕಂಬಕೆ ಕೈಕಟ್ಟಿ ಈ ಪರಿಯಲಿ
ವಾದಿಸು ಚಾರು ತಿದಿಗಳನು ಬಿಡ[ದ]ಡರು ॥೩॥

ನಾಲ್ಕು ಶೈವವೆಂದು ನುಡಿಯುತಿಹ ಆಗಮದ
ವಾಕ್ಯಗಳ ಕೇಳಿನ್ನು ಆದಿ ಸ್ಥಿತಿಯ
ಏಕಮಯವಾಗಿ ಹುಟ್ಟಿತು ಬ್ರಹ್ಮಾಂಡವು ಅಂದು
ಆಕಾಶ ಲಿಂಗ ಭೂಮಿಯೆ ಪೀಠಕ
ಈ ಕ್ರಮದಿ ಪೂರ್ವಶೈವವಾಗಿ ವರ್ತಿಸೆ ಅ
ನೇಕ ಕಾಲದ ಮೇಲೆ ಶುದ್ಧಶೈವ
ಭೂಕ್ಷೇತ್ರವಾಗಿ ಪರ್ವತ ಕಾಶಿ ನೇಪಾಳ ಪಿ
ನಾಕಿ ನಾಮದ ಸ್ಥಾವರಗಳದವು ॥೪॥

ಮಾರ್ಗಶೈವವೆಂದು ಮತ್ತೆ ಹುಟ್ಟಿತು ಕೇಳಿ
ಉಗ್ರಭಕ್ತಿಯ ಮಚ್ಚು ವಶವಲ್ಲದೆ
ಭರ್ಗನೆಂದೊಂದು ಮೂರ್ತಿಯ ಮಾಡಿ ವಂದಿಸುತ
ಶೀಘ್ರದಾಚರಣೆ ಸಂಗಡ ಬಿಡದಲಿ
ವೆಗ್ಗಳಿಸಿತದಕೆ ಅಂಗದಲಿ ಕಟ್ಟಿತು ಮುಂದೆ
ತಗ್ಗದಲಿ ವೀರಶೈವಾಚರಣೆಯು
ಮುಗ್ಗಿ ಹೋಪವ ನಾನು ಇಲ್ಲವೆಂದೆನಬಹುದೆ ॥೫॥

ಮತ್ತೆ ಕೇಳಿನ್ನೈದು ಮೂಲಸ್ಥಾನಗಳುಂಟು
ಅತ್ತಾದಿ ಮೂಲಸ್ಥಾನವು ಭೂಮಿಯು
ಪೃಥ್ವಿ ಮೂಲಸ್ಥಾನವು ಶ್ರೀಶೈಲ ಸ್ಥಾವರವು
ಈತ ಕಲ್ಲೇಶ ಗ್ರಾಮ ಮೂಲಸ್ಥಾನ
ನಿತ್ಯಮಯ ರಾಮಲಿಂಗನುಕೂಲ ಮೂಲಸ್ಥಾನ
ಅರ್ತರಿಗೆಯು ಮೂಲಸ್ಥಾನ ಲಿಂಗ
ತಥ್ಯವಿವು ಪಂಚಮೂಲಸ್ಥಾನಕೆಯು ಅವೇ
ಕರ್ತೃ ವಿಭೂತಿ ರುದ್ರಾಕ್ಷೆ ತೀರ್ಥ ಪ್ರಸಾದ ॥೬॥

ಪಂಚಮೂಲಸ್ಥಾನ ನಾಲ್ಕು ಶೈವಕೆ ಇವೆ
ಪಂಚಮುಖನ ವಿಭೂತಿ ರುದ್ರಾಕ್ಷಿಯು
ಪಂಚಮುಖನ ತೀರ್ಥಪ್ರಸಾದವಲ್ಲದೆಯುಂ
ಕಿಂಚಿತೇನಾದ ರಾಚರಣೆಯುಂಟೆ
ಪಂಚಮಹಾಪಾಪಿ ಅರಿಯದೆ ಗಳಹುತಿರಬೇಡ
ಪಂಚಮುಖನರ್ಚನೆಯ ಮಾಡು ಬೇಗ
ಪಂಚವದನ ಗುಂಡ ಬಸವೇಶನಿಟ್ಟಂತೆ
ಪಂಚ ಆಚರಣೆಗಳ ಬಿಡದೆ ನಂಬು ॥೭॥

ತೋಹೆ-೨೧, ಪದ-೧೬೭

■

೨೨

ರಾಗ : ವರಾಳಿ

ನೋಡಬಹುದೆ ಆಚಾರ ದ್ರೋಹವ
ರೂಢಿಯೊಳಗೆ ಪಂಚಮಹಾಪಾತಕವ ॥ಪಲ್ಲ॥

ಪಾಪಕೆ ವಿಭೂತಿ ಪುಣ್ಯಕೆ ವಿಭೂತಿ
ಪಾಪಕೆ ವಿಭೂತಿ ಹರಕೆಗೆ ವಿಭೂತಿ
ಕೋಪಕೆ ವಿಭೂತಿ ಶಾಂತಕೆ ವಿಭೂತಿ
ಈ ಪರಿಯೆಲ್ಲಕೆ ವಿಭೂತಿ
ಆಪರ ವಿಭೂತಿ ಭೂಪರ ವಿಭೂತಿ
ಶ್ರೀಪದ ವಿಭೂತಿ ಉಮಾಪತಿ ವಿಭೂತಿ
ಕಾಪಾಲಿಯ ಶರಣರಿಗಹ ವಿಭೂತಿ
ಭಾಪುರೆ ಭಾಪುರೆ ವಿಭೂತಿ ॥೧॥

ಹಣೆಗಣ್ಣಿಲಿ ಹುಟ್ಟಿತೀ ವಿಭೂತಿಯು
ಎಣೆಗಣ್ಣಿಲಿ ಹುಟ್ಟಿದ ರುದ್ರಾಕ್ಷಿಯು
ತ್ರಿನಯನ ಭಕ್ತಿಯ ಬೆಳಗನು ತೋರಲು
ಮಣಿಯಾದವು ನಿಜ ರುದ್ರಾಕ್ಷಿ
ಎಣಿಯಾಯಿತು ಘನದೈವವನರಿಯಲು
ಖಣಿಯಾಯಿತು ಜಲಪ್ರಳಯದ ಹೆಪ್ಪಿಗೆ
ಎಣಿಸಲಳವೆ ವಿಭೂತಿ ರುದ್ರಾಕ್ಷಿಯ
ಗುಣದಲಿ ಧರಿಸದೆ ಹೆಣ ಮೊರೆದವು ॥೨॥

ಸ್ವಾಮಿಯ ಕರದಾಧಾರ ವಿಭೂತಿಯು
ಕಾಮನ ಸುಟ್ಟೆಬ್ಬಿಸಿದ ವಿಭೂತಿಯು
ತಾಮಸ ಕಾಲನನಳಿದುಳುಹಿದುದು
ಗೋಮಯ ಭಸ್ಮವು ವಿಭೂತಿ
ಪ್ರೇಮದಿ ತತ್ವಮಸಿಯೆಂದೆನಿಸುವ
ಸಾಮದ ಶಬ್ದಾರ್ಥವು ವಿಭೂತಿಯು
ಕಾಮಕ್ರೋಧಗಳ ತದಿಸುವ ವಿಭೂತಿ
ಭೂಮಿಯ ನಿರ್ಮಿಸಿದೀ ವಿಭೂತಿ ॥೩॥

ಪರವಾದಿ ದಕ್ಷನ ಸಂಹರಿಸಲು
ಹರನೊಲವಿಂ ವೀರೇಶ ಧರಿಸಿದನು
ಗಿರಿಜೆ ತನ್ನ ಗಜಮುಖ ಷಣ್ಮುಖರಿಗೆ
ಧರಿಸುವ ರಕ್ಷೆಯು ವಿಭೂತಿ
ಪರಮೈಶ್ವರ್ಯದ ನೆಲೆಯು ವಿಭೂತಿ
ಧರೆ ಮೊದಲೆಲ್ಲ ತತ್ವ ವಿಭೂತಿಗೆ
ಸರಿಯಿಲ್ಲೆನುತಲಿ ಸಾರುವ ಶ್ರುತಿಯು ॥೪॥

ಸ್ವಾಮಿಯ ವಿಭೂತಿಯ ಬಿಟ್ಟಗಲಿ
ಭೂಮಿಯ ಮೇಲೆಂತು ನಿಲಲಿಲ್ಲವು
ಗಾಮಿಣಿತನದಲಿ ಗರ್ವಿಸಿ ಬೀಗುವೆನು
ಕಾಮಕ್ರೋಧ ಕಪಟದ ನರನು
ಆ ಮಹಾವಿಭೂತಿ ಅದರಿಂದೀ ಜಗ
ನಾ ಮೀನಕ್ಕಿ ನಾನಿಡಲೊಲ್ಲದಲಿರೆ
ಛೀ ಮಾಡುಗುಳರೆ ಭಕ್ತಿ ಭಾವಿಗಳು
ತಾಮಸಿ ಪಾಪಿಗೆ ತಪ್ಪದು ಯಮಪುರ ॥೫॥

ವ್ಯಾಸಮುನಿಯು ವಿಭೂತಿ ಧರಿಸಿದ
ವಸಿಷ್ಠನು ವಿಭೂತಿ ಧರಿಸಿದ
ಕಾಶ್ಯಪಮುನಿ ವಿಭೂತಿ ಧರಿಸಿದ
ಕೌಶಲ್ಯನು ಧರಿಸಿದ ತಾನು
ಈಶ ಮೆಚ್ಚಲಾ ದಧೀಚಿ ಧರಿಸಿದ
ದೇಶವರಿಯ ನಾರದನು ಧರಿಸಿದ
ದೋಷರಹಿತ ಮಾರ್ಕಂಡೇಯ ಧರಿಸಿದ
ಭಾಸುರ ವಿಭೂತಿ ಭಯಹರ ವಿಭೂತಿ ॥೬॥

ಹಸಿಯ ಕಸಬರ[ಗಿ] ತೆರದಿ ಮೋರೆಯ
ಹಸಗೆಡಿಸಿಯೆ ವಿಭೂತಿಯನೊಲ್ಲದೆ
ಕಿಸುರನು ಎಬ್ಬಿಸಿ ಕಿರುಕುಳ ದೈವದ
ಬಸರುಗರಂತೆಯು ಒರಲುತಲಿ
ಬಸವನ ವಿಭೂತಿ ಭಕ್ತರ ವಿಭೂತಿ
ಶಶಿಧರನ ವಿಭೂತಿ ಸರ್ವರ ವಿಭೂತಿ
ವಿಷಗೊರಳನು ಪಶುಪತಿಯ ವಿಭೂತಿ
ಕಿಸುಗುಳಿಗರಿಯನು ಅಸಮ ವಿಭೂತಿಯ ॥೭॥

ಲಿಂಗದಾಲಯಗಳು ಲಿಂಗಮೂರ್ತಿಗಳು
ಭಂಗವಾಗಿ ಕೆರೆ ಬಾವಿ ಕಟ್ಟೆಗಿಕ್ಕಿ
ಹಿಂಗದೆ ಮನೆಯು ಮಗಿಲು ಜಗುಲಿ ಕೋಟೆ
ಅಂಗಹೀನ ಬಚ್ಚಲಿಗಿಕ್ಕಿ
ಡಂಗುರ ಸಾರಿ ಅಳಲಿ ಬಳಲಿದರು
ಲಿಂಗವಳಿಯೆ ಪೂಜೆಯ ತಡೆಮಾಡಲಿ
ಬಂಗಡೆಯನು ಭಕ್ತಿಯನರಿಯನು ಭ
ಸ್ಮಾಂಗವನೊಲ್ಲದೆ ಭವಜೀವವಾದೆನು ॥೮॥

ಲಿಂಗವನೊಡನೆ ಶಿವಭಕ್ತರುಳ್ಳರೆ
ಲಿಂಗದ ರೂಪನು ಸೊಕ್ಕಿ ತನ್ನ ತಾ
ಲಿಂಗ ಕಟ್ಟಬಹುದೆ ಹರಹರ ಶಿವ
ಲಿಂಗದ್ರೋಹವೀ ಪರಿ ಮಾಡಿ
ಅಂಗ ಸೊಕ್ಕಿ ವಿಭೂತಿ ರುದ್ರಾಕ್ಷೆಯ
ಹಿಂಗದೆ ಜರಿದಾಡುವೆ ಧರಿಸೆನು ಭವ
ಭಂಗವು ಭೂಚಂದ್ರಾರ್ಕವು ತಪ್ಪದು
ಲಿಂಗದ್ರೋಹಿಗೆ ಪ್ರಾಯಶ್ಚಿತ್ತ ಉಂಟೆ ॥೯॥

ಕತ್ತೆ ಕುದುರೆ ಹುಟ್ಟಿದ ಹೇಸರನಂ
ತತ್ತಲಿ ಹೊಲಿದು ಇತ್ತಲಿ ಹೊಂದದು
ಮತ್ತೆ ತನ್ನ ಕಿವಿ ಮುಂಡಿಯ ಮೊಳನು
ಉತ್ತಮ ತೇಜಿಗೆ ಸರಿಯುವದೆ
ನಿತ್ಯವಾದ ಮುಕ್ತಿಯ ಪಥವರಿಯದೆ
ವ್ಯರ್ಥನಾದೆ ವಿಭೂತಿಯನೊಲ್ಲದೆ

ತೊತ್ತು ಸೂಳೆ ಸುತ ತಂದೆಯ ಬಲ್ಲನೆ
ಸತ್ತು ಕೆಟ್ಟು ಪುಳುಗುಂಡವು ಮುಂದೆ ॥೧೦॥

ಗುಂಡರಾಯ ವಿಭೂತಿ ಧರಿಸಿದನು
ಕಂಡಿರೆ ಗದ್ದಿಗೆರಾಯ ಧರಿಸಿದನು ಪ್ರ
ಚಂಡನು ಶಿವಯೋಗಿರಾಯ ಧರಿಸಿದನು
ಖಂಡಿ ಮೂಲಕಾರಣವರಿಯೆ
ಭಂಗನಾದೆ ಭಕ್ತಿಯ ಪಥವರಿಯದೆ
ಕಂಡವರೊಳು ಕಡಿದಾಡುತಲಿಹೆನು
ಗುಂಡ ಬಸವನಿಟ್ಟಂತೆ ಇರದಲಿಹ
ಚಂಡಿ ಪಾಪಿಯು ಮಾಗುಂಡದಲಿರಲಿ ॥೧೧॥

ತೋಹೆ – ೨೨, ಪದ – ೧೭೮

■

೨೩
ಲಿಂಗದ ನೆಲೆಯೆ ಜಂಗಮದ ಮುನ್ನಿರೆ ನೀ ಸಂಗನಬಸವ
ಸಂಗಮೇಶ್ವರ ನಿಮ್ಮೊಳಗಾನಂದಿಪ ಸಂಗನಬಸವ ॥ಪಲ್ಲ॥

ಎಣೆಗಾಣೆ ಜಲದೊಳು ಠಣಕರಿಸುತಲಿದ್ದೆ ಸಂಗನಬಸವ
ಫಣಿಧರನದಿರೆ ಇಣಿಯೇರಿಸಿಕೊಂಡ ಸಂಗನಬಸವ
ದಣಿದು ಗೋಮಯವಿಕ್ಕಿ ಈಜಾಡುತಲಿದ್ದೆ ಸಂಗನಬಸವ
ಹಣೆಗಣ್ಣ ತೆರದ ಭಸ್ಮದಿ ಜಲ ಹೆಪ್ಪಿಟ್ಟೆ ಸಂಗನಬಸವ ॥೧॥

ಆದಿಯೊಳಗೆ ದೇವಗಾಧಾರವಾದೆಯೆಯ್ಯ ಸಂಗನಬಸವ ಶಿ
ಲಾದಗೆ ಶಿಶುವಾದೆ ಸದ್ಗತಿಗಳನಿತ್ತೆ ಸಂಗನಬಸವ
ಮೇದಿನಿಯೊಳು ಮಂಡಗೆ ಮಾದಿರಾಜನು ಸಂಗನಬಸವ
ಮಾದಲಾಂಬಿಕೆಯ ಗರ್ಭೋದಯದಾದಿತ್ಯ ಸಂಗನಬಸವ ॥೨॥

ಮಾದೇವನು ನೋಡಲಿಕಿದು ಮುಕುರವೊ ಸಂಗನಬಸವ
ಆದಿಯನಾದಿಯೊಳಪ್ರತಿಮನು ನೀ ಸಂಗನಬಸವ
ಈ ಧರೆಯೊಳು ಕಲ್ಯಾಣಕೆ ನೀ ಬಂದು ಸಂಗನಬಸವ
ವಾದಿಗಳನು ಗೆದ್ದ ಪವಾಡಪುರುಷನೆ ಸಂಗನಬಸವ ॥೩॥

ಲಕ್ಷದ ಮೇಲೆ ತೊಂಬತ್ತಾರು ಸಾವಿರ ಸಂಗನಬಸವ ಜಂಗಮ
ಕಿಕ್ಕಿದೆ ಚೊಕ್ಕಭೋಜನ ಭಕ್ಷರಾಜಾನ್ನ ಸಂಗನಬಸವ
ಸೂಕ್ಷ್ಮ ನವನೀತವಾಕ್ಷಣದ ಸಭಿಕರ ಸಂಗನಬಸವ ನೀಡಿ
ಸಾಕೆಂದು ದಣಿಸಿದ ಶಕ್ಯ ಷಡುರಸದಿ ಸಂಗನಬಸವ ||೪||

ಏಳುನೂರೆಪ್ಪತ್ತು ಅಮರಗಣ ಸಹ ಬಂದೆ ಸಂಗನಬಸವ ಬಂದು
ವೇಳೆ ವೇಳೆಗೆ ಪವಾಡವ ತೋರಿದೆ ಸಂಗನಬಸವ
ಹೇಳುವ ಕೊಂಡೆಯರೆದೆದಲ್ಲಣ ನೀ ಸಂಗನಬಸವ ನಿಮ್ಮ
ಕೇಳುವ ಬಿಜ್ಜಳರಾಯನ ಅಳವಲ್ಲ ಸಂಗನಬಸವ ||೫||

ಪಂಚಪರುಷನೆ ಪರಾಪರ ಮಹಿಮನೆ ಸಂಗನಬಸವ
ವಂಚನೆಯಿಲ್ಲದೆ ಲಿಂಗಜಂಗಮಕಿತ್ತೆ ಒಂದೆ ಪರಿ ಸಂಗನಬಸವ
ಪಂಚಮುಖನು ಬಂದು ಪ್ರಭು ಪರಿಣಾಮಿಸಿ ಸಂಗನಬಸವ
ಮಿಂಚಿನ ಹೊಳೆವ ಲಿಂಗವನಿತ್ತ ಮನ ಮೆಚ್ಚಿ ಸಂಗನಬಸವ ||೬||

ಉತ್ತರಗಳನಿತ್ತು ಚಿತ್ತೈಸಿದಿರಂದು ಸಂಗನಬಸವ
ಮರ್ತ್ಯಕೆ ಬಹೆವೇಳುನೂರೆಪ್ಪತ್ತಕೆಂದು ಸಂಗನಬಸವ
ಮತ್ತದು ಪುಸಿಯದೆ ನಾಗಾವಿಗೆ ಬಂದು ಸಂಗನಬಸವ
ಭಕ್ತಿಗೆ ಧರ್ಮಕಲ್ಯಾಣವೆಂದು ನಿಂದೆ ನಿಜಗುರು ಸಂಗನಬಸವ ||೭||

ತೋಹೆ-೨೩, ಪದ-೧೮೫

■

೨೪

ಭಾವಿಸಬಲ್ಲರೀತ ದೇವನೊಂದುಮುಖದಯ್ಯ
ಪಾವನಾತ್ಮಕ ಗುರುವ ನೆನೆಯೆ ಹೋಹವು ಭವಭಯವು ||ಪಲ್ಲ||

ಹೆಳವಗೆ ಭಾಗೀರಥಿ ಘಳಿಲನೆ ಬಂದ ಹಾಗೆ
ಇಳೆಗೆ ಇಳಿದು ಬಂದೆ ಸುಳಿಹು ಸೂಚನೆಗೆ
ಬೆಳಗುಳ್ಳ ದೇವಗೆ ಭೇದಭೇದಾದಿಗೆ
ನಳನಳಿಸುತ ನಮಿಸಿ ಕಳೆಯ ಚಂದ್ರಮಗೆ ||೧||

ಕಂಗಳಿಗೆ ಕಣ್ಣು ಬಂದು ಹಿಂಗದಲಿರಾ ತೆರ
ಪಂಗುಳಗೆ ಪಾದ ಬಂದು ಪಥವನ್ನೈದುವ ತೆರ
ಲಿಂಗ ಗುಂಡೇಶ ಬಂದು ಡಂಗುರಗಳ ಸಾರೆ ತಮ್ಮ
ಅಂಗದೊಳಳುಕಿ ಶರಣೆಂದ ಆತ ಕಾದ ಸಂಗಮೇಶ್ವರ ॥೨॥

ಜಂಬೂದ್ವೀಪದೊಳು ಶಂಭುಶರಣರು ಪರಿತೋಷವಾಗಿ
ತುಂಬುವುದೀ ಕಲ್ಯಾಣಾಧೀಶರೆಂಬೆ ನಾಗಲೆಗೆ ಬಸವೇಶ ಅಕ್ಕಗೆ
ಉಂಬಳಿ ಕೊಟ್ಟನೊ ಸಲೀಸ ಸಂಭ್ರಮ ಭಕ್ತಿ ಸಂತೋಷ ಅಂಥ
ಕುಂಭಿನಿ ನಾಗಾವಿವಾಸ ಶಂಭುಮುಖ ಗುಂಡಬಸವೇಶ ॥೩॥

ತೋಹೆ-೨೪, ಪದ-೧೮೮

■

೨೫

ಶ್ಲೋಕ:
ಹರನೆ ಸರ್ವೇಶ ಹರನೆ
ವರವ ನೀಡು ಮಾ ನೀಡು ಮಾ ನೀಡು ಮಾ ನೀನು ವರವ
ಹರನೆ ಸರ್ವೇಶ ಹರನೆ
ವರವ ನೀಡು ಮಾ ನೀಡು ಮಾ ನೀಡು ಮಾ ನೀನು ವರವ
ಕಲ್ಯಾಣ ಪುರಾಧೀಶ ಕರ್ತೃ ಎನ್ನೊಡೆಯ
ಬಲ್ಲಿದ ಬಸವೇಶ ಭಾಪುರೆ ಶರಣು ॥ಪಲ್ಲ॥

ಇಂಗಳೇಶ್ವರ ಬಾಗೇವಾಡಿಯ ಗ್ರಾಮದಿ
ಲಿಂಗಮೂರುತಿ ನೆನೆಸಿದೆ ಬಸವಣ್ಣ
ಸಂಗನ ಶರಣ ಮಾದರಸನ ಮಡದಿ ಪು
ಣ್ಯಾಂಗನೆ ಮಾದಲಾಂಬಿಕೆಯ ಗರ್ಭದಲಿ ॥೧॥

ಬೆಸಲಾಗಿ ಶಶಿಜೂಟಬಿಡುಗಣ್ಣ ಬಂದು
ಒಸೆದಂಗಲಿಂಗವಾಗಿ ಒಡನಿದ್ದ ಸಂಗ
ಬಸವಣ್ಣನೆಂಬ ನಾಮವನಿತ್ತು ಭಕ್ತಿಯ
ಪಸರಿಸುವ ಪವಾಡಿಯೆಂದು ಮಾತೆಗೆ ಹೇಳಿದ ॥೨॥

ಮಂಡಗೆಯ ಮಾದರಸನ ಮನೆಯ ಪ್ರ
ಚಂಡ ಬೆಳೆಯ ವಾದ ಹಾಕಿ ಮಠದಲಿ
ಹಿಂಡು ಮಾಣಿರು ಕೂಡಿ ಹಲಗೆದೊಳೆಯ ಹೋಗಿ
ಲೆಂಡ ಸಣ್ಣವನ ಕೊಂಡೆಬ್ಬಿಸಿದ ಬಸವ ॥೩॥

ನಿಲ್ಲದೆ ಬಗವಾಡಿಯಲಿಂದ ತೆರಳಿ
ನಲ್ಲಳು ಅಕ್ಕ ನಾಗಮ್ಮ ಸಹವಾಗಿ
ಕಲ್ಯಾಣಕೆ ಬಂದು ಕೈಲಾಸಲಿಪಿ ಬೀಳೆ
ಅಲ್ಲಿ ಓದಿ ಬಿಜ್ಜಳಗೆ ಅನೇಕ ದ್ರವ್ಯವನಿತ್ತೆ ॥೪॥

ನಿಧಾನವ ತೆಗೆದಲ್ಲಿ ಪ್ರಾಣವನೆತ್ತಿ
ಪ್ರಧಾನಿಕೆಯ ಬಲಕೆ ಪವಾಡದ ಗೆಲಕೆ
ಮುದದೇಳುನೂರೆಪ್ಪತ್ತಕೆ ಬಂದೆವೆಂದೋದುದಕೆ
ಇದೆ ಬಂದನಲ್ಲಿ ಧರ್ಮಕಲ್ಯಾಣಿ ಬಸವ ॥೫॥

ತೋಪೆ-೨೫, ಪದ-೧೯೮

■

೨೬

ಇನ್ನೀ ಕ್ರೀಯದಲ್ಲೇನಿಹುದಯ್ಯ
ಭಿನ್ನಮನ ನಿಲ್ಲದೆನ್ನ ಕೈಯ ॥ಪಲ್ಲ॥

ಹೊನ್ನು ಹೆಣ್ಣು ಮಣ್ಣಿಗೆಯು
ಉನ್ನತ ಮನವು ಹರಿದು
ಅನ್ಯರ ಮೆಚ್ಚಿಪ ಭಕ್ತಿ ಭ್ರಾಂತೆ ಕೇಳು
ಪನ್ನಂಗಧರನ ಭಕ್ತರಿಂತೆ ನಿನ
ಗಿನ್ನೆಂತು ವಶವು ಮುಕ್ತಿಕಾಂತೆ ॥೧॥

ಪಂಚೇಂದ್ರಿಂಗಳಿಚ್ಚೆಯಲಿದ್ದು
ಪಂಚಮುಖನ ಭಕ್ತನೆಂತು
ಕಿಂಚಿತವಾದರೆ ನಡೆ ಇರಬೇಕು ಬಾಹ್ಯದ
ಮಿಂಚಿನ ಕ್ರಿಯಾ ಬಣ್ಣ ಸಾಕು ಪ್ರ
ಪಂಚದಲಿ ಮುಂದೆ ತಾಕು ಸೋಂಕು ॥೨॥

ಧ್ಯಾನವುಳ್ಳ ಪುಣ್ಯ ತಾನು
ಏನು ಮಾಡಲೇನು ಹರ
ತಾನಲ್ಲಿಹನೆಂಬುದುದು ಸಹಜ ಸಂ
ಜ್ಞಾನದೊಳಾಡುವ ಭಾನುತೇಜ ಗುಂಡ
ನಾನಂದದಿಹನು ಹಂಸರಾಜ ॥೩॥

ತೋಹೆ-೨೬, ಪದ-೧೯೬

■

೨೭
ಭಕ್ತ ನಾನೆಂದು ವಿಸ್ತರಿಸಿ ನುಡಿಯುತಲಿಹೆನು
ತೊತ್ತು ಸೂಳೆಗೆ ಹರಿದು [ಮತ್ತೆ]
ಅತ್ತೆ ಅತ್ತಿಗೆ ನಾದಿನಿ ಸೊಸೆ ತಾ ಅಕ್ಕತಂಗಿ ಮಗಳೆಂದು
ಉತ್ತರಿಸಿ ಕರೆದಳುಪುವೆ ವ್ಯರ್ಥಿ ॥ಪಲ್ಲ॥

ಶಂಭುಭಕ್ತರಾದವರಿಗೆ ಸಹಜವೆ ಕಾರಣವು
ಹಂಬಲೇತಕೆ ಹಲರ ಕೆಲರ
ಕೊಂಬಕೊಳ್ಳಿತನದಿ ಕುಳಿತ ನಿಂತವರೊಳಗೆ
ಎಂಬೆನಿವರಂತಿಂತು ಎನುತ
ಅಂಬರಾತ್ಮಕ ಭಕ್ತ ಸಹಜಸಾಹಿತ್ಯದಲಿ
ತುಂಬಿದ ಕುಂಭದಂತಿಹನು
ಗೊಂಬಿತಿ ಸೂಳೆಯರ ತಾಂಬೂಲ ತಿಂಬೆ ನಾ
ಡೊಂಬ ನನಗುಂಟೆ ಸಾಹಿತ್ಯ ॥೧॥

ಯಾಕೆ ನಾಚೆನು ನಾ ಎಳ್ಳಷ್ಟು ನಿಜವಿಲ್ಲ
ಹೋಕು ಹಳಿಹಂಡಿ ನಡೆಯಿಲ್ಲ
ಪಾಕಿಯಾಸೆಯ ಪಾಪಿ ಪರರ ಜರಿವೆನು ಕೋಪಿ
ಮೋಕ್ಷಹೀನನು ತರ್ಕಿ ನರಕಿ
ವಾಕುವಾದಗಳೇಕೆ ಒಳಗು ಹೊರಗೆನಲೇಕೆ
ತೂಕ ಮಾಪದ ಕಳ್ಳ ನಾನು
ಲೋಕದೊಳು ಧರ್ಮ ಸಾರುವವರಿಗೆರಗಿದರೇನ
ಮೂಕೊರೆಯ ಸೆರೆ ಕಾದೆ ॥೨॥

ಬೋಳರಿಗೆ ನಡೆವರ ನಮಗೆ ಹೋಗೆಂದೆಂಬೆ
ಸೂಳೆ ಬಸವಿಗೆ ಮೆಚ್ಚಿದವರ
ಜಾಳುಮಾಡಿ ಜರಿಯೆ ಅವರೊಡನೆ ಕೂಡುಂಬೆ
ಹಾಳು ಭಕ್ತ್ಯವ ಹರಿದುಂಬೆ
ಬಹಳ ಭಕ್ತಿಯ ಪಥವ ಮೂಳನು ಬಲ್ಲನೆ
ಸೂಳೆಯರ ಮನೆಯ ಗಂಡುಗನು
ಒಳಬಹುದೆ ವ್ಯರ್ಥ ಧರ್ಮಮುಖ್ಯರ ನಾನು
ಹಾಳಾಗಿ ಹೋದೆ ಪಾತಕನು ॥೩॥

ಜಕ್ಕಿಣಿ ಮೈಲಾರ ಧರೆಯ ಧೂಳಯ್ಯನು
ಏಕನಾತಿ ಬ್ರಹ್ಮ ಬೀರ
ರಕ್ಕಸಿ ಉಡಚಿ ಚೌಡಿ ಮಾಯೆರಾಣಿ ಮಸಣಿ
ಅಕ್ಕೋಜಬೊಟ್ಟು ಇಂತಿವಕೆ
ಲೆಕ್ಕವಿಲ್ಲದೆ ಹಲವು ದೈವಗಳಿಗೆ ನಡೆವ
ಒಕ್ಕಲದವರೊಳೊಡನುಂಬೆ
ಹೊಕ್ಕು ಕೊಳುಕೊಡೆ ಮಾಡೆ ಭೂಮಿ ಸ್ವಾಮಿಗೆ ನಡೆವ
ಭಕ್ತರೊಳಗೇಕೆ ತರ್ಕಗಳು ॥೪॥

ನನ್ನ ಭಕ್ತಿಯೆ ಘನವು ಎನ್ನಬಹುದೆ ಪಾಪಿ
ನನ್ನ ನಾ ಬರಿಬಗಿಯುತಲಿ
ಚಿನ್ಮಯನ ರೂಪು ಜಗದೊಳಗಾರು ದರುಶನವು
ಉನ್ನತದ ಶರಣರನೇಯಕವು
ಅನ್ಯಾಯ ನಿಂದಕನು ಪರಸತಿ ಕಳವು ಬಿಡೆ
ಕುನ್ನಿ ನನ್ನವಗುಣಕೆ
ಇನ್ನು ಬರ ಭಯ ರೋಗ ಮೂನ್ನೂರ ಅರವತ್ತು
ಬೆನ್ನ ಬಿಡವೆನ್ನ ಪಾತಕನ ॥೫॥

ಆಚಾರಲಿಂಗ ಶ್ರೀಗುರುಲಿಂಗ ಶಿವಲಿಂಗ
ಯೋಚನೆ ಮೊದಲ ಸಾಹಿತ್ಯ
ಸೂಚನೆಯ ಹೇಳಿ ಈ ಸಾಹಿತ್ಯಭೇದಗಳ
ರೋಚಿ ಸುಮ್ಮನೆ ಜರಿಯಬೇಡ
ಆಚಾರಲಿಂಗವೆಂಬುದೆ ಪ್ರಥಮಸಾಹಿತ್ಯ
ಆಚಾರ ಸತ್ಯವಿನಿತಿಲ್ಲ

ಮೋಚಿ ಭವಿಯ ಘನ ಮೊದಲ ಲಿಂಗವು ಕಳೆದು
ನಾಚೆ ನಾ ಹಗರಣದ ಭಕ್ತ ॥೬॥

ಗಂಡಸುತನವಿಲ್ಲ ಗಡ್ಡ ಮೀಸೆಯು ಪನ್ನೆ
ದಂಡಗಿಯೊತ್ತಿ ಚೆಲುವಿರಲಿ
ಹೆಂಡತಿ ಒಗೆತನವ ಬಿಡಿಸಿಕೊಂಬುದು ಸಹಜ
ಕಂಡ ಮಾತಿದು ಖರೆಯ ಜಗದಿ
ಕೊಂಡ ರೂಪಿದು ಲಿಂಗ ಗಡ್ಡ ಮೀಸೆಯ ತೆರನು
ಗಂಡಸುತನದಂತೆ ಧರ್ಮ
ಹೆಂಡತಿಗೆ ಗಡ್ಡ ಮೀಸೆಯೇನು ಕೆಲಸಕೆ ಬಹವು
ಗಂಡಸುತನದಿ ಸುಖ ಫಲವು ॥೭॥

ಹೆಣ್ಣು ರೂಪನೆ ತಾಳಿ ಕಣ್ಗೆ ಕಾಡಿಗೆ ಹಚ್ಚಿ
ಸಣ್ಣ ಬೈತಲೆ ಸರ್ವಾಭರಣ
ಬಣ್ಣವಾಗಿಯು ತೊಟ್ಟು ಕಣ್ಣು ನೋಟಕೆ ಚೆಲ್ವ
ಹೆಣ್ಣಿನಂತಿರಲಿ ರಣಮಾಲಿ
ಹೆಣ್ಣು ಮದುವೆಯಾದವರಿಗೆ ಸಣ್ಣ ಮಕ್ಕಳು ಹುಟ್ಟಿ
ಪುಣ್ಯಪುರುಷಾರ್ಥ ಪೀಳಿಗೆಯೆ
ಬಣ್ಣ ಭಜನೆಯ ಬಿಡಿರೊ ಬಲುಸತ್ಯವೆ ಲಿಂಗ
ಹೆಣ್ಣು ರಣಮಾಲಿ ಡಂಭಕನು ॥೮॥

ಲಿಂಗಪ್ರಾಣವು ಇರಲಿ ಭವಿಯೆಂದು ಎನಬಹುದೆ
ಲಿಂಗಜ್ಞಾನ ಇರಲಿ ಭವಿಯೆ
ಲಿಂಗಸತ್ಯವ ನಿಜ ಹಿಡಿದಾತ ಬವಿಯಹನೆ
ಲಿಂಗಬಾಹ್ಯದ ಭ್ರಾಂತಿ ಕೇಳಾ
ಲಿಂಗವಿಲ್ಲದವರ ಹೊಲೆಯರೆಂದೆಂಬೆ
ಲಿಂಗ ಷಡುದರುಶನಕುಂಟೆ
ಬಂಗಡೆಯ ಬೊಗಳಿದರೆ ಬಾಯಿ ಹುಳಿವದು ಖರೆ
ಲಿಂಗವೆಂತೆಂದು ನಾ ಬಲ್ಲೆ ॥೯॥

ಇಷ್ಟಲಿಂಗವಿಲ್ಲದ ಭವಿಯೊ ಪ್ರಾಣಲಿಂಗವಿಲ್ಲದ ಭವಿಯೊ
ದೃಷ್ಟವನು ಕೇಳು ಸಾಕ್ಷಿಯನು
ಇಷ್ಟಲಿಂಗವನು ಕಟ್ಟಿ ಹೊಗನೆ ಬಸವಣ್ಣ ಮುಷ್ಟಿ ಕೈಲಾಸದ್ವಾರದಲಿ

ಕೊಟ್ಟುಬಂದ ಅನಿಮಿಷಗೆ ಪ್ರಾಣಲಿಂಗವ ನಿಲ್ಲು
ಕಟ್ಟುಭದಿ ಹೊಗಬಾರದೆನಲು ಬಾಯ
ಕುಟ್ಟಿ ಹೊಕ್ಕನು ಬಸವ ರೋಮಕೋಟಿಲಿಂಗ
ಬೆಟ್ಟವಾಗಿದ್ದ ನಂದೀಶ ॥೧೦॥

ದೂರುತಲಿ ಬೊಬ್ಬೆಯಿಟ್ಟಬ್ಬರಿಸಿದನು ಆಗ
ದ್ವಾರಪಾಲಕನು ಮೊರೆಯೆನುತ
ಮಾರಾರಿಗೆರಗಿ ಹೇಳಿದ ದುಃಖ ಮಾಡುತಲಿ
ಮೇರೆದಪ್ಪೆನ್ನ ಬಸವಣ್ಣ
ಕಾರಣಿಕ ನಿಲ್ಲೆನಲು ಕರ್ತೃತನದಲಿ ನಿ
ಷ್ಕಾರುಣ ಹೊಡೆದೆನಿದೇನೆನಲು
ಆರಾಧ್ಯರೊಡೆಯನೇಳೆಂದೆಬ್ಬಿಸಿ ವೃಷಭನ
ಮೋರೆಯಂ ನೋಡಿ ನಸುನಕ್ಕು ॥೧೧॥

ಸ್ಥಾಣು ವಿಚಾರದಲಿ ಕ್ಷೋಣಿ ಕೋಟಿಲಿಂಗ
ಪ್ರಾಣಲಿಂಗಕೆ ಸರಿಯಲ್ಲ
ಮಾಣು ಮರುಮಾತೇಕೆ ಮರ್ತ್ಯದಲ್ಲಿಗೆ ಹೋಗಿ
ಪ್ರಾಣಲಿಂಗವ ಪಡೆದು ಬಾ ನೀ
ಜಾಣ ಬಸವ ಎಂದು ಜಗದೊಡೆಯ ಕಳುಹಿದರೆ
ಕಾಣಿರೆ ಬಂದು ಕಲ್ಯಾಣಕೆ
ಶೂನ್ಯಪೀಠವ ರಚಿಸಿ ಪೂಜೆಯ ಮಾಡುತ್ತಿರಲು
ಪ್ರಾಣಲಿಂಗವನು ಪ್ರಭುವತ್ತ ॥೧೨॥

ಹರನ ಮಾಯದ ಲಿಂಗ ಪ್ರಾಣಲಿಂಗವಿತನು ಭಕ್ತ
ತೆರನ ನೋಡಿದರೆ ಸಾದೃಶ್ಯ
ಹರಣ ಹೋದರೆ ಭವಿಯು ಸಲ್ಲನವನೆಲ್ಲರಿಗೆ
ಇರಗೊಡರು ಬೇಗ ತೆಗೆಯೆನುತ
ಹರಶರಣರಾದವರ ದೃಷ್ಟಗಳ ನೋಡೆ ನಾ
ಹರಣ ಹೋಗಿರುತಿಹರವರು
ನರಕಿ ನಾ ಚಿಲ್ಲಿಂಗ ಸರ್ವಾಂಗಿಗಳ ಭವಿಯೆಂದು
ನರಕದೊಳು ಬಿದ್ದೆ ಚಂದ್ರಾರ್ಕ ॥೧೩॥

ಭವಿ ಭಕ್ತರೆಂದೆಂಬ ವಿವರಗಳನರಿಯೆ ನಾ
ಭವಿ ಯಾರು ಭಕ್ತರಾರೆಂದು
ಭವಿ ಬದ್ದ ಭಾವುಕನು ಭ್ರಾಂತಿವಂತಕ ಭವಿಯು
ಭವಿ ಕಚ್ಚೆ ನಿಡುಕ ಪಾತಕನು
ಶಿವಭಕ್ತನ ನಡೆನುಡಿ ದೃಢ ಸತ್ಯ ಲಿಂಗಾಂಗಿ
ಸವಿ ತನಗೆ ಗುರು ನುಡಿಯೆ ಮಂತ್ರ
ಭವರಹಿತನೆ ಭಕ್ತ ಭವಪಾತಕನೆ ಭವಿಯು
ನವ ಭಂಗಿ ನಡೆಹೀನಕಟ್ಟೆ ||೧೪||

ತ್ರಿವಿಧ ವಂಚಕ ನಾನು ಶಿವಭಕ್ತನೆನಬಹುದೆ
ಹವಣರಿತು ಮಾತಾಡಲೊಲ್ಲೆ
ಶಿವನ ಲಾಂಛನದವರ ಅವಗಡಿಸಿ ಕೊಲುತಿರಲು
ಅವರ ಕೇಡಿಗೆ ಸಾಯಲೊಲ್ಲೆ
ಕಾವಲು ಮಾನದವ ಕಟ್ಟಿದರೆ ಭಕ್ತನಾದೆನೆ
ಅವಿಚಾರಿ ಅನ್ಯಾಯಿ ನಾನು
ಶಿವನ ಸ್ಥಾವರಲಿಂಗ ಸೃಷ್ಟಿಯೊಳಗಳಿದಿರಲು
ಅವರ ಭಂಗಕೆ ಅಳಲೊಲ್ಲೆ ||೧೫||

ಭೂಮಿ ಸ್ವಾಮಿಯ ಲಿಂಗವೆಂದು ನಂಬಿದವರಿಗೆ
ಧೂಮಲಿಂಗಿಲ್ಲೆನಲುಬಹುದೆ
ಆ ಮಹಾ ಆಕಾಶಲಿಂಗ ಪೀಠಿಕೆ ಭೂಮಿ
ಈ ಮಹಿಮೆಯಿವ ಸರಿಯುಹವೆ
ಕಾಮಖಾರಿಕೆ ಪಾಪಿ ಕಂಡಂತೆ ಆಡುವೆನು
ನೇಮ ಲಿಂಗೆಂತು ನಾ ಕೇಳಿ
ಆ ಮಹಾ ಭಯ ಕಳ್ಳ ಸುಲಿದು ಲಿಂಗವು ಹೋಗೆ
ಗಾಮಿನಿ ಮೀನ ಕಟ್ಟಿಕೊಂಬೆ ||೧೬||

ಹೋದ ಹೋದರೆ ಕೊಂಡು ಕಟ್ಟುತಿದ್ದನು ಪಾಪಿ
ವೇದಿಸಿ ನೋಡೆ ಮನದೊಳಗೆ
ಬೀದಿಯ ಸೂಳೆಯಂತಾದೆನಲ್ಲದೆ ಭಕ್ತಿ
ಹಾದಿಯನರಿಯೆ ನಾನೇನು
ಕ್ರೋಧ ಕಪಟಗಳೆಂಬ ಕಿಚ್ಚಿಂದ ಉರಿಯುತಿಹೆ

ಆದಿಲಿಂಗದ ಹೊಲಬನರಿಯೆ
ಕಾದಿ ಕಾದಿ ವ್ಯರ್ಥಹೋದೆನಲ್ಲದೆ ಮುಂದೆ
ಸಾಧಿಸೆನು ಸತ್ಯಧರ್ಮವನ್ನು ॥೧೭॥

ಎಂತು ಭಕ್ತನಾದೆ ಯಾಕೆ ನಾಚೆನು ಪಾಪಿ
ಎಂತು ಹುರುಡಿಗ ಭಕ್ತನಹನು
ಭ್ರಾಂತಿ ಭವಿಪಾತಕನು ಹೆಣ್ಣು ಹೊನ್ನು ಮಣ್ಣಿನಾಸೆ
ಕಾಂತಿ ಬಿಡದಿರುಳು ಹಗಲು ನನಗೆ
ಶಾಂತಿ ಶಬ್ದಗಳಿಲ್ಲ ಶಾಂತ ರವೆ ಮಾತಿಲ್ಲ
ಎಂತು ಜ್ಞಾನವಿಲ್ಲವೆನಗೆ
ತೋಂ ತಣ ಪಾಯಕನು ಕಟ್ಟಿಭಕ್ತನೆ ನಿ
ಸ್ಸಂತು ಗುರುಹಿರಿಯರೊಳು ಹೋರಿ ॥೧೮॥

ಭೂಮಿ ಸ್ವಾಮಿಯೆ ದೈವ ನೇಮವು ಪರವಿಲ್ಲ
ಸ್ವಾಮಿ ಸಂಗಯ್ಯ ದೇವರೊಬ್ಬ
ಭೂಮಿಯೆಂದೇನು ಭಕ್ತಿಸ್ಥಲವು ಪೃಥ್ವಿ ತಾ
ಬ್ರಹ್ಮ ಬಸವಣ್ಣನಂಗ
ಸೋಮಶೇಖರನ ಶರಣರು ಬಂದು ಮರ್ತ್ಯದಲಿ
ಆ ಮಹಾ ಪೂರ್ವಶೈವದಲಿ
ಈ ಮಹಿಮೆಯೊಳಗೆ ಮರೆಯ ಇದಿರಿಟ್ಟು ವಾದದಲಿ
ನಾಮನಷ್ಟದಿ ಅಳಿವೆ ಉಳಿಯೆ ॥೧೯॥

ಬಗೆಬಗೆಯ ಭಕ್ತರಿದ್ದರು ಕಲ್ಯಾಣದೊಳು
ತೆಗೆದರೆ ತಪ್ಪು ತಡೆಗಳನು
ಅಘಹರನನೊದ್ದುಗುಳಿ ಅನುದಿನವು ಕಲ್ಲಿಂದ
ಮೊಗವನೊಡಬಡಿದವರು ಶಿವನ
ಬಗೆದು ನೆನೆಯದೆ ತನ್ನ ತಾ ನೆನೆವಂಥವರು
ಅಗಲಿನೆಂಜಲುಣಿಸುವವರು
ನಿಗಮಗೋಚರ ಹೋಗೆ ಲೆಕ್ಕಿಸರು ಬಂದಂಥ
ಮಗನಾಗೆ ಹೊರೆ ಹೊರೆಸಿದವರು ॥೨೦॥

ಹರನ ಕೈಯಿಂದ ಹಡಪವ ಹಿಡಿಸಿ ನಡೆಸಿದವರು
ವಿರಸ ಸರಸಗಳು ತಮಗಾಗೆ

ಪರವಿನಾಚೆಯ ಮನೆಗೆ ಪರಮದೇವನ ಕಳುಹಿ
ಹಿರಿ ಕುಂಟಣಿಗೆ ತಿರುಹಿದರು
ಧರೆಯೊಳಗೆ ವೇದಾಂತ ಮೀರಿ ಸಿದ್ಧಾಂತದಲಿ
ಪರಶಿವನೊಳಗೈಕ್ಯವಾಗಿರಲು
ಗುರುಮಾರ್ಗ ವೇದಾಂತ ಪೂರ್ವಪದ್ಧತಿಯಿರಲು
ನರಕಿ ನಿಂದಿಸಿ ನರಕಕಿಳಿವೆ ॥೨೧॥

ತೋಹೆ-೨೭, ಪದ-೨೧೭

■

೨೮

ರಾಗ : ಕೇದಾರ ಗೌಳ

ಗಂಡಗಂಜದ ಗಯ್ಯಾಳಿಯು ನಾ ಮನೆ ಮನೆ ತಪ್ಪದೆ ತಿರುಗಿ
ಮಂಡೆ ಹುಳಿತ ನಾಯಂತೆ ತೊಳಲುವೆನು ಊರ ದೊಡ್ಡಿ ಕೊಟ್ಟಗೆಯಲಿ ॥ಪಲ್ಲ॥

ನಾಚಿಕೆಯಿಲ್ಲದೆ ನಲಿದಾಡುವಳು ನಾನೆ ಗರತಿಯೆನುತಿಹಳು
ಯೋಚನೆ ಮನದೊಳು ಸಟೆದಿಟ ಮಾಡಲು ವೆಗ್ಗಳ ಗುಡುಗುಡಿಸುವಳು
ಮೋಚಿದರೊಳ್ಳಿತು ಅಹುದೆಂಬಳು ಮುಂಡೆಯಾಗಿ ಬಾಳುವೆನು
ವಿಚಾರಿಸಿದ ಪುರುಷನ ಒಗೆತನ ಛೀ ಛೀ ಎಂತೆನುತಿಹಳು ॥೧॥

ಭಾವ ಮೈದುನರ ಬೈಯುತಿಹಳು ಬಾಯಿಬಡಕತನದಿಂದ
ಕೇವಲ ಹಿರಿಯರ ಕೆಟ್ಟ ನುಡಿವಳು ಕೂಳುಗೊಬ್ಬ ಸೊಕ್ಕಿನಲಿ
ಆವಾಗಲು ಗರ್ಜಿಸಿ ಚೀರುವಳು ಅಂಜಳು ಅಳುಕಳು ಮೂಳಿ
ಸಾವನು ಗಂಡಗೆ ಕೊಡು ಕೊಡು ಶಿವನೆ ಸತ್ತರೆ ಬದುಕುವೆನೆನುತ ॥೨॥

ಅತ್ತೆ ಮಾತನಾಡಿದರುರಿದೇಳುತ ಆಕೆಯ ಬೈಯುತಲಿಹಳು
ಅತ್ತಿಗೆ ನಾದಿನಿಯರೆಂಬವರಿಗೆ ಮಿತ್ತು ತಾನೆಯಾಗಿಹಳು
ಉತ್ತರ ಕೊಡುವಳು ಗಂಡನ ಬೈವಳು ಸತ್ತನಾಯಿ ಹೋಗೆನುತ
ತೊತ್ತಿನ ಮಕ್ಕಳು ಕರೆಯಬಾರರು ಮತ್ತೊದ್ದರೆ ಕಾಬೆನೆನುತ ॥೩॥

ಅತ್ತೆ ಮಾವನೆಂದೆಂಬ ಅವರನೊಂದಡಕೆಗೆ ಲೆಕ್ಕಿಸದಿಹಳು
ಮತ್ತೆ ಮೈದುನರೆಂಬುವರನು ಹುಲು ವೀಸಕೆ ಲೆಕ್ಕಿಸಳು

ಅತ್ತಿಗೆ ನಾದಿನಿಯರೆಂಬುವರು ಅವರೊಂದೆ ತೃಣ ತನಗೆ
ನಿತ್ಯ ತನ್ನನಾಳುವ ಪುರುಷನ ಅರೆ [ಕಾ]ಣಿಗೆ ಲೆಕ್ಕಿಸದಿಹಳು ॥೪॥

ತನ್ನ ಕಾರ್ಯವನಾರು ಅರಿಯರೆಂದು ತಾನೆ ಗರತೆನುತಿಹಳು
ಚೆನ್ನಾಯಿತು ನೆರೆಹೊರೆಯ ಗರತಿಯರು ಮಾತ ಹೊತ್ತರೆನುತಿಹಳು
ತನ್ನ ಹಿರಿಯರ ಮಾರ್ಗವನ್ನೆಲ್ಲ ನಿರ್ನಳಿದು ತಾನಿಹಳು
ಇನ್ನೀ ಪರಿ ನಡೆಯೆಂದು ಹಿರಿಯಳಂತೆ ತೊನ್ನ ಮೂಳಿ ಹೇಳುವಳು ॥೫॥

ಮನೆಯಲಿ ಗಂಡನ ಇರಿಸಿ ಹೋಗಿ ನೆರೆಮನೆಯಲಿ ಕೆಲೆಯುವಳು
ಅನುಗೂಡದ ಮನ ಬಲ್ಲದು ಮನೆಯಲಿ ನೇಮನೆ ಸುಖವೆನುತಿಹಳು
ಇನಿತು ಮಾತ ಗಂಡನಾಡಿದರೆ ಆಗಲೆ ಕೊಲಬರುತಿಹಳು
ಮನದುಮ್ಮಳಿಯಲಿ ಹೋದರೆ ಗರತಿಗೆ ಮಾತ ನಿಷ್ಠೆ ಎನುತಿಹಳು ॥೬॥

ಗಂಡ ಬಿದ್ದರೆ ಗಂಜಿಯ ಹೊಯ್ಯಳು ಘೂಣದಂತೆ ತಾನಿಹಳು
ಬಂಡರ ಸಂಗಡ ನಗೆ ಚೆಚ್ಚರಗಳು ಗಂಡ ಸಾಯಲೆನುತಿಹಳು
ಹಿಂಡುಬಳಗವೆಲ್ಲ ಕೇಳಿರುವರು ಆಡಲಂಜಿ ಅವರಿಹರು
ಬಂಡ ಮೂಳಿಗೆಲ್ಲಿಯ ಗಂಡನು ಯಮಗುಂಡದಲೆ ಮದ್ದಂಡಿಸುವ ॥೭॥

ಒಂದಿನ ಗಂಡನು ಮನೆಯಲ್ಲಿ ಕುಳಿತಿರುವಾಗ ಓರಗವಿಕ್ಕದಲಿಹಳು
ತಂದು ಸದಾ ಕಾಲವು ದುಡಿದಿಕ್ಕಲು ತಿಂದು ಹಂದಿಯಂತಿಹಳು
ಬಂಧುಬಳಗ ಗಂಡನ ಕಡೆಯವರಿಗೆ ನಿಂದುರಿಯುತ ತಾನಿಹಳು
ಬಂಧುಬಳಗ ತನ್ನವರು ಬಂದರಾನಂದದಡಿಗೆ ಮಾಡುವಳು ॥೮॥

ಬಲು ಮತ್ಸರಿಸುತಲಿಹಳು ನೆರೆಯೊಳು ಬಾಯಿಬಡಕತನದಿಂದ
ಕಲಹಕೆ ಅಂಜಳು ಕಪಟಕ್ಕೆ ಹೇಸಳು ಕಳ್ಳತನಕೆ ಕಡೆಯಿಲ್ಲ
ಛಲದ ಮಾತುಗಳು ಹದುರಿನ ಮಾತು ಛೇಡಿಕೆ ಮಾತನೇಕವು
ಕುಲವಭಿಮಾನವು ನಾಶ ಹೆಣ್ಣು ಗಂಡಿನ ತಲೆಗೆ ತಹನು ತಡವಿಲ್ಲ ॥೯॥

ತನ್ನ ಮಾತಿನೊಳು ಗಂಡನಿದ್ದರೆ ತಾ ಸಂತೋಷದಲಿಹಳು
ಇನ್ನು ಗಂಡ ಇಂತಿರು ನೀನೆಂದರೆ ಉರಿದೇಳುತ ತಾನಿಹಳು
ಸನ್ನೆ ಮಾತುಗಳನಾಡುತ ಮೂಳಿ ಮನಸು ಬಾರದಂತಿಹಳು
ಗನ್ನಗತಕ ಗಯ್ಯಾಳಿಯ ಒಗತನ ತೊನ್ನ ವ್ಯಾಧಿಯಂತಿಹುದು ॥೧೦॥

ಗಾರು ಮೂಳಿ ಗರ್ಜಿಸುತಿಹಳಂಜಳು ಗಂಡನು ತೃಣವೆಂದಿಹಳು
ಚೀರೊದರಲು ಗುದ್ದಾಡುದನರಿಯಳು ಛೀ ಛೀ ಸುಡಲೆನುತಿಹಳು
ಮಾರಿಯಂತೆ ಮನೆಯೊಳಗೆ ಘೂರ್ಮಿಸುತ ಮಿಕ್ಕುಸುದೆಯುತಲಿಹಳು
ಪಾರು [ಮೂ]ಳಿಯ ಒಗತನಕಿಂತ ಅರಣ್ಯವು ಖರೆ ಲೇಸು ॥೧೧॥

ಕಚ್ಚೆಯ ಕಡೆಯಲಿ ಶುದ್ಧವಿದ್ದರೆ ಗಂಡನ ಪರವೆನುತಿಹಳು ತ
ನ್ನಿಚ್ಛೆ ಬಂದವರಿಗೆ ತಾ ಮರಳಿ ಬಂದು ಸುಮ್ಮನಿರುತಿಹಳು
ಬಿಚ್ಚುತಲಿಹಳು ದೊಡ್ಡ ವೀರವನು ಜಾತ ಶುದ್ಧವೆಂದೆನುತ
ಹುಚ್ಚಮೂಳಿ ನಾಚಿಕೆಯಿಲ್ಲದಾಡಲು ಊರಜನ ನಗುತಿಹರು ॥೧೨॥

ಏನು ಹೇಳುವೆನು ಎನ್ನಕ್ಕತಂಗೆಂದಿರೆಂದು ಸುಳಿವವರಲ್ಲ
ನಾನೆ ತಿರುಗುವೆ ಬಡತನದಿಂದಲಿ ನಾಯ ಹಾಗೆ ಎನುತಿಹಳು
ತಾನು ಒಂದು ದಿನ ಮನೆಯ ಹಿಡಿಯಳು ತಿಂಬುದೆ ತಡ ಹೊರ ಕಾಲು
ಏನು ಮೂಳಿ ಹತ್ತು ಹಡೆದರೆ ಶಾಸ್ತ್ರವು ವರ್ಜ್ಯೆಂದು ಹೇಳಿದವು ॥೧೩॥

ಸುಖದಲಿರುತಲಿ ಮನೆಯೊಳಗಾಗಲೆ ಸುಕ್ಕುಳಿಸಿ ತಾನಾಕ್ಷಣವು
ಮುಖಕೆ ಸೆರಗನಿಕ್ಕಿಯು ಬಣ್ಣಿಸಿಕೊಂಡು ಮುದಿ ನಾಯಂತೊದರುವಳು
ಬಿಕಬಿಕನೆ ಬಿರಿಯಲು ತನ್ನಂಥ ಗಯ್ಯಾಳಿಯರೆ ನೆರೆದು
ಅಕ್ಕ ಅಳಲಬೇಡವು ನಿನ್ನ ದುಃಖಕೆ ಲೆಕ್ಕವಿಲ್ಲವೆನುತಿಹರು ॥೧೪॥

ಹೇಗೆ ಮರೆಯಲೆ ಚೊಚ್ಚಿಲದೆರಡು ತಿಂಗಳ ಬಸುರಿ ಇಳಿದೋಯಿತು
ಈಗ ನಾನು ಹತ್ತು ಹಡೆದರೇನು ಚೊಚ್ಚಿಲ ಕೂಸಿಗೆ ಸರಿಯೇ
ಬೇಗೆಯೆದ್ದಿತೊಡಲೊಳಗದ ನೆನೆಸಿ ಹೀಗೆ ಮಾಡಲೆನುತಿಹಳು ಇಂ
ಥಾ ಗಯ್ಯಾಳಿಯ ಒಗೆತನವೆ ಬಿಟ್ಟು ಬೇಗ ಹೋಗು ಸಿಕ್ಕದಲಿ ॥೧೫॥

ಮೊದಲ ಗಂಡನ ಮಕ್ಕಳಿಗೆಂದರೆ ಮನದೊಳು ಮರುಗುತಲಿಹಳು ತನ್ನ
ಮದುವೆಯಾಗಿ ತಂದಾತನ ಮಕ್ಕಳ ಕಂಡರೆ ಉರಿಯುತಲಿಹಳು
ಪದರಪಲ್ಲಟದ ಮಾತನು ಬಿಡಳು ಪಾರು ಮೂಳಿ ತಾನೀಗ
ಹದಿರ ಚದುರನಾಡುವ ಗಂಡನಿಂದಲು ಒದಿಸಿಕೊಂಡು ಒರಲುವಳು ॥೧೬॥

ಗಂಡಸಿನೊಳು ಚೌಗಾಚಾರದಲಿ ಗರತಿಯಂತೆ ಕುಳಿತಿಹಳು
ಗಂಡ ಬಂದರಂಜಳು ಅಳುಕಳು ನ್ನ ಬೊಂಡಿಗೆ ಸರಿಗಂಡಿಹಳು

ಉಂಡುದುಯಿಲ್ಲ ಉಟ್ಟುದುಯಿಲ್ಲ ಈ ಪಾಪಿಯ ಕೈಯ ಹಿಡಿದು ನಿಮ್ಮ
ಹೆಂಡಿರಂಥ ಪುಣ್ಯವು ನನಗಿಲ್ಲವು ಗಂಡನಿದ್ದು ದುಂಡೆಂದು ॥೧೭॥

ಇಟ್ಟುದುಯಿಲ್ಲ ತೊಟ್ಟುದುಯಿಲ್ಲ ಬಂಗಾರ ಬಣ್ಣವನು
ಉಟ್ಟುದುಯಿಲ್ಲ ಹೊದ್ದುದುಯಿಲ್ಲ ಸಿಂಗಾರದ ಸೀರೆಯನು
ಕೊಟ್ಟುದುಯಿಲ್ಲ ಕೊಂಡುದುಯಿಲ್ಲಿ ಹೊನ್ನಪಾಕಿ ಏನುವನು
ಖೊಟ್ಟಜಾತಿಯ ಕೈಯ ಹಿಡಿದು ನಾ ಕೆಟ್ಟೆ ಕೇಳಿ ಎನುತಿಹಳು ॥೧೮॥

ಈ ಪರಿಯಲಿ ತನ್ನಳಲ ಹೇಳುವಳು ಪರಗಂಡಸು ಎನ್ನದಲಿ
ಪಾಪಿಯ ಕೈಹಿಡಿದವರಿಗೆ ಒಗೆತನ ಪರಿಣಾಮಸುಖವುಂಟೆ
ಶಾಪಿಸಿ ಕಲ್ಲನು ಒಡೆಯುತೇನೆ ನನ್ನ ಕೊಡಿಸಿದವರಿಗೆಂದೆನುತ
ಪೋಪವರಿಗೆ ಬರುವವರಿಗೆ ಹೇಳುವಳು ಹೆಡ್ಡಮೂಳಿ ನಾಚದಲಿ ॥೧೯॥

ತಲೆವಾಗಿಲದೊಳು ಬೈಗು ಬೆಳಗು ತಾನು ನಿಂತು ದಣಿಯದಲೆ
ಗಲಗಲಗುಟ್ಟುತ ಕೆಲೆದರೆ ನಾಲಗೆ ಹೊರಗೇರಿಗೆ ವೆಗ್ಗಳವು
ಬಲು ಬಲೆಗಾರತಿ ಬಾಯ ಬಡಿಯುತಲಿ ಹಲಬರ ಮರಳು ಮಾಡುವಳಿಂಥ
ಛಲತಿಯ ನೆಚ್ಚಿದ ಗಂಡನ ಲಜ್ಜೆ ಹೋಯಿತು ಹಾಡೇಹಗಲು ॥೨೦॥

ತನ್ನ ಗಂಡಗೆ ತೌಡಿನ ನುಚ್ಚು ತಾನೇನುಂಬಳಕೆ
ಬೆನ್ನು ಛಳಿಛಳಿಯಾಯಿತೆನುತಲಿ ಬಿಸಿ ಮೂರು ರೊಟ್ಟಿಯನು
ಎಣ್ಣೆ ಹೀನವೆಂದು ತುಪ್ಪವ ತಂದು ಎದ್ದೆದ್ದೆಲ್ಲವ ತಿಂದು
ಎಣ್ಣೆ ಸುಖವಿಲ್ಲ ಮಲಗುವೆನೆಂಬಳು ಕಣ್ಣು ತೆರೆಯವೆನುತಿಹಳು ॥೨೧॥

ಹೊಟ್ಟೆ ಬೇನೆಯೆದ್ದಿತು ಬಲುಕೇಡಿಲಿ [ಮಲ] ಕಡೆ ನಿಲ್ಲದುಯೆನುತ
ಕುಟ್ಟಿಕೊಂಡು ಅಳುತಿಹಳು ಬಸುರನಿನ್ನು ಸತ್ತೆನೆಂದೆನುತ
ಕೆಟ್ಟಮಲವು ಝಾಡಿಸಿ ಬೀಳಲಿಕೆ ಹೆರಿಗೆ ಆಗಲು ಮುಂದೆ
ಹುಟ್ಟಿದೆ ನಮ್ಮ ತಾಯ ಬಸುರಲೆಂದು ಒಟ್ಟಿ ಒದರಿ ಅಳುತಿಹಳು ॥೨೨॥

ಇನ್ನೀ ಒಗೆತನ ಸುಡಲೆನುತಿಹಳು ಈತನಾರೇನೆಂದೆನುತ
ಬೆನ್ನಹತ್ತಿದರೆ ಬೇತಾಳನು ತಾ ಹೊರಗೆ ಹೋದದೆನುತ
ನನ್ನ ಉಮ್ಮಳಿಗೆ ನಾನು ತಿರುಗಿದರೆ ನನ್ನ ಸೇರನೆಂದೆನುತ
ತನ್ನಂಥ ಗರತಿಯರಿಗೆ ಹೇಳಿ ಇನ್ನೆಲೆ ಸುಡುಗಾಡೆನುತ ॥೨೩॥

ಆತ ತಂದ ಪಾಕಿಯ ಹಿಡಕೊಂಡು ಜೋಳಕೆ ತಿರುಗತಲಿಹಳು
ಮಾತುಗಂಟಿ ಮಹಾಚೆಲ್ಲಾಳಿ ಮನೆ ಮನೆದಪ್ಪದೆ ಕುಳಿತು
ಪಾತಕತರಿಯ ಬದುಕಿಗೆಂದು ಫಲವಿಲ್ಲದೆ ಹೋಯಿತಕ್ಕಾ
ನೂತು ನೂತು ಮಣ್ಣಾದೆನು ಬದುಕಿಗೆ ನೂರೆಂಟರ ವಾರದಲಿ ॥೨೪॥

ಗರತಿಗೇಕೆ ಈ ಪರಿ ನಡೆನುಡಿ, ಗಂಡ ಹೇಳಿದಂತಿದ್ದು
ಪರಪುರುಷರು ತನ್ನಯ ತಂದೆಯೆಂದು ಪರರ ಮಾತನಾಡದಲಿ
ನೆರೆಹೊರೆಗಂಜಿ ಹಿರಿಯರಿಗಳುಕಿ ನಯದಿಂದ ನಡೆಯುತಲಿ
ಗರತಿಯರೊಳು ಶಿರೋಮಣಿಯಾದರೆ ಗುರು ಗುಂಡೇಶನೊಲಿವ ॥೨೫॥

ತೋಹೆ-೨೮, ಪದ-೨೪೨

■

೨೯

ಶ್ಲೋಕ:
ನಂದಿ ಸರ್ವಜ್ಞಸ್ವಾಮಿ
ಒಂದೆನಗೆ ಗಮನದಿ ತಾ ಬಂದಪ ಸರ್ವೇಶ
ನಿಂದರವ ವರವ ತಾ ಶಿವ
ತಂದೆ ಆನಂದವನಿಂತು ಈವನುಂ ಸರ್ವ
ನನ್ನ ನಡೆಗೆ ನಾ ನಾಚೆ ಮೂಳ
ಅನ್ಯರಿಗೆ ಹೇಳಕಲಿತೆ ಬೋಧೆಯ ಬಹಳ ॥ಪಲ್ಲ॥

ನಿಂದೆಯ ಮಾತೆಂದರೆನ್ನ ಬೆಂದ ಜಿಹ್ವೆಯಾದರೆ ಹ
ನ್ನೊಂದು ಮೊಳದ ಬಲಕೆ ಅಧಿಕವಳುಕೆ ನಾ
ನೆಂದು ಬಂದೆನಂದಿಗೆ ಮನ ಹೇಳುಕೆ ಹೊರೆಯಿಕೆ
ಚೆಂದದ ಮಾತೇಕೆ ಛೀ ಛೀ ಕೊಳಕೆ ॥೧॥

ಅಲ್ಲದ ಅನ್ಯರೊಡವೆಯೆನಗೆ ಬೆಲ್ಲವಾಗಿ ಬಿಡದವನಿ
ಗೆಲ್ಲಿಯ ಧರ್ಮದ ಮತುಗಳು ಒಳಗೆ
ಬಲ್ಲವರೊಪ್ಪರು ನಿನ್ನ ಟೊಳ್ಳು ಇಷ್ಟು
ಸಲ್ಲದು ಸಾವಿರಕೋಟಿ ಸುಳ್ಳು ॥೨॥
ಸಣ್ಣ ಸ್ವರವ ತೆಗೆದು ತಿಣುಕಿ

ಕಣ್ಣುಮುಚ್ಚಿ ಒಲೆದು ಹೇಳುವೆ
ಹೆಣ್ಣು ಕಂಡರೆ ಕಣ್ಣನಿಡುವೆ ಪುಂಡ ಇಂಥ
ಬಣ್ಣ ಭಜನೆಗಾರಗೆ ಯಮಗಂಡ ಬಸ
ವಣ್ಣ ಮೆಚ್ಚುವನೆ ಗುರುಗುಂಡ ॥೩॥

ತೋಹೆ-೨೯, ಪದ-೨೪೫

■

೩೦

ಲಿಂಗಲೀಲೆ ಡಂಗುರ ಮರ್ತ್ಯಕೆ ಬಂದುದು
ಲಿಂಗಲೀಲೆ [ಡಂಗುರ*] ॥ಪಲ್ಲ॥

ಹರಗೆರಗುವೆನು ಹರುಷದಲಿ
ಶರಣರ ಚರಣ ಕರುಣದಲಿ
ಕರಿಮುಖನೆ ನೆರೆ ಬಾ ಬಲದಲಿ
ಸರಸ್ವತಿ ಸರ್‍ರನೆ ನೆಲೆಸೆನ್ನ ಜಿಹ್ವೆಯಲಿ ॥೧॥

ಆಧಿವೃಷಭ ಗತಿಯೆಂದು ಅ
ನಾದಿ ಸಿದ್ಧಗೆ ಶರೆಣೆಂದು ಆತನ
ಪಾದ ರಜವ ತೆಗೆತಂದು
ಈ ದೇಹ ಜೀವಕೆ ನೀಡಲು ಪದ ಬಂದು ॥೨॥

ಚತುರ್ದಶಭುವನದಧಿಪತಿಯ
ಸ್ತುತಿಸಿ ಬೇಡುವೆನು ಸುಮತಿಯ
ಕ್ಷಿತಿಯೊಳು ಬಂದ ಸ್ಥಿತಿಯ
ಶ್ರುತದಿ ಲಾಲಿಪುದು ಶರಣರ ಸಂಗತಿಯ ॥೩॥

ನಾಡಪಾಪವ ನಾರದನೊಯ್ದು
ಕೂಡೆ ಹೇಳಿದ ಈಶನೈದು
ಜೋಡು ಕರ್ಣವು ತುಂಬಲರಿದು
ಮಾಡಿದ ಮರ್ತ್ಯರ ಮೇಲೆ ದಂಡ ಬಲಿದು ॥೪॥
ವೀರಭದ್ರೇಶ ಮುಂ ದಂಡು

ಕ್ರೂರ ದುರ್ಗಿಯ ಕೂಡಿಕೊಂಡು
ಮಾರಿ ಮಸಣಿಗಳ ಹಿಂಡು
ಘೋರನೆ ತೆರಳಿತು ಪಾಪದ ಮೇಲೆ ದಂಡು ॥೫॥

ಉಡುಚಿ ಚೌಡಿಯೆಂಬುವರು
ಪಿಡಿದ ಕತ್ತಿಯು ಬಾಳದವರು
ನಡೆ ಪೊಡವಿಗೆಂದವರು
ಕಡೆಕಡೆಂದುಲಿದು ತೆರಳುತುತಲಿದ್ದರಂತೆಲ್ಲರು ॥೬॥

ಪ್ರೇತ ಭೂತ ಪಿಶಾಚಿಗಳು
ಬೇತಳ ಭೈರವಾದಿಗಳು
ಭೂತೇಶ ಸಲಹ ಬಿಟ್ಟಗಲು
ಭೂತಳಗಳನೆಂದು ತೆರಳುತಿರಲಾಗಲು ॥೭॥

ಬೀರ ಜಟ್ಟಿಗ ಮೈಲಾರ ಮು
ನ್ನೂರಕ್ಷೋಹಿಣಿ ಭೂತ ಕ್ರೂರ ಬರೆ
ಧಾರುಣಿಯೆಲ್ಲ ಸಂಹಾರವೆಂದು
ಕಾರಣಿಕ ನಾಲ್ವರ ಮನಕೆ ದಯೆದೋರು ॥೮॥

ಕರುಣೆಗಳೊಡೆಯ ಕಾಯೆಂದು
ಭರದಿ ನಾಲ್ವರು ಅಡ್ಡ ಬಂದು ಸ್ವಾಮಿ
ನರಲೋಕವರಿಯದೇನೆಂದು
ಕರವ ಮುಗಿದು ಲಲ್ಲೆಗರೆದು ಬೇಡೆಂದು ॥೯॥

ಸಾರಿಸು ಸತ್ಯವೆನ್ನೊಡೆಯ
ಧಾರುಣಿಯೊಳು ಧರ್ಮ ನುಡಿಯ ಲೋಕ
ಮೀರಿ ನಡೆಯಲಾಗಿ ಕಡೆಯ
ಮಾರಿ ಕೇಡನು ಬಿಡಿಯೆಂದು ಪಾದವ ಹಿಡಿಯ ॥೧೦॥

ನಮ್ಮನು ಬಿಡೆಂಬಿರಿ ಕೋಪ
ನಿಮ್ಮಿಂದ ಬೆಳೆಯಿತು ಪಾಪ
ಸುಮ್ಮನೆ ಇರಿರೆಂದು ನಿರೂಪ ಕೊಟ್ಟ
ಗಮ್ಮನೆ ಸಾರಿ ನೀವೆ ಸತ್ಯವನುಪಮ ॥೧೧॥

ಲಿಂಗ ನಿರೂಪದಲಿ
ಮಂಗಳ ಮಹಿಮರು ಕದಲಿ
ಹಿಂಗದೆ ಮರ್ತ್ಯಲೋಕದಲಿ ಬಂದು
ಡಂಗುರಗಳ ಸಾರಿ ಚೆಂದಚೆಂದದಲಿ ॥೧೨॥

ಏಳುನೂರರಯೆಪ್ಪತ್ತಕೆ ಬಹರೆಂದು
ಹೇಳಿದ ನುಡಿಯ ಪ್ರಮಾಣಕೆ ಇವರು
ಹೇಳಬಂದರು ಬೋದೆಯ ಜಗಕೆ ಇನ್ನು
ಕೇಳಿ ನಡೆದವರಿಗೆಣೆಯೆ ಪುಣ್ಯದ ಫಲಕೆ ॥೧೩॥

ಹಳಿದಿರಿ ಹದುರಿನಲಿ
ತಿಳಿದು ನೋಡೇಕಚಿತ್ತದಲಿ ಇವರು
ಸ್ಥಳಕುಳವಿಡಿದು ಬಂದಿರಲು ನಮ್ಮ
ಒಳಗೆ ಗಳಗಳನೆಲ್ಲ ಕಳೆದು ಹೂಳುತಲಿ ॥೧೪॥

ಕೇಡುಬಂದಿತು ಪಾಪಕೆಂದು
ನಾಡಿಗೆಲ್ಲವು ಸಾರುತಂದು ಕೆಡ
ಬೇಡ ಪುಣ್ಯದಿ ನಡೆಯೆಂದು ದಯ
ಮಾಡಿದವರ ಕೆಟ್ಟಾಡಲು ಮಹಾ ಕುಂದು ॥೧೫॥

ಹುಸಿ ಕೊಲೆ ಕಳ್ಳ ಪರದಾರ
ರಸವತಿ ಕಾಂಕ್ಷೆಗಳು ಕ್ರೂರ ಸಪ್ತ
ವ್ಯಸನವೆಂಬವನೆಲ್ಲ ದೂರಮಾಡಿ
ಶಶಿಧರ ಶರಣೆಂದೆನಲು ಮುಂದೆ ಅಹರು ॥೧೬॥

ಪಂಚೇಂದ್ರಿಯಗಳಿಚ್ಛೆಯಲಿರದೆ
ವಂಚನೆ ಪ್ರಪಂಚವನೆಲ್ಲ ತೋರದೆ
ಹಿಂಚುಮುಂಚುಯೆಂಬವೆಲ್ಲವ ಜರಿದೆ ಕೇಳಿ
ಕಿಂಚಿತವಾದರೆ ಮಿಂಚು ನಡೆಯಿರಬಾರದೆ ॥೧೭॥

ಅಷ್ಟಮದಗಳಿಂದ ಕೆಟ್ಟು
ದುಷ್ಟ ಧರ್ಮವನೆಲ್ಲ ಬಿಟ್ಟು

ನಷ್ಟವಾಗಲಿ ಬೇಡೊಂದಿಷ್ಟು
ನಿಷ್ಠೆಯಿಂದಿರಲಿಕೆ ಮುಂದದೆಷ್ಟು ॥೧೮॥

ಹದುರಚದುರು ಬೇಡ ಕೇಳಿ
ಸದರವೆಲ್ಲವು ಡಂಗುರ ಹೇಳಿ ಅವಕೆ
ಹೆದರದಲಿಹೆ ನಾನು ವಾಳಿ ಮುಂದೆ
ಉದುರಿಪೋಪವಗೆಲ್ಲಿಯದು ಜ್ಞಾನ ಹೇಳಿ ॥೧೯॥

ಹಿಂದಾಡದಿರಿ ಜನರೆಲ್ಲ ಮಾತು
ಬಂದಾಗ ಸುಮ್ಮನಿರಲಿಲ್ಲವು
ಕುಂದ ಪೇಳ್ದವೆ ಡಂಗುರ ಸೊಲ್ಲ ವ್ಯರ್ಥ
ನಿಂದಿಸಿ ನರಕದೊಳಗೆ ಬಿದ್ದಿ ಖುಲ್ಲಾ ॥೨೦॥

ನಂಬಿ ನಡೆಯ ಗುರುವೆಂದು
ಬಂಬ ದುರಿತವೆಲ್ಲ ಹಿಂದಾಗಿ
ಇಂಬುಗೊಂಬುದು ಜ್ಞಾನ ಮುಂದು
ಬಂದು ಶಂಭುಮುಖ ಗುಂಡೇಶ ಗತಿ ಎನ್ನೆಂದೆಂದು ॥೨೧॥

ತೋಹೆ–೩೦, ಪದ–೨೬೬

■

೩೧

ಎಂಟು ತೆರನುಂಟು ಧರಿಸುವ ವಸ್ತುಸ್ಥಾನಗಳು
ಎಂಟಕ್ಕೆ ಎಂಟಾತ್ಮ ಎಂಟು ದೈವ ॥ಪಲ್ಲ॥

ಇಂದ್ರಂಗೆ ಭಂಡಾರ ಬ್ರಹ್ಮಂಗೆ ಗಂಧವು
ವಿಷ್ಣುವಿಗೆ ನಾಮ ರುದ್ರಂಗೆ ವಿಭೂತಿ
ಈಶ್ವರಗೆ ಕಸ್ತೂರಿ ಸದಾಶಿವಂಗಂಗಾರ
ಇಂತು ಮಹದೇವಂಗೆ ಮಹಿಯ ರಜವು
ಇನ್ನು ಶೂನ್ಯಂಗೆ ಏಳು ಸ್ವಯವು ಕಾಡಿಗೆ
ಎಂಟು ಧರಿಸುವರು ಈ ಕ್ರಮದಿಂದಲಿ
ಏನೆಂಬುದರಿಯೆ ಎಂತೆಂಬುದರಿಯೆ
ವೆಗ್ಗಳದ ಭಕ್ತಿಯರಿಯೆ ವ್ಯರ್ಥ ನಾನು ॥೧॥

ಪಾದ ಪ್ರಥಮವು ನಾಭಿ ಭುಜ ನೊಸಲು ಮೊದಲಿಂತು
ಈ ದೇಹ ಜಿಹ್ವೆ ಮಂಡೆಯು ಕಂಗಳು
ಆದವೆಂಟು ಸ್ಥಾನ ಕೇಳಾತ್ಮ ಅಷ್ಟಕವ
ಶ್ರೀಧರಣಿ ಜಲವು ಅಗ್ನಿಯು ಮರುತವು
ಐದು ಆಕಾಶವಹ ತತ್ವಪಂಚಕಗಳು
ಭೇದಿಸಿ ಬೆಳಗುತಿಹ ರವಿ ಶಶಿಗಳು
ಆಧ್ಯಾತ್ಮ ಗೂಡೆಂಟು ಆತ್ಮಂಗಳಾದವು ಅ
ನಾದಿ ಮೊದಲಿಂತು ವರ್ತಿಸಿ ನಡೆಯಿತು ॥೨॥

ಪಾದದಲಿ ಭಂಡಾರ ಪ್ರಜಾಪತಿ ನೆಲೆ ಗಂಧ
ಆದವೆರಡು ಭುಜಕೆ ನಾಮಗಳು
ಎಯ್ದೆ ನೊಸಲಿಗೆ ವಿಭೂತಿಯ ಪಟ್ಟವೆ ಪಟ್ಟ
ಈ ದೇಹಕೆ ಕಸ್ತೂರಿ ಜಿಹ್ವೆಗಂಗಾರವು
ಮಾದೇವ ಭೂರಜವು ಶಿರದಲ್ಲಿ ಏಳು ಸ್ವಯ
ವಾದ ಕಪ್ಪಿನ ಬೊಟ್ಟು ನಯನದಲಿ
ಭೇದಕ್ರಮಗಳಿಂದಿಂತು ಧರಿಸುವ ಸ್ಥಾನಗಳ
ಹಾದಿಯರಿಯದೆ ವ್ಯರ್ಥವಾದೆನಲ್ಲ ॥೩॥

ಇಂದ್ರನಲ್ಲಿಂದ ಮಳೆ ಇಳಿಯೆ ಜಗ ಭಂಡಾರ
ಮುಂದೆ ಬ್ರಹ್ಮೋತ್ಪತ್ಯ ವಾಸನೆ ಗಂಧ ಮು
ಕುಂದ ಬಲ್ಲಿದನು ಹರಿಯೆಂಬುದೀಗಲೆ ನಾಮ
ಎಂದರೆಯದು ಲಯವೆ ಭಸ್ಮವು
ತಂದೆ ಈಶ್ವರನೆಂಬಗೆ ದೇಹಸ್ವರವೆ ಕಸ್ತೂರಿ
ನಿಂದ ಪರಶಿವನ ಪ್ರಸಾದಂಗಾರ
ಒಂದೆ ಭೂರಜ ಉಮಾದೇವನದಾಗಿರೆ
ಬಂದೇಳು ನಿಜಸ್ವಯದ ಕಪ್ಪಿನ ಬೊಟ್ಟು ॥೪॥

ಸಾದನಿಡಿ ನಡೆಹೀನರು ನುಡಿಹೀನರು
ಸಾದನಿಡಿ ಸುಜ್ಞಾನಿ ಸಾದನಿಡಿ ಅಜ್ಞಾನಿ
ಸಾದನಿಡಿ ಹಿರಿದುಕಿರಿದು ಸರ್ವರು
ಸಾದು ಷಡುದರುಶನವು ಸಾಧು ಸದ್ಭಕ್ತರು
ಸಾದನಿಟ್ಟಿಟ್ಟು ಸಾಧಿಸಿ ಪಡೆದರು

ಸಾದೆಂಬುದೆ ಸದಾಚಾರ ಸತ್ಯದ ಮೊತ್ತ
ಸಾದನಿಟ್ಟವರು ಸಹಜರು ಕೇಳಿರೈ ॥೫॥

ಕಪ್ಪಿನೊಳಗಾ ಇಂದ್ರ ಕಪ್ಪಿನೊಳಗಾ ಬ್ರಹ್ಮಿ
ಕಪ್ಪಿನೊಳಗಾ ವಿಷ್ಣು ಕಪ್ಪೇ ರುದ್ರನು
ಕಪ್ಪಿನೊಳಗಾ ಈಶ್ವರ ಕಪ್ಪಿನೊಳಗಾ ಶಿವನು
ಕಪ್ಪಿನೊಳು ಮಹಾದೇವ ಕಪ್ಪು ಶೂನ್ಯ
ಕಪ್ಪಿನಿಂದಲೆ ನಿಧಿಯು ಕಪ್ಪಿನಿಂದಲೆ ವಿಧಿಯು
ಕಪ್ಪಿನಿಂದಲೆ ಫಲವು ಕಪ್ಪೇ ಸ್ಥಲವು
ಕಪ್ಪೆಂಬುದೆ ತತ್ವಮಸಿಯೆಂಬ ವೇದಾರ್ಥ
ಕಪ್ಪೆರಡು ಕಣ್ಣಿನಿಂದ ಕಾಡಿಗೆ ॥೬॥

ಕಾಡಿಗೆಯು ಜಗವೆಲ್ಲ ನೋಡಿ ತಿಳಿಯಿರೊ ಇದನು
ಕಾಡಿಗೆ ಹುಟ್ಟಿ ಕಾಡಿಗೆ ಬೆಳೆಯಿತು
ಕಾಡಿಗೆಯು ಉಂಡಿತ್ತು ಕಾಡಿಗೆಯು ಉಟ್ಟಿತ್ತು
ಕಾಡಿಗೆಯು ಸರ್ವವೆಲ್ಲವ ಮಾಡಿತು
ಕಾಡಿಗೆಯ ಬೊಟ್ಟವನಿಟ್ಟರು ಹುಟ್ಟಿನಲಿ ಅವರು
ಕಾಡಿಗೆಯನಿಡಿರೊ ಕಪ್ಪಿನ ಭಸ್ಮವ ॥೭॥

ಸ್ತ್ರೀಸಂಗದೆಡೆಗೆ ಬಂದವು ಪಾದ ಭಂಡಾರ
ಆಸೆಯೆರಡೊಂದಾಗೆ ವಾಸನೆ ಗಂಧ
ದೇಶದ ಆರ್ಭಟೆಯಾಯಿತು ದಿಮ್ಮಿನಿಸೆಂಬ ನಾಮ
ಆಸರದ ದೇಹದ ಬೆಳ್ಪೆ ವಿಭೂತಿ
ಭಾಷೆ ತೋರುತಲಿ ಈ ಶರೀರ ಕಸ್ತೂರಿಯ
ಎಸೆದಾ ಶಿವ ದಾಂಟಿಸೆಂದಂಗಾರ
ವಿಶೇಷ ಮಹಾದೇವ ರಜವರಳುತಿದ್ದಿತು ಮುಂದೆ
ಮೋಸವಿಲ್ಲ ಕಪ್ಪೆರಡು ಮೊಲೆಯುಂಡಿತು ॥೮॥

ಅಷ್ಟಕುಲಪರ್ವತವು ಅಷ್ಟದಿಗ್ಗಜಗಳು
ಅಷ್ಟದಿಕ್ಪಾಲಕರು ಅಷ್ಟಗಂಧ
ಅಷ್ಟಾಷಷ್ಟಿತೀರ್ಥ ಅಷ್ಟಮಹದೈಶ್ವರ್ಯ
ಅಷ್ಟ ಅಷ್ಟಾಸನವು ಆತ್ಮ
ಅಷ್ಟ ಮೋಹಗಳು ಅಷ್ಟ ಐಕ್ಯವು

ಇಷ್ಟೆಲ್ಲ ಕಾಡಿಗೆಯ ಬೊಟ್ಟಿನೊಳಗಾಗಿರಲು
ಇಷ್ಟು ಕೊಳಬೇಕು ಕಾಡಿಗೆಯ ಸಾರ್ದು ॥೯॥

ಇದು ಸತ್ಯ ಇದು ಸತ್ಯ ಹೊದಕುಳಿಗೊಳಬೇಡ
ಇದು ವೇದ ಶಾಸ್ತ್ರ ಆಗಮ ಸಾರವು
ಇದು ಗುರುವಿನ ನುಡಿಯು ಇದು ಪುರಾತರ ನುಡಿಯು
ಇದು ಬಲ್ಲವರ ನುಡಿಯು ಇದು ಸಿದ್ಧವು
ಹದಿನಾಲ್ಕು ಭುವನದೊಳಗಿದು ವೇದ್ಯವಿದು ಚ್ಯೋದ್ಯ
ಸದುಹೃದಯರಿಗೆ ಸಹಜ ಸನ್ನುತವಿದು
ಮದನಾರಿಯ ಮಹಿಮೆ ಮತ್ತೊಬ್ಬರಳವಲ್ಲ
ಇದ ಕಪ್ಪಿನ ಬೊಟ್ಟ ರುದ್ರನಿಟ್ಟ ॥೧೦॥

ಗುಂಡರಾಯನು ಕಪ್ಪನಿಟ್ಟನಾ ರಕ್ಷೆಯದ
ಕಂಡಿರೆ ಗದ್ದಿಗೆಯರಾಯ ದಹಿಸಿ
ಕೂಂಡಿಟ್ಟ ಕಾಡಿಗೆಯ ಬೊಟ್ಟ ತಾ ಕಣ್ಣಿನಲಿ
ಮಂಡಲದೊಳಿಟ್ಟ ಶಿವಯೋಗಿರಾಯ
ಹಿಂಡು ದೂಷಕ ಧಾಮ ಧೂಮತಳಪಟರಾಯ
ನೆಂದಿಟ್ಟನಂದದ ಕಾಡಿಗೆ ಬೊಟ್ಟನು ಅ
ಜಾಂಡ ಬ್ರಹ್ಮಾಂಡವೆಲ್ಲಕೆ ಕಾಡಿಗೆ ಬೊಟ್ಟು
ಪಂಡಿತಾರಾಧ್ಯ ಹವನದ ಬೊಟ್ಟಿದು ॥೧೧॥

ತೋಹೆ-೩೧, ಪದ-೨೭೭

■

೩೨

ಕೇಳಿರೆಲ್ಲರೂ ಕೊರವಂಜಿ ಹೇಳುವೆ ಮನದ ಮಾತ ॥ಪಲ್ಲ॥

ಮೇಲು ದೇಶದಲಿಂದ ನಾಲ್ಕು ನಾಡಿಗೆಯುಳ್ಳ
ಸಾಲು ಗ್ರಾಮಗಳೆಂಬತ್ತನಾಲ್ಕು ಲಕ್ಷವ ತಿರುಗಿ
ಬಾಲೆ ನಾ ಬಂದೆನು ಭಕ್ತಿಯೆಂಬ ಮಡಿಸೆಲ್ಲೆಯ ಕಾಣದಲಿ
ಕಾಲಮರಣವೆಂಬ ಸೆಲ್ಲೆ ಮಾಸಿದುದನುಟ್ಟು
ಕೊಲ್ಲು ನಿಜಗಾಣದೆ ಕೋಪಮುಳ್ಳನೆ ಪಿಡಿದು
ಓಲೆಯ ಭಕ್ತಿಭಿಕ್ಷವ ಬೇಡಬಂದೆನು ಆಲಸ್ಯ ಮಾಡದಿರಮ್ಮ ॥೧॥

ಮಂಡೆ ಮಾಸಿತು ಎನ್ನಯ ಮನಶುದ್ಧವಿಲ್ಲದೆ
ತೊಂಡುಮೊಂಡುಗಳಿಂದ ತೊಡಕಿತೆನ್ನಯ ಮುಡಿ
ಗಂಡುಮಕ್ಕಳುಯಿಲ್ಲ ಜ್ಞಾನವೆಂದೆಂಬವು ಹಿಂಡುಪಾಪದ ಹೆಣ್ಣು
ದುಂಡೇರ ಹಡದಿಗೆ ದುಃಖದೊಳಗಾದೆ
ಗಂಡನೊಲ್ಲನು ತನ್ನ ಗುಡಿಲನು ಹೊಗಲೀಸ
ಕಂಡ ಕೇಡಿನ ಪುರುಷರೆ ಕಣ್ಣನಿಟ್ಟರು ॥೨॥

ಎನಗೆ ಭಂಡಿನ ಬದುಕಾಯಿತೆ ಅಮ್ಮಾ ಕೂ
ಸನು ಎತ್ತಿದೆ ಕುಟಿಲವೆಂದೆಂಬುದ ಗಾಸಿಮಾಡುತಲಿದೆ
ಘನವೆನ್ನ ಕಾಡುತ ಆಸೆಯೆಂಬ ಬುಟ್ಟಿಯ ತೆಲೆಯಲಿ ಹೊತ್ತು
ಆಸತ್ತು ಬಂದೆನಮ್ಮಾ
ದೇಶ ದೇಶವನೆಲ್ಲ ತಿರುಗಿಯು ನೆಲೆಗಾಣೆ
ಪಾಶ ಮಾಯದ ನೆಲವ ಮಾಡಿಕೊಟ್ಟನು ಪುರುಷ
ಏಸು ಪರಿಯಲಿ ಮಾರಲೊಲಿದೆನೆಂಬ ಆಸೆಯು ತೋರಿದನೆ ಅಮ್ಮಾ ॥೩॥

ಹೆಚ್ಚಿನ ಮರಹೆಂಬ ಹೆಡಗಿಗೆಯಣಕಿಲ್ಲ
ದುಶ್ಚಿತ್ತವೆಂದೆಂಬ ಬುಟ್ಟಿಗಳೆಸಿಕೆ
ಮಚ್ಚು ಹೆಣ್ಣು ಹೊನ್ನು ಮಣ್ಣೆಂಬ ಹಗದಲಿ ನಚ್ಚಿನ ಹೊರೆಗಟ್ಟೆ
ನಿಚ್ಚ ಹೊರೆಸಿ ಎನ್ನ ನಿಂದಿರದಟ್ಟಿದ
ಕಚ್ಚುತಲಿವೆ ಬಂದು ಪಂಚೇಂದ್ರಿಯೆಂಬ ನಾಯಿ
ಹೆಚ್ಚಿನ ಗಂಡಗೆ ಹೆಗೆ ನಡೆಯಬೇಕು ಮುಚ್ಚತ್ತೆನೊಗೆತನಕೆ ಅಮ್ಮಾ ॥೪॥

ಸಯಿದಾನವನೆ ನೀಡಿ ಸತಿಯರೆಲ್ಲರು ಶಿವನ
ಬಯಿದಾಳು ನಮ್ಮತ್ತೆ ಬಡಿದಾನು ಮಾವನು
ಅಯಿದಾರೆ ತಾವಿನ್ನು ಅವರಿಗೆ ಸಾವಿಲ್ಲ ದೈವವೆ ತಾನೆ ನೋಡಾ
ಸ್ವಯವುಳ್ಳವರಿಗೆ ಸಲ್ಲದವರಿಗೆ ಸಲ್ಲದವಳು ನಾನು
ನಯವುಳ್ಳ ಸತ್ಯವೆಂಬಂಬಲಿಯನಿಕ್ಕಿರೆ
ದಯ ಮನದಿಂದಲಿ ಧರ್ಮವ ಮಾಡಲು ಕೈವಲ್ಯಪದ ಕಾಣಿರೆ ಅಮ್ಮಾ ॥೫॥

ಕಿಂಕಿಲವೆಂದೆಂಬ ಮೊರದೊಳಗೆ ನೀಡಿ
ಶಂಕೆಯಿಲ್ಲವೆಂಬ ಸಯಿದಾನವನೆ ತನ್ನಿ
ಶಂಕರಗಂಡನ ಪಿಡಿದು ಹೇಳುವೆ ಮುಂಕೊಂಡು ಕೇಳಿರೆ

ಸೋಂಕು ಶಿವನದಿದು ಮತ್ತೆ ಕೊರವಂಜಿ
ಈಕೆ ಹೇಳಿದಳೆಂದು ಇಳಿಕೆ ಮಾಡದಲಿರಿ
ಸಾಕ್ಷಾತ್ ಸ್ವಾಮಿಯ ಪೂಜೆ ಮಾಡುತಲಿರೆ ಆ ಕಡೆ ಒಳಿತು ಬಂಬಾದಮ್ಮಾ ೬

ಹೆಂಡರಿಬ್ಬರು ನಮ್ಮನಾಳುತಲಿರುವಂಥ
ಗಂಡನೆಂದೆಂಬವನು ಗರುವ ಪಾಪಯೆಂಬ
ಮುಂಡೆ ಮುದುಕಿಯೆನ್ನನೊಲ್ಲಧರ್ಮಿಯೆಂಬ ಮಿಂಡಿಯ ಮೆಚ್ಚಿದನೆ
ಕಂಡರೆ ಸೇರನು ಕಲ್ಲ ಹಾಕುತವನೆ
ಮಂಡಲದೊಳಗೆನಗೆ ಮನೆಯಿಲ್ಲ ಹೊಗಲಿಕೆ
ಗುಂಡರಾಯನೆಂಬ ಗುಣವುಳ್ಳಂಥವರನು ಕಂಡರಿನ್ನುಳಿವೆನೆ ಅಮ್ಮಾ ॥೭॥

ತೋಹೆ-೩೨, ಪದ-೨೮೪

■

೩೩
ಇಳೆಯೇ ದೇವರೆ
ಬೆಳೆಯೇ ಜೋಳವೆ ॥ಪಲ್ಲ॥

ಗದ್ದಿಗೆದೇವರ ಮುದ್ದುಮುಖದ ಚೆನ್ನೆ
ರುದ್ರಶಕ್ತಿಯರ ಬಲದೇವಿ ಪರಶಿವನ
ಅರ್ಧಾಂಗಿಗೆರಗಿ ಬೇಡಿಕೊಂಬೆ ॥೧॥

ಸಾವಿರ ದೇವರಿಗೆ ತಾವನು ಇತ್ತವಳೆ
ಭಾವೆ ಪರಬ್ರಹ್ಮ ಬ್ರಹ್ಮಿಯೇ
ಭಾವೆ ಪರಬ್ರಹ್ಮ ಬ್ರಹ್ಮಿಯು ಭೂಕಾಂತೆ
ಕೇವಲ ದೈವ ಶರಣೆನ್ನಿ ॥೨॥

ಪೀಠಿಕೆ ಲಿಂಗದ ನಾಟಿಕೆಯಾಂಗದ
ಕೋಟಿಕೋಟಿಗಳ ಸಲಹುವೆ
ಕೋಟಿಕೋಟಿಗಳ ಸಲಹುವ ತಾಯಿಗೆ
ಸಾಟಿಲ್ಲವೆಂದು ಶರಣೆನ್ನಿ ॥೩॥

ದೇವರ ಗದ್ದಿಗೆ ಜೀವರ ವೃದ್ಧಿಗೆ
ಕೇವಲ ಬೆಳೆಯ ಬೆಳೆವಳು
ಕೇವಲ ಬೆಳೆಯ ಬೆಳೆವ ಭೂಕಾಂತೆಯ
ಆವಗ ನಂಬಿ ಶರಣೆನ್ನಿ ॥೪॥

ಸಾವಿರನಾಮದ ದೇವರನುಣಿಸುವೆ
ದೇವರ್ಕಳೆಲ್ಲ ದಣಿಸುವೆ
ದೇವರ್ಕಳೆಲ್ಲ ದಣಿಸುವೆ ಚೌರಾಶಿ
ಜೀವರನೆಲ್ಲ ಸಲಹುವೆ ॥೫॥

ತೆತ್ತೀಸಕೋಟಿಯು ಭೃತ್ಯದೇವರ್ಕಳು
ಕರ್ತೆ ನಿನ್ನೊಂದಿ ಬದುಕುವರು
ಕರ್ತೆ ನಿನ್ನೊಂದಿ ಬದುಕುವರು ನಾನಣು
ಮಾತ್ರವು ಮಾತೆ ಸಲಹೆನ್ನ ॥೬॥

ಸತ್ಯವ ನಡೆಯದ ವ್ಯರ್ಥಪಾತಕನೆಂದು
ಕರ್ತೆ ಬಲ್ಲೆನ್ನ ಕಳವನು
ಕರ್ತೆ ಬಲ್ಲೆನ್ನ ಕಳವನು ಭೂಕಾಂತೆ ನಿನ್ನೀ
ಕೀರ್ತಿಗೆ ನೀನೆ ಬೆಳೆ ಕಂಡಾ ॥೭॥

ಧರ್ಮವ ನಡೆಯದ ಕರ್ಮಿ ಪಾತಕನೆಂದು
ಮರ್ಮವ ಬಲ್ಲ ಒಡೆಯಳೆ
ಮರ್ಮವ ಬಲ್ಲ ಒಡೆಯಳೆ ನಿಮ್ಮಯ
ನಿರ್ಮಳ ಕೃಪೆಗೆ ಬೆಳೆ ಕಂಡಾ ॥೮॥

ನೀತಿಯ ನಡೆಯದ ಪಾತಕ ನಾನೆಂದು
ಮಾತೆ ಬಲ್ಲೆಯೆನ್ನ ಮನವ
ಮಾತೆ ಬಲ್ಲೆಯೆನ್ನ ಮನವ ಭೂಕಾಂತೆ
ನಿಮ್ಮ ಸಾತ್ವಿಕದಿಂದ ಬೆಳೆ ಕಂಡಾ ॥೯॥

ಯೋನಿಮುಖ ಜೀವಕೆ ನಾನು ರಕ್ಷಕನೆಂಬೆ
ಏನೆಂಬೆ ನನ್ನ ಬಿರುದಿಗೆ

ಏನೆಂಬೆ ನನಗೆ ಬಿರುದಿಲ್ಲ ಪಾತಕ ಮುಂ
ಜಾನೆ ಮೃಗಹಕ್ಕಿಗೋಡುವೆ ॥೧೦॥

ಮಕ್ಕಳ ಹೆಂಡರಿಗೆ ಒಕ್ಕುಳ ಬಡಿವೆನು
ಭಿಕ್ಷೆಗೆ ತೆನೆಯ ಕುಡಲಾರೆ
ಭಿಕ್ಷೆಗೆ ತೆನೆಯ ಕುಡಲಾರದಿರೆ ಕಂಡು
ಮುಕ್ಕಣ್ಣ ನೋಡಿ ನಗುತಿದ್ದ ॥೧೧॥

ನಂಟರಿಷ್ಟರು ಬರಲಿಯೆಂಟು ಮಾನವ ಬಡಿವೆ
ಉಂಟಿಲ್ಲವೆಂಬೆ ದರುಶನಕೆ
ಉಂಟಿಲ್ಲದೆಂಬೆ ದರಿಶಣಕೆ ನಾನೊಂದು
ದಂಟ ಬೇಡಿದರೆ ಬೈಯುವೆನು ॥೧೨॥

ನಾನಿಟ್ಟಯಿಳೆ ಭೂಮಿ ನಾ ಕೊಟ್ಟ ಮಳೆತೀರ್ಥ
ನಾ ಹುಟ್ಟಿ ಬೆಳೆದೆ ಶಂಕರಾ
ನಾ ಹುಟ್ಟಿ ಬೆಳೆದೆ ಶಂಕರಾ ಇವನೇಕೆ
ತಾ ಹೇಸಿಯಾಗಿ ಕುಡಲಾರೆ ॥೧೩॥

ಕೊಟ್ಟರೆ ಹೆಚ್ಚುವೆ ಇಷ್ಟರಷ್ಟೆ ನಾನು
ಕೊಟ್ಟುಣಲರಿಯ ಮಡಿಯನು
ಕೊಟ್ಟುಣಲರಿಯ ಮಡಿಯ ಒರತೆಯ ಜಲವ
ಎಷ್ಟು ತುಂಬಿದರು ಕಡಿಮೆಯಹವೆ ॥೧೪॥

ಕಾಯ ಶುದ್ಧವಿಲ್ಲ ಜೀವ ಶುದ್ಧವಿಲ್ಲ
ಬಾಯಿ ಶುದ್ಧವಿಲ್ಲ ಬಲುಪಾಪಿ
ಬಾಯಿ ಶುದ್ಧವಿಲ್ಲ ಬಲುಪಾಪಿ ಬಿತ್ತಿದೆ
ತಾಯಿ ನಿನ್ನ ಧರ್ಮ ಬೆಳೆ ಕಂಡಾ ॥೧೫॥

ಸ್ಪರುಶನದಲಿ ವ್ಯರ್ಥಿ ನಿರುತವಿಲ್ಲ ಸೋತ
ನರಕಿ ಪಾತಕನು ನಡೆಹೀನ
ನರಕಿ ಪಾತಕನು ನಡೆಹೀನ ಬಿತ್ತಿದೆ
ಕರುಣಿ ತಾಯೆ ಬೆಳೆ ಕಂಡಾ ॥೧೬॥

ನೇತ್ರ ಶುದ್ಧವಿಲ್ಲ ಶ್ರೋತ್ರವಿಲ್ಲ
ಪಾತಕ ಪಂಚಪಾತಕ
ಪಾತಕ ಪಂಚಪಾತಕ ಬಿತ್ತಿದೆ
ನೀ ತಾಯಿ ಕರುಣಿ ಬೆಳೆ ಕಂಡಾ ॥೧೭॥

ಲಿಂಗದ ಪೀಠಿಕೆ ತುಂಗವಿಕ್ರಮ ನೀನು
ಮಂಗಳಾತ್ಮಕೆಯು ಮಹಾಭೂಮಿ
ಮಂಗಳಾತ್ಮಕೆಯು ಮಹಾಭೂಮಿ ನಡೆಹೀನ
ಕಂಗುರುಡಗಿಕ್ಕೆ ಪಡಿಯನು ॥೧೮॥

ಲಕ್ಷವ ಬೆಳೆದು ನೀ ಒಕ್ಕಲ ಮಾಡಿದೆ
ಮಕ್ಕಳನೆಲ್ಲ ಸಲುಹಿದೆ
ಮಕ್ಕಳನೆಲ್ಲ ಸಲುಹಿದೆ ಭೂಕಾಂತೆ
ಶಕ್ತಿಗೆ ಶರಣು ಶರಣೆಂಬೆ ॥೧೯॥

ಗೌಡರೆಂದೆನಿಸಿದೆ [ಪ]ವಡಿ ಸಾಸಿರ ಬೆಳೆದು ಪ
ವಾಡವುಳ್ಳ ಪರಶಕ್ತಿ ಪ
ವಾಡವುಳ್ಳ ಪರಶಕ್ತಿ ಭೂಕಾಂತೆ
ಭವಾನಿ ತಾಯೆ ಬೆಳೆ ಕಂಡಾ ॥೨೦॥

ಸೆಟ್ಟಿಗಳೆನಿಸಿದೆ ಕೊಟ್ಟ ಕೊಟ್ಟವ ಬೆಳೆದು
ಹುಟ್ಟಿದರೆಲ್ಲರ ಸಲುಹಿದೆ
ಹುಟ್ಟಿದರೆಲ್ಲರ ಸಲಹುವ ಭೂಕಾಂತೆಗೆ
ಸಾಷ್ಟಾಂಗವೆರಗಿ ಜಗವೆಲ್ಲ ॥೨೧॥

ಭೂಪರೆನಿಸಿದೆ ನರರೂಪರನೆಲ್ಲರ ನೀ
ಕೃಪೆಯಿಂದ ಬೆಳೆದಿತ್ತು ನೀ
ಕೃಪೆಯಿಂದ ಬೆಳೆದಧಿಕರ ಮಾಡ
ಲಾಪಳಿಗೆಲ್ಲ ಶರಣೆನ್ನಿ ॥೨೨॥

ದೊರೆಗಳ ಮಾಡಿದೆ ಕೊರಬೆ ಕೊರಬೆಯ ಬೆಳೆದು
ಸಿರಿವಂತೆ ನಿನ್ನ ಮೊರೆಹೊಕ್ಕೆ

ಸಿರಿವಂತೆ ನಿನ್ನ ಮೊರೆಹೊಕ್ಕೆ ಭೂಕಾಂತೆ
ಕರುಣಿಸೆ ಬೆಳೆಯ ನೀ ಸಿರಿಗಳ ॥೨೩॥

ಒಂದು ಮೂಲೆಯ ಬೆಳೆದರೆಂದಿಗೆ ಸವೆಯದು
ಇಂದು ಕೈಯ್ಯೆಲ್ಲ ಬೆಳೆದರೆ
ಇಂದು ಭೂಮಿಯೆಲ್ಲ ಬೆಳೆದರೆ ಜಗಕೆ ಆ
ನಂದ ಐಶ್ವರ್ಯ ಘನವಾಗಿ ॥೨೪॥

ಜಯತು ಜಯ ಜಾಹ್ನವಿಯೆ ಜಯತು ಜಯ ಶಂಕರಿಯೆ
ಜಯತು ಜಯತು ಓಂ ಭೂಮಿ
ಜಯತು ಜಯತು ಓಂ ಭೂಮಿಯೆಂದು
ಮೈಯ ಮಣಿದು ಶರಣುಮಾಡಿ ಜಗ ॥೨೫॥

ತೋಹೆ-೩೩, ಪದ-೩೦೯

■

೩೪

ರೂಪಿಡಳಲವಲ್ಲ ರೂಢಿಗಧಿಕ ಸ್ವಾಮಿ
ಏ ಪರಿ ಸ್ತುತಿಸುವೆನಲ್ಲಮಲಿಂಗ ಭಾಪುರೆ ॥ಪಲ್ಲ॥

ಲೋಕವೀರೇಳುವ ರಕ್ಷಿಸಿ ಸಾಕುವ
ನಾಲ್ಕೊಂದು ಮುಖ ದೇವನ
ಏಕಮುಖದ ಗುಂಡರಾಯನ ಪುತ್ರನ
ವಾಕಿಸಲೆನ್ನಳವೆ ಅಲ್ಲಮಲಿಂಗ ॥೧॥

ಜ್ಯೋತಿಯಲಾದ ಜ್ಯೋತಿಯದಕೆ
ಮಾತ ಬಣ್ಣಿಪರೆ
ಆತ ಧರ್ಮಕಲ್ಯಾಣಿಯ ತನುಜ
ಈತ ಬಡವನೆ ಅಲ್ಲಮಲಿಂಗ ॥೨॥

ಅಲ್ಲಿ ಬಂದಿದ್ದರು ಕಲ್ಯಾಣಪುರದೊಳ
ಗೆಲ್ಲ ಜಗವರಿಯೆ

ಬಲ್ಲಿದ ಬಸವಣ್ಣ ಚನ್ನಬಸವನೆಂಬ
ಬೆಲ್ಲದ ನಾಮದಲಿ ಅಲ್ಲಮಲಿಂಗ ॥೩॥

ಏಳನೂರೆಪ್ಪತ್ತಕೆ ಬರುತೀವೆಂದು
ಹೇಳಿ ಹೋಗಿದ್ದುದಕೆ
ಮೇಳದಿ ಬಂದರು ಧರ್ಮಕಲ್ಯಾಣಕೆ
ಕೇಳಿರೆಲ್ಲ ಜನರು ಅಲ್ಲಮಲಿಂಗ ॥೪॥

ಮುಪ್ಪಿನ ಹಿರಿಯರು ಅಪ್ಪಣ್ಣ ಅಯ್ಯಗಳು
ಅಪ್ಪ ಅಲ್ಲಮರಾಯಗೆ
ಸರ್ಪಭೂಷಣನ ಶರಣ ಬರುತಾನೆಂದು
ಹಿಪ್ಪಲಿಗಳ ಕೊಟ್ಟನು ಅಲ್ಲಮಲಿಂಗ ॥೫॥

ಶಿವನ ಭಕ್ತನು ಭುವನದೊಳಗೆ
ಪವಾಡವನು ಗೆದ್ದು
ಅವಗಡದ ಆಚಾರವೇದ್ಯನೆಂದು ಲಿಂಗ
ವನು ಇತ್ತ ಅಲ್ಲಮಲಿಂಗ ॥೬॥

ಗುರು ಗುಂಡರಾಯನ ಗರ್ಭದಲಿ
ಪರಂಜ್ಯೋತಿ ಉದ್ಭವಿಸಿತೆಂದು
ಅರುಹು ಜ್ಞಾನದ ಪಿಂಡವೆಂದೆನುತ
[ಅರಿವುವ]ನಿತ್ತನು ॥೭॥

ಹಿರಿಯ ತಿಪ್ಪಣ್ಣಯ್ಯ ಶರಣರ ದೇವನು
ಕರುಣಮೂರ್ತಿ ತಾ
ತರಣಿ ಜಕ್ಕಾಂಬಿಕೆಗೆ ಕರ ಮುಗಿದನೀ
ಶರಣ ಮುಟ್ಟಿಸೆಂದು ॥೮॥

ಈಶಭಕ್ತನು ತಿಪ್ಪಣ್ಣಯ್ಯನು ಹೇಳಿ ಕೈ
ಲಾಸಕ್ಕೆ ಬಿಜಯಮಾಡಲು
ದೇಶದೊಳಲ್ಲಮರಾಯನೆಂದೆಂಬ ಮ
ಹೇಶ ತಾ ಜನಿಸಿದ ॥೯॥

ಕಿರಿದು ರೂಪನೆ ತಾಳಿ ಸಂಗಯ್ಯನೆಂದೆಂಬ
ಪರಮ ನಾಮದಲಿ
ವರಗುರುವಿನ ಪ್ರಸಾದವನೆ ಕೊಂಡು
ತಿರುಗಿದ ಮಹಿಮ ॥೧೦॥

ಜನಿಸಿದನೆಂಬುದ ಕೇಳಿ ಗುರು ಗುಂಡೇಶ
ನೇನು ಸಂತೋಷದಲೊ
ಆನಂದ ಮಾಡಿ ಅಕ್ಕರದಿಂದಲಿ
ತಾನು ಕೊಂಡಾಡಿದನು ॥೧೧॥

ಪಾಪವಿರಹಿತ ಪರಮಪುರುಷನೆಂದು
ಆ ಪರಬ್ರಹ್ಮವೆಂದು
ತಾ ಪೊಸ್ತಕದ ಕೊಂಕಳಿ ಕೊಂಡುಬಂದ
ಉಪಾಧ್ಯನೀತನೆಂದು ॥೧೨॥

ಚೆನ್ನಬಸವೇಶನಹುದು ಅಲ್ಲಮರಾಯ
ಉನ್ನತ ಉಗ್ರಮೂರ್ತಿ
ಪನ್ನಗಧರ ಗುಂಡರಾಯನೊರೆದು ನೋಡಿ
ಪುಣ್ಯಕೆ ತಾ ಕುಣಿದ ॥೧೩॥

ಎತ್ತಿ ಮುದ್ದಾಡಿಸಿ ಮತ್ತೆ ಗುರು ಗುಂಡೇಶ
ನಿತ್ಯನಲ್ಲಮರಾಯನ ವಿ
ರಕ್ತನು ಈತನು ವಿಜಯನಗರದೊಳು
ಭಕ್ತಿಯ ಮೆರೆವನೆಂದ ॥೧೪॥

ಆಡಿದ ಶಬ್ದವು ಕೂಡುವ ದಿನಕೆ
ನಡೆವ ಪಟ್ಟಣಕೆ
ನಾಡ ಜಂಗಮವೆಲ್ಲ ಕೂಡಿ ಮಾತಾಡಿ ಪ
ವಾಡವ ಗೆದ್ದನಲ್ಲಿ ॥೧೫॥

ಮೊರೆಯ ಕಟ್ಟಿಸಿ ನೆರೆದ ಜನರ
ಕರದಲಿ ಪಿಡಿಸಿ

ಹರಿಯ ಭಕ್ತನು ನರರ ಪತಿಯ
ನೆರೆದ ಭರದಲಿ ॥೧೬॥

ಆತನಲ್ಲಮಲಿಂಗ ಭೀತಿಯಿಲ್ಲದೆ ಹೋಗಿ
ಓತು ರಾಯರ ಕಂಡು
ಮಾತನಾಡೆನುತ ಮನ್ನಣೆಗೊಡದೆ
ಆತುರವನು ಮಾಡಿದ ॥೧೭॥

ವಸುಧೆಯೊಳೆಲ್ಲ ಬಸವನಾಚಾರ
ಪಸರಿಸಿದ್ದುದನು
ನಸುವ ಬುದ್ಧಿಗಳಿಂದ ಹಸಗೆಡಿಸಿದಿರಿದು
ಬಸವನ ಮೊರೆಯೆಂದನು ॥೧೮॥

ಕಲ್ಯಾಣಪುರದಿಂದ ನಿಲ್ಲದೆ ಬಂದರು
ಬಲ್ಲಿದರಿವರೆಂದು
ಸೊಲ್ಲನಾಡಲಂಜಿ ಹಲ್ಲು ಕುಳಿತಂತೆ
ಕಲ್ಲಾದ ರಾಯ ತಾನು ॥೧೯॥

ಕುತ್ತಿದ ತಲೆಯನೆತ್ತದೆ ರಾಯನು
ಮತ್ತೆ ದುಮ್ಮಾನದಲಿ
ಭಕ್ತಿವಂತನೆಂದು ಚಿತ್ತಕ್ಕೆ ತಾ ತಂದು
ಚಿತ್ತೈಸಲೆಂದನಿಂದು ॥೨೦॥

ಭೂಪನೊಳಗೆ ಕೋಪಗಳಿಂದ
ತಾ ಪ್ರಭುರಾಯನು
ಹೋಪ ಮನ್ನೆಯರೊಳು ಮಾತಾಡಿ ಬಿರುದು ಪ್ರ
ತಾಪ ತಾ ತಿರುಗಿದ ॥೨೧॥

ಕೊಂದೆವೆಯೆಂದು ಬಂದ ವೈರಿಗಳು
ನಿಂದು ಮುಖ ನೋಡಿ
ಚಂದ್ರಧರನ ಕಂದನೀತನುಯೆಂದು
ವಂದನೆ ಮಾಡುವರು ॥೨೨॥

ಆನೆಯ ಮೇಲೆ ಛತ್ರಿಗಳಿಂದ ಮೆರೆದನು
ತಾ ನರಪತಿ ನಾಡೊಳು
ಏನೆಂಬೆ ಅಲ್ಲಮಲಿಂಗನ ಮಹಿಮೆಯ
ಜ್ಞಾನಿಗಳೆ ಬಲ್ಲರು ॥೨೩॥

ಲೋಕದ ಪಾಪವ ನೋಡಲಾರದೆ ಇಲ್ಲಿ
ಸಾಕು ಕೈಲಾಸಕೆಂದು
ಶಿಕ್ಷೆ ದೀಕ್ಷೆಯ ತಂದಲ್ಲದೆ ಲೋಕ ಬರು
ವಾಕಿಗೆ ಮಣಿಯದೆಂದ ॥೨೪॥

ಉರುವಿಯ ಪಾಪವನುರುಹಿ ಸತ್ವರ
ನೆರವಿಯನು ಮಾಡಿ
ಧರೆಯನಾಳಲು ಶರಣರ ದಂಡ
ತರಲು ಹೋದನು ॥೨೫॥

ಆರರ ಪಾಪಕ್ಕೆ ಆಜ್ಞೆಯ ಮಾಡುವ
ವೀರವಸಂತಗೆ ಇಂಥ
ಕಾರಣಿಕರು ಕೂಡಿ ಕಲ್ಯಾಣಪುರದೊಳು
ವೀರಸೇನೆಯ ತುಂಬಿ ॥೨೬॥

ಬಸವಂತ ನೃಪ ಚೆನ್ನಬಸವ ಪ್ರಧಾನನು
ವಸುಧೆಯೆಲ್ಲವಕೆ
ಪಸರಿಸಿ ಪಟ್ಟದ ದಣ್ಣಾಯಕನೀತ
ಅಸಮ ಅಲ್ಲಮ ಚೆನ್ನನು ॥೨೭॥

ಮುತ್ತಿನ ಛತ್ರಿಯನೆತ್ತುವುದೆಮ್ಮ
ಕರ್ತೃ ಅಲ್ಲಮಗೆ
ತುರ್ತುವಿನ್ನು ಮರ್ತ್ಯದೊಳಗೆ
ಸತ್ಯರ ಪ್ರಭೆಯನು ॥೨೮॥

ಗುಡಿಗೊಲೆ ಖೂನಿಯ ತಡೆಯದೆ ಕೊಳುತ
ಗುಡಿಯ ಕಲ್ಲಿನ ಮನೆಯ
ಕೆಡಹಿ ಅಳಿದು ಮೃಡನ ಭಕ್ತಿಯ
ನಡೆಸದೆ ಬಿಡರು ॥೨೯॥

ಲಿಂಗ ವಿಭೂತಿ ರುದ್ರಾಕ್ಷಿ ಪಾತಕರ
ಅಂಗದ ಮೇಲೇಕೆಂದು
ಲಿಂಗನಲ್ಲಮರಾಯ ಹಿಂಗದೆ ಸೆಳೆದು
ಕಂಗಳ ಕಳೆಸುವನು ॥೩೦॥

ಕಲ್ಲುಗಾಣಕೆ ಎಲ್ಲ ಪಾತಕರ
ನಿಲ್ಲದಲಿಕ್ಕಲು
ಸೊಲ್ಲಡಗಲು ಹಲ್ಲು ಉದುರೆ
ಕೊಲ್ಲದೆ ನಿಲ್ಲನು ॥೩೧॥

ಗಂಟಲ ಗಾಣಕೆ ಅಂಟಿಸುವರು
ತುಂಟರೆಲ್ಲರನು
ಎಂಟುದಿಕ್ಕಿಗೆ ಎಲ್ಲ ಉಂಟಾದ ಅರಸು
ಬಂಟನಲ್ಲಮ ಚೆನ್ನನು ॥೩೨॥

ತನ್ನ ನಂಬಿದ ಉನ್ನತ ಭಕ್ತರಿಗೆ
ಮನ್ನಣೆಯನಿತ್ತು
ಹೊನ್ನು ರಾಜ್ಯವ ಕೊಟ್ಟು ಇನ್ನೇನು ಬೇಕೆಂದು
ಚೆನ್ನನಲ್ಲಮನೆಂಬನು ॥೩೩॥

ಆನಂದದ ಮೇಲೆ ಆನಂದಗಳ
ನೇನ ಪೇಳುವೆನು
ಜ್ಞಾನವುಳ್ಳಂಥ ಧ್ಯಾನಿಗಳಿಗೆ
ಮಾನ್ಯ ದುರ್ಗಗಳು ॥೩೪॥

ಕೊಂಡಾಡಲಳವೆ ಗುರು ಗುಂಡರಾಯನ ಪುತ್ರ
ಮಂಡಲಕಧಿಕನ
ದಂಡ್ಯಾಗಿ ನೆನೆಯೆ ಪ್ರಚಂಡನಲ್ಲಮರಾಯನ
ಖಂಡಿತ ಭವ ತಿಮಿರ ॥೩೫॥

ತೋಹೆ–೩೪, ಪದ–೩೪೪

■

೩೫

ಎಲ್ಲ ಜಗದೊಳಗೆ ನಿಮ್ಮಯ ಕೀರ್ತಿ
ಅಲ್ಲಿ ಮೆರೆವುತಲಿರೆ ಗುರುಮೂರ್ತಿ ॥ಪಲ್ಲ॥

ಅಯಿದು ಮುಖದ ಶಿವನ ಬಳಿಯಲಿಂದ
ದಯಿವ ಪುರುಷನೆ ಧರೆಗೆ ಬಂದು ನಿಂದೆ
ಸಯದ ಭಕ್ತಿಯನೆ ತಂದೆ ಧಾರುಣಿಗೆಂದೆ
ಜಯ ಪುಣ್ಯಸಂಸಾರ ಸಯವಲ್ಲವೆಂದೆ ॥೧॥

ಕಲ್ಯಾಣ ಭೂಮಿಯೊಳು ಸಾರಿದೆ ನೀನು
ಬಲ್ಲಿದ ಬಸವಲಿಂಗನ ಅಕ್ಕ ತಾನು
ನಲ್ಲಳು ನಾಗಾವಿ ಗ್ರಾಮದಲೇನು
ಸೊಲ್ಲು ಸೊಲ್ಲಿಗೆ ಮೆರೆವುದದ ಕೇಳ್ದೆ ನಾನು ॥೨॥

ತುರುಕಾಣ್ಯ ತೆಲುಗಾಣ್ಯ ಒಡ್ಡಿಯ ದೇಶ
ಸರಿಸಿ ನಿಮ್ಮಯ ಪ್ರಭೆ ಮೆರೆವ ಸಂತೋಷ
ಪರಶಿವ ಮುಖ ಗುಂಡೇಶ ಮಾಡಯ್ಯ ಲೇಸ
ನೆರೆ ನಂಬಿದವರಿಗೆ ಎನ್ನ ಪ್ರಾಣೇಶ ॥೩॥

ತೋಹೆ–೩೫, ಪದ–೩೪೭

■

೩೬

ಅಕ್ಕಟಕ್ಕಟ ಮನವೆ ಸಿಕ್ಕದಿರು ಎಚ್ಚತ್ತಿರು
ಸಿಕ್ಕಿಸೆವೆ[ವೆ]ನುತಲೈದಾರೆ ಕಳ್ಳರು ॥ಪಲ್ಲ॥

ಚೋರರು ಬರುತಲಿಪ್ಪ ದಾರಿಯ ಪೇಳುವ ಕೇಳು
ಮೂರು ದುರ್ಗ ಕೊಳಲಿಕೆ ಮೂರು ಮಂದಿ ಮನ್ನೆಯರು
ಮೂರು ಬೀದಿಯೊಳಗವೆ ವಾರವ ನಾಲ್ಕುಗಳು
ಏರುವ ರಾವುತರೈವರು ಮೀರಿ ಮುಂದುವರಿಯುತ
ಹರಿಗೆ ಬಂದರೈವರು ಬೇರೆ ನಪ್ತಿಕಾರರವ
ಆರು ಮಮದಿ ಕೂಡಿ ಸಡು ಧೀರರೇಳುಮಂದಿಯಾಳು
ತೂರಿ ತೂರಿ ಎಸೆಯುತ ಬೇರೆಂಟು ಮದಗಜವ ಒತ್ತುತ ॥೧॥

ಹತ್ತು ಪ್ರಜೆಗಳ ಕೈಯ ಮತ್ತೆ ಕೋಲುಗಳ ಬೇಡಿ
ಸುತ್ತಿ ಬರೆ ಅಷ್ಟದಿಕ್ಕು ಮತ್ತೆ ಮನೆಗಳ ಮಾಡಿ
ಅರ್ತಿಯಿಂದಲವೆ ರಾಜ ಸುತ್ತಿ ಸುತ್ತಿ ಬರುತಾನೆ
ಮತ್ತೆ ತ್ರಿಪುರವ ಕೊಳಲು ವಿಸ್ತರಿಸೆ ರಾಜನ ನಾಮ
ಮತ್ತೆ ಜ್ಞಾನಿಯೆಂಬ ಪೆಸರು ಹತ್ತೆವಾದ ಮಂತ್ರಿ ನೋಡು
ಸತ್ಯವಿಲ್ಲದನ ಚೌರಿ ಭಕ್ತಿಯ ಸೂರ್ಯನಡಗಿ ಮುಂದೆ
ಮತ್ತೊಮ್ಮೆ ಪ್ರಭೆ ಮಾಡಿ ಅಸತ್ತೆ ಬೆಳಸೆವೆಂಬುತಲ್ಯೆದಾರೆ ಕಳ್ಳರು ॥೨॥

ಕನ್ನವೆ ಕೊಳ್ಳದೆ ಮುನ್ನ ಇನ್ನು ನೀನೆಚ್ಚತ್ತು ಕಾಯು
ಪನ್ನಂಗಧರನ ನೆನೆದು ಚೆನ್ನಾಗಿ ದುರ್ಗವ ಬಲಿದು
ನಿನ್ನ ಆಳುಮಕ್ಕಳಿಗೆ ಉನ್ನತ ಬುದ್ಧಿಗಲಿಸಿ
ಅನ್ಯರನೆದ್ದೋಡಿಸಿ ಕಾಯು ನಿನ್ನ ಪೆಸರನು ಪೇಳೆ
ಉನ್ನತ ಸುಜ್ಞಾನಿ ರಾಜ ಅನ್ಯರಾಜನಂ ಪಿಡಿದು
ಚೆನ್ನಾಗಿ ದಂಡಿಸಿ ಕಾಯು ನಿನ್ನಂಘ್ರಿತವಾದ ಮಂತ್ರಿ
ಅನ್ಯವಿಲ್ಲ ಸದಾಚಾರಿ ಅನ್ಯಮಂತೆ ಕಡಿದು ಕಾಯು ವಿಚಾರದಿಂದ ॥೩॥

ಮೃಡನಾಮವೆಂಬ ಖಡ್ಗ ಪಿಡಿ ಸುಚಿತ್ತ ಹಸ್ತದಿಂದ
ಬಿಡದೆ ನೆನೆವ ಸಾಣೆ ಹಿಡಿ ಕಂಡ ಖಾರವಾಗಿ
ದೃಡವೆಂಬ ವಜ್ರದಂಶಿಯ ತೊಡು ನೀ ಸುಬುದ್ಧಿಯಿಂದ
ಹೊಡೆ ಪಾಪಿ ರಾಜನ ದಳವ ಒಡಲ ದುರ್ಗಣವೆಲ್ಲ
ಸುಡುಪೊಗೆ ಬಾಣಮಾಗಿ ನಡೆದುಬಹ ಕುಂಜರ
ಓಡುವವು ದೆಸೆಗೆಟ್ಟು ಕೆಡಹು ಅಷ್ಟಗ್ರಹವ
ಹೊಡೆಸೆವಾಳುಗಳ ನಡೆ ಮೆಟ್ಟಿ ಆರುಮಂದಿಯ ಸತ್ಯದಿಂ ॥೪॥

ಅಸುವ ರಾವುತರನ್ನು ವಿಸುಮಾಯದ ಬಂಟರ
ಪಸರಿಸಿಹ ಮನ್ನೆಯರ ದೆಸೆಮೂರು ಬಿದಿಕಟ್ಟೆ
ಎಸೆದರದನೆ ಬಾಣ ಎಸೆ ಪಂಚಾಕ್ಷರ ಸರಳು
ಗಾಸಿಯಾಗಿ ಹೋಹರು ನಿಜ ವಶವಹುದು ತ್ರಿಪುರ
ದಶ ಪ್ರಜೆಗಳು ಸಹಿತ ಹಸನಹುದೀಗ ಭಕ್ತಿ
ಪಸರಿಸಿ ಬೆಳೆವುದು ವಸುಧೆ ಪಾಲಿಪ ಗುಂಡ
ಬಸವಯ್ಯ ಮೆಚ್ಚಿ ಕೈಲಾಸದೊಳಗಿರಿಸುವನು ಸಂತೋಷದಿ ॥೫॥

ತೋಹೆ–೩೬, ಪದ–೩೫೨

■

೩೭

ಕಾಯಪುರ ಪಟ್ಟಣದೊಳಾಯತವಾಗಿಹ ಧರ್ಮ
ರಾಯರ ಮಾರ್ಬಲ ಸಂಭ್ರಮ ಕೇಳಿರೈ ॥ಪಲ್ಲ॥

ಪುರದ ಸುತ್ತ ಬರಿ ಹೊರವಳೆಯ ವಿಸ್ತೀರ್ಣ
ಮೂರೆರಡು ಮತ್ತೆ ಮೂರು ದ್ವಾರ ಹೆಬ್ಬಾಗಿಲಗಳು
ಬೇರೆ ಖಂಡಿಗಳು ಮತ್ತೆ ಎರಡೊಂದುವರೆ ಕೋಟಿ
ನರನಾಮವೆಂಬ ಕೋಟೆಗೆ
ಗಿರಿಮೇಲುದುರ್ಗವೀಗ ಅರಸನಿಪ್ಪ ಬಿಡಾರ
ಪರಿವಾರ ಹೋಗಬರ ಮೇರುವಿಗೆ ಒಂದೆ ಬೀದಿ
ಪರದಾನಿಗಳು ಮತ್ತೆ ಎರಡೆರಡು ಮಂದಿಗಳು
ಪರಮಸಂತೋಷದಿಂದಲಿಹರು ॥೧॥

ತೇಜಿಗಳೆರಡು ಧರ್ಮರಾಜ ತಾನೇರುವಂಥ
ವಾಜಿಗೇಡಿ ರಾಜನಲ್ಲಿಹ ತೇಜಿಯ ನಾಲ್ಕನು ಸೆಳೆದು
ತೇಜ ಕಲೆಹಾಕಿ ಮುಂದೆ ಹೆಜ್ಜೆಯಿಡ ಕಲಿಸಿ
ಅವ ಖಾಜಿಯ ಬಿಗಿದು ಹಿಡಿದು
ಸಾಜಕೆ ತಪ್ಪುವವರಲ್ಲ ವಜೀರರೈವರು ನೋಡಿ
ಬಾಜೆಗಾರರ ಮೂವರ ವಜೀರಕಿಯನೆ ಸೆಳೆದು
ವಾಜಿಯ ಕಲಿಸಿ ಮುಂದೆ ಸಹಜಕೆ ಆದಿಯ ಮಾಡಿ ಧರ್ಮ

ರಾಜನ ಸೋಹದಲಿ ತಂದು ನಿಲಿಸಿ ॥೨॥
ಮುಂಚು ಕಾಳಗಕೆಂಬಂಥ ಸಂಚಲವಿಲ್ಲದವರು
ಪಂಚವಜೀರರಲ್ಲಿಹ ಪಂಚದಶ ರಾವುತರು
ಹಿಂಚದೆ ಹರಿದು ಹೋಗಿ ವಂಚಿಸಿ ಕೆಡಿಸುತಿಹ
ಪಂಚ ರಾವುತರ ಹಿಡಿದು
ಪಂಚಮ ಪಾತಕರಿದ ಕಿಂಚಿತವಾದರೆ ನೀವು
ಪಂಚಮುಖದ ರಾಜನ ಮುಂಚು ಸೇವೆಯನೆ ಮಾಡಿ
ಸಂಚಲವ ಬಿಡಿ ಮುಂದೆ ಮುಚ್ಚದಿರಿ ನಿಮ್ಮಿಚ್ಛೆಯಲಿ
ಹಂಚಿಕೊಟ್ಟಷ್ಟರಲೆ ಇರಿ ತಪ್ಪದೆ ॥೩॥

ಸಂದೇಶವಿಲ್ಲದೈದುಮಂದಿ ಬಂಟರುಗಳ್ಹೋಗಿ
ಕುಂದು ನಡಗುಣದೈದು ಮಂದಿ ಬಂಟರನ್ನೆ ಹಿಡಿ

ತಂದು ಬುದ್ಧಿಗಲಿಸಿ ಹಿಂದಣವಗುಣ ಬಿಡಿಸಿ
ಮುಂದೆ ಹುದಿಗಳ ಕೊಟ್ಟು
ಬಂದರಾಗಳೆ ರಾಜನ ಮುಂದೆ ಕರವ ಮುಗಿದು
ಬಂದು ಬಿನ್ನಯವಿದೆಯಂದು ಮಾತುಗಳನಾಡಿ
ಮಂದಮತಿ ರಾಜ ತಾನು ನಿಂದ ನಸುನೆರೆಯಲಿ
ತಂದೆ ನೀನು ಕೇಳು ಎಂದರು ಬಂಟರು ॥೪॥

ಅವರು ಹೇಳಿದ ಮಾತ ಭಾವವನು ಕೇಳಿದ ರಾಯ
ಅವಿಚಾರದ ರಾಜನವನ ಹಿಡಿಯಬೇಕು
ಆವ ಪರಿಯಿಂದಲಾದರೆ ಜೀವಕಭಯ ಕೊಟ್ಟು
ನೆವದ ಕಾವಲಿ ಮನೆಯ
ಕವಿದು ಹಿಡಿದು ಹಾಕಿ ಅವನ ಅಷ್ಟಗ್ರಹವ
ಅವನು ಹುಗದ ಹಾಗೆ ಕಾವಲಿಗಳನೆ ಕೊಟ್ಟು
ಅವನ ಉಂಟನೆಗಳ ವಿವೇಕದಿಂದಲಿ ನೀವು
ಸೋವಹಕೆ ತಂದಿಡುಯೆಂದನು ರಾಯ ॥೫॥

ರಾಯರ ನಾಮ ಜಾದಿಯ ಪಯಣವಾರಾರು ಕೇಳಿ
ನಾಯಕರಯ್ವರು ತೌಳನಾಯಕರಲ್ಲವೇನಯ್ಯ
ಆಯುತವಾಗಿ ಸುಡುವ ನಾಯಕ ಪಂಥದ ಹದಿ
ನಯಿದು ಮಂದಿಗಳಿಹರು
ನಾಯಕರಲ್ಲವೆ ಬಿಲ್ಲ ಐದವ ಪಿಡಿವರು
ಆಯತವಾದಾಳುಗಳು ಐದಾರುಮಂದಿ ಕೇಳಿ
ರಾಯರ ಮಸಲತಿಯ ಕೈವಾಡ ಮಾಡಿ ಪಾಪಿ
ರಾಯನ ಮಧ್ಯ ಗೃಹದಲಿ ಹಾಕಿದರು ॥೬॥

ಜ್ಞಾನವೆಂಬಂಥ ಮೂರು ಆನೆಗಳ ಪಿಡಿದೊಯ್ದು
ಆನೆಗಳೆಂಟಕೆ ಈ ಆನೆ ಅಂಜಿಕೆದೋರಿ
ಧ್ಯಾನವೆಂಬ ಅಂಕುಶದಿಂದಾನೆಗಳನೊತ್ತಿ ಪಿಲು
ವಾನ ಭಕ್ತಿಭಾವ ಸೆರೆದು
ಊನವಾಗದಿರಿ ಮುಂದೆ ಹೀನಗುಣದಾಳು ಕೇಳಿ
ನಾನಾ ಪರಿಯಿಂದಲಿ ನೀವು ಜ್ಞಾನಕೆ ಆದಿಯಾಗಿ
ಆನೆಯ ಬೆಂಬಳಿ ಪಿಲುವಾನನ ಅಂಜಿಕೆಯಲಿಟ್ಟು
ಏನು ನಡೆ ರಾಯರಲ್ಲಿಗೆ ಹೋಹನು ॥೭॥

ಕಾಳಗವ ಗೆದ್ದು ಬಂದ ಆಳುಮಕ್ಕಳೆಲ್ಲ ಕೂಡಿ
ಹೇಳಿದರು ರಾಯರೊಳು ಕಾಳಗಕಿನ್ನೆದುರಿಲ್ಲ
ಖೂಳ ರಾಜನ ಹಿಡಿದು ಓಳಿ ಮನೆಗಳ ಬಿಡಿಸಿ
ಕೇಳು ನಡುಗೃಹದಲಿಟ್ಟೆವು
ಹೇಳಿದ ಮಾತನು ರಾಯ ಕೇಳಿ ಸಂತೋಷವ ಮಾಡಿ
ವೀಳ್ಯವ ಕೊಟ್ಟು ಮುಂದೆ ಕೇಳಿರಿ ಇನ್ನೊಂದ ಮಾತ
ಜಾಳು ಪುಂಡರುಗಳೆಲ್ಲ ಏಳದ ಹಾಗೆ ಎಚ್ಚತ್ತು
ಮೇಳಾಪವಾಗಿರುಯೆಂದನು ರಾಯನು ॥೮॥

ನೋಡು ದುರ್ಗ ಸವುರಣೆ ಮಾಡುವವರ್ಯೆವರು
ಹೇಡಿಗೊಳ್ಳದಲಿ ಕೋಟೆ ಕೂಡಿ ಕಾದರು ಹತ್ತು ಮಂದಿ
ನಾಡ ನಾಲ್ಕು ಸಹಿತ ನಾಡಿಗೆ ಹತ್ತು ಗ್ರಾಮ
ಕೂಡೆ ಚೌರಾಶಿ ಲಕ್ಷವು
ನೋಡಿ ಗ್ರಾಮಗಳರಿತು ಕೂಡಿಕೊಂಬ ಕಪ್ಪವನು
ರೂಢಿಗೆ ಅಧಿಕಗುರು ನೋಡಿ ಗುಂಡಬಸವಯ್ಯ
ಕೂಡಿ ಕೈಲಾಸಕೊಯ್ದು ಬೇಡಿದ ಪದವನಿತ್ತು
ಕೂಡಿ ಒಡನಾಡುತಿಹನು ಶಿವನೊಳು ॥೯॥

ತೋಹೆ-೩೭, ಪದ-೩೬೧

■

೩೮

ಹೆಣ್ಣಿನ ರೂಪಿಗೆ ಸಿಕ್ಕಿ ಬಣ್ಣಕೆ ಮೆಚ್ಚಲು ಬೇಡ
ಕಣ್ಣುಗಾಣುತ ಶೂಲವು ನುಣ್ಣಗೆಂದು ಬೀಳಬಹುದೆ ॥ಪಲ್ಲ॥
ಹಿಂದಾದ ಸುದ್ದಿಗಳೊಳು ಒಂದನಾದರು ಕೇಳಿರು
ಒಂದು ಹೆಣ್ಣಿಗೆ ಅಳುಪಿದನೆಂದು ಕೀಚಕ
ಸಂದಿಗೆ ಸಾವಿರ ಸಿಂಹದಂದದ ಬಲವೆ ಹೋಗಿ ॥೧॥

ಮತ್ತೊಂದು ಕೇಳು ಮನವೆ ವಿಸ್ತರಿಸಿ ಹೇಳುವದು
ಹತ್ತುತಲೆಯ ರಾವಣ ಮತ್ತೆ ಸ್ವಾಮಿಯ
ಭಕ್ತಿಯಿಂದಲೆ ಒಲಿಸಿ ತೆತ್ತೀಸಕೋಟಿದೈವದ
ನಿತ್ಯ ಸೋಹದಲಿರುತಮಿತ್ತ ಕರದ ಶುದ್ಧಿಯ ॥೨॥

ಆಗಿಲ್ಲಿ ಹೊನ್ನ ಮೃಗವನು ಚೌಗಿಸಿ ಕಳುಹಿ ಹಿಂದೆ
ಹೋಗಿ ತಂದ ಶಿಲೆಯನು ಬೇಗದಿಂದಲಿ
ಆಗಲಿ ತನಗೆಂದು ಭಾಗ್ಯವ ಹೋಗಾಡಿಕೊಂಡು
ಬೇಗೆವರಿದು ಪುರವು ಹೊಗನೆ ತಾ ಹತವಾಗಿ ॥೩॥

ಮೆಚ್ಚಬೇಡವು ಮನವೆ ಚುಚ್ಚಿಯ ಪೇಳಿದರೆಲ್ಲ
ಬಿಚ್ಚಿ ಹೇಳುವರೆ ರೂಪು ಅಚ್ಚ ಕೊಳಕು
ಬೆಚ್ಚಿ ಬಂದು ಬಿಡುವಾಗ ರಚಿಸಿ ನಾದವೆ ಕೂಡಿ
ಹೆಚ್ಚು ಶ್ರೋಣಿತ ಬಲಿದು ಅಚ್ಚ ಹೆಣ್ಣು ರೂಪಾಯಿತು ॥೪॥

ಒಂಬತ್ತು ಮಾಸ ಜಠರವೆಂಬ ಮನೆಯನೆ ಮಾಡಿ
ಇಂಬಾಗಿ ಕ್ರಿಮಿಯು ಜಂತು ತುಂಬಿಹ ಮಲ
ಬೆಂಬಳೆಯ ಬಿಟ್ಟು ದಿವ ತುಂಬಲಿಕೆ ಹೊರವಂಟು
ಕೊಂಬುದು ಅಹರ ಬಿಳಿದೆಂಬ ರಕ್ತವದು ನಿಜ ॥೫॥

ಪಿತ್ಥಶ್ಲೇಷವು ಶುಕ್ಲವು ಅತ್ಯಂತ ರುಧಿರ ಮಾಂಸ
ಅಸ್ಥಿಯ ಹಂಜರ ನರ ತೆತ್ತಿಸಿಹವು
ಮತ್ತೆ ಚರ್ಮದ ಹೊದಿಕೆ ಸುತ್ತ ಬರಿಯಲಿ ರೋಮ
ವಿಸ್ತರವಾದ ರೂಪಿನ ಸ್ಥಿತಿಯನೆಲ್ಲವ ಕೇಳು ॥೬॥

ಶಿರಸ್ಸು ಕೀವಿನ ಭಾಂಡ ಕರ್ಣ ಕೂಗುನಿ ಕಣ್ಣು
ಬರಿಯ ಉದಕ ಮೂಗು ನೆರೆ ಸಿಂಬುಳ
ದುರುವಾಸನೆಯ ಬಾಯಿ ನೆರೆದ ಮಾಂಸ ಯೌವನ
ಬರಿದೆ ಭ್ರಮಿಸಬೇಡ ಇರವೆಲ್ಲ ಕಿಸುಗುಳ ॥೭॥

ಹೊಟ್ಟೆಯ ರೂಪ ನೋಡಲು ಕೆಟ್ಟ ಕರುಳ ಖಬ್ಬಸ
ದಿಟ ವಿಚಾರಿಸೆ [ದೇಹ] ಕೆಟ್ಟ [ವಾಸನೆ]ಯ ಕುಣಿ
ಬಟ್ಟೆ ಮಲ ನಡೆವಂಥ ಕೆಟ್ಟ ದ್ವಾರವು ಆಸನ
ದೃಷ್ಟಾಂತವ ಕಂಡು ನೀನು ಭ್ರಷ್ಟ ಪರಹೆಣ್ಣು ಬಿಡು ॥೮॥

ತಮಂಧ ಮನವೆ ಕೇಳು ಸ್ವಾಮಿ ಕೊಟ್ಟುದೊಂದು ಹೆಣ್ಣು
ನಾಮವಾದರೆ ಸಾಲದೆ ಕಾಮಕೇಳಿಯಲಿ

ಪ್ರೇಮದಿಂದಲಿ ಇರದೆ ಸೀಮೆದಪ್ಪಿ ಹರಿದು
ಯಮನ ಬದಿಗೆ ಬಿದ್ದು ನಾಮನಷ್ಟವಾಗದಿರು ॥೯॥

ಬಾಲೆ ತನ್ನದೊಂದರೊಳೆ ನೆಲೆಯಿಂದ ಇರದೆ
ಕಾಲನ ಗೆಲುವುದೊಂದು ಕೀಲನೆ ಕೇಳು
ಸೋಲದೆ ಗುರುಪಾದದ ಮೂಲವಿಡಿದು ಮನವೆ
ಶೂಲಧರನ ಭಜಿಸಿ ಮೇಲುಗತಿಗೈದು ಕಂಡ ॥೧೦॥

ಹೀನಮನ ಎಲೆ ನಿನ್ನ ಶ್ವಾನಗುಣವನು ಬಿಟ್ಟು
ಜ್ಞಾನವಿಡಿದು ಶಿವಪಥ ಧ್ಯಾನದಲಿರು
ತಾನು ಗುರು ಗುಂಡ ಮೆಚ್ಚಿಹನು ಬೇಡಿದುದನೆಲ್ಲ
ದಾನಿ ಸಂಗಮೇಶನಲ್ಲಿ ಊನವಿಲ್ಲದೀಯುತಿಹ ॥೧೧॥

ತೋಹೆ–೩೮, ಪದ–೩೭

■

೩೯

ಬೇಡ ನೀಚ ಕುರಾಗ ಎಲೆ ಮನವೆ
ಬೇಡ ನೀಚ ಕುರಾಗ
ರೂಢಿಗೀಶ್ವರನು ಕೊಟ್ಟಷ್ಟು ತಪ್ಪದು ನಿಜ
ಮಾಡದಿರು ಕಂಡ ಭ್ರಮೆಯ ॥ಪಲ್ಲ॥

ಹಲವ ಹಂಬಲಿಸಿ ಮಲತ್ರಯಕೆ ಒಳಗಾಗಿಯೆ
ಬಾಲೆಯೊಳಗೆ ಬೀಳದಿರು ನೀ
ನಲುವಿನಲಿ ಸುಜ್ಞಾನದಲಿ ಇರಲಿಕೆ
ಒಲಿದುಣಿಸುವಾತ ಶಿವ ತಪ್ಪದು ತಪ್ಪದು
ಒಲಿದುಣಿಸುವಾತ ಶಿವನು ॥೧॥

ಕಡಲೊಳಗಿರಲು ಅಡವಿಯ ಒಳಯಿಕೆ ಹೋಗಿ
ಒಡಲೊಳಗೆ ಹೊಕ್ಕು ಇರಲು
ಗಹ್ವರದ ಗಹ್ವರದ ಒಡಲೊಳಗೆ ಹೊಕ್ಕು ಇರಲು
ಬಿಡದು ಪೂರ್ವದಲಿ ಮಾಡಿದ ಭೋಗಿತ ಫಲವು

ಊಡಿದಲ್ಲದೆ ಮಾಣದು ಸುಖದುಃಖ ಸುಖದುಃಖ
ಊಡಿದಲ್ಲದೆ ಮಾಣದು ॥೨॥

ಶಿಲೆಯ ಮಧ್ಯದಲಿ ಮಂಡೂಕನು ಮನೆ ಮಾಡಿರಲು
ಒಲಿದು ನೀರೆರೆದರಾರು
ಒಲಿದು ನೀರೆರೆದರಾರು ನೀರೆದರಾರು
ಮಲಹರನ ಕೃಪೆಯು ತಪ್ಪಿದರೆ ಇರಬಲ್ಲುದೆ
ಎಲೆ ಮರುಳೆ ಏಕೆ ಕುದಿಯು ನಿನಗೆ ನಿನಗೆ
ಎಲೆ ಮರುಳೆ ಏಕೆ ಕುದಿಯು ॥೩॥

ಉದಮದದಿಂದ ಹತ್ತೆಂಟು ಖಂಡುಗದಾಹಾರ
ಮದಗಜದ ವೈರಿಗಾರು ಕೊಟ್ಟರು
ಮದಗಜದ ವೈರಿಗಾರು ಕೊಟ್ಟರು ಕೊಟ್ಟರು
ಕುದಿದು ಕೋಟಲೆಗೆ ಒಳಗಾಗಿ ಮರುಳಾಗದಿರು
ಅದ ಕಿತ್ತು ನಿನಗೆ ಕೊಡನೆ ಶಿವನು ಶಿವನು
ಅದ ಕಿತ್ತು ನಿನಗೆ ಕೊಡನೆ ॥೪॥

ಖಂಡೆಯವ ಹಿಡಿದು ಶೂರತ್ವದಲಿ ವೆಗ್ಗಳಿಸಿ
ದಂಡಗಿ ಮರೆಯುತಿರಲು ಬಿರುದು ಬಿರುದು
ದಂಡಗಿ ಮರೆಯುತಿರಲು
ಹಿಂಡು ಕಾಳಗವ ಕಾದಿ ದುರ್ಗಗಳ ನೆರೆ
ಕೊಂಡು ಬಂದಷ್ಟೆ ಕಂಡ ಪೂರ್ವದಲಿ
ಕೊಂಡು ಬಂದಷ್ಟೆ ಕಂಡ ॥೫॥

ಹಂಬಲಿಸಿ ಹಲವು ವಿದ್ಯಗಳನೆಲ್ಲ ಕಲಿತು
ಜಂಬುದ್ವೀಪವ ತಿರುಗಲು ನಿಲ್ಲದೆ
ಜಂಬುದ್ವೀಪವ ತಿರುಗಲು
ಬೆಂಬಿಡದೆ ಧಾತುವಾದಗಳ ಕಲಿತರೇನು
ಶಂಭು ಕೊಟ್ಟಷ್ಟೆ ಕಂಡ ತಪ್ಪದು ತಪ್ಪದು
ಶಂಭು ಕೊಟ್ಟಷ್ಟೆ ಕಂಡ ॥೬॥

ಧರೆಯ ತಿರುಗಲು ಶರಧಿಯ ದಾಟಿ ಹೋಗಲು
ಹಿರಿದುದ್ಯಮವ ಮಾಡಲು ನಿಲ್ಲದೆ ನಿಲ್ಲದೆ

ಹಿರಿದುದ್ಯಮವ ಮಾಡಲು
ಗುರುಗುಂಡರಾಯನ ಸ್ವಾಮಿ ಸಂಗಮೇಶ
ಬರೆದ ಬರೆದಷ್ಟ ಕಂಡ ಹಣೆಯಲಿ ಹಣೆಯಲಿ
ಬರೆದ ಬರೆದಷ್ಟ ಕಂಡ ॥೭॥

ತೋಹೆ-೩೯, ಪದ-೩೭೯

■

೪೦

ಬೆಂಬಿಡದೆ ನೆನೆ ಮನವೆ ಸ್ವಾಮಿಯ
ಬೆಂಬಿಡದೆ ನೆನೆ ಮನವೆ
ಹಂಬಲಿಸದಲಿ ಹಲವ ನಂಬಿ ನೆನೆದವರಿಗೆ
ಶಂಭು ಕುಡುವಚಲ ಪದವ ಉನ್ನತ ಉನ್ನತ
ಶಂಭು ಕುಡುವಚಲಪದವ ॥ಪಲ್ಲ॥

ಸಾಗರದೊಳಗೆ ವಾಡಿಯ ಹಡಗುಗಳ ಹಾಕಿ
ಮೇಗೆ ಏರಿಹರು ಜನರು ನಂಬಿ ನಂಬಿ
ಮೇಗೆ ಏರಿಹರು ಜನರು
ಹೇಗೆಯಾದರೆ ಕಡೆಗೊಯ್ವುದಲ್ಲದೆ ಬಿಡದು
ಮೇಘಪತಿಯೇನು ಹೀನ ಅದರಿಂದ ಅದರಿಂದ
ಮೇಘಪತಿಯೇನು ಹೀನ ॥೧॥

ಮುನ್ನೂರ ಅರವತ್ತು ಯೋಜನಾಂತರದಲಿರಲು
ತನ್ನ ಮರಿ ಮೇಲೆ ಮೋಹ ಕೂರ್ಮ ಕೂರ್ಮ
ತನ್ನ ಮರಿ ಮೇಲೆ ಮೋಹ
ಉನ್ನತವಾಗಿರಲು ತೃಪ್ತಿಯಹುದು
ಪನ್ನಂಗಧರ ಹೀನವೆ ಅದರಿಂದ ಅದರಿಂದ
ಪನ್ನಂಗಧರ ಹೀನವೆ ॥೨॥

ಕೋಳಿಯ ಮರಿಗಳು ತಾಯಿ ಹಿಂದುಗೊಂಡು
ಮೇಳವಿಸಿ ತಿರುಗುತಿರಲು ಬಿಡದೆ ಬಿಡದೆ
ಮೇಳವಿಸಿ ತಿರುಗುತಿರಲು

ಕಾಳುಜೀವನ ಕಾಲು ಕೆದರಿ ಮೇಸುತಲಿಹುದು
ಬಾಳಲೋಚನ ಹೀನವೆ ಅದರಿಂದ ಅದರಿಂದ
ಬಾಳಲೋಚನ ಹೀನವೆ ॥೩॥

ತಾಯಿಧ್ಯಾನದಲಿ ಮರಿ ಬಾಯಿಬಿಟ್ಟಿರಲು
ಸಾಹಸದಿಂದ ಗುಟುಕು ತಂದು ತಂದು
ಸಾಹಸದಿಂದ ಗುಟುಕು
ಆಯತವಾಗಿಕ್ಕಿ ಸಲಹುತಲಿಹುದು
ಮಾಯಕೋಳಾಹಳ ಹೀನವೆ ಅದರಿಂದ ಅದರಿಂದ
ಕಾಯ ಶೂನ್ಯವು ಹೀನವೆ ॥೪॥

ಕೀಡಿ ಭೃಂಗನ ಧ್ಯಾನದಲಿರಲಿಕೆ ತಾನು
ಮಾಡಿತು ತನ್ನಂತೆ ಅದು ತಾ ಅದು ತಾ
ಮಾಡಿತು ತನ್ನಂತೆ
ಖೋಡಿ ವರ್ಜಿಸಿ ಗುಂಡರಾಯನ ಧ್ಯಾನಿಸಲು
ಮಾಡನೆ ನಿಜಭಕ್ತರ ನಂಬಿರಲು ನಂಬಿರಲು
ಮಾಡನೆ ನಿಜ ಭಕ್ತರ ॥೫॥

ತೋಹೆ-೪೦, ಪದ-೩೮೪

■

೪೧

ಘನ ಕಿರಿದೀಗವು ಹೆಣಗುತ್ತಿದ್ದೇನೆ
ಘನ ಕಿರಿದಿನೊಳಗಿಪ್ಪ ಅನುಭಾವ ನಾನರಿಯೆ
ಘನ ಕಿರಿದೀಗವು ಹೆಣಗುತ್ತಿದ್ದೇನೆ ॥ಪಲ್ಲ॥

ಹೊಟ್ಟುಯೆಂಬುದೆಂಬ ಕಿರಿದಿನಲಿ ಬೀಜ
ಹುಟ್ಟಿ ತಾನಡಗಿರ್ದಿತಲ್ಲಿ
ಕಾಷ್ಟವೆಂದೆಂಬ ಕಿರಿದಿನಲ್ಲಿ ತಾನು
ಎಷ್ಟು ಬೆಳಗುಳ್ಳ ನೂಲವಡಗಿತಲ್ಲಿ ॥೧॥

ಕಿರಿದುಯೆಂದೆಂಬ ಬೀಜದಲಿ ತಾನು
ಹಿರಿದು ವೃಕ್ಷವು ಅಡಗಿರ್ದಿತಲ್ಲಿ

ಕರ ಕಿರಿದು ಬೆಲೆಯ ಒರೆಯಲ್ಲಿ ಎಂಥ
ಹಿರಿದಪ್ಪ ಖಂಡೆಯ ತಾನಡಗಿರ್ದಿತಲ್ಲಿ ॥೨॥

ಶಿಲೆಯಂಬ ಕಿರಿದಿನಲ್ಲಿ ಚೊಕ್ಕ
ಸಲೆ ಹೇಮವಡಗಿರ್ದಿತಲ್ಲಿ
ಹಲವು ಪರಿ ಕಿರು ಹುಲ್ಲಿನಲ್ಲಿ ಎಂಥ
ಬಲು ಮರುಜೇವನಿಗೆ ಅಡಗಿರ್ದಿತಲ್ಲಿ ॥೩॥

ಚಿಪ್ಪುಯೆಂದೆಂಬ ಕಿರಿದಿನಲ್ಲಿ ಉತ್ತಮ
ಸುಪ್ಪಾಣಿ ಮುತ್ತಡಗಿತಲ್ಲಿ
ತಪ್ಪದೆ ಕಿರಿದು ಬಾಳೆಯಲ್ಲಿ ಚಿನಿ
ಕಪ್ಪುರ ಘನವು ತಾನಡಗಿರ್ದಿತಲ್ಲಿ ॥೪॥

ತೆರೆ ಮೋಡ ಮರೆಯಲಿರುತಲ್ಲಿ
ಸೂರ್ಯ ಹೊರವಂಟ ತೆರದ ಪರಿಯಲ್ಲಿ
ಸರವು ಕ್ಷಮೆದಮೆಗಳುಳ್ಳಲ್ಲಿ
ಹಿರಿದು ನಡೆನುಡಿ ಧೃಡವುಳ್ಳಲ್ಲಿ ತಾನು
ಗುರು ಗುಂಡಬಸವೇಶ ಪ್ರಭೆದೋರುವ [ನ]ನ್ನಲ್ಲಿ ॥೫॥

ತೋಹೆ-೪೧, ಪದ-೩೮೯

■

೪೨

ಮೊರೆಯೋ ಮೊರೆಯೋ ಮೊರೆಯೆಂದುಸುರತಿದ್ದೇನೆ
ಇರುಳು ಹಗಲು ಗುರುವೆ ನೀ
ನರಿಯೋ ಅರಿಯೋ ಕರ್ಣಕುಂಡಲಗಳ
ಮೊರೆಯೋ ಮೊರೆ ಕೇಳೆಯೋ ॥ಪಲ್ಲ॥

ಅಳಲುತ ಅಳಲುತ ಅಳಲುತ ಬಳಲುತ
ಕಳವಳಿಸುತ ನಾನು
ಕೊಳೆಯುತ ಕೊಳೆಯುತ ಕೊಳೆಯುತ ಚಿಂತೆಯ
ಮೆಳೆಯೊಳಗಿಳಿದಿಹೆನು
ಹೊಳೆಯುತ ಹೊಳೆಯುತ ಹೊಳೆಯುತ ಸುಳಿಯುತ

ಒಳಗಣ ಕಳವಳವೇನು
ಉಳುಹುತ ಉಳುಹುತ ಉಳುಹುತ ಚಿಂತೆಯ
ಮೆಳೆಗಳ ಹರಿ ನೀನು ||೧||

ನಿಂದಕ ನಿಂದಕ ನಿಂದಕಗಳು ಘನ
ದಿಂದಲಿ ಬೆಂದ ಮನ
ನೊಂದಿತು ನೊಂದಿತು ನೊಂದಿತು ಗುರುಬೋಧೆ
ಯಂದವ ನೋಡಲಲ್ಲಿ
ಮುಂದಣ ಮುಂದಣ ಮುಂದಣ ಕೆಲಸದ
ದಂದುಗದಿಂದ ನಿಮ್ಮ
ಹಿಂದಣ ಹಿಂದಣ ಹಿಂದಣ ಬಂಧುರ
ಬಂದು ವಿಚಾರಿಸಿ ನೀವು ||೨||

ಮನದೊಳು ಮನದೊಳು ಮನದೊಳು ಅನುವೇಳೆ
ನೆನೆಯುತ ಕನಲುತಲಿ
ಸನುಮಾನ ಸನುಮಾನ ಸನುಮಾನ ಗುರುವಿನ
ವಿನಯವ ಬಯಸುತಲಿ
ಘನಗುರು ಘನಗುರು ಘನಗುರು ಗುಂಡ ಎನ್ನ
ಜಿನುಗುಮನ ಬಿಡಿಸಿ
ಘನಜ್ಞಾನ ಘನಜ್ಞಾನ ಘನಜ್ಞಾನ ಕೊಟ್ಟಿ
ರನುದಿನ ಸಲಹುತಲಿ ||೩||

ತೋಹೆ-೪೨, ಪದ-೫೨

■

೪೩
ರಾಗ : ಆಹೇರಿ
ಒಂದೊಂದು ಇಂದ್ರಿಯಕೆ ಒಳಗಾದ ಜೀವವು
ಬಂಧನಕ್ಕೆ ಬಿದ್ದು ಬಲವಳಿದು
ಅಂದವಾಗದು ನೀನು ಅರಿತು ನಡೆ ಮನವೆ ಪಂ
ಚೇಂದ್ರಿಯಂಗಳಿಚ್ಚೆಯಲಿರಬೇಡ ||ಪಲ್ಲ||

ಘ್ರಾಣೇಂದ್ರಿಯಕೆ ಸಿಕ್ಕಿ ಗಾಸಿಯಾದ ಜೀವನದ
ಜಾಣತನವೆಂತು ಜಗದೊಳಗೆ
ಮಾಣದೆ ತುಂಬಿ ತಾ ಮತಿಗೆಟ್ಟು ದಿಕ್ಕುಗಳ
ಕಾಣದಾಯಿತು ಕುಸುಮದೊಳಗೆ
ಪ್ರಾಣಸಂಕಟದಿಂದ ಪರಿಣಾಮವಳಿದುಳಿದ
ಕಾಣಬಹ ದುಃಖಗಳ ಕಂಡು
ಹೂಣಿಸದಿರಿನ್ನು ಈ ಹೂಣಿಕೆಯ ಮನವೆ ಇಂಥ
ಜಾಣತನಗಳಿಗೆ ಜಾರುವದು ॥೧॥

ವದನೇಂದ್ರಯಕೆ ಸಿಕ್ಕಿ ಒಲಿದು ಜಲದೊಳು [ಮತ್ಸ್ಯ]
ಹದನನರಿಯದೆ ಹರಿದು ಬಂದು
ಗದರ ಮಾಡದೆ ನೋಡಿ ಗಾಳವೆಂದರಿಯದಲಿ
ಸದಮದದಲಿ ಸವಿದು ಕಾದು
ಹದುಳ ಹೋಹದೆ ತನ್ನ ಹರುಷವಾಗಳೆ ಅಳಿದು
ಬಿದಿರಿ ಸೆಳೆದು ಬಿಡದೆ ಕೊಂದ
ಅದನಾದರೆ ನೋಡಿ ಅರಿತು ನಡೆ ಮನವೆ ಇಂಥ
ವದನೇಂದ್ರಿಯಕೆ ಒಲಿಯದಲಿ ॥೨॥

ನಯನೇಂದ್ರಿಯಕ್ಕೆ ಸಿಕ್ಕಿ ನಲಿದು ಪತಂಗ ತಾ
ಭಯವಳಿದು ಭ್ರಮೆಗೊಂಡು ತಾನು
ಕಾಯ ಶುದ್ಧರಿಯದಲಿ ಕಂಡಾಕ್ಷಣದಲ್ಲಿ
ಹಾಯಿದು ದೀಪದೊಳು ಹರುಷದಲಿ
ಬೇಯದೆ ಉಳಿವುದೆ ತಾನು ಬೇಯದೆಂತು ಅಲ್ಲಿ
ಸಯವಾಗಿಹುದು ಸುಖದಲ್ಲಿ
ನೋಯದಿರು ಅದರಂತೆ ನೋಡಿ ನಡೆ ಮನವೆ ಇಂಥ

ನಯನೇಂದ್ರಿಯಕೆ ನಲಿಯದಲಿ ॥೩॥
ತ್ವಕ್ಕೇಂದ್ರಿಯಕೆ ಸಿಕ್ಕಿ ತನ್ನ ತಾನರಿಯದ
ಲಿಕ್ಕಿ ಮದಗಜ ಸೋಹೆದಪ್ಪಿ
ಹಕ್ಕೆಯಾಗಿರದೆ ತಾ ಹರುಷದಿಂದಲಿ ಹೋಗಿ
ಠಕ್ಕಿಸಿದ ಠಾವನರಿಯದಲಿ
ಸಿಕ್ಕಿ ಬಿದ್ದಿತು ತಾನು ಶೀಘ್ರದಿಂದಲಿ ಅಲ್ಲಿ

ಸೊಕ್ಕಳಿದು ಸೆರೆಯಾಗಿ ಸಿಕ್ಕಿ
ಅಕ್ಕಜವನೆ ನೋಡಿ ಅರಿತು ನಡೆ ಮನವೆ ಈಂಥ
ತ್ವಕ್ಕೇಂದ್ರಿಯಕೆ ತಗುಲದಲಿ ॥೪॥

ಶ್ರೋತ್ರೇಂದ್ರಿಯಕೆ ಸಿಕ್ಕಿ ಸೊಬಗಿನಲಿ ಮೃಗವು ತಾ
ಭೀತಿಯಳಿದು ಬಿಗಿದುಕೊಂಡು
ಆತುರದಿಂದಲಿ ಆದ ತೆರನನರಿಯದಲಿ
ಆತು ಕಾಯಿತು ಅರ್ತಿಯಲಿ
ಸೂತ್ರದಿಂದಲಿ ಎಸೆದು ಸೂನೆಗಾರನು ಮುಂದೆ
ಭೀತಿಗೊಂಡರೆ ಬಿಡದು ಕೊಂದ
ಆ ತೆರನ ನೋಡಿ ಅರಿತು ನಡೆ ಮನವೆ ಇಂಥ
ಶ್ರೋತ್ರೇಂದ್ರಿಯಕೆ ಸೊಗಸದಲಿ ॥೫॥

ಈ ಪರಿಯ ಒಂದೊಂದು ಇಂದ್ರಿಯಂಗಳಿಗಾಗಿ
ಆಪತ್ತಿಗೊಳಗಾಗುತಲಿ
ತಾಪತ್ರಯವಾಗುತಲಿತ್ತ ತಮಗೆ ಹತವಾಗಿ
ಪಾಪಿ ಮನವೆ ಕೇಳು ಪಂಚೇಂದ್ರಿಯಂಗಳಿಗೊಳಗಾಗಿ
ಈ ಪರಿಯ ಎಂತು ಕಡಘವೆ (?)
ಉಪಾಯ ಕಾಣುವುದುಳಿಯಬೇಕಾದರೆ
ಪಾಪವೆಂಬುದನೆ ಪರಿಹರಿಸು ॥೬॥

ಪಂಚೇಂದ್ರಿಯಂಗಳೆಲ್ಲ ಪಾಪಕಂಜದೆ ಮಲೆತು
ಮುಂಚುತಿವೆ ಮುಂದುಗಾಣದಲಿ
ಹಿಂಚು ಮೌಢ್ಯವ ಬಡಿದು ಹಿರಿದು ಜ್ಞಾನವ ಬಲಿದು
ಸಂಚ ಲೋಚನ ಸಟೆಯ ಜರಿದು
ಪಂಚೇಂದ್ರಿಯದಲುಳ್ಳ ಪಂಚವಿಷಯಂಗಳನು
ವಂಚಿಸದೆ ಗುರು ಸೋಹಕ್ಕಿತ್ತು
ಪಂಚವದನ ಗುಂಡಬಸವೇಶ್ವರನ ಕರುಣ
ಕಿಂಚಿತ ಕೃಪೆಯ ಪಡೆದಿಹುದು ॥೭॥

ತೋಹೆ-೪೩, ಪದ-೪೯

■

೪೪

ರಾಗ : ಬಹುಳಿ

ಶಿವಯೋಗವೆಂದು ಯಾವಾಗಲಾಡುತಲಿಹೆನು
ಶಿವಯೋಗವೆಂತೆಂಬ ವಿವರವನರಿಯೆ ॥ಪಲ್ಲ॥

ಹಿಡಿದ ವ್ರತಗಳ ಬಿಡದೆ ನಡೆಸುವುದು ಶಿವಯೋಗ
ನುಡಿದು ತಪ್ಪದಿರಲು ಶಿವನ ಯೋಗ
ನುಡಿದಂತೆ ತಾನೀಗ ನಡೆವುದೆ ಶಿವಯೋಗ
ನುಡಿಯದಿರೆ ಹುಸಿಗಳನು ಶಿವನ ಯೋಗ
ನೋಡುತಿರೆ ಸರ್ವರನು ತನ್ನಂತೆ ಶಿವಯೋಗ
ಆಡುತಿರೆ ಧರ್ಮವನು ಶಿವನ ಯೋಗಕೆ
ಕೇಡಾಡದಿರೆ ಯಾವ ಜೀವಕೆ ಶಿವಯೋಗ
ಮಾಡುತಿರೆ ದಯೆಗಳನು ಶಿವನ ಯೋಗ ॥೧॥

ಹೆಚ್ಚು ಕುಂದನೆ ಮಾಡಿ ನೋಡದಿರೆ ಶಿವಯೋಗ
ಇಚ್ಚೆಗಳ ನುಡಿಯದಿರೆ ಶಿವನ ಯೋಗ
ಕುಚ್ಚಿತವ ತಾನೆಂದು ಮಾಡದಿರೆ ಶಿವಯೋಗ
ಕುಚ್ಚಿತವ ಕೇಳದಿರೆ ಶಿವನ ಯೋಗ
ಮೆಚ್ಚಿರಲು ಶಿವನ ಧ್ಯಾನಕೆ ತಾನು ಶಿವಯೋಗ
ಹೆಚ್ಚುತಿರೆ ಧರ್ಮವನು ಶಿವನ ಯೋಗ
ನಚ್ಚಿರಲು ಸತ್ಯಶರಣರ ತಾನು ಶಿವಯೋಗ ॥೨॥

ಮಂದಮತಿಯಾಗಿ ತಾನಿರಲು ಶಿವಯೋಗ
ಕುಂದು ಮಾತಾಡದಿರೆ ಶಿವನ ಯೋಗ
ಹಿಂದುಮುಂದೊಂದ ತಾನಾಡದಿರೆ ಶಿವಯೋಗ
ಒಂದೆ ನಿಜದಾಕ್ಷರವಿರೆ ಶಿವನ ಯೋಗ
ನಿಂದೆಗಳ ತಾನೆಂದು ಮಾಡದಿರೆ ಶಿವಯೋಗ
ನಿಂದೆಗಳೆ ಕೇಳದಿರೆ ಶಿವನ ಯೋಗ
ಬಂಧಿಸಿರೆ ಮನವ ತನ್ನಿಚ್ಛೆಯಲಿ ಶಿವಯೋಗ
ಮುಂದುಗೊಂಡಿರೆ ಜ್ಞಾನ ಶಿವನ ಯೋಗ ॥೩॥

ಪರಸತಿಗೆ ತಾನು ಒಳಗಾಗದಿರೆ ಶಿವಯೋಗ
ಪರಧನಕೆ ಅಳುಪದಿರೆ ಶಿವನ ಯೋಗ

ಪರವನರಿತು ತಾನು ನೆನೆಯುತಿರೆ ಶಿವಯೋಗ
ಗುರುವಾಜ್ಞೆ ಮೀರದಿರೆ ಶಿವನ ಯೋಗ
ಸಿರಿ ಬಡತನಕೆ ಹೆಚ್ಚು ಕುಂದದಿರೆ ಶಿವಯೋಗ
ಪರರು ತನ್ನವರೆನ್ನದಿರೆ ಶಿವನ ಯೋಗ
ಸರುವರನು ಸಮಚಿತ್ತದಿ ಕಾಬುದೆ ಶಿವಯೋಗ
ಅರಹು ನೆಲೆಗೊಂಡಿರಲು ಶಿವನ ಯೋಗ ॥೪॥

ಪಂಚೇಂದ್ರಿಯಕೆ ಒಳಗಾಗದಿರೆ ಶಿವಯೋಗ
ಸಂಚಲಮನ ಬಿಡಲು ಶಿವನ ಯೋಗ
ಮುಂಚುತಿರೆ ಭಕ್ತಿ ಭಾವಕೆ ತಾನು ಶಿವಯೋಗ
ಹಿಂಚೆ ಅಧರ್ಮಕೆ ಶಿವನ ಯೋಗ
ವಂಚಿಸದೆ ಗುರುಪೂಜೆ ಮಾಡುವುದೆ ಶಿವಯೋಗ
ಮಿಂಚು ದಾಸೋಹವಿರೆ ಶಿವನ ಯೋಗ
ಪಂಚವದನ ಗುಂಡ ಬಸವೇಶ್ವರನ ಕರುಣ
ಕಿಂಚಿತಾರ್ಥವ ಪಡೆಯೆ ಶಿವನ ಯೋಗ ॥೫॥

ತೋಹೆ-೪೩, ಪದ-೫೯

■

೪೫
ಭವಿಗೆ ಶರಣೆನಬಹುದೆ ಭಕ್ತನೆಂದೆಂಬೆನು
ಭವಿಯಾರು ಭಕ್ತರಾರೆಂದರಿಯೆನು
ಶಿವ ನುಡಿದ ನಡೆ ಭಕ್ತ ತ್ರಿವಿಧಪೇಕ್ಷಿತ ಭವಿಯು
ವಿವರ ನಡೆನುಡಿ ಪ್ರಣವ ಸಹಜವು ಲಿಂಗ ॥ಪಲ್ಲ॥

ಲಿಂಗವಿಲ್ಲದವರಿಗೆ ಶರಣು ಸಲ್ಲದುಯೆಂಬೆ
ಲಿಂಗವಿಲ್ಲದ ತನುವು ನಿಲಬಲ್ಲುದೆ
ಲಿಂಗ ಬ್ರಹ್ಮಾಂಡದೊಳು ಲಿಂಗ ಪಿಂಡಾಂಡದೊಳು
ಲಿಂಗ ವ್ಯಾಪಕ ತುಂಬಿ ತುಳುಕುತಿದೆ ಕೋ
ಲಿಂಗ ಪಂಚೇಂದ್ರಿಯದಲಿ ಲಿಂಗ ಷಡುಚಕ್ರದಲಿ
ಲಿಂಗ ಚೈತನ್ಯ ತನು ನಲಿವುತಿದೆ ಕೋ
ಅಂಗದಲಿ ಶಿಲೆಯ ಲಿಂಗವಿಲ್ಲದಿರೆ ಭವಿ ಹೇಗೆ
ಲಿಂಗವ ಕೊರಳಿಂ ತೆಗೆಯೆ ಸತ್ತರಹುದು ॥೧॥

ಆರು ದರುಶನದ ಶಿಷ್ಯರ ಶರಣು ಗುರುವಿಂಗೆ
ಮಾರಾರಿಯರು ಪಠಯಿಸಲಿಕೆಯಹುದು
ಆರು ದರುಶನದ ದೈವಂಗಳಿಗೆ ಅವರವರ
ಸೇರುವೆಯ ಕ್ರೀಯ ಶರಣುಗಳುಂಟು
ದಾರು ಗುರುಬೋಧೆಗಳಿಗೊಂದನೆಯ ಮಾಡಿದರು
ಕ್ರೂರ ಪಾಪಿಗೆ ಜಗವೆ ಛೀ ಎಂಬರು
ಸಾರ ಸೌಖ್ಯವನರಿಯೆ ನನ್ನ ಶಿಷ್ಯರು ಎಂಬೆ
ಹಾರಿ ಕೆಡೆದೊ[ಡೆ] ದರುಶನಕೆ ಸಲ್ಲೆ ॥೨॥

ಆರು ದರುಶನ ಭವಿಯೆ ಅಜ್ಞಾನಿಯಾಗದಿರು
ದಾರು ಪೂಜಿಸುವ ಲಿಂಗಗಳು ಭವಿಯೆ
ಕ್ಷೀರವನು ಕರೆದುಂಡಗೊಲೆ ದೇವತೆ ಭವಿಯೆ
ಮಾರಹರನ ಶರಣರು ಭವಿಯೆ
ಧೀರ ಸೊಡ್ಡಳ ಬಾಚರಸ ಭವಿಯೆನಲುಬಹುದೆ
ಶೂರ ಗೊಲ್ಲಾಳನ ಭವಿಯೆನಲುಬಹುದೆ
ಕಾರುಣ್ಯಮೂರ್ತಿ ಅನಿಮಿಷನು ಭವಿಯೆನಬಹುದೆ
ಗೋರಕ್ಷ ಕಣ್ಣಪ್ಪಗಳು ಭವಿಗಳೆ ॥೩॥

ಸುರೆಭಾಂಡದ ಲಿಂಗವಾದ ಶರಣನು ಭವಿಯೆ
ಹರನೊಲಿಸಿದ ಸಿದ್ಧರಾಮನು ಭವಿಯೆ
ಪುರವ ಬತ್ತೀಸಗಳನೊಯ್ದ ಖರ್ಜಣ ಭವಿಯೆ
ಹರನಾಳುಗೊಂಡ ನಂಬೆಣ್ಣ ಭವಿಯೆ
ಧರೆಗೆ ಮುಖ್ಯಗಳಾದ ಪಂಚತತ್ವವು ಭವಿಯೆ
ನರರುಂಬ ಹದಿನೆಂಟು ಧಾನ್ಯ ಭವಿಯೆ
ಮರುಳಮಾತುಗಳೇಕೆ ಹರನೊಲಿದನೆ ಭಕ್ತ
ಬರಿದೆ ನಿಂದಿಸುತಿಹ ನರಕಿ ಭವಿಯು ॥೪॥

ಛಲವ್ರತದ [ಖೇ]ಡದ ಸಾತಿಮಯ್ಯನು ಭವಿಯೆ
ಕೊಲೆಯ ಕೊಡಿಸುವ ವ್ರತದ ಮಾಧವರ್ಮನು ಭವಿಯೆ
ಕೊಲೆಯಿತ್ತ ಬಸವಕುಮಾರ ಭವಿಯೆ
ಮಲಹರನ ಮಸ್ತಕದಲಿಹ ಫಣಿಪನು ಭವಿಯೆ
ಒಲಿದು ಧರಿಸಿದ ಚಂದ್ರಸೂರ್ಯರು ಭವಿಯೆ

ನೆಲದಲುಂಬ ಕೊಪ್ಪಳದ ರಾಮಯ್ಯನು ಭವಿಯೆ
ಹಲವು ಮಾತೇಕೆ ಹರನೊಲುಮೆ[ಯುಳ್ಳಾತ] ಭಕ್ತ ॥೫॥

ನೋಡಿ ಬಯಸುವ ಗಂಡನುಳ್ಳ ಸ್ತ್ರೀಯರ
ನೋಡಿ ಮನದೊಳಗೆ ಮರಗುವವನು ಭವಿಯು
ನೀಡಿತರ ಹರುಷದಲಿ ಕಾಮತಾಪದಿ ಬೆಂದು
ನೋಡಿ ವಿಕಳಿತನಹನವನೆ ಭವಿಯು
ನೋಡಿ ನಿಲಲಾರದಲಿ ಕೂಡಿದಾತನೆ ಭವಿಯು
ನೋಡಿ ದುರ್ವ್ಯಸನಿಯಾದವನೆ ಭವಿಯು
ನಾಡ ವರಾತನು ಕಲಿತು ನಲಿವುತಿರ್ದರೆಯೇನು
ಜೋಡಗಲಿ ಕೂಡಿದವ ಭೋಗಿ ಭವಿಯು ॥೬॥

ಕಳ್ಳ ಭವಿ ಹಾದರಿಗ ಭವಿ ನಿಂದಕನೆ ಭವಿಯು
ತಳಳಿಯೊಡವೆಯ ತಿಂಬ ಚಾಡ ಭವಿಯು
ಬಳ್ಳುಟ ಬೊಗಳುತಿಹ ಗುರುಹಿರಿಯರೆನ್ನದೆ
ಹುಳ್ಳಿ ಪಂಚಮಹಾಪಾಪಿಯವನೆ ಭವಿಯು
ಒಳ್ಳೆಯ ನಿಜನುಡಿಯಿಲ್ಲ ಹುಸಿಯನಾಡುವ ಭವಿಯು
ಜಳ್ಳಾಗಿ ಅಷ್ಟಮದ ಷಡುವರ್ಗ ಸಪ್ತವ್ಯಸನ
ದಲ್ಲಿ ಮುಳುಗಿದಗೆ ಲಿಂಗವಿಲ್ಲ ಭವಿಯು ॥೭॥

ತೊತ್ತಿದಿರ ಬಿಡದವಗೆ ಭಕ್ತಿ ಮಾತಿನ್ನೇಕೆ
ವ್ಯರ್ಥಿ ವ್ಯಕ್ತಿಗಳ ಸಂಗವ ಮಾಡುವ ತಾ
ನಿತ್ಯ ಉದ್ದಿಮೆಯೊಳಗೆ ಮರಹು ಮೋಸವು ಠಕ್ಕು
ಅತ್ಯಂತ ಹುಸಿಯು ಅಟಮಟದವರಿಗೆ
ಮೂರ್ತಗೊಂಬುದೆ ಲಿಂಗ ಕಟ್ಟಲವ ಭಕ್ತನೆ
ತೀರ್ಥ ಪ್ರಸಾದ ಕ್ರಿಯೆಗೆ ಸಲುವನೆ
ಅರ್ಥವರಿತು ಗುರುಹಿರಿಯರೊಳಗೆ ವಾದಗಳಿಂದ
ತುರ್ತು ಯಮಗುಂಡ ಭವಬಂ[ಧ] ಬಿಡದು ॥೮॥

ತೋಹೆ–೪೫, ಪದ–೪೧೨

■

೪೬

ಗುರು ಕೊಳುಕೊಡೆಯ ಭಕ್ತರಲಿ ಮಾಡಬಹುದೆ ಇದು
ಗುರುವಿಂಗೆ ಕುಂದೆಂದು ಜರೆಯುತಿಹೆನು
ಗುರು ಪೂರ್ವದಲಿ ನಡೆದುದನೆ ನಡೆವನಲ್ಲದಲಿ
ಗುರು ಮಹಿಮೆಯೆಂತೆಂಬ ತೆರನನರಿಯೆ ॥ಪಲ್ಲ॥

ಆದಿಯಲಿ ಪರಶಿವಗೆ ಆದರಿಬ್ಬರು ಮಕ್ಕಳು
ಸದಾಶಿವನು ಜ್ಞಾನಶಕ್ತಿಯು ಎಂದು
ಆದಡವರಿಗೆ ತತ್ತ ಆದಿನಂದೀಶ ಮಾಡಿದರೆ
ಆದುದಲ್ಲಿಂದಿತ್ತ ಸಕಲವೆಲ್ಲ
ಐದು ತತ್ವವು ಐದು ದೈವದೈದು ಶಕ್ತಿ
ಐದು ಮಠಗಳು ಐದು ಕಳಸ ಹುಟ್ಟಿ
ಐದು ಲಿಂಗವು ಅಂಗದಲಿಯಿಟ್ಟು ಬಸವ ಶಿವ
ಆದಿ ಅಂತ್ಯವನರಿಯದಡೆ ನರಕ ॥೧॥

ನುಡಿದರಣ್ಣಂಗೆ ತಂಗಿಯ ಮದುವೆಯುಂಟೆಂದು
ಮೃಡನ ಶರಣರು ವಚನ ರಚನೆಗಳಲಿ
ಮೃಡ ನಿರ್ಮಿಸಿದ ಜೀವರೆಲ್ಲ ಸೋದರರೆಂಬ
ನುಡಿಯು ರಹಸ್ಯದಲುಂಟು ತಿಳಿದು ನೋಡಿ
ಪೊಡವಿಯೊಳು ಗುರುಹಿರಿಯರಂತು ಕೊಟ್ಟರವರು
ಒಡೆಯ ಭಕ್ತರ ಸಾಕ್ಷಿ ಒಪ್ಪಿತದಲಿ
ತುಡುಗುಣನು ಕಳ್ಳ ಹಾದರಿಗಗೇತಕೆ ಮಾತು
ನಡೆಹೀನ ಆಡಲು ಹೊಡೆಯರೆ ಬಾಯನು ॥೨॥

ಧಾರುಣಿ ಮಣ್ಣು ಮಣ್ಣು ಕೂಡೆ ಬೇರೆ ಮಾಡಲುಬಹುದೆ
ನೀರು ನೀರನು ಕೂಡೆ ತೆಗೆಯಲಳವೆ
ಕ್ರೂರ ಅಗ್ನಿಯ ಕಿಚ್ಚು ಕಾಷ್ಠ ಕಿಚ್ಚಾವುದು
ಮಾರುತ ಬೀಸಣಿಗೆ ಮಾರುತದಾವುದು
ಸೇರೆ ತೆಂಗಿನ ಫಲದೊಳಂಬರಂಬರವಮೃತ
ಕ್ಷೀರಕ್ಷೀರವ ಕೂಡೆ ತಗೆಯಲಳವೆ
ಯಾರು ಗುರುಮಾರ್ಗ ಪುಣ್ಯಕೆ ಪುಣ್ಯ ಕೊಳುಕೊಡೆಯು
ಮಾರಹರನ ಮಹಿಮೆ ತಿಳಿಯಲಳವೆ ॥೩॥

ಗುರುಮನೆಯ ಕಸವ ತಿಪ್ಪೆಗೆ ಒಯ್ದು ಹಾಕರೆ
ನೆರಮನೆಯ ಕಸವು ತಿಪ್ಪೆಗೆ ಬೀಳದೆ
ಬೆರೆದು ಕೂಡಿದ ಕಸಕೆ ಗುರುಶಿಷ್ಯತನವುಂಟೆ
ಅರಿಯದಜ್ಞಾನಿ ಕೇಳ್ಕುಲ ತಿಪ್ಪೆಯು
ಧರಣಿತತ್ವವು ಸರಿಯೆ ಕಿರಿದು ಕಸವೆನಬಹುದೆ
ಕಿರಿದು ಕಸದಾಸರೆಯು ಧರಣಿಯಹುದೆ
ಬೆರೆದು ಕೂಡದೆ ಬಿಡದು ಹರನ ಮಾಯಕ ಬೇರೆ
ದುರುಳ ದುರ್ಜನರು ಹಳಿದಾಡಬೇಡ ||೪||

ಗುರುವಿನ ತೋಟ ದೊಡ್ಡಿಯು ಹೊಲದ ಬೆಳಸಿಂಗೆ
ನೆರೆಯ ಭಕ್ತರ ತಿಪ್ಪೆಯ ತರಬಾರದೆ
ಸರ್ವಭಕ್ತರ ಬೆಳೆಯ ಸಕಲ ಆರಂಬಕೆ
ಗುರು ತಿಪ್ಪೆಯ ಮಣ್ಣ ಹೊರೆ ದೋಷವೆ
ಕಿರುಕುಳಿಗತನದಿ ಕೆಟ್ಟು ನುಡಿದು ಹಳಿಯುತಿಹೆ
ಸುರೆಯಂತೆ ಸೊಕ್ಕಿ ಅನ್ನದ ಮದದಲಿ
ಉರಿದುಹೋದೆ ನೀನು ಉಣ್ಣದೆ ಹಡೆಯದೆ ಪಾಪಿ
ನರಗುರಿಗೆ ಮುಂದೆ ನಾಯಕ ನರಕವು ||೫||

ಜಗದ ಹೆಣ್ಣು ಗಂಡುಗಳಿಗೆ ದೀಕ್ಷೆಯ ಕೊಟ್ಟು
ಮಿಗಿಲು ಜಂಗಮದ ಮಕ್ಕಳು ಎಂಬೆನು
ಮಗಳ ಮದುವೆಯಾಗುವರೆ ಮತಿಭ್ರಷ್ಟ ವ್ರತಭ್ರಷ್ಟ
ನಗೆಗೇಡಿಯ ಮಾಡಿದೆ ನಾಲ್ಕು ಸ್ಥಲದೊಳು
ಹಗರಣಿಗರಂತೆ ಹಾವುಗೆ ಯೋಗವಟ್ಟಿಗೆಯು
ಬಗೆಬಗೆಯ ಸುಲಿಪಲ್ಲು ಕಂಥೆ ಕೌಪು
ಬಗೆವೆ ಸಿರಿಯತನವನು ಬಿಡೆ ತೆಗೆವೆ ಮನದ ನಿಷ್ಠೆಯನು
ಜಗವೆತ್ತ ನೀನೆತ್ತ ಭವದ ಮರುಳೆ ||೬||

ಮಾತಾಡದಿರಿ ಹಳಿದು ಪಾತಕಗಳಾದಾವು
ಏತಕೆ ಬರಿದೆ ಪಾತಕಗಳಾದಾವು
ಘಾತಕದ ನುಡಿಬೇಡ ಗರ್ವಿತನಗಳು ಬೇಡ
ಕೋತಿಚೇಷ್ಟೆಯು ಬೇಡ ಕುಹಕ ಬೇಡ
ನೀತಿದಪ್ಪುವ ಭಕ್ತನೆ ನೀ ವ್ಯಸನಿಯೇ

ಈತ ಭಕ್ತ ಜಂಗಮದ ಖ್ಯಾತಿಗಳುಪುತ
ಆತ ಜಂಗಮ ಭಕ್ತರ ಕಂಡರೆ ಕೊಂಡೋಡುವನ
ಖ್ಯಾತಿ ಜಂಗಮ ಸ್ಥಾವರ ಗ್ರಾಮದಲಿ ನಿಲುವನೆ ॥೭॥

ತೋಹೆ-೪೬, ಪದ-೪೮೯

■

೪೭

ರಾಗ : ವರಾಳಿ

ಓದಿ ಓದಿ ಓದಿ ಓದಿ
ಭೇದ ಭೇದ ಭೇದ ಭೇದ ॥ಪಲ್ಲ॥

ಬಲ ಬಲ ಬಲ ಬಲ ಬಲ
ಒಲವ ಒಲವ ಒಲವ ಒಲವ
ಕುಲಕು ಕುಲಕು ಕುಲಕು ಕುಲಕು
ಎಲ್ಲಯ ಎಲ್ಲಯ ಎಲ್ಲಯ ಎಲ್ಲಯ ॥೧॥

ದಯದ ದಯದ ದಯದ ದಯದ
ಮಯ ಮಯ ಮಯ ಮಯ ಮಯ
ಅಯ್ಯ ಅಯ್ಯ ಅಯ್ಯ ಅಯ್ಯ ಅಯ್ಯ
ರಾಯ ರಾಯ ರಾಯ ರಾಯ ॥೨॥

ಹರ ಹರ ಹರ ಹರ ಹರ
ಕರ್ಣ ಕರ್ಣ ಕರ್ಣ ಕರ್ಣ
ಬರ್ದೆ ಬರ್ದೆ ಬರ್ದೆ ಬರ್ದೆ
ಗುರು ಗುರು ಗುರು ಗುರು ಗುಂಡ ॥೩॥

ತೋಹೆ-೪೭, ಪದ-೪೭೭

■

೪೮.

ರಾಗ : ವರಾಳಿ

ಜಗದೊಳಗೆ ನಾಗಾವಿಗೆ
ಮಿಗಿಲಾಗಿ ಭಾಗ್ಯನಾಗಿ
ಸುಗುಣವಾಗಿಹ ಗೊಟ್ಟಿಗೆ
ಮಗ ನಾಗಯೋಗಿ ಹೋಗಿ ॥ಪಲ್ಲ॥

ಗುರು ನರ ಕರು[ಣೆ]ದೋರೆ
ಹರುಷೇರಿ ನಾರಿಯರು
ಅಕ್ಷದೋರೆ ಹರಕರು
ಣ್ಸೆರಿ ಸಾರಿದರು ಬೇರೆ
ಹೊರೆ ಮೀರೆ ತರುಣಿಯರು
ನೀರನೆರೆದರು ಗುರು
ಮೂರುತಿಗೆ ಪರಾಪರ

ಅರಿಸಿ ಕರ್ಣವರಾ ॥೧॥
ಅನುಮಾನ ದಿನ ದಿನ
ಘನಘನವೆತ್ತ ಹೆಣ್ಣು
ಬಾಣ ದಿನ ಉಣ್ಣು ಚಿನ್ನ
ಇನ್ನ ಇದೇನು ಕಣ್ಣ
ತಾನು ಮಿನುಗನು ಪುಣ್ಯ
ಹೀನನು ನಾನು ಮುನ್ನ
ಲೇನೂನವನು ಮಾಡಿದೊ ನನ್ನ
ತನುಜನು ಇನಿತಿನ್ನು ॥೨॥

ಪಡೆದೊಲಿದಿಡಿದು
ದಡದಡಿಸಿಡೆ ಕಡು
ಮಿಡುಕುಡಿಗಡಿವೆಡೆ
ಮೃಡಂ ದೃಢ ಅಡಿಯಿಡೆ
ಧಡಧಡನಡ್ತಿಪನೊಡ್ಯ
ಹೊಡೆವೆಡೆ ನುಡಿಗೆಡೆ
ಗೂಡಿದೆಡೆ ಗುಂಡ ಕೆಡೆ
ಕೆಡೆಂದೊಡೆದಡೆ ಟೊಂಡ್ಲ ॥೩॥

ಚರಣವನು ಶರಣ ತನ್ನ
ಪಣೆಗೆಣೆಯನು ತಾನ್ ತಿ
ಪ್ಪಣ್ಣಯ್ಯ ಬಣ್ಣ ಬಣ್ಣದೆನ್ನ
ರನ್ನ ಪೊನ್ನ ಪೊನ್ನವೆನ್ನ
ಚಿನ್ನ ಚೆನ್ನ ಕಣ್ಣ ತನ್ನ
ಉನ್ನತೋನ್ನತನಂತಿರ್ದೆನ್ನ
ಶರಣ ತಿಪ್ಪಣ್ಣಯ್ಯ ತನ್ನ ಮನ
ದಾನಂದೊಟ್ಟು ಮನೆಯನು ॥೪॥

ಬಾಲನಳುತಲಿರಲಿ
ಬಾಲೆ ಬೆಸೆ ಮೊಲೆಯೂಡಲಿ
ಕಿಲ್ಲೆನಲಿ ಮೊಲೆಯುಣಲಿ
ಕಾಲ್ಕಣ್ಣ ತೂಗಲಾಡಲಿ
ಲೀಲೆಯಲಿ ನಲಿಯಲಿ
ಕೈಲಾಸದಲಿ ಭಲೈಯೆನಲಿ
ಸಾಲು ಸಾಲಿನಲಿ ಸಾರ
ಲೋಲ ಗುಂಡನಲಿ ಮೇಲ್ಭಕ್ತಿಯಲಿ ॥೫॥

ರುದ್ರನೊಂದ್ಮುಖದ ಭದ್ರ
ಶುದ್ದ ಸಿದ್ಧನಾದ ಪ್ರಸಿದ್ಧ
ಎದ್ದು ಬಂದು ಪಾದಕೆ ಬಿದ್ದ
ರಿದ್ದ ಪಾಪದ ಮುದ್ದೆ ಶುದ್ಧ
ಹೊದ್ದಿ ಭವಭವದಲಿದ್ದ
ಶುದ್ಧ ಬದ್ಧ ಹೊಂದಿ ಬಂದೆ
ನಿರ್ಧರದಿ ಕಾಯುದ್ದ ಬಂದು
ಮುದ್ದು ಪಾದಕೆ ಬಿದ್ದೆನಿಂದು ॥೬॥

ಭುವನವ ಕಾವ ದೇವ
ನೀವಲ್ಲವೆ ಈವ ಶಿವ
ಈ ವಿಧವನವನಾವ
ಸಾವ ಹುಟ್ಟು ಭವಭವ
ನೋವ ನಿಲ್ಲಿಸು ಬಸವ ಸರ್ವ

ಜೀವರ ಪಾವನವ ಮಾಡುವ
ಭಾವ ನ್ನ ನೀವೆ ಕಾಯ್ದು ॥೭॥

ತೋಹೆ-೪೮, ಪದ-೪೨೯

■

೪೯

ಹೊಗಳಿ ಹೊಗಳಿ ಹೊಗಳಿ
ಜಗದಯ್ಯ ಗುರುವ ॥ಪಲ್ಲ॥

ಇಳೆಯ ಪಾವನ ಮಾಡಿ
ಇಳೆಯ ಪಾವನ ಮಾಡಿ
ಇಳೆಯ ಪೂರ್ವನು ಮಾಡಿ
ಇಳೆಯ ಪಾವನ ಮಾಡಿ ॥೧॥

ಆಧ್ಯಾತ್ಮವನೊರೆವ ಬಂದ
ಅದ್ವೈತವನೂವ ಬಂದ
ಆದ್ಯಂತನರಿವ ಬಂದ
ಅದ್ಭೂತವನರುಹುವ ಬಂದ ॥೨॥

ಆದ್ಯಂತವನರಿವ ಬಾವ
ದೇವನ್ನೈದುವದನದೊಂ
ದೀವನೆಂದವಧಾನದಿಂ
ದೈವನೆಂದು ವಿಧಾನದಿಂ
ದಾವನಿಂದುವೋಂ ದ್ಯಾನದಿಂ ॥೩॥

ತೋಹೆ-೪೯, ಪದ-೪೩೨

■

೫೦

ರಾಗ : ಶಂಕರಾಭರಣ

ಕಂಡೆನಯ್ಯ ನಾನು ಮಂಡಲದೊಳಗೆ ಪ್ರ
ಚಂಡ ಗುರು ಗುಂಡಬಸವನ ॥ಪಲ್ಲ॥

ಸತ್ಯವ ಸಾರಿದ ಬಂದು
ಯುಕ್ತಿಯು ತೋರಿದ ನಿಂದು
ಮುಕ್ತಿಯ ಬೀರಿದ ತಂದು
ಭಕ್ತಿಯ ಭಾವದ ಸಿಂಧು ॥೧॥

ಸಾರಿದ ಬಂದು ಸತ್ಯವ
ತೋರಿದ ನಿಂದು ಯುಕ್ತಿಯ
ಬೀರಿದ ತಂದು ಮುಕ್ತಿಯ
ಭಾವದ ಸಿಂಧು ಭಕ್ತಿಯ ॥೨॥

ಬಂದು ಸತ್ಯವ ಸಾರಿದ
ನಿಂದು ಯುಕ್ತಿಯು ತೋರಿದ
ತಂದು ಮುಕ್ತಿಯ ಬೀರಿದ
ಸಿಂಧು ಭಕ್ತಿಯ ಭಾವದ ॥೩॥

ಸಾರಿದ ಸತ್ಯವ ಬಂದು
ತೋರಿದ ಯುಕ್ತಿಯ ನಿಂದು
ಬೀರಿದ ಮುಕ್ತಿಯ ತಂದು
ಭಾವದ ಭಕ್ತಿಯ ಸಿಂಧು ॥೪॥

ಬಂದು ಸಾರಿದ ಸತ್ಯವ
ನಿಂದು ತೋರಿದ ಯುಕ್ತಿಯ
ತಂದು ಬೀರಿದ ಮುಕ್ತಿಯ
ಸಿಂಧು ಭಾವದ ಭಕ್ತಿಯ ॥೫॥

ಸತ್ಯವ ಬಂದು ಸಾರಿದ
ಯುಕ್ತಿಯ ನಿಂದು ತೋರಿದ
ಮುಕ್ತಿಯ ತಂದು ಬೀರಿದ
ಭಕ್ತಿಯ ಸಿಂಧು ಭಾವದ ॥೬॥

ಸಯ ಸತ್ಯಧಾರಿ ಬಂದು
ದಯ ಯುಕ್ತಿ ತೋರಿ ನಿಂದು

ಬೀಯ ಮುಕ್ತಿ ತಂದರಿದು
ರಾಯ ಭಕ್ತಿ ಸಿಂಧು ಬಂದು ॥೭॥

ಬಂದದು ಸಾರಿ ಸತ್ಯವ
ನಿಂದದು ತೋರಿ ಯುಕ್ತಿಯ
ತಂದನು ಬೀರಿ ಮುಕ್ತಿಯ
ಸಿಂಧದು ಭಾವ ಭಕ್ತಿಯ ॥೮॥

ಬಂದರಿದು ಸತ್ಯಸಯ
ನಿಂದರಿದು ಯುಕ್ತಿ ತೋಯ
ತಂದರಿದು ಮುಕ್ತಿ ಬೀಯ
ಬಂದು ಸಿದ್ದ ಭಕ್ತಿ ರಾಯ ॥೯॥

ತೋಹೆ-೫೦, ಪದ-೪೪೧

■

೫೧
ದೊರೆತನಕೆ ನಂಟು ಬಡತನಕೆಲ್ಲಿಯ ನಂಟು
ಹರನ ಮಾಯದ ತೊಡಕುಂಟು
ಕರೆದರೆ ಕೇಳೆನು ಮುಂದಿರಲಿ ಕಾಣೆನು
ಸಿರಿಯ ಗರ್ವದಲಿ ಉರಿಯುತಿಹೆನು ॥ಪಲ್ಲ॥

ಬೀಗ ಬಂದರೆ ಮನೆಗೆ ತೂಗುಮಂಚವ ಹಾಸಿ
ಬಾಗಿಸುವೆ ಗವಳಿ ಸೇವಿಗೆಯ
ಬೇಗ ಮಾಡಿಸುವೆ ಪರಿಪರಿಯ ಪಾಯಸ ತುಪ್ಪ
ಬಾಗು ಬೋನ ಬೇಳೆ ಆಮ್ರ ಕಜ್ಜಾಯ
ತೊಗರಿ ಸಂಭೆ ಬದನೆಕಾಯಿ ಬಸಳೆಯು
ಹಾಗಲವು ಅವರೆ ತೊಂಡೆಯನು
ಮಾಗುಳಿಯು ಬೆಲ್ಲವತ್ತವು ಕಳಲೆ ರುಚಿಗಾಯಿ
ಹೀಗೆ ಹಪ್ಪಳ ಸಂಡಗೆಗಳು ॥೧॥

ಬಂಗಾರ ಬಣ್ಣ ಭಾಗ್ಯದಲ್ಲಿದ್ದಾತನ
ಅಂಗ ಮಜ್ಜನವ ಮಾಡಿಸಿದೆ

ರಂಗವಾಲೆಯನು ಸಾಮರ್ಜನೆಯ ಮೇಲಿಕ್ಕಿ
ಲಿಂಗಪೂಜೆಗೆ ಎಡೆಯಮಾಡಿ
ಉಂಗುರದ ನಂಟ ಉಂಗುಟ್ಟು ಹೋದನು ಮುಂದೆ
ಭಂಗದಲಿ ಬಡತನದಲಿರಲಿ
ತಂಗುಳೋಗರವನಿಕ್ಕಿ ಹಳಸಿದಂಬಲಿ ನೆರೆಯ
ಅಂಗಳದಲುಂಡಾಡುತ ನಡೆದ ॥೨॥

ಜ್ಞಾನವುಳ್ಳವರು ಸಿರಿಗುಬ್ಬರಿ ಬಡತನದ
ಹಾನಿಯೊಳು ಧರ್ಮಗಳ ಬಿಡರು
ಜ್ಞಾನಹೀನರು ಸಿರಿಯಲುರಿದು ಬಡವರನು ಅರೆ
ಕಾಣೆಗೆಯು ಲೆಕ್ಕಿಸದಲಿಹರು
ನೀನೆನ್ನನುಳುಹು ಸರ್ವೇಶ್ವರನೆ ಮರವೆಯ ಅ
ಜ್ಞಾನದಲಿ ಮನವ ಕೆಡಗುಡದೆ
ಮಾನಭಂಗವ ಮಾಡದೆ ಸಲಹು ಗುಂಡೇಶ ಎನ್ನ
ಹಾನಿ ಒಳ್ಳಿತು ನಿಮ್ಮದಾಗಿ ॥೩॥

ತೋಹೆ-೫೧, ಪದ-೪೪೪

■

೫೨
ರಾಗ : ವರಾಳಿ
ಬಾ ಬಾ ಬಾ ಬಾ ಬಾ ಬಾ ಬೇಗ
ಬಾ ಬಾ ಬಾ ಬಾ ಬಾ ಬಾ ಬಸವಾ ಬಾ ॥ಪಲ್ಲ॥
ನಾನು ನಿನ್ನ ನೆನೆವೆನ್ನೆ
ನೀನು ನನ್ನ ನೆನೆವೆನ್ನೆ
ನಾನು ನೀನೆ ನನ್ನಿ ನಾನಿಂ
ನೆನೆವೆ ನೆನೆವೆ ನಾ ನಿನ್ನ ॥೧॥
ತಾತಂ ತಾತ ತಾತರ್ತಾತ
ತಂ ತಿಂ ತೆಂತು ತೋ ತಿ ತಂತ
ತಿತತಂ ತೋಂ ತಂ ತೆತಂ ತ್ರಿ
ತುರ್ತರ್ತಕ್ತಿತಿರ್ತ್ವ ತೂರ್ತ ॥೨॥
ದೈ ದೈ ದೈ ದೈ ದೈ ದೈ ದುಂ
ದೈ ವೈ ವೈ ವೈ ವೈ ವೈ ವೈ

ದೋಂ ದೋಂ ದೋಂ ದೋಂ ದೋಂ ದೋಂ
ದ್ಯಾ ದ್ಯಾ ದ್ಯಾ ದ್ಯಾ ದ್ಯಾ ದ್ಯಾ ॥೩॥

ಲ ಲ ಲ ಲ ಲ ಲ ಲಂ
ಲೀಲೆ ಲೀಲೆ ಲೀಲೆ ಲೀಲೆ
ಲ್ಲೇ ಲ್ಲೇ ಲ್ಲೇ ಲ್ಲೇ ಲ್ಲೇ ಲ್ಲೇ
ಸಸ್ಕಲ್ಯಾಸ್ರ ಶಿಶು ಸಾರ್ಸ್ದೆ
ಸ್ದಸೆ ಸೂಸ್ವಿ ಶೆಷ ಶಾಸ್ತ್ರ
ಸಾಸ ಸಾಸ ಸಾಸಂತಿಹ
ವೀ ವೀ ವೀ ವೀ ಬಸವೇಶ ॥೪॥

ತೋಹೆ-೫೨, ಪದ-೪೪೯

■

೫೩
ರಾಗ : ಶಾಂತಮಹಲರ
ನರರೂಪನೆ ತೊಟ್ಟು ಗುರುಹಿರಿಯರಿಳಿದಿರಲು
ನರರ ಸರಿಯೆಂದು ಮಾತಾಡಬಹುದೆ
ಶರೀರ ಕೊಬ್ಬಿಂದಲಾಡಿದರೆ ಮುಂದೆ ಯಮನಿವರ
ಕೊರೆದು ಕುಕ್ಕರಿಸಿ ನರಕದಲಿಕ್ಕನೆ ॥ಪಲ್ಲ॥

ನಾಯಿಗೆ ಮೊಲೆಯಿರಲು ಗೋವಿನ ಸರಿಯಹುದೆ
ಕುಯ್ಯಡಿಗೆ ಸಿಂಹ ಸರಿಯಪ್ಪುದೆ
ಕಾಯ ಮುಪ್ಪಾಗಿರಲು ಪ್ರಾಯ ಮಾಡುವ ಫಲಕೆ
ಕಾಯ ಎನ್ನುತ್ತ ಸರಿಯೆನಲುಬಹುದೆ
ರಾಯರಿಗೆ ಬೇಗಾರಿ ಸರಿಯೆಂದೆನಬಹುದೆ
ಸ್ವಯಜ್ಞಾನಿ ಶರಣರನು ನರರ ಸರಿಯೆಂದೆನಲು
ಬಾಯಿ ಹುಳಿತು ಬಾಲಹುಳ ಬೀಳವೆ ॥೧॥

ಮತ್ತೆ ಆಕಾಶದಲಿ ಗದರಿಸುವ ಗದ್ದಣಿಗೆ
ಹತ್ತು ಸಾವಿರ ಪೆಟಲ ದನಿಗೆ ಸರಿಯೆ
ಒತ್ತಿ ಕಸ ಕೂಡಿ ತಿಪ್ಪೆಯೆ ಶೂಲವಾಗಿರಲು
ಉತ್ತಮದ ಗಿರಿಗೆ ಸರಿಯೆನಬಹುದೆ

ಮುತ್ತು ಎಸಗಿಯ ಹಣ್ಣು ಸರಿಯಪ್ಪುದೆ
ಮಿತ್ತ ಕಳೆವುದ ಕಡೆ ಮೊದಲಲ್ಲವೆ ॥೨॥

ಕೋಳಿ ಕೂಗಿದರೆ ಕೋಗಿಲೆ ದನಿಗೆ ಸರಿಯಹುದೆ
ಹಾಲ ಹಂಸಗೆ ಬಕನು ಸರಿಯಪ್ಪುದೆ
ಆಲೋಕಿಸಿದ ಫಲವನೀವ ಸುರತರುವಿಂಗೆ
ಕೀಳು ಬೊಬ್ಬುಲಸೆಯ ಸರಿಗಟ್ಟಬಹುದೆ
ಜಾಳು ಕಾಜಿನ ಮಣಿಗೆ ಚಿಂತಾಮಣಿ ಸರಿಯಹುದೆ
ಹೊಳೆವ ಹೊನ್ನಿಯ ಹುಳಕೆ ಮಿಂಚು ಸರಿಯೆ
ಭಾಳಲೋಚನನ ಶರಣರು ನರರ ಸರಿಯೆನಲು
ಹಾಳಾಗಿ ಹೋಹುದಕೆ ಮೊದಲಲ್ಲವೆ ॥೩॥

ಮತ್ತಿನ ಕಾಯವಳಿದಲ್ಲಿ ಮಸವಟಿಗಾಗಿ
ಅರ್ತಿ ಆನಂದ ಒಲ್ಲೆಹವೆನ್ನಿ
ಮಿತ್ತು ಮಾರಿ ಮಸಣಿ ಭೂತ ಹೊಯ್ದವೆಂದು
ಸುತ್ತಾರು ಸುಳಿಯಲಂಜುತಲಿಹರು
ಸತ್ಯ ಶರಣರು ಕಾಯವಿಡಲು ಕ್ಷೇತ್ರಗಳಾಗಿ
ಮತ್ತೆ ಕೊಟ್ಟರೆ ಅವರಿಟ್ಟರೆ ಶಾಪವು
ಪ್ರತ್ಯಕ್ಷವಾಗಿ ಕೊಡುವರಿಗೆ ನರ ಸರಿಯೆನಲು
ಕತ್ತೆ ಹೊರಳುವುದಕೆ ಮೊದಲಲ್ಲವೆ ॥೪॥

ಭಕ್ತಿ ರೂಪನೆ ತೊಟ್ಟು ಸತ್ಯರಿಗೆ ಸರಿಯೆಂಬೆ
ಕತ್ತೆಗೆ ಲಿಂಗಮುದ್ರೆಯನೊತ್ತಲು
ಮತ್ತೆ ಅದು ಬಸವನಾದುದು ಸಹಜವಾದರೆ
ಈತ ಸತ್ಯರಿಗೆ ಸರಿಯೆನಲುಬಹುದು
ಉತ್ತಮದ ಗಂಡು ಹಸುವಿಗೆ ಲಿಂಗಮುದ್ರೆಯನು
ಒತ್ತಿದರೆ ಬಸವನೆಂಬುದು ಸತ್ಯ ದೇಹಿಗೆ ಲಿಂಗ ವಿ
ಭೂತಿ ಧರಿಸಿದಡೆ ಸತ್ಯನಹುದು ಸತ್ಯವೆಂದರಿಯಿರೊ ॥೫॥

ಹರಣವಳಿದ ಸತಿಗೆ ಆಭರಣಗಳನಿಟ್ಟು
ತೋರಲದಕೊಂದು ಬರಬಹುದೆ ನೀ
ಹರಣವುಳ್ಳ ಸತಿಗೆ ಆಭರಣಗಳ ನಿಟ್ಟು
ತೋರಲದಕೊಂದು ಬರಬಹ ತೆರನು

ನರಕಿ ಪಾತಕ ಲಿಂಗ ವಿಭೂತಿ ಧರಿಸಿದರೆ
ಹರಣವಳಿದ ಸತಿಯ ತೆರನಪ್ಪುದು
ನಿರುತ ಮಾರ್ಗದಿ ನಡೆವ ನಿಜಮಹಿಮ ಧರಿಸಿದರೆ
ವರನು ಬಂದಂತೆ ಪರಶಿವನೊಲಿವನು ॥೭॥

ನೀರು ಹಬೆಯಾಗಿ ಕಾದರೇನೊ ಎಲೆ ಮರುಳೆ
ಉರಿವ ಅಗ್ನಿಯ ಕಾವ ನುಂಗದಿಹುದೆ
ನೂರರೂಪಿನೊಳಗೆ ಶರಣರು ಇದ್ದರೇನಯ್ಯ
ಮೀರದಿಹರೆ ಕಾಲನ ಭಾದೆಯ
ನೀರ ಮಂದಿರವು ಇದ್ದಷ್ಟೆ ನಭ ತೋರಿದರೆ ಅದ
ರಿರವು ಅಷ್ಟೆಂದು ನಿಶ್ಚಯಿಸಬಹುದೆ
ಶರಣರಿರವದರಂತೆ ನರರ ಸರಿಯೆಂದೆನಲು
ನರಕವಹುದು ಸತ್ಯವೆಂದರಿಯಿರೊ ॥೭॥

ಉರಿ ಅಡವಿಯೊಳಗೇಳೆ ಅಡವಿ ತಾ ಗುರಿಯಹುದು
ಶರೀರದವಧಿಗೆ ಶರೀರ ಗುರಿಯಹುದು
ಶರಣ ನೊಂದರೆ ನಿಂದೆಯಾಡಿದವ ಗುರಿಯಹ
ಸಿರಿಯ ಮದದಿಂ ಕೋ ಬಾಡಬಹುದೆ
ಪರವಸ್ತು ಗುರು ಗುಂಡಬಸವೇಶ್ವರನ
ಮಹಿಮಪ್ರಭೆ ಮಾಡಬಂದ ಅಲ್ಲಮಲಿಂಗನ
ಹರಣ ಮಾರಾಹುತಿಗೆ ಸಂಚಕಾರವು ॥೮॥

ತೋಹೆ-೫೩, ಪದ-೪೫೮

■

೫೪

ರಾಗ : ಧನ್ಯಾಶ್ರೀ

ಜಯತು ಪರಶಿವಮೂರ್ತಿ
ಜಯತು ಪರಬ್ರಹ್ಮವೆ
ಜಯತು ಸರ್ವಾಂಗಲಿಂಗಿಯೆ ಸಗುಣ ಶರಧಿಯೆ
ಜಯತು ಮಂಗಳಮಯನೆ
ಜಯತು ತಿಪ್ಪಣ್ಣಯ್ಯನೆ ಸ್ವಾಮಿ ಜಯತು ॥ಪ॥

ಭಕ್ತ ಮಹೇಶ ಪ್ರಸಾದಿ ಪ್ರಾಣಲಿಂಗಿ
ಮತ್ತೆ ಶರಣೈಕ್ಯನೆಂಬರು ಆರುಸ್ಥಲವೆಂದು
ಇತ್ತಲೀ ಮಹಿಮೆಯೊಳಗಾವನೆಂದೊಂದ
ಕೃತ್ಯವಿಡಬಹುದೆ ನೋಡ
ದ ತೆರ ಧರೆಗೆ ಶರಣರ ಕಳುಹಬೇಕು ನೀ
ಭೂತಳಕೆ ಇಳಿದು ಭೂಜನಕೆಲ್ಲ ರೂಹ ಮಾಡಿ
ಪಥವನನುಮಾಡಿ ಪ್ರಮಥರ ಪವಾಡವ ನೋಡ
ಚಿತ್ತೈಸೆನಲು ಎಯ್ದಿದಾ ಸ್ವಾಮಿ ॥೧॥

ಮತ್ತೊಂದ ಕೇಳಿ ಭಕ್ತಿಯ ಮಾಳ್ಪ ಸಜ್ಜನರು
ಸ್ತುತಿಸಿ ತಿಪ್ಪಣ್ಣಯ್ಯನ ನಾಮ ಪ್ರಥಮಾಕ್ಷರವ
ಅತ್ಯಂತ ಅವಗುಣೋರ್ಜಿಸಿ ಅವ ನಡೆವಂಗೆ
ಮತ್ತೆ ಸಾಲೋಕ್ಯವಿತ್ತು
ದ್ವಿತೀಯಾಕ್ಷರವ ನೆನೆಯೆ ಸಾಮಿಪ್ಯವೀವುದು
ತೃತೀಯಾಕ್ಷರವ ನೆನೆಯೆ ಸಾರೋಪ್ಯವೀವುದು
ಚತುರಾಕ್ಷರವ ನೆನೆಯೆ ಸಾಯುಜ್ಯಪದಗಳನು
ಇತ್ತು ರಕ್ಷಿಸಯ್ಯ ದೇವಾ ಜಯತು ॥೨॥

ಪರಮ ಪುರುಷನೆ ಪರಂಜ್ಯೋತಿ ಪ್ರಕಾಶನೆ
ನಿರುಮಳಾತ್ಮಕನೆ ನಿತ್ಯಾನಂದ ಮೂರ್ತಿಯೆ
ಧರಮ ಶರಧಿಯೆ ದಾತೋಭೋಕ್ತ ತಿಪ್ಪಣ್ಣಯ್ಯ
ಕರುಣ ನಿಮ್ಮದು ರಕ್ಷಿಸಾ
ನರಕಂಥೆಯನೆ ತೊಟ್ಟು ಧರೆಯೊಳಗೆ ಉದಯಿಸಿರ್ದು
ಗುರು ಗುಂಡಬಸವೇಶ್ವರನ ಮಹಿಮೆ ಜಗದೊಳಗೆ
ಅರುಹ ಮಾಡಲಿ ಬಂದ ಆತ್ಮಲಿಂಗೈಕ್ಯ ನಿಮ್ಮ
ಚರಣಾಂಬುಜಕೆ ಶರಣು ಸ್ವಾಮಿ ಜಯತು ॥೩॥

ತೋಹೆ-೫೪, ಪದ-೪೬೧

■

೫೫

ಕದನಗಲಿಗಳು ಕಪಟದವರು
ವಿಧಿಯಾಗಿ ಹೋರುತರಿವರು ॥ಪ॥

ಮಧುವಯ್ಯ ಗುಂಡಯ್ಯ ಮಲ್ಲಯ್ಯ ಪರುವಯ್ಯ
ಕುದುಕುಳಿಗತನದ ದೇವಯ್ಯ
ಅದರೊಳಗೆ ಮಧ್ಯನಾಗಯ್ಯ
ಕುದುವ ಬೈಸೆಟ್ಟಿ ಗುಂಡಯ್ಯ
ಇದಕೆಂತು ಧನ್ಯ ಬಸವಯ್ಯ
ಮುದುಡಿ ಕೃತ್ರಿಮದೋಲೆ ಬರೆದಲ್ಲಯ್ಯ ॥೧॥

ನಾಗಣ್ಣ ಪರುಭಣ್ಣ ಕಲ್ಲಣ್ಣ ಗುಂಡಣ್ಣ
ಬೇಗೆಯಿಕ್ಕಿದ ಉಪ್ಪಿನ ಬಸವಣ್ಣ
ಹೀಗೆಂದು ಅರಿಯ ಗೂಳಣ್ಣ
ತಗಬರಿಯ ಬಸವಣ್ಣ
ಹೋಗಿ ಬಾ ಜಂಬೂರ ಮಲ್ಲಣ್ಣ
ಹೀಗಾಯಿತಲ್ಲ ಸಿದ್ದಣ್ಣ
ಹೇಗೆ ಮಾಡುವ ಚೆನ್ನಣ್ಣ
ಭಾಗವನೆ ತಡೆಮಾಡಿ ಹೊಯ್ದರೊ ಮಣ್ಣ ॥೨॥

ನರಸಯ್ಯ ಭೂಮಯ್ಯ ಪರುಸಯ್ಯ ಹೊನ್ನಯ್ಯ
ಹರುಷದಪ್ಪದ ಹಾವಯ್ಯ
ಕರಸಿದರೆ ಬರ ಕಲ್ಲಯ್ಯ
ಚರಿಸದ್ಯೋದನೆ ಗುಂಡಯ್ಯ
ಅರಿಯದಂತಿಹ ಸಿರಗಯ್ಯ
ಕುರುವಾದಯೆಮ್ಮ ಮಧುವಯ್ಯ ಇವರು
ಸರಿಮಾಡಿ ನೋಡುತಿಹರಯ್ಯ
ಮುರುದಾಡರಯ್ಯ ಗುರು ಗುಂಡ ನೋಡಯ್ಯ ॥೩॥

ಮಚ್ಚರದ ಮಂಗಮ್ಮ ಮಾದಮ್ಮ ತಂಗೆಮ್ಮ
ಚುಚ್ಚಕಳು ಮಗಳು ಜಕ್ಕಮ್ಮ
ಅಚ್ಚರಿಯದ ಹೆಣ್ಣು ನೀಲಮ್ಮ
ಕುಚ್ಚಿದಳು ಚಿಕ್ಕನಾಗಮ್ಮ
ಅಚ್ಚ ಸಟೆ ಸಪ್ಪನ ವೀರಮ್ಮ
ಅಚ್ಚಿದರೆ ಬಿಟ್ಟೆ ಭಾಗಮ್ಮ
ಅಚ್ಚುವಳುಚ್ಚಡ ಪರುವಮ್ಮ ನಮ್ಮ
ರೆಚ್ಚೆಗೆ ತಂದರು ಕೇಳು ತಾಯಿ ಜಕ್ಕಮ್ಮ ॥೪॥

ನಿಂದೆಗಳನಾಡುವರೆ ತಂದೆ ಅವರು
ನೀವಲ್ಲ ಮತ್ತೆ ಬಂಧುಗಳು ನೀವಲ್ಲ
ಚೆಂದಗೆಡಿಸಿದಿರಿ ಹೀಗೆಲ್ಲ
ನಿಂದಲ್ಲಿ ಹಾಕಿದಿರಿ ಕಲ್ಲ ನಮ್ಮ
ನೊಂದ ನೋವ ಗುರು ನಂದೀಶ ಬಲ್ಲ ॥೫॥

ತೋಹೆ–೫೫, ಪದ–೪೬೬

■

೫೬
ರಾಗ : ಧನ್ಯಾಶ್ರೀ
ಜಯತು ಶ್ರೀವರಮೂರ್ತಿ
ಜಯತು ಧರ್ಮಕಲ್ಯಾಣಿ
ಜಯ ಜಯ ಜಯತು ತಾಯಿ ಜಕ್ಕಮ್ಮ ॥ಪಲ್ಲ॥

ಪರಮಮೂರುತಿ ನೀನು ಪಾವನಾತ್ಮಕಿ ನೀನು ನಿಜ
ಮೂರುತಿ ನೀನು ನಿಜಗುರುವೆ ಧೇನು
ವರವೀವೆ ವಂದಿಸಿದವರ್ಗೀವ ಮಹಾಮೂರುತಿ ನೀನು ಭಜಿ
ಪರಿಗೆ ಭಾಗ್ಯವನಿತ್ತೆ ನೀನು ॥೧॥

ಪರಮಭಕ್ತರನೆಲ್ಲ ಪಾವನ ಮಾಡಲಿ ಬಲ್ಲೆ
ದುರುಳ ಮನುಜರ ಎದೆಯದು ಕರುಜಲ
ವರವೀವೆ ವಂದಿಸಿದರ್ಗೆ ಪರಮ ಮೂರುತಿ ನೀನು ಭಜಿ
ಪರಿಗೆ ಭಾಗ್ಯವನಿತ್ತೆ ನೀನು ॥೨॥

ಕೈಲಾಸದಿಂದೆ ಕಲಿಯುಗಕೆ ಇಳಿದು ಬಂದೆ
ಒಲಿದು ನಿಂದೆ ಭಕ್ತ ಭಾಗ್ಯದಿಂದೆ
ಭವನ ಸವೆದು ಮಾಡಿದೆಯಲ್ಲ ನಮಗಿಂದು
ಐಮುಖನ ಅರ್ಧಾಂಗಿ ತಾಯಿ ಜಕ್ಕಮ್ಮ ॥೩॥

ತೋಹೆ–೫೬, ಪದ–೪೬೭

■

೫೭

ರಾಗ : ಮಲಹರಿ

ಶರಣು ಶರಣು ಗುಂಡ ಬಸವಯ್ಯ
ಧರ್ಮದ ಹಾದಿಯ ತೋರಲಿ ಬಂದೆ
ಧರ್ಮಕಲ್ಯಾಣಕೆ ॥ಪಲ್ಲ॥

ಹೆಜ್ಜೆಗೆ ಹೆಜ್ಜೆಗೆ ಪವಾಡವ ತೋರಿದೆ
ಮಝಾ ಭಾಪುರೆ ಗುಂಡ ಬಸವಯ್ಯ
ಬೆಜ್ಜರವಾಯಿತಾಳಿಕಳಗೆ ನನ್ನ
ಸಜ್ಜನ ಗುರು ತಂದೆ ॥೧॥

ಕಲಿಯುಗದ ಪಾಪವನೆಲ್ಲವ
ಸಲೆ ತುಳಿದೊಟ್ಟಿ ಮೆಟ್ಟಲಿ ಬಂದೆಯಯ್ಯ
ಮಲಹರನಾಯಕ ಮುಖಿಯೆಂದು ಅರಿಯೆನು
ಒಲಿದು ಕಾವುದು ತಂದೆ ಗುರು ಗುಂಡಯ್ಯ ॥೨॥

ಆದಿಯಲಿ ಹುಟ್ಟಿದ ತೀರ್ಥಂಗಳನೆ ನೀಡಿ ಮ
ಹಾದೇವ ನೀನು ಸಲಹಲಿ ಬಂದೆಯಯ್ಯ
ಹಾದಿಯ ತೋರಿದೆ ಒಳ್ಳೆಯ ಪ್ರಸಾದ ನೀಡಿ
ನಾದಪ್ರಿಯನೆ ಗುರು ತಂದೆ ಕಾಯಯ್ಯ ॥೩॥

ಅಂದು ಹಸ್ತವನಿತ್ತೆ ನಿಂದು ಗೊಲ್ಲತಿಗೆ
ತಂದೆ ಬಸವಾ ಎಂದು ನೆನೆಯಲು
ಬಂದು ಬಿಜ್ಜಳ ನೋಡಿ ನಿಂದ ಪವಾಡವ
ಚಂದ್ರಶೇಖರ ಗುಂಡ ನೀನೆ ಕಾಯಯ್ಯ ॥೪॥

ಏಳನೂರ ಎಪ್ಪತಕೆ ಬಹೆನೆಂದು
ಹೇಳಿ ಹೋದೆಯಯ್ಯ ಕಪ್ಪಡಿ ಸಂಗನೊಳು
ಭಾಳಲೋಚನ ಕರ್ತ ಹೇಳ ಬಂದನು ಬೋಧೆ
ಮೂಳನು ಹಾದಿಯ ಕಾಣಲಿಲ್ಲ ॥೫॥

ತೊತ್ತು ಸೂಳಿಯ ಮಗ ಹೆತ್ತ ತಂದೆಯನರಿಯ
ಮತ್ತೆ ಮಾಳ ಮಾಡಿದರೊಳಿತೆ

ಸತ್ತೆನು ಗುರು ತಂದೆ ಬಂದ ಕಾರಣವ ಕಾಣೆ
ಕತ್ತೆ ಮೂಕೊರೆ ಮೂಳನನು ನಚ್ಚೆ ||೬||

ಕಲ್ಯಾಣಪುರದೊಳಗೆಲ್ಲ ಭಕ್ತರು ಕೂಡಿ
ಅಲ್ಲಮ ಅಜಗಣ್ಣಗಳು ದೇವ
ಸೊಲ್ಲನಾಡಿದ ಬಿಜ್ಜಳ ರಾಯನ ಕೂಡೆ
ಅಲ್ಲಿ ತೊಗರಿಕಾಳ ಮಾಣಿಕ್ಯವ ಮಾಡಿ ||೭||

ಆರು ದರುಶನಕೆ ಮೀರಿದ ತಂದೆ
ಬೇರೊಂದು ಸ್ಥಲವನೆ ಮರೆಸಿ
ಧಾರುಣಿಯರಿಯಲಿ ಧರ್ಮ ಬೋಧೆಯ ತಂದೆ ಈ
ಕಾರಣ ಕಾಣದೇಕಮಿದು ಶಕ್ಯ ||೮||

ಶೂನ್ಯಪೀಠವ ರಚಿಸಿ ಪೂಜೆ ಮಾಡುತಲಿದ್ದ
ಆನಂದ ಅಲ್ಲಮಪ್ರಭುವಿಗೆಂದು
ಶ್ವಾನಜನ್ಮದ ಪಾಪಿ ಹೀನವೆಂದು ಅತಿಗಳೆದೆ
ನಿಗಮ ಮೂರುತಿ ಗುರು ಗುಂಡರಾಯನ ||೯||

ಕಾಶಿ ವಾರಣಾಸಿಕಿಂದಲಧಿಕ ಗುಂಡನ ಸ್ಥಾನ
ಸೇತುಬಂಧಕಿಂದಲಧಿಕ ಗುಂಡ
ಶ್ರೀಶೈಲಕಿಂದಲಧಿಕ ಗುಂಡನ ಸ್ಥಾನ
ದೂಷಕ ಪಾಪಿ ನಿಂದಕ ಕಾಣೆ ನೀ ||೧೦||

ಭೂಮಿಗೆ ಅಧಿಕ ಭೂಕೈಲಾಸಪುರವೆಂದು
ಭೂಮಿ ಸ್ವಾಮಿಯು ದೇವರೆಂದು ನಂಬಿ
ಈ ಮಹಿಮನು ಮೆಚ್ಚಿ ಧರ್ಮಕಲ್ಯಾಣದ
ಸ್ವಾಮಿ ಗುರು ಗುಂಡಬಸವಯ್ಯ ಕಾವನು ||೧೧||*

ತೋಹೆ–೫೭, ಪದ–೪೮೦

* ಈ ಹಾಡಿಗೆ ಮುದ್ರಿಕೆ ಇಲ್ಲವಾಗಿ ಇದು ಅಪೂರ್ಣವೆನಿಸುತ್ತದೆ.

೫೮

ಮಂಗಳಾರುತಿಯ ತಂದೆತ್ತಿರೆ ಮಹ
ಲಿಂಗ ಮೂರುತಿ ಅಲ್ಲಮರಾಯಗೆ ಜಯ
ಮಂಗಳಾರತಿಯನೆತ್ತಿರೆ ॥ಪಲ್ಲ॥

ಕುಂಭಕುಚದ ಕೋಮಲಾಂಗಿಯರು
ಪೀತಾಂಬರಗಳನುಟ್ಟ ಸತಿಯರೆಲ್ಲ
ಶಂಭು ಅಲ್ಲಮಪ್ರಭುವೆ ನೀನೆ ಗತಿಯೆಂದು
ಮನತುಂಬಿ ಆರತಿಗಳನೆತ್ತಿರೆ ॥೧॥

ಚಂದ್ರಗಾವಿಯ ಸೀರೆಯಿಂದಲೊಪ್ಪಿದಹರ
ಅಂದದಿಂದೆಸೆವ ಮುತ್ತಿನ ಮೂಗುತಿ
ಕುಂದದೆ ಸಕಲ ಜನರ ಕರ್ತನಹುದೆಂದು
ಕಂದುಗೊರಳಗೆಂದು ಆರತಿ ಎತ್ತಿರೆ ॥೨॥

ಕುಂಕುಮಗಂಧಿನಿಯರು ಪಂಕಜಮುಖಿಯರು
ಶಂಕಿನಿಯರು ಆರತಿಯನೆತ್ತಿರೆ
ಶಂಕರಲಿಂಗ ನೀನೆ ಗತಿಯೆಂದು ನಿ
ಶ್ಯಂಕ ಮೂರುತಿ ಅಲ್ಲಮರಾಯಗೆ ॥೩॥

ಪಾವನಾತ್ಮಕನೆಂದು ಪರಂಜ್ಯೋತಿ ದೇವನೆಂದು
ಕೇವಲ ಪರಬ್ರಹ್ಮ ಮೂರುತಿಯೆಂದು
ಕಾವನು ಕರುಣಾಕರ ನಿಃಕಲನೆಂದು
ದೇವ ನಿರಾಕಾರ ಅಲ್ಲಮರಾಯಗೆ ॥೪॥

ಅಗಣಿತ ಮಹಿಮನು ಧರ್ಮಕಲ್ಯಾಣದ
ಆಘಹರನಿಗೆ ಆರತಿಯನೆತ್ತಿರೆ
ಬಗೆಬಗೆಯಲಿ ಸಂಗನಸುತಗೊಲಿದನು
ಜಗದೀಶ ಅಲ್ಲಮಗೆ ಆರತಿಯನೆತ್ತಿರೆ ॥೫॥

ತೋಹೆ–೫೮, ಪದ–೪೮೫

■

೫೯

ರಾಗ : ಸೋಲಿ

ಬನ್ನಿ ನೋಡುವ ಧರ್ಮಪುರಾಧೀಶನ ಸಂ
ಪನ್ನ ಮೂರುತಿ ಗುರು ಗುಂಡರಾಯನ ॥ಪಲ್ಲ॥

ಮನವ ಮೀಸಲ ಮಾಡಿ ತಮತಮಗೆ ಬಂದು
ಘನ ಗುರುವಿನ ಕೈಯ ಘನ ಪಾದವ ಬೇಡಿರೊ
ಅನುವಾಗಿನಿತು ಸ್ತುತಿಸಿ ಓಲಗ ಮಾಡಿರೊ
ಚಿನುಮಯ ಗುರು ಗುಂಡನ ಕೊಂಡಾಡಿರೊ ॥೧॥

ಬಂದ ಭವಗಳ ಪರಿಹರಿಸುವಾತನೆ
ಆನಂದ ಮೂರುತಿ ಗುರು ಗುಂಡದಾತನೆ
ಚಂದ್ರಶೇಖರ ಸರ್ವಜೀವ ದಯಾಪರನೆ
ವಂದಿಸಿ ನೆನೆವ ಜನಕೆ ಸಾಲೋಕ್ಯಪದವನೀವನೆ ॥೨॥

ಈರೇಳು ಭುವನಕೆ ಏಕಮುಖದ ಕರ್ತನೆ
ಸಾರಿ ಡಂಗುರ ಬೋಧಿಸಿ ಜನಕೆ ತೋರಿದಾತನೆ
ಮಾರಿ ವಿಘ್ನ ಕೇಡು ಪರಿಹರಿಸು ದಾಯನೆ
ಧೀರ ಪರಂಜ್ಯೋತಿ ಗುರು ಗುಂಡರಾಯನೆ ॥೩॥

ತೋಹೆ-೫೯, ಪದ-೪೪೪

■

೬೦

ರಾಗ-ಸೋಲಿ

ಇಮ್ಮಡಿ ಗುಂಡನಲ್ಲದೆ ದೈವವಿಲ್ಲ
ಉಮ್ಮಹ ಜನರು ಕೇಳಿರೆ ನೀವೀ ಸೊಲ್ಲ
ಇಮ್ಮಡಿ ಗುಂಡನಲ್ಲದೆ ದೈವವಿಲ್ಲ ॥ಪಲ್ಲ॥

ನಾಲ್ಕು ವೇದ ಶಾಸ್ತ್ರ ಆಗಮಕೆ ನಿಲುಕ
ಶ್ರುತಿ ಸಾರುತಲಿದೆ ಏಕಮುಖಿ
ವಾಕ್ಯಪರುಷಮೂರ್ತಿ ವಿವೇಕ
ಗುಂಡ ನೋಡಬಂದನು ತ್ರಿಲೋಕ ॥೧॥

ಕೋಟಿದೈವಗಳಂತಲ್ಲ ಈತನು
ಮಾಟ ನೋಡಲು ಬಂದಿನಿತಿಲ್ಲ
ಸಟೆಯಲ್ಲವು ಜನರೆಲ್ಲ
ಮತ್ತೆ ಗುಂಡನಲ್ಲದೆ ದೈವವಿಲ್ಲ ॥೨॥

ಛಪ್ಪನ್ನ ದೇಶದೊಳಧಿಕ ನೀವು
ತಪ್ಪದೆ ಬನ್ನಿ ತ್ರಿಲೋಕ
ದಪ್ಪ ಗುಂಡೇಶನವಧಿಕ
ನಂಬಿದ ಭಕ್ತರಿಗಿತ್ತ ಭೂಲೋಕ ॥೩॥

ತೋಹೆ ೬೦, ಪದ – ೪೯೧

■

೬೧

ಸೋಬಾನವೆನ್ನಿರೆ ಸೋಬಾನವೆನ್ನಿರೆ
ಸೋಬಾನವೆನ್ನಿರೆ ಗುರು ಗುಂಡೇಶಗೆ ॥ಪಲ್ಲ॥

ಕಂಚಕ್ಕಿ ಕಳಸದ ಮಿಂಚುಳ್ಳ ನಾರಿಯರು
ಅಂಚೆಗಮನೆಯರು ಪಾಡುತ। ಸೋ........
ಅಂಚೆಗಮನೆಯರು ಪಾಡುತ ಗುರು ಗುಂಡೇಶ
ಪಂಚತತ್ವಕೆ ಈತ ಮಿಗಿಲೆಂದು । ಸೋ....... ॥೧॥

ಅರಿಷಿನವ ಪಿಡಕೊಂಡು ಅರಸಿಯರು ಬರುವಾಗ
ಅರಸೆಂದು ತ್ರಿಲೋಕ ಪೊಗಳುತ । ಸೋ........
ಅರಸೆಂದು ತ್ರಿಲೋಕ ಪೊಗಳುತ ಗುರು ಗುಂಡರಾಯ
ಪರಶಿವನು ಕರ್ತನಹುದೆಂದು । ಸೋ.......... ॥೨॥

ಛಪ್ಪನ್ನದೇಶದೊಳೊಪ್ಪುವ ನಾರಿಯರು
ಅಪ್ಪನೆಂದು ವಿಭೂತಿ ಧರಿಸಿರೆ । ಸೋ...........
ಅಪ್ಪನೆಂದು ವಿಭೂತಿ ಧರಸಿರೆ ಗುರು ಗುಂಡೇಶ
ಕಪ್ಪುಗೊರಳ ಕರ್ತನಹುದೆಂದು । ಸೋ........ ॥೩॥

ಸೋಗಿಲ ಅಕ್ಕಿಯನು ತನ್ನಿ ಸೊಬಗಿಂದ ನಾರಿಯರು
ಬಾಗುತ ಬಳಕುತ ಅಲಗುತ । ಸೋ.........

ಬಾಗುತ ಬಳಕುತ ಅಲಗುತ ಗುರು ಗುಂಡರಾಯ
ನಾಗಭೂಷಣ ಕರ್ತನಹುದೆಂದು । ಸೋ..... ॥೪॥

ತೆತ್ತೀಸಕೋಟಿ ದೇವಾದಿ ದೇವರ್ಕಳು
ಅರ್ತಿಲಿ ಬಂದು ಮದುವೆಗೆ । ಸೋ........
ಅರ್ತಿಲಿ ಬಂದು ಮದುವೆಗೆ ಗುರು ಗುಂಡೇಶಗೆ
ಎತ್ತಿ ಸೇಸೆಯನಿಕ್ಕಿದರು । ಸೋ...... ॥೫॥

ತೋಹೆ ೬೧, ಪದ – ೪೯೬

■

೬೨

ರಾಗ–ಶ್ರೀರಾಗ

ಬಂದ ಗುರುರಾಯ ಗುಂಡ ಬಸವಲಿಂಗ
ಬಂದ ನೆನೆವರ ದೇವರ ದೇವ ತಾ
ಬಂದ ಕ್ಷೀರಾಬ್ಧಿಯೇ ತಾ ಬಸವೇಶ ಬಂದ ಆನಂದದಿಂದ ॥ಪಲ್ಲ॥

ತನ್ನ ನೆನೆವಂಥ ಪ್ರಾಣಿ ಮನುಜರ
ಭಿನ್ನವಿಲ್ಲದೆ ಪಾಲಿಪನು ತಾನು
ಮನ್ನಣೆ ಮಾಡಿ ಸಲಹಲಿ ಬಂದೆ ಮಹಾಘನಮೂರ್ತಿ
ಮುನ್ನ ಚೋಳಂಗೆ ಹೊನ್ನ ಮಳೆಯನಿತ್ತೆ
ಚೆನ್ನನ ಭಕ್ತಿಗೆ ಒಲಿದು ಪ್ರಾಣವನಿತ್ತೆ
ಸನ್ಮಾನಿ ಸಲಹಲಿ ಬಂದೆ ಮಹಾಘನಮೂರ್ತಿ ॥೧॥

ಕಾಲಸಂಹರ ಕರ್ಮವಿರಹಿತನು
ಲೋಲಭಕ್ತರ ಕಾಮಧೇನು ತಾ
ಬಾಲನಾಗಿರ್ದ ಸಿಂಧುಬಲ್ಲಾಳಗೆ ಭಾವಭರಿತನೀತ
ಮೂಲ ಮೂರಕೆ ಮುಕ್ತಿದಾಯಕನೀತ
ಮೇಲೆ ಇಂದ್ರಿಯಕೆ ನಿಲುಕನು
ಸಾಲು ಛತ್ರಕೆ ಸ್ವಯಂಜ್ಯೋತಿದೇವನು ಧರ್ಮಪುರಾಧೀಶನು ॥೨॥

ಧರೆಗೆ ಧರ್ಮಬೋಧೆಯ ಸಾರಿದ್ಯೆ ನೀನು
ಪರಂಜ್ಯೋತಿ ಪರಮಪುರುಷನು ನೀನು

ಹರಿಯಜಮುನಿ ವಂದಿತ ದೇವನು ಸಾಲೋಕ್ಯಪದವನೀವೆ ನಿಮ್ಮ
ಕರುಣದಿಂದಲಿ ಗುರು ತಾ ರಜತ ಗದ್ದಿಗಿ
ಅಲ್ಲಮನು ಸ್ವಾಮಿ ಈತನು
ಹರಸಿದನವರಿಗೆ ಚಿಂತಾಮಣಿ ದೇವ ಬಸವ ದಂಡಾಧೀಶ ॥೩॥

ತೋಹೆ ೬೨, ಪದ – ೪೯

■

೬೩

ಅಲ್ಲಮಪ್ರಭುವನೆ ಪೊಗಳುತ ನೀ
ವೆಲ್ಲರು ವಸಂತನಾಡ ಬನ್ನಿ ॥ಪಲ್ಲ॥

ಶಂಖಿನಿ ಬಂದಳು ಧೀ ಎಂಬರನು
ಶಂಕನೊಲಿದು ಪಾಡುತ ಚಿತ್ತಿನಿ
ಅಂಕವಳಿದು ಬಂದಳು ಪದ್ಮಿನಿ ತಾ ಧೀ
ರಂಕನ ಮೇಲೆ ಹಸ್ತಿನಿ ಚೆಲ್ವಾಗಿ ॥೧॥

ಚಂದ್ರಧರನ ಒಲಿಸೇನೆಂದು ವಿಟ ತಾನು
ಬಂದು ಪಾಡುತಲಿ ದೂಷಕನಿರಲಿ
ಇಂದ್ರನ ಪಾದವ ಗೆಲಿಯಬೇಕೆಂದು ಪೀಠ
ಕುಂದದೆ [ಒ]ಸೆವಂಥ ನಾದಿನ ಗತಿಗೆ ॥೨॥

ಗತ್ತಿಗೆ ಮೃದಂಗವನು ನುಡಿಸುತ
ತತ ವಿತತ ಘನ ಸುಸ್ವರದಿ
ತತ ತತ ಧಿತಿ ಧಿತಿ ತೋಂ ತೊ ತೊ ತೊ ನನ ನನ
ಕೃತ ಕಿಟಕಿಣ ತರಿಕು ತೋಂ ಎನುತ ॥೩॥

ಅಗರು ಚಂದನ ಕುಂಕುಮ ಮೊದಲಾದ
ಮಿಗಿಲಾದ ವೇಣಿ ಕಸ್ತೂರಿಗೂಡಿ
ಬಗೆಬಗೆ ಕರ್ಪೂರ ಪುನುಗು ಜವ್ವಾದಿ
ಅಘಹರ ಪ್ರಭುವಿನ ಮೇಲೆ ಚೆಲ್ಲುವುದು ॥೪॥

ಮೊಲ್ಲೆ ಮಲ್ಲಿಗೆ ಜಾಜಿ ಅಲಿ ಸೇವಂತಿಗೆ
ಬಲ್ಲಿದತನ ಮೆರೆಯೆ ಕೇತಕಿ
ಸೋಲಿಸಲಳವಲ್ಲ ಚಂಪಕವೀ
ಪುಲ್ಲಿಲಿ ವಸಂತನಾಡ ಬನ್ನಿ ॥೫॥

ಇಂದ್ರನ ರಂಭೆಯು ಬಂದು ನಾಟ್ಯವನು
ಕುಂದದೆ ನಿಂದಿರಲು ಭೃಂಗಿಯು
ದಾಂ ದಂ ದಾಂ ಧಿಂ ಧಿಂ ಧಿಮಿ ಧಿಮಿ ತತತೋ ಎಂದು
ಕುಂದದೆ ಜಕ್ಕುವರೆ ರಾಯನು ॥೬॥

ಸೃಷ್ಟಿಗಧಿಕವೆಂದು ಕಕ್ಕಯ್ಯನ ಯಳಮೇಲಿ
ದೃಷ್ಟ ಮೂರುತಿ ಅಲ್ಲಮಪ್ರಭು
ಕೊಟ್ಟನು ಸಂಗನ ಸುತಗೆ ವರಗಳ ಮನ
ಮುಟ್ಟಿ ವಸಂತನಾಡ ಬನ್ನಿ ಅಲ್ಲಮ ॥೭।

ತೋಹೆ – ೬೩, ಪದ–೫೦೭

❖❖

ಭಾಗ : ಎರಡು

ಶಹಾಪುರ ಹಸ್ತಪ್ರತಿಯ ಸ್ವರವಚನಗಳು

ಭಾಗ : ಎರಡು

❖

ಶಹಾಪುರ ಹಸ್ತಪ್ರತಿಯ ಸ್ವರವಚನಗಳು

೧

ನಿಂದೆ ಕುಂದುಗಳೆಲ್ಲ ಆಡಬೇಡವು ಇವರು
-- ನು ಕಂಡುಕೊಂಡಿಹುದು
ಸಂದಳಿಯ ಬಂದಿದೆ ಸಾಕ್ಷಿ ಇದ ಕೇಳು।
ಹಿಂದು ಮುಂದಿವು ನಡೆದುದಿಲ್ಲ ॥ಪಲ್ಲ॥

ಗುರುವಿನ ಪಾದರಕ್ಷೆ ಎಂಬುದು ಇದರ ।
ಕುರುಹ ನಾನರಿಯೆನು ಕೌಂಶಿಯನು ।
ಇದರೊಳಗೆ ಇಟ್ಟು ತೋರ್ವರು ಉಭಯ ಸ್ಥಲವ ।
ನೆರೆ ನಂಬಿ ಲಿಂಗ ಸಂಗವನು ।
ತೆರನರಿಯದೆ ಹಳಿದರೇನು ಅಂಧಕ ನಾನು ।
ಅರುಹು ಕುರುಹು ಎರಡು ಕಾಣುವೆನೆ ।
ನರರಿಗಿದು ಅಳವಲ್ಲ ತುರಿಯ ಅತೀತಕೆ ಬಂತು ।
ಸರುವ ಹಿಡಿದರೆ ಸಿಕ್ಕದೆಂತು ॥೧॥

ಶರಣಸತಿ ಪಾದರಕ್ಷೆಯ ಮೆಟ್ಟುವಾ ಸ್ಥಲದ ।
ಕುರುಹ ನಾನರಿಯೆನು ಕುಹಕನು ।
ಹಿರಿದಾದ ಲಿಂಗ ಧರೆಯ ಕೌಂಶಿಯ ಮೆಟ್ಟುವ ।
ಅರಹು ಉಂಟಯ್ಯ ಈ ಸ್ಥಲಕೆ ।
ತೆರನು ಅರಿಯದೆ ಹಳಿದು ಆಡಿದರೆ ।

---

೧. ಆರಂಭದ ಪುಟಗಳಿಲ್ಲ. ಉಳಿದಿರುವ ಮೊದಲ ಪುಟದಲ್ಲಿ ೧ರಿಂದ ೯ರ ವರೆಗಿನ ಪದ್ಯಗಳಿಲ್ಲ. ೧೦ರಿಂದ ೧೩ನೆಯ ಪದ್ಯಗಳಿಗೆ ಈ ಹಾಡು ಸಮಾಪ್ತಗೊಂಡಿದೆ. ಈ ಅರ್ಧ ಹಾಡನ್ನು ಬಿಟ್ಟುಕೊಡಲಾಗಿದೆ. (ಸಂ)

ಕೇಡಿನ ಕಡೆಯುಂಟೈ ನೋಡು ಕಟ್ಟಳೆಯ ।
ಜರಿದಾಡ ಬೇಡ ಒಂದಾದ ಈ ಸ್ಥಲವ ।
ನೆರೆ ನಂಬಿ ಕಾಣುವುದು ಘನವ ॥೨॥

ಗಂಡು ಪಾದರಕ್ಷೆ ಹೆಣ್ಣು ಕೌಂಶಿಯೆಂದು ।
ಕಂಡು ಕಾಣಿರಿ ಜಗವು ಇಂತು ।
ಕಂಡವರು ಬಂದು ಕಾರಣವ ಮಾಡಿದರಿಂತು ।
ಭಂಡ ಹಳಿದರೇನು ಇದನಿಂತು ।
ಗಂಡು ಹೆಣ್ಣಿಗೆ ಅಂತೆ ಹೆಣ್ಣು ಗಂಡಿಗೆ ಅಂತೆ ।
ಗಂಡು ಬಲ ಹೆಣ್ಣು ಎಡನಂತೆ ।
ಗಂಡು ಪಾದರಕ್ಷೆ ಎಡ ಹೆಣ್ಣು ಪಾದಕ್ಕೆ ।
ಗಂಡು ಬಲ ಪಾದಕ್ಕೆ ಕೌಂಶಂತೆ ॥೩॥

ಆಕಾರದ ಮೆಟ್ಟು ನಿರಾಕಾರದ ಕೌಂಶಿ ।
ಏಕೆ ಮೆಟ್ಟಿದುದು ಇದನರಿಯೆ ।
ಸಾಕಾರ ಇತ್ತು ಈ ಉಭಯ ಸ್ಥಲವನು ಮೆಟ್ಟಿ ।
ಲೋಕಕಿದಿರಿಟ್ಟುದಿದು ಕರೆಯ ।
ಏಕಲಿಂಗ ನಿಷ್ಠಪಾರಿ ಮೆಟ್ಟಿದನಯ್ಯ ।
ಆಕಾರ ಮೆಟ್ಟಿ --- ಸೋಕಿಲೆ ಬಂತು ಬಲದ ಕಾಲಲಿ ಕೌಂಶಿ ಸಾಕ್ಷಿಯನೆ ಕೇಳಿ
ನಂಬುವದು ॥೪॥

-- ನಾಯಕ ಮೆಟ್ಟಿದ ಪಾದರಕ್ಷೆಯನು
ಭಂಡ[ರಿ]ವರು ಮೆಟ್ಟಬಹುದೆ ।
ಗಂಡು ಪ್ರಭುಲಿಂಗ ಮೆಟ್ಟಿದ ಕೌಂಶಿ ಇಂದಿದನು ।
ಚಂಡಲರಿವ ಮೆಟ್ಟಬಹುದೆನ್ನಿ ।
ಕಂಡವರು ಈ ಉಭಯ ಸ್ಥಲಕೆ ಸನ್ಮತವೆಂದು ।
ಕೊಂಡಾಡಿ ನಲಿದು ಮನದೊಳಗೆ ।
ಉಂಡು ತೇಗಿದ ಅಂತೆ ಈ ವಚನ ಸಾಕ್ಷಿಯಲಿ ।
ಮಂಡಲಕೆ ಆಡಿ ತೋರಿದರು ॥೫॥

ಕೌಂಶಿ ಪಾದರಾಕ್ಷೆಯ ಮೆಟ್ಟಬಾರದು ಎಂದು ।
ಮುಸುಕಿ ಹಳಿದೆಲ್ಲ ಆಡಿದಿರಿ ॥

ಕಸಿಯ ಮಾಡಿಕೊಳಲಿಬೇಡ ಮುಂದಿದ ಕೇಳಿ ।
ಸಂಶಯಿಲ್ಲದಲಿ ಆಡಿ ತೋರುವರು ॥
ಕೌಂಶಿ ಜಂಗಮಕೆ ಗುರುವಿಗೆ ಪಾದರಕ್ಷೆಂದು ।
ಕೌಂಶಿ ಬಲ ಎಡ ಪಾದರಕ್ಷೆ ।
ವೈಸಿಕೊಂಡರೆ ಈ ಉಭಯ ಸ್ಥಲವ ತಮ್ಮೊಳಗೆ ।
ಜೈಸಿರೊ ಉಭಯಕಿದಿರಿಟ್ಟು ॥೬॥

ಎಡದ ಭಾಗದಲಿ ಶರಣ ಸತಿ ಚಂದ್ರ ಇಹನಂತೆ ।
ಒಡೆಯ ಪತಿ ಸೂರ್ಯ ಬಲನಂತೆ ॥
ಎಡದ ಬಲ ಶರಣಸತಿ ಲಿಂಗಪತಿ ಈ ಎರಡ ।
ಕೂಡಿ ಸಂಗಮನು ಇಹನಂತೆ ॥
ಎಡ ಹೆಣ್ಣು ಬಲ ಗಂಡು ಮಧ್ಯದಲಿ ಸಂಗಮನು ।
ನೋಡಿ ನಲಿದಾಡುತಿಹನಂತೆ ॥
ಎಡಪಾದವು ಹೆಣ್ಣು ಗಂಡು ಮೆಟ್ಟನೆ ಮೆಟ್ಟಿ ।
ಗಂಡು ಪಾದಕೆ ಹೆಣ್ಣು ಕೌಂಶಂತೆ ॥೭॥

ಹಿಂದೆ ಮೆಟ್ಟು ಮುಂದೆ ಕೌಂಶಿ ಎಂಬುದು ಇದರ ।
ಸಂದರಿಯಲಿಬೇಕು ನೋಡಿ ॥
ಹಿಂದುವಾಣ್ಯ ತುರುಕಾಣ್ಯ ಇಂತಿ ಈ ಎರಡು ।
ದ್ವಂದ್ವದಲಿ ಕಂಡಿಹವಂತೆ ॥
ಕುಂದು ಹೆಚ್ಚನರಸಬೇಡ ಈ ಉಭಯದ ।
ಸಂದು ಸತ್ಯವನಾಳುತಾರೆ ॥
----------- ಸ್ಥಲವನು ಎತ್ತಿ ತೋರಲಿಕೆ ।
ನಿಂದಿಸ್ಯಾಡುವದು ------ ॥೮॥

ಜಂಗಮದ ಕೌಂಶಿ ಗುರುವಿನ ಪಾದರಕ್ಷೆಯನು ।
ಇಷ್ಟಲಿಂಗದ ಮೇಲೆ ಕಟ್ಟಿದನು ॥
ಕಂಗುರುಡ ಏನ ಬಲ್ಲನು ಇದರ ನಿರ್ಣಯವ ।
ಅಂಗದಿಚ್ಚೆಯೆಲ್ಲಳಿದೇವಂದು ॥
ಜಂಗಮದ ಕೌಂಶಿ ಮೇಲೆ ತಾ ಇಷ್ಟಲಿಂಗವನು ।
ಹಿಂಗದಲಿ ಕಟ್ಟಿದರಿದನು ॥
ಕಂಗೆಟ್ಟು ಕಳವಳಿಸಿ ಓಡ್ಯಾಡುವರವರು ।
ಮುಂಗುಣಿಯ ಬಿದ್ದೋಹದರಿಂದೆ ॥೯॥

ಮೆಟ್ಟು ಕೌಂಶಿ ಎರಡ ಇಷ್ಟಲಿಂಗದ ಮೇಲೆ ।
ಕಟ್ಟಿದನು ಒಂದು ಕಾರಣಕೆ ॥
ತಿಟ್ಟಕಿದಿರಿಟ್ಟು ಪಾದತೀರ್ಥವಿಷ್ಟಿಗಂ ।
ಗಟ್ಯಾಗಿ ಬಿಡಸ ಮಾಡಿದನು ॥
ನಟ್ಟ ಲಿಂಗವಂಗುಷ್ಟದಲಿ ಕಟ್ಟುವದು ।
ತಟ್ಟನಿದ ಬಿಡಸ ಮಾಡಿದರು ॥
ಇಟ್ಟೆವಿಷ್ಟಲಿಂಗವ ಕೌಂಶಿಯ ಮೇಲೆ ಕುಳ್ಳಿರಿಸಿ ।
ಕಷ್ಟರಿಷ್ಟಯ ಬಂತು ನಾಲ್ಕರಲಿ ॥೧೦॥

ಕುರಿದೊಗಲೆಂದು ಹಳಿದರೆ ಪೂರ್ವದಲಿ ವಿಷ್ಣು ।
ಹರಿಣಿಯವತಾರ ಓಡಿದರೆ ॥
ಹಿರಿದೆಂದು ಆ ವಂಶವಂಶದ ಚರ್ಮವನು ।
ತರಿಸಿ ಜನಿವಾರಕಂ ಕಟ್ಟಿ ॥
ಶಿರಕೆ ಆ ಚರ್ಮವನು ಟೊಪ್ಪಿಗೆಯ ಮಾಡಿದ್ದು ।
ಗುರುಲಾಂಛನಕೆ ಬಂದದುಂಟೆ ॥
ಕುರಿಯುಣ್ಣೆ ಕಂಬಳಿಯು ಗದ್ದಿಗೆ ಲಿಂಗಕ್ಕೆ ।
ಕುರಿದೊಗಲಿಂಗೇಕೆ ಭೇದಗಳು ॥೧೧॥

ಕುರಿದೊಗಲ ಕೌಂಶಿ ನಿಷೇಧ ಮಾಡಿದರಿದನು ।
ಕುರಿಯುಣ್ಣೆಯೆಂಬ ಕಂಬಳಿಯ ॥
ಕುರುಹಿಟ್ಟು ಲಿಂಗಕ್ಕೆ ಗದ್ದುಗೆಯ ಹಾಕುವರು ।
ಕುರಿದೊಗಲಿಗೇಕಿಷ್ಟು ಭೇದ ॥
ವರಾಹ ಅವತಾರದಲಿ ವಿಷ್ಣು ಬಂದನು ಅಂದು ।
ತರಿಸಿ ಚರ್ಮವ ಹಿಡಿಯುತಾರೆ ॥
ಕುರುವಿಗಾಗಿ ರೋಮ ಇಟ್ಟು ಪೂಜೆ ಎಲ್ಲವಕೆ ।
ಕುರಿಯುಣ್ಣೆ ಆ ತೊಗಲಿಗೇಕೆ ಭೇದ ॥೧೨॥

ಪಾದದಲಿ ಮೆಟ್ಟಿದ್ದ ಕೌಂಶಿದು ನೀವಿದನು ।
ಭೇದಗಳ ಮಾಡಲಿದ ಬೇಡ ॥
ಅದರಿಂದ ದೀಕ್ಷೆವು ಎಂದು ಪೂರ್ವದಲಿ ।
ಶೋಧಿಸಿ ನೋಡಿ ನಿಮ್ಮೊಳಗೆ ॥
ಅದರಿಂದ ಜಂಗಮವು ಮೆಟ್ಟುವ ಕೌಂಶೆ ।

ವಾದವೇತಕೆ ಕೇಳು ಮುಂದೆ ॥
ಪಾದತೀರ್ಥವು ಜಂಗಮದುಂಗುಷ್ಟ ಇಷ್ಟಲಿಂಗಕೆ ।
ಭೇದವೆಂದರೆ ಎರಡ ಬಿಡಿರೈ ॥೧೩॥

ಇಷ್ಟಲಿಂಗವು ಪೂರ್ವದಲಿ ಉಂಗುಷ್ಟದಲುಂಟು ।
ದೃಷ್ಟ ಕಟ್ಟಿದಿರಿ ಅದರಿಂದ ॥
ಇಷ್ಟಲಿಂಗವನು ಜಂಗಮದ ಕೌಂಶಿಯ ಮೇಲೆ ।
ಕಟ್ಟಿದ್ದರೇನು ದೋಷಗಳು ॥
ಇಷ್ಟಲಿಂಗವು ಕೌಂಶಿಯ ಮೇಲಲ್ಲವೆಂಬಾಗ ।
ದೃಷ್ಟ ದೀಕ್ಷೆಗಳು ಕೊಡುತಿಹುದಾ ॥
ಇಷ್ಟಲಿಂಗುಂಗುಷ್ಟದಲಿ ಕಟ್ಟಿ ಕುಡಬೇಡಾ ।
ಇಷ್ಟಲಿಂಗದ ದೀಕ್ಷೆ ಸಾಕು ॥೧೪॥

ಇಷ್ಟಲಿಂಗವು ಕೌಂಶಿ ಮೇಲೆ ಕಟ್ಟಿರಲಿಕಿ[ವ] ।
ಕಟ್ಟಬಾರದು ಎಂಬ ಅವರು ॥
ಇಷ್ಟಲಿಂಗವ ಕಟ್ಟಿದವರು ಕೌಂಶಿಗಾಲ ।
ಮುಟ್ಟಿಬೀಳಲಿ ಬಾರದಿನ್ನು ॥
ಶ್ರೇಷ್ಠ ನಾ ಭಕ್ತನೆಂಬುತ ನೊಸಲ ವಿಭೂತಿ ।
ಇಟ್ಟಿಡದು ಒರೆಸಿ ಕೌಂಶಿಂಗೆ ॥
ಕೊಟ್ಟಿ ಇದ ಬಿಡದೆ ಗುರುಮಣಿಹಕ್ಕೆಳದಾಡುತಲು ।
ನಷ್ಟವಾಗಿಂತು ಈ ಪರಿಯ ॥೧೫॥

ಇಷ್ಟಲಿಂಗವು ಕೌಂಶಿ ಮೇಲಲ್ಲವೆಂಬಗ ।
ಇಷ್ಟಲಿಂಗವ ಕಟ್ಟಿದವರು ॥
ದೃಷ್ಟ ಕೌಂಶಿಗಾಲ ಮೇಲೆ ಬೀಳುವದಲ್ಲ ।
ಇಷ್ಟು ಅಲ್ಲದೆ ಮುಂದೆ ಕೇಳಿ ॥
ಇಷ್ಟಲಿಂಗವು ಕೌಂಶಿ ಮೇಲೆ ಕಟ್ಟಿತು ಯಾಕೆ ।
ಶ್ರೇಷ್ಠರಾದವರೊರೆದು ನೋಡಿ ॥
ಭ್ರಷ್ಟರಿದನರಿಯದಲಿ ಈ ಪ್ರಭುಸ್ಥಲ ಹಳಿದು ।
ಶ್ರೇಷ್ಠರಾಹದಕೆ ಕಡೆಯಿಲ್ಲ ॥೧೬॥

ಬಸವನ ಚರ್ಮದ ಪಾದರಕ್ಷೆದ ಮೇಲೆ ।
ಪಶುರೂಪಿ ಶಿಲೆಯ ಕಟ್ಟಿದರೆ ॥

ಅಸವಲ್ಲದ ದೋಷವೆಂದು ನುಡಿದರೆ ನೀವು ।
ಬಸವಭಕ್ತರು ತಿಳಿದು ನೋಡಿ ॥
ಪಶು ಬಸವನೆಂದು ಕಾರಹುಣ್ಣಿವಿಯಲಿ ಎಲ್ಲ ।
ದೆಸದಲಿ ಕಟ್ಟಿ ಪೂಜೆಮಾಡಿ ॥
ಹುಸಿಕ ನಾ ಮೆಟ್ಟ ಮೆಟ್ಟೆತ್ತನೇರಿದೆ ತಿರುಗಿ ।
ಬಸವ ಭಕ್ತನಾನಾಚೆ ಖೋಡಿ ॥೧೭॥

ಮೆಟ್ಟ ಮೆಟ್ಟಿ ಭಕ್ತರೆಂದೆತ್ತನೇರುತಲಿ ।
ಕಟ್ಟಳಿಲ್ಲದೆ ಕರ್ಮ ನೋಡಿ ॥
ಇಟ್ಟುದಕೆ ಶಿಲೆರೂಪು ಪಾದರಕ್ಷದ ಮೇಲೆ ।
ತಿಟ್ಟಕಿದಿರಿಟ್ಟೆ ನಿಮಗಿದನು ॥
ಕಟ್ಟಿರಲು ಶಿಲೆ ಬಸವರೂಪು ಮೆಟ್ಟಿನ ಮೇಲೆ ।
ಕಟ್ಟಬಾರದು ಎಂಬ ಅವರು ॥
ಮೆಟ್ಟ ಮೆಟ್ಟೆತ್ತನೇರುವಾ ಅದನು ।
ತಟ್ಟನದ ಬಿಡಿಸಿ ನಮಗ್ಹೇಳಿ ॥೧೮॥

ಎತ್ತಿನಾ ರೂಪ ನೋಡಿ ಶಿಲೆಯ ಕಟ್ಟರೊ ।
ಮತ್ತೆ ಈ ರೂಪಿನದೊ ಎತ್ತು ॥
ಮಿ[ಥ್ಯ]ವನು ಪಾದರಕ್ಷೆಯ ಮೇಲೆ ಕಟ್ಟಿರಲು ।
ಸತ್ಯವಲ್ಲೆಂದು ಆಡಿದರೆ ॥
ಭಕ್ತರು ಮೆಟ್ಟ ಮೆಟ್ಟೆ ಎತ್ತನೇರಲಿಬಹುದೆ ।
ಪ್ರತ್ಯಕ್ಷ ಪೂಜೆ ಮಾ[ಡಿ]ದನು ॥
ವ್ಯರ್ಥ ಕನಿಷ್ಠವಿದ ಕಟ್ಟಬಾರದು ಎಂದು ।
ಒತ್ತಿದಿರಿ ನಮಗೇಕೆ ॥೧೯॥

ಮೆಟ್ಟ ಮೆಟ್ಟೆತ್ತನೇರಲಿ ನೀವು ಬಹುದಂತೆ ।
ಮೆಟ್ಟಿನ ಮೇಲೆ ಪಶುರೂಪು ॥
ಕಟ್ಟಿದರೇನು ದೋಷವುಯೆಂದು ಆಡುವಿರಿ ।
ಕಟ್ಟಬಾರದು ಎಂಬ ಅವರು ॥
ಮೆಟ್ಟ ಮೆಟ್ಟೆತ್ತನೇರುವ ಗುಣವು ನಮಗಿಲ್ಲ ।
ಇಷ್ಟರಲಿ ಸಲೆ ಸಾಕು ನಿಮ್ಮ ॥೨೦॥

ಮೆಟ್ಟ ಮೆಟ್ಟಿ ಭಕ್ತರೆನಿಸಿಕೊಂಬವರೆಲ್ಲ ।
ಮೆಟ್ಟೆತ್ತನೇರಲಿ ಬಹುದಂತೆ ॥
ಮೆಟ್ಟಿನ ಮೇಲೆ ಪಶುವಿನ ರೂಪು ಶಿಲೆಯಿದನು ।
ಕಟ್ಟಿದರೇನು ದೋಷಗಳು ॥
ಮೆಟ್ಟಿನ ಮೇಲೆ ಪಶುವಿನ ರೂಪು ಶಿಲೆಯಿದನು ।
ಕಟ್ಟಿದರೆ ದೋಷವೆಂಬಾಗ ॥
ಮೆಟ್ಟ ಮೆಟ್ಟೆತ್ತ ಮತ್ತೇರ ಬರದು ಇನ್ನು ।
ನಿಷ್ಠಿಲ್ಲ ನಾ ಭಕ್ತನೆಂಬವರು ॥೨೧॥

ಉತ್ತಮ ಮಧ್ಯಮ ಕನಿಷ್ಠ ಇವು ಮೂರ ।
ಎತ್ತಲಂದರೇನು ಧರ್ಮವನು ॥
ಉತ್ತಮವಾದ ವೃಷಭನಾ ಕಾಣದಲಿ ಮುಂದೆ ।
ಮತ್ತೆ ಮಧ್ಯಮ ಪಶುವ ಹಿಡಿದು ॥
ಕೃತ್ಯವಾಯಿತು ಕಾರಹುಣ್ಣಿವೆಂಬುದು ಅದಕೆ ।
ಮತ್ತೆ ಪೂಜೆಯ ಮಾಡಿ ನಾವು ॥
ಕತ್ತೆ ಮೂಳನು ಮೆಟ್ಟ ಮೆಟ್ಟೆತ್ತನೇರಿದೆನು ।
ಮೃತ್ಯು ಕನಿಷ್ಠಕ್ಕೆರಗುತಲಿ ॥೨೨॥

ಆಡಿದುದ ಆಡಿ ಹೋಹವರಲ್ಲ ಇವರಿಂತು ।
ಮಾಡುವುದು ಮಾಟ ಹೊಸಪರಿಯ ॥
ಮಾಡಿದುದ ಮಾಡುವರಲ್ಲ ॥
ನುಡಿ ನೋಡಿನ್ನು ನುಡಿಯದ ನುಡಿಯದಲಿಹರು ।
ಮಾಡುವುದು ಮಾಟ ಹೊಸಪರಿಯ ॥
ಹೇಡಿಗಳು ಅಲ್ಲ ಇದಿರೆನುತ ಲೋಕಕ್ಕೆ ।
ಕೂಡಿ ಬೆರಸುತಲಿ ವಿರಹಿತಕೆ ॥
ನಾಡ ಮಾತಾಡಿ ಓಡಲಿಯಿಕ್ಕಿ ಹುರಿಯುತಲಿ ।
ಪಾಡೆನುತಿಹರು ಹರುಷದಲಿ ॥೨೩॥

ಅಂದೊಂದ ಪರಿಯ ಕೌಂಶಿ ಪಾದರಕ್ಷೆಯನು ।
ಬಂದು ಮೆಟ್ಟಿದುದ ತಿಳಿಯದಲು ॥
ಅದರಿಂದ ಒಂದು ಪರಿಯ ಕಟ್ಟಿ ಶರಣೆನಿಸಿದುದ ।
ಸಂದು ಭೇದವನು ಕಾಣದಲಿ ॥

ಇಂದೊಂದು ಪರಿಯ ತಿರಿಹಿ ಮೆಟ್ಟಿ ಕಟ್ಟಿಸುತಾ ।
ಬಂದ ಪ್ರಭುರಾಯನೀ ಪರಿಯಾ ॥
ಮುಂದೆ ಆಸಿಶೆ ಈ ಸಾವಿಯಲಿ ಮುಗಿಯಲಿಕೆ ।
ಒಂದಿಷ್ಟು ತೋರಿ ಸೂಚನೆಯ ॥೨೪॥

ಎಡದಲಿದ್ದುದನು ಬಲದಲಿ ಕಟ್ಟಿ ಶರಣೆನಿಸಿ ।
ಅಡಗಿ ಮೃತ್ಯು ಸ್ಥಲದಿಂದ ॥
ನುಡಿದ ಬಲದಲಿ ಇದ್ದ ಕೌಂಶಿಯನು ಎಡನೆನಿಸಿ ।
ಬೆಡಗಿಟ್ಟು ತೋರಿ ತಿರುಗಿದನು ॥
ಕಡೆಮೊದಲು ಒಂದೆಂದು ನೋಡಿ ಈ ಭೇದವನು ।
ಜಡಬುದ್ಧಿ ಬಿಟ್ಟು ನಿಜವಿಡಿದು ॥
ನಡೆವ ಭಕ್ತಿಯನು ಕಲ್ಯಾಣದಲಿ ಪ್ರಭು ಮುರಿದು ।
[ಕೊ]ಡಿಸುವುದು ಇಂದು ಶೂನ್ಯರಿಗೆ ॥೨೫॥

■

೨
ಮಳೆ ಬೆಳೆಯಂಬುದು ಪರಮಗುರು ತೀರ್ಥ ಪ್ರಸಾದ ।
ಹಳಿದು ಹಂಬಲಿಸುವವರಿಗಿಕ್ಕಿತು ಮುಂಡಿಗೆ ॥ಪಲ್ಲ॥

ಮರ್ತ್ಯದೊಳು ದಾರಾರು ಕೃಷಿಯ ಮಾಡುಂಬರಿಗೆ ।
ಹತ್ತಿದವರವರ ಅಸಬಾಬು ಎಲ್ಲ ॥
ಮರ್ತ್ಯದೊಳಗಿರಲು ಮನೆಮಾರು ತರುಮರ ನೆರಳು ।
ಮತ್ತೆ ಹಾಸುಮಂಚ ಹಾಲು ಹಯನ ಸಹಿತ ॥
ಕರ್ತು ಮಳೆ ಬೆಳೆ ಪ್ರಸಾದದಲಿವ ಹುಟ್ಟಿಸಿ ।
ಮರ್ತ್ಯದೊಳು ಸತ್ಯ ಧರ್ಮರಿಗೆ ಕೊಟ್ಟ ॥
ಕರ್ತು ಮಳೆ ಬೆಳೆ ತೀರ್ಥ ಪ್ರಸಾದ ಹಳಿವಿರಿ ।
ತುರ್ತು ಮಳೆ ಬೆಳೆ ಒಡವೆ ಬಿಡಿಸಿ ತೋರಿ ॥೧॥

ಮಳೆ ಬೆಳೆಯಿಂದಲಿ ಮಾಣಿಕವು ರತ್ನ ವಜ್ರ ನೀಲ ।
ಮಳೆ ಬೆಳೆಯಿಂದಲಿ ಸಮಸ್ತ ಒಳ್ಳೆ ಹರಳು ಕಲ್ಲು ॥
ಮಳೆ ಬೆಳೆಯಿಂದಲಿ ಮುತ್ತು ಹವಳ ಬೆಳ್ಳಿ ಬಂಗಾರ ।
ಮಳೆ ಬೆಳೆಯಲಿ ಸರ್ವ ಸಣ್ಣ ಬಣ್ಣದೊಸ್ತ್ರವು ॥
ಮಳೆ ಬೆಳೆಯೆಂಬ ತೀರ್ಥ ಪ್ರಸಾದದಲಿವ ಹುಟ್ಟಿಸಿ ।

ಮಳೆಯೊಡೆಯ ಸತ್ಯ ಸದಾಚಾರಕೆ ಕೊಟ್ಟ ॥
ಮಳೆ ಬೆಳೆಯೆಂಬ ತೀರ್ಥ ಪ್ರಸಾದವನು ಹಳಿವಿರಿ ।
ಮಳೆ ಬೆಳೆಯಲಿ ಹುಟ್ಟಿದೊಡವೆ ಬಿಡಿಸಿ ತೋರಿ ॥೨॥

ಕರಿತುರಗ ಒಂಟಿ ಪಲ್ಲಕ್ಕಿ ಸತ್ತಿಗೆ ಚವರ ।
ಕರಿಯ ಮದನಿವಾಸ ಕಬ್ಬಿಣದಂಕುಶ ॥
ಜರಿಯ ಕಂಗಲುಡವುಳಿ ಜಗಕೆ ಬತ್ತೀಸಾಯುಧ ।
ಹರಿದ ಕೊಟ್ಟರಸು ಮಾರ್ಬಲಗಳೆಲ್ಲ ॥
ಉರಗಭೂಷಣನ ಮಳೆ ಬೆಳೆ ತೀರ್ಥ ಪ್ರಸಾದದಲಿವ ಹುಟ್ಟಿಸಿ ।
ಊರ್ವಿಯೊಳು ಸತ್ಯರಾಯರಿಗೆ ಕೊಟ್ಟ ॥
ಉರಗಭೂಷಣನ ಮಳೆ ಬೆಳೆ ತೀರ್ಥ ಹಳಿವಿರಿ ।
ಹಿರಿದು ಮಳೆ ಬೆಳೆ ಒಡವೆ ಬಿಡಿಸಿ ತೋರಿ ॥೩॥

ಮಳೆ ಬೆಳೆಲಿ ಕಪ್ಪರ ಕಟ್ಟಿಗೆ ಜೋಳಿಗೆ ಕಟ್ವಂಗ ।
ಮಳೆ ಬೆಳೆಯಲಿ ಕಂತೆ ಕೈಪು ದಂಡಕೋಲು ॥
ಮಳೆ ಬೆಳೆಯಲಿ ಶಂಖ ತ್ರಿಶೂಲ ಮುರಹು ಮುದ್ರೆಗಳು ।
ಮಳೆ ಬೆಳೆಯಲಿ ಸರ್ವ ಲಾಂಛನಗಳೆಲ್ಲ ॥
ಮಳೆ ಬೆಳೆಯೆಂಬ ತೀರ್ಥ ಪ್ರಸಾದದಲಿವ ಹುಟ್ಟಿಸಿ ।
ಭಾಳಲೋಚನ ತನ್ನವರಿಗೆ ಕೊಟ್ಟನು ॥
ಮಳೆ ಬೆಳೆಯೆಂಬ ತೀರ್ಥ ಪ್ರಸಾದ ಹಳಿವಿರಿ ।
ಮಳೆ ಬೆಳೆಯ ದರಿಸಿನವ ಬಿಟ್ಟು ತೊಲಗಿ ॥೪॥

ಕರಡಿ ಕೌಂಸಾಳೆ ನಿಸ್ಸಾಳ ಮದ್ದಳೆ ಜಾಗಟೆ ।
ಬುರುಡಿ ನಾಗಸ್ವರ ಗಂಟೆ ಢವಳ ಶಂಖ ॥
ಹಿರಿದು ಉಪ್ಪಂಗ ದಂಡಿಗೆ ಕಾಳೆ ತಾಳವು ।
ಹರನು ಮಳೆ ಬೆಳೆ ತೀರ್ಥ ಪ್ರಸಾದದಲಿವ ಹುಟ್ಟಿಸಿ ।
ಹರ ತನ್ನ ಪೂಜ್ಯರಿಗೆ ಸತ್ಯರಿಗೆ ಕೊಟ್ಟ ।
ಹರನ ಮಳೆ ಬೆಳೆ ತೀರ್ಥ ಪ್ರಸಾದ ಹಳಿವಿರಿ ॥
ಹರನ ಮಳೆ ಬೆಳೆ ವಾದ್ಯ ಬಿಡಿಸಿ ತೋರಿ ॥೫॥

ಇಷ್ಟಲಿಂಗದ ಶೀಲವು ವಿಭೂತಿ ರುದ್ರಾಕ್ಷೆ ।
ಇಷ್ಟಲಿಂಗವ ಕಟ್ಟಿದ ಕಲ್ಲುಕುಟಿಕನು ॥
ಇಷ್ಟಲಿಂಗದ ಶೀಲವು ಶಿವಮಂತ್ರ ಲಿಂಗವೆಂಬರು ।

ಇಷ್ಟಲಿಂಗಕಷ್ಟ ವಿಧಾರ್ಚನೆಗಳು ॥
ಎಷ್ಟೆಷ್ಟೊ ಎಲ್ಲ ಶಿವನ ಮಳೆ ಬೆಳೆ ತೀರ್ಥದಲಿವ ಹುಟ್ಟಿಸಿ ।
ಇಷ್ಟಲಿಂಗ ಧರಿಸಿ ಶಿವನ ಮಳೆ ಹಳಿವರು ॥
ಸೃಷ್ಟಿಯೊಳಧರ್ಮ ನಡೆವರಿಗೆ ಕೊಟ್ಟ ।
ಎಷ್ಟೆಷ್ಟು ಶಿವನ ಮಳೆ ಬೆಳೆ ತೀರ್ಥ ಹಳಿವರು ।
ಇಷ್ಟಲಿಂಗದ ಕ್ರೀಯ ಬಿಡಿಸಿ ತೋರಿ ॥೬॥

ಸೃಷ್ಟಿಯೊಳಗಾರಾರು ನಡೆದ ನಡೆಗುಣವರಿತು ।
ಅಷ್ಟ ಅಷ್ಟಕವರವರ ಫಲಪದಗಳು ॥
ಸೃಷ್ಟಿಯೊಳಗರ್ತಿ ಆನಂದ ಐಶ್ವರ್ಯ ಭಾಗ್ಯ ।
ಅಷ್ಟಯೋಗ ಕೀರ್ತಿ ದಶಬಲ ಭುಜಗಳು ॥
ಸೃಷ್ಟಿಗೀಶ್ವರನ ಮಳೆ ಬೆಳೆ ತೀರ್ಥದಲಿವ ಹುಟ್ಟಿಸಿ ।
ಸೃಷ್ಟಿಯೊಳು ಸತ್ಯ ನಡೆವರಿಗೆ ಕೊಟ್ಟ ॥
ಸೃಷ್ಟಿಗೀಶ್ವರನ ಮಳೆ ಬೆಳೆ ತೀರ್ಥ ಹಳಿವಿರಿ ।
ದೃಷ್ಟ ಮಳೆ ಬೆಳೆ ತೀರ್ಥ ಬಿಡಿಸಿ ತೋರಿ ॥೭॥

ಆರು ದರುಶನವು ಹದಿನೆಂಟು ಸಮಯವು ಭಕ್ತರು ।
ಆರಕವು ಮೀರಿದ ಚರದವರು ॥
ದಾರಾರೆ ಮರ್ತ್ಯದೊಳು ಹುಟ್ಟುವರು ಮಳೆ ಬೆಳೆಲಿ ।
ದಾರುಣಿಯೊಳು ಜನಿಸಿ ಉತ್ಪತ್ಯವಾಹರು ॥
ಆರು ದರುಶನದ ಕರ್ತನ ಮಳೆ ಬೆಳೆಲಿ ಹುಟ್ಟಿಸಿ ।
ಹಾರಿಸಿದ ಜರಿದು ಹಳಿವವರು ಎಲ್ಲ ॥
ಆರು ದರುಶನದ ಕರ್ತನ ಮಳೆ ಬೆಳೆಯ ಬಿಟ್ಟು ।
ಮೀರಿ ಹುಟ್ಟಿಸಿ ಉತ್ಪತ್ಯ ಮಾಡಿ ತೋರಿ ॥೮॥

ಅಂಬರ ಮಹುಳಿ ಮಳೆ ಬೆಳೆ ತೀರ್ಥ ಪ್ರಸಾದದಲಿ ।
ಎಂಬತ್ನಾಲ್ಕು ಲಕ್ಷ ಜೀವನ ಹುಟ್ಟಿ ॥
ಕುಂಭಿನಿಯೊಳು ಸತ್ಯಶರಣರ ಸೋಹ ಮಾಡಲಾ ।
ಎಂಬತ್ನಾಲ್ಕು ಲಕ್ಷದೊಳು ನಿಮ್ಮಿಂದ ॥
ಅಂಬರ ಮಹುಳಿ ಮಳೆ ಬೆಳೆ ತೀರ್ಥ ಪ್ರಸಾದವ ।
ಕುಂಭಿನಿಯೊಳು ಹಳುವರು ಹಾಕರು ಎಲ್ಲ ॥
ಅಂಬರ ಮಹುಳಿ ಮಳೆ ಬೆಳೆ ತೀರ್ಥದಲಿ ಹುಟ್ಟುವದು ।
ಎಂಬತ್ನಾಲ್ಕು ಲಕ್ಷ ಬಿಟ್ಟು ತೊಲಗಿ ॥೯॥

ಧಾರುಣೀಶ್ವರನ ಮಳೆ ಬೆಳೆ ತೀರ್ಥ ಪ್ರಸಾದದಲಿ ।
ಧರಣೇಂದ್ರ ಕೂರ್ಮ ಹುಟ್ಟಿದ ರಾತ್ರಿ ಹೊಳದ ॥
ಧರಣೀಶ್ವರನ ಮಳೆ ಬೆಳೆ ತೀರ್ಥ ಪ್ರಸಾದವು ।
ಧರಣೇಂದ್ರ ಕೂರ್ಮನ ತನ್ನ ಹಿತದ ॥
ಧರಣೀಶ್ವರನ ಮಳೆ ಬೆಳೆ ತೀರ್ಥ ಪ್ರಸಾದವ ।
ಧರೆಯೊಳಗೆ ಜರಿದು ಎಲ್ಲ ಹಳಿಯುವವರು ॥
ಧರಣೀಶ್ವರನ ಮಳೆ ಬೆಳೆ ತೀರ್ಥ ಬಿಟ್ಟಂಥದ ।
ಬೇರೆ ತೀರ್ಥ ಪ್ರಸಾದ ಬೇಗ ತೋರಿ ॥೧೦॥

ಶಿವನ ಮಳೆ ಬೆಳೆ ತೀರ್ಥ ಪ್ರಸಾದದ ಮಹಾತ್ಮೆ ।
ಭುವನದೊಳು ಸರ್ವ ಜನರೆಲ್ಲ ಕೇಳಿ ॥
ಶಿವನ ಮಳೆ ಬೆಳೆ ತೀರ್ಥ ಪ್ರಸಾದದಲಾರಾರು ।
ಭುವನದೊಳು ಬೇಡಿದಂತೊಡವೆ ಇತ್ತು ॥
ಶಿವನ ಮಳೆ ಬೆಳೆ ತೀರ್ಥ ಪ್ರಸಾದ ಹಳಿವರಿಗೆ ।
ಭುವನ ಜನರೆಲ್ಲ ಬುದ್ಧಿಯನು ಹೇಳಿ ॥
ಶಿವಗೆ ಸಲಿಕ್ಕೆಗಿ ಬುದ್ಧಿಯ ಹೇಳಿದಾಗಲವು ।
ಭುವನಕೆಲ್ಲ ಅದರ ಘೋರ ಕೇಡ ನೋಡಿ ॥೧೧॥

■

೩

ಶಿವ ಶಿವ ಸಿದ್ಧ ಕೈಲಾಸ ॥ಪಲ್ಲ॥
ಹರನ ಕೈಲಾಸದಿಂದೊಡ್ಡೋಲಗವನಿತ್ತಿಹ ।
ಹರಿವಿರಂಚಿಗಳು ದಿಕ್ಪಾಲವಾವಸು ಮನು ಮುನಿಯು ॥
ಸುರಪತಿಯು ಮೊದಲಾದ ಸಕಲ ದೇವರ್ಕಗಳು ।
ಗ್ರಹಗಳೊಂಬತ್ತು ಮಂದಿ ॥
ಮರುಳ ಬೊಮ್ಮಯ್ಯ ನಾಟ್ಯವನಾಡುವ ಬೃಂಗಿ ।
ತರ ತರದ ವೈಭೋಗ ಪಾತ್ರ ಚಾಮರವೆಣ್ಣು ॥
ಹರ ಹರವೆಂದು ಹೊಗಳುವ ವೇದ ।
ಚಂದ್ರಾರ್ಕ ಚಿತ್ರಗುಪ್ತರ ಪಾಠದಿ ॥೧॥

ಬಸವೇಶ ಗಿರಿಜೆ ಚೌಷಷ್ಟಿಗಿಳಿತ್ರ ಘಸಿರಲಿ ।
ಋಷಿಯು ಬುದ್ಬಜ ಕ್ಷೇತ್ರಫಲಯವು ಶಂಕುಣಿಯು ॥
ಎಸೆವ ಕಂಚಕರು ಉಗ್ಗಡಿಸಿ ಸನ್ನೊಕದಿಂದ ।

ವಸುಧೆ ತುಂಬುರ ನಾರದ ಸಿದ್ಧರು ॥
ರಸವು ಪೂರಿತವಾದ ಅಕ್ಷ ಗರುಡ ಗಂಧರ್ವ ।
ಕಿಂಪುರುಷರು ಗೀತದ ॥
ಪಶುಪತಿಯು ಮುಂದೆ ಪಂಚಮವಾದ್ಯ ವಾಲಗದಿ ।
ಕುಶಲ ಗುರು ಬಂದು ಪಂಚಾಂಗವಿಡಿದ ॥೨॥

ಹೊತ್ತಿಗೆಯ ಸೂತ್ರಗಳ ಕಳಚಿ ಶಿವನಡಿಗೆರಗಿ ।
ಇತ್ತರಿಸಿ ಗುರುವುಸಿದಂತಕವ ಗುಣಿಸಿದನು ॥
ಇತ್ತ ಹದಿಮೂರು ಲೋಕದ ಸುದ್ದಿಗಳ ಹೇಳ ।
ಮರ್ತ್ಯದೊಳಗಣ ಸುದ್ದಿಯ ॥
ಚಿತ್ತೈಸು ದೇವ ಗಂಗೆಯತಸ ಹಾರೈಸಿ ।
ಹತ್ತೆ ಬಂದೆವು ನಿಮ್ಮ ಬರವ ನೋಡುತ ಕಾದು ॥
ಹಸ್ತಿಮುಖ ಅಪ್ಪಣ್ಣ ಕಾರ್ತಿಕ ಮೊದಲಾದ ।
ಭಕ್ತರಳಲುತ್ತೈದಾರೆ ॥೩॥

ಪೊಡವಿಗತಿ ಶಾಸ್ತ್ರ ಜೋತಿಷ್ಯ ಹುಸಿ ಹೋದಾವು ।
ಗಿಡ ಮದ್ದು ಮಂತ್ರಗಳು ಜಂಬವಳಿದಾವು ॥
ಒಡವೆ ಉಳ್ಳವರ ಕೈವಾಣಗಳಿಲ್ಲದ ತೆರದಿ ।
ಪೊಡವಿ ಪಾಲಿಪ ಪುರುಷರಳಿದಾರು ॥
ಷಡುದರುಶನದಲಿ ಮೆರೆವವರ ಕುಲವಧ್ಯವು ।
ಗುಡುಗುಡುಸಿ ಭೂಮಿ ಗರ್ದುಲಿಸಿ ಗುಂಡುರುಳ್ಯಾವು ॥
ಅಡವಿಯೊಳಗಣ ಚೆಂಚರೂರುಗಳನಾಳ್ಯಾರು ।
ಒಡಲ ಕಿಚ್ಚಿಗೆ ಗುಡಿಯನೊಡೆದಾರು ॥೪॥

ಹಾಲವಕ್ಕಿಯ ಶಕುನ ಕರಿಹಕ್ಕಿ ಹೇರುಂಡ ।
ಮೊಲ ವಾಯು ಹಸುಬ ಹಂಗ ಬಾವುಗ ಡಂಬು ॥
ಕಾಳುರಗ ಗೌಳಿ ನರಿ ಹರಿಣ ಗಜ ದೂತಶ್ವ ।
ಬಾಲ ಶಕುನಗಳು ಸೃಪನಗಳು ॥
ಕಾಲಪರಿ ಇವೆಷ್ಟು ಪಾಟಗೆಟ್ಟು ಹೋದವು ।
ನೀಲಶಿಲೆಗಳೆರಡು ಸಭೆಗೆಟ್ಟು ಹೋದಾವು ॥
ಸೋಲು ಗೆಲುವಿನ ದ್ವಿಜರು ಸುರೆ ಮಾಂಸವಿಟ್ಟರು ।
ಮಾಲೆಯನು ಹಾಕ್ಯಾರು ಮರ್ತ್ಯದೊಳು ॥೫॥

ದಂಡದೋಷಗಳು ಘನವಾದವು ಧರೆಯೊಳಗೆ ।
ದಂಡೆದ್ದು ಬಡಿದೀತು ದೇಶ ದೇಶವ ಸುಟ್ಟು ॥
ಮಂಡಲಾದಿಗಳು ಮನೆ ಮನೆಗಿನ್ನು ತಿರಿದಾರು ।
ಉಂಡಮನೆಗೆರಡು ಬಗೆದಾರು ॥
ಹೆಂಡಿರು ಗಂಡರನು ಮಾರ್‍ಯಾರು ಬೀದಿಯೊಳು ।
ಗಂಡರೆ ಜಗದೊಳಗೆ ಭಂಡರಾಗಿದ್ದರು ॥
ಹುಂಡುದೊತ್ತಿದರು ಗರತೆರಾಗಿ ಇದ್ದಾರು ।
ಕೊಂಡದೊತ್ತಿನ ಕಾಲನೊತ್ಯಾರು ॥೬॥

ಅತ್ತೆ ಅತ್ತೆಗೆ ಸೊಸೆ ಅತ್ತೆಯಾದಳು ಮೀರಿ ।
ಅತ್ತೆ ಸೊಸೆಯಂದರಿಗೆ ತೊತ್ತು ಆದಳು ಅಂಜಿ ॥
ಹೆತ್ತವರ ಹೊಟ್ಟೆಗಿಕ್ಕದಲಿನ್ನು ಪುತ್ರರು ।
ಅತ್ತೆ ಮಾವಿದರ ಸೇರರು ॥
ಉತ್ತಮರ ಕೇಡ ನುಡಿಯ ನಿಂದೆಗಳನಾಳಿರು ।
ಪುತ್ರಗಳನೆ ಮಾರಿ ತುತ್ತಗಳ ಕೊಂಡಾರು ॥
ಅರ್ಥವನೆ ಕೊಂಡು ಸಾಲವ ಕೊಡದೆ ನೂಕ್ಯಾರು ।
ಇಂತು ಮಿತ್ತು ಮಾರಿಗಳಾಟ ನರರಿಗೆ ॥೭॥

ಒಡೆಯನಾಳಿಕೆ ಬಂಟನೆ ಒಡೆಯನಾದಾನು ।
ಒಡೆಯ ಬಂಟನ ಮೆಟ್ಟ ಹಿಡಿದೋಲಗೈಸೆರು ॥
ಗುಡಿಯ ಕಲ್ಲನೆ ತಂದು ಅಡಿಗಟ್ಟ ಹಾಕ್ಯಾರು ।
ಮಡಿದಾರು ಅನ್ನದಾನಿಗಳು ॥
ಕೆಡವಿ ಕೂಗಿಟ್ಟವು ಬರ ಭಯ ವ್ಯಾಧಿಗಳು ।
ಸುಡುವ ಬೇಗೆಗಳಿನ್ನು ಜಗದಗಲ ಹಬ್ಬಿಗೆಯು ॥
ಒಡೆಯ ನಂದಿಯ ನೆನೆವ ಸದ್ಭಕ್ತರಾಳಿಂಗೆ ।
ಉಣಿಸ್ಯಾರು ಕರುಣದಲಿ ಹೂಮಳೆಯು ॥೮॥

ಮೀನ ಉಬ್ಬೆದ್ದು ಬಿದುರಿಗೆ ಅಂಬ ಕಳಿಹಿತ್ತು ।
ಹಾನಿ ಮಾಡ್ಯಾರು ಗೋರಿಗಳ ಕಲ್ಯಾಣದಲಿ ॥
ಜ್ಞಾನಿ ಬಸವನು ಬಂದು ಘರಿಸೊಳಗೆ ನಿಂದಾನು ।
ಮೌನವಾದೀತು ರಾಜತ್ವ ॥
ಆನೆ ಪತಿಯವರ ಕಂಟಕವ ಸೂರೆ ಮಾಡ್ಯಾರು ।
ಭಾನು ಕುಲದವರ ಮೊಗಟವನು ಕಡೆಗಿಟ್ಟಾರು ॥

ಜೋನಿಗರ ಕೋಟಿ ಕೊಳುನೀರು ಕೂಡಿತ್ತು ।
ಮಾನವರ ಕೇಡಿನ್ನು ಮರ್ತ್ಯದೊಳು ॥೯॥

ಒಟ್ಟು ಮಾಡ್ಯಾರು ಪಂಚಕ್ರೋಶ ಮಧ್ಯದಲಿ ।
ಹಿಟ್ಟುಗುಟ್ಟೀರೇಳು ಕೆರೆಯೊಳಗೊಂದೊಂದ ॥
ವಿಠ್ಠಲನ ಗೋಪುರವ ದಹನ ಮಾಡುತಲಿವರ ।
ತೊಟ್ಟ ಬಾಣವನು ತೋರ್‍ಯಾರು ॥
ಸುಟ್ಟು ಕಂಚಿಯಪುರವು ತಿರುಮಲೆಯ ಭಂಡಾರ ।
ಅಷ್ಟ ದಿಕ್ಕಿಗೆ ಸೂರೆ ಜೋಗಿ ಜಂಗಮಗಳಿಗೆ ॥
ವಿಟ್ಟಣಿಸಿ ಕುಂಭಕೋಣೆಯಲಿ ಕಲಹಗಳಾಗಿ ।
ಕೆಟ್ಟು ಜೋಗಿಯರಳಿದರೊ ॥೧೦॥

ಹಳ್ಳಿ ಹಟ್ಟಿ ಸತ್ತೆ ಗಿಡ ಬೆಟ್ಟ ಸೇರ್‍ಯಾವು ।
ಕೊಳ್ಳಗಳ ಬರಿದಿನ್ನು ಸೀಮೆಗಳನಾಳ್ಯಾರು ॥
ಡಿಳ್ಳಿಯವರೆದ್ದು ರಾಮೇಶ್ವರಕೆ ನಡೆದಾರು ।
ಜೊಳ್ಳು ಮಾಡ್ಯಾರು ದುರ್ಗವನು ॥
ತಳ್ಳಿ ಮಾಡ್ಯಾರು ಹಂಪಿಯ ವಿರುಪಾಕ್ಷನಲಿ ।
ಕೊಳ್ಳಿಗಣ್ಣನ ಗಿರಿಯ ಮೇಲಿಂದ ನೂಕ್ಯಾರು ॥
ಮಿಳ್ಳಿ ಗೋಹತ್ಯ ಮಾಡಿ ಗಲಭೆದ್ದು ಕಡಿದಾಡಿ ।
ಹಳ್ಳ ಹರದೀತು ನೆತ್ರ ನೋಡಿ ॥೧೧॥

ಇಂದುಧರ ಭಕ್ತರಿಗೆ ಜಂಗಮಕೆ ಪಾದವನು ।
ತಂದೆ ಸಿರಿಯಾಳನಿಕ್ಕಿದನು ಖರಸಂವತ್ಸರದೊಳಗೆ ॥
ನಂದನಕೆ ವಿರುಪಾಕ್ಷ ಲಿಂಗ ಮಾತಾಡ್ಯಾನು ।
ಗಂದಳವನೈಕ್ಯ ಮಾಡ್ಯಾರು ॥
ಮಂದ ಮಾರುತ ಬೀಸಿ ನರರೆಲ್ಲ ಬಿದ್ದಾರು ।
ಕಂದ ಗಣನಾಥಗಭಯವ ಗಂಗೆ ಕೊಟ್ಟಳು ॥
ಹಿಂದಣ ತೆರನಲ್ಲ ನಿರ್ಮ್ಮಾಣೆ ನಿಶ್ಚಿಂತ ।
ಇಂದುಮುಖಿ ಗಂಗೆಯಲುದಯವು ॥೧೨॥

ಶಾಲಿವಾಹನ ಶಕೆಯು ಸಾವಿರದ ನಾನೂರು ।
ಮೇಲೆ ಅರವತ್ತನೆ ಹೇವಿಳಂಬಿ ಸಂವತ್ಸರದ ॥
ಪಾಲ್ಗುಣವು ಬಹುಳ ಅಮವಾಸೆ ಮಧ್ಯದಲಿ ।

ಲೀಲ ಗಂಗೆಯಲುದಯವು ॥
ಬಾಲಕರ ಶಿರವ ಕೊಯ್ದಿಡಾಡಿ ಬೆಳಗ್ಯಾರು ।
ಮೇಲಿಂದ ಕರಿಯ ಮಲ್ಲಿಗೆ ಮಳೆಯು ಸುರಿದಾವು ॥
ಶೀಲೆದ್ದು ಕಲ್ಲು ಪ್ರತಿಮೆಗಳು ಕುಣಿದಾಡ್ಯಾವು ।
ಕಾಳಗತ್ತಲೆಯಾದೀತು ॥೧೩॥

ಕೇಳು ದೇವರ ದೇವ ಭಾಳಲೋಚನ ಸಿರಿಯ ।
ಹೇಳುವರಿಗಳವಲ್ಲ ಅಪ್ಪಣ್ಣನುದಯವನು ॥
ಸೀಳಿತು ಭೂಮಿ ಅದರೊಳಗಿಂದ ಗರ್ದಿಸುತ ।
ವ್ಯಾಳ್ಯ ಕಂಡ ಭಕ್ತರು ॥
ಕೋಳುಗೊಟ್ಟನು ಶಿರವ ಪ್ರತ್ಯಕ್ಷವಾದಲ್ಲಿ ।
ತೋಳೆತ್ತಿ ಕೊಂಡಾಡಿ ಸುರಿದು ಪುಷ್ಪದ ಮಳೆಯು ॥
ಕಾಳೆಲೆಯ ಮುಂದೆ ಅಪ್ಪಣ್ಣ ತನ್ನಯ ಶಿರವ ।
ಬಾಳದಲಿ ಗರಿಗರನೆ ಕೊಯ್ದಿಟ್ಟ ॥೧೪॥

ತೆತ್ತೀಸಕೋಟಿ ದೇವರ್ಕಗಳನಿಳಿತಂದು ।
ಉತ್ತಮದ ಪುರದೊಳಗೆ ಇದಿರುಗೊಂಡಮರರು ॥
ಕರ್ತ ನಂದೇಶ ಚನ್ನಬಸವ ಇಂದ್ರನು ।
ಇತ್ತಲೆ ತಂದು ಗಂಗೆಯನು ॥
ಎತ್ತಿ ಸಿದ್ಧಗೆ ಮದುವೆಯ ಮಾಡಿ ಗಿರಿಯಲ್ಲಿ ।
ಮುತ್ತೈದೆ ಗಂಗೆ ಗೌರಿಗೆ ಸೋಬಾನ ಪಾಡ್ಯಾರು ॥
ಅಸ್ತಿಮುಖದನ ಶಿರವು ಪಿಡಿದು ಶಿರಿಯಾಳನು ।
ಇತ್ತರದ ಶಿರಗಳಿಗೆ ವರವಿತ್ತ ॥೧೫॥

ಭರದಿಂದ ಲೇಖೆಯನು ಕರೆದು ಕೊಟ್ಟನು ಎನಗೆ ।
ಹರಿದು ಬಂದೆನು ಗಂಗೆ ನಿಮ್ಮ ಶ್ರೀ ಚರಣಕ್ಕೆ ॥
ಬರೆಯುತಿದ್ದರು ಹಿಂದೆ ಮತ್ತೊಂದು ಲೇಖೆಯನು ।
ಸಿರಿಯ ಬಹ ಘನಗಳ ॥
ಧರೆಯೊಳಗೆ ಮನಿಮನಿಗೆ ನೀಲೆ ಶಿಲೆಗಳಾಗಿ ।
ಕುರುಹು ತೋರೆನಯ್ಯ ಕುಂದಿಲ್ಲ ನಿಮ್ಮಾಣೆ ॥
ಕರಿಮುಖಗೆ ಒಪ್ಪಿಸಿದೆ ಶರಣರಿದನೋದುವುದು ।
ಹರ ಹರ ಶರಣಾರ್ಥಿಯೆ ॥೧೬॥

■

೪

ಅಂಡಜಾಂಡ ಬ್ರಹ್ಮಾಂಡಲದೊಳಗೆ ಮಹಾ ।
ಲೆಂಡ ರುದ್ರಾವತಾರ ತಾಳಿದರಹೊ ॥ಪಲ್ಲ॥

ಧಿಗಿಲು ಧಿಗಿಲುಯೆಂದು ಕುಣಿದರೊ ಇನ್ನು ।
ಜಗದೊಳು ತುಳಿ ತುಳಿದಾಡ್ಯಾರೊ ॥
ಗಗನವ ಹಿಡಿದು ಅಲ್ಲಾಡ್ಯಾರೊ ।
ಮುಗಿಲು ನಕ್ಷತ್ರಗಳುದಿರ್ಯಾವಯ್ಯ ॥೧॥

ಭೂತಳದ ಮರ ಅಲ್ಲಾಡ್ಯಾವೊ ।
ಪಾತಕ ಹಣ್ಣೆಲೆ ಉದುರ್ಯಾವೊ ॥
ಮಾತಿನ ಗಲಭೆಗಳೆದ್ದಾವೊ ಇನ್ನು ।
ಮೋತರಾಗಿ ಬಿದ್ದು ಹೋದರಯ್ಯ ॥೨॥

ಹಿಂಚು ಮುಂಚುಗಳಾದಾವೊ ।
ಪಂಚ್ಯಂಗಳು ಹುಸಿ ಹೋದಾವೊ ॥
ಗೊಂಚಿಲಿ ನವಿಲಾಟನಾಡ್ಯಾರೊ ಇನ್ನು ।
ಸಂಚಿನ ಬ್ರಹ್ಮರಡಗ್ಯಾರಯ್ಯ ॥೩॥

ಮೂರು ರಾಯರ ಹಲ್ಲ ಕಿತ್ಯಾರೊ ಇಂಥ ।
ಮೂಡಲ ಸೂರ್ಯನ ತಡದಾರೊ ॥
ವಡಗಣ್ಣನ ಕಣ್ಣ ಕಳದಾರೊ ಇನ್ನು ।
ಅಲ್ಲಿಗಲ್ಲಿಗಿರಿದು ಕೆಡವ್ಯಾರಯ್ಯ ॥೪॥

ಇಬ್ಬರು ಮಕ್ಕಳು ಹುಟ್ಯಾರೊ ಇನ್ನು ।
ಒಬ್ಬುಳಿ ಮಾಡಿಕೊಂಡು ಬಂದಾರೊ ॥
ಕಬ್ಬ ಕಡಿದ ಹಾಗೆ ಕಡಿದಾರೊ ಇಂಥ ।
ಕೊಬ್ಬಿದ ಹೆಣಗಳ ಸುಟ್ಟರಯ್ಯ ॥೫॥

ಕಾಲ ವರ್ತಮಾನ ಕಳದಾರೊ ಇನ್ನು ।
ಹೊಲಿ ಮಲ್ಲನಾಟನಾಡ್ಯಾರೊ ॥
ನಾರಿಗೆ ಸೀರೆಗಳ ಬಿಗಿದಾರೊ ಇನ್ನು ।
ಮಿಗೆ ಮೀರಿದವರ ಬೊಬ್ಬಿರಿದರಯ್ಯ ॥೬॥

ತಳಕು ಸಿಡಿಲು ಮಿಂಚು ಅಡಗ್ಯಾವೊ ಇನ್ನು ।
ಮಳೆ ಬರು ಮೇಗಾದಿ ಕಟ್ಟ್ಯಾರೊ ॥
ನೀರು ನೆರಳು ತಂಪು ಇಲ್ಲವೊ ।
ಕೋರುಗೊಂಬಿನ ಕಾಡೆಮ್ಮೆ ಸತ್ತವಯ್ಯ ॥೭॥

ಸದೆ ಹುಲ್ಲ ಕಸಗಳನುರುಹ್ಯಾರೊ ಇನ್ನು ।
ವಸುಧಿಯ ಪಾಪವ ತೊಳೆದಾರೊ ॥
ವಿಷದ ಬ್ರಹ್ಮಾಂಡವ ಹರದಾರೊ ।
ಹಸನ ಮಾಡಿ ಮುಂದೆ ತೋರ್ಯಾರಯ್ಯ ॥೮॥

ಕುಳಿತು ಗದ್ದಿಗೆಗೊಂಡರೊ ಇಂಥ ।
ನವಕೋಟಿ ಸಿದ್ಧರು ಮಡಿದಾರೊ ॥
ಬೆಳ್ಳಿನ ಕಂಬವ ತಂದಾರೊ ಇನ್ನು ।
ಒಳಿತಾಗಿ ಛತ್ರವೆತ್ತ್ಯಾರಯ್ಯ ॥೯॥

■

೫

ಶರಣಾರ್ಥಿ ಸಾರಿ ಹೇಳಿದ ಶಿವಶರಣರೊಡನೆ ॥ಪಲ್ಲ॥
ಪ್ರಳಯ ಕಾಲ ಓಡಿಬಂತು ಪರಮ್ಮರಿಸಿ ಕೇಳಿರಯ್ಯ ॥

ಧರೆಗೆ ಕಾವಳಗವಿದು ಭೂಮಿ ತಲೆಯದೂಗುತ ।
ನಗೆಯ ಮಾತಲ್ಲ ನಾಡ ಬಗೆದು ಹಿಕ್ಕಿ ಕೊಲ್ಲುತಾರೆ ॥
ಮುಗುಳು ನಗೆಯ ನಗುತ ಮಾರಿ ಮುಂದೆ ಮುಂದೆ ಬಂದಳಮ್ಮ ॥೧॥

ರೂಢಿಯೊಳಗೆ ಒಂದು ಬಾರೆ ಸೇನೆ ಕೆರಳಿ ತೆರಳಿ ಬತ್ತು ।
ಕಾಳಮಾಸಗವಿದು ಕೋಳಾಹಳಮಾಡುತ ॥
ಬಾಳ ಗರ್ವದವರ ಮೇಲೆ ದಾಳಿ ಬಂತು ದಂಡು ತೆರಳಿ ।
ಕೇಡು ಬಂತು ನಾಡ ಮೇಲೆ ನೋಡಿ ಹೇಳ ಬಂದೆನಮ್ಮ ॥೨॥

ಮನದ ಮಚ್ಚರವನೆ ಬಿಟ್ಟು ನೆನೆದು ಶಿವನ ಪೂಜೆಮಾಡಿ ।
ಭರವಸ ಬೇಕು ಭಕ್ತರೊಡೆಯ ಬಸವನಾಣೆ ॥
ಹಿಡಿದು ಬಿಟ್ಟು ನೆನೆವ ಪಾಪಿ ಗುಡುಗು ಮುತ್ತಿಗೂಚವಾಗಿ ।
ಕಡಲ ಕಂದನಾಣೆ ಕೇಡು ನಡೆದು ಬೇಗ ಬಂದವಮ್ಮ ॥೩॥

ಅಲ್ಲಿಗಲ್ಲಿಗಲಗ ಹೂಡಿ ಬಲ್ಲಿದವರಿಗೆ ಕದನ ಹುಟ್ಟಿ ।
ಬಿಲ್ಲು ಬಿಲ್ಲು ಹಣಚಿ ಬೀದಿ ಬೀದಿಯಪ್ಪಂದು ॥
ಭಿನ್ನವಿಲ್ಲದೆ ಹೇಳಿಸುತಾರೆ ಚನ್ನಾಗಿ ತಿಳಿದು ನೋಡಿ ।
ನಿಮ್ಮಾಣೆ ಸಟೆಯಲ್ಲ ಚನ್ನಬಸವಯ್ಯನಾಣೆ ॥೪॥

ಅರಿಕೆ ಮಾಡಿ ಹೇಳಿಸುತಾರೆ ಅರಿತು ನಡೆವರೊಬ್ಬರಿಲ್ಲ ।
ಅರ್ತಿ ಆನಂದದೊಳಗೆ ದುರಿತ ಬಾಳವೊ ದೊಡ್ಡ ದುರಿತ ಬಾಳವೊ ॥
ದುರಿತದೊಳಗೆದ್ದು ಅರ್ಭಟವು ದುರ್ಜನರಿಗೆ ಲೆಂಡ ದೇವತೆ ।
ಬಂಡು ಮಾಡಿ ಕೊಲ್ಲಸ್ತಾಳೆ ಮಾರಿ ಮುಂದೆ ಬಂದಳಮ್ಮ ॥೫॥

ಕಟ್ಟಳಿಲ್ಲದಿಳಿದು ಬಂತು ಎಷ್ಟು ಕೇಡು ದುರಿತವು ।
ಲೆಕ್ಕವಿಲ್ಲದೆ ಬಿಟ್ಟಿತಮ್ಮ ದಿಕ್ಕು ದಿಕ್ಕಿಗೆ ಕೇಡು ॥
ದಿಕ್ಕು ದಿಕ್ಕಿಗೆ ಕೊಟ್ಟ ಕೊಟ್ಟಗಳೆದ್ದು ಸೀಮೆ ಕೆಟ್ಟು ನಡೆವ ದಿನವು ಬಂತು ।
ಅಷ್ಟಗ್ರಹಗಳು ಕೂಡಿ ಕಿಚ್ಚುಕೊಂಡು ಬಂದರಮ್ಮ ॥೬॥

ದೇಶವೆಲ್ಲ ನಾಶವಾಗಿ ಭಾಷೆಗೆಟ್ಟು ಹೋಗುವಾಗ ।
ದೇಶದೊಳಗೆ ಜಗದ ಒಂದು ಮಾತಿನರ್ಭಟ ಒಂದು ॥
ಬೇಸಿಗೆಯ ಬಿಸಿಲು ಬಂದು ಕಾಸಿಗೆಯ ಹತ್ತಿದಂತೆ ।
ಪಾತಕರಿದೆ ನಮ್ಮ ಮೇಲೆ ಭೂತ ತೆರಳಿ ಬಂದವಮ್ಮ ॥೭॥

ಹರನ ವಾಹನಿಳಿದು ಬಂದು ಧರೆಯನೊತ್ತಿ ಮೇವುತದೆ ।
ಸರ್ವಜನರು ಕೇಳಿ ಶರಧಿ ಬರುವ ದಿನಗಳು ॥
ಯಮನ ದಾಳಿ ಹೊಕ್ಕು ಬಂತು ಭುವನದೊಳಗೆ ಸೂತಕವ ।
ಸೂತಕವಳಿಯ ಬಂದರಮರ ಕಲ್ಯಾಣದವರು ॥೮॥

ಅಂತ್ರ ಅಂತ್ರದ ಮೇಲೆ ರಂಚು ಹುಡಿ ಬರುವ ಬರವು ।
ಹಿಂಚ ಮುಂಚ ನೋಡಿ ಹಂಚಿ ಹಾಕ ಬಂದರೊ ॥
ತಂತ್ರದಾರನು ಜಗವ ಚಂಚುಮಾಡಿ ಕೊಲ್ಲಸ್ತಾನೆ ।
ಪಂಚಮುಖದ ಲಿಂಗನಾಣೆ ಶರಣರೆಲ್ಲರು ಕೇಳಿ ॥೯॥

■

೬

ಬಲ್ಲಿದರು ಬಂದರಯ್ಯ ಎಲ್ಲ ಪ್ರಮಥರು ಸಹಿತ ।
ಅಲ್ಲಲ್ಲಿ ಕಾಳಗವೊ ಅಲ್ಲಮಪ್ರಭುದೇವರ ನಂದದೊಳಗೆ ॥
ಹುಲ್ಲು ಮೊರಗಟ್ಟೀಸಾಡಿದರು ॥ಪಲ್ಲ॥

ಬಂತು ಬಂತೆಂಬಜ ಬಯಲಾಗುತದೆ ನೋಡ ।
ನಿಂತು ಹೇಳಿಸುತಾರೆ ನುಡಿಯ ॥
ಶಾಂತಲಿಂಗನು ನಿಮ್ಮ ಸಾರಾಯ ಶಬ್ದದಲಿ ।
ಸಂತೋಷ ಸತ್ಯ ಶರಣರಿಗೆ ॥
ಮುತ್ತಿ ಹೋಗಲೊಮ್ಮೆ ಕತ್ತಲೆ ಕವಿದಾವು ।
ಹಂತಿಯನೆ ಕಟ್ಟಿ ಹೊಯ್ಯುವಾಗ ॥
ನಿಂತೇನು ಎಂದರೆ ನೆರಳಿಲ್ಲ ನಾ ಮಾಡಿ ।
ದಂತ ಬೆನ್ನಲಿ ಬಿಡದು ಕರ್ಮ ॥೧॥

ಇದರೊಳಗೆ ತನ್ನದೊಂದು ಉಳುವಿಕೊಂಬುದು ನೋಡ ।
ಹದುರಿ ಚದುರಿಗೆ ಬಂಬಮಿತ್ತು ॥
ಪದನ ಹೇಳಲಿ ಕೇಳೆ ಪಾಟಿಗೆಟ್ಟವ ನನ್ನ ।
ಹೃದಯ ಕಮಲವು ಶುದ್ಧವಿಲ್ಲ ॥
ಕದನವೆದ್ದೆಲ್ಲ ರಾಜ್ಯವು ಹಾಳಾಗಲಿಕೆ ।
ಹದನಾಯಿತಯ್ಯ ನಿಂದಕಗೆ ॥
ಉದಮದದ ನಂದಿರಾಯನ ನಂಬಿ ನೆನೆಯಲಿಕೆ ।
ಅದು ಸತ್ಯ ಸಾರಿ ಹೇಳಿದನು ॥೨॥

ಗಂಡರಿಗೆ ಗಂಡ ಪ್ರಚಂಡ ಬರುವದ ಕೇಳಿ ।
ಗಂಡುಡಿಗೆ ಎಲ್ಲ ಅಳಿದಾವು ॥
ಉಂಡುಟ್ಟು ಕೆಟ್ಟು ನಡೆವವಗೆ ಯಮನ ಬಾಧೆ ।
ಕಂಡ ಕಡಿಗಟ್ಟಿ ಒಡೆವಾಗ ॥
ಒಳಗಂಡನ ಜ್ಞಾನದೊಳಗಿರುವ ಪತಿವ್ರತೆಗೆ ।
ಗಂಡ ಬರುವನಕ ತಪಸಿಹಳು ॥
ಅಂಡು ಮಂಡಳಿಸೆ ಬುಡಪಟ್ಟರಸು ತಾನು ।
ಕಂಡು ಕೊಡುವನು ಅಷ್ಟಭೋಗಗಳ ॥೩॥

ಆಟಕಾರನು ಒಂದು ಆಡಿದನು ಧರೆಯೊಳಗೆ ।
ನೋಟಕಾರರು ಇಲ್ಲವಯ್ಯ ॥
ಪಾಟಿಗೆಟ್ಟವ ನನ್ನ ಪ್ರಪಂಚಗಳ ಬಿಡದೆ ।
ಕೋಪಿ ಕುಪರತಿಗಳ ಮಾಡುತಿಹೆ ನಾ ॥
ದೂಟಿಯೆಂದರೆ ಹರಿದು ಮುಂಗಾಲ ಕೆದರುತಲಿ ।
ಪಾಟು ಮಾಡ್ಯಾರು ಬಲ್ಲವರು ॥
ದೂಟಿಸಿ ಹಿರಿಯರನು ನುಡಿದ ಕಾರಣದಿಂದ ।
ಬೇಟೆಕಾರನ ಬಲಿಗೆ ಬಿದ್ದೆ ॥೪॥

ಉಳಿಯಬಾರದು ಪಾಪಿ ಲೋಕಾದಿ ಲೋಕದೊಳು ।
ಅಳಿಯದವರು ಬಂದರಯ್ಯ ॥
ತುಳಿಯಗೊಡುತಾರೆ ಸತ್ಯರು ಬಂಬ ಭರಕೆ ।
ಬೆಳಗ ನೋಡಲಿ ಎನ್ನ ಅಳವೆ ॥
ಉಳುವಿಯ ದಿಕ್ಕಿಂದ ಹೇಳಿಸುತ ಬರುತಾರೆ ।
ಉಳಿಯ ಬಂದವರ ನಾನರಿಯೆ ॥
ಉಳಿಯ ಬಲ್ಲೆನು ಪಾಪಿ ದೈವದೋಲಗನೊಲ್ಲೆ ।
ಅಳುವಾಗಿ ಅಳಿದು ಹೋದೆನು ॥೫॥

■

೭
ಕರಿಮುಖನೆ ಕೇಳಯ್ಯ ನೀನು ಎನ್ನ ಒಡೆಯ ।
ಬರುವ ಬರವ ಕುರುಹ ಹೇಳೇನು ॥ಪಲ್ಲ॥

ಒಂದೆರಡು ಮೂರು ನಾಲ್ಕು ಐದು ದಿನ ॥
ಸಂಧಿಸಿದ ಸಮಯದಲಿ ॥
ಬೃಂದವನನಿನ್ನು ಒಂದು ಕೂಗಿತ್ತು ॥೧॥
ಮೂಡಲ ದಿಕ್ಕಿಲೊಂದು ವಿಸ್ಮಯ ।
ಮೂಡಿ ಬರುತದೆ ಅರ್ತಿಲಿ ॥

ಜೋಡಿಸಿದ ಕುದುರೆಗೆ ಕೂಡಲೆರಗಿತ್ತು ॥೨॥
ಜೋಕುಮಾರನ ಹಾಡುತ ನಿಮಗೆ ಇವು ।
ಸಾಕ್ಷಿಯಿದು ನಿಮಗೆ ಎಲ್ಲ ॥
ನೂಕಿ ಮುಗದೀತು ವ್ರತವು ಲೋಕದರ್ಭಟ ॥೩॥

ಮುಗಿದ ವ್ರತದ ಬತ್ತಕ್ಕೆ ತೆವರೆಲ್ಲ ।
ತಗ್ಗುಗಳಾಗುತ್ತೈತೆ ॥
ಹೆಗ್ಗಾಳೆ ಊದುತ್ತೈತೆ ಹೇಮಾದ್ರಿಯಲಿ ॥೪॥

ಹೇಮಗಿರಿ ಮನೆಗೆ ಬಲಿಯ ಹಾಕುತದೆ ।
ಹೇಮಲಿಂಗನ ಮಾಯದಿ ॥
ತಾಮಸನ ಮಗಳು ಸಿಕ್ಕಿಸಿ ಮೇಗಳನಾಳಿದಳು ॥೫॥

ತಾಮಸ ಗುಣಗಳಿಂದ ಇಷ್ಟುದಿನ ।
ಸೀಮೆಗಳನಳಿದಾಳು ॥
ಹರಿ ರಾಮರ ಕೈಯ ಕೊಟ್ಟ ಕಪ್ಪವನು ॥೬॥

ಸೊಡ್ಡಳಯ್ಯನ ಕೈಯಲಿ ಒಂದು ।
ಕಡ್ಡಿ ಫಲವಾಗುತ್ತೈತೆ ಇಂಥ ॥
ಗುಡ್ಡದಳ ಗುಡಿಗೆ ಕಳಸವಿಕ್ಕಿತು ॥೭॥

ಕೂಗಿದ ದನಿಯ ಕೇಳಿ ಆಗಳೆ ।
ತಾ ತತ್ತಿ ಒಡೆಯುತ್ತೈತೆ ಇನ್ನು ॥
ಸಾಗರದ ಪ್ರಭೆ ಹೋಗಿ ಸಗರಕ್ಕೆ ಸಂದಿತು ॥೮॥

ಕಾಜಿನ ಕಂಬವನೆ ತುಂಡು ಖಣದೊಳಗೆ ।
ಸೋಜಿಗವ ಮಾಡುತ್ತೈದಾರೆ ॥
ನೇಜವು ಮಿಂಚೆದ್ದು ಚೂಜಿ ನುಂಗಿತ್ತು ॥೯॥

ಗುಡಿಯ ಪವಳಿ ಮಧ್ಯದಿ ಒಂದು ।
ಗಿಡಗ ತಿತಿಯನೆ ಪಸರಿಸಿ ॥
ಸಿಡಿಯ ಹರಕಿಯನೊಪ್ಪಿಸಿ ಮಡಿದು ಹೋದಿತು ॥೧೦॥

ನುಂಗಿ ನೂಲನೆ ಸುತ್ತುತ ಈ ಭೂಮಿ ।
ಕಂಗಳ ಬಾಯ ತೆರೆಯುತ ॥
ಇನ್ನು ಸಂಗನ ಶರಣರ ಮುಂಗಾಲು ಮೆರೆದಾವು ॥೧೧॥

■

೮

ಪತಿವ್ರತೆಯೆಂದು ಬೀಗುತೀನೆ ಎನ್ನ ।
ಹತ್ತಿಲಿದ್ದ ಭೂಕಾಂತೆ ನಗುತಿದ್ದಳಮ್ಮ ॥ಪಲ್ಲ॥

ಕೊಪ್ಪು ಪಟ್ಟಿಗೆಯಿಟ್ಟ ದಿನದಲಿ ।
ದಪ್ಪ ಪ್ರಾಯ ಪುರುಷರ ನೋಡಿ ॥
ಅಪ್ಪನೆಂದು ಕೆಟ್ಟು ಬೆರೆಸಿದ ಸಭದಿಂದ ।
ತಪ್ಪ ಹೊತ್ತುತಿರತಿನ ಬಂದೆನಮ್ಮ ॥೧॥

ಕಣ್ಣ ಕಾಡಿಗೆ ಅರಿಷಿನ ಹೂಸಿ ।
ಸಣ್ಣ ಪ್ರಾಯ ಪುರುಷರ ನೋಡಿ ॥
ಅಣ್ಣನೆಂದು ಕೆಟ್ಟು ಬೆರೆಸಿದ ಸಭದಿಂದ ।
ಉಣ್ಣಲಿಲ್ಲ ದೆತ್ತಿರುತಿನ ಬಂದೆನಮ್ಮ ॥೨॥

ಎಮ್ಮೆ ಹಯನ ಉಳ್ಳ ದಿನದಲಿ ।
ಕಮ್ಮನ ಹುವ್ವ ಮುಡಿವರ ನೋಡಿ ॥
ತಮ್ಮನೆಂದು ಕೆಟ್ಟು ಬೆರೆಸಿದ ಸಭದಿಂದ ।
ಹೆಮ್ಮೆ ಅಳಿದು ತಿರುತಿನ ಬಂದೆನಮ್ಮ ॥೩॥

ಭಾವಿಸಿ ಸಣ್ಣ ಬಣ್ಣವನುಟ್ಟು ।
ಜೀವ ಚೆಲುವ ಪುರುಷರ ನೋಡಿ ॥
ಮಾವನೆಂದು ಕೆಟ್ಟು ಬೆರೆಸಿದ ಮೂಳಿ ನಾನು ।
ಜೀವ ಹೋಗ ತಿರುತಿನ ಬಂದೆನಮ್ಮ ॥೪॥

ದೇವರಿಗೇರಿದ ಕುಪ್ಪಸ ತೊಟ್ಟು ।
ದಾವಾಗ ಕಾಮ ತಾಮಸಕೆ ನಾನು ॥
ಭಾವನೆಂದು ಕೆಟ್ಟು ಬೆರಸಿದ ಮೂಳಿ ನಾನು ।
ದೇವರಿಗೆ ಸಲ್ಲದೆ ತಿರುತಿನ ಬಂದೆನಮ್ಮ ॥೫॥

ಮಾಯದ ಹವಳದುಂಗುರವನಿಟ್ಟು ।
ಆಯದ ತನದಲಿರುತಲಿ ನಾನು ॥
ಮೈದುನನೆಂದು ಕೆಟ್ಟು ಬೆರೆಸಿದ ಮೂಳಿ ನಾನು ।

ಲಯದ ಮೇಲೆ ತಿರುತಿನ ಬಂದೆನಮ್ಮ ॥೬॥
ಬಳೆ ವಾಲೆ ಮೂಗುತಿ ಇಟ್ಟು ।
ಒಳ್ಳೆ ಪ್ರಾಯ ಪುರುಷರ ನೋಡಿ ॥
ಅಳಿಯನೆಂದು ಕೆಟ್ಟು ಬೆರಸಿದ ಮೂಳಿ ನಾನು ।
ಪ್ರಳಯದೊಳಗೆ ತಿರುತಿನ ಬಂದೆನಮ್ಮ ॥೭॥

ಮಗ್ಗಲು ಮಾಳಿಗೆಯುಳ್ಳ ದಿನದಲಿ ।
ನಗೆಮುಖದ ಪುರುಷರ ನೋಡಿ ॥
ಮಗನು ಎಂದು ಕೆಟ್ಟು ಬೆರಸಿದ ಮೂಳಿ ನಾನು ।
ಜಗದೊಳಗೆ ತಿರುತಿನ ಬಂದೆನಮ್ಮ ॥೮॥

ಗಂಡರು ಮಕ್ಕಳುಳ್ಳ ದಿನದಲಿ ।
ಮಂಡೆ ಹಿಕ್ಕಿ ಬೈತಲೆ ನಾನು ॥
ಕಂಡ ಹಿರಿಯರ ಬಯಸಿದ ಸಭದಿಂದ ।
ರಂಡೆಯಾಗಿ ತಿರುತಿನ ಬಂದೆನಮ್ಮ ॥೯॥

■

೯

*ಕಡೆ ಕಡೆಯಾಟಕೆ ಬಂದ ।
ನರಲೋಕಕೆ ದಾಳಿ ಹರಿದಿತ್ತೆಂದ ॥ಪಲ್ಲ॥

ಅಗ್ನಿಯಿಂದಲಿ ಎಬ್ಬಿಸಿ ತಂದ ।
ದಕ್ಷಿಣದವರ ಕೂಡಿಸಲೆಂದ ॥
ನರಬೇಟೆಯನಾಡುತ ನಡೆಯೆಂದ ।
ಕಲ್ಯಾಣದೊತ್ತಿನಿಲ್ವೇಳೆಂದ ॥೧॥

ಭೂಕಾಂತೆ ಬಾಯಿ ಬಿಟ್ಟಳೆಂದ ।
ಆರ್ಭಟವೆದ್ದೊಮ್ಮೆ ಕೂಗಿತೆಂದ ॥
ಬಯಲು ಬಯಲು ಮಾತಾಡಿತೆಂದ ।

---

*+ ಧರ್ಮಕಲ್ಯಾಣದ ಗುರುಗುಂಡ ಬಸವಯ್ಯನ ಪಾದವೇ ಗತಿ (ಮೂ)

ಧರೆ ತಲ್ಲಣವಾದಿತೆಂದ ॥೨॥
ಕೊಲ್ಲಾಪುರದಿಂದ ಕದನವ ತಂದ ।
ಬಳ್ಳಿಗಾವಿ ಮೊದಲೆ ಸುಡಲೆಂದ ॥
ಬಾಳ ಹುಯ್ಯಲನೆಬ್ಬಿಸಿ ತಂದ ।
ಕರೆಕರೆ ಕೋಪಿನ್ನು ವೆಗ್ಗಳವೆಂದ ॥೩॥

ಪೂರ್ವದಾದಿ ಮೂಲವ ತೆಗೆಯೆಂದ ।
ಸೋಮಮಂ ಪೂರ್ವದಾದಿ ಮೂಲವ ತೆಗೆಯೆಂದ ॥
ಸೋಮ ಮಂಗಳ ಬುಧನ ಕೊಲ್ಲೆಂದ ।
ಬೃಹಸ್ಪತಿ ಶುಕ್ರ ಶನಿವಾರವಿಲ್ಲೆಂದ ॥
ರಾಹು ಕೇತು ಗ್ರಹ ಸೂರಿಯೆಂದ ॥೪॥

ಉತ್ತರ ದಿಕ್ಕಿಂದ ಹೆಕ್ಕೊಮ್ಮೆ ಎದ್ದ ।
ಹುಚ್ಚಾಟಗೊಂಡೊಮ್ಮೆ ಇದಿರಾಗಲೆಂದ ॥
ಎರಡು ದಿಕ್ಕಿನೊಳು ಹರದಾಡಲೆಂದ ।
ಪೀರ ಮುಲ್ಲಾರ ಕದನಕೆ ತಂದಾ ॥೫॥

ನಟ್ಟನಡುವೆ ಅಲ್ಲಮ ನಿಂದೆನೆಂದ ।
ಆಕಾಶ ಬಾಣವನೆಚ್ಚದೆನೆಂದ ॥
ಮುಗಿಲು ನಡುಗಿ ಚಿಕ್ಕಿ ಉದುರ್ಯಾವೆಂದ ।
ಪ್ರಭುರಾಯ ಬಸವಣ್ಣ ಪಟ್ಟಕ್ಕೆ ಬಂದ ॥೬॥

■

೧೦

ಅವಘಡ ಬಂದಿದೆಯೊ ಲೋಕಕ್ಕೆ ।
ಅವಘಡ ಬಂದಿದೆಯೊ ॥
ಅವಘಡ ಬಂದಿದೆಯೊ ಲೋಕಾದಿ ಲೋಕಕ್ಕೆ ।
ಅವಘಡ ಬಂದಿದೆಯೊ ॥ಪಲ್ಲ॥

ಈಶಾನ್ಯ ಕೋಣಿಂದಲಿ ಜಗದೀಶ್ವರನು ಉದಯವಾದ ।
ರಾಶಿ ಬ್ರಹ್ಮಾಂಡವ ಮೆಟ್ಟಿದಾಗಲೆ ॥
ಮೋಸ ಹೋಯಿತು ಕಾಣಿರೊ ॥೧॥

ಸಿಡಿಲಿನರ್ಭಟವು ಇನ್ನು ಕಡಿ ಉಗ್ರವಾಗುತದೆ ।
ಪಡುವಲ ತಲೆದೋರಿ ನಡೆದು ಬೇಗ ಬಂದು ॥
ಹೆಡದು ಕೆಡಹಿತ್ತೆಲ್ಲರ ॥೨॥

ಗುಡು ಗುಡು ಗುಟ್ಟುತಲಿ ಇನ್ನು ಕಡಿ ಉಗ್ರವಾಗುತದೆ ।
ಬಡಗಲ ಬಾಗಿಲ ನಡಗಳ ಹೊಯಿ ॥
ಕೊಂಡು ತೊಡೆಗಳೆತ್ತಿಕೊಂಡಾವು ॥೩॥

ದಂಡು ಹೊರಡ ಹೇಳಿದ ಇಂಥ ।
ಮಂಡಲ ತುರುಕರನು ಇವರು ॥
ಲೆಂಡರು ಹದಿನೆಂಟು ವ್ಯಾಜ್ಯವ ಕೂಡಿಸಿ ।
ಕೊಂಡೊಮ್ಮೆ ಬರುತಾರೆ ॥೪॥

ದಾಳಿಯ ಕೆಂಧೂಳವೊ ಇನ್ನು ।
ಕೇಳಿ ನಗರವೆಲ್ಲ ॥
ಸಾಳೋರ ಪಂಥಿ ಪಡೆಯಲ್ಲ ।
ಸಂಹಾರ ಜೋಡಿಗೆ ಕಿಡಿ ಬಿದ್ದಾವು ॥೫॥

ಇರಳು ನಿದ್ದಿಲ್ಲದ ಹಾಗೆ ಈತ ।
ಬರದು ಲೇಖಿಯ ಕಳಹಿದ ॥
ಪರಮನ ಕರುಣ ಕಟಾಕ್ಷನ ।
ಕೃಪೆಯಿಂದ ರಾಜ್ಯವನಾಳ ಬಂದ ॥೬॥

■

೧೧

ಧರ್ಮಕಲ್ಯಾಣ ಸಂಗಯ್ಯ ಹೂಡಿದಾಟ ।
ಕರ್ಮಿ ನಾನಿನ್ನುವಾಡಾಟ ॥ಪಲ್ಲ॥

ದಿನ ದಿನಕೆ ಪುಣ್ಯಕೆ ಜಯವೊ ।
ಘನವಿನ್ನು ಕರ್ಮಕ್ಕೆ ಲಯವೊ ॥
ಜನಪತಿಗೆ ದುರಿತಗಳು ಘನವೊ ಇನ್ನು ।
ಅನುದಪೆ [ವ್ಯಾಧಿ] ಬರ ಭಯ ರೋಗ ಘನವೊ ॥೧॥

ನಿಮ್ಮ ಭಕ್ತಿ ಭರನಾದವೆಂದೆನುತ ।
ಕರ್ತು ನುಡಿ ಬಂದವಯ್ಯ ದೂರುತ ನೀವು ॥
ಸತ್ಯ ನಡೆ ಪಾಪ ಬೇಡೆನುತ ।
ದೂರ ವ್ಯರ್ಥನ ಕೇಳರೆಂದು ಬಿಟ್ಟರಯ್ಯ ದುರಿತ ॥
ಕರ್ಮಿ ನಾನಿನ್ನುವಾಡಾಟ ॥೨॥

ಸಾಕು ಬಿಡಿ ಕಳವು ಬೇಡೆಂದು ಇವರು ।
ಲೇಖೆ ಓದಿಸುತಾರೆ ಬಂದು ನೀವು ॥
ಬಾಕಿಯೊಳಗಾಗ ಬೇಡೆಂದು ಇನ್ನು ।
ಶಿಕ್ಷೆನಿಕ್ಕಿಸುತಾರೆ ಕರ್ತರು ಬಂದು ॥೩॥

ಸಾಕು ಪಾಪ ಬೇಡೆಂದು ದೂರಿ ಇವರು ।
ಲೋಕದೊಳು ಮೊರೆಗಟ್ಟಿ ಸಾರಿ ॥
ಸಾಕ್ಷಿ ಧರ್ಮ ಬೋಧೆಯ ತೋರಿ ಇನ್ನು ।
ಬಾಕಿನ ಕೇಳರೆಂದು ಬಿಟ್ಟರಯ್ಯ ಮಾರಿ ॥೪॥

ಸಂದ ಪ್ರಮಥರು ಬಂಬ ಭರಕೆ ನಮ್ಮ ।
ಚಂದವಳಿದಾವು ಕರ್ಮಕ್ಕೆ ನೀವು ॥
ಮುಂದೆ ಧರ್ಮವ ಬಲ್ಲಿರೊ ಮನಕೆ ಆಗ ।
ಸಂದು ಸಲ ಮರಹಾಗಿರೊ ಧರ್ಮಕಲ್ಯಾಣಕೆ ॥೫॥

■

೧೨

ಬಂದೆವಯ್ಯ ಬೊಬ್ಬೆ ನಿಂದರಗೊಡವು ಇನ್ನು ।
ಬಂಧನವು ಕರ್ಮವು ದಿನ ದಿನಕೆ ॥ಪಲ್ಲ॥

ಅಳಿದ ಗುಡಿ ಮನೆ ದೈವಗಳೆಲ್ಲ ।
ಬಳಲಿದವಯ್ಯ ಪಾಪಿ ನಿಮ್ಮಿಂದಲೆಲ್ಲ ॥
ಅಳಿದ ಗುಡಿಯ ಕರ್ತರು ಬಂದರಲ್ಲ ।
ಪ್ರಳಯವೊಡ್ಡಿತು ಪಾಪಕೆ ಮುಂದೆ ಹೊಲ್ಲ ॥೧॥

ಸತ್ಯರು ಕಟ್ಟಿದ ಕರೆ ಬಾವಿಯನು ।
ಒತ್ತಿ ಹರಗಿ ಕೆಯ್ಯ ಮನೆ ಮಾಡಿದೆನು ॥

ಭಕ್ತನೆಂದರೆ ಹಲ್ಲ ಕಿತ್ಯಾರಿನ್ನು ।
ಹೊತ್ತು ಹಾಕ್ಯಾರು ಪಾಪಿಯನಿನ್ನು ॥೨॥

ವ್ಯಾಧಿಯದು ಭಯರೋಗಗಳೆಲ್ಲ ।
ಗುರು ಹಿರಿಯರು ಬಂಬ ಬರಗಳಿಗಿನ್ನು ॥
ಸ್ಥಿರವಿಲ್ಲ ಪಾಪದ ಹಿರಿಯರಿಗಿನ್ನು ।
ಸೆರೆ ಸೂರೆಯಾಪದು ತಡವಿಲ್ಲವಿನ್ನು ॥೩॥

ಸತ್ಯ ಪುರಾತರು ಬರುತಾರೆ ಕೂಡಿ ।
ಕರ್ತರ ಗುಡಿಗಳನೊಡೆದು ನೋಡಿ ॥
ವ್ಯರ್ಥ ಪಡೆದರೆಂದು ಚಿಂತೆಯ ಮಾಡಿ ನಿಮ್ಮ ।
ಭಕ್ತರಿಗೆ ಗುಡಿ ಖುಸಿ ಬಿಡದಿನ್ನು ನೋಡಿ ॥೪॥

ಹೊನ್ನು ಹೆಣ್ಣು ಮಣ್ಣು ಸೆಳೆದರಲ್ಲ ।
ಸಣ್ಣ ಬಣ್ಣವನೆಲ್ಲ ಅಳಿದಾರು ಪಾಪವನೆಲ್ಲ ॥
ಕಣ್ಣುಗಾಣದಿದ್ದಿರಿ ಸುದಿನವಿಲ್ಲ ಇನ್ನು ।
ಉಣಲೀಸರು ಪಾಪಿಯ ಮುಂದೆ ಹೊಲ್ಲ ॥೫॥

ಲಿಂಗೈಕ್ಯರು ಬಂದು ಏನೆಂದರು ತಾವು ।
ಲಿಂಗಪೂಜೆಯ ಮಾಡುವ ಭಕ್ತರೆಂಬಿರಿ ನೀವು ॥
ಲಿಂಗದ ಗುಡಿ ಕಲ್ಲ ತರಬಹುದೆ ನೀವು ।
ನಿಮ್ಮ ಬಾಯ ಕುಟ್ಟಿ ಲಿಂಗವ ಸೆಳೆದಾರಿನ್ನು ॥೬॥

■

೧೩

*ಕರುಣಿ ನಂದಿರಾಯ ನಿಮ್ಮ ।
ಚರಣವ ನೆನೆದರುಳುಹಯ್ಯ ॥ಪಲ್ಲ॥

ವಿಷದ ಗಾಳಿ ಬೀಸಿ ಬೀಸಿ ಹೊಯ್ಯಲಿಕೆ ।
ದೇಶದಿಕ್ಕಿನೊಳಗೆಲ್ಲ ನರಳುತ ॥

* ಇದರ ಮೇಲೆ 'ಮುಖವಾಲ್ಯದ ನುಡಿಗಳು' ಎಂಬ ಬರೆಹವಿದೆ (ಸಂ)

ಕಸಬಾರಿಗಿಯನಿಕ್ಕಿ ಉಡಿಗಿ ಮಾರಿಯಮ್ಮ ।
ಹಸಿದು ಬಾಯ್ದೆರೆವದ ನೋಡಿರೊ ॥೧॥

ದಂಡಿನೊಳಗೆ ಮಾರಿ ಖಂಡೆವ ಹಿಡಿದಾಳು ।
ಅಂಡನೆ ಅಲ್ಲವದ ಕೇಳಿರೊ ॥
ಉಂಡ ಊಟಗಳ ಅಕ್ಕಬಾರದು ।
ದಂಡ ಕಂಡಣಿಯಹದ ನೋಡಿರೊ ॥೨।
।

ಸತ್ತಿಗೆ ನೆರಳಲಿ ಬಪ್ಪದೇವರ ಸು ।
ಚಿತ್ತದಿಂದ ಶರಣೆನ್ನಿರೊ ॥
ಇತ್ತರದಲಿ ಎಡವಂಕ ಮಾನ್ಯರ ಕೈಯ ।
ಭಕ್ತರಿಗೆ ಬೇಯವ ಕಳಹಿದ ॥೩॥

■

೧೪

ಬಂದೀಚೆ ಓಡಿ ದೇವರ ದೇವ
ನಿಮ್ಮ ಕುಂದದೆ ನೆನೆದರುಳಹಯ್ಯ ॥ಪಲ್ಲ॥

ಬಂದು ಮೊರೆ ಹೊಕ್ಕ ಭಕ್ತರಿಗೆ ನೀನು ।
ತಂದೆ ಕರುಣ ಮಾಡಬೇಕಯ್ಯ ॥
ಬಂಧಿಕಾನದೊಳು ಬಿದ್ದು ಹೊರಳುತೀವೆ ಗುರು ।

ನಂದಿ ಬಸವಪ್ರಭು ಉಳುವಯ್ಯ ॥೧॥
ಊಳಿಗವ ಮಾಡಿ ಆಳು ಆಗುತೀನೆ ।
ಕೇಳೆವಯ್ಯ ಧರ್ಮಬೋಧೆಯ ॥
ಕಾಳುಗತ್ತಲೆಗವಿದು ಕಾಣದಿವೆ ।
ಬಾಳ ಬದುಕು ಹೋಗಾಡಿ ಕೆಟ್ಟೆವು ॥೨॥

ಭೂಮಿಗೆ ಹೆಪ್ಪು ಕೊಟ್ಟು ಪಾಲಿಸುವ ।
ಸ್ವಾಮಿ ನಾನು ನೆನೆವೆನು ॥
ಕಾಮಿತ ಫಲವೀವ ನಂಬಿದರೆ ನಿ ।
ಸ್ಸೀಮನಮರಪುರ ದೇವರೆ ॥೩॥

■

೧೫

ಬೇಡಿಕೊಂಬ ಬನ್ನಿ ವರವನು ನಮ್ಮ ।
ಪಾಡಿ ಪಂಥವುಳ್ಳ ಗದ್ದಿಗಿರಾಯನ ॥
ಬೇಡಿಕೊಂಬ ಬನ್ನಿ ವರವನು ॥ಪಲ್ಲ॥

ಹತ್ತಿಯ ತಂದು ಒಂದು ಭಾವದಿಂದ ।
ಬತ್ತಿಯನ್ನೈದು ಮಾಡಿರೊ ॥
ಸತ್ಯಶರಣ ಬಸವೇಶಗಾರತಿಯನೆತ್ತಿ ಬಂಬ ।
ಮಿತ್ತಿನ ಭಾದೆಯ ಬಿಡಿಸಿಕೊಳ್ಳಿರೊ ॥೧॥

ಹುವ್ವಿಗೆ ಬಂತು ಕಾಯಿಗೆ ಬಂತು ।
ದ್ವಾರಿಗೆ ಬಂತು ನೋಡಿರೊ ॥
ಕಟ್ಟಿ ಒಯ್ವ ಮಾರಿ ಕಡೆಗೆ ಸಾರಳಿನ್ನು ।
ಬಡ ಘಟ್ಟದವರ ಸಾರದೂರ ಕೇಳಿರೊ ॥೨॥

ಮನೆ ಮನೆಗೆ ಮಹಾಮಾರಿ ಬರಲಿಕೆ ।
ಘನಮಹಿಮನ ಬೇಗ ನೆನಹಿರೊ ॥
ತಮತಮಗೆಲ್ಲ ವಾಲಗಕ್ಕೆ ಬಂದು ।
ಅನುಮಾನವಿಲ್ಲದೆ ನೆನೆಯ ದೇವರ ॥೩॥

■

೧೬

ಬೇಡಿಕೊಂಬ ಬನ್ನಿ ನಾಡ ಮಹಾಂತೆಲ್ಲ ।
ಬೇಡಿದ ವರವೀವ ನಂದೀಶ ॥ಪಲ್ಲ॥

ಕಟ್ಟಣಿಲ್ಲದೆ ದೇವರೆಲ್ಲ ಬಂದು ।
ಬೆಟ್ಟದೊಳಗೆ ಉದಯವಾಗಿ ॥
ಗಟ್ಯಾಗಿ ನೆಲೆಗೊಂಡರೆನುತಲಿ ।
ದೃಷ್ಟವ ತೋರೊ ನಂದೀಶ ॥೧॥

ಸತಿಪತಿ ಬಂಧು ಬಳಗ ಸ್ಥಿರವಹುದೆ ।
ಅತಿ ಬೇಗ ಬನ್ನಿ ಮರಕಾಗಿ ॥

ಗತಿಮುಕ್ತಿ ಫಲದಾಯ ಕಾಣಿರೊ ।
ಅತಿಶಯ ಬುಡಪಟ್ಟ ನಂದೀಶ ॥೨॥

ಮಕ್ಕಳು ಧನದಾನ್ಯ ಸಂಪತ್ತುಳ್ಳ ಕಾಲದಲಿ ।
ದೊಕ್ಕನೆ ಬನ್ನಿ ಪುರಕಾಗಿ ॥
ಮುಕ್ಕಣ್ಣನು ದೇವರ ದೇವ ಗತಿಯೆಂದು ।
ರಕ್ಷಿಸಿ ಸಲಹುವ ನಂದೇಶ ॥೩॥
।

ಅಂದು ಕಲ್ಯಾಣವು ಹರಿಯಿತೆನುತಲಿ ।
ಈ ಅಮರಕಲ್ಯಾಣವ ನೆರಹ ಬಂದೆ ॥
ಆನಂದದಿಂದಲಿ ಅಮರಕಲ್ಯಾಣವು ।
ಆನಂದ ಲೀಲೆಯನಾಡಿದ ॥೪॥

ಪಾಡಿ ಪಂಥವುಳ್ಳ ಅಮರಕಲ್ಯಾಣಕ್ಕೆ ।
ನಾಡ ನಾಡ ಭಕ್ತರು ಬನ್ನಿ ॥
ಬೇಡಿಕೊಂಬ ಬನ್ನಿ ಬಸವಲಿಂಗಯ್ಯನ ।
ಕೂಡಿತು ಕೂಡಲಸಂಗಯ್ಯ ॥೫॥

■

೧೭

ಸಿಕ್ಕಿ ಬಾಯ ಬಿಡುತಿಹವಯ್ಯ ಭೂಮಿ ಸ್ವಾಮಿ ।
ದಿಕ್ಕಾಗಿ ನಮ್ಮನುಳುಹಿ ಕಾಯಯ್ಯ ॥ಪಲ್ಲ॥

ನಗದ ಮೇಲೆ ಸುಖ ಸಾರಿಗೆ ।
ನಗ ಹೋದ ಬಳಿಕ ಕೊಂಬದು ದಾರಿಗೆ ।
ಯುಗ ಯುಗದಲಿ ಸಾರಿದವರಿಗೆ ।
ಬಗೆಗೊಳ್ಳದಾದೆ ಸತ್ಯರಿಗೆ ॥೧॥

ದೇವರೆ ನಿಮ್ಮ ಹೆಸರಿಗೆ ಇದು ।
ದಾವ ಕೆಲಸ ನಿಮ್ಮ ಬಿರುದಿಗೆ ॥
ಜೀವವ ಕಾಯೊ ಇಂದಿಗೆ ನೀನು ।
ದಾವಾಗಲಿ ಬುದ್ಧಿಗಲಿಸಿದಂದದಿ ॥೨॥

ಸಿಂಗಡಿ ಕಾಯಿ ಬ[ಲ]ದಿಂದ ಮೂರು ।
ಗಂಗೆಯ ಹಾಯುವುದರಿಂದ ॥
ಸಂಗನ ಬಸವ ನಿಮ್ಮ ನೆನಹಿಂದ ।
ಭಂಗ ಬಡಿಸಬೇಡ ನಂಬಿ ಸೈರಣೆಂಬೆ ॥೩॥

■

೧೮

ನಿತ್ಯತೃಪ್ತಿ ಭಕ್ತಿಯಾನಂದ ಲೀಲೆ ।
ಸತ್ಯಮೂರುತಿ ಕಾಯೊ ಬಸವಲಿಂಗ ॥ಪಲ್ಲ॥

ಮೊರೆಗಳು ದೇವರಿಗೆ ಮುಟ್ಟಲಿಬೇಕು ।
ಕರುಣಿ ಬಸವಲಿಂಗ ಕೇಳಬೇಕು ॥
ಹರುಷದಿಂದಲಿ ಭಕ್ತರು ಬರಲಿಬೇಕು ।
ಮುಂದೆ ಕೆರೆಗಳು ತುಂಬಿ ಕೋಡಿವರಿಯಲಿಬೇಕು ॥೧॥

ಸಕ್ಕರಿ ತುಪ್ಪದ ಮೇಲೆ ಜೇನ ಮಳೆಯೊ ।
ಅಕ್ಕ ಬರದ ಹೊಟ್ಟೆ ಬೇನೆಗಳು ॥
ಇಕ್ಕಿದ ಅಗಲವು ಪಂಚಾಮೃತವು ನಮ್ಮ ।
ರಕ್ಷಿಸಿ ಉಳುವಯ್ಯ ಕರುಣವು ಬೇರೆ ॥೨॥

ತಂದೆ ಹಡೆದು ಮಕ್ಕಳಿಗೆ ಕುದಿಯ ಮಾಡುವ ।
ಹಿಂದಕ್ಕೆ ಲೋಕ ಹುಟ್ಟಿ ದಯ ಕರುಣವಿಲ್ಲದೆ ॥
ಇಂದು ಮಳೆಯ ಬೇಡಿ ಬೇಡಿ ಮರಗುತಿವೆ ನಮ್ಮ ।
ನಂದಿಬಸವ ನಿಮ್ಮ ಧರ್ಮಕ್ಕೆ ಉಣಿಸೊ ಅಮೃತವ ॥೩॥

■

೧೯

ಶರಣು ನೇಮವ ಮಾಡಿದ ಫಲವು ಮುಂದೆ ।
ಹರಣ ಮೊದಲಿರುವುದು ಸುಖವು ॥ಪಲ್ಲ॥

ಬಲ್ಲಿದ ದೇವರ ಕರುಣವಾಯಿತೊ ।
ನಿಲ್ಲದೆ ಬಂದಿಕಾನವ ಬಿಟ್ಟರು ॥

ಎಲ್ಲರಿಗೆ ದುರಿತಗಳಿಟ್ಟರು ಪ್ರಭು ।
ಅಲ್ಲಮರಾಯನ ನೆನೆಯದೆ ಕೆಟ್ಟೆವೊ ॥೧॥

ನಿಲಿಕಿ ನೋಡಿದ ಮನೆಮಾರಗಳ ।
ಸಲಿಕೆ ಗುದ್ದಲಿ ಹಾಕಿ ಕೆಡಿವ್ಯಾರೊ ॥
ಒಲಿಕೆಯಲಿರಲಿಗೊಡರು ಪಾತಕರು ಮುಂದೆ ।
ನುಲಿಕಿಲಿ ಕಾಲಕಟ್ಟಿ ಎಳಸ್ಯಾರೊ ॥೨॥

ಬಿಡದೆ ನೆನೆವಂಥ ಭಕ್ತರನು ಅವರ ।
ತೊಡೆಯನೆ ಹೊಯಿದೆಬ್ಬಿಸುಣಿಸ್ಯಾರೊ ॥
ನಡೆವ ನುಡಿವಲ್ಲಿ ದೇವರಿಹರೆಂದೆನು ।
ನೋಡಿರೊ ಕರ್ಮಸಂಹರ ದೇವರ ॥೩॥

■

೨೦

*ದುಮ್ಮಿಸಾಲೆ ಇನ್ನು ಪಾಪಕ್ಕೆ ಉಳವಿಲ್ಲ ದುಮ್ಮಿಸಾಲೆ ।
ಬೆಂಬಿಡದ ಕೇಡಿಂಬಿಲ್ಲ ನಿಂದರ ದುಮ್ಮಿಸಾಲೆ ॥೧॥

ಅರಿಯೆವೆಂದೆನಬೇಡ ಗುರು ನುಡಿ ಬಂದವೆ ದುಮ್ಮಿಸಾಲೆ ।
ಮರೆಯ ಮಾತುಗಳಲ್ಲ ದುರಿತ ಘನ ಮುಂದೆ [ದುಮ್ಮಿಸಾಲೆ] ॥೨॥

ಆಸೆಮಾಡಿ ಬಂದ ವೇಷದ ಮಾತಲ್ಲ ದುಮ್ಮಿಸಾಲೆ ।
ಮೋಸವೆಂದೆನಬೇಡ ಈಶ ಹೇಳಿಸುತಾನೆ ದುಮ್ಮಿಸಾಲೆ ॥೩॥

ಹೊಟ್ಟೆಯ ಕಿಚ್ಚಿಗಾಗಿ ಕಟ್ಟಿದ ನುಡಿಯಲ್ಲ ದುಮ್ಮಿಸಾಲೆ ।
ಸೃಷ್ಟಿಗೀಶ್ವರ ಮೊರೆ ಇಟ್ಟು ಹೇಳಿಸುತಾನೆ ದುಮ್ಮಿಸಾಲೆ ॥೪॥

ಜೋಳಕಾಗಿ ಬಂದು ಹೇಳುವ ಮಾತಲ್ಲ ದುಮ್ಮಿಸಾಲೆ ।
ಕೇಳೆಂಟು ದಿಕ್ಕು ತಳಮೇಲು ಆದೀತು ದುಮ್ಮಿಸಾಲೆ ॥೫॥

---

* ಇದರ ಮೇಲೆ 'ದುಮ್ಮಿಸಾಲೆ' ಎಂಬ ಶೀರ್ಷಿಕೆಯಿದೆ (ಸಂ)

ಭಯವೆದ್ದು ಬಡದೀತು ನಯವಾಗಿ ಮುಂದಿನ್ನು ದುಮ್ಮಿಸಾಲೆ ।
ಸ್ವಯವಲ್ಲ ಸಂಸಾರ ಸಾಯಸ ಬಿಡಸೀತು ॥೬॥

ನಾಕು ದಿಕ್ಕಿನ ರಾಯರು ಏಕವಾಗಿ ಹೊಡದಾಡಿ ದುಮ್ಮಿಸಾಲೆ ।
ಲೋಕದೊಳಗೆ ಜನ ನೂಕು ನುಗ್ಗಾಗಿದೀತು ದುಮ್ಮಿಸಾಲೆ ॥೭॥

ಅರಸು ಅರಸುಗಳೆದ್ದು ಬೆರಸಿ ಕಡಿದಾಡೆ ದುಮ್ಮಿಸಾಲೆ ।
ಹರಿದು ರಕ್ತದ ಹಳ್ಳ ತಿರಿಗಿ ಕಣ್ಣುಗಳಾಡೆ ದುಮ್ಮಿಸಾಲೆ ॥೮॥

ಕತ್ತಲೆ ಗುಡಿಸ್ಯಾಗ ಮತ್ತೆ ತಮ್ಮೊಳು ತಾವೆ ದುಮ್ಮಿಸಾಲೆ ।
ಮತ್ತಣ್ಣ ತಮ್ಮ ತಂದೆ ತತ್ತರದರದಾಡಿ ದುಮ್ಮಿಸಾಲೆ ॥೯॥

ರಾಯ ರಾಯರೆಲ್ಲ ಬಾಯ ಬತ್ತುತಲಾಗ ದುಮ್ಮಿಸಾಲೆ ।
ಸಾಯಸ ಬಟ್ಟಾರು ಕಾಯಕ್ಕೆ ಉಳುವಿಲ್ಲ ದುಮ್ಮಿಸಾಲೆ ॥೧೦॥

ನಾಕು ದಿಕ್ಕಿಗೆಲ್ಲ ಏಕ ಸೂರ್ಯಗಳೆದ್ದು ದುಮ್ಮಿಸಾಲೆ ।
ಆಕಡೆಗೀಕಡೆ ಹೊಗಲಿ ಠಾವಿಲ್ಲ ದುಮ್ಮಿಸಾಲೆ ॥೧೧॥

ಎಂಟು ದಿಕ್ಕಿಗೆಲ್ಲ ಗಂಟಿಕ್ಕಿ ರಾಜಿಕ ದುಮ್ಮಿಸಾಲೆ ।
ಉಂಟಾಗಿ ಬೊಬ್ಬೆದ್ದು ಕಂಟಕ ಘನವಾಗಿ ದುಮ್ಮಿಸಾಲೆ ॥೧೨॥

ತಂದೆ ತಾಯ ಮುಂದೆ ಮಕ್ಕಳನೆಲ್ಲರ ದುಮ್ಮಿಸಾಲೆ ।
ಬಂಧಿಸಿ ಒಯ್ದಾರೊ ಸಂದೇಹವಿಲ್ಲ ಕೇಳಿ ದುಮ್ಮಿಸಾಲೆ ॥೧೩॥

ಗಂಡ ನೋಡನೋಡ ಹೆಂಡತಿನೆಳದೊಯ್ದು ದುಮ್ಮಿಸಾಲೆ ।
ಬಂಡು ಮಾಡುವುದು ಕಂಡೀತು ಜನವೆಲ್ಲ ದುಮ್ಮಿಸಾಲೆ ॥೧೪॥

ದನಕರವೆಂಬವು ನೆನವಿಗೆ ಒಂದಿಲ್ಲ ದುಮ್ಮಿಸಾಲೆ ।
ಘನವಾಗಿ ಸೂರೆದ್ದು ತನತನಗೊಯ್ದಾರೊ ದುಮ್ಮಿಸಾಲೆ ॥೧೫॥

ಮನೆಮಾರು ಎಂಬಿವು ಅನುಗಯ್ಯುಲುಳುವಿಲ್ಲ ದುಮ್ಮಿಸಾಲೆ ।
ಮನ ಹೇಸದಲಿ ಬೆಂಕಿ ತನ ತನಗಿಕ್ಯಾರು ದುಮ್ಮಿಸಾಲೆ ॥೧೬॥

ಮಾಳಿಗುಪ್ಪರಿಗೆಯ ಮಳಿಗೆಯಲಿ ಕುಳಿತಿರೆ ದುಮ್ಮಿಸಾಲೆ ।
ದಾಳಿಬಂದವರಿಗಾ ವೀಳ್ಯದ ಅಡಿಗಬ್ಬು ದುಮ್ಮಿಸಾಲೆ ॥೧೭॥

ನಿಂದರ ನೆರಳಿಲ್ಲದಂದವ ಮಾಡುತ ದುಮ್ಮಿಸಾಲೆ ।
ಬಂದೀತು ಬಲು ಭಯ ಸಂದೇಹವಿಲ್ಲ ಕೇಳಿ ದುಮ್ಮಿಸಾಲೆ ॥೧೮॥

ಕರಕಿಯ ಒಳಗೆಲ್ಲ ಮರ ಬೆಳೆದಡಿವ್ಯಾಗಿ ದುಮ್ಮಿಸಾಲೆ ।
ಕರಿ ಕಾಡಕೋಣ ಹುಲಿ ಕರಡಿ ಹಂದಿಗಳಾಡಿ ದುಮ್ಮಿಸಾಲೆ ॥೧೯॥

ಊರಿಗೆ ಹೋಗಲು ದಾರಿ ಬಟ್ಟೆಗಳಿಲ್ಲ ದುಮ್ಮಿಸಾಲೆ ।
ಚೋರರಟ್ಟುಳಿ ಘನ ಮೀರಿ ಮಿಕ್ಕುದು ಭಯ ದುಮ್ಮಿಸಾಲೆ ॥೨೦॥

ಊರುಗಳೊಳು ಕೇಡು ಆರಣ್ಯ ಲೇಸೆಂದು ದುಮ್ಮಿಸಾಲೆ ।
ಯಾರು ಎನ್ನದೆ ಇನ್ನು ಸೇರ್ಯಾರು ಅಡವಿಯ ದುಮ್ಮಿಸಾಲೆ ॥೨೧॥

ಮಡದಿ ಮಕ್ಕಳು ತಾನು ಹೆಡಗಿ ಮರನ ಹೊತ್ತು ದುಮ್ಮಿಸಾಲೆ ।
ಅಡವಿಯನೆ ಸೇರಿ ಗಿಡವನೆ ಮನೆಮಾಡಿ ದುಮ್ಮಿಸಾಲೆ ॥೨೨॥

ಅಟ್ಟುಂಬ ಅಡವಿಯೊಳು ಹುಟ್ಟಿದ ಶಿಶುವಿಗೆ ದುಮ್ಮಿಸಾಲೆ ।
ಕಟ್ಯಾರೊ ಅರವಿಯ ತೊಟ್ಟಿಲನೆ ಮಾಡಿ ದುಮ್ಮಿಸಾಲೆ ॥೨೩॥

ಆರು ಉಳಿಯದಂತೆ ಬಲು ಸೂರಿ ಮಾಡಲು ದುಮ್ಮಿಸಾಲೆ ।
ಹರಿದು ತಪ್ಪಲ ತಂದು ಮರೆಮಾಡಿ ಅಭಿಮಾನ ದುಮ್ಮಿಸಾಲೆ ॥೨೪॥

ಉಡಲಿಲ್ಲದ ಭಯ ಉಣಲಿಲ್ಲದ ಬರ ದುಮ್ಮಿಸಾಲೆ ।
ಒಡಲನ್ನ ಕಾಣದೆ ಮಿಡುಕುತಲಿರಬೇಕು ದುಮ್ಮಿಸಾಲೆ ॥೨೫॥

ಇಂತಪ್ಪ ಅಡವಿಯೊಳು ತಪ್ಪಲ ಹರಿತಂದು ದುಮ್ಮಿಸಾಲೆ ।
ಉಪ್ಪಿಲ್ಲದಲಟ್ಟು ಒಪ್ಪದಲುಣಬೇಕು ದುಮ್ಮಿಸಾಲೆ ॥೨೬॥

ಊಟಮಾಡಲಿಕ್ಕನ್ನ ನೋಟಕೊಂದಿಷ್ಟಿಲ್ಲ ದುಮ್ಮಿಸಾಲೆ ।
ಮೀಟಾದ ಬರ ಬೀಳೆ ಆಟ ನಮಗೆ ಮುಂದೆ ॥೨೭॥

ಹೆಂಡಿರನು ಮಕ್ಕಳ ಕೊಂಡೊಯ್ದು ಮಾರಲು ದುಮ್ಮಿಸಾಲೆ ।
ಕೊಂಡೆನೆಂಬವರಿಲ್ಲ ಬಂಡು ಬರುದಿಗಾಗಿ ದುಮ್ಮಿಸಾಲೆ ॥೨೮॥

ಕಾರಿದ ಕೂಳಿಗೆ ಕೇರೆಲ್ಲ ಹೊಡೆದಾಡಿ ದುಮ್ಮಿಸಾಲೆ ।
ಹೋರಾಟದೊಳು ಬಲ ಒದರಿ ಒದರಿ ಸತ್ತು ದುಮ್ಮಿಸಾಲೆ ॥೨೯॥

ಹೆಣನ ಹೊಟ್ಟೆಯ ತೋಡಿ ಮನ ಹೇಸದಲಿ ತಿಂದು ದುಮ್ಮಿಸಾಲೆ ।
ನೆನೆದು ಅನ್ನವನಾಗ ತನ ತನಗತವಾಗಿ ದುಮ್ಮಿಸಾಲೆ ॥೩೦॥

ಎಂಟು ದಿನಕೆ ಗಂಜಿ ಕಂಟಗತಗಳಾಗೆ ದುಮ್ಮಿಸಾಲೆ ।
ದಂಟು ಒರಗಿದಂತೆ ಗಂಟಿಕ್ಕಿ ಹೆಣ ಬಿದ್ದು ದುಮ್ಮಿಸಲೆ ॥೩೧॥

ಹೊನ್ನಿನ ಬಲದಿಂದ ಅನ್ಯಾಕೆಂದೆನಬೇಡ ದುಮ್ಮಿಸಾಲೆ ।
ಉನ್ನಂತ ಚೋರ ಭಯ ಮುನ್ನಾರೆ ಬಯಲವು ದುಮ್ಮಿಸಾಲೆ ॥೩೨॥

ಚೋರರಟ್ಟುಳಿಯಿಂದ ಯಾರಿಗೆ ಉಳುವಿಲ್ಲ ದುಮ್ಮಿಸಾಲೆ ।
ಸೂರ್‍ಯಾಡಿ ತಿನುತಲಿ ಸಾರಿಲಿ ಕುಳಿತಾರು ದುಮ್ಮಿಸಾಲೆ ॥೩೩॥

ಒಬ್ಬರ ಕೈಯಿಂದ ಒಬ್ಬರು ಸೆಳಕೊಂಡು ದುಮ್ಮಿಸಾಲೆ ।
ಉಬ್ಬಸ ಮಾಡ್ಯಾರೊ ಬೊಬ್ಬಿಗೆ ದಿಕ್ಕಿಲ್ಲ ದುಮ್ಮಿಸಾಲೆ ॥೩೪॥

ಕಳವಿನಟ್ಟುಳಿಯಿಂದ ಉಳಿಯದು ಒಡವೇನು ದುಮ್ಮಿಸಾಲೆ ।
ಬೆಳಗಿರುಳೆನ್ನದೆ ಸೆಳಕೊಂಡು ಒಯ್ದಾರು ದುಮ್ಮಿಸಾಲೆ ॥೩೫॥

ಸುತ್ತುವರಿದು ಬಂದು ಮುತ್ತಿ ಸುಲಿದುಕೊಂಡು ದುಮ್ಮಿಸಾಲೆ ।
ಮತ್ತೆ ಅಂಜದೆ ತಾವು ಹತ್ತಿಲಿ ಕುಳಿತಾರೊ ದುಮ್ಮಿಸಾಲೆ ॥೩೬॥

ಮಂದಿ ಬಲದಿ ನಾವು ಕೊಂದಾಡೆವೆನಬೇಡಿ ದುಮ್ಮಿಸಾಲೆ ।
ಮಂದಿ ಬಲಕೆ ರೋಗ ಬಂದೀತು ಬಲವಾಗಿ ದುಮ್ಮಿಸಾಲೆ ॥೩೭॥

ತಲೆಯ ಸುತ್ತಗಟ್ಟಿ ಬಲುಹುಣ್ಣು ಒಂದಾಗಿ ದುಮ್ಮಿಸಾಲೆ ।
ಹೊಲಸು ವೆಗ್ಗಳವಾಗಿ ನಿಲಲಿಲ್ಲ ಆಡಿಸ್ಯಾರೊ ದುಮ್ಮಿಸಾಲೆ ॥೩೮॥

ಕರ್ಣದ ಒಳಹೊರಗೊರ್ಣ ವರ್ಣದ ಹುಣ್ಣು ದುಮ್ಮಿಸಾಲೆ ।
ಕಣ್ಣ ಗುಡ್ಡಿಗಳು ಆ ಹುಣ್ಣಿಗೊಳೆವುತ ದುಮ್ಮಿಸಾಲೆ ॥೩೯॥

ಬಾಯಿಲಿ ಹುಣ್ಣುಟ್ಟಿ ಹಾಯಿದು ಹೆಡಕಿಲಿ ದುಮ್ಮಿಸಾಲೆ ।
ಆಯದಪ್ಪಿ ಮೂಗು ಬಾಯಲ್ಲ ಒಂದಾಗಿ ದುಮ್ಮಿಸಾಲೆ ॥೪೦॥

ಅಂಗೈ ಮೈಗೆ ಮುಂಗೈ ತೋಳೆಲ್ಲ ದುಮ್ಮಿಸಾಲೆ ।
ಹಿಂಗದೇಕ ಹುಣ್ಣು ಕಂಗೆಡಸುತಲದೆ ದುಮ್ಮಿಸಾಲೆ ॥೪೧॥

ಎದೆಬದಿ ಬೆನ್ನು ಹೊಟ್ಟೆ ನಾಭಿಯೊಳೆಲ್ಲ ದುಮ್ಮಿಸಾಲೆ ।
ಗುದಗುದನೆ ತಿಂದು ಎದೆಯೊಳು ಹೊಸ ಹುಣ್ಣು ದುಮ್ಮಿಸಾಲೆ ॥೪೨॥

ಹುಳ ಸುರಿವುತ ಹುಣ್ಣು ಕೊಳಕೆದ್ದು ನಾರುತ ದುಮ್ಮಿಸಾಲೆ ।
ಸೂಳೆಯರು ಆಡಸ್ಯಾರೊ ಹೊಳಿಗೆ ಶೋಭಿತವಾಗಿ ದುಮ್ಮಿಸಾಲೆ ॥೪೩॥

ತೊಂಬತ್ತಾರು ತೆರನೆಂಬ ಹುಣ್ಣುಗಳೆಲ್ಲ ದುಮ್ಮಿಸಾಲೆ ।
ಬೆಂಬಿಡದೆ ಬಂದು ತುಂಬ್ಯಾವು ಮೈಯೆಲ್ಲ ದುಮ್ಮಿಸಾಲೆ ॥೪೪॥

ಮುನ್ನೂರು ತೆರದವು ಉನ್ನಂತ ಬಾಹುಗಂಟು ದುಮ್ಮಿಸಾಲೆ ।
ಪನ್ನಂಗಧರ ಬಿಟ್ಟ ಅನ್ಯಾಯಗಳ ಮೇಲೆ ದುಮ್ಮಿಸಾಲೆ ॥೪೫॥

ಮುನ್ನೂರು ಅರವತ್ತು ಚೆನ್ನಾದ ರೋಗವು ದುಮ್ಮಿಸಾಲೆ ।
[ಅ]ನ್ಯವು ಬರುತವೆ ಇನ್ನು ತಡಗಳಿಲ್ಲ ದುಮ್ಮಿಸಾಲೆ ॥೪೬॥

ಇಪ್ಪತ್ತನಾಲ್ವರು ತಪ್ಪದಲೈತಂದು ದುಮ್ಮಿಸಾಲೆ ।
ಸರ್ಪಭೂಷಣ ಕೊಟ್ಟೆಂದೊಪ್ಪದಲುಡಗ್ಯಾರು ದುಮ್ಮಿಸಾಲೆ ॥೪೭॥

ಚಂಡಿಕದೇವಿ ಕಾಳಿ ಮಂಡಲದೊಳು ಬಂದು ದುಮ್ಮಿಸಾಲೆ ।
ದಂಡ್ಯದ ಪಾಪವನಂಡನಲೆದು ನುಂಗಿ ದುಮ್ಮಿಸಾಲೆ ॥೪೮॥

ಶಾಕಿನಿ ಡಾಕಿನಿ ಲೋಕದೊಳಗೆ ಬಂದು ದುಮ್ಮಿಸಾಲೆ ।
ಸಾಕೆಂದು ಎನ್ನದೆ ಆಕರಿಸಿಹರಾಗ ದುಮ್ಮಿಸಾಲೆ ॥೪೯॥

ಮಿತ್ತು ಮಸಣಿ ತಾವು ಮರ್ತ್ಯದೊಳಗೆ ಬಂದು ದುಮ್ಮಿಸಾಲೆ ।
ಮುತ್ತಿ ಮುರಿವಾಗ ಕತ್ತಲೆ ಕವಿದೀತು ದುಮ್ಮಿಸಾಲೆ ॥೫೦॥

ರುದ್ರ ಮಹಂಕಾಳಿ ಭದ್ರ ಮಹಂಕಾಳಿ ದುಮ್ಮಿಸಾಲೆ ।
ಇದ್ದಂಥ ಪಾಪವ ಮರ್ದಿಸಿ ನುಂಗ್ಯಾರು ದುಮ್ಮಿಸಾಲೆ ॥೫೧॥

ಕಂಕಾಳಿ ಮಹಂಕಾಳಿ ಝೇಂಕರಿಸುತ ಬಂದು ದುಮ್ಮಿಸಾಲೆ ।
ಅಹಂಕಾರಿ ಪಾಪಿಯ ಭೋಂಕನೆ ನುಂಗ್ಯಾವು ದುಮ್ಮಿಸಾಲೆ ॥೫೨॥

ಸುತ್ತಮುತ್ತಲಿ ಕಣ್ಣು ಚಕ್ರಮುಖದ ಬಾಯಿ ದುಮ್ಮಿಸಾಲೆ । ಅವಕೆ ।
ಹತ್ತೆವಾದ ಹಲ್ಲು ಕೆತ್ತಗುದ್ದಲಿಯಂತೆ ದುಮ್ಮಿಸಾಲೆ ॥೫೩॥

ಕೋರೆ ದಾಡಿ ದೈತ್ಯೆ ಮಾರುತ ಮುಂತಾಗಿ ದುಮ್ಮಿಸಾಲೆ ಇಂಥ ।
ಊರನಾಕರಿಸುತ ಉದಯಕೆ ಬರುತಾರೆ ದುಮ್ಮಿಸಾಲೆ ॥೫೪॥

ಬಂಡಿ ಗಾಲಿಯಂಥ ಕಿವಿಯವರು ಬೇರೊಂದು ಪೊಜನಿ ದುಮ್ಮಿಸಾಲೆ
ಹಾರಿ ಹಾರಿ ಏಳನೂರಾರು ಮುರಿದಾರು ದುಮ್ಮಿಸಾಲೆ ॥೫೫॥

■

೨೧

[೧]ಸಿದ್ಧಲಿಂಗನ ಶ್ರೀ ಚರಣವ ನೆನೆವೆನು ।
ಸದ್ಯೋಜಾತದ ಸಿರಿಯನ ॥
ಮುದ್ದು ಗಂಗೆಯ ಪಾದವ ಕಾವ ಶರಣನೆ ।
ಸಿದ್ಧಗಣೇಶ ಚಿತ್ತೈಸು ॥೧॥

ಉಳಿವುದು ಸತ್ಯ ಶರಣರು ಕೇಳಿರೊ ಮುಂದೆ ।
ಅಳಿವುದು ಪಾಪದ ಪಡೆಯು ॥
ಸುಳುಹುದೋರುತ ಬಂದನು ಸಿದ್ಧಸಿರಿಯನು ।
ನಳಿನಮುಖಿಯು ಪಾರ್ವತಿಗೆ ॥೨॥

ಹದಿನಾಲ್ಕು ಲೋಕದಿ ಮದನಡಗಿಸಿ ಶಿವ ।
ಮದನಾರಿ ಕೈಲಾಸದಲ್ಲಿ ॥
ಮುದದಿಂದ ತೆತ್ತೀಸಕೋಟಿ ದೇವರ್ಕಳು ।
ಒದಗಿ ವಾಲಗ ಮಾಡುತಿರಲು ॥೩॥

ಇದ್ದರೋಲಗದಲ್ಲಿ ಅಜ ಹರಿ ಶಶಿಕೋಟಿ ।
ಇದ್ದರು ರುದ್ರರು ಕೋಟಿ ॥

---

೧ + ಶ್ರೀ ಗುರುವೇ ಗತಿ ।ಚರಿತ್ರ। (ಮೂ)

ಇದ್ದರು ಶತಕೋಟಿ ಇಂದ್ರ ಆದಿತ್ಯರು ।
ಇದ್ದರು ಪದ್ಮ ಶಂಕಿನಿಯರು ॥೪॥

ಭಸಿತ ಕುಂಡಲ ಜಡೆ ಕೈಪು ಕಮಂಡಲ ।
ಹಸುವು ನಿದ್ರೆಯನರಿಯದವರು ॥
ಋಷಿಗಳೆಂಬತ್ತೆಂಟು ಕೋಟಿಗಳಿದ್ದರು ।
ವೃಷಭನ ಬೆನ್ನ ದೆಸೆಯಲಿ ॥೫॥

ಸುಲಿಪಲ್ಲು ರುದ್ರಾಕ್ಷಿ ಜನಿವಾರವು ಮುಂದೆ ।
ಗೆಲುವಿನ ವೇದ ಶಾಸ್ತ್ರಿಕರು ॥
ಬಲದ ಹಸ್ತದಲಿ ಜಪಮಾಲೆಯನೆಣಿಸುತ ।
ಸುಲಭ ದೇವಗೆ ಬಿನ್ನೈಸಿದರು ॥೬॥

ನೀರಗಾವಿಯ ದೋತ್ರವನುಟ್ಟು ಮೈಯಲಿ ।
ಹಾರುವ ಭೈರವೇಷದಲಿ ॥
ತೋರಿ ಹೋಹದು ಕೈಯ ಕುಂದಳ ಕಾಮಿಯ ।
ದಾರುಣಿಯೊಳು ಹೊಸ ವಿಪ್ರ ॥೭॥

ಕೊರಳ ರುದ್ರಾಕ್ಷಿಯ ಸರವು ।
ಉರದಲ್ಲಿ ಯಜ್ಞೋಪವೀತ ಕರ್ಣಕುಂಡಲ ॥
ವರಮುನಿ ಬಂದ ಆಶ್ರಮಕೆ ॥೮॥

ನಿಟಿಲ ನೇತ್ರನೆ ಒಂದು ರೂಪಾಗಿ ಬಂದನು ।
ಪಠಿಸುತ ಜಪ ಮಂತ್ರವನು ॥
ಪಿಟಿ ಪಿಟಿ ಎನುತ ಬೆರಳನೆಣಿಸುತ ಬಂದ ।
ಜಟದೇವಿ ಇದ್ದ ಆಶ್ರಮಕೆ ॥೯॥

ಗಂಗೆಯ ಶ್ರೀ ಚರಣಕ್ಕೆ ದಿಂಡುಗೆಡೆದನು ।
ಸಂಗಮೇಶ್ವರ ಶರಣೆನುತ ॥
ಗಂಗೆಯ ಪೂಜೆಯ ಕಣ್ಣದಣಿಯೆ ನೋಡಿ ।
ಮುಂಗುಡಿಯಲಿ ಹೊರಳಿದನು ॥೧೦॥

ಕಾಳಿ ಕಂಕಾಳಿ ಭೂದೇವತೆ ಶಂಕರಿ ।
ಮಳಲೆ ಮಹೇಷೆ ಮಹಾದೇವಿ ॥
ಘೀಳಿಡುತಲಿ ಅಸುರರು ದುರ್ಗಿ ಚಾಮುಂಡಿ ।
ಭಾಳಾಕ್ಷಿ ಪಾರ್ವತಿ ಶರಣು ॥೧೧॥

ಮನದಣಿವನಕ ಕೊಂಡಾಡಿದನು ಮುನಿ ।
ತನುದಣಿವನಕ ಹೊರಳಿದನು ॥
ಜನನಿಯ ಪೂಜೆ ಕಣ್ಣದಣಿಯೆ ನೋಡಿ ।
ಮುನಿ ನುಡಿಸಿದ ಗಜಮುಖನ ॥೧೨॥

ಏನಿರಯ್ಯ ಶರಣರು ಶರಣಾರ್ಥಿ ಪೂಜ್ಯ ।
ಇದೇನೆಂದು ಕೇಳಿದ ಏಕದಂತನ ॥
ಜ್ಞಾನದೊಳಿದ್ದು ಕಾಣಲಾರದೆ ಮುನಿಗೆ ।
ಸುಜ್ಞಾನಿ ನುಡಿದನು ಶಾರದೆಗೆ ॥೧೩॥

ಗಂಗೆಯ ತಪವಿದ್ದ ಡಿಂಗರಿಗರು ನಾವು ।
ಸಂಗಮೇಶ್ವರ ಬಹನಿಳಿದು ॥
ಶೃಂಗರಿಸುವುದು ಮುಪ್ಪುರವಿದು ಗಿರಿಯಲಿ ।
ಲಿಂಗ ಗಂಗಿಗೆ ಮದುವಿಹುದು ॥೧೪॥

ವೇಷವನರಿವರೆ ನಿಮ್ಮಿಂದ ರೂಹು ಇಲ್ಲ ।
ಭೂಷಣವಿಲ್ಲ ನಿಮ್ಮಾಣೆ ॥
ಈ ದೇಶವನಾಳ್ವುದಕೆ ಚನ್ನಬಸವಣ್ಣ ।
ಈಶ ನಂದಿಯು ಬಹನಿಳಿದು ॥೧೫॥

ನಿಮ್ಮಿಂದ ವ್ರತ ಶೀಲ ಸದ್ಭಕ್ತ ಸಜ್ಜನ ।
ವರ್ಮಗಳಿಲ್ಲ ವೇಳೆದ್ದು ॥
ಎಮ್ಮ ದೇಶಕೆ ಬನ್ನಿ ಉನ್ನಂತ ಭಾಗ್ಯವ ।
ಉಮ್ಮಾಯದಿಂದ ಕೊಡುವೆವು ॥೧೬॥

ಮನೆಯ ಕಟ್ಟಿಸಿ ಕೊಡುವೆವು ನಿಮ್ಮ ಪೈಕದ ।
ಘನವಾಗಿ ಬಂದ ಭಕ್ತರಿಗೆ ॥

ಮನವೊಲಿದೀವೆನು ಧನ ಧಾನ್ಯ ಪಶುಗಳ ।
ಅನುಮಾನವಿಲ್ಲವೇಳೆನಲು ॥೧೭॥

ಎನ್ನ ಸ್ವತಂತ್ರದ ಬದುಕೊಂದು ಕೋಟಿಯು ।
ಸನ್ನತದಿಂದಲಾರ್ದವನು ॥
ಚೆನ್ನಾಗಿ ನಿಮಗೆ ಈವೆನು ಚಿತ್ರ ಕೊಡುಗೆಯ ।
ಸನ್ಮತದಿಂದಲೊಪ್ಪಿಸುವೆ ॥೧೮॥

ಹಾಗೆಂದ ಮಾತನು ಕೇಳಿ ಗಜಮುಖನು ವಿ ।
ಪ್ರಗೆ ಒಂದು ಮಾರುತ್ರವ ನುಡಿದ ॥
ಇಂದು ನೀ ಕೊಡಲಿ ಕೊಳಲಿಕೆ ನೀನ್ಯಾರೆಂದು ।
ನೊಂದನು ಮನ ಸುಯ್ಯಲಿಡುತ ॥೧೯॥

ಲೇಸನಾಡಿದೆ ವಿಪ್ರ ನಿನಗಿಷ್ಟು ಕಾರುಣವೆ ।
ಭೂಷಣಗುಂಟೆ ಕೊಡುವರೆ ॥
ಈಶನಿಗಿಲ್ಲವು ಕೊಡುವರೆ ಚೋಳರಾಯಗೆ ।
ಸುರಿಸಿದ ಹೊನ್ನ ಮಳೆಗಳ ॥೨೦॥

ಕಣ್ಣ ಮೂಗಳನಿತ್ತನು ಕಾಳಿದಾಸಗೆ ।
ಹೊನ್ನ ಪಡಿಯು ನಂಬಿಯಣ್ಣಗೆ ॥
ಉನ್ನಂತ ಐಶ್ವರ್ಯ ಕೊಡುವರೆ ಶಿವಮುನಿ ।
ಬಣ್ಣನೆ ಬೇಡ ಚಿತ್ತೈಸು ॥೨೧॥

ಹಲವು ಪರಿಯಲಿ ಮಾತಾಡಿಸಿದನು ಮುನಿ ।
ಬಲಹು ಮನವೆಂಬುದನರಿತ ॥
ಜಲದೇವಿಗೆರಗಿ ಭಕ್ತರ ಕೈಯ ಬೀಳ್ಕೊಂಡು ।
ಕಲಹಪ್ರಿಯನು ಹೊರಹೊಂಟ ॥೨೨॥

ಪಡುವಲಾದ್ರಿಗೆ ಸೇರಿದನು ದಿನಕರ ಚಂದ್ರ ।
ಹೊಡಕರಿಸುತ ಪೂರ್ವದೆಸೆಗೆ ॥
ಸೊಡರುವರ್ಚಿಸಿ ನಾಲ್ಕು ದೆಸೆಗೆ ಗಂಗೆಯ ಪೂಜೆ ।
ಎಡೆಮಾಡುತಿದ್ದರು ಪರಿಚರರು ॥೨೩॥

ಪಂಚಮ ವಾದ್ಯವ ಮೊಳಗಲಿ ಭಕ್ತರು ।
ಕಂಚುಕಾರರು ಉಗ್ಘಸುತ ॥
ಪಂಚಬಾಣನ ಐಸಿರಿಯ ನಾ ಪಾಡಲಿ ।
ಮುಂಚಿತಪ್ಪಣ್ಣಿಗೊಂದು ನುಡಿಯು ॥೨೪॥

ಗಜಮುಖ ನೀ ಕೇಳು ಬಂದ ತಾ ನಾರದ ।
ಅಜ ಹರಿ ಸುರರಿಗಳಿಗಧಿಕ ॥
ಏನು ಕಾರಣವೆಂದರಿಯೆವು ದೇವರ ದೇವ ।
ಜ್ಞಾನ ತುಂಬಿದವು ಹೃದಯದಲಿ ॥೨೫॥

ಜನನಿಯ ಉಗ್ರ ತಪಸಿನಬ್ಬರವೆಂದು ।
ಜ್ಞಾನದಿ ಶಿವನು ಹೇಳಿದನು ॥
ಗಜಚರ್ಮಾಂಬರ ಸಿದ್ದ ಸಿರಿಯು ಬರುವ ಮುಂದೆ ।
ತ್ರಿಜಗವರಿವುದು ಭಕ್ತರನು ॥೨೬॥

ಜತನ ತಪ್ಪದಲಿದ್ದರು ಸದ್ಭಕ್ತರು ।
ಕತನ ಹುಟ್ಟಿತು ಬೀಜದ ಮೊಳೆಯೊ ॥
ಅತಿಸಮಯ ನಂದಿ ಸಿದ್ದ ಸಿರಿಯು ಬಹ ।
ಶ್ರುತಿ ಇದ ಕೇಳಿ ಸಜ್ಜನರು ॥೨೭॥

ಅತ್ತಲೇರಿದ ನಾರದ ಕೈಲಾಸಕ್ಕೆ ।
ಕರ್ತು ಶಿವನ ವಾಲಗದಿ ॥
ಸತ್ಯಶರಣರ ವಾರ್ತೆಯನೆಲ್ಲ ದೇವಂಗೆ ।
ಅತ್ಯಂತವಾಗಿ ಉಸುರಿದನು ॥೨೮॥

ಏನ ಹೇಳುವೆನಯ್ಯ ಮರ್ತ್ಯದ ಗಂಗೆಯ ।
ಕೋಮಲವಾದ ತಪವನು ॥
ಭಾವಿಸಿ ಹೇಳುವರಳವಲ್ಲ ಮಕ್ಕಳ ।
ಕಾವಲು ಗಂಗೆಯಂಘ್ರಿಯಲಿ ॥೨೯॥

ಹಿಂದಕ್ಕೆ ಮಾಡಿದ ತಪಸಿನ ತೆರನಲ್ಲ ।
ಮುಂದಕ್ಕೆ ನೋಡಲಾಶ್ಚರ್ಯ ॥
ಇಂದುಧರನೆ ನೋಡ ಚಿತ್ತೈಸುವುದೆಂದು ।
ಬಂದು ಬಿನ್ನೈಸಿದ ಮುನಿಯು ॥೩೦॥

ಯತಿ ಹರುಷದಲಿ ಕರೆಸಿದರು ಅಮರರ ।
ವೃಷಭನೊಳೇಕಾಂತವಾಡಿ ॥
ವಿಷಗೊರಳನು ನಂದಿ ಸಿದ್ದ ಸಿರಿಯನು ।
ಹಸನಾಗಿ ಮರ್ತ್ಯಕ್ಕಿಳಿದನು ॥೩೧॥

ಕಲ್ಲದೇವರುಗಳುತ್ತುಗೆಡಿ ನಲಿದವು ।
ಅಲ್ಲಲ್ಲಿ ನಕ್ಷತ್ರ ಉದುರಿ ॥
ತಲ್ಲಣಿಸಿತು ಭೂಮಿ ಕೂಪ ಜಲಗಳುಕ್ಕಿ ।
ಪಲ್ಲೈಸಿತು ಒಣ ಮರನು ॥೩೨॥

ಶೃಂಗರಿಸುವುದು ಮುಪ್ಪುರದೊಳು ಬಂದು ನಿಂದು ।
ಅಂಗವ ತಾಳಿ ಅಹೆರಾ ॥
ಜಂಗಮ ರೂಪಾಗಿ ನಂದಿ ನಾರದನ ಕೂಡಿ ।
ಗಂಗಾಧರನು ಬಂದ ಮಠಕೆ ॥೩೩॥

ರುಂಡಮಾಲೆಯು ಅಂಗದಟು ಕಟಿಸೂತ್ರ ।
ಕೊಂಡವು ಜಡೆ ಕಿರೀಟವು ॥
ತಂಡ ತಂಡದ ಮರುಳಿನ ಚಿಟ್ಟಿಗರು ಕೂಡಿ ।
ಕಂಡಿಂದುಧರ ನಡೆತಂದ ॥೩೪॥

ಒಂದು ಹಸ್ತದಲಿ ತ್ರಿಶೂಲ ಪಾದದ ಗೆಜ್ಜೆ ।
ಒಂದು ಹಸ್ತದದಲಿ ಜೋಳಿಗೆಯು ॥
ಚಂದ ಚಂದ ಹಾವಿಗಿಯ ಮೆಟ್ಟಿ ಸಿದ್ದ ಶಿಷ್ಯರು ಕೂಡಿ ।
ಗಂಗಾಧರನು ಬಂದ ಮಠಕೆ ॥೩೫॥

ಸೋಮವಾರ ದಿನ ನೈವೇದ್ಯ ಕಾಲದಿ ।
ದೇವಿ ಪೂಜೆಯ ಮಾಡುತಿರಲಿ ॥
ಕೋವಿದ ಸಕಲ ಸದ್ಭಕ್ತರು ಹಾಡಿ ಪಾಡುತ ।
ಕಾಮಾರಿ ಬಂದ ಬಾಗಿಲಿಗೆ ॥೩೬॥

ಭಿಕ್ಷ ದಯ ಧರ್ಮ ಭಿಕ್ಷ ಸದ್ಭಕ್ತರು ।
ಭಿಕ್ಷವ ನೀಡಿ ಸಜ್ಜನರು ॥

ಅಕ್ಷವತೀತಗೆ ಭಿಕ್ಷವ ನೀಡಲು ।
ಮೋಕ್ಷಜನ ತಪ ಫಲಸಿದ್ಧಿ ॥೩೭॥

ಬೇಡ ಬಂದಿರಿ ಭಿಕ್ಷವ ಹೊಸ ಜಂಗಮರು ।
ನೀಡಬಾರದು ಹೋಗೆನಲು ॥
ನಾಡೊಳು ದಯ ಧರ್ಮವಿಲ್ಲದೆ ಗೃಹಗಳುಂಟೆ ।
ನೀಡು ಭಿಕ್ಷವನೆಂದ ಶಿವನು ॥೩೮॥

ಪತಿತನಾಗಿ ಜಂಗಮ ಋಷಿಯಾಗಲಿ ।
ಅತೀತ ವಿಕ್ರಮಗತೀತವೆಯೆನಲಿ ॥
ಶ್ರುತಿಯಿಂದ ಭೋಜನ ಕಾಲದಿ ಬಂದರೆ ।
ಗತಿಯಿಲ್ಲ ನೀಡದವರಿಗೆ ॥೩೯॥

ಅನ್ನ ನೀಡುವ ಫಲಕಿಂತಧಿಕವಿಲ್ಲ ।
ಉನ್ನಂತವಾದ ದಾನಗಳು ॥
ಇನ್ನಿಲ್ಲ ಭಿಕ್ಷವು ನೀಡಿ ಪುಣ್ಯಾತ್ಮರು ।
ಚೆನ್ನಾಗಿ ಸದ್ಗತಿಯಹುದು ॥೪೦॥

ಪಶುವಿನ ದಾನ ನೂರರ ಫಲವಾಗಲಿ ।
ವೃಷಭ ನೂರರ ಫಲವಾಗಿ ॥
ಹೊಸ ಭೂಮಿ ಕನ್ಯಾದಾನದ ಸುವರ್ಣ ನೂರರ ಫಲ ।
ಹಸಿದವರಿಗೆ ಅನ್ನ ನೀಡಿದವರಿಗೆ ॥೪೧॥

ಕೊರಳಲಿ ಲಿಂಗವು ನೊಸಲಲಿ ವಿಭೂತಿ ।
ಹರಭಕ್ತರೆಂಬ ಶೀಲಗಳು ॥
ಗುರುಲಿಂಗ ಜಂಗಮದ ಪೂಜೆಯ ಮಾಡದ ।
ನರಗುಂಟೆ ಮುಂದೆ ಸದ್ಗತಿಯು ॥೪೨॥

ಹಾಗೆಂದ ಮಾತನು ಕೇಳಿ ಗಜಮುಖ ಮಡಿವಾಳರು ।
ನಿಂದರಬೇಡ ಹೋಗೆನಲು ॥
ನೀವು ಬಂದದ ಬಲ್ಲೆವು ದರಿಷಿನ ವಿರಹಿತ ।
ಸಂದೇಹ ಬೇಡ ಚಿತ್ತೈಸು ॥೪೩॥

ಕಳುಹುತ ಹೊರೆಯಕ್ಕೆ ಬಲ್ಲಿದರು ಕದಗಳ ।
ನಿಲ್ಲಲೀಸದೆ ಜಂಗಮರನು ।
ಅಳಿಮನವಿಲ್ಲದೆ ಶರಣರಿವರು ಎಂದು ।
ಘಳಿಲನೆ ತಿರಗಿದ ಶಿವನು ॥೪೪॥

ಸಿರಿಯನು ಮನದಲಿ ಎಣಕೆಗೊಳುತ ಹೋಗಿ ।
ಹರಿಯ ಬಿಟ್ಟನು ಪಶುವೆರಡ ॥
ಮರಡೆತ್ತು ಪಶುಗಳು ಅಗಲಿ ಬಂದಂದದಿ ।
ಎರಡು ಬಂದವು ಮಠಕಾಗಿ ॥೪೫॥

ಭರದಿಂದ ಮಗ್ಗಲು ಹಾರಿ ಒಳೆಯಕೆ ಬಂದು ।
ಗಿರಿಜೆ ಗಿರಿಜಿಯರ ಜಗಳವನು ॥೪೬॥

ತುಡುಗುಣಿ ಪಶುಗಳು ಬಂದು ಹೊಕ್ಕವು ಎಂದು ।
ಹೊಡೆಯ ಬಂದರು ಪರಿಚರರು ॥
ಕೊಡವಿಕೊಳುತ ಅವರಟ್ಟಿರಿಯಲು ಬಹರೆ ।
ಹೊಡ ಮರಳಿದರು ನಾಲ್ದೆಸೆಗೆ ॥೪೭॥

ಬಾಲವನೆ ನೆಗಹಿ ಮೇಲಕೆ ನೆಗೆ ನೆಗೆ ಎಂಬ ।
ಮೇಲೆ ನೋಡುತ ಠಣಕರಿಸಿ ॥
ಕಾಲಕೆದರಿ ಹೂಂಕರಿಸಿ ನೆಲವ ಕಂಡು ।
ಹಾರಿಸಿ ತೂರ‍್ಯಾಡುತಿಹವು ॥೪೮॥

ಅಮ್ಮನ ನೆನೆವುತ ಕರಿಮುಖ ಮಡಿವಾಳ ।
ಉಮ್ಮಯದಿಂದ ಅಪ್ಪಣ್ಣನು ॥
ಗಮ್ಮನೆ ಹೊರಟು ಬಂದನು ಕೈಯ ದಂಡದಿ ।
ದಮ್ಮನೆ ಹೊಯ್ಯಲಾ ಋಷಭ ॥೪೯॥

ಜೋಡು ವೃಷಭವು ಪೆಟ್ಟ ತಾಳಲಾರದೆ ಹೋಗಿ ।
ಕೋಡೂರಿ ನೆಲಕೆ ಬಿದ್ದಿಹವು ॥
ನೀಡಿ ಕಾಲಗಳ ಅಂಬೋ ಎಂದು ಬಿದ್ದವು ।
ಹೇಡಿಗೊಂಡವು ನಡ ಮುರಿದು ॥೫೦॥

ಬಸವಳಿಯುತ ಬಿದ್ದ ಎತ್ತ ಬೆನಕ ನೋಡಿ ।
ಉಸಿರೆಂದು ಶಿರವನಲ್ಲಾಡಿ ॥
ಪಶು ಹತ್ಯ ಘಟಿಸಿ[ತೆ]ನುತಲಿ ಪಶುವಿಂಗೆ ।
ಹಸಿಯ ತೃಣವ ಮೇಸುತಿರಲಿ ॥೫೧॥

ಅಷ್ಟರೊಳಗೆ ಪುಂಡ ಜಂಗಮರಿಬ್ಬರು ।
ದಿಟ್ಟಿಸಿ ನೋಡಲಾವೃಷಭ ॥
ಕೆಟ್ಟೆ ಬೆಂದೆವು ನಮ್ಮ ಬಸವನ ಕೊಂದರೆಂದು ।
ಒಟ್ಟೊರಲಿದರು ಬೊಬ್ಬಿರಿದು ॥೫೨॥

ಬಸವನ ಕೊಂದರೆಂದು ಭೋಂಕನೆ ವಾಲೆಯ ।
ದೆಸೆ ದೆಸೆಗಳಿಗೆ ಅಟ್ಟುವೆವು ॥
ವಸುಧೆಯೊಳಗೆ ಹೊಸ ಆಚಾರವನೆತ್ತು ।
ಹಸನಾಗಿ ಕೊಂಬೆವೆಂದೆನುತ ॥೫೩॥

ಕುಂದಗದಲಿ ಕೊಂಡು ತಂದೆವೊ ಬಸವನ ।
ಕೊಂದರು ಮನ ಹೇಸದಲೆ ॥
ಬಂದರು ಹಿರಿಯ ಜಂಗಮರಿದ್ದ ಠಾವಿಗೆ ।
ಅಂದವನೆಲ್ಲ ಹೇಳಿದರು ॥೫೪॥

ಕೇಳುತ ಹಿರಿಯರು ನಡೆಗೊಂಡರುಗ್ರದಿ ।
ಭಾಳಾಕ್ಷ ತೆರದ ಅಂದದಲಿ ॥
ಕೋಳುಗೊಂಬೆವು ಬೋಳರ ಮಠಗಳನೆಂದು ।
ನೀಳು ದನಿಯಲಿ ನಡೆದಾರು ॥೫೫॥

ಗಡ್ಡವನೊಡದಿರುವುತ ಕಣ್ಣ ಕೆಂಪಿನ ।
ದೊಡ್ಡ ಮಗುಟವನೊಲೆವುತಲಿ ॥
ವಡ್ಡರು ಉಡುಗೆಯ ಕೈದುವ ಪಿಡಿಕೊಂಡು ।
ಮಡ್ಡ ಜಂಗಮರು ಏರಿದರು ॥೫೬॥

ಸದ್ದ ಮಾಡುವರಾರು ಬಾಗಿಲ ದೆಸೆಯಲ್ಲಿ ।
ಎಂದು ಬಂದನು ಕರಿಮುಖನು ॥
ಗುದ್ದಿ ಕೊಲ್ಲಿರಿ ತಿವಿಯಿರಿ ಎಂದು ಮಡಿವಾಳ ।
ಹೊದ್ದಿದ ಕೈದುವ ಪಿಡಿದು ॥೫೭॥

ಏತಕೆ ಬಂದಿರೊ ದಿಂಡಿಯರೆಲ್ಲರು ।
ಭೀತಿ ಇಲ್ಲವೆ ಮನದೊಳಗೆ ॥
ರೀತಿಗೆಡುಏರಿ ನಿಲ್ಲದೆ ನೀವು ಹೋಗೆನಲು ।
ಮಾತನಾಡಿದ ಬಾಚಿರಾಜ ॥೫೮॥

ಚೂಣಿಯ ಜಗಳಾಗಿ ತಂಡ ಬೆರಸಿದವು ।
ಹೂಣಿದವಂಬಿನ ಮೊಳೆಯು ॥
ಕಾಣಬಾರದ ಕೈಯ ಚಳಕಗಳೆಂಬಂತೆ ।
ಬಾಣ ತುಂಬಿತು ಉಭಯದಲಿ ॥೫೯॥

ಕತ್ತಿ ಕತ್ತಿಯಲಿ ಕಡಿದಾಡಿ ಮಡಿದಾರು ।
ಕಿತ್ತುಕೊಂಡರು ದಸಿನಿಯನು ॥
ಸುತ್ತಿಕೊಂಡರು ಬೆರಳಿಗೆ ಮುಂದಲೆಗಳ ।
ಕುಕ್ಯಾಡಿ ಧರೆಗುರುಳಿದರು ॥೬೦॥

ಪೆಟಳ ಗುಂಡಿನ ಗಾಯ ಸಬಳದೀಟಿಯ ಗಾಯ ।
ಕಟಹರ ಖಂಡೆದ ಗಾಯ ॥
ತಟ ಹಾಯಿದವು ಬೋಳಂಬಿನ ಗಾಯದಿ ।
ಭಟರು ಬೇಯದಲುರುಳಿದರು ॥೬೧॥

ಬಿಲ್ಲು ಬಾಣ ತೀರಲು ನಡುವಿನ ।
ಜಲ್ಲಿ ಕಟಹಾರವನುಚ್ಚಿ ॥
ಸೊಲ್ಲಿನಿಂದಲಿ ಮೂದಲಿಸಿ ಇರಿದಾಡುತ ।
ಗಲ್ಲನೆ ಬಂಟರುರುಳಿದರು ॥೬೨॥

ತಮ್ಮೊಳು ತಾವು ಬಾಸಿಯ ಮಾಡಿ ಜಂಗಮ ।
ಹಿಮ್ಮೆಟ್ಟದಂತೇಕವಾಗಿ ॥
ಒಮ್ಮೆ ಕದಲಿ ಏರಿ ಮುರಿದು ಭಕ್ತರ ಸ್ತೋಮ ।
ಅಮ್ಮನಿದ್ದೆಡಿಗೆ ಏರಿದರು ॥೬೩॥

ಮುರಿದು ಬಂದು ಕಂಡ ಸೊಡ್ಡಳಯ್ಯ ಚನ್ನಯ್ಯ ।
ತರಿಬಿ ಕತ್ತಿಯ ತಿರುಹುತಲಿ ॥

ಬರಸಿಡಿಲೆರಗುವ ತೆರನಂತೆ ಇಬ್ಬರು ।
ತರಿಬಿದ ವೈರಿಯ ಮೋಹರವ ॥೬೪॥

ಇರಿಯಿರೆ ಕರುಳ ಚಲ್ಲಿರೊತ್ತನು ರಗುತವ ।
ಇರಿಯಿರೊ ಭೂತ ಸಂಕುಳಕೆ ॥
ಕರೆಯಿರೊ ಶಾಕಿನಿ ಡಾಕಿನಿಯರನೆಂದು ।
ತರಿಬಿದವರ ಬೊಬ್ಬಿರಿದು ॥೬೫॥

ಹದ್ದು ಕಾಗಿಗೆ ಮುದ್ದಿ ಗೂಗಿಗೆ ಔತಣ ।
ಬಿದ್ದು ನೆಕ್ಕುವ ನಾಯಿ ನರಿಗೆ ॥
ದೊದ್ದೆಗರ ಕಡಿದೊಟ್ಟುವೆನೆನುತಲಿ ।
ಸಿದ್ಧನ ಮಗ ವೀರಭದ್ರ ॥೬೬॥

ದಿಕ್ಕಿ ದಿಕ್ಕಿಲಿ ನಡೆತಂದರು ಜಂಗಮ ಸ್ತೋಮ ।
ಮುತ್ತಿ ಕೆಂಧೂಳವನೆಬ್ಬಿಸುತ ॥
ಹೊಕ್ಕರು ತಲೆವೊಲೆವುತ ಮುಂದಲೆಯಲ್ಲಿ ।
ಮೊಕ್ಕಳಿಸಿತು ಬಲು ಕಲಹ ॥೬೭॥

ಚನ್ನಬಸವ ಸಂಗಬಸವಪ್ಪ ಬಂದರು ।
ತನ್ನ ಭುಜವ ಬಾರಿಸುತಲಿ ॥
ಗನ್ನಘಾತಕದ ಜಂಗಮರ ಸೀಳುವೆನೆಂದು ।
ಸನ್ನೆ ಮಾಡಿದರು ಭಕ್ತರಿಗೆ ॥೬೮॥

ಸೋತರೆ ಸೋಲವ ಕೊಂಬೆನು ಭಕ್ತರ ।
[ಕ್ಷ]ತಿಗೆ ಗುಡಿಯ ಕಟ್ಟಿಸುವೆ ॥
ಭೂತಳದೊಳು ಹೊಸಪರಿಯೆಂದು ನಂಬೆಣ್ಣ ।
ಮಾತೆಯಂಘ್ರಿಗೆ ಎರಗಿದನು ॥೬೯॥

ಕಾವಲಪ್ಪಣ್ಣನ ಕೊಲ್ಲುವೆವು ವೈರಿಯ ।
ಕೈಯೊಳಗಾಗಿ ಸಿಕ್ಕಿದರೆ ॥
ಮೈಯ ಕೊಡುವೆವು ನಿಮ್ಮ ಶ್ರೀ ಚರಣಕ್ಕೆ ।
ಅಯ್ಯ ಸಿರಿಯ ಸಿದ್ಧನಾಣೆ ॥೭೦॥

ಒಂದು ಪುಟ್ಟಿಯ ಬಿಹರನೆ ಮಾಡಿ ಚರ್ಮವ ।
ತಂದು ಹೊದಿಸಿ ಹೊಳೆಯಲಿ ॥
ಕುಂದಿಲ್ಲದಲಿ ದಾಟಿಸುವುದು ದಯಾಂಬುಧಿ ।
ಕಂದನ ಕಡೆಹಾಸಿ ತಾಯಿ ॥೭೧॥

ಕೊರಳನರಿವ ಚಕ್ರಕೆ ನೇಣವ ಬಲಿದಾರು ।
ಮೊರೆಯನಿಕ್ಕಿದರು ಸಿರಿಯಾಗೆ ॥
ಪರಮ ಪಾವನ ಗಂಗೆಯ ನೋಡೆಂದು ಎರಗಲು ।
ಹೊರಗಿದ್ದ ವೃಷಭ ಕೂಗಿದವು ॥೭೨॥

ನೆಲದಲ್ಲಿ ಬಿದ್ದಿದ್ದ ಎತ್ತು ಮಾಯವ ತಾಳಿ ।
ಹೊಲಬಿಗಿ ಮಾನವರಾಗಿ ॥
ಕೊಲೊಲೊ ಎನುತ ಬೊಬ್ಬಿರಿಯುತ ಬಂದರು ।
ಒಲಿದು ಶರಣರ ಪೊಗಳುತ ॥೭೩॥

ಗಂಗೆಯ ಶ್ರೀಚರಣಕೆ ದಿಂಡುಗೆಡದಾರು ।
ಸಂಗಮೇಶ್ವರ ನಮೋಯೆನುತ ॥
ಮುಂಗುಡಿಯಲಿ ಹೊರಳಲಿ ಕಂಡು ಗಣನಾಥ ।
ಅಂಗವೇನೆಂದು ಹೇಳಿದನು ॥೭೪॥

ಏನ ಹೇಳುವೆನಯ್ಯ ಪೂರ್ವವ ನಮ್ಮಯ್ಯ ।
ಹಾನಿ ಭೀತಿಯು ನಿಮ್ಮದಯ್ಯ ॥
ಶಿವನ ಬಾಗಿಲ ದ್ವಾರಪಾಲಕರಿಬ್ಬರು ।
ಭುವನ ಹದಿನಾಲ್ಕರವರು ॥೭೫॥

ಲಾಂಛನವನಿತ್ತು ಬಹರೊ ಸಕಲ ದೇವರು ।
ಪಂಚಮುಖನ ಅಡಿಗಳಿಗೆ ॥
ಮುಂಚಿನ ಸಲಿಗೆಗಳಾಗಿ ಇನ್ನು ಬ್ರಹ್ಮನು ।
ಹೊಂಚವ ಹಾಕ ಬಂದ ಶಿವನು ॥೭೬॥

ಬಂದ ಬ್ರಾಹ್ಮಣ ತರಿಬಿದೆವು ಈ ದ್ವಾರದಲಿ ।
ಇಂದುಧರನ ಸಲಿಗೆಯಲಿ ॥

ನಿಂದಿರದಲಿ ತಿರುಗಿದ ಬ್ರಹ್ಮಲೋಕಕ್ಕೆ ।
ಅಂದ ರವ ಶಿವನು ಕೇಳಿದನು ॥೭೭॥

ಕರೆ ಕರೆ ದ್ವಾರಪಾಲಕರನೆಂದೆನುತಲಿ ।
ಕರೆಸಿದ ಶೂಲಿ ಗೃಹದಲಿ ॥
ತರ ತರನೆ ನಡಗುತ ಹೋದೆವು ।
ಗಿರಿಜೆಯರಸನ ವಾಲಗಕೆ ॥೭೮॥

ಸಮ್ಮುಖದಲಿ ಹೋಗಿ ನಿಲ್ಲಲು ಸಿರಿಯನು ।
ಬ್ರಹ್ಮನೆಲ್ಲೆಂದು ಕೇಳಿದನು ॥
ಸುಮ್ಮನೇತಕೆ ತಡೆದಿರಿ ರಚ್ಚೆಯಲೆಂದು ।
ಗಮ್ಮನೆ ಶಿವ ಶಾಪವಿತ್ತ ॥೭೯॥

ನಿಮ್ಮ ಶ್ರೀ ಚರಣವ ಕಂಡೆನೊ ಗಣನಾಥ ।
ನಮ್ಮ ಶಾಪಗಳಿಂದು ಹರಿದು ॥
ಉಮ್ಮಾಯವಾಯಿತು ಕದನ ವಿಧಾನವು ।
ಪರಬ್ರಹ್ಮ ಒಡ್ಡಿದ ಸೂತ್ರ ಕೇಳಿ ॥೮೦॥

ನಂದಿಯಾಟಕ್ಕೆ ನಾಗರವೆತ್ತಿ ನಾಲ್ದೆಸೆ ।
ಮಂದಿ ಕುದುರೆ ಬಲು ರಭಸ ॥
ಮುಂದೆ ಜಂಗಮರ ಕಣ್ಣಿಗೆ ತೋರುತಿರಲಾಗಿ ।
ಹಂದೆ ಮನದಲ್ಲಿ ಓಡಿದರು ॥೮೧॥

ಓಡುತ ಮರಳಿ ನೋಡುತ ಅಳ್ಳೆಹೊಯ್ಯುತ ।
ಕೂಡಿ ಬೀಳುತ ಏಳುತಿಹರು ॥
ಪಾಡನಳಿದು ಕೈಯ ಕೈದುವ ಬಿಸುಟರು ।
ಹೇಡಿ ಜಂಗಮರೆ ಹಮ್ಮೈಸಿ ॥೮೨॥

ಜಲವ ಹೊಕ್ಕರು ಹುತ್ತವನೇರಿ ಬೆರಳ ಕಚ್ಚಿ ।
ಹಲವರು ಬಾಯೊಳು ಹುಲ್ಲ ಕಚ್ಚಿ ॥
ಹಲ್ಲುಗಿಡಿದು ಬಾಯೊಳು ಬೆರಳನಿಟ್ಟು ।
ಹಲವು ದೈನ್ಯಗಳ ಹೊಗಳಿದರು ॥೮೩॥

ಮಂಡೆಯ ಜಡೆಯ ಚೂರಿಯಲಿಂದ ಬೋಳಿಸಿ ।
ತಂಡ ತಂಡದ ಬೋಳರಾಗಿ ॥
ಕೊಂಡಾಡಿದರು ನಂದಿ ಗಂಗೆಯ ಮಕ್ಕಳ ।
ಕಂಡರು ದಿಂಡೆಯರೆಲ್ಲ ॥೮೪॥

ಧರ್ಮ ಗಾಳಿಯ ಹಿಡಿಸಿದರು ಸದ್ಭಕ್ತರು ।
ಕರ್ಮವ ಕಳಿದುಳಿದವರು ॥
ಚರ್ಮಾಂಬರ ಸಿದ್ಧಸಿರಿಯನಾಡಿದ ಆಟ ।
ವರ್ಮವಾಯಿತು ಶರಣಾರ್ಥಿ ॥೮೫॥

ಶರಣು ಈರೇಳು ಲೋಕದ ಕರ್ತ ನಂದೀಶ ।
ಶರಣಾರ್ಥಿ ಚನ್ನದಂಡೇಶ ॥
ಶರಣು ಜನನಿ ಆದಿ ಗಣನಾಥ ಅಪ್ಪಣ್ಣ ।
ಶರಣಾರ್ಥಿ ಚನ್ನಬಸವಯ್ಯ ॥೮೬॥

■

೨೨

ಶಿವ ಶಿವ ಕೈಲಾಸ ವಾಸವಾಗಿಹ ।
ಪರಮೇಶ್ವರ ಬರುವ ಸೂಚನೆಯ ॥
ಲೇಸಿನ ಸುದ್ದಿಯ ಹೇಳುವೆ ಕೇಳು ।
ಕೈಲಾಸದಲಿಹ ಶರಣರಿಗೆ ॥೧॥

ಅತ್ತ ಹೇಮಾದ್ರಿಯ ಕರ್ತು ಕಾರಣದಿಂದ ।
ಇತ್ತಲಿಳಿವೆನೆಂಬ ಘನವ ॥
ಚಿತ್ತೈಸು ದೇವಾ ಕೃತವ ಹೇಳುವೆನೆಂಬ ।
ಉತ್ತಮವಾದ ಭಕ್ತರಿದ ॥೨॥

ಸಂಗಮೇಶ್ವರಲಿಂಗ ಸ್ವಯವಾಗಿ ಬಹನೆಂಬ ।
ಸೂಕ್ಷ್ಮವಾದ ವಾರ್ತೆಯನು ॥
ಲಿಂಗಭಕ್ತ ಶಿಶುವು ನಿಮಗೆ ಹೇಳಲಿ ಬಂದೆ ।
ಹಿಂಗದೆ ಕೇಳಿ ಈ ಕೃತಿಯ ॥೩॥

ಅಸಮಾನದೇವಿಯ ರಸ ಪುಣ್ಯ ನಾಮದ ।
ಬಸವಭಕ್ತರು ಮೊದಲಾಗಿ ॥
ಎಸೆವ ಮಂದಿರದೊಳಿಹ [ಸ]ರುವಗಣಂಗಳ ।
ಹೆಸರ ಹೇಳಿಸಿ ಕರೆಸಿದನು ॥೪॥

ಇಂದ್ರನ ಕರೆ ರವಿ ಚಂದ್ರನ ಕರೆ ನಮ್ಮ ।
ಭೃಂಗಿಯ ಕರೆ ಎಂದು ಕರೆಸಿ ॥
ಇಂ[ದಾ]ಯಿತು ನಿಮ್ಮ ಪುರಕೆ ಹೋಹುದಕಿನ್ನು ।
ಸಂದು ಹುಟ್ಟಿತು ಪಯಣವಾಗಿ ॥೫॥

ರುದ್ರರ ಕರೆ ಪುಣ್ಯಭದ್ರರ ಕರೆ [ಏ]ಮ್ಮ ।
ಸಿದ್ಧರ ಕರೆಯೆಂದು ಕರೆಸಿ ॥
ಇದ್ದಹಾಗೀಗ ಹೋಗಲಿಬೇಕು ಮರ್ತ್ಯಕ್ಕೆ ।
ಉದ್ಯೋಗವನು ಮಾಡೇಳೆನಲು ॥೬॥

ನಂಬಿಯ ಕರೆ ನಮ್ಮ ಬೆಂಬತ್ತಿ ಬಂದ ಚೇ ।
ರಂಬನ ಕರೆಯೆಂದು ಕರೆಸಿ ॥
ಇಂದೀಗ ಹೋಗಬೇಕೇಳು ಮರ್ತ್ಯಕ್ಕೆ ।
ಹನ್ನೊಂದರ ಘನವ ಕಾಂಬುದಕ್ಕೆ ॥೭॥

ಕರೆಸಿದ ವಿಶ್ವಕರ್ಮನ ತನ್ನ ಪಯಣಕ್ಕೆ ।
ಹರುಷವಾಗೊಂದ ಬೀಡಾರವನು ॥
ಇರಿಸಿದಲ್ಲಿರುವಂತೆ ನಡೆಸಲಿ ನಡೆವಂತೆ ।
ಮಿತಿ ತೀರಿಸಯ್ಯ ನಮ್ಮ ಊಳಿಗವ ॥೮॥

ಹಿಂದಕ್ಕೆ ತಿರುಗಿ ಬಂದನು ವಿಶ್ವಕರ್ಮನು ।
ಮಂದಿ ಮಕ್ಕಳ ಕೂಡಿಕೊಂಡು ॥
ಚಂದ್ರಧರನ ಪಯಣಕ್ಕೆ ಒಂದು ಬೀಡಾರವ ।
ಒಂದು ನಿಮಿಷಕ್ಕೆ ನಿರ್ಮಿಸಿದನು ॥೯॥

ದೇಶಾಧಿಪತಿಯ ನಿವಾಸನದೊತ್ತಿಲಿ ।
ಶ್ರೀಕಾಂತಗೆ ಸಿ[ರಿ]ವೊಳಲು ॥

ಏಕಾಂತವಾಸ ನೋಡಿದ ದೇವ ಬ್ರಹ್ಮನ ।
ಆಕೆ ಸರಸ್ವತಿ ಬರಲು ॥೧೦॥

ರಂಭೆ ಊರ್ವಸಿ ರಮಣಗೊಂದು ಮನೆಯನು ।
ಚೆಂದ ಚೆಂದದಲನುಮಾಡಿ ॥
ಬಂದು ದೇವಿಂದ್ರ ನೋಡಲು ಸಂತೋಷವ ।
ಮಾಡಲೆಂದು ಮಾಡಿದ ಬೀಡಾರವನು ॥೧೧॥

ಎತ್ತಿತು ಏಳುಸಾವಿರದೇಳನೂರು ಎಪ್ಪತ್ತೇಳು ।
ಚೋಳ ಚಪ್ಪರವು ॥
ಅಪ್ಪಾಜಿ ಇರುವ ಬೀಡಾರವು ಇದೆ ಎಂದು ।
ಬಿಟ್ಟಿತು ಸುತ್ತ ಪಾಳ್ಯವು ॥೧೨॥

ಕಂದನ ಕರೆದು ವಿಳ್ಯವನಿತ್ತು ಪಾಳ್ಯಕ್ಕೆ ।
ಒಂದಪಜಯ ಬಾರದಂತೆ ॥
ಇಂದು ಮೊದಲು ಕಾಯೊ ಸರ್ವರನೆಲ್ಲರ ।
ಒಂದೆ ಭಾವದಲಿ ಕಂಡು ನಡೆಯೊ ॥೧೩॥

ಹತ್ತು ಸಾವಿರ ಹೊದರ್ಗೋಲಿನವರ ಕೊಟ್ಟೆ ।
ಒತ್ತಿಹ [ರೂ]ವಾರಿಕಾರ ॥
ಸತ್ಯಕ್ಕೆ ಸ್ವಯವಾಗಿ ನಡೆಯೆಂದು ಸಾರುವ ।
ಚಿತ್ತವ ಕೊಟ್ಟ ಹಸ್ತದಲಿ ॥೧೪॥

ಮೇಘರಂಜಿಕವೆಂಬ ವಾಜಿಯ ತರಿಸಿದ ।
ಮೂಜಗ ತಿಲಕವೆಂಬಂತೆ ॥
ಶೋಧಿಸಿ ತಳಿದ ಚಿನ್ನದ ಗಟ್ಟಿ ಅಹುದೆಂಬ ।
ತೇಜಿಯನೊಂದ ತರಿಸಿದನು ॥೧೫॥

ಕಟ್ಟಾಳು ಭದ್ರಗೆ ಕೊಟ್ಟನು ರುದ್ರನು ।
ಸೃಷ್ಟಿಯೊಳುಳ್ಳ ಐಶ್ವರಿಯ ॥
ಸೃಷ್ಟಿಯೊಳುಳ್ಳ ಐಶ್ವರ್ಯ ರಾಜಪಟ್ಟವ ।
ಕೊಟ್ಟನು ಕಂದಗುಚಿತವ ॥೧೬॥

ಉಳ್ಳ ತೇಜವಮಾಡಿ ಕಳುಹಲಿ ಭದ್ರೇಶ ।
ನಲ್ಲಿ ಸಾಷ್ಟಾಂಗವೆರಗಿದನು ॥
ನಿಲ್ಲದೆ ಹೋಗಿ ಪಾಳ್ಯವ ಹೊಕ್ಕು ಕಾವಲಿ ।
ಅಲ್ಲಿಗಲ್ಲಿಗೆ ಇರಿಸಿದನು ॥೧೭॥

ಬಲ್ಲಿದ ಬಸವೇಶಲಿಂಗನಾಳಿದ ಕಟ್ಟು ।
ಎಲ್ಲರಿಗೆ ಎಚ್ಚರಿಕೆ ಎನಲು ॥
ಅಲ್ಲಿ ಠಾಣ್ಯವ ಹಾಕಿ ತಳವರ ಕಾವಲಿ ।
ನಿಲ್ಲದೆ ಸಾರುತಿಹನು ॥೧೮॥

ಮುಂದೆ ನೀ ಹೋಗಿದರಂದವ ಹೇಳೆಂದು ।
ನಂದೀಶ ಕಳುಹಲಿ ನಾನು ॥
ಬಂದೆನು ತಂದೆ ಗಣಪ ನಿಮ್ಮ ಪಾದವ ।
ಕಂಡು ನಾ ಕೃತಾರ್ಥನಾದೆ ॥೧೯॥

ಕಂದ[ಗ] ಹೇಳ ಬಂದೆನು ನಿಮ್ಮ ಪುರಕಿಂತು ।
ದಂಡು ಬರುವುದರ ವಾರ್ತೆಯನು ॥
ಮಂಡೆಗೈಯ್ಯವನ ಸಾಯಸಗೇಳಿ ದೇವರು ।
ಚೆಂಡನಾಡುವೆನೆಂದ ತಲೆಯ ॥೨೦॥

ಕೊರೆಸುವೆ ತಲೆಗಳ ನಿರಿಸುವೆ ಪುರದೊಳು ।
ಒರೆಸುವೆ ದಳ ದಳಗಳನು ॥
ಬರಿಕೈಯಿಸುವೆನು ಭೂಮಿಯ ಹೊಕ್ಕರೆ ಹಿಡಿ ।
ತರಿಸುವೆನೆಂದ ಈಶ್ವರನು ॥೨೧॥

ಜಲದುರ್ಗ ವನದುರ್ಗ ಗಿರಿದುರ್ಗ ಉಂಟೆಂದು ।
ಛಲವ ಸಾಧಿ[ಪ] ನಮಗಿದಿರೆ ॥
ಜಲವ ಕಿಳಿಕಿಸಿ ಜಗದಗಲಕೆ ಹರಿಸುವೆ ।
ಗಿರಿಯನೆತ್ತಿಸಿ ಕಡೆಗಿಡುವೆ ॥೨೨॥

ಕುಲವನಳಿದು ವೃಕ್ಷಫಲ ಹುಟ್ಟ ಮುರಿವೆನು ।
ಛಲಗೊಂಡ ಫಲವ ತಾನುಣಲಿ ॥

ಸಾರಿ ಹೇಳಿದ ಮಾತ ಸಾರಿ ನೀ ಹೇಳೆಂದು ।
ಮೀರಿದ ಶರಣರೆಲ್ಲರಿಗೆ ॥೨೩॥

ಕೋರಿಯನುಡಿಸಿ ಕೋಲನು ಕೊಟ್ಟು ಕೈಲಾಸ ।
ಕೇರಿಸುವೆನು ಕೈಸೆರೆಯ ॥೨೪॥

ಅನ್ನದಾನಗಳಿಲ್ಲ ಅಮೃತದಾನಗಳಿಲ್ಲ ।
ಹೊನ್ನದಾನವು ಮುನ್ನಿಲ್ಲ ॥
ಮುನ್ನ ನಾವಿಕ್ಕಬಾರದು ಎಂದು ಆಡುವರು ।
ಅನ್ಯಕಾರರು ಧರೆಯೊಳಗೆ ॥೨೫॥

ಇನ್ನಿರಬಹುದೆ ಸೈರಿಸ ಹೇಳೊ ಬರುತಿನೆ ।
ಚೆನ್ನಾಯಿತು ತಮ್ಮ ನಡತೆ ॥
ತೆರಳಿತು ಕೈಲಾಸ ಇಳಿಯಿತು ಇಳೆಯೊಳು ।
ಹೊಳೆದಿತು ಥಳಕು ಮಿಂಚಾಗಿ ॥೨೬॥

ಸುಳಿದಿತು ಅಲ್ಲಿಗಲ್ಲಿಗೆ ನೆಲನಗಲಕ್ಕೆ ।
ನೆಗಳಿತು ಭಕ್ತಿಯ ಪ್ರಭೆಯು ॥
ಹೊಗಳಿತು ಹಳೆಯಕಾದ ಪ್ರಥ ಘನವೆಂದು ।
ಮುಗಿದು ತಾ ಕರವೆರಡೆತ್ತಿ ॥೨೭॥

ಅದುರಿತು ಆಕಾಶ ಉದುರಿತು ಧರೆಯಂದು ।
ನಡುಗಿತು ನಾಗನ ಹೆಡೆಯು ॥
ಉಡುಗಿತು ನವಖಂಡ ಪೃಥ್ವಿ ಒಂದೇ ಖಂಡ ।
ಒದಗಿತು ಭಕ್ತಿಕುಟುಂಬ ॥೨೮॥

ಕಂಡುದ ಹೇಳ ಬಂದೆನೊ ನಿಮ್ಮ ।
ಚಿತ್ತಕ್ಕೆ ಬಂದಂತೆ ಮಾಡಿಕೊಳ್ಳಯ್ಯ ॥
ತಂದೆ ತಾಯಿಯೆಂದು ನಂಬಿ ಇದ್ದೆನು ಮಾ ।
ತೊಂದು ಹೊಂದುವರೆನಗೆ ತಾವಿಲ್ಲ ॥೨೯॥

ಮಂತ್ರಿಸಿ ಕೊಯ್ದು ಮಾಂಸದ ಕಂದೂರಿ ಮಾಡಿ ।
ಮಂತ್ರಿ ನಂದೀಶನು ಕೇಳಿ ॥

ತಂದುಕೊಂಡರು ಅಸುರರು ತಮ್ಮ ಪ್ರಾಣಕ್ಕೆ
ಕಂದ ನಿಈ ಹೋಗು ಹೋಗೆನಲು ॥೩೦॥

ಬಂದು ನಿಂದನು ತ್ರಾಹಿಯೆಂದು ಅಪ್ಪಣ್ಣನು ।
ಮುಂದೆ ಬಂದನು ದಂಡನಗಲಿ ॥
ನಿಂದನು ರಂಗಮಧ್ಯವ ಹೊಕ್ಕು ಇರುವರ ।
ಕಂಡನು ಕೌಂಸಿಗಾಲವರ ॥೩೧॥

ನೊಂದನು ಮನದಲ್ಲಿ ನಂದಿಯ ನೆನೆವುತ ।
ಲಿಂಗಗೆ ಶರಣು ಮಾಡಿದನು ॥೩೨॥

ನೆರೆದಿದ್ದಾಸುರರೊಳು ಹಿರಿಯರಾಗಿದ್ದವರ ।
ಕರೆಸಿದ ಕಾಜಿ ಮುಲ್ಲರನು ॥
ಅರಿಯಿರೆ ಕರಕಂಠಹಾರ ನಮಗೆಂಬುದು ।
ಕರತ ನಿಮಗೆ ಈತನೆಂದು ॥೩೩॥

ಮರೆದಿರಾ ಹಿಂದಣ ಶಾಪಕ್ಕೆ ಗುರಿಯಾಗಿ ।
ನೆರೆದಿರಾ ನೇಜ ಹದಿನೆಂಟು ॥೩೪॥

ಶಸ್ತ್ರಭೇದಗಳೊಂದೆ ರೀತಿ ಲಕ್ಷಣ ಒಂದೆ ।
ಕ್ಷೇತ್ರ ಅವಕ್ಷೇತ್ರವೆಂಬುದೊಂದೆ ॥
ಯಾತಕೆ ಹರವುಸ ಕವಿಯಿತೆ ನಿಮಗೊಂದ ।
ಮಾತ ಮೀರಲಿ ಸುಮ್ಮನಿವಿಯೊ ॥೩೫॥

ಬಲ್ಲೆವು ಜಗಕೆ ಸಾಯಿಬ ಈತನೆಂಬುದ ।
ಎಲ್ಲವ ತಿಳಿಯ ಹೇಳಿದರೆ ॥
ನಿಲ್ಲದು ಕೂಡಿದ ಪಡೆ ನಮ್ಮ ಮಾತನು ।
ಚೆಲ್ಲವಿಟ್ಟರು ದೂರಮಾಡಿ ॥೩೬॥

ಒಳಿತಾಯಿತು ಸುಮ್ಮನಿರಿ ನೀವು ಕಡೆಯಲಿ ।
ಎಲ್ಲಕ್ಕೆ ಹರುವ ಹೇಳುವೆನು ॥
ಅಲ್ಲಿಹರುಂಟಾದ ಮತಮಾನ್ಯ ಹಿರಿಯರೊ ।
ಉಳ್ಳುದವಗೆ ಹೇಳುವೆನು ॥೩೭॥

ಅತೀತ ಆಗಮವೇಕೆ ವ್ರತಶೀಲ ಸ್ವಯವೇಕೆ ।
ಸ್ಥಿತಿ ತಪ್ಪದಿರುವ ಜಪವೇಕೆ ॥
ಮತಿ ಈವ ಪಂಪಾಕ್ಷೇತ್ರಲಿಂಗನ ಪೂಜೆ ।
ಗತವಾಗಿ[ಹು]ದ ನೀವು ಕಂಡು ॥೩೮॥

ಹರಶರಣರಲ್ಲ ಹರಿಯ ಸೇವಕರಲ್ಲ ।
ಸುರೆಗುಡಿಗಳು ನಮ್ಮ ಮಾತ ॥
ಅರಿದು ಹೇಳಿದರೆ ಕೇಳರು ನಿನಗಲ್ಲ ಸುಮ್ಮ- ।
ನಿರಬಾರದೆ ನಮ್ಮ ನುಡಿದೆ ॥೩೯॥

ಶರಣರ ಶಿಶುವು ಸಣ್ಣವ ಬಂದು ಮಾಡುವ ।
ಪರಿಯನೆಲ್ಲವ ನೀವು ನೋಡಿ ॥
ಹರಿಸುವೆ ಶಿವಭವನದ ಮುತ್ತಿಗೆಯನೆಂಬ ।
ಕೊರೆಸುವೆ ಕಿವಿ ತಲೆ ಮೂಗ ॥೪೦॥

ಮರೆಸುವೆನೊಬ್ಬರನೊಬ್ಬರರಿಯದಂತೆ ।
ಇರಿಸುವೆ ದಳ ದಳಗಳನು ॥
ಕೊಬ್ಬಿದ ಅಸುರರ ಒಬ್ಬುಳಿತದಲ್ಲಿ ।
ಬೊಬ್ಬೆಯನೊಂದನಿಕ್ಕಿಸುವೆ ॥೪೧॥

ಗಬ್ಬನೆ ಬೆದರಿ ತಮ್ಮೊಳು ತಾವು ಕಡಿದಾಡಿ ।
ಸರ್ಬ ದಳವು ಬಯಲಾಗಿ ॥೪೨॥

ಉಳಿದಸುರರು ತಮ್ಮ ತಲೆಯ ಬೋಳೈಸುತ ।
ಕಳವಳಿಸುತ ಓಡ್ಯಾಡುತಿಹರು ॥
ಕಳುಹಿಸಿಕೊಂಡು ತಾ ಇಳಿದು ಬಂದವು ಭೂತ ।
ಇಳೆಯ ನುಂಗುತ ನಗುತಿಹವು ॥೪೩॥

ಶಾಕಿನಿ ಡಾಕಿನಿಯರು ತಾವು ಇಬ್ಬರು ।
ಲೋಕಾಧಿಪತಿ ಶರಣನ ॥
ಭಾಪುರೆ ನೀನಹುದಹುದೊ ನಮ್ಮುವ ।
ದಣಿಯಲುಣಿಸಿದೆ ನಮಗಿಂದು ॥೪೪॥

ತ್ರಾಹಿ ರಕ್ಷಾಮಣಿ ತ್ರಾಹಿ ಶಿಕ್ಷಾಮಣಿ ।
ತ್ರಾಹಿ ಸರ್ವೇಶ ಶಂಕರನೆ ॥
ತ್ರಾಹಿ ಸೋಹಂ ಶಿಶುವು ನೀನಲ್ಲದಿನ್ನಿಲ್ಲೆಂದು ।
ಮಾಯಾದಿ ಮರುಳ ಪೊಗಳಿದವು ॥೪೫॥

ಕರೆಸಿದನಿಂದ್ರದೇವರು ಅಲ್ಲಿ ಮಳೆಗಳ ।
ಹರಸಿದ ಸ್ತನದ ಮಲವಾ ॥
ಸುರಿಸಿದ ಪೂಮಳೆವೆರಸಿದಮರಗಣ ।
ಹರಸಿತು ಖೇಚರದಲ್ಲಿ ॥೪೬॥

ಸತ್ಯಸಮುದ್ರನೆ ಭಕ್ತರ ಭಾಗ್ಯವೆ ।
ಕರ್ತು ನಂದಿಯ ಪ್ರಾಣಪತಿಯೆ ॥
ಉತ್ತಮ ಉಮೆಯ ಅರಸನ ಕೃಪೆಯಿಂದಲಿ ।
ನಿತ್ಯನಾಗೆಂದು ಹರಸಿದವು ॥೪೭॥

ಅತ್ತ ಹೋದರು ಶಿವಸಭೆ ತಮ್ಮ ಪುರಕಾಗಿ ।
ಇತ್ತಲೊಬ್ಬನೆ ಶಿವಶರಣ ॥
ಲಿಂಗನ ಇದಿರಿಲಿನಿಂದ ಅಪ್ಪಣ್ಣನು ।
ಕೊಂಡಾಡಿದನು ಮನ ದಣಿದು ॥೪೮॥

ತುಂಗಭದ್ರೆಯ ರಮಣನೆ ಹೇಮಪುರ ವಾಸ ।
ತಂದೆ ನೀ ಎನ್ನ ರಕ್ಷಿಪದು ॥
ನೋಡಿ ದಣಿಯದಿವೆ ಹಣಚಿ ಹರನ ನೆನೆದು ।
ಕುಣಿದಾಡಿ ದಣಿಯೆ ನಲಿನಲಿದು ॥೪೯॥

ಒಬ್ಬರನೊಬ್ಬರ ನೋಡಿ ಸಂತೋಷವ ।
ಮಾಡಿ ಇಬ್ಬರು ಏಕಾಂತದಲಿ ॥
ಹಬ್ಬಿತು ಮತ್ತೊಂದು ಕದನ ಕಾರಣ ಲಿಂಗ ।
ಎಬ್ಬಿಸಿ ತಾಹದ ಕೇಳಿ ॥೫೦॥

ಹರಿಯಿತು ಸುರೆಗುಡಿಗಳು ಸತ್ತುಹೋದರೆಂಬ ।
ಅರಿಕೆಯಾಯಿತು ಲೋಕದೊಳಗೆ ॥

ಕಟ್ಟಿದ ಸೀಗುರಿ ಹೊನ್ನ ಕಳಸಗಳಿಂದ ।
ಎತ್ತಿ ಬಂದರು ತಮತಮಗೆ ॥೫೧॥

ಬಿಟ್ಟಿತು ಪಂಪಾಕ್ಷೇತ್ರ ವಾಸಕೆ ಬಂದು
ಒಟ್ಟಾಗಿ ನೆರೆಯಿತು ಸಭೆಯು ॥
ಅಲ್ಲಿಗೆ ಅಲ್ಲಮಪ್ರಭುದೇವರು ಹೋಗಿ ।
ಎಲ್ಲರ ಮನಗಳ ಮುರಿಸಿ ॥೫೨॥

ಮರೆದಿರಾ ನಿಮ್ಮನಾಡಿದ ಮಾತು ಹಿಂದಕ್ಕೆ ।
ಅರಿಯಬಾರದೆ ನುಡಿಗಳನು ॥
ಮರೆತೆವೊ ನಮ್ಮನಾಡಿದ ಶತ್ರುವೆಂಬುದ ।
ಅರಿತೆವು ನಿಮ್ಮ ಕೃಪೆಯಲಿ ॥೫೩॥

ಇತ್ತ ಬಾರಯ್ಯ ದೇವರದೇವ ಗುರುಮೂರ್ತಿ ।
ನಮಗೆ ನೀ ಬುದ್ಧಿಗಲಿಸಯ್ಯ ॥
ಎತ್ತಿ ಬಂದಿಹ ಮಹಂತ ಗಣಂಗಳು ।
ಸತ್ಯನ ನಡುವೆ ಕುಳ್ಳಿರಿಸಿ ॥೫೪॥

ಅರಸಾಳದಿಹ ರಾಜ್ಯ ಗುರು ಹೋದವರ ಮಠ ।
ಹಿರಿಯರಿಲ್ಲದ ಮನೆಗಳಲಿ ॥
ಇರಬಾರದಂತೆ ನಾವಿದ್ದೆವೊ ಗುರುಸ್ವಾಮಿ ।
ಅರುಹ ಹೇಳಯ್ಯ ನಮಗೊಂದ ॥೫೫॥

ಕೊರತೆಯಹದು ನಿಮ್ಮನಾಡಿದ ಮಾತ ಕೇಳಿ ।
ಸುಮ್ಮಕಿರಬಹುದೆ ಅಲ್ಲಿ ತಂದು ॥
ಸುರೆಗುಡಿಗಳು ತಾವು ಕಡಿದಾಡಿ ಮಡಿದರು ।
ಹಿರಿಯತನವು ಅವಗೇಕೆ ॥೫೬॥

ಸರಸರನೆ ದಟ್ಟಡವಿಗೆ ಹೋಗಿ ಹಿಡಿದಲ್ಲಿ ।
ಹರವ ಹೇಳಿಸಿಕೊಂಬುದೊಳಿತು ॥
ಅರ್ಭಟಿಸುತಲಿದ್ದ ಆನೆ ಸಿಂಹದ ಮೇಲೆ ।
ಕೊಬ್ಬಿನಡೆವ ಪರಿಯಂತೆ ॥೫೭॥

ತಬ್ಬಿದ ಅವರೊಳು ಒಬ್ಬ ಮಹಾತ್ಮನು ।
ನಿಬ್ಬರವನು ಕಾಬೆನೆನುತ ॥
ಅಸಮಾನದಸುರರ ಹೆಸರನಡಗಿಸಿದನು ।
ಬಸವನ ಬೋಳ ಬಲ್ಲಿದನು ॥೫೮॥

ವಸವಂತನಾಗನೆಂಬುದ ಕಂಡು ನಿಮ್ಮೊಳು ।
ಉಸುರಿ ಹೇಳುವೆನೊಂದ ತಾಳಿ ॥
ಏನ ಹೇಳುವಿರಯ್ಯ ದಾನ್ವರು ಮಡಿದುದ ।
ತಾವು ತಮ್ಮೊಳು ಕಡಿದಾಡಿ ॥೫೯॥

ನೋಯ ನೊಂದರು ಎಂಬ ವಾರ್ತೆಯ ಗುರುನಾಥ ।
ತಾನೆ ನಿರೂಪಿಸುತಿಹನು ॥
ಬುದ್ಧಿವಂತನು ಅವನೊಳೊಬ್ಬನ ಕೂಡಿ ತಾ ।
ತಾನೆ ನಿರೂಪಿಸುತ್ತಿಹನು ॥೬೦॥

ತಬ್ಬಿಬ್ಬಿಗೊಳ್ಳದೆ ಇದ್ದ ಮಾತನು ಕೇಳಿ ।
ಸುದ್ದಿಯ ಕೊಂಡು ಬಾರೆನಲು ॥
ಹತ್ತು ಹೇಳಿದ ಮಾತ ಹೊತ್ತು ಮಂಡೆಯ ಮೇಲೆ ।
ಎತ್ತಲಾದರೆ ಹರಿದೆನೆನಲಿ ॥೬೧॥

ಅತ್ತ ಹರಿದು ಹೋಗಿ ಅಲ್ಲಿಯ ಸುದ್ದಿಯ ।
ಚಿತ್ರದಿ ತರುವೆನೆಂದೆನುತ ॥
ತೆರಳಿ ಬಂದರು ಬಲ್ಲ ಶರಣರು ಇಬ್ಬರು ।
ಕರುಣ ಸಮುದ್ರನಿದ್ದೆಡೆಗೆ ॥೬೨॥

ಹರಣದಿ ಮುಟ್ಟಿ ಹಮ್ಮೈಸದೆ ಬಿದ್ದರು ।
ಕರುಣ ನಮ್ಮನು ಕಾಯೆಂದೆನುತ ॥
ಲಿಂಗ ಶರಣ ನಿಮ್ಮಂಗಳವನೆ ಹೊಕ್ಕು ।
ಬಂದೆವು ಜಗಳಕೆಂಬುತಲಿ ॥೬೩॥

ಹೇಳುವುದೇನು ಕೇಳುವುದೇನು ನೀವು ನಮ್ಮ ।
ಆಳಿಗೊಂಡರೆ ಆದರೇನು ॥

ಬಾಳಾಬಂಕನ ಕೃಪೆಯಲ್ಲಿದ್ದರದು ಸಾಧ್ಯ ।
ನಾಳೆ ಬಹುದು ಇಂದೆ ಬರಲಿ ॥೬೪॥

ದಿಕ್ಕು ನಾಲ್ಕರೊಳು ಕಿಕ್ಕಿರಿದು ಪ್ರಜೆಗಳು ।
ಸಿಕ್ಕದ ಹಾಗೆ ಬಂದವರೆ ॥
ಮುಕ್ಕಣ್ಣ ದೇವರ ಶರಣ ನೀನೊಬ್ಬನೆ ।
ಮೊಕ್ಕಳವನು ಮಾಡಬಹುದೆ ॥೬೫॥

ತರಗೆಲೆಗಳು [ಹಿ]ರಿದು ಧರೆಯ ಹೆಮ್ಮರದೊಳು ।
ಇರುವವು ದಿನ ಬರುವನಕ ॥
ಬಿರುಗಾಳಿ ಬೀಸಿ ಕೊಂಡೊಯ್ದು ಕಿಚ್ಚಿನ ಮೇಲೆ ।
ಹರುವ ಹೇಳಲಿ ಹೇಗಹುದೊ ॥೬೬॥

ಬರಿಗಾಲು ಬರಿಗೈ ಬರಿಬಾಯ ಮನುಜರು ।
ಹರನ ಆಯುಧಕ್ಕಿದಿರಾಗಿ ॥
ನಡೆದು ಬಂದರು ಸುರೆಗುಡಿಗಳಂತಹರೆಂಬ ।
ಅರಿಕೆ ಇಲ್ಲವೆ ತಮಗಿನ್ನು ॥೬೭॥

ಬಂದವರಿಬ್ಬರು ಕಂಡರು ಶರಣರ ।
ಲಿಂಗನ ಒಲವಿದೆಂಬುದನು ॥
ಕೊಂಡಾಡಿದರು ತಮ್ಮಂಗ ಪೂರಿತವಾಗಿ ।
ಸಂಗನ ಶರಣನ ಘನವ ॥೬೮॥

ತಿರುಗಿ ಬಂದರು ತಮ್ಮನಿರಗೊಡದಟ್ಟುವ ।
ಪುರಜನ ಪರಿಜನದೆಡೆಗೆ ॥
ಕರವ ಮುಗಿದು ಬಂದು ಬರವ ಹೇಳುತಲಿರ್ದ ।
ಹರಭಕ್ತಿ ನಿಮಗಳವಲ್ಲ ॥೬೯॥

ಕಾಯವೆಲ್ಲವು ಲಿಂ[ಗಾಲಯವು] ಭಕ್ತರ ।
ಭಾವವೆಲ್ಲವು ಬಸವೇಶ ॥
ಜೀವವೆಲ್ಲವು ಪರಮಾನಂದವಾದ ಸಂ ।
ಜೀವನ ನಿಮಗಳವಲ್ಲ ॥೭೦॥

ಹೇಳುವ ಮಾತನು ಕೇಳಲಾರದೆ ಭುಗಿ ।
ಲೇಳೆಂದು ಕೋಪ ತಾಪದಲಿ ॥
ಹೇಳ ಬಂದೆವು ಬಲು ಮಾತನು ತಮ್ಮೊಳು ।

ಬೋಳರ ಕೂಡ ಹೋಗೆನಲು ॥೭೧॥
ಅಪ್ಪಣೆ ಆಯಿತು ಹರ ಅಪ್ಪಣ್ಣನಿದ್ದೆಡೆಗೆ ।
ತಪ್ಪದೆ ಸೇವೆ ಸೋಹಮ್ಮನು ॥
ಮುಟ್ಟಿಮಾಡಿ ಕಾಯ ಜೀವವನುಳುಹಿಕೊಂಬ ।
ಅಷ್ಟರ ಫಲ ನಮಗಿತ್ತು ॥೭೨॥

ಒಲಿದು ಬಂದರು ಮನ ನಲಿದು ಲಿಂಗದ ಕೃಪೆ ।
ಒಲುಮೆಯಾಯಿತು ನಮಗೆನುತ ॥
ಹೊಲಬುಗಾಣದೆ ನಾವು ಹೊರ ಹೊರಗಿದ್ದೆವು ।
ನೆಲೆಯಗಾಣದೆ ಮೂಗರಂತೆ ॥೭೩॥

ಬಂದರು ಶಿವನ ಶರಣನ ಮುಂದೆ ನಿಂದರು ।
ಅಂಗದ ಹಂಗಿಲ್ಲದವರು ॥
ಕೊಂಡೊಯ್ದನು ಲಿಂಗನಿದಿರಿಗೆ ಇವರೆನ್ನ ।
ಸಂಗ್ರಾಮಕೆ ಸ್ವಯವೆಂದು ॥೭೪॥

ಸಂಗಮೇಶ್ವರನ ಕರುಣದಿಂದ ಮೂರು ।
ಶೃಂಗಾರವಾದುದ ಕೇಳಿ ॥
ಭಸಿತಭೂಷಣವೆಂಬ ಹೊಸ ಜೋಡ ತೊಟ್ಟರು ।
ಬಸವಯೆಂಬುದೆ ವಜ್ರಾಯುಧವು ॥೭೫॥

ಶಶಿಧರ ಶಿವ ಮೇಲಿಟ್ಟು ಮೋಹವ ತಾಳಿ ।
ಹೊಸಕೋಟೆ ದಿವ್ಯಮಂತ್ರಗಳು ॥
ವಸವದು ಎಂದು ಸವೆದು ಕರ್ಮ ಮೆಟ್ಟಿದ ಮಾರಿ ।
ಎಸೆವುದು ಶರಣನ ಮಹಿಮೆ ॥೭೬॥

ಅತ್ತ ಹುಟ್ಟಿದ ಹರಕೆ ಎತ್ತಿ ಬಂದಿಹರೊಳು ।
ಮತ್ತೊಂದು ಮತಿ ಹೀನ ಹೊಸತು ॥

ಭೋರೆಂದು ಎದ್ದರು ಹುಲ್ಲ ಮನೆಗೆ ಕಿಚ್ಚ ।
ಆವರಿಸುವ ತೆರನಂತೆ ॥೭೭॥

ನಡೆದು ಬಂದರು ಪಡೆ ಪಡೆ ಹೇಮಾದ್ರಿಯ ।
ಒಡೆಯನೆಂಬಾತನ ಗುಡಿಗೆ ॥
ಅಡರಿತು ಮೃಡನ ವಾಲ್ಯವ ಹೊಕ್ಕು ಇರುವವರ ।
ಹಿಡಿ ಹಿಡಿ ಹಿಡಿ ಹಿಡಿಯೆನುತ ॥೭೮॥

ಸುತ್ತ ಮುತ್ತಿದ ಕೊಂಡಕೆತ್ತಿ ಬಂದಿಹ ವೀರ ।
ಸತ್ಯವು ಬೇಡುವಂದದಲಿ ॥
ಎತ್ತ ನೋಡಲಿ ಹೂಂಕರಿಸುತ ನಿಂದಕ ।
ಕಚ್ಚುವ ಶ್ವಾನನಂದದಲಿ ॥೭೯॥

ಭಕ್ತ ಹಿಡಿ ಎಂಬವಟ್ಟೊದರಲಿ ಕೇಳಿ ।
ಎತ್ತಳ ಹುಯ್ಯಲೆಂದೆನುತ ॥
ಮೃತ್ಯುಂಜಯನ ಸಮಯದಿ ಕಂಡರು ।
ಬಪ್ಪ ಮಾರಿಯ ಔತಣವ ॥೮೦॥

ಹುಚ್ಚುಗೊಂಡ ನಾಯಿ ಒಡೆಯನನರಿಯದೆ ।
ಕಚ್ಚ ಬಂದಂತಾಯಿತೆ ಕಟ್ಟ ॥
ಉ[ಚ್ಚಿ]ಹೊಯಿವದು ನಾಯ ಹಲ್ಲ ಹರಣವನು ।
ಒಪ್ಪಿಸಿ ತಾ ಬೊಗಳುವುದು ॥೮೧॥

ಮೂವರು ಕೂಡಿ ಮುಪ್ಪುರಿಯಾಗಿ ಬಂದಿಹ ।
ನಿಂದಕ ಶ್ವಾನನಾಯಿ ॥
ಕೊಂದು ಹಾಕುವುದೊಂದು ಗಳಿಗಾಗಿ ಭೂಬಾರ ।
ಇಂದಿಳಿಯಿತು ಇವರಿಂದ ॥೮೨॥

ಹಿಂದಕೊಂದ್ಯುಗದಲ್ಲಿ ಬಂದು ನಾರಾಯಣ ।
ತಂದೆ ಮಕ್ಕಳಿಗೆ ಜಗಳವ ॥
ಸಂಧಿಸಿ ಕೌರವ ಪಡೆ ಪಾಂಡವರುಳಿಯಲಿ ।
ಇಂದಿಳಿಯಿತು ಭೂಮಿ ಭಾರ ॥೮೩॥

ಇಂದು ಭೂಭಾರವ ಇಳುಹ ಬಂದಾತನು ।
ಅಂದಿನ [ಹರಿ] ನಾಮದಾತ ॥
ಈ ಮಾತ ಕೇಳೆಂದು ಆ ಮಾತೆ ಆತ್ಮಜೆ ।

ಭೂನಾಥನ ವರಪುತ್ರ ॥೮೪॥
ಪ್ರೇಮದಿಂದಲಿ ಗಣೇಶ್ವರ ಕಳುಹಲಿ ನಾ ।
ಬಂದೆ ನಿಮ್ಮ ಪಾದದೆಡೆಗೆ ॥
ಶರಣು ಸರ್ವೇಶಗೆ ಶರಣು ಸಮುದ್ರಗೆ ।
ಶರಣು ಸತ್ಯವ ಹಿಡಿದವಗೆ ॥
ಶರಣು ನಿಮ್ಮಯ ಪಾದದ ಸೇವೆ ಕಂದಗೆ ।
ಹರಣವನುಳುಹಿ ರಕ್ಷಿಪುದು ॥೮೫॥

■

೨೩
ಸಾಕಯ್ಯ ಗುರುವೆ ಈ ಲೋಕದೊಳು ಜನ ಅಸದಳವು ।
ದೀಕ್ಷೆ ಬೋಧೆಯ ಹೆಳುವವರ ನಾ ಕಾಣೆನು ॥ಪಲ್ಲ॥

ಶಿಕ್ಷೆಗಲ್ಲದೆ ಮಣಿಯದು ಈ ಕಾಯ ಕರಣೇಂದ್ರಿ ।
ಏಕ ಆಹಾರವು ಇದಕೆ ಅನ್ನ ॥
ಬಾಕಿ ಒಳಗಾಗಿ ಕಡಿವೊಡೆದದಕೆ ಕಲಿಸಿದೆ ।
ಸುಂಕವನು ತೆತ್ತ ನಾನಾ ಜನ್ಮಕೆ ॥೧॥

ಹೇಳುವೆನು ಪರಕೆ ನುಡಿ ಭಾವ ಚೈತನ್ಯವನು ।
ಹೇಳೆನು ನಾ ನನ್ನ ಒಳಗಳವನು ॥
ಮೂಳ ಮೂಕೊರೆಯ ಮುಂದಡಿ ನನ್ನ ನಡೆ ಹೋಕು ।
ಬೇಳೆ ಬೆಲ್ಲವ ಮೆದ್ದು ಪಡೆವುದೇನು ॥೨॥

ಗಿಳಿ ಓದಿ ಪಂಜರದ ಒಳ ಹೇಲ ಮೆದ್ದಂತೆ ।
ತಿಳಿವು ತಿಳಿವಿನ ತಿಳಿವು ತಿಳಿವಿಲ್ಲವೊ ॥
ಕಳಿವ ಹದನಕೆ ಬಂತು ಕಾಯ ಪಾಮರದೊಳಗು ।
ಸುಳುಹು ಸೂಕ್ಷ್ಮದ ಸುಖತರವಿಲ್ಲವು ॥೩॥

ನಿನ್ನ ಧರ್ಮಕೆ ನೀನು ಚೆನ್ನಾಗಿ ಪಾಲಿಸಿದೆ ।
ನನ್ನ ನಾನು ಅರಿತು ಅರಿಯದಕ್ಕೆ ಹಾನಿಯನಿಟ್ಟೆ ॥
ಸೊನ್ನಾರ ಮತವಾಯಿತು ಈ ಸತಿಪತಿ ನ್ಯಾಯ ।
ಹೊನ್ನು ಹೆಣ್ಣು ಮಣ್ಣಿನೊಳು ಬಿದ್ದೆನು ॥೪॥

ಇಪ್ಪತ್ತೊಂದು ವರುಷ ಸರ್ಪನಂತೆ ಕಾದು ಇದ್ದೆ ।
ಕಪ್ಪು ಕಲ್ಮಶ ನನ್ನ ಒಳಗಳಿಯದೆ ॥
ಒಪ್ಪುವೆ ನಿನ್ನ ನಡೆ ನುಡಿಯ ಅವಗುಣವ ।
ತಪ್ಪು ತಪ್ಪು ಎನ್ನ ಮಾತಿಗೆ ಸಾವಿರ ॥೫॥

ಮುಂದೆ ನೀ ನಿನ್ನ ಕಂಡುದು ಕಾಣಿಕೆಯು ಗುರುವೆ ।
ಸಂದೇಹಿಯಾದೆ ಸಂಸಾರದೊಳಗೆ ॥
ಹೊಂದುವೆನು ಇನ್ನು ಅವರ ಹೊರಹೊಮ್ಮಲಳವಲ್ಲ ।
ಸಂದ ಹೊನ್ನಿಗೆ ಒಟ್ಟವನು ಬೇಡುವರೆ ॥೬॥

ತಪ್ಪು ತಪ್ಪಿಗೆ ಶಿಕ್ಷೆ ಒಪ್ಪು ಒಪ್ಪಿಗೆ ಶಿಕ್ಷೆ ।
ಅಪ್ಪುದಪ್ಪುದು ಅಗ್ನಿ ಅಮರಗಣಕೆ ॥
ಸಪ್ಪಳಡಗಿಸಬೇಡ ಶೋಧಿಸಯ್ಯ ಒಳಒಳಗೆ ।
ಉಪ್ಪು ಅಕ್ಷಿ ಉಡುಗಲು ಇಮ್ಮಡಿಯಾಗುವದು ॥೭॥

ವ್ಯಾಧಿ ವಿಘ್ನಗಳು ಆತ್ಮಶೋಧಿಸುತವೆ ಬಂದು ।
ಕ್ರೋಧ ಕಪಟಗಳು ಕೊಂಪೆಯ ಸುಡುತಲಿ ॥
ಆದರ ಹಾಕುತಲಾನೆ ಅನುಜ್ಞಾನ ಸಕಲಕ್ಕೆ ।
ಕಡಿಗಾದೆನೆಂದರೆ ಆರಳವಲ್ಲವು ॥೮॥

ನನ್ನ ನನ್ನ ಅವಗುಣವು ನನ್ನನೇ ತಿಂತು ।
ಅನ್ನವನು ನೀಡೆ ಅನಾಚಾರ ಬಂದಿತ್ತು ॥
ಹನ್ನೊಂದು ಭವದಲ್ಲಿ ಹರಿ ಬಂದು ತೊಳಲಿದ ।
ಇನ್ನು ಆರಿಗೆ ಅಳವು ಇಹಪರಗಳು ॥೯॥

ನಾಲ್ಕು ಯುಗದಲಿ ಬಂತು ಆಕಾರ ರೂಪು ।
ಆಗಿಹುದು ದ್ರೋಹಗಳಿಂದ ಶೀಲ ಭಕ್ತವು ॥

ನಾ ಕಂಡೆ ನೀ ಕಾಣೆ ತಾಕು ಸೋಂಕಿನ ಸೋಂಕು ।
ಮಾಕೊಂಡು ನುಡಿವ ಮಾತುಗಳಿಲ್ಲವು ॥೧೦॥

ಹರಿ ಅವತಾರ ಸಂಪೂರ್ಣವಾಯಿತು ಗುರುವೆ ।
ತೆರೆಮರೆಯಲಡಗಿ ವ್ಯಾಳ್ಯವ ಕಳೆವರೆ ॥
ವರವಿಲ್ಲ ಶಾಪವಿಲ್ಲವೆನಿಸುವುದು ಕಾರಣವೆ ।
ಗರಿಯ ಕಟ್ಟಿದಂಬು ಗುರಿಯ ತಪ್ಪುವದೆ ॥೧೧॥

ವ್ಯಾಳೆ ವ್ಯಾಳೆಗಿ ಬುದ್ಧಿ ಕೀಳಿಂಗೆ ಪಾಲಿಪುದು ।
ಹಾಳು ಪಟ್ಟಣವ ಮಾಡಿಸಲಿಬೇಕು ॥
ಹೇಳುವರೆ ನಿನಗಿನ್ನು ಹಿರಿಯ ಮರ್ತ್ಯದೊಳಿಲ್ಲ ।
ಏಳಿಲವ ಮಾಡೆನುವದು ಧರ್ಮವೆ ॥೧೨॥

ಬಂದ ಬಂದವು ಮಣಿಹ ಹಿಂದುಗಳೆದವು ಎಲ್ಲ ।
ಬಿಂದದೊಳಗಣ ಬೈರೂಪಿನಂತೆ ॥
ಅಂದರೆ ಏನಹುದು ಕೊಂದರೆ ಏನಹುದು ।
ಅದರಿಂದ ಎಂದೆಂದು ಲೋಕ ಚರವಾಯಿತು ॥೧೩॥

ಕಲ್ಲಿಗೆ ವರವುಂಟು ಹುಲ್ಲಿಂಗೆ ವರವುಂಟು ।
ನಮ್ಮ ಅಲ್ಲಮಪ್ರಭುವಿಗೆ ವರವಿಲ್ಲವೊ ।
ಸೊಲ್ಲು ಸಪುಗಾಯಿತು ಎಂಬನ ನುಡಿ ಬಂತು ।
ಗೆಲ್ಲ ಗುಣಿಗಳ ಆಡುತ ಬಂದರು ॥೧೪॥

ತಿಪ್ಪಿಯೊಳಗಣ ಬೆಂಕಿ ಅವರಿಗೆ ಕಾಣಿಪುದೆ ।
ಮುಪ್ಪು ಆದರೆ ಏನು ಮುಂದರಿತು ನಡೆವು ॥
ಕುಪ್ಪಸವ ಕಳೆಯದೆ ಹೆರೆ ಹಾವು ಮುಂತಾಗಿ ।
ಅಪ್ಪ ನಿನ್ನ ಮಾಯ ಯಾರಿಗೆ ತಿಳಿಯದು ॥೧೫॥

ಅಳಿವುದೆಲ್ಲವು ಉಳಿವು ಉಳಿವುದೆಲ್ಲವು ಅಳಿವು ।
ಅಳುವು ಉಳುವಿನೊಳಗಣ ತಿಳುವಿಲ್ಲವು ॥
ಬೆಳೆಬಿತ್ತಿನೊಳಗಣ ಬೀಜವ ತೋರುವದು ।
ಸುಳುಹು ಸೂಕ್ಷ್ಮದ ಸುಖತರವಿಲ್ಲವು ॥೧೬॥

ಅಂಧಕನು ಕನ್ನಡಿಯ ಹಿಡಿದಿದ್ದ ತೆರನಂತೆ ।
ಸಂದೇಹಿ ವಚನದ ರುಚಿಯ ಕಾಣೆನು ॥
ಬೆಂದ ಅಡವಿಯೊಳು ಮುಂತು ಬೇಗೆಯೊಳು ಚಿಗುರುತದೆ ।
ನಿಂದೆ ಕುಂದೆದ ಮಾತು ಮನತಾಳದು ॥೧೭॥

ನುಡಿವ ವಚನದ ಗಡಣೆ ನನಗೆ ನಿನಗೆ ಉಂಟು ।
ಕಡೆಯಪ್ಪ ಇಷ್ಟರಿಂದಲಿ ಖಂಡಿತ ॥
ಬಡವಗೆ ಆಸೆ ಬಲ್ಲಿದನು ಭಾಷೆಯ ಕೊಟ್ಟು ।
ಒಡೆಯ ತಪ್ಪಲು ಹೇಳುವವರು ಉಂಟೆ ॥೧೮॥

ಹನ್ನೆರಡು ವರುಷ ಹನ್ನೆರಡು ತಿಂಗಳು ತಪಸ ।
ಹನ್ನೆರಡು ದಿನಕೆ ಮುಕ್ತಾಯವಾಪುದು ॥
ಮುನ್ನಲಿ ಇಪ್ಪತ್ತೊಂದು ವರುಷವೆಂದಾಡಿದೆ ।
ನಿನ್ನಾ ನೀ ನುಡಿಯ ಸಂಬಾಳಿಸುವುದು ॥೧೯॥

ಮನವಿಡಿವುದು ಕಡೆಯ ನಾ ನನ್ನ ಛಲಪದವ ।
ಬೋನವನು ಬಿಡುವೆ ನಲ್ವತ್ತು ದಿನವು ॥
ಸ್ತನದಗ್ಗಣಿ ಜರಿದು ಇಪ್ಪತ್ತೊಂದು ವರುಷ ।
ಹಾನಿ ಬಂದದು ನಿನಗೆ ಹತ ಹತಿಯು ॥೨೦॥

ಇಂತು ಈ ವರುಷದೊಳು ಕಂತೆಯನು ಕೆಡಮೆಟ್ಟಿ ।
ಆದಂತ ಕಾರ್ಯವ ಮುಂದೆ ಕಾಣಬೇಕು ॥
ಮಂತ್ರ ಸಾಕು ಉಪದೇಶ ಸಾಕು ಸಾವಿರ ವರುಷ ।
ಸಂತು ಇಂದಿನಲಿ ನಿನ್ನ ಅಭಿಮಾನವು ॥೨೧॥

ನದಿಯ ತಟಾಕದಲಿ ಮದರಸಾ ಕಟ್ಟೆಯ ಕಟ್ಟಿ ।
ವಿಧಿಯ ಗಂಡನು ಎನಿಸಿ ಬಿರುದ ಪೊಗಳಿ ॥
ಅಧಮ ದೈವದ ಮಸ್ತಕಶೂಲ ಎಂಬ ಬಿರಿದಂಕ ।
ಕದನಕ್ಕೆ ಕದಲುವದು ಕಡು ಶೀಘ್ರವು ॥೨೨॥

ನಾನು ತಪ್ಪಿದ ತಪ್ಪು ನಿನಗೊಪ್ಪಿ ಒಪ್ಪು ।
ನಿನ್ನಿಂದ ನೀನರಿವುದು ನಿರಂಜನ ॥

ನಾನು ನಿನ್ನ ಪಾದದರೇಣು ಎಂದರಿವು ।
ನಾನು ಬಗುಳಿದ ಬಗುಳಿನಂತೀ ವಾಕ್ಯ ॥೨೩॥

ಶಿಷ್ಯ ತಪ್ಪಲು ಬಿರಿದು ತಪ್ಪಬಾರದು ಎಂದು ಅ ।
ದೃಶ್ಯ ಲಿಂಗವನು ಅಮಳೋಕ್ಯಗೊಂಡು ॥
ನಿಸ್ಸೇದ ಸೇದಗಳ ವಿಸ್ಮರಂತಿಯ ಬಿಟ್ಟು ।
ಬೆಸನ ಕೊಡುವದು ಗುರುವೆ ಬೇಗ ಮಗಗೆ ॥೨೪॥

ಸಂಗಮೇಶ್ವರನು ಪ್ರಭುಲಿಂಗ ಬಸವೇಶ್ವರನು ।
ಅಂಗದೊಳಡಕ ಆಗ ಮೂವರು ॥
ಅಂಗೀಕರಿಸಿದೆ ನಾನು ಇದರಿಂದ ಘನವಿಲ್ಲ ।
ಲಿಂಗ ಲಿಂಗೈಕ್ಯರೆಲ್ಲರು ಕೇಳಿರೈ ॥೨೫॥

■

೨೪

ನಡೆಗುಣವಿಲ್ಲದೆ ತುಡುಗುಣ ನಾ ಬಂದೆ ಅಮ್ಮ ।
ಬಿಡೆನು ಕೋಪಗಳ ತರ್ಕವ ॥
ಬಿಡೆನು ಕೋಪಗಳ ತರ್ಕವ ಅಮ್ಮ ।
ಹೊಡೆದರೆ ಹಲ್ಲ ಉದರಲಿ ॥೧॥

ಏನು ಹೇಳಲಿ ಕೇಳೆ ।
ಎನಗೆ ಸುಜ್ಞಾನವಿಲ್ಲ ಅಮ್ಮ ॥
ಮಾನವನಲ್ಲ ಮತಿಹಿನ ।
ಮಾನವನಲ್ಲ ಮತಿಹೀನ ಪಾಪಿ ನಾ ಅಮ್ಮ ॥
ಸ್ವಾನನ ಜನ್ಮದಲಿ ಇಳಿದೆನು ॥೨॥

ಕಲ್ಲ ತಿದ್ದಲಿ ಬಹುದು ।
ಹುಲ್ಲು ತಿದ್ದಲಿ ಬಹುದು ॥
ಕಲಿಯುಗದೊಳಗೆ ಕರ್ಮಿಯ ಅಮ್ಮ ।
ಕಲಿಯುಗದೊಳಗಣ ಕರ್ಮಿಯ ತಿದ್ದಲಿಕೆ ॥
ಬಲ್ಲಿದ ಗುಣಾದಿಗಳವಲ್ಲ ॥೩॥

ಮರನ ತಿದ್ದಲಿಬಹುದು ।
ಮರಡ ತಿದ್ದಲಿಬಹುದು ಅಮ್ಮ ॥
ನರವಿಂಜದೊಳಗಿನ್ಹಕ್ಕಿಯ ।
ನರವಿಂಜದೊಳಗಿನ್ಹಕ್ಕಿಯ ತಿದ್ದಲಿಕೆ ಅಮ್ಮ ॥
ಹಿರಿದು ಗುಣಾದಿಗಳವಲ್ಲ ॥೪॥

ಧರ್ಮವ ಬಲಿವುದು ಕರ್ಮವ ಜರಿವುದು ಅಮ್ಮ ।
ಧರ್ಮಕಲ್ಯಾಣದ ಬಸವನ ॥
ಧರ್ಮಕಲ್ಯಾಣದ ಬಸವನ ನೆನೆದರೆ ಅಮ್ಮ ।
ಪರಮ ಪದವಿಗಳ ಪಡೆವರು ॥೫॥

■

೨೫

ಆದಿಲೋಕದಲೇಕೆ ಓದುತವೆ ಬಂದು ।
ಸಾಧ್ಯರ ಸತ್ಯರ ಸಂತು ॥
ವಾದ ತರ್ಕವ ಮಾಡಿ ಒದರಿ ಕೆಲೆವುತಲಿಹಿನಿ ।
ಬೀದಿಯೊಳಗೆ ಬಿಟ್ಟ ನಾಯಂತೆ ॥ಪಲ್ಲ॥

ಅಂಧಕರ ಕಉದವು ನಿಂದಕಲು ನನ್ನ ಮೇಲೆ ।
ಸಂದೋಗ ಮಾಡುತಿನೆ ವಾಳಿ ॥
ಇಂದ್ರಾದಿಲೋಕ ಗಣ ರುದ್ರತಿಂತಿಣಿ ಸಹಿತ ।
ಬಂದು ಕುಳಿತು ರಂಜವನಾಳಿ ॥
ಹಿಂದ ಮುಂದಣ ಲೆಕ್ಕ ಒಂದು ದಿನ ಕೊಂಡರು ।
ಚಂದ್ರ ಸೂರಜರು ಸಾಕ್ಷಿಯ ಕೊಳ್ಳಿ ॥
ಎಂದು ಆದೀತೆಂದು ಇಂದು ಮನದಳಲವ ।
ನಿಂದಕನು ನಾ ಕೇಳಿ ಮೂಳ ॥೧॥

ಪರರರ್ಥಗಳ ತೆಗೆದು ಹರಿದು ಬಡ್ಡಿಯನಿಕ್ಕಿ ।
ಬರಿದುವೆ ಹರಪತಾಡಿ ॥
ಮೆರೆವ ಹಚ್ಚಡ ಚಂದಿ ಹಿಡಿಯಲೆ ಅಡಕೆಗಳ ।
ಮೆರೆವ ಮೊಚ್ಚೆಯರವಸವನೆ ಮಾಡಿ ॥
ಕರೆದು ದಮ್ಮವ ಬೇಡೆ ಒರೆದು ಲೆಕ್ಕವ ನೋಡಿ ।

ಸರಿದು ಹೋಗಲಿಬಹುದೆ ನೋಡಿ ।
ಹರಿದು ಹೋದೆನಿನ್ನು ಮೆರೆದ ಪ್ರಮಥರು ಬರಲಿ ।
ಉರಿದೆದ್ದು ಹೋದೆನು ಖೋಡಿ ॥೨॥

ಗದ್ದಿಗೆಯಲಿ ಕುಳಿತು ಅದ್ದುಳ್ಳ ಸೆಟ್ಟೆಂತೆ ।
ಬಂದ ಪರಸತಿಯರ ಕುಚವ ನೋಡಿ ।
ನಿಂದು ನಿಲ್ಲಾಸದಲ್ಲಿ ಹೊಂದಿ ತಕ್ಕಡಿಲಿರಿದು ।
ಮಂದ ಮತಿಗಳ ಮನವ ಹೂಡಿ ।
ಮುಂದ ಬಂದುದನರಿಯ
ಅಂಧಕದ ಪಿಂಡ ನಾ ಬೆಂದು ಹೋದೆನಿನ್ನು ಖೋಡಿ ।
ಸಂದ ಪ್ರಮಥರು ಬಹದೊಂದ ದಿನವಿಲ್ಲ ।
ಕೊಂದು ಕೊಲೆಯಾಡ್ಯಾರು ಖೋಡಿ ॥೩॥

ಪೇಟೊಳಗೆ ಹೊಕ್ಕು ಪಟ್ಟವುಳ್ಳ ಸೆಟ್ಟೆಂತೆದ್ದು ।
ಪಟ್ಟೆ ಹಚ್ಚಡವನೆ ಹೊದ್ದು ।
ತೋಟಿ ಬಂದದ ನೋಡಿ ಪೇಟ ಪರಧನ ಕಾಡಿ ।
ಸಟ್ಟೆಯ ಸೆಟ್ಟರೆಲ್ಲವಂದು
ಕೋಟ್ಯಾನು ಕೋಟಿ ರವಿ ತೇಜ ರಾಯರ ಮನೆಯ ।
ಮೊಟ್ಟೆ ಸೆಟ್ಟರೆಲ್ಲ ಬಂದು ।
ಆಟವಾಡಲಿಕ್ಕಿನ್ನು ಪೇಟೆಸೆಟ್ಟರು ನಾನನಗೆ ।
ಗೆಟ್ಟಗೆ ಹೋದೆನು ಮುಂದೆ ॥೪॥

ಸತ್ಯ ನೇಮಗಳಿಲ್ಲ ಭಕ್ತಿ ಭಾವಗಳಿಲ್ಲ ।
ಮತ್ತೆ ಲಿಂಗಕ್ಕೆ ಕೇಡುಗಳಿಲ್ಲ ॥
ಚಿತ್ತ ಪಲ್ಲಟದ ಮನದ ವರ್ತಮಾನದ ನಡೆಯ ।
ಮುತ್ತಿ ಮೂರರ ತೊಡಕು ಎಲ್ಲ ॥
ಅತ್ತೆ ಅಳಿಯನು ಮಾವ ಮತ್ತೆ ಬೀಗರಿನ್ನು ।
ಬತ್ತಲೆದ್ದು ಹರಿದರೆಲ್ಲ ॥
ಹತ್ತೆ ಸಾರಿದ ದುರಿತವತ್ತ ಬರಿಸಲಿಬಹುದ ।
ಮತ್ತೆ ಕಲ್ಯಾಣದ ಬಸವ ಬಲ್ಲ ॥೫॥

■

೨೬

ಒಂದು ಧರ್ಮದ ಪಕ್ಷಿ ಮುಂದುಗೊಂಡಿತು ಜ್ಞಾನ ।
ವೃಷಭನ ಮುಂದೆ ನುಡಿಯಿತು ॥
ವೃಷಭನ ಮುಂದೆ ನುಡಿಯಿತು ನಡೆ ಜ್ಞಾನ ।
ಬಂದಿದೆ ಸಕಲ ಪ್ರತಿಯಾಗಿ ॥೧॥

ಚನ್ನಬಸವೇಶ ನಿನ್ನೊಳು ಗುಣಿಸೊ ।
ಮುನ್ನಲೊಂದು ಕೂನ ನಿನಗುಂಟು ॥
ಮುನ್ನಲೊಂದು ಕೂನ ನಿನಗುಂಟು ಕಲ್ಯಾಣ ।
ಬೆನ್ನ ತೋಗಿನ ನಡೆಯೆಂದ ॥೨॥

ಸಪ್ತಸ್ವರದ ಶಕುನ ನಮ್ಮಪ್ಪ ಬಲ್ಲನು ।
ಕಪ್ಪಡಿಯೊಳಗೆ ನುಡಿದನು ॥
ಕಪ್ಪಡಿಯೊಳಗೆ ನುಡಿದನು ನುಡಿ ಕೂನ ।
ಅಪ್ಪುವಿನೊಳಗೆ ಅಡಗೆಂದ ॥೩॥

■

೨೭

ಬಂತು ಬಂತು ಬಲು ಸಾಕ್ಷಿಯ ನೆಗಳುತ ।
ಅಂತಕವಿಲ್ಲವು ॥
ಅಂತಿಂತೆನಲೇತಕೆ ಪ್ರಭು ಶರಣರ
ಸಂತು ಇಳಿದು ಬಂತಿನ್ನು ॥ಪಲ್ಲ॥

ಹಬ್ಬಿಗೆ ಇಟ್ಟದು ಇಲ್ಲವು ಕೇಳಿದು ।
ಒಬ್ಬನೊಳಗೆ ಅಡಕುಂಟು ॥
ತುಂಬದೆ ನಡೆಸುವ ಕಾರ್ಯವು ಎಲ್ಲವು ।
ನಿಬ್ಬಣ ತೆರಳುವ ಮುಂತು ॥
ಹೆಬ್ಬಾಗಿಲ ಹೋಗದಲ್ಲದೆ ನಿಲ್ಲ ನಿಲ್ಲದು ।
ಸಬ್ಬದಳದ ಸಂಭ್ರಮವು ॥
ಕೊಬ್ಬಿದ ಕುರಿಗಳಂತೆ ನಿಲಿಸುವ ।
ಒಬ್ಬ ಒಡೆಯ ನಿಲುವಂದು ॥೧॥

ಅಲ್ಲಿಗೆ ಅಲ್ಲಲ್ಲಿಗೆ ಬಿಲ್ಲುಗಳು ನೆರೆವುತವೆ ।
ಕಲ್ಲ ಕವಣೆ ಆಟಗಳು ॥
ನಿಲ್ಲದೆ ಉತ್ತರ ದಿಕ್ಕಿಂದಲಿ ದಳ ।
ಅಲ್ಲಿಂದಲಿ ತರಿಸುತಲಿ ॥
ಮುಲ್ಲ ಕಾಜಿಗೆದೆದಲ್ಲಣವಿನ್ನಿದು ।
ಬಲ್ಲಿದನಾಟವು ಎಂದು ॥
ಅಲ್ಲಲೆವರಿನ್ನು ಅಲ್ಲೆ ಮಡಿವುತಲಿ ।
ಹುಲ್ಲು ಕಿಚ್ಚಿನಂತೆ ಉರಿದು ॥೨॥

ಉತ್ತರ ದಿಕ್ಕಿನ ನಿಬ್ಬಣ ತೆರಳಿಹುದು ।
ಇತ್ತಲಪ್ಪ ಬರವಿನ್ನು ॥
ಎತ್ತಿ ಬಂಬ ದಿನ ಕಾಲಕೆ ನೋಡಿರಿ ।
ಚಿತ್ರ ವಿಚಿತ್ರಗಳಿನ್ನು ॥
ಮತ್ತೆ ತೊರೆಗಳೆಲ್ಲ ಬತ್ತುವ ಕಾಲವು ।
ವೃತ್ತಿನಾಟವು ಎಂದು ॥
ಚಿತ್ತದೊಳಗೆ ಬಲಿದಿರಬೇಕಾದರೆ ।
ಎತ್ತುವ ಛತ್ರವು ಮುಂದೆ ॥೩॥

ಮಾನ್ಯಗಟ್ಟನು ಬುನಾದಿಯ ಕೆಡಿಸುತ ।
ಎನ್ನೊಡೆಯನು ತಾನಿನ್ನು ॥
ತನ್ನ ಖಡ್ಗವನು ತರಿಸಿ ಹಸ್ತದಲಿ ಹಿಡಿವನು ।
ಮುನ್ನಿನ ಕಾಲ ಪೆಂಡೆವನು ॥
ಇನ್ನು ಕಾಲ ಪೆಂಡೆವ ತಾನಿಕ್ಕುತ ।
ಕರ್ಣ ಕುಂಡಲವ ತೆಗೆಸುವನು ॥
ಚೆನ್ನ ಗೋಡೆಯ ಗದ್ದಿಗೆಯ ತೆಗೆಸುತಲಿ ।
ಚಿನ್ನದ ಮುಗುಟಿಕ್ಕುವನು ॥೪॥

ಕೊಡೆಯ ಹಾವುಗೆ ಮೆಟ್ಟುವ ಪೂರ್ವದ ।
ಎಡದೆರವಿಲ್ಲ ನೋಡಿನ್ನು ॥
ನಡುಗುವ ಭೂದೇವತೆ ಆ ದಿನಕೆ ।
ಒಡೆಯ ಬಂಬ ಆ ದಿನಕೆ ॥

ಸಿಡಿಲೆರಗುವ ಅರ್ಭಟದಂತೇಳುತ ।
ನಡೆಸುವ ಕಾರ್ಯವು ಉಗ್ರ ॥
ಮೂಡಿ ಬಂದಂತೆ ನಿಂದರೈ ಭೂ ಶರಣರು ।
ಬೆಡಗಿನ ಮಾತುಗಳಲ್ಲ ॥೫॥

■

೨೮

ಬೆಳೆ ಕಂಡೆ ಧರ್ಮವೆ ಬೆಳೆ ಕಂಡೆ ಪುಣ್ಯವೆ ॥ಪಲ್ಲ॥

ಬಸವಣ್ಣ ಬರಲಿಕೆ ಪಶುವೆಲ್ಲ ಹಯನಾಗಿ ॥
ವಸುಧಿ ಪಾಲಿಪರು ನೆರೆದಾರೆ ॥
ವಸುಧಿ ಪಾಲಿಪರು ನೆರೆದಾರೆ ಮುಂದಿನ್ನು ।
ಶಶಿಧರನು ನಡೆದು ಬರುವಾಗ ಬೆಳೆಯೆ ॥೧॥

ಕಲ್ಲೆಲ್ಲ ಕನಕವು ಹುಲ್ಲೆಲ್ಲ ರಾಜಾನ್ನ ।
ಬೆಳ್ಳಿ ಕಾಯೆಲ್ಲ ಹವಳವೆ ।
ಬೆಳ್ಳಿ ಕಾಯೆಲ್ಲ ಹವಳವೆ ಮುಂದಿನ್ನು ರುಕ್ಷ ।
ಕಾಮಧೇನಾಗಿ ಕರೆದವು ಬೆಳೆಯೆ ॥೨॥

ಅಂದಿನವರು ಬರಲಿಕೆ ।
ಹೋದವು ಬರ ಭಯ ಸಾಧು ಸತ್ಯರು ಬರಲಿಕೆ ।
ಸಾಧು ಸತ್ಯರು ಬರಲಿಕೆ ಮುಂದಿನ್ನು ।
ನಂದಿ ಲಿಂಗೈಕ್ಯನ ಚರಣಕೆ ಬೆಳೆಯೆ ॥೩॥

■

೨೯

ಆದಿಯಾಯಿತು ಮನ ಹೋದನು ದುರ್ಗಕ್ಕೆ ।
ಆಧಾರವಾದ ಬಸವಲಿಂಗನೆ ಆದಿ ॥ಪಲ್ಲ॥

ಒಂದು ಶರಣು ಒಂದು ಕೋಟಿಯುಗದ ಭೋಗ ।
ಒಂದು ಪೂಜೆಯ ಮಾಡಿದ ಫಲವು ।
ಎಂದೆಂದು ತನ್ನ ಸನಿಯದೊಳ ನಿರಿಸುವ ।
ನಂದೇಶ ವಾಲಗವ ಮಾಡಿರಯ್ಯ ॥೧॥

ಭಕ್ತರು ಚಿಂತೆಯ ಮಾಡಲಿಕೆ ಗುರುರಾಯ ।
ಎತ್ತಿದನು ಹಸ್ತವನು ಅಭಯದಲ್ಲಿ ॥
ಉತ್ತುಂಗದ ಮೇಲಿಟ್ಟು ನೇವರಿಸಿದ ಸತ್ಯರ ।
ಪಾದಕ್ಕೆ ಶರಣೆನ್ನಿರಯ್ಯ ॥೨॥

ಬಸವ ನಾಮವೆ ಜಯ ಬಸವ ಶಿವಾಸನ ।
ಬಸವ ಬಸವ ಬಸವಯ್ಯ ಎಂಬ ನುಡಿಗಳು ।
ಬಸವನೆಂದು ಎರಡಿಲ್ಲದೆ ನುಡಿದರೆ ।
ರಸರಾಯನಗಳ ನುಣಿಸುವ ॥೩॥

■

೩೦

ಬಂದ ನಂದೀಶ್ವರಗೆ ವಂದನೆಯ ಮಾಡಿ ।
ಕುಂದದೆ ಆರುತಿಗಳ ಬೆಳಗಿ ॥ಪಲ್ಲ॥

ಬೆಳೆಸು ಬಿತ್ತಿನ ಸಂತೋಷವ ನೋಡಿ ।
ಕಳಸ ಮುರಿದು ಭೂಮಿಗೊರಗಿಹುದು ॥
ಅಳಕಲೀಸರು ದೇವರ ನಂಬಿದವರ ಒಂದು ।
ವಿಲಾಸದಲಿ ಸುಖದಲ್ಲಿರೊ ॥೧॥

ಮೊದಲು ಪಾದವ ನೀಡಿದ ।
ಉದಮದದಲಿ ಗಂಗೆ ಹರಿಗೊಂಡಾಳು ॥
ಕುದಿಯ ಬಿಡಿಸಿ ನಂಬಿ ಉಣಿಸುವ ।
ನಂಬಿದವರನು ಒಂದುದಯ ಕಾಲದಲಿ ನೆನೆವೆ ॥೨॥

ಇನ್ನು ಸುಕಾಲದ ಮಹಿಮೆಯ ಕೇಳಿ ।
ತನ್ನವರಿಗೆ ಉಣಿಸಲಿ ಕೊಟ್ಟ ॥
ಬಿನ್ನಾಯವ ಮಾಡಿ ಶರಣೆಂದೆ ।
ಹೊನ್ನ ಮಳೆಯ ಕೊಟ್ಟನು ಗುರುರಾಯ ॥೩॥

■

೩೧

ಬಸವೇಶ್ವರನೆ ವಿಷ ಪರಿಹರನೆ ।
ಹಸುವರಿವನ ಬೆಸನ ಕೊಡುವನ ನೆನೆವೆನು ॥ಪಲ್ಲ॥

ಅಂಗದೊಳಗೆಲ್ಲಾಡುವ ಮಹಿಮನ ।
ಲಿಂಗವೆಂದು ಅರಿಯದಲಿಹನೆ ॥
ಮಂಗಳ ಮಹಿಮನ ಸ್ವಪನವ ಕಂಡೆನು ।
ಸಂಗನ ಬಸವಣ್ಣ ಸಲಹುವನು ॥೧॥

ಧರ್ಮರೂಪ ಧರ್ಮಿ ಬಸವಯ್ಯನು ।
ಧರ್ಮಕೆ ಮಳೆ ಬೆಳೆ ಧರ್ಮವೆ ॥
ವರ್ಮಿಗತನ ಬೆಳಸ ನೋಡಲಿ ಬಂದ ।
ಕರ್ಮರಹಿತ ಕರುಣಿ ಬಸವಯ್ಯ ॥೨॥

ಜಗದೊಳಗಿನ ಮಾನವರು ಹೊಗಳಲಳವೆ ।
ಯುಗಯುಗದಲಿ ಜ್ಞಾನವಿಲ್ಲದೆ ॥
ಜಗವ ರಕ್ಷಪಾಲನ ನೋಟ ಪರುಷ ಹೊಲ ।
ಆಗಲೆ ಬಾರದೆ ಜ್ಞಾನವಿಲ್ಲದೆ ॥೩॥

■

೩೨

ಕಾಯದ ಕಳವಳವು ಸರ್ವಜೀವ ।
ದಯಾಪಾರಿ ಎನ್ನ ಗುರುವೆ ॥ಪಲ್ಲ॥

ನಿಚ್ಚ ನಿಚ್ಚ ನಿಮ್ಮ ಪಾದ ನೆನೆದು ।
ನಿಶ್ಚಿಂತನಾಗಿರಲೊಲ್ಲೆನು ಗುರುವೆ ॥
ಕಚ್ಚುವರ್ಯಾರು ಕುಳ ದೈವವ ಹಿಡಿದರೆ ।
ಹುಚ್ಚಮಾಡಿ ಹುರಿಯುತಲದೆ ॥೧॥

ಬಂದು ಬಿದ್ದರು ನಿಮ್ಮ ಬಾಗಿಲ ಬಳಿ ।
ದ್ವಂದ್ವ ಪಾದವ ತೋರಿಸುವುದು ಗುರುವೆ ।
ಕುಂದಪರಾಧವು ನೋಡ ಬೇಡ ಗುರುವೆ ।
ತಂದೆ ಪಾಲಿಸಿ ರಕ್ಷಿಸುವುದು ಗುರುವೆ ॥೨॥

ಹಿಂದು ಮುಂದು ಎಂದರಿಯದ ಪಾಪಿ ನಾ ।
ಮಂದಮತಿ ಮಾಯದ ಗುಣದವ ನಾನು ॥
ತಂದೆ ಅಮರಪುರದ ನಂದೀಶ[ನೆ] ।

ಕಂದನ ನುಡಿಯ ಲಾಲಿಸೊ ಗುರುವೆ ॥೩॥
ಊರ್ವಿಯೊಳು ಬಿರಿದಂಕನೆಂಬದು ।
ಬಿರಿದು ಸಾರಿ ಪೊಗಳುತಲದೆ ॥
ಗುರುವೆ ಚರಣದ ಲೆಂಕನು ನಾ ನಿನಗೆ ।
ಮೊರೆ ಇಡುತಿನೆ ಕರುಣಿಸುವುದು ಗುರುವೆ ॥೪॥

ಹಿರಿದು ಕಿರಿದು ಎಂದೆನ್ನದ ಪಾಪಿ ನಾ ।
ಗರ್ವವಿಡಿದು ಘಮ್ಮಿಂದೆ ಕೆಟ್ಟೆನು ।
ಚರಣದಡಿಯ ಲೆಂಕ ನಾ ನಿನಗೆ ।
ಮೊರೆ ಇಡುತಿನೆ ಕರುಣಿಸುವದು ಗುರುವೆ ॥೫॥

■

೩೩

ಕರುಣವ ಮಾಡಯ್ಯ ಸ್ವಾಮಿ
ಕರುಣವ ಮಾಡೊ
ಕರುಣವ ಮಾಡೊ ಗದ್ದಿಗೆರಾಯ ॥ಪಲ್ಲ॥

ಮಾತ ಪಿತನೆಂದರೆ ನೀನೆ ।
ಭ್ರಾಂತು ಅಳಿದ ಮಹಿಮನು ನೀನೆ ॥
ಸಾತ್ವಿಕ ಸದ್ಭಕ್ತರ ಪಾಲಿಪ।
ಜ್ಯೋತಿಲಿಂಗನೆಂದರೆ ನೀನೆ ॥೧॥

ಜಗವೆಲ್ಲ ನಿನ್ನ ಆದಿ ಆಧಾರದಲ್ಲಿ
ನಿಗಮಗೋಚರನೆ ಕಾಯೊ ಲಿಂಗ ॥೨॥

ಗುರುವಿನ ಉಪದೇಶವ ನುಡಿ ಕೇಳದೆ ।
ಅರಿತು ಮನದೊಳಗೆ ವಾಲಗವಮಾಡಿ ॥
ಪರಿಹರಿಸುವ ಮಾಡಿದ ಕರ್ಮಂಗಳ ।
ತರಹರಗೊಳದೆ ಭಿನ್ನಹಯ ಮಾಡುವೆ ॥೩॥

ಬಿಟ್ಟು ಬಿಟ್ಟು ನಿಮ್ಮ ವಾಲಗಮಾಡಿ ।
ಗಟ್ಟಿ ನಿಮ್ಮ ಚರಣವ ನೆನೆಯದೆ ॥
ಕಟ್ಟಿಹಾಕಿತು ಬಲುವ್ಯಾಧಿಯ ಬಲೆಯೊಳು ।
ಅಟ್ಟುಳಿಗಾರದೆ ಭಿನ್ನಹ ಮಾಡುವೆ ॥೪॥

ಕಾವರತನದಲಿ ವಾಲಗಮಾಡುವೆ ।
ಭಾವದೊಳಗಳವನೆ ಇಟ್ಟು ॥
ದೇವರು ಮೆಚ್ಚದ ಈ ವಾಲಗವ ।
ಜೀವಕೆ ಬಂದರೆ ಭಿನ್ನಹ ಮಾಡುವೆ ॥೫॥

ಬಂಧಿಸಿತು ಬಲು ವ್ಯಾಧಿಯ ಬಲೆಯೊಳು ।
ನಿಂದು ವಾಲಗವ ಮಾಡಲಿಸದು ॥
ಮಂದಮತಿಯ ಭಿನ್ನಹವ ಕೇಳಯ್ಯ ।
ಇಂದುಧರನೆ ಕಾಯೊ ಗುರುವೆ ॥೬॥

ಅಕ್ಕಡಿಸಿತು ಬಲು ವ್ಯಾಧಿಯ ಬಲೆಯೊಳು ।
ಸಿಕ್ಕಿದೆ ನಾನಿನ್ನುಳಿಯಲಿಸದು ॥
ರಕ್ಷಿಸು ಅಮರಪುರ ದೇವರೆ ।
ಮುಕ್ಕಣ್ಣನೆ ಕಾಯೊ ಗುರುವೆ ॥೭॥

■

೩೪

*ದಾನಿ ಆಹೊ ಸುಜ್ಞಾನಿ ಆಹೊ
ಊರ ಬಯಲು ಉರಿದೊಳದವು ।
ಊರು ಬಿಟ್ಟಿನ್ನು ಅಡವಿಗೆ ॥
ಊರು ಬಿಟ್ಟಿನ್ನು ಅಡವಿಗೆ ಹೋದರೆ ।
ಅಲ್ಲಿ ಬಿಡರು ಸೆರೆಸೂರೆ ಘನವು ॥೧॥

ಇದರ ಕೀಲಿನ ಸುದ್ದಿಯ ಬಂದವು ಕೇಳಿರಿ ।
ಸಿದ್ದ ಬಸವಯ್ಯ ಕಳುಹಿದ ॥

---

* ಇದರ ತಲೆಯ ಮೇಲೆ ಗದ್ದಿರಾಯನ ಪಾದವೇ ಗತಿ ಎಂಬ ಬರೆಹವಿದೆ (ಸಂ)

ಸಿದ್ದ ಬಸವಯ್ಯ ಕಳುಹಿದ ನುಡಿಗಳ ।
ನಿರ್ದಯವೆನ್ನಿ ಜಗವೆಲ್ಲ ॥೨॥

ಕಡಲಿಯ ಕಾಯಂತೆ ಒಡೆದವುಡವಿಗೆ ।
ಧೃಢವಿಲ್ಲದ ಕಳಖಳನಾವು ॥
ಧೃಢವಿಲ್ಲದೆ ಕಳಖಳನಾವು ।
ಒಡೆಯ ಬಸವಯ್ಯ ನುಡಿದನು ॥೩॥

ಬಂಬ ಸಡಗರ ಹೊಡೆಗಾರ ।
ಹೊಡೆಗೆಡೆವೆನು ದುಡುವಿಲ್ಲದೆ ಪಾತಕನಾ ॥
ದುಡುವಿಲ್ಲದೆ ಪಾತಕನಾ ।
ತಡೆಯದೆ ಹೋದೆ ಸುಡುಗಾಡಕೆ ॥೪॥

ಶೀಲ ಸಮ್ಮಂದವೆಲ್ಲ ಜಾಳಾಗಿ ಹೋದವು ।
ಏಳನೂರು ಎಪ್ಪತ್ತು ವರುಷಕ್ಕೆ ॥
ಏಳನೂರು ಎಪ್ಪತ್ತು ವರುಷಕೆ ಬಂದು ।
ಬೋಳ ಬಸವಯ್ಯ ನುಡಿದಾನು ॥೫॥

■

೩೫

ಬಿಡಲಾರೆನೊ ಬಸವಲಿಂಗ ॥
ದಾವ ಪರಿಯಲಿ ನಿಮ್ಮ ಪಾದವಿಡಿದೆಹೆನು ॥ಪಲ್ಲ॥

ಕಾವ ಒಡೆಯನು ನೀನು ಕರುಣಿಸುವ ಕರ್ತನೆ ।
ಈವ ಧಾನ್ಯಗಳಷ್ಟಭಾಗ್ಯಗಳ ಕೊಡುವನೆ ।
ಶತಸಾವಿರ ಲೋಕಕ್ಕೆ ಕರ್ತ ನೀನೊಬ್ಬನೆ ।
ಈವ ಪದವಿಯ ಕೊಡುವನೆ ।
ಪಾವನವ ಮಾಡಿ ಪತಿಕರಿಸಿ ಸಲಹಲಿ ಬಂದಿ ।
ಭಾವ ಶುದ್ದವಾಗಿ ನೆನೆವ ಭಕ್ತರ ।
ಆವರಿಸಿ ಕೊಟ್ಟು ನಡೆಸುವನೆ ।
ಮಹಾದೇವ ಕರುಣಿಸು ನಂದೀಶ ಲಿಂಗ ॥೧॥

ಅತ್ಯಧಿಕ ರೂಪನೆ ಭಕ್ತಿಗೋಸ್ಕರ ನೀನು ।
ಮುಕ್ತಿ ಫಲದಾಯಕನೆ ಮುನಿಜನರ ವಂದಿತನೆ ।

ನಿತ್ಯ ನೆನೆವರ ಹೃದಯಕಮಲದೊಳು ವಾಸವಾಗಿ ।
ಗುಪ್ತದಲಿ ಜನಿಸಿದೆ ನೀನೆ ।
ಸತ್ಯ ಸಹಿತರೊಳ್ ಭಕ್ತರಾಧಾರನೆ ।
ಚಿತ್ತದಲಿ ಸಲಹು ಎನ್ನ ಚಿನ್ಮಯ ರೂಪನೆ ।
ತುರಿತು ಭಕ್ತರಿಗೆ ಕಿಂಕರನೆ ಒಲಿದು ।
ಯುಕ್ತಿಹೀನನ ಸಲಹು ನಂದೀಶ ॥೨॥

ಪಕ್ಷಿವಾಹನನ ಪೂಜಿತನು ನೀನಯ್ಯ ।
ಕುಕ್ಷಿಯೊಳು ಸಕಲಲೋಕವ ಧರಿಸಿದ ದಾಯಕನೆ ।
ಲಕ್ಷಣನೆನಿಪ ನಾಮ ಕಾಮಧೇನುದಿಂದ ।
ಅಕ್ಷಿ ಪದವಿಯ ಕೊಡುವಿ ನೀನೆ ।
ದಕ್ಷನ [ಯಾ]ಗ ವಿನಾಶವ ಮಾಡಿದ ದೇವ ।
ಭಿಕ್ಷವನು ಬೇಡಿ ಬ್ರಹ್ಮಕಪಾಲವನು ಹಿಡಿದ ।
ಸಾಕ್ಷಾತ ಪರವಸ್ತು ನೀನೆ ।
ಜಯವಾಕ್ಯ ಪರುಷವುಳ್ಳ ಬಸವ ಸಲವೆನ್ನ ॥೩॥

ಪರಮಪುರುಷನು ನಿನು ಪ್ರಳಯ ವಿರಹಿತನೆ ।
ಕರುಣಸಾಗರ ನಿಧಿಯೆ ಕಲ್ಪ[ವೃ]ಕ್ಷ ರುದ್ರನೆ ।
ಉರಗಾಭರಣನೆ ಭೇದಕಗೆ ಮಿಗಿಲಗೋಚರನೆ ।
ದುರಿತಸಂಹರ ಭವದೂರ ।
ಪರಹಿತನೆ ನಿನ್ನೊಡನೆ ಧ್ಯಾನವಿಡಿದು ಬಂದೆ ।
ಬರುವ ಭಕ್ತರಿಗೆ ಅಧಿಕ ಸಂತೋಷದಲಿ ।
ಬಂಬ ಭಯ ಭಾರ ನಿಮ್ಮದೆ ಒಡೆಯ ।
ಬಂಬ ದುರಿತಗಳು ಪರಿಹರಿಸೊ ಒಡೆಯ ॥೪॥

ಜಗಭರಿತ ಲಿಂಗವೆ ಮಿಗಿಲೆನಿಪ ಮೂರುತಿಯೆ ।
ಗಗನ ಗಂಗಾಧರ ಜಟಾಮಹಿಮನು ನೀನೆ ।
ಅಗಣಿತ ಅಮರಪುರದೀಶ ತಗವ ಬಿಡಿಸೆನ್ನ ।
ದುರುಭಿಕ್ಷೆ ದುರಿತಗಳೆಲ್ಲ ಹಗಲಿರುಳೆ ನಿಮ್ಮ ಧ್ಯಾನದಲಿ ।
ಮಹಾ ಸೊಗಸಿಂದಲಿ ಸಲಹೊ ಸುಜ್ಞಾನಿ ನಂದೀಶ ॥೫॥

■

೩೬
ಅರಸು ಬಂದ ಚಾವಡಿಗೆ ।
ಅಲ್ಲಮರಾಯ ಬಂದ ಚಾವಡಿಗೆ ।
ಹರುಷದಿಂದ ಎಡೆಮಾಡಮ್ಮ ತಾಯಿ ॥ಪಲ್ಲ॥

ಹೊಗೆಗಳು ಸುತ್ತುತ ಕಿಡಿಗಳು ಉದುರುತ ।
ಬಗೆ ಬಗೆಯಲಿ ಬೇಗೆ ಉರಿಯುತ ॥
ತಗವು ಬಂತು ಎನ್ನ ಪಾಪಿಯ ಮೇಲೆ ।
ತಗಿಬಗಿಗೊಳದೆ ಹೊರಹೊಂಡಬೇಕು ॥೧॥

ಅಡವಿಯ ಹೊಗಬೇಕು ಗಿಡವ ಸೇರಬೇಕು ।
ಮಿಡಮಿಡನೆ ಮಿಡಕಲಿ ಬೇಕು ॥
ಬುಡಪಟ್ಟದವರು ಆಡಿದನು ಬಂತು ।
ಹೊಡಗೆಡುವುದು ತಡವೆ ತಾಯಿ ॥೨॥

ಕೊಟ್ಟ ಕೊಟ್ಟಗಳೆಲ್ಲ ಅಳಿಯುತ ಬಂದವು ।
ಸೆಟ್ಟಿಯ ಮಹಿಮೆಯ ನೋಡಿರೊ ।
ಬಿಟ್ಟು ಬಿಟ್ಟು ಓಡಲಿಬೇಕು ಮನೆ ಮಾರು ।
ಘಟಕ್ಕೆ ಪ್ರಭುರಾಯ ಬಂದಾನೆ ॥೩॥

■

೩೭
ಅಪ್ಪ ಬಂದ ಅಮರಕಲ್ಯಾಣಕೆ । ನಡೆ
ತಪ್ಪಿಗೆ ನಿನಗೊಮ್ಮೆ ಶರಣೆಂಬೆನಯ್ಯ ॥ಪಲ್ಲ॥

ಕಾವ ಜೀವವ ಕೊಟ್ಟ ಕರ್ತ ನಮ್ಮ ಕಾಯಯ್ಯ ।
ನಂದಿ ಜಗಭರಿತ ಕಾಯದವಗುಣ ಕೆಟ್ಟು ದುರಿತ ।
ನಮ್ಮ ನೋಯದಲಿ ಸಲವಯ್ಯ ಕರ್ತು ನಂದೀಶ ॥೧॥

ಆಕಾರದಲಿ ಬಂದುದರಿಯಾ ನಿರಾಕಾರದಲಿ ನಿಂದುದರಿಯಾ ।
ಏಕಲಿಂಗನೆಂಬ ಬರಿದಾ ನಿಮ್ಮ
ವಾಕ್ಯವ ಹೇಳುವರ ನುಡಿಗರು ಸರಿಯೆ ॥೨॥

ದಂಡಿಸಿ ನಡೆದ ದೇವನೆ ತನ್ನ ।
ಮಂಡಲವನೆ ಕಾವವನೆ । ಪ್ರಚಂಡ ಬಸವಲಿಂಗಯ್ಯನೆ ।
ಉದ್ದಂಡದಲ್ಲಿ ನಡೆದವರ ಹಲ್ಲ ಮುರಿಸುವನೆ ॥೩॥

ನಿತ್ಯ ವೇದಮಂತ್ರಗಳ ಕಾಲಾಂತಕನ ಕರುಣದಲಿ ।
ಸಂತೋಷ ಷಡು ಅಕ್ಷರದಲಿ ।
ಶೀಲವಂತನೆನಿಸಿಕೊಂಬ ಪಂಚರಾತ್ರಿಯಲಿ ॥೪॥

ನಿಮ್ಮ ಪಾದದೆಡೆಗೆ ಗಂಗೆ ಹರಿದು
ಮೇದಿನಿಯೊಳು ಚೆಲ್ಲವರಿದು ।
ಆದಿಲಿಂಗನೆಂಬ ಬಿರಿದು ।
ಶ್ರೀಪಾದತೀರ್ಥ ಪರುಷವ ಕಾಣ ಹಿಡಿದು ॥೫॥

ಸಹಜದೊಳಗೆ ಉಂಟು ಬೀಜ ।
ಬೀಜದೊಳಗೆ ಉಂಟು ಸಹಜ ।
ಸಹಜ ಸತ್ಯ ತೇಜವ ನಮ್ಮ
ರಾಯ ಬಸವಪ್ರಭು ಆಳುವ ತೇಜ ॥೬॥

ಹಿಂದಕ್ಕೆ ಹತ್ತು ಮುಂದಕ್ಕೆ ಹನ್ನೊಂದೆಂಬ ।
ಆನಂದ ನಾಮ ಸಂವತ್ಸರಕೆ ।
ಬಂದೆನೆಂಬ ಸಲೆಸಂದು ಭಕ್ತರ ಕಾಣಿಸಿಕೊಂಬ ।
ನಮ್ಮ ನಂದಿ ಬಸವಪ್ರಭು ಉಣಿಸಿದರುಂಬ ॥೭॥

■

೩೮

ಎ[ಲೆ] ವಾದಿ ಎ[ಲೆ] ಮರನೆ ನೋಡು ।ಹೀಗೆ।
ಫಲವಾದ ಹಣ್ಣಿಗೆ ಬೆಲೆಯ ಮಾಡುವರೆ ॥ಪಲ್ಲ॥

ಕೊಸರಿ ಕೊಂಬುತಲೈರಾ ।
ಈ ಹಣ್ಣಿನ ಹೆಸರ ಹೇಳುತ ಬರುವರು ॥
ಕುಸುಗಾಯಿ ವಿಷವೇರಿ ಮಸಿಯಾಯಿತಣ್ಣ ॥೧॥

ಹಿವ್ವಳೆ ಹತ್ತಿ ಬರಲು ಮುಂದಿನ್ನು
ನುಡಿ ಇಲ್ಲವೈ ಇವರಲ್ಲಿ ॥
ಒಡೆಯ ಹೋದನಲ್ಲಿ ।
ಅಡವಿ ಬೀದಿಯಲಿ ॥೨॥

ಬೇರೂರಿದ ಮರನ ರೂಪು ಮುಂದಿನ್ನು ।
ಯಾರಿಗೆ ಕಾಣಿಸದು ತೋರಿದನು ಗುರುವು ।
ಆರಾಧ್ಯ ಅಲ್ಲಮನು ॥೩॥

■

೩೯

ಉಣಗೊಡರಿನ್ನು ಕೇಳಿ ನಾಡೊಳಗೆ ।
ಇರಗೊಡರಿನ್ನು ಕೇಳಿ ॥
ಹಣ್ಣಿತು ಬಾಲ ಬಸವಯ್ಯನಾಟವು ಮಾ ॥ಪಲ್ಲ॥

ಬಣ್ಣ ಭಜನೆಯ ಅವರೊಲ್ಲರು ಅಲ್ಲೊಂದು ।
ಹೂಣಿಕೆಯನಾಡ್ಯಾರೊ ಮಾ ॥
ಅಣ್ಣಗಳು ಬರುತಾರೆ ಆನಂದನಾಡುತಲಿ ॥೧॥

ಎಂಟು ಮಂದಿನ್ನು ಕೂಡಿ ಬಿದುರೆಯಲಿ ।
ನಂಟತನವ ಮಾಡ್ಯಾರೊ ಮಾ ॥
ಉಂಟಾಗಿ ನಡೆದರೊ ಟೆಂಕಲ ದೇಶಕ್ಕೆ ॥೨॥

ಬಾಲ ಬಸವಯ್ಯನಾಟವು ಮುಂದಿನ್ನು ।
ಮೇಲಾಗುತಲದೆ ನೋಡಿರೊ ॥
ಜಾಲವನು ಹಾಕ್ಯಾರು ಜಗದೊಳಗೆ ॥೩॥

■

೪೦

ಶಿವನ ನೆನೆವ ಚಿತ್ತ ಶುದ್ಧವಿಲ್ಲ ದುಃಖ
ಭವಭವದಲಿ ಬೆನ್ನ ಬಿಡಲಿಲ್ಲವಯ್ಯ ॥ಪಲ್ಲ॥

ಮಾಡಿದ ಪಾಪ ಮರೆವೆನೊ ।
ಶಿವ ಕಾಡುವ ಬಾಧೆಯನರಿಯೆನಯ್ಯ ॥
ಬೇಡುವೆ ದೇವರ ವರವನು ॥ಶಿವ
ನೋಡನು ಪಾಪಿಯ ಮುಖವನು ॥೧॥

ನಂಟತನವ ಮಾಡುವೆನು ನಾ
ತೊಂಟ ಬುದ್ದಿಗಳ ಬಿಡೆನೊ ॥
ಹಿಂದೆಗಟ್ಟು ಬಾಯಾರಿ ಬಾಳ ನೊಂದೆ ನಾನು ।
ಕಂಟಿ ಬಸವಲಿಂಗಗೆ ಬಂದೆನಯ್ಯ ॥೨॥

ಕರ್ಮದ ಹಾದಿಲಿ ನಡೆವೆನು ।
ಸತ್ಯ ಧರ್ಮದ ಹಾದಿಯ ತಿಳಿಯೆನು ॥
ನಿರ್ಮಳ ನಿಜ ಭಾವ ನಿಲವಾಗಿ ।
ಕಾಯ ದುರ್ಮರಣಕೆ ಬಿದ್ದೆ ಲಯವಾಗಿ ॥೩॥

■

೪೧

ಬಟ್ಟೆವಿಡಿದು ಬಂದೆ ಸೆಟ್ಟಿತನಗಳ ಮಾಡಿ ।
ಕಾಯ ಬಿಟ್ಟು ಜರಿದಯ್ಯ ॥
ದೇಹದಷ್ಟ ಭೋಗವನು ॥ಪಲ್ಲ॥

ಹಳೆಯ ಸಗರದಲಿ ನಿಂದು ।
ಹರಿದು ವ್ಯವಹಾರಮಾಡಿ ॥
ನೆರೆದು ಮಾಡಿದೆ ಸಲೆ ಸಂತಿಗಳ ।
ತಾಳಿಯಕೋಟಿಗೆ ನುಲಿದು ಸಂತಿಗೆ ಹೋಗಿ ॥
ಅಲ್ಲಿ ಕಂಡೆ ಸಾಸಾನಗಳನು ॥೧॥

ಜನದ ಮಡುವಿನಲಿ ಬುತ್ತಿಯನುಣಹೋಗಿ ।
ಅಲ್ಲಿ ಕಂಡಯ್ಯ ಸಾಸಾನಗಳನು ॥
ಸಾಸಾನಗಳಕಂಡು ಶರಣೆಂದು ಕೈಯ ಮುಗಿದು ।
ಅಲ್ಲಿತೋರಿದ ಇಪ್ಪತ್ತೊಂದು ಯುಗದ ಸುದ್ದಿಯನು ॥೨॥
ಕಾಲಮಚ್ಚೆಯ ಕಳೆದು ತಲೆಯ ಚಿಂದಿಯನಿಳುವಿ ।

ಮೇಲಾದ ಹೊದಕಿ ನಡುಕಟ್ಟು ಜರಿದು ॥
ಕಾಲ ನಡೆಯಲಿಬಂದು ಹಳೆಯ ಸಗರದಲಿ ನಿಂತು ।

ದೇವಲೋಕದ ನಾಣ್ಯಗಳನೋದುತ ॥೩॥
ಮದ್ದನಿಕ್ಕಿದನಿವನು ಮನೆಯ ಕೊಂಡನಿವನು
ಹಿಡಿತಂದು ಹೊಯ್ಯಿರಿ ನೆರೆದವರು ಎನುತಲಿ ।
ಅಂಜಬೇಡ ಎಲೆ ಸ್ವಾಮಿ ॥
ಅಭಯಹಸ್ತ ನಿಮಗೆ ಗುರುತಾಯಿ ।
ನಿನ್ನ ಮೇಲೆ ಕರುಣ ಹಾಳೆ ॥೪।
।
ಆದಿ ಮಾರ್ಗದಲಿಂದ ಅಮರಪುರಕೆ ಬಂದು ।
ಸಾಧಿಸಿದ ಸತ್ಯ ಧರ್ಮ ತೋರಿದ ॥
ಭೇದಾನಭೇದವನು ಬಲ್ಲೆ ನೀನು ।
ಸಾಧಿಸಿದ ಅಮರಗಣಂಗಳು ನೆರೆದು ॥೫॥

■

೪೨

ಅಲ್ಲಮ ನಾಟವು ಬಂದವೆ ಜಗದೊಳಗೆಲ್ಲ ।ಜನರ ಮೇಲೆ ।
ಬಲ್ಲೆ ಬಲ್ಲೆನೆಂದ ಸಿದ್ದರಿಗೆ ॥ ಮುಂದೆ
ಬಯಲ ಬಯಲನೆ ಹೂಡಿ ॥ಪಲ್ಲ॥

ಡಂಭಕತನದಲಿ ವೇಷವ ತೊಟ್ಟು ।
ಇಂಬುಗೊಂಡು ಮೆರೆವವರು ಶುಂಬರಾಗಿ ಹೋದರಯ್ಯ ।
ಋಷಿಗಳು ಬೆಂಬಳಿದಪ್ಪದಲಿ ॥
ಶಂಭು ಅಮರಕಲ್ಯಾಣದ ದೇವರು ।
ಸಾರದೂರ ಬಂತು ನಂಬಿಕೆ ಅಪನಂಬಿಗೆ ಇಲ್ಲದಲಿ ।
ನಂಬಿ ಜನರು ನೀವು ॥೧॥

ಕಳ್ಳತನದಲಿ ಸುಳ್ಳತನದಲಿ ಮೆರೆವ ಖೊಟ್ಟಿ ಹಿರಿಯರೆಲ್ಲ ।
ಅಲ್ಲವಾಗಿ ಹೋದರಯ್ಯ ತಮ್ಮಟದ ಗುಣದಿಂದ ॥
ಬಲ್ಲಿದನಮರಕಲ್ಯಾಣದ ದೇವರು ಸಾರದೂರ ಬಂತು ।
ಹುಲ್ಲು ಕಲ್ಲು ಹೊತ್ತುಕೊಂಡು ಎಲ್ಲ ಜನರು ನೀವು ॥೨॥

ತಟಕತನದಲಿ ಕೋಟಲೆಗೊಳಬೇಡ ।

ಆಟ ಬಂದವಯ್ಯ ಆಟವ ತಂದವರಲ್ಲದೆ ಮುಂದೆ ।
ಆಟವಿಲ್ಲವೆಂದು ನೋಟಕಾರರು ನೋಡುವರುಂಟೆ ನಾಡ ।
ಪರಪತ್ತೆದಾಟವಲ್ಲವಯ್ಯ ಪಾಟಿಸಿ ಕೇಳಿರೊ ಭಕ್ತರಿದ ।
ಜಗದ ಬೇಟಿಕಾರ ಬಂದ ॥೩॥

■

೪೩

ದೇವ ಬಂದನಮ್ಮ ಇವರ ಕಾಯ ಬಂದನಮ್ಮ ।
ಭಾವ ಭರಿತ ಬಂದ ಬಸವೇಶಲಿಂಗ ಬಂದನಮ್ಮ ॥ಪಲ್ಲ॥

ಸತ್ಯರೂಪ ಬಂದ ಮುತ್ತಳ ಕಳ್ಳರಿಗೆ
ಶಿವಭಕ್ತರಾದವರು ವಸವಂತನಾಡ್ಯಾರೊ ।
ಒತ್ತಿದ ಬೆಂಕಿಯಲಿ ಇನ್ನು ದೀಪವ ಮುಟ್ಟಿಸ್ಯಾರೊ ।
ಎತ್ತ ನೋಡಿದರೆ ಕರ್ತನ ಸುಳುವಿನ ಬೆಳಗಯ್ಯ ॥೧॥

ಸುಟ್ಟ ಸೂರೆಮಾಡಿ ಇನ್ನು ಹೋಯಿತಯ್ಯ ಲೋಕ ।
ಎಷ್ಟೋ ದಿನ ಮೊದಲು ಬೊಬ್ಬಿಟ್ಟು ಸಾರುತಾರೆ ।
ಮನಮುಟ್ಟಿ ನೆನೆದವರಿಗೆ ಅಷ್ಟಭೋಗವುಂಟು ।ಕರ।
ಕಷ್ಟ ಜೀವಿ ಕೇಳೆ ಧರ್ಮದ ಬಟ್ಟೆಗೆ ಬರಲೊಲ್ಲೆ ॥೨।
।

ಹದಿಮೂರು ತಿಂಗಳಿಗೆ ಇನ್ನು ಮದನದ ಕಾಳಗ ।
ಕದನವೆದ್ದು ನೋಡ ಕರ್ಪುರದೊಂದೆ ಮರ ಮುರಿದು ।
ಉದಯವಾದ ಸ್ವಾಮಿ ಇವರ ಮದಗಳ ಮುರಿಯು ಕರ।
ಕುದಿಯವಿಲ್ಲದೆ ದೇವರು ತಾನು ಪದನ ಹೇಳಿಸುತಾನೆ ॥೩।
।

ರಾಯರಾಯರಿಗೆ ಮುಚ್ಚಳವಿಕ್ಕಿದಯ್ಯ ಗುರುವೆ ।
ರಾಕ್ಷಸರಿಗೆ ಇನ್ನು ಆಹುತಿ ಮಾಡಿದಯ್ಯ ಗುರುವೆ ।
ರಾಹುಗಳನೆಲ್ಲ ಮೂಲಿಗೆ ಹಾಕಿದಯ್ಯ ಗುರುವೆ ।
ರಾಜಮಾರ್ಗವನು ನೀನು ತೋರಿದಯ್ಯ ಗುರುವೆ ॥೪॥

ಕಟ್ಯಾರು ತೋರಣವ ಗುರು ಪಟ್ಟಕ್ಕೆ ಬರಲಿಕ್ಕೆ ।
ಅಷ್ಟದಿಕ್ಕಿನವರು ಪಂಚಾರತಿಯನೆತ್ಯಾರು ॥

ಬಿಟ್ಟ ಮಂಡೆಯವರು ಇನ್ನು ಬರಿದನೆ ಕಟ್ಯ್ಯಾರು ಕರ।
ಕಷ್ಟ ನಿಂದಕರನು ತರತರದೊಟ್ಟುತ ಬರುತಾರೆ ॥೫॥

■

ಳಳ

ಕಾಯ ಜೀವವೆಲ್ಲ ದೇವರಾದಡೆ ।
ಹೇರನೊಪ್ಪಿಸಿ ಸುಂಕ ಅರಸಲಿನ್ಯಾತಕೊ ॥ಪಲ್ಲ॥

ಹರಗೋಲನೇರಿ ಅಂಬಿಗನ ಕೈಯಲಿ ಕೊಟ್ಟು ।
ತೆರೆಯ ಮೇಲೆ ಬೀಡೊಂದರ್ತಿಯಲಿ ಇದ।
ತೋರಿ ನಟ್ಟ ನಡುವೆ ನೀರೊಳು ಪೊಟ್ಟಣನುಚ್ಚಿ ।
ಕೊಲಬೇಕೆಂಬ ಸ್ವಾಮಿಘಾತಕತನವನು ಬಲ್ಲರೆ ॥೧॥

ಹಾದಿ ಒಳ್ಳೆದೆಂದು ಹಾದಿಯ ಕೇಳ್ದರೆ ।
ಹಾದಿ ಹಿಡಿದು ಬರುಬಲ್ಲರಷ್ಟೆ ॥
ಕಾನನ ಅಡವಿಯೊಳಗೆ ಕಟ್ಟಿ ಕೊಲುವಂಥ ।
ಸ್ವಾಮಿಘಾತಕತನವನು ಬಲ್ಲರೆ ॥೨॥

ಭಾಷೆಯ ಕೊಟ್ಟು ಒಕ್ಕಲನ ಕರೆಸಿಕೊಂಡು ।
ಲೇಸಾಗಿ ನಿಮ್ಮ ಸಲುವೆನೆಂದರೆ ।
ಭಾಷೆ ಹಿಡಿದು ಬರಬಲ್ಲರಷ್ಟೆ ।ಮುಂದೆ।
ಸ್ವಾಮಿಘಾತಕತನವನು ಬಲ್ಲರೆ ॥೩॥

ಸಕ್ಕರೆ ತುಪ್ಪ ಬಾಳೆ ಹಣ್ಣ ಉಣಲಿಕ್ಕಿ ।
ಮುಚ್ಚಿದ [ವಿಷ]ವನಾರು ಬಲ್ಲರು ಸ್ವಾಮಿ ।
ಇಕ್ಕಿದರೆ ಉಣಬಲ್ಲರಷ್ಟೆ ಮುಂದೆ ।
ಸ್ವಾಮಿಘಾತಕತನವನು ಬಲ್ಲರೆ ॥೪॥

ಎಚ್ಚದವನಿದ್ದಂತೆ ಅಂಬೇನು ಮಾಡುವುದು ।
ನಟ್ಟಿತೆಂದು ಮುರಿಯಲಿ ಬಹುದೆ ॥
ಚಿತ್ತಶುದ್ಧವಾಗಿ ದೇವರ ನೆನೆದರೆ ।
ಕರ್ತನಲ್ಲದೆ ಅದು ತಾಕಲರಿದು ॥೫॥

■

೪೫

ಅರಿವವರಳವೆ ಗುರು ಪರಮ ಗುಹೇಶ್ವರನ ।
ಉರ್ವಿಯೊಳು ಶಶಿ ಮೂಡಿದಂತೆ ಉದಯಕಾಲವು ॥
ಗಿರಿ ಗಂಹರದೊಳಿದ್ದು ವರವು ಮಾನ್ಯವು ಗೆಟ್ಟು ।
ನೆರೆವ ತತ್ಕಾಲವು ಬಂತು ಹರಹರ ॥ಪಲ್ಲ॥

ಕಂದ ಮೂಲವ ಸೇವಿಸಿ ನಿಂದ ತಪಸಿಗೆ ।
ಬೆಂದ ಕಾಲ ಬೆಕ್ಕಿನಂತೆ ಆವಾವ ದೇಶವು ॥
ಚಿಂದಿಗೆ ಅಳಿವು ಇಲ್ಲ ಎಂಬರಿಗಳಿವಕ್ಕು ।
ನಿಂದೆ ಅಹಂಕಾರಗಳಿವು ಹರಹರ ॥
ಸಂದರಿಸಿನವು ಎಲ್ಲ ಸತ್ಯ ಮಿಥ್ಯಾದಿಗಳು ಮುಂದೆ ।
ಹಾರೈಸಿ ಇದ್ದವರೆಲ್ಲ ನೆರೆದಾರು ॥
ತಂದೆ ತಾಯಿಯು ತಮ್ಮ ಪುತ್ರ ।
ಕಳತ್ರರು ಬಂದಂತೆ ಇರಲಿಬೇಕು ಹರಹರ ॥೧॥

ಮೆರೆವ ಮಾನ್ಯರಿಗೆಲ್ಲ ಸೆರೆ ಸೂರೆ ಸಂಹರವು ।
ನರಕ ಪ್ರಾಪ್ತಿಗಳಿನ್ನು ನಿಂದೆ ಕುಂದೆದ ಜನರು ॥
ಸುರರು ಅಸುರರು ಎಲ್ಲ ಶುಭದಲ್ಲಿ ಮಡಿದಾರು ।
ಮೊರೆಹೊಕ್ಕವರ ಕಾಯ್ವರೊ ಹರಹರ ॥
ಪರಿಪರಿಯಲಿಳಿದು ಬಂತು ಪಾಪಭೇದನವು ।
ವರ ಕರಣಗಳು ಕೆಟ್ಟು ವನವಾಸಗಳಾದಾವು ॥
ಮೆರೆವ ಸಿದ್ಧಾಂತವೆಲ್ಲ ಮಾಗಿಯ ಕೋಗಿಲೆಯಂತೆ ।
ಪರಮಪದ ಸಲೆ ರಾಜ್ಯವು ಹರಹರ ॥೨॥

ಶೀಲಾವ್ರತ ಸಂಬಂಧ ಮೇಲ ಪ್ರಬಂಧವು ।
ಕೋಲುಸಾಧನೆಯಂತೆ ಕಾಲದಲಿ ಅಳಿದಾವು ॥
ಕೇಲು ಬಂದು ಮನೆಯ ಸೇರುವ ದಿನ ಬಂತು ।
ಹೋಲಿಕೆಯು ನಡೆಯವಿನ್ನು ಹರಹರ ॥
ಸಾಲಾವಳಿ ಮುನಿದಾವು ಸಕಲ ಪ್ರಪಂಚಗಳು ।
ಪಾಲೊಳಗಣ ಘೃತವು ಪಾಲೊಳಗೆ ಬೆರೆತಂತೆ ॥
ಮೇಲು ಪ್ರಾಣಲಿಂಗಿ ಮೆರವಣಿಗೆ ಸಕಲಕ್ಕೆ ।
ಕಾಲದಲಿ ಕಂಡೆ ಜ್ಞಾನ ಹರಹರ ॥೩॥

ನರಿ ಸಿಕ್ಕು ಸಿಕ್ಕಿ ಗುರು ಉಪದೇಶ ಬೋಧೆಯೊಳು ।
ಸ್ಥಿರರಾಜ್ಯಯೋಗ ಶಿವಯೋಗ ಸಂಬಂಧಗಳು ॥
ಪರುಷರಸ ಮೆರೆಸಿ ಪಾಷಾಣ ಪರುಷಗಳಕ್ಕು ।
ವರವಿತ್ತು ವೀರಶೈವ ಹರಹರ ॥
ಮೆರೆವ ವೇದ ಶಾಸ್ತ್ರ ಮರೆಗಿನ್ನು ಅಡಗ್ಯಾವು ।
ಧರೆಗೊರಗ ಬಂದು ಅವೇ ಜ್ಞಾನ ಜ್ಞಾನದ ತಿಳುವು ॥
ಸುರರಾದಿಗಳು ಎಲ್ಲ ಮರವೆ ಮಾಯದ ಕಟ್ಟು ।
ಪರಮ ಪದ ಸಲೆ ರಾಜ್ಯವು ಹರಹರ ॥೪॥

ಆರು ದರುಶನದೊಳಗಿದ್ದು ಆರೂಢದ ಹಿರಿಯರೆಲ್ಲ ।
ವೀರಶೈವದ ಬಟ್ಟೆ ವಿಲೆಯದೊಳು ನಿಂದಾರು ॥
ಬೇರವರ ರೂಪು ಇಲ್ಲ ಭೇದ ।
ವೈರಾಗ್ಯಗಳು ಕಾರ್ಯ ಕಾರಣಗಳು ಹರಹರ ॥
ಊರ ಮೂರನೆ ಸುತ್ತಿ ಅಗುಸಿಯಲಿ ಬರಬೇಕು ।
ದಾರಿ ಬಟ್ಟೆಗಳಿಲ್ಲ ದೈವಿಕ ಒಂದರೊಳು ॥
ಸೇರುವರೆ ಠಾವಿಲ್ಲ ಸಕಲ ಪ್ರಪಂಚಗಳು ।
ಹಾರಿಹೋದರೆ ಬಿಡುವರೆ ಹರಹರ ॥೫॥

ಸ್ಥಾನ ಸ್ಥಾನಗಳೆಲ್ಲ ಹಾನೆ ಹಾಸಗೆಟ್ಟವು ಒ ।
ಮ್ಮನದೊಳಗೆ ಅಡಗುತ ಬಂದ ತತ್ಕಾಲ ॥
ಜ್ಞಾನಿಗಳು ಊರ್ಜಿತ ಹೀನಜಾತಿಗಳೆಲ್ಲ ।
ಸ್ವಾನುಭಾವವು ಸಿದ್ಧವು ಹರಹರ ॥
ನಾನೆಂಬ ಹಿರಿದು ಕಿರಿದಿನೋಳ್ವಗಡನಿತ್ತು ।
ಭಾನುವಿನ ಉದಯಕ್ಕೆ ತಾರೆಗಳು ಅಡಗುವ ಸುಪಥವು ॥
ಮಾನುಷಗೆ ಅಳಿವು ಘನ ಉಳಿವು ಅಲ್ಪಾಯುಷ್ಯವು ।
ಜ್ಞಾನ ಸಾಕ್ಷಿ ಈ ವಾಕ್ಯವು ಹರಹರ ॥೬॥

■

೪೬

ನಡೆ ಗುರುವೆ ದಂಡು ಅಡವಿಯೊಳಗಿದ್ದರೇನು ಫಲ ।
[ಪ]ಡೆಗಾಯ ಬೇಕು ದುರ್ಬಲ ಮುರಿಯಲು ।ಪಲ್ಲ।

ಏಳು ಏಳಯ್ಯ ದಾಳಿಯ ತೆರಳಬೇಕಿನ್ನು ।
ಆಳು ತೆತ್ತೀಸಕೋಟಿ ದೈವವು ॥
ಏಳಿಲವ ಮಾಡದಿರಿ ನಡೆಯಿನ್ನು ಉಘೆ ಎಂದು ।
ಏಳಬೇಕಿನ್ನು ಸದ್ಗುರುವಿನಾಣೆ ॥೧॥

ಅಸದಳ ವೀರೇಶ್ವರನು ಬಸವ ದಾಳಿಯ ಮುಂತು ।
ದೆಸೆ ದೆಸೆಗೆ ಹರರ ಸಮಯವು ಬಂದಿತು ॥
ಬೆಸನವನು ಕೊಡಬೇಕು ಯಾರಾರಿಗಿಂದು ಮೊದಲು ।
ಶಶಿಧರನ ಆಣೆ ಸಮಯವು ಬಂದಿತು ॥೨॥

ಆಲಸ್ಯ ಮಾಡದಿರಿ ಮೇಲೆ ಸಂಗಮನಾಣೆ ।
ಕೋಲಾಟನಾಡುತಲಿ ನಡೆಯಬೇಕು ॥
ಬಾಲನ್ವಾಕ್ಯವ ಕೇಳಿ ನಲಿದು ಬಂದರೆ ಮುಂದೆ ।
ಜಾಲ ಜಗಕೆ ಹಾಕಿ ಜಾಲಮಾಲೆಯು ॥೩॥

ತಡವು ಮಾಡಲಿಬೇಡ ಒಡೆಯನಾಣೆ ಬೇಗ ।
ಕಡು ಶೀಘ್ರದಿಂದ ನಡೆವುದು ಒಳಿತು ॥
ಮೃಡನ ಶರಣರು ಬೆನ್ನ ಹುಯ್ಯಲಾಗಿ ಮತ್ತೆ ।
ಒಡೆಯನೆ ಬರಬೇಕು ಬೆನ್ನ ಹುಯ್ಯಲಾಗಿ ॥೪॥

ಮನ್ನಿಸಿದೆ ಎಲೆ ಗುರುವೆ ಎನ್ನ ವಾಕ್ಯವ ನೀನು ।
ಇನ್ನು ಆಲಸ್ಯ ಮಾಡೆನು ಎಂದಡೆ ॥
ಎನ್ನೊಳಗೆ ತೃಪ್ತಿಯಾದೆನು ನಾನು ಆಗಳವೆ ।
ಇನ್ನು ಎನ್ನೊಳಗೆ ಬಂದೆನು ಎಂದರೆ ॥೫॥

■

೪೭

ಬಲ್ಲೆನಮ್ಮ ಭವದೂರ ಎಂಬುದನು ಸಿಂಧು ।
ಬಲ್ಲಾಳನಂಗನೆಯ ಬೇಡಿ ಮುನಿದಯ್ಯ ॥ಪಲ್ಲ॥

ಬಿರಿದಿನ ಕಹಳೆಯಲಿ ಪ್ರಭು ನಡೆದು ಬರಲಿಕೆ ಇದಿರಾಗಿ ।
ಮರವಿನ ಮಾಯ ಕವಿದು ॥

ಆರು ಇಲ್ಲ ಪುರಹರ ಎನ್ನೊಡೆಯ ನಂದೀಶ್ವರನು ।
ಈರೇಳು ಭುವನಕೆ ಕರ್ತ ನೀನೆ ॥೧॥

ಕಲ್ಲಿಲಿಟ್ಟವಗೊಲಿದೆ ಕಲ್ಯಾಣದೊಳು ಮೆರೆದೆ ।
ಕಲ್ಲ ನಂದಿಗೆ ಕಬ್ಬ ಮೇಸಿದಯ್ಯ ॥
ಅಲ್ಲವೆಂದರೆ ಅಜಗಣ್ಣನೊಳಗಡಗದೆ ।
ನಿಲ್ಲದೆ ನುಲಿಯ ಚಂದಯ್ಯಗೊಲಿದೆ ॥೨॥

ಶಿಶುವು ಕೊಲಿಸಿದೆನೆಂದು ಹುಸಿಯನಾಡಲಿಲ್ಲ ।
ಹಸಿದೆನೆಂದು ಹಾಲ ಸಲಿಸನೆಂದು ॥
ಪಸರಿಸಿ ಲೋಕವನ್ನು ಸಲಹಿದಯ್ಯನು ನೀನೆ ।
ಕುಸುಮಶರನ ಸುಟ್ಟು ಭಸ್ಮವ ಮಾಡಿದಯ್ಯ ॥೩॥

■

೪೮

ಆರು ಹೂಡಿದರಿದನು ಧಾರುಣಿಯೊಳಗೆಲ್ಲ ।
ಆರಾದರಿದನು ನಿಶ್ಚಯಿಸಿ ॥
ಭಾರವಾದವು ನಿಮ್ಮ ಬಿತ್ತಿದ ಬೆಳಸುಗಳು ।
ಆರೈದುಕೊಳ್ಳಿ ಮಹಾನಾಡೆ ॥ಪಲ್ಲ॥

ಬಿತ್ತನಿಕ್ಕಿದರು ಹದಿನೆಂಟು ಧಾನ್ಯವನು ।
ಕರ್ತರು ಬಂದು ಧರೆಯೊಳಗೆ ॥
ಬಿತ್ತಿದ ಬೆಳಸುಗಳ ಆರೈದುಕೊಳ್ಳಿ ತಮ್ಮ ।
ಆಳು ಮಕ್ಕಳನು ಕಳುವಿದರು ॥
ಆಳು ಮಕ್ಕಳು ಬಂದು ಕಾಲಗೊಯಿಲಿಯ ಕೊಯ್ದು ।
ಕಾಳ ಕಾಳ ಒಬ್ಬಳಿಯ ಮಾಡಿ ॥
ಭಾಳಲೋಚನ ಬಸವ ದಂಡನಾಯಕನವರು ।
ಕಾಳ ಹಸಿನಿಯನೆ ಮಾಡ್ಯಾರು ॥೧॥

ತೆಗ್ಗು ತೆವರುಗಳಾಪವಯ್ಯ ಒಂದಿನಕ್ಕೆ ।
ತೆವರು ತೆಗ್ಗುಗಳಾಪವಯ್ಯ ॥
ಸುಗ್ಗಿಯ ಹದನಂತೆ ಬಂದಿತು ಮುಂದಿನ್ನು ।

ಉಗ್ಘಡಿಸಿ ಸಾಕ್ಷಿ ಸಾರಿದರು ॥
ನಿರ್ಗುಣನು ಅರುಹಿತನು ಅಮರಕಲ್ಯಾಣದ ।
ಸ್ವರ್ಗಲೋಕದ ಕರ್ತ ನುಡಿದ ॥
ಸದ್ಭಕ್ತರ ಒಡೆಯ ಅಮರಕಲ್ಯಾಣದ
ಬುಡಪಟ್ಟದ ಬಸವಲಿಂಗ ॥೨॥

ಹೂಡಿದವರ ಎತ್ತು ಪರವ ತೋರುವ ಎತ್ತು ।
ಬೇರೆ ಮತ್ತೊಂದು ಎತ್ತಲ್ಲ ॥
ಭೂರಿಯಾಟಕೆ ಜಗವ ಸಾರಬಂದೆತ್ತಲ್ಲ ।
ಕಾರುಣವ ಹಿಡಿದು ಬಂದೆತ್ತು ॥
ಕಪ್ಪುಗೊರಳರಿವರು ಭೂಮಿಯಾಕಾಶಕ್ಕೆ ।
ಹೆಪ್ಪು ಕೊಟ್ಟ ಕರ್ತರಿವರು ।
ಕಟ್ಟಾಣಿ ಮುತ್ತಿನಂತೆ ತನ್ನ ನಿಜ ರೂಪ ।
ಮುಟ್ಟಿ ಭವದಲಿ ತೋರ್ಯಾರು ॥೩॥

ನೋಡ ಬಂದರಿವರು ನೋಡಿ ಹೋಪವರಲ್ಲ ।
ಆಡಿ ತಪ್ಪುವರು ತಾವಲ್ಲ ॥
ಕೂಡಿ ಲೋಕದೊಳಗೆ ಸಾರ ಬಂದರಿವರು ।
ಸಾರಿ ಹೇಳಿದರು ಲೋಕಕ್ಕೆ ॥
ಕೇಡು ಬಿಡಿಸುವರಿವರು ರೂಢಿಗಧಿಕರಿವರು ।
ಬೇಡಿದುದನೀವರು ಇವರು ॥
ನುಡಿದಂತೆ ನಡೆಯ ತೋರಲಿ ಬಂದ ಜಗಕೆ ।
ನುಡಿಗೇಳಿ ಬಂದ ಭಕ್ತರಿಗೆ ॥೪॥

ಭೂಮಿ ನಿರ್ಮಿಸಿದ ಕಾಮಿತ ಫಲನೀವ ।
ಪ್ರೇಮದಿಂದಲಿ ನಡೆಸ್ಯಾರು ॥
ಈ ಮಹಿಮೆಯಲಿ ಉಣಸಲಿ ಬೇಕೆನುಲಿ ।
ಕಾಮಧೇನುಗಳ ಕಲ್ಪಿಸಿದ ॥
ನಾಮ ವರ್ಜಿತವಾದ ಶಿವಧ್ಯಾನಗಳ ಕಂಡು ।
ಸ್ವಾಮಿಯ ನೆನೆ ಕಂಡೆ ಮನವೆ ॥
ತಾಮಸವ ಜರಿದು ನಿಸ್ಸೀಮ ದೇವರ ದೇವ ॥೫॥

■

೪೯

[1]ನಿಮ್ಮ ಪಾದವ ನೆನೆದು ನಿಮ್ಮ ಧ್ಯಾನದಲಿರಿಸು ।
ನಿಮ್ಮ ಮೊರೆಹೊಕ್ಕೆ ನಮ್ಮನು ಸಲುವಯ್ಯ ॥ಪಲ್ಲ॥

ಊರು ಸುತ್ತಿನ ಕೋಟೆ ಮೇರೆಗಿಕ್ಕಿದ ಬೇಲಿ ।
ಸಾರುವ ನಾಟಕೆ ಕರರುತಿರಗುತ ॥
ಆರರೆ ಅವಗತವ ಸುಳಿಯ ಬಾರದು ಮುಂದೆ ।
ಸಾರಿ ಡಂಗುರವ ಹೊಯಿಸುತಲಾರೆ ಅಯ್ಯ ॥೧॥

ಬಿದ್ದೆನಯ್ಯ ಗುರುವೆ ಎದ್ದು ನಿಂದಿರಲಾರೆ ।
ಗದ್ಯಾಣದ ಸತವು ಸಾಲದೆನಗೆ ॥
ಒದ್ದೊದ್ದು ಕೊಲುತವೆ ಸರ್ವ ದುರಿತಗಳೆದೆ ।
ಗದ್ದಿಗೆರಾಯ ನಮ್ಮನು ಸಲಹಯ್ಯ ॥೨॥

ಮಾಸಿದವನುಟ್ಟು ಈಸ್ಯಾಡುತೀನೆ ಈ ಪರಿಯ ।
ಬೇಸರದೆ ಸಲಹೊ ನಂದೀಶಲಿಂಗ ॥
ವಾಸರಿಸಿ ಕಾಡುತವೆ ಸರ್ವ ಬಂಬ ದುರಿತಗಳಲಿ ।
ನೋಯಿಸದೆ ಸಲಹೊ ಬಸವಪ್ರಭುವೆ ॥೩॥

■

೫೦

ನಂದಿರಾಯ ಕಳುಹಿದ ಡಂಗುರ ನಿಮ್ಮ ।
ನಂಬಿ ನೆನೆದವರಿಗೆ ಸುಖವಯ್ಯ ॥ಪಲ್ಲ॥

ಅಮರಕಲ್ಯಾಣಕ್ಕೆ ನಡೆಯಲಿಬೇಕು ।
ಅಮರಾವತಿಯಲಿ ನಿಲಬೇಕು ॥
ಸಮರಂತರಾಯನ ನೆನೆಯಲಿಬೇಕು ।
ಕರ್ಮವ ಕಳೆಕೊಳ್ಳಲಿಬೇಕು ॥
ಅರ್ಥವ ತಾನುಣಲಿಬೇಕು ತನ್ನ ।
ಸತಿಯೊಳು ತಾನಿರಬೇಕು ॥
ತನ್ನ ಮನೆಯು ತಣ್ಣಗೆ ಇರಬೇಕು ।
ಧನ್ಯನಾಗಿ ಬದುಕಲಿ ಬೇಕಯ್ಯ ॥೧॥

೧ + ಉದೆದ ಡಂಗುರವು (ಮೂ)

ಒಡಮುರಿಯಲಿ ಬಂಬ ದೈತ್ಯರನು ।
ಗಿಡಮುರಿಯೆಂಬ ಡೆಂಗೆ ಹೂಡಿ ॥
ನಡುಹುರಿಯ ಮೇಲೆ ಘಟ್ಟಿಸುತ ।
ತಡವಿಲ್ಲದೆ ಒರಸೇನೆಂದ ॥
ಸಡಗರ ಸಂಪತ್ತ ನಂಬಿದ ಮನೆ ।
ಪಡಗಲೊಡೆದವು ಬಿತ್ತಿದ ಬೆಳೆ ॥
ಕಡಗೋಲಿಲಿ ತೆಗೆಸೇನೆಂದ ।
ನಡದವರಿಗೆ ಉಣಿಸೆನೆಂದ ॥೨॥

ಚೂಟಕ ದೇಹಕೆ ಸುಖವ ಕೊಟ್ಟು ಒಂ ।
ದಾಟವ ಕಳುಹಿದ ರಕ್ಕಸರಿಗೆ ॥
ಬೇಟೆಕಾರಗೆ ತೊಡರ ಬಲೆಯ ।
ನೀಟವಾಗಿ ಕಳುಹಿದಯ್ಯ ॥
ಪ್ರಭುದಟ್ಟಿಹೊ ಬಾರದು ದೇವರ ನುಡಿ ।
ಹಿಟಗಳೆದವರ ಹಿಡಿತಂದು ॥
ನಾಟಕಲಿಂಗನ ವಾಲಗದಲ್ಲಿ ಕೋ ।
ಲಾಟವನಾಡುತ ಸಾರಿ ಹೇಳಿದ ॥೩॥

■

೫೧

ನನ್ನ ನಾನೆ ತಿಳಿಯೆ ಹಿರಿಯರು ।
ನನಗೆ ಹೇಳಿದರೆ ಕೇಳೆನು ॥
ಅನ್ಯಾಯವು ಎನ್ನೊಡಲು ಆಗಿದೆ ।
ಬೆನ್ನ ಬಿಡದಿದೆ ದುರಿತವು ॥ಪಲ್ಲ॥

ಗುರುವು ತೋರಿದ ಉಭಯಲಿಂಗವ ।
ಕಾರುಣನಿಧಿ ಕೃಪೆಯಿಂದಲಿ ॥
ಸರಕು ಮಾಡಿದ ಸ್ಥಾವರ ಜಂಗಮ ।
ಇರುವವೆರಡೆ ದೇವವು ದೊರಕೊಳ್ಳದು ಸುಜ್ಞಾನವೆನಗೆ ॥
ಹಿರಿದು ಕವಿಗಳು ಸ್ತುತಿಸದೆ ।
ಅರಿವಿನಲ್ಲಿ ಭಕ್ತರನಾದರೆ ॥
ಸಾರಿ ಬದುಕುವ ಜಂಗಮ ॥೧॥

ತನ್ನ ತಾನರಿದಾತಂಗೆ ।
ತನ್ನ ಪ್ರಾಣವೆಂಬುದು ಲಿಂಗವು ।
ತನ್ನ ತಾನರಿದಾತಂಗೆ ನಡೆ ನುಡಿವುಳ್ಳರೆ ಜಂಗಮ ॥
ತನ್ನ ತಾನರಿದಾತಂಗೆ ಮರಳಿನ್ನು ದೈವಗಳಿಲ್ಲವು ॥೨॥

ವೇದ ಶಾಸ್ತ್ರ ಪುರಾಣ ಕಥೆಗಳು ।
ಆದಿ ಶಬ್ದದ ರಾಶಿಯು ॥
ಭೋದೆಯಿಂದಲಿ ಭೇದಿಸಿ ಧರ್ಮದ ।
ಹಾದಿವಿಡಿಸಲು ಬಂದವು ಇವ ॥
ನೋದಿ ಪಾತಕನಲ್ಲದೆ[ಯ]ಲ್ಲದೆ ।
ವೇದಿಸಿಕೊಳಲರಿಯೆ ಮನದಲಿ ॥
ಓದಿ ಗಿಳಿ ಕೊರಕೂಳ ।
ತಿಂದಂತಾಗದೆ ನನಗಂತಾಯಿತು ॥೩॥

■

೫.೨

ಪಾದವನೂರಿ ಪಾತಾಳದುದಕವ ತೆಗೆದೆ ।
ಜಗಕಾಧಾರವಾದಿ ಗುರುಬಸವ ನೀನೆ ॥ಪಲ್ಲ॥

ಕರುಣಸಾಗರವೆಂಬುದೆ ಮೇರುಮಂದಿರವು ।
ಶರಣು ನಾಮೆಂಬುದೆ ಕಾಮಧೇನು ॥
ಚರಣ ನಾಲ್ಕು ನಂದೀಶ್ವರನ ತೀರ್ಥದಲಿ ।
ಧರಣಿ ಬೆಳೆಯೆ ಬೆಳದೆಲ್ಲ ದಣಿದು ॥೧॥

ಕಂಗಳ ಮುಂಚು ಲೋಕಂಗಳಿಗೆ ಹಿತವಾಗಿ ।
ಮುಂಗಾಲ ಗೆಜ್ಜೆ ಗರ್ಜನೆಯ ರಭಸ ॥
ಸಂಗಯ್ಯನೆಂಬ ನಾಮವ ತೋರಿ ಧರೆಯೊಳಗೆ ।
ಲಿಂಗ ಬಸವೇಶ ಪ್ರಭುರಾಯ ನೀನೆ ॥೨॥

ಅಕ್ಕೆ ಬಂದಿತು ನಮ್ಮ ದುಃಖವನೆ ನಿಲಿಸಯ್ಯ ।
ಸಿಕ್ಕಿದೆವು ಮರುಳ ಮಾತಿಲಿ ನೋಡಿ ।
ಎಕ್ಕಸರು ಹಲ್ಲು ಬಾಯನುದೆರದು ಸಾವುತಿವೆ ।
ದೊಕ್ಕನುಳಿವಿ ಕಾಯೊ ಬಸವಪ್ರಭುವೆ ॥೩॥

ಊರೂರ ದುಃಖವನು ಕೇಳಿದನು ಪ್ರಭುರಾಯ ।
ಮೀರಿ ಕಳುವಿದ ಮಳೆಯ ಮನವು ದಣಿಯೆ ॥
ಧರುಣಿಯೊಳಗೆ ಸಂಪತ್ತಿಗೆ ಕಡೆಯಿಲ್ಲ ।
ದಾರದರೆ ನೆನೆಯು ನಂದೀಶನ ॥೪॥

ಗಂಡನಲಿ ಉಂಡುಟ್ಟು ಮಿಂಡನ ತಲೆ ಹರಿದು ।
ಕಂಡಲ್ಲಿ ಗಾಸಿಯಹದು [ಯ]ಮಬಾಧೆ ॥
ಅಂಡದೊಳಗಂಡ ಭೂಮಂಡಲವನೆತ್ತಿ ನವ ।
ಖಂಡ ಪೃಥ್ವಿಯ ತೋರಿದ ಮಹಿಮನ ॥೫॥

■

೫೩

ನಾಮವನಿಡಿ ಅಣ್ಣಗಳಿರೆ ।
ನಾಮವನಿಟ್ಟು ಮಹಿಮನಾಗದೇನೆಂಬೆನು ॥ಪಲ್ಲ॥

ಕಟ್ಟಿದ ಮೂರು ಎಳೆಯ ಜನಿವಾರವ ।
ಮನ ಮುಟ್ಟಿ ಧರಿಸಲಿಬೇಕು ಅಂಗದ ಒಳಗೆ ॥
ಇಟ್ಟ ನಾಮವನು ತೊಡದಿಟ್ಟವುದವನು ।
ಬಿಟ್ಟು ನೋಡಿದರಿಲ್ಲಿ ಮನದ ನಾಮವ ॥೧॥

ವೇದ ಮಾತೆ ಗಾಯತ್ರಿಯ ಅಂಗದ ವಸ್ತ್ರವ ।
ಗಾಯತ್ರಿಯ ಗರ್ಭದಲಿ ನಂದಿ ಜನಿಸಿದ ॥
ನಿಗಮ ಮೂರು ಎಳೆಯ ಜನಿವಾರ ಹಾಕಿದ ।
ತಾ ಗುರುವಿಗೆ ಗುರುವಾಗಿ ನಾಮವಿಟ್ಟನು ॥೨॥

ಪ್ರಥಮ ನಾಮವನು ರೇವಣಗಿಟ್ಟನು ।
ದ್ವಿತೀಯ ನಾಮವನು ಮರುಳಸಿದ್ಧಗಿಟ್ಟನು ॥
ತೃತೀಯ ನಾಮವನು ಏಕೋರಾಮಗಿಟ್ಟನು ।
ಚತುರ ನಾಮವನು ಆರಾಧ್ಯಗಿಟ್ಟನು ॥೩॥

ಅಂತು ಸಕಲ ರುದ್ರರಿಗೆ ನಾಮವಿಟ್ಟನು ।
ಮರ್ತ್ಯ ಸ್ವರ್ಗ ಪಾತಾಳಕ್ಕೆ ನಾಮವಿಟ್ಟನು ॥

ಇಂತು ಚಂದ್ರ ಸೂರಿಜರಿಗೆ ನಾಮವಿಟ್ಟನು ಮುಂದೆ ।
ಬ್ರಹ್ಮ ವಿಷ್ಣುವಿಗೆ ನಾಮವಿಟ್ಟನು ॥೪॥

ನಾಮದೊಳಗೆ ಗುರುವು ಲಿಂಗ ಎರಡು ಮುಗಿದವು ।
ಇಟ್ಟ ಬೊಟ್ಟಿನೊಳಗೆ ದೇವನಿಷ್ಠೆ ನಿಂತಿತು ॥
ಮುಟ್ಟಿ ಮೂರರೊಳಗೆ ಸಕಲವೆಲ್ಲ ಕೆಟ್ಟಿತು ।
ಇಟ್ಟ ನಾಮವಳಿಯಲಿಲ್ಲ ಬಸವಪ್ರಭುವಿಗೆ ॥೫॥

ಸುಟ್ಟ ಭಕ್ತಿಯೆಂಬ ಘನವು ನಿಷ್ಠೆ ತೋರಿತು ।
ತುಟ್ಟ ತುದಿಯಲಿದ್ದ ನಾಮವ ತೊಟ್ಟು ನಿಂತಿತು ॥
ಮಟ್ಟಿ ನಾಮವಲ್ಲವಿದು ಇಟ್ಟ ನಾಮವು ।
ಇಟ್ಟ ಬಸವಲಿಂಗ ಜಗಕುತ್ಪತ್ಯ ನಾಮವ ॥೬॥

ಬಂದ ಬ್ರಹ್ಮಚಾರಿಯಾಗಿ ಕಲ್ಯಾಣದಲ್ಲಿ ।
ಅಂದು ಐದು ಎಳೆಯ ಜನಿವಾರವ ಧರಿಸಿದ ॥
ತಂದ ಚೆನ್ನವ ಆರು ಎಳಿಯ ಜನಿವಾರವ ।
ಕುಂದಾಗವಾಗುತದೆ ಬೊಟ್ಟನಿಟ್ಟದು ॥೭॥

ಒಂದು ಬೊಟ್ಟು ನಾಮವೆರಡು ತಂದ ಮೂರನು ।
ಹಿಂದುಗಳೆದ ಐದು ಎಳೆಯ ಜನಿವಾರವ ॥
ಕುಂದುಗವಾಗುತಿದೆ ಬೊಟ್ಟನಿಟ್ಟದು ॥೮॥

ಇಟ್ಟ ಬೊಟ್ಟು ಅಳಿಯಲಿಲ್ಲ ಅಂದಿನ ಯುಗದಲಿ ।
ಕೊಟ್ಟ ವರವು ಶರಣರಿಗೆ ತಪ್ಪಲಿಲ್ಲವು ॥
ಬಿಟ್ಟು ಹೋಗದಂಗ ಗುರುವು ಪ್ರಾಣಲಿಂಗವು ಅವರಿ ।
ಗಿಟ್ಟ ಶಾಪ ಅಂಗ ಲಿಂಗವೆರಡು ಆದವು ॥೯॥

ಜಗಕೆ ನಾಮವಿಟ್ಟ ಬಸವ ತನಗೆ ಸಂಗನು ।
ಮುಗದ ಮೂರರೊಳಗೆ ಗುರುವು ಲಿಂಗ ಜಂಗಮ ॥
ಯಾವಾಗ ಮಂಗಳವಾರದೊಳಗೆ ಸುಳಿವನು ॥೧೦॥

ನಾಮವನಿಟ್ಟವರು ಶಿಲೆಗೆ ತಾವು ಬಲ್ಲರೆ ।
ಯಾವ ದಿನದ ಸ್ಥಾಪ್ಯವನು ಮಾಡಿ ಹೋದರು ॥

ಮಾವನಾಗಿ ಬಂದು ನಾಮವಿಟ್ಟ ಕಾರುಣ ತಾನು ।
ಅಳಿಯನಾಗಿ ಬಂದು ಮೆಟ್ಟಿ ನಿಂತನು ॥೧೧॥

ಭಕ್ತಿ ತೃಣದ ಒಳಗೆ ಹುಟ್ಟಿ ಇಟ್ಟ ಬೊಟ್ಟಿಗೆ ।
ಕಷ್ಟ ಹಿಡಿದು ನಾಮ ಬಂತು ಮುಟ್ಟಿ ಮೂರನು ॥
ಎರಡ ಬಿಟ್ಟು ನೋಡಿದರಿಲ್ಲ ಮನದ ನಾಮವ ॥೧೨॥

ಕಲ್ಲ ಪ್ರತಿಮೆಗಿಟ್ಟ ನಾಮವೆಲ್ಲ ತೊಳೆದಿತು ।
ಬಲ್ಲಿದ ಶರಣರಿಗೆ ನಾಮವಿಟ್ಟಿತು ॥
ಕುಲ ಹದಿನೆಂಟಕೆಲ್ಲ ಸಲ್ಲವಿಟ್ಟಿತು ।
ಗೆಲಬೇಕು ಬೊಟ್ಟನಿಟ್ಟ ದಿನದ ಅಂದಿಗೆ ॥೧೩॥

ಹಳೆಯ ನಾಮವಿಟ್ಟು ಬಸವಲಿಂಗ ಬಂದನು ।
ಎಳೆಯ ನಾಮವಿಟ್ಟು ಬಸವಲಿಂಗ ಬಂದನು ॥
ಮಳಲ ಹಗೆಯ ತಗೆದಂತೆ ಸಕಲರೆಲ್ಲ ಬಂದರು ।
ತೊಳೆದ ಮುತ್ತಿನಂತೆ ಚನ್ನಪ್ರಭು ಬಂದನು ॥೧೪॥

ಕುಟ್ಟಿ ಆರು ದರುಶನಕ್ಕೆ ಬೊಟ್ಟನಿಟ್ಟರು ।
ತೊಟ್ಟು ಇದ್ದ ಆಚಾರವ ಕೊಟ್ಟು ತೆಗೆದು ಇದ್ದರು ॥
ಮುಟ್ಟಿ ಇಷ್ಟದೊಳಗೆ ಎಲ್ಲ ಮೊಟ್ಟೆಗಟ್ಟಿತು ।
ಇಟ್ಟ ನಾಮವಳಿಯಲಿಲ್ಲ ಬಸವ ಪ್ರಭುವಿಗೆ ॥೧೫॥

ಬೊಟ್ಟನಿಟ್ಟ ದಿನಕೆ ಬಂದು ಮೆಟ್ಟಿ ನಿಂತರು ।
ಇಟ್ಟ ನಾಮವಳಿದು ಮತ್ತೆ ನಾಮವಿಟ್ಟರು ॥
ಮುಟ್ಟಿ ಬಂದ ಶರಣರಿಗೆ ಕೊಟ್ಟು ನಿಂತರು ।
ಎಷ್ಟು ಯುಗದ ತಪಸಿಗಳನು ಕಟ್ಟ ಬಂದರು ॥೧೬॥

ನಾಮ ಹೊರತು ಇಲ್ಲ ಜಗದ ಯಾವ ಮಹಿಮೆಯು ।
ಪಾಮರ ಜೀವಿಗಿನ್ನು ನಾಮವಿಲ್ಲವು ॥
ಸ್ವಾಮಿಯ ಕೃಪೆಯಿಂದ ನಾಮ ಬಂದಿತು ।
ಈ ಮಾಯ ನಾಮವ ಹಾರುವ ಇಡಲಿಬಾರದು ॥೧೭॥
ನಾಮ ಮೂಗಿಲಿಟ್ಟವನು ರೋಮಲಿಂಗನು ।
ಆ ಹನುಮ ವಿಷ್ಣುವಿನ ಕಟ್ಟಿ ಆಳಿದ ॥

ರಾವಳಂಗೆ ಕೊಟ್ಟ ವರವ ಬಯಲ ಮಾಡಿದ ।
ದ್ವಾಯಲಿಂಗದ ಮಗನು ಮಾಯ ಹನುಮನು ॥೧೮॥

ನಂದಿ ಬಂದು ಲಿಂಗವನು ಹೋಗಲಾಡಿದ ।
ತಿರಿಗಿ ಬಂದು ಲಿಂಗವ ತನ್ನೊಳಗೆ ಮಾಡಿದ ॥
ಎಂದು ಲಿಂಗ ಕಳವು ಇಲ್ಲ ಕೇಳಿ ಶರಣರು ।
ಅಂದು ಕೊಟ್ಟ ವಿಷ್ಣುವಿಗೆ ಫಲವು ಮುಗಿದಿತು ॥೧೯॥

ಅಂದು ಹೋದ ಹನುಮಂಗೆ ಲಿಂಗವಿಲ್ಲವು ।
ಇಂದು ಬಂದ ಲಿಂಗಕಾಗಿ ಮರಳಿ ಭವದಲ್ಲಿ ॥
ಎಂದಿನಾಟವಲ್ಲವಿದು ಮುಂದೆ ನಿಂತದು ।
ಬಂದ ಭವವನರಿತಂಗೆ ಲಿಂಗ ಸಾಧ್ಯವು ॥೨೦॥

ಎಲ್ಲ ದೇವರದೇವ ನನ್ನ ಒಡೆಯನು ।
ಬಲ್ಲಿದ ಸಂಗನ ಬಸವಣ್ಣನು ॥
ಎಲ್ಲರು ಇನ್ನು ತಿರಿಗಿ ಹೋಗ ಬೇಕು ಎಂದನು ।
ಅಲ್ಲಿ ಯಾರು ಇರಲಿಲ್ಲ ಕೈಲಾಸ ಮುಚ್ಚಿತು ॥೨೧॥

■

೫೪

ಪಾಷಾಣವ ಬಿಡು ಲೇಸುಳ್ಳ ಲಿಂಗವಿಡಿಯೆ ।
ಸುಜಲ್ಮದಲ್ಲಿ ಬಂದಿರಯ್ಯ ॥ಪಲ್ಲ॥

ಪಾದತೀರ್ಥ ಪ್ರಸಾದವು ಜಿಹ್ವೆದಲ್ಲಿ ।
ಆದಾವುದರಿಂದ ಹೇಳಿರಯ್ಯ ॥
ಹಾದಿಯನೆ ಬಿಟ್ಟು ಅಡವಿಯ ಹೊಕ್ಕರಾಗದು ।
ನಾದ ಬಿಂದು ಬಯಲಾದವಯ್ಯ ॥೧॥

ಆರರ ಕೃತಕವು ಕುರುಹಿನೊಳೆಲ್ಲವು ।
ಬೇರೆ ಇಪ್ಪದು ಮನ ದೃಡಭಕ್ತಿ ॥
ತಾರಿಯ ಕಾಯನು ಕುರಿ ಮೇಯ್ದು ಉಗುಳಿದಂತೆ ।
ಕಾರ್ಯ ಕಾರಣವಿಲ್ಲವಯ್ಯ ॥೨॥

ಉಂಗುಷ್ಟವೇರಿದದು ಅಂಗುಷ್ಟ ಮಾಲೆಯಿದು ।
ಲಿಂಗವಾದರೆ ಅ[ಳಿ]ವಾಗುವುದೆ ॥
ಸಂಗವು ನಾಲ್ಕು ದಿನ ಸತಿಯಗಿ ಇದ್ದದು ।
ಮುಂಗುಣಿಯ ಬಿದ್ದು ಹೋದೆವಯ್ಯ ॥೩॥

ಕೊಟ್ಟ ಗುರು ಸರ್ವಕ್ಕೆ ಇಟ್ಟನೆ ನಾಮವನು ।
ನಟ್ಟನೆ ನಾಲ್ಕು ಆಚಾರವ ॥
ನಿಷ್ಠೆಯು ಮನ ದೃಢವಿಲ್ಲದಿದ್ದರೆ ಇದು ।
ಭ್ರಷ್ಟಾಗಿ ಹೋಗುವುದು ಕಾಣಿರಯ್ಯ ॥೪॥

ಮೊಲೆಯೊಳಗೆ ಓ ಎಂದು ಶಿಲೆಯೊಳಗೆ ನಿಂದೆನು ।
ಸಲೆ ಸಿದ್ಧ ಪ್ರಸಿದ್ಧ ಚಿನ್ಮಯನು ॥
ಕೊಲೆಯ ಕಟ್ಟಿದ ನಾಲ್ಕು ಯುಗವರಿವನಕಲಿ ।
ಫಲ ಮುಗಿದು ಶಿಲೆಯು ಆದವಯ್ಯ ॥೫॥

ವಿಷ್ಣುವಿನ ಭಕ್ತಿಗೆ ಮುಟ್ಟಿ ಮೆಚ್ಚಿದ ಗುರುವು ।
ಕೊಟ್ಟನು ನಾಲ್ಕು ಯುಗ ಪೂಜೆಯನು ॥
ಕಿಟ್ಟ ಕಬ್ಬಿಣವು ಬಿಟ್ಟು ಸಿಡಿದಂತೆ ॥
ನಟ್ಟ ಕಂಬದ ಮುಟ್ಟನಯ್ಯ ಸಿಡಿಯ ॥೬॥

ಅಂದಿನ ದಿನದಲ್ಲಿ ಬಂದ ಪ್ರಭುವನು ।
ಕುಂದುನಾಡಿದರು ಕುಲಕೋ[ಟ್ಯಾ]ಚಾರ್ಯ ॥
ಚಂದ್ರ ಸೂರಿಜರುಳ್ಳನಕ ರವರವನರ್ಕ ।
ಬಂಧನದೊಳು ಬಿದ್ದು ಹೋದರಯ್ಯ ॥೭॥

ಹೊತ್ತ ಜಡೆಗಳು ಬತ್ತಲೆ ಕೈಪವು ।
ಮತ್ತೆ ಮಾಡುವ ಪಾಪವು ಶುದ್ಧವು ॥
ಎತ್ತಣ ತೀರ್ಥ ಪ್ರಸಾದವು ಜಲ್ಮಕ್ಕೆ ।
ಮತ್ತೆ ನಿಮ್ಮಲ್ಲಿ ಇಲ್ಲ ಚಿತ್ತ ಶುದ್ಧ ॥೮॥

ಉಂಡ ಮನೆಗೆ ಎರಡು ಬಗೆದ ಕಾರಣದಿಂದ ।
ಬಂಡಾಗಿ ಹೋದರು ತಮ್ಮ ತಾವೆ ॥

ಲೆಂಡ ಪುಂಡರು ಎಲ್ಲ ಕಂಡರೆ ಗುರುವಿನ ।
ಗಂಡನುಳ್ಳರೆ ರಂಡೆಯಾಗುವಳೆ ॥೯॥

ಪೂರ್ವ ಆಚಾರಕ್ಕೆ ಪ್ರಾರಬ್ಧವಿಲ್ಲದೆ ।
ಹೋರ್‍ಯಾಡಿರೇತಕೆ ಹೋಗಿ ಬೇಗ ॥
ಬೇರು ಮುಂತನಿನ್ನು ನಾಶವರಿದಂತೆ ।
ದೂರವು ಭಕ್ತಿಸ್ಥಲ ಸೇರವಯ್ಯ ॥೧೦॥

ಆಚಾರ ನಾಲ್ಕಕ್ಕೆ ವಿಚಾರವಿಲ್ಲದೆ ।
ದೀಕ್ಷೆ ಉಪದೇಶ ಹೋಯಿತೆಂದೆ ॥
ಮಾಸನೂರ ಮಡಿವಿಲೆ ಸುರಗಿಗಳು ಎದ್ದಾವು ।
ಲಾಂಛನಕೆ ಕಳ್ಳರಾದರಯ್ಯ ॥೧೧॥

ಆರು ಸ್ಥಲದಲ್ಲಿ ಆರೂಢದ ಲಿಂಗವು ।
ಬೇರೆ ಇಪ್ಪದು ಬ್ರಹ್ಮ ಬ್ರಹ್ಮಿಯಲ್ಲಿ ॥
ತೋರುವ ಗುರು ಬಂದಾ ಆರಾರ ನಿಷ್ಠೆಯನು ।
ಸೇರುವರೆ ಪಾದ ದೂರವಯ್ಯ ॥೧೨॥

■

೫೫

[೧]ಅಳುವ ಕಳೆಯ ಬಂದಾರೆ ।
ಹಳಿಯ ಬೇಡ ಮುಂದೆ ಜನವು ॥
ಇಳಿದು ಬಂದ ಪ್ರಭುಲಿಂಗ ಬೆಳಗುದೋರಲು ॥ಪಲ್ಲ॥

ಇಷ್ಟಲಿಂಗ ದೇವರಾದರೆ ಬಿಟ್ಟು ಕಟ್ಟಲಳವೆ ನಾವು ।
ಕಟ್ಟಿ ಭ್ರಷ್ಟರಾದರಲ್ಲದೆ ಬಿಟ್ಟು ಕಟ್ಟುತ ॥
ನಿಷ್ಠೆ ನಿಜವ ಕಾಣರಲ್ಲ ಅಷ್ಟತನುವಿನೊಳಗೆ ಪ್ರಾಣಲಿಂಗವ ।
ಕಟ್ಟಿಗೆ ಸಲ್ಲದ ಹಾನೆ ದೃಷ್ಟ ನೋಡಿರೊ ॥೧॥

ಜಗದ ಅಗಲ ಮಿಗಿಲ ದೇವ ಒಗೆದ ವಸ್ತ್ರದೊಳಗೆ ಇಹನೆ ।
ಬಿಗಿದು ಬಿಗಿದು ಕಟ್ಟಿದೆವು ದೇವರೆಂಬುತ ॥

---

೧ +ವೀರಪ್ಪಯ್ಯನ ಪಾದವೇ ಗತಿ (ಮೂ)

ನಿಗಮ ಲಿಂಗ ಹಿಂಗದ್ಹಾನೆ ಅಂಗದೊಳಗೆ ಸಂಗ ತಾನು ।
ಹಗರಣವ ಮುರಿದು ನೂಲ ಮಾಲೆ ಭಕ್ತಿಯ ॥೨॥

ಇಷ್ಟಲಿಂಗ ದೇವರೆಂದು ಅಷ್ಟವಿಧಾರ್ಚನೆಗಳಿಂದ ।
ಮುಟ್ಟಿ ಪೂಜೆಮಾಡಿ ಪಾದತೀರ್ಥವೆರೆದರು ॥
ಕಟ್ಟಿದರು ತಮ್ಮ ಉಂಗುಷ್ಟವೀಗ ದೇವರೆಂದು ।
ದೃಷ್ಟ ತನ್ನ ಉಂಗುಷ್ಟಕ್ಕೆ ಕಟ್ಟಿ ಎರಗಲ್ಯಾತಕೊ ॥೩॥

ನಾವು ದೇವರಾದ ಬಳಿಕ ನಾವು ಕಟ್ಟಿಕೊಳಲಿ ಬಹುದೆ ।
ದಾವ ಭಾವದಲ್ಲಿ ಕಟ್ಟಿ ದೇವರೆಂಬೆವು ॥
ಸಾವ ನರನು ದೇವರಹುದೆ ಶಿಲೆಯ ಲಿಂಗವೆನಲಿಬಹುದೆ ।
ಜೀವಕಾವ ದೇವ ನೀನೊಬ್ಬನಲ್ಲದೆ ॥೪॥

ಇಷ್ಟಲಿಂಗವೀಗ ಅಂಗ ಕಟ್ಟಬೇಕು ನಯನ ದ್ವಂದ್ವ ।
ನಿಷ್ಠೆ ನಿಜದಿಂದ ಒಲಿಸಿಕೊಳಲಿಬೇಕೀಗ ॥
ದೃಷ್ಟ ಇಂದ್ರಿಯ ಐದ ನಿಲಿಸಿ ಮುಟ್ಟಿ ಕಾಣಬೇಕು ಘನವ ।
ಅಷ್ಟರಿಂದ ಅಂಗ ಲಿಂಗ ಐಕ್ಯವಾಪನು ॥೫॥

ಇಷ್ಟಲಿಂಗ ದೇವರೆಂದು ಮುಟ್ಟಿ ಪಾದತೀರ್ಥವೆರೆದು ।
ಕಟ್ಟಿದರು ತಮ್ಮ ಅಂಗುಷ್ಟ ಮಾಲೆಗೆ ॥
ಇಟ್ಟರಯ್ಯ ಒಂದು ಬೊಟ್ಟು ವಿಭೂತಿಯ ಪೆಂಡಿಕಿಗೆ ।
ಬಿಟ್ಟು ತಮ್ಮ ಎಂಜಲುಗುಳ ಪ್ರಸಾದ ಲಿಂಗಕ್ಕೆ ॥೬॥

ಉತ್ತಮದ ವಸ್ತ್ರಕೊಂಡು ಮತ್ತೆ ಶಿವದಾರದಲ್ಲಿ ।
ಹತ್ತೆ ಕಟ್ಟಿ ಬಿಗಿದು ಬಿಗಿದು ಕಟ್ಟಿಕೊಂಡಿರಿ ॥
ಎತ್ತಲಿಂದ ಹುಟ್ಟಿ ಬಂತು ಸುತ್ತಿ ಸುತ್ತಿ ಕಾಲ ಕಾಲ ।
ಮೃತ್ತಿಕೆಯ ದೇವರೆಂದು ಹೂಳಿ ಕಳೆದಿರಿ ॥೭॥

ಒಂದು ಕಾಲಿಲಿಂದ ಹುಟ್ಟಿ ವಂದು ಕಾಲಿಲಿಂದ ಏರಿ ।
ಒಂದು ಕಾಲಿಲಿಂದ ಇಳಿದು ಹೋದುದರಿಯಿರೆ ।
ಬೆಂದ ಚಟವು ನಿಮಗೆ ಬಿಡದು ಅಂದು ಇಂದು ಒಂದು ಪರಿಯ ।
ಕುಂದು ನಿಂದೆವಾಡಿ ಆಡಿ ಕೆಡೆದು ಹೋದಿರಿ ॥೮॥

ಇಷ್ಟಲಿಂಗ ದೇವರೆಂದು ದೃಷ್ಟ ಅಂಗದೊಳಗೆ ಇಟ್ಟು ಮಾರಿ ।
ಕಟ್ಟಿದನು ಗುರುವು ತಮ್ಮ ಪಾಕಿ ಆಸೆಗೆ ॥
ಇಟ್ಟು ಮೂರ ಮಾರು ಮಾರಿ ಕಟ್ಟಿಕೊಂಡರೇಕೆ ಅವರು ।
ಕೊಟ್ಟು ಕೊಂಬದು ಹುಸಿ ಮಿಸಳ ಆಣೆ ಆಸೆಗೆ ॥೯॥

ಅಂಗದ ಮೇಲೆ ಲಿಂಗವ ಕಟ್ಟಿ ಅಳಿದು ಹೋಪದೇನು ಕಾಯ ।
ಕಂಗುರುಡರ ಮಾತ ಕೇಳಬಾರದು ॥
ಲಿಂಗಾಂಗಿ ಒಳಗೆ ಇಷ್ಟಲಿಂಗ ಅಂಗ ಅಂಗ ಲಿಂಗ ।
ಸಂಗವಾದರೆ ಲಿಂಗ ಸಾಧ್ಯವಾಪದು ॥೧೦॥

ತಮ್ಮ ಪಾದತೀರ್ಥವೆರೆದು ತಮ್ಮ ಪ್ರಸಾದವನು ತೋರಿ ।
ತಮ್ಮ ಉಂಗುಷ್ಟದಲಿ ಕಟ್ಟಿ ಇಷ್ಟಲಿಂಗವ ॥
ತಮ್ಮ ತಾವೆ ತಿರಿಗಿ ತಮ್ಮ ಕೊರಳಿಗೆ ಕಟ್ಟಿಕೊಂಡ ಬಳಿಕ ।
ನಮ್ಮ ಸಂಗಮೇಶ ಮೆಚ್ಚ ಅವರ ಭಕ್ತಿಯ ॥೧೧॥

ಪಾದತೀರ್ಥವೆರೆದನೇಕೆ ಆದಿ ಗುರು ಇಷ್ಟಲಿಂಗಕೆ ।
ಭೇದತಿಳಿದಿರಿದನು ನೀವು ಹೇಳಿ ಕಳಿಹಿರೊ ॥
ವಾದವೇತಕೆ ಮಾತು ಮಾತಿನಿಂದ ಕಳೆಯಬೇಕು ।
ಬೀದಿಗರುವ ಮಾಡಬೇಡ ಇಷ್ಟಲಿಂಗವ ॥೧೨॥

ಇಷ್ಟಲಿಂಗ ಉಂಗುಷ್ಟದಲಿ ಕಟ್ಟಿಕೊಂಡಿರೇಕೆ ಕೇಳಿ ।
ಮೊಟ್ಟಮೊದಲು ಉರವು ಶಿರವು ಘನವು ಎಂಬಿರಿ ॥
ನಿಷ್ಠೆ ನಿಜವ ಕಂಡರಿದನು ದೃಷ್ಟವಾಗಿ ತೋರಬೇಕು ।
ನಷ್ಟ ಭ್ರಷ್ಟರಿಗೆ ನೋಡು ಹೇಳಬಾರದು ॥೧೩॥

ಇಟ್ಟಾನೆ ಪ್ರಾಣಲಿಂಗವೆಂಬ ಘನವು ಅಂಗದೊಳಗೆ ।
ಬಿಟ್ಟು ಪ್ರಾಣಲಿಂಗ ಹೋಗೆ ಅಂಗ ಕಳೆವುದು ॥
ಇಷ್ಟಲಿಂಗವೆಂಬ ಅಂಗ ಮೇಲೆ ಕಟ್ಟಿ ತೆಗೆದ ಬಳಿಕ ಕಾಯ ।
ಕೆಟ್ಟು ಹೋಪದೇನು ಆಗ ದೃಷ್ಟ ನೋಡಿರೊ ॥೧೪॥

ಇಷ್ಟಲಿಂಗ ದೇವರೆಂದು ಕಟ್ಟಿಕೊಂಡ ಬಳಿಕ ಪ್ರಾಣ ।
ಬಿಟ್ಟು ಹೋಗಬಹುದೆ ಜೀವ ಅಂಗ ಲಿಂಗವ ॥

ಕಟ್ಟಿ ಇದ್ದು ಇಷ್ಟಲಿಂಗ ಅಂಗಸಹಿತ ಕುಣಿಯ ಬಿದ್ದು ।
ಮೆಟ್ಟಿ ಮೆಟ್ಟಿ ಮಣ್ಣ ಹಾಕಿ ಹೂಳಿ ಕಳೆದಿರಿ ॥೧೫॥

ಕೊಟ್ಟ ಗುರುವು ಮುಂತು ಆಗಿ ಉಗಿಯ ಕೊಟ್ಟ ಜೀವಕಾಗಿ ।
ಕೊಟ್ಟ ಇಷ್ಟವ ತೆಗೆದು ಕೊಳುವದ ಹೂಳಬಾರದೆ ।
ಇಷ್ಟಲಿಂಗ ದೇವರೆಂದು ಮೆಟ್ಟಿ ಹೂಳಬಹುದೆ ನೀವು ।
ನಷ್ಟ ಭ್ರಷ್ಟರ ಮಾತ ಕೇಳಬಾರದು ॥೧೬॥

ತನುವು ಬಲಿದು ನೆನವು ತಿಳಿದು ಮನವು ಗಟ್ಟಿ ಮಾಡಬೇಕು ।
ಅನುವು ತಿಳಿಯಬೇಕು ಆತ್ಮಲಿಂಗದೊಳಗಣ ॥
ಇನಿತು ತನುವು ಮನವು ನೆನವು ಗುರು ಲಿಂಗ ಜಂಗಮವೆಂದು ।
ಘನವು ತನ್ನ ಒಳಗೆ ಇಹದ ಕಾಣಲರಿಯರು ॥೧೭॥

ತನ್ನ ಆತ್ಮದೊಳಗೆ ಕಾಣದಿನ್ನು ಶಿಲೆಯ ಕಟ್ಟಲೇಕೆ ।
ಭಿನ್ನ ಭಾವವಾಗೆ ಆತ್ಮಲಿಂಗ ಸಿಕ್ಕದು ॥
ತನ್ನ ತಾನೆ ಕಾಣದೆ ಕಲ್ಲ ಇರಿದುಕೊಂಡ ಬಳಿಕ ।
ಎನ್ನ ಗೋಹೇಶ್ವರ ನೋಡಿ ನಗುತಲಿದ್ದನು ॥೧೮॥

ಇಷ್ಟಲಿಂಗ ಜಂಗಮಕ್ಕೆ ಕಟ್ಟಬಹುದೆ ಘನಕೆ ನೋಡು ।
ಕಟ್ಟಿದಾಗ ಭಕ್ತರೆಂದು ಎನಲಿ ಬಾರದೆ ॥
ಕಟ್ಟಿ ಪ್ರಭು ಬಂದನೇನು ಇಷ್ಟಲಿಂಗವನು ಅಂದು ।
ಕಟ್ಟಬಹುದೆ ಜಂಗಮ ಮುಟ್ಟಿ ಲಿಂಗಭಕ್ತಂಗೆ ॥೧೯॥

ಗುರುವಿನಿಂದ ಲಿಂಗವ ಕಂಡು ಲಿಂಗದಿಂದ ಜಂಗಮವ ಕಂಡು ।
ಪರವ ಕಂಡು ಹೋದರಲ್ಲ ಬಲ್ಲ ಶರಣರು ॥
ಚರವು ಜಂಗಮವ ಕಂಡು ಇಷ್ಟಲಿಂಗ ಹಿಡಿಯಬಹುದೆ ।
ಗುರುವಿನಿಂದ ಕಾಣಬೇಕು ಇಷ್ಟಲಿಂಗವ ॥೨೦॥

ಗುರುವು ನಾವು ಎಂದು ಎಂದು ಜಂಗಮವು ನಾವು ಎಂದು ।
ಹೊರೆದುಕೊಂಡೆ ಒಡಲ ನೋಡು ಈ ಪರಿಯಲಿ ॥
ಅರಿವು ಜ್ಞಾನವಿಲ್ಲದಲ್ಲಿ ಗುರುವು ಲಿಂಗ ಜಂಗಮವೆಂದು ।
ಕರೆವುತಲಿಪ್ಪ ಖೂಳರಿಗೆ ಶಾಪ ಕೊಟ್ಟಿತು ॥೨೧॥

ಹುರುಡಿಗಾಗಿ ಇಷ್ಟ ಕಟ್ಟಿ ಬರಡು ಬರಡು ಕೂಡಿದಂತೆ ।
ಕುರುಡ ಹಿಡಿದ ಕೋಲ ಕುರುಡ ಹಿಡಿದ ಮರಿಯಾದೆ ॥
ಅರಿವು ಜ್ಞಾನ ಇಬ್ಬರಿಗೆ ಇಲ್ಲ ಗುರುವು ಶಿಶ್ಯರೆಂದ ಬಳಿಕ ।
ಕುರುಹ ಕಂಡ ಬಳಿಕ ಮುಸಕನಿಕ್ಕಲೇತಕೊ ॥೨೨॥

ಹೊಟ್ಟೆ ಹಸಿದ ಬಳಿಕ ಬೇಗ ಇಟ್ಟು ಒಂದು ಬೊಟ್ಟ ಭೂತಿಯ।
ಬಿಟ್ಟು ಕಟ್ಟು ತಡವು ಬೇಗ ಉಣುತಲಿಹರು ॥
ಸುಟ್ಟ ಇಷ್ಟಲಿಂಗವನು ಕಟ್ಟಿದರು ಮುಮ್ಮುಳಿಯನು ।
ಕೊಟ್ಟ ಗುರುವ ಸಿಟ್ಟಿಲಿಂದ ಬೈಯುತಿಪ್ಪರು ॥೨೩॥

ಇಷ್ಟಲಿಂಗ ವಿಭೂತಿಯು ರುದ್ರಾಕ್ಷಿಗಳನು ಹಾಕಿದವರು ।
ಇಟ್ಟ ಭಂಡಾರವನು ಕೊರಳ ಕಟ್ಟಿ ಕವಡೆಯ ॥
ದೃಷ್ಟವಾಗಿ ಏಕನಾಥೆಯ ಮಾಯಿರಾಣಿ ಹಡಲಿಗೆಯ ಹಿಡಿದು ಕುಣಿವ ।
ನಷ್ಟರಿಂಗೆ ದೀಕ್ಷೆ ಕೊಟ್ಟ ಭ್ರಷ್ಟ ಕಾಣಿರೊ ॥೨೪॥

ಏಕನಾಥೆಯು ಮಾಯರಾಣಿ ಪೂಜೆ ಮಾಡುವವಗೆ ನೋಡು ।
ದಿಕ್ಕುಗೇಡು ಇಷ್ಟಲಿಂಗ ಕೊಟ್ಟ ಗುರುವಿಗೆ ॥
ಇಕ್ಕುಳದಲಿ ನಾಲಗೆಯ ಕಿತ್ತ ಬಿಸುಟು ಬಂದಾನೆ ।
ದಿಕ್ಕು ಆಗ ಬಂದ ನಮ್ಮ ಸಂಗಮೇಶ್ವರ ॥೨೫॥

ನರರು ಗುರುವು ಎನಲಿಬಹುದೆ ಶಿಲೆಯ ಲಿಂಗವೆನಲಿಬಹುದೆ ।
ಬರಿದೆ ಒಡಲ ಹೊರೆಕ ಜಂಗಮ ಮೇಲೆ ಬಂಬನೆ ॥
ಗುರುವು ಬಸವಣ್ಣನಹುದು ಲಿಂಗ ಸಂಗಮೇಶ್ವರನಹುದು ।
ಚರವು ಜಂಗಮ ಪ್ರಭುಲಿಂಗನಹುದು ಕಾಣಿರೊ ॥೨೬॥

■

೫೬

ಕಾಯ ಅರಿಕಾಯ ಗುರುಕಾಯ ।
ಕಾಯ ಕಂಡ ಕನಸ ಹೇಳುವೆನಮ್ಮ ॥ಪಲ್ಲ॥

ಡಿಂಬವನು ಬಿಟ್ಟು ಹೋಗುತಾರೆ ।
ಕುಂಬಾರನ ತಿಗರಿಯಂತಹನೆ ॥

ನಂಬಿಗಿಲ್ಲದ ಗುರುವು ತಾನೆ ಬಯಲ ।
ಲಿಂಗವನು ತನ್ನೊಳಗೆ ಮಾಡಿಕೊಂಡಹನೆ ॥೧॥

ಅಭ್ರಛಾಯವ ತೋರಿದಂತೆ ।
ಇಬ್ಬರ ಸಂಸರ್ಗವಿಂತೆ ॥
ನಿಗ್ರವನು ತಾ ತೋರಿದಂತೆ ।
ನಿದ್ರಿ ಬಂದಲ್ಲಿ ಕಾಯವ ಕೆಡವಿದಂತೆ ॥೨॥

ಪರಸತಿಯ ಹಗಲೆ ನೋಡಿರುವ ।
ಸರಸದಲಿ ಇರುಳು ಹೋಗಿರುವ ॥
ಪುರುಷನುಳ್ಳಾಕಿ ಎಂದು ಅರಿವ ।
ಅರಿತರಿತು ಯಮನ ಭಾದೆಗೆ ಮತ್ತೆ ಬರುವಾ ॥೩॥

ಹಗಲೆ ಘನ ಸಂಪತ್ತ ಕಂಡು ।
ಇರಳು ಪ್ರೇತಾಗಿ ತಿರಗುವುದು ॥
ಮರಳುತನ ಭಯವದು ಭಂಡು ।
ಮರಳಿ ಜಲ್ಮಕೆ ತೊಳಲುವುದು ತೊಂಡು ॥೪॥

ಹಗಲೆ ದ್ರವ್ಯವ ಬಯಸಿ ಇಪ್ಪ ।
ಇರಳು ಪ್ರೇತಾಗಿ ತಾನಿಪ್ಪ ॥
ಬಾರದೆಂಬುದ ಕಂಡು ಇಪ್ಪ ।
ಆರಾರ ಕಂಗಳಲಿ ಭ್ರಾಂತು ತೋರಿಪ್ಪ ॥೫॥

ಹಗಲೆ ಗುರು ಸೋಹಂಭಾವದಲಿ ।
ಇರಳು ಲಿಂಗ ಧ್ಯಾನದಲಿ ॥
ಯಾವಾಗ್ಯ ಇಬ್ಬರೊಳಗಿರಲಿ ।
ಅಳುವಿಲ್ಲದ ಕುಳವನು ಕಟ್ಟಿಕೊಂಡಿರಲಿ ॥೬॥

ನೋಡಿ ಮೂರಕೆ ಹರಿಯಲಿಲ್ಲ ।
ಇರುಳು ಓಡಿನೊಳು ತಿರಿದು ಉಣಲಿಲ್ಲ ॥
ಮಾಡು ಗುರು ಸೇವೆಯೊಳಗೆಲ್ಲ ।
ಕಾಡಗುರಿ ಕಾಬುದಕ್ಕೆ ತೆರಪಿಲ್ಲ ॥೭॥

ದರ್ಪಣವ ನೋಡಿದ ಮುಖವು ।
ಇಪ್ಪ ಇರಳು ಪ್ರಾಣ ಪ್ರಥವು ॥
ತಪ್ಪದು ಭಕ್ತಂಗೆ ಮತವು ।
ಕರ್ಪೂರದ ಜ್ಯೋತಿಯಂತೆ ಪ್ರಾಣ ಪ್ರಥವು ॥೮॥

ಗುರುವಿನಂತೆ ಶಿಷ್ಯಭಾವ ।
ಇರಹೇಳಿದಂತೆ ಯದ್ಭಾವ ॥
ಬೇರೆ ಇನ್ನು ಉಂಟೆ ದೇವ ।
ಕಾಯವ ಭವದಲ್ಲಿ ನಡದಂತೆ ಸಾವ ॥೯॥

ಮಿಣಿಯಿಲ್ಲದೆ ವಾಲ್ಯಾಡಬೇಕು ।
ಮಣಿಯಿಲ್ಲದೆ ಮೆಟ್ಟಬೇಕು ॥
ಕಾಣಲಿಲ್ಲದ ಕಾಣಬೇಕು ।
ಜಾಣನಾದರೆ ನಿಶ್ಚಯ ಮಾಡಬೇಕು ॥೧೦॥

ಮಾಯವೆಂಬದೆ ಮೂರು ಜಗವು ।
ಕಾಯವನು ಕಂಡದಾಗಮವು ॥
ಬಯಲಾಗಿ ಇಪ್ಪುದೆಲ್ಲ ನಿಗಮವು ।
ಇಂತು ಸ್ವಯವೆಂದು ನಂಬಿಕೊಂಡಿಹುದು ಜಗವು ॥೧೧॥

ವ್ಯರ್ಥರಿಗೆ ಜಾಗ್ರ ಸ್ವಪನಗಳು ।
ಭಕ್ತಂಗೆ ಲಿಂಗಸೂತ್ರಗಳು ॥
ಮತ್ತವರಿಂದ ಮುಕ್ತಿಗಳು ।
ಅರ್ಥೈಸಬಲ್ಲವರಿಗೆ ಸ್ವರ್ಗಗಳು ॥೧೨॥

ಎಲ್ಲ ಮಾಯಾಂಗನೆ ಕೇಳಿ ।
ಅಲ್ಲಿಪ್ಪ ಲಿಂಗವ ತಾಳಿ ॥
ಬಲ್ಲರೆ ಅದ ಕಟ್ಟ ಹೇಳಿ ।
ಕುಲವಿಲ್ಲದ ಲಿಂಗಕ್ಕೆ ಕುಲವೇಕೆ ಹೇಳಿ ॥೧೩॥

ನೀರ ಶೋಧಿಸುವರು ಕಾಣಯ್ಯ ।
ನೀರಿಂದಲಾಕರವಯ್ಯ ॥

ಬೇರೆ ಕಂಡವರಿಲ್ಲವಯ್ಯ ।
ಆರು ದರುಶಣವೆಲ್ಲ ನೀರೊಳಗಯ್ಯ ॥೧೪॥

ನೋಡಿ ನಿಶ್ಚಯಮಾಡಿ ಹಗಲೆ ।
ಬೇಡಿದ ತಂದನು ಇರುಳೆ ॥
ಗೂಡಾರ್ಥವನು ಮಾಡಿ ನಗಲೆ ।
ನೋಡದುದ ನೋಡಿಸುತಾನೆ ಮಿಗಿಲೆ ॥೧೫॥

ನಂಬಿಗೆಂಬುದು ಸಕಲ ಪೂಜೆ ।
ಇಂಬುಗೊಂಡಿರಬೇಕು ವಾಜೆ ॥
ಒಂಬತ್ತು ಲಿಂಗದ ಪೂಜೆ ।
ಕುಂಬಾರಣ್ಣನ ಭಾಜನದ ಭಾಜೆ ॥೧೬॥

ಕಾಸಕೊಟ್ಟು ಒಂಬತ್ತ ಹೆಟ್ಟಿ ।
ಆವಿಗೆಯ ಸೋರೆಯಂತೆ ಮೆಟ್ಟಿ ॥
ಪಾಮರ ಜೀವಿಗಿನ್ನು ಬಿಟ್ಟಿ ।
ನಿಸ್ಸೀಮ ಚೆನ್ನಬಸವಲಿಂಗ ಬರುವದು ಘಟ್ಟಿ ॥೧೭॥

ನಿರುತ ಲಿಂಗವ ಕಾಣಬೇಕು ।
ಅರಿತರಿತು ಅದ ಕಟ್ಟಬೇಕು ॥
ಹೊರತಾಗಿ ಶರಣನಿರಬೇಕು ।
ಕುರುಹ ಗಟ್ಯಾಗಿ ಕಟ್ಟಿ ಹಾಕಬೇಕು ॥೧೮॥

ಬಿಂದುವನು ಆಡಿಸಲಿ ಬಂದ ।
ಎಂದಿಲ್ಲದಾಟವನು ತಂದ ॥
ಮುಂಗಾಳಿ ಬೀಸುತದೆ ಎಂದ ।
ಅಂಗ ಬಸವಣ್ಣನೊಳು ಸಂಗಯ್ಯ ನಿಂದ ॥೧೯॥

ಹರಗೋಲು ಹರಿವುತದೆ ಕೇಳಿ ।
ಊರುಗೋಲು ನಿಲ್ಲುತದೆ ತಾಳಿ ॥
ಸುರಗೋಲ ಆಡಬಂದ ಗಾಳಿ ।
ತುರುವ ಕರುವನು ಎರಡನು ಕಟ್ಟ ಹೇಳಿ ॥೨೦॥

ಹೆಗ್ಗಾಳೆ ಕೂಗುತದೆ ಕೇಳಿ ।
ಹ[ಗ್ಗ] ಕಟ್ಟೊಡೆವುತದೆ ತಾಳಿ ॥
ಭೃಂಗ ಮತ್ತಲೆವುತದೆ ತಾಳಿ ।
ಗಂಗೆಯ ಮನೋಹರನು ಬಂದನು ಏಳಿ ॥೨೧॥

ಇಬ್ಬರನು ತಿರವಿ ಕಟ್ಟ್ಯಾರು ।
ಒಬ್ಬುಳಿಯ ಮಾಡಿ ತಂದಾರು ॥
ಮುಗ್ಗು ಧಾನ್ಯವನು ಚೆಲ್ಲ್ಯಾರು ।
ಸುಗ್ಗಿಯ ರಾಜಾನ್ನವ ತಂದು ನಿಲಿಸ್ಯಾರು ॥೨೨॥

ಹಾಸಿನ ಹರಿ ಮುರಿಯಬೇಕು ।
ಗೋಸೆತ್ತ ತಂದು ಕಟ್ಟಬೇಕು ॥
ಭೂಸ್ವರ್ಗ ಕಿತ್ತಿಡಬೇಕು ।
ಮೂಸಿಯಲಿ ಇಕ್ಕಿ ಚೊಕ್ಕನ ಮಾಡಬೇಕು ॥೨೩॥

ಚಂದವಾಗಲಿಬೇಕು ಇವರು ।
ಮುಂದೆ ಮೆರೆಯಲಿಬೇಕು ಇವರು ॥
ಹೊಂದುವಿ ಹುಟ್ಟುವಿ ಒಳಗಿಲ್ಲ ದೇವರು ।
ನಿಂದಾಡಿ ಹೋದರು ಬಿಡಹಾರದವರು ॥೨೪॥

ಕಂಡನು ಬಸವಣ್ಣ ಕನಸ ।
ಬಂದು ಹೇಳಿದ ಸಂಗಮೇಶ ॥
ಮುಂದೆ ಹದಿನೆಂಟನು ನಿಲಿಸ ।
ಅಂದಿನಂಥ ಕೊರವಿ ಅಲ್ಲ ಕಾಯಕಂಡು ಎಣಿಸ ॥೨೫॥

■

೫೭

ದಾರು ಬಲ್ಲರು ಹೇಳಿರೈ ಭಕ್ತಿಭೇದವನು ।
ಸಾರಾಯ ಎಸೆವ ಶಬ್ದದಾ ॥
ತೋರಿರೆ ಪಂಚಮತದೊಳು ದೀಕ್ಷೆ ಕೊಡುವುದನು ।
ದಾರು ಮೊದಲಾರು ಕಡೆ ನಿರ್ಣಯವನು ॥ಪಲ್ಲ॥

ಕೃತಯುಗದಲ್ಲಿ ರೇವಣಸಿದ್ಧ ಆಚಾರಿ ।
ಪ್ರಥಮ ಯುಗದಲ್ಲಿ ಚಿನ್ನದ ಲಿಂಗವ ॥
ಪ್ರಥವಿಡಿದು ಪಂಚಾಕ್ಷರದ ಮಂತ್ರವನು ತುಂಬಿ ।
ಮಥಿಸಿದರು ದೀಕ್ಷೆ ಉಪದೇಶ ಮೊದಲು ।
ಶ್ರುತ ದೃಷ್ಟ ನೋಡು ಅಂದಿನ ಯುಗದಲಿ ಹೇಗಿತ್ತು ॥
ಅತಿಶಯದಲಿಂತೀ ದೃಷ್ಟವ ತೋರುವ ।
ಪ್ರತಿಮ ಎನ್ನೊಡೆಯ ಮರ್ತ್ಯಕೆ ಬಂದು ನಿಂದಾನೆ ॥
ಕುತಳಕಿನ್ನಿದುರು ಎದೆಯ ಮೊಳೆಯಲ್ಲದೆ ॥೧॥

ರೇವಣಸಿದ್ಧೇಶ್ವರನು ಕೃತಯುಗದಲ್ಲಿ ।
ಅವರು ಚಿನ್ನದ ಲಿಂಗಕೊಡುವಾಗಲಿ ॥
ದಾವ ಪರಿಯಲಿ ತನ್ನ ಪಾದತೀರ್ಥವನೆರೆದು ।
ಆವಾಗ ವಿಭೂತಿ ಲಿಂಗಕಿಟ್ಟು ॥
ನೈವೇದ್ಯ ತನ್ನ ಪ್ರಸಾದ ಲಿಂಗಕೆ ತೋರಿ ।
ಅವಧರಿಸಿ ಲಿಂಗ ತನ್ನುಂಗುಷ್ಟಕ್ಕೆ ॥
ವಿವರದಲಿ ದೀಕ್ಷೆ ಕೊಟ್ಟನು ಅಂದಿನಲಿ ಹೀಗೆ ।
ಭುವನದೊಳು ಗುರು ರೇವಣಸಿದ್ಧನು ॥೨॥

ತ್ರೇತಾಯುಗದಲಿ ಮರಳುಸಿದ್ಧೇಶ್ವರನು ತಾನು ।
ಆತ ಬೆಳ್ಳಿಯ ಲಿಂಗವನು ಇತ್ತನು ॥
ಆ ತೆರದಿ ದೀಕ್ಷೆ ಕೊಟ್ಟರು ಅಂದಿನ ಯುಗದಲ್ಲಿ ।
ಭ್ರಾಂತು ದೀ[ಕ್ಷೆಯ]ವರೆತ್ತ ಕೊಡಬಲ್ಲರು ॥
ಬಾತು ಹೆಣದಂತೆ ಉಬ್ಬುವರಿವರು ಗುರುವೆಂದು ।
ರೀತಿ ನಿರ್ಣಯ ಒಂದು ರವೆಯರಿಯರು ॥
ಯಾತರ ಗುರು ಯಾತರ ಶಿಷ್ಯರಿವರಿಂತು ।
ಆತ ಮರುಳುಸಿದ್ಧ ಘನಮಹಿಮನು ॥೩॥

ಮರುಳಸಿದ್ಧೇಶ್ವರನು ತ್ರೇತಾಯುಗದಲಿ ಆಗ ।
ಹಿರಿದು ಬೆಳ್ಳಿಯ ಲಿಂಗ ಕೊಡುವಾಗಲಿ ॥
ಪರಮಾರ್ಥ ಕೇಳಿ ತನ್ನ ಪಾದತೀರ್ಥವೆರೆದು ।
ಧರಿಸಿದನು ವಿಭೂತಿಯನು ಲಿಂಗಕೆ ॥
ತರಿಸಿನ ಈ ವಿದ್ಯ ತಾ ಪ್ರಸಾದವನು ಮಾಡಿ ।

ತೋರಿಸಿದ ತಾನು ಇಷ್ಟಲಿಂಗಕೆ ॥
ಪರಮ್ಮರಿಸಿ ಲಿಂಗ ತನ್ನಂಗುಷ್ಟಕೆ ಕಟ್ಟಿ ।
ಮರುಳುಸಿದ್ಧೇಶ್ವರನು ಕೊಟ್ಟ ಹೀಗೆ ॥೪॥

ದ್ವಾಪರದಲಿ ಏಕೋರಾಮೇಶ್ವರನು ತಾನು ।
ಆ ಪರಿಯ ತಾಮ್ರಲಿಂಗವ ಕೊಟ್ಟನು ॥
ಕೂಪರಿವರೆತ್ತ ಬಲ್ಲರು ದೀಕ್ಷೆ ಕೊಡುವುದನು ।
ಆ ಪರಂಜ್ಯೋತಿ ಘನಗುರು ಬಲ್ಲನು ॥
ಉಪಾಯದಲಿ ತಿಳಿದು ನೋಡಿ ಘನ ಘನಗಿಟ್ಟು ।
ಸೋಪಾನವಿಡಿದು ದೀಕ್ಷೆಯ ಕೊಟ್ಟರು ॥
ಕೋಪಿ ತಾಪಿಗಳೇಕೋರಾಮೇಶ್ವರನ ಸರಿಯೆ ।
ಶಾಪವುಂಟಿವರವರ ಸರಿ ಎಂದರೆ ॥೫॥

ಏಕೋರಾಮೇಶ್ವರನು ದ್ವಾಪರದಲಿ ತಾನು ।
ಏಕ ತಾಮ್ರದ ಲಿಂಗ ಕೊಡುವಾಗಲಿ ॥
ಏಕೋರಾಮೇಶ್ವರನು ತನ್ನ ತೀರ್ಥವನೆರೆದು ।
ಏಕಬೊಟ್ಟ ವಿಭೂತಿ ಆ ಲಿಂಗಕೆ ॥
ಏಕೋರಾಮೇಶ್ವರನ ಪ್ರಸಾದ ಲಿಂಗಕ್ಕೆ ।
ಬೇಕೆಂದು ಅಂಗುಷ್ಟಕೆ ಕಟ್ಟಿದ ॥
ಸಾಕ್ಷಿಯನು ಕೇಳಿ ದೃಷ್ಟವ ನೋಡಿ ಇನ್ನಾರೆ ।
ಏಕೋರಾಮೇಶ್ವರನ ದೀಕ್ಷೆ ಇಂತು ॥೬॥

ಕಲಿಯುಗದಲಿ ಪಂಡಿತಾರಾಧ್ಯನೆಂದೆಂಬ ಗುರು ।
ಶಿಲೆಯ ಲಿಂಗಗಳನು ದೀಕ್ಷೆಯ ಕೊಟ್ಟನು ॥
ಹೊಲಬುಗೆಟ್ಟರು ಕಲ್ಯಾಣದಲಿತ್ತ ಮುಖವಾಗಿ ।
ಹಲವು ಪರಿಪರಿ ತಮಗೆ ದೀಕ್ಷೆಕೊಟ್ಟು ॥
ಬೆಲೆಯನರಿಯರು ದೃಷ್ಟವ ನೋಡಿ ಇನ್ನಾರೆ ।
ಸ್ಥಲವನರಿಯದಲಿ ಜಂಗಮವೆಂಬರು ॥
ಸುಲಭದಲಿ ಕೇಳಿನ್ನು ಕೀಲೆತ್ತಿ ತೋರುವುದ ।
ಬಲು ಬಳಲುತಾರೆ ಬಸವನ ನೆನವುತ ॥೭॥

ಪಂಡಿತಾರಾಧ್ಯನು ಕಲಿಯುಗದೊಳಗೆ ಹೇಗೆ ।
ಒಡೆಯ ಶಿಲೆಯ ಲಿಂಗವ ಕೊಟ್ಟುದ ಕೇಳಿರೈ ॥

ಗಡಣಿಸಿದ ಪಾದತೀರ್ಥವು ಶಿಲೆಯ ಲಿಂಗಕ್ಕೆ ।
ತಡೆಯದಲಿ ಎರದು ವಿಭೂತಿ ಇಟ್ಟು ॥
ಕಡು ಪ್ರಿಯ ತನ್ನ ಪ್ರಸಾದ ಲಿಂಗಕೆ ತೋರಿ ।
ಕೊಡುವಾಗ ತನ್ನುಂಗುಷ್ಟಕೆ ಕಟ್ಟಿದ ॥
ಕೊಡಬಲ್ಲರವರು ದೀಕ್ಷೆ ಉಪದೇಶಗಳ ।
ಎಡಮಾಟದವರಾರು ಕೊಡಬಲ್ಲರೆ ॥೮॥

ತಮಗೆ ದೀಕ್ಷೆಯು ಇಲ್ಲ ನಿಮಗೆ ಕೊಟ್ಟವರಾರು ।
ಸಮನಾಗಿ ಹೋಯಿತ್ತೆ ಸಮತೆಯೊಳಗೆ ॥
ಸೋಮನ ಮೇಲೆ ತಪ್ಪನು ಅಂದು ತೆಗೆದರು ।
ನಾಮಾಂಕಿತವ ನಮ್ಮ ಬಿಡಬಲ್ಲರೆ ॥
ಹೋಮವಿಕ್ಕಿ ಉರುಹ್ಯಾರೊ ಧಾಮಧೂಮವ ಮಾಡಿ ।
ಸಾಮ್ಯವನು ತೋರಿಸಿ ಮೆಯ್ಯ ಮುರಿವರು ॥
ಆ ಮಹಾಘನಮಹಿಮ ಸೀಮ ನಿಸ್ಸೀಮ ತಾ ।
ಗಮನ ನಿರ್ಗಮನ ಗುರು ಜಗಭರಿತನು ॥೯॥

■

೫೮

ಪ್ರಥಕೆ ತೊಡರುವ ಪರಿಗಳಿಂತು ಎನ್ನ ।
ಚದುರ ಶಿವಕವಿಗಳಿದ ಕೇಳಿ ಸುಖಿಯಾಗಿ ॥ಪಲ್ಲ॥

ಧರೆಯೊಳಗೆ ಮೆರೆವ ಶಿವಕವಿಗಳೆಲ್ಲರು ಕೇಳಿ ।
ಧರೆಗೆ ಶೃಂಗಾರ ಕವಿಜನರು ಎಲ್ಲರು ಕೇಳಿ ॥
ಗುರು ಲಿಂಗ ಜಂಗಮದ ಚರಣರ್ಚಕರು ಕೇಳಿ ।
ಗುರುಹಿರಿಯರಾದವರು ಕೇಳಿ ॥
ಹರನ ಭಕ್ತಿಯ ಶುಭವ ಹರುಷದಿಂದಲಿ ಕೇಳಿ ।
ಪರಮ ಭಕ್ತರು ನೀವು ಪರಿಣಾಮದಲಿ ಕೇಳಿ ॥
ಮರಳು ವಾಕ್ಯಗಳಿದಕೆ ಮಧುರ ರಾಗಗಳಿಲ್ಲ ।
ಮರುಳು ಪದವಿಂತು ಚಿತ್ತೈಸಿ ॥೧॥

ತಂದೆ ತಾಯ ಉದರದಲಿ ಜನಿಸಿದಾರ್ತದ ಮೊದಲು ।
ಕುಂದು ಹುಸಿ ನುಸುಳು ಕುಚಿತಾರ್ಥಗಳ ನಾನರಿಯೆ ॥
ಹೊಂದಿ ಪರಧನಕೆ ಒಳಗಾಗಿ ಶಾಪವ ಜರಿಯೆ ।

ಸಂದೆನಾಗಿ ಪರಸತಿಗೆ ಎಂದು ॥
ಪರನಿಂದೆಗಳ ಹೊಂದಿಸ್ಯಾಡಲಿ ಅರಿಯೆ ।
ಮುಂದೆ ಬಹರು ಮನಬಾಧೆಯರಿತು ಮನದಲಿ ತಿರುಗಿ ॥
ಬಂದು ದೂರ್ಜಟಿಯ ಭಕ್ತಿಯ ಭಾವದಲಿ ಸಿಲಿಕಿ ॥
ನಿಂದೆವ್ಯೆ ಶಿವ ಶೆರೆಡಿಗೆ ॥೨॥

ಹೆತ್ತವರ ಜರಿದು ಮನ ಎತ್ತಲಾದರೆ ಹರಿದು ।
ಕತ್ತಲೆಗಳಡರಿ ಸಂಸಾರ ಮಾಯವ ಜರಿಯೆ ॥
ಉತ್ತಮವಾದ ಮನೆಮಂದಿರಂಗಳ ಜರಿದು ।
ಭೃತ್ಯನಾದೆನು ಬಳಗದೊಳಗೆ ॥
ಚಿತ್ತದಲಿ ಬಳಲಿ ಚಿಂತೆಯಲಿ ಹಸುಬಿಯ ಹೊತ್ತು ।
ಮರ್ತ್ಯಲೋಕವ ತಿರಿಗಿ ಮೆಚ್ಚಿಸಿ ವಚನವ ತಂದೆ ॥
ಸುತ್ತಿ ತೊಡರಿತು ಶಿವನ ಶ್ರುತಿಗೆ ॥೩॥

ಚಂದ ಬಂಧಗಳ ಅಲಂಕಾರವ ನಾನರಿಯೆ ।
ಚಂದನಮರಿಸಿ ನಿಘಂಟು ಗಾಯತ್ರಿಗಳ ನಾನರಿಯೆ ॥
ಮುಂದೆವಡೆ ಭೇದಗಳ ಪರುಷ ಲಕ್ಷಣವರಿಯೆ ।
ಎಂದು ಅನುಶ್ರುತಿಯ ನಾನರಿಯೆ ॥
ಮಧುರ ಸ್ವರಾಯಗಳ ನೇತ್ರ ಜಳ ಒಸಲರಿಯೆ ।
ಮದನಮೋಹದ ಪದಕೆ ಮಾಯ ವೇಷವ ಜರಿಯೆ ॥
ಚದುರ ಮೃದುವಾಣಿ ವಿಶ್ವವಾಣಿ ಸುದ್ದಿಯನರಿಯೆ ।
ಪದದ ಗುಣಭೇದ ನಾನರಿಯೆ ॥೪॥

ಅಷ್ಟಮದಂಗಳ ಮುರಿದು ಒಟ್ಟಿ ಅಂಗ್ರವ ಧರಿಸಿ ।
ದೃಷ್ಟವಾಗಿ ಬಹ ದುರಿತ ಸುದ್ದಿಯ ಕೇಳಿ ॥
ಕಷ್ಟ ಕಷ್ಟಮಾಡಿದರೆ ಕೈಗೂಡದೆಡಿಗೆಡಿಸುತದೆ ।
ಭ್ರಷ್ಟನಾದೆನು ಬಳಗದೊಳಗೆ ॥
ಎಷ್ಟೆಷ್ಟೊ ಮೃಡನ ಚರಣಗಳ ದೃಢವಿಡಿದಿರಲು ।
ನಷ್ಟವಾದ ಬದುಕು ನಿರ್ವಾಣನಜ ನಾನೆಂಬೆ ॥
ಅಷ್ಟನೊಲ್ಲೆನು ಮುಂದೆ ಕೇಳಿ ॥೫॥

ಆರು ದರಿಶಿನವೆಂಬ ಆಗಮಸ್ತಿಗಳ ನಾನರಿಯೆ ।
ಮೂರು ಎರಡನೆ ಪದಕೆ ಮೇಲೆ ಸಾಕ್ಷಿಯನರಿಯೆ ॥

ಕುರುಮೊನೆಯಲಾದ ಕುಶಲದ ಭಕ್ತಿಗಿವ ಸೇರಿಸಿ ।
ಧೀರತನಕೆ ಪದನ ನಿಲಿಸಿ ॥
ಸಾರಾಯವಾದ ಶಬ್ದದ ಲೇಖೆಗಳ ಬರೆಸಿ ।
ಬಾರ್ಯೆ ಜಗಜಾಣ ಒಂದನೆ ಜಗಳವನೆರಸಿ ॥
ಮೂರು ಎರಡನೆ ಪದಕೆ ಮೇಲೆ ಸಾಕ್ಷಿಗಳ ನಿಲಿಸಿ ।
ಸಾಕ್ಷಿಪದಗಳ ಕೇಳಿ ಭಜಿಸಿ ॥೬॥

ರವಿ ಕವಿಗಳೆಂದು ರವಿರುಷ್ವಕೆರಗುವನಲ್ಲ ।
ರವಿರುಷ್ವ ಕವಿಗಳೊಳು ರಥದ ಕೀಲಿನ ಬೊಂಬೆ ॥
ಕವಿಕಾವ್ಯತನ ಗರ್ವ ಕಲ್ಮಶವ ನಾನರಿಯೆ ।
ಕವಿಯಲ್ಲ ಶಿವಶರಣರಾಣೆ ॥
ಸರ್ವ ಶಿವಕವಿಗಳಿಗೆ ಸಕಲ ಸೇವಕನಹುದು ।
ಸರ್ವ ಬಗೆಯಿಂದ ನಾಗಾವಿ ಬಸವಯ್ಯ ತಾನು ॥
ನಿರ್ವಾಣಿ ನಿಜಕವಿಗೆ ನಿತ್ಯ ಕರುಣದ ಕಂದ ।
ನಿಜಲಿಂಗದರುಹು ನಿಮ್ಮಾಣೆ ॥೭॥

■

೫೯

ದೇವ ಮೊರೆಗೇಳೊ ಸಂಜೀವನವೆ ಮೊರೆಗೇಳೊ ।
ಭಾವಪರುಷನೆ ಮೊರೆಗೇಳೊ ॥
ಭುವನದೊಳು ನಿಮ್ಮ ಲೆಂಕರಿಡುವ ಮೊರೆಯ ।
ನೀ ವಿಚಾರಿಸು ಮೊರೆಯೊ ಮೊರೆಯೊ ॥ಪಲ್ಲ॥

ಅಲ್ಲಮಪ್ರಭು ನಿಮ್ಮ ನೋಟದಾಟವ ಬಲ್ಲೆ ।
ಬಲ್ಲಿದನು ಬಸವ ಮೊರೆಗೇಳೊ ॥
ಹುಲು ನಿಂದಕರು ಭಂಗಿಸಿದವರ ಭವದೂರ ।
ಕಲ್ಯಾಣದಾದಿ ಮೊರೆಗೇಳೊ ॥
ಸೊಲ್ಲು ಸೊಲ್ಲಿಗೆ ಪವಾಡವ ತೋರ್ವ ಪರಮಾತ್ಮ ।
ಎಲ್ಲರೆ ಪರಿ ಮೊರೆಗೇಳೊ ॥
ಇಲ್ಲಿ ನಿಂದಕರ ಬಣ್ಣಿಸಿದವರೆದೆ ।
ದಲ್ಲಣವೆ ನೀನೆ ಮೊರೆಗೇಳೊ ॥೧॥

ಕಪಟ ದೇಹಿಗಳು ನಮ್ಮ ವರವ ಗುಣದ ।
ಅಪರಾಧವ ನೋಡದಿರು ಮೊರೆಯು ॥
ಅಪಾರ ಆಹೇರ ಸಿರಿಯ ಕೊಟ್ಟ ಘನವ ।
ಸುಪಥವನೆ ಮರೆಸಯ್ಯ ಮೊರೆಯೊ ॥
ಉಪ[ಮಾತೀ]ತರು ನಮ್ಮ ಭಂಗಿಸಿ ಭಂಗಿಸಿ ।
ವಿಪರೀತವ ಮಾಡಿದರು ಮೊರೆಯೊ ॥
ನೀ ಪರಮ್ಮರಿಸದಿದ್ದರೆ ಈ ಕುಂದು ನಿಮ್ಮದಲ್ಲವೆ ।
ಗುಪ್ತ ಶಿವಯೋಗಿ ಮೊರೆಗೇಳೊ ॥೨।
।

ಪ್ರಭೆದೋರಿ ಪ್ರಸಿದ್ಧ್ಯಾಗಲಿಗೊಡದು ।
ಪ್ರಭುರಾಯ ಕೇಳೊ ಬಸವಣ್ಣ ॥
ಶುಭಗತವ ಮಾಡೊ ಅನ್ಯ ನಿಂದಕರ।
ಸಭೆಯ ದಳ ಸಂಹರ ಮೊರೆಯೊ ॥
ಉಭಯವನು ಕಳೆದು ನಿಜ ಪ್ರಾಣಲಿಂಗವ ಧರಿಸಿ ।
ಸುಬುದ್ಧಿಯನೆ ನೆಲೆಗೊಳಿಸು ಮೊರೆಯೊ ॥
ತ್ರಿಭುವನದೊಳು ಕೀರ್ತಿ ತೀರ್ಥ ಪ್ರಸಾದ ಮೂರ್ತಿ ।
ಶುಭಕರ ಬಸವ ಮೊರೆಗೇಳೊ ॥೩॥

ನಂದಿ ಬಸವಪ್ರಭುವೆ ನಿಂದಕರು ಮೊರೆದೆದ್ದು ।
ಕೊಂದು ಮುದ್ರಿಯ ಶಿಲೆಯ ಸೆಳೆದು ॥
ಹಿಂದು ಮುಂದನೆ ಮಾಡಿ ತರದೊಟ್ಟುತ್ತೈದಾರೆ ।
ಇಂದುಧರ ಶರಣನೆ ಮೊರೆಯೊ ॥
ಸಂದ ಪ್ರಮಥರ ಪ್ರಾಣ ನಿಮ್ಮ ಲೆಂಕರಿಗೆಲ್ಲ ಬಂದ ।
ಕುಂದು ನಿಮ್ಮದಲ್ಲವೆ ಮೊರೆಯೊ ॥
ಎಂದಿನಂತಲ್ಲ ಎನ್ನೊಡೆಯ ಬಸವಪ್ರಭುವೆ ।
ಇಂದಿದಾಲಿಸಿ ಮೊರೆಗೇಳೊ ॥೪॥

ಸಂಗನ ಬಸವ ನಿಮ್ಮಂಗ ರೋಮಗಳೆಲ್ಲ ।
ಲಿಂಗವಾದಂಗ ಲಿಂಗ ಮೊರೆಯೊ ॥
ಮಂಗಳ ಮಹಿಮ ಶುದ್ಧಾತ್ಮ ನಿಮ್ಮಂತ ।
ರಂಗ ನಿಜ ಪ್ರಾಣಲಿಂಗ ಮೊರೆಯೊ ।
ಹಿಂಗದಟ್ಟುಳಿ ಇಕ್ಕಿ ಬೀದಿಗೆ ತಂದು ನಮ್ಮ ॥
ಭಂಗಿಸಿರಯ್ಯಯ್ಯೊ ಮೊರೆಯೊ ।

ಮಂಗಳಕೆ ನಿಂತರುದ ಜಂಗುಳಿ ಮದಗಳಿಗೆ ।
ಸಂಗ ಪ್ರಭೆದೋರಯ್ಯ ಮೊರೆಗೇಳೊ ॥೫॥

ಅನ್ಯಾಯಕೆಡಗೊಡದೆ ಆದಿ ಅನಾದಿಯ ಹಿರಿಯ ।
ಮಾನ್ಯರು ನೀವು ಮೊರೆಗೇಳೊ ॥
ಚೈತನ್ಯರೂಪನೆ ಪ್ರಾಣಕಾಯಕೆ ಹದಿನೆಂಟು ।
ಧಾನ್ಯದಾಧಾರ ಮೊರಗೇಳೊ ॥
ಶೂನ್ಯಪೀಠವ ರಚಿಸಿ ಸೂಕ್ಮವ ಪಿಡಿದ ।
ಪ್ರಸನ್ನನೆ ನೀನೆ ಮೊರೆಗೇಳೊ ॥
ಸತಿಗೂನ ಬರ[ಲು] ಮರಳಿ ಪತಿಗಲ್ಲವೆ ಸರ್ವ ।
ಸನ್ಯಾಸಿ ಬಸವ ಮೊರೆಗೇಳೊ ॥೬॥

ಕೊರತೆ ಇಲ್ಲದೆ ಪವಾಡವ ಗೆಲಿಸಿದ ಶರಣರಿಗೆ ।
ಸಾರ್ಥವೆಂದೆನಿಸವೀ ಮೊರೆಯೊ ॥
ಅರ್ತು ಅರಿಯದೆ ನಡೆವ ವ್ಯರ್ಥರೆಡೆಗೆ ದೊಡ್ಡ ।
ದುರಿತಮೊಕ್ಕಳವಿಕ್ಕು ಮೊರೆಯೊ ॥
ಹೊರತೆಂದು ನಿಮ್ಮ ಲೆಂಕರನು ಕೆಡೆ ನುಡಿದು ।
ಅನರ್ಥವನು ಮಾಡಿದರು ಮೊರೆಯೊ ॥
ದುರಿತವನು ನಿಲಿಸಿ ಸಲಹುವಿ ಭಕ್ತರನೆಲ್ಲ ।
ಕರ್ತು ಬಸವೇಶ ಮೊರೆಗೇಳೊ ॥೭॥

■

೬೦

ಕೇಳಿನ್ನೊಮ್ಮೆ ಬೊಮ್ಮನ ಹಳಿ ಬೆಳ್ಳಕ್ಕಿ ಹಿಂಡು ಅವರು ।
ಗಡ[ಣಿ]ಸಿ ನಡೆದರಯ್ಯ ದಕ್ಷಿಣಕಾಗಿ ॥ಪಲ್ಲ॥

ನಾರಸಿಂಹ ಬಿಲ್ಲನೆ ಹಿಡಿದು ಭೋರನೆ ನಡೆವಾಗ ।
ಹೋರಾಟವಿಕ್ಕೆವಯ್ಯ ನೈರುತ್ಯಕಾಗಿ ॥
ಕಾರೆಂಬೊ ಕಣಿಕಿಗಳಂತೆ ಹೆಣಗಳು ಬೀಳುವಾಗ ।
ನೀರೆಂಬೊ ನೆತ್ತರ ಕಡಲು ಹರಿದಾವು ನೋಡ ॥೧॥

ಚಪ್ಪಟೆಗತ್ಯವರೆಲ್ಲ ದೊಕ್ಕನೆ ನಡೆವಾಗ ।
ಒಕ್ಕಲೆಂಬವರೆಲ್ಲ ಹಕ್ಕಲಾಗಿ ಮುಂದೆ ॥

ಅಕ್ಕಸ ಇನ್ನೇನ ಹೇಳಲಿ ಸೆರೆಸೂರೆ ಭಯಗಳನು ।
ಸೊಕ್ಕಿದ ಪಾಪಿಗೆ ದಿಕ್ಕು ಮುಂದೆ ಇಲ್ಲ ॥೨॥

ಅಕ್ಕಜಯೆಂಬವರೆಲ್ಲ ಉಕ್ಕಿ ಸೊಕ್ಕಿ ತಾವು ।
ಝೇಂಕರಿಸಿ ನಡೆದರಯ್ಯ ದಿಟ್ಟತನದಿಂದ ॥
ಸೊಕ್ಕಿದವರಿಗೆ ಪಕ್ಕವ ಮುರಿದಂತೆ ।
ದಿಕ್ಕನೆ ಮಾನ್ಯರೆಲ್ಲ ಸಿಕ್ಕಿ ಬಲಿಗೆ ಬಿದ್ದು ॥೩॥

ಅಸುರಾಸುರಾದಿಗಳೆಲ್ಲ ಅಸವಲ್ಲದೆ ನೆರೆದು ।
ಅಸುವಳಿದು ನಿಂತಾರು ಹಂಪಿ ವಿರೂಪಾಕ್ಷನಲ್ಲಿ ॥
ಹೊಸಕೋಟೆ ಕೊತ್ತಳಕಿಕ್ಕಿ ದೆಸೆಗೆ ತಾವೆ ನಿಂದು ।
ಹುಸಿಯಲ್ಲ ಪಶ್ಚಿಮಕಾಗಿ ಶರಣೆಂಬುದು ನಿಜವು ॥೪॥

ಹೆತ್ತವರು ಮರ್ತ್ಯಗಣಂಗಳು ಹೊತ್ತ ಭೂಮಿತಾಯಿ ।
ಶ್ರುತಿವಿಡಿದು ಹೇಳಿಸುತಾರೆ ಸತ್ಯದ ಡಂಗುರವ ॥
ಮತ್ತೊಬ್ಬ ಕವಿ ನುಡಿಯೆಂದು ನೀಕರಿಸಲಿಬೇಡ ।
ಸತ್ಯಮೂರ್ತಿ ಬಸವಗುರು ಪಟ್ಟಕ್ಕೆ ಬರುತಾನೆ ॥೫॥

■

೬೧

ಬಂದಿತಿನ್ನೊಮ್ಮೆ ದಾಳಿ ಬಂದಿತಿನ್ನೊಮ್ಮೆ ।
ಕೆಂಧೂಮಗಳೆದ್ದು ಭೂಮಂಡಲದೊಳಗೆಲ್ಲ ॥ಪಲ್ಲ॥

ಬೆಟ್ಟ ಬೆದರಿ ಬಂದು ನೋಡಿನ್ನು ಬೇಲಿಯ ಮೊರೆಗೊಂಡು ।
ಕೊಟ್ಟ ಕೊಟ್ಟಗಳೆದ್ದು ನಾಡೊಳು ಗುಮಿಗುಮಿ ಗುಟ್ಟ್ಯಾವು ॥
ಶೆಟ್ಟಿ ಬಂಬ ಬರವು ಹದಿನಾಲ್ಕರ ಒಳಗೆಲ್ಲ ।
ತುಟ್ಟ ತುದಿಯ ಗಗನ ಕೈಲಾಸ ಬೆದರುತದಕೊ ॥೧॥

ನೂರು ಒಂದಕೊ ಗಾವುದ ಯೋಜನ ಸುದ್ದಿಯಲಿ ।
ಭೋರಿಡುತಲಿ ಬಂತು ಠಣಕರಿಸುತ ಬೊಬ್ಬೆಯಲಿ ॥
ದಾರು ಹೇಳುವಾಟಲ್ಲ ಇದು ಬಾಳಿಕೆ ಅವಘಡವು ।
ಧೀರ ಬಸವನಾಟ ಧರೆಯೊಳು ನಿಲ್ಲಬಾರದು ಕೇಳಿ ॥೨॥

ತಲ್ಲಣಿಸಿತು ನೋಡಾ ಭೂಮಂಡಲದೊಳಗೆಲ್ಲ ।
ಅಲ್ಲಿಗಲ್ಲಿಗಡರಿ ತಿರುಗಿ ಕಲ್ಲಬೆಟ್ಟಗಳೆಲ್ಲ ॥
ಸೊಲ್ಲು ತೃಣವ ಮಾಡಿ ಕೈಲಾಸಕೆ ಬೊಬ್ಬಿರಿದು ।
ಪುಲ್ಲಶರನ ಮೇರ್ವೆ ತಳಕೆಳಗಲಾಗುತ್ತೈತೆ ॥೩॥

ಒರೆಸಿ ಹೋಪುದು ನೋಡಾ ಕರ್ಮದ ಪಾಪದ ಪಡೆಯೆಲ್ಲ ।
ಅರಸು ಬಸವಲಿಂಗ ಗುರು ಪಟ್ಟಕ್ಕೆ ಬರುತಾನೆ ॥
ಹಿರಿಯಣ್ಣನೆಂಬುದು ತಮ್ಮ ಚಿಣ್ಣನ ಕರೆದು ।
ಧರೆಯ ಹುಟ್ಟುವಳಿಯನೆಲ್ಲವ ತೆಗೆದು ಕೊಟ್ಟ ಕೇಳಿ ॥೪॥

ಮುಗದಾವು ದಿನಮಾನ ಜಗವ ಮೀರಿ ನಡೆ ಬೇಡ ।
ಸಗರ ಸಂಗನೊಳು ಶರಣರು ಬೇಗ ಒಲಿದುಕೊಳ್ಳಿ ॥
ನಿಗಮಗೋಚರನಿಳಿದ ಆತನಾಗಮ ಲಿಪಿ ತಂದ ।
ಸುಗುಣ ಸೂತ್ರಧಾರಿ ಪರಬ್ರಹ್ಮವನೊಡ್ಡಿದನು ॥೫॥

■

೬೨


ಅಲ್ಲಮನಾಟವು ಬಂದಿತು ಜಗದೊಳು ಎಲ್ಲ ಜನರ ಮೇಲೆ ।
ಬಲ್ಲೆ ಬಲ್ಲೆನೆಂಬ ಸಿದ್ಧರಿಗೆ ಬಯಲ ಬಲೆಯ ಹೂಡಿ ॥ಪಲ್ಲ॥

ಕಳ್ಳತನದಲಿ ಕೊಟ್ಟಿತನದಲಿ ಮೆರೆವ ಸುಳ್ಳ ಹಿರಿಯರೆಲ್ಲ ।
ಅಲ್ಲವಾಗಿ ಹೋದರು ತಮ್ಮ ಆಟದ ಗುಣದಿಂದ ॥
ಬಲ್ಲಿದನಮರ ಕಲ್ಯಾಣದ ದೇವರು ಬಸವಯ್ಯ ಬಂದ ।
ಹುಲ್ಲುಕಚ್ಚಿ ಕಲ್ಲನೆ ಹೊತ್ತು ನಡೆ ಎಲ್ಲ ಜನರು ನೀವು ॥೧॥

ತಾಟಕತನದಲಿ ಕೋಟಲೆಗೊಳಬೇಡ ಆಟ ಬಂದವೆಂದು ।
ಆಟವ ತಂದವರಿವರಲ್ಲದೆ ಮುಂದೆ ಆಟವಿಲ್ಲವೆಂದು ॥
ನೋಟಕಾರರು ಹೇಳುವ ನಾಡ ಪಾರಪತ್ತೆದ ಆಟವಲ್ಲವಯ್ಯ ।
ದೂಟಿಸಿ ಕೇಳಿರಿ ಭಕ್ತರಿದೆ ಜಗದ ಬೇಟೆಕಾರ ಬಂದ ॥೨॥

ಡಂಬಕತನದಲಿ ವೇಷವತೊಟ್ಟು ಇಂಬುಗೊಂಡು ಮೆರೆವ ।
ಶುಂಬರಾಗಿ ಹೋದರು ಋಷಿಗಳು ಬೆಂಬಳಿದಪ್ಪದಲಿ ॥
ಶಂಭು ಅಮರಕಲ್ಯಾಣದ ದೇವರು ಬಸವಯ್ಯ ಬಂದ ।
ನಂಬಿಗೆ ಅಪನಂಬಿಗೆ ಇಲ್ಲದಲಿ ನಂಬಿ ಜನರು ನೀವು ॥೩॥

❖❖



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ
ಗೃಹಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ: 97390 67359